In Public domain. Digitization Muthulakshmi Research Academy



ಲಿಂಗಾಯತ ಚಳುವಳಿ ೨೦೧೭-೧೮

ಜಿ.ಬಿ.ಪಾಟೀಲ

In Public domain. Digitization Muthulakshmi Research Academy

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ವಾಣಿಜ್ಯಶಾಸ್ತ್ರದಲ್ಲಿ ಪದವಿ, ನಂತರ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಲ್.ಎಲ್. ಬಿ. ಓದಿದ್ದರೂ ಬಿ.ಬಿ. ಪಾಟೀಲರು ಆಯ್ದುಕೊಂಡಿದ್ದು ಮುಂಬೈನ ಪಬ್ಲಿಕ್ ಲಿಮಿಟೆಡ್ ಕಂಪನಿಯೊಂದರಲ್ಲಿ ಜನರಲ್ ಮ್ಯಾನೇಜರ್ ಕೆಲಸವನ್ನು. ನಂತರ ಸ್ವಂತ ಮುದ್ರಣ ಸಂಸ್ಥೆಯೊಂದನ್ನು ಸ್ಥಾಪಿಸಿ ಮುನ್ನಡೆಸಿದರು. ಹಲವು ಸಾಮಾಜಿಕ ಸಂಸ್ಥೆಗಳಲ್ಲಿ ವಿವಿಧ ಸ್ತರಗಳಲ್ಲಿ ದುಡಿದಿರುವ ಇವರು ಜಾಗತಿಕ ಲಿಂಗಾಯತ ಮಹಾಸಭೆಯ ಸಂಸ್ಥಾಪಕ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಸಕ್ರಿಯವಾಗಿದ್ದಾರೆ. ಪಾಟೀಲರು ನಿಯತಕಾಲಿಕೆಗಳಿಗೆ ಬರೆಯುವ ಮೂಲಕ ವರ್ತಮಾನದ ರಾಜಕಾರಣ ಮತ್ತು ಸಾಮಾಜಿಕ ಆಗುಹೋಗುಗಳನ್ನು ವಿಶ್ಲೇಷಿಸುತ್ತಿದ್ದಾರೆ. ಲಿಂಗಾಯತ ಚಳುವಳಿಯಲ್ಲಿ ಕಾರ್ಯಕರ್ತರಾಗಿ, ಮುಂಚೂಣಿ ನಾಯಕರಾಗಿ, ಚಳುವಳಿಯ ಏಳು-ಬೀಳುಗಳನ್ನು ನಿಕಟವಾಗಿ ಕಂಡ ಪಾಟೀಲರು, ಈಗ 'ಲಿಂಗಾಯತ ಚಳುವಳಿ: 2017-18' ಎಂಬ 'ಸ್ವಅನುಭವ ಮತ್ತು ಸಂಶೋಧನೆ' ಎರಡೂ ಹದವಾಗಿ ಬೆರೆತ ಪುಸ್ತಕವನ್ನು ರಚಿಸಿದ್ದಾರೆ.

- ಪ್ರೊ. ಎ.ಎಸ್. ಪ್ರಭಾಕರ

ಕನ್ನಡ ವಿಶ್ವವಿದ್ಯಾಲಯ, ಹಂಪಿ

In Public domain. Digitization Muthulakshmi Research Academy

In Public domain. Digitization Muthulakshmi Research Academy

In Public domain. Digitization Muthulakshmi Research Academy

ಲಿಂಗಾಯತ ಚಳುವಳಿ
೨೦೧೭-೧೮

In Public domain. Digitization Muthulakshmi Research Academy

In Public domain. Digitization Muthulakshmi Research Academy

ಲಿಂಗಾಯತ ಚಳುವಳಿ

೨೦೧೭–೧೮

ಜಿ. ಬಿ. ಪಾಟೀಲ

ಆಕೃತಿ ಪುಸ್ತಕ
ಬೆಂಗಳೂರು

In Public domain. Digitization Muthulakshmi Research Academy

LINGAYATA CHALUVALI 2017-18

Historical documentation of 2017-18 Lingayat Movement

By

G.B. Patil
#284,1st main, 407 S.F.S.
Yelahanka New Town,
Bengaluru-560064
Mob: 94480 87657

Published by:
Aakruti Pustaka
No.26/2, Mahanandi
DVG Road (Bugle Rock Road),
Basavanagudi,
Bengaluru- 560004
Email: aakrutibooks@gmail.com

First Impression: April 2025
Pages: xxviii + 404 = 432
Copies: 1000
Price: 450/-
Copyright: Author
Selling Rights: Publisher
Paper size:70 GSM N.S. Maplitho
Layout : The Publisher Freind, 8867202286
Cover Page: G. Arunkumar
Printed at: Kamadhenu Print - N - Pack
Rajajinagar, Bengaluru.

In Public domain. Digitization Muthulakshmi Research Academy

ಶ್ರೀವಾಣಿ

ನಮಗೆ ಲಿಂಗವುಂಟು,
ನಾವು ಲಿಂಗವಂತರೆಂದು ನುಡಿವರು.
ಮತ್ತೆ ಮರಳಿ ಭವಿಶೈವದೈವಂಗಳಿಗೆರಗುವ
ಈ ಮಂಗಮಾನವರನೇನೆಂಬೆನಯ್ಯಾ
ಕಲಿದೇವಯ್ಯ

– ಮಡಿವಾಳ ಮಾಚಿದೇವ

ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸಿರುವ 'ಸಮಗ್ರ ವಚನ ಸಂಪುಟ'ಗಳಲ್ಲಿ ಒಟ್ಟು ೧೭೩ ಕಡೆಗಳಲ್ಲಿ ೨೩ ವಚನಕಾರರು ೧೦೬ ವಚನಗಳಲ್ಲಿ 'ಲಿಂಗವಂತ' ಪದವನ್ನು, ೧೨ ಕಡೆಗಳಲ್ಲಿ ೮ ವಚನಕಾರರು ೧೦ ವಚನಗಳಲ್ಲಿ 'ಲಿಂಗಾಯತ' ಪದವನ್ನು ಬಳಕೆ ಮಾಡಿದ್ದಾರೆ. ಅಲ್ಲಿ ಲಿಂಗವಂತರ ನಡೆ ನುಡಿಗಳು ಹೇಗಿರಬೇಕು ಎನ್ನುವ ವಿವರಣೆ ಇದೆ. ಲಿಂಗಾಯತ ಅಥವಾ ಲಿಂಗವಂತ ಧರ್ಮ ಅಸ್ತಿತ್ವಕ್ಕೆ ಬಂದದ್ದೇ ಬಸವಣ್ಣನವರಿಂದ. ೧೨ನೆಯ ಶತಮಾನಕ್ಕಿಂತ ಪೂರ್ವದಲ್ಲಿ ಶೈವ, ವೀರಶೈವ ಮತ್ತಿತರ ಧರ್ಮಗಳು ಜಾರಿಯಲ್ಲಿದ್ದವು. ಬಸವಣ್ಣನವರು ಹುಟ್ಟಿದ್ದು ಶೈವ ಬ್ರಾಹ್ಮಣರ ಕುಟುಂಬದಲ್ಲಿ. ಅವರ ಧಾರ್ಮಿಕ ವಿಧಿಯಾದ 'ಜನಿವಾರ' ಸಂಸ್ಕಾರವನ್ನು ಬಾಲಕ ಬಸವಣ್ಣನವರಿಗೆ ಕೊಡುವ ಸಂದರ್ಭದಲ್ಲಿ ನನಗೆ ಕೊಡುವ ಈ ಸಂಸ್ಕಾರ ನನ್ನ ತಾಯಿಗೆ, ಒಡಹುಟ್ಟಿದ ಸಹೋದರಿಗೆ, ತಳಸಮುದಾಯದ ಜನರಿಗೆ ಏಕೆ ಇಲ್ಲ? ಅವರಿಗಿಲ್ಲದ ಜನಿವಾರ ನನಗೇಕೆ ಎನ್ನುವ ಪ್ರಶ್ನೆಗಳಿಂದ ವೈದಿಕರು ಬಾಲಕ ಬಸವಣ್ಣನವರಿಗೆ ಬಹಿಷ್ಕಾರ ಹಾಕುವರು. ನೀವು ನನಗೆ ಬಹಿಷ್ಕಾರ ಹಾಕುವುದೇನಿದೆ? ನಿಮ್ಮ ಎಲ್ಲ ಕಂದಾಚಾರ, ಮೂಢನಂಬಿಕೆಗಳಿಗೆ ನಾನೇ ಬಹಿಷ್ಕಾರ ಹಾಕುವೆ ಎಂದು ಧರಿಸಿದ್ದ ಜನಿವಾರವನ್ನೇ

In Public domain. Digitization Muthulakshmi Research Academy

ಅಗ್ನಿಕುಂಡಕ್ಕೆ ಆಹುತಿ ಕೊಡುವರು. ಇದು ಪ್ರಪಂಚದ ಇತಿಹಾಸದಲ್ಲೇ ಎಲ್ಲೂ ನಡೆಯ ವಿಚಿತ್ರ ಘಟನೆ.

ಬಾಲಕ ಬಸವಣ್ಣನವರು ಬಾಗೇವಾಡಿಯಿಂದ ಕೂಡಲಸಂಗಮ ಕ್ಷೇತ್ರಕ್ಕೆ ಬಂದು ಅಲ್ಲಿಯ ಸಂಗಮೇಶ್ವರನ ಪೂಜೆಯಲ್ಲೇ ತಮ್ಮ ಭವಿಷ್ಯದ ಬದುಕಿನ ಕನಸುಗಳನ್ನು ಕಟ್ಟಿಕೊಳ್ಳುವರು. ಅವರು ಅಲ್ಲಿಯ ಗುರುಕುಲಾಶ್ರಮದಲ್ಲಿ ವೇದಾಧ್ಯಯನ ಇತ್ಯಾದಿ ಧಾರ್ಮಿಕ ಶಿಕ್ಷಣವನ್ನೂ ಪಡೆದಿರಬೇಕು. ಆಗಲೇ ಅವರಿಗೆ ಅದುವರೆಗೂ ಇದ್ದ ಧರ್ಮ ದಯಾಹೀನವಾದದ್ದು, ಸಮಾನತೆ ಇಲ್ಲದ್ದು, ಜಾತಿಮೂಲವಾದದ್ದು, ಸಕಲಜೀವಾತ್ಮರ ಒಳಿತನ್ನು ಬಯಸದಿರುವುದು ಎಂದೆಲ್ಲ ಭಾವನೆಗಳು ಗಟ್ಟಿಗೊಂಡಿರಬೇಕು. ತಾರುಣ್ಯಕ್ಕೆ ಕಾಲಿಡುತ್ತಲೇ ಅವರು ಮಾಂಡಲಿಕ ಬಿಜ್ಜಳನಾಳುವ ಮತ್ತು ತಮ್ಮ ಸೋದರಮಾವ ಬಲದೇವರಸರು ಕೋಶಾಧಿಕಾರಿಗಳಾಗಿರುವ ಮಂಗಳವೇಡೆಗೆ ಬರುವರು. ಅಲ್ಲಿ ಕೋಶಾಧಿಕಾರದ ಗುಮಾಸ್ತರಾಗಿ ತಮ್ಮ ಕ್ರಿಯಾಶೀಲತೆ, ಪ್ರಾಮಾಣಿಕತೆ, ಜೀವಪರ ಕಾಳಜಿ ಮುಂತಾದವುಗಳಿಂದ ಬಿಜ್ಜಳನ ಆತ್ಮೀಯರಲ್ಲಿ ಒಬ್ಬರಾಗುವರು. ಬಿಜ್ಜಳ ಬಸವಣ್ಣನವರ ಸಂಬಂಧ ದೇಹ ಎರಡು, ಆತ್ಮ ಒಂದು ಎನ್ನುವಂತಿತ್ತು. ಬಿಜ್ಜಳ ಕಲ್ಯಾಣದ ಅರಸನಾದಮೇಲೆ ಬಸವಣ್ಣನವರು ಅರ್ಥಸಚಿವ ಮತ್ತು ಪ್ರಧಾನಿ ಹುದ್ದೆಯನ್ನು ಸ್ವೀಕರಿಸಿ ಅತ್ಯುತ್ತಮ ಆಡಳಿತ ನಿರ್ವಹಿಸುವರು. ಜೊತೆಗೆ 'ಅನುಭವ ಮಂಟಪ' ಎನ್ನುವ ಧರ್ಮಸಂಸತ್ ಸ್ಥಾಪಿಸಿ ಅದರ ಮೂಲಕ ದಯಾಮೂಲವಾದ, ಸಕಲ ಜೀವಾತ್ಮರ ಒಳಿತು ಬಯಸುವ, ಸರ್ವಸಮಾನತೆಯ, ಜಾತ್ಯತೀತ ಮತ್ತು ಕಾಯಕ–ದಾಸೋಹ–ಇಷ್ಟಲಿಂಗ ನಿಷ್ಠೆಯ ಹೊಸ ಧರ್ಮದ ಹುಟ್ಟಿಗೆ ಕಾರಣರಾಗುವರು. ಅದು ಅಲ್ಪಸಂಖ್ಯಾತರ 'ಲಿಂಗಾಯತ' ಧರ್ಮ ಎನ್ನುವ ಪ್ರಖ್ಯಾತಿ ಪಡೆಯಿತು.

ಲಿಂಗಾಯತ ಧರ್ಮದಲ್ಲಿ ನಡೆ–ನುಡಿ ಸಿದ್ಧಾಂತಕ್ಕೆ ಒತ್ತು ಕೊಡಲಾಗಿದೆ. ಯಾರು ಬೇಕಾದರೂ ಅಂಗದ ಮೇಲೆ ಇಷ್ಟಲಿಂಗವನ್ನು ಧರಿಸಿ ಪೂಜೆ ಮಾಡಿಕೊಳ್ಳಬಹುದು. ಅಲ್ಲಿ ಜಾತಿ, ಲಿಂಗ, ಭಾಷೆ, ವಯಸ್ಸು ಹೀಗೆ ಯಾವ ಭಿನ್ನತೆಯೂ ಇಲ್ಲದೆ ಧರ್ಮಾಸಕ್ತರೆಲ್ಲರಿಗೂ ಇಷ್ಟಲಿಂಗ ಪೂಜೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಕಲ್ಪಿಸಲಾಗಿತ್ತು. ಲಿಂಗ ಮುಟ್ಟಿದವರೆಲ್ಲರೂ ತಮ್ಮ ಪೂರ್ವ ಕುಲವಳಿದು ಪುನರ್ಜಾತರಾಗುವರು. 'ಎಂತಹನಾದಡೇನು, ಲಿಂಗವ ಮುಟ್ಟಿದವನೆ ಕೀಳು ಜಾತಿ. ಕುಲವಹುದು ತಪ್ಪದು ಲಿಂಗ ಮುಟ್ಟಲೊಡನೆ' ಎನ್ನುವುದು ಬಸವಣ್ಣನವರು ಪ್ರತಿಪಾದಿಸಿದ ಲಿಂಗಾಯತ ಧರ್ಮದ ಸಿದ್ಧಾಂತ. ಈ ಧರ್ಮದಲ್ಲಿ ಹಿಂಸೆಗೆ ಅವಕಾಶವಿಲ್ಲ. ಧರ್ಮದ ಹೆಸರಿನಲ್ಲಿ ಪ್ರಾಣಿಗಳ ಬಲಿ ಕೊಡುವಂತಿಲ್ಲ.

In Public domain. Digitization Muthulakshmi Research Academy

ಯಜ್ಞ-ಯಾಗ ಮಾಡುವಂತಿಲ್ಲ. ಸೂತಕ-ಪಾತಕಗಳ ಹಂಗಿಲ್ಲ. ದೇವರನ್ನು ಹುಡುಕಿಕೊಂಡು ಗುಡಿ-ಗುಂಡಾರ, ತೀರ್ಥ-ಕ್ಷೇತ್ರಗಳನ್ನು ಸುತ್ತುವಂತಿಲ್ಲ. 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎನ್ನುವ ತತ್ವದ ಪ್ರಕಾರ ಪ್ರತಿಯೊಬ್ಬ ಮಾನವನ ದೇಹವೇ ಜಂಗಮ ದೇವಾಲಯವಾಗಬೇಕು. ಗುಡಿ ಮತ್ತು ಆ ಗುಡಿಯಲ್ಲಿರುವ ದೇವರ ಪ್ರತಿಮೆಗಳು ಸ್ಥಾವರ. ಅವುಗಳಿಗೆ ನಾಶವಿದೆ. ಅವು ಜಡವಾದವು. ಜಡತ್ವ ಹೊಂದಿದ ಅವು ಭಕ್ತರನ್ನೆಂತು ಉದ್ಧಾರ ಮಾಡಲು ಸಾಧ್ಯ ಎನ್ನುವ ಮೂಲಭೂತ ಪ್ರಶ್ನೆಯನ್ನು ಬಸವಣ್ಣನವರು ಸಮಾಜದ ಮುಂದಿಟ್ಟರು. ದುರ್ವ್ಯಸನ, ದುರಾಚಾರಗಳಿಂದ ಮುಕ್ತವಾಗಲು ಲಿಂಗವ್ಯಸನ, ಜಂಗಮಪ್ರೇಮವನ್ನು ಜಾರಿಯಲ್ಲಿ ತಂದರು. ಇಂಥ ಪ್ರಗತಿಪರ, ವೈಚಾರಿಕ, ವೈಜ್ಞಾನಿಕ ಕಾರಣಗಳಿಂದ ಹೊಸ ಲಿಂಗಾಯತ ಧರ್ಮ ಪಟ್ಟಭದ್ರ ಹಿತಾಸಕ್ತರ, ಪೂಜಾರಿ ಪುರೋಹಿತರ, ಸನಾತನ ಪರಂಪರೆಯವರ ಕೆಂಗಣ್ಣಿಗೆ ಗುರಿಯಾಗಬೇಕಾಯ್ತು.

ಬಸವಾದಿ ಶರಣರು ಧರ್ಮದ ನೆಪದಲ್ಲಿ ಸನಾತನ ಧರ್ಮಕ್ಕೆ ಮಸಿ ಬಳಿಯುವ ಕಾರ್ಯ ಮಾಡುತ್ತಿದ್ದಾರೆ. ತಮ್ಮ ಸಿಂಹಾಸನದ ಮೇಲೆ ಬಸವಣ್ಣನವರ ಕಣ್ಣಿದೆ. ಅವರು ತಮ್ಮದೇ ಆದ ಜಂಗಮ ಸೈನ್ಯವನ್ನು ಕಟ್ಟುತ್ತಿದ್ದಾರೆ. ತಾವು ಉದಾಸೀನ ಮಾಡಿದರೆ ಅವರು ಯಾವಾಗ ಬೇಕಾದರೂ ತಮ್ಮ ಮೇಲೆ ತಿರುಗಿಬಿದ್ದು ಸಿಂಹಾಸನವನ್ನು ಆಕ್ರಮಿಸಿಕೊಳ್ಳುವಷ್ಟು ಬಲಿಷ್ಠರಾಗುತ್ತಿದ್ದಾರೆ. ಭಂಡಾರದ ಸಂಪತ್ತು ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮರ ಬಿಟ್ಟಿ ಬೋಜನಕ್ಕೆ ದುರ್ವಿನಿಯೋಗವಾಗುತ್ತಲಿದೆ. ಹೀಗೆ ಒಂದಿಲ್ಲೊಂದು ಆಪಾದನೆಯನ್ನು ಸ್ವಾರ್ಥಿಗಳು ಬಸವಣ್ಣನವರ ಮೇಲೆ ಮಾಡುತ್ತಲೇ ಇದ್ದರು. 'ನಿದ್ರೆ ಬಂದವನಿಗೆ ಹಾಸಿಗೆ ಹಾಸಿಕೊಟ್ಟಂತೆ' ಬ್ರಾಹ್ಮಣ ಮಧುವರಸರ ಮಗಳು ನೀಲಾ, ಸಮಗಾರ ಹರಳಯ್ಯನವರ ಮಗ ಶೀಲವಂತ ಇವರ ಕಲ್ಯಾಣ ಅನುಭವಮಂಟಪದಲ್ಲಿ ನಡೆದದ್ದೇ ಪಟ್ಟಭದ್ರರಿಗೆ ಬಹುದೊಡ್ಡ ಅಸ್ತ್ರವಾಯ್ತು. ಬಿಜ್ಜಳನ ಕಿವಿ ಕಚ್ಚಿ ಬಸವಣ್ಣನವರು ಅಧಿಕಾರ ತ್ಯಜಿಸುವಂತೆ ಕುತಂತ್ರ ಮಾಡಿದರು. ಬಸವಣ್ಣನವರು ಅಧಿಕಾರ ತ್ಯಜಿಸಿ ಕೂಡಲಸಂಗಮ ಕ್ಷೇತ್ರದತ್ತ ಹೊರಟದ್ದೇ ತಮ್ಮ ವಿಜಯ ಎಂದು ಪುರೋಹಿತರು, ಪಟ್ಟಭದ್ರರು, ಅಧಿಕಾರಶಾಹಿಗಳು ಒಂದಾಗಿ ಬಿಜ್ಜಳನ ಕೊಲೆ ಮಾಡಿಸಿದರು. ಅದರ ಹೊಣೆಯನ್ನು ಶರಣರ ಮೇಲೆ ಹೊರಿಸಿ ಸೋವಿದೇವನನ್ನು ಪಟ್ಟಕ್ಕೆ ಕೂರಿಸಿದರು. ಕೊಂಡಮಂಚಣ್ಣನಂಥವರು ತಮ್ಮದೇ ಅಧಿಕಾರ ಚಲಾಯಿಸಿ ಶರಣರ ಕಗ್ಗೊಲೆಗೆ, ಅವರ ವಚನ ಸಾಹಿತ್ಯದ ನಾಶಕ್ಕೆ, ಮಹಾಮನೆ ಮತ್ತು ಅನುಭವಮಂಟಪದ ಅವಸಾನಕ್ಕೆ ಕಾರಣರಾದರು.

In Public domain. Digitization Muthulakshmi Research Academy

ಲಿಂಗಾಯತ ಧರ್ಮದ ಆಸ್ತಿಯಾದ ವಚನ ಸಾಹಿತ್ಯ ಮತ್ತು ಅವರ ಯಾವ ತತ್ವಸಿದ್ಧಾಂತಗಳೂ ಉಳಿಯಬಾರದು ಎನ್ನುವ ಕುಯುಕ್ತಿ ಸಂಪೂರ್ಣ ಫಲಿಸಲಿಲ್ಲ. ಕಾರಣ ಚೆನ್ನಬಸವಣ್ಣ, ಮಡಿವಾಳ ಮಾಚಿದೇವ, ನುಲಿಯ ಚಂದಯ್ಯ, ಅಕ್ಕ ನಾಗಮ್ಮ ಮುಂತಾದವರು ತಮ್ಮ ಪ್ರಾಣದ ಹಂಗುತೊರೆದು ತಮಗೆ ಸಿಕ್ಕಷ್ಟು ವಚನದ ಕಟ್ಟುಗಳನ್ನು ಬೆನ್ನಿಗೆ ಕಟ್ಟಿಕೊಂಡು ರಾತ್ರೋ ರಾತ್ರಿ ಕಲ್ಯಾಣದಿಂದ ಬೇರೆ ಬೇರೆ ಕಡೆ ಪ್ರಯಾಣ ಬೆಳೆಸಿದರು. ೨-೩ ಶತಮಾನಗಳ ಕಾಲ ಲಿಂಗಾಯತ ಧರ್ಮದ ಅಮೂಲ್ಯ ಆಸ್ತಿಯಾಗಿದ್ದ ವಚನದ ಕಟ್ಟುಗಳು ಅಷ್ಟೊಂದು ಬೆಳಕಿಗೆ ಬರಲಿಲ್ಲ. ಅವು ಯಾರದೋ ಮನೆಯ ಜಗಲಿಯ ಮೇಲೆ, ಮಠದ ಪೆಟ್ಟಿಗೆಯಲ್ಲಿ, ದೇವಸ್ಥಾನದ ಗದ್ದುಗೆಯ ಮೇಲೆ ಪೂಜೆಗೊಳ್ಳುವ ದೇವರಾಗಿಬಿಟ್ಟವು. ೧೫ನೆಯ ಶತಮಾನದಲ್ಲಿ ನೂರೊಂದು ವಿರಕ್ತರು ಆ ವಚನಕಟ್ಟುಗಳ ಶೋಧನೆ, ಸಂಪಾದನೆ, ಪರಿಷ್ಕಾರ, ಪ್ರಸಾರ, ಪ್ರಚಾರಕ್ಕೆ ಮುಂದಾದದ್ದು 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎನ್ನುವುದನ್ನು ಸಾಬೀತುಪಡಿಸಿತು. ವಚನಗಳು ಸ್ಥಾವರವಲ್ಲ; ಅವು ಜಂಗಮದ ಬೆಳಕು. ಆದರೂ ಕ್ರಮೇಣ ಅವು ಮತ್ತೆ ಕಾಲಗರ್ಭದಲ್ಲಿ ಕಣ್ಮರೆಯಾಗುವ ಪರಿಸ್ಥಿತಿ ಬಂತು. ೨೦ನೆಯ ಶತಮಾನದಲ್ಲಿ 'ವಚನ ಪಿತಾಮಹ' ಎಂದೇ ಪ್ರಖ್ಯಾತರಾದ ಶ್ರೀ ಫ ಗು ಹಳಕಟ್ಟಿಯವರು ವಚನ ಸಾಹಿತ್ಯದ ಶೋಧನೆ, ಸಂಪಾದನೆ, ಪ್ರಕಟಣೆ ಮುಂತಾದ ಕಾರ್ಯಗಳನ್ನು ಇಷ್ಟಲಿಂಗಪೂಜೆಯಷ್ಟೆ ನಿಷ್ಠೆಯಿಂದ ಮಾಡಿದರು. ಅವರ ನಂತರ ಹಲವಾರು ಮಹನಿಯರು, ವಿಶ್ವವಿದ್ಯಾಲಯಗಳು, ಮಠಗಳು ಜಾಗ್ರೃತವಾಗಿ ವಚನ ಸಾಹಿತ್ಯ ಬಯಲಿಗೆ ಬರಲು ಕಾರಣರಾದರು. ಆಗ ಅವರಿಗೆ ತಾವು ಲಿಂಗಾಯತರು, ತಮ್ಮ ಧರ್ಮ ಲಿಂಗಾಯತ ಧರ್ಮ, ನಾವು ಹಿಂದೂಗಳಲ್ಲ ಎನ್ನುವ ಅರಿವಾಯ್ತು. ತಮ್ಮ ಧರ್ಮದ ಸ್ವತಂತ್ರ ಅಸ್ತಿತ್ವಕ್ಕಾಗಿ ಅಲ್ಲಲ್ಲೇ ಹೋರಾಟಗಳೂ ನಡೆಯುತ್ತ ಬಂದವು.

ಪಟ್ಟಭದ್ರರು ಮತ್ತೆ ಜಾಗೃತರಾದರು. ಸನಾತನ ಪರಂಪರೆಯ ಸಂತಾನದವರು ವಚನಾಧಾರಿತ ಲಿಂಗಾಯತ ಧರ್ಮ ಬೆಳಕಿಗೆ ಬಂದರೆ ತಮ್ಮ ಆಟ ನಡೆಯದೆಂದು ಅದು ಬೆಳಕಿಗೆ ಬಾರದಂತೆ ನೋಡಿಕೊಳ್ಳಲು ಒಳಗೊಳಗೇ ಏನೆಲ್ಲ ಸಂಚು ಮಾಡಿದರು. ಈಗಲೂ ಮಾಡುತ್ತಲೇ ಇದ್ದಾರೆ. ಎಷ್ಟೋ ಜನ ಲಿಂಗಾಯತ ಮುಖ್ಯ ಮಂತ್ರಿಗಳು ಕರ್ನಾಟಕದಲ್ಲಿ ಬಂದರೂ 'ಲಿಂಗಾಯತ ಸ್ವತಂತ್ರ ಧರ್ಮ' ಎನ್ನುವ ಘೋಷಣೆ ಮಾಡಲು ಸಾಧ್ಯವಾಗಲಿಲ್ಲ. ಅವರದು 'ಹಾವೂ ಸಾಯಬಾರದು, ಕೋಲೂ ಮುರಿಯಬಾರದು' ಎನ್ನುವ ಸ್ವಭಾವ. ಅಡ್ಡಗೋಡೆಯ ಮೇಲೆ ದೀಪ ಇಟ್ಟಂಥ ವರ್ತನೆ. ಆದರೆ ಸಿದ್ದರಾಮಯ್ಯನವರು

In Public domain. Digitization Muthulakshmi Research Academy

ಮುಖ್ಯಮಂತ್ರಿಗಳಾದಮೇಲೆ ಸ್ವತಂತ್ರ ಲಿಂಗಾಯತ ಧರ್ಮದ ಬೇಡಿಕೆಗೆ ಹೊಸದಾಗಿ ಕೈ ಕಾಲು ಬಂದಂತಾಯ್ತು. ಅವರು ಬಸವಜಯಂತಿಯಂದೇ ಪ್ರಮಾಣ ವಚನ ಸ್ವೀಕರಿಸಿದ್ದು, ಬಸವತತ್ವವನ್ನು ತಮ್ಮ ಬದುಕಿನ ಬಂಡವಾಳ ಎಂದು ಭಾವಿಸಿಕೊಂಡದ್ದು, ಅದಕ್ಕನುಗುಣವಾಗಿ ಬಿಜಾಪುರದ ಮಹಿಳಾ ವಿಶ್ವವಿದ್ಯಾಲಯಕ್ಕೆ 'ಅಕ್ಕಮಹಾದೇವಿ ವಿಶ್ವವಿದ್ಯಾಲಯ' ಎಂದು ನಾಮಕರಣ ಮಾಡಿದ್ದು, ಎಲ್ಲ ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರವನ್ನು ಕಡ್ಡಾಯವಾಗಿ ಹಾಕಬೇಕೆಂದು ಆದೇಶ ಹೊರಡಿಸಿದ್ದು ಅವರ ಬಸವನಿಷ್ಠೆಗೆ ಸಾಕ್ಷಿ ನುಡಿಯುವಂತಿದ್ದವು. ಅದಕ್ಕೆ ಮತ್ತೊಂದು ಗರಿ ಮೂಡಿದ್ದು ೨೦೨೪ ರಲ್ಲಿ 'ಬಸವಣ್ಣ ಕರ್ನಾಟಕದ ಸಾಂಸ್ಕೃತಿಕ ನಾಯಕ' ಎಂದು ಘೋಷಿಸಿದ್ದು.

ಲಿಂಗಾಯತ ಸ್ವತಂತ್ರ ಧರ್ಮ ಹೌದೋ ಅಥವಾ ಹಿಂದೂ ಧರ್ಮದೊಳಗೆ ಒಂದೋ ಎಂದು ನಿರ್ಣಯಿಸಲು ನಿವೃತ್ತ ನ್ಯಾಯಮೂರ್ತಿ ಶ್ರೀ ನಾಗಮೋಹನ ದಾಸ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸಿದ್ದರಾಮಯ್ಯನವರು ನೇಮಕ ಮಾಡಿದ್ದು ಅನೇಕರ ಹೊಟ್ಟೆಯುರಿಗೆ ಕಾರಣವಾಯ್ತು. ಸಮಿತಿಯವರು ಎಲ್ಲೆಡೆಯಿಂದ ಅಭಿಪ್ರಾಯ ಸಂಗ್ರಹಿಸಿದರು. ಐತಿಹಾಸಿಕ ದಾಖಲೆಗಳನ್ನೂ ಪರಿಶೀಲಿಸಿದರು. ವಚನ ಸಾಹಿತ್ಯದ ಸಮಗ್ರ ಅಧ್ಯಯನ ಮಾಡಿದರು. ಕೊನೆಗೆ 'ಲಿಂಗಾಯತ' ಸ್ವತಂತ್ರ ಧರ್ಮ ಎನ್ನುವ ನಿರ್ಣಯ ನೀಡಿ ತಮ್ಮ ಕಡತವನ್ನು ಕರ್ನಾಟಕ ಸರ್ಕಾರಕ್ಕೆ ಕಳಿಸಿಕೊಟ್ಟರು. ಸರ್ಕಾರ ತನ್ನ ಶಿಫಾರಸ್ಸಿನೊಂದಿಗೆ ಕೇಂದ್ರ ಸರ್ಕಾರಕ್ಕೆ ರವಾನಿಸಿತು. ಈ ನಡುವೆ ಲಿಂಗಾಯತರ ಸಂಖ್ಯೆ ಮತ್ತು ಅವರ ಶಕ್ತಿ ಪ್ರದರ್ಶನಕ್ಕಾಗಿ ಬೀದರ್, ಗುಲ್ಬುರ್ಗಾ, ಹುಬ್ಬಳ್ಳಿ, ಬೆಳಗಾವಿ ಮತ್ತಿತರ ಸ್ಥಳಗಳಲ್ಲಿ ಲಕ್ಷೋಪಲಕ್ಷ ಜನರು ಸೇರಿ ಲಿಂಗಾಯತ ಧರ್ಮೀಯರ ಒಗ್ಗಟ್ಟನ್ನು ಪ್ರದರ್ಶಿಸಿದರು. ಇದರಲ್ಲಿ ರಾಜಕಾರಣಿಗಳು, ಸ್ವಾಮಿಗಳು, ಅಧಿಕಾರಿಗಳು, ಸಾರ್ವಜನಿಕರು ಸಹ ಸ್ವ ಇಚ್ಛೆಯಿಂದ ಭಾಗವಹಿಸಿದ್ದರು. ಅವರ ಸಭೆಗಳು ದೃಶ್ಯ ಮತ್ತು ಅಕ್ಷರ ಮಾಧ್ಯಮಗಳ ಗಮನವನ್ನೂ ಸೆಳೆದವು. ಅವರು ನಾ ಮುಂದೆ, ತಾ ಮುಂದೆ ಎನ್ನುವಂತೆ ಸಮಾರಂಭದ ವರದಿಯನ್ನು ಪ್ರಸಾರ ಮಾಡಿದರು. ವಾಸ್ತವ ಚಿತ್ರಣವನ್ನು ಸಾರ್ವಜನಿಕರು ಮತ್ತು ಸರ್ಕಾರ ಗಮನಿಸುವಂತೆ ಮಾಡಿದರು. ಇಂತಹ ಅಪರೂಪದ ಲಿಂಗಾಯತ ಧರ್ಮದ ರ್‍ಯಾಲಿಗಳು ಇತಿಹಾಸದ ಗರ್ಭದಲ್ಲಿ ಅಡಗಿ ಹೋಗಬಾರದು ಎನ್ನುವ ದೂರದೃಷ್ಟಿಯಿಂದ ಶ್ರೀ ಜಿ ಬಿ ಪಾಟೀಲರು ಅವುಗಳನ್ನು ದಾಖಲಿಸುವ ಬಹುದೊಡ್ಡ ಸಂಶೋಧನಾ ಕಾರ್ಯವನ್ನೇ ಮಾಡಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು.

In Public domain. Digitization Muthulakshmi Research Academy

ಪಾಟೀಲರು ಸಹ ಹೋರಾಟದ ಒಂದು ಭಾಗವೇ ಆಗಿದ್ದವರು. ಈ ಹೋರಾಟದಲ್ಲಿ ಯಾರ ಪಾತ್ರ ಏನಿತ್ತು ಎನ್ನುವುದನ್ನು ಮುಚ್ಚು ಮರೆ ಇಲ್ಲದೆ ಅನಾವರಣಗೊಳಿಸಿದ್ದಾರೆ. ಅಲ್ಲಿ ಸಕಾರಾತ್ಮಕ ಅಂಶಗಳಿರುವಂತೆ ನಕಾರಾತ್ಮಕ ಅಂಶಗಳೂ ಹೇರಳವಾಗಿವೆ. ಅವರು ಸತ್ಯಕ್ಕೆ ಅಪಚಾರ ಬಗೆಯಬಾರದು ಎನ್ನುವ ಬದ್ಧತೆಯಿಂದ ಹೇಳಬೇಕಾದ್ದನ್ನು ನಿರ್ಭಿಡೆಯಿಂದಲೇ ಹೇಳಿದ್ದಾರೆ. ಯಾರದೋ ಮನಸ್ಸಿಗೆ ನೋವಾದೀತು ಎಂದು ಸತ್ಯವನ್ನು ಮುಚ್ಚಿಡುವ ಅಥವಾ ಅನಾವಶ್ಯಕವಾಗಿ ಒಬ್ಬರ ತೇಜೋವಧೆ ಮಾಡುವ ಕಾರ್ಯವನ್ನೂ ಮಾಡಿಲ್ಲ. 'ಇದ್ದದ್ದನ್ನು ಇದ್ದ ಹಾಗೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದ' ಎನ್ನುವಂತೆ ಈ ಕೃತಿಯನ್ನು ಓದಿದಾಗ ಕೆಲವರ ಹೊಟ್ಟೆಯಲ್ಲಿ ಮೆಣಸಿನ ಕಾಯಿ ಮುರಿದಂತೆ ಅಥವಾ ಬೆಂಕಿ ಸುರುವಿದಂತೆ ಆಗಬಹುದು. ಮತ್ತೆ ಕೆಲವರಿಗೆ ಇಷ್ಟೊಂದು ಮಾಹಿತಿಯನ್ನು ಒಬ್ಬ ಇತಿಹಾಸ ಸಂಶೋಧಕನಿಂದಲೂ ಸಂಗ್ರಹಿಸಲು ಆಗುವುದಿಲ್ಲ. ಸಾಹಿತಿ, ಸಂಶೋಧಕ ಎರಡೂ ಅಲ್ಲದ ಬಿಕಾಂ ಪದವೀಧರನೊಬ್ಬ ಸಾಹಿತ್ಯ ಮತ್ತು ಸಂಶೋಧನೆಯ ಪರಿಭಾಷೆಯಲ್ಲೇ ಕಣ್ಣಿಗೆ ಕಟ್ಟುವಂತೆ ವಿವರಗಳನ್ನು ನೀಡಿರುವುದು ಬೆರಗುಂಟುಮಾಡುವುದು. ಪಾಟೀಲರ ಅಧ್ಯಯನ, ಅವರು ಕೊಡುವ ದಾಖಲೆಗಳು, ಸ್ಮರಣ ಶಕ್ತಿ ಎಷ್ಟೊಂದು ಆಳವಾದುದು ಎನ್ನುವ ಅರಿವು ಓದುಗರಿಗೆ ಖಂಡಿತ ಅರ್ಥವಾಗುವುದು.

ಇಲ್ಲಿ ೨೦೧೭ ಜೂನ್ ೧೪ರಿಂದ ೨೦೧೮ ಮಾರ್ಚ್ ೨ ರವರೆಗಿನ ಲಿಂಗಾಯತ ಹೋರಾಟದ ವಿವರ ಮಾತ್ರ ಇಲ್ಲ. ಲಿಂಗಾಯತ ಧರ್ಮದ ಹಿನ್ನೆಲೆ, ಅದರ ರಾಜಕೀಯ ಒಳನೋಟ, ಅಂತರಂಗದ ಅನಾವರಣ ಎಂದು ಬೇರೆ ಬೇರೆ ವಿಭಾಗ ಮಾಡಿ ಎಷ್ಟೆಲ್ಲ ಮಾಹಿತಿಗಳನ್ನು ನೀಡಿದ್ದಾರೆ ಎನ್ನುವುದನ್ನು ಓದಿಯೇ ಅನುಭವಿಸಬೇಕು. ಇದು ಅವಸರದಲ್ಲಿ ಓದಿ ಮುಗಿಸುವ ಕತೆ, ಕಾದಂಬರಿ ಅಲ್ಲ. ಇದನ್ನು ಓದಲು ವ್ಯವಧಾನ ಮತ್ತು ಲಿಂಗಾಯತ ಧರ್ಮದ ಪೂರ್ವಾಪರವನ್ನು ತಿಳಿಯುವ ಕುತೂಹಲವೂ ಇರಬೇಕಾಗುತ್ತದೆ. ಇವತ್ತು ಪುಸ್ತಕಗಳನ್ನು ಓದುವವರಿರಲಿ, ದಿನ ಪತ್ರಿಕೆಗಳನ್ನು ಓದುವವರು ಸಹ ವಿರಳವಾಗುತ್ತಿದ್ದಾರೆ. ಟಿವಿ, ಮೊಬೈಲ್ ಬಂದನಂತರ ಜನರ ಅಭಿರುಚಿಯೇ ಬದಲಾಗಿದೆ. ಮೊಬೈಲ್ ಓದುಗರೇ ಹೆಚ್ಚಾಗಿದ್ದಾರೆ. ಅಲ್ಲಿ ಸಹ ಎಲ್ಲವನ್ನೂ ಓದುವುದಿಲ್ಲ. ಸುಮ್ಮನೆ ಕೈಯಲ್ಲಿ ಮೊಬೈಲ್ ಹಿಡಿದು ಎದುರಿಗಿದ್ದವರ ಅರಿವೇ ಇಲ್ಲದೆ ಮೊಬೈಲ್ ತೀಡುವ ವರ್ಗವೇ ಸೃಷ್ಟಿಯಾಗಿದೆ. ನಾಲ್ಕಾರು ಸಾಲುಗಳಿದ್ದರೆ ಓದುತ್ತಾರೆ. ತುಂಬಾ ದೀರ್ಘವಾಗಿದ್ದರೆ ಡಿಲೀಟ್ ಮಾಡಿ ಕಣ್ಮುಚ್ಚಿಕೊಂಡು

In Public domain. Digitization Muthulakshmi Research Academy

ಕೂರುತ್ತಾರೆ. ಇಂಥ ಸಂದರ್ಭದಲ್ಲೂ ಪಾಟೀಲರು ಈ ಬೃಹತ್ ಕೃತಿಯ ಮೂಲಕ ಅನೇಕ ಸಿಹಿ ಮತ್ತು ಕಹಿ ಸತ್ಯಗಳನ್ನು ಯಥಾವತ್ತಾಗಿ ದಾಖಲಿಸಿದ್ದಾರೆ. ಇದರಿಂದ ಅವರು ಅನೇಕರ ಆಕ್ರೋಶಕ್ಕೂ ಬಲಿಯಾಗಬಹುದು. ಆದರೆ ಪಾಟೀಲರಿಗೆ ನಾನು ಇತಿಹಾಸಕ್ಕೆ ಅಪಚಾರವೆಸಗಬಾರದು ಎನ್ನುವ ಎಚ್ಚರಿಕೆ ಇದೆ. ಈ ಕೃತಿಯ ಒಳಗಿನ ಹೂರಣವನ್ನೆಲ್ಲ ಇಲ್ಲಿ ಬಿಚ್ಚಿಟ್ಟರೆ ಓದುಗರು ಮುನ್ನುಡಿ, ಹಿನ್ನುಡಿ, ಬೆನ್ನುಡಿಗಳ ಮೇಲೆ ಮಾತ್ರ ಕಣ್ಣಾಡಿಸಿ ಪುಸ್ತಕವನ್ನು ಒಂದೆಡೆ ಭದ್ರವಾಗಿ ತೆಗೆದಿಡಬಹುದು. ಈ ನಿಟ್ಟಿನಲ್ಲಿ ನಾವು ಕೃತಿಯಲ್ಲಿ ಏನೇನಿದೆ ಎಂದು ವಿವರವಾಗಿ ವಿಮರ್ಶಿಸುವ ಗೋಜಿಗೆ ಹೋಗುವುದಿಲ್ಲ. 'ಊಟಕ್ಕೆ ಉಪ್ಪಿನ ಕಾಯಿಯಂತೆ' ಕೆಲವೇ ವಿಚಾರಗಳನ್ನು ಹೇಳಿದ್ದೇವೆ.

ಲಿಂಗಾಯತ ಧರ್ಮದ ಮಾನ್ಯತೆ ಪಡೆಯುವಲ್ಲಿ ಕೆಲವು ಸಂಸ್ಥೆಗಳು ತೋರಿದ ಅಸಹಕಾರ, ದ್ವಂದ್ವನೀತಿ, ವಿರೋಧ, ಸ್ವಾರ್ಥ, ಕಿಡಿಗೇಡಿತನಗಳ ಕಾರಣವಾಗಿಯೇ 'ಜಾಗತಿಕ ಲಿಂಗಾಯತ ಮಹಾಸಭೆ' ಹುಟ್ಟಿದ್ದರ ಹಿನ್ನೆಲೆಯನ್ನು ಸಹ ಈ ಕೃತಿಯಲ್ಲಿ ದಾಖಲಿಸಿದ್ದಾರೆ. ಲಿಂಗಾಯತ ಧರ್ಮದ ಉಗಮ, ಬೆಳೆದುಬಂದ ಪರಿ, ಅದಕ್ಕೆ ಬಂದ ಅಡ್ಡಿ ಆತಂಕಗಳು, ಗುರು-ವಿರಕ್ತರ ಕವಡೆಯಾಟ, ಅಖಿಲಭಾರತ ವೀರಶೈವ ಮಹಾಸಭಾದ ದ್ವಿಮುಖ ನೀತಿ, ಸರ್ಕಾರದಲ್ಲಿದ್ದೂ ಸರ್ಕಾರದ ನಿರ್ಣಯಗಳನ್ನು ವಿರೋಧಿಸುವ ರಾಜಕಾರಣಿಗಳು, ಮುಖ್ಯಮಂತ್ರಿಗಳ ತೊಳಲಾಟ, ಬಸವಪರ ಗುರು-ಜಗದ್ಗುರುಗಳ ಸಹಕಾರ, ಸಚಿವ ಎಂ ಬಿ ಪಾಟೀಲ, ವಿನಯ ಕುಲಕರ್ಣಿ, ಶರಣಪ್ರಕಾಶ ಪಾಟೀಲ, ಬಸವರಾಜ ರಾಯರೆಡ್ಡಿ, ಬಸವರಾಜ ಹೊರಟ್ಟಿ ಮತ್ತಿತರರ ಬದ್ಧತೆ ಮುಂತಾದವುಗಳನ್ನು ಈ 'ಲಿಂಗಾಯತ ಚಳುವಳಿ' ಕೃತಿಯಲ್ಲಿ ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಾರೆ. ಪಾಟೀಲರು ಇನ್ನಷ್ಟು ಪ್ರಯತ್ನಿಸಿದ್ದರೆ 'ಕರಿಯನ್ನು ಕನ್ನಡಿಯಲ್ಲಿ ಹಿಡಿಯುವಂತೆ' ಪುಟಗಳ ಸಂಖ್ಯೆಯನ್ನು ಮಿತಗೊಳಿಸಲು ಅವಕಾಶವಿತ್ತು. ಓದುತ್ತ ಹೋದಾಗ ಅವೇ ಹೆಸರುಗಳು, ಒಂದೇ ವಿಷಯ ಮತ್ತೆ ಮತ್ತೆ ಪುನರಾವರ್ತನೆಯಾದಂತೆ ಅನಿಸುವುದು. ಮುಂದಿನ ಆವೃತ್ತಿಯಲ್ಲಿ ಆ ಕೆಲಸ ಮಾಡಿದರೆ ಇದೊಂದು ಕಾಯ್ದಿಟ್ಟುಕೊಂಡು ಸಂದರ್ಭಾನುಸಾರು ಮೆಲಕು ಹಾಕುವ ಕೃತಿ ಆಗುತ್ತದೆಂಬ ವಿಶ್ವಾಸ ನಮ್ಮದು. ಕೆಲವು ಕಹಿ ಸತ್ಯಗಳನ್ನು ಬರೆಯುವಾಗ ಪಾಟೀಲರು ಹಿಂದೆ ಮುಂದೆ ನೋಡಿದ ಹಾಗೆ ಕಾಣುವುದಿಲ್ಲ. ತಮ್ಮ ಭಾವನೆಗಳಿಗೆ ಅನಿಸಿದ್ದನ್ನು ಮನಸಾಕ್ಷಿಗನುಗುಣವಾಗಿ ದಾಖಲಿಸುವ ಕಾರ್ಯ ಮಾಡಿದ್ದಾರೆ. ಇಂಥ ಅಪರೂಪದ ಕೃತಿಯೊಂದನ್ನು ಅತ್ಯಂತ ಪರಿಶ್ರಮದಿಂದ ರಚಿಸಿರುವ ಲೇಖಕರಿಂದ ಶರಣ ಸಾಹಿತ್ಯ ಮತ್ತು ಲಿಂಗಾಯತ

In Public domain. Digitization Muthulakshmi Research Academy

ಧರ್ಮಕ್ಕೆ ಸಂಬಂಧಿಸಿದ ಇನ್ನೂ ಮಹತ್ವದ ಕೃತಿಗಳು ಹೊರಬರುವಂತಾಗಲಿ ಎಂದು ಹಾರೈಸುತ್ತೇವೆ. ಅವರ ಕಾಯಕಪ್ರಜ್ಞೆಗೆ ಯಾರಾದರೂ ಮೆಚ್ಚುಗೆ ಸೂಚಿಸಲೇಬೇಕು. ಅಭಿನಂದನೆ ಹೇಳಲೇಬೇಕು. ನಾವು ಸಹ ಅದನ್ನೇ ಮಾಡಿದ್ದೇವೆ.

ಸಾಣೇಹಳ್ಳಿ **ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು**
೩೦.೦೩.೨೦೨೫

In Public domain. Digitization Muthulakshmi Research Academy

ಸಮಕಾಲೀನ ಚರಿತ್ರೆ

ಕಳೆದ ಆರು ವರ್ಷಗಳ ಹಿಂದೆ ಕರ್ನಾಟದಲ್ಲಿ ನಡೆದ ಲಿಂಗಾಯತ ಚಳುವಳಿಯು ದೇಶ-ವಿದೇಶಗಳಲ್ಲಿ ಸುದ್ದಿ ಮಾಡಿತು. ಆ ಚಳುವಳಿಯನ್ನು ಕಣ್ಣಾರೆ ಕಂಡ, ಚಳುವಳಿಯನ್ನು ಸಂಘಟಿಸಿದ, ಚಳುವಳಿಗೆ ಬೇಕಾದ ದಾಖಲೆಗಳನ್ನು ಸಿದ್ಧಪಡಿಸಿದ, ಜಾಗತಿಕ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ.ಜಿ.ಬಿ.ಪಾಟೀಲರು ಇದೀಗ ಆ ಚಳುವಳಿಯ ಬಗ್ಗೆ ವಿವರವಾದ ಪುಸ್ತಕವೊಂದನ್ನು ಬರೆದು ನಮಗೆಲ್ಲ ಉಪಕಾರ ಮಾಡಿದ್ದಾರೆ. ಸಮಕಾಲೀನ ಚರಿತ್ರೆಗೆ ಇದೊಂದು ಅಪೂರ್ವ ಕೊಡುಗೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತಿದ್ದೇನೆ.

ನಾಲ್ಕುನೂರಕ್ಕೂ ಹೆಚ್ಚು ಪುಟಗಳ ಈ ಪುಸ್ತಕವು ೨೦೧೭-೧೮ರಲ್ಲಿ ನಡೆದ ಲಿಂಗಾಯತ ಚಳುವಳಿಯ ಅನೇಕ ಘಟನೆಗಳನ್ನು ಸೂಕ್ಷ್ಮವಾಗಿ ದಾಖಲಿಸುತ್ತದೆ. ಹೋರಾಟದಲ್ಲಿ ಭಾಗವಹಿಸಿದ ಭಿನ್ನಭಿನ್ನ ಜನವರ್ಗಗಳು, ಚಳುವಳಿಗಾರರು ಕಾಲಕಾಲಕ್ಕೆ ತೆಗೆದುಕೊಂಡ ನಿರ್ಧಾರಗಳು, ರೂಪಿಸಿದ ಕಾರ್ಯಸೂಚಿಗಳು, ಸಂವಹನ ಮಾದರಿಗಳು, ಎದುರಿಸಿದ ಬಿಕ್ಕಟ್ಟುಗಳು, ಕೆಲವು ಮಠಾಧಿಪತಿಗಳ ದ್ವಂದ್ವ ನೀತಿಗಳು, ಜನರ ನಡವಳಿಕೆಗಳು ಮತ್ತಿತರ ಅನೇಕ ವಿಷಯಗಳ ಬಗ್ಗೆ ಇಲ್ಲಿ ಅತ್ಯಂತ ಕುತೂಹಲಕರ ಮಾಹಿತಿಗಳಿವೆ. ಈ ಮಾಹಿತಿಗಳನ್ನು ಪಾಟೀಲರು ನುರಿತ ಸಂಶೋಧಕನ ಹಾಗೆ ಅತ್ಯಂತ ಶ್ರಮವಹಿಸಿ, ಸಂಗ್ರಹಿಸಿ, ಕ್ರಮಬದ್ಧವಾಗಿ ಜೋಡಿಸಿದ್ದಾರೆ. ಅದರ ಬಗ್ಗೆ ಅವರೇ ಹೀಗೆ ಬರೆದುಕೊಂಡಿದ್ದಾರೆ- "ಈ ಪುಸ್ತಕವನ್ನು ಬರೆಯಬೇಕೆಂಬ ಕನಸನ್ನು ನಾನು ಚಳುವಳಿಯ ದಿನಗಳಲ್ಲಿ ಕಂಡಿರಲಿಲ್ಲ. ಅದನ್ನು ಸಾಕಾರಗೊಳಿಸುವ ಇಚ್ಛೆ ನನ್ನದಾಗಿದ್ದರೆ ಪ್ರತಿಯೊಂದು

In Public domain. Digitization Muthulakshmi Research Academy

ಘಟನೆಗಳನ್ನು ಗುರುತು ಹಾಕಿಕೊಳ್ಳಬಹುದಾಗಿತ್ತು. ಆದರೆ ನಾನು ಅದನ್ನು ಮಾಡಿರಲಿಲ್ಲ. ಹೋರಾಟದ ದಿನಗಳು ಕಣ್ಮರೆಯಾಗಿ ಆರು ವರ್ಷಗಳು ಕಳೆದಿವೆ. ಅಂದಿನ ದಿನಗಳ ನೆನಪುಗಳು ಮಾತ್ರ ನನ್ನೊಂದಿಗಿವೆ. ನನ್ನ ನೆನಪಿನಾಳದಿಂದ ಮತ್ತು ಅಂದಿನ ಮೀಡಿಯಾ ವರದಿಗಳ ಆಧಾರದಿಂದ ಅಂದು ನಡೆದ ಚಳುವಳಿಯ ದಿನಗಳನ್ನು ತಮ್ಮೆದುರು ಇಡುತ್ತಿದ್ದೇನೆ. ನಿಮ್ಮೆದುರಿಗಿರುವುದು ನನ್ನ ನೆನಪುಗಳು ಮತ್ತು ಅದನ್ನು ಸಾಕ್ಷೀಕರಿಸುವ ದಾಖಲೆಗಳು ಮಾತ್ರ, ದಾಖಲೆಗಳಿಲ್ಲದ ನೆನಪುಗಳನ್ನು ಇಲ್ಲಿ ಬರೆದಿಲ್ಲ. ಈ ದಾಖಲೆಗಳಿಗಾಗಿ ನಾನು ಬಲವಾಗಿ ಆಧರಿಸಿದ್ದು ವೃತ್ತ ಪತ್ರಿಕೆಗಳನ್ನು, ಅವುಗಳಲ್ಲಿ ಹೆಚ್ಚು ವಿಶ್ವಾಸಾರ್ಹವೆಂದು ಹೆಸರು ಪಡೆದ 'ಪ್ರಜಾವಾಣಿ ಪತ್ರಿಕೆ'ಯನ್ನು. ಇದರ ಜೊತೆಗೆ ದಾಖಲಾತಿಗಾಗಿ ನಂಬಿದ್ದು 'ವಿಜಯ ಕರ್ನಾಟಕ', 'ಸಂಯುಕ್ತ ಕರ್ನಾಟಕ', 'ದಿ ಹಿಂದೂ' ಮತ್ತು 'ಟೈಮ್ಸ್ ಆಫ್ ಇಂಡಿಯಾ' ಮತ್ತಿತರ ಪತ್ರಿಕೆಗಳನ್ನು. ಆರು ವರ್ಷಗಳ ನಂತರ ಅಂದಿನ ದಿನಗಳನ್ನು ನೆನಪಿಸಿಕೊಂಡು ಈ ಪುಸ್ತಕ ಬರೆದಿರುವೆ. ಇಲ್ಲಿ ಅನೇಕ ಘಟನೆಗಳು ಮತ್ತು ಅವುಗಳಿಗೆ ಕಾರಣೀಕರ್ತರಾದ ಹೆಸರುಗಳನ್ನಾಗಲಿ, ವಿವರಗಳನ್ನಾಗಲಿ ಬರೆಯದೆ ಉಳಿದಿರಬಹುದು. ಅದಕ್ಕೆ ನನ್ನ ಮರೆವೇ ಮುಖ್ಯ ಕಾರಣ. ನಾನು ಯಾವುದೇ ವಾಸನೆಯಿಲ್ಲದೆ ಕಂಡಿದ್ದನ್ನು, ಕೇಳಿದ್ದನ್ನು, ಓದಿದ್ದನ್ನು ಮಾತ್ರ ಚಿತ್ರಿಸಿದ್ದೇನೆ. ಇಲ್ಲಿ ಯಾರನ್ನೂ ವೈಭವೀಕರಿಸುವ ಅಥವಾ ತೆಗಳುವ ಬಯಕೆ ನನ್ನದಲ್ಲ. ಘಟನೆಯ ಸತ್ಯಾಸತ್ಯತೆಯನ್ನು ಮಾತ್ರ ಚರ್ಚಿಸಿದ್ದೇನೆ".

ಬಹುಶಃ ನಮ್ಮ ವರ್ತಮಾನಗಳನ್ನು ನಿರ್ಧರಿಸಲು ಮತ್ತು ಅರ್ಥ ಪೂರ್ಣಗೊಳಿಸಲು ಇತಿಹಾಸವನ್ನು ಬಳಸಿಕೊಳ್ಳುವ ಕ್ರಮವೆಂದರೆ ಇದುವೇ ಸರಿ. ಇಂಥ ಪುಸ್ತಕಗಳು ಸಹಜವಾಗಿಯೇ ಬಹಳಕಾಲ ಪ್ರತಿಧ್ವನಿಸುವ ಅನೇಕ ಘಟನೆಗಳನ್ನು ಒಳಗೊಂಡಿರುತ್ತವೆ. ಇವತ್ತಿನ ಅನೇಕ ಇತಿಹಾಸಕಾರರು ರಾಷ್ಟ್ರೀಯ ಮಟ್ಟದಲ್ಲಿ ಯೋಚಿಸಿಕೊಂಡು, ತಮ್ಮನ್ನು 'ರಾಷ್ಟ್ರೀಯ ಚರಿತ್ರಕಾರ' ಎಂದು ಭಾವಿಸಿಕೊಂಡು (ಈಚಿನ ದಿನಗಳಲ್ಲಿ ತಮ್ಮನ್ನು ರಾಷ್ಟ್ರೀಯ ಪತ್ರಕಾರ ಎಂದು ಹೇಳಿಕೊಳ್ಳುವವರೂ ಇದ್ದಾರೆ) ಚರಿತ್ರೆ ಬರೆಯುತ್ತಿರುವುದರಿಂದಾಗಿ, ಪ್ರಾದೇಶಿಕ ಮತ್ತು ಸ್ಥಳೀಯ ಗುರುತುಗಳು ಅಳಿಸಿ ಹೋಗುತ್ತಿವೆ, ಇಲ್ಲವೇ ಅವು ಹೊಸ ವೇಷ ಧರಿಸಿ ಪ್ರತ್ಯಕ್ಷವಾಗುತ್ತಿವೆ. ಸ್ಥಳೀಯ ನಿರೂಪಣೆಗಳನ್ನು ರಾಜಕೀಯ ಕಾರಣಗಳಿಗಾಗಿ ನಿಯಂತ್ರಿಸಲಾಗುತ್ತಿದೆ. ಕ್ರಿಯೆಗಳನ್ನು, ಘಟನೆಗಳನ್ನು ಮತ್ತು ವ್ಯಕ್ತಿಗಳನ್ನು ಕಾನೂನುಬದ್ಧಗೊಳಿಸುವ ಅಥವಾ ಅಪಖ್ಯಾತಿಗೊಳಿಸುವ ಸಾಮರ್ಥ್ಯವನ್ನು ಇವತ್ತಿನ ರಾಜಕೀಯ ಹೊಂದಿದೆ. ಬಲಪಂಥೀಯ

In Public domain. Digitization Muthulakshmi Research Academy

ಇತಿಹಾಸಕಾರರಂತೂ ಉದ್ದೇಶಪೂರ್ವಕವಾಗಿ ತಮ್ಮ ಸ್ಪಷ್ಟವಾದ ಸೈದ್ಧಾಂತಿಕ ಕಾರ್ಯಸೂಚಿಯನ್ನು ಇತಿಹಾಸದ ಮೇಲೆ ಹೇರಲು ಪ್ರಯತ್ನಿಸುವುದರಿಂದಾಗಿ, ಇತಿಹಾಸವು ಕೂಡಾ ಇವತ್ತು ವಿಕಾರವಾಗಿದೆ. ಇತಿಹಾಸ ರಚನೆಯು ಅಡ್ಡ ಹಾದಿಯಲ್ಲಿರುವಾಗ, ಪಾಟೀಲರು ಪ್ರಸ್ತುತ ಪುಸ್ತಕದ ಮೂಲಕ ಇತಿಹಾಸ ಬರವಣಿಗೆಗೊಂದು ಸರಿಯಾದ ದಿಕ್ಕು ತೋರಿದ್ದಾರೆ. ಕತೆ-ಕಾದಂಬರಿ-ಐತಿಹ್ಯಗಳನ್ನು ಇತಿಹಾಸಕ್ಕೆ ಪುರಾವೆಯಾಗಿ ಕೊಡುವವರನ್ನು ಪಾಟೀಲರು ಇತಿಹಾಸದ ನೈಜ ಪುರಾವೆಗಳ ಕಡೆಗೆ ಕರೆದೊಯ್ದಿದ್ದಾರೆ.

ಪ್ರಸ್ತುತ ಪುಸ್ತಕದಲ್ಲಿ ಒಟ್ಟು ಹದಿನೈದು ಅಧ್ಯಾಯಗಳಿವೆ. ಮೊದಲ ಅಧ್ಯಾಯದಲ್ಲಿ ಲಿಂಗಾಯತ ಚಳುವಳಿಯ ವೈಚಾರಿಕ, ಧಾರ್ಮಿಕ ಮತ್ತು ರಾಜಕೀಯ ಹಿನ್ನೆಲೆಯನ್ನು ವಿವರವಾಗಿ ನೀಡಲಾಗಿದೆ. ಎರಡನೆಯ ಅಧ್ಯಾಯದಲ್ಲಿ ವೀರಶೈವ ಮತ್ತು ವೈದಿಕ ಮಠಾಧೀಶರ ಅಂತರಂಗದ ಅನಾವರಣವಿದೆ. ಮೂರನೆಯ ಅಧ್ಯಾಯದಲ್ಲಿ ಬೀದರ್‌ನಲ್ಲಿ ಬೀದಿಗಿಳಿದ ಚಳುವಳಿಯ ಕುರಿತು ಮಾಹಿತಿಗಳಿದ್ದರೆ, ನಾಲ್ಕನೆಯ ಅಧ್ಯಾಯದಲ್ಲಿ ಚಳುವಳಿ ಗಟ್ಟಿಕೊಂಡ ಬಗೆಗೂ, ಪ್ರಖ್ಯಾತವಾದ ಬೆಳಗಾವಿ ಸಮಾವೇಶದ ಬಗ್ಗೆಯೂ ಅಮೂಲ್ಯ ವಿವರಗಳಿವೆ. ಐದನೇ ಅಧ್ಯಾಯದಲ್ಲಿ ಗೌರಿ ಲಂಕೇಶ್ ಹತ್ಯೆಯೂ ಸೇರಿದಂತೆ, ಚಳುವಳಿಕಾಲದ ಕೆಲವು ಬಿಕ್ಕಟ್ಟುಗಳ ಕುರಿತು ಮಾತುಗಳಿವೆ. ಆರನೆಯ ಅಧ್ಯಾಯದಲ್ಲಿ ಬಹಳ ಹೆಸರು ಮಾಡಿದ್ದ ಕಲಬುರ್ಗಿ ಸಮಾವೇಶದ ಬಗ್ಗೆ ಬರೆಯಲಾಗಿದೆ. ಏಳನೆಯ ಅಧ್ಯಾಯದಲ್ಲಿ ಮಠಾಧೀಶರ ದ್ವಂದ್ವ ನಿಲುವುಗಳನ್ನು ವಿಮರ್ಶಿಸಲಾಗಿದೆ. ಎಂಟನೇ ಅಧ್ಯಾಯವು ಹುಬ್ಬಳ್ಳಿ ಸಮಾವೇಶ ಹಾಗೂ ಅದರ ದೂರದೃಷ್ಟಿ ಪರಿಣಾಮದ ಕುರಿತಾಗಿದ್ದರೆ, ಒಂಬತ್ತನೇ ಅಧ್ಯಾಯವು ಜಾಗತಿಕ ಲಿಂಗಾಯತ ಮಹಾಸಭಾ ಸ್ಥಾಪನೆಯ ಅಗತ್ಯ ಮತ್ತು ಅದು ರೂಪುಗೊಂಡ ರೀತಿಯನ್ನು ವಿವರಿಸುತ್ತದೆ. ೧೦ನೇ ಅಧ್ಯಾಯವು ಚಳುವಳಿಯು ಆಗಿನ ರಾಜಕೀಯದ ಮೇಲೆ ಬೀರಿದ ಪರಿಣಾಮವನ್ನು ವಿವರಿಸುವುದರ ಜೊತೆಗೆ, ವಿಜಯಪುರ ಸಮಾವೇಶದ ಬಗ್ಗೆ ಮಾಹಿತಿ ನೀಡುತ್ತದೆ. ಹತ್ತು ಮತ್ತು ಹನ್ನೊಂದನೇ ಅಧ್ಯಾಯಗಳು, ಚಳುವಳಿಗಾರರು ಸರಕಾರದ ಮೇಲೆ ಹೇರಿದ ಒತ್ತಡ ಮತ್ತು ಸರಕಾರ ರಚಿಸಿದ ತಜ್ಞರ ಸಮಿತಿಯ ಬಗ್ಗೆ ಮಹತ್ವದ ಮಾಹಿತಿಗಳನ್ನು ನೀಡುತ್ತದೆ. ಚಳುವಳಿಯು ಧಾರ್ಮಿಕತೆಯಿಂದ ದೂರ ಸರಿದು ರಾಜಕೀಯ ಸ್ವರೂಪ ಪಡೆಯಿತೆ? ಎಂದು ಲೇಖಕರು ಚಿಂತಿಸುತ್ತಾರೆ. ಅನುಬಂಧದಲ್ಲಿ ವೀರಶೈವರ ಇತಿಹಾಸ ಮತ್ತು ಮೌಢ್ಯದ ಬಗ್ಗೆ ಬರೆಯುತ್ತಾರೆ. ಕೊನೆಯದಾಗಿ ಲಿಂಗಾಯತರಲ್ಲಿ ಜ್ಯಾತಿ ತಾರತಮ್ಯ ಇಲ್ಲವೇ? ಎಂದು ತಮ್ಮನ್ನು

In Public domain. Digitization Muthulakshmi Research Academy

ತಾವೇ ಪಾಟೀಲರು ಪ್ರಶ್ನಿಸಿಕೊಳ್ಳುತ್ತಾರೆ. ಹೀಗೆ ಈ ಪುಸ್ತಕವು ಚಳುವಳಿಯೊಂದರ ಇತಿಹಾಸವನ್ನು ಆದಷ್ಟೂ ಸಮಗ್ರವಾಗಿ, ತಾಳ್ಮೆಯಿಂದ ಕಟ್ಟಿಕೊಡುತ್ತದೆ.

ಭಾರತದಲ್ಲಿ ಹಿಂದೂ ಧರ್ಮದ ಪುನುರುತ್ಥಾನದ ಕೆಲಸಗಳನ್ನು ಬಿಜೆಪಿ ಸರಕಾರ ಮಾಡುತ್ತಿರುವಾಗ, ಅದಕ್ಕೆ ಸೂಚಿಸಿದ ಪ್ರತಿಭಟನೆಯೋ ಎಂಬಂತೆ, 'ಲಿಂಗಾಯತ ಧರ್ಮವನ್ನು ಒಂದು ಸ್ವತಂತ್ರ ಧರ್ಮ ಎಂದು ಘೋಷಿಸಬೇಕು' ಎಂಬ ಕೂಗು ಕರ್ನಾಟದಲ್ಲಿ ಎದ್ದಿತು. ಆ ಕೂಗಿಗೆ ತನ್ನದೇ ಆದ ಇತಿಹಾಸ ಒಂದಿತ್ತು. ಬಸವಾದಿ ಶರಣರು ಹಿಂದೂ ಧರ್ಮದ ಹಲವು ಅನಿಷ್ಟಗಳ ವಿರುದ್ಧ ತಮ್ಮದೇ ರೀತಿಯಲ್ಲಿ ಕೂಗೆಬ್ಬಿಸಿದ್ದರು. ವೇದ ಪುರಾಣಗಳನ್ನು ಆಧರಿಸಿ ಹಿಂದೂ ಧರ್ಮವನ್ನು ವೈದಿಕರು ವ್ಯಾಖ್ಯಾನಿಸುವ ಕಾಲಘಟ್ಟದಲ್ಲಿ ಶರಣರು– "ವೇದವೆಂಬುದು ಓದಿನ ಮಾತು, ಪುರಾಣವೆಂಬುದು ಪುಂಡರ ಗೋಷ್ಠಿ" ಎಂದು ಸಾರಿದರು. ಲಿಂಗ ತಾರತಮ್ಯವನ್ನು ನಿರಾಕರಿಸಿ– "ಮೊಲೆ ಮೂಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು, ನಡುವೆ ಸುಳಿವಾತ್ಮ ಗಂಡೂ ಅಲ್ಲ, ಹೆಣ್ಣೂ ಅಲ್ಲ" ಎಂದು ಘೋಷಿಸಿದರು. ದೇವಭಾಷೆಯಾಗಿದ್ದ ಸಂಸ್ಕೃತದ ಜಾಗದಲ್ಲಿ ಕನ್ನಡವನ್ನು ಕುಳ್ಳಿರಿಸಿ, ದೇವರಿಗೇ ಕನ್ನಡ ಕಲಿಸಿದರು. ಮೂಢನಂಬಿಕೆಗಳ ವಿರುದ್ಧ ಧ್ವನಿ ಎತ್ತಿದರು. ಹೀಗಾಗಿ ಶರಣರ ಧರ್ಮ ಕಲ್ಪನೆಯು ವೈದಿಕ ನಿಯಂತ್ರಿತ ಹಿಂದೂ ಧರ್ಮಕ್ಕಿಂತ ಬೇರೆಯೇ ಆಗಿದೆ ಎಂಬ ಮಾತು ಜನಪ್ರಿಯವಾಗಿತ್ತು. ಲಿಂಗಾಯತ ಹೋರಾಟದ ಸಂದರ್ಭದಲ್ಲಿ ಮತ್ತೆ ಆ ಚರ್ಚೆಗಳು ಮುನ್ನೆಲೆಗೆ ಬಂದುವು. 'ಲಿಂಗಾಯತ ಧರ್ಮ, ಯಾವತ್ತೂ ಒಂದು ಸ್ವತಂತ್ರ ಧರ್ಮವಾಗಿಯೇ ಇದ್ದುಕೊಂಡು ಬಂದಿದೆ. ಅದನ್ನು ಯಾವುದೇ ಸಮುದಾಯ, ಸರ್ಕಾರ ಗುರುತಿಸದೇ ಇದ್ದಿರಬಹುದು ಅಷ್ಟೇ' ಎಂದು ಚಳುವಳಿಗಾರರು ವಾದಿಸಿದರು. ಡಾ.ಎಂ.ಎಂ.ಕಲಬುರ್ಗಿಯವರು, 'ನಿಜಕ್ಕೂ ಅದೊಂದು ಮತ ನಿರಸನ ಧರ್ಮ. ಅದಕ್ಕೆ ಯಾರೂ ಸಂಸ್ಥಾಪಕರೆಂಬುವವರು ಇಲ್ಲ' ಎಂದು ಬರೆದರು. 'ಸತ್ತದ್ದನ್ನು ತಂದು ಕೊಯ್ದು ತಿನ್ನುವವನು ಹೊಲೆಯ ಎಂಬ ಮಾತನ್ನು ಅಲ್ಲಗಳೆದು, ಬದುಕಿದ್ದನ್ನು ತಂದು ಯಜ್ಞಯಾಗಾದಿಗಳಿಗೆ ಬಲಿ ನೀಡಿ ತಿನ್ನುವವನು ಹೊಲೆಯ' ಎಂದು ಶರಣರು ಹೇಳಿದರು. ಲಿಂಗ ಭೇದ, ಜಾತಿ ಭೇದ, ವರ್ಣ ಭೇದಗಳನ್ನು ಅವರು ಒಪ್ಪಲಿಲ್ಲ. ದೇವಸ್ಥಾನಗಳನ್ನು ನಿರಾಕರಿಸಿದ ಶರಣರು, 'ದೇಹವೇ ದೇಗುಲ' ಎಂಬ ವಿನೂತನ ಕಲ್ಪನೆಯನ್ನು ಜನರ ಮುಂದಿಟ್ಟರು. ಹೀಗೆ, ಲಿಂಗಾಯತ ಧರ್ಮವು ತನ್ನದೇ ಆದ ಆಚಾರ–ವಿಚಾರ, ತನ್ನದೇ ಆದ ಧರ್ಮಶಾಸ್ತ್ರ–ಧರ್ಮಸಾಹಿತ್ಯ– ಧರ್ಮ ತತ್ತ್ವ ಹೊಂದಿದ, ತನ್ನದೇ ಆದ ವಿಶಿಷ್ಟ ಕುಲಾಚಾರಗಳನ್ನು ಹೊಂದಿರುವಾಗ ಅದನ್ನು ಪ್ರತ್ಯೇಕ ಧರ್ಮ ಎಂದು ಯಾಕೆ ಮನ್ನಿಸಬಾರದು ಎಂಬ

In Public domain. Digitization Muthulakshmi Research Academy

ಪ್ರಶ್ನೆಗಳನ್ನು ಚಳುವಳಿ ಮುನ್ನೆಲೆಗೆ ತಂದಿತು. ಚಳುವಳಿಗೆ ರಾಜ್ಯ ಸರ್ಕಾರ ಸ್ಪಂದಿಸಿ, ತಜ್ಞರ ಸಮಿತಿ ರಚಿಸಿ, ಅವರ ವರದಿಯ ಆಧಾರದಲ್ಲಿ ಲಿಂಗಾಯತ ಅಲ್ಪಸಂಖ್ಯಾತ ಧರ್ಮವೆಂದು ಪರಿಗಣಿಸಿ ಅದನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು.

ಈ ಹೊತ್ತಿಗೆ ಚಳುವಳಿಯು ಮುಗಿದಂತೆ ಕಾಣುವುದಿಲ್ಲ. ಬಲಪಂಥೀಯರು ವಚನಗಳು ಹಿಂದೂ ಧರ್ಮದ ಭಾಗವೇ ಹೌದು ಎಂದು ಮತ್ತೆ ವಾದಿಸಲು ಆರಂಭಿಸಿದ್ದಾರೆ. ಬಸವಣ್ಣನವರನ್ನು ಭಕ್ತಿ ಪಂತಕ್ಕೆ ಸೇರಿಸಿ, ಹಿಂದೂ ಧರ್ಮದ ಸುಧಾರಣಾವಾದಿ ಎಂಬ ಹಣೆಪಟ್ಟಿಯೊಂದಿಗೆ ಲಿಂಗಾಯತರನ್ನು ಹಿಂದೂಗಳೆಂದು ದೃಢೀಕರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಜಗತ್ತಿನ ಪ್ರಜಾಪ್ರಭುತ್ವದ ಮೂಲವೆನ್ನುವ 'ಅನುಭವ ಮಂಟಪ'ದ ಅಸ್ತಿತ್ವವನ್ನೇ ಪ್ರಶ್ನಿಸುತ್ತಿದ್ದಾರೆ. ಅದಕ್ಕೆ ಲಿಂಗಾಯತರು ಸಮರ್ಥವಾಗಿ ಉತ್ತರಿಸುತ್ತಿದ್ದಾರೆ. ಈ ವಾದ ವಿವಾದಗಳು ಸದ್ಯಕ್ಕೆ ಮುಗಿಯುವ ಲಕ್ಷಣ ಇಲ್ಲ.

ಚಳುವಳಿಯ ಮುಂಚೂಣಿ ನಾಯಕರಾಗಿದ್ದ ಶ್ರೀ ಎಸ್.ಎಂ. ಜಾಮದಾರರು ಒಂದೆಡೆ ಹೀಗೆ ಹೇಳಿದ್ದಾರೆ 'ಲಿಂಗಾಯತರು ೧೨ನೇ ಶತಮಾನದ ತತ್ವಜ್ಞಾನಿ ಮತ್ತು ಸಮಾಜ ಸುಧಾರಕ ಬಸವಣ್ಣನವರ ಅನುಯಾಯಿಗಳೆಂದು ಹೇಳಿಕೊಳ್ಳುತ್ತಾರೆ, ಅವರು ಜಾತಿ ಶ್ರೇಣಿ ವ್ಯವಸ್ಥೆ, ವೈದಿಕ ಆಚರಣೆಗಳು ಮತ್ತು ಬ್ರಾಹ್ಮಣ ಹಿಂದೂ ಧರ್ಮದ ಇತರ ಆಚರಣೆಗಳನ್ನು ತಿರಸ್ಕರಿಸಿದರು ಮತ್ತು ಹೊಸ ಸಮಾನತೆಯ ನಂಬಿಕೆಯನ್ನು ಸ್ಥಾಪಿಸಿದರು ಎಂದು ನಂಬಲಾಗಿದೆ: ೮ನೇ ಮತ್ತು ೧೩ನೇ ಶತಮಾನಗಳ ನಡುವೆ ದಕ್ಷಿಣ ಭಾರತವನ್ನು ವ್ಯಾಪಿಸಿದ ಭಕ್ತಿಚಳುವಳಿಯಲ್ಲಿ ಬಸವಣ್ಣನವರು ಪ್ರಮುಖ ವ್ಯಕ್ತಿ. ಇಂದು, ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ ಮತ್ತು ತಮಿಳುನಾಡಿನಲ್ಲಿ ಲಿಂಗಾಯತರು ಗಮನಾರ್ಹ ಸಂಖ್ಯೆಯಲ್ಲಿದ್ದಾರೆ. ಹಿಂದೂ ಧರ್ಮದಿಂದ ಪ್ರತ್ಯೇಕವಾದ ಸ್ವತಂತ್ರ ಧಾರ್ಮಿಕ ಗುಂಪಾಗಿ ಗುರುತಿಸಲ್ಪಡುವ ಅವರ ಹೋರಾಟವು ಹಲವಾರು ವರ್ಷಗಳಷ್ಟು ಹಳೆಯದಾಗಿದ್ದರೂ, ಸಮುದಾಯದೊಳಗೆ ಒಂದು ಬಣವಿದೆ, ಅವರು ತಮ್ಮ ಬೇರುಗಳು ಹಿಂದೂ ಧರ್ಮದಲ್ಲಿವೆ ಎಂದು ನಂಬುತ್ತಾರೆ. ಇವರಿಗೆ ಪ್ರತ್ಯೇಕ ಧರ್ಮದ ಬೇಡಿಕೆ ಅಮಾನ್ಯವಾಗಿದೆ'.

ಜಾಮದಾರರ ಮಾತುಗಳು ಲಿಂಗಾಯತ ಹೋರಾಟದ ಸಂಕೀರ್ಣತೆಯನ್ನು ಸರಳವಾಗಿ ನಮ್ಮ ಮುಂದಿಡುತ್ತದೆ. ಚಳುವಳಿಯು ಇದುವರೆಗೆ ನಡೆದು ಬಂದ ಬಗೆಯನ್ನು ಪಾಟೀಲರು ದಾಖಲಿಸಿದ್ದರೆ, ಜಾಮದಾರರ ಮಾತುಗಳು ಅದರ ಮುಂದಿನ ಹೆಜ್ಜೆಗಳ ತೊಡಕುಗಳನ್ನು ಸೂಚಿಸುತ್ತಿದೆ. ಹಿಂದೂ ಧರ್ಮದ ನಿಷ್ಠಾವಂತ

In Public domain. Digitization Muthulakshmi Research Academy

ಅನುಯಾಯಿಗಳು ಭಾರತದ ಚಿಕ್ಕಪುಟ್ಟ ಸಮುದಾಯಗಳನ್ನೇ ಪರಿವರ್ತಿಸುತ್ತಿರುವಾಗ, ಲಿಂಗಾಯತ ಚಳುವಳಿಯು ಹೇಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತದೆ ಎಂಬುದನ್ನು ಕಾಲವೇ ಹೇಳಬೇಕು.

ಪುರುಷೋತ್ತಮ ಬಿಳಿಮಲೆ

ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

In Public domain. Digitization Muthulakshmi Research Academy

ಇತಿಹಾಸ ದಾಖಲಿಸುವ ಕಿರುಯತ್ನದ ಬೆನ್ನೇರಿ ಎರಡು ಮಾತು

'ಇತಿಹಾಸ ತಿಳಿಯದವನು ಇತಿಹಾಸ ಸೃಷ್ಟಿಸಲಾರ' ಎಂದು ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಇತಿಹಾಸದ ಮಹತ್ವವನ್ನು ತಿಳಿಸುತ್ತಾರೆ. ಭಾರತದಲ್ಲಿ ಇತಿಹಾಸವೆಂದರೆ ರಾಜರ ಇತಿಹಾಸ. ಅದೂ ಯುದ್ಧದಲ್ಲಿ ಗೆದ್ದವರ ಇತಿಹಾಸ ಮಾತ್ರ. ಪ್ರತಿಶತ ೯೮ರಷ್ಟಿರುವ ಸಾಮಾನ್ಯರ ಜೀವನವನ್ನು ತಿಳಿಸದೆ, ಕೇವಲ ರಾಜರ ಸೋಲು ಗೆಲುವುಗಳ ಚರಿತ್ರೆ ಒಂದು ದೇಶದ ನೈಜ ಚರಿತ್ರೆಯಾಗಲು ಸಾಧ್ಯವೆ? ಉಳ್ಳವರ ಇತಿಹಾಸವನ್ನು ಅಲ್ಪ ಸ್ವಲ್ಪ ದಾಖಲಿಸಿದವರು ಬ್ರಾಹ್ಮಣರು. ಕಾರಣ ಓದು, ಬರಹದ ಹಕ್ಕು ಅವರಿಗೆ ಮಾತ್ರ ಇತ್ತಲ್ಲವೆ? ಅಷ್ಟಕ್ಕೂ ದೇಶದಲ್ಲಿರುವ ಸಮಸ್ತ ರಾಜರ ಅಥವಾ ಆಡಳಿತಗಾರರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬದುಕನ್ನು ಇವರು ದಾಖಲಿಸಿಲ್ಲ. ಹೀಗಿರುವಾಗ ಜನಸಾಮಾನ್ಯರ ಬದುಕು, ಬವಣೆಯ ಬಗ್ಗೆ ಹೇಗೆ ಬರೆದಾರು? ಮೇಲಾಗಿ ಜನಸಾಮಾನ್ಯರ ಇತಿಹಾಸವನ್ನು ದಾಖಲಿಸಿದವರಿಗೆ ಯಾವ ಪುರಸ್ಕಾರಗಳೂ ಸಿಗುತ್ತಿರಲಿಲ್ಲ. ದಾಖಲಿಸಿದರೆ ಅವರ ಜೀವನ ನಿರ್ವಹಣೆಯೂ ಆಗುತ್ತಿರಲಿಲ್ಲ. ಹೀಗಾಗಿ ಭಾರತದಲ್ಲಿ ನೈಜ ಇತಿಹಾಸ ದಾಖಲೆಗೊಳ್ಳಲೇ ಇಲ್ಲ. ಭಾರತದಲ್ಲಿ ದಾಖಲೆರಹಿತ ಇತಿಹಾಸವೇ ದೊಡ್ಡದು. ಇಂತಹ ಕೊರತೆಯ ಬಗ್ಗೆ ಶ್ರೇಷ್ಠ ಇತಿಹಾಸಕಾರ ಡಿ.ಡಿ.ಕೊಸಾಂಬಿಯವರು ಈ ರೀತಿ ಬರೆಯುತ್ತಾರೆ: "ಭಾರತದ ಇತಿಹಾಸವನ್ನು ಕಟ್ಟಲು ಹೊರಟಾಗ ಪ್ರಾರಂಭದಲ್ಲೇ ನಮಗೆ ಪರಿಹಾರವೇ ಕಾಣದ ತೊಡಕುಗಳು ಎದುರಾಗುತ್ತವೆ. ಭಾರತಕ್ಕೆ ಹೇಳಿಕೊಳ್ಳುವಂತಹ ಯಾವುದೇ ಚಾರಿತ್ರಿಕ ದಾಖಲೆಗಳಿಲ್ಲ. ಕಾಶ್ಮೀರ ಮತ್ತು ಚಂಬಾ ರಾಜ್ಯಗಳನ್ನು ಬಿಟ್ಟು ಉಳಿದ ಯಾವುದೇ ರಾಜನ ಆಸ್ಥಾನದಲ್ಲಿ ದಸ್ತಾವೇಜುಗಳಿರಲಿಲ್ಲ. ಇದನ್ನೆಲ್ಲ ನೋಡಿ ಹಲವಾರು ಉತ್ತಮ ವಿದ್ವಾಂಸರು ಕೂಡ ಭಾರತದಲ್ಲಿ ಚರಿತ್ರೆ ಎನ್ನುವುದೇ ಇಲ್ಲ ಎಂದಿದ್ದಾರೆ"

In Public domain. Digitization Muthulakshmi Research Academy

ಕೊಸಾಂಬಿಯವರ ಈ ಹೇಳಿಕೆ ಲಿಂಗಾಯತರ ಇತಿಹಾಸಕ್ಕೂ ಅನ್ವಯಿಸುತ್ತದೆ. ಹನ್ನೆರಡನೆಯ ಶತಮಾನದ ಶರಣರ ಐತಿಹಾಸಿಕ ಕಾರ್ಯಕ್ಕೆ ಪೂರಕವಾಗಿ ಅವರ ವೈಯಕ್ತಿಕ ವಿವರಗಳಾದ ಜನನ, ಜೀವನ, ಕಾಯಕ, ಮರಣದ ವಿವರಗಳು ಲಭ್ಯವಿಲ್ಲ. ವಚನ ಸಾಹಿತ್ಯದೊಂದಿಗೆ ಶರಣರ ಜೀವನದ ಪೂರಕ ಸಾಹಿತ್ಯ ಅಂದು ರಚಿಸಲ್ಪಟ್ಟಿದ್ದರೆ, ಇಂದು ಲಿಂಗಾಯತ ಧರ್ಮದ ಇತಿಹಾಸದ ಸ್ವರೂಪವೇ ಬೇರೆಯಾಗಿರುತ್ತಿತ್ತು. ಬಸವಣ್ಣನವರ ಜನ್ಮ, ಕಾರ್ಯಕಾಲ, ಬಯಲಲ್ಲಿ ಬಯಲಾದ ಖಚಿತ ವಿವರಗಳು ನಮ್ಮ ಹತ್ತಿರವಿಲ್ಲ. ಸಾಂದರ್ಭಿಕ ಸಾಕ್ಷ್ಯಗಳ ಆಧಾರದಲ್ಲಿ ಶರಣರ ಜನ್ಮಸ್ಥಾನ, ಕಾರ್ಯಕ್ಷೇತ್ರ ಮತ್ತು ಅಂತಿಮ ದಿನಗಳನ್ನು ಸಂಶೋಧಕರು ನಿರ್ಧರಿಸಿದ್ದಾರೆ. ವಚನಕಾರರು ಜೀವಿಸಿದ ಕಾಲಾವಧಿಯ ಬಗ್ಗೆಯೂ ಒಟ್ಟಾಭಿಪ್ರಾಯವಿಲ್ಲ. ಈ ಕೊರತೆಯಿಂದಾಗಿ ಇಂದಿಗೂ ಶರಣರ ಸೈದ್ಧಾಂತಿಕ ವಿರೋಧಿಗಳು ಅವರನ್ನು ಪಶುವನ್ನಾಗಿಸಿ, ತಮ್ಮ ಮೌಢ್ಯಭರಿತ ಇತಿಹಾಸವೇ ನೈಜ ಇತಿಹಾಸವೆಂದು ಸಾರುತ್ತಿದ್ದಾರೆ. ಇದನ್ನು ಸರಿಪಡಿಸಲು ವಚನ ಪಿತಾಮಹ ಫ.ಗು.ಹಳಕಟ್ಟಿಯವರು ಮತ್ತು ನಾಡಿನ ಕೆಲ ಹಿರಿಯ ಸಂಶೋಧಕರು ಪ್ರಯತ್ನಿಸಿದ್ದರು.

ಲಿಂಗಾಯತ ಇತಿಹಾಸದಲ್ಲಿ ಮುಖ್ಯವಾಗಿ ನಾಲ್ಕು ಪರ್ವಗಳನ್ನು ಕಾಣಬಹುದು. ನೂರೊಂದು ಶರಣರ ಪರ್ವ ಒಂದನೆಯದಾದರೆ, ಎಡೆಯೂರು ಸಿದ್ಧಲಿಂಗೇಶ್ವರರದ್ದು ಎರಡನೆಯ ಪರ್ವ. ಆಧುನಿಕ ಕಾಲದಲ್ಲಿ ವಚನ ಸಂಶೋಧನೆ ಮಾಡಿ ಅದನ್ನು ಜನರಿಗೆ ಮುಟ್ಟಿಸಿದ್ದ ಫ.ಗು.ಹಳಕಟ್ಟಿಯವರದ್ದು ಮೂರನೇ ಪರ್ವವಾದರೆ, ೨೦೧೭–೧೮ರಲ್ಲಿ ಲಿಂಗಾಯತರು ಬೀದಿಗಿಳಿದು, ಲಿಂಗಾಯತ ಧರ್ಮಕ್ಕೆ ಅಲ್ಪಸಂಖ್ಯಾತ ಧರ್ಮದ ಮಾನ್ಯತೆ ದೊರಕಿಸಿಕೊಂಡಿದ್ದು ನಾಲ್ಕನೆಯ ಪರ್ವ.

ಜೂನ್ ೧೪, ೨೦೧೭ರಿಂದ ಮಾರ್ಚ್ ೨, ೨೦೧೮–ಈ ಒಂಬತ್ತು ತಿಂಗಳ ಅವಧಿಯು ಲಿಂಗಾಯತ ಇತಿಹಾಸದಲ್ಲಿ ಮಹತ್ವದ ತಿಂಗಳುಗಳು, ಈ ಅವಧಿಯಲ್ಲಿ ಲಿಂಗಾಯತರು ರಸ್ತೆಗಿಳಿದು, ಲಿಂಗಾಯತ ಧರ್ಮಕ್ಕೆ ಅಲ್ಪ ಸಂಖ್ಯಾತ ಧರ್ಮವೆಂದು ಸಾಂವಿಧಾನಿಕ ಮಾನ್ಯತೆ ನೀಡಲು ಒತ್ತಾಯಿಸಿದ ಲಿಂಗಾಯತ ಚಳವಳಿಯು ಲಿಂಗಾಯತ ಧರ್ಮದ ಮಹತ್ವದ ದಿನಗಳು. ಆ ಸಮಯದಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಮಾನ್ಯ ಸಿದ್ದರಾಮಯ್ಯ ನವರು ಕೆಲವು ಐತಿಹಾಸಿಕ ನಿರ್ಣಯ ಕೈಗೊಂಡಿದ್ದರು. ಬಿಜಾಪುರದ ಮಹಿಳಾ ವಿಶ್ವವಿದ್ಯಾಲಯಕ್ಕೆ ಶರಣೆ ಮಹಾದೇವಿಯಕ್ಕನ ಹೆಸರಿಟ್ಟಿದ್ದರು

In Public domain. Digitization Muthulakshmi Research Academy

(ಸೆಪ್ಟೆಂಬರ್ ೨೦೧೬), ನಂತರ ಸರಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರವನ್ನು ಹಾಕಬೇಕೆಂಬ ನಿರ್ಣಯವನ್ನು ಕೈಗೊಂಡಿದ್ದರು. ಅವರ ಈ ನಿರ್ಣಯಗಳನ್ನು ವೀರಶೈವ ಮಹಾಸಭೆಯವರೂ ಸ್ವಾಗತಿಸುತ್ತ, ಜೂನ್ ೧೪, ೨೦೧೭ರಂದು ಮುಖ್ಯಮಂತ್ರಿಯವರನ್ನು ಅಭಿನಂದಿಸಿ ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಕೇಳಿದ್ದೂ ಒಂದು ಐತಿಹಾಸಿಕ ಘಟನೆ. ಈ ಬೇಡಿಕೆಯೊಂದಿಗೆ ನಾಡಿನ ಮಠಾಧೀಶರು ದನಿಗೂಡಿಸಿದ್ದು(ಜೂನ್ ೨೩, ೨೦೧೭), ಇವರೊಂದಿಗೆ ಲಕ್ಷ ಲಕ್ಷ ಸಂಖ್ಯೆಯಲ್ಲಿ ಲಿಂಗಾಯತರು ಬೀದಿಗಿಳಿದದ್ದೂ (ಆಗಸ್ಟ ೧೦,೨೦೧೭), ಪರ ವಿರೋಧ ಚರ್ಚೆಗಳು ಪ್ರಾರಂಭವಾಗಿದ್ದು, ಜನರ ಭಾವನೆಗಳಿಗೆ ಮೀಡಿಯಾಗಳು ಸ್ಪಂದಿಸಿ ಪ್ರಚಾರ ನೀಡಿದ್ದು ಐತಿಹಾಸಿಕವೇ ಸರಿ. ಜನರ ಭಾವನೆಗಳಿಗೆ ತಲೆ ಬಾಗಿದ ಮುಖ್ಯಮಂತ್ರಿಯವರು, ಸತ್ಯಾಸತ್ಯತೆಯನ್ನು ಅರಿಯಲು ತಜ್ಞರ ಸಮಿತಿ ರಚಿಸಿ(ಡಿಸೆಂಬರ್ ೧೦, ೨೦೧೭), ಅದರ ಅಧ್ಯಕ್ಷರನ್ನಾಗಿ ನ್ಯಾಯಮೂರ್ತಿ ನಾಗಮೋಹನದಾಸ್ ಅವರನ್ನು ನೇಮಿಸಿ, ಆ ಸಮಿತಿಯಲ್ಲಿ ನಾಡಿನ ಶ್ರೇಷ್ಠ ವಿದ್ವಾಂಸರನ್ನು(ಲಿಂಗಾಯತ/ ವೀರಶೈವಾತೀತ) ಸದಸ್ಯರನ್ನಾಗಿ ಸೇರಿಸಿ, ಆರು ವಾರಗಳಲ್ಲಿ ವರದಿ ನೀಡುವಂತೆ ಕೇಳಿಕೊಂಡಿದ್ದು ಮತ್ತೊಂದು ಐತಿಹಾಸಿಕ ಮೈಲುಗಲ್ಲು. ಈ ಸಮಿತಿಯು ಭಾರತದಲ್ಲಿ ಹರಡಿದ್ದ ಸಮಸ್ತ ಲಿಂಗಾಯತರ ಜನಾಭಿಪ್ರಾಯ ಸಂಗ್ರಹಿಸಿ, ಧಾರ್ಮಿಕ, ಸಾಮಾಜಿಕ ಹಾಗೂ ಕಾನೂನಾತ್ಮಕ ಆಧಾರದಲ್ಲಿ ಒಂದು ಸಾರ್ವಕಾಲಿಕ ಸತ್ಯವಾದ ವರದಿಯನ್ನು ಸರಕಾರಕ್ಕೆ ನೀಡಿದ್ದು(ಮಾರ್ಚ್ ೨, ೨೦೧೮), ಅದನ್ನು ಸಚಿವ ಸಂಪುಟದಲ್ಲಿ ಮೂರು ಬಾರಿ ಚರ್ಚಿಸಿ, ಅದಕ್ಕೆ ಒಪ್ಪಿಗೆ ಸೂಚಿಸಿ (ಮಾರ್ಚ್ ೨೧, ೨೦೧೮), ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ವರದಿಯನ್ನು ಕಳಿಸಿದ್ದು ಇವುಗಳೆಲ್ಲವೂ ಐತಿಹಾಸಿಕ ನಿರ್ಧಾರಗಳೇ. ಈ ಎಲ್ಲ ಬೆಳವಣಿಗೆಗಳಿಗೆ ಮೂಲ ಕಾರಣಕರ್ತರು ಅಂದಿನ ಜಲಸಂಪನ್ಮೂಲ ಸಚಿವರಾದ ಎಂ.ಬಿ.ಪಾಟೀಲರು ಮತ್ತು ಸಚಿವಸಂಪುಟದ ಸಹಸದಸ್ಯರಾದ ವಿನಯ ಕುಲಕರ್ಣಿ, ಡಾ. ಶರಣಪ್ರಕಾಶ ಪಾಟೀಲ ಹಾಗೂ ಬಸವರಾಜ ರಾಯರೆಡ್ಡಿಯವರು. ಇವರೆಲ್ಲರಿಗೆ ಒತ್ತಾಸೆಯಾಗಿ ನಿಂತವರು ಹಿರಿಯ ರಾಜಕೀಯ ನಾಯಕರು, ಇಂದಿನ ವಿಧಾನ ಪರಿಷತ್ತಿನ ಸಭಾಪತಿಯಾದ ಬಸವರಾಜ ಹೊರಟ್ಟಿಯವರು.

ಲಿಂಗಾಯತ ಹೋರಾಟವು ಕೇವಲ ರಾಜಕೀಯ ಕಾರಣಗಳಿಗಾಗಿಯೇ ಹುಟ್ಟಿಕೊಂಡಿತು ಎಂದು ಮೇಲ್ನೋಟಕ್ಕೆ ಕಂಡರೂ ಅದರ ಹಿಂದೆ ದೊಡ್ಡ ಮಟ್ಟದ ವೈಚಾರಿಕ ಹಿನ್ನೆಲೆಯೂ ಇದೆ. ವಿಜ್ಞಾನ ಮತ್ತು ಮೌಢ್ಯಗಳ ನಡುವಿನ

In Public domain. Digitization Muthulakshmi Research Academy

ತಾಕಲಾಟ ವಿಜ್ಞಾನಿ ಗೆಲಿಲಿಯೋನಿಂದ ಆರಂಭವಾಗಿ ಇಂದಿನವರೆಗೂ ಮುಂದುವರಿದಿದೆ. ಮೌಢ್ಯವನ್ನು ವಿರೋಧಿಸಿದ ಮಹಾರಾಷ್ಟ್ರದ ವಿಚಾರವಾದಿಗಳಾದ ಡಾ.ಪನ್ಸಾರೆ, ದಾಬೋಲ್ಕರ್, ಕರ್ನಾಟಕದ ಸಂಶೋಧಕರಾದ ಡಾ.ಎಂ.ಎಂ. ಕಲಬುರ್ಗಿ, ಪತ್ರಕರ್ತರಾದ ಲಿಂಗಣ್ಣ ಸತ್ಯಂಪೇಟೆ ಮತ್ತು ಗೌರಿ ಲಂಕೇಶ್‌ರ ಹತ್ಯೆ ವಿಚಾರವಾದಿಗಳನ್ನು ಚಿಂತೆಗೀಡು ಮಾಡಿತ್ತು. ಸನಾತನವಾದಿಗಳ ಕೈ ಮೇಲಾಗಲಾರಂಭಿಸಿತ್ತು. ವಿಶ್ವದೆಲ್ಲೆಡೆ ಕಮ್ಯುನಿಸ್ಟ್ ಸಿದ್ಧಾಂತ ಮಾಯವಾಗ ಲಾರಂಭಿಸಿತ್ತು. ಬಲಪಂಥೀಯ ಸರಕಾರಗಳು ಸ್ಥಾಪನೆಯಾಗಲಾರಂಭಿಸಿದ್ದವು. ಭಾರತದಲ್ಲೂ ಬಲಪಂಥೀಯ ಸರಕಾರ ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿತ್ತು. 'ಒಂದು ದೇಶ ಒಬ್ಬ ನಾಯಕ'ನೆಂದು ಬಿಂಬಿಸಿಕೊಳ್ಳುತ್ತ ಪ್ರಜಾಪ್ರಭುತ್ವದ ಬೇರುಗಳನ್ನು ಅಲುಗಾಡಿಸುವ ಪ್ರಯತ್ನಕ್ಕೆ ಮೂಲಭೂತವಾದಿಗಳು ಕೈ ಹಾಕಿದ್ದರು. ಬಸವಣ್ಣನವರ ವೈಜ್ಞಾನಿಕ ಚಿಂತನೆಗಳನ್ನು ಮೂಲಭೂತವಾದಿಗಳು ಸಹಿಸುವುದಿಲ್ಲ. ಮನು ಸಿದ್ಧಾಂತ, ಪುರೋಹಿತಶಾಹಿತ್ವ, ದೇವಾಲಯ ಸಂಸ್ಕೃತಿ, ಬಹುದೇವೋಪಾಸನೆ, ಮೌಢ್ಯ ಬಿತ್ತನೆ ಇವರ ಆಂತರ್ಯದ ಆಶಯಗಳು. ರಾಮ ಜನ್ಮಭೂಮಿ ವಿಷಯ ಇತ್ಯರ್ಥಗೊಂಡು ವಿಶ್ವದ ಬಹುದೊಡ್ಡ ದೇವಾಲಯ ನಿರ್ಮಾಣವಾಗಲಿತ್ತು. ಆಸ್ತಿಕರು ದೇವರ ಸ್ವರೂಪವನ್ನೇ ಬದಲಾಯಿಸುವ ಪ್ರಯತ್ನಕ್ಕೆ ಮುಂದಾಗಿದ್ದರು. ದೇಶದೆಲ್ಲೆಡೆ ದೇವಾಲಯ ಸಂಸ್ಕೃತಿ ತಲೆ ಎತ್ತಲಾರಂಭಿಸಿತ್ತು. ಸಾಮಾನ್ಯರ ಮೂಲಭೂತ ಸಮಸ್ಯೆಗಳಿಗೆ ದೇವರನ್ನು ತೋರಿಸಲಾಗುತ್ತಿತ್ತು. ಜಂಗಮವು ಮರೆಯಾಗಿ ಸ್ಥಾವರವು ಅಭಿವೃದ್ಧಿ ಹೊಂದಲಾರಂಭಿಸಿತ್ತು. ಹಳ್ಳಿ ಹಳ್ಳಿಗಳಲ್ಲಿ ಶಾಲೆಗಳ ಬದಲಾಗಿ ದೇವಸ್ಥಾನಗಳನ್ನು ನಿರ್ಮಿಸಲು ಸರಕಾರವೇ ಧನಸಹಾಯ ಮಾಡತೊಡಗಿತ್ತು. ಮಠ ಮಾನ್ಯಗಳಿಗೆ ಯಡಿಯೂರಪ್ಪನವರ ನೇತೃತ್ವದ ಸರಕಾರ ಕೋಟಿ ಕೋಟಿ ಅನುದಾನವನ್ನು ನೀಡಿ ಲಿಂಗಾಯತಧರ್ಮದ ಕಾಯಕ ಸಮಾಜಗಳನ್ನು ವಿಘಟಿಸಿ, ಅವುಗಳನ್ನು ಹಿಂದೂಧರ್ಮದ ಜಾತಿಗಳನ್ನಾಗಿ ಬಿಂಬಿಸಲೆತ್ನಿಸಿ, ಜಾತಿಗೊಂದು ಮಠಗಳನ್ನು ನಿರ್ಮಿಸುವ ಕೆಲಸಗಳಿಗೆ ಪ್ರೋತ್ಸಾಹ ನೀಡಿತ್ತು. ಮೂಲಭೂತ ಬೇಡಿಕೆಗಳಾದ ಶಿಕ್ಷಣ, ಆರೋಗ್ಯ, ಉದ್ಯೋಗದ ಬೇಡಿಕೆಗಳನ್ನು ಕಡೆಗಣಿಸಿ, ಕೇವಲ ಚುನಾವಣೆಯಲ್ಲಿ ಜಯ ಗಳಿಸುವ ಕಾರಣಕ್ಕಾಗಿ ಜನರನ್ನು ಮರುಳುಗೊಳಿಸುವ ಯೋಜನೆಗಳನ್ನು (populist schemes) ಜಾರಿಗೊಳಿಸಲಾರಂಭಿಸಿತ್ತು. ಇವೆಲ್ಲವೂ ಪ್ರಜ್ಞಾವಂತ ನಾಗರಿಕರನ್ನು ಚಿಂತೆಗೀಡು ಮಾಡಿತ್ತು. ಹನ್ನೆರಡನೆಯ ಶತಮಾನದಲ್ಲೂ ಇಂತಹ ಕಾರಣದಿಂದಲ್ಲವೆ ಬಸವಣ್ಣನವರು ಮನೆ ತೊರೆದದ್ದು? ನಾಡಿನ ತುಂಬೆಲ್ಲ ಜನ ಜಾಗೃತ

In Public domain. Digitization Muthulakshmi Research Academy

ವಾಗಲಾರಂಭಿಸಿದ್ದರು. ಪ್ರಜ್ಞಾವಂತರು ಲೇಖನ, ಪುಸ್ತಕ, ವಿಚಾರಸಂಕಿರಣಗಳ ಮೂಲಕ ಜನರನ್ನು ಜಾಗೃತಗೊಳಿಸಲು ಪ್ರಯತ್ನಿಸುತ್ತಿದ್ದರು.

ಭಾರತದಲ್ಲಿ ದಾಖಲಾಗದ ಇತಿಹಾಸ ಸಾಕಷ್ಟಿದೆ. ಅದಕ್ಕೆ ಲಿಂಗಾಯತರ ಇತಿಹಾಸವೂ ಹೊರತಲ್ಲ. ಲಿಂಗಾಯತರು ಇತಿಹಾಸ ಸೃಷ್ಟಿಸಬಲ್ಲರು, ಸೃಷ್ಟಿಸಿದ ಇತಿಹಾಸಕ್ಕೆ ಅಕ್ಷರ ರೂಪ ನೀಡಿ ಅದನ್ನು ದಾಖಲಿಸಲಾರರು. ಇಂಗ್ಲಿಷ್ ಶಿಕ್ಷಣದ ಪ್ರಭಾವದಿಂದ ಲಿಂಗಾಯತರೂ ಓದು ಬರೆಹ ಕಲಿತರು. ನಾವು ಬ್ರಾಹ್ಮಣರಿಗಿಂತ ಕಡಿಮೆ ಇಲ್ಲವೆಂದು ಸಾಹಿತ್ಯಕ್ಷೇತ್ರದಲ್ಲಿ ವಿಜೃಂಭಿಸಲಾರಂಭಿಸಿದರು. ಇಪ್ಪತ್ತನೆಯ ಶತಮಾನದಲ್ಲಿ ಬಸವಣ್ಣನವರ ಮತ್ತು ಇನ್ನುಳಿದ ಶರಣರ ಬಗ್ಗೆ ಬೆಳಕು ಚೆಲ್ಲುವ ಸಾಹಿತ್ಯ ಹೊರಬಂದಿದೆ. ಆದರೆ ಇದನ್ನು ಇತರ ಧರ್ಮಗಳ ಸಾಹಿತ್ಯಕ್ಕೆ ಹೋಲಿಸಿದರೆ ನಮ್ಮ ಸಾಧನೆ ಅತಿ ಕಡಿಮೆ ಎಂದೇ ಹೇಳಬಹುದು, ಇನ್ನೂ ಮಾಡಬೇಕಾದ ಸಾಧನೆ ಸಾಕಷ್ಟಿದೆ.

ಲಿಂಗಾಯತ ಸಾಹಿತ್ಯಕ್ಕೆ ಡಾ.ಫ.ಗು.ಹಳಕಟ್ಟಿಯವರ ಕೊಡುಗೆ ಅಪಾರ. ಅವರ ಸರಳ ನಿರೂಪಣೆ, ಪಾರದರ್ಶಕ ಬರೆವಣಿಗೆ, ವಿಶಾಲ ಚಿಂತನೆ ಲಿಂಗಾಯತ ಸಾಹಿತ್ಯಕ್ಕೆ ಮಾದರಿ. ಅದಕ್ಕೊಂದು ಉದಾಹರಣೆ ಅವರ ಸಮಗ್ರ ಸಂಪುಟಗಳ ಹನ್ನೆರಡನೆಯ ಸಂಪುಟದಲ್ಲಿರುವ 'ಶ್ರೀಮದ್ವೀರಶೈವರ ನಾಲ್ಕನೆಯ ಮಹಾಸಭೆಯ ವರದಿಯನ್ನು ಸುಮಾರು ನಾಲ್ಕು ನೂರು ಪುಟಗಳ ಒಂದು ಪುಸ್ತಕವನ್ನು ಮೈಸೂರಿನ 'ಸ್ಟಾರ್' ಮುದ್ರಣಾಲಯದಲ್ಲಿ ೧೯೧೦ರಲ್ಲಿ ಮುದ್ರಿಸಿದ್ದರು. ಒಂದೊಂದು ಸಣ್ಣ ಸಣ್ಣ ವಿಷಯವನ್ನೂ ಸುಂದರವಾಗಿ ವಿವರಿಸಿದ್ದರು. ಅವರು ಈ ಪುಸ್ತಕದಲ್ಲಿ ಮೂರು ದಿನಗಳ ವರದಿಯನ್ನು ಬರೆಯುತ್ತ, ಮಹಾಸಭೆಗೆ ಐದು ರೂಪಾಯಿಗಳ ಕಾಣಿಕೆ ನೀಡಿದ ದಾಸೋಹಿಗಳ ವಿವರಗಳನ್ನೂ ದಾಖಲಿಸಿದ್ದಾರೆ. ಪುರವಣಿ ಎಂಟರಲ್ಲಿ ಜಮಾ ಖರ್ಚುಗಳ ವಿವರಣೆ ನೀಡಿದ್ದಾರೆ. ಖರ್ಚಿನ ವಿವರಗಳಲ್ಲಿ ಕಾಯಿಪಲ್ಲೆ, ಹಾಲು, ತುಪ್ಪ, ಗೋಧಿ, ಅಕ್ಕಿ, ತೊಗರಿಬ್ಯಾಳಿ, ಬಾಂಡಿಸಾಮಾನು ಬಾಡಿಗೆ, ಉರುವಲು ಕಟ್ಟಿಗೆ, ಅವುಗಳನ್ನು ಸಾಗಿಸಲು ನೀಡಿದ ಎತ್ತಿನಗಾಡಿ ಬಾಡಿಗೆ ಹಣ, ಅತಿಥಿಗಳನ್ನು ಕರೆತರಲು ಉಪಯೋಗಿಸಿದ ಟಾಂಗಾ ಬಾಡಿಗೆ– ಹೀಗೆ ಸಣ್ಣ ಸಣ್ಣ ವಿವರಗಳು ಅದರಲ್ಲಿವೆ. ಅಂದಿನ ದಿನಗಳಲ್ಲಿ ನಮ್ಮ ಹಿರಿಯರಲ್ಲಿದ್ದ ಪಾರದರ್ಶಕತೆಗೆ ಇದು ಸಾಕ್ಷಿಯಾಗಿದೆ. ಪುರವಣಿ ೯ರಲ್ಲಿ ಸಭೆಯಲ್ಲಿ ಭಾಗವಹಿಸಿದ ೧೦೩೯ ಮಹನೀಯರ ಹೆಸರು, ವಾಸಸ್ಥಳ, ತಾಲ್ಲೂಕು, ಜಿಲ್ಲೆ ಮತ್ತು ಉದ್ಯೋಗದ ವಿವರ ನೀಡಿದ್ದಾರೆ. ಸಭೆಯಲ್ಲಿ ಮಾತನಾಡಿದವರ ವಿವರ ಹಾಗೂ ಅವರ ನುಡಿಗಳನ್ನು ದಾಖಲಿಸಿದ್ದಾರೆ. ಅಚ್ಚುಮೊಳೆ ಜೋಡಿಸಿ ಸಾಹಿತ್ಯವನ್ನು

In Public domain. Digitization Muthulakshmi Research Academy

ಮುದ್ರಿಸುವ ದಿನಗಳಲ್ಲಿ ಅವರು ತೆಗೆದುಕೊಂಡಿರುವ ಪರಿಶ್ರಮ ಮುದ್ರಕನಾದ ನನಗೆ ಗೊತ್ತು. ಅಂತಹ ದಿನಗಳಲ್ಲಿ ಸಮಗ್ರವಾದ ವರದಿಯನ್ನು ಬರೆದು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಅವರ ಅದಮ್ಯ ಬಯಕೆ ನನಗೆ ಈ ಪುಸ್ತಕ ಬರೆಯಲು ಪ್ರೇರಣೆ ನೀಡಿದೆ.

ಜನಸಾಮಾನ್ಯರು ಸ್ಥಾಪನೆ ಮಾಡಿದ ಲಿಂಗಾಯತ ಧರ್ಮದ ಸಾಂವಿಧಾನಿಕ ಮಾನ್ಯತೆಗಾಗಿ ನಡೆದ ೨೦೧೭-೧೮ರ ಚಳುವಳಿಯನ್ನು ಹುಟ್ಟುಹಾಕಿದವರು ಜನಸಾಮಾನ್ಯರೆ. ಅಂದು ಜನಸಾಮಾನ್ಯರ ಒಂದುಗೂಡುವಿಕೆಗೆ ಮುಂದಾಗಿ ಲಿಂಗಾಯತ ಧರ್ಮ ಸ್ಥಾಪನೆ ಮಾಡಿದ ಕಲ್ಯಾಣ ರಾಜ್ಯದ ಮುಖ್ಯ ಅಮಾತ್ಯರಾಗಿದ್ದವರು ಬಸವಣ್ಣನವರು. ಇಂದು ಈ ಧರ್ಮಕ್ಕೆ ಮಾನ್ಯತೆ ನೀಡಿದ್ದವರು ಕರ್ನಾಟಕ ರಾಜ್ಯದ ಮುಖ್ಯ ಅಮಾತ್ಯರಾದ ಸಿದ್ದರಾಮಯ್ಯ ನವರು. ಸಾಮಾನ್ಯ ಜನರು ಕಟ್ಟಿದ ಚಳುವಳಿಯ ದಿನಗಳನ್ನು ತಮ್ಮೆದುರು ಮತ್ತೊಮ್ಮೆ ತೆರೆದಿಡುವ ಸಾಮಾನ್ಯನ ಕೃತಿಯಿದು.

ಜನಸಾಮಾನ್ಯರ ಆಶೋತ್ತರಗಳನ್ನು ಕಾಪಾಡಲು ಒಂದು ಸಂಸ್ಥೆ ಬೇಕಾಗಿತ್ತು. ಅದು ಲಿಂಗಾಯತ ತತ್ವ ಸಿದ್ಧಾಂತಗಳನ್ನು ಅರಿತು 'ಇವನಾರವ ಇವನಾರವ' ಎನ್ನದೆ ಎಲ್ಲರನ್ನೂ ಇವ ನಮ್ಮವ ಎನ್ನುವ ಸಂಸ್ಥೆಯಾಗಬೇಕು. ಈ ಸಂಸ್ಥೆಯು ರಾಷ್ಟ್ರಕವಿ ಕುವೆಂಪು ಹೇಳಿದಂತೆ "ಇಲ್ಲಿ ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ; ಯಾವುದೂ ಯಃಕಶ್ಚಿತವಲ್ಲ! ಇಲ್ಲಿ ಯಾವುದಕ್ಕೂ ಮೊದಲಿಲ್ಲ; ಯಾವುದೂ ತುದಿಯಿಲ್ಲ; ಯಾವುದೂ ಎಲ್ಲಿಯೂ ನಿಲ್ಲುವುದು ಇಲ್ಲ; ಕೊನೆ ಮುಟ್ಟುವುದೂ ಇಲ್ಲ! ಇಲ್ಲಿ ಅವಸರವೂ ಸಾವಧಾನದ ಬೆನ್ನೇರಿದೆ! ಇಲ್ಲಿ ಎಲ್ಲಕ್ಕೂ ಇದೆ ಅರ್ಥ; ಯಾವುದೂ ಅಲ್ಲ ವ್ಯರ್ಥ; ನೀರೆಲ್ಲವು ತೀರ್ಥ!" ಇಂತಹ ಸಂಸ್ಥೆಯಲ್ಲಿ ಮುಖ್ಯರು, ಅಮುಖ್ಯರು ಇರಬಾರದು ಎಂಬ ಆಶಯದಲ್ಲಿ ಹುಟ್ಟಿಕೊಂಡ, ನಿಜಲಿಂಗಾಯತರ ಒಂದು ಸಂಸ್ಥೆ 'ಜಾಗತಿಕ ಲಿಂಗಾಯತ ಮಹಾಸಭೆ'. ಇಂತಹ ಬಯಕೆಯನ್ನು ಸಾಧ್ಯವಾಗಿಸಿದವರು ನಾಡಿನ ಜನತೆ. ಅವರಿಗೆ ಮುಖವಾಣಿಯಾಗಿದ್ದವರು ಹಿರಿಯ ರಾಜಕೀಯ ನಾಯಕರಾದ ಮತ್ತು ಜಾಗತಿಕ ಲಿಂಗಾಯತ ಮಹಾಸಭೆಯ ಪ್ರಥಮ ಅಧ್ಯಕ್ಷರಾಗಿರುವ ಬಸವರಾಜ ಹೊರಟ್ಟಿ ಮತ್ತು ಅವರ ಸಂಗಡಿಗರು. ಇದನ್ನು ಸ್ಥಾಪಿಸಿದವರು ಏಳು ಜನರು ಸಚಿವರಾದ ಎಂ.ಬಿ.ಪಾಟೀಲ, ಮಾಜಿ ಸಚಿವರಾದ ಎ.ಬಿ.ಪಾಟೀಲ, ಡಾ.ಶಿವಾನಂದ ಜಾಮದಾರ, ಜಿ.ಬಿ.ಪಾಟೀಲ, ಡಾ.ಸಿ.ಜಯಣ್ಣ ಮತ್ತು ಶ್ರೀಮತಿ ಕೆ.ಆರ್.ಮಂಗಳಾ. ಇವರೊಂದಿಗೆ ಪದನಿಮಿತ್ತವಾಗಿದ್ದವರು ಎ.ಪಿ.ಬಸವರಾಜ ಅವರು.

In Public domain. Digitization Muthulakshmi Research Academy

ಅಂದು ನಡೆದ ವಿದ್ಯಮಾನಗಳನ್ನು ಎಳೆ ಎಳೆಯಾಗಿ ಬಿಡಿಸಿ ಸಮಾಜದ ಎದುರಿಗಿಡುವುದು ಚಳುವಳಿಯ ಪ್ರಮುಖ ಕಾರ್ಯಕರ್ತನಾದ ನನ್ನ ಕರ್ತವ್ಯವೂ ಹೌದು. ಜೆ.ಎಲ್.ಎಂ. ಸಂಸ್ಥಾಪಕನಾಗಿ ಇಂದಿಗೂ ನಾನು ಕಾರ್ಯ ನಿರ್ವಹಿಸುತ್ತಿದ್ದೇನೆ. ಹೋರಾಟದ ಒಂಬತ್ತು ತಿಂಗಳ ಚರಿತ್ರೆಯನ್ನು ಜನಸಾಮಾನ್ಯರಿಗೆ ತಿಳಿಸಲು ನಾನು ಬಯಸಿದ್ದೆ. ಅನೇಕ ಮಹನೀಯರು ನಿಸ್ವಾರ್ಥದಿಂದ ಈ ಚಳುವಳಿಯನ್ನು ಕಟ್ಟಿದ್ದಾರೆ. ಇವರ ಬಗ್ಗೆ ನಾಲ್ಕು ಮಾತುಗಳನ್ನು ದಾಖಲಿಸಬೇಕೆಂದು ನಾನು ಬಯಸಿದ್ದೆ. ಅದನ್ನು ದಾಖಲಿಸಬೇಕು ಎಂದು ಸಂಬಂಧಪಟ್ಟವರ ಹತ್ತಿರ ಹೇಳಿದ್ದೆ. ಕೇಳಿಸಿಕೊಳ್ಳಬೇಕಾದವರು ಕೇಳಿಸಿಕೊಳ್ಳಲಿಲ್ಲ. ಕಾರಣಾಂತರಗಳಿಂದ ಈ ಕೆಲಸ ಮಹಾಸಭೆಯಿಂದ ಕೈಗೂಡಲಿಲ್ಲ. ಪ್ರಯತ್ನ ಕೈಗೂಡದಿರಲು ಕಿವಿ ಕಚ್ಚುವ ಲಿಂಗಾಯತರನ್ನು ಹೆಸರಿಸಲಾರೆ. ನನ್ನ ಈ ಪ್ರತಿಪಾದನೆ ತಪ್ಪೆಂದು ವಾದಿಸಿದವರೂ ಇದ್ದಾರೆ. ನಿಸ್ವಾರ್ಥ ದುಡಿಮೆಗಾರರಿಗೆ ಸಲ್ಲಬೇಕಾದ ಸ್ಥಾನ ಸಿಗಲಿ ಎಂದು ನಾನು ಬಯಸಿದ್ದು ತಪ್ಪಾದರೆ, ಇಂತಹ ತಪ್ಪುಗಳನ್ನು ನಾನು ಪದೇ ಪದೇ ಮಾಡುವೆ. ನಾನು ಈ ಪ್ರಯತ್ನದಲ್ಲಿರುವುದನ್ನು ಕೇಳಿ 'ನೀವು ತುಂಬಾ ಭಾವುಕರು, ಇತಿಹಾಸ ಮತ್ತು ಅದನ್ನು ಸೃಷ್ಟಿಸಿದವರನ್ನು ಭಾವುಕತೆಯಿಂದ ನೋಡಲಾಗದು. ವಸ್ತುಸ್ಥಿತಿಯನ್ನು ತಿಳಿಸುವುದಷ್ಟೇ ನಿಮ್ಮ ಕೆಲಸವಾಗಬೇಕು' ಎಂದಿದ್ದರು ಹಿರಿಯ ಪತ್ರಕರ್ತ ಗೆಳೆಯ ಮತ್ತು ಟೈಮ್ಸ್ ಆಫ್ ಇಂಡಿಯಾದ ಹಿರಿಯ ಸಹಾಯಕ ಸಂಪಾದಕ ಶಿವಶಂಕರ ಅವರು. ಭಾವನಾತ್ಮಕ ಜೀವಿಯಾದ ನನ್ನ ಬರವಣಿಗೆಯೂ ಸಹ ಭಾವನಾತ್ಮಕವಾಗಿರಲು ಸಹಜ. ಅಲ್ಲದೆ ಓದುಗರಿಗೆ ಭಾವನಾತ್ಮಕ ಸಾಹಿತ್ಯ ಓದನ್ನು ಪ್ರೇರೇಪಿಸುತ್ತದೆ ಎಂಬ ನನ್ನ ವೈಯಕ್ತಿಕ ಅಭಿಪ್ರಾಯವನ್ನು ಇಂಗ್ಲಿಷ್ ವಿದ್ವಾಂಸರು ಸಮರ್ಥಿಸುತ್ತಾರೆ. Study of History ಎಂಬ ಹನ್ನೆರಡು ಸಂಪುಟಗಳ ಬೃಹದ್ಗ್ರಂಥ ರಚಿಸಿದ Arnold J. Toynbee ಅವರು ಇತಿಹಾಸ ಪರಿಚಯಿಸುವ ಕಲೆಯ ಬಗ್ಗೆ ಒಂದು ಸುಂದರ ವಿಶ್ಲೇಷಣೆ ಮಾಡುತ್ತಾರೆ "ಮಾನವ ಜೀವನದ ಜಾಗತಿಕ ವ್ಯಾಪಾರಗಳನ್ನು ಬುದ್ಧಿಶಕ್ತಿಯಿಂದ ಗ್ರಹಿಸಿ, ಪರಿಶೀಲಿಸಿ, ಅವುಗಳ ಬಗೆಗೆ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದರಲ್ಲಿ ಮೂರು ವಿಶಿಷ್ಟ ವಿಧಾನಗಳಿರುತ್ತವೆ. ಸತ್ಯ ಸಂಗತಿಗಳನ್ನು ತಿಳಿದು ಬರೆದಿಡುವುದು ಮೊದಲ ವಿಧಾನ. ಈ ರೀತಿ ಬರೆದ ಸತ್ಯ ಸಂಗತಿಗಳನ್ನು ತುಲನಾತ್ಮಕ ದೃಷ್ಟಿಯಿಂದ ವಿವೇಚಿಸಿ ಅವುಗಳಿಗೆ ಅನ್ವಯಿಸುವ ಸಾಮಾನ್ಯ ನಿಯಮಗಳನ್ನು ಕಂಡು ಹಿಡಿಯುವುದು ಎರಡನೆಯ ವಿಧಾನ. ತಿಳಿದು ಬಂದ ಸತ್ಯ ಸಂಗತಿಗಳನ್ನು ಭಾವನಾತ್ಮಕವಾಗಿ (ಕಲಾತ್ಮಕವಾಗಿ)

In Public domain. Digitization Muthulakshmi Research Academy

ಪುನರ್‌ರಚಿಸುವುದು ಮೂರನೆಯ ವಿಧಾನ" ಎನ್ನುತ್ತಾರೆ Toynbee. ನಾನು ಈ ಪುಸ್ತಕದಲ್ಲಿ ಹೇಳಲು ಇಚ್ಛಿಸುವುದು ಇತಿಹಾಸದ ಘಟನೆಗಳನ್ನು. ಆದರೆ ನಿಮ್ಮ ಭಾಷೆ ಭಾವನಾತ್ಮಕವಾಗಿದೆ, ನೀವು ಹೇಗೆ ಇತಿಹಾಸ ಬರೆಯಬಲ್ಲಿರಿ ಎಂಬುವವರಿಗೆ ನನ್ನ ಉತ್ತರ ಬಹಳ ಸರಳ. ಬರಹಗಾರರಿಗೆ ಓದುಗನೇ ಜೀವಾಳ. ಅವರಿಗೆ ಓದಿಸಿಕೊಂಡು ಹೋಗುವ ಭಾಷೆಯನ್ನು ಉಪಯೋಗಿಸಿ ವಿಷಯ ಮುಟ್ಟಿಸಬೇಕಾದ್ದು ಬರಹಗಾರರ ಮೊದಲ ಕರ್ತವ್ಯ. ನನ್ನ ಈ ಮಾತನ್ನು ವಿದೇಶಿಗರು ಈ ಮೊದಲೇ ಹೇಳಿದ್ದಾರೆ. "ಶುಷ್ಕ ನಿರೂಪಣೆಯ ಫಲವಾಗಿ ಜನರು ನೀರಸವೆಂದು ಭಾವಿಸಿದ್ದ ಇಂಗ್ಲೆಂಡ್ ದೇಶದ ಇತಿಹಾಸ ಸ್ಕಾಟ್‌ನ ಕಾದಂಬರಿಗಳಿಂದ ಜನಪ್ರಿಯವಾಯಿತು". "ಅಲೆಗ್ಸಾಂಡರ್ ಡೂಮೂನ ಕಾದಂಬರಿಗಳು ಫ್ರಾನ್ಸ್ ದೇಶದ ಇತಿಹಾಸವನ್ನು ರಸಮಯವಾಗಿ ಮಾಡಿದವು" ಎನ್ನುತ್ತಾರೆ ಇಂಗ್ಲಿಷ್ ಮತ್ತು ಫ್ರೆಂಚ್ ವಿಮರ್ಶಕರು.

ಈ ಪುಸ್ತಕವನ್ನು ಬರೆಯಬೇಕೆಂಬ ಕನಸನ್ನು ನಾನು ಚಳುವಳಿಯ ದಿನಗಳಲ್ಲಿ ಕಂಡಿರಲಿಲ್ಲ. ಅದನ್ನು ಸಾಕಾರಗೊಳಿಸುವ ಇಚ್ಛೆ ನನ್ನದಾಗಿದ್ದರೆ ಪ್ರತಿಯೊಂದು ಘಟನೆಗಳನ್ನು ಗುರುತು ಹಾಕಿಕೊಳ್ಳಬಹುದಾಗಿತ್ತು. ಆದರೆ ನಾನು ಅದನ್ನು ಮಾಡಿರಲಿಲ್ಲ. ಹೋರಾಟದ ದಿನಗಳು ಕಣ್ಮರೆಯಾಗಿ ಆರು ವರ್ಷಗಳು ಕಳೆದಿವೆ. ಅಂದಿನ ದಿನಗಳ ನೆನಪುಗಳು ಮಾತ್ರ ನನ್ನೊಂದಿಗಿವೆ. ನನ್ನ ನೆನಪಿನಾಳದಿಂದ ಮತ್ತು ಅಂದಿನ ಮೀಡಿಯಾ ವರದಿಗಳ ಆಧಾರದಿಂದ ಅಂದು ನಡೆದ ಚಳುವಳಿಯ ದಿನಗಳನ್ನು ನಿಮ್ಮೆದುರು ಇಡುತ್ತಿದ್ದೇನೆ. ನಿಮ್ಮೆದುರಿಗಿರುವುದು ನನ್ನ ನೆನಪುಗಳು ಮತ್ತು ಅದನ್ನು ಸಾಕ್ಷೀಕರಿಸುವ ದಾಖಲೆಗಳು ಮಾತ್ರ. ದಾಖಲೆಗಳಿಲ್ಲದ ನೆನಪುಗಳನ್ನು ಇಲ್ಲಿ ಬರೆದಿಲ್ಲ. ಈ ದಾಖಲೆಗಳಿಗಾಗಿ ನಾನು ಬಲವಾಗಿ ಆಧರಿಸಿದ್ದು ವೃತ್ತಪತ್ರಿಕೆಗಳನ್ನು. ಅವುಗಳಲ್ಲಿಯೂ ಹೆಚ್ಚು ವಿಶ್ವಾಸಾರ್ಹವಾದ ಪತ್ರಿಕೆಯೆಂದು ಹೆಸರು ಪಡೆದ 'ಪ್ರಜಾವಾಣಿ ಪತ್ರಿಕೆ'ಯನ್ನು. ಇದರ ಜೊತೆಗೆ ದಾಖಲಾತಿಗಾಗಿ ನಂಬಿದ್ದು 'ವಿಜಯ ಕರ್ನಾಟಕ' 'ಸಂಯುಕ್ತ ಕರ್ನಾಟಕ' 'ದಿ ಹಿಂದೂ' ಮತ್ತು 'ಟೈಮ್ಸ್ ಆಫ್ ಇಂಡಿಯಾ' ಮತ್ತಿತರ ಪತ್ರಿಕೆಗಳನ್ನು.

ಆರು ವರ್ಷಗಳ ನಂತರ ಅಂದಿನ ದಿನಗಳನ್ನು ನೆನಪಿಸಿಕೊಂಡು ಈ ಪುಸ್ತಕ ಬರೆದಿರುವೆ. ಇಲ್ಲಿ ಅನೇಕ ಘಟನೆಗಳು ಮತ್ತು ಅವುಗಳಿಗೆ ಕಾರಣೀಕರ್ತರಾದ ಹೆಸರುಗಳನ್ನಾಗಲಿ, ವಿವರಗಳನ್ನಾಗಲಿ ಬರೆಯದೆ ಉಳಿದಿರಬಹುದು. ಅದಕ್ಕೆ ನನ್ನ ಮರೆವೇ ಮುಖ್ಯ ಕಾರಣ. ನಾನು ಯಾವುದೇ ವಾಸನೆಯಿಲ್ಲದೆ ಕಂಡಿದ್ದನ್ನು, ಕೇಳಿದ್ದನ್ನು, ಓದಿದ್ದನ್ನು ಮಾತ್ರ ಚಿತ್ರಿಸಿದ್ದೇನೆ. ಇಲ್ಲಿ ಯಾರನ್ನೂ ವೈಭವೀಕರಿಸುವ

In Public domain. Digitization Muthulakshmi Research Academy

ಅಥವಾ ತೆಗಳುವ ಬಯಕೆ ನನ್ನದಲ್ಲ. ಘಟನೆಯ ಸತ್ಯಾಸತ್ಯತೆಯನ್ನು ಮಾತ್ರ ಚರ್ಚಿಸಿದ್ದೇನೆ.

'ಭಾಷೆ' ಸಂಹವನದ ಒಂದು ಮಾಧ್ಯಮವೆಂದು ನಾನು ತಿಳಿದವನು. ಮಲೇಷಿಯಾ ದೇಶಕ್ಕೆ ಹೋಗಿದ್ದ ಸಂದರ್ಭದಲ್ಲಿ ಅಲ್ಲಿರುವ ಬೋರ್ಡ್‌ಗಳನ್ನು ನೋಡಿ ನಾನು ನಕ್ಕಿದ್ದೆ. ಕಾರಣ ಅವುಗಳಲ್ಲಿದ್ದ ತಪ್ಪುಗಳು. ಆದರೆ ಅವು ತಪ್ಪುಗಳಾಗಿರಲಿಲ್ಲ. ಅದು ಅವರ ಭಾಷೆಯಾಗಿತ್ತು. ತದನಂತರ ತಿಳಿದುಬಂತು ಮಲೇಷಿಯನ್ನರಿಗೆ 'ಮಲಯ' ಲಿಪಿ ಇಲ್ಲವೆಂದೂ ಅವರು ಇಂಗ್ಲಿಷ್ ಲಿಪಿಯನ್ನು ಬಳಸುತ್ತಾರೆಂದು. ನಂತರ ವಿಷಾದಗೊಂಡೆ. ಅದರಂತೆ ನೀವು ಕೂಡ ಈ ಬರವಣಿಗೆಯನ್ನು ಸಹ 'ವ್ಯಾಕರಣವಿಲ್ಲದ ಕನ್ನಡ ಬರವಣಿಗೆ'ಯೆಂದು ನನ್ನನ್ನು ಮೂದಲಿಸದೆ ಇದು ಲೇಖಕನ ಹೃದಯ ಭಾಷೆಯೆಂದು ಮನ್ನಿಸಿಬಿಡಿ. ಒಂದು ಪುಸ್ತಕ ಬರೆದ ಹತ್ತು ವರ್ಷಗಳ ನಂತರ ಮುದ್ರಿಸು ಎನ್ನುತ್ತಾರೆ ಪಾಶ್ಚಿಮಾತ್ಯರು. ಅದು ನಿಜವೂ ಹೌದು. ಲೇಖಕ ತಾನು ಬರೆದುದನ್ನು ಮತ್ತೊಮ್ಮೆ ತಾನೇ ಓದಿದಾಗ 'ಹೀಗೆ ಬರೆಯಬೇಕಾಗಿತ್ತು' ಎಂಬುದು ಎಲ್ಲ ಲೇಖಕರ ಇಂಗಿತವಾಗಿರುತ್ತದೆ. ಬರೆದಿದ್ದನ್ನು ಬದಲಾಯಿಸುತ್ತಲೇ ಹೋದರೆ ಪುಸ್ತಕ ಮುದ್ರಣಗೊಳ್ಳುವುದೇ ಇಲ್ಲ. ತಪ್ಪು ಒಪ್ಪುಗಳಿಂದ ಹೊರತಾದ ಒಂದು ಪುಸ್ತಕ ತರಬೇಕೆಂಬುದು ಲೇಖಕನ ಬಯಕೆ ಇದ್ದರೂ ಆ ಬಯಕೆ ಕೈಗೂಡಿದೆಯೋ ಇಲ್ಲವೋ ನೀವೇ ನಿರ್ಧರಿಸಿ.

ಹಡೆದವ್ವ ಹಡದಪ್ಪ ಬಯಲಲ್ಲಿ ಬಯಲಾಗಿದ್ದಾರೆ. ಆರನೇ ವರ್ಷದಲ್ಲಿ ಬಿಜಾಪುರ ಸಾಹಿತ್ಯ ಸಮ್ಮೇಳನಕ್ಕೆ ಕಳಿಸಿದ್ದ ನನ್ನಪ್ಪ ಇಂದು ನನ್ನೊಂದಿಗಿದ್ದಿದ್ದರೆ? ಮಡದಿ ಇಂದುಮತಿಯನ್ನು ನೆನೆಯದೆ ಇರಲಾರೆ. ತಾಯಿಯ ಹೊಟ್ಟೆಯಲ್ಲಿ ಮೊಳಕೆಯೊಡೆದು ಹೊರಬರಲು ಕಾಯುತ್ತಿರುವ ಅನಿವಾಸಿ ಮೊಮ್ಮಗಳನ್ನು, ಅವಳನ್ನು ನೋಡಲು ಕಾತರದಿಂದ ಎದುರು ನೋಡುತ್ತಿರುವ ಇನ್ನಿಬ್ಬರು ಮೊಮ್ಮಕ್ಕಳಾದ ಆದಿತ್ಯ ಮತ್ತು ಶ್ರೀಯಶ್ಯನನ್ನು ನೆನೆಯದಿರಲು ಹೇಗೆ ಸಾಧ್ಯ. ಅಣ್ಣ-ತಮ್ಮಂದಿರು, ಅಕ್ಕ-ತಂಗಿರಲ್ಲದೆ ನಮ್ಮ ಮನೆತನದ ಕುಡಿಗಳನ್ನು ನೆನಪಿಸಿಕೊಳ್ಳದೆ ಇರಲಾರೆ.

ಕೃತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಪೂಜ್ಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ, ಸಾಣೆಹಳ್ಳಿ ಮಠ ಮತ್ತು ಗದುಗಿನ ತೋಂಟದಾರ್ಯ ಜಗದ್ಗುರು ಶ್ರೀ ಸಿದ್ಧರಾಮ ಶ್ರೀಗಳಿಗೂ ಶಿ.ಸಾ ನಮಸ್ಕಾರಗಳು. ಕೃತಿಗೆ ಬೆನ್ನುಡಿ ಬರೆದು ಹಾರೈಸಿದ ಹಿರಿಯ ನಾಯಕರು ಮತ್ತು ನಮ್ಮ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಸವರಾಜ ಹೊರಟ್ಟಿವರಿಗೂ

In Public domain. Digitization Muthulakshmi Research Academy

ಹುತ್ಪೂರ್ವಕ ವಂದನೆಗಳು ಸಲ್ಲುತ್ತವೆ. ಕೃತಿಯ ಕುರಿತು ನಾಲ್ಕು ನುಡಿ ಬರೆದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಪುರುಷೋತ್ತಮ ಬಿಳಿಮಲೆ ಅವರಿಗೆ ಕೃತಜ್ಞತೆಗಳು. ಕೃತಿಯನ್ನು ಪರಿಷ್ಕರಿಸಿದ ಹಿರಿಯ ಪತ್ರಕರ್ತ ಡಿ. ಉಮಾಪತಿ, ಯತಿರಾಜ್ ಬ್ಯಾಲಹಳ್ಳಿ, ಮಗಳಂತಿರುವ ಶ್ರೀಮತಿ ಕೆ.ಆರ್. ಮಂಗಳಾ, ಶ್ರೀಮತಿ ಡಾ. ಸಾವಿತ್ರಿದೇವಿ ಜಿ.ಜಿ, ಸಮಾಜ ಪರಿವರ್ತಕ ವಿವೇಕಾನಂದ, ಹೀಗೆ ಈ ಕೃತಿ ರಚಿಸುವ ಸಂದರ್ಭದಲ್ಲಿ ಅನೇಕ ಸ್ನೇಹಿತರ ಸಹಾಯವನ್ನು ಸ್ಮರಿಸದೆ ಇರಲಾರೆ. ಮೇಲಾಗಿ ಪುಸ್ತಕ ಪ್ರಕಟಿಸಲು ಮುಂದಾದ 'ಆಕೃತಿ ಪುಸ್ತಕ'ದ ಸ್ನೇಹಿತ ಗುರುಪ್ರಸಾದ್ ಡಿ.ಎನ್ ಅವರಿಗೂ ಪ್ರಣಾಮಗಳು. ಬೇರೆಯವರ ಪುಸ್ತಕಗಳ ಅಂದಚಂದಗಳನ್ನು ಜೀವನಪೂರ್ತಿ ಗಮನಿಸಿದ್ದ ನನಗೆ ನನ್ನದೆ ಪುಸ್ತಕವನ್ನು ಸುಂದರಗೊಳಿಸಿದ ಶ್ರೀಮತಿ ಜಮುನ, ಶ್ರೀ ಬಿ. ಸುಜ್ಞಾನಮೂರ್ತಿಯವರಿಗೆ ಮತ್ತು ಅದನ್ನು ಅಂದವಾಗಿ ಮುದ್ರಿಸಿದ 'ಕಾಮಧೇನು ಪ್ರಿಂಟ್ ಎನ್ ಪ್ಯಾಕ್'ನವರಿಗೆ ನಾನು ಆಭಾರಿ.

ಕನ್ನಡ ಬರೆಯಲು ಬರದ ದಿನಗಳಲ್ಲಿ, ನನ್ನ ಬರಹಗಳನ್ನು ಮೆಚ್ಚಿ ಹಾರೈಸಿದ್ದ ಫೇಸ್ಬುಕ್ ಓದುಗರಿಗೆ ನನ್ನೀ ಪ್ರಥಮ ಕೃತಿಯನ್ನು ಸಮರ್ಪಿಸುತ್ತಿರುವೆ. ನಿಮ್ಮೆಲ್ಲರ ಸಹಕಾರ, ಹಾರೈಕೆಗಳು ನನ್ನ ಬೆನ್ನಿಗಿದ್ದಲ್ಲಿ ಇನ್ನಷ್ಟು ಕೃತಿಗಳು ಹೊರಬಂದಾವು.

ಶರಣು ಶರಣಾರ್ಥಿ

ಜಿ. ಬಿ. ಪಾಟೀಲ

In Public domain. Digitization Muthulakshmi Research Academy

ಪರಿವಿಡಿ

ಶ್ರೀವಾಣಿ / v

ಸಮಕಾಲೀನ ಚರಿತ್ರೆ / xiii

ಇತಿಹಾಸ ದಾಖಲಿಸುವ ಕಿರುಯತ್ನ../ xix

೧. ಚಳುವಳಿಯ ಹಿನ್ನೆಲೆ / ೧

೨. ಅಂತರಂಗದ ಅನಾವರಣ / ೪೬

೩. ಬೀದಿಗಿಳಿದ ಲಿಂಗಾಯತ ಚಳುವಳಿ / ೭೭

೪. ಗಟ್ಟಿಗೊಂಡ ಲಿಂಗಾಯತ ಆಕ್ರೋಶ / ೧೦೨

೫. ಒಳಬೇಗುದಿ / ೧೩೨

೬. ತಾರ್ಕಿಕ ಅಂತ್ಯದತ್ತ ತಿರುಗಿದ ಚಳುವಳಿ ಹೆಜ್ಜೆಗಳು / ೧೫೭

೭. ದಕ್ಷಿಣ ಕರ್ನಾಟಕದ ಎರಡು ಪ್ರಮುಖ ಲಿಂಗಾಯತ ಮಠಗಳು / ೧೭೨

೮. ಹುಬ್ಬಳ್ಳಿ ರ್‍ಯಾಲಿ / ೧೮೮

೯. ಲಿಂಗಾಯತರಗೆ ಬೇಕಾಗಿತ್ತು ಪ್ರಾತಿನಿಧಿಕ ಸಂಸ್ಥೆ / ೨೧೦

೧೦. ರಾಜಕೀಯ ಪಕ್ಷಗಳ ನಾಟಕದೊಂದಿಗೆ ಮುಂದುವರಿದ ಚಳುವಳಿ /೨೩೦

೧೧. ಮೆತ್ತಗಾದ ಸರ್ಕಾರ / ೨೫೧

೧೨. ತಜ್ಞರ ಸಮಿತಿ ಸುತ್ತಮುತ್ತ / ೨೯೮

೧೩. ತಲ್ಲಣದ ಕ್ಷಣಗಳು / ೩೨೬

೧೪. ಚುನಾವಣಾ ಕಾವಲಿಯಲ್ಲಿ ಲಿಂಗಾಯತ ಧರ್ಮ / ೩೪೪

೧೫. ಲಿಂಗಾಯತ ಚಳುವಳಿಯು ರಾಜಕೀಯ ಚಳುವಳಿಯಾಗಿ ಕೊನೆಗೊಂಡಿತೆ? / ೩೫೫

ಅನುಬಂಧಗಳು

೧. ವೀರಶೈವರು / ೩೬೩

೨. ಲಿಂಗಾಯತವು ಜಾತಿರಹಿತವೆ? / ೩೮೮

೩. ಗ್ರಂಥಋಣ / ೪೪೦

In Public domain. Digitization Muthulakshmi Research Academy

In Public domain. Digitization Muthulakshmi Research Academy

ಅಧ್ಯಾಯ ಒಂದು

ಚಳುವಳಿಯ ಹಿನ್ನೆಲೆ-ವೈಚಾರಿಕ

ಲಿಂಗಾಯತ ಧರ್ಮ ಜಾತಿರಹಿತ, ಜಾತಿವಿರೋಧಿ ಧರ್ಮ ಎಂದು ಲಿಂಗಾಯತ ಸಿದ್ಧಾಂತ ಹೇಳಿದರೂ ಅದು ಆದರ್ಶವೊಂದರ ಅತಿಶಯೋಕ್ತಿಯೇ ಹೊರತು ವಾಸ್ತವವಲ್ಲ. ಈ ಸಂದಿಗ್ಧತೆಯನ್ನು ವಿದ್ವಾಂಸರು ಚರ್ಚಿಸುತ್ತಲೇ ಇದ್ದಾರೆ. ಅದು ನಿರಂತರವಾಗಿ ಹನ್ನೆರಡೆಯನೆಯ ಶತಮಾನದಿಂದ ನಡೆಯುತ್ತಲೇ ಇದೆ. 'ಬೆಂಕಿ ಇಲ್ಲದೆ ಹೊಗೆ ಕಾಣದು' ಎಂದು ಸತ್ಯಾರ್ಥಿಗಳು ಚಡಪಡಿಸುತ್ತಲೇ ಇದ್ದಾರೆ. ಲಿಂಗಾಯತ ಧರ್ಮ ಸ್ಥಾವರ ಧರ್ಮವಲ್ಲ, ಅದು ಜಂಗಮ(ಚಲಿಸುವ) ಧರ್ಮ. ಸಿದ್ಧಾಂತಗಳು ಸ್ಥಾವರವಾಗಿ ಜಡವಾದರೆ ಅವು ನಶಿಸಿ ಕಣ್ಮರೆಯಾಗುವವು. ಚಲಿಸುವುದಕ್ಕೆ ಮಾತ್ರ ಜೀವಂತಿಕೆ ಇರುತ್ತದೆ ಮತ್ತು ಗಂಭೀರತೆಯಿಂದ ಕೂಡಿರುತ್ತದೆ. ಚಲಿಸುವ ಧರ್ಮವಾದ ಲಿಂಗಾಯತ ಧರ್ಮ ಪರ-ವಿರೋಧಗಳನ್ನು ಸ್ವಾಗತಿಸುತ್ತದೆ. ಅದನ್ನು ಈ ಹಿಂದೆ ಹನ್ನೆರಡನೆಯ ಶತಮಾನದಲ್ಲೂ ಮಾಡಿದೆ, ಇಂದೂ ಮಾಡುತ್ತಲಿದೆ. ಲಿಂಗಾಯತದ ಸಿದ್ಧಾಂತವಾಗಲಿ, ಅದರ ಜೀವಾಳ ವಚನಗಳಾಗಲಿ ಜನಮಾನಸಕ್ಕೆ ನಿತ್ಯನೂತನ. ಲಿಂಗಾಯತ ಹೋರಾಟವು ಪ್ರಾರಂಭವಾಗುವ ಪೂರ್ವದಲ್ಲಿ ಇಂತಹ ವಾತಾವರಣ ಸೃಷ್ಟಿಯಾಗಿತ್ತು. ಚಿಂತನ ಕುಲುಮೆಯಲ್ಲಿ ಕಿಡಿಗಳು ಸಿಡಿಯಲಾರಂಭಿಸಿದ್ದವು. ಮತ್ತೊಮ್ಮೆ ಅನುಭಾವದ ಅನುಭವ ಮಂಟಪಕ್ಕೆ ಸ್ಥಳ ನೀಡಿತ್ತು ಕನ್ನಡಿಗರ ವಿಶ್ವಾಸಾರ್ಹ ಪತ್ರಿಕೆ ಪ್ರಜಾವಾಣಿ. 'ವಚನ ಸಾಹಿತ್ಯ ಮತ್ತು ಜಾತಿವಿರೋಧಿ' ಎಂಬ ಎಚ್. ಎಸ್. ಶಿವಪ್ರಕಾಶ್ ಅವರದೊಂದು ಲೇಖನ ಪ್ರಜಾವಾಣಿ ಸಂಪಾದಕೀಯ ಪುಟದಲ್ಲಿ

In Public domain. Digitization Muthulakshmi Research Academy

ಪ್ರಕಟವಾಗಿತ್ತು. ಇದು ವಚನ ಸಾಹಿತ್ಯದ ಇಪ್ಪತ್ತೊಂದನೆಯ ಶತಮಾನದ ಚರ್ಚೆಯೊಂದಕ್ಕೆ ವೇದಿಕೆಯಾಯಿತು. ಕನ್ನಡದ ಅನೇಕ ವಿದ್ವಾಂಸರು ಈ ಚರ್ಚೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಸುಮಾರು ಎರಡುವರೆ ತಿಂಗಳಗಳ ಕಾಲ ನಡೆದ ಈ ಚರ್ಚೆ, ಚರ್ಚೆಯನ್ನು ಪ್ರಾರಂಭಿಸಿದ ಲೇಖಕರ ಇನ್ನೊಂದು ಲೇಖನದಿಂದ ಅಂಕಣ ಕೊನೆಯಾಗಿತ್ತು. ಈ ಚರ್ಚೆಗಳಿಗೆ ಸಾಂಸ್ಥಿಕ ರೂಪ ನೀಡಲು ಬಿಡಿ ಲೇಖನಗಳನ್ನು ಕೃತಿಯಾಗಿ 'ವಚನ ಸಾಹಿತ್ಯ ಸಂವಾದ' ಎಂಬ ಮೌಲಿಕ ಕೃತಿಯನ್ನು ಹೊರತಂದರು.

ನಿರಂತರವಾಗಿ ಉಳಿದ ಲೇಖನ, ಚರ್ಚೆಗಳಲ್ಲಿ ಭಾಗವಹಿಸಿದವರು ಎಚ್.ಎಸ್.ಶಿವಪ್ರಕಾಶ್, ಡಾ.ಮೀನಾಕ್ಷಿ ಬಾಳಿ, ಡಾ.ಎಂ.ಎಂ.ಕಲಬುರ್ಗಿ, ಡಾ.ಟಿ.ಆರ್.ಚಂದ್ರಶೇಖರ, ಪ್ರೊ.ಎಸ್.ಜಿ.ಸಿದ್ಧರಾಮಯ್ಯ, ಮೊಗಳ್ಳಿ ಗಣೇಶ್, ಡಾ. ಬಿ.ಎಲ್.ವೇಣು, ಡಾ. ಕೆ.ವೈ.ನಾರಾಯಣಸ್ವಾಮಿ, ಡಾ.ಎಚ್.ಎಲ್. ಪುಷ್ಪ, ಡಂಕಿನ್ ಝಳಕಿ, ಡಾ.ಎಂ.ಎಸ್.ಆಶಾದೇವಿ, ಡಾ. ರಾಜಾರಾಮ ಹೆಗಡೆ, ಡಾ.ಜಿ.ಬಿ.ಹರೀಶ, ಡಾ.ಶಿವಮೂರ್ತಿ ಮುರುಘಾಸ್ವಾಮಿಗಳು, ಡಾ.ಚಂದ್ರಶೇಖರ ಕಂಬಾರ, ಕೆ.ವಿ. ಅಕ್ಷರ ಡಾ.ವಿಜಯಕುಮಾರ ಎಂ. ಬೋರಟ್ಟಿ, ಡಾ.ಎ.ಷಣ್ಮುಖ, ಡಾ.ಜೆ.ಎಸ್.ಸದಾನಂದ, ಬಾಲಗಂಗಾಧರಎಸ್.ಎನ್., ಕೃಷ್ಣಮೂರ್ತಿ ಚಂದರ್, ದೇವನೂರ ಮಹಾದೇವ, ರಾಜೇಂದ್ರ ಚೆನ್ನಿ ಅವರು. ಇವರಲ್ಲಿ ಕೆಲವರು ಎರಡು ಮೂರು ಬಾರಿ ತಮ್ಮ ವಾದವನ್ನು ಸಮರ್ಥಿಸಿ ಅಥವಾ ವಾದಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಪ್ರಕಟಿಸಿದ್ದರು.

ಪ್ರಜಾವಾಣಿ 'ಪ್ರತಿಸ್ಪಂದನ' ಅಂಕಣದಲ್ಲಿ ಡಂಕಿನ್ ಝಳಕಿಯವರು ಲಿಂಗಾಯತ ಚಳವಳಿ ಜಾತಿನಿರ್ಮೂಲನ ಚಳವಳಿಯೇ ಅಲ್ಲ. ಅಲ್ಲದೆ ವಚನಗಳಲ್ಲೂ ಜಾತಿಯನ್ನು ಅಲ್ಲಗಳೆಯುವ ವಿಷಯ ಅತ್ಯಂತ ನಗಣ್ಯ ಎಂಬ ಹೊಸ ವಾದವನ್ನು ದಾಖಲೆಗಳೊಂದಿಗೆ ಮುಂದಿಡುತ್ತಾರೆ. "ಭಾರತದಲ್ಲಿ ಒಂದು ಜಾತಿವ್ಯವಸ್ಥೆ ಇದೆ. ಅದು ಅನೈತಿಕವಾದುದು ಮತ್ತು ಅದರ ವಿರುದ್ಧ ಹೋರಾಡುವುದು ಪ್ರಗತಿಪರವಾದದ್ದು ಎಂಬ ವಿಚಾರವನ್ನು ನಮಗೆ ಕಲಿಸಿಕೊಟ್ಟವರು ಯುರೋಪಿನ ಚಿಂತಕರು. ಭಾರತೀಯ ಚಿಂತಕರು ಇದನ್ನು ಯಾವುದೇ ತಕರಾರಿಲ್ಲದೆ ಒಪ್ಪಿಕೊಂಡದ್ದರಿಂದ ತಮ್ಮನ್ನು ತಮ್ಮಲ್ಲಿರುವುದೆಲ್ಲವನ್ನೂ ಪ್ರಗತಿಪರವಾದದ್ದು ಎಂದು ತೋರಿಸುವ ಒತ್ತಡಕ್ಕೆ ಒಳಗಾದರು. ಆಧುನಿಕ(ಶಿಕ್ಷಿತ) ಲಿಂಗಾಯತ ಸಮಾಜದವರೂ ಇದಕ್ಕೆ ಹೊರತಲ್ಲ. ತಮ್ಮ ಸಮಾಜದ ಗತ ಸಾಹಿತ್ಯವೆಲ್ಲವನ್ನೂ ಜಾತಿವಿರೋಧಿ ಮತ್ತು ಆ ಕಾರಣಕ್ಕಾಗಿ ಪ್ರಗತಿಪರವಾದದ್ದು ಎಂದು ತೋರಿಸುವ

In Public domain. Digitization Muthulakshmi Research Academy

ಅವರ ಪ್ರಯತ್ನದ ಫಲವಾಗಿಯೇ ವಚನಗಳನ್ನು ಜಾತಿವಿರೋಧಿ ಸಾಹಿತ್ಯ/ಚಳವಳಿ ಎಂದು ನೋಡಿದ್ದು'[೧] ಎನ್ನುತ್ತ; ವಚನಗಳಲ್ಲಿ ಜಾತಿಯ ಅಂಕಿ ಸಂಖ್ಯೆಯನ್ನು ನೀಡುತ್ತಾರೆ. 'ಸಮಗ್ರ ವಚನ ಸಂಪುಟಗಳಲ್ಲಿರುವ ಒಟ್ಟು ೨೧,೭೮೮ ವಚನಗಳಲ್ಲಿ ಕುಲ ಮತ್ತು ಅವುಗಳಿಗೆ ಸಂಬಂಧಿಸಿದ ಇತರ ವಿಚಾರಗಳ ಕುರಿತು ಮಾತನಾಡುವಂತೆ ತೋರುವ ವಚನಗಳ ಸಂಖ್ಯೆ ೪೫೮. ಆ ಪೈಕಿ ೧೦೧ ವಚನಗಳು ಜಾತಿ ಕುರಿತು ಪದಗಳನ್ನು ಬಳಸಿದರೂ ಜಾತಿಸಮಸ್ಯೆಗಳ ಕುರಿತು ಏನನ್ನೂ ಹೇಳುವುದಿಲ್ಲ. ಸುಮಾರು ೧೪೫ ವಚನಗಳಲ್ಲಿ ಕೆಳಜಾತಿ ಮತ್ತು ಕುಲಗಳನ್ನು(ಎಲ್ಲಿ ಹೊಲೆಯ ಮತ್ತು ಮಾದಿಗ ಎಂಬ ಪ್ರಯೋಗವಾಗಿದೆಯೋ) ನಿಂದನಾತ್ಮಕ ಅರ್ಥ ಬರುವಂತೆ ಬಳಸಲಾಗಿದೆ. ಉಳಿದ ೨೧೯ ವಚನಗಳಲ್ಲಿ ೩೪ ವಚನಗಳು ಜಾತಿಗಳನ್ನು ಕುರಿತು ಏನನ್ನು ಹೇಳುತ್ತವೆ ಎಂಬುದರ ಸ್ಪಷ್ಟತೆಯೇ ಇಲ್ಲ ಹಾಗೂ ೧೧೩ ವಚನಗಳು ಜಾತಿ ಅಥವಾ ಕುಲದ ಕುರಿತು ಪ್ರಾಸಂಗಿಕವಾಗಿ ಮಾತಾಡುತ್ತವೆ. ಹಾಗಾಗಿ ಕಡೆಗೂ ಲಿಂಗಾಯತ ಚಳುವಳಿ ಜಾತಿವಿರೋಧಿ ಚಳುವಳಿ ಎಂಬ ವಿಷಯದ ಚರ್ಚೆಗೆ ಸರಿಯಾಗಿ ಉಳಿದುಕೊಳ್ಳುವ ವಚನಗಳು ೭೨ ಮಾತ್ರ(ಅಂದರೆ ಒಟ್ಟು ವಚನಗಳ ಶೇ. ೦.೩೩ರಷ್ಟು)'[೨] ಎಂದು ಲಿಂಗಾಯತ ಧರ್ಮ ಸಿದ್ಧಾಂತದ ಅಡಿಪಾಯಕ್ಕೆ ಕೈ ಇಟ್ಟಿದ್ದರು ಡಂಕಿನ್ ಝಳಕಿಯವರು.

ಇದೊಂದು ದೂರಗ್ರಾಹಿಯ ವಾದವಾಗಿತ್ತು. ಲಿಂಗಾಯತ ಸಿದ್ಧಾಂತವನ್ನು ಅಲುಗಾಡಿಸುವ ಪ್ರಯತ್ನವಾಗಿತ್ತು. ಡಾ.ಕಲಬುರ್ಗಿಯವರು 'ಇದು ಶರಣ ಚಳುವಳಿಯ ಮೂಲ ಉದ್ದೇಶವನ್ನೇ ಸ್ಫೋಟಿಸುವ ತಂತ್ರದ ಹಾಗೆ ಕಾಣುತ್ತದೆ'[೩] ಎನ್ನುತ್ತಾರೆ. ಈ ವಾದವನ್ನು ಮಂಡಿಸುವ ಡಂಕಿನ್ ಝಳಕಿ ಹಿಂದಿರುವ ಶಕ್ತಿ ಯಾವುದು? ಇದು ವೈದಿಕತೆಯನ್ನು ವೈಭವೀಕರಿಸುವ ಡಾ.ರಾಜಾರಾಮ ಹೆಗಡೆ, ಬಾಲಗಂಗಾಧರ ಎಸ್.ಎನ್. ಅವರ ಕುತಂತ್ರದ ಕೆಲಸವಾಗಿತ್ತು.

ಈ ವಾದಕ್ಕೆ ಅತ್ಯಂತ ಮಾರ್ಮಿಕವಾಗಿ ಉತ್ತರಿಸಿದ್ದರು ವಿದ್ವಾಂಸ ದೇವನೂರ ಮಹಾದೇವ. ಅವರು 'ಈ ಯುಕ್ತಿ ಈ ಕುಯುಕ್ತಿ ಈ ಸಂಶೋಧನೆ ಯಾಕಾಗಿ? 'ನಿಮ್ಮ ತಾಯಿ ಬಂಜೆ' ಅಂದರೆ ಏನು ತಾನೆ ಹೇಳಲು ಸಾಧ್ಯ? 'ನಿಮಗೆ ತಲೆ ಕೆಟ್ಟಿದೆಯಾ' ಎಂದು ನಾವು ಪ್ರಶ್ನಿಸಬಹುದು ಅಷ್ಟೇ. ಅದಕ್ಕೆ ಅವರು ಆತ್ಮವಿಶ್ವಾಸದಿಂದ ಹೇಳುತ್ತಾರೆ 'ನಾವು ಸಂಶೋಧನೆ ಮಾಡಿದ್ದೇವೆ' ಅಂತ. 'ಏನಪ್ಪಾ ಅಂಥ ಸಂಶೋಧನೆ' ಅಂದರೆ ನೀವು ಹುಟ್ಟಿದಾಗಿನಿಂದ ಇಷ್ಟು ಕೋಟಿ, ಇಷ್ಟು ಲಕ್ಷ, ಇಷ್ಟು ಸಾವಿರ ಪದಗಳನ್ನು ಉಚ್ಚಾರ ಮಾಡಿದ್ದೀರಿ. ಅದರಲ್ಲಿ ಶೇಕಡ ಒಂದರಷ್ಟು ತಾಯಿ ಅಥವಾ ಅವ್ವ ಪದ ನಿಮ್ಮ ಬಾಯಿಂದ ಬಂದಿರುವುದಿಲ್ಲ.

In Public domain. Digitization Muthulakshmi Research Academy

ಹಾಗಾಗಿ ನಿಮ್ಮ ತಾಯಿ ಬಂಜೆ ಅಲ್ಲವೆ?' ಎಂದು ದಿಗ್ವಿಜಯ ಸಾಧಿಸಿದವರಂತೆ ಎದೆ ತಟ್ಟಿ ಹೇಳುತ್ತಾರೆ"[4] ಎಂದು ಅಪಹಾಸ್ಯ ಮಾಡಿದ್ದರು.

ದೇವನೂರ ಮಹಾದೇವ ಅವರ ಸಮರ್ಥ ಖಂಡನೆಯ ನಂತರವೂ ಈ ಚರ್ಚೆ ಅಂತ್ಯ ಕಾಣಲಿಲ್ಲ. ದೀರ್ಘಕಾಲ ಮುಂದುವರಿದಿತ್ತು. ಅದು ನಾಡಿನ ಚಿಂತಕರನ್ನು ಭಾಗವಹಿಸಲೇಬೇಕೆನ್ನುವ ಆಂತರಿಕ ಒತ್ತಡವನ್ನು ಸೃಷ್ಟಿಸಿತ್ತು. 'ಕರ್ನಾಟಕ ಸಂಸ್ಕೃತಿ ಮತ್ತು ಚಿಂತನೆಯ ನಿರ್ಮಾಣದಲ್ಲಿ ಅತ್ಯಂತ ವಿಶಿಷ್ಟ ಮತ್ತು ನಿರ್ಣಾಯಕ ಪಾತ್ರ ವಹಿಸಿದ ವಚನಪರಂಪರೆಯ ಕುರಿತ ಯಾವುದೇ ಚರ್ಚೆ ತುಂಬ ಮಹತ್ವಪೂರ್ಣವಾದುದು. ಅದರಲ್ಲೂ ಒಬ್ಬ ವ್ಯಕ್ತಿಯಾಗಿ, ಬರಹಗಾರರಾಗಿ, ಕನ್ನಡ ಜಾನಪದ ಮತ್ತು ಸಾಹಿತ್ಯದ ವಿದ್ಯಾರ್ಥಿಯಾಗಿರುವ ನನ್ನ ಸಂವೇದನೆ ಮತ್ತು ಸೃಜನಶೀಲತೆಗೆ ಬಹುದೊಡ್ಡ ಕೊಡುಗೆ ನೀಡಿರುವ, ಕಳೆದ ನಾಲ್ಕೈದು ದಶಕಗಳಿಂದ ನನ್ನ ಆತ್ಮಸಂಗಾತದಲ್ಲಿರುವ ವಚನಕಾರರ ಕುರಿತು ಚರ್ಚೆಯಲ್ಲಿ ನಾನೂ ದನಿಗೂಡಿಸಬೇಕೆಂದು ಅನಿಸಿದೆ"[5] ಎನ್ನುತ್ತ ಚರ್ಚೆಯಲ್ಲಿ ಭಾಗವಹಿಸುತ್ತಾರೆ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಡಾ.ಚಂದ್ರಶೇಖರ ಕಂಬಾರ. 'ಅಧ್ಯಾತ್ಮದಲ್ಲಿ ಶ್ರುತಿಪಾರಮ್ಯವನ್ನು ಈ ಪರಂಪರೆಯು ಎಲ್ಲರಂತೆ ವಚನಕಾರರೂ ವೇಧಿಸಲರಿಯದ ವೇದಗಳನ್ನು ಪೂರೈಸಲರಿಯದ ಪುರಾಣಗಳನ್ನು ಅರಿಯಲರಿಯದ ಆಗಮನಗಳನ್ನು ನಿರಾಕರಿಸಿದ್ದಾರೆ. ಈ ಪರಂಪರೆಗಳಲ್ಲಿ ಸರ್ವೋಪಹಾರಿಯಾದುದ್ದು ಅನುಭವ ಪ್ರಮಾಣ. ಆರೂಢ ಕೂಟದಲ್ಲಿ ಆರಸಾಕ್ಷಿಯನೂ ಕಾಣೆ ಅಂದವನು ಅಲ್ಲಮ. ತನ್ನರಿವನ್ನೇ ಆಧಾರವಾಗಿಟ್ಟುಕೊಂಡು ವಚನಕಾರರ ಸಮಾನ ನಂಬಿಕೆಯವರ ಜತೆಗಿನ ಸಂವಾದಗಳ ಮೂಲಕ ತಮ್ಮ ಒಳನೋಟವನ್ನು ಪರಸ್ಪರ ನಿಕಷಕ್ಕೊಡ್ಡಲೋಸುಗ ಶರಣ ಸಮುದಾಯವನ್ನು ಕಟ್ಟಿಕೊಂಡರು. ಈ ಆಧ್ಯಾತ್ಮಿಕ ಮುಂಚಲನೆಯನ್ನು ಕನ್ನಡ ಭಾಷಿಕ ಸಂದರ್ಭದಲ್ಲಿ ಪ್ರಾರಂಭಿಸಿದವರು ಬಸವಪೂರ್ವಯುಗದ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ದಾಸಿಮಯ್ಯರೆಂಬುದು ಸ್ವತಃ ಬಸವಣ್ಣನವರ ವಚನಗಳಲ್ಲೇ ಸಿದ್ಧವಾಗುತ್ತದೆ. ಕಾಯಕಜೀವಿಗಳಾದ ಈ ಶರಣರು ಸಮಣ ಪಥದವರಂತೆ ಲೋಕವಿಮುಖರಲ್ಲ. ತ್ರಿಮತಸ್ಥಾಚಾರ್ಯರ ರೀತಿಯಲ್ಲಿ ವೇದೋಪನಿಷತ್ತುಗಳ ಭೂತಗನ್ನಡಿಯಲ್ಲಿ ಇಹಪರರ ತಿಳಿವನ್ನು ಅರಿಯು ಹೊರಟವರಲ್ಲ. ಅಥವಾ ಬ್ರಹ್ಮಸೂತ್ರದ ಭಾಷ್ಯಕಾರರಲ್ಲ. ಶೂದ್ರರನ್ನು ಹೊಸಲಾಚೆಯಿಡುವ ಮಠ ದೇಗುಲದವರಲ್ಲ. ಇವರೆಲ್ಲರನ್ನೂ ಕೇವಲ ಅಧ್ಯಾತ್ಮಮಾರ್ಗಿಗಳೆಂಬ

In Public domain. Digitization Muthulakshmi Research Academy

ಸರಳ ಏಂಗಡನೆಗೊಳಪಡಿಸಿದರೆ ನಮಗೆ ಭಾರತೀಯ ಆಧ್ಯಾತ್ಮಿಕ ಪರಂಪರೆಗಳಲ್ಲಿರುವ ಒಳಭಿನ್ನತೆಗಳ ಅರಿವಿಲ್ಲವೆಂದೇ ಅರ್ಥ. ಆದ್ದರಿಂದ ಶರಣರು ಶಾಂಕರಪರಂಪರೆಯ ವೈದಿಕರು ಅಲ್ಲ; ಅಭಿನವ ಗುಪ್ತ ಪರಂಪರೆಯ ಆಗಮಿಕರು ಅಲ್ಲ. ಬುದ್ಧ ಮಹಾವೀರ ಪರಂಪರೆಯ ಸಮಣರು ಅಲ್ಲ. ಆದ್ದರಿಂದ ಶರಣರು ವೈದಿಕೇತರರೂ ಸಮಣೇತರರೂ ಆಗಿದ್ದರೆಂಬುದು ಸುಸ್ಪಷ್ಟ.[೬]

'ಇವರು (ಡಂಕಿನ್ & ಕಂಪನಿ) ಹೀಗೆ ಹೇಳಲು ಎರಡು ಕಾರಣಗಳಿರಬಹುದು ಒಂದು; ವಚನ ಸಾಹಿತ್ಯದ ಸರಿಯಾದ ಸಿದ್ಧಾಂತ ಗೊತ್ತಿಲ್ಲದಿರುವುದು. ಎರಡು; ಗೊತ್ತಿದ್ದೂ ಯಾವುದೋ ಪೂರ್ವಗ್ರಹ ಪೀಡಿತರಾಗಿರುವುದು. ಬಹುಶಃ ಇದರಲ್ಲಿ ಎರಡೂ ಇರುವಂತೆ ಕಾಣುತ್ತದೆ. ವಚನ, ಯಾವುದೋ ಕಾಲದಲ್ಲಿ ಹುಟ್ಟಿ, ಮೂಲೆಯಲ್ಲಿ ಉಳಿದ ಸಾಹಿತ್ಯವಲ್ಲ. ಹನ್ನೆರಡನೆಯ ಶತಮಾನದ ಬಳಿಕವೂ ಅದು ಜನಜೀವನದಲ್ಲಿ ಕೆಲಮಟ್ಟಿಗಾದರೂ ಜೀವಂತವಾಗಿ ಸಾಗಿಬಂದಿದೆ. ಸಕಲ ಪುರಾತನರ ವಚನ ಕಟ್ಟು, ಲಿಂಗಲೀಲಾವಿಲಾಸ ಚಾರಿತ್ರ್ಯ ಶೂನ್ಯಸಂಪಾದನೆಗಳೆಂಬ ಹೊಸ ಹೊಸ ಪ್ರಯೋಗಗಳಿಗೆ ಮೈ ಒಡ್ಡುತ್ತ, ಹೆಚ್ಚಿನದಾಗಿ ಟೀಕೆ ವ್ಯಾಖ್ಯಾನಗಳಿಗೂ, ಕಾವ್ಯ ಪುರಾಣಗಳಿಗೂ ವಸ್ತುವಾಗುತ್ತ ಬಂದಿದೆ. ಈ ಅಭ್ಯಾಸ ಈಗಲೂ ದೊಡ್ಡ ಪ್ರಮಾಣದಲ್ಲಿ ಮುಂದುವರಿದಿದೆ'[೭] ಎಂದು ವಚನ ವೈಶಿಷ್ಟ್ಯವನ್ನು ಅಭಿನಂದಿಸುತ್ತಾರೆ ಡಾ.ಕಲಬುರ್ಗಿ. ಇದೇ ಆಶಯವನ್ನು ಡಾ.ಎಂ.ಎಸ್.ಆಶಾದೇವಿ ಹೀಗೆ ವ್ಯಕ್ತಪಡಿಸುತ್ತಾರೆ. 'ಹನ್ನೆರಡನೆಯ ಶತಮಾನದ ವಚನ ಚಳವಳಿ ಮತ್ತು ಸಾಹಿತ್ಯ ಇಂಥ ಛದ್ಮವೇಷಗಳ ಅನಾವರಣವೆಂದೇ ಕನ್ನಡ ಜನಮಾನಸದ, ಬುದ್ಧಿ ಭಾವಗಳ ಅವಿಭಾಜ್ಯ ಅಂಗವಾಗಿದೆ. ವಚನಗಳು ನಮ್ಮ ಕಣ್ಣಿನ ಮುಂದಿನ ಬೆಳಕಾಗಿ, ನಡೆಯಬೇಕಾದ ದಾರಿಯಾಗಿ, ಉಳಿಸಿಕೊಳ್ಳಬೇಕಾದ ಎಚ್ಚರವಾಗಿ, ಈಡೇರಬೇಕಾದ ಆಶಯವಾಗಿ ಕನ್ನಡಿಗರನ್ನು ಉದ್ದೀಪಿಸಿವೆ, ಕಾಡಿವೆ ಮತ್ತು ಕಾಡುತ್ತಿವೆ. ಸ್ವಸ್ಥ ಸಮಾಜದ ಹುಡುಕಾಟಕ್ಕಾಗಿ ಅವು ಎಲ್ಲ ಸ್ತರದ ಜನರನ್ನು ಗೋಚರ ಮತ್ತು ಅಗೋಚರ ನೆಲೆಯಲ್ಲಿ ತಲುಪಿವೆ. ಎಂದರೆ ವಚನ ಚಳುವಳಿ ಮತ್ತು ಸಾಹಿತ್ಯಗಳೆರಡೂ ಮೇಲ್ಜಾತಿ ಮತ್ತು ವರ್ಗದವರಿಗೆ ಅಗತ್ಯವಿರುವ ವಿನಯವನ್ನು, ಕೆಳಜಾತಿ ಮತ್ತು ವರ್ಗದವರಿಗೆ ಅನಿವಾರ್ಯವಾಗಿರುವ ಗರ್ವವನ್ನು, ಆತ್ಮಘನತೆಯನ್ನು ರೂಪಿಸುವಲ್ಲಿ ಆಸಕ್ತವಾಗಿವೆ'[೮] ಎನ್ನುತ್ತಾರೆ.

'ಬ್ರಾಹ್ಮಣವಿರೋಧಿ ಚಳುವಳಿ ಕುರಿತು ವಚನಗಳಲ್ಲಿ ಸರಿಯಾದ ಅಭಿವ್ಯಕ್ತಿಯೇ ಇಲ್ಲ ಎನ್ನುವುದಾದರೆ ವಚನ ಚಳುವಳಿ ಹುಟ್ಟಿಕೊಂಡಿದ್ದೇಕೋ? ಮಾನ್ಯ ಝಳಕಿ ಹಾಗೂ ಬಾಲಗಂಗಾಧರರು ತಮ್ಮ ವಾದಕ್ಕೆ ಬೇಕಾದ ವಚನಗಳನ್ನಷ್ಟೇ

In Public domain. Digitization Muthulakshmi Research Academy

ಆಧಾರವಾಗಿಟ್ಟುಕೊಂಡು ವಿಶ್ಲೇಷಿಸಲು ಹೊರಟಿದ್ದರ ಹಿನ್ನೆಲೆ ಏನಿರಬಹುದು? ಯಾರನ್ನೋ ಸಂತೈಸಲು ಶರಣರ ಮೂಲ ಆಶಯಕ್ಕೆ ಕೊಡಲಿ ಏಟು ಹಾಕಹೊರಟಿದ್ದು ಹುನ್ನಾರವೋ? ಸನಾತನಿಗಳ ಮೇಲಿನ ವ್ಯಾಮೋಹವೋ? ಆ ಕಾಲದ ದಲಿತ ಚಳುವಳಿಗಾರರ ಮೂಲಭೂತವಾದವನ್ನೇ ಹುಸಿಗೊಳಿಸುವ ಸನ್ನಾಹವೋ ಅಥವಾ ಇವೆಲ್ಲವೂ ಚರ್ಚಿಸಿ ಖಂಡಿಸಲೇಬೇಕಿದೆ"[೯] ಎನ್ನುತ್ತಾರೆ ಇನ್ನೊಬ್ಬ ವಿದ್ವಾಂಸ ಡಾ.ಬಿ.ಎಲ್.ವೇಣು. 'ಬಾಲಗಂಗಾಧರ ಆಂಡ್ ಕಂಪನಿ ಅವರು ಮಂಡಿಸಿರುವ ಈ ಅಧ್ಯಯನವು ಭಾರತದಲ್ಲಿ ಹಿಂದುತ್ವದ ರಾಜಕಾರಣ ಬಲಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಅರ್ಥೈಸುವುದು ಮುಖ್ಯವೆಂದು ತೋರುತ್ತದೆ. ಸರಿಯಾಗಿ ಹೇಳಬೇಕೆಂದರೆ ಬಾಬರಿ ಮಸೀದಿಯ ಧ್ವಂಸದ ನಂತರದಲ್ಲಿ ಕನ್ನಡದಲ್ಲಿ ಮಾತ್ರವಲ್ಲದೆ ಬೇರೆ ಭಾಷೆಗಳಲ್ಲಿಯೂ ಜಾತಿ ಸನಾತನ ಮೌಲ್ಯಗಳನ್ನು ಸಮರ್ಥಿಸುವ ಆಲೋಚನಾಕ್ರಮಗಳು ಸಮಾಜಶಾಸ್ತ್ರಗಳ ಮೂಲಕ ಆರಂಭವಾಗಿರುವುದನ್ನು ಗಮನಿಸಬೇಕು' ಎಂದು ಹೆಸರಿಸುತ್ತಾರೆ ಡಾ.ಕೆ. ವೈ.ನಾರಾಯಣಸ್ವಾಮಿ.[೧೦]

'ಭಾರತೀಯ ಆಧ್ಯಾತ್ಮಿಕ ಪರಂಪರೆಯಲ್ಲಿ ಉಪನಿಷತ್ತುಗಳ ಕಾಲದಿಂದಲೂ ಜಾತಿ, ಅಂತಸ್ತು, ಐಶ್ವರ್ಯ ಇತ್ಯಾದಿಗಳು ಅಹಂಕಾರ ರೂಪದಲ್ಲಿ ಆತ್ಮಜ್ಞಾನಕ್ಕೆ ಅಡ್ಡಿಯಾಗಿವೆ ಎಂದು ಪ್ರತಿಪಾದಿಸಲಾಗಿದೆ. ಆತ್ಮಜ್ಞಾನಿಗೆ ಇದಾವುದೂ ಇರುವುದಿಲ್ಲ. ಅದು ಪರಮಾನಂದದ ಸ್ಥಿತಿ. ಹಾಗಾಗುವುದೆಂದರೆ ಜನನ ಮರಣಗಳ ಚಕ್ರದಿಂದ ಮುಕ್ತಿ ಹೊಂದಿದಂತೆಯೇ. ಅದನ್ನೇ ಇವರು ಮೋಕ್ಷ ಎನ್ನುತ್ತಾರೆ.'[೧೧] ಎಂದು ಪ್ರತಿಪಾದಿಸುತ್ತಾರೆ ಡಾ.ರಾಜಾರಾಮ ಹೆಗಡೆ. ವೈದಿಕ ಧರ್ಮದ ಹಾಗೂ ಲಿಂಗಾಯತ ಧರ್ಮದಲ್ಲಿರುವ ಮೂಲಭೂತ ಸಿದ್ಧಾಂತಗಳಲ್ಲಿರುವ ಮುಖ್ಯ ವ್ಯತ್ಯಾಸವೇ ಇದು. ಲಿಂಗಾಯತ ಧರ್ಮದಲ್ಲಿ ಮೋಕ್ಷದ ಕಲ್ಪನೆಯಿಲ್ಲ. ದೇಹದಿಂದ ಬಿಡುಗಡೆ ಹೊಂದಿದ ಜೀವವು ಲಿಂಗದಲ್ಲಿ ಲೀನವಾಗುತ್ತದೆ. ಜೀವನದಿಂದ ಮುಕ್ತಗೊಳ್ಳುವುದೇ ಲಿಂಗಾಯತನಿಗೆ ಬಿಡುಗಡೆ. ಅದಕ್ಕಾಗಿ ಲಿಂಗಾಯತರು ಮರಣವೇ ಮಹಾನವಮಿ ಎನ್ನುತ್ತಾರೆ. ಅಲ್ಲದೆ ಲಿಂಗಾಯತವು ವ್ಯಕ್ತಿವಾದಿ ಸೋಹಂಪೂರ್ಣ ಧರ್ಮವಲ್ಲ, ಸಮಾಜವಾದಿ ದಾಸೋಹಂಪೂರ್ಣ ಧರ್ಮ. ಇದು ರಾಜಾರಾಮ ಹೆಗಡೆಯವರಿಗೆ ಅರ್ಥವಾಗಿಲ್ಲ ಎಂದು ಭಾವಿಸಬೇಕಾಗುತ್ತದೆ. ವೈದಿಕ ಧರ್ಮ ಸಾಧಕನೊಬ್ಬನ ಮೋಕ್ಷ ಮಾತ್ರ ಪ್ರತಿಪಾದಿಸುತ್ತದೆ. ಸಾಧಕ ಸಾವಿನ ನಂತರ ಮರಳಿ ಜನ್ಮ ಪಡೆಯದೆ ಮೋಕ್ಷ ದೊರಕಿಸಿಕೊಳ್ಳುತ್ತಾನೆ ಎಂದು ಭಾವಿಸುತ್ತದೆ. ಲಿಂಗಾಯತ ಧರ್ಮ ಪುನರ್ಜನ್ಮದಲ್ಲಿ ನಂಬಿಕೆಯನ್ನೇ ಇಟ್ಟಿಲ್ಲ. 'ಮೋಕ್ಷ' ಪದದ

In Public domain. Digitization Muthulakshmi Research Academy

ಕನ್ನಡದ ಅರ್ಥ: ಬಿಡುಗಡೆ; ವಿಮೋಚನೆ. ಆತ್ಮವು ಜನನ ಮರಣಗಳಿಂದ ದೂರವಾಗುವುದು; ಲಿಂಗಾಯತ ಧರ್ಮದಲ್ಲಿ ಮೋಕ್ಷದ ಕಲ್ಪನೆ ಇಲ್ಲ. ಹಿಂದೂಗಳು ವ್ಯಾಖ್ಯಾನಿಸುವಂತೆ ಮೋಕ್ಷ ಕಲ್ಪನೆಯನ್ನು ಲಿಂಗಾಯತರೇಕೆ ಒಪ್ಪಿಕೊಳ್ಳುವುದಿಲ್ಲ ಎಂಬ ವಿಶ್ಲೇಷಣಾತ್ಮಕ ಲೇಖನವನ್ನು "ವೀರಶೈವ ತತ್ತ್ವ ಪ್ರಕಾಶ" ಎಂಬ ಗ್ರಂಥದಲ್ಲಿ ಕಾಣಬಹುದು*. "ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ಎಂಬುದಾಗಿ ನಾಲ್ಕು ವಿಧವಾದ ಮೋಕ್ಷಗಳನ್ನು ಹಿಂದೂ ಗ್ರಂಥಗಳು ಸಾರಿ ಹೇಳುತ್ತವೆ. 'ಸಾಲೋಕ್ಯ'ವೆಂದರೆ ಸುಗುಣನಾದ ಒಬ್ಬ ದೇವನು(ಪಾರ್ವತೀ ಪತಿ, ಲಕ್ಷ್ಮೀಪತಿ, ಸರಸ್ವತೀಪತಿ, ಮುಂತಾದವರಲ್ಲಿ ಒಬ್ಬನು) ವಾಸ ಮಾಡುವ ಲೋಕದಲ್ಲಿ ವಾಸ ಮಾಡುವಿಕೆ ಎಂದೂ, 'ಸಾಮೀಪ್ಯ'ವೆಂದರೆ ಆ ದೇವನ ಸಮೀಪದಲ್ಲಿ ಇರುವಿಕೆ ಎಂದೂ, 'ಸಾರೂಪ್ಯ'ವೆಂದರೆ ಆ ದೇವನ ರೂಪದಂತೆ ರೂಪವನ್ನು ಪಡೆಯುವಿಕೆ ಎಂದೂ, 'ಸಾಯುಜ್ಯ'ವೆಂದರೆ ದೇವನನ್ನು ಕೂಡುವಿಕೆ, ಎಂದರೆ ಅವನಿಂದ ಭಿನ್ನವಾಗದಂತೆ ಇರುವಿಕೆ ಎಂದೂ, ಇದರಲ್ಲಿ ಸಾಯುಜ್ಯವೇ ಹೆಚ್ಚಿನದೆಂದೂ ಇಂತಹ ಮೋಕ್ಷಗಳನ್ನು ಜೀವನು ದೇಹದಿಂದ ಅಗಲಿದ ಮೇಲೆ ಹೊಂದುವುದಕ್ಕಾಗಿ ಮನುಷ್ಯನು ಪ್ರಯತ್ನಿಸಬೇಕೆಂದು ಹಿಂದೂಗ್ರಂಥಗಳ ಬಹುಭಾಗಗಳು ಹೇಳುತ್ತವೆ. ಹೀಗೆ ತಿಳಿದುಕೊಂಡು ನಡೆವುದೂ ಮೂಢಭಾವನೆ ಎಂದೇ ಹೇಳಬೇಕಾಗಿದೆ. ಏಕೆಂದರೆ ಆ ಸುಗುಣ ದೇವನು(ದೇವತೆಗಳು) ಈಗ ಇದ್ದಾನೆ ಎಂದು ಯಾವ ವಿಧದಲ್ಲಿಯೂ ಕಂಡುಹಿಡಿಯಲ್ಪಟ್ಟಿಲ್ಲ. ಇದಲ್ಲದೆ ಹಿಂದುಗಳ ಗ್ರಂಥಗಳಲ್ಲಿಯೇ (ಯದ್ ದೃಷ್ಟಂ ತನ್ನಷ್ಟಂ) 'ಯಾವುದು ಕಣ್ಣಿಗೆ ಕಾಣುವ ವಸ್ತುವೋ ಅದು ಒಂದಿಲ್ಲೊಂದು ಕಾಲಕ್ಕೆ ನಷ್ಟವಾಗುವುದು' ಎಂದು ಹೇಳಲ್ಪಟ್ಟಿರುವುದರಿಂದ ಕಣ್ಣಿಗೆ ಕಾಣುವ ದೇವನೊಡನೆ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯಗಳು ಒಂದಿಲ್ಲೊಂದು ದಿನ ಕೊನೆಯನ್ನು ಹೊಂದತಕ್ಕವುಗಳು ಎಂದು ನಾವು ನಿರ್ಧಾರ ಮಾಡಬಹುದು. ಆ ದಿಸೆಯಿಂದಲೇ ಬ್ರಹ್ಮ, ವಿಷ್ಣು, ರುದ್ರರಿಗೆ ಆಯುಷ್ಯವು ಉಂಟು; ಅವರು ಈ ಜನ್ಮ ಜನ್ಮಗಳಿಗೆ ಬರತಕ್ಕವರು ಎಂದು ಹಿಂದೂಗ್ರಂಥಗಳು ನಿರ್ಣಯಿಸಿವೆ. ಭಗವದ್ಗೀತೆಯಲ್ಲಿಯೂ ಕೂಡ ಪುಣ್ಯ ಮಾಡಿದವರು ಸ್ವರ್ಗಾದಿ ಲೋಕಗಳಿಗೆ ಹೋದ ಮೇಲೆ ಅಲ್ಲಿ, ಆ ಪುಣ್ಯವನ್ನು ಅನುಭವಿಸಿ, ಅದು ತೀರಿದ ಮೇಲೆ ಪುನಃ ಮೃತ್ಯುಲೋಕಕ್ಕೆ ಬರುತ್ತಾರೆ ಎಂದು ಹೇಳಿರುತ್ತದೆ. ಈ ದೇವತೆಗಳೇ ಶಾಶ್ವತರಲ್ಲ ಎಂದು ಹೇಳಿದ ಮೇಲೆ, ಇವರೊಡನೆ ಕೂಡಿದುದು ಹೇಗೆ ಶಾಶ್ವತವಾಗಿ ನಿಲ್ಲುವುದು? ಈ ಕಾರಣಗಳಿಂದ ಹಿಂದುಗಳು ಈ ವಿಧವಾದ ಗೋಜಿಗೆ ಹೋಗದೆ ಜೀವನ ಮುಂದಿನ ಗತಿ ಏನು

In Public domain. Digitization Muthulakshmi Research Academy

ಎಂಬುದನ್ನು ಸಂಶೋಧನಾತ್ಮಕ ದೃಷ್ಟಿಯಿಂದ ವಿಚಾರಿಸುವುದು ಉತ್ತಮ. ಒಟ್ಟಿನಲ್ಲಿ ಮೋಕ್ಷ(ಬಿಡುಗಡೆ) ಎಂಬುದಕ್ಕೆ ಇಷ್ಟು ಮಟ್ಟಿಗೆ ಅರ್ಥ ಮಾಡಬೇಕು. ಯಾವಾಗ ಮನುಷ್ಯನು ನಿರಾಕಾರನಾದ ದೇವ ಅಥವಾ ಮಹಾದೇವನನ್ನು ಮರೆತು ನಾನು ಮನುಷ್ಯ, ಇದು ಭೂಮಿ ಎಂದು ಬೇರೆ ಬೇರೆಯಾಗಿ ವ್ಯವಹಾರ ಮಾಡುವನೋ ಆಗ ಅವನು ಪ್ರಾಪಂಚಿಕ ಲೌಕಿಕ ಅಥವಾ ಪ್ರಾಕೃತಿಕ ಎಂದೂ, ಅದೇ ಮನುಷ್ಯನ ಹೆಸರು ಹೇಳಲಿಕ್ಕೆ ಬಾರದ 'ತತ್' ಎಂಬ ನಿರಾಕಾರ ವಸ್ತುವೂ, 'ಇದಂ' ಎಂದು ಗುರ್ತಿಸಬಹುದಾದ ಇಂದ್ರಿಯಗಳಿಗೆ ಗೋಚರವಾಗತಕ್ಕ ಭೂಮಿ ಮೊದಲಾದ ವಸ್ತುಗಳೂ ಎಲ್ಲವೂ ಒಂದೇ(ತದಿದಂ ಸರ್ವಂ) ಎಂಬುದಾಗಿ ಎಲ್ಲವನ್ನು ತಿಳಿದು, ಎಲ್ಲವನ್ನು ಮಹದೇವನದೆಂದೇ ಯಾವಾಗ ತಿಳಿಯುವವನೋ ಆಗ ಅವನು ಪ್ರಾಪಂಚಿಕ ಸ್ಥಿತಿಯಿಂದ ಬಿಡುಗಡೆ ಹೊಂದುವನು. ಆ ಪ್ರಾಪಂಚಿಕನು ಅಲೌಕಿಕನು, ಅಪ್ರಾಕೃತಿಕನು ಎಂದು ತಿಳಿಯಬೇಕು. ಆ ಅಪ್ರಾಕೃತಿಕ ವೃತ್ತಿಯೇ ಪ್ರಾಪಂಚಿಕ ವೃತ್ತಿಯ ಬಿಡುಗಡೆ(ಮೋಕ್ಷ) ಎಂದು ನಿರ್ಧಾರ ಮಾಡುವುದಕ್ಕೆ ಯಾವ ಆಕ್ಷೇಪಣೆಯೂ ಬರಲಾರದು. ಇಂತಹ ಮೋಕ್ಷಕ್ಕೆ 'ಕೈವಲ್ಯ' ಎಂದು ಹೆಸರು. ಇದನ್ನು ದೇಹದ ಬಿಡುಗಡೆಯಾದ ಮೇಲೆ ಹೊಂದಬಹುದೆಂದು ಅದ್ವೈತಿಗಳು ತಿಳಿದುಕೊಂಡಿರುತ್ತಾರೆ. ದೇಹವು ತಪ್ಪಿದ ಮೇಲೆ ವಿದೇಹಿ (ವಿದೇಹಿ; ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ ಮಾತ್ಸರ್ಯ ಇವೇ ಆರು ಅರಿಷಡ್ವರ್ಗಗಳು) ಮುಕ್ತಿ ಉಂಟೆಂದು ಅವರು ನಂಬುತ್ತಾರೆ. ಲಿಂಗಾಯತರು ಯಾವಾಗ ಪ್ರಾಪಂಚಿಕ ಭಾವನೆಯು ಇರದೇ ಮಹಾದೇವನ ಭಾವನೆಯು ಬಂದಿತೋ ಆಗಲೇ ಕೈವಲ್ಯ, ಆಗಲೇ ವಿದೇಹ ಮುಕ್ತಿ; ಇಂತಹ ಕೈವಲ್ಯವನ್ನು ದೇಹವಿರುವಾಗಲೇ ಹೊಂದಲಿಕ್ಕೆ ಬರುತ್ತದೆ. ಇದಕ್ಕಾಗಿ ದೇಹಪಾತವನ್ನು ನಾವು ಕಾಯ್ದುಕೊಂಡಿರಬೇಕಾಗಿಲ್ಲ ಎಂದು ಹೇಳುತ್ತಾರೆ. ಈ ದೃಷ್ಟಿಯಿಂದಲೇ ಅವರು 'ಸರ್ವಂ ಲಿಂಗಮಯಂ' ಎಂಬ ಭಾವನೆಯಿಂದ ನಡೆಯುವರು. ಶಿವಶರಣರಾದ ಮೊಗ್ಗೆಯ ಮಾಯಿದೇವರು ಹೇಳಿದಂತೆ:

ಲಿಂಗದೊಳಿರ್ದು ಲಿಂಗಮನೆ ತಾಳ್ದು ನಿರಂತರ ಲಿಂಗಪೂಜೆಯಂ
ಲಿಂಗದಿನೊಲ್ದು ವಿಸ್ತರಿಸಿ ಲಿಂಗವೆ ಲಿಂಗಮನರ್ಪಿಸುತ್ತ ಮಹ
ಲಿಂಗಪದಾರ್ಥವಂ ಸವಿದು ಲಿಂಗಸುಖಾಸ್ಪದನಾಗಿ ರಾಜಿಪಂ
ಲಿಂಗ ನಿಜೈಕ್ಯನಯ್ಯ ಪರಮಪ್ರಭುವೇ ಮಹದೈಪುರೀಶ್ವರಾ

ಎಂಬ ರೀತಿಯಲ್ಲಿ ನಡೆಯುವರು. ಇದೇ ಕೈವಲ್ಯ ಭಾವವು. ಎಂದರೆ ಎಲ್ಲವನ್ನು ಮಹಾದೇವನೇ ಮಾಡುತ್ತಾನೆ ಎಂಬ ಭಾವವು. ಇವರ ಸಮಾಧಿಯ ಕಾಲದಲ್ಲಿ

In Public domain. Digitization Muthulakshmi Research Academy

ದೇಹವನ್ನು ತೆಗೆದುಕೊಂಡು ಹೋಗುವ ವಿಮಾನಕ್ಕೆ 'ಕೈವಲ್ಯ' ಎಂದು ಕರೆಯುತ್ತಾರೆ. ಕಾರ್ಯ ಮಾಡುವನು ತನ್ನ ಕಾರ್ಯದ ಫಲದಲ್ಲಿ ಇಚ್ಛೆಯುಳ್ಳವನಾಗಿರಬಾರದು ಎಂಬುದೇ ಇದರ ತಾತ್ಪರ್ಯ. ಅದರಲ್ಲಿ ಇನ್ನೂ ಹೆಚ್ಚಿನ ವಿಚಾರ ಮಾಡಲಿಕ್ಕೆ ಅಂಶವು ಇದೆ. ಫಲ ತನಗೆ ಬೇಡ ಎಂದರೂ ಮಾಡತಕ್ಕವನಿಗೆ ನಾನು(ಕರ್ತೃತ್ವ–doership) ಎಂಬ ಭಾವನೆ ಇದ್ದೇ ಇರುತ್ತದೆ. ಈ ಭಾವನೆಗೆ ತಕ್ಕಂತೆ ಕಾರ್ಯ ಮಾಡಿದನಿಗೆ ತನಗೆ ಫಲವು ಬೇಡವೆಂದರೂ ಬರುತ್ತದೆ. ಇದಲ್ಲದೆ ಈ ಭಾವನೆಯುಳ್ಳ ಜೀವನು ನಾನು ಎಂಬುದನ್ನು ಕಳೆದುಕೊಳ್ಳುವವರೆಗೂ ಮತ್ತೆ ಹುಟ್ಟಲೇ ಬೇಕಾಗುವುದು. ಜೀವನಿಗೆ ನಾನು ಎಂದು ಹೇಳಿಕೊಳ್ಳುವವರೆವಿಗೂ ಶುದ್ಧತೆ ಇಲ್ಲ. ಈ ಕೈವಲ್ಯ ಪದ್ಧತಿಯಲ್ಲಿ ಹೀಗೆ ಇಲ್ಲ. ಜೀವನಕ್ಕೆ ನಾನು ಎಂಬುದು ಕರ್ತೃತ್ವ (doership)ವೂ ಹೋಗಿ ಶಿವನೇ(ಲಿಂಗವೇ) ಮಾಡುತ್ತಾನೆ ಎಂಬ ಭಾವನೆ ಬರುವುದು. ಆಗ ಅದರ ಫಲವೂ ಜೀವನಿಗೆ ಅಂಟಿಕೊಳ್ಳುವುದಿಲ್ಲ ಮತ್ತು ಶಿವ ಎಂಬ ಭಾವನೆಯಿಂದ ಜೀವನ ಜೀವತ್ವವು ಅಲ್ಲಿಯೇ ಕಳೆದು ಹೋಗಿರುತ್ತದೆ. ಆದುದರಿಂದ ಜೀವನು ಪುನಃ ಹುಟ್ಟಬೇಕಾಗುವುದಿಲ್ಲ. ಇಂತಹ ಕೈವಲ್ಯ ಭಾವನೆಯ ಕೆಲಸಕ್ಕೆ ನಿರಹಂಭಾವ ಕ್ರಿಯೆ ಎನ್ನುತ್ತಾರೆ. ನಿಷ್ಕಾಮಕರ್ಮಕ್ಕಿಂತಲೂ ಈ ನಿರಹಂಭಾವ ಕ್ರಿಯೆ ಹೆಚ್ಚಿನದು. ನಿರೀಹ ಭಾವ, ನಿರಪೇಕ್ಷ ಭಾವ ಎಂಬ ಹೆಸರುಗಳು ಇವೆ. ಕೈವಲ್ಯ ಭಾವನೆಯಿಂದ ಮನುಷ್ಯನ ಜೀವವು ಪರಿಶುದ್ಧಿಯನ್ನು ಹೊಂದುವುದೆಂದು ಆ ಜೀವನು ಶುದ್ಧನಾದ ಗುರುತು ಈ ಜೀವನಲ್ಲಿ ತೋರಿ ಅದರ ಫಲವನ್ನು ಅನುಭವಿಸುವನೆಂದೂ ನಾವು ನಿಸ್ಸಂಶಯವಾಗಿ ಹೇಳಬಹುದು. ಹಾಗಿಲ್ಲದೆ ದೇಹಪಾತವಾದ ನಂತರ ಪಡೆಯಬೇಕೆಂಬ ಮುಕ್ತಿಯು ಬಹುದೂರದ ಸಂಗತಿಯಾಗಿ ಇರುತ್ತದೆ. ದೇಹವಿರುವಾಗಲೇ ಮುಕ್ತಿಯ ಸಾಧನೆಯನ್ನು ಮಾಡಿದರೆ ಜೀವನಿಗೆ ಆ ಸಂಸರ್ಗವು ದೇಹವನ್ನು ಬಿಡುವಾಗ ಸಹಜವಾಗಿಯೇ ಉಳಿದಿರುತ್ತದೆ. 'ಮರ್ತ್ಯಲೋಕವೆ ಕರ್ತಾರನ ಕಮ್ಮಟವಯ್ಯ ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ' ಎಂದು ಬಸವಣ್ಣನವರು ಹೇಳಿದ್ದಾರೆ".[೨]

ಜೀವಿಸಿರುವ ಭೂಮಿಯೇ ಸ್ವರ್ಗ ಅಥವಾ ನರಕ. ಸ್ವರ್ಗ(ಸ್ವರ್ಗ ನಾಮಪದವಾಗಿ ಬಳಕೆಯಾಗಿ ಅದರರ್ಥ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ), ನರಕ(ಇಲ್ಲಿಯೂ ನಾಮಪದವಾಗಿ ಬಳಕೆಯಾಗಿದೆ)ದ ಕಲ್ಪನೆಯನ್ನು ಪುರಾಣಗಳು ಮಾಡಿವೆ. ಅಡುಗೂಲಜ್ಜಿ ಕಥೆಗಳನ್ನು ಹೇಳುತ್ತ, ಸ್ವರ್ಗ ನರಕವನ್ನು ಚಲನಚಿತ್ರಗಳಗಳಲ್ಲಿ ಮಾತ್ರ ಕಾಣಬಹುದು. ಯಾರಾದರೂ ಸ್ವರ್ಗ ನರಕವನ್ನು ಕಂಡಿದ್ದಾರೆಯೇ? ಅದಕ್ಕಾಗಿ ಲಿಂಗಾಯತರು ನಮ್ಮ ಪರಿಸರವನ್ನೇ

In Public domain. Digitization Muthulakshmi Research Academy

ಸ್ವರ್ಗವಾಗಿಸೋಣ ಎಂದಿದ್ದರು. ಅದೇ ಎಲ್ಲವನ್ನು ದೊರಕಿಸಿಕೊಡುತ್ತದೆ ಎನ್ನುತ್ತಾರೆ. ಆದರೆ ಸಂಪೂರ್ಣ ಸಮಾಜದ ಮೋಕ್ಷವನ್ನು ಪ್ರತಿಪಾದಿಸುವುದಿಲ್ಲ. ಲಿಂಗಾಯತವು ತಾನೊಬ್ಬನೇ ಮೋಕ್ಷ ಹೊಂದುವುದು ಪ್ರಮುಖವಲ್ಲ ಎನ್ನುತ್ತದೆ. ಸಮಸ್ತ ಜನತೆಯ ಏಳಿಗೆಯನ್ನು ಬಯಸುವವ ತಾನೊಬ್ಬನೇ ದೇವರನ್ನು ಸೇರಿದರೆ ಹೇಗೆ? ಇದನ್ನು ಲಿಂಗಾಯತವು ಒಪ್ಪಲಿಲ್ಲ. ವೈದಿಕವು ಸೋಹಂ ಎನ್ನುತ್ತದೆ, ಅದರೆ ಲಿಂಗಾಯತವು ದಾಸೋಹಂ ಎನ್ನುತ್ತದೆ. ಲಿಂಗಾಯತರಿಗೆ ಸ್ವರ್ಗ ನರಕಗಳಿಲ್ಲ. 'ಅಯ್ಯಾ ಎಂದರೆ ಸ್ವರ್ಗ, ಎಲವೋ ಅಂದರೆ ನರಕ' ಕೇವಲ ಒಂದು ವಾಕ್ಯದಲ್ಲಿ ಸ್ವರ್ಗ ನರಕಗಳನ್ನು ಬಹು ಸುಲಭವಾಗಿ ಅರ್ಥೈಸಿದ ಧರ್ಮವಿದು.

ಮನುಕುಲದ ಚರಿತ್ರೆಯ ಚಾರಿತ್ರ್ಯದ ಕಾಲಘಟ್ಟದಲ್ಲಿ ನಾಗಾಲೋಟದಿಂದ ಕ್ರಮಿಸುತ್ತಿರುವ ತಂತ್ರಜ್ಞಾನದ ಕೊಡುಗೆಯಿಂದ ಸಾವಿರ ವರ್ಷದ ಸಾಧನೆಯನ್ನು ಒಂದು ದಶಕದಲ್ಲಿ ಮಾಡುವ ಕ್ಷಮತೆ ಇಂದಿನ ಜನಾಂಗ ಹೊಂದಿದೆ. ರಾಜ್ಯದ ಒಟ್ಟು ಜನಸಂಖ್ಯೆಯ ೩/೪ ಭಾಗ ಶಿಕ್ಷಣವಂತರು ಕನ್ನಡಿಗರು. ಅದರಲ್ಲಿ ನಾವಾರಿಗಿಂತ ಕಡಿಮೆಯಿಲ್ಲ ಎನ್ನುತ್ತದೆ ಲಿಂಗಾಯತ ಪಡೆ. ೧೨ನೆಯ ಶತಮಾನದಲ್ಲಿ ನಾವೂ ವೇದ ಉಪನಿಷತ್ತು ಬಲ್ಲವರು, ನಾವೂ ನಿಮ್ಮ(ಬ್ರಾಹ್ಮಣರ) ಸರಿಸಮಾನರು ಎಂದು ಎದೆಯುಬ್ಬಿಸಿ ನಡೆದ ಧರ್ಮವಿದು. ಇದರ ಮೂಲ ಅಂಗವಾದ ಕಾಯಕವರ್ಗದ ದಲಿತ ಸಮಾಜದಲ್ಲಿಯೂ ಮಹತ್ತರ ಬದಲಾವಣೆಯಾಗಿದೆ. ಇದಕ್ಕೆ ಸರಕಾರಗಳ ಸಾಮಾಜಿಕ ನೀತಿಯೂ ಕಾರಣ. ಲಿಂಗಾಯತ ದಮನಿತ ವರ್ಗಗಳ ಶಿಕ್ಷಣವಂತರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಳವಾಗಿದೆ. ಅವರಿಗೀಗ ಸತ್ಯ ಮತ್ತು ಮಿಥ್ಯದ ಅರಿವಿದೆ. ನಾಡಿನ ಪ್ರತಿಯೊಂದು ವಿಶ್ವವಿದ್ಯಾಲಯಗಳಲ್ಲಿ ಸಾಮಾಜಿಕ ಚಿಂತನೆಯಾಗುತ್ತಿದೆ. ಮೂಲ ಸಾಮಾಜಿಕ ಹರಿಕಾರರಾದ ಬಸವಣ್ಣನವರು, ಡಾ.ಅಂಬೇಡ್ಕರ್‌ರ ಬಗ್ಗೆ ಉಪನ್ಯಾಸಗಳು, ವಿಚಾರ ಸಂಕಿರಣಗಳು, ಚರ್ಚೆಗಳು ನಡೆಯುತ್ತಲೇ ಇರುತ್ತವೆ. ಚರ್ಚೆಯ ಹೂರಣ ಕೃತಿಗಳ ರೂಪದಲ್ಲಿ ಹೊರಬರುತ್ತದೆ. ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನ ಪರಿಚಯಿಸುವ ಬೃಹತ್ ಕಾರ್ಯವನ್ನು ಹಮ್ಮಿಕೊಂಡಿದೆ. ಬಸವಣ್ಣನವರ ಅಧ್ಯಯನ ಪೀಠಗಳು, ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರಗಳನ್ನು ತೆರೆದು ಸಮಸಮಾಜದ ಕಾರ್ಯ ಮಾಡುತ್ತಿದೆ. ಲಿಂಗಾಯತ ಧರ್ಮದ ಬಗ್ಗೆ ಪ್ರಬಂಧಗಳು, ಲಿಂಗಾಯತ ಧರ್ಮ ಸಂಶೋಧನಾ ಪ್ರಬಂಧಗಳು ಹೊರಬರುತ್ತಲಿವೆ. ಇದು ಲಿಂಗಾಯತದ ಹೋರಾಟಕ್ಕೆ ಪ್ರಶಸ್ತವಾದ ಸಮಯವಾಗಿತ್ತು. ಅದಕ್ಕೆ ರಾಜಕೀಯ ಬೆಂಬಲ ಸಿಕ್ಕಿತ್ತು. ಹೋರಾಟ ದೊಡ್ಡ ಮಟ್ಟದಲ್ಲಿ ಹಬ್ಬಿತು.

In Public domain. Digitization Muthulakshmi Research Academy

ಕೊನೆ ಟಿಪ್ಪಣಿಗಳು

೧. ವಚನ ಸಾಹಿತ್ಯ ಸಂವಾದ, ಪ್ರಜಾವಾಣಿ ಪ್ರಕಾಶನ, ಅಸಂಬದ್ಧವಾದಕ್ಕೆ ಪ್ರೇರಕರಾದವರು ಯುರೋಪಿನ ಚಿಂತಕರು, ಡಂಕಿನ ಝಳಕಿ, ಪು.ಸಂ. ೪೦

೨. ವಚನ ಸಾಹಿತ್ಯ ಸಂವಾದ, ಪ್ರಜಾವಾಣಿ ಪ್ರಕಾಶನ, ಅಸಂಬದ್ಧವಾದಕ್ಕೆ ಪ್ರೇರಕರಾದವರು ಯುರೋಪಿನ ಚಿಂತಕರು, ಡಂಕಿನ ಝಳಕಿ, ಪು.ಸಂ. ೩೮

೩. ವಚನ ಸಾಹಿತ್ಯ ಸಂವಾದ, ಪ್ರಜಾವಾಣಿ ಪ್ರಕಾಶನ, ವಚನ ಸಾಹಿತ್ಯ: ವೈದಿಕ ವಿರೋಧ ಮತ್ತು ಜಾತಿ ನಿರಸನ, ಡಾ.ಎಂ.ಎಂ.ಕಲಬುರ್ಗಿ, ಪು.ಸಂ. ೧೧

೪. ವಚನ ಸಾಹಿತ್ಯ ಸಂವಾದ, ಪ್ರಜಾವಾಣಿ ಪ್ರಕಾಶನ, ವಚನ ಸಾಹಿತ್ಯ: ಈ ಯುಕ್ತಿ ಈ ಕುಯುಕ್ತಿ ಈ ಸಂಶೋಧನೆ ಯಾಕಾಗಿ?, ದೇವನೂರ ಮಹಾದೇವ, ಪು.ಸಂ.೭೬

೫. ವಚನ ಸಾಹಿತ್ಯ ಸಂವಾದ, ಪ್ರಜಾವಾಣಿ ಪ್ರಕಾಶನ, ನೊಂದ ನೋವ ನೋಯದವರೆತ್ತ ಬಲ್ಲರಯ್ಯ?, ಡಾ.ಚಂದ್ರಶೇಖರ ಕಂಬಾರ, ಪು.ಸಂ. ೭೬

೬. ವಚನ ಸಾಹಿತ್ಯ ಸಂವಾದ, ಪ್ರಜಾವಾಣಿ ಪ್ರಕಾಶನ, ನೊಂದ ನೋವ ನೋಯದವರೆತ್ತ ಬಲ್ಲರಯ್ಯ ? ಡಾ.ಚಂದ್ರಶೇಖರ ಕಂಬಾರ, ಪು.ಸಂ. ೫೪

೭. ವಚನ ಸಾಹಿತ್ಯ ಸಂವಾದ, ಪ್ರಜಾವಾಣಿ ಪ್ರಕಾಶನ, ವಚನ ಸಾಹಿತ್ಯ: ವೈದಿಕ ವಿರೋಧ ಮತ್ತು ಜಾತಿ ನಿರಸನ, ಡಾ.ಎಂ.ಎಂ.ಕಲಬುರ್ಗಿ, ಪು.ಸಂ. ೧೧

೮. ವಚನ ಸಾಹಿತ್ಯ ಸಂವಾದ, ಪ್ರಜಾವಾಣಿ ಪ್ರಕಾಶನ, ಪಟ್ಟಭದ್ರರ ನಕಾಶೆ ಬಲಪಡಿಸುವ ಯುಕ್ತಿ, ಎಂ.ಎಸ್.ಆಶಾದೇವಿ, ಪು.ಸಂ. XI

೯. ವಚನ ಸಾಹಿತ್ಯ ಸಂವಾದ, ಪ್ರಜಾವಾಣಿ ಪ್ರಕಾಶನ, ವೈದಿಕ ವಿರೋಧಿ ನಿಲುವೇ ವಚನಕಾರರ ಮೂಲ ಗುರಿ, ಡಾ.ಬಿ.ಎಲ್.ವೇಣು, ಪು.ಸಂ. ೨೭

೧೦. ವಚನ ಸಾಹಿತ್ಯ ಸಂವಾದ, ಪ್ರಜಾವಾಣಿ ಪ್ರಕಾಶನ, ಕಣ್ಣು ಗಾಯವನು ಅರಿಯಲುಬಾರದು, ಡಾ.ಕೆ.ವೈ.ನಾರಾಯಣಸ್ವಾಮಿ, ಪು.ಸಂ. ೩೧-೩೨

೧೧. ವಚನ ಸಾಹಿತ್ಯ ಸಂವಾದ, ಪ್ರಜಾವಾಣಿ ಪ್ರಕಾಶನ, ವಚನ ಚಳುವಳಿ ಸೈದ್ಧಾಂತಿಕ ಹಿನ್ನೆಲೆಯ ಕುರಿತು, ಡಾ.ರಾಜಾರಾಮ ಹೆಗಡೆ, ಪು.ಸಂ. ೪೭

೧೨. ವೀರಶೈವ ತತ್ತ್ವಪ್ರಕಾಶ: (ಪ್ರಧಾನ ಸಂಪಾದಕರು)ಶಿ.ಶಿ.ಬಸವನಾಳ; ಪ್ರಕಟಣೆ; ಸಾಹಿತ್ಯಸಮಿತಿ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ. ೧೯೪೧; ಪು. ಸಂ. ೨೦, ೨೧, ೨

* ಶ್ರೀ ಚೆನ್ನಮಲ್ಲಿಕಾರ್ಜುನಪ್ಪನವರ ಈ ಲೇಖನವನ್ನು ಖ್ಯಾತ ಸಂಶೋಧಕ ಮತ್ತು ಲಿಂಗಾಯತ ಪುಣ್ಯಪುರುಷರಾದ ಶ್ರೀ ಶಿ.ಶಿ. ಬಸವನಾಳರು ಸಂಪಾದಿಸಿದ್ದು ಈ ಲೇಖನದ ನಿಖರತೆಗೆ ಸಾಕ್ಷಿ. ಇದನ್ನು ೧೯೪೧ರಲ್ಲಿ 'ಸಾಹಿತ್ಯ ಸಮಿತಿ' ಲಿಂಗಾಯತ ಅಭಿವೃದ್ಧಿ ಸಂಸ್ಥೆ ಧಾರವಾಡ ಇವರು ಪ್ರಕಟಿಸಿದ್ದಾರೆ.

In Public domain. Digitization Muthulakshmi Research Academy

೨. ಚಳುವಳಿ ಹಿನ್ನೆಲೆ – ಧಾರ್ಮಿಕ

ಭಾರತದಲ್ಲಿ ಧರ್ಮ ಮತ್ತು ದೇವರು ಬಹಳ ಪ್ರಮುಖ. ಸಾವಿರಾರು ವರ್ಷಗಳ ಇತಿಹಾಸದಲ್ಲಿ ದೇವರ ಅಸ್ತಿತ್ವವನ್ನು ಪ್ರಶ್ನೆ ಮಾಡುತ್ತಲಿದ್ದರೂ, ಅವನ ಇರುವಿಕೆಯನ್ನು ಮಾನ್ಯ ಮಾಡಿದ ದೇಶವಿದು. ಇಲ್ಲಿ ದೇವರು ಮುಖ್ಯ. ಇಲ್ಲೇ ಏಕೆ? ಜಗತ್ತಿನ ಯಾವ ಮೂಲೆಯಲ್ಲಿಯೂ ದೇವರು ಇರುವನೆಂಬ ನಂಬಿಕೆ ಬಹುತೇಕರಲ್ಲಿದೆ. ಅಲ್ಲದೇ ಜೀವಿಸಲು ಹಾಕಿಕೊಂಡ ಧರ್ಮಕಟ್ಟಳೆಗಳಲ್ಲಿಯೂ ಇದೆ. ಆದರೆ ವ್ಯತ್ಯಾಸವಿಷ್ಟೇ, ಅವನ ರೂಪ, ಪರಿವಾರದ ಹಾಗೂ ಸಂಖ್ಯೆಯ ಬಗ್ಗೆ. ಅವನ ಸಂಖ್ಯೆ ಹೆಚ್ಚಿಲ್ಲ, ಅವನೊಬ್ಬನೇ ಎನ್ನುವ ಧರ್ಮಗಳಿಂದು ವಿಶ್ವದ ಹೆಚ್ಚಿನ ಪ್ರದೇಶದಲ್ಲಿ ಪಸರಿಸಿವೆ. ಅವನೊಬ್ಬನಲ್ಲ ಅವನ ರೂಪ ಮೂವತ್ತು ಮೂರು ಕೋಟಿ ಎಂದೂ, ಅವನಿಗೊಂದು ಪರಿವಾರ ಸೃಷ್ಟಿಸಿ, ಅವನೊಬ್ಬ ಕೋಪಿಷ್ಠ, ಶಾಪ ಕೊಡುವ ಶೋಷಣೆಕಾರನೆಂದು ರೂಪಿಸಿದ್ದು ಅಥವಾ ಚಿತ್ರಿಸಿದ್ದು ಕೇವಲ ಭಾರತದಲ್ಲಿ ಮಾತ್ರ ಇರಬಹುದು! ದೇವರಲ್ಲಿ ಏಣಿಶ್ರೇಣಿಯನ್ನು ಕಾಣುವುದು ಭಾರತದಲ್ಲಿಯೇ. ಭಾರತದ ದೇವರು ಬಂಡವಾಳ ಶಾಹಿಯೂ ಹೌದು. ಭಾರತದಲ್ಲಿರುವ ದೇವರು ಜಗತ್ತಿನ ಅತೀ ಶ್ರೀಮಂತನಾದ ಅಂಭಾನಿಗಿಂತ ಶ್ರೀಮಂತನೂ ಹೌದು. ರಾತ್ರಿಯನ್ನು ಬೆಳಕಿಲ್ಲದೇ ಕಳೆಯುವ ನಿಸ್ಸಾಯಕ ದೇವರು ಇದೇ ದೇಶದವನೆ. ಕೆಲವು ದೇವರುಗಳ ದೇಹ ಚಿನ್ನದಿಂದ ಮಾಡಿ, ನವಧಾನ್ಯ, ತರಕಾರಿ, ಹಣ್ಣು, ಬೆಣ್ಣೆಯ ಅಲಂಕಾರ ಮಾಡಿದ್ದರೆ, ಕೆಲವು ದೇವರುಗಳು ಗುಂಡುಕಲ್ಲಿನಲ್ಲಿಯೇ ಜೀವನ ಕಳೆಯುತ್ತ ವರ್ಷಕ್ಕೆ, ಎರಡು ವರ್ಷಕ್ಕೊಮ್ಮೆ ಎಣ್ಣೆ, ನೀರು, ಅರಿಸಿನ, ಕುಂಕುಮದ ಭಾಗ್ಯವನ್ನು ಕಾಣುವ ಭಾರತವಾಸಿ ದೇವರುಗಳು. ಒಟ್ಟಾರೆಯಾಗಿ ನಮ್ಮದು ದೇವಮಯ ದೇಶ.

ಭಾರತದಲ್ಲಿ ವೈದಿಕ(ಹಿಂದೂ) ಧರ್ಮ ಎಷ್ಟು ಮಹತ್ವದ ಪಾತ್ರ ವಹಿಸುವುದೆಂದು ಡಾ. ಬಾಬಾಸಾಹೇಬರು ಪರಿಣಾಮಕಾರಿಯಾಗಿ ಹೇಳಿದ್ದಾರೆ. "ಹಿಂದೂವಿನ

In Public domain. Digitization Muthulakshmi Research Academy

ಬದುಕಿನ ಪ್ರತಿಯೊಂದು ಘಟನೆಗಳು ಧರ್ಮದಿಂದ ನಿಯಂತ್ರಿತವಾಗುತ್ತವೆ. ಬದುಕಿರುವಾಗ ಹೇಗೆ ಜೀವಿಸಬೇಕು? ಸತ್ತ ಬಳಿಕ ಅವನ ದೇಹವನ್ನು ಹೇಗೆ ವಿಸರ್ಜಿಸಬೇಕು ಎಂಬುದನ್ನೆಲ್ಲ ಧರ್ಮವೇ ಅಲ್ಲಿ ಆದೇಶಿಸುತ್ತದೆ. ಲೈಂಗಿಕಾಪೇಕ್ಷೆಗಳಲ್ಲಿ ಆತ ಹೇಗೆ? ಎಲ್ಲಿ ತೊಡಗಬೇಕೆಂದು ಹೇಳುತ್ತದೆ. ಒಂದು ಮಗು ಹುಟ್ಟಿದಾಗ ಯಾವ ಯಾವ ಆಚರಣೆಗಳನ್ನು ನಡೆಸಬೇಕು? ನಾಮಕರಣ ಹೇಗಿರಬೇಕು? ಕೇಶಮುಂಡನ ಹೇಗಾಗಬೇಕು? ಮೊದಲ ತುತ್ತನ್ನು ಮಗುವಿನ ಬಾಯಿಗೆ ಹೇಗೆ ಇಡಬೇಕು? ಅವನು ಯಾವ ಕಸಬನ್ನು ಅವಲಂಬಿಸಬೇಕು? ಯಾವ ಹೆಣ್ಣನ್ನು ಮದುವೆಯಾಗಬೇಕು? ಅವನು ಯಾರೊಡನೆ ಭೋಜನ ಮಾಡಬಹುದು? ಯಾವ ಬಗೆಯ ಆಹಾರ ಸೇವಿಸಬೇಕು? ತರಕಾರಿಯಲ್ಲಿ ಯಾವುದು ಪ್ರಶಸ್ತ? ಯಾವುದು ನಿಷಿದ್ಧ? ದಿನದ ವೇಳೆಯನ್ನು ಹೇಗೆ ಕಳೆಯಬೇಕು? ಎಷ್ಟು ಬಾರಿ ಉಣ್ಣಬೇಕು? ಎಂದು ಧರ್ಮವೆ? ನಿರ್ಧರಿಸುತ್ತದೆ"[7] ಎಂದು ವೈದಿಕ ಧರ್ಮದ ಮೌಢ್ಯವನ್ನು ವಿವರಿಸುತ್ತಾರೆ ಭಾರತದ ಸಂವಿಧಾನ ನಿರ್ಮಾತ ಡಾ.ಬಾಬಾಸಾಹೇಬರು. ಇವೆಲ್ಲಕ್ಕೂ 'ಉತ್ತರ'ಗಳನ್ನು ನೀವು ಹಿಂದೂಧರ್ಮದ ಪುರಾಣ ಪುಣ್ಯ ಕಥೆಗಳಲ್ಲದೆ ಮನು ತನ್ನ ಧರ್ಮಶಾಸ್ತ್ರದಲ್ಲಿ ನೀಡಿದ್ದಾನೆ.

ಅಧ್ಯಾಪನಮಧ್ಯಯನಂ ಯಜನಂ ಯಾಜನಾಂ ತಥಾ।

ದಾನಂ ಪ್ರತಿಗ್ರಹಂ ಚೈವ ಬ್ರಾಹ್ಮಣಾನಾಮ ಕಲ್ಪಯತ್॥[8]

"ಅಧ್ಯಾಪನ, ಅಧ್ಯಯನ, ಯಜ್ಞಮಾಡುವುದು- ಮಾಡಿಸುವುದು, ದಾನ ಕೊಡುವುದು, ದಾನವನ್ನು ತೆಗೆದುಕೊಳ್ಳುವುದು ಇವು ಆರು ಬ್ರಾಹ್ಮಣನ ಕರ್ತವ್ಯಗಳು".

ಪ್ರಜಾನಾಂ ರಕ್ಷಣಂ ದಾನಮಿಜ್ಯಾ ಧ್ಯಯನಮೇವ ಚ।

ವಿಷಯೇಷ್ವಪ್ರಸಕ್ತಿಶ್ಚ ಕ್ಷತ್ರಿಯಸ್ಯ ಸಮಾಸತಂ॥[9]

"ಪ್ರಜೆಗಳ ರಕ್ಷಣೆ, ದಾನ ಕೊಡುವುದು, ಯಾಗ ಮಾಡುವುದು, ಅಧ್ಯಯನ ಮಾಡುವುದು, ಭೋಗಗಳಲ್ಲಿ ಆಸಕ್ತಿ ಇಲ್ಲದಿರುವುದು ಇವು ಕ್ಷತ್ರಿಯನ ಕರ್ತವ್ಯಗಳು"

ಪಶೂನಾಂ ರಕ್ಷಣಂ ದಾನಮಿಜ್ಯಾಧ್ಯಯನಮೇವ ಚ।

ವಣಿಕಂ ಪಥಂ ಕುಸಿದಂ ಚ ವೈಶ್ಯಸ್ಯ ಕೃಷಿಮೇವ ಚ॥[10]

"ಪಶುಪಾಲನೆ, ದಾನ ಕೊಡುವುದು, ಹೋಮ ಮಾಡುವುದು, ಅಧ್ಯಯನ ಮಾಡುವುದು, ನೆಲ ಜಲಗಳಲ್ಲಿ ವ್ಯಾಪಾರ, ಬಡ್ಡಿ ಸಾಲ ಕೊಡುವುದು, ಕೃಷಿ ಇವು ವೈಶ್ಯನ ಕರ್ಮಗಳು"

In Public domain. Digitization Muthulakshmi Research Academy

ಏಕಮೇವ ತು ಶೂದ್ರಸ್ಯ ಪ್ರಭುಃ ಕರ್ಮ ಸಮಾದಿಶತ್।

ಏತೇಷಾಮೇವ ವರ್ಣಾನಾಂ ಶುಶ್ರೂಷಾಮನಸೂಯಯಾ॥[3]

"ಆ ಮಹಾಪ್ರಭುವಾದ ಬ್ರಹ್ಮನು, ಈ ಮೇಲಿನ ಮೂರು ವರ್ಣಗಳ ಜನರ ನಿಸ್ವಾರ್ಥಸೇವೆ ಮಾಡಿಕೊಂಡಿರುವುದನ್ನೇ ಶೂದ್ರನಿಗೆ ಕರ್ತವ್ಯವೆಂದು ಆದೇಶಿಸಿದ್ದಾನೆ".

ಇದೇ ಮಣ್ಣಿನಲ್ಲಿ ಅನೇಕ ಮೌಢ್ಯವಿರೋಧಿ ಮಹಾತ್ಮರು ಜನ್ಮ ತಳೆದಿದ್ದಾರೆ. ಅಹಿಂಸೆಯ ವಿರುದ್ಧ ಸಮರ ಸಾರಿ, ಜೈನಧರ್ಮ ಸ್ಥಾಪಿಸಿದ ಮಹಾವೀರನು ಜನಿಸಿದ ನಾಡಿದು. ಪಂಚಶೀಲಗಳನ್ನು ನೀಡಿದ ಬುದ್ಧನ ನಾಡೂ ಇದೆ. ಮಾನವರೆಲ್ಲ ಒಂದೇ. ಹುಟ್ಟಿನಿಂದ ಶ್ರೇಷ್ಠತೆ ಕನಿಷ್ಠತೆ ಬರದು. ಕಾಯಕ, ತ್ಯಾಗದಿಂದ ಪಡೆಯಬೇಕೆಂದ ಸಮತಾವಾದಿ ಬಸವಣ್ಣನು ಹುಟ್ಟಿದ್ದು ಇಲ್ಲೇ. ಸತ್ಯವೇ ಜೀವನ ಎಂದ ನಾನಕರು ಜನಿಸಿದ್ದು ಇದೆ ಮಣ್ಣಿನಲ್ಲಿ.

ಆದರೂ ನಾವು ಇಂದಿಗೂ ಹೀಗೇಕೆ?

ಉತ್ತರ ಬಹಳ ದೀರ್ಘವಾಗಿದೆ. ಗುಲಾಮಗಿರಿ ಭಾರತದ ಒಂದು ಸಂಕೇತವೇ ಎನ್ನಬಹುದು. ಅದಕ್ಕೆ ಕಾರಣ ಬಹುಪಾಲು ನಮ್ಮ ಶಿಕ್ಷಣದ ವ್ಯವಸ್ಥೆ ಮತ್ತು ನಮ್ಮ ರಕ್ತದಲ್ಲಿ ಹರಿಯುತ್ತಿರುವ ಮೌಢ್ಯ. ಇದಕ್ಕೆ ಕಾರಣವಾಗಿದ್ದು ವರ್ಣಾಶ್ರಮ. ಅದಕ್ಕೆ ಬೆನ್ನುಲುಬಾಗಿ ನಿಂತಿದ್ದು ವೈದಿಕ ಸಾಹಿತ್ಯದ, ಮನುಸ್ಮತಿ, ಯಾಜ್ಞವಲ್ಕಸ್ಮುತಿ, ವ್ಯವಹಾರಮಯೂಖ ಮುಂತಾದ ಪ್ರಮಾಣಗಳಾಗಿರುವುವು. ಈ ಗ್ರಂಥಗಳು ಚಾತುರ್ವರ್ಣಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ವರ್ಣಗಳನ್ನು ಸೃಷ್ಟಿಸಿದವು. ಸಮಾಜದಲ್ಲಿ ಮಾನವ ಹಕ್ಕುಗಳು ಕೇವಲ ಒಂದು ವರ್ಗವಾದ ಬ್ರಾಹ್ಮಣರಿಗೆ ಮೀಸಲಾಗಿತ್ತು. ಬ್ರಾಹ್ಮಣವು ಜಾತಿಯಾಗಿ ಬದಲಾಯಿತು. ಬ್ರಾಹ್ಮಣರ ಮೀಸಲಾತಿ ಅಬಾಧಿತವಾಗುಳಿಯಲು ಅವರಿಂದಲೇ ಸಾಹಿತ್ಯವನ್ನು ರಚಿಸಲಾಗಿತ್ತು. ಆ ಸಾಹಿತ್ಯಕ್ಕೆ ಧರ್ಮದ ಲೇಪನ ಮಾಡಲಾಗಿತ್ತು. ಧರ್ಮವನ್ನು ಪ್ರಸರಿಸುವ ಮತ್ತು ರಕ್ಷಣೆಯ ಕಾರ್ಯ ಬ್ರಾಹ್ಮಣನದಾಗಿತ್ತು. ಅಧರ್ಮವನ್ನು ಶಿಕ್ಷಿಸವುದು ಕ್ಷತ್ರಿಯನ ಕರ್ತವ್ಯವಾಗಿತ್ತು. ಸನಾತನ–ವೈದಿಕಧರ್ಮದ ಸಂವಿಧಾನವಾದ ಮನು ಸಿದ್ಧಾಂತದಲ್ಲಿ ಬ್ರಾಹ್ಮಣ ಹಿತರಕ್ಷಣೆಯೇ ಧರ್ಮದ ಮೂಲ ಉದ್ದೇಶವಾಗಿತ್ತು. ಭಗವಂತನ ಬಾಯಿಯಿಂದ ಜನಿಸಿದ ಬ್ರಾಹ್ಮಣ ಸಮಸ್ತ ಸಮಾಜಗಳ ಅಧಿಪತಿಯಾಗಿ ಶಕ್ತಿಶಾಲಿಯಾಗಿ ಬದಲಾದ.

In Public domain. Digitization Muthulakshmi Research Academy

ಸರ್ವಂ ಸ್ವಂ ಬ್ರಾಹ್ಮಣಸ್ಯೇದಂ ಯತ್ಕಿಂಚಿಜ್ಜಗತೀತಂ ।

ಶ್ರೇಷ್ಠೇನಾಭಿಜನೇನೇದಂ ಸರ್ವಂ ವೈ ಬ್ರಾಹ್ಮಣೋರ್ಹತಿ ।[೭]

"ಈ ಜಗತ್ತಿನಲ್ಲಿ ಏನೇನಿದೆಯೋ ಅದೆಲ್ಲ ಬ್ರಾಹ್ಮಣನ ಸ್ವತ್ತು. ತನ್ನ ಜನ್ಮದ ಅತ್ಯಂತ ಶ್ರೇಷ್ಠತೆಯಿಂದಾಗಿ ಬ್ರಾಹ್ಮಣನು ಅವೆಲ್ಲಕ್ಕೂ ಅರ್ಹನಾಗಿದ್ದಾನೆ "

ಬ್ರಾಹ್ಮಣ ಶಾಸಕಾಂಗ, ನ್ಯಾಯಾಂಗದ ಮುಖ್ಯಸ್ಥನಾದ. ಕಾರ್ಯಾಂಗ ಕ್ಷತ್ರಿಯನಿಗೆ ನೀಡಿದ, ಧರ್ಮಾಧಿಕಾರಿಯಾಗಿ ಅವನನ್ನೂ ನಿಯಂತ್ರಿಸುವ ಹಕ್ಕನ್ನು ತನ್ನ ಬಳಿ ಉಳಿಯುವಂತೆ ನೋಡಿಕೊಂಡ.

ಉತ್ತಮಾಂಗೋದ್ಭವಾಜ್ ಜ್ಯೈಷ್ಠ್ಯಾದ್ರಹ್ಮಣಶ್ಚೈವ ಧಾರಣಾತ್।

ಸರ್ವಸ್ಯೈವಾಸ್ಯ ಸ್ವರ್ಗಸ್ಯ ಧರ್ಮತೋ ಭ್ರಾಹ್ಮಣಃ ಪ್ರಭುಃ॥[೭]

"ಬ್ರಾಹ್ಮಣ ಪ್ರಜಾಪತಿ (ಭಗವಂತನ) ಬಾಯಿಂದ ಹುಟ್ಟಿದವನಾಗಿದ್ದರಿಂದ ಅವನೇ ಮೊದಲ ಸಂತಾನ ಅವನು ವೇದಗಳನ್ನು ಗ್ರಹಿಸಿರುವುದರಿಂದ ಇಡೀ ಸೃಷ್ಟಿಗೆ ಒಡೆತನದ ಹಕ್ಕು ಪಡೆದಿದ್ದಾನೆ".

ಇದು ಮನುವಿನ ಆದೇಶ. ಇದು ಸಮಾಜದ ಮೂರೂ ವರ್ಗಗಳ ಅಧಿಪತಿಯ ಹಕ್ಕನ್ನು ಬ್ರಾಹ್ಮಣನಿಗೆ ನೀಡಿದ ಹಕ್ಕಾಗಿತ್ತು.

ವೈದಿಕಧರ್ಮವು ಕರ್ಮಸಿದ್ಧಾಂತದ ಅಡಿಯಲ್ಲಿ ಜನರನ್ನು ಆಳುತ್ತಿತ್ತು. ಕರ್ಮಸಿದ್ಧಾಂತವು ಕೇವಲ ಕರ್ತವ್ಯಗಳ ಪ್ರತಿಪಾದಿಸುತ್ತದೆ. ಕರ್ಮಸಿದ್ಧಾಂತದಲ್ಲಿ ಹಕ್ಕುಗಳಿಗೆ ಸ್ಥಾನವಿಲ್ಲ. ಉಳಿದ ಮೂರು ವರ್ಗಗಳಿಗೆ ಕೇವಲ ಕರ್ತವ್ಯಗಳಿದ್ದವು. ಕ್ಷತ್ರಿಯನಿಂದ ವೈಶ್ಯ ಮತ್ತು ಶೂದ್ರವರ್ಗಗಳನ್ನು ನಿಯಂತ್ರಿಸುವ ಹಕ್ಕನ್ನು ನೀಡುತ್ತ, ಈ ಮೂರೂ ವರ್ಗಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುವುದು ಒಂದು ಒಳಸಂಚಾಗಿತ್ತು.

ಮನು ತಂದಿರುವ ಒಂದು ಶಾಸನವನ್ನು ನೋಡಿ. ಶೂದ್ರನ ಕಾರ್ಯ ಯಾವುದು ಎಂದು ಮನುವಿನ ವೈದಿಕ ಧರ್ಮ ನಿರ್ದೇಶನ ನೀಡುತ್ತದೆ.

ಸ್ವರ್ಗಾರ್ಥಮುಭಯಾರ್ಥಂ ವಾ ವಿಪ್ರಾನಾರಾಧಯೇತ್ತು ಸಂ।

ಜಾತಬ್ರಾಹ್ಮಣಶಬ್ದಸ್ಯ ಸಾ ಹ್ಯಸ್ಯ ಕೃತಕೃತ್ಯತಾ॥[೮]

"ಇಹಪರಗಳಲ್ಲಿ ಶ್ರೇಯಸ್ಸನ್ನು ಬಯಸುವ ಶೂದ್ರನು ಬ್ರಾಹ್ಮಣರ ಸೇವೆಯನ್ನು ಮಾಡಬೇಕು. ಬ್ರಾಹ್ಮಣ ಕೈಂಕರ್ಯವೇ ಈ ಶೂದ್ರನಿಗೆ ಸಾರ್ಥಕತೆಯು."

In Public domain. Digitization Muthulakshmi Research Academy

ಶೂದ್ರಸ್ತು ವೃತ್ತಿಮಾಕಾಂಕ್ಷನ್ ಕ್ಷತ್ರಮಾರಾಧಯೇದ್ಯದಿ।

ಧನಿನಂ ವ್ಯಾಪ್ಯುಪಾರಾಧ್ಯ ವೈಶಂ ಶೋದ್ರೋ ಜಿಜೀವಿಷೇತ್॥[೯]

"ಶೂದ್ರನು ಬ್ರಾಹ್ಮಣರಿಗೆ ಸೇವೆ ಮಾಡಲು ಸಾಧ್ಯವಾಗದೆ ಹೋದ ಪಕ್ಷದಲ್ಲಿ, ಕ್ಷತ್ರಿಯರಿಗೆ ಸೇವೆ ಮಾಡಲಿ ಅಥವಾ ಶ್ರೀಮಂತ ವೈಶ್ಯರಿಗೆ ಸೇವೆ ಮಾಡಿ, ತನ್ನ ಬೇಡಿಕೆಯನ್ನು ಗಳಿಸಲಿ.

ಭಾರತದ ಒಟ್ಟು ಜನಸಂಖ್ಯೆಯ ಶೇ.೯೬-೯೭%ರಷ್ಟು ಭಾಗವಾದ ದುಡಿಯುವ ವರ್ಗವು ಕೇವಲ ಶೇ.೨-೩%ರಷ್ಟು ವರ್ಗದವರಿಗಾಗಿ ಕಾಯಕ ಮಾಡಬೇಕಿತ್ತು. ಕಾಯಕವು ಜೀವಕ್ಕಂಟಿದ ಕರ್ಮವಾಗಿ(ಶಾಪವಾಗಿ) ಬದಲಾಗಿತ್ತು. ಇಷ್ಟು ದೊಡ್ಡಮಟ್ಟದ ಜನಸಂಖ್ಯೆಗೆ ಆತ್ಮತೃಪ್ತಿ ಅಥವಾ ಆತ್ಮಸಾಕ್ಷಿಯಾಗಿ ದುಡಿಯದೆ, ಯಾಂತ್ರಿಕವಾಗಿ ಕಾರ್ಯ ನಿರ್ವಹಿಸುವ ಕಾಯಕವು ಶ್ರದ್ಧೆಯಿಂದ ಕೂಡಿದ ಕಾಯಕವಾಗಿರಬಲ್ಲದೆ? ಕಾಯಕ ಶಾಪವಾಗಿ ಪರಿಣಮಿಸಲಾರದೆ? ಭಾರತದ ದುಡಿಯುವ ವರ್ಗಕ್ಕೆ ಕಾಯಕವು ಬ್ರಾಹ್ಮಣರ ಗುಲಾಮಗಿರಿಯ ಸಂಕೇತವಾಗಿತ್ತು.

ಕರ್ಮಸಿದ್ಧಾಂತವು ಉತ್ಪಾದನಾ ವರ್ಗವನ್ನು ನಿಷ್ಕ್ರಿಯಗೊಳಿಸಿ ಮಾನವರನ್ನು ಅಸಹಾಯಕ ಪಶುಗಳನ್ನಾಗಿ, ಕರ್ಮಕೂಪದಲ್ಲಿ ದೂಡಿ ಶೇ. ೯೭%ರಷ್ಟು ನಾಗರಿಕರನ್ನು ಗುಲಾಮರನ್ನಾಗಿ ಬದಲಾಯಿಸಿತ್ತು. "ಉದ್ದೇಶ ಹಾಗೂ ಗುರಿ ಮತ್ತೊಬ್ಬರಿಂದ ನಿರ್ಧರಿಸಲ್ಪಡುವ ವ್ಯಕ್ತಿ ಗುಲಾಮನಾಗುತ್ತಾನೆ" ಎಂಬ ಪ್ಲೇಟೋನ ಹೇಳಿಕೆ ಎಷ್ಟೊಂದು ಸತ್ಯ. ಗುಲಾಮನಿಗೆ ಗುರಿ ಇರುವುದಿಲ್ಲ. ಬೇರೆಯವರು ನಿರ್ದೇಶಿಸಿದ ಗುರಿಯನ್ನು ಸಾಧಿಸಲು ಗುಲಾಮನು ಒಂದು ಸಾಧನವಾಗುತ್ತಾನೆ. ಶೇ. ೨-೩%ರಷ್ಟು ಜನಸಂಖ್ಯೆಯ ಜನರು ಶೇ. ೯೬-೯೭%ರಷ್ಟು ಜನಸಂಖ್ಯೆಯ ವರ್ಗ ಬಸವಪೂರ್ವದ ದಿನಗಳಲ್ಲಿ ಗುಲಾಮರಾಗಿ ಜೀವನ ಸವೆಸಬೇಕಿತ್ತು.

ವಾಣಿಜ್ಯಂ ಕಾರಯೇದ್ವೈಶ್ಯಂ, ಕುಸಿದಂ ಕೃಷಿಮೇವ ಚ।

ಪಶೂನಾಂ ರಕ್ಷಣಂ ಚೈವ ದಾಸ್ಯಂ ಶೂದ್ರ ದ್ವಿಜನ್ಮನಾಂ॥[೧೦]

"ಪ್ರತಿಯೊಬ್ಬ ವ್ಯಾಪಾರಿ ವರ್ಗದವನು ವ್ಯಾಪಾರದಲ್ಲಿ ನಿರತನಾಗಿರಲು ಅಥವಾ ಸಾಲ ಕೊಡುವ ವ್ಯವಹಾರದಲ್ಲಿ ತೊಡಗಿರಲು ಅಥವಾ ಕೃಷಿ, ಪಶುಪಾಲನೆ ಮಾಡಲು ರಾಜನು ಅಪ್ಪಣೆ ಮಾಡಬೇಕು. ಅದರಂತೆ ಪ್ರತಿ ಸೇವಾ ವರ್ಗದವನು ಬ್ರಾಹ್ಮಣರ ಸೇವೆಯಲ್ಲಿ ನಿರತನಾಗಿರುವಂತೆ ಅಪ್ಪಣೆ ಮಾಡಬೇಕು"[೧೧] ಎನ್ನುತ್ತಿತ್ತು ಭಾರತದ ಧರ್ಮಶಾಸ್ತ್ರ.

In Public domain. Digitization Muthulakshmi Research Academy

ಶಿಕ್ಷಣ ಕ್ಷೇತ್ರ: ಶಿಕ್ಷಣವು ಒಂದು ವರ್ಗದ ಕೌಟುಂಬಿಕ ಸ್ವತ್ತಾಗಿತ್ತು, ಸಾರ್ವತ್ರಿಕವಲ್ಲದ ಶಿಕ್ಷಣ ಶೋಷಣೆಯ ಮೂಲವಾಗಿತ್ತು. ಮೌಢ್ಯ ಬಿತ್ತಿ, ಮೌಢ್ಯ ಬೆಳೆಯುವ ಶಿಕ್ಷಣವು ಶೋಷಿಸುವವರ ವೃತ್ತಿಯಾಗಿತ್ತು. ಬಾಯಿಪಾಠ ಶಿಕ್ಷಣ ಗ್ರಹಣ ಶಕ್ತಿಯನ್ನು ವೃದ್ಧಿಸಲಿಲ್ಲ. ಹೊಸ ದಿಗಂತದದತ್ತ ದೃಷ್ಟಿ ಹರಿಸಲಿಲ್ಲ. ವೈದಿಕ ಧರ್ಮದ ಪ್ರಕ್ರಿಯೆಯ ಭಾಗವಾಗಿ ಅನಕ್ಷರತೆ ವೃದ್ಧಿಸಿತು. ಅಂದಿನ ಶಿಕ್ಷಣವೆಂದರೆ ಪುರಾಣ, ವೇದಪಠಣ, ಶ್ರುತಿಗಳ ಲಯಬದ್ಧ ಪಠಣ ಮಾಡುವುದಾಗಿತ್ತು. ದೇವರ ನಾಮಗಳನ್ನು ಮಂತ್ರಗಳೆಂದು ಪಠಿಸಲಾಗುತ್ತಿತ್ತು. ಇಂತಹವುಗಳು ಕೂಡ ಸಾರ್ವತ್ರಿಕವಾಗದೆ ಒಂದೆ ವರ್ಗಕ್ಕೆ ಸೇರಿತ್ತು.

ಬ್ರಹ್ಮಯಸ್ತ ನನುಜ್ಞಾತಮಧಿಯಾನಾದವಾಙ್ಮಯಾತ್।

ಸ ಬ್ರಹ್ಮ ಸ್ತೇಯಸಂಯಕ್ತೋ ನರಕಂ ಪ್ರತಿಪದ್ಯತೆ॥[10]

"ಸೃಷ್ಟಿಕರ್ತನ ಒಪ್ಪಿಗೆಯಿಲ್ಲದೆ ಯಾವನು ವೇದದ ಜ್ಞಾನವನ್ನು ಸಂಪಾದಿಸಲು ಹೋಗುತ್ತಾನೋ ಅವನು ಪವಿತ್ರ ಗ್ರಂಥಗಳನ್ನು ಕದ್ದ ಪಾಪಕ್ಕೆ ಗುರಿಯಾಗುತ್ತಾನೆ. ಮತ್ತು ನರಕಯಾತನೆಯಲ್ಲಿ ಮುಳುಗಿ ಹೋಗುತ್ತಾನೆ".

ಧರ್ಮೋಪದೇಶಂ ದರ್ಪೇಣ ವಿಪ್ರಾಣಾಮಸ್ಸ ಕುರ್ವತಃ

ತಪ್ತಮಾಸೇಚಯೇತ್ತೈಲಂ ವಕ್ತ್ರೇ ಶ್ರೋತ್ರೇ ಚ ಪಾರ್ಥಿವಂ ॥[11]

"ಬ್ರಾಹ್ಮಣರಿಗೆ ಅಹಂಕಾರದಿಂದ ಧರ್ಮವನ್ನು ಬೋಧಿಸುವ ಶೂದ್ರನಿಗೆ ರಾಜನು ಬಾಯಲ್ಲಿ ಹಾಗೂ ಕಿವಿಯಲ್ಲಿ ಕಾದ ಎಣ್ಣೆಯನ್ನು ಹಾಕಬೇಕು".

ಡಾ. ಬಿ.ಆರ್. ಅಂಬೇಡ್ಕರ್ ಈ ಧರ್ಮಗ್ರಂಥಗಳ ಅಧರ್ಮ ವಿಷಯಗಳನ್ನು ತಮ್ಮ ಸಮಗ್ರ ಬರೆಹಗಳಲ್ಲಿ ವಿಸ್ತಾರವಾಗಿ ಟೀಕಿಸುತ್ತಾರೆ. "ಒಬ್ಬ ಶೂದ್ರನು ಉದ್ದೇಶಪೂರ್ವಕವಾಗಿ ಅದನ್ನು ಬಳಿಕ ನೆನಪಿಸಿಕೊಳ್ಳುವ ಸಲುವಾಗಿ ವೇದವನ್ನು ಕೇಳಿಸಿಕೊಂಡರೆ, ಅವನ ಕಿವಿಯಲ್ಲಿ ಕಾದ ಸೀಸವನ್ನು ಮತ್ತು ಅರಗನ್ನು ತುಂಬಬೇಕು; ವೇದವನ್ನೇನಾದರೂ ಅವನು ಉಚ್ಚರಿಸಿದರೆ ಅವನ ನಾಲಿಗೆಯನ್ನು ಕತ್ತರಿಸಬೇಕು; ಅವನು ವೇದದಲ್ಲಿ ಪರಿಣಿತಿಯನ್ನು ಸಂಪಾದಿಸಿದರೆ ಅವನ ದೇಹವನ್ನೇ ತುಂಡುತುಂಡಾಗಿ ಕತ್ತರಿಸಿ ಹಾಕಬೇಕು"[12] ಎಂದು ಶಿಕ್ಷಣವನ್ನು ಶೂದ್ರರಿಂದ ದೂರ ಉಳಿಸಲಾಯಿತು. ಮೇಲಾಗಿ ದೇವಭಾಷೆ ಎಂದು ಪ್ರಚಲಿತಗೊಳಿಸಿ ಸಂಸ್ಕೃತವನ್ನು ಕೇವಲ ಬ್ರಾಹ್ಮಣರ ಭಾಷೆಯನ್ನಾಗಿಸಿದ ಕಾರಣ ಅದು ಜಗತ್ತಿನಿಂದ ಕಣ್ಮರೆಯಾಯಿತು.

In Public domain. Digitization Muthulakshmi Research Academy

ಶೋಷಣೆಯ ಕ್ಷೇತ್ರ: ದೇವಸ್ಥಾನಗಳು ಶೋಷಣೆಯ ಮೂಲವಾದವು. ಪುರೋಹಿತಶಾಹಿಯೂ ಪ್ರಬಲವಾಗುತ್ತ ಏಣಿ ಶ್ರೇಣಿಯ ಜಾತಿ ಪ್ರಬಲವಾಗಿ ಬೆಳೆಯಲಾರಂಭಿಸಿತು. ದೇವರ ಹೆಸರಿನಲ್ಲಿ ಭಕ್ತನ ಸುಲಿಗೆ ಹೆಚ್ಚಾಯಿತು. ಭಕ್ತನನ್ನು ಅಂಕಿತದಲ್ಲಿಟ್ಟುಕೊಳ್ಳಲು ಪುರೋಹಿತರಿಂದ ಸ್ವರ್ಗ-ನರಕಗಳನ್ನು ಸೃಷ್ಟಿಸಲಾಯಿತು.

ಲಿಂಗ ತಾರತಮ್ಯ: ಸಮಾಜದ ಸೃಷ್ಟಿಗೆ ಕಾರಣಳಾದ ಹೆಣ್ಣನ್ನು ಚಂಚಲೆಯಾಗಿ ಚಿತ್ರಿಸಲಾಗಿತ್ತು.

ಸ್ವಭಾವ ಏಷ ನಾರಿಣಾಂ ನರಾಣಮಿಹ ದೂಷಣಂ।

ಅತೋಽರ್ಥಾನ್ನ ಪ್ರಮಾದ್ಯಂತಿ ಪ್ರಮದಸು ವಿಪಶ್ಚಿತಃ॥[೧೪]

"ಪುರುಷರ ಮನಸ್ಸನ್ನು ಕೆಡಿಸುವುದೇ ನಾರಿಯರ ಸ್ವಭಾವವಾಗಿದೆ. ಅದ್ದರಿಂದ ತಿಳಿವಳಿಕೆಯುಳ್ಳ ಪ್ರಾಜ್ಞರು ಸ್ತ್ರೀಯರ ವಿಷಯದಲ್ಲಿ ಎಚ್ಚರತಪ್ಪಿ ನಡೆಯುವುದಿಲ್ಲ".

ಮನುವಿನ ಧರ್ಮಶಾಸ್ತ್ರದಲ್ಲಿ ತಾಯಿಯನ್ನು ಚಂಚಲೆಯನ್ನಾಗಿಸಲಾಗಿತ್ತು. ಹೆಣ್ಣು ಕಾಮಾಂಧಳಾಗಿ ಕಂಡಳು. ಹೆಣ್ಣು ಭೋಗದ ವಸ್ತುವಾದಳು. ಸಮಾಜದ ಅರ್ಧದಷ್ಟಿರುವ ಅವಳು ಎರಡನೆಯ ದರ್ಜೆಯ ಪ್ರಜೆಯಾಗಿ ನಿರೂಪಿತಳಾದಳು, ಅಬಲೆಯಾದಳು, ಸತ್ವಹೀನಳಾದ ಹೆಣ್ಣು ಮಕ್ಕಳನ್ನು ಹೆರುವ ಯಂತ್ರವಾಗಿದ್ದಳು.

ಅವಿದ್ವಾಂಸಮಲಂ ಲೋಕೇ ವಿದ್ವಾಂಸಮಪಿ ವಾ ಪುನಃ।

ಪ್ರಮುದಾ ಹ್ಯುತ್ಪಥಂ ನೇತುಂ ಕಾಮಕ್ರೋಧವಶಾನುಗಂ॥[೧೫]

"ಕಾಮ ಕ್ರೋಧಗಳಿಗೆ ವಶನಾದ ಮನುಷ್ಯನು, ಅವನು ಪಂಡಿತನೇ ಇರಲಿ ಪಾಮರನೇ ಇರಲಿ, ದಾರಿ ತಪ್ಪಿಸಲು ಸ್ತ್ರೀಯರು ಸಮರ್ಥರಿರುತ್ತಾರೆ."

ಮಾನವನಾದ ಮನುವಿಗೆ ಒಬ್ಬ ತಾಯಿ, ಒಬ್ಬ ಸಹೋದರಿಯೂ ಕೂಡ ಕಾಮಪಿಶಾಚಿಯಾಗಿ ಕಾಣುತ್ತಾಳೆ. ವೈದಿಕರು ಸೃಷ್ಟಿಸಿದ ಧರ್ಮ.

ಮಾತ್ರಾ ಸ್ವಸ್ರಾ ದುಹಿತ್ರಾ ವಾ ನ ವಿವಿಕ್ತಾಸನೋ ಭವೇತ್।

ಬಲವಾನಿಂದ್ರ ಯಗ್ರಾಮೋ ವಿದ್ಯಾಂಸಮಪಿ ಕರ್ಷತಿ॥[೧೬]

"ತಾಯಿಯೊಡನೆ ಸಹೋದರಿಯೊಡನೆ, ಮಗಳೊಡನೆ ನಿರ್ಜನ ಪ್ರದೇಶದಲ್ಲಿ ಗಂಡಸು ಒಂಟಿಯಾಗಿರಬಾರದು. ಏಕೆಂದರೆ ಬಲಿಷ್ಠವಾದ ಇಂದ್ರಿಯಗಳ ಸಮೂಹವು ಎಂತಹ ವಿದ್ವಾಂಸರನ್ನೂ ಸೆಳೆದುಕೊಳ್ಳುತ್ತವೆ".

ಹೆಣ್ಣು ಸಮಾಜದ ಎರಡನೇ ದರ್ಜೆಯ ಪ್ರಜೆಯಾದಳು. ಜನಸಂಖ್ಯೆಯ ಅರ್ಧದಷ್ಟಿರುವ ಹೆಣ್ಣು ಗಂಡಿನ ಅಡಿಯಾಳಾಗಿ ನಾಲ್ಕು ಗೋಡೆಗಳ ಮಧ್ಯೆ

In Public domain. Digitization Muthulakshmi Research Academy

ಬಂಧಿಯಾದಳು. ಆರ್ಥಿಕ ಉತ್ಪಾದನೆಗೆ ದುಡಿಯುವ ಕೈಗಳ ಕೊರತೆಯಾಗಿತ್ತು. ಆರ್ಥಿಕವಾಗಿ ಸಮಾಜ ಕುಗ್ಗಲಾರಂಭಿಸಿತ್ತು. ಶ್ರೀಮಂತ ಬಡವನಲ್ಲಿ ಮಧ್ಯೆ ಅಗಾಧವಾದ ಅಂತರ ಉಂಟಾಯಿತು. ಧರ್ಮವೆ ಅಧರ್ಮವಾಗಿ ಮಾರ್ಪಾಡಾಯಿತು.

ಇವೆಲ್ಲವೂ ಬ್ರಾಹ್ಮಣ ಜಾತಿಯಲ್ಲಿ ಜನಿಸಿದ ಬಸವಣ್ಣನವರಿಗೆ ಮುಜುಗರ ತಂದಿತ್ತು. ತನ್ನ ಹುಟ್ಟನ್ನೆ ತ್ಯಾಗ ಮಾಡುವ ಮಟ್ಟಿಗೆ ಬಸವಣ್ಣ ಬದಲಾದರು. "ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸಿದರಯ್ಯಾ," ಎಂದು ಕೂಡಲಸಂಗಮ ದೇವನನ್ನು ಕೇಳುತ್ತಾರೆ, "ಅಪ್ಪನು ಮಾದಾರ ಚೆನ್ನಯ್ಯ, ಬೊಪ್ಪನು ಡೋಹರ ಕಕ್ಕಯ್ಯ, ಚಿಕ್ಕಯ್ಯ ನೆಮ್ಮಯ್ಯ ಕಾಣಯ್ಯ, ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ" ನೆಂದು ತಳಸಮುದಾಯದವರನ್ನು ಅಪ್ಪಿ ಒಪ್ಪಿಕೊಳ್ಳುತ್ತಾರೆ. "ನಾನು ನಿಮ್ಮ ದಾಸಿಯ ಹಾದರಕ್ಕೆ ಹುಟ್ಟಿದ ಮಗನೆನ್ನುತ್ತಾರೆ." ಇದು ೧೨ನೆಯ ಶತಮಾನದ ಕ್ರಾಂತಿ. ಬರೆಯುತ್ತ ಹೋದರೆ ಅಂತ್ಯ ಕಾಣದ ಚರಿತ್ರೆ ಮೂಲ. ದಿಕ್ಕೂ ತಪ್ಪುತ್ತದೆ, ವಿಷಯಾಂತರವಾಗುತ್ತದೆ.

"೧೨ನೆಯ ಶತಮಾನದಲ್ಲಿ ಕರ್ನಾಟಕದಲ್ಲಿದ್ದ ಧರ್ಮಗಳೆಂದರೆ ನಾಲ್ಕು. ಇದಕ್ಕಿಂತ ಪೂರ್ವದೊಳಗ ಒಂದು ಬೌದ್ಧ, ಒಂದು ಜೈನ, ಒಂದು ವೈದಿಕ, ಒಂದು ಶೈವ. ಇವು ನಾಲ್ಕು ವಲಸೆ ಧರ್ಮಗಳು. ನಮ್ಮೊ ಅಲ್ಲವು. ಉತ್ತರ ಭಾರತದಿಂದ ಬಂದಂತ ಧರ್ಮಗಳವು. ಹನ್ನೆರಡನೆಯ ಶತಮಾನದ ಹೊತ್ತಿಗೆ ಬೌದ್ಧ ಧರ್ಮ ನಾಶವಾಗಿತ್ತು. ಜೈನ ಧರ್ಮ ದುರ್ಬಲವಾಗಿತ್ತು. ಕೇವಲ ಶೈವ ಹಾಗು ವೈದಿಕ ಧರ್ಮಗಳ ಮೇಲಾಟ ನಡೆದಿತ್ತು. ಆದರೆ ದುರ್ದೈವದ ಸಂಗತಿಯೆಂದರೆ ಈ ಶೈವಧರ್ಮವೂ ವೈದಿಕಮಯವಾಗಿತ್ತು; ಆಗ ಬಸವಣ್ಣ ಏನ ಮಾಡಿದಾ. ಈ ವೈದಿಕ ದಬ್ಬಾಳಿಕೆಯನ್ನು ವಿರೋಧ ಮಾಡಿದ. ಬರ್ರಿ ಕನ್ನಡಿಗರೆಲ್ಲರೂ ಜಾಗೃತರಾಗ್ರಿ ಹೊರಗಿನಿಂದ ಬಂದ ವಲಸೆ ಧರ್ಮಗಳು ನಮ್ಮ ಮೇಲೆ ಒತ್ತಡ ತರ್ತಾವೆ. ನಮ್ಮನ್ನು ಶೋಷಣೆ ಮಾಡ್ತಾ ಇವೆ. ಅದುದರಿಂದ ಅವುಗಳನ್ನು ಮೂಲೆಗೆ ಸರಿಸಬೇಕೆನ್ನುವ ವಿಚಾರ ಮಾಡಿ ಕನ್ನಡಿಗರನ್ನೆಲ್ಲ ಹುರುದುಂಬಿಸಿಬಿಟ್ಟ. ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ಮಡಿವಾಳ ಮಾಚಯ್ಯ, ಹಡಪದ ಅಪ್ಪಣ್ಣ ಇವರಲ್ಲದೆ ಅಕ್ಕ ಮಹಾದೇವಿ, ಸೂಳೆ ಸಂಕವ್ವೆ ಮೊದಲಾದ ಈ ಜನಸಮುದಾಯ ಅದ ಅಲ್ಲ, ಸಾಮಾನ್ಯತೆ ಅನ್ನುವ ಒಂದು ಪ್ರಜ್ಞೆ ಅದ ಅಲ್ಲ, ಅದನ್ನ ಜಾಗ್ರತೆಗೊಳಿಸಿದ ಬಸವಣ್ಣ. ಹೀಗಾಗಿ ೧೨ನೆಯ ಶತಮಾನದ ಒಂದು ಹೋರಾಟ ಅಂದರೆ ವಲಸೆ ಧರ್ಮಗಳ ವಿರುದ್ಧ ಸ್ಥಳೀಯರು

In Public domain. Digitization Muthulakshmi Research Academy

ಎತ್ತಿದಂತ ಧ್ವನಿ"[೧೭] ಇದು ಎಂ.ಎಂ. ಕಲಬುರ್ಗಿಯವರ ಧ್ವನಿಯ ಒಂದು ತುಣಕು. ಈ ಧ್ವನಿ ಕೊನೆಯ ಬಾರಿ ಕೇಳಿದ್ದು ಧಾರವಾಡದ ರಂಗ ಮಂದಿರದಲ್ಲಿ, ಮೇ ೧೦, ೨೦೧೫ರಂದು.

ಡಾ. ಎಂ.ಆರ್. ಸಾಖರೆ ಅವರು ಐವತ್ತು ವರ್ಷಗಳ ಹಿಂದೆ ಆಡಿದ್ದ ಮಾತುಗಳು ಇಂದಿಗೂ ಎಷ್ಟೊಂದು ಪ್ರಸ್ತುತ. "ಈ ಧರ್ಮದ ಪ್ರತಿಪಾದನೆ ಮತ್ತು ಪ್ರಚಾರ ಮಾಡಬೇಕಾದಂಥ ಸ್ವಾಮಿಗಳು, ಕೇವಲ ಹೆಸರಿಗಾಗಿ ಮಾತ್ರ ಸ್ವಾಮಿಗಳಾಗಿ, ಧರ್ಮದ ನಿಜವಾದ ತಿರುಳೇನು? ತತ್ವಗಳಾವುವು? ಎನ್ನುವ ಬಗ್ಗೆ ಏನು ತಿಳಿದುಕೊಳ್ಳದೆ ಕೇವಲ ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ ಎಂದು ಗಿಳಿಯಂತೆ ಪಠಿಸುತ್ತಾರೆ ಹೊರತು ಧರ್ಮದ ಮೂಲ ತತ್ವಗಳನ್ನು ವಿವರಿಸುವ ಸ್ಥಿತಿಯಲ್ಲಿ ಅವರಿಲ್ಲ."[೧೮] ಪ್ರೊಫೆಸರ್ ಸಾಖರೆಯವರು ಹೇಳಿದಂತೆ ಲಿಂಗಾಯತ ಧರ್ಮವನ್ನು ಹರಡಬೇಕಾದ ಜಂಗಮರು ಮಠದಲ್ಲಿ ಭಕ್ತರ ಕಾಣಿಕೆಯನ್ನು ಎಣಿಸುತ್ತ, ಹೋಳಿಗೆಯನ್ನು ಸವಿಯುತ್ತ, ಸಭೆಗಳಲ್ಲಿ ಷಟ್ಸ್ಥಲ ಪಂಚಾಚಾರಗಳನ್ನು ಹೇಳುತ್ತ, ಮಠದಲ್ಲಿ ಐಷಾರಾಮಿ ಜೀವನ ಕಳೆಯುತ್ತಲಿದ್ದರು. ೨೦೧೭ರಲ್ಲಿ ಲಿಂಗಾಯತ ಹೋರಾಟ ಪ್ರಾರಂಭವಾಗಿದ್ದು ಬಸವಣ್ಣನವರ ಕಲ್ಪನೆಯ ಜಂಗಮರಿಂದಲೂ (ವಿರಕ್ತ) ಅಲ್ಲ. ಅಥವಾ ಶೈವ ಜಂಗಮರಿಂದಲೂ ಅಲ್ಲ (ಗುರು ವರ್ಗದ ಪಂಚಚಾರ್ಯರು). ಇತಿಹಾಸ ಹೇಳುವಂತೆ ಲಿಂಗಾಯತ ಧರ್ಮವನ್ನು ಕಟ್ಟಿದವರು ಜನಸಾಮಾನ್ಯರು, ಅದಕ್ಕೆ ದಿಕ್ಕು ತೋರಿಸಿದವರು ಅಮಾತ್ಯರಾದ ಬಸವಣ್ಣನವರು. ಕಾಕತಾಳೀಯ ಎಂಬಂತೆ ೨೦೧೭ರ ಲಿಂಗಾಯತ ಹೋರಾಟವು ಪ್ರಾರಂಭವಾಗಿದ್ದು ಬೀದರ್‌ನ ಸಾಮಾನ್ಯ ಜನರಿಂದ, ಅದಕ್ಕೆ ದಿಕ್ಕೂ ದೆಸೆ ನೀಡಿದ್ದು ಇಂದು ಸಚಿವರು ಎನಿಸಿಕೊಳ್ಳುವ ಅಮಾತ್ಯರಿಂದ.

ಕೊನೆ ಟಿಪ್ಪಣಿಗಳು

೧. ಡಾ.ಬಿ.ಆರ್.ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು,ಸಂಪುಟ ೩ , ಪು.ಸಂ.೨–೪

೨. ಮನುಸ್ಮೃತಿ: ಅನು: ಶೇಷ ನವರತ್ನ : ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ: ಅಧ್ಯಾಯ ೧. ಶ್ಲೋಕ ೮೮.: ಪು. ಸಂ. ೨೦.

೩. ಮನುಸ್ಮೃತಿ: ಅನು: ಶೇಷ ನವರತ್ನ: ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ: ಅಧ್ಯಾಯ ೧, ಶ್ಲೋಕ ೮೯: ಪು. ಸಂ. ೨೦.

೪. ಮನುಸ್ಮೃತಿ: ಅನು: ಶೇಷ ನವರತ್ನ: ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ: ಅಧ್ಯಾಯ ೧, ಶ್ಲೋಕ ೯೦. ಪು. ಸಂ: ೨೦.

೫. ಮನುಸ್ಮೃತಿ: ಅನು: ಶೇಷ ನವರತ್ನ: ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ: ಅಧ್ಯಾಯ ೧, ಶ್ಲೋಕ ೯೧: ಪು. ಸಂ. ೨೦.

In Public domain. Digitization Muthulakshmi Research Academy

೬. ಮನುಸ್ಮೃತಿ: ಅನು : ಶೇಷ ನವರತ್ನ: ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ : ಅಧ್ಯಾಯ ೧, ಶ್ಲೋಕ ೧೦೦: ಪು. ಸಂ. ೨೨.
೭. ಮನುಸ್ಮೃತಿ : ಶ್ಲೋಕ ೯೩; ಅನುವಾದ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು ಸಂಪುಟ ೩; ಪು.ಸಂ.೧೨೬.
೮. ಮನುಸ್ಮೃತಿ : ಅನು: ಶೇಷ ನವರತ್ನ: ಪ್ರಕಾಶಕರು: ಸಮಾಜ ಪುಸ್ತಕಾಲಯ, ಧಾರವಾಡ : ಅಧ್ಯಾಯ ೧೦, ಶ್ಲೋಕ ೧೨೨. : ಪು. ಸಂ. ೪೭೨.
೯. ಮನುಸ್ಮೃತಿ : ಅನು :ಶೇಷ ನವರತ್ನ: ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ: ಅಧ್ಯಾಯ ೧೦, ಶ್ಲೋಕ ೧೨೧: ಪು. ಸಂ. ೪೭೨.
೧೦. ಮನುಸ್ಮೃತಿ: ಅನು :ಶೇಷ ನವರತ್ನ: ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ: ಅಧ್ಯಾಯ – ೮ ಶ್ಲೋಕ ೪೧; ಪು.ಸಂ. ೩೭೮
೧೧. ಮನುಸ್ಮೃತಿ : ಅನು :ಶೇಷ ನವರತ್ನ: ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ: ಅಧ್ಯಾಯ – ೨ ಶ್ಲೋಕ ೧೧೬, :ಪು.ಸಂ. ೫ ೨
೧೨. ಮನುಸ್ಮೃತಿ : ಅನು:ಶೇಷ ನವರತ್ನ: ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ: ಅಧ್ಯಾಯ – ೮ ಶ್ಲೋಕ ೨೭೨ ; ಪು.ಸಂ. ೩೫೧
೧೩. ಡಾ.ಬಾಬಾ ಸಾಹೇಬ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು ಸಂಪುಟ–೩
೧೪. ಮನುಸ್ಮೃತಿ : ಅನು: ನವರತ್ನ: ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ: ಅಧ್ಯಾಯ ೨, ಶ್ಲೋಕ ೨೧೩: ಪು. ಸಂ. ೭೨.
೧೫. ಮನುಸ್ಮೃತಿ ಅನು : ನವರತ್ನ: ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ: ಅಧ್ಯಾಯ ೨, ಶ್ಲೋಕ ೨೧೪: ಪು. ಸಂ.೭೨.
೧೬. ಮನುಸ್ಮೃತಿ ಅನು : ನವರತ್ನ: ಪ್ರಕಾಶಕರು: ಸಮಾಜ ಪುಸ್ತಕಾಲಯ, ಧಾರವಾಡ: ಅಧ್ಯಾಯ ೨, ಶ್ಲೋಕ ೨೧೫: ಪು. ಸಂ. ೭೨.
೧೭. ಡಾ. ಎಂ.ಎಂ.ಕಲಬುರ್ಗಿ ಲಿಂಗಾಯತ ಸ್ವತಂತ್ರ ಧರ್ಮ; ಲೇಖಕರು; ಡಾ. ಎಂ.ಎಂ. ಕಲಬುರ್ಗಿ; ಪ್ರಕಾಶಕರು; ಲಡಾಯಿ ಪ್ರಕಾಶನ ಗದಗ; ಪು.ಸಂ.೬೭–೬೭.
೧೮. ಲಿಂಗಾಯತ ಸಂಸ್ಕೃತಿ ಡಾ. ತೋಂಟದ ಸಿದ್ಧಲಿಂಗಶ್ರೀಗಳ ಅಭಿನಂದನ; ಲಿಂಗಾಯತ ಧರ್ಮ ಸ್ಥಾನಮಾನ, ಲೇಖಕರು: ಪ್ರೊ, ಎಂ.ಆರ್. ಸಾಖರೆ: ಪು. ಸಂ. ೧೮೦.

In Public domain. Digitization Muthulakshmi Research Academy

೩. ಚಳುವಳಿ ಹಿನ್ನೆಲೆ–ರಾಜಕೀಯ

ಯು.ಪಿ.ಎ. ಎರಡನೆಯ ಆಳ್ವಿಕೆಯಲ್ಲಿ ಕೇಂದ್ರ ಸರಕಾರದ ಚುಕ್ಕಾಣಿ ಕಾಂಗ್ರೆಸ್ ಪಕ್ಷದ ಕೈಯಲ್ಲಿತ್ತು. ಆದರೆ ಅದು ಅನೇಕ ಹಗರಣಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿತ್ತು. 'ಗುಜರಾತ್ ಮಾದರಿ' ಎಂದು ದೇಶದಲ್ಲೆಡೆ ಪ್ರಸಿದ್ಧಿಗೆ ಬರಲಾರಂಭಿಸಿದ್ದ ಮೋದಿ ಎಂಬ ಮಾಂತ್ರಿಕ ಭಾ.ಜ.ಪ.ದ ಎದುರಾಳಿಗಳಷ್ಟೇ ಅಲ್ಲದೆ ತನ್ನದೇ ಪಕ್ಷದ ಹಳೆಹುಲಿಗಳನ್ನು ಒಂದೊಂದಾಗಿ ಗವಿಗೆ ತಳ್ಳಿದ್ದ. 'ಕೇಂದ್ರಕ್ಕೆ ನಾನೇ' ಎಂದು ಗುಟುರು ಹಾಕುತ್ತಿದ್ದ ಗುಜರಾತಿ. ಅವನ ಕನಸಿಗೆ ಸಾಥ್ ನೀಡಿದ್ದವು ಭಾರತದ ಮಾಧ್ಯಮಗಳು. ಬರಲಿರುವ(೨೦೧೪) ಲೋಕಸಭೆಯ ಚುನಾವಣೆಗಳಿಗಿಂತ ಪೂರ್ವದಲ್ಲಿಯೇ ಭೌತಿಕವಾಗಿ ಸೋತು ಹೋಗಿತ್ತು ಕಾಂಗ್ರೆಸ್ ಪಕ್ಷ.

ಇತ್ತ ಕರ್ನಾಟಕ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಕರ್ನಾಟಕದ ಬಿ.ಜೆ.ಪಿ.ಗೆ ಅನೇಕ ಹಗರಣಗಳು ಸುತ್ತಿಕೊಂಡಿದ್ದವು. ೨೦೦೮ರಿಂದ ೨೦೧೩ರ ಅವಧಿಯಲ್ಲಿ ಭಾ.ಜ.ಪ. ಮೂವರು ಮುಖ್ಯಮಂತ್ರಿಗಳು ಬದಲಾಗಿದ್ದರು. ಆದರೆ ಸರಕಾರವನ್ನು ಮರಳಿ ಅಧಿಕಾರಕ್ಕೆ ತರುವ ತಾಕತ್ತು ಭಾ.ಜ.ಪ.ದ ನಾಯಕರಿಗೆ ಉಡುಗಿಹೋಗಿತ್ತು. ೨೦೦೮ರಿಂದ ವಿಧಾನಸೌಧದ ಮೂರನೆಯ ಮಹಡಿಯಲ್ಲಿ ಪ್ರತಿಷ್ಠಾಪನೆಗೊಂಡ ಭಾರತೀಯ ಜನತಾ ಪಕ್ಷ ೨೦೧೩ರ ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲು ಕಂಡಿತ್ತು. ಆಗ ಗಣಿಧೂಳು ಕರ್ನಾಟಕದ ತುಂಬ ಹರಡಿತ್ತು. ರೆಡ್ಡಿಗಳ ವಿರುದ್ಧ ತೊಡೆ ತಟ್ಟಿದ್ದ ಅಹಿಂದದ ನಾಯಕರಾದ ಸಿದ್ದರಾಮಯ್ಯ 'ನಾನು ಇಲ್ಲವೇ ನೀನು ನೋಡೇ ಬಿಡೋಣ' ಎಂದಿದ್ದರು. ೨೦೧೩ರ ಚುನಾವಣೆಯಲ್ಲಿ ಅಹಿಂದ ನಾಯಕನಿಗೆ ಜಯಲಕ್ಷ್ಮಿ ಹಾರ ಹಾಕಿದ್ದಳು. ಲಿಂಗಾಯತರ ಪಕ್ಷವೆಂಬ ಹಣೆಪಟ್ಟಿ ಅಂಟಿಸಿಕೊಂಡಿದ್ದ ಭಾರತಿಯ ಜನತಾ ಪಕ್ಷವನ್ನು ಅಹಿಂದ ನಾಯಕ ಸೋಲಿಸಿಬಿಟ್ಟಿದ್ದರು.

In Public domain. Digitization Muthulakshmi Research Academy

ಕರ್ನಾಟಕದಲ್ಲಿ ಮಾತ್ರ ಗೆಲುವು ಕಂಡಿದ್ದ ಕಾಂಗ್ರೆಸ್ ಪಕ್ಷಕ್ಕೆ ಮರುಭೂಮಿಯಲ್ಲಿ ನೀರು ಕಂಡಂತಾಗಿತ್ತು. ಮರುವರ್ಷ(೨೦೧೪) ನಡೆಯಲಿರುವ ಲೋಕಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಹೀನಾಯ ಸೋಲು ಕಾಣಲಿತ್ತು. ಆದರೆ ಇತ್ತ ಕರ್ನಾಟಕದಲ್ಲಿ ಜನತಾಪಕ್ಷದಲ್ಲಿ ಪಳಗಿದ ನಾಯಕನ ಕೈಗೆ ಮುಖ್ಯಮಂತ್ರಿಯ ಪದವಿ ಬಂದಿತ್ತು. ಲಿಂಗಾಯತ ನಾಯಕರ ವಿರುದ್ಧ ತೊಡೆ ತಟ್ಟಿ ಅಧಿಕಾರಕ್ಕೆ ಏರಿದ್ದ ಅಹಿಂದ ನಾಯಕನಾದ ಸಿದ್ದರಾಮಯ್ಯನವರ ಯಾವುದೇ ನಿರ್ಣಯವು 'ಅಹಿಂದ ಪರ' ಎಂದು ಮಾಧ್ಯಮಗಳು ಪುಕಾರು ಎಬ್ಬಿಸುತ್ತಿದ್ದವು. ಸಮಾಜವಾದಿ ಸಿದ್ದರಾಮಯ್ಯನವರು ಮಾಧ್ಯಮ ಹಾಗೂ ಪಟ್ಟಭದ್ರ ಹಿತಾಸಕ್ತರಿಗೆ 'ಕುರುಬರ' ನಾಯಕರಾಗಿ ಕಾಣುತ್ತಿದ್ದರು. ಅಹಿಂದ ವರ್ಗದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜಿಲೇಬಿಯನ್ನು ಹೊರಗಿಟ್ಟು ಅಧಿಕಾರ ಚಲಾಯಿಸುತ್ತಿದ್ದಾರೆ ಎಂದು ಮಾಧ್ಯಮಗಳು ಬಿಂಬಿಸಲಾರಂಭಿಸಿದ್ದವು.

ಸುಲಭವಾಗಿ ನಡೆಯುತ್ತಿದ್ದ ರೈಲು ಹಳಿ ತಪ್ಪಿತು. ಸಿದ್ದರಾಮಯ್ಯನವರಿಗೆ ತಮ್ಮ ತವರುಜಿಲ್ಲೆಯವರಾದ ಶ್ರೀನಿವಾಸಪ್ರಸಾದ್ ಎಂಬ ಪ್ರಭಾವಿ ದಲಿತನಾಯಕರು, ಕಂದಾಯಖಾತೆಯ ವಿಷಯವಾಗಿ ತೊಡೆ ತಟ್ಟಿದ್ದರು. ರಾಜಕಾರಣಿಗಳು ಸಾಮಾನ್ಯವಾಗಿ ಒಂದೇ ಬತ್ತಳಿಕೆಯಲ್ಲಿ ಎರಡು ಬಾಣಗಳನ್ನು ಇಡುವುದಿಲ್ಲ. ಮುನಿಸು ಹೊಗೆಯಾಗಿ, ಹೊಗೆ ಬೆಂಕಿಯ ರೂಪ ತಾಳಿತು. ಮುಖ್ಯಮಂತ್ರಿಗಳು ಕಂದಾಯಖಾತೆಯನ್ನು ಹಿಂಪಡೆದರು. ಶ್ರೀನಿವಾಸಪ್ರಸಾದ್‌ರಿಗೆ 'ಪ್ರಸಾದ' ಇಲ್ಲವೆಂದಾಗ ಕೆಂಡಾಮಂಡಲವಾದರು. 'ನನ್ನಿಂದಲೆ ಗೆದ್ದವನು ನನಗೆ ಗುಟುರು ಹಾಕವನೆ' ಎಂದರು. ನಾಲ್ಕು ಬಾರಿ ಸಂಸದ, ಕೇಂದ್ರಸಚಿವನಾಗಿದ್ದ, ಹಿಂದುಳಿದ ಸಮಾಜದ ಹಿರಿಯ ನಾಯಕರಾದ ಶ್ರೀನಿವಾಸ ಪ್ರಸಾದ್‌ರು ಪಕ್ಷದಿಂದ ಹೊರನಡೆದೇ ಬಿಟ್ಟರು. ಹಿರಿಯ ದಲಿತ ನಾಯಕರು ಕೇವಲ ಶಾಸಕರಾಗಿ ಉಳಿಯಲು ಸಾಧ್ಯವೆ? ಮಂತ್ರಿ ಪದವಿ ಹಾಗೂ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಅದೇ ಜಿಲ್ಲೆಯ ಇನ್ನೊಂದು ಕ್ಷೇತ್ರ ಗುಂಡ್ಲುಪೇಟೆಯಲ್ಲಿ ಇನ್ನೊಂದು ಆತಂಕಕಾರಿ ಘಟನೆ ಜರುಗಿತು. ಗುಂಡ್ಲುಪೇಟೆ ಲಿಂಗಾಯತ ಪ್ರಾಬಲ್ಯದ ಕ್ಷೇತ್ರ, ಈ ಕ್ಷೇತ್ರದಿಂದ ಮಹದೇವ ಪ್ರಸಾದ್ ಎಂಬ ಲಿಂಗಾಯತ ಚುನಾಯಿತರಾಗಿ ಸಹಕಾರ ಮಂತ್ರಿಯಾಗಿದ್ದರು. ಪ್ರಸಾದರ ಕಾಲುಗಳು ಯಾವುದೋ ದೊಡ್ಡ ಹಗರಣದ ಹುದುಲಿನಲ್ಲಿ ಸಿಕ್ಕಿಹಾಕಿಕೊಂಡಿವೆ ಎಂಬ ಗುಸುಗುಸು ಸುದ್ದಿ ವಿಧಾನಸೌಧದ ಮೂರನೆಯ ಮಹಡಿಯಲ್ಲಿ ಪಸರಿಸಲಾರಂಭಿಸಿತ್ತು. ಸತ್ಯ ಹೊರಬರಲಿದೆ ಎನ್ನುವ ಸಮಯದಲ್ಲಿ ಸಚಿವರು ತಮ್ಮ ಕ್ಷೇತ್ರಕ್ಕೆ ಹೋಗಿದ್ದರು. ರಾತ್ರಿ ಐ.ಬಿ.ಯಲ್ಲಿ ತಂಗಿ ಬೆಳಗ್ಗೆ ಶವವಾಗಿ ಹೊರಬಂದರು. 'ಸಚಿವರಿಗೆ ಹೃದಯಾಘಾತವಂತೆ' ಎಂದು ಮಾಧ್ಯಮಗಳು ಬೆಳ್ಳಂಬೆಳಗ್ಗೆ ಸುದ್ದಿ ಮಾಡಿದವು. ಸುದ್ದಿ ನಿಜವಾಗಿತ್ತು. ಮಹದೇವ

In Public domain. Digitization Muthulakshmi Research Academy

ಪ್ರಸಾದ್ ಬಯಲಲ್ಲಿ ಬಯಲಾಗಿದ್ದರು. ಮೈಸೂರು ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಎರಡು ಕ್ಷೇತ್ರಗಳು ಖಾಲಿಯಾಗಿದ್ದವು. ಚುನಾವಣಾ ಆಯೋಗ ಉಪಚುನಾವಣೆಗೆ ಏಪ್ರಿಲ್ ೯ ೨೦೧೭ರಂದು ಮತದಾನ ನಡೆಯಲಿ ಎಂದಿತು. ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಉಪಚುನಾವಣೆ ಬಿಸಿ ತುಪ್ಪವಾಗಿ ಪರಿಣಮಿಸಿತು. ಗೆದ್ದರೆ ನಿರಾತಂಕವಾಗಿ ಉಳಿದಿರುವ ಸಮಯವನ್ನು ಆಧಿಕಾರದಲ್ಲಿ ಕಳೆಯಬಹುದು. ಸೋತರೆ?

ಇತ್ತ ಕೇಂದ್ರದಲ್ಲಿ ಮೋದಿಯೆಂಬ ದೈತ್ಯ ಜನನಾಯಕ ಜನಪ್ರಿಯತೆಯ ಉತ್ತುಂಗದಲ್ಲಿದ್ದ. ಕಾಂಗ್ರೆಸ್ ಪಕ್ಷವನ್ನು ನಾಮಾವಶೇಷ ಮಾಡುವುದಾಗಿ ಘೋಷಿಸಿದ್ದ. ಕಾಂಗ್ರೆಸ್ ಕೇವಲ ಕೇಂದ್ರದಲ್ಲಿ ಮಾತ್ರ ಅಧಿಕಾರ ಕಳೆದುಕೊಂಡಿರಲಿಲ್ಲ. ಭಾರತದ ಒಕ್ಕೂಟದ ವ್ಯವಸ್ಥೆಯ ಎಲ್ಲ ರಾಜ್ಯಗಳಲ್ಲಿಯೂ ಆಧಿಕಾರದಿಂದ ದೂರವಾಗಿತ್ತು. ಸಿದ್ದರಾಮಯ್ಯನವರ ಸರಕಾರದ ಮೇಲೆ 'ಪಕ್ಷಾಂತರ' ಎಂಬ ಖಡ್ಗ ತೂಗುತ್ತಿತ್ತು. ಕಾಂಗ್ರೆಸ್ ಶಾಸಕರು ಮೋದಿ ಮೇನಿಯಾಗೆ ಮರುಳಾಗಿದ್ದರು, ಪಕ್ಷಾಂತರಿಯಾಗಲು ಅವಕಾಶಕ್ಕಾಗಿ ಕಾಯುತ್ತಿದ್ದರು. ಗಾಯಗೊಂಡ ಹಳೆಹುಲಿ ಯಡಿಯೂರಪ್ಪ ಬೇಟೆಯಾಡಲು ಸಿದ್ಧವಾಗಿದ್ದರು.

ಬಂದರಿಬ್ಬರು ಲಿಂಗಾಯತ ಧರ್ಮದ ಯುವನಾಯಕರು

ಉಪಚುನಾವಣೆಯೇನೋ ಘೋಷಣೆ ಆಗಿತ್ತು. ಆಳುವ ಪಕ್ಷಕ್ಕೆ ನಡುಕ ಶುರುವಾಗಿತ್ತು. 'ಇತ್ತ ದರಿ ಅತ್ತ ಪುಲಿ' ಲಿಂಗಾಯತರನ್ನು ಸೋಲಿಸಿ ಅಧಿಕಾರ ಹಿಡಿದಾಗಿತ್ತು. ಸೋತ ಲಿಂಗಾಯತ ನಾಯಕನಾದ ಯಡಿಯೂರಪ್ಪ ಗಾಯಗೊಂಡ ಹುಲಿಯಾಗಿದ್ದರು. ಚುನಾವಣೆ ನಡೆಯುವ ಕ್ಷೇತ್ರಗಳೂ ಲಿಂಗಾಯತ ಪ್ರಾಬಲ್ಯವಿರುವ ಕ್ಷೇತ್ರಗಳು. ಮೇಲಾಗಿ ಕೇಂದ್ರದಲ್ಲಿ ಭಾ.ಜ.ಪ. ಅಧಿಕಾರದಲ್ಲಿರುವ ಪಕ್ಷ, ಸಂಪನ್ಮೂಲಗಳ ಕೊರತೆ ಇಲ್ಲದಿರುವ ಪಕ್ಷ. ಅಹಿಂದ ನಾಯಕನೆಂದು ಹೆಸರು ಪಡೆದ ಮುಖ್ಯಮಂತ್ರಿಗಳು 'ಜಿಲೇಬಿ'ಯನ್ನು ಹೊರಗಿಟ್ಟು ಅಧಿಕಾರ ಚಲಾಯಿಸುತ್ತಾರೆಂದು ಮಾಧ್ಯಮಗಳು ಸೃಷ್ಟಿ ಮಾಡಿದ್ದವು (G=ಗೌಡರು. L=ಲಿಂಗಾಯತರು, B=ಬ್ರಾಹ್ಮಣರು). ಸುಳ್ಳನ್ನು ಸತ್ಯ ಮಾಡುವುದು ಅವುಗಳಿಗೆ ಹೇಳಿಕೊಡಬೇಕಾಗಿಲ್ಲ. ಮೇಲಾಗಿ ಚುನಾವಣೆ ನಡೆಯುವ ಕ್ಷೇತ್ರಗಳು ಮೈಸೂರು ಜಿಲ್ಲೆಯಲ್ಲಿದ್ದವು.

ಆಗ ಬಂದರಿಬ್ಬರು ಉತ್ತರ ಕರ್ನಾಟಕದ ಲಿಂಗಾಯತ ತರುಣ ನಾಯಕರು. ಇಬ್ಬರೂ ಮೊದಲ ಬಾರಿ ಸಚಿವರಾದರೂ ತಮಗೆ ಸಿಕ್ಕ ಅವಕಾಶವನ್ನು ಚೊಕ್ಕವಾಗಿ ನಿಭಾಯಿಸಿದವರು. ಒಬ್ಬರು ವಿಜಾಪುರ ಜಿಲ್ಲೆಯ ಬಬಲೇಶ್ವರ ಮತಕ್ಷೇತ್ರದವರು. ಇನ್ನೊಬ್ಬರು ಧಾರವಾಡ ಗ್ರಾಮೀಣ ಕ್ಷೇತ್ರದವರು. ಇವರಿಬ್ಬರೂ ವತನದಾರರೇ. ರಾಜಕೀಯ ಕುಟುಂಬದಿಂದ ಬಂದವರೇ. ಒಬ್ಬರು ಮಾಜಿ ಸಚಿವ ದಿ.

In Public domain. Digitization Muthulakshmi Research Academy
ಬಿ.ಎಂ.ಪಾಟೀಲರ ಮಗನಾದ ಎಂ.ಬಿ.ಪಾಟೀಲರು ನೀರಾವರಿ ಖಾತೆಯನ್ನು ಹೊಂದಿದ್ದರು. ವಿನಯ ಕುಲಕರ್ಣಿಯವರ ಅಜ್ಜನೂ ಶಾಸಕರಾಗಿದ್ದವರು. ಹೆಸರಿನಂತೆ ವಿನಯವಂತನಾದ ವಿನಯ ಕುಲಕರ್ಣಿ ಗಣಿಖಾತೆಯನ್ನು ಹೊಂದಿದ್ದರು. ಮುಖ್ಯಮಂತ್ರಿಗಳು ಇವರಿಬ್ಬರ ಹೆಗಲಿಗೆ ಉಪಚುನಾವಣೆಯ ಜವಾಬ್ದಾರಿಯನ್ನು ಹಾಕಿದರು. ಐದು ಸಲ ಶಾಸಕರಾಗಿ ಅನುಭವ ಹೊಂದಿದ್ದ ಎಂ.ಬಿ.ಪಾಟೀಲರು 'ನಾ ಚುನಾವಣೆ ಮಾಡತೇನಿ ಬಿಡ್ರಿ ಸರ್' ಎಂದು ಎರಡೂ ಕ್ಷೇತ್ರದ ಚುನಾವಣಾ ಜವಾಬ್ದಾರಿಯನ್ನು ಹೊತ್ತುಕೊಂಡು ತಂತ್ರ ಹೆಣೆದರು. ಮತದಾರ 'ಕೈ' ಹಿಡಿದ; ಅದರೊಂದಿಗೆ ಲಿಂಗಾಯತ ನಾಯಕರ ಕೈಯನ್ನು. ಏಪ್ರಿಲ್ ೧೩ರಂದು ಉಪಚುನಾವಣೆ ಫಲಿತಾಂಶ ಬಂತು. ಕಳಲೆ ಕೇಶವಮೂರ್ತಿ ೨೦ ಸಾವಿರಕ್ಕಿಂತ ಹೆಚ್ಚಿನ ಮತಗಳಿಂದ ಜಯಶಾಲಿಯಾಗಿದ್ದರು. ಇತ್ತ ಗುಂಡ್ಲುಪೇಟೆಯಲ್ಲಿ ಮಹದೇವ ಪ್ರಸಾದ್‌ರ ಧರ್ಮಪತ್ನಿ ಶ್ರೀಮತಿ ಗೀತಾ ಮಹದೇವ ಪ್ರಸಾದ್‌ರು ತಮ್ಮ ಎದುರಾಳಿಗಿಂತ ಹತ್ತು ಸಾವಿರ ಮತಗಳನ್ನು ಹೆಚ್ಚಿಗೆ ಪಡೆದರು. ಉಪಚುನಾವಣೆಯ ಗೆಲುವಿನ ಶ್ರೇಯ ಪಡೆದುಕೊಂಡರು ಉತ್ತರ ಕರ್ನಾಟಕದ ಯುವ ಸಚಿವರು.

ಲಿಂಗಾಯತ ರಾಜಕೀಯ

ಉಪಚುನಾವಣೆ ಫಲಿತಾಂಶ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವನ್ನು ಗಟ್ಟಿಗೊಳಿಸಿತ್ತು. ಕೇಂದ್ರದಲ್ಲಿ ಸೋತು ಸುಣ್ಣವಾದ ಕಾಂಗ್ರೆಸ್ ಪಕ್ಷಕ್ಕೆ ದೇಶದಲ್ಲಿ ನಡೆಯುವ ಪ್ರತಿಯೊಂದು ಚುನಾವಣಾ ಗೆಲುವುಗಳು ನಿತ್ರಾಣಗೊಂಡ ಮನುಷ್ಯನಿಗೆ ಎಳೆನೀರಿನ ಗಂಜಿ ಕುಡಿಸಿದಂತಾಗಿತ್ತು. ಕಾಂಗ್ರೆಸ್ ಪಕ್ಷದ ಹೈ ಕಮಾಂಡ್ 'ಕೈ ಕಮಾಲ್' ಮಾಡಿದ ಕರ್ನಾಟಕದ ಮುಖ್ಯಮಂತ್ರಿ ಹಾಗೂ ಲಿಂಗಾಯತ ಮಂತ್ರಿಗಳನ್ನು ಕೊಂಡಾಡಿತ್ತು. ಇತ್ತ ತಮ್ಮ ಮಂತ್ರಿಮಂಡಲದ ಸದಸ್ಯರಾದ ಪಾಟೀಲ, ಕುಲಕರ್ಣಿಯವರನ್ನು ಮುಖ್ಯಮಂತ್ರಿಗಳು ಮುಕ್ತಕಂಠದಿಂದ ಹೊಗಳಿದರು. ಚುನಾವಣೆಯಲ್ಲಿ ಗೆಲ್ಲಿಸಿದ ಮತದಾರನಿಗೆ ಕೃತಜ್ಞತೆ ಸಲ್ಲಿಸಲು ಕಾಂಗ್ರೆಸ್ ನಾಯಕರು ಗುಂಡ್ಲುಪೇಟೆಗೆ ಹೋಗಿದ್ದರು. ಜನ ಭರ್ಜರಿಯಾಗಿ ಸೇರಿದ್ದರು. ಇನ್ನೇನು ಸಭೆ ಪ್ರಾರಂಭವಾಗಬೇಕು. ಆಗ ಸಚಿವ ಕುಲಕರ್ಣಿಯವರು ಅಲ್ಲಿಯ ಲಿಂಗಾಯತರಿಗೆ ಶಾಶ್ವತವಾದ ಕಾಣಿಕೆ ನೀಡಬೇಕೆಂದು ಯೋಚಿಸಿದರು. ಕೆಲದಿನಗಳ ಹಿಂದೆ ಮಹಾರಾಷ್ಟ್ರ ಸರಕಾರವು ಬಸವಣ್ಣನವರ ಭಾವಚಿತ್ರವನ್ನು ಸರಕಾರಿ ಕಚೇರಿಗಳಲ್ಲಿ ಹಾಕಬೇಕೆಂದು ನಿರ್ಧರಿಸಿದ್ದು ಕುಲಕರ್ಣಿಯವರ ನೆನಪಿಗೆ ಬಂತು. ಅದನ್ನು ಕರ್ನಾಟಕದಲ್ಲಿಯೂ ಜಾರಿಗೆ ತರಬಹುದಲ್ಲ ಎಂದು ಮುಖ್ಯಮಂತ್ರಿಗಳ ಬಳಿ ಪ್ರಪೋಸಲ್ ಇಟ್ಟರು. ಖರ್ಚುವೆಚ್ಚವಿಲ್ಲದ ಸರಳ ಬೇಡಿಕೆಗೆ 'ಅಸ್ತು' ಎಂದರು ಕರ್ನಾಟಕದ ಸಾಮಾಜಿಕ

In Public domain. Digitization Muthulakshmi Research Academy

ಹರಿಕಾರ. ಇಂಥ ಸಣ್ಣ ಕೋರಿಕೆಯನ್ನು ಮಂತ್ರಿಮಂಡಲದಲ್ಲಿ ಚರ್ಚಿಸುವ ಅವಶ್ಯಕತೆಯೂ ಇರಲಿಲ್ಲ. 'ಸಿ.ಎಸ್. ಫೋನ್ ತಗೊಳಪ್ಪಾ' ಎಂದರು ಮಾನ್ಯ ಮುಖ್ಯಮಂತ್ರಿಗಳು. ಕ್ಷಣಾರ್ಧದಲ್ಲಿ ಸಂಪರ್ಕ ಸಾಧ್ಯವಾಯಿತು. ಅತ್ತ ಕರ್ನಾಟಕ ಸರಕಾರದ ಮುಖ್ಯಕಾರ್ಯದರ್ಶಿ 'ಹಲೋ ಸರ್' ಎನ್ನುತ್ತಿದ್ದಂತೆ 'ಬಸವಣ್ಣನವರ ಫೋಟೋವನ್ನು ರಾಜ್ಯ ಸರಕಾರಿ ಕಚೇರಿಗಳಲ್ಲಿ ಹಾಕಬೇಕೆಂದು ಈಗಲೆ ಆರ್ಡರ್ ಮಾಡಿ' ಎಂದರು ಸಿದ್ದರಾಮಯ್ಯ. ತುಂಬಿದ ಸಭೆಯಲ್ಲಿ ಮುಖ್ಯಮಂತ್ರಿಗಳು ತಮ್ಮ ನಿರ್ಧಾರವನ್ನು ಜಾಹೀರುಗೊಳಿಸಿದ್ದರು. ಅರ್ಧಘಂಟೆಯಲ್ಲಿ ಸರಕಾರಿ ಆದೇಶ ಜಾರಿಯಾಯಿತು. ಅದೇ ಸಭೆಯಲ್ಲಿದ್ದ ಸಚಿವ ವಿನಯ ಕುಲಕರ್ಣಿ ನನಗೆ ಫೋನಾಯಿಸಿ ಸರಕಾರದ ನಿರ್ಣಯ ತಿಳಿಸಿದ್ದರು.

ಎಂ.ಬಿ.ಪಾಟೀಲರು ೧೯೯೮ರ ವಿಧಾನಸಭಾ ಚುನಾವಣೆಯಲ್ಲಿ ಬಬಲೇಶ್ವರ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆ ಆಗಿದ್ದರು. ಎಸ್.ಎಂ.ಕೃಷ್ಣರ ಸಚಿವ ಸಂಪುಟದಲ್ಲಿ ಮಂತ್ರಿಯಾಗುವ ಅವಕಾಶವನ್ನು ಹುನಗುಂದ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶಿವಶಂಕರಪ್ಪ ಕಾಶಪ್ಪನವರು ಕಿತ್ತುಕೊಂಡಿದ್ದರು. ಮೇಲಾಗಿ ಅವರು ವಿಜಾಪುರ ಜಿಲ್ಲೆಯ ಉಸ್ತುವಾರಿ ಸಚಿವರು ಸಹ ಆಗಿಬಿಟ್ಟಿದ್ದರು. ತರುಣ ಎಂ.ಬಿ.ಪಾಟೀಲರು ಶಿಕ್ಷಣದಲ್ಲಿ ಹಿಂದುಳಿದ ಜಿಲ್ಲೆಗೆ ವಿಶ್ವವಿದ್ಯಾಲಯ ಬೇಕೆಂದರು. ಅಂದಿನ ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೆ. ಅದಕ್ಕೆ ಸಮ್ಮತಿಸಿದ್ದರು. ೨೦೦೩ರಲ್ಲಿ ಕರ್ನಾಟಕ ಮಹಿಳಾ ವಿಶ್ವವಿದ್ಯಾಲಯ ಸ್ಥಾಪನೆಯಾಗಿತ್ತು. ಶಾಸಕ ಎಂ.ಬಿ.ಪಾಟೀಲರು ಶರಣನಾಡಿನಲ್ಲಿ ಸ್ಥಾಪಿತ ವಿಶ್ವವಿದ್ಯಾಲಯಕ್ಕೆ ಶರಣರ ನಾಮಕರಣ ಮಾಡಬೇಕೆಂದಿದ್ದರು. ಆದರೆ ಅವಧಿಗಿಂತ ಮುಂಚೆ ನಡೆದ ಚುನಾವಣೆಯಲ್ಲಿ ಎಸ್.ಎಂ.ಕೆ. ಯವರು ಅಧಿಕಾರ ಕಳೆದುಕೊಂಡರು. ಅದರೊಂದಿಗೆ ವಿಶ್ವವಿದ್ಯಾಲಯದ ನಾಮಕರಣಕ್ಕೂ ಕೊಕ್ಕೆ ಬಿದ್ದಿತ್ತು. ಮುಖ್ಯಮಂತ್ರಿಯಾದ ಬಿ.ಎಸ್. ಯಡಿಯೂರಪ್ಪನವರ ಮುಂದೆ ಈ ಬೇಡಿಕೆಯನ್ನು ಇಟ್ಟಾಗ ಅವರು ಸರಿಯಾಗಿ ಸ್ಪಂದಿಸಲೇ ಇಲ್ಲ ಎನ್ನುತ್ತಾರೆ. ಸಿದ್ದರಾಮಯ್ಯ ಸರಕಾರದಲ್ಲಿ ಅಧಿಕಾರ ವಹಿಸಿಕೊಂಡ ಲಿಂಗಾಯತ ನಾಯಕರಾದ ಎಂ.ಬಿ.ಪಾಟೀಲರು ಬಹಳ ಪ್ರಭಾವಶಾಲಿ ಸಚಿವರು. ಅವರ ಶರಣಗುಣ ಜಾಗೃತವಾಯಿತು. ವಿಶ್ವವಿದ್ಯಾಲಯಕ್ಕೆ ಶರಣೆ ಅಕ್ಕಮಹಾದೇವಿ ಹೆಸರಿಡಿ ಅಂದರು. ಮರುನುಡಿಯದೆ ಅಸ್ತು ಎಂದರು ಸಮಾಜವಾದಿ ಸಿದ್ದರಾಮಯ್ಯ. 'ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ' ವಿಜಾಪುರ ಎಂದು ಮರುನಾಮಕರಣಗೊಂಡಿತು.

'ಜಿಲೇಬಿ' ವಿರೋಧಿ ಸರಕಾರದಲ್ಲಿ ಲಿಂಗಾಯತ ಮಂತ್ರಿಗಳು ಕ್ರಿಯಾಶೀಲರಲ್ಲದೆ ಪ್ರಭಾವಶಾಲಿಗಳೂ ಆಗಿದ್ದರು. ಮುಂಬರುವ ಚುನಾವಣೆಯಲ್ಲಿ ಲಿಂಗಾಯತ ಮತಗಳ ಮೇಲೆ ಅವರ ಕಣ್ಣಿತ್ತು. ರಾಜಕೀಯ ಸಂಸ್ಥೆಯಾಗಿ

In Public domain. Digitization Muthulakshmi Research Academy

ಪರಿವರ್ತಿತವಾಗಿದ್ದ ವೀರಶೈವ ಮಹಾಸಭೆ ಬಸವಣ್ಣನವರ ಭಾವಚಿತ್ರ ಸರಕಾರಿ ಕಚೇರಿಗಳಲ್ಲಿ ಹಾಕಿಸಿದ್ದು, ಮಹಿಳಾ ವಿಶ್ವವಿದ್ಯಾಲಯಕ್ಕೆ ಶರಣೆ ಅಕ್ಕಮಹಾದೇವಿಯವರ ಹೆಸರಿಟ್ಟಿದ್ದು ಮತಗಳನ್ನಾಗಿ ಪರಿವರ್ತಿಸಿಕೊಳ್ಳಲು ಬಯಸಿತ್ತು. ಅದಕ್ಕೆ ಪೂರಕವಾಗಿ ಮುಖ್ಯಮಂತ್ರಿಗಳಿಗೆ ಸಾರ್ವಜನಿಕ ಸನ್ಮಾನ ಮಾಡಿ ವೀರಶೈವ ಲಿಂಗಾಯತ ಮತಗಳನ್ನು ಬುಟ್ಟಿಯಲ್ಲಿ ಹಾಕಿಕೊಳ್ಳಲು ಯೋಜನೆ ಹಾಕಿಕೊಂಡಿತ್ತು ವೀರಶೈವ ಮಹಾಸಭೆ.

ಲಿಂಗಾಯತ ಇತಿಹಾಸದ ಮೈಲುಗಲ್ಲಾದ ಸಭೆ

ವೀರಶೈವ ಮಹಾಸಭೆಯು ಒಂದು ಅಳಿಸಲಾಗದ ಹೆಜ್ಜೆಯನ್ನಿಡಲಿತ್ತು. ಇದೊಂದು ಸಭೆ ಮುಂದೆ ದೊಡ್ಡ ವಿವಾದವನ್ನೇ ಸೃಷ್ಟಿಸಲಿದೆ ಎಂದು ಯಾರೂ ಭವಿಷ್ಯ ನುಡಿಯಲಿಲ್ಲ. ಜೂನ್ ೧೪, ೨೦೧೭ ಬುಧವಾರದಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಸಾರ್ವಜನಿಕವಾಗಿ ಅಭಿನಂದಿಸಲು ಬೃಹತ್ ಕಾರ್ಯಕ್ರಮ ಹಾಕಿಕೊಳ್ಳಲು ಯೋಜನೆ ರೂಪಿಸಿತ್ತು. ಅಂದಿನ ಸರಕಾರದಲ್ಲಿ ಅರ್ಧಡಜನ್ ಲಿಂಗಾಯತ ಸಚಿವರಿದ್ದರು. ಅವರೆಲ್ಲರನ್ನು ಸಭೆಗೆ ಆಹ್ವಾನಿಸಲಾಯಿತು. ಮುಖ್ಯಮಂತ್ರಿಗಳನ್ನು ಸಭೆಗೆ ಆಹ್ವಾನಿಸಲು ಸಚಿವಸಂಪುಟದ ಸಹೋದ್ಯೋಗಿ ಈಶ್ವರ ಖಂಡ್ರೆಯವರೊಂದಿಗೆ ಮಹಾಸಭೆಯ ಪದಾಧಿಕಾರಿಗಳು ಹೋಗಿದ್ದರು. “ತಾವು ಬಸವಣ್ಣನವರ ಭಾವಚಿತ್ರ ಸರಕಾರಿ ಕಚೇರಿಗಳಲ್ಲಿ ಅಳವಡಿಸಲು ಸೂಚಿಸಿದ್ದೀರಿ. ಶರಣೆ ಅಕ್ಕಮಹಾದೇವಿಯ ಹೆಸರನ್ನು ಮಹಿಳಾ ವಿಶ್ವವಿದ್ಯಾಲಯಕ್ಕೆ ಮರುನಾಮಕರಣ ಮಾಡಿದ್ದೀರಿ. ನಿಮ್ಮ ಈ ಕಾರ್ಯ ಲಿಂಗಾಯತರ ಮನ ಮುಟ್ಟಿದೆ. ಇಡೀ ಕರ್ನಾಟಕದ ಲಿಂಗಾಯತರ ಪರವಾಗಿ ವೀರಶೈವ ಮಹಾಸಭಾ ನಿಮಗೆ ಸಾರ್ವಜನಿಕ ಸನ್ಮಾನ ಮಾಡಲು ತೀರ್ಮಾನಿಸಿದೆ. ತಾವುಗಳು ಬಂದು ಲಿಂಗಾಯತರನ್ನು ಸಂತೋಷಗೊಳಿಸಬೇಕು” ಎಂದು ವೀರಶೈವ ಮಹಾಸಭೆಯ ಪ್ರಧಾನಕಾರ್ಯದರ್ಶಿಯಾದ ಈಶ್ವರ ಖಂಡ್ರೆಯವರು ಒಂದು ಚಿಕ್ಕ ಭಾಷಣವನ್ನೇ ಮಾಡಿದರು. ಹಸನ್ಮುಖದಿಂದಲೇ ಆಹ್ವಾನ ಸ್ವೀಕರಿಸಿ ಸಭೆಗೆ ಬರುವುದಾಗಿ ವಾಗ್ದಾನ ಮಾಡಿದರು ಕರ್ನಾಟಕದ ಜನಪ್ರಿಯ ಮುಖ್ಯಮಂತ್ರಿಗಳು.

ಬೆಂಗಳೂರು ನಗರದ ಅರಮನೆಯ ಆವರಣದಲ್ಲಿ ಲಿಂಗಾಯತ ಘನತೆಗೆ ತಕ್ಕಂತೆ ಪೆಂಡಾಲ್ ಹಾಕಲಾಯಿತು. ಮಹಾಸಭೆಯು ಪರ ಊರುಗಳಿಂದ ವೀರಶೈವ-ಲಿಂಗಾಯತರು ಬರಲು ಬಸ್ಸುಗಳ ವ್ಯವಸ್ಥೆ ಮಾಡಿತು. ಸುಮಾರು ೧೫ ಸಾವಿರದಷ್ಟು ವೀರಶೈವ ಲಿಂಗಾಯತರು ಸಭೆಯಲ್ಲಿ ಸೇರಿದ್ದರು. ಸಭೆ ಸ್ವಾಗತದೊಂದಿಗೆ ಆರಂಭವಾಯಿತು. ವೀರಶೈವ ಮಹಾಸಭೆಯ

In Public domain. Digitization Muthulakshmi Research Academy

ರಾಷ್ಟ್ರೀಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪನವರು ಮುಖ್ಯಮಂತ್ರಿಗಳಿಗೆ ಮನವಿಪತ್ರ ಓದಿ ಅರ್ಪಿಸಲು ಎದ್ದುನಿಂತರು. ಕಾರ್ಯದರ್ಶಿಗಳು ಸಿದ್ಧಪಡಿಸಿಕೊಟ್ಟ ಮನವಿಯನ್ನು ಮಹಾಸಭಾದ ಅಧ್ಯಕ್ಷರು ಚಾಚೂ ತಪ್ಪದೆ ಓದಿದರು.

೧. ಕೂಡಲಸಂಗಮದಲ್ಲಿ ವಚನ ಸಾಹಿತ್ಯ ಅಧ್ಯಯನ ಪೀಠ ಸ್ಥಾಪಿಸಬೇಕು.

೨. ಸಮುದಾಯದಲ್ಲಿ ೬೦ ಉಪಜಾತಿಗಳಿದ್ದು ಅವುಗಳನ್ನು ವೀರಶೈವ ಲಿಂಗಾಯತ ಧರ್ಮಕ್ಕೆ ಸೇರಿಸಬೇಕು.

೩. ಶರಣ ಹರಳಯ್ಯನವರ ಸ್ಮಾರಕಭವನ ನಿರ್ಮಿಸಬೇಕು.

೪. ವೀರಶೈವ ಲಿಂಗಾಯತ ಧರ್ಮವನ್ನು ಸ್ವತಂತ್ರ ಧರ್ಮವೆಂದು ಘೋಷಿಸುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಬೇಕು.

ಮನವಿಯನ್ನು ನಗುಮುಖದಿಂದಲೇ ಸ್ವೀಕರಿಸಿದರು ಚಾಣಾಕ್ಷ ನಾಯಕ ಸಿದ್ದರಾಮಯ್ಯನವರು. ನಾಲ್ಕನೆಯ ಬೇಡಿಕೆಯನ್ನು ಕೇಳಿ ಮುಗುಳ್ನಕ್ಕರು. ಈ ಬೇಡಿಕೆಯು ಕಳೆದ ನಾಲ್ಕು ವರ್ಷಗಳಿಂದ ಸಲ್ಲಿಸುತ್ತಲೇ ಬಂದಿದ್ದರು ಜಗದ್ಗುರು ಮಾತೆ ಮಹಾದೇವಿಯವರು ಮತ್ತು ಇತರೆ ಬಸವಪರ ಸಂಘಟನೆಗಳು. ಬಸವಣ್ಣನವರ ಸಮಾಜವಾದ ಸಿದ್ಧಾಂತದ ಅನುಯಾಯಿಯಾದ ಸಿದ್ದರಾಮಯ್ಯನವರಿಗೆ ನ್ಯಾಯ ಒದಗಿಸುವ ಅವಕಾಶ ಬಂದೊದಗಿತ್ತು. ಮುತ್ಸದ್ದಿ ರಾಜಕಾರಣಿಯಾದ ಅವರು ಇದನ್ನು ರಾಜಕೀಯವಾಗಿ ಹೇಗೆ ಬಳಸಿಕೊಳ್ಳಬೇಕೆಂಬ ಚಾಣಕ್ಯ ನೀತಿ ಅವರ ತಲೆಯಲ್ಲಿ ಸುಳಿದುಹೋಯಿತು. "ವೀರಶೈವ ಲಿಂಗಾಯತ ಧರ್ಮವನ್ನು ಸ್ವತಂತ್ರ ಧರ್ಮವೆಂದು ಘೋಷಿಸುವಂತೆ ಕೇಂದ್ರ ಸರಕಾರಕ್ಕೆ ಶಿಪಾರಸ್ಸು ಮಾಡುತ್ತೇನೆ" ಎಂದು ಹತ್ತು ಶಬ್ದಗಳನ್ನು ಸಭೆಯಲ್ಲಿ ನುಡಿದುಬಿಟ್ಟರು. ಅದು ಎಂತಹ ಅನಾಹುತ ಸೃಷ್ಟಿಸಬಲ್ಲದು ಎಂಬ ಅರಿವಿತ್ತು ಅವರಿಗೆ. ಹತ್ತು ಜನ ಲಿಂಗಾಯತ ಮುಖ್ಯಮಂತ್ರಿಗಳು ತೆಗೆದುಕೊಳ್ಳದ ನಿರ್ಣಯವನ್ನು ಅಹಿಂದ ಮುಖ್ಯಮಂತ್ರಿ ಎಂದು ಕರೆಸಿಕೊಂಡಿದ್ದ ಮುಖ್ಯಮಂತ್ರಿಗಳು ಕ್ಷಣಾರ್ಧದಲ್ಲಿ ತೆಗೆದುಕೊಂಡಿದ್ದರು. ಅದರ ಸಾಧಕಬಾಧಕಗಳನ್ನು ಎದುರಿಸುವ ಶಕ್ತಿಯು ಅವರಲ್ಲಿತ್ತು. ಮಾತು ಮುಂದುವರಿಸುತ್ತ ಲಿಂಗಾಯತರೂ ತಲೆ ಕೆಡಿಸಿಕೊಳ್ಳದ ಒಂದು ಪ್ರಶ್ನೆಯನ್ನು ವೇದಿಕೆ ಮೇಲಿದ್ದವರಿಗೆ ಕೇಳಿದರು. "ವೀರಶೈವ, ಲಿಂಗಾಯತ ಎಂಬ ಜಿಜ್ಞಾಸೆ ಇದೆ. ಸರಿಯಾದ ಹೆಸರು ಯಾವುದು" ಎಂದರು. ಕಕ್ಕಾಬಿಕ್ಕಿಯಾದರು ವೀರಶೈವ ನಾಯಕರು. ವೀರಶೈವ 'ಲಿಂಗಾಯತ'ದ ಪರ್ಯಾಯ ಶಬ್ದ ಎಂದು ಇವರು ತಿಳಿದಿದ್ದರು. ರಾಜಕೀಯ ಮಾಡುವುದು, ಎದುರಾಳಿಯನ್ನು ಹಣಿಯುವ ಪಟ್ಟುಗಳನ್ನು ನಿರಂತರವಾಗಿ ಅಭ್ಯಾಸ ಮಾಡುವ ಅವರಿಗೆ ಈ ಶಬ್ದಗಳಲ್ಲಿರುವ

In Public domain. Digitization Muthulakshmi Research Academy

ವ್ಯತ್ಯಾಸವನ್ನು ಅರಿಯುವ ಗೊಡವೆಗೆ ಹೋಗಿರಲೇ ಇಲ್ಲ. ವೀರಶೈವ ಮಹಾಸಭೆಯ ಪ್ರಧಾನ ಕಾರ್ಯದರ್ಶಿಯಾಗಿ ಅನೇಕ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಈಶ್ವರ ಖಂಡ್ರೆಯವರು "ವೀರಶೈವ ಲಿಂಗಾಯತ ಧರ್ಮ" ಎಂಬ 'ಎಡಬಿಡಂಗಿ' ಹೆಸರು ಹೇಳಿದರು. ಮುಗುಳ್ನಕ್ಕರು ಮತ್ತೊಮ್ಮೆ ಮುಖ್ಯಮಂತ್ರಿಗಳು. "ಸರಿ, ಕೇಂದ್ರಕ್ಕೆ ಶಿಫಾರಸ್ಸು ಮಾಡುವ ಸಂದರ್ಭದಲ್ಲಿ ಸಮುದಾಯದ ಮುಖಂಡರ ಜತೆ ಚರ್ಚಿಸಿ ಒಮ್ಮತದ ಹೆಸರನ್ನು ಉಲ್ಲೇಖಿಸುತ್ತೇನೆ" ಎಂದರು, ಲಿಂಗಾಯತ ನಾಯಕರ ಜ್ಞಾನವನ್ನು ತಿಳಿಯುತ್ತ. ಸಭೆ ಮುಕ್ತಾಯವಾಯಿತು. ಬೆಂಕಿ ಹತ್ತಿಕೊಂಡಿತು ಇಡೀ ಕರ್ನಾಟಕಕ್ಕೆ.

ಇತಿಹಾಸದ ಹೊಸ ಪುಟ

"ವೀರಶೈವ ಲಿಂಗಾಯತ ಧರ್ಮವನ್ನು ಸ್ವತಂತ್ರ ಧರ್ಮವೆಂದು ಘೋಷಿಸುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡುತ್ತೇವೆ" ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹೇಳಿಕೆ ಇಡೀ ಕರ್ನಾಟಕಕ್ಕೆ ಸಂಚಲನ ಮೂಡಿಸಿತ್ತು. ಧಾರ್ಮಿಕ ಹಾಗೂ ಸಾಮಾಜಿಕ ರಂಗದಲ್ಲಿ ಇಂತಹ ಮಹತ್ವದ ತೀರ್ಮಾನ ಕಳೆದ ೭೦ ವರ್ಷಗಳಲ್ಲಿ ಯಾವ ಸರಕಾರಗಳು ತೆಗೆದುಕೊಂಡಿರಲಿಲ್ಲ. ಹತ್ತು ಶಬ್ದಗಳ ಈ ಹೇಳಿಕೆ ಧಾರ್ಮಿಕ ಇತಿಹಾಸದಲ್ಲಿ ಮಹತ್ವದ ಮೈಲುಗಲ್ಲಾಗಿತ್ತು. ಶತಶತಮಾನಗಳಿಂದ ಲಿಂಗಾಯತ ಧರ್ಮ ಅಸ್ತಿತ್ವದಲ್ಲಿದ್ದರೂ ಅದಕ್ಕೆ ಅರಮನೆಯ ಮಾನ್ಯತೆ ದೊರಕಿರಲೇ ಇಲ್ಲ. ಭಾರತದಲ್ಲಿ ಜನ್ಮ ತಳೆದ ಜೈನ, ಬೌದ್ಧ, ಸಿಖ್ ಧರ್ಮಗಳಿಗೆ ಅದು ಸಿಕ್ಕಿತ್ತು. ಬೌದ್ಧಧರ್ಮ ರಾಜಧರ್ಮವಾಗಿತ್ತು. ಜೈನಧರ್ಮವನ್ನು ರಾಜನೇ ಸ್ಥಾಪಿಸಿದ್ಧ. ತನ್ನ ಧರ್ಮದ ಆಚರಣೆಯನ್ನು ತಾನು ಮಾಡಿಕೊಂಡು ಮೇಲ್ಪಂಕ್ತಿ ಹಾಕಿದ್ದ. ಸಿಖ್ ಧರ್ಮಕ್ಕೆ ಮಹಾರಾಜ ರಂಜಿತ ಸಿಂಗ್ ಬೆಂಬಲ ಸಿಕ್ಕಿತ್ತು. ಆದರೆ ಲಿಂಗಾಯತ ಧರ್ಮ ಕಾಯಕಜೀವಿಗಳಿಂದ ಸ್ಥಾಪಿತವಾಗಿತ್ತು. ಪ್ರಧಾನಿಯ ಮುಂದಾಳತ್ವ ಇದ್ದರೂ ರಾಜನ ಸಮ್ಮತಿ ಇರಲಿಲ್ಲ. ಲಿಂಗಾಯತಕ್ಕೆ ರಾಜಮನ್ನಣೆ ದೊರೆಯಲಿಲ್ಲ. ಹೊಸ ಧರ್ಮದ ಆಶಯಗಳನ್ನು ಅನುಷ್ಠಾನಕ್ಕೆ ತರುವ ಮಹತ್ತರ ಕಾಲಘಟ್ಟದಲ್ಲಿ ಪ್ರಧಾನಿ ತನ್ನ ಅಧಿಕಾರವನ್ನೇ ಕಳೆದುಕೊಂಡ. ಕ್ರಾಂತಿಯ ಕಾರಣದಿಂದ ಧರ್ಮದ ಬೆಳವಣಿಗೆಗೆ ಚ್ಯುತಿ ಬಂತು. ವಿಜಯನಗರದ ಅರಸರು ಲಿಂಗಾಯತರಾದರೂ ಕಾಲಾಂತರದಲ್ಲಿ ವೈದಿಕ ಧರ್ಮದವರಾಗಿ ಮಾರ್ಪಟ್ಟರು. ಅವರು ಪ್ರಾರಂಭದ ದಿನಗಳಲ್ಲಿ ತಮ್ಮ ಅರಮನೆಯಲ್ಲಿ ಈ ಧರ್ಮ ಆಚರಿಸಿದರೂ ತಮ್ಮ ಪ್ರಜೆಗಳಿಗೆ ರಾಜ ಧರ್ಮವನ್ನು ಪ್ರಜೆಯೂ ಪಾಲಿಸಬೇಕೆಂದು ಅಪ್ಪಣೆ ಮಾಡಲಿಲ್ಲ. ಕೆಳದಿ ಅರಸರು ತಾವು ಲಿಂಗಾಯತರಾದರೂ ತಮ್ಮ ಪ್ರಜೆಗಳಿಗೆ ಲಿಂಗಾಯತ ಧರ್ಮವನ್ನು ಹೇರಲಿಲ್ಲ. ಸರ್ವಧರ್ಮಗಳ ಆಚರಣೆಗೆ ಅನುವು ಮಾಡಿಕೊಟ್ಟಿದ್ದರು. ಮೇಲಾಗಿ ಲಿಂಗಾಯತ ಅರಸರು

In Public domain. Digitization Muthulakshmi Research Academy

ಪ್ರಜಾಕಂಟಕರಾಗಿರಲಿಲ್ಲ. ಅವರು ಪ್ರಜಾಪಾಲಕರಾಗಿದ್ದರು. ತಾವು ಆಚರಿಸುವ ಧರ್ಮ ತಮ್ಮ ವೈಯಕ್ತಿಕ ಆಚರಣೆಯಾಗಿತ್ತು. ಅದನ್ನು ಅವರು ತಮ್ಮ ಅರಮನೆಗೆ ಸೀಮಿತಗೊಳಿಸಿದ್ದರು. ಇದರಿಂದ ವಿಶ್ವಧರ್ಮವಾಗಬೇಕಾಗಿದ್ದ ಧರ್ಮ, ಕೇವಲ ಕೆಲ ಪ್ರದೇಶಕ್ಕೆ ಮಾತ್ರ ಸೀಮಿತಗೊಂಡಿತ್ತು. ಸಿದ್ದರಾಮಯ್ಯನವರ ಈ ನಡೆ ಹೊಸ ಇತಿಹಾಸ ಬರೆಯಲಿತ್ತು. ಲಿಂಗಾಯತದ ಸೀಮೋಲ್ಲಂಘನವಾಗುವ ಕಾಲ ಬಂದಿತ್ತು. ಎಪ್ಪತ್ತು ವರ್ಷಗಳ ಪ್ರಜಾಪ್ರಭುತ್ವದಲ್ಲಿ ಮೊದಲ ಬಾರಿಗೆ ಚುನಾಯಿತ ಸರಕಾರವೊಂದು ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ ನೀಡಲಿತ್ತು.

ಜಂಗಮರಲ್ಲಿ ಚಾಣಾಕ್ಷ ಜಂಗಮರು ಮಾತೆ ಮಹಾದೇವಿಯವರು. ಉಡದ ಹಿಡಿತ ಅವರದು. ಬಹಳ ಜಿಗಟು ಸ್ವಭಾವದ ಹೆಣ್ಣುಮಗಳು. 'ಕಬ್ಬಿಣ ಕಾದಾಗಲೇ ಬಡಿದರೆ ಬಗ್ಗುವುದು' ಎನ್ನುವ ಸರಳ ಸಿದ್ಧಾಂತವನ್ನು ಅಕ್ಷರಶಃ ಪಾಲಿಸಿದವರು. ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ ಬಸವೋತ್ಸವ ಕಾರ್ಯಕ್ರಮವಿತ್ತು. ಭಕ್ತರೆಲ್ಲ ಅದರಲ್ಲಿ ತಲ್ಲೀನರಾಗಿದ್ದರೆ ಅಮ್ಮ ಒಬ್ಬಳೇ ಕೋಣೆಯಲ್ಲಿ. ಅವರ ಯೋಚನೆ ಬೇರೆಯದೇ ಆಗಿತ್ತು. ಚಟ್ಟನೆ ಎದ್ದು ಹೊರಟುನಿಂತರು ಮುಖ್ಯಮಂತ್ರಿಗಳ ಮನೆಗೆ. ಕೈಯಲ್ಲಿತ್ತು ಭಾರವಾದ ಮನವಿ. ಅದರಲ್ಲಿ ಮುಖ್ಯಮಂತ್ರಿಗಳ ಕಾರ್ಯವನ್ನು ಅಭಿನಂದಿಸಲಾಗಿತ್ತು. ವೀರಶೈವ ಮಹಾಸಭೆಯ ಹಿಂದಿನ ಮನವಿಗಳನ್ನು ಕೇಂದ್ರ ಸರಕಾರ ಬುಟ್ಟಿಗೆ ಹಾಕಿದ ವಿವರಗಳಿದ್ದವು. ವೀರಶೈವ ಹಿಂದೂಧರ್ಮದ ಒಂದು ಭಾಗ, ಹಿಂದೂಧರ್ಮದವರಿಗೆ ಮತ್ತೊಮ್ಮೆ ಸ್ವತಂತ್ರ ಧರ್ಮದ ಅವಶ್ಯಕತೆ ಎಲ್ಲಿದೆ? ಬಸವಣ್ಣನವರು ಸ್ಥಾಪಿಸಿದ ಧರ್ಮ ಲಿಂಗಾಯತ ಧರ್ಮ. ವೇದ ಉಪನಿಷತ್ತುಗಳನ್ನು ತುಚ್ಛೀಕರಿಸಿಯೇ ಅವರಿಂದ ಬೇರೆಯಾಗಿ ಕಟ್ಟಿಕೊಂಡ ಧರ್ಮ ಲಿಂಗಾಯತ. 'ಲಿಂಗಾಯತ' ಎಂದರೆ ಮಾತ್ರ ಈ ಧರ್ಮಕ್ಕೆ ಮಾನ್ಯತೆ ಸಿಗುವುದು. 'ವೀರಶೈವ/ ಲಿಂಗಾಯತ' ಧರ್ಮಕ್ಕೆ ಅಲ್ಲವೆಂದು ದೀರ್ಘವಾಗಿ ಬರೆದ ಮನವಿಯನ್ನು ಮುಖ್ಯಮಂತ್ರಿಗಳಿಗೆ ಹಸ್ತಾಂತರಿಸಿದರು. ಹೊರಬಂದವರೆ ಪತ್ರಿಕೆಗಳೊಂದಿಗೆ ತಮ್ಮ ಅನಿಸಿಕೆ ಹಂಚಿಕೊಂಡರು. ಬೆಂಕಿಗೆ ಬಿತ್ತು ಮತ್ತಷ್ಟು ತುಪ್ಪ. ಎದ್ದುನಿಂತರು ವೀರಶೈವವಾದಿಗಳು. ಒಬ್ಬೊಬ್ಬರಾಗಿ ಪತ್ರಿಕಾ ಹೇಳಿಕೆಗಳನ್ನು ನೀಡಲಾರಂಭಿಸಿದರು. ಅವರಲ್ಲಿ ಮೊದಲಿಗರು ಸಂಶೋಧಕ ಡಾ.ಚಿದಾನಂದಮೂರ್ತಿಯವರು.

ಹತ್ತಿದ ಬೆಂಕಿ

ಡಾ.ಚಿದಾನಂದಮೂರ್ತಿಯವರು ಜೂನ್ ೨೧, ೨೦೧೭ ಬುಧವಾರದಂದು ಒಂದು ಸುದ್ದಿಗೋಷ್ಠಿ ಕರೆದರು. ಪತ್ರಕರ್ತರು ಡಾ.ಮೂರ್ತಿಯವರ ಸುದ್ದಿಗೋಷ್ಠಿಗೆ ಮುಗಿಬಿದ್ದರು. ವೈದಿಕ ಹಿಂದೂ ಸರಕಾರದ ಒಂದು ಕಲ್ಲುಚಿಪ್ಪು ಸಹ ಅತ್ತಿಂದಿತ್ತ ಸರಿಯಬಾರದು, ಹಿಂದೂಧರ್ಮ ಅಬಾಧಿತವಾಗಿರಬೇಕು. ಗೋಷ್ಠಿಯ

In Public domain. Digitization Muthulakshmi Research Academy

ಒಂದೊಂದು ಶಬ್ದವನ್ನು ಗ್ರಹಿಸಿ ವರದಿ ಮಾಡಿದರು. 'ವೀರಶೈವ (ಲಿಂಗಾಯತ) ಸಮುದಾಯಕ್ಕೆ ಧರ್ಮದ ಸ್ವತಂತ್ರ ಸ್ಥಾನಮಾನ ನೀಡುವ ಬಗ್ಗೆ ಕೇಂದ್ರ ಸರಕಾರಕ್ಕೆ ಪತ್ರ ಬರೆಯುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭರವಸೆ ನೀಡಿರುವುದು ತಪ್ಪು. ಮೀಸಲಾತಿಗಾಗಿ ಸಮಾಜವನ್ನು ಒಡೆಯುವ ಕೆಲಸವನ್ನು ಕೆಲ ಮುಖಂಡರು ಮಾಡುತ್ತಿದ್ದಾರೆ. ವೀರಶೈವ ಸಮುದಾಯವು ಇತರ ಜಾತಿಗಳಂತೆ ಹಿಂದೂಧರ್ಮದ ಒಂದು ಶಾಖೆ. ೧೯೦೪ರಲ್ಲಿ ನಡೆದ ವೀರಶೈವ ಮಹಾಸಭೆಯಲ್ಲಿ ವೀರಶೈವರು ಹಿಂದೂಗಳು ಎಂಬ ನಿರ್ಣಯ ತೆಗೆದುಕೊಳ್ಳಲಾಗಿತ್ತು. ೧೯೪೦ರಲ್ಲಿ ನಡೆದ ಮತ್ತೊಂದು ಮಹಾಸಭೆಯಲ್ಲಿ ವೀರಶೈವರು ಹಿಂದೂಗಳಲ್ಲ ಎಂಬ ನಿರ್ಣಯ ತೆಗೆದುಕೊಳ್ಳಲಾಗಿತ್ತು. ಈ ವಿಚಾರದಲ್ಲಿ ಅವರಲ್ಲೇ ದ್ವಂದ್ವ ನಿಲುವು ಇದೆ. ಮೀಸಲಾತಿ ಆಸೆಗಾಗಿ ಮತ್ತೆ ಅಂಥದ್ದೇ ಬೇಡಿಕೆ ಇಟ್ಟಿರುವುದು ಅಪಾಯಕಾರಿ ನಡೆ. ೧೯೬೬ರ ಸುಪ್ರೀಂಕೋರ್ಟ್ ತೀರ್ಪೊಂದರಂತೆ ಹಿಂದೂಧರ್ಮದ ಸ್ವರೂಪವನ್ನು ವೀರಶೈವ ಪಂಥ ಒಳಗೊಂಡಿದೆ. ಹಿಂದೂ ವಿವಾಹ ಕಾಯ್ದೆಯಲ್ಲೂ ಅವರನ್ನು ಹಿಂದೂಗಳ ಪಟ್ಟಿಗೆ ಸೇರಿಸಲಾಗಿದೆ. ಹಿಂದೂಧರ್ಮದಿಂದ ಲಿಂಗಾಯತರನ್ನು ಬೇರ್ಪಡಿಸುವ ಅಧಿಕಾರ ಕೇಂದ್ರ ಸರಕಾರಕ್ಕಿಲ್ಲ' ಎಂದು ವೀರಶೈವ ಸಭೆಯ ನಿಲುವನ್ನು ಖಂಡಿಸಿ ಹೇಳಿಕೆ ನೀಡಿದರು. ಮುಂದುವರಿದು ವೀರಶೈವರು ಹಿಂದೂಗಳೆಂದು ಹೇಳಿದ್ದಾರೆಂಬ ಸುಪ್ರೀಂಕೋರ್ಟ್ ಆದೇಶವನ್ನು ಉದ್ಗರಿಸಿದರು. ಈ ರೀತಿಯ ಬೇಡಿಕೆಗಳು ಬ್ರಿಟಿಷರ ಒಡೆದು ಆಳುವ ನೀತಿಯ ಪರಿಣಾಮದಂತಿವೆ. 'ಬ್ರಾಹ್ಮಣರು ಜನಿವಾರ ಧರಿಸುವಂತೆ ನಾವು ಲಿಂಗಧಾರಣೆ' ಮಾಡುತ್ತೇವೆ ಅಂದ ಮಾತ್ರಕ್ಕೆ ವೀರಶೈವ ಪ್ರತ್ಯೇಕ ಧರ್ಮವಲ್ಲ. ಒಕ್ಕಲಿಗ, ಕುರುಬ ಇತರ ಜಾತಿಗಳು ಬೇಡಿಕೆ ಇಟ್ಟರೆ ಹಿಂದೂಧರ್ಮವೇ ಅಲ್ಪಸಂಖ್ಯಾತ ಧರ್ಮವಾಗುತ್ತದೆ. ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ತಿರುಕನ ಕನಸು ಕಾಣುತ್ತಿದ್ದಾರೆ' ಎಂದು ವ್ಯಂಗ್ಯವಾಡಿದರು.

ಡಾ.ಚಿದಾನಂದಮೂರ್ತಿಯವರ ವಿದ್ವತ್ತಿನ ಬಗ್ಗೆ ಲಿಂಗಾಯತರಿಗೆ ಗೌರವವಿದೆ. ಆದರೆ ಅವರ ಈ ವಾದದಲ್ಲಿ ಹುರುಳಿಲ್ಲ. ಪ್ರಜಾಪ್ರಭುತ್ವದಲ್ಲಿ ಆಳುವ ಪಕ್ಷ ಮತದಾರನ ಭಾವನೆಗಳಿಗೆ ಮನ್ನಣೆ ನೀಡಲೇಬೇಕು. ಅದನ್ನು ಮುಖ್ಯಮಂತ್ರಿಯವರು ಮಾಡಿದ್ದರು. ಅವರ ನಡೆ ತಪ್ಪು ಅಥವಾ ಸರಿ ಎಂದು ಒಂದು ಪಂಗಡದವರು ವಾದ ಮಾಡುವುದು ಎಷ್ಟು ಸರಿ? ಇವರಿಗೆ ತಪ್ಪಾಗಿ ಕಂಡ ನಿರ್ಧಾರ ಇನ್ನೊಬ್ಬರಿಗೆ ಸರಿಯಾದ ನಿರ್ಧಾರವಾಗಿರಬಹುದಲ್ಲವೇ? ಡಾ.ಮೂರ್ತಿಯವರು ವೀರಶೈವರು ಹಿಂದೂಗಳೆಂದು ಹೇಳಿದ್ದಾರೆ. "ಹೌದು, ವೀರಶೈವರು ಹಿಂದೂಗಳೆ." ಅದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ ಲಿಂಗಾಯತರು ಹಿಂದೂಗಳಲ್ಲವಲ್ಲ? ಈಗ ಸ್ವತಂತ್ರ ಧರ್ಮದ ಮಾನ್ಯತೆ

In Public domain. Digitization Muthulakshmi Research Academy

ಕೇಳುತ್ತಿದ್ದದ್ದು ಲಿಂಗಾಯತ ಧರ್ಮಕ್ಕೆ ಹೊರತು ವೀರಶೈವ ಧರ್ಮಕ್ಕಲ್ಲ.

ವೀರಶೈವ ಮಹಾಸಭೆಯನ್ನು ಕಟ್ಟಿದ್ದೇ ವೀರಶೈವರ ಹಿತ ಕಾಪಾಡಲು ಅಲ್ಲವೆ? ಆದರೆ ಅದನ್ನು ನಿರ್ಮಾಣ ಮಾಡುವಾಗ ಲಿಂಗಾಯತರು ವೀರಶೈವ ಎಂದು ಹೆಸರಿಟ್ಟು ಯಾಮಾರಿದ್ದು ಲಿಂಗಾಯತರ ದುರಂತ. ತಪ್ಪಾಗಿದ್ದನ್ನು ತಿದ್ದಿಕೊಳ್ಳೋಣ ಎಂದು ೧೯೪೦ರಲ್ಲಿ ಪ್ರಯತ್ನಿಸಿದ್ದು ಇವರಿಗೆ ಗೊಂದಲವಾಗಿ ಕಂಡರೆ ಅದಕ್ಕೆ ಯಾರು ಹೊಣೆ? ಸ್ವತಂತ್ರ ಸಂಗ್ರಾಮದ ಸಮಯದಲ್ಲಿ ದೇಶಕ್ಕೆ ಸ್ವಾತಂತ್ರ್ಯದ ಜರೂರಿತ್ತು. ಉಳಿದಿದ್ದೆಲ್ಲ ಗೌಣವಾಗಿತ್ತು. ಕಾರಣ ಆಗಲೇ ಧರ್ಮದ ಆಧಾರದಲ್ಲಿ ದೇಶ ಇಬ್ಭಾಗವಾಗಿತ್ತು. ಸ್ವತಂತ್ರ ಭಾರತವು ಧರ್ಮದ ಆಧಾರದಲ್ಲಿ ವಿಭಜನೆ ಆಗುವುದು ನಮ್ಮ ಸಂವಿಧಾನ ಕರ್ತರಿಗೆ ಹಾಗೂ ಲಿಂಗಾಯತ ಮುಖಂಡರಿಗೆ ಬೇಡವಾಗಿತ್ತು. ಅದಕ್ಕಾಗಿ ಅವರು ಭಾರತದಲ್ಲಿ ಜನ್ಮ ತಳೆದ ಧರ್ಮಗಳಾದ ಜೈನ, ಬೌದ್ಧ ಹಾಗೂ ಸಿಖ್ ಧರ್ಮಕ್ಕೂ ಈ ಕಾಯ್ದೆ ಅನ್ವಯ ಆಗುವಂತೆ ಕಾಯ್ದೆಯನ್ನು ಜಾರಿಗೆ ತರಲು ತಕರಾರು ತೆಗೆಯಲಿಲ್ಲ.

ಈ ಕಾಯ್ದೆ ಅಡಿಯಲ್ಲಿ ಜೈನ, ಬೌದ್ಧ, ಸಿಖ್ಖರು ಬರುವರು. ಲಿಂಗಾಯತರು ಕೇಳುವುದು ಇದನ್ನೇ. ಲಿಂಗಾಯತರನ್ನು ಸಹ ಬೌದ್ಧ, ಜೈನ, ಸಿಖ್ಖರಂತೆ ಪರಿಗಣಿಸಿ ಎಂದು ಮಾತ್ರ. ೧೯೬೬ರಲ್ಲಿ ಸುಪ್ರೀಂಕೋರ್ಟ್ ಹಿಂದೂಧರ್ಮದ ವ್ಯಾಖ್ಯಾನ ಮಾಡಿದೆ. ಲಿಂಗಾಯತ ಧರ್ಮಕ್ಕಲ್ಲ.

ಡಾ.ಚಿದಾನಂದಮೂರ್ತಿಯವರ ಜೂನ್ ೨೧ರ ಪತ್ರಿಕಾಗೋಷ್ಠಿಯ ಹೇಳಿಕೆಯು ಹಿರಿಯ ಶಾಮನೂರು ಶಿವಶಂಕರಪ್ಪನವರನ್ನು ಕೆರಳಿಸಿತ್ತು. ಅವರು ಡಾ.ಮೂರ್ತಿಯವರ ಹೆಸರನ್ನು ನೇರವಾಗಿ ಪ್ರಸ್ತಾಪಿಸದೆ ಅವರಿಗೆ ಹೀಗೆ ಉತ್ತರಿಸಿದರು: "ವೀರಶೈವ ಲಿಂಗಾಯತ ಸ್ವತಂತ್ರ ಧರ್ಮ ಎನ್ನುವುದನ್ನು ೪೦ ವರ್ಷಗಳಿಂದಲೂ ಹೇಳಿಕೊಂಡು ಬಂದಿದ್ದೇವೆ. ಈಗಲೂ ಹಾಗೂ ಮುಂದೆಯೂ ಇದನ್ನೇ ಹೇಳುತ್ತೇವೆ. ಈ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ". ಅಲ್ಲದೆ ಹಿಂದಿನ ಅಧ್ಯಕ್ಷರಾದ ಭೀಮಣ್ಣ ಖಂಡ್ರೆ ಅವರ ಕಾರ್ಯ ನೆನಸಿಕೊಳ್ಳುತ್ತ, "ಸ್ವತಂತ್ರ ಧರ್ಮದ ಸ್ಥಾನ ಪಡೆದುಕೊಳ್ಳುವ ನಿಟ್ಟಿನಲ್ಲಿ ಈ ಹಿಂದೆ ಭೀಮಣ್ಣ ಖಂಡ್ರೆ ಜತೆಗೂಡಿ ನವದೆಹಲಿಗೆ ಹೋಗಿ ಕೇಂದ್ರದ ಆಗಿನ ಗೃಹಸಚಿವ ಸುಶೀಲ್ ಕುಮಾರ ಶಿಂಧೆ ಅವರಿಗೆ ಮನವಿ ಸಲ್ಲಿಸಿದ್ದೆವು. ಅವರು ಕೂಡ ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದರು. ಆದರೆ ಕಾಂಗ್ರೆಸ್ ಸರ್ಕಾರ ನಂತರ ಅಧಿಕಾರ ಕಳೆದುಕೊಂಡಿತು. ಈ ಪ್ರಸ್ತಾವ ನನೆಗುದಿಗೆ ಬಿದ್ದಿತು" ಎಂದರು.[೨]

ರಾಜ್ಯ ಸರಕಾರ ಲಿಂಗಾಯುತರ ಬೇಡಿಕೆಯುನ್ನು ಈಡೇರಿಸುವ ಸಮಯದಲ್ಲಿ ಪ್ರಾರಂಭವಾದ ವಾದವಿವಾದಗಳು ಅವಶ್ಯವೇ ಎಂಬ ಭಾವನೆ

In Public domain. Digitization Muthulakshmi Research Academy

ನಾಗರಿಕರಲ್ಲಿ ಚಿಗುರೊಡೆದಿತ್ತು. ಅಲ್ಲದೆ ಇದೊಂದು ಅನ್ಯರು ಉಪಯೋಗಿಸುವ ಲಿಂಗಾಯತವನ್ನು ಒಡೆದಾಳುವ ರಾಜಕೀಯ ತಂತ್ರ ಎಂದು ಭಾವಿಸಿದ್ದರು. ಸಾಮಾನ್ಯ ಕಳಕಳಿಯುಳ್ಳ ಅನೇಕ ಮುಗ್ಧ ಲಿಂಗಾಯತರು ಇದು ವೀರಶೈವ-ಲಿಂಗಾಯತದ ಒಳಜಗಳ ಎಂದು ತಪ್ಪು ತಿಳಿವಳಿಕೆಯಲ್ಲಿದ್ದರು. ಇಂತಹ ಭಾವನೆಯುಳ್ಳ ಯಾದಗಿರಿಯ ಅಯ್ಯಣ್ಣ ಹುಂಡೇಕಾರ ಹೇಳಿಕೆಯನ್ನು ಗಮನಿಸಿ "ವೀರಶೈವ ಮತ್ತು ಲಿಂಗಾಯತ ಒಂದೇ ಎಂಬ ಭಾವನೆಯೊಂದಿಗೆ ನಾವು ಜನಗಣತಿಯಲ್ಲಿ 'ವೀರಶೈವ ಲಿಂಗಾಯತ' ಎಂದು ದಾಖಲಿಸಿದ್ದೇವೆ. ಬೆಂಗಳೂರಿನ ಅಖಿಲ ಭಾರತ ವೀರಶೈವ ಮಹಾಸಭಾ ಕಾರ್ಯಾಲಯಕ್ಕೆ 'ವೀರಶೈವ ಮತ್ತು ಲಿಂಗಾಯತ ಭವನ' ಎಂದು ನಾಮಕರಣ ಮಾಡಿದ್ದೇವೆ. ಆದರೆ ಈಗ ಇದ್ದಕ್ಕಿದ್ದಂತೆ ವೀರಶೈವ ಲಿಂಗಾಯತ ಎಂದು ಪ್ರತ್ಯೇಕಿಸುವುದು ಎಷ್ಟು ಸಮಂಜಸ" ಎಂದು ಮಾಧ್ಯಮಗಳ ಮೂಲಕ ಪ್ರಶ್ನಿಸಿದರು.[೩] ಇಂತಹ ಕಾಳಜಿಯುಳ್ಳ ಅನೇಕರಿರುವ ಕಾರಣ ಸಿಡಿದೇಳಬೇಕಾದ ಸ್ವತಂತ್ರ ಧರ್ಮದ ಕಿಚ್ಚು ತೀವ್ರವಾಗಿ ಹೊತ್ತಿಕೊಳ್ಳಲಿಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಪ್ರಮುಖವಾದುದು ಮಾಹಿತಿ ಕೊರತೆ. ಮೇಲಾಗಿ ಶರಣರ ವಚನಗಳು ತಡವಾಗಿ ಬೆಳಕಿಗೆ ಬಂದದ್ದು(೧೯೨೦) ಮೂಲಕಾರಣ. ಎರಡನೆಯದಾಗಿ ಲಿಂಗಾಯತರ ಶಿಕ್ಷಣದ ಕೊರತೆ. ಮೂರನೆಯದು ವಿದ್ಯಾವಂತರ ಉದಾಸೀನ ಭಾವನೆ. ನಾಲ್ಕನೆಯದು ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡುವ ತಾಳ್ಮೆ ಇಲ್ಲದೇ ಇರುವುದು. ಐದನೆಯದು ವೀರಶೈವ ಮಹಾಸಭಾ ಸ್ಥಾಪನೆ.

ವೀರಶೈವ ಮಹಾಸಭೆ

ಪೂಜ್ಯ ಹಾನಗಲ್ ಕುಮಾರಸ್ವಾಮಿಗಳ ಮಾರ್ಗದರ್ಶನದಲ್ಲಿ ಲಿಂಗಾಯತ ನಾಯಕರಾದ ಅರಟಾಳ ರುದ್ರಗೌಡರು, ಶಿರಸಂಗಿ ಲಿಂಗರಾಜ, ವಾರದ ಮಲ್ಲಪ್ಪನವರು ಮತ್ತು ಅನೇಕ ಮಹಾಮಹಿಮರ ಸಹಕಾರದೊಂದಿಗೆ ೧೯೦೪ರಲ್ಲಿ 'ಅಖಿಲ ಭಾರತ ವೀರಶೈವ ಮಹಾಸಭೆ'ಯನ್ನು ಸ್ಥಾಪಿಸಲಾಯಿತು. ಸಂಘಟನೆ, ಹಣಕಾಸು, ಪ್ರಚಾರಗಳನ್ನು ಸಂಸಾರಸ್ಥರು ಹೊತ್ತರೆ ಧಾರ್ಮಿಕ ಕಾರ್ಯಗಳನ್ನು ಧಾರ್ಮಿಕ ಮುಖಂಡರು ಮಾಡುತ್ತಿದ್ದರು. ಜಂಗಮ ಪೂಜ್ಯರ ಬಗ್ಗೆ ಅದಮ್ಯವಾದ ವಿಶ್ವಾಸ, ಭಕ್ತಿ ಅವರಲ್ಲಿತ್ತು. ಅರಿಷಡ್ವರ್ಗಗಳನ್ನು ತೊರೆದ ಜಂಗಮರು ಎಲ್ಲರಿಗೂ ಪೂಜ್ಯರಾಗಿದ್ದರು. ಅಂದಿನ ಲಿಂಗಾಯತ ನಾಯಕರು ಪೂಜ್ಯರಾದ ಹಾನಗಲ್ ಕುಮಾರಸ್ವಾಮಿಗಳು ಸೂಚಿಸಿದ್ದನ್ನು ಚಾಚೂ ತಪ್ಪದೆ ಪಾಲಿಸಿದ್ದರು. ೧೯೦೪ರಲ್ಲಿ ಮಹಾಸಭೆ ಅಸ್ತಿತ್ವಕ್ಕೆ ಬಂತು. ಲಿಂಗಾಯತ ನಾಯಕರು ಧಾರ್ಮಿಕ ವಿಚಾರವನ್ನು ಸ್ವಾಮೀಜಿಗೆ ವಹಿಸಿದ್ದರು. ವೀರಶೈವ ಮಹಾಸಭೆಯಲ್ಲಿ ಮೈಸೂರಿನ ವೀರಶೈವರು ಸೇರಿಕೊಂಡರು. ಮೈಸೂರು ಅರಮನೆಯಲ್ಲಿ ತಮ್ಮ ಸ್ಥಾನಮಾನದ ಬಗ್ಗೆ

In Public domain. Digitization Muthulakshmi Research Academy

ಚಿಂತಿಸುತ್ತಿದ್ದ ವಿದ್ವಾನ್ ಕರಿಬಸವಶಾಸ್ತ್ರಿ ಮತ್ತು ಯಜಮಾನ ವೀರಸಂಗಪ್ಪನವರು ಹಾನಗಲ್ ಪೂಜ್ಯರ ಸಂಪರ್ಕಕ್ಕೆ ಬಂದರು. ಜಾತಿಯ ಏಣಿಶ್ರೇಣಿಯನ್ನು ಬಲವಾಗಿ ನಂಬುವ ಮೈಸೂರು ವೀರಶೈವರು ಪೂಜ್ಯರಿಗೆ ಜಾತಿಯ ಏಣಿಶ್ರೇಣಿಯ(ಮೈಸೂರು ವೀರಶೈವರ) ಅವಶ್ಯಕತೆಯನ್ನು ಮನವರಿಕೆ ಮಾಡಿದರು. ಉಚ್ಚಕುಲದಲ್ಲಿ ಜನಿಸಿದ ಸ್ವಾಮೀಜಿಯವರು ಸಹ ಅವರ ಪ್ರಭಾವದಲ್ಲಿದ್ದ ಕಾರಣ ಬಸವಣ್ಣನವರ ತತ್ವಗಳನ್ನು ಒಂದು ಕ್ಷಣ ಮರೆತುಬಿಟ್ಟರು. ಯಾವ ಕಾರಣಕ್ಕಾಗಿ ಒಂದು ಸಂಸ್ಥೆ ಅಸ್ತಿತ್ವಕ್ಕೆ ಬಂದಿತ್ತೋ ಅದನ್ನೇ ಮರೆತದ್ದು ಲಿಂಗಾಯತ ಸಮಾಜದ ದೊಡ್ಡ ದುರಂತ. 'ತಾವು ಬ್ರಾಹ್ಮಣರಿಗಿಂತ ವಿದ್ಯೆಯಲ್ಲಿ ಕಡಿಮೆಯಿಲ್ಲ. ನಾವು ಸಂಸ್ಕೃತ ಓದಿ ಬರೆಯಬಲ್ಲೆವು' ಎಂದು ಸಾರಲು ವೀರಶೈವರು ವೇದ ಉಪನಿಷತ್ತುಗಳನ್ನು, ಶಾಸ್ತ್ರ ಪುರಾಣಗಳನ್ನು ಆಗಮಗಳನ್ನು ಒಪ್ಪುತ್ತಾರೆ. 'ವೀರಶೈವರು ಹಿಂದುಗಳು' "ಲಿಂಗಾಯತ ಮಠಗಳಿಗೆ ಜಂಗಮ ಜಾತಿಯವರನ್ನೇ ಸ್ವಾಮಿಗಳನ್ನಾಗಿ ನೇಮಿಸಬೇಕು' ಎಂಬಿತ್ಯಾದಿ ಬಸವವಿರೋಧಿ ಸಿದ್ಧಾಂತಗಳನ್ನು ವೀರಶೈವ ಮಹಾಸಭೆಯ ಮೊದಲ ಅಧಿವೇಶನದಲ್ಲಿ ಠರಾವು ಮಾಡಿದ್ದರು. ವಚನ ಸಾಹಿತ್ಯ ಬೆಳಕಿಗೆ ಬಂದನಂತರ ಲಿಂಗಾಯತ ಸಿದ್ಧಾಂತ ಹೆಚ್ಚು ಹೆಚ್ಚು ಪ್ರಚಾರವಾಗಲು ಪ್ರಾರಂಭವಾಯಿತು. ಪ್ರಾಜ್ಞರು ವಚನ ವಿಶ್ಲೇಷಣೆ ಮಾಡಲಾರಂಭಿಸಿದರು. ಆಗ ಹಿಂದಾದ ತಪ್ಪುಗಳು ಬೆಳಕಿಗೆ ಬಂದವು. ಅವುಗಳನ್ನು ಸರಿಪಡಿಸಲು ೩೬ ವರ್ಷಗಳ ನಂತರ ಮೊದಲನೆಯ ಅಧಿವೇಶನದ ನಿರ್ಣಯಗಳನ್ನು ಕೈ ಬಿಟ್ಟರು. "ಅಖಿಲ ಭಾರತ ವೀರಶೈವ ಮಹಾಸಭಾ" ಎಂದು ನಾಮಕರಣವಾಗಿದ್ದ ಮಹಾಸಭೆಯ ಹೆಸರನ್ನು ಇತ್ತೀಚೆಗೆ ಅಂದರೆ ಸುಮಾರು ಹತ್ತು ವರ್ಷಗಳ ಹಿಂದೆ ಅರ್ಧ ಸರಿಪಡಿಸಿ 'ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭೆ' ಎಂದು ಬದಲಾಯಿಸಿದರು. ಈ ಮಧ್ಯೆ ವೀರಶೈವ ಮಹಾಸಭೆಯು ಒಂದು ಅನೌಪಚಾರಿಕ ಸಭೆ ಸೇರಿ ಸ್ವತಂತ್ರ ಲಿಂಗಾಯತ ಧರ್ಮದ ಬೇಡಿಕೆಗೆ ಸಂಬಂಧಿಸಿದಂತೆ ಸರ್ಕಾರದ ಮೇಲೆ ಇನ್ನಷ್ಟು ಒತ್ತಡ ಹೇರಲು ತೀರ್ಮಾನಿಸಿರುವ ವಿಷಯವನ್ನು ಪ್ರಜಾವಾಣಿ ದಿನಪತ್ರಿಕೆ ಸುದ್ದಿ ಮಾಡಿತು.

ವೀರಶೈವ ಮಹಾಸಭೆಯ ಒಳಗಣ ರಹಸ್ಯ

ಮಹಾಸಭೆಯ ಪದಾಧಿಕಾರಿಗಳು ಬೆಂಗಳೂರಿನಲ್ಲಿ ಸಭೆ ಸೇರಿ ಆಗಸ್ಟ್ ಎರಡರಂದು ಮಹಾಸಭೆಯ ತುರ್ತು ಕಾರ್ಯಕಾರಿ ಸಮಿತಿಯ ಸಭೆ ಕರೆಯಲು ತಿರ್ಮಾನಿಸಿತು. ಮಹಾಸಭೆಯು ಎಂದಿಲ್ಲದ ಆಸಕ್ತಿಯನ್ನು ಈ ವಿಷಯದಲ್ಲಿ ತೆಗೆದುಕೊಂಡಿರುವುದು ಕಂಡುಬರುವುದು. ಶ್ರೀ ಸಿದ್ಧಗಂಗಾ ಮಠದ ಪೂಜ್ಯರನ್ನು, ಸುತ್ತೂರು ಶ್ರೀಗಳನ್ನು, ಪಂಚಪೀಠದ ಪೀಠಾಧಿಪತಿಗಳನ್ನು, ಮುರುಘಾಮಠದ ಶ್ರೀಗಳನ್ನು, ಮಾತೆ ಮಹಾದೇವಿಯವರು ಸೇರಿದಂತೆ

In Public domain. Digitization Muthulakshmi Research Academy

ಎಲ್ಲ ಮಠಾಧೀಶರಿಗೂ ಪತ್ರಮುಖೇನ ಸಂಪರ್ಕಿಸಿ ಹೋರಾಟಕ್ಕೆ ಬೆಂಬಲ ನೀಡುವಂತೆ ಕೋರಲಾಗುವುದೆಂದು ಸಭೆಯಲ್ಲಿ ಚರ್ಚಿಸಲಾಯಿತಂತೆ. ಇದರೊಂದಿಗೆ ಬಿಜೆಪಿಯ ಮುಖಂಡರಾದ ಯಡಿಯೂರಪ್ಪನರನ್ನು ಸಹ ಆಹ್ವಾನಿಸಲಾಗುವುದೆಂದು ಮೂಲಗಳು ತಿಳಿಸಿವೆಯೆಂದು ಪ್ರಜಾವಾಣಿ ಪತ್ರಿಕೆ ತಿಳಿಸಿದೆ[೪]. ಈ ಮಧ್ಯೆ ವೀರಶೈವ ಮಹಾಸಭೆ ಚುರುಕಾಗಿ ಕೆಲಸ ಮಾಡಲು ಪ್ರಾರಂಭಿಸಿತ್ತು. ಜುಲೈ ೨೯, ೨೦೧೭ ಶನಿವಾರದಂದು ವೀರಶೈವ ಭವನದಲ್ಲಿ ಸಭೆ ಸೇರಿ ಕೆಲವು ಮಹತ್ವದ ವಿಷಯಗಳನ್ನು ಚರ್ಚಿಸಿದ್ದಾಗಿ ಬಹಿರಂಗಪಡಿಸಿತ್ತು. "ವೀರಶೈವ-ಲಿಂಗಾಯತರ ಮಧ್ಯೆ ಭೇದವಿಲ್ಲ. ಎರಡೂ ಒಂದೇ" ಎಂಬುದು ಮಹಾಸಭಾದ ನಿಲುವು. ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಈ ವಿಷಯ ಮನವರಿಕೆ ಮಾಡಿಕೊಡುವ ಜತೆಗೆ ಇದನ್ನು ಸಮರ್ಥಿಸುವ ದಾಖಲೆಗಳನ್ನು ಮತ್ತೊಮ್ಮೆ ಅವರಿಗೆ ಸಲ್ಲಿಸಲಾಗುವುದು. ಸ್ವತಂತ್ರ ಧರ್ಮದ ಮಾನ್ಯತೆ ನೀಡುವಂತೆ ತೆಲಂಗಾಣದ ಮುಖ್ಯಮಂತ್ರಿ ಚಂದ್ರಶೇಖರ ರಾವ್ ಅವರು ಈಗಾಗಲೇ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ! ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಶಿಫಾರಸ್ಸು ಕಳಿಸಲು ಸಮ್ಮತಿ ಸೂಚಿಸಿದ್ದಾರೆ!! ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವಿಸ್ ಒಲವು ತೋರಿದ್ದಾರೆ!!! ಇವೆಲ್ಲವನ್ನು ಸಿದ್ಧರಾಮಯ್ಯನವರ ಗಮನಕ್ಕೆ ತರಲಾಗುವುದೆಂದು ಮೂಲಗಳು ತಿಳಿಸಿವೆಯೆಂದು ಪ್ರಜಾವಾಣಿ ಸಣ್ಣದೊಂದು ಸುದ್ದಿ ಮಾಡಿತ್ತು.[೫] ಇದೊಂದು ಸಣ್ಣ ವಿಷಯವಾಗಿರಲಿಲ್ಲ. ಗಂಭೀರವಾದ ವಿಷಯ. ದಕ್ಷಿಣ-ಮಧ್ಯಭಾರತದ ಬಹುಜನರ ಕನಸಿನ ವಿಷಯವಾಗಿತ್ತು. "ಏಕಕಾಲದಲ್ಲಿ ಆರು ರಾಜ್ಯಗಳು ಒಂದೇ ವಿಷಯದ ಮೇಲೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಕೇಂದ್ರ ಸರಕಾರ ಆ ಪ್ರಸ್ತಾವನೆಯನ್ನು ತಳ್ಳಿಹಾಕುವಂತಿಲ್ಲ" ಎಂದು ಕಾನೂನುತಜ್ಞರು ಈ ವಿಷಯ ಚರ್ಚಿಸಿದಾಗ ನನ್ನ ಗಮನಕ್ಕೆ ತಂದಿದ್ದರು. ಮುಖ್ಯವಾಗಿ ಪ್ರಜಾವಾಣಿ ತನ್ನ ಮೂಲವನ್ನು ಬಹಿರಂಗಪಡಿಸಿಲ್ಲ. ಅಲ್ಲದೆ ಈ ವಿಷಯ ಉಳಿದ ಪತ್ರಿಕೆಗಳಲ್ಲಿ ಕಂಡಿಲ್ಲ. ನಿರ್ಲಕ್ಷ್ಯ ಮಾಡಬಹುದಾದ ಸಣ್ಣ ವಿಷಯವೂ ಅಲ್ಲ. ನಾಲ್ಕು ದೊಡ್ಡ ರಾಜ್ಯಗಳು ಒಂದೇ ವಿಷಯದಲ್ಲಿ ಒಮ್ಮತಕ್ಕೆ ಬಂದಿದ್ದರೆ ಅದೊಂದು ರಾಷ್ಟ್ರೀಯ ಸುದ್ದಿಯಾಗುತ್ತಿತ್ತು. ಎರಡನೆಯದಾಗಿ ಈ ಮೂಲಗಳು ಮಾನ್ಯ ಸಿದ್ದರಾಮಯ್ಯನವರಿಗೆ ಅನ್ಯ ರಾಜ್ಯದ ಮುಖ್ಯಮಂತ್ರಿಗಳು ಕೇಂದ್ರಕ್ಕೆ ಸಲ್ಲಿಸಿದ ದಾಖಲೆಗಳನ್ನು ನೀಡುವುದಾಗಿ ಹೇಳಿವೆ. ಆದರೆ ದಾಖಲೆಗಳನ್ನು ನೀಡಿದ ಬಗ್ಗೆ ದಿನಾಂಕ ೩೦ರ ಸಭೆಯ ನಂತರ ಎಲ್ಲಿಯೂ ಪ್ರಸ್ತಾಪವಾಗಿಲ್ಲ. ಮೇಲಾಗಿ ಮುಖ್ಯಮಂತ್ರಿಗಳ ಕಾರ್ಯಾಲಯದೊಂದಿಗೆ ಸತತ ಸಂಪರ್ಕದಲ್ಲಿದ್ದ ನಮಗಾರಿಗೂ ಈ ವಿಷಯದ ಬಗ್ಗೆ ತಿಳಿದಿರಲಿಲ್ಲ. ಇದು ಸತ್ಯಕ್ಕೆ ದೂರವಾಗಿರಬಹುದು ಅಥವಾ ವೀರಶೈವ ಮಹಾಸಭಾ ದಾಖಲೆಗಳನ್ನು

In Public domain. Digitization Muthulakshmi Research Academy

ನೀಡದೆ ತನ್ನ ನಿಲುವನ್ನು ಬದಲಾಯಿಸಿರಬಹುದು. ಇದೇ ವರದಿಯಲ್ಲಿ ವೀರಶೈವ ಮಹಾಸಭೆಯ ಮೂಲಗಳು ಯಡಿಯೂರಪ್ಪನವರ ಮೇಲೆ ಒಂದು ಆಪಾದನೆಯನ್ನು ಮಾಡುತ್ತವೆ. "ಬಸವಣ್ಣನವರ ಭಾವಚಿತ್ರವನ್ನು ಸರ್ಕಾರಿ ಕಚೇರಿಗಳಲ್ಲಿ ಅಳವಡಿಸುವುದನ್ನು ಕಡ್ಡಾಯಗೊಳಿಸುವಂತೆ ಹಾಗೂ ಸ್ವತಂತ್ರ ಧರ್ಮದ ಮಾನ್ಯತೆಗಾಗಿ ಶಿಫಾರಸ್ಸು ಮಾಡುವಂತೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮನವಿ ಸಲ್ಲಿಸಲಾಗಿತ್ತು. ಆಗ ಮುಖ್ಯಮಂತ್ರಿ ಆಗಿದ್ದವರು ಅಷ್ಟಾಗಿ ಆಸಕ್ತಿ ತೋರಿರಲಿಲ್ಲ. ಸಿದ್ದರಾಮಯ್ಯ ಅಧಿಕಾರ ಸ್ವೀಕರಿಸಿದ ಮೇಲೆ ಈ ಬಗ್ಗೆ ಚಿಂತನೆ ನಡೆದಿತ್ತು. ಆದರೆ ಅವರು ಲಿಂಗಾಯತರ ಪರ ನಿಲುವು ತೆಗೆದುಕೊಳ್ಳುವುದು ಅನುಮಾನ ಎಂಬ ಕಾರಣಕ್ಕೆ ಮಹಾಸಭಾ ಮನವಿ ಕೊಡಲಿಲ್ಲ, ಎಂದು ಮೂಲಗಳು ತಿಳಿಸಿವೆ"೬ ಎನ್ನುತ್ತದೆ ಕನ್ನಡನಾಡಿನ ವಿಶ್ವಾಸಾರ್ಹವಾದ ವೃತ್ತಪತ್ರಿಕೆ. ಇದೊಂದು ಗಂಭೀರವಾದ ವಿಷಯ. ಹಿಂದಿನ ಬಿಜೆಪಿ ಸರಕಾರವು ಲಿಂಗಾಯತರ ಏಳಿಗೆ ಮಾಡುವ ಭರವಸೆಯೊಂದಿಗೆ ಅಧಿಕಾರದ ಗದ್ದುಗೆ ಹಿಡಿದಿತ್ತು. ಲಿಂಗಾಯತರ ನಾಯಕನೆಂದು ಯಡಿಯೂರಪ್ಪನವರು ಬಿಂಬಿತರಾಗಿದ್ದರು. ಅವರು ಲಿಂಗಾಯತರ ಮತದಿಂದ ಮುಖ್ಯಮಂತ್ರಿಯಾಗಿದ್ದಾರೆಂದು ಇಡೀ ಕರ್ನಾಟಕ ಹೇಳಿತ್ತು. ಹೀಗಿರುವಾಗ ಯಡಿಯೂರಪ್ಪನವರು ಏಕೆ ನಿರ್ಣಯಿಸಲಿಲ್ಲ? ವೀರಶೈವ ಮಹಾಸಭೆಯ ಮನವಿ ಸತ್ಯವಾಗಿದ್ದರೆ ಯಡಿಯೂರಪ್ಪನವರ ದ್ವಿಮುಖ ನೀತಿಯನ್ನು ಜನರೆದರು ಬಹಿರಂಗಪಡಿಸಬಹುದಿತ್ತು. ಅದನ್ನು ವೀರಶೈವ ಮಹಾಸಭೆ ಸಾರ್ವಜನಿಕಗೊಳಿಸಬೇಕಾಗಿತ್ತು. ಇದು ವೀರಶೈವ ಮಹಾಸಭೆ ಲಿಂಗಾಯತರಿಗೆ ಮಾಡಿದ ಮಹಾದ್ರೋಹ.

ತೂಗುಯ್ಯಾಲೆಯಲ್ಲಿ ಭಾ.ಜ.ಪ.

೨೬ ಜುಲೈ ೨೦೧೭, ಬುಧವಾರದಂದು, ರಾಜ್ಯ ಭಾರತೀಯ ಜನತಾ ಪಕ್ಷವು ಒಂದು ಮಹತ್ವದ ನಿರ್ಣಯ ಕೈಗೊಂಡಿತು. ರಾಜ್ಯ ಘಟಕದ ಅಧ್ಯಕ್ಷ ಯಡಿಯೂರಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಂಸದೀಯ ಸಭೆಯಲ್ಲಿ ವೀರಶೈವ ಲಿಂಗಾಯತ ಹೋರಾಟದ ಚರ್ಚೆ ಆಗಿ ಪಕ್ಷವು ಲಿಂಗಾಯತ ಸ್ವತಂತ್ರ ಧರ್ಮ ವಿಷಯದಲ್ಲಿ ತಟಸ್ಥವಾಗಿ ಉಳಿಯಲು ನಿರ್ಧರಿಸಿತು. ಎಂಬ ಮಾಧ್ಯಮಗಳು ವರದಿ ಮಾಡಿದ್ದವು. "ಧಾರ್ಮಿಕ ವಿಷಯ ಅತ್ಯಂತ ಗಂಭೀರವಾಗಿದ್ದು ಪಕ್ಷ ಯಾವುದಾದರೂ ನಿಲುವು ತಾಳಿದಲ್ಲಿ ರಾಜಕೀಯವಾಗಿ ನಷ್ಟ ಎದುರಾಗುವ ಸಾಧ್ಯತೆ ಇದೆ. ಇಲ್ಲಸಲ್ಲದ ವಿವಾದಗಳಿಗೆ ಆಸ್ಪದ ನೀಡದೆ ತಟಸ್ಥವಾಗಿ ಉಳಿಯುವುದೇ ಸೂಕ್ತ" ಎಂಬ ಅಭಿಪ್ರಾಯಗಳು ಸಭೆಯಲ್ಲಿ ವ್ಯಕ್ತವಾದವು. ಅಂತೆಯೇ ಪಕ್ಷವು ಈ ಲೆಕ್ಕಾಚಾರದೊಂದಿಗೆ ತಟಸ್ಥವಾಗಿ ಉಳಿಯುವ ತೀರ್ಮಾನ ಕೈಗೊಂಡಿದೆ; ವೀರಶೈವ ಲಿಂಗಾಯತ ಸಮುದಾಯವನ್ನು ಪ್ರತ್ಯೇಕ ಧರ್ಮ

In Public domain. Digitization Muthulakshmi Research Academy

ಎಂದು ಘೋಷಿಸುವ ವಿಷಯದಲ್ಲಿ ಕಾಂಗ್ರೆಸ್ ಪಕ್ಷ ತೀವ್ರ ಆಸಕ್ತಿ ತಳೆದದ್ದು, ರಾಜ್ಯದಾದ್ಯಂತ ಸಾಕಷ್ಟು ಚರ್ಚೆ ನಡೆಯುತ್ತಿದೆ. ಆದರೆ ಧಾರ್ಮಿಕ ವಿಷಯದ ಕುರಿತು ಪಕ್ಷದ ಯಾವುದೇ ಮುಖಂಡರು ಹಾಗೂ ಕಾರ್ಯಕರ್ತರು, ಯಾವುದೇ ಹೇಳಿಕೆ ನೀಡಕೂಡದು ಎಂದು ಮೌಖಿಕ ಆದೇಶ ಹೊರಡಿಸುವುದಕ್ಕೂ ಸಭೆಯಲ್ಲಿ ತೀರ್ಮಾನಿಸಲಾಯಿತು."[2] ಇದೊಂದು ದೂರ ಪರಿಣಾಮ ಬೀರುವ ಮಹತ್ವದ ನಿರ್ಧಾರವಾಗಿತ್ತು. ಸುಮಾರು ೯೦೦ ವರ್ಷಗಳ ನಂತರ ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮ ವಿಶ್ವವ್ಯಾಪಿ ಆಗಲಿದ್ದುದನ್ನು ತಡೆಯುವ ನಿರ್ಧಾರವಾಗಿತ್ತು. ಲಿಂಗಾಯತದ ಅಸ್ಮಿತೆ ಜಗತ್ತಿಗೆ ತಿಳಿಯುತ್ತಿತ್ತು. ಸರ್ವಜನಾಂಗದ ಒಳಿತನ್ನು ಬಯಸಿದ ಮಹಾ ಮಾನವತಾವಾದಿಗೆ ಅವನದೇ ಧರ್ಮದ ಒಂದು ಪಕ್ಷದ ರಾಜ್ಯ ಅಧ್ಯಕ್ಷನಿಂದಲೇ ಧಕ್ಕೆಯಾಗಿತ್ತು. ಅಂದಿನಿಂದ ಲಿಂಗಾಯತ ಸ್ವತಂತ್ರ ಧರ್ಮದ ಹೋರಾಟವು ಸರ್ವಪಕ್ಷಗಳ ಹೋರಾಟವಾಗಿ ಉಳಿಯಲಿಲ್ಲ. ಇದು ರಾಜಕೀಯ ತಿರುವು ಪಡೆದುಕೊಳ್ಳಲಾರಂಭಿಸಿತು. ಜೆ.ಡಿ.ಎಸ್. ಪಕ್ಷದ ಹಿರಿಯ ಮುಂದಾಳಾದ ಬಸವರಾಜ ಹೊರಟ್ಟಿಯವರು ಈ ಹೋರಾಟದಲ್ಲಿ ಗುರುತಿಸಿಕೊಂಡಿದ್ದರೂ ಆ ಪಕ್ಷದ ಇತರ ಪದಾಧಿಕಾರಿಗಳು ಅಂತರ ಕಾಯ್ದುಕೊಂಡಿದ್ದರು. ಕಾಂಗ್ರೆಸ್ ಪಕ್ಷ ಒಂಟಿಯಾಗಲಾರಂಭಿಸಿತು. ಈ ಹಿಂದೆ ಇದೇ ಬಿಜೆಪಿಯ ಯಡಿಯೂರಪ್ಪನವರು ಹಾಗೂ ಅವರ ಸಂಗಡಿಗರು ಲಿಂಗಾಯತ ಸ್ವತಂತ್ರ ಧರ್ಮದ ಬೇಡಿಕೆಯ ಮನವಿಪತ್ರಕ್ಕೆ ಹಸ್ತಾಕ್ಷರ ಹಾಕಿದ್ದರು. ಆ ಪತ್ರವನ್ನು ಅ.ಭಾ.ವೀ.ಮ. ಸಭೆ ಕೇಂದ್ರಸರಕಾರಕ್ಕೆ ಸಲ್ಲಿಸಿತ್ತು. ಆಗ ಯಡಿಯೂರಪ್ಪನವರು ಲಾಭ ನಷ್ಟದ ವಿಚಾರ ಮಾಡಿರಲಿಲ್ಲ. ಒಬ್ಬ ಅನ್ಯ ಲಿಂಗಾಯತ ನಾಯಕ ತನ್ನ ರಾಜಕೀಯ ಭವಿಷ್ಯವನ್ನು ಪಣಕ್ಕಿಟ್ಟು ಒಂದು ಜನಹಿತದ ನಿರ್ಣಯ ಕೈಗೊಳ್ಳುವಾಗ ಅವನ ಕೈ ಬಲಪಡಿಸಬೇಕಾಗಿತ್ತು. ರಾಜಕೀಯ ನಾಯಕರು ಎಲ್ಲ ವಿಷಯಗಳಲ್ಲೂ ಮತ ರಾಜಕೀಯ ಮಾಡಕೂಡದು. ಬೆನ್ನೆಲುಬು ಇಲ್ಲದ ವೀರಾವೇಶದ ಡಾಂಬಿಕ ಭಾಷಣ ಮಾಡುವ ವೇದಿಕೆಯ ಶೂರರಿಂದಲೇ ಲಿಂಗಾಯತರಿಗೆ ಇಂತಹ ದುರ್ಗತಿ ಬಂದಿದೆ. 'ತಾನೂ ಮಾಡ ಇತರರಿಗೂ ಬಿಡ' ಎಂಬ ಲಿಂಗಾಯತರಿಂದಲೇ ಬಸವಣ್ಣನವರ ಸಿದ್ಧಾಂತಗಳು ಜಗುಲಿ ಸೇರಿವೆ. ಈ ನಾಯಕರ ಈ ನಡತೆಯಿಂದ ಅಣ್ಣನ ಒಂದು ವಚನ ನೆನಪಾಗುವುದು.

ಕೋಣನ ಹೇರಿಂಗೆ ಕುನ್ನಿ ಬಸುಕುತ್ತ ಬಡುವಂತೆ

ತಾವೂ ನಂಬರು, ನಂಬುವರನೂ ನಂಬಲೀಯರು

ತಾವೂ ಮಾಡರು, ಮಾಡುವರನೂ ಮಾಡಲೀಯರು

ಮಾಡುವ ಭಕ್ತರ ಕಂಡ ಸೈರಿಸಲಾರದವರ

ಕೂಗಿಡೆ ಕೂಗಿಡೆ, ನರಕದಲ್ಲಿಕ್ಕುವ ಕೂಡಲಸಂಗಮದೇವ

In Public domain. Digitization Muthulakshmi Research Academy

ಇಂತಹ ಲಿಂಗಾಯತ ನಾಯಕರು ಹನ್ನೆರಡನೆಯ ಶತಮಾನದಲ್ಲಿಯೂ ಇದ್ದಿರಬಹುದು. ಇಲ್ಲದಿದ್ದರೆ ವಚನವನ್ನಾಡುವ ಪ್ರಮೇಯ ಏನಿತ್ತು?

ಅಖಿಲ ಭಾರತ ವೀರಶೈವ ಮಹಾಸಭಾದೊಂದಿಗೆ ಸಮನ್ವಯ

ಲಿಂಗಾಯತ ಧರ್ಮ ಸ್ಥಾಪಕನಾರು? ಲಿಂಗಾಯತ ಧರ್ಮದ ಸಿದ್ಧಾಂತಗಳೇನು? ಎಂಬ ಮಹತ್ವವಾದ ಚರ್ಚೆ ೨೦೧೭ರಲ್ಲಿ ಮತ್ತೊಮ್ಮೆ ಪ್ರಾರಂಭವಾಯಿತು. ಒಂದು ಬದಿಯಲ್ಲಿ ವೀರಶೈವ ಮಠಾಧೀಶರು ನಾವು ಹಿಂದೂಧರ್ಮದ ಭಾಗವೆಂದು ಹೇಳುತ್ತಿದ್ದರೆ, ವಿರಕ್ತ ಮಠಾಧೀಶರು ಲಿಂಗಾಯತ ಧರ್ಮದ ಸಿದ್ಧಾಂತ ಹಿಂದೂಧರ್ಮದ ಸಿದ್ಧಾಂತಕ್ಕೆ ವ್ಯತಿರಿಕ್ತವಾಗಿದೆ, ನಮ್ಮದು ಸ್ವತಂತ್ರಧರ್ಮ ಎಂದು ಹೇಳುತ್ತ, ಬಸವಣ್ಣನವರು ಹಿಂದೂಧರ್ಮವನ್ನು ತ್ಯಜಿಸಿ ಲಿಂಗಾಯತ ಪ್ರತ್ಯೇಕ ಧರ್ಮ ಸ್ಥಾಪಿಸಿದರು ಎಂದು ಸ್ಪಷ್ಟವಾಗಿ ಮತ್ತೊಮ್ಮೆ ಹೇಳಲಾರಂಭಿಸಿದರು. ಅಂದು ಅಧಿಕಾರ ಚಲಾಯಿಸುತ್ತಿದ್ದ ಕಾಂಗ್ರೆಸ್ ಸರಕಾರವು ವೀರಶೈವ ಮಹಾಸಭೆಯವರು ಸಲ್ಲಿಸಿದ ಸ್ವತಂತ್ರ ಧರ್ಮದ ಬೇಡಿಕೆಯ ಬಗ್ಗೆ, 'ನಿಮ್ಮಲ್ಲಿರುವ ಬಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಟ್ಟಾರೆ ಒಂದು ಅಭಿಪ್ರಾಯ ತಿಳಿಸಿ' ಎಂದು ಕೇಳಿಕೊಂಡಿತ್ತು. ಈ ಕಾರಣಕ್ಕಾಗಿ ಅಂದು ಸಚಿವರಾಗಿದ್ದ ಶ್ರೀಯುತರಾದ ಎಂ.ಬಿ.ಪಾಟೀಲ, ಡಾ.ಶರಣಪ್ರಕಾಶ ಪಾಟೀಲ, ಬಸವರಾಜ ರಾಯರೆಡ್ಡಿ, ಈಶ್ವರಖಂಡ್ರೆ ಹಾಗೂ ಎಸ್.ಮಲ್ಲಿಕಾರ್ಜುನ ಇವರೆಲ್ಲರಿಗೂ ಲಿಂಗಾಯತರ ಮನಸ್ಥಿತಿ ಅರಿಯಲು ಮಾನ್ಯ ಸಿದ್ದರಾಮಯ್ಯನವರು ಕೇಳಿಕೊಂಡರು. ಅದರಂತೆ ಪಾಟೀಲರು ಹಾಗೂ ವಿನಯ ಕುಲಕರ್ಣಿಯವರು ಒಂದು ಸುತ್ತು ವಿರಕ್ತಮಠಗಳ ಅಭಿಪ್ರಾಯ ಸಂಗ್ರಹಿಸಲು ಮುಂದಾದರು. ಆಗ ಮಾಧ್ಯಮಗಳು ಪಾಟೀಲರ ಹಾಗೂ ಪಂಚಪೀಠಾಧೀಶರ ಮಧ್ಯೆ ಚರ್ಚೆ ಏರ್ಪಡಿಸಿದವು. ಆಗ ರಾಜ್ಯದಲ್ಲೆಲ್ಲ ಪರ ವಿರೋಧದ ಚರ್ಚೆಗಳು ಪ್ರಾರಂಭವಾದವು. ಈ ವಿಷಯಕ್ಕಾಗಿ ಮಾಧ್ಯಮಗಳು ತಮ್ಮ ಬಹುಪಾಲು ಸಮಯವನ್ನು ಸಹ ಮೀಸಲಿಟ್ಟವು. ಅದೇ ಸಮಯದಲ್ಲಿ ಮಾನ್ಯ ಸಿದ್ದರಾಮಯ್ಯನವರಿಗೆ ನನ್ನನ್ನು ವೈಯಕ್ತಿಕವಾಗಿ ಪರಿಚಯಿಸಿ ನನ್ನ ಬಗ್ಗೆ ವಿವರಣೆ ನೀಡಿದರು ಸಚಿವರಾದ ಶ್ರೀ ಎಂ.ಬಿ.ಪಾಟೀಲ ಮತ್ತು ವಿನಯ ಕುಲಕರ್ಣಿ. ಆಗ ನನಗೂ ಈ ವಿಷಯದಲ್ಲಿ ಆಸಕ್ತಿ ಮೂಡಿ ನಾನೂ ಕೂಡ ವಿಷಯ ಸಂಗ್ರಹಣೆಗೆ ಮುಂದಾದೆ. ನಂತರ ನಮ್ಮದೊಂದು ಕಾರ್ಯಪಡೆ ರಚಿತವಾಯಿತು. ಅದರಲ್ಲಿ ಶ್ರೀಯುತರಾದ ಬಸವರಾಜ ಹೊರಟ್ಟಿ, ಡಾ.ಎಂ.ಬಿ.ಪಾಟೀಲ, ಸಚಿವ ವಿನಯ ಕುಲಕರ್ಣಿ, ಡಾ.ಶಿವಾನಂದ ಜಾಮದಾರ, ನಾನು, ಡಾ.ಜಯಣ್ಣ ಕಾಯಂ ಪ್ರತಿನಿಧಿಗಳಾದೆವು.

ನಮಗೆ ವೀರಶೈವ ಮಹಾಸಭಾದೊಂದಿಗೆ ಸಮನ್ವಯ ಸಾಧಿಸಿ ಕಾರ್ಯಸಾಧನೆ ಮಾಡಬೇಕಾಗಿತ್ತು. ಅದಕ್ಕಾಗಿ ನಮ್ಮ ಪ್ರಯತ್ನ ಪ್ರಾರಂಭವಾಯಿತು. ನಾವು

In Public domain. Digitization Muthulakshmi Research Academy

ಅವರೊಂದಿಗೆ ಸಂವಾದ ಮಾಡಲು ಪ್ರಯತ್ನ ಪ್ರಾರಂಭಿಸಿದೆವು. ಅದರ ಕಾರ್ಯಸಾಧುವಾಗಿ ನಮ್ಮ ನಿಯೋಗವು ಅ.ಭಾ.ವೀ.ಮ. ಸಭೆಯ ಕಾರ್ಯಕಾರಿ ಸಮಿತಿಯವರೊಂದಿಗೆ ಸಚಿವ ಡಾ.ಶರಣ ಪ್ರಕಾಶ ಪಾಟೀಲರ ಗೃಹಕಚೇರಿಯಲ್ಲಿ ಸಭೆ ನಡೆಸಿದೆವು. ಅಂದಿನ ಸಭೆಯಲ್ಲಿ ಡಾ.ಜಾಮದಾರ ಅವರು ಲಿಂಗಾಯತ ಧರ್ಮದ ಮಹತ್ವ ಹಾಗೂ ದಾಖಲೆಗಳ ಬಗ್ಗೆ ವಿವರಿಸಿದರು. ಇವರ ಮಾತಿಗೆ ಸಹಮತ ವ್ಯಕ್ತಪಡಿಸುತ್ತ, ವೀರಶೈವ ಮಹಾಸಭೆಯವರು ತಮ್ಮ ನಿರ್ಧಾರವನ್ನು ಅ.ಭಾ.ವೀ. ಮಹಾಸಭೆಯ ಅಧ್ಯಕ್ಷರು ಪ್ರಕಟಿಸುವರು, ಅಲ್ಲದೆ ಅವರಿಗೆ ಸಂಪೂರ್ಣ ಅಧಿಕಾರ ನೀಡುತ್ತೇವೆಂದು ಅವರು ನಿರ್ಣಯ ಕೈಗೊಂಡರು. "ವೀರಶೈವ ಲಿಂಗಾಯತ ಸ್ವತಂತ್ರಧರ್ಮ ಎನ್ನುವುದನ್ನು ನಲವತ್ತು ವರ್ಷಗಳಿಂದ ಹೇಳಿಕೊಂಡು ಬಂದಿದ್ದೇವೆ. ಈಗಲೂ ಹಾಗೂ ಮುಂದೆಯೂ ಇದನ್ನೇ ಹೇಳುತ್ತೇವೆ. ಈ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ"[೮] ಎಂದರು ಅ.ಭಾ.ವೀ.ಮ.ಸ. ಅಧ್ಯಕ್ಷರಾದ ವಯೋವೃದ್ಧ ಶಾಮನೂರು ಶಿವಶಂಕರಪ್ಪನವರು. 'ಪೀಠಾಧಿಪತಿಗಳಾದಿಯಾಗಿ ೪೦-೫೦ ಸ್ವಾಮೀಜಿಗಳ ಒಂದು ತುರ್ತುಸಭೆ ಕರೆಯುವಂತೆ ರಾಜ್ಯಘಟಕದ ಅಧ್ಯಕ್ಷರಾದ ತಿಪ್ಪಣ್ಣನವರಿಗೆ ಸೂಚಿಸಿದ್ದಾಗಿಯೂ ಅದೇ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಗುಡ್ಡದಂತೆ ಎದುರಾದ ಸಮಸ್ಸೆಯು ಕಡ್ಡಿಯಂತೆ ಸರಿದಿದ್ದು ನಮಗೆ ಅತ್ಯಂತ ಸಮಾಧಾನ ಮತ್ತು ಸಂತೋಷ ತಂದಿತ್ತು.

ಎರಡನೆಯ ಸಭೆ ಅ.ಭಾ.ವೀ.ಮ. ಸಭೆ ರಾಷ್ಟ್ರೀಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪನವರ ಮನೆಯಲ್ಲಿ ಸೇರಬೇಕೆಂದು ನಿರ್ಣಯಿಸಲಾಯಿತು. ಅದರಂತೆ ಆ ಸಭೆಯಲ್ಲಿ ಲಿಂಗಾಯತ ಸಿದ್ಧಾಂತದ ಪರವಾಗಿದ್ದ ಶ್ರೀಯುತರಾದ ಡಾ.ಎಂ.ಬಿ.ಪಾಟೀಲ, ಬಸವರಾಜ ಹೊರಟ್ಟಿ, ವಿನಯ ಕುಲಕರ್ಣಿ, ಶರಣಪ್ರಕಾಶ ಪಾಟೀಲ, ಡಾ.ಜಾಮದಾರ, ನಾನು ಹಾಗೂ ಡಾ.ಜಯಣ್ಣ ಭಾಗವಹಿಸಿದ್ದೆವು. ವೀರಶೈವ ಮಹಾಸಭೆಯ ಪರವಾಗಿ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪ ಹಿರಿಯರಾದ ತಿಪ್ಪಣ್ಣ ಮತ್ತಿತರ ಪದಾಧಿಕಾರಿಗಳು ಇದ್ದರು. ಆ ಸಭೆಯಲ್ಲಿ ಬಸವಣ್ಣನವರು ಲಿಂಗಾಯತ ಧರ್ಮಸ್ಥಾಪಕರು ಎನ್ನುವ ವಿಚಾರದಲ್ಲಿ ಸಹಮತಕ್ಕೆ ಬಂದಂತೆ ತೋರಿತು. ವೀರಶೈವ ಮಹಾಸಭಾ ರಾಜ್ಯಘಟಕದ ಅಧ್ಯಕ್ಷರಾದ ಎನ್.ತಿಪ್ಪಣ್ಣ ಅವರು 'ನಾನು ಬಸವಣ್ಣನವರ ಪರಮ ಭಕ್ತ, ಏಳುವಾಗ, ಉಣ್ಣುವಾಗ, ಮಲಗುವಾಗ ಬಸವಣ್ಣನವರನ್ನು ನೆನೆದೇ ದಿನನಿತ್ಯದ ಕಾರ್ಯ ಮಾಡುತ್ತೇನೆ. ಬಸವಣ್ಣನವರೊಬ್ಬರೇ ನನ್ನ ಆರಾಧ್ಯದೈವ' ಎಂದಿದ್ದರು. ಈಗಾಗಲೇ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪನವರೂ ಅದೇ ಅಭಿಪ್ರಾಯವನ್ನು ಪತ್ರಿಕೆ ಮುಖಾಂತರ

In Public domain. Digitization Muthulakshmi Research Academy

ವ್ಯಕ್ತಪಡಿಸಿದ್ದರು. ಕೇಂದ್ರ ಹಾಗೂ ರಾಜ್ಯ ಅಧ್ಯಕ್ಷರ ಅಭಿಪ್ರಾಯ ಒಂದೇ ಆಗಿರುವಾಗ ಸಭೆಯಲ್ಲಿ ಚರ್ಚಿಸಲು ಯಾವುದೇ ವಿಷಯವಿಲ್ಲದಾಯಿತು. ಸಂತೋಷದಿಂದ ನಾವೆಲ್ಲ ಹಿರಿಯರಾದ ಶಾಮನೂರರ ಪಾದಸ್ಪರ್ಶ ಮಾಡಿದೆವು. ಸಭೆ ಯಶಸ್ವಿಯಾಗಿ ಕೊನೆಗೊಂಡಿತು. ಆಗಲೆ ರಾತ್ರಿ ಒಂಬತ್ತು ಗಂಟೆಯಾಗಿತ್ತು. ಹೊರಡಲಣಿಯಾದೆವು. ಹೊರಗಡೆ ಟಿ.ವಿ. ಮಾಧ್ಯಮದವರು ಕಾಯುತ್ತಿದ್ದಾರೆಂಬ ಸುದ್ದಿ ಬಂತು. "ಮಾಧ್ಯಮದವರಿಗೆ ಏನೆಂದು ಹೇಳಬೇಕು" ಎಂದು ಕೇಳಿದರು ಸಚಿವ ಎಂ.ಬಿ.ಪಾಟೀಲರು. "ನಾವಷ್ಟೇ ನಿರ್ಧರಿಸಲಾಗದು, ನಾವು ಸಭೆ ಕರೆದು ಚರ್ಚಿಸಿ ನಿಮಗೆ ತಿಳಿಸುತ್ತೇವೆ" ಎಂದು ಮತ್ತೊಂದು ಅಡ್ಡಗೋಡೆಯ ಮೇಲೆ ದೀಪ ಇಟ್ಟಂತಿರುವ ವಾಕ್ಯ ಸೇರಿಸಿದರು. "ನಾವು ನೀವಷ್ಟೇ ನಿರ್ಧರಿಸಿದರೆ ಜನಾಭಿಪ್ರಾಯ ವ್ಯತಿರಿಕ್ತವಾಗಬಹುದು. ತಜ್ಞರ ಸಭೆ ಸೇರಿಸಿ ಸೂಕ್ತವಾದ ನಿರ್ಣಯ ಕೈಗೊಳ್ಳೋಣ" ಎಂದೆನ್ನುತ್ತ "ಕಾಳಜಿ ಮಾಡಬೇಡಿ ನಾವೆಲ್ಲರೂ ಒಂದು" ಎಂದು ಹೇಳುವುದನ್ನು ಮರೆಯಲಿಲ್ಲ. ಹೊರಬರುತ್ತಿದ್ದಂತೆ ಮಾಧ್ಯಮದವರು ಮುತ್ತಿಕೊಂಡರು. "ನಿರ್ಧಾರ ಸೂಕ್ತವಾಗಿರಲಿದೆ. ಸಮಯ ಬಂದಾಗ ತಿಳಿಸುತ್ತೇವೆ" ಎಂದು ಜಾರಿಕೊಂಡೆವು.

ಮುರಿದು ಬಿದ್ದ ಮಾತುಕತೆಗಳು

ಮೂರನೆಯ ಹಾಗೂ ಮಹತ್ವದ ಸಭೆ ನಗರದ ಕ್ಯಾಪಿಟಲ್ ಹೋಟೆಲಿನಲ್ಲಿ ಜರುಗಿತು. ಆ ಸಭೆಯಲ್ಲಿ ವೀರಶೈವ ಮಹಾಸಭೆಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪರೊಂದಿಗೆ ಶ್ರೀಯುತರಾದ ಮಾಜಿ ಶಾಸಕ ತಿಪ್ಪಣ್ಣ, ಶಂಕರ ಬಿದರಿ, ಡಾ.ಪ್ರಭಾಕರ ಕೋರೆ, ದಾವಣಗೆರೆಯ ಪ್ರಮುಖರು, ಮಾಜಿ ಮೇಯರ್ ಪುಟ್ಟರಾಜ, ಜ.ಶಿವಶಂಕರ, ಪಂಚಪೀಠಾಧೀಶ್ವರರ ಪ್ರತಿನಿಧಿಯಾಗಿ ಇಬ್ಬರಲ್ಲದೆ ಒಟ್ಟು ಇಪ್ಪತ್ತು ಜನ ವೀರಶೈವ ಮಹಾಸಭೆಯ ವತಿಯಿಂದ ಭಾಗವಹಿಸಿದ್ದರು. ಲಿಂಗಾಯತ ಸಿದ್ಧಾಂತದ ಪರವಾಗಿ ಶ್ರೀಯುತರಾದ ಎಂ.ಬಿ.ಪಾಟೀಲ, ವಿನಯ ಕುಲಕರ್ಣಿ, ಬಸವರಾಜ ಹೊರಟ್ಟಿ, ಡಾ.ವೀರಣ್ಣ ರಾಜೂರ, ಡಾ.ಜಾಮದಾರ, ಡಾ.ಎನ್.ಜಿ.ಮಹಾದೇವಪ್ಪ, ನಾನು, ಡಾ.ಜಯಣ್ಣ, ಕೆ.ಆರ್.ಮಂಗಳಾ ಭಾಗವಹಿಸಿದ್ದೆವು. ಸಭೆಯಲ್ಲಿ ಮಂಡಿಸಲು ನಾವು ಲಿಂಗಾಯತ ಧರ್ಮಕ್ಕೆ ಪೂರಕವಾದ ಎಲ್ಲ ದಾಖಲೆಗಳನ್ನು ಹೊತ್ತೊಯ್ದಿದ್ದೆವು. ನಮ್ಮ ದಾಖಲೆಗಳನ್ನು ಗಮನಿಸುತ್ತಿದ್ದ ವೀರಶೈವ ಮಹಾಸಭೆಯ ಪರವಾಗಿರುವ ಹಿರಿಯರೊಬ್ಬರು(ಕೇಂದ್ರಮಟ್ಟದ ನಾಯಕರು) ಅಧ್ಯಕ್ಷರಾದ ಶಾಮನೂರರಿಗೆ ಕರೆ ಮಾಡಿ ತಡವಾಗಿ ಬರಲು ಹೇಳುತ್ತಿದ್ದುದು ನನ್ನ ಕಿವಿಗೂ ಬಿದ್ದಿತ್ತು. ಸಭೆ ಯಾವ ರೀತಿ ನಡೆಯಬಹುದೆಂಬ ಮುನ್ಸೂಚನೆ ನನಗೆ ಆಗಲೇ ಸಿಕ್ಕಿತ್ತು. ಆದರೂ ನಾವು ಆಶಾವಾದಿಗಳಾಗಿದ್ದೆವು. ಸಚಿವ ವಿನಯ ಕುಲಕರ್ಣಿಯವರು ತಮ್ಮ ಸ್ಥಾನದ ಘನತೆಯನ್ನು ಲೆಕ್ಕಿಸದೆ ಕಾವಲುಗಾರನಾಗಿ

In Public domain. Digitization Muthulakshmi Research Academy

ಬಾಗಿಲು ಬಳಿ ಕುರ್ಚಿ ಹಾಕಿಕೊಂಡು ಕುಳಿತರು. ಹೊರಗಡೆ ಎಲ್ಲ ಭಾಷೆಯ ಮಾಧ್ಯಮದವರು ತಮ್ಮ ತಮ್ಮ ಕ್ಯಾಮರಾಗಳೊಂದಿಗೆ ತುಂಬಿಕೊಂಡಿದ್ದರು. ಟಿ.ವಿ. ಕ್ಯಾಮರಾಗಳನ್ನು ಸಂದಿಗೊಂದಿಗಳಲ್ಲಿಟ್ಟು ವರದಿ ಮಾಡಲು ಯತ್ನಿಸುತ್ತಿದ್ದರು. ಅದನ್ನು ಕಂಡು ನಾವು ಇನ್ನಷ್ಟು ಹುಷಾರಾದೆವು. ಮಾಧ್ಯಮದವರಿಗೆ ಇನ್ನೊಂದು ಕೋಣೆ ಒದಗಿಸಿ, ಅವರಿಗೆ ಅಲ್ಲಿ ಕುಳಿತುಕೊಳ್ಳಲು ಸಚಿವ ವಿನಯ ಕುಲಕರ್ಣಿ ವಿನಂತಿಸಿಕೊಂಡರು. ಆದರೂ ಅವರಲ್ಲಿ ಕೆಲವರು ಪತ್ರಿಕಾಬುದ್ಧಿ ತೋರಿಸುತ್ತಿದ್ದರು.

ಸಭೆ ಪ್ರಾರಂಭವಾಯಿತು. ಮೊದಲಿಗೆ ಲಿಂಗಾಯತ ಸಿದ್ಧಾಂತದ ಪರವಾದ ಮಂಡನೆ ಆರಂಭವಾಯಿತು. ನಮ್ಮಲ್ಲಿರುವ ದಾಖಲೆಗಳ ಬಗ್ಗೆ ಹೇಳುತ್ತಿರುವಾಗ ಎದುರು ಪಕ್ಷದ ಸಂಸ್ಕೃತ ವಿದ್ವಾಂಸರು ಪುರಾಣ ಪುಣ್ಯಕಥೆಗಳನ್ನು ವೀರಶೈವಕ್ಕೆ ದಾಖಲೆಯಾಗಿ ನೀಡಲಾರಂಭಿಸಿದರು. ಆಗ ಕೆ.ಆರ್.ಮಂಗಳಾ ಅವರು "ವಾಸ್ತವವನ್ನು ಪುರಾಣದಲ್ಲಿ ಹುಡುಕಲಾಗುವುದಿಲ್ಲ. ಇತಿಹಾಸದ ಘಟನೆ ಮಾತ್ರ ಹೇಳಿ" ಎಂದರು. ಗಲಾಟೆ ಪ್ರಾರಂಭವಾಯಿತು. ಐದು ನಿಮಿಷದ ಬಿಡುವಿನ ನಂತರ ಸಭೆ ಶಾಂತವಾಯಿತು. ಡಾ.ಜಾಮದಾರ ಎದ್ದುನಿಂತು ವಾದ ಮಂಡಿಸಲಾರಂಭಿಸಿದರು. ಆಗ ಮಧ್ಯೆ ಪ್ರವೇಶಿಸಿ ಮಾತನಾಡಿದ ಪ್ರಭಾಕರ ಕೋರೆಯವರು ಏಕವಚನ ಪ್ರಯೋಗಿಸಿದರು. ಸಭೆ ರಣರಂಗವಾಯಿತು. ಟೆಂಪರೇಚರ್ ಇಳಿದ ನಂತರ ಮತ್ತೊಮ್ಮೆ ಸಭೆ ಪ್ರಾರಂಭವಾಯಿತು. ಧಾರವಾಡದ ಪ್ರೊ.ಮಹಾದೇವಪ್ಪನವರೂ ಹಿಂದೂಧರ್ಮದ ವ್ಯಾಖ್ಯಾನ ಮಾಡುವಾಗ ಅತ್ತ ಕಡೆಯಿಂದ ಕೆಟ್ಟ ಶಬ್ದ ಪ್ರಯೋಗವಾಯಿತು. ನಮ್ಮ ತಾಳ್ಮೆಯ ಕಟ್ಟೆ ಒಡೆಯಿತು. ನಮ್ಮಲ್ಲೊಬ್ಬ ಸಚಿವರು ತಾಳ್ಮೆ ಕಳೆದುಕೊಂಡರು. ಕೈ ಕೈ ಮಿಲಾಯಿಸುವ ಹಂತಕ್ಕೆ ಹೋಯಿತು. ಸಭೆಯನ್ನು ಮುಂದುವರಿಸುವುದರಲ್ಲಿ ಅರ್ಥವಿಲ್ಲವೆನಿಸಿತು. ಸಭೆಯನ್ನು ಬರಖಾಸ್ತುಗೊಳಿಸಲು ಎರಡು ಪಕ್ಷದವರು ಒಪ್ಪಿಕೊಂಡರು. ೧೦-೧೫ ನಿಮಿಷ ಕಳೆದ ನಂತರ ಕಾಫಿ ಕುಡಿದು ನಗುನಗುತ್ತ ಹೊರಬಂದೆವು. "ಒಮ್ಮತಕ್ಕೆ ಬರಲು ಸಭೆ ವಿಫಲವಾಯಿತೆಂದು" ಮಾಧ್ಯಮದವರಿಗೆ ತಿಳಿಸಿ ಕಾರನ್ನು ಏರಿದೆವು.

ನಾಲ್ಕನೆಯ ಸಭೆಯು ನಿವೃತ್ತ ಮುಖ್ಯ ಕಾರ್ಯದರ್ಶಿಯವರಾದ ಶ್ರೀ ಬಿ.ಎಸ್.ಪಾಟೀಲರ ಮನೆಯಲ್ಲಿ ನಡೆಯಿತು. ಆಗ ವೀರಶೈವ ಮಹಾಸಭೆಯ ಪರವಾಗಿ ಕೇವಲ ಪಾಟೀಲರು ಮಾತ್ರ ಇದ್ದರು. ಇತ್ತಕಡೆ ಡಾ.ಜಾಮದಾರ, ನಾನು ಮತ್ತು ಡಾ.ಜಯಣ್ಣ ಭಾಗವಹಿಸಿದೆವು. ಪಾಟೀಲರಿಗೆ ಲಿಂಗಾಯತ ಸಿದ್ಧಾಂತದ ಮನವರಿಕೆ ಮಾಡಿಕೊಡುವುದಲ್ಲದೆ ನಮ್ಮಲ್ಲಿರುವ ದಾಖಲೆಗಳ ವಿವರ ನೀಡಿದೆವು. ಮುಂದುವರಿದು ಬಸವಣ್ಣ ಲಿಂಗಾಯತ ಧರ್ಮ ಸ್ಥಾಪಕ ಎನ್ನುವುದನ್ನು

In Public domain. Digitization Muthulakshmi Research Academy

ಒಪ್ಪಿಕೊಂಡರೆ ಮಾತ್ರ ಮುಂದಿನ ಸಭೆಗಳಲ್ಲಿ ನಾವು ಭಾಗವಹಿಸುವುದಾಗಿ ಸ್ಪಷ್ಟವಾದ ನಮ್ಮ ನಿಲುವನ್ನು ತಿಳಿಸಿ ಹೊರಬಂದೆವು.

ಎಡಬಿಡಂಗಿ ಸಂಸ್ಥೆ

ಲಿಂಗಾಯತರು ಮತ್ತು ವೀರಶೈವರು ಒಂದೇ ಎಂದು ಹೇಳುವ ಎಡಬಿಡಂಗಿ ಸಂಸ್ಥೆ ವೀರಶೈವ ಮಹಾಸಭಾ. ನೂರು ವರ್ಷಗಳ ಹಿಂದೆ ಕೇವಲ ವೀರಶೈವರ ಹಿತ ಕಾಪಾಡಲು ಹುಟ್ಟಿಕೊಂಡ ಸಂಸ್ಥೆ ಇದು. ಟೊಳ್ಳುಸಿದ್ಧಾಂತದ ಆಧಾರದ ಮೇಲೆ, ಮಾನವನನ್ನು ಮಾನವನನ್ನಾಗಿ ಕಾಣದೆ, ಸಮಾಜವನ್ನು ವಿಭಜಿಸಿ, ಕೇವಲ ಉಚ್ಚವರ್ಗದ ಹಿತ ಕಾಪಾಡುವ ಇಚ್ಛೆಯೊಂದಿಗೆ ಪ್ರಾರಂಭವಾದ ಸಂಸ್ಥೆ ಇದು. ತೋರಿಕೆಗಾಗಿ ಶರಣಸಿದ್ಧಾಂತವನ್ನು ಎರವಲು ಪಡೆದು ಲಿಂಗಾಯತರು ವೀರಶೈವರು ಒಂದೇ ಎಂದು ಲಿಂಗಾಯತರನ್ನು ತಪ್ಪುದಾರಿಗೆ ದೂಡುವ ಸಂಸ್ಥೆ ಇದಾಗಿದೆ. ಜಾತಿರಹಿತ ಸಮಾಜ ಕಟ್ಟುವುದು ಲಿಂಗಾಯತ ಧರ್ಮದ ಸಿದ್ಧಾಂತ. ಸಮಾಜವನ್ನು ಜಾತಿಗಳಲ್ಲಿ ವಿಂಗಡಿಸುವುದು ಹಿಂದೂ/ವೀರಶೈವ ಸಿದ್ಧಾಂತ. ಎಂಟುನೂರು ವರ್ಷಗಳ ಹಿಂದೆ ಇದೇ ಉದ್ದೇಶಕ್ಕಾಗಿ ವೈದಿಕ ಧರ್ಮದಿಂದ ಸಿಡಿದೆದ್ದು ಹೊರಬಂದವರು ಶರಣರು. ಲಿಂಗಾಯತ ಮತ್ತು ವೀರಶೈವ ಇವೆರಡು ಸಮಾನಾಂತರ ಪದಗಳು ಎಂದು ಹೇಳಿಕೊಳ್ಳುತ್ತ ಈ ಸಂಸ್ಥೆಯು ಲಿಂಗಾಯತ ಧರ್ಮದ ಮಾನ್ಯತೆಯನ್ನು ವಿರೋಧಿಸಿದ್ದೇಕೆ? ಸರಕಾರಿ ದಾಖಲೆಗಳಲ್ಲಿ ವೀರಶೈವ ಶಬ್ದ ಮೊದಲ ಬಾರಿ ಕಾಣಿಸಿಕೊಂಡಿದ್ದು ಮೈಸೂರು ಸಂಸ್ಥಾನದ ೧೮೯೧ ಜನಗಣತಿಯಲ್ಲಿ. ಅದಕ್ಕೂ ಮುಂಚೆ ಬ್ರಿಟಿಷರ ಆಡಳಿತದಲ್ಲಿ ೧೮೭೧ರಲ್ಲಿ ನಡೆದ ಮೈಸೂರು ಪ್ರಾಂತದ ಜನಗಣತಿಯಲ್ಲಿ ಲಿಂಗಾಯತವು ಸ್ವತಂತ್ರ ಧರ್ಮ ಎಂದು ದಾಖಲಾಗಿದೆ. ಲಿಂಗಾಯತರ ಕಾರಣದಿಂದ ಅಧಿಕಾರ ಕಳೆದುಕೊಂಡಿದ್ದ, ಮೈಸೂರು ಅರಸರು ೫೦ ವರ್ಷಗಳ ನಂತರ ೧೮೮೧ರಲ್ಲಿ ಮರಳಿ ಆಡಳಿತದ ಚುಕ್ಕಾಣಿ ಹಿಡಿಯುವ ಸಂದರ್ಭದಲ್ಲಿ ಎರಡನೆಯ ಜನಗಣತಿ(೧೮೮೧) ಕೈಗೊಳ್ಳಲಾಯಿತು. ಈ ಜನಗಣತಿಯಲ್ಲಿ ಲಿಂಗಾಯತರನ್ನು ಹಿಂದೂಗಳೆಂದು ಪರಿಗಣಿಸಿ ಇವರನ್ನು ಶೂದ್ರವರ್ಗದಲ್ಲಿ ಸೇರಿಸಿ ಮೈಸೂರು ಆಡಳಿತಗಾರರು ತಮ್ಮ ಕೋಪವನ್ನು ತಣಿಸಿಕೊಂಡಿದ್ದರು. ಇದರಿಂದ ಅಸಮಾಧಾನಗೊಂಡ ಮೈಸೂರು ಭಾಗದ ಲಿಂಗಾಯತರು ತಮ್ಮ ಸಾಮಾಜಿಕ ಸ್ಥಾನಮಾನಕ್ಕಾಗಿ ಹೋರಾಟ ಪ್ರಾರಂಭಿಸಿದರು. ಅದರ ನೇತೃತ್ವವನ್ನು ವಹಿಸಿದ ಮೈಸೂರು ಅರಮನೆಯ ಆಸ್ಥಾನ ಪಂಡಿತರಾಗಿದ್ದ ವಿದ್ವಾನ ಪಿ.ಆರ್.ಕರಿಬಸವಶಾಸ್ತ್ರಿಯವರು ಲಿಂಗಾಯತರೂ ಬ್ರಾಹ್ಮಣರಷ್ಟೇ ವೇದ ಪಾರಾಯಣ ಮಾಡಿದವರು. ಅವರು ಶೂದ್ರರಲ್ಲ, ಅವರು ಲಿಂಗ ಧರಿಸಿದ ಲಿಂಗೀ ಬ್ರಾಹ್ಮಣರೆಂದು ಹೊಸ ವಾದ ಮಂಡಿಸಿದರು. ಮಾನವರೆಲ್ಲರೂ ಸಮಾನರು ಎಂದು ಪ್ರತಿಪಾದಿಸಿದ ಬಸವಣ್ಣ ಲಿಂಗಾಯತರ ಧರ್ಮಗುರುವಲ್ಲ,

In Public domain. Digitization Muthulakshmi Research Academy

ಅವರು ಹಿಂದೂಧರ್ಮ ಸುಧಾರಕರು ಎಂದು ದಿಕ್ಕು ತಪ್ಪಿಸಲೆತ್ನಿಸಿದರು.

ಹಿಂದೂಧರ್ಮದ ಜೀವಾಳವಾದ ಜಾತಿಪದ್ಧತಿ, ವರ್ಣಾಶ್ರಮ ಲಿಂಗಾಯತರಲ್ಲೂ ಇದೆ ಎಂದು ಪ್ರತಿಪಾದಿಸುತ್ತ, ಗುರುವರ್ಗದಲ್ಲಿದ್ದ ಜಂಗಮರನ್ನು ಲಿಂಗಾಯತ ಬ್ರಾಹ್ಮಣರೆಂದರು. ಆಡಳಿತಗಾರರಾಗಿದ್ದ ಸಾಮಂತ ಅರಸರು, ಚಿಕ್ಕ ಚಿಕ್ಕ ಸಂಸ್ಥಾನಗಳನ್ನು ಹೊಂದಿದ್ದ ದೇಸಾಯಿಗಳನ್ನು, ಜಮೀನುದಾರರಾಗಿದ್ದ ಊರಗೌಡರನ್ನು ಲಿಂಗಾಯತ ಕ್ಷತ್ರಿಯರೆಂದರು, ವ್ಯಾಪಾರ ವಹಿವಾಟುಗಳಲ್ಲಿ ತೊಡಗಿದ್ದ ಬಣಜಿಗರು ಹಾಗೂ ಗಾಣಿಗರನ್ನು ವೈಶ್ಯರೆಂದು ಗುರುತಿಸಬೇಕೆಂದರು. ಉಳಿದ ವೃತ್ತಿನಿರತ ಪಂಗಡಗಳನ್ನು ಶೂದ್ರರೆಂದರು. ಗುಡಿಗುಂಡಾರ ಸಂಸ್ಕೃತಿ, ಬಹುದೇವೋಪಾಸನೆ, ವೇದ ಉಪನಿಷತ್ತುಗಳಲ್ಲಿ ನಂಬಿಕೆ, ಸ್ವರ್ಗ–ನರಕ, ಪುನರ್ಜನ್ಮ, ಧರ್ಮರಕ್ಷಣೆಗಾಗಿ ನಾಲ್ಕು ಯುಗಗಳಲ್ಲಿ ಲಿಂಗದಿಂದ ಉದ್ಭವಿಸುವ ಗುರುಗಳ ಕಲ್ಪನೆ ವೀರಶೈವರದು. ಇವುಗಳೆಲ್ಲ ಲಿಂಗಾಯತ ಧರ್ಮದ ಕಲ್ಪಾನಾತೀತ ವಿಷಯಗಳು. ಶರಣಸಿದ್ಧಾಂತದ ವಿರೋಧಿ ಸಿದ್ಧಾಂತವನ್ನು ಪ್ರತಿಪಾದಿಸುವ ವೀರಶೈವ ಮತವು ಲಿಂಗಾಯತ ಹೇಗಾಗುತ್ತದೆ? ಪ್ರಶ್ನೆಗಳಿಗೆ ಸಮಂಜಸವಾಗಿ ಉತ್ತರಿಸಲಾರದು ಈ ವೀರಶೈವ ಮಹಾಸಭಾ. ಆದರೆ ಇಂದು ಅದು ತನ್ನ ಸಂಸ್ಥೆಯ ಹೆಸರನ್ನು ವೀರಶೈವ/ಲಿಂಗಾಯತ ಎಂದು ಬದಲಾಯಿಸಿದೆ. ಹೆಸರು ಬದಲಾಯಿಸಿದ ಮಾತ್ರಕ್ಕೆ ಮೂಲಸಿದ್ಧಾಂತ ಬದಲಾಗುವುದೇ? ಲಿಂಗಾಯತ ಧರ್ಮಕ್ಕಾಗಿ, ಲಿಂಗಾಯತರ ಸರ್ವತೋಮುಖ ಅಭಿವೃದ್ಧಿಗಾಗಿ ವೀರಶೈವ ಮಹಾಸಭಾ ಕಟ್ಟಿದ ವಿಶಾಲ ಮನೋಭಾವದ ಅರಟಾಳ ರುದ್ರಗೌಡರ, ಶಿರಸಂಗಿ ಲಿಂಗರಾಜರ, ರಾಜಾ ಲಖಮಗೌಡರ, ವಾರದ ಮಲ್ಲಪ್ಪನವರ, ಕೆ.ಪಿ.ಪುಟ್ಟಣ್ಣಚೆಟ್ಟಿಯವರ, ಹಾಲಭಾವಿ ವೀರಭದ್ರಪ್ಪನವರ, ಸಿದ್ಧರಾಮಪ್ಪ ಪಾವಟೆಯವರ, ಶಾಂತವೀರಪ್ಪ ಮೆಣಸಿನಕಾಯಿಯವರ ಕನಸು ಇಂದು ಭಗ್ನಗೊಂಡಿದೆ. ಹಿಂದೂ ಮೂಲಭೂತವಾದಿಗಳಾಗಿದ್ದ, ತಮ್ಮ 'ಹಿಡನ್ ಅಜೆಂಡಾ' ಸಾಧಿಸಲು ಲಿಂಗಾಯತ ಪ್ರಾತಃಸ್ಮರಣೀಯರೊಂದಿಗೆ ಕೈ ಜೋಡಿಸಿದ್ದ ಪಿ.ಆರ್.ಕರಿಬಸವಶಾಸ್ತ್ರಿಯವರಲ್ಲಿ, ಯಜಮಾನ ವೀರಸಂಗಪ್ಪನವರಲ್ಲಿ ಲಿಂಗಾಯತರು ಲಿಂಗೀ ಬ್ರಾಹ್ಮಣರೆಂಬ ಕಲ್ಪನೆ ಮೈದುಂಬಿಕೊಂಡಿತ್ತು. ವೃತ್ತಿನಿರತ ನೂರು ಸಮಾಜಗಳ ಬಹುಸಂಖ್ಯಾತ ಲಿಂಗಾಯತ ಧರ್ಮ ಅಲ್ಪಸಂಖ್ಯಾತ ವೀರಶೈವರ ಹಿಡಿತದಲ್ಲಿ ಸಿಕ್ಕು, ತತ್ವ, ಸಿದ್ಧಾಂತ, ಆಚಾರ, ವಿಚಾರಗಳನ್ನು ಮರೆಯುತ್ತದೆ.

ಇದೊಂದು ಕಾಂಗ್ರೆಸ್ ಪಕ್ಷದ ಒಳಸಂಚೇ?

೨೦೧೮ರಲ್ಲಿ ನಡೆದ ವಿಧಾನಸಭಾ ಚುನಾವಣೆಯ ಸಮಯದಲ್ಲಿಯೂ

In Public domain. Digitization Muthulakshmi Research Academy

ವೀರಶೈವ ಮಹಾಸಭಾ ಇಂತಹದೇ ನಾಟಕ ಆಡಲಿತ್ತು. ಬರಲಿದ್ದ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ೨೦೧೭ರಲ್ಲೇ ಇದೇ ಮಹಾಸಭಾ ತನ್ನ ತಾಲೀಮನ್ನು ಪ್ರಾರಂಭಿಸಿತ್ತು. ಅಂದಿನ ಕಾಂಗ್ರೆಸ್ ಸರಕಾರದಲ್ಲಿದ್ದ ಆರು ಲಿಂಗಾಯತ ಸಚಿವರಲ್ಲಿ ಮೂವರು ವೀರಶೈವ ಮಹಾಸಭಾದ ಕೃಪಾಶೀರ್ವಾದಕ್ಕೆ ಒಳಗಾಗಿದ್ದವರು. ಅವರೆಲ್ಲರಿಗೂ ಬರಲಿರುವ ಚುನಾವಣೆಯಲ್ಲಿ ಗೆಲವು ಸಾಧಿಸಿ ಮತ್ತೊಮ್ಮೆ ಅಧಿಕಾರ ಹಿಡಿಯವ ಹೆಬ್ಬಯಕೆ ಇತ್ತು. ಆಗ ಅವರಿಗೆ ಅಡ್ಡಗಾಲಾಗಿದ್ದರು ಲಿಂಗಾಯತರ ಪರಮೋಚ್ಚ ನಾಯಕ ಯಡಿಯೂರಪ್ಪನವರು. ಇವರು ಲಿಂಗಾಯತ ಧರ್ಮೀಯರಾದರೂ ಲಿಂಗಾಯತ ಸಿದ್ಧಾಂತ ಅರಿತವರಲ್ಲ. ಆರ್.ಎಸ್.ಎಸ್. ಕಾರ್ಯಕರ್ತರಾದ ಇವರು ಲಿಂಗಾಯತ ಒಂದು ಜಾತಿಯೆಂದು ಹಿಂದೂಧರ್ಮದ ಭಾಗವೆಂದೂ ಪ್ರತಿಪಾದಿಸುತ್ತಿದ್ದವರು. ಆದರೂ ತಮ್ಮ ಚುನಾವಣಾ ಗಿಮ್ಮಿಕ್ಕುಗಳ ಮೂಲಕ ಬಹುಸಂಖ್ಯಾತ ಲಿಂಗಾಯತರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದರು. ೨೦೦೮ರಲ್ಲಿ ಲಿಂಗಾಯತರನ್ನು ಒಟ್ಟುಗೂಡಿಸಿ ಬಿ.ಜೆ.ಪಿ.ಯನ್ನು ಅಧಿಕಾರಕ್ಕೆ ತಂದವರು. ತಮ್ಮದೇ ಪಕ್ಷದಲ್ಲಿ ತಮ್ಮ ಮಾತಿಗೆ ಮನ್ನಣೆ ಸಿಗದಿದ್ದಾಗ ಈ ಭಾವನಾಜೀವಿ ಪಕ್ಷದಿಂದ ಹೊರಬಂದು, ೨೦೧೩ರಲ್ಲಿ ಕೆ.ಜೆ.ಪಿ.ಯನ್ನು ಕಟ್ಟಿ ಲಿಂಗಾಯತರನ್ನು ನಂಬಿ ಕೈ ಸುಟ್ಟುಕೊಂಡಿದ್ದರು. ಆದರೆ ಅವರ ಹೊಸ ಪಕ್ಷ ಕೆ.ಜೆ.ಪಿ.ಯು ಬಿ.ಜೆ.ಪಿ.ಯನ್ನು ಸೋಲಿಸುವಲ್ಲಿ ಭರ್ಜರಿ ಯಶಸ್ಸನ್ನು ಸಾಧಿಸಿದ್ದರು.

ಬಿ.ಜೆ.ಪಿ. ಪರಾಭವದ ಕಾರಣ ಕೆ.ಜೆ.ಪಿ. ಎಂಬುದು ಕಾಂಗ್ರೆಸ್ಸಿಗರಿಗೆ ಗೋಡೆಬರಹದಂತೆ ಕಣ್ಣಿಗೆ ಕಾಣುತ್ತಿತ್ತು. ಇದನ್ನೇ ದಾಳವಾಗಿ ಪ್ರಯೋಗಿಸಲು ಕಾಂಗ್ರೆಸ್ಸಿಗರು ಮುಂದಾದರು. ಇವರ ಹೊಸ ನೀತಿಯಲ್ಲಿ ತಮ್ಮ ತೆಕ್ಕೆಯಲ್ಲಿರುವ ಅಹಿಂದ ಮತಗಳೊಂದಿಗೆ ಲಿಂಗಾಯತರ ಶೇ. ೨-೩ರಷ್ಟು ಮತಗಳು ತಮ್ಮ ಕಡೆಗೆ ವಾಲಿದರೆ ವಿಧಾನಸೌಧದ ಮೂರನೇ ಮಹಡಿಯಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ಬರಬಹುದೆಂದಿದ್ದರು ಕಾಂಗ್ರೆಸ್ಸಿಗರು. ಆಗ ಲಿಂಗಾಯತ ಸಚಿವರಿಗೆ ನೆನಪಾಗಿದ್ದು ಇದೇ ವೀರಶೈವ ಮಹಾಸಭಾ. ವಿಶ್ವವಿದ್ಯಾಲಯವೊಂದಕ್ಕೆ ಅಕ್ಕಮಹಾದೇವಿ ಹೆಸರಿಡುವುದು, ಬಸವಣ್ಣನವರ ಪಟಗಳನ್ನು ಸರಕಾರಿ ಕಚೇರಿಯ ಗೋಡೆಗೆ ಏರಿಸುವುದನ್ನು ಮಾಡಿ “ಲಿಂಗಾಯತ ಧರ್ಮದ ಮಾನ್ಯತೆ”ಯನ್ನು ಕೊಡುತ್ತೇವೆಂದು ವಾಗ್ದಾನಿಸಿದರು. ಇವರ ಕಾರ್ಯಸೂಚಿಯ ಅನುಗುಣವಾಗಿ ಇದೇ ವೀರಶೈವ ಮಹಾಸಭಾದವರು ಸಿದ್ಧರಾಮಯ್ಯನವರಿಗೆ ಲಿಂಗಾಯತ ಧರ್ಮದ ಮಾನ್ಯತೆಗಾಗಿ ಮನವಿ ಸಲ್ಲಿಸಿದರು. ಸಮಾಜವಾದಿ ಸಿದ್ಧರಾಮಯ್ಯನವರಿಗೆ ಇದೊಂದು ಒಳ್ಳೆಯ ಅವಕಾಶವೆಂಬಂತೆ ಕಂಡಿತು. ಮನವಿಯನ್ನು ಪುರಸ್ಕರಿಸುವ ಭರವಸೆಯನ್ನೂ ಕೊಟ್ಟುಬಿಟ್ಟರು. ಆಗ ವೀರಶೈವ

In Public domain. Digitization Muthulakshmi Research Academy

ಮಹಾಸಭಾದಲ್ಲಿದ್ದ ಮೂಲಭೂತವಾದಿಗಳು ಎಚ್ಚೆತ್ತುಕೊಂಡರು. ಈ ಹಿಂದೆ ಮಹಾಸಭಾ ಸ್ಥಾಪನೆಯ ಸಮಯದಲ್ಲಿ ಈ ಮೂಲಭೂತವಾದಿಗಳು ಒಳ ನುಸುಳಿದ್ದರು. ಲಿಂಗಾಯತ ಸಾಮಾಜಿಕ ಸ್ಥಾನಮಾನ, ಅವರ ಏಳಿಗೆಗಾಗಿ ಸಂಸ್ಥೆ ಕಟ್ಟೋಣ ಸಂಸ್ಥೆಯ ಹೆಸರು ಪ್ರಮುಖವಲ್ಲ ಎಂಬ ವಾದ ಮಂಡಿಸಿ ತಮ್ಮ 'ಹಿಡನ್ ಅಜೆಂಡಾ' ಜಾರಿಗೊಳಿಸಿ ವೀರಶೈವ ಮಹಾಸಭಾ ಎಂದು ನಾಮಕರಣ ಮಾಡಿದ್ದರು.

ವೀರಶೈವವು ಹಿಂದೂಧರ್ಮದ ಒಂದು ಭಾಗ ಎನ್ನುವ ಇವರು ಬಸವಣ್ಣನವರ ಸಿದ್ಧಾಂತಗಳನ್ನು ಗಾಳಿಗೆ ತೂರಿದರೂ ಅವರ ಹೆಸರನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡವರು. ಶರಣರ ಸಿದ್ಧಾಂತಗಳನ್ನು ಸರಿಯಾಗಿ ತಿಳಿದುಕೊಳ್ಳದೆ ಲಿಂಗಾಯತ, ವೀರಶೈವ ಎರಡೂ ಒಂದೇ, ಅವು ಕೇವಲ ಪರ್ಯಾಯ ಪದಗಳು ಎಂದು ತಿಪ್ಪೆ ಸಾರಿಸುತ್ತಲಿರುವರು. ಹಿಂದೂಗಳ ಮೂಲಭೂತ ಸಿದ್ಧಾಂತಗಳನ್ನು ಧಿಕ್ಕರಿಸಿ ವೈದಿಕ ಧರ್ಮದಿಂದ ಸಿಡಿದೆದ್ದು ಹೊರಬಂದ ಶರಣರು ಸಹ ವೈದಿಕರೆನ್ನುವದು ಇತಿಹಾಸಕ್ಕೆ ಹಾಗೂ ಲಿಂಗಾಯತ ಧರ್ಮಕ್ಕೆ ಮಾಡುವ ಅವಮಾನವೆಂದು ಅವರಾರೂ ಅರ್ಥ ಮಾಡಿಕೊಳ್ಳದವರು. ಈ ಮೂಲಭೂತವಾದಿಗಳ ಉಡದ ಹಿಡಿತಕ್ಕೆ ಸಿಲುಕಿಕೊಂಡಿರುವ ಮಹಾಸಭಾ ಎಂಥಾ ದುಸ್ಥಿತಿ ತಲುಪಿದೆಯೆಂದರೆ ವಿರುದ್ಧ ದಿಕ್ಕಿನಲ್ಲಿ ಚಲಿಸುವ ಎರಡು ರೈಲುಗಳನ್ನು ಏಕಕಾಲಕ್ಕೆ ಹಿಡಿಯುವ ದುಸ್ಸಾಹಸಕ್ಕೆ ಕೈ ಹಾಕಿದಂತಿದೆ. ಪರಿಣಾಮವಾಗಿ ಅಪಹಾಸ್ಯಕ್ಕೆ ಗುರಿಯಾಗಿದೆ.

ಕೊನೆ ಟಿಪ್ಪಣಿಗಳು

೧) ಪ್ರಜಾವಾಣಿ ಪತ್ರಿಕೆ, ಜೂನ್ ೨೨, ೨೦೧೭.

೨) ಪ್ರಜಾವಾಣಿ ಪತ್ರಿಕೆ, ಜುಲೈ ೨೭,೨೦೧೭.

೩) ಪ್ರಜಾವಾಣಿ ಪತ್ರಿಕೆ, ಜುಲೈ ೨೭,೨೦೧೭.

೪) ಪ್ರಜಾವಾಣಿ ಪತ್ರಿಕೆ, ಜುಲೈ ೩೦,೨೦೧೭.

೫) ಪ್ರಜಾವಾಣಿ ಪತ್ರಿಕೆ, ಜುಲೈ ೨೯,೨೦೧೭

೬) ಪ್ರಜಾವಾಣಿ ಪತ್ರಿಕೆ, ಜುಲೈ ೨೯,೨೦೧೭

೭) ಪ್ರಜಾವಾಣಿ ಪತ್ರಿಕೆ, ಜುಲೈ ೨೭,೨೦೧೭

೮) ಪ್ರಜಾವಾಣಿ ಪತ್ರಿಕೆ, ಜುಲೈ ೨೭,೨೦೧೭

In Public domain. Digitization Muthulakshmi Research Academy

ಅಧ್ಯಾಯ ಎರಡು

ಅಂತರಂಗದ ಅನಾವರಣ

ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಬೇಡಿದಾಗ ಮೊದಲಿಗೆ ಗಾಬರಿಯಾದವರು ಪಂಚಪೀಠಾಧೀಶ್ವರರು. ಇವರು ನಾಲ್ಕೈದು ಶತಮಾನಗಳಿಂದ ಮರಳಿನಿಂದ ನಿರ್ಮಿಸಿದ ಸುಳ್ಳಿನ ಸೌಧದಲ್ಲಿ ಮಲಗಿ, ಮುಗ್ಧ ಲಿಂಗಾಯತರನ್ನು ಶೋಷಿಸುತ್ತ, ಅವರ ಹೆಗಲ ಮೇಲೆ ಸವಾರಿ ಮಾಡಿದ್ದರು. ಪ್ರತ್ಯೇಕ ಲಿಂಗಾಯತ ಧರ್ಮದ ಬೇಡಿಕೆಯು ಕಾವೇರುತ್ತಿದ್ದಂತೆ ವೀರಶೈವ/ಲಿಂಗಾಯತಗಳಲ್ಲಿರುವ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ವಿಷಯವಾಗಿ ಪ್ರಜಾವಾಣಿ ಪತ್ರಿಕೆಯ ವರದಿಗಾರರಾದ ವೆಂಕಟೇಶ ಜೆ.ಎಚ್. ಅವರು ಕಾಶಿ ಪೀಠದ ಪೀಠಾಧಿಪತಿಯಾದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿಯವರೊಂದಿಗೆ ಜುಲೈ ೨೩, ೨೦೧೭ರಂದು ನಡೆಸಿದ ಸಂದರ್ಶನದ ಪೂರ್ಣ ವರದಿ ಇದು.

ಪ್ರಜಾವಾಣಿ : ಲಿಂಗಾಯತ ಸ್ವತಂತ್ರ ಧರ್ಮ ಎಂಬ ನಿಲುವಿಗೆ ನಿಮ್ಮ ಬೆಂಬಲವಿದೆಯೇ?

ಶ್ರೀಗಳ ಉತ್ತರ : ಲಿಂಗಾಯತ ಹೆಸರಿನಲ್ಲಿ ಸ್ವತಂತ್ರ ಧರ್ಮ ಮನ್ನಣೆ ಪ್ರಸ್ತಾವಕ್ಕೆ ನಾವು ಬೆಂಬಲ ನೀಡುವುದಿಲ್ಲ. ವಾಸ್ತವವಾಗಿ ಲಿಂಗಾಯತ ಪದ ಧರ್ಮವಾಚಕ ಪರಿಭಾಷೆಯೇ ಅಲ್ಲ. ಆದೊಂದು ದೀಕ್ಷಾಸಂಸ್ಕಾರ. ಲಿಂಗ ಧರಿಸಿ ಅದಕ್ಕೆ ಅಧೀನನಾಗಿ ಬದುಕುವವನೇ ವೀರಶೈವ. ಅಷ್ಟಾವರಣಗಳಿಂದ ಕೂಡಿದ

In Public domain. Digitization Muthulakshmi Research Academy

ಶಿವಭಕ್ತನಿಗೆ ಅದು ರಕ್ಷಾಕವಚವಿದ್ದಂತೆ. ಹಾಗಾಗಿ ಅದೇ ಬಳಕೆ ಸೂಕ್ತ. ನಮ್ಮದು ಸಮಗ್ರ ದೃಷ್ಟಿ ವೀರಶೈವ-ಲಿಂಗಾಯತ ಎರಡು ಪದ ಬಳಸಿ ಪ್ರಸ್ತಾಪ ಸಲ್ಲಿಸಿದರೆ ಬೆಂಬಲ ನೀಡುತ್ತೇವೆ ಎಂದರು.

ಟಿಪ್ಪಣಿ : ಶ್ರೀಗಳ ನುಣುಚಿಕೊಳ್ಳುವ ಉತ್ತರಕ್ಕೆ ಉಪಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಧರ್ಮವಾಚಕ ಪದ ಎಂದರೇನು? ಹಾಗೂ ಅದರ ಲಕ್ಷಣಗಳೇನು? ವೀರಶೈವ ಹೇಗೆ ಧರ್ಮವಾಚಕ ಪದ? ಒಂದು ಧರ್ಮಕ್ಕೆ ಬೇಕಾಗುವ ಕನಿಷ್ಠ ಮೂಲಲಕ್ಷಣಗಳು ವೀರಶೈವ ಪಂಥಕ್ಕಿವೆಯೇ ? ಅವರೇ ಹೇಳಿದಂತೆ ಲಿಂಗಾಯತ ಒಂದು ದೀಕ್ಷಾಸಂಸ್ಕಾರ. ಲಿಂಗ ಧರಿಸಿ ಅದಕ್ಕೆ ಅಧೀನವಾಗಿ ಬದುಕುವವನು 'ಲಿಂಗಾಯತ'ನಾಗುತ್ತಾನೆಯೇ ಹೊರತು "ವೀರಶೈವ" ಹೇಗಾಗುತ್ತಾನೆ ? ಅಷ್ಟಾವರಣವನ್ನು ಸಮಗ್ರವಾಗಿ ಸಾಂಸ್ಥಿಕ ರೂಪದಲ್ಲಿ ಮೊದಲಿಗೆ ಸಾರ್ವಜನಿಕವಾಗಿ ಸಾರ್ವಜನಿಕರಿಗೆ ತಿಳಿಸಿಕೊಟ್ಟವರು ಬಸವಾದಿ ಶರಣರಲ್ಲವೆ? ಚಾತುರ್ವರ್ಣದಲ್ಲಿ ಅಷ್ಟಾವರಣ ಯಾರಿಗೆ ಬೋಧಿಸಲಾಗುತ್ತಿತ್ತು, 'ಸಕಲ ಜೀವಾತ್ಮಗಳಿಗೂ ಲೇಸನ್ನು ಬಯಸುವುದೇ ಧರ್ಮ'ವಲ್ಲವೆ? ಹಿಂದೂಗಳೆಂದು ಹೇಳುವ ವೀರಶೈವರು ವರ್ಣಾಶ್ರಮವನ್ನು ಬೆಂಬಲಿಸಿದಂತಾಗಲಿಲ್ಲವೆ ? ಪೂಜ್ಯರಿಗೆ ನೀವು ಪ್ರತಿಪಾದಿಸುವ ಧರ್ಮ ವಿಶ್ವವ್ಯಾಪಿ ಆಗಬೇಕೋ ಅಥವಾ ನಿಮ್ಮ ವೈಯಕ್ತಿಕ ಹಟ ಸಾಧನೆಯಾಗಬೇಕೋ ? ಲಿಂಗಾಯತ ಅಲ್ಪಸಂಖ್ಯಾತ ಧರ್ಮವಾದರೆ ನಿಮ್ಮ ಭಕ್ತರಿಗೆ ಸಿಗುವ ಸವಲತ್ತುಗಳು ಮುಖ್ಯವೋ ಅಥವಾ ನೀವೇ ಸೃಷ್ಟಿಸಿದ ವೀರಶೈವ ಎಂಬ ಶೈವಸಿದ್ಧಾಂತದಲ್ಲಿ ಮುಂದುವರಿಯಬೇಕೋ ?

ಪ್ರಜಾವಾಣಿ : **ವೀರಶೈವ ಪದ ಬಳಕೆ ಮಾಡಿದರೆ ಸ್ವತಂತ್ರ ಧರ್ಮದ ಮನ್ನಣೆ ಸಿಗುವುದೆ?**

ಶ್ರೀಗಳ ಉತ್ತರ : ಅದೆಲ್ಲ ಕಾಲ್ಪನಿಕ. ಒಪ್ಪಲು ಆಗುವುದಿಲ್ಲ. ಬಸವಣ್ಣ ತಾವೇ ಗುರು, ಧರ್ಮಸ್ಥಾಪಕ ಎಂದು ಎಲ್ಲಿಯೂ ಹೇಳಿಕೊಂಡಿಲ್ಲ. ಲಿಂಗಾಯತ ಪದವನ್ನು ಉಲ್ಲೇಖ ಮಾಡಿಲ್ಲ. ಅವರ ವಚನಗಳಲ್ಲಿಯೂ ಕಾಣಸಿಗುವುದಿಲ್ಲ. ಬಸವಣ್ಣ ಹೇಳಲಾರದ್ದನ್ನು ಅವನ ಹೆಸರು ಹೇಳಿಕೊಂಡು ಕೆಲವರು ಹೇಳುತ್ತಾರೆ. ಅವರ ಮಾತು ಏಕೆ ನಂಬಬೇಕು? ವೀರಶೈವ ಸನಾತನ ಧರ್ಮ.

In Public domain. Digitization Muthulakshmi Research Academy

ಸ್ಕಂದ ಪುರಾಣದ ಶಂಕರಸಂಹಿತೆಯಲ್ಲಿನ ವ್ಯಾಖ್ಯಾನದಲ್ಲಿ ವೀರಶೈವ ಧರ್ಮದ ಉಲ್ಲೇಖವಿದೆ. ಪಂಚಾಚಾರ್ಯರು ಅದರ ಸಂಸ್ಥಾಪಕರು. ಬಸವಣ್ಣ ಅದರ ಮುಂಚೂಣಿ ಪ್ರಚಾರಕರು. 'ನಾನು ಶೈವನಿದ್ದೆ ವೀರಶೈವನಾದೆ' ಎಂದು ಬಸವಣ್ಣನೇ ಹೇಳಿಕೊಂಡಿದ್ದಾರೆ. ಆರನೇ ಶತಮಾನದಲ್ಲಿ ಕಾಶಿಯಲ್ಲಿ ವೀರಶೈವ ಪೀಠವಿತ್ತು. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ೧೯೪೨ರಲ್ಲಿ ಅಲಹಾಬಾದ್ ಹೈಕೋರ್ಟ್ ದೃಢೀಕರಿಸಿದೆ. ಬಸವಣ್ಣ ಪ್ರತಿಪಾದಿಸಿದ ವಿಚಾರಗಳು ಆಗಮದಲ್ಲಿ ಮೊದಲೇ ಇತ್ತು. ೨೪ ಸಾವಿರ ವಚನಗಳಿದ್ದರೂ ಅವೆಲ್ಲ ಬಿಡಿ ಸಂಗ್ರಹ. ಆಯಾ ಸಂದರ್ಭಕ್ಕೆ ಒಂದೊಂದು ವಿಷಯದ ಬಗ್ಗೆ ಮಾತ್ರ ಹೇಳುತ್ತವೆ. ಸಮಗ್ರತೆ ಇಲ್ಲ. ಧರ್ಮದ ಲಕ್ಷಣ, ಆಚಾರ ವಿಚಾರ, ನಡೆನುಡಿ, ನೀತಿ, ವ್ಯವಹಾರವನ್ನು ಹೇಳುವುದೇ ಧಾರ್ಮಿಕ ಗ್ರಂಥ, ವೇದ, ಆಗಮ ಶಾಸ್ತ್ರಗಳ ಮೂಲವಾಗಿರುವ ಸಿದ್ಧಾಂತ ಶಿಖಾಮಣಿಯಲ್ಲಿ ಈ ಎಲ್ಲ ವಿಚಾರಗಳ ಉಲ್ಲೇಖವಿದೆ. ಅದು ವೀರಶೈವ ಧರ್ಮಗ್ರಂಥ.

ಟಿಪ್ಪಣಿ ೨ : ಯಾವ ಧರ್ಮಗುರುಗಳು ತಾವು ಸ್ಥಾಪಿಸಿದ ಧರ್ಮದ ಗುರು ತಾವೇ ಎಂದು ಹೇಳಿಕೊಂಡಿರುವ ಉದಾಹರಣೆಗಳಿವೆ? ಅಂತಹವು ಬಹಳ ಕಡಿಮೆ. ಇಲ್ಲವೆಂದರೂ ಆದೀತು. ಧರ್ಮದ ಮೂಲಸಿದ್ಧಾಂತಗಳನ್ನು ತಿಳಿಸುವವನೇ ಧರ್ಮಸ್ಥಾಪಕ. ಅವನ ನಂತರ ಅವನ ಅನುಯಾಯಿಗಳು ಆ ಸಿದ್ಧಾಂತಗಳನ್ನು ಆಚರಿಸಿ ಪ್ರಸಾರ, ಪ್ರಚಾರ ಮಾಡುವರು. ಧರ್ಮ ಸಿದ್ಧಾಂತಗಳು ಸರ್ವಜೀವಕುಲಕ್ಕೂ ಸಹಕಾರಿಯಾಗುವಂತಿದ್ದರೆ ಅವು ಜನಪ್ರಿಯವಾಗುವವು. ಅವು ಉಳಿದ ಧರ್ಮಗಳ ಶ್ರೇಷ್ಠತೆಯ ಆಧಾರದಲ್ಲಿ ಹೊಸ ಧರ್ಮದ ಪ್ರಭಾವ ಹೆಚ್ಚಾಗುವುದು ಅಥವಾ ಕುಗ್ಗುವುದು. ಒಂದು ಸಿದ್ಧಾಂತವನ್ನು ಪಾಲಿಸಲು ಹಾಕಿಕೊಂಡ ಸೂತ್ರಗಳೇ 'ಆಚರಣೆ'ಗಳು. ಸಿದ್ಧಾಂತವನ್ನು ಪಾಲಿಸಲು ಕಠಿಣವಾದ ಆಚರಣೆ ಹಾಕಿಕೊಂಡರೆ ಧರ್ಮ ಬೆಳೆಯದೆ ನಾಶವಾಗುವ ಸಂಭವ ಬರಬಹುದು. ಉದಾಹರಣೆಗೆ ಜೈನಧರ್ಮಕ್ಕೆ ಶ್ರೇಷ್ಠ ತತ್ವ ಸಿದ್ಧಾಂತಗಳಿದ್ದರೂ ಕಠಿಣವಾದ ಆಚಾರದಿಂದ ಅದು ತನ್ನ ನೆಲೆ ಕಳೆದುಕೊಳ್ಳಲಿಲ್ಲವೆ? ವಚನಗಳಲ್ಲಿ 'ಲಿಂಗಾಯತ'

In Public domain. Digitization Muthulakshmi Research Academy

ಪದ ೧೦೧ ಬಾರಿ ಬಳಕೆಯಾಗಿದೆ. ಬಸವಣ್ಣನವರ ಐದು ವಚನಗಳಲ್ಲಿ, ಚನ್ನಬಸವಣ್ಣನವರ ಇಪ್ಪತ್ತು ವಚನಗಳಲ್ಲಿ, ಪ್ರಭುದೇವ, ಮಡಿವಾಳ ಮಾಚಿದೇವ, ಮರಳು ಶಂಕರದೇವ, ಅಮುಗೆ ರಾಯಮ್ಮ, ಉರಿಲಿಂಗ ಪೆದ್ದಿಯ ವಚನಗಳಲ್ಲಿ ಲಿಂಗಾಯತ ಶಬ್ದ ಬಳಸಿದ್ದನ್ನು ಪೂಜ್ಯರು ಮರೆಮಾಡುತ್ತಾರೆ. ಇನ್ನು ಬಿಡಿಬಿಡಿ ವಚನಗಳ ಬಗ್ಗೆ ರಂಜಾನ ದರ್ಗಾ "ವಚನ ಚಳುವಳಿ ಒಂದು ತಲೆಮಾರಿನ ಚಳುವಳಿಯಾಗಿದೆ. ಕಾಯಕಜೀವಿಗಳ ಚಳುವಳಿಯಾಗಿದೆ. ಬಿಡಿಬಿಡಿ ವಚನಗಳು ಮತ್ತು ಅವುಗಳಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಸಮೂಹ ಜ್ಞಾನದ ಮತ್ತು ಪ್ರಜಾಪ್ರಭುತ್ವ ಮಾದರಿಯ ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರತೀಕಗಳಾಗಿವೆ. ವಚನಗಳ ಸಂಕಲನವೆಂಬುದು ಅಪೌರುಷೇಯವಾದುದಲ್ಲ. ಶರಣರು ತಮ್ಮ ಅನುಭವದ ಆಧಾರದ ಮೇಲೆ ಅನುಭಾವದ ಎತ್ತರಕ್ಕೆ ಏರಿ ರಚಿಸಿದ ವಚನಗಳಿಂದ ಕೂಡಿದೆ. ಚಲನಶೀಲತೆಯನ್ನು ಉಳಿಸಿಕೊಂಡ ಬಯಲು ತತ್ವದ ಲಿಂಗಾಯತ ಧರ್ಮ ಗ್ರಂಥ ಇದಾಗಿದೆ" ಎನ್ನುತ್ತಾರೆ. ಸನಾತನ ಪಂಥಗಳಾದ ಲಿಂಗಾಯತರು ಆಚರಿಸಿದ್ದರೆನ್ನಲಾದ ಕಾಳಾಮುಖ, ಪಾಶುಪತರ ಕಠಿಣ ಆಚರಣೆಗಳಿಂದ ಆ ಪಂಥಗಳು ನಾಶವಾಗಲಿಲ್ಲವೆ? ನೀವೇ ಹೇಳಿದ ಹಾಗೆ ಬಸವಣ್ಣ ವೀರಶೈವ ಧರ್ಮ ಸುಧಾರಕ. ಇದನ್ನು ಒಂದು ಕ್ಷಣ ಒಪ್ಪಿದರೂ, ಆ ಸುಧಾರಕನ ಸುಧಾರಣಾ ಸಿದ್ಧಾಂತವನ್ನು ನೀವು ಪಾಲಿಸಿದ್ದೀರಾ? ಉದಾಹರಣೆಗೆ ವರ್ಣಾಶ್ರಮ ಸಿದ್ಧಾಂತ ಪ್ರತಿಪಾದಿಸಿದ ಜಾತಿ, ಜಾತಿಯನ್ನು ಆಧರಿಸಿದ ಕರ್ಮ, ಕರ್ಮ ಆಧರಿಸಿದ ಪಾಪ-ಪುಣ್ಯ, ಪಾಪ-ಪುಣ್ಯಗಳಿಂದ ಸ್ವರ್ಗ-ನರಕ, ಅದರಿಂದ ಪುನರ್ಜನ್ಮ, ಇವೆಲ್ಲವನ್ನು ಬಸವಣ್ಣ ತಿರಸ್ಕರಿಸಲಿಲ್ಲವೆ? ಜಗದಗಲ ಮುಗಿಲಗಲ ಶಿವನೊಬ್ಬನೆ ಎನ್ನಲಿಲ್ಲವೆ? ಮರದ ದೇವರು ಕಲ್ಲುದೇವರು ದೇವರಲ್ಲ ಎಂದು ಹೇಳಿದ್ದು ಅದೇ ಸುಧಾರಕನಲ್ಲವೆ? ನೀವು ಅವನನ್ನು ಸುಧಾರಕ ಎಂದು ಒಪ್ಪಿಕೊಳ್ಳುವುದಾದರೆ ಅವುಗಳನ್ನು ಏಕೆ ಪಾಲಿಸಲಿಲ್ಲ?' ರಂಜಾನ್ ದರ್ಗಾ "ಪಂಚಾಚಾರ್ಯರು ವೀರಶೈವ ಧರ್ಮ ಸ್ಥಾಪಕರು ಎಂಬುದರ ಬಗ್ಗೆ

In Public domain. Digitization Muthulakshmi Research Academy

ಸಹಮತವಿದೆ. ಆದರೆ ಬಸವಣ್ಣನವರು ವೀರಶೈವ ಧರ್ಮದ ಸುಧಾರಕರಲ್ಲ. ಅವರು ಲಿಂಗಾಯತ ಧರ್ಮದ ಸ್ಥಾಪಕರು. ಲಿಂಗಪ್ರಿಯರಿಗಾಗಿ ಬದುಕುವವರಿಗೆ ಲಿಂಗಾಯತರೆನ್ನುತ್ತಾರೆ. ಲೋಕಪ್ರಿಯರಿಗಾಗಿ ಬದುಕುವವರಿಗೆ ಲೋಕಾಯತರು ಎನ್ನುತ್ತಾರೆ. ಶರಣರು ಲಿಂಗಪ್ರಿಯರೂ ಹೌದು. ಲೋಕಪ್ರಿಯರೂ ಹೌದು. ಅಂತೆಯೇ ಅವರು ಇಷ್ಟಲಿಂಗ ಮತ್ತು ಜಂಗಮಲಿಂಗದ ಪ್ರತಿಪಾದಕರಾಗಿದ್ದರು."[7] ಎಂದು ಬರೆಯುತ್ತಾರೆ. ಪುರಾಣಗಳು ಪುಂಡರ ಗೋಷ್ಠಿಯೆಂದು ೧೨ನೆಯ ಶತಮಾನದಲ್ಲಿಯೇ ಶರಣರು ತಿರಸ್ಕರಿಸಿದ್ದಾರೆ. ಬಸವಣ್ಣನವರನ್ನು ತಮ್ಮ ಧರ್ಮದ ಸುಧಾರಕರೆಂದು ಒಂದೇ ಒಂದು ಕ್ಷಣ ಒಪ್ಪಿಕೊಂಡರೆ ನೀವು ವೇದ, ಆಗಮ, ಪುರಾಣಗಳನ್ನು ನಂಬುತ್ತಿರಲಿಲ್ಲ. ಪಂಚಾಚಾರ್ಯರ ಮೂಲರಾದ ರೇವಣಸಿದ್ಧರ ಬಗ್ಗೆ ವೀರಶೈವ ಪ್ರತಿಪಾದಕರಾದ ಡಾ. ಎಸ್.ವಿದ್ಯಾಶಂಕರರೇ ವೀರಶೈವ ಧರ್ಮ ಸ್ಥಾಪಕನಾದ "ರೇವಣಸಿದ್ಧರ ಬಗ್ಗೆ ವಿವಾದಾಂಶಗಳಿವೆ" ಎಂದು ಬರೆದಿದ್ದಾರೆ. ಇನ್ನೊಬ್ಬ ವೀರಶೈವ ಪ್ರತಿಪಾದಕ ನಿವೃತ್ತ ನ್ಯಾಯಾಧೀಶರಾದ ಶ್ರೀ ಟಿ.ಎನ್. ಮಲ್ಲಪ್ಪನವರು 'ರೇಣುಕಾಚಾರ್ಯ ಬಿಜ್ಜಳನನ್ನು ಭೇಟಿ ಮಾಡಿದ್ದ ಎಂದರೆ ಅವನು ಬಿಜ್ಜಳನ ಸಮಕಾಲೀನನಾಗುತ್ತಾನೆ' ಎಂದು ಸಿರಿಯಾಳ ಶಾಸನವನ್ನು ಉಲ್ಲೇಖಿಸುತ್ತಾರೆ. ಪಂಚಪೀಠಗಳ ಅಸ್ತಿತ್ವದ ಬಗ್ಗೆ 'ವಿಜಯನಗರದ ಅರಸರ ಕಾಲದಲ್ಲಿ ವೀರಶೈವ ಪೀಠಗಳು ಒಂದೊಂದಾಗಿ ಹುಟ್ಟಿಕೊಂಡವು' ಎಂದು ತಮ್ಮ ಮಾರ್ಗ ನಾಲ್ಕರಲ್ಲಿ ವಿದ್ವಾಂಸ ಡಾ.ಎಂ.ಎಂ.ಕಲಬುರ್ಗಿ ಬರೆಯುತ್ತಾರೆ. ಅಲ್ಲದೆ ಇವುಗಳಲ್ಲಿ ಮೊದಲಿಗೆ ಅಸ್ತಿತ್ವಕ್ಕೆ ಬಂದುವು ಚತುರಾಚಾರ್ಯ ಪೀಠಗಳು. "ಐದನೆಯ ಪೀಠವಾದ ಕಾಶಿಪೀಠದ ಆಚಾರ್ಯರು ಅಸ್ತಿತ್ವದಲ್ಲಿ ಇರಲಿಲ್ಲ. ಅದು ಇತ್ತೀಚೆಗೆ ಸೃಷ್ಟಿಯಾದದ್ದು" ಎಂದು ಇನ್ನೊಬ್ಬ ವಿದ್ವಾಂಸ ಡಾ.ಚಿದಾನಂದಮೂರ್ತಿ ಸ್ಪಷ್ಟವಾದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ವೀರಶೈವ ಮತ ಸ್ಥಾಪಕರ ಹುಟ್ಟಿನ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತ ಡಾ.ಎಸ್.ಸಿ. ನಂದಿಮಠರು "ಚಿಕಿತ್ಸಕರಿಗೆ ಇದು ಐತಿಹಾಸಿಕ ಸಂಗತಿಯಂತೆ ಕಾಣುವುದಿಲ್ಲ; ಏಕೆಂದರೆ ಈಗಿನ

In Public domain. Digitization Muthulakshmi Research Academy

ಮನ್ವಂತರದ ಚಿಕಿತ್ಸಕರು ಸ್ಥಾವರಲಿಂಗಗಳಿಂದಾದ ಆಚಾರ್ಯರ ಉದ್ಭವವನ್ನು ನಂಬುವುದಿಲ್ಲ. ಏಕೆಂದರೆ ಅದು ಸಾಮಾನ್ಯ ನಿಯಮ *(Natural law)*ಕ್ಕೆ ವಿರೋಧವಾಗಿರುವುದು ಅಸಮಾನ್ಯ ಮತ್ತು ಅಮಾನುಷವೃತ್ತಿಗಳಲ್ಲಿ ಈಗಿನ ಚಿಕಿತ್ಸಕರ ವಿಶ್ವಾಸವಿಲ್ಲ" ಎಂದು ಸ್ಪಷ್ಟಪಡಿಸುತ್ತಾರೆ.

ಪ್ರಜಾವಾಣಿ : ಸಿದ್ಧಾಂತ ಶಿಖಾಮಣಿ ಅದೊಂದು ಸಮನ್ವಯ ಗ್ರಂಥ ಎನ್ನಲಾಗುತ್ತದೆ. ಸಂಶೋಧಕ ಡಾ.ಚಿದಾನಂದಮೂರ್ತಿ ಕೂಡ ಅದನ್ನು ಪುರಾತನ ಗ್ರಂಥ ಎಂದು ಈಗ ಒಪ್ಪಿಕೊಳ್ಳುವುದಿಲ್ಲ.

ಶ್ರೀಗಳ ಉತ್ತರ : ಸಿದ್ಧಾಂತ ಶಿಖಾಮಣಿ ೮ನೇ ಶತಮಾನದ ಗ್ರಂಥ. ಕ್ರಿ.ಶ. ೧೧೫೦ರಲ್ಲಿ ಶ್ರೀಪತಿ ಪಂಡಿತಾರಾಧ್ಯರು ಶ್ರೀಕರಭಾಷ್ಯ ಬರೆದರು. ಬ್ರಹ್ಮಸೂತ್ರದ ಮೇಲೆ ಬರೆದ ವೀರಶೈವ ಭಾಷ್ಯದಲ್ಲಿ ಸಿದ್ಧಾಂತ ಶಿಖಾಮಣಿ ಬಗ್ಗೆ ಉಲ್ಲೇಖವಿದೆ. ಉತ್ತರ ಭಾರತದ ಅನೇಕ ಸಂಶೋಧಕರು ಇದನ್ನು ಒಪ್ಪಿಕೊಂಡಿದ್ದಾರೆ. ಕಾಶಿಯ ಬಲದೇವ ಉಪಾಧ್ಯ ತಮ್ಮ ಭಾರತೀಯ ದಾರ್ಶನಿಕ ಇತಿಹಾಸ ಕೃತಿಯಲ್ಲಿ ೧೧ನೆಯ ಶತಮಾನಕ್ಕೂ ಮುನ್ನವೇ ಸಿದ್ಧಾಂತ ಶಿಖಾಮಣಿ ಒಂದು ಪ್ರಾಮಾಣಿಕ ಗ್ರಂಥವಾಗಿ ಪ್ರಸಿದ್ಧವಾಗಿದ್ದನ್ನು ಪ್ರಸ್ತಾಪಿಸಿದ್ದಾರೆ. ಅದು ಸಂಸ್ಕೃತದಲ್ಲಿರುವ ಗ್ರಂಥ. ಚಿದಾನಂದಮೂರ್ತಿ ಕನ್ನಡ ಸಂಶೋಧಕರು. ಸಂಸ್ಕೃತ ಅಭ್ಯಸಿಸಿದವರು ಆ ಬಗ್ಗೆ ಹೇಳಬೇಕು.

ಟಿಪ್ಪಣಿ ೩ : "ದೇಶ ಹಾಗೂ ಕಾಲ ಚರಿತ್ರೆಯ ಎರಡು ನಯನಗಳು. ಇತಿಹಾಸ ಎಂದು ಕರೆಯಬೇಕಾದರೆ ಅದು ಇವೆರಡರ ವ್ಯಾಪ್ತಿಗೊಳಪಟ್ಟಿರಬೇಕು. ಮತ್ತೊಂದು ಮುಖ್ಯವಾದ ಸಂಗತಿ ಎಂದರೆ ಪ್ರತಿಪಾದಿಸಬಯಸುವ ಯಾವುದೇ ವಿಷಯಗಳಿಗೆ ಆಧಾರವಿರಬೇಕು. ಆಧಾರವಿಲ್ಲದ್ದು ಚರಿತ್ರೆಯಲ್ಲ. ಕಾಲ್ಪನಿಕ ಸನ್ನಿವೇಶ ಅಥವಾ ಅತಿಮಾನುಷ ಘಟನೆಗಳು ಎಂದೂ ಆಧಾರವಾಗುವುದಿಲ್ಲ. ಇಲ್ಲಿ ಕಾರ್ಯ-ಕಾರಣ ಭಾವ, ಕಾಲೌಚಿತ್ಯ, ದೇಶೌಚಿತ್ಯ, ವಿಕಾಸವಾದ, ಭೌಗೋಳಿಕ ಪರಿಸರ ಮೊದಲಾದ ನಿಯಮಗಳನ್ನು ಗಮನದಲ್ಲಿಟ್ಟುಕೊಂಡಿರಬೇಕು" ಡಾ.ಇಮ್ಮಡಿ ಶಿವಬಸವ ಸ್ವಾಮಿಗಳು ಈ ಮೇಲಿನ ಸಾಲುಗಳನ್ನು ತಮ್ಮ ವಾದಕ್ಕೆ ಪ್ರತಿವಾದ ಮಂಡಿಸಲೆಂದೇ ಬರೆದಂತಿರುವ

In Public domain. Digitization Muthulakshmi Research Academy

ಸಾಲುಗಳಿವು. ಸಿದ್ಧಾಂತ ಶಿಖಾಮಣಿ ೧೪-೧೫ರಲ್ಲಿ ಬರೆದ ಗ್ರಂಥವೆಂದು ಡಾ.ಇಮ್ಮಡಿ ಶಿವಬಸವ ಸ್ವಾಮೀಜಿಯವರು ಅನೇಕ ಅಧ್ಯಾಯಗಳಲ್ಲಿ ಸಿದ್ಧಪಡಿಸಿ ಮಂಡಿಸಿದ್ದಾರೆ. ತಮ್ಮ ಹಿಂಬಾಲಕರಾದ ಡಾ.ಚಿದಾನಂದಮೂರ್ತಿಯವರು ತಾವೇ ಮಾಡಿದ ಮೊದಲ ತಪ್ಪನ್ನು ತಿದ್ದಿಕೊಂಡು ಸಿದ್ಧಾಂತ ಶಿಖಾಮಣಿ ಬಸವೋತ್ತರ ಕಾಲದ ಗ್ರಂಥವೆಂದು ಹೇಳಿದ್ದಾರೆ. ಕರ್ನಾಟಕದಲ್ಲಿ ಮಠಮಾನ್ಯಗಳನ್ನು ಕಟ್ಟಿಕೊಂಡ ತಾವುಗಳು ಕರ್ನಾಟಕದಲ್ಲಿ ಶಿಷ್ಯ ಪಡೆಯನ್ನು ಹೊಂದಿದ್ದೀರಿ. ತಮ್ಮ ವಾದಕ್ಕೆ ಪೂರಕವಾಗಿ ಹಿಂದಿ ವಿದ್ವಾಂಸರನ್ನು ಅವಲಂಬಿಸುತ್ತೀರಿ. ಮೇಲಾಗಿ ಕನ್ನಡದ ಶ್ರೇಷ್ಠ ವಿದ್ವಾಂಸರಾದ ಡಾ. ಚಿದಾನಂದಮೂರ್ತಿಯವರಿಗೆ ಸಂಸ್ಕೃತ ಬರದು ಎಂದು ಅವಮಾನಿಸುತ್ತೀರಿ. ಇರಲಿ, ತಮ್ಮ ವಾದ ವಿಚಿತ್ರ ರೀತಿಯಲ್ಲಿ ಸಾಗುತ್ತಿದೆ. ಭಾಷೆಯ ಅರಿಯದವನು ಸಂಶೋಧಕನಾಗಲಾರ ಎಂಬ ನಿಮ್ಮ ನಿಲುವು ಸಂಶೋಧಕರಿಗೆ ಮಾಡಿದ ಅವಮಾನ. ಭಾರತದ ಭಾಷೆಗಳನ್ನು ಅರಿಯದ ಎಷ್ಟೊಂದು ವಿದೇಶಿಗರು ಭಾರತದ ಸಂಸ್ಕೃತಿ, ಜನಾಂಗ, ಇತಿಹಾಸದ ಮೇಲೆ ಸಂಶೋಧನೆ ಮಾಡಿಲ್ಲ? ಅವುಗಳಲ್ಲಿ ಕೆಲವೊಂದು ಜಗತ್ತಿನ ಶ್ರೇಷ್ಠ ಸಂಶೋಧನಾ ಕೃತಿಗಳೆಂದು ಪುರಸ್ಕಾರಗೊಂಡಿಲ್ಲವೆ? ಪೂಜ್ಯರೇ ತಮ್ಮ ವಾದಕ್ಕೆ ಬಲವಾದ ದಾಖಲೆಗಳನ್ನು ನೀಡಿ. ಮತ್ತೊಮ್ಮೆ ವಾದ ಮಂಡಿಸಿರಿ.

ಪ್ರಜಾವಾಣಿ : ವೀರಶೈವರು ಮೂಲತಃ ಆಂಧ್ರಪ್ರದೇಶದಿಂದ ಬಂದ ಆರಾಧ್ಯರು. ಲಿಂಗೀ ಬ್ರಾಹ್ಮಣರಾದ ಅವರು ಬಸವಣ್ಣನನ್ನು ಒಪ್ಪುವುದಿಲ್ಲ ಎಂದು ಹೇಳಲಾಗುತ್ತದೆ.

ಶ್ರೀಗಳ ಉತ್ತರ : ಮಹಾಭಾರತದಲ್ಲಿ ಜಂಗಮರಿಗೆ ಲಿಂಗೀ ಬ್ರಾಹ್ಮಣರು ಎಂಬ ಪದ ಬಳಕೆ ಮಾಡಲಾಗಿದೆ. ಜಗತ್ತಿಗೆ ಸರ್ವೋತ್ಕೃಷ್ಟವಾದುದನ್ನು ಹೇಳುವ ಜ್ಞಾನಿ ವಾಚಕನೇ ಬ್ರಾಹ್ಮಣ. ಹಾಗಾಗಿ ಜಂಗಮ ಮತ್ತು ಬ್ರಾಹ್ಮಣ ಎರಡೂ ಒಂದೇ ಅರ್ಥ ಹೊಂದಿವೆ. ಬಸವಣ್ಣ ವೀರಶೈವ ಧರ್ಮದ ಉದ್ಧಾರಕ ಎಂಬುದನ್ನು ಒಪ್ಪಿಕೊಳ್ಳುತ್ತೇವೆ. ಪಂಚಪೀಠಗಳನ್ನು ವಿರೋಧ ಮಾಡುವ ಸಲುವಾಗಿಯೇ ಒಂದು ಗುಂಪು ಹುಟ್ಟಿಕೊಂಡಿದೆ. ಅವರು ಈ ರೀತಿ ಸುಳ್ಳು ಹೇಳುತ್ತಾರೆ.

ಟಿಪ್ಪಣಿ ೪ : ಶರಣರ ಜಂಗಮ ಕಲ್ಪನೆ ಅತ್ಯಂತ ಉದಾತ್ತವಾದದ್ದು.

In Public domain. Digitization Muthulakshmi Research Academy

ಅನುಭಾವಕ್ಕೆ ಮಾತ್ರ ನಿಲುಕುವಂತದ್ದು. ಶಬ್ದಾರ್ಥದಲ್ಲಿ ಅದನ್ನು ಹೇಳಲಾಗದು. ಜಂಗಮ ಎಂದರೆ ಅಡೆತಡೆಯನ್ನು ಬದಿಗೊತ್ತಿ ರಭಸವಾಗಿ ಹರಿಯುವ ನೀರು. ಜಂಗಮ ನೀರಿನಷ್ಟೇ ಪವಿತ್ರ, ಜೀವಕ್ಕೆ ಆಧಾರವಾದ ಜೀವಜಲ. ಒಳ್ಳೆಯದನ್ನು ಸಾರಲು ಬಸವಣ್ಣನವರು ಜಂಗಮನನ್ನು ಆರಾಧಿಸಿದರು. 'ಜಂಗಮ ಬಂದರೆ ಶಿವಪೂಜೆಯನ್ನು ಮರೆ'ಯೆಂದು ಕರೆ ನೀಡಿದ್ದವರು ಬಸವಣ್ಣ. ತಾವು ಮತ್ತೆ ಮತ್ತೆ ಕಾಲ್ಪನಿಕ ಕಥೆಗಳತ್ತ ತಿರುಗಿಕೊಳ್ಳುತ್ತೀರಿ. ಕಥೆಗಳು ಇತಿಹಾಸವಾಗಲಾರವು. ೧೪-೧೫ನೇ ಶತಮಾನದಲ್ಲಿ ಆಂಧ್ರದಿಂದ ಬಂದವರು ಲಿಂಗೀ ಬ್ರಾಹ್ಮಣರು. ಅವರು ಜನಿವಾರ ಹಾಗೂ ಲಿಂಗವನ್ನು ಜತೆಯಾಗಿ ಧರಿಸುವರು. ದೇವಸ್ಥಾನದ ಅರ್ಚಕ ವರ್ಗದವರು. ಇವರ ಲಿಂಗಧಾರಣೆಯ ಬಗ್ಗೆ ಡಾ.ಎಂ. ಎಂ.ಕಲಬುರ್ಗಿ ಹೇಳುತ್ತಾರೆ. "ಇಂದಿನ ಕರ್ನಾಟಕದ ಪಂಚಾಚಾರ್ಯರ ಗುರುಗಳು ಮೂಲತಃ ಆಂಧ್ರದ ಆರಾಧ್ಯರ ಗುರುಗಳೆಂದೂ, ಅವರ ಈ ಗುರುಗಳನ್ನು ಕರ್ನಾಟಕದ ಲಿಂಗಾಯತರು ಕಸಿದುಕೊಂಡಿರುವರೆಂದೂ, ತಮ್ಮದು ಕರ್ನಾಟಕದ ಲಿಂಗಾಯತದಿಂದ ಬಿನ್ನವಾದ ವೀರಶೈವ ಧರ್ಮವೆಂದೂ ಈ ಸಂವಾದ ಸ್ಪಷ್ಟಪಡಿಸುತ್ತದೆ. ಆಂಧ್ರದಿಂದ ಕರ್ನಾಟಕಕ್ಕೆ ಬಂದ ಈ ಆರಾಧ್ಯರು ಆಗಮಿಕ ಬ್ರಾಹ್ಮಣರೇ ಆಗಿರುವುದರಿಂದ, ಇವರಿಗೆ ಜನಿವಾರ ಧಾರಣೆಯೂ ಪ್ರತಿದಿನ ದೇವಾಲಯಕ್ಕೆ ಹೋಗಿ ತಮ್ಮ ಇಷ್ಟದೇವತೆಯಾದ ಸ್ಥಾವರಲಿಂಗ ದರ್ಶನ ಪಡೆಯುವುದೂ ಕಡ್ಡಾಯವಾಗಿದ್ದಿತು. ಹೀಗಿದ್ದೂ ಮನೆಯಲ್ಲಿರುವ ವೃದ್ಧರು ಪೂಜಿಸುವುದಕ್ಕಾಗಿ ಆ ಸ್ಥಾವರಲಿಂಗದ ಪ್ರತೀಕವಾದ ಸಣ್ಣ ಲಿಂಗವನ್ನು(ಲಿಂಗಗಳನ್ನು) ಮನೆಯ ಜಗುಲಿಯ ಮೇಲೆ ಇಡುತ್ತಿದ್ದರು. ತಮ್ಮ ಇಷ್ಟದ ಸ್ಥಾವರಲಿಂಗವನ್ನು ಪ್ರತಿನಿಧಿಸುತ್ತಿದ್ದ ಈ ಸಣ್ಣ ಲಿಂಗವನ್ನು ಇಷ್ಟಲಿಂಗವೆಂದು ಕರೆಯುತ್ತಿದ್ದರು. ಪ್ರವಾಸಪ್ರಸಂಗದಲ್ಲಿ ಪೂಜಿಸುವುದಕ್ಕಾಗಿ ಪೆಟ್ಟಿಗೆಯಲ್ಲಿಟ್ಟುಕೊಂಡು ಇಲ್ಲವೇ ತಲೆ, ತೋಳು, ಕೊರಳುಗಳಿಗೆ ಕಟ್ಟಿಕೊಂಡು ಹೋಗುತ್ತಿದ್ದು ಅದನ್ನು ಪ್ರವಾಸ ಮುಗಿಯುತ್ತಲೇ ಬಿಚ್ಚಿ ದೇವರ ಜಗುಲಿಯ ಮೇಲೆ ಇಡುತ್ತಿದ್ದರು. ಅಂದರೆ ಇವರಿಗೆ ಕೊರಳ ಜನಿವಾರ

In Public domain. Digitization Muthulakshmi Research Academy

ಕಡ್ಡಾಯ. ಸ್ಥಾವರಲಿಂಗದ ಪ್ರತೀಕವಾಗಿದ್ದ ಕೊರಳಲಿಂಗ ಐಚ್ಛಿಕವಾಗಿದ್ದವು. ಇದಕ್ಕೆ ವಿರುದ್ಧ ಎನ್ನುವಂತೆ ಕರ್ನಾಟಕದ ಲಿಂಗಾಯತ ಜಂಗಮರಿಗೆ ಆತ್ಮತತ್ವದ ಪ್ರತೀಕವಾಗಿದ್ದರೂ ಕೊರಳಲ್ಲಿ ಕಡ್ಡಾಯವಾಗಿದ್ದದನ್ನು ಗಮನಿಸಿ, ಇದನ್ನು ಇಷ್ಟಲಿಂಗವೆಂದು ಕರೆಯಲಾರಂಭಿಸಿದರು. ಆಂಧ್ರದ ಈ ಆರಾಧ್ಯ ಜಂಗಮರು ಕರ್ನಾಟಕದ ಇಷ್ಟಲಿಂಗಧಾರಿಗಳಾದ ಲಿಂಗವಂತ ಜಂಗಮರೊಂದಿಗೆ ಸಹಬಾಳ್ವೆ ನಡೆಸುವುದು ಅನಿವಾರ್ಯವಾದಂತೆ ಕ್ರಮೇಣ ಕಡ್ಡಾಯವಾಗಿದ್ದ ತಮ್ಮ ಕೊರಳ ಜನಿವಾರವನ್ನು ತೆಗೆದುಹಾಕಿ ಐಚ್ಛಿಕವಾಗಿದ್ದ ಕೊರಳಲಿಂಗವನ್ನು ಕಡ್ಡಾಯವಾಗಿಸಿಕೊಂಡರು. ಇವರ ಗುರುಗಳಾದ ಪಂಚಾಚಾರ್ಯರೂ ಈ ಕ್ರಮವನ್ನು ಅನುಸರಿಸಿದರು. ಹೀಗೆ ತಾತ್ವಿಕವಾಗಿ ಭಿನ್ನವಾಗಿದ್ದರೂ ಕೊರಳಲ್ಲಿ ಕಟ್ಟಿಕೊಳ್ಳುತ್ತಿದ್ದ ಲಿಂಗದ ಬಾಹ್ಯಹೋಲಿಕೆಯನ್ನು ಗಮನಿಸಿ ಇಬ್ಬರು ಒಂದೇ ಎಂಬ ಭಾವನೆ ಬೆಳೆಯಿತು. ಹೀಗೆ ಕ್ರಮವಾಗಿ ಜನಿವಾರ ಬಿಡುತ್ತ, ಲಿಂಗಧಾರಿಗಳಾಗುತ್ತ ಬಂದ ಆಂಧ್ರದ ಪಂಚಾಚಾರ್ಯರನ್ನು ಕರ್ನಾಟಕದ ಲಿಂಗಾಯತ ಜಂಗಮರೂ ಅವರ ಲಿಂಗಾಯತ ಭಕ್ತರೂ ತಮ್ಮ ಗುರುಗಳೆಂದು ಭ್ರಮಿಸಿಕೊಂಡರು.[೪] ದೇಹವೇ ದೇವಾಲಯವೆಂದು ಗುಡಿಸಂಸ್ಕೃತಿಯನ್ನು ಜರೆದ ಲಿಂಗಾಯತರು ಈ ಆಂಧ್ರದ ಲಿಂಗೀ ಬ್ರಾಹ್ಮಣರನ್ನು ಒಪ್ಪಿಕೊಂಡದ್ದು ಸಾರ್ವಕಾಲಿಕ ತಪ್ಪು. ಪುರಾತನ ಗ್ರಂಥಗಳಲ್ಲಿ ಬ್ರಾಹ್ಮಣ ಎಂದರೆ ತಿಳಿದವ ಎಂಬ ಮಾತು ಸತ್ಯ. ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ ಎಂದು ವಿಪ್ರರನ್ನು ಮೂದಲಿಸಲಿಲ್ಲವೇ ಬಸವಣ್ಣನವರು ಸ್ವಾಮೀಜಿ.

ಪ್ರಜಾವಾಣಿ : **ಇದು ಗುರು–ವಿರಕ್ತರ ನಡುವಿನ ಸಂಘರ್ಷದ ಮುಂದುವರಿದ ಭಾಗವೇ? ನೀವು ವಿರಕ್ತರೊಂದಿಗೆ ಸಮಾನ ಆಸನದಲ್ಲಿ ಕೂರುವುದಿಲ್ಲ. ಅದು ಬಸವಣ್ಣನ ಸಮಾನತೆಯ ತತ್ವಕ್ಕೆ ವಿರುದ್ಧವಲ್ಲವೆ?**

ಶ್ರೀಗಳ ಉತ್ತರ : ಹಾನಗಲ್ ಕುಮಾರಸ್ವಾಮಿ ವಿರಕ್ತರು. ಅವರು ವೀರಶೈವ ಪದವನ್ನು ಒಪ್ಪಿಕೊಂಡು ಅಖಿಲ ಭಾರತ ವೀರಶೈವ ಮಹಾಸಭಾ ಸ್ಥಾಪಿಸಿದ್ದಾರೆ. ೧೯೦೪ರಲ್ಲಿ ಧಾರವಾಡದಲ್ಲಿ

In Public domain. Digitization Muthulakshmi Research Academy

ನಡೆದ ಮಹಾಸಭಾದ ಮೊದಲ ಸಭೆಯ ಠರಾವಿನಲ್ಲಿ ವೀರಶೈವ ಧರ್ಮ ಎಂದೇ ಉಲ್ಲೇಖಿಸಲಾಗಿದೆ. ಇದರಲ್ಲಿ ಸಂಘರ್ಷದ ಪ್ರಶ್ನೆಯೇ ಇಲ್ಲ. ಸಮಾನ ಆಸನದಲ್ಲಿ ಕೂರುವ ವಿಚಾರದಲ್ಲಿ ಈಗ ಪರಿವರ್ತನೆ ಆಗಿದೆ. ೨೦೦೪ರ ಕೂಡಲಸಂಗಮ, ನಂತರ ಸುತ್ತೂರು ಮಠದಲ್ಲಿ ನಡೆದ ವೀರಶೈವ ಮಹಾಸಭಾದ ಅಧಿವೇಶನದಲ್ಲಿ ನಾವು ಪಾಲ್ಗೊಂಡು ವಿರಕ್ತರೊಂದಿಗೆ ಸಮವಾಗಿ ವೇದಿಕೆ ಹಂಚಿಕೊಂಡಿದ್ದೇವೆ.

ಟಿಪ್ಪಣಿ ೫ : ವೀರಶೈವ ಮಹಾಸಭಾ ಸ್ಥಾಪನೆಯ ವಿಷಯ ಇದೇ ಪುಸ್ತಕದಲ್ಲಿ ಪು.ಸಂ. ೩೩ರಲ್ಲಿ ಚರ್ಚಿಸಲಾಗಿದೆ.

ಪ್ರಜಾವಾಣಿ : ಲಿಂಗಾಯತ ಪದ ಬಳಕೆ ವಿಚಾರದಲ್ಲಿ ಬಹಿರಂಗ ಚರ್ಚೆಗೆ ಬರುವಂತೆ ಮಾತೆ ಮಹಾದೇವಿ ಸವಾಲು ಹಾಕಿದ್ದಾರೆ. ಅದನ್ನು ಸ್ವೀಕರಿಸುವಿರಾ?

ಶ್ರೀಗಳ ಉತ್ತರ : ಅಖಿಲ ಭಾರತ ವೀರಶೈವ ಮಹಾಸಭಾದ ವೇದಿಕೆಯಲ್ಲಿ ಈ ಬಗ್ಗೆ ಚರ್ಚೆಗೆ ಅಹ್ವಾನಿಸಿದರೆ ನಮ್ಮ ಪ್ರತಿನಿಧಿಗಳನ್ನು ಕಳುಹಿಸುತ್ತೇವೆ. ನಾವೇ ಹೋಗುವ ಅನಿವಾರ್ಯತೆ ಬಂದರೆ ಆಗ ನೋಡೋಣ.

ಟಿಪ್ಪಣಿ ೬ : ಚರ್ಚೆಗಳಿಂದ ಸಮಸ್ಯೆಯ ಗಂಟು ಸಡಿಲವಾಗುವುದಾದರೆ ಏಕೆ ಪ್ರಯತ್ನಿಸಬಾರದು ಸ್ವಾಮೀಜಿ. ಅನೇಕ ಯುದ್ಧಗಳ ನಂತರ ಶಸ್ತ್ರಾಸ್ತ್ರಗಳು ಸದ್ದು ಮಾಡದಿರುವುದು ಸಂಧಾನದ ಮೂಲಕವಾಗಿಯೇ ಅಲ್ಲವೇ? ಸಂಧಾನದ ಮಾತುಗಳು ಮುದುಡಿದ ಮನಸ್ಸುಗಳನ್ನು ಅರಳಿಸುತ್ತವೆ.

ಪ್ರಜಾವಾಣಿ : ವೈಯಕ್ತಿಕವಾಗಿ ಲಿಂಗಾಯತ ಧರ್ಮ ಎಂಬುದೇ ಸೂಕ್ತ ಎಂದು ಮುಖ್ಯಮಂತ್ರಿ ಧಾರವಾಡದಲ್ಲಿ ಹೇಳಿದ್ದಾರಲ್ಲಾ?

ಶ್ರೀಗಳ ಉತ್ತರ : ಸಿದ್ದರಾಮಯ್ಯ ಕೇವಲ ಒಂದು ಗುಂಪಿನ ಅಭಿಪ್ರಾಯ ಮಾತ್ರ ಕೇಳುವುದು ಬೇಡ. ಸಮಾಜದ ಅಧಿಕೃತ ಸಂಸ್ಥೆಯಾದ ಅಖಿಲ ಭಾರತ ವೀರಶೈವ ಮಹಾಸಭಾದ ಅಭಿಪ್ರಾಯ ತಿರಸ್ಕರಿಸಿ ಮುಂದುವರಿದರೆ ಅವರೇ ಸಮಾಜ ಒಡೆದಂತಾಗುತ್ತದೆ. ಇದರ ಬದಲು ಒಗ್ಗೂಡಿಸುವ ಕೆಲಸ ಮಾಡಲಿ.

ಟಿಪ್ಪಣಿ ೭ : ಯಾವ ಧರ್ಮ ಒಡೆದುಹೋಗುವುದು? ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಹಿಂದೂಧರ್ಮವನ್ನು

In Public domain. Digitization Muthulakshmi Research Academy

ಒಡೆದದ್ದು. ಈಗೇನಿದ್ದರೂ ಬಸವಣ್ಣನವರ ಆಶಯಗಳ ಆಧಾರದಲ್ಲಿ ಕಾಯಕಜೀವಿಗಳೊಂದಿಗೆ ಕೂಡಿ ಬಾಳುವುದು. ಇದರಲ್ಲಿ ಬಸವಣ್ಣನವರನ್ನು ನಂಬುವ ವೀರಶೈವರು ಇದ್ದಾರೆ.

***

ದಿಗಿಲುಬಿದ್ದ ಪೇಜಾವರ ಶ್ರೀಗಳು

ಪರ್ಯಾಯ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಯವರು ಉಡುಪಿಯಲ್ಲಿ ಸೋಮವಾರ, ಜುಲೈ ೨೪, ೨೦೧೭ರಂದು ಪತ್ರಿಕಾಗೋಷ್ಠಿಯಲ್ಲಿ 'ಲಿಂಗಾಯತರು ಹಿಂದೂಗಳು' ಎಂದು ಹೇಳುತ್ತ ಲಿಂಗಾಯತ ಮಠಾಧೀಶರು ಹೋರಾಟ ಕೈ ಬಿಡುವಂತೆ ವಿನಂತಿಸಿಕೊಂಡಿದ್ದರು. ಹಿಂದೂಧರ್ಮದ ಪೀಠಾಧಿಪತಿಯಾದ ಇವರು ತಮ್ಮ ಧರ್ಮರಕ್ಷಣೆಯ ಕಟ್ಟಾಳುಗಳಾಗಿ ತಮ್ಮ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದರು. ತಮ್ಮ ಧರ್ಮಕ್ಕೆ ಧಕ್ಕೆ ಬಂದಾಗ ಅದನ್ನು ಕಾಯುವ, ಕಾಪಾಡುವ ಮತ್ತು ಸರಿಪಡಿಸುವ ಹೊಣೆಯನ್ನು ಹಿರಿಯರಾಗಿ, ಧರ್ಮಾಧಿಕಾರಿಯಾಗಿ, ಪರಿಣಾಮಕಾರಿಯಾಗಿ ಪಾಲಿಸಿದ್ದರು. ಲಿಂಗಾಯತರೂ ಹಿಂದುಗಳೆನ್ನುತ್ತ ಸೈದ್ಧಾಂತಿಕ ವಿಷಯವನ್ನು ಮಾಧ್ಯಮಗಳ ಮುಂದಿಟ್ಟರು.

ಪೇಜಾವರ ಶ್ರೀಗಳು : 'ಹಿಂದೂಧರ್ಮದ ಬಲಿಷ್ಠ ಅಂಗವಾಗಿರುವ ಲಿಂಗಾಯತ ಸಮಾಜ ಬೇರ್ಪಟ್ಟು ಪ್ರತ್ಯೇಕ ಧರ್ಮವಾಗಿ ರೂಪುಗೊಳ್ಳುವ ಪ್ರಸ್ತಾವನೆ ಬಂದಿರುವುದು ಅತ್ಯಂತ ಕಳವಳಕಾರಿ ಸಂಗತಿ. ಪರಶಿವನು ಹಿಂದೂ ದೇವತೆಗಳಲ್ಲಿ ಪ್ರಾಮುಖ್ಯತೆ ಪಡೆದವನು ಎಂಬುದು ನಿರ್ವಿವಾದ. ಅಂತಹ ಶಿವನನ್ನೇ ಪರದೈವ ಎಂದು ಸಾರುವ ಲಿಂಗಾಯತರು ಸಹ ಹಿಂದೂಗಳೇ ಆಗಿದ್ದಾರೆ. ಹಿಂದೂಗಳ ದೇವನಾದ ಶಿವನನ್ನು ಲಿಂಗಾಯತರು ಆರಾಧಿಸಿದ ಮೇಲೆ ಅದು ಪ್ರತ್ಯೇಕ ಧರ್ಮವಾಗಲು ಸಾಧ್ಯವಿಲ್ಲ.'[೫]

ಟಿಪ್ಪಣಿ : ಲಿಂಗಾಯತ ಧರ್ಮ ಒಂದು ಸ್ವತಂತ್ರ ಧರ್ಮ. ಇದು ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರಿಂದ ಸ್ಥಾಪಿತ ಧರ್ಮ. ಇದು ಹೇಗೆ ಹಿಂದೂಧರ್ಮಕ್ಕಿಂತ ಭಿನ್ನ ಹಾಗೂ ಲಿಂಗಾಯತರು ಪೂಜಿಸುವ ಶಿವನು ಶೈವಧರ್ಮದ ಶಿವನಲ್ಲ ಎಂಬುದನ್ನು ವಿದ್ವಾಂಸರು

In Public domain. Digitization Muthulakshmi Research Academy

ಈಗಾಗಲೇ ಅನೇಕ ಬಾರಿ ಹೇಳಿದ್ದಾರೆ. ಹಿಂದೂಗಳ ರುದ್ರನಿಗೆ ಗಿರೀಶ, ತಾಮ್ರ, ನೀಲಕಂಠ, ಕಪರ್ದಿ, ಪಶುಪತಿ, ಶಂಕರ, ಶಿವ, ಈಶಾನ, ಮಹದೇವ ಮುಂತಾದ ಹೆಸರುಗಳನ್ನು ಕೊಟ್ಟಿದ್ದಾರೆ. ಇವೆಲ್ಲವನ್ನು ಆರ್ಯರು ಶಿವನಿಗೆ ನೀಡಿದ ಹೆಸರುಗಳಾದರೂ ದ್ರಾವಿಡರ ಶಿವ ಆಕಾರರಹಿತ ಶಿವ. ಇದನ್ನು ಕನ್ನಡದ ಶ್ರೇಷ್ಠ ವಿದ್ವಾಂಸ ಶಂಬಾ ಜೋಶಿಯವರು ವೈದಿಕರ ರುದ್ರ ಲಿಂಗಾಯತರ ಶಿವನಲ್ಲವೆಂದು ಸ್ಪಷ್ಟವಾಗಿ ತಮ್ಮ 'ಶಿವರಹಸ್ಯ' ಗ್ರಂಥದಲ್ಲಿ ಹೇಳಿದ್ದಾರೆ. ಶಿವನು ಒಬ್ಬ ದ್ರಾವಿಡ ದೈವ, ಅವನು ಆರ್ಯರ ರುದ್ರನಲ್ಲ ಮತ್ತು ಋಗ್ವೇದದ ಹಲವಾರು ದೇವತೆಗಳಲ್ಲಿ ಒಬ್ಬನಲ್ಲ ಎನ್ನುತ್ತಾರೆ. ಋಗ್ವೇದದಲ್ಲಿ ಬಳಸಿದ 'ಶಿವ' ಪದದ ಅರ್ಥವನ್ನು ಅವರು 'ಶುಭ' ಎಂದು ಪರಿಗಣಿಸುತ್ತಾರೆ. ಇದನ್ನು ಬಲವಾಗಿ ಸಮರ್ಥಿಸುವವರು ಸಿ.ಸಿ.ಬಸವನಾಳರು. 'ವೇದಗಳಲ್ಲಿ ಲಿಂಗಾಯತ ಧರ್ಮವನ್ನು ಹುಡುಕಲು ಪ್ರಯತ್ನಿಸುವುದು ಮೂರ್ಖತನ' ಎಂದು ಈ ವಾದವನ್ನು ಬಲವಾಗಿ ತಿರಸ್ಕರಿಸುತ್ತಾರೆ. ವೇದಗಳು ಆರ್ಯರ ಕಾಣಿಕೆ. ಆದರೆ ಆರ್ಯರ ಶಿವನು ಬೇರೆ. ವೇದಗಳನ್ನು ಅರಿಯುವ ಮುನ್ನವೇ ದ್ರಾವಿಡರು ಶಿವನನ್ನು ತಮ್ಮ ಆರಾಧ್ಯ ದೇವನನ್ನಾಗಿ ಪೂಜಿಸುತ್ತಿದ್ದರು. ರುದ್ರ ಮತ್ತು ಶಿವರಿಬ್ಬರು ಬೇರೆ ಬೇರೆ ಎಂದು ಪ್ರತಿಪಾದಿಸುತ್ತಾರೆ ಸಂಶೋಧಕ ಲಕ್ಷ್ಮೀಪತಿ ಕೋಲಾರ ಅವರು. 'ರುದ್ರನ ಕುರಿತು ಅನೇಕ ವರ್ಣನೆಗಳು ಋಗ್ವೇದ ರುದ್ರ ಶಿವನಲ್ಲವೆಂಬ ಅಂಶವನ್ನು ಸ್ಪಷ್ಟಪಡಿಸುವಂತಿದೆ. ರುದ್ರ ಒಬ್ಬನಲ್ಲ. ಹದನೆಂಟು ಮಂದಿ ಇದ್ದಾರೆ. ಮತ್ತೊಂದೆಡೆ ಹನ್ನೊಂದು ಮಂದಿ. ಈ ಅಷ್ಟಾದಶ ಹಾಗೂ ಏಕಾದಶ ರುದ್ರರಲ್ಲಿ ಶಿವ ಯಾರು? ರುದ್ರ ಮೇಧಾಪತಿ. ಅಂದರೆ ಯಜ್ಞದ(ಬಲಿಯ) ಒಡೆಯ. ಆ ಮೂಲಕ ಅಗ್ನಿಯ ಒಡೆಯ. ಶಿವನಾದರೋ ಅಗ್ನಿಗೆ ವಿರುದ್ಧವಾದ ಜಲಮೂಲದ ಗಂಗಾಧರ. ಅದಷ್ಟೇ ಅಲ್ಲದೆ ದಕ್ಷಯಜ್ಞದ ಧ್ವಂಸಕ. ರುದ್ರ ಗಾಥಾಪತಿ. ಗಾಥಾ ಎನ್ನುವುದು

In Public domain. Digitization Muthulakshmi Research Academy

ಪಾರ್ಸಿಗಳ ಪವಿತ್ರ ಗ್ರಂಥವಾದ ಅವೆಸ್ತಾದ ಪ್ರಾಚೀನ ಭಾಗವೇ ಆಗಿದೆ. ಇಲ್ಲಿ ಝುರತುಷ್ಟ್ರನೇ ಗಾಥಾಪತಿ. ಶಿವನಿಗೂ ಈ ಗಾಥಾ, ಝುರತುಷ್ಟ್ರನಿಗೂ ಎಲ್ಲಿಗೆಲ್ಲಿಯ ಸಂಬಂಧ? ರುದ್ರ ಗೋಘ್ನ, ಅಂದರೆ ಪಶುವಧಕ, ಶಿವ ಪಶುಪತಿ. ರುದ್ರನಿಗೆ ಆಗಮೋಕ್ತ ಗುಡಿಪೂಜೆಯಿಲ್ಲ. ಶಿವ ಪೂಜನ ಸಂಸ್ಕೃತಿಯ ಮೂಲಪುರುಷನಾಗಿದ್ದಾನೆ. ರುದ್ರ ಉಷಸ್ ಮತ್ತು ಪ್ರಜಾಪತಿಯ ಮಗ. ಶಿವನಿಗೆ ತಂದೆ ತಾಯಿಗಳಿಲ್ಲದ ಅದಿಮ ದೈವತ್ವದ ಸ್ವರೂಪವಿದೆ. ಋಗ್ವೇದದ ಪ್ರಕಾರವೇ ರುದ್ರನನ್ನು ವರಾಹದೊಂದಿಗೆ ಸಮೀಕರಿಸುವ ಮೂಲಕ ರುದ್ರ ಮತ್ತು ವಿಷ್ಣು ಇಬ್ಬರೂ ಒಬ್ಬನೇ ಸರ್ವಶಕ್ತನ ಎರಡು ಅಭಿವ್ಯಕ್ತಿಗಳು ಎಂಬುದು ಪ್ರಕಟವಾಗುತ್ತದೆ. ವೈದಿಕಾರ್ಯರ ಪರಮ ದೈವತಗಳಲೊಬ್ಬನಾದ ಇಂದ್ರನ ತಮ್ಮ ಉಪೇಂದ್ರನಾದ ವಿಷ್ಣುವಿನ ಮಗದೊಂದು ರೂಪವೇ ರುದ್ರನಾದಾಗ ಅಂತಹ ರುದ್ರ ಶಿವನೆಂದು ಹೇಗೆ ಒಪ್ಪಿಕೊಳ್ಳಲಾದೀತು? ತೈತ್ತಿರೀಯ ಆರಣ್ಯಕದಲ್ಲಿ ರುದ್ರನನ್ನು ಸೂರ್ಯಪುರುಷನೊಂದಿಗೆ ಸಮೀಕರಿಸಲಾಗಿದೆ. ಅಂದರೆ ಅಗ್ನಿಯ ಲೋಕರೂಪಕವಾದ ಸೂರ್ಯನಿಗೂ, ಜಲಸಂಸ್ಕೃತಿಯ ಶಿವನಿಗೂ ಸಂಬಂಧ ಏರ್ಪಡುವುದು ಹೇಗೆ ಸಾಧ್ಯ? ರುದ್ರನನ್ನು ಋಗ್ವೇದದ ಅಗ್ನಿ ಎಂದು ಸಾರುವ ಸ್ಪಷ್ಟ ಋಕ್‌ಗಳಿವೆ. ಆ ಅಗ್ನಿಯ ನೀಲಿ ಜ್ವಾಲೆಗಳೇ ರುದ್ರನ ಜಟೆಗಳು ಎಂದು ವರ್ಣಿಸಿವೆ. ಹಾಗಾಗಿಯೇ ರುದ್ರನನ್ನು ಕಪರ್ಧಿನಿ ಎಂದು ಸಂಬೋಧಿಸಲಾಗಿದೆ" ಎನ್ನುತ್ತಾರೆ[೬] ಡಾ. ಲಕ್ಷಣ ಕೌಂಟೆಯವರು 'ವೀರಶೈವ ವೀರಾಗಮ'ದಲ್ಲಿರುವ ವಿವರಗಳನ್ನು ನೀಡುತ್ತಾ ಲಿಂಗಾಯತರ ಲಿಂಗರೂಪಿ ಶಿವನಿಗೆ ಆರ್ಯರ ರುದ್ರ ಹಾಗೂ ಶಿವನಿಗಿರುವಂತೆ ಯಾವ ಪತ್ನಿಯರೂ ಪುತ್ರರೂ ಇಲ್ಲ. ಲಿಂಗಾಯತರ 'ಶಿವ ಪರಿವಾರರಹಿತ ದೇವತೆ.' 'ಲಿಂಗ' ಲಿಂಗಾಯತರ ಆತ್ಮದ ಪ್ರತೀಕ. ಹೀಗಿರುವಾಗ ಲಿಂಗಾಯತ ಮತ್ತು ಹಿಂದೂ ಒಂದೇ ಎಂದು ಹೇಳುವ ಪ್ರಮೇಯವೇ

In Public domain. Digitization Muthulakshmi Research Academy

ಬರುವುದಿಲ್ಲ. ಇವೆರಡೂ ಬೇರೆ ಬೇರೆ ಎನ್ನುವ ಸಂಗತಿ ವೀರಾಗಮಗಳಿಂದಲೇ ತಿಳಿದುಬರುತ್ತದೆ.[೭]

ನಮಾಮಿ ವೀರಭದ್ರಂ ತಂ ಅಸಮಾನ ಪರಾಕ್ರಮಂ!

ವೀರಶೈವ ಮತ ಸ್ಥಾಪ್ಯ ವರ್ಧಯನ್ ಯೋ ಪುರಾ ಭವಿ!!

ಎನ್ನುತ್ತ 'ಸ್ಕಂದಪುರಾಣ'ದ ಒಂದು ಶ್ಲೋಕವನ್ನು ಉಲ್ಲೇಖಿಸುತ್ತಾರೆ. ಅನಾದಿ ಪಶುಪತಿ ಮತಸ್ಥಾಪಕನು ರುದ್ರನಾದರೆ ಇವನ ಮಗನಾದ ವೀರಭದ್ರನು ಆದಿ ವೀರಶೈವವನ್ನು ಸ್ಥಾಪಿಸಿ ವರ್ಧಿಸಿದನು. ವೀರಭದ್ರನು ರುದ್ರನ ಮಗ. ರುದ್ರ ಬೇರೆ, ಶಿವ ಬೇರೆ. ಋಗ್ವೇದಪೂರ್ವದವನು ರುದ್ರನು; ಇವನು ಕಾಳಿಕಾದೇವಿಯ ಪತಿಯು, ವೀರಭದ್ರನ ಪಿತನು. ಶಿವ ದಾಕ್ಷಾಯಣಿ ಮತ್ತು ಪಾರ್ವತಿಯ ಪತಿ. ಶಿವನು ಷಡಾನನಗಜಾನನರ ಪಿತನು. ರುದ್ರ ಪಶುಪತಿ, ಶಿವ ವೃಷಭಾರೂಢ, ರುದ್ರ ತ್ರಿಪುರಾಂತಕ; ಶಿವ ಕಾಮಾರಿ. ವೀರಭದ್ರನು ರುದ್ರನ ಮಗನೆಂದು ಲಿಂಗಪುರಾಣವು ನಿಸ್ಸಂದೇಹವಾಗಿ ಹೇಳಿದೆ. ಇಲ್ಲಿ ಒಂದಂಶವಂತೂ ಸ್ಪಷ್ಟವಾಯಿತು. ವೀರಾಗಮಗಳ ಪ್ರಕಾರ ಶಿವ ಬೇರೆ, ರುದ್ರ ಬೇರೆ. ರುದ್ರನ ಪತ್ನಿ ಕಾಳಿಕಾದೇವಿ. ಶಿವನ ಪತ್ನಿ ಪಾರ್ವತಿ ಅಥವಾ ದಾಕ್ಷಾಯಣಿ. ರುದ್ರನ ಮಗ ವೀರಭದ್ರ. ಶಿವನ ಮಕ್ಕಳು ಷಣ್ಮುಖ ಮತ್ತು ಗಣಪತಿ. ವೀರಶೈವರು ಭದ್ರಕಾಳಿಯ ಪತಿಯಾದ ವೀರಭದ್ರನ ವೀರಶೈವ ಪರಂಪರೆಗೆ ಸೇರಿದವರು. ಶಿವನ ಶೈವ ಮತ್ತಿತರ ಪರಂಪರೆಗೆ ಸೇರಿದವರಲ್ಲ. ಲಿಂಗಾಯತರ ಲಿಂಗರೂಪಿ ಶಿವನಿಗೆ ಆರ್ಯರ ರುದ್ರ ಹಾಗೂ ಶಿವನಿಗಿರುವಂತೆ ಯಾವ ಪತ್ನಿಯರೂ; ಪುತ್ರರೂ ಇಲ್ಲ. ಲಿಂಗಾಯತರ 'ಶಿವ ಪರಿವಾರರಹಿತ ದೇವತೆ.' 'ಲಿಂಗ' ಲಿಂಗಾಯತರ ಆತ್ಮದ ಪ್ರತೀಕ. ಹೀಗಿರುವಾಗ ಲಿಂಗಾಯತ ಮತ್ತು ಹಿಂದೂ ಒಂದೇ ಎಂದು ಹೇಳುವ ಪ್ರಮೇಯವೇ ಬರುವುದಿಲ್ಲ. ಇವೆರಡೂ ಬೇರೆ ಬೇರೆ ಎನ್ನುವ ಸಂಗತಿ ವೀರಾಗಮಗಳಿಂದಲೇ

In Public domain. Digitization Muthulakshmi Research Academy

ತಿಳಿದುಬರುತ್ತದೆ.೮ ಆದರೆ ಆರ್ಯರ ಶಿವನು ಬೇರೆ. ವೇದಗಳು ಆರ್ಯರ ಕಾಣಿಕೆ. ವೇದಗಳನ್ನು ಅರಿಯುವ ಮುನ್ನವೇ ದ್ರಾವಿಡರು ಶಿವನನ್ನು ತಮ್ಮ ಆರಾಧ್ಯದೇವನನ್ನಾಗಿ ಪೂಜಿಸುತ್ತಿದ್ದರು. ಲಿಂಗಾಯತರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತಾವು ನಂಬಿರುವ ಶಿವನು ಆಕಾರರಹಿತ ಶಿವನೆಂದರು. ಅವನು ಅಗಮ್ಯ, ಅಗೋಚರ. ಅವನನ್ನು ಬಸವಣ್ಣನವರು ಬಹಳ ಸುಂದರವಾಗಿ, ಅಭೇದ್ಯವಾಗಿ ಕಂಡಿದ್ದಾರೆ.

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದವೆ ಅತ್ತತ್ತ ನಿಮ್ಮ ಶ್ರೀಚರಣ
ಬ್ರಹ್ಮಾಂಡದಿಂದವೆ ಅತ್ತತ್ತ ನಿಮ್ಮ ಶ್ರೀಮುಕುಟ
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ ಕೂಡಲಸಂಗಮದೇವಯ್ಯಾ
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ[೯]

ಇನ್ನು ವೈದಿಕರ ಶಿವ ಕಲ್ಪನೆಯು ಲಿಂಗಾಯತ ಶಿವನ ಕಲ್ಪನೆಗೂ ಇರುವ ವ್ಯತ್ಯಾಸವನ್ನು ಶರಣ ಅಂಬಿಗರ ಚೌಡಯ್ಯ ಬಹಳ ಸೊಗಸಾಗಿ ವಿವರಿಸಿದ್ದಾರೆ;

ಅಸುರ ಮಾಲೆಗಳಿಲ್ಲ,
ತ್ರಿಶೂಲ ಡಮರುಗವಿಲ್ಲ, ಬ್ರಹ್ಮಕಪಾಲವಿಲ್ಲ, ಭಸ್ಮಭೂಷಣನಲ್ಲ,
ವೃಷಭವಾಹನನಲ್ಲ.
ಋಷಿಯರುಗಳೊಡನಿದ್ದಾತನಲ್ಲ,
ಎಸಗುವ ಸಂಸಾರದ ಕುರುಹಿಲ್ಲದಾತಂಗೆ
ಹೆಸರಾವುದಿಲ್ಲೆಂದನಂಬಿಗರ ಚೌಡಯ್ಯ[೧೦]

ಲಿಂಗಾಯತರು ನಿರಾಕಾರ ಪರಶಿವನ ಭಕ್ತರು. ಅವನಿಗೆ ಆಕಾರವಿಲ್ಲ. ಅವನು ಶೂನ್ಯ ಅಥವಾ ಬಯಲು. ಅಧ್ಯಾತ್ಮ ಸೂರ್ಯ ಅಲ್ಲಮ ಪ್ರಭುವಿನ ಶಿವನು ಕಾಣದ ಶಿವನು.

ಪೃಥ್ವಿಯೊಳಗಿಲ್ಲ, ಆಕಾಶದೊಳಗಿಲ್ಲ,

In Public domain. Digitization Muthulakshmi Research Academy

ಚತುರ್ದಶ ಭುವನಾದಿ ಭುವನಂಗಳೊಳಗೆಯೂ ಇಲ್ಲ.ಹೊರಗೆಯೂ ಇಲ್ಲ,

ಏನಾಯಿತ್ತೆಂದರಿಯೆನಯ್ಯಾ,

ಗುಹೇಶ್ವರ ಅಂದೂ ಇಲ್ಲ, ಇಂದೂ ಇಲ್ಲ, ಎಂದೂ ಇಲ್ಲ.॥

ಇನ್ನೊಂದು ಅಲ್ಲಮರ ವಚನದಲ್ಲಿ ಶಿವನನ್ನು ಹೀಗೆ ಕಾಣುತ್ತಾರೆ.

ಏನು ಇಲ್ಲದ ಬಯಲೊಳಗೊಂದು

ಬಗೆಗೊಳಗಾದ ಬಣ್ಣ ತಲೆದೋರಿತ್ತು.

ಆ ಬಣ್ಣವು ಆ ಬಯಲು ಶೃಂಗರಿಸಲು

ಬಯಲು ಸ್ವರೂಪಗೊಂಡಿತ್ತು.

ಅಂತಪ್ಪ ಸ್ವರೂಪಿನ ಬೆಡಗು ತಾನೆ,

ನಮ್ಮ ಗುಹೇಶ್ವರಲಿಂಗದ ಪ್ರಥಮ ಬಿತ್ತಿ॥

ಪೇಜಾವರ ಶ್ರೀಗಳು : 'ವೀರಶೈವರಲ್ಲಿ ಭೇದಗಳಿದ್ದರೂ ಎಲ್ಲರೂ ವೀರಶೈವ ಅಥವಾ ಲಿಂಗಾಯತ ಹೆಸರಿನಲ್ಲಿ ಒಂದಾಗಬೇಕೆಂದರು.'[೨]

ಟಿಪ್ಪಣಿ : ಪೇಜಾವರ ಶ್ರೀಗಳು ಆರ್.ಎಸ್.ಎಸ್. ಕಪಿಮುಷ್ಟಿಯಲ್ಲಿದ್ದಾರೆ. ಶ್ರೀಗಳ ಮಧ್ಯೆ ಪ್ರವೇಶದ ಅವಶ್ಯಕತೆಯಿಲ್ಲ' ಎನ್ನುತ್ತ ಸಚಿವರಾದ ಎಂ.ಬಿ.ಪಾಟೀಲರು ಹಾಗೂ ವಿನಯ ಕುಲಕರ್ಣಿಯವರು ತಿರುಗೇಟು ನೀಡಿದ್ದರು. ಇದು ನಮ್ಮ ಸಮುದಾಯಕ್ಕೆ ಸೇರಿದ ಸಂಗತಿ ಈ ವಿಷಯದಲ್ಲಿ ಬೇರೆಯವರು ಗೊಂದಲ ಸೃಷ್ಟಿಸುವುದು ಬೇಡ'[೩] ಎಂದಿದ್ದರು.

ಪೇಜಾವರ ಶ್ರೀಗಳು : 'ಜಾತಿವ್ಯವಸ್ಥೆಯನ್ನು ಒಪ್ಪಲಿ ಬಿಡಲಿ ಶಿವಭಕ್ತರೆಲ್ಲ ಹಿಂದೂಗಳೇ ಎಂಬುದು ನಿಸ್ಸಂಶಯ. ಕ್ರೈಸ್ತರು, ಮುಸಲ್ಮಾನರು, ರಾಷ್ಟ್ರವ್ಯಾಪಿಯಾಗಿ ಸಂಘಟಿತರಾಗಿದ್ದಾರೆ. ಉಳಿದವರು ಸಂಘಟಿತರಾಗಲು ಹಿಂದೂಧರ್ಮ ಒಂದೇ ನೆಲೆಯಾಗಿದೆ. ಆದ್ದರಿಂದ ಅದನ್ನು ದುರ್ಬಲಗೊಳಿಸುವ ಪ್ರಯತ್ನ ಆಗಬಾರದು. ಲಿಂಗಾಯತರ ಪ್ರತ್ಯೇಕತೆಯ ಮಾತು ಬೇಡ ಎಂಬುದು ಕಳಕಳಿಯ ಮನವಿ.'[೪]

In Public domain. Digitization Muthulakshmi Research Academy

ಟಿಪ್ಪಣಿ : ಲಿಂಗಾಯತರು ಸಂಘಟಿತರಾದರೆ ರಾಷ್ಟ್ರ ದುರ್ಬಲವಾಗುತ್ತದೆ ಎಂಬ ವಾದವು ಹಾಸ್ಯಾಸ್ಪದ. ಈ ದೇಶ ಧರ್ಮನಿರಪೇಕ್ಷಿತ ದೇಶ. ಈ ದೇಶದಲ್ಲಿರುವ ಎಲ್ಲ ಧರ್ಮದವರಿಗೆ ತಮ್ಮ ಧರ್ಮವನ್ನು ಆಚರಿಸುವ ಪ್ರತಿಪಾದಿಸುವ ಹಕ್ಕನ್ನು ಈ ದೇಶದ ಸಂವಿಧಾನ ನೀಡಿದೆ. ಭಾರತ ಅನೇಕ ಧರ್ಮಗಳನ್ನು ಪಾಲಿಸುತ್ತಿರುವ ದೇಶ. ಇಲ್ಲಿ ಪ್ರತಿಯೊಬ್ಬರಿಗೂ ತನ್ನ ಇಚ್ಛೆಗನುಸಾರವಾಗಿ ಧರ್ಮವನ್ನು ಆಚರಿಸುವ ಹಕ್ಕನ್ನು ನಮ್ಮ ಸಂವಿಧಾನ ನೀಡಿದೆ. ಗಟ್ಟಿ ಸಿದ್ಧಾಂತವಿರುವ ಧರ್ಮ ಉಳಿಯುವುದು. ಸಮಾಜದ ಏಳಿಗೆಯನ್ನು ಬಯಸದ ಧರ್ಮ ನಾಶವಾಗುವುದು. ಪೂಜ್ಯರ ನಿಲುವನ್ನು ಖಂಡಿಸುತ್ತ ಲಿಂಗಾಯತ ನಾಯಕರು 'ಲಿಂಗಾಯತರು ಹಿಂದೂಧರ್ಮದ ಭಾಗವೇ ಅಲ್ಲ. ಹಾಗಿದ್ದರೂ ನೀವೇಕೆ ನಮ್ಮನ್ನು ಹಿಂದೂಧರ್ಮ ಬಿಟ್ಟು ಹೋಗಬೇಡಿ, ವೀರಶೈವರು ನೀವು ಪ್ರತ್ಯೇಕವಾಗಬೇಡಿ ಎಂದು ಪದೇ ಪದೇ ಹೇಳುತ್ತಿದ್ದೀರಿ?' ಎನ್ನುತ್ತ 'ಲಿಂಗಾಯತರ ಹೋರಾಟದಿಂದ ಪೇಜಾವರ ಶ್ರೀಗಳು, ಬಿ.ಜೆ.ಪಿ. ಮತ್ತು ರಾಷ್ಟ್ರೀಯ ಸ್ವಯಂ ಸಂಘದವರು ಕಂಗಾಲಾಗಿದ್ದಾರೆ. ಲಿಂಗಾಯತರೇನು ಭಯೋತ್ಪಾದಕರೇ? ದೇಶದ್ರೋಹಿಗಳೇ? ರಾಷ್ಟ್ರಭಕ್ತಿಗೆ ಭಂಗ ತಂದವರೇ? ಇವರಿಂದ ದೇಶಕ್ಕೆ ಯಾವ ಹಾನಿಯಾಗಿದೆ?'[೧೫] ಎಂದು ಲಿಂಗಾಯತ ಮುಖಂಡರು ಶ್ರೀಗಳನ್ನು ಪ್ರಶ್ನಿಸಿದರು.

ಪೇಜಾವರ ಶ್ರೀಗಳು : 'ಅಲ್ಪಸಂಖ್ಯಾತ ಧರ್ಮದ ಮಾನ್ಯತೆ ಸಿಕ್ಕರೆ ಕೆಲವು ಸೌಲಭ್ಯಗಳು ಸಿಗಲಿವೆ ಎಂಬ ಕಾರಣಕ್ಕೆ ಪ್ರತ್ಯೇಕ ಧರ್ಮದ ಬೇಡಿಕೆ ಇಡಲಾಗಿದೆ.'[೧೬]

ಟಿಪ್ಪಣಿ : ಶ್ರೀಗಳು ಇತಿಹಾಸವನ್ನು ಅರಿಯಲು ಕೇಳಿಕೊಳ್ಳುತ್ತ, ಮೊದಲನೆಯದಾಗಿ ಇದು ಕೇವಲ ಸೌಲಭ್ಯಕ್ಕಾಗಿ ಪ್ರಯತ್ನಿಸುವ ಹೋರಾಟವಲ್ಲ. ಇದು ಲಿಂಗಾಯತರ ಅಸ್ಮಿತೆಯ ಹೋರಾಟ.

In Public domain. Digitization Muthulakshmi Research Academy

ಸ್ವಾತಂತ್ರ್ಯಪೂರ್ವದಲ್ಲಿ(೧೯೪೦ರಲ್ಲಿ) ಲಿಂಗಾಯತಕ್ಕೆ ಅಲ್ಪಸಂಖ್ಯಾತ ಮಾನ್ಯತೆ ಕೊಡಿ ಎಂದಾಗ ಭಾರತದಲ್ಲಿ ಮೀಸಲಾತಿಯು ವ್ಯವಸ್ಥೆ ಇತ್ತೆ? ೧೮೮೧ರ ಮೈಸೂರು ಸಂಸ್ಥಾನದ ಜನಗಣತಿಯಲ್ಲಿ ಲಿಂಗಾಯತರಿಗಾದ ಅನ್ಯಾಯವನ್ನು ಪ್ರತಿಭಟಿಸಿದಾಗ ಯಾವ ಸೌಲಭ್ಯಕ್ಕಾಗಿ ವಿರೋಧಿಸಿದರು.[೧೭]

ಪೇಜಾವರ ಶ್ರೀಗಳು : 'ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ ಶಿವನೇ ಪರದೈವ ಎಂದು ನಂಬುವ ಹಿಂದೂಗಳಿರುವಾಗ, ಶಿವಭಕ್ತರಾದ ಲಿಂಗಾಯತರು ಮಾತ್ರ ಹಿಂದೂಗಳಲ್ಲ ಎಂದು ಹೇಳುವುದು ಹೇಗೆ?'[೧೭]

ಟಿಪ್ಪಣಿ : ಮಾನವಧರ್ಮ ಪೀಠದ ನಿಡುಮಾಮಿಡಿ ವೀರಭದ್ರ ಚೆನ್ನಮಲ್ಲ ಸ್ವಾಮೀಜಿ ಪೂಜ್ಯರ ಮಾತುಗಳನ್ನು ಖಂಡಿಸುತ್ತ ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ ಹರಡಿದ ಶಿವನ ಬಗ್ಗೆ 'ಎಲ್ಲ ಶಿವಭಕ್ತರು ಹಿಂದೂಗಳು ಎನ್ನುವ ಮಾತಿನಲ್ಲಿ ನ್ಯಾಯವಿಲ್ಲ. ಇದು ಅತ್ಯಂತ ಅನ್ಯಾಯದ ಮಾತು. ಶಿವಭಕ್ತರಲ್ಲಿ ಕೆಲವರು ಮಾತ್ರ ಹಿಂದೂಗಳು ಆಗಿರಬಹುದು. ಶಿವನ ಪರಂಪರೆ ಪಾಲಿಸುವ ೧೮ ಕೋಮುಗಳು ಈ ದೇಶದಲ್ಲಿವೆ. ಇವರೆಲ್ಲರೂ ಅವೈದಿಕರಾಗಿದ್ದಾರೆ. ತಳಸಮುದಾಯಕ್ಕೆ ಸಂಬಂಧಪಟ್ಟವರಾಗಿದ್ದು, ವೈದಿಕ ಮೌಲ್ಯಗಳನ್ನು ಸಂಪೂರ್ಣವಾಗಿ ನಿರಾಕರಿಸುವ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಶಿವನ ಪರಂಪರೆಯನ್ನು ದಮನ ಮಾಡುವುದು ಆರ್ಯರ ಗುರಿಯಾಗಿತ್ತು. ಇದಕ್ಕಾಗಿ ಅವರು ಮೊದಲು ದಾಳಿ ಮಾಡಿದ್ದು ಶಿವಸಂಸ್ಕೃತಿಯ ಮೇಲೆ, ಸ್ಥಳಿಯ ಭಾಷೆ, ಸಂಸ್ಕೃತಿ ಮತ್ತು ನಾಯಕತ್ವವನ್ನು ನಾಶ ಮಾಡಿ ಏಕಧರ್ಮ ಮತ್ತು ಏಕಸಂಸ್ಕೃತಿ ಕಟ್ಟುವ ಕೆಲಸವನ್ನು ಪ್ರಾಚೀನ ಕಾಲದಿಂದಲೂ ವೈದಿಕರು ಮಾಡುತ್ತ ಬಂದಿದ್ದಾರೆ. ದೇಶದ ಪ್ರತಿಯೊಂದು ಸಮುದಾಯ ಕೂಡ ತನ್ನ ಅಸ್ತಿತ್ವವನ್ನು ಕಟ್ಟಿಕೊಳ್ಳುವ ಸಂದರ್ಭ ಒದಗಿಬಂದಿದೆ' ಎನ್ನುತ್ತ, 'ಏಕಸಂಸ್ಕೃತಿ, ಏಕಧರ್ಮವನ್ನು ಹೇರುವ

In Public domain. Digitization Muthulakshmi Research Academy

ರಾಜಕೀಯ ಪ್ರಯತ್ನ ನಡೆಯುತ್ತದೆ. ಹೀಗೆಯೇ ಮುಂದುವರಿದರೆ ಪ್ರಜಾಪ್ರಭುತ್ವಕ್ಕೆ ಗಂಡಾಂತರ ಕಾದಿದೆ"೧೮ ಎಂದು ಪೇಜಾವರ ಶ್ರೀಗಳ ಮಾತಿಗೆ ನಿಡುಮಾಮಿಡಿ ಪೂಜ್ಯರು ಕಟುವಾಗಿ ಉತ್ತರಿಸಿದ್ದರು.

ಪೇಜಾವರ ಶ್ರೀಗಳು : 'ಲಿಂಗಾಯತ ಧರ್ಮವು ವರ್ಣಾಶ್ರಮ ಹಾಗೂ ಜಾತಿವ್ಯವಸ್ಥೆಯನ್ನು ಒಪ್ಪದಿರಬಹುದು. ಅದರೆ ಅದು ಹಿಂದೂ ಧರ್ಮವಲ್ಲವೆಂದು ಹೇಳಲಾಗದು. ಜಾತಿವ್ಯವಸ್ಥೆಯನ್ನು ಒಪ್ಪದ ರಾಮಕೃಷ್ಣ ಆಶ್ರಮ, ಆರ್ಯಸಮಾಜ ಹಿಂದೂಧರ್ಮವೇ ಆಗಿದೆ. ರಾಮಕೃಷ್ಣ ಆಶ್ರಮ ತನ್ನದು ಪ್ರತ್ಯೇಕ ಧರ್ಮವೆಂದು ಪ್ರತಿಪಾದಿಸಿತು. ಅದನ್ನು ನ್ಯಾಯಾಲಯ ಒಪ್ಪಲಿಲ್ಲ ಎಂಬ ಅಂಶವನ್ನು ಗಮನಿಸಬೇಕು. 'ಸ್ವಾಮಿ ನಾರಾಯಣ' 'ಚೈತನ್ಯ ಪಂಥ' ಹಾಗೂ 'ತಮಿಳುನಾಡಿನ ಶೈವಪಂಥ'ಗಳು ಜಾತಿವ್ಯವಸ್ಥೆಯನ್ನು ಒಪ್ಪಿಕೊಳ್ಳುವುದಿಲ್ಲ. ಆದರೂ ಅವು ಹಿಂದೂಧರ್ಮದ ಭಾಗವೇ ಆಗಿವೆ."೧೯

ಟಿಪ್ಪಣಿ : ಸತ್ಯವು ತಮ್ಮಿಂದ ಹೊರಬರುತ್ತಿದೆ. ಕೊನೆಗೂ ನೀವು 'ಲಿಂಗಾಯತ ಧರ್ಮ' ಮತ್ತು ಹಿಂದೂಧರ್ಮದ ಜಾತಿವ್ಯವಸ್ಥೆಯನ್ನು 'ಲಿಂಗಾಯತ ಧರ್ಮ ಒಪ್ಪಿಕೊಳ್ಳುವುದಿಲ್ಲ' ಎಂದು ನೀವು ಒಪ್ಪಿಕೊಂಡಿದ್ದಕ್ಕೆ. ಮನುಸ್ಮೃತಿ ಧರ್ಮಾಧಾರಿತ ಧರ್ಮವನ್ನು ತಿರಸ್ಕರಿಸಿ, ಅದರ ವಿರುದ್ಧವಾಗಿ ಭಾರತದಲ್ಲಿ ಜೈನ, ಬೌದ್ಧ, ಸಿಖ್ಖ ಧರ್ಮಗಳು ಜನ್ಮ ತಾಳಿವೆ. ಇವುಗಳಲ್ಲಿ ಕೆಲವು ಧರ್ಮಗಳ ವೈದಿಕ ಅಟ್ಟಹಾಸದಿಂದ ಬ್ರಾಹ್ಮಣೀಕರಿಸಿಕೊಂಡಂತೆ ಕಂಡರೂ, ಜೀವನಪದ್ಧತಿಯಲ್ಲಿ ಈ ಸಮುದಾಯಗಳು ವೈದಿಕೀಕರಣಗೊಂಡಂತೆ ತೋರಿಸಿಕೊಂಡರೂ, ಆಚರಣೆಯಲ್ಲಿ ಅಲ್ಪಸ್ವಲ್ಪ ಬದಲಾವಣೆ ಕಂಡರೂ, ಹಿಂದೂಧರ್ಮದಿಂದ ಸಿಡಿದೆದ್ದು ಹೊರಹೋಗಿರುವ ಧರ್ಮಗಳು. ಇವು ತಮ್ಮ ಧರ್ಮದ ತಾತ್ವಿಕತೆ ನಿಷ್ಠುರತೆಯನ್ನು ಕಾಪಾಡಿಕೊಂಡು ಬಂದಿವೆ. ಈ ವೈವಿಧ್ಯಮಯ ಸಂಘರ್ಷ ಭಾರತದ ಭವ್ಯತೆ. ಸಾವಿರಾರು ವರ್ಷಗಳ ಕಾಲ ಮನುಧರ್ಮ

In Public domain. Digitization Muthulakshmi Research Academy

ಪ್ರಣೀತ ಜೀವನಪದ್ಧತಿಯನ್ನು ಒಪ್ಪಿಕೊಳ್ಳದೆ ತನ್ನದೇ ಸಿದ್ಧಾಂತಗಳನ್ನು ಅಂತರಂಗದಲ್ಲಿ ಅಳವಡಿಸಿಕೊಂಡು ಧರ್ಮಚ್ಯುತಿ ಬಾರದಂತೆ ಬಾಳಿದ ಧರ್ಮಗಳು ಇನ್ನೂ ಅಸ್ತಿತ್ವದಲ್ಲಿವೆ. ಇಂತಹ ಮನುಪ್ರತಿರೋಧದ ಸಾಲಿನಲ್ಲಿ ಹನ್ನೆರಡನೆಯ ಶತಮಾನದ ವಚನ ಚಳುವಳಿ ಪ್ರಮುಖವಾದುದು. ಆಗಮೋಕ್ತ ಮೂಲದ ಬಸವಣ್ಣನೇ ಪರ್ಯಾಯ ಧರ್ಮದ ಆಲೋಚನೆ ಮಾಡಿದ್ದು, ಅದನ್ನು ಸಂಘಟಿಸಿದ್ದು, ಸ್ಥಾಪಿಸಿದ್ದು ಒಂದು ಪ್ರಾಯೋಗಿಕ ವಿಶೇಷ ಪ್ರಸಂಗ. ಭಾರತದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವಲ್ಲದೆ ದೇಶದ ಇತರ ರಾಜ್ಯಗಳ ಉಚ್ಚ ನ್ಯಾಯಾಲಯಗಳಲ್ಲಿ ಲಿಂಗಾಯತ ಸ್ವತಂತ್ರ ಧರ್ಮ ಎಂದು ಅಪರೋಕ್ಷವಾಗಿ ನ್ಯಾಯ ತೀರ್ಪುಗಳು ಬಂದಿವೆ. ಅವು ತಮ್ಮ ಅವಗಾಹನೆಗಾಗಿ:

೧. ಯಜ್ಞಪುರುಷದಾಸ್ಜಿ *Vs* ಮುಲ್ದಾಸ್: *ಗೌರವಾನ್ವಿತ ನ್ಯಾಯಾಧೀಶರು: ಶ್ರೀ ಪಿ.ಬಿ. ಗಜೇಂದ್ರಗಡಕರ: ೧೯೬೬ AIR 1119 CSR (೩) ೨೪೨ Dated ೧೪-೧-೧೯೬೬ ಪ್ಯಾರಾ ೨೬೪*

೨. ತಿರುಕನಗೌಡ ಮಲ್ಲನಗೌಡ *Vs* ಶಿವಪ್ಪಾ ಪಾಟೀಲ: *ಬಾಂಬೆ ಹೈಕೋರ್ಟ್: ಗೌರವಾನ್ವಿತ ನ್ಯಾಯಾಧೀಶರಾದ ಶ್ರೀ ದಿವಾಟಿಯಾ ಲೋಕುರ, (೧೯೪೩) ೪೫ BOMLR ೯೯೨: Dated ೧೨.೨.೧೯೪*

೩. ಪ್ಯಾರ ೫, ೬, ೭, ೧೦, ೧೧, ೧೨, ೧೩, ೧೪, ೧೫, ೧೬ ಮತ್ತು ೧೯ ೩. ಶಕುಂತಲಾ ಬಾಯಿ *& Anr Vs* ಲಕ್ಷ್ಮೀ ಕುಲಕರ್ಣಿ *& Anr: ಭಾರತದ ಸರ್ವೋಚ್ಚ ನ್ಯಾಯಾಲಯ: ಗೌರವಾನ್ವಿತ ನ್ಯಾಯಾಧೀಶರು: ಶ್ರೀ ಕೇ ಸೈಕಿಯಾ, ೧೯೮೯ AIR ೧೩೫೯, ೧೯೮೯ CSR (೨) ೭೦ Dated ೨೮-೩-೧೯೮೯.*

೪. ಬಾಲ ಪಾಟೀಲ *& Anr Vs* ಯುನಿಯನ್ ಆಫ್ ಇಂಡಿಯಾ *& ors: ಭಾರತದ ಸರ್ವೋಚ್ಚ ನ್ಯಾಯಾಲಯ: ಗೌರವಾನ್ವಿತ ನ್ಯಾಯಾಧೀಶರು: ಶ್ರೀ*

In Public domain. Digitization Muthulakshmi Research Academy

ಡಿ.ಎಮ್. ಧರ್ಮಾಧಿಕಾರಿ ಶ್ರೀ ಪಿ.ಬಿ.ಬಾಲಸುಬ್ರಮನ್ಯನ್, Citation; (Civil) ೪೭೩೦ & ೧೧೯ Dated ೮-೮-೨೦೦೫.

೫. ರಾಮಕೃಷ್ಣ ಸಿಂಗ ರಾಮ ಸಿಂಗ and Vs ಮೈಸೂರು ರಾಜ್ಯ & ors: ಕರ್ನಾಟಕ ಉಚ್ಚ ನ್ಯಾಯಾಲಯ; Citation AIR ೧೯೬೦ Kant ೩೩೮ AIR MYS ೩೩೮, ILR ೧೯೫೯ KAR ೭೪೦: Bench justice S.Dasgupta & justice H.H.Gowda : para No ೩೩(೩).

೬. ಆರ್ಯಸಮಾಜ ಎಜುಕೇಶನ್ ಟ್ರಸ್ಟ್ ದೆಲ್ಲಿ Vs ದಿ. ಡೈರೆಕ್ಟರ್ & ಎಜುಕೇಶನ್ ದೆಲ್ಲಿ; Citation AIR ೧೯೭೬ Delhi ೨೦೭: ಗೌರವಾನ್ವಿತ ನ್ಯಾಯಾಧೀಶರು: ಶ್ರೀ ವಿ. ದೇಶಪಾಂಡೆ ಮತ್ತು ಶ್ರೀ ಪಿ.ಎಸ್. ಸಫೀರ.

೭. ಕಮಿಶನರ್ ಆಫ್ ವೆಲ್ತ್ ಟ್ಯಾಕ್ಸ್ Vs ಶ್ರಿಮತಿ ಚಂಪಾಕುಮಾರಿ ಸಿಂಘಿ ಮತ್ತು ors: ಕಲಕತ್ತಾ ಉಚ್ಚ ನ್ಯಾಯಾಲಯ; Bench justice B Banerjee: ಏ Roy: Citation AIR ೧೯೬೮ Cal ೭೪,೭೨ CWN ೬೬೦,೧೯೬೮೬೭ IRR ೫೬೧ Cal Dated ೨೫-೦೮-೧೯೬೭ para No ೧೫ (a)

ಈ ಮೇಲಿನ ವ್ಯಾಜ್ಯಗಳಲ್ಲಿ ಲಿಂಗಾಯತ ಒಂದು ಸ್ವತಂತ್ರ ಧರ್ಮ ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯಗಳು ಹೇಳಲಾಗಿದೆ. ಪೂಜ್ಯರು ಹೇಳಿದ ಉದಾಹರಣೆಗಳಲ್ಲಿ ಲಿಂಗಾಯತ ಧರ್ಮದ ಗಟ್ಟಿ ಸಿದ್ಧಾಂತವಿಲ್ಲದೆ ಇರಬಹುದು, ಅಲ್ಲದೇ ನ್ಯಾಯಾಲಯದಲ್ಲಿ ಅನೇಕ ಕಾರಣಗಳಿಂದಲೂ ಕೆಲವು ಬಾರಿ ಸಿಗಬೇಕಾದ ನ್ಯಾಯ ಸಿಕ್ಕಿರದೇ ಹೋಗಿರಬಹುದು. ಈ ಉದಾಹರಣೆಗಳು ಲಿಂಗಾಯತ ಧರ್ಮಕ್ಕೂ ಅನ್ವಯಿಸುತ್ತದೆ. ಎನ್ನುವುದು ಅವರ ಆಶಾವಾದ. ಇನ್ನೂ ಲಿಂಗಾಯತ ಧರ್ಮವನ್ನು ಸ್ವಾಮಿ ನಾರಾಯಣ ಪಂಥ, ಚೈತನ್ಯ ಪಂಥ ಮತ್ತು ತಮಿಳನಾಡಿನ

In Public domain. Digitization Muthulakshmi Research Academy

ಶೈವಪಂಥಕ್ಕೆ ಹೋಲಿಕೆ ಮಾಡುವುದು ಸರಿಯಲ್ಲ. ಲಿಂಗಾಯತಕ್ಕೆ ತನ್ನದೇ ಆದ ವಿಶಿಷ್ಟ ಸಿದ್ಧಾಂತಗಳಿವೆ.

ಲಿಂಗಾಯತ ಧರ್ಮದ ವಿಶೇಷ ಲಕ್ಷಣಗಳು

೧. ಈ ಧರ್ಮಕ್ಕೆ ಸ್ಪಷ್ಟವಾದ ಇತಿಹಾಸವಿದೆ. ಇದು ಪುರಾಣಕಲ್ಪಿತ ಆಧಾರದ ಮೇಲೆ ಕಟ್ಟಿದ ಧರ್ಮವಲ್ಲ. ಹನ್ನೆರಡನೆಯ ಶತಮಾನದಲ್ಲಿ ಕಾಯಕಯೋಗಿಗಳ ಹೋರಾಟದ ಫಲವಾಗಿ ಹೊರಹೊಮ್ಮಿದ ಧರ್ಮ.

೨. ಕಾಯಕಯೋಗಿಗಳು ಹೋರಾಡಿದ್ದು ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ. ವರ್ಣ-ವರ್ಗ ವ್ಯವಸ್ಥೆಯ ವಿರುದ್ಧ. ಇಂದು ಹಿಂದೂಧರ್ಮವೆಂದು ಕರೆಯಲಾಗುತ್ತಿರುವ ಅಂದಿನ ವೈದಿಕ, ಶೈವ, ಬ್ರಾಹ್ಮಣ, ಚಾತುರ್ವರ್ಣ ವ್ಯವಸ್ಥೆಯ ವಿರುದ್ಧ ಸಿಡಿದೆದ್ದು ಹೊರಬಂದು ಸ್ಥಾಪಿಸಿದ ಹೊಸ ಧರ್ಮ.

೩. ಜನಸಾಮಾನ್ಯರು ಆಡುವ, ಬಳಸುವ ಭಾಷೆಯಲ್ಲಿ ಧರ್ಮ ಸಿದ್ಧಾಂತಗಳನ್ನು ಅನುಭಾವದ ಆಧಾರದ ಮೇಲೆ ಬರೆದು. ಅವು ಜನಸಾಮಾನ್ಯರಿಗೆ ತಾವಿತ್ತ ಭರವಸೆಗಳಿಗೆ ವಚನ **(promise)** ನೀಡಿ, ಆ ಭರವಸೆಗಳಿಗೆ ವಚನಗಳೆಂದು ಕರೆದು ಅವುಗಳನ್ನೇ ಧರ್ಮಸಿದ್ಧಾಂತಗಳೆಂದು ಹೇಳಿದ ವಿಶಿಷ್ಟ ಧರ್ಮ.

೪. ಇದು ರಾಜ ಮಹಾರಾಜರು ಬಲವಂತದಿಂದ ಹೇರಿದ ಧರ್ಮವಲ್ಲ. ಕಾಯಕಜೀವಿಗಳು ಒಂದಾಗಿ ಏಣಿಶ್ರೇಣಿರಹಿತವಾಗಿ ಸಮಸಮಾಜದ ಕನಸು ಕಂಡ ಕಾಯಕಜೀವಿಗಳ ಧರ್ಮ.

ಆತ್ಮನಿರ್ಭರ್ (ಸ್ವಯಂ ಅವಲಂಬಿತ) ಭಾರತವನ್ನು ಕಟ್ಟುವ ವಿಚಾರವನ್ನು ಇಂದಿನ ಪ್ರಧಾನಿ ಮಾತಾಡುತ್ತಿದ್ದಾರೆ. ಆದರೆ ಒಂಬತ್ತು ನೂರು ವರ್ಷಗಳ ಪೂರ್ವದಲ್ಲಿ ಬಸವಣ್ಣನವರು 'ಕಾಯಕವೇ ಕೈಲಾಸ' ಸ್ವಯಂ ಅವಲಂಬಿತ ಆತ್ಮನಿರ್ಭರದ ಮಾತುಗಳನ್ನಾಡಿ 'ರಾಜನಿರಲಿ ಪ್ರಜೆಯಿರಲಿ ನಿತ್ಯ ಕಾಯಕ ಅವನದಾಗಲಿ' ಎಂಬ ಸಿದ್ಧಾಂತ ಈ ಧರ್ಮದ್ದು. ಕಾಶ್ಮೀರ ರಾಜ ಭೂಪಾಲನು ರಾಜ್ಯ ತೊರೆದು ಕಟ್ಟಿಗೆ ಮಾರಿ ಜೀವನ

In Public domain. Digitization Muthulakshmi Research Academy

ನಡೆಸಲು ಪ್ರೇರೇಪಿಸಿದ ಧರ್ಮ ಇದು. ಧರ್ಮ ಎಂದರೇನು? ಸತ್ಯ, ಶುದ್ಧಕಾಯಕ ಮಾಡಿ, ಗಳಿಸಿದ್ದನ್ನು ತನ್ನೊಬ್ಬನ ಸ್ವತ್ತಾಗಿಸದೆ ಮತ್ತೊಬ್ಬರಿಗೆ ದಾಸೋಹ ನೀಡುವುದು, ಪರನಿಂದೆಯ ಮಾಡದೆ ಅವರಿಂದ ಏನನ್ನೂ ಅಪೇಕ್ಷಿಸದೆ, ತನ್ನಿಂದ ಇತರರ ಹಿತವನ್ನು ಬಯಸುವುದೇ ಧರ್ಮ. ಪ್ರತಿಯೊಬ್ಬನೂ ದುಡಿಯಬೇಕು. ದುಡಿತ ಸತ್ಯಶುದ್ಧವಾಗಿರಬೇಕು. ದುಡಿಯುವವನದು ಕರ್ಮವಲ್ಲ, ಅದು ಕಾಯಕ, ಅದನ್ನು ಆತ್ಮತೃಪ್ತಿಗಾಗಿ ಮಾಡು. ನಾಳೆಗೆ ಬೇಕೆಂದು ಅತಿಯಾಸೆಗೆ ಈಡಾಗಬೇಡೆಂದು ಒಬ್ಬ ಹೆಂಡತಿ ತನ್ನ ಗಂಡನಿಗೆ ಹೇಳುವ ವಿಶಿಷ್ಟ ಧರ್ಮ. ನಾಗರಿಕನು ಸ್ವಾವಲಂಬಿಯಾಗಿರಬೇಕು. ಸಿದ್ಧಾಂತಗಳು ಕೇವಲ ಹೇಳುವುದಕ್ಕಾಗಿ ಅಲ್ಲ. ಅವುಗಳನ್ನು ಆಚರಣೆಯಲ್ಲಿ ತರುವುದಕ್ಕೆ ಕೊಡುತ್ತಿರುವ ವಚನ(**promise**) ಗಳಾಗಿದ್ದವು. ಲಿಂಗಾಯತ ಸ್ವತಂತ್ರ ಧರ್ಮವೆಂದು ಸಾರಲು ಅನೇಕ ಪುರಾವೆಗಳಿವೆ.

೧. ಲಿಂಗಾಯತ ಸ್ವತಂತ್ರ ಮತ್ತು ಅಲ್ಪಸಂಖ್ಯಾತ ಧರ್ಮವೆಂದು ಪರಿಗಣಿಸಲು ಸ್ವಾತಂತ್ರ್ಯಪೂರ್ವದ ದಿನಗಳಿಂದ ಇಂದಿನವರೆಗೂ ನಡೆಸಿದ ಹೋರಾಟಗಳಿವೆ.

೨. ಲಿಂಗಾಯತ ಸ್ವತಂತ್ರ ಧರ್ಮ ಎಂದು ದೃಢಪಡಿಸಲು ಕಾನೂನಿನ ಅಂಶಗಳಿವೆ.

೩. ಪ್ರತ್ಯೇಕ ಧರ್ಮದ ಮಾನ್ಯತೆಗೆ ಸಂಬಂಧಿಸಿದ ನ್ಯಾಯಾಲಯಗಳ ಆದೇಶಗಳಿವೆ.

೪. ಲಿಂಗಾಯತ ಸ್ವತಂತ್ರ ಧರ್ಮ ಎಂದು ಸ್ವಾತಂತ್ರ್ಯಪೂರ್ವದಲ್ಲಿ ಜನಗಣತಿಯ ವರದಿಗಳಿವೆ.

೫. ಲಿಂಗಾಯತ ಸ್ವತಂತ್ರ ಧರ್ಮ ಎಂಬ ಸರ್ಕಾರಿ ಗೆಜೆಟಿಯರುಗಳ ವರದಿಗಳಿವೆ.

೬. ಲಿಂಗಾಯತದ ಕುರಿತು ಹಿಂದುಳಿದ ಆಯೋಗಗಳ ವರದಿಗಳಿವೆ.

೭. ಲಿಂಗಾಯತ ಸ್ವತಂತ್ರ ಧರ್ಮ ಎಂದು ಸಾರಲು ಧಾರ್ಮಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ರಾಷ್ಟ್ರೀಯ

In Public domain. Digitization Muthulakshmi Research Academy

ಮತ್ತು ಅಂತಾರಾಷ್ಟ್ರೀಯ ಕಾನೂನಿನ ಅಂಶಗಳು ಸಹಾಯಕಾರಿಯಾಗಿವೆ.

೮. ಭಾರತಿಯ ವಿದ್ವಾಂಸರಷ್ಟೇ ಅಲ್ಲದೆ ಕಡಲಾಚೆಯ ವಿದ್ವಾಂಸರ ಅಭಿಪ್ರಾಯಗಳು, ದಾಖಲೆಗಳನ್ನು ಪರೀಕ್ಷಿಸಿದಲ್ಲಿ ಭಾರತದಲ್ಲಿ ಜನ್ಮ ತಳೆದ ಧರ್ಮಗಳಾದ ಜೈನ, ಬೌದ್ಧ ಹಾಗೂ ಸಿಖ್ ಧರ್ಮದ ಪುರಾವೆಗಳಿಗಿಂತ ಮಹತ್ವದ್ದಾಗಿವೆ.

ಪೇಜಾವರ ಶ್ರೀಗಳು : 'ಸಂಪ್ರದಾಯ, ನಂಬಿಕೆ ಮತ್ತು ಆಚರಣೆಯ ಪ್ರತ್ಯೇಕತೆಯ ಕಾರಣ ವೀರಶೈವ ಸಮಾಜವು ವಿಘಟನೆಯಾಗಬಾರದು. ಬ್ರಾಹ್ಮಣರಲ್ಲಿ ಅನೇಕ ಬಣಗಳಿವೆ. ಶ್ರೀವೈಷ್ಣವರಲ್ಲಿ ಸಹ ತೆಂಗಲೇ, ವಡಗಲೆ ಎಂಬ ಭೇದವಿದೆ. ಸ್ಮಾರ್ತರಲ್ಲಿ ಶೈವ, ಭಾಗವತ ಮುಂತಾದ ಸಂಪ್ರದಾಯವಿದೆ, ಮುಸಲ್ಮಾನರಲ್ಲಿ ಶಿಯಾ, ಸುನ್ನಿ ಭೇದವಿದೆ. ವೀರಶೈವರಲ್ಲಿ ಭೇದಗಳಿದ್ದರೂ ಎಲ್ಲರೂ ವೀರಶೈವ ಅಥವಾ ಲಿಂಗಾಯತ ಹೆಸರಿನಲ್ಲಿ ಒಂದಾಗಬೇಕು.'[೨೦]

ಟಿಪ್ಪಣಿ : ಇದರರ್ಥ ಲಿಂಗಾಯತರು ಮಾತ್ರ ಧರ್ಮಾಚರಣೆ ಮಾಡಬಾರದು. ಅವರು ವೈದಿಕರ ಗುಲಾಮರಾಗಿ ಶೂದ್ರವರ್ಣದಲ್ಲಿರಬೇಕು ಎಂಬ ಹುನ್ನಾರದಂತಿದೆ ಶ್ರೀಗಳ ಮಾತುಗಳು. ವೀರಶೈವರು ಹಿಂದೂಗಳೆಂದು ಸಾರಿ ಸಾರಿ ಹೇಳಿದ್ದಾರೆ. ಲಿಂಗಾಯತರು ನಾವು ಸ್ವತಂತ್ರರು ಎಂದು ಸಿದ್ಧಪಡಿಸುತ್ತಿದ್ದಾರೆ. ಹಾಗಿದ್ದರೂ ಲಿಂಗಾಯತರು ಹಿಂದೂಗಳು, ನೀವು ವೀರಶೈವ ಲಿಂಗಾಯತರು ಎಂದು ಹೇಳುವುದು ನಿಮ್ಮ ಆಕ್ರಮಣಕಾರಿ ನೀತಿಯಲ್ಲವೆ ಪೂಜ್ಯರೇ? ಭಾರತದಲ್ಲಿ ಅನೇಕ ಭಾಷೆಗಳಿವೆ, ವಿಭಿನ್ನ ಆಚರಣೆಗಳಿವೆ, ವಿಭಿನ್ನ ಹವಾಮಾನ, ವಿಭಿನ್ನ ಜನತೆ ಈ ದೇಶದ ಲಕ್ಷಣ. ಇಲ್ಲಿ ಮಾಂಸಾಹಾರಿಗಳಿದ್ದಾರೆ, ಶಾಕಾಹಾರಿಗಳೂ ಇದ್ದಾರೆ, ನಾಸ್ತಿಕದ್ದಾರೆ, ದೈವಭಕ್ತರೂ ಇದ್ದಾರೆ. ವಿಭಿನ್ನತೆಯಲ್ಲಿ ಏಕತೆಯನ್ನು ಕಂಡುಕೊಂಡಿದ್ದೇ ಭಾರತ. ಸರ್ವರೂ ಸಮಾನರು, ಸರ್ವರಿಗೂ ಇವನಾರವ ಎನ್ನದೆ ಇವ ನಮ್ಮವ ಎಂದಿದ್ದು ಇದೆ ಭಾರತದಲ್ಲಿ ಅಲ್ಲವೇ ಗುರುಗಳೇ? ಭಾರತ ತನ್ನ ವೈಶಿಷ್ಟ್ಯವನ್ನು ಕಳೆದುಕೊಂಡಿಲ್ಲ,

In Public domain. Digitization Muthulakshmi Research Academy

ಧರ್ಮಾಂಧರಾಗಿಲ್ಲ, ಭಾಷಾಂಧರಾಗಿಲ್ಲ ಅಲ್ಲವೇ ಪೂಜ್ಯರೆ?

ಪೇಜಾವರ ಶ್ರೀಗಳು : 'ವೀರಶೈವ ಲಿಂಗಾಯತ ಸಮಾಜದ ಆಂತರಿಕ ವಿಷಯವಾಗಿದ್ದು ಈ ಬಗ್ಗೆ ಮಾತನಾಡುವುದು ಅಷ್ಟು ಸಮಂಜಸವಲ್ಲ. ಆದರೂ ವೀರಶೈವ ಸಮಾಜ ಮತ್ತು ಮಠಾಧಿಪತಿಗಳೊಂದಿಗೆ ದೀರ್ಘ ಕಾಲದ ಸಂಪರ್ಕ, ಸೌಹಾರ್ದ ಮತ್ತು ಆತ್ಮೀಯತೆ ಇರುವುದರಿಂದ ನನ್ನ ಅಭಿಪ್ರಾಯವನ್ನು ಹೇಳುತ್ತಿದ್ದೇನೆ. ಯಾರು ಅನ್ಯಥಾ ಭಾವಿಸಬಾರದು.'[೨೧]

ಟಿಪ್ಪಣಿ : ನಿಜಕ್ಕೂ ವೀರಶೈವ ಹಾಗೂ ಲಿಂಗಾಯತ ಮತಗಳು ಬೇರೆ ಬೇರೆ. ವೀರಶೈವರು ಇಂದಿಗೂ ತಾವು ಹಿಂದೂಗಳು ಎನ್ನುತ್ತಿದ್ದಾರೆ. ಆದರೆ ಲಿಂಗಾಯತರು ಹನ್ನೆರಡನೆಯ ಶತಮಾನದಲ್ಲಿಯೇ ಹಿಂದೂಧರ್ಮವನ್ನು ತ್ಯಜಿಸಿ ಜೈನ, ಬೌದ್ಧ, ಸಿಖ್ ರಂತೆ ಬೇರೆ ಧರ್ಮ ಕಟ್ಟಿಕೊಂಡಿದ್ದಾರೆ. ವೀರಶೈವರು ತಮ್ಮ ಸ್ವಾರ್ಥಸಾಧನೆಗಾಗಿ ಲಿಂಗಾಯತರೆಂಬ ಬಣ್ಣ ಬಳಿದುಕೊಂಡಿದ್ದಾರೆ. ಬಣ್ಣ ತೊಳೆದರೆ ಅವರ ಅಸಲಿ ಚಹರೆಯಾದ ಹಿಂದೂ ಮುಖವೇ ಕಾಣುವುದು. ವೀರಶೈವ/ಲಿಂಗಾಯತ ಪರ್ಯಾಯ ಶಬ್ದಗಳಲ್ಲ. ಎರಡಕ್ಕೂ ಪ್ರತ್ಯೇಕ ಸಿದ್ಧಾಂತಗಳಿವೆ. ಅದರಲ್ಲಿ ಲಿಂಗಾಯತ ಸ್ವತಂತ್ರ ಸಿದ್ಧಾಂತ ಹೊಂದಿದ ಧರ್ಮ. ಈ ಸತ್ಯವನ್ನು ವಯೋವೃದ್ಧ ಪೂಜ್ಯರು ತಿಳಿದುಕೊಳ್ಳಬೇಕಾಗಿತ್ತು.

ಪೇಜಾವರ ಶ್ರೀಗಳು : ಬಸವಣ್ಣನವರ ಕೆಲವು ವಚನಗಳಲ್ಲಿ ವೇದಗಳ ಉಲ್ಲೇಖ ಇದೆ. 'ಮಾದಾರ ಚನ್ನಯ್ಯ ಶಿವದೀಕ್ಷೆ ಪಡೆದಾಗ ವೇದ ನಡುಗಿತು' ಎಂಬ ಮಾತನ್ನು ಸಹ ಬಸವಣ್ಣ ಹೇಳಿದ್ದಾರೆ. ಶಿವದೀಕ್ಷೆ ಪಡೆದ ನಂತರ ಎಲ್ಲರೂ ಸಮಾನರು ಎಂಬುದು ಅವರ ನಿಲುವಾಗಿತ್ತು. ವೇದಗಳನ್ನು ಅವರು ಒಪ್ಪಿದ್ದರು ಅಥವಾ ಇಲ್ಲ ಎಂಬುದರ ಬಗ್ಗೆ ಈಗ ಚರ್ಚೆ ನಡೆಯುತ್ತದೆ. ಪ್ರತ್ಯೇಕ ಧರ್ಮದ ಪ್ರಸ್ತಾವನೆ ಬೇಡ ಎಂದು ಸರ್ಕಾರಕ್ಕೂ ತಿಳಿಸಲಾಗುತ್ತದೆ,

In Public domain. Digitization Muthulakshmi Research Academy

ಮಠಾಧೀಶರೊಂದಿಗೆ ಮಾತನಾಡಲಾಗುವುದು."[33]

ಟಿಪ್ಪಣಿ : ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ, ತರ್ಕಕ್ಕೆ ಬಾರನೆತ್ತುವೆ, ಆಗಮದ ಮೂಗು ಕೊಯ್ಯುವೆ ಎಂದು ಶರಣರು ಹೇಳಿಯೇ ಹೊರಬಂದಿಲ್ಲವೆ? ಇನ್ನೇನಿದೆ ವೇದ-ಆಗಮಗಳ ಬಗ್ಗೆ ಚರ್ಚಿಸಲು. ಇನ್ನೊಂದು ವಿಷಯ; ಲಿಂಗಾಯತರು ಹಿಂದೂಗಳಾದರೆ ಅವರ ಸ್ಥಾನವೇನು ಗುರುಗಳೇ? ಹುಟ್ಟಿನಿಂದ ಬ್ರಾಹ್ಮಣರಾದ ಹಿಂದೂಗಳು ವಿದ್ಯೆಯಿಂದ ಬ್ರಾಹ್ಮಣರಾಗಿದ್ದಾರಾ? ಹುಟ್ಟಿನಿಂದ ಲಿಂಗಾಯತರಾದವರು ಓದಿನಿಂದ ಬ್ರಾಹ್ಮಣರಾಗಬಲ್ಲರೆ? ಅಂತಹ ಲಿಂಗಾಯತರನ್ನು ಬ್ರಾಹ್ಮಣರೆಂದು ಒಪ್ಪಿ, ಅಷ್ಟಮಠಗಳಲ್ಲಿ ಕೆಲವು ಮಠಗಳನ್ನು ಬಿಟ್ಟುಕೊಡುತ್ತೀರಾ? ಇಲ್ಲವೇ, ಕೃಷ್ಣನ ಪೂಜೆಗೆ ಲಿಂಗವಂತನಾದ ಮಾದಾರ ಚೆನ್ನಯ್ಯನ ಮಗನನ್ನು ನೇಮಿಸುತ್ತೀರಾ? ಅದಕ್ಕೆ ಅಲ್ಲವೇ ಬಸವಣ್ಣನವರು ಹೇಳಿದ್ದು ವಿಪ್ರರಿಗೆ ತಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆಯೆಂದು.

***

ಈಗಾಗಲೇ ವೀರಶೈವರ ಧ್ವನಿಯಾದ ಕಾಶೀಪೀಠದ ಶ್ರೀಗಳ ಹಾಗೂ ಹಿಂದೂಗಳ ಪೂಜ್ಯರಾದ ಪೇಜಾವರ ಶ್ರೀಗಳ ಸಂದರ್ಶನಗಳನ್ನು ಓದಿರುವಿರಿ. ಲಿಂಗಾಯತರು ಹಿಂದೂಗಳಲ್ಲ, ವೀರಶೈವರೂ ಅಲ್ಲ, ಲಿಂಗಾಯತ ಒಂದು ಸ್ವತಂತ್ರಧರ್ಮವೆಂದು ಪ್ರತಿಪಾದಿಸುವ ಗದುಗಿನ ತೋಂಟದ ಶ್ರೀ ಸಿದ್ಧಲಿಂಗ ಶ್ರೀಗಳು ಉದಯವಾಣಿ ಪತ್ರಿಕೆಯ ಅಮರೇಗೌಡ ಗೋನವಾರ ಅವರೊಂದಿಗೆ ನಡೆಸಿದ ಸಂದರ್ಶನದ ಭಾಗ.

ಉದಯವಾಣಿ : ಲಿಂಗಾಯತ ವೀರಶೈವ ಒಂದೆಯೋ ಅಥವಾ ಬೇರೆಯೋ?

ಶ್ರೀಗಳು : ಖಂಡಿತವಾಗಿಯೂ ಇವೆರಡೂ ಒಂದಾಗಲು ಸಾಧ್ಯವೇ ಇಲ್ಲ. ಆಚರಣೆ, ಪದ್ಧತಿ, ಚಿಂತನೆಯಲ್ಲಿ ವೀರಶೈವ ಲಿಂಗಾಯತ ನಡುವೆ ಎಣ್ಣೆ ಸೀಗೆಕಾಯಿ ಸಂಬಂಧವಿದೆ. ಒಂದೇ ಒರೆಯಲ್ಲಿ ಎರಡು ಕತ್ತಿಗಳನ್ನಿಡಲು ಸಾಧ್ಯವೆ?

ಉದಯವಾಣಿ : ಬೇರೆ ಅಂದರೆ ಹೇಗೆ?

ಶ್ರೀಗಳು : ನೋಡಿ, ವೀರಶೈವ ಅನ್ನೋದು ಶೈವ ಪರಂಪರೆಯದ್ದು.

In Public domain. Digitization Muthulakshmi Research Academy

ವೀರಶೈವರು ಆಂಧ್ರದ ಮೂಲದವರು. ಶೈವ ಧರ್ಮಾವಲಂಬಿಗಳು. ಬಸವಣ್ಣನವರ ಬದಲಾವಣೆ, ಯಶಸ್ಸು ಹಾಗೂ ನಾಯಕತ್ವಕ್ಕೆ ಆಕರ್ಷಿತರಾಗಿ ಲಿಂಗಾಯತ ಧರ್ಮ ಸ್ವೀಕರಿಸಿದ್ದರು. ಇವರ ವೀರವ್ರತ, ಪುರವಂತಿಕೆ, ವೀರಾವೇಶ ಕುಣಿತಕ್ಕೆ ಆಕರ್ಷಿತರಾಗಿ ಅನೇಕರು ವೀರಭದ್ರನನ್ನು ಮನೆದೇವರನ್ನಾಗಿ ಮಾಡಿಕೊಂಡರು. ವೀರಶೈವರಲ್ಲಿ ಬಹುದೇವೋಪಾಸನೆ ಇದೆ. ಆದರೆ ಲಿಂಗಾಯತರು ಇಷ್ಟಲಿಂಗ ಪೂಜಕರು. ಏಕದೇವೋಪಾಸಕರು. ೧೨ನೇ ಶತಮಾನದಲ್ಲಿ ಲಿಂಗಾಯತ ಧರ್ಮ ಬಸವಣ್ಣನವರಿಂದ ಸ್ಥಾಪಿತವಾಗಿದೆ.

ಉದಯವಾಣಿ : ವೀರಶೈವ-ಲಿಂಗಾಯತ ಹಿಂದೂಧರ್ಮದ ಭಾಗವಂತೆ?

ಶ್ರೀಗಳು : ವೀರಶೈವರಲ್ಲಿ ಚತುರಾಚಾರ್ಯರು ಬರುತ್ತಾರೆ. ೧೬೭೮ರಲ್ಲಿ 'ಚತುರಾಚರಿತೆ' ಪುಸ್ತಕ ಬಂದಿದೆ. ಕಾಶಿಯಲ್ಲಿ ನಾಥಪಂಥದ ಗೋಸ್ವಾಮಿಮಠ ಎಂಬುದಿತ್ತು. ನಾಥಪಂಥ ಶೈವಧರ್ಮದ್ದಾಗಿದ್ದು, ವೀರಶೈವಕ್ಕೆ ಹೆಚ್ಚು ಸಾಮ್ಯ ಇತ್ತು. ನಾಥ ಸಂಪ್ರದಾಯ ಮಠಕ್ಕೆ ಲಿಂಗಾಯತ ಪೀಠಾಧಿಪತಿಯೊಬ್ಬರು ನೇಮಕಗೊಳ್ಳುತ್ತಾರೆ. ಆಚಾರ್ಯರಿಗೆ ಅದು ಕಣ್ಣುಕುಕ್ಕಿಸುವಂತೆ ಮಾಡುತ್ತದೆ. ೧೭ನೇ ಶತಮಾನದಲ್ಲಿ ಚತುರಾಚಾರ್ಯರ ಬದಲಾಗಿ ಪಂಚಾಚಾರ್ಯರು ಎಂದರೆ ನಾಲ್ಕು ಪೀಠಗಳು ಐದಾಗುತ್ತವೆ. ಇದು ಪುರೋಹಿತಶಾಹಿಗೆ ಪೂರಕವಾಗಿದ್ದು, ವಾರದ ಮಲ್ಲಪ್ಪನಂತಹವರನ್ನು ಬುಟ್ಟಿಗೆ ಹಾಕಿಕೊಂಡು 'ಲಿಂಗೀಬ್ರಾಹ್ಮಣ' ಎಂಬ ಗ್ರಂಥದ ಮೂಲಕ ವೀರಶೈವರು ಸಹ ಬ್ರಾಹ್ಮಣರು ಎಂಬ ಸಮರ್ಥನೆ ಯತ್ನ ನಡೆಯುತ್ತದೆ. ಹಿಂದೂಧರ್ಮದ ಮೌಢ್ಯ, ಕಂದಾಚಾರ, ವಿರೋಧಿಸಿಯೇ ಬಸವಣ್ಣನವರು ಲಿಂಗಾಯತಧರ್ಮ ಸ್ಥಾಪಿಸಿದ್ದು. ಅದು ಹೇಗೆ ಹಿಂದೂ ಧರ್ಮದ ಭಾಗವಾಗಲು ಸಾಧ್ಯ, ಹೇಳಿ?

ಉದಯವಾಣಿ : ಸ್ವತಃ ಬಸವಣ್ಣನವರೇ ವೀರಶೈವ ಧರ್ಮ ಸ್ವೀಕರಿಸಿದ್ದೇನೆ ಎಂದಿದ್ದಾರಂತಲ್ಲ?

ಶ್ರೀಗಳು : ಪ್ರಾರಂಭಿಕವಾಗಿ ಬಸವಣ್ಣನವರು ಈ ಮಾತು

In Public domain. Digitization Muthulakshmi Research Academy

ಹೇಳಿರಬಹುದು. ಬುದ್ಧನಿಗೆ ಜ್ಞಾನೋದಯವಾದಂತೆ ಬಸವಣ್ಣನವರಿಗೆ ವೀರಶೈವಧರ್ಮ ಸ್ಥಿತಿ ತಿಳಿದ ನಂತರ ಸ್ವಯಂ ಪ್ರೇರಣೆಯೊಂದಿಗೆ ಹಿಂದೂ-ವೀರಶೈವ ಧರ್ಮಕ್ಕೆ ಹೊರತಾದ ಲಿಂಗಾಯತ ಧರ್ಮ ಸ್ಥಾಪಿಸಿದ್ದಾರೆ.

ಉದಯವಾಣಿ : ಬಸವಣ್ಣ ಧರ್ಮ ಸುಧಾರಕರೇ ವಿನಾ. ಸಂಸ್ಥಾಪಕರಲ್ಲವಂತಲ್ಲ?

ಶ್ರೀಗಳು : ಇದನ್ನೇ ಹೈಜಾಕ್ ಸಂಸ್ಕೃತಿಯಂದು ಹೇಳೋದು. ಈ ಚತುರಾಚಾರ್ಯರು ಅಥವಾ ಇಂದಿನ ಪಂಚಾಚಾರ್ಯರು ಹೈಜಾಕ್ ಸಂಸ್ಕೃತಿಯನ್ನು ಬಿಂಬಿಸುತ್ತಲೇ ಬಂದಿದ್ದಾರೆ. ಅವರು ಬಸವಣ್ಣನನ್ನು ಎಂದಿಗೂ ಗುರು ಎಂದು ಒಪ್ಪಿಕೊಂಡಿಲ್ಲ. ಬಸವಣ್ಣ ಲಿಂಗಾಯತ ಧರ್ಮದ ಸಂಸ್ಥಾಪಕ ಎಂಬುದನ್ನು ವಿದೇಶಿಯರು, ಬ್ರಿಟಿಷ್ ಆಡಳಿತ ಒಪ್ಪಿದೆ. ಅನೇಕ ಸರಕಾರಿ ದಾಖಲೆಗಳಲ್ಲಿಯೂ ಇದು ನಮೂದಾಗಿದೆ.

ಉದಯವಾಣಿ : ೧೦೦ ವರ್ಷಗಳ ಹಿಂದೆ ಲಿಂಗಾಯತ ಶಬ್ದದ ಬಳಕೆ ಇರಲಿಲ್ಲವಂತೆ?

ಶ್ರೀಗಳು : ಹೈಜಾಕ್ ಸಂಸ್ಕೃತಿ ಏನನ್ನಾದರೂ ಬಿಂಬಿಸಬಲ್ಲದು. ಆದರೆ ವಾಸ್ತವ ಎಂಬುದೊಂದಿದೆಯಲ್ಲ. ೧೮೬೮ರಲ್ಲಿ ಡೆಪ್ಯುಟಿ ಚನ್ನಬಸಪ್ಪನವರು ಲಿಂಗಾಯತ ಉಚಿತ ಬೋರ್ಡಿಂಗ್ ಆರಂಭಿಸಿದ್ದರು. ೧೮೮೫ರಲ್ಲಿ ಲಿಂಗಾಯತ ವಿಧ್ಯಾಭಿವೃದ್ಧಿ ಸಮಿತಿ. ೧೯೧೬ರಲ್ಲಿ ಬೆಳಗಾವಿಯಲ್ಲಿ ಕರ್ನಾಟಕ ಲಿಂಗಾಯತ ಶಿಕ್ಷಣ ಸೊಸೈಟಿ(ಕೆಎಲ್ಇ), ವಿಜಾಪುರದಲ್ಲಿ ಲಿಂಗಾಯತ ಶಿಕ್ಷಣ ಸಂಸ್ಥೆಗಳು ಹುಟ್ಟಿಕೊಂಡವು. ಲಿಂಗಾಯತ ಶಬ್ದವೇ ಇರದಿದ್ದರೆ ಇವೆಲ್ಲ ಲಿಂಗಾಯತ ಸಂಸ್ಥೆಗಳು ಹೇಗೆ ಸ್ಥಾಪನೆಗೊಂಡವು?

ಉದಯವಾಣಿ : ಶರಣರ ವಚನಗಳಲ್ಲಿ ಲಿಂಗಾಯತ, ಲಿಂಗವಂತ ಶಬ್ದಗಳೇ ಇಲ್ಲವಂತೆ?

ಶ್ರೀಗಳು : ಬಸವಣ್ಣ ಹಾಗೂ ಶರಣರ ಷಟ್ಸ್ಥಲ ವಚನಗಳಲ್ಲಿ ವೀರಶೈವ ಎಂಬ ಶಬ್ದದ ಬಳಕೆಯೇ ಇಲ್ಲ. ಬದಲಾಗಿ ಲಿಂಗಾಯತ ಪದಗಳೇ ಇವೆ. ಅನಂತರದಲ್ಲಿ ವಚನಗಳಲ್ಲಿಯೂ ಹಸ್ತಕ್ಷೇಪ ಮಾಡಿದ ಹಲವರು ಲಿಂಗಾಯತ ಇದ್ದ ಕಡೆಯಲ್ಲಿ ವೀರಶೈವ ಎಂದು ಸೇರಿಸಿದ್ದಾರೆ.

In Public domain. Digitization Muthulakshmi Research Academy

ಉದಯವಾಣಿ : ಸಿದ್ಧಾಂತ ಶಿಖಾಮಣಿ–ವಚನಗಳ ಆಚರಣೆಗೆ ಸಾಮ್ಯ ಇದೆಯಂತಲ್ಲ?

ಶ್ರೀಗಳು : ನೋಡಿ ಸಿದ್ಧಾಂತ ಶಿಖಾಮಣಿ ಎಂಬುದು ಸ್ವತಂತ್ರ ಕೃತಿಯಲ್ಲ. ಅದು ಬೇರೆ ಬೇರೆ ಆಗಮ, ವೇದ, ಉಪನಿಷತ್ತುಗಳಿಂದ ಸಂಗ್ರಹಗೊಂಡ ಸಂಪಾದಿತ ಕೃತಿ. ಇದರಲ್ಲಿ ಸಂಸ್ಕೃತಕ್ಕೆ ಆದ್ಯತೆ. ವಚನಕಾರರು, ಕಾಯಕ, ಇಷ್ಟಲಿಂಗ ಪೂಜೆ, ದಾಸೋಹಕ್ಕೆ ಒತ್ತು ಕೊಟ್ಟವರು. ವಚನಗಳಲ್ಲಿ ಕಂಡು ಬರುವ ಶೇ.೯೦ರಷ್ಟು ಶ್ಲೋಕಗಳು ಕಾಲಕಾಲಕ್ಕೆ ಸೇರ್ಪಡೆಗೊಂಡವು ಎಂಬುದನ್ನು ಸಂಶೋಧಕ ಡಾ.ಎಂ. ಎಂ.ಕಲಬುರ್ಗಿಯವರು ಹೇಳುತ್ತಿದ್ದರು. ವಚನಕಾರರದು ಕನ್ನಡ ಧರ್ಮವಾಗಿದೆ.

ಉದಯವಾಣಿ : ವಿರಕ್ತಮಠಗಳು ಹಿಂದೂ ಪೂಜಾಪದ್ಧತಿಯನ್ನು ಆಚರಿಸುತ್ತಿವೆಯಂತಲ್ಲ?

ಶ್ರೀಗಳು : ಇರಬಹುದು, ಆದರೆ ಗದುಗಿನ ತೋಂಟದಾರ್ಯಮಠ, ಇಲಕಲ್ ಮಹಾಂತಸ್ವಾಮಿಮಠ, ಚಿತ್ರದುರ್ಗದ ಮುರುಘಾಮಠ, ಭಾಲ್ಕಿಯ ಪಟ್ಟದದೇವರಮಠ, ಹೀಗೆ ಅನೇಕ ಮಠಗಳು ಶರಣ ಪರಂಪರೆ ಆಚರಿಸುತ್ತವೆ. ಅನೇಕ ವಿರಕ್ತಮಠಾಧೀಶರು ಕಾಶಿಯಲ್ಲಿ ವಿದ್ಯೆ ಕಲಿತವರಾಗಿದ್ದು, ಮತ್ತದೇ ಶೈವ ಸಂಸ್ಕೃತಿ, ಪೂಜೆ, ಬೋಧನೆ, ಆಚರಣೆಯಲ್ಲಿ ತೊಡಗಿರಬಹುದು.

ಉದಯವಾಣಿ : ವೀರಶೈವ ಲಿಂಗಾಯತ ಮಠಗಳ ನಡುವಿನ ವೈರುಧ್ಯವೇ?

ಶ್ರೀಗಳು : ಖಂಡಿತವಾಗಿಯೂ ಹೌದು. ಸದಾಕಾಲ ನಡೆಯುವ ನಾಣ್ಯ ಲಿಂಗಾಯತ ಭಕ್ತರನ್ನು ಬಳಸಿಕೊಳ್ಳುವವರು ಮೊದಲು ಬಸವಣ್ಣನನ್ನು ಗುರು ಎಂದು ಒಪ್ಪಿಕೊಳ್ಳಲಿ. ಅದು ಬಿಟ್ಟು ಗೊಂದಲ ಸೃಷ್ಟಿಸುವ, ಲಿಂಗಾಯತ ಪರಂಪರೆಯನ್ನು ಮತ್ತದೇ ವೈದಿಕ ಪರಂಪರೆಯಲ್ಲಿ ವಿಲೀನಗೊಳಿಸುವ ಯತ್ನಕ್ಕೆ ಮುಂದಾದರೆ, ಬಸವಣ್ಣನವರ ವಾರಸುದಾರರಾಗಿ ಸಹಿಸಿಕೊಳ್ಳುವುದಾದರೂ ಹೇಗೆ ಹೇಳಿ?

ಉದಯವಾಣಿ : ವಿರಕ್ತರಾದ ಹಾನಗಲ್ ಕುಮಾರಸ್ವಾಮಿಯವರೇ ವೀರಶೈವ ಮಹಾಸಭೆ ಸ್ಥಾಪಿಸಿದ್ದಾರಲ್ಲ?

In Public domain. Digitization Muthulakshmi Research Academy

ಶ್ರೀಗಳು : ವಿರಕ್ತರಾದ ಹಾನಗಲ್ ಕುಮಾರಸ್ವಾಮಿಯವರು ಸಾಮಾಜಿಕ ಚಿಂತನೆ ಇದ್ದವರು. ಸಮಾಜಕ್ಕೆ ಒಳ್ಳೆಯದಾಗಲು ಹಾಗೂ ಸಂಘಟನೆಯ ರೂಪ ನೀಡಲು ಮಹಾಸಭಾ ರೂಪಿಸಿದ್ದರು. ಮುಂದಾಗುವ ಸವಾಲು, ಸಮಸ್ಯೆಗಳ ಬಗ್ಗೆ ಯೋಚಿಸಿರಲಿಕ್ಕಿಲ್ಲ. ಅವರದ್ದೇ ಕಾಲದಲ್ಲಾದ ಒಂದು ಘಟನೆಯ ಹಿನ್ನೆಲೆಯಲ್ಲಿ ಹೈದರಾಬಾದ್ ನಿಜಾಮ ರಚಿಸಿದ ಪಾಠಕ್ ಕಮಿಟಿ ಲಿಂಗಾಯತರು ವಿಭಿನ್ನ ಎಂಬುದನ್ನು ನಮೂದಿಸಿದೆ.

ಉದಯವಾಣಿ : ಪ್ರತ್ಯೇಕ ಧರ್ಮದ ಹೆಸರಲ್ಲಿ ಸಮಾಜ ಒಡೆಯುವುದು ಬೇಡವೆಂಬ ಮಾತಿದೆಯೆಲ್ಲಾ?

ಶ್ರೀಗಳು : ಸಮಾಜದ ಹಿತಕ್ಕಿಂತ ಮಠ ಮತ್ತು ಮಠಾಧೀಶರು ದೊಡ್ಡವರಲ್ಲ. ಲಿಂಗಾಯತ ಧರ್ಮದ ಬಗ್ಗೆ ಹೆಚ್ಚಿನ ಜಾಗೃತಿ ಇರಲಿಲ್ಲ. ೧೯೨೬ರಲ್ಲಿ ಫ.ಗು. ಹಳಕಟ್ಟಿಯವರು ವಚನಶಾಸ್ತ್ರ ಭಾಗ ೧ರ ಮೂಲಕ ಜಾಗೃತಿ ಮೂಡಿಸಿದರು. ಕೆಲವರು ಅನುಭವ ಮಂಟಪ ಎಂಬುದೇ ಕಪಟ ಎಂಬ ಟೀಕೆ ಮಾಡಿದ್ದರು. ಉತ್ತಂಗಿ ಚೆನ್ನಪ್ಪನವರು ಅನುಭವ ಮಂಟಪದ ಐತಿಹಾಸಿಕ ಸತ್ಯವನ್ನು ಜಗತ್ತಿಗೆ ನೀಡಿದ್ದರು. ಸಮಾಜ ಒಡೆಯುತ್ತಿಲ್ಲ. ಲಿಂಗಾಯತ ಸಮಾಜದ ಹಿತಕ್ಕೆ ಯತ್ನಿಸುತ್ತಿದ್ದೇವಷ್ಟೇ.

ಉದಯವಾಣಿ : ಕೇವಲ ಸರಕಾರಿ ಸೌಲಭ್ಯಕ್ಕಾಗಿ ಸ್ವತಂತ್ರ ಧರ್ಮ ಬೇಕಾ?

ಶ್ರೀಗಳು : ಸರಕಾರಿ ಸೌಲಭ್ಯ ಸೆಕಂಡರಿ. ಧರ್ಮ ಸಿದ್ಧಾಂತ, ದರ್ಶನ ಅನುಭಾವ, ಸಾಮಾಜಿಕ ವ್ಯವಸ್ಥೆ ನಮಗೆ ಮುಖ್ಯ. ಸ್ವತಂತ್ರ ಲಿಂಗಾಯತ ಧರ್ಮಕ್ಕೆ ಬೇಕಾದ ಲಕ್ಷಣ ಇಂದು ನಿನ್ನೆಯದಲ್ಲ. ೮೦೦ ವರ್ಷಗಳಿಂದ ಇದೆ. ಸರಕಾರಿ ದಾಖಲೆಗಳಲ್ಲಿಯೂ ಲಿಂಗಾಯತ ಧರ್ಮ ಸ್ವತಂತ್ರ ಹಾಗೂ ಹಿಂದೂಧರ್ಮಕ್ಕಿಂತ ಭಿನ್ನ ಎಂಬುದಿದೆ. ಅಲ್ಪಸಂಖ್ಯಾತ ಧರ್ಮವಾದರೆ ಸರಕಾರಿ ಸೌಲಭ್ಯ ಸಿಕ್ಕರೆ ಬೇಡ ಎನ್ನುವುದೇಕೆ? ಸಮಾಜದ ಹಿತಕ್ಕೆ, ಭವಿಷ್ಯದ ಜನಾಂಗಕ್ಕೆ ಒಳ್ಳೆಯದಾದರೆ ಆಗಲಿ.

In Public domain. Digitization Muthulakshmi Research Academy

ಉದಯವಾಣಿ : **ಲಿಂಗಾಯತ ಸ್ವತಂತ್ರ ಧರ್ಮವೆಂಬುದು ಕೇವಲ ರಾಜಕೀಯ ದಾಳವಾಯಿತೇ?**

ಶ್ರೀಗಳು : ಮುಖ್ಯಮಂತ್ರಿಯಾಗಿ ಲಿಂಗಾಯತ ಸಮಾಜದವರು ಮಾಡದ ಬಹುದೊಡ್ಡ ಕಾರ್ಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಡಿ ಇರಿಸಿದ್ದು, ಎದೆಗಾರಿಕೆ ತೋರಿಸಿದ್ದಾರೆ. ಸರಕಾರಿ ಕಚೇರಿಗಳಲ್ಲಿ ಬಸವಣ್ಣನವರು ಭಾವಚಿತ್ರ, ಮಹಿಳಾ ವಿಶ್ವವಿದ್ಯಾನಿಲಯಕ್ಕೆ ಅಕ್ಕಮಹಾದೇವಿ ನಾಮಕರಣ, ಲಿಂಗಾಯತ ಸ್ವತಂತ್ರಧರ್ಮಕ್ಕೆ ಶಿಫಾರಸ್ಸಿಗೆ ಸಿದ್ಧವೆಂದಿದ್ದಾರೆ. ಸಮಾಜ ಈಗಲಾದರೂ ಅನ್ಯ ದಾಸ್ಯಗಳಿಂದ ಹೊರಬಂದು ಬಸವಾದಿ ಶರಣರ ಆಶಯ ಈಡೇರಿಕೆ, ಹಿಂದೂ ಎಂಬ ಸಮುದ್ರದ ಅಲೆಗಳ ಹೊಡೆತಕ್ಕೆ ಅಸ್ತಿತ್ವವನ್ನೇ ಕಳೆದುಕೊಳ್ಳುವ ಬದಲು ಸ್ವತಂತ್ರ ಲಿಂಗಾಯತ ಧರ್ಮದ ಮೂಲಕ ಜಗವೇ ನಮ್ಮತ್ತ ನೋಡುವಂತೆ ಮಾಡುವುದಕ್ಕೆ ಸಂಘಟಿತವಾಗಿ ಮುಂದಡಿ ಇರಿಸಬೇಕಾಗಿದೆ.(ಉದಯವಾಣಿ ೮, ಆಗಸ್ಟ್ ೨೦೧೭)[೨೩].

ಕೊನೆ ಟಿಪ್ಪಣಿಗಳು

೧ ಲಿಂಗವಂತ ಧರ್ಮದಲ್ಲಿ ಏನುಂಟು ಏನಿಲ್ಲ? ಲೇಖಕರು: ರಂಜಾನ್ ದರ್ಗಾ: ಪು.ಸಂ. ೯.

೨. ಡಾ. ಎಸ್.ಸಿ. ನಂದಿಮಠರ ಲೇಖನಗಳು, ಪ್ರಸ್ತಾವನೆ ಪುಟಗಳಲ್ಲಿ.

೩. ಸಿದ್ಧಾಂತ ಶಿಖಾಮಣಿ ಹಾಗೂ ಶ್ರೀಕರಭಾಷ್ಯ: ನಿಜದ ನಿಲವು : ಲೇಖಕರು: ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು. ಪು. ಸಂ. ೩

೪. ಡಾ.ಎಂ.ಎಂ.ಕಲಬುರ್ಗಿ ಲಿಂಗಾಯತ ಸ್ವತಂತ್ರ ಧರ್ಮ: ಲಡಾಯಿ ಪ್ರಕಾಶನ: ಪು.ಸಂ.೨೮

೫. ಪ್ರಜಾವಾಣಿ ಪತ್ರಿಕೆ ಜುಲೈ ೨೫, ೨೦೧೭

೬. ಧರ್ಮಸಂಕಟ ಸೃಷ್ಟಿಸಿದ ಮಾದಕ ಸೋಮ, ಲಕ್ಷ್ಮೀಪತಿ ಕೋಲಾರ, ಜಾಲಾರ ಪ್ರಕಾಶನ, ತುಮಕೂರು, ಪು.ಸಂ. ೪೯–೫೦

೭. ಲಿಂಗಾಯತ – ಸ್ವತಂತ್ರ ಧರ್ಮ: ಲೇಖಕರು: : ಲಕ್ಷ್ಮಣ ಕೌಂಟೆ, ಪ್ರಕಾಶಕರು: ಬಸವ ಧರ್ಮ ಪ್ರಸಾರ ಸಂಸ್ಥೆ, ಹಿರೇಮಠ ಸಂಸ್ಥಾನ ಭಾಲ್ಕಿ. ಪು.ಸಂ. ೧೧೫

೮. ವಚನ: ಸಂಪಾದಕರು: ಡಾ.ಎಂ.ಎಂ.ಕಲಬುರ್ಗಿ: ಪ್ರಕಾಶಕರು ಬಸವ ಸಮಿತಿ, ಬೆಂಗಳೂರು–೧ ವಚನ ಸಂಖ್ಯೆ ೨೦೧

೯. ವಚನ: ಸಂಪಾದಕರು: ಡಾ.ಎಂ.ಎಂ.ಕಲಬುರ್ಗಿ: ಪ್ರಕಾಶಕರು ಬಸವ ಸಮಿತಿ, ಬೆಂಗಳೂರು–೧ ವಚನ ಸಂಖ್ಯೆ ೧೨. ಪು.ಸಂ. ೩೪೯

೧೦. ವಚನ: ಸಂಪಾದಕರು: ಡಾ.ಎಂ.ಎಂ.ಕಲಬುರ್ಗಿ: ಪ್ರಕಾಶಕರು ಬಸವ ಸಮಿತಿ, ಬೆಂಗಳೂರು–೧ ವಚನ ಸಂಖ್ಯೆ ೧೨. ಪು.ಸಂ. ೩೪೯

೧೧. ವಚನ : ಸಂಪಾದಕರು: ಡಾ.ಎಂ.ಎಂ.ಕಲಬುರ್ಗಿ: ಪ್ರಕಾಶಕರು: ಬಸವ ಸಮಿತಿ ಬೆಂಗಳೂರು.

In Public domain. Digitization Muthulakshmi Research Academy

೧೨. ಪ್ರಜಾವಾಣಿ ಪತ್ರಿಕೆ ಜುಲೈ ೨೫, ೨೦೧೭.
೧೩. ಪ್ರಜಾವಾಣಿ ಪತ್ರಿಕೆ ಜುಲೈ ೨೬, ೨೦೧೭.
೧೪. ಪ್ರಜಾವಾಣಿ ಪತ್ರಿಕೆ ಜುಲೈ ೨೫, ೨೦೧೭.
೧೫. ಪ್ರಜಾವಾಣಿ ವಾರ್ತೆ: ದಿನಾಂಕ ೨೧.೧೦.೨೦೧೭.
೧೬. ಪ್ರಜಾವಾಣಿ ಪತ್ರಿಕೆ ಜುಲೈ ೨೫, ೨೦೧೭.
೧೭. ಪ್ರಜಾವಾಣಿ ಪತ್ರಿಕೆ ಜುಲೈ ೨೫, ೨೦೧೭.
೧೮. ಪ್ರಜಾವಾಣಿ ಪತ್ರಿಕೆ ಅಕ್ಟೋಬರ್ ೨೧, ೨೦೧೭.
೧೯. ಪ್ರಜಾವಾಣಿ ಪತ್ರಿಕೆ ಜುಲೈ ೨೫, ೨೦೧೭.
೨೦. ಪ್ರಜಾವಾಣಿ ಪತ್ರಿಕೆ ಜುಲೈ ೨೫, ೨೦೧೭.
೨೧. ಪ್ರಜಾವಾಣಿ ಪತ್ರಿಕೆ ಜುಲೈ ೨೫,೨೦೧೭
೨೨. ಪ್ರಜಾವಾಣಿ ಪತ್ರಿಕೆ ಜುಲೈ ೨೫,೨೦೧೭.
೨೩. ಲಿಂಗಾಯತ ಸಂಸ್ಕೃತಿ ಡಾ ತೋಂಟದ ಸಿದ್ಧಲಿಂಗ ಶ್ರೀಗಳ ಅಭಿನಂದನ: ಪ್ರಧಾನ ಸಂಪಾದಕರು ಡಾ. ಸರಜೂ ಕಾಟ್ಕರ್: ಪು.ಸಂ.೧೧೩.

In Public domain. Digitization Muthulakshmi Research Academy

ಅಧ್ಯಾಯ ಮೂರು

ಬೀದಿಗಿಳಿದ ಲಿಂಗಾಯತ ಚಳುವಳಿ

ಲಿಂಗಾಯತ ಧರ್ಮ ಮಾನ್ಯತೆಗಾಗಿ ವೀರಶೈವ ಮಹಾಸಭಾದವರು ಸಲ್ಲಿಸಿದ ಮನವಿಗೆ ಸ್ಪಂದಿಸುತ್ತ ಮಾನ್ಯ ಮುಖ್ಯಮಂತ್ರಿಗಳು 'ನೀವೆಲ್ಲ ಒಟ್ಟಾಗಿ ಬನ್ನಿ' ಎಂದಾಗ, ಆವರ ಮಾತಿಗೆ ಮೊದಲು ಸ್ಪಂದಿಸಿದವರು ಆಳಂದ ಕ್ಷೇತ್ರದ ಶಾಸಕ ಬಿ.ಆರ್.ಪಾಟೀಲರು. ಅವರು ಲಿಂಗಾಯತರೆಲ್ಲರೂ ಒಟ್ಟಾಗಿ ಸೇರಿ ಧರ್ಮಮಾನ್ಯತೆ ಕೇಳಬೇಕೆಂದು ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡರು. ಅದಕ್ಕೆ ಸ್ಪಂದಿಸುವಂತೆ ಬಸವಧರ್ಮ ಪೀಠಾಧ್ಯಕ್ಷೆ ಮಾತೆ ಮಹಾದೇವಿಯವರು ಇವರ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿ ಜನಜಾಗೃತಿಯನ್ನು ಮಾಡಲು ಮುಂದಾದರು.

'ನೀವೆಲ್ಲ ಒಟ್ಟಾಗಿ ಬನ್ನಿ' ಎಂದು ಮುಖ್ಯಮಂತ್ರಿಗಳು ಹೇಳಲು ಕಾರಣವೂ ಇತ್ತು. ಲಿಂಗಾಯತರಲ್ಲಿ ಭಿನ್ನಾಭಿಪ್ರಾಯಗಳಿರುವುದು ಅವರಿಗೆ ತಿಳಿಯದ ವಿಷಯವೇನಾಗಿರಲಿಲ್ಲ. ಗುರು-ವಿರಕ್ತರ ಮಧ್ಯೆ ಇರುವ ಭಿನ್ನಾಭಿಪ್ರಾಯ ಶತಮಾನಗಳಷ್ಟು ಹಳೆಯದು. ಈ ಕಗ್ಗಂಟನ್ನು ಬಿಡಿಸಲು ಹಿಂದೊಮ್ಮೆ ವೀರಶೈವ ಮಹಾಸಭೆ ಪ್ರಯತ್ನಿಸಿದ್ದರೂ ಫಲ ಸಿಕ್ಕಿರಲಿಲ್ಲ. ವೀರಶೈವ ಮಹಾಸಭೆಯಾಗಲಿ, ವಿರಕ್ತಮಠಾಧೀಶರಾಗಿಲಿ, ಪಂಚಪೀಠಾಧೀಶ್ವರರಾಗಲಿ ಶರಣಸಿದ್ಧಾಂತಗಳನ್ನು ಮರೆತು ಜಾತಿವ್ಯವಸ್ಥೆಯನ್ನು ಅಪ್ಪಿಕೊಂಡು ಶತಮಾನಗಳೇ ಸಂದಿವೆ.

ವೈದಿಕ ಧರ್ಮದ ಮೌಢ್ಯಗಳನ್ನು ತಿರಸ್ಕರಿಸಿ, 'ಲಿಂಗಾಯತ ಧರ್ಮ'ವನ್ನು ಸ್ಥಾಪಿಸಿದ ಬಸವಣ್ಣನವರು, ಲಿಂಗಾಯತ ಸಿದ್ಧಾಂತಗಳನ್ನು ಜನಮನಗಳಿಗೆ ತಲುಪಿಸುವ ಘನವಾದ ಹೊಣೆಯನ್ನು ಜಂಗಮರ ಮೇಲೆ ಹೊರಿಸಿದ್ದರು.

In Public domain. Digitization Muthulakshmi Research Academy

ಹನ್ನೆರಡನೆಯ ಶತಮಾನದ ಕ್ರಾಂತಿಯ ನಂತರ ನಡೆದ ಬಿಜ್ಜಳನ ವಧೆ, ಕಲ್ಯಾಣದಿಂದ ಶರಣರ ಚೆದುರುವಿಕೆ ಇವೆಲ್ಲ ಲಿಂಗಾಯತ ಧರ್ಮದ ಪ್ರಸಾರಕ್ಕೆ ತಡೆಯೊಡ್ಡಿದ್ದವು. ಕಾಲಾಂತರದಲ್ಲಿ ಲಿಂಗಾಯತರ ಮೇಲೆ ಆಂಧ್ರದ ಆಚಾರ್ಯರು ಸವಾರಿ ಮಾಡಲಾರಂಬಿಸಿ, ಲಿಂಗಾಯತ ಸಿದ್ಧಾಂತಗಳನ್ನೇ ಗಾಳಿಗೆ ತೂರಿಬಿಟ್ಟರು. ಲಿಂಗಾಯತದ ಲಾಂಛನವಾದ 'ಇಷ್ಟಲಿಂಗ, ಒಂದನ್ನು ಬಿಟ್ಟು ಉಳಿದೆಲ್ಲವನ್ನು ವೈದಿಕಮಯವಾಗಿಸಿದರು. ಯಾವ ಉದ್ದೇಶಕ್ಕಾಗಿ ಕಲ್ಯಾಣದ ಕ್ರಾಂತಿಯಾಗಿತ್ತೋ, ಆ ಉದ್ದೇಶವನ್ನೇ ಈ ಆಂಧ್ರದ ಲಿಂಗೀ ಬ್ರಾಹ್ಮಣರು ಪಕ್ಕಕ್ಕೆ ಸರಿಸಿದ್ದರು.

ಲಿಂಗಾಯತರ ಹಿತ ಕಾಪಾಡಲು ಹುಟ್ಟಿಕೊಂಡ ಸಂಸ್ಥೆ ಅಖಿಲ ಭಾರತ ವೀರಶೈವ ಮಹಾಸಭೆ. ಇದನ್ನು ಸ್ಥಾಪಿಸಿದವರು ಲಿಂಗಾಯತರಾದರೂ, ಅದನ್ನು ಸುಪರ್ಧಿಗೆ ತೆಗೆದುಕೊಂಡವರು ವೀರಶೈವರು. ಇದು ಅಸಲಿನಲ್ಲಿ ವೀರಶೈವರ ಹಿತ ಕಾಪಾಡುವ ಸಂಸ್ಥೆಯಾಗಿದೆ. ಕಾಯಕ ವರ್ಗಗಳ ಶರಣರು ಸ್ಥಾಪಿಸಿದ ಲಿಂಗಾಯತ ಧರ್ಮದ ಹಿತ ಕಾಪಾಡಬೇಕಾದ ಲಿಂಗಾಯತ ಸಂಸ್ಥೆಯು ನೂರು ಸಮಾಜಗಳಲ್ಲಿ ಒಂದಾದ ವೀರಶೈವ ಸಮಾಜದ ಹಿತ ಕಾಪಾಡುವುದು ವಿಪರ್ಯಾಸವೇ ಸರಿ. ಈ ವಿಪರ್ಯಾಸದ ಬಗ್ಗೆ ಡಾ. ಜಾಮದಾರ ಅವರು ಬಹಳ ಸುಂದರವಾಗಿ ವಿಶ್ಲೇಷಣೆ ಮಾಡುತ್ತಾರೆ." The ABVM Itself has been the root cause of the obliteration of Lingayat identity! How can it ever claim to be a champion of Lingayats ? At best, the ABVM can represent only Veershaivas, as its name indicates?"

ಲಿಂಗಾಯತ ಧರ್ಮವನ್ನು ಜಂಗಮರ ಕೈಯಲ್ಲಿಟ್ಟು ಬಯಲಲ್ಲಿ ಬಯಲಾಗಿತ್ತು ಶರಣಸಂಕುಲ. ಕಾಲಾಂತರದಲ್ಲಿ ಈ ವಿರಕ್ತ ಜಂಗಮರು ಮಠಗಳನ್ನು ಕಟ್ಟಿ ಅವರು ಸ್ಥಾವರವಾಗಿ ಬದಲಾದರು. ಒಂದು ಸಂಸ್ಥೆಯನ್ನಾಗಲಿ ಅಥವಾ ಧರ್ಮವನ್ನಾಗಲಿ ಕಟ್ಟಿ ಬೆಳೆಸಲು ಅಥವಾ ಅದನ್ನು ವಿಶ್ವವ್ಯಾಪಿಯನ್ನಾಗಿಸಲು ಒಂದು ವ್ಯವಸ್ಥಿತವಾದ ಪಡೆ ನಿರಂತರವಾಗಿ ಕಾರ್ಯ ಮಾಡಬೇಕಾಗುತ್ತದೆ. ಈ ಪಡೆಗೆ ಸ್ಪಷ್ಟವಾದ ಉದ್ದೇಶ ಮತ್ತು ಸಿದ್ಧಾಂತಗಳು ಇರಲೇಬೇಕಾಗುತ್ತದೆ. ಮೂಲಭೂತ ಉದ್ದೇಶ ಮತ್ತು ಕರ್ತವ್ಯಗಳನ್ನು ಸಾಕಾರಗೊಳಿಸಲು, ನಿರಂತರವಾಗಿ ಕಾಯಕವನ್ನು ಕೈಗೊಳ್ಳಬೇಕಾಗುತ್ತದೆ. ಕ್ರಿಶ್ಚಿಯನ್ ಧರ್ಮವನ್ನು ಇಡೀ ಜಗತ್ತಿಗೆ ಪರಿಚಯಿಸಲು ಕ್ರೈಸ್ತ ಮಿಷಿನರಿಗಳ ಕಾರ್ಯ ಇದಕ್ಕೆ ಮಾದರಿ. ಅದೇ ರೀತಿಯಾಗಿ ಇಸ್ಲಾಂಧರ್ಮದ ಒಗ್ಗಟ್ಟು ಇಂದು ಇತರ ಧರ್ಮಗಳಿಗೆ ಮಾದರಿ. ಹೀಗಾಗಿ ಈ ಧರ್ಮಗಳು ಜಗತ್ತಿನ ಬಹು ಭಾಗಗಳಲ್ಲಿ ಪಸರಿಸಿವೆ. ಭಾರತದಲ್ಲಿ ಜನ್ಮ ತಳೆದ ಬೌದ್ಧ, ಜೈನ,

In Public domain. Digitization Muthulakshmi Research Academy

ಲಿಂಗಾಯತ ಧರ್ಮಗಳಿಗೆ ಈ ಕೊರತೆ ಕಾಣುತ್ತದೆ, ಆದರೆ ಭಾರತದಲ್ಲಿ ಜನ್ಮ ತಳೆದ ಇನ್ನೊಂದು ಧರ್ಮವಾದ ಸಿಖ್ ಧರ್ಮ ಇದರಿಂದ ಹೊರತಾಗಿದೆ.

ಜಂಗಮರು ಸ್ಥಾವರವಾದರು ಎಂದು ನಾನು ಈಗಾಗಲೇ ಆಪಾದಿಸಿದ್ದೇನೆ. ಸ್ಥಾವರವಾದರೂ ಅವರು ಸಮಾಜಕ್ಕೆ ನೀಡಿದ ಒಂದು ಕಾಣಿಕೆಯನ್ನು ಸ್ಮರಿಸಲೇಬೇಕು. ಈ ವಿರಕ್ತಮಠಗಳು ಜನಸಾಮಾನ್ಯರಿಗಾಗಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಜನರ ಜೀವನಮಟ್ಟವನ್ನು ಸುಧಾರಿಸಲು ಪ್ರಯತ್ನಿಸುತ್ತಲಿವೆ. ಬ್ರಾಹ್ಮಣರ ಏಕಸ್ವಾಮ್ಯವಾಗಿದ್ದ ಶಿಕ್ಷಣವು ಲಿಂಗಾಯತರ ಪಾಲಾಯಿತು. ಇದರಿಂದ ಇಂದು ಲಿಂಗಾಯತವು ಪ್ರಬಲ ಸಮಾಜವಾಗಿ ಪರಿವರ್ತನೆ ಹೊಂದಿದೆ. ವಿರಕ್ತಮಠಗಳು ಲಿಂಗಾಯತರನ್ನು ಶಿಕ್ಷಣವಂತರನ್ನಾಗಿಸಲು ಪ್ರಯತ್ನಿಸುತ್ತಿದ್ದರೆ, ಬಸವಣ್ಣ ಮತ್ತು ಶರಣತತ್ವಗಳನ್ನು ಉಸಿರಾಗಿಸಿಕೊಂಡಿದ್ದ ಲಿಂಗಾಯತರ ಪ್ರಥಮ ಮಹಿಳಾ ಜಗದ್ಗುರು ಮಾತೆ ಮಹಾದೇವಿಯವರು ವಿಭಿನ್ನವಾಗಿ ಯೋಚಿಸುತ್ತಿದ್ದರು. ಬಸವಧರ್ಮವನ್ನು ಜಾಗೃತಗೊಳಿಸಿ, ವೈದಿಕವನ್ನು ಅಪ್ಪಿಕೊಂಡ ಲಿಂಗಾಯತರಿಗೆ ಶರಣಸಿದ್ಧಾಂತವನ್ನು ತಿಳಿಸಿ, ವೈದಿಕ ಧರ್ಮದಿಂದ ಅವರನ್ನು ಹೊರಗೆಳೆಯಲು ರಾಷ್ಟ್ರೀಯ ಬಸವದಳವೆಂಬ ಅಂಗಸಂಸ್ಥೆಯನ್ನು ಹುಟ್ಟುಹಾಕಿ ಅದರ ಘಟಕಗಳನ್ನು ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ ಪ್ರಾರಂಭಿಸಿದರು. ಬಸವಣ್ಣನವರ ಕಾರ್ಯಕ್ಷೇತ್ರವಾಗಿದ್ದ ಅಂದಿನ ಕಲ್ಯಾಣ ಇಂದಿನ ಬಸವಕಲ್ಯಾಣವನ್ನು ಲಿಂಗಾಯತ ಧಾರ್ಮಿಕ ಕ್ಷೇತ್ರವನ್ನಾಗಿ ಮರುಸ್ಥಾಪಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ಬಸವಕಲ್ಯಾಣದಲ್ಲಿ ನೂರು ಅಡಿಯ ಬಸವ ಮೂರ್ತಿಯನ್ನು ಸ್ಥಾಪಿಸಿ, ಬಸವನೆಂದರೆ ಪಶುವಲ್ಲ, ಅವರೊಬ್ಬ ಶ್ರೇಷ್ಠ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ನಾಯಕರೆಂದು ಸಾರುವ ಅವರ ಪ್ರಯತ್ನ ಶ್ಲಾಘನೀಯವಾದದ್ದು. ಬಸವಣ್ಣನವರ ಹಿರಿಮೆಗೆ ತಕ್ಕಂತೆ ನೂರು ಅಡಿಗಳ ಬಸವಮೂರ್ತಿಯನ್ನು ಬಸವಕಲ್ಯಾಣದಲ್ಲಿ ಸ್ಥಾಪಿಸಿದರು. ಈ ಜನಜಾಗೃತಿಯ ಕಾರಣದಿಂದ ಬೀದರ್ ಜಿಲ್ಲೆಯಲ್ಲಿ ಲಿಂಗಾಯತ ಧರ್ಮ ಉಳಿದೆಲ್ಲ ಪ್ರದೇಶಗಳಿಗಿಂತ ಹೆಚ್ಚು ಜಾಗೃತವಾಗಿದೆ. ಬಸವಣ್ಣನವರು ಇಲ್ಲಿ ಆರಾಧ್ಯದೈವ. ಅವರಿಗಾಗಿ ಈ ಜಿಲ್ಲೆಯ ಜನರು ತಮ್ಮ ತನು, ಮನ, ಧನಗಳನ್ನು ದಾಸೋಹಗೈಯ್ಯಲು ಸದಾ ಮುಂದಾಗುತ್ತಾರೆ. 'ಇಪ್ಪತ್ತೊಂದನೆಯ ಶತಮಾನದಲ್ಲಿ ಲಿಂಗಾಯತ ಸಿದ್ಧಾಂತಗಳನ್ನು ಮನೆಮನೆಗೆ ಮುಟ್ಟಿಸುವ ಕಾರ್ಯದಲ್ಲಿ ನಿರಂತರವಾಗಿ ಸೇವೆ ಸಲ್ಲಿಸಿದವರು ಮಾತೆ ಮಹಾದೇವಿಯವರು ಮಾತ್ರ' ಎನ್ನುತ್ತಾರೆ ಬೀದರ್ ಜಿಲ್ಲೆಯ ಲಿಂಗಾಯತ ಮುಖಂಡ ಬಸವರಾಜ ದನ್ನೂರ ಅವರು. 'ಕರ್ನಾಟಕವಲ್ಲದೆ ಲಿಂಗಾಯತ ಬಾಹುಳ್ಯದ ಪಕ್ಕದ ರಾಜ್ಯಗಳಲ್ಲಿ ವಿರಕ್ತಮಠಗಳು ಸುಪ್ತವಾಗಿದ್ದ ಕಾಲದಲ್ಲಿ ಮಾತೆ ಮಹಾದೇವರು ಮಾತ್ರ ಲಿಂಗಾಯತ ಜಾಗೃತಿಯನ್ನು ಮಾಡುವುದಲ್ಲದೆ ಅದನ್ನು ವಿಶ್ವವ್ಯಾಪಿಯಾಗಿಸುವ ಉದ್ದೇಶದಿಂದ

In Public domain. Digitization Muthulakshmi Research Academy

ಲಿಂಗಾಯತಕ್ಕೆ ಸಾಂವಿಧಾನಿಕ ಮಾನ್ಯತೆಯನ್ನು ದೊರಕಿಸಿಕೊಳ್ಳುವ ನಿಟ್ಟಿನಲ್ಲಿ ಅವರು ಸದಾ ಚಿಂತಿಸುತ್ತಿದ್ದರು' ಎನ್ನುತ್ತಾರೆ. ಬಸವರಾಜ ಇವರ ಭಾವನೆಗಳನ್ನು ಹಂಚಿಕೊಂಡಂತೆ 'ಮಾತಾಜಿವರು ಲಿಂಗಾಯತ ಧರ್ಮದ ಮಾನ್ಯತೆಗೆ ಸಂಬಂಧಪಟ್ಟ ದಾಖಲೆಗಳನ್ನು ಸಂಗ್ರಹಿಸುವುದಲ್ಲದೆ ಅವುಗಳ ಮೇಲೆ ನಿರಂತರ ಸಂಶೋಧನೆ ಮಾಡುತ್ತಿದ್ದರು' ಎಂದು ಅವರ ಕಾರ್ಯವನ್ನು ನೆನಪಿಸಿಕೊಳ್ಳುತ್ತಾರೆ ಬೀದರನ ಡಾ.ಗಂಗಾಂಬಿಕೆ ಅಕ್ಕನವರು. 'ಲಿಂಗಾಯತ ಧರ್ಮಮಾನ್ಯತೆ ಅವರ ಜೀವನದ ಮುಖ್ಯ ಗುರಿಯಾಗಿತ್ತು. ಅದನ್ನು ಸಾಕಾರಗೊಳಿಸಲು ಕರ್ನಾಟಕದಲ್ಲಿ ಚುನಾಯಿತರಾಗುತ್ತಿದ್ದ ಸರ್ಕಾರಗಳ ಎಲ್ಲಾ ಮುಖ್ಯಮಂತ್ರಿಗಳನ್ನು ಕಂಡು ಮನವಿ ಸಲ್ಲಿಸುತ್ತಿದ್ದರು ಎಂದು ಅವರ ಕಾರ್ಯವನ್ನು ನೆನಪಿಸಿಕೊಳ್ಳುತ್ತಾರೆ ಅವರ ಅನುಯಾಯಿ ಮತ್ತು ಬಸವಪೀಠದ ದೆಹಲಿ ಘಟಕದ ಚನ್ನಬಸವಾನಂದ ಸ್ವಾಮೀಜಿವರು. 'ಸಿದ್ದರಾಮಯ್ಯನವರು ಅಧಿಕಾರಕ್ಕೆ ಬರುತ್ತಿದ್ದಂತೆ ಅವರ ಸಮಾಜವಾದದ ಹಿನ್ನೆಲೆಯನ್ನು ಗಮನಿಸಿದ್ದ ಮಾತಾಜಿಯವರು, ಅವರು ಪ್ರಮಾಣವಚನ ಸ್ವೀಕರಿಸಿದ ಕೆಲ ದಿನಗಳಲ್ಲಿ ಲಿಂಗಾಯತ ಧರ್ಮಮಾನ್ಯತೆ ಬಗ್ಗೆ ಅವರೊಂದಿಗೆ ಚರ್ಚಿಸಿದ್ದಾಗಿ ತಿಳಿಸುತ್ತಾರೆ' ಬೀದರ್‌ನ ಮತ್ತೊಬ್ಬ ಲಿಂಗಾಯತ ಪ್ರಮುಖರಾದ ಶ್ರೀಕಾಂತ್ ಸ್ವಾಮಿ ಅವರು.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳಲ್ಲವೇ ಈ ಪ್ರಭುಗಳಿಂದಲೇ ರಾಜ್ಯ ಸರಕಾರಕ್ಕೆ ಒತ್ತಾಯ ತರಲು ಮುಂದಾಗುತ್ತಾರೆ ಮಾತೆ ಮಹಾದೇವಿಯವರು. ಆಗ ನಡೆದ ಘಟನೆಗಳನ್ನು ನೆನಪಿಸಿಕೊಂಡು ವಿವರ ನೀಡುತ್ತಾರೆ ಲಿಂಗಾಯತ ಸಮನ್ವಯ ಸಮಿತಿಯ ನಾಯಕರಾಗಿದ್ದ ಬೀದರ್‌ನ ಶ್ರೀಕಾಂತಸ್ವಾಮಿಯವರು. "ಬೀದರ್‌ನಲ್ಲಿ ಕೂಡಲೇ ಒಂದು ಬೃಹತ್ ಸಮಾವೇಶ ಮಾಡಿ, ಲಿಂಗಾಯತ ಧರ್ಮಕ್ಕೆ ಮಾನ್ಯತೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ಮುಖ್ಯಮಂತ್ರಿ ಸಿದ್ಧರಾಮಯ್ಯನವರನ್ನು ಒತ್ತಾಯಿಸಬೇಕೆಂದರು ಅಮ್ಮನವರು." ಆ ಆದೇಶ ಬಂದಿದ್ದು ಬಹುಶಃ ಜೂನ್ ೨೫–೨೬ರಂದು ಅವರ ಮಾತಿನ ಇಂಗಿತ ಎರಡು ವಾರಗಳಲ್ಲಿ ಸಭೆ ಮಾಡಬೇಕೆಂದ್ದಿತ್ತು. "ಕೇವಲ ಎರಡು ವಾರಗಳಲ್ಲಿ, ಅಷ್ಟೊಂದು ದೊಡ್ಡ ಮಟ್ಟದ ಸಭೆ ಆಗದು, ನಮಗೆ ಇನ್ನೊಂದು ವಾರ ಅವಕಾಶ ಕೊಡಿ ಎಂದು ಕೇಳಿಕೊಂಡೆ" "ಆಗಬಹುದು ಖಂಡಿತವಾಗಿಯೂ ಸಭೆಯು ೧೯ರ ನಂತರ ಆಗಕೂಡದು" ಎಂದರು ಮಾತಾಜಿ. "ಆಗಲಿ, ಸ್ನೇಹಿತರೊಂದಿಗೆ ಚರ್ಚಿಸಿ ಕರೆ, ಮಾಡುವೆ ಮಾತಾಜಿ" ಎಂದಿದ್ದರಂತೆ ಶ್ರೀಕಾಂತಸ್ವಾಮಿ. ಸ್ನೇಹಿತರಾದ ಬಸವರಾಜ ದನ್ನೂರ, ಬಾಬು ವಾಲಿ, ಆನಂದ ದೇವಪ್ಪ ಅವರಿಗೆ ಕರೆ ಮಾಡಿ ಸಭೆಯ ಬಗ್ಗೆ ಚರ್ಚಿಸಲು ಪೂರ್ವಭಾವಿ ಸಭೆಯನ್ನು ಜುಲೈ ೧೦ರಂದು ಕರೆಯಲು ನಿರ್ಧರಿಸಿದೆವು ಎನ್ನುತ್ತ ಅಂದಿನ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ.

In Public domain. Digitization Muthulakshmi Research Academy

"ಜುಲೈ ೧೦ರ ಪೂರ್ವಭಾವಿ ಸಭೆಗೆ ನಮ್ಮ ನಿರೀಕ್ಷೆಗಿಂತ ಹೆಚ್ಚಿಗೆ ಜನಸೇರಿದರು. ಅವರಲ್ಲಿ ಪ್ರಮುಖರಾದವರು ಶರಣ ಕುಶಾಲ ಪಾಟೀಲ, ಧನರಾಜ ಜೀರ್ಗೆ, ಕಲಬುರ್ಗಿಯ ಶೆಟಕಾರ, ಶ್ರೀಮತಿ ಗಾದಗಿ ಪಾಟೀಲ, ಶಿವರಾಜ ಪಾಟೀಲ ಅತಿವಾಳ, ಕಿರಣ ಖಂಡ್ರೆ ಭಾಗವಹಿಸಿದ್ದರು. ಅವರೊಂದಿಗೆ ನಮ್ಮ ಕಾರ್ಯಕಾರಿ ತಂಡವಾದ ಶರ್ವೂರ ಬಾಬುವಾಲಿ, ಬಸವರಾಜ ದನ್ನೂರ, ಆನಂದ ದೇವಪ್ಪ, ಗಾದಗಿ ಪಾಟೀಲರಾದಿಯಾಗಿ ಇದ್ದೆವು. ಜುಲೈ ೧೯ರಂದು ಬೃಹತ್ ಸಭೆ ನಡೆಸಲು ಸೇರಿದ ಜನ ಒಪ್ಪಿಗೆ ಇತ್ತರು. ಎಲ್ಲ ಖರ್ಚನ್ನು ನಾನೇ ವಹಿಸಿಕೊಳ್ಳುತ್ತೇನೆ ಎಂದರು ಗುರುನಾಥ ಕೋಳೂರ ಅವರು. ಅದರೆ ಸಭೆ ಅವರ ದಾಸೋಹ ಗುಣವನ್ನು ಕೊಂಡಾಡುತ್ತ ಸಾಮೂಹಿಕವಾಗಿ ಹಣ ಹೊಂದಿಸೋಣ ಎಂದಿತು. ಬಸವರಾಜ ದನ್ನೂರ ಅವರನ್ನು ಖಚಾಂಚಿಯಾಗಿ ನೇಮಿಸಲಾಯಿತು. ಅವರು ೧೧ ಸಾವಿರ ರೂಪಾಯಿಗಳ ತಮ್ಮ ದೇಣಿಗೆ ನೀಡಿದರು. ಅವರಂತೆ ಸ್ಥಿತಿವಂತರಾದವರು ೧೧ ಸಾವಿರ ನೀಡುವುದೆಂದು ತೀರ್ಮಾನಿಸಿದೆವು. ಅಂದೇ ಒಟ್ಟು ಸುಮಾರು ೫ ಲಕ್ಷದಷ್ಟು ದಾಸೋಹದ ಹಣದ ವಾಗ್ದಾನ ಬಂತು. ಬೃಹತ್ ಸಭೆಗೆ ಕೇವಲ ಒಂಬತ್ತು ದಿನ ಮಾತ್ರ ಬಾಕಿ ಇತ್ತು. ಅದರಲ್ಲಿ ಎಂಟು ದಿನಗಳ ಕಾಲ ಇಡೀ ಜಿಲ್ಲೆಯನ್ನು ಸುತ್ತಿ ಸಭೆಯ ಬಗ್ಗೆ ಪ್ರಚಾರ ಮಾಡಲು ನಿರ್ಧರಿಸಿದ್ದೆವು" ಎಂದು ಸಭೆಯ ಪೂರ್ವಭಾವಿ ತಯಾರಿಯ ಕಥೆಯನ್ನು ಬಿಚ್ಚಿಟ್ಟರು ಶ್ರೀಕಾಂತಸ್ವಾಮಿ.

ಬೀದರ್ ರ್‍ಯಾಲಿ

ಕರ್ನಾಟಕದ ಗಡಿನಾಡು ಬೀದರ್ ಪಟ್ಟಣ. ಕರ್ನಾಟಕದ ರಾಜಧಾನಿ ಬೆಂಗಳೂರಿನಿಂದ ಏಳು ನೂರು ಕಿ.ಮೀ. ಅಂತರದಲ್ಲಿದ್ದರೆ, ತೆಲಂಗಾಣದ ರಾಜಧಾನಿ ಹೈದರಾಬಾದ್‌ನಿಂದ ಕೇವಲ ೧೪೦ ಕಿ.ಮೀ. ಉತ್ತರಕ್ಕೆ ಮಹಾರಾಷ್ಟ್ರದ ಗಡಿ ಜಿಲ್ಲೆಗಳಾದ ನಾಂದೇಡ್, ಸೋಲಾಪುರ ಜಿಲ್ಲೆಗಳು. ಇತ್ತ ತೆಲಂಗಾಣ ರಾಜ್ಯದ ಕರೀಂನಗರ ಹೈದರಾಬಾದ್ ಜಿಲ್ಲೆಗಳು ಪೂರ್ವಕ್ಕೆ. ಕನ್ನಡ ಭಾಷೆಯನ್ನಾಡುವ ಕಲಬುರ್ಗಿ ನೂರಿಪ್ಪತ್ತು ಕಿ.ಮಿ ಅಂತರದಲ್ಲಿದೆ. ವಿಶಿಷ್ಟವಾದ ಭಾಷೆ ಮತ್ತು ಶರಣ ಗುಣ ಮೈಗೂಡಿಸಿಕೊಂಡ ಶರಣರ ನಾಡು ಬೀದರ್ ಜಿಲ್ಲೆ. ಬುಧವಾರ ಜುಲೈ ೧೯, ೨೦೧೭ ಲಿಂಗಾಯತ ಇತಿಹಾಸದ ಪುಟಗಳಲ್ಲಿ ಸೇರ್ಪಡೆಯಾಗುವ ಮತ್ತೊಂದು ಮಹತ್ವದ ದಿನ. ಕೆಂಪು ಮಣ್ಣಿನ ಬೀದರ ನಗರದ ನೆಹರು ಮೈದಾನದಲ್ಲಿ ಲಕ್ಷ ಲಕ್ಷ ಜನ. ಎಲ್ಲೆಲ್ಲಿಯೂ ಕೇಸರಿ ಧ್ವಜಗಳ ಹಾರಾಟ, 'ವಿಶ್ವಗುರು ಬಸವಣ್ಣನವರಿಗೆ ಜಯವಾಗಲಿ', 'ಶರಣ ಸಂತತಿ ಚಿರಾಯವಾಗಲಿ', 'ಲಿಂಗಾಯತ ಧರ್ಮಕ್ಕೆ ಮಾನ್ಯತೆ ಬೇಕೆಬೇಕು', ಎಂಬ ಕೂಗು ಬೀದರಿನ ಗಲ್ಲಿ ಗಲ್ಲಿಗಳಲ್ಲಿ ಕೇಳಲಾರಂಭಿಸಿತ್ತು.

In Public domain. Digitization Muthulakshmi Research Academy

"ಬೀದರ್ ನಗರದ ಮಧ್ಯಭಾಗದಲ್ಲಿರುವ ನೆಹರು ಮೈದಾನದಲ್ಲಿ ಸಭೆಯನ್ನು ಹಮ್ಮಿಕೊಂಡಿದ್ದೆವು. ಸಭೆಯ ನಂತರ ಲಕ್ಷಾಂತರ ಜನರೊಂದಿಗೆ ಕಾಲ್ನಡಿಗೆಯಲ್ಲಿ ಡಿ.ಸಿ. ಕಚೇರಿಗೆ ತೆರಳಿ ಮನವಿ ಸಲ್ಲಿಸುವ ಕಾರ್ಯಕ್ರಮ ನಮ್ಮದಾಗಿತ್ತು" ಎನ್ನುತ್ತಾರೆ ಬಿ.ಜೆ.ಪಿ. ಮುಖಂಡ ಬಾಬು ವಾಲಿಯವರು. ಮುಂದುವರಿದು "ಅಹಮದ್ ನಗರದ ಶತಾಯಷಿ ಶ್ರೀ ಶಿವಲಿಂಗ ಶಿವಾಚಾರ್ಯರ ಭಾಗವಹಿಸುವಿಕೆ ಸಭೆಗೆ ಬಂದವರಲ್ಲಿ ವಿದ್ಯುತ್ ಸಂಚಾರ ಮೂಡಿಸಿತ್ತು. ಕರ್ನಾಟಕ ಏಕೀಕರಣದ ಪೂರ್ವದಲ್ಲಿ ಮರಾಠಿ ಬಾಹುಳ್ಯದ ಗಡಿನಾಡು ಬೀದರ್ ನಗರದಲ್ಲಿ 'ಮರಾಠಿ ಶಾಲೆ' ಎಂಬ ಫಲಕ ಅಳವಡಿಸಿ ಒಳಗಡೆ ಕನ್ನಡ ಕಲಿಸಿದ ಖ್ಯಾತಿಯ ಭಾಲ್ಕಿ ಹಿರೇಮಠದ ಪಟ್ಟದ್ದೇವರಾದ ಶ್ರೀ ಬಸವಲಿಂಗ ಸ್ವಾಮೀಜಿಯವರು ಅಲ್ಲಿದ್ದರು. ಅವರೊಡನೆ ಮಹಿಳಾ ಜಗದ್ಗುರು ಮಾತೆ ಮಹಾದೇವಿಯವರು, ಪಂಚಮಸಾಲಿ ಸಮಾಜದ ಜಗದ್ಗುರು ಶ್ರೀ ಬಸವಮೃತ್ಯುಂಜಯ ಸ್ವಾಮೀಜಿಯವರು, ಹಲಸೂರಿನ ಶ್ರೀಗಳು, ಸ್ಥಳೀಯ 'ಲಿಂಗಾಯತಮಠ'ದ ಅಧ್ಯಕ್ಷೆ ಅಕ್ಕ ಅನ್ನಪೂರ್ಣ ಅವರ ಬದಿಯಲ್ಲಿ ಅಕ್ಕ ಗಂಗಾಂಬಿಕೆಯಲ್ಲದೆ ಬೆಲ್ದಾಳ ಶರಣರಿಂದ ವೇದಿಕೆ ಕಳೆಗಟ್ಟಿತ್ತು ಎಂದು ನೆನಪಿಸಿಕೊಳ್ಳುತ್ತಾರೆ ಕಿರಣ ಖಂಡ್ರೆ. ಇವರೊಂದಿಗೆ ಮಾತೆ ಮಹಾದೇವಿಯವರ ಸಹಚರರಾದ ಶ್ರೀ ಚನ್ನಬಸವಾನಂದ ಸ್ವಾಮೀಜಿ, ಬಸವಪ್ರಭು ಸ್ವಾಮೀಜಿ, ಪ್ರಭುಲಿಂಗ ಸ್ವಾಮೀಜಿ, ಶರಣೆ ಸತ್ಯಮಾತಾ ಇವರಲ್ಲದೆ ಅನೇಕ ಪೂಜ್ಯರು ವೇದಿಕೆಯಲ್ಲಿದ್ದರು ಎನ್ನುತ್ತಾರೆ ಸ್ಥಳೀಯ ಕಾರ್ಯಕರ್ತರು. ಸ್ಥಳೀಯ ಶಾಸಕರು, ಸಂಸದರು ಸಭೆಗೆ ಆಗಮಿಸಿದ್ದರು. ಆದರೆ ಅವರಿಗೆ ಜನರನ್ನು ಉದ್ದೇಶಿಸಿ ಮಾತನಾಡಲು ಅವಕಾಶ ನೀಡಿರಲಿಲ್ಲ ಎಂದು ಅವರ ಭಾಗವಹಿಸುವಿಕೆಯನ್ನು ನೆನೆಯುತ್ತಾರೆ ಸ್ಥಳೀಯ ಕಾರ್ಯಕರ್ತರು.

ಸಭೆಯ ವಿವರಗಳಿಗಾಗಿ ಜುಲೈ ೨೦, ೨೦೧೭ರ ಪತ್ರಿಕೆಗಳನ್ನೂ ದೃಶ್ಯ ಮಾಧ್ಯಮದ ವರದಿಗಳನ್ನೂ ಶೋಧಿಸಿದಾಗ ಸಿಕ್ಕ ಮಹತ್ವದ ವಿಷಯ ಇಲ್ಲಿದೆ. ಮನು ವಿ.ದೇವದೇವನ್ ಎಂಬ ಬಹುಭಾಷಾತಜ್ಞ ಹಾಗು ಇತಿಹಾಸಕಾರ 'ಬೀದರ್ ರ್‍ಯಾಲಿಯು ಒಂದು ಐತಿಹಾಸಿಕ ಘಟನೆ' ಎಂದೆನ್ನುತ್ತಾ ಹೀಗೆ ಹೇಳುತ್ತಾರೆ, "the demand was certainly not new; It has been made on various occasions since the early half of the 20th century, but this was the popular mobilisation of this scale"[೨] ಬೀದರ್ ರ್‍ಯಾಲಿಯಲ್ಲಿ ಭಾಗವಹಿಸಿದವರ ಲಿಂಗಾಯತರ ಬಗ್ಗೆ ಬರೆಯುತ್ತ ಸಭೆಗೆ ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ ಹಾಗೂ ಆಂಧ್ರಪ್ರದೇಶದಿಂದ ಬಂದಿದ್ದನ್ನು ಎಲ್ಲ ರಾಷ್ಟ್ರೀಯ ಪತ್ರಿಕೆಗಳು ವರದಿ ಮಾಡಿದ್ದರೆ, ಭಾಗವಹಿಸಿದವರ ಸಂಖ್ಯೆಯ ಕುರಿತು ಬೇರೆ ಬೇರೆ ಪತ್ರಿಕೆಗಳು ಬೇರೆ ಬೇರೆ ಸಂಖ್ಯೆಯನ್ನು

In Public domain. Digitization Muthulakshmi Research Academy

ಉಲ್ಲೇಖಿಸಿದ್ದಾರೆ. ದಿ ಹಿಂದೂ ವರದಿ ಹೀಗಿದೆ "around two lakh people arrived from different part of the state together at Nehru stadium and marched though the major streets of the city raising slogans demanding independent status for Lingayats." ಈ ಪತ್ರಿಕೆ ಎರಡು ಲಕ್ಷ ಲಿಂಗಾಯತರು ಭಾಗವಹಿಸಿದ್ದರೆಂದು ಬರೆದರೆ, ಇಂಡಿಯನ್ ಎಕ್ಸ್‌ಪ್ರೆಸ್ ಭಾಗವಹಿಸಿದವರ ಸಂಖ್ಯೆಯ ಬಗ್ಗೆ ಈ ರೀತಿ ವರದಿ ನೀಡಿದೆ. "More than 50,000 people from the Lingayat community, a dominant caste in northern Karnataka, gathered in Bidar on Wednesday to demand that Lingayatism be classified as a separate religion rather than a caste in Hinduism."[೩]

ಅದರೆ ಎಲ್ಲ ರಾಷ್ಟ್ರೀಯ ಮಾಧ್ಯಮಗಳು ಇದೊಂದು "apolitical" ಆಥವಾ "ರಾಜಕೀಯೇತರ" ಸಭೆಯಾಗಿತ್ತು ಎಂದು ಸ್ಪಷ್ಟವಾದ ವರದಿ ಬರೆದಿದ್ದವು. ಮುಂದುವರಿದು ೨೧ ಜುಲೈ ೨೦೧೭ರ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ವರದಿ ಹತ್ಯೆಯಾದ ಡಾ. ಕಲಬುರ್ಗಿಯವರನ್ನು ನೆನೆಯುತ್ತದೆ. "The aploitical" rally attended by lingayat from Karnataka Maharastra, Telngana, Andhra Pradesh and other states, was organised as part of efforts to take forward a philosophy proposed by lingayat intellectual like writer and researcher M.M. Kalburgi".[೪] ಆದರೆ ದಿ ಹಿಂದೂ ಪತ್ರಿಕೆಯು ಡಾ. ಕಲಬುರ್ಗಿಯವರ ಬಗ್ಗೆ ಒಂದು ಶಬ್ದವನ್ನು ಬರೆಯದೆ ಅಪಾರವಾಗಿ ಜನ ಸೇರಿದ್ದರು ಎಂದು ಬರೆಯುತ್ತ ಸಭೆಯಲ್ಲಿ ಭಾಗವಹಿಸಿದ ಹೇಳಿಕೆಗಳನ್ನು ವರದಿ ಮಾಡುತ್ತ. ಶತಾಯುಷಿ ದಿ. ಶ್ರೀ ಶಿವಲಿಂಗ ಶಿವಾಚಾರ್ಯರ ಹೇಳಿಕೆಯನ್ನು ಸಂಪೂರ್ಣ ವರದಿ ಮಾಡುತ್ತ ಹೀಗೆಂದಿದೆ "ಹಿಂದೂ ಧರ್ಮದಲ್ಲಿ ಶೈವರು ವೈಷ್ಣವರೆಂಬ ಎರಡು ಪಂಥಗಳಿವೆ. ಈ ಎರಡು ಪಂಥಗಳು ವೇದ ಆಗಮ ಪುರಾಣಗಳನ್ನು ಒಪ್ಪುತ್ತವೆ. ಆದರೆ ಬಸವಸ್ಥಾಪಿತ ಲಿಂಗಾಯತ ಧರ್ಮವು ಇವುಗಳನ್ನು ತಿರಸ್ಕರಿಸುತ್ತದೆ" ಎಂದು ವರದಿ ಮಾಡಿದೆ. ಮುಂದುವರಿಯುತ್ತ "ಲಿಂಗಾಯತ ಧರ್ಮ ಹಿಂದೂಧರ್ಮದ ಭಾಗವಲ್ಲ, ಇದೊಂದು ಸ್ವತಂತ್ರ ಧರ್ಮ" ಎನ್ನುತ್ತ ಸರಕಾರಗಳು ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ನೀಡಬೇಕೆಂದು ಘರ್ಜಿಸಿದರು ಎಂದು ವರದಿ ಮಾಡಿದೆ. ಲಿಂಗಾಯತರು ತಮ್ಮನ್ನು ತಾವು ವೀರಶೈವರೆಂದು ಕರೆದುಕೊಳ್ಳಬಾರದೆಂದು ಲಿಂಗಾಯತರಿಗೆ ಸಭೆಯಲ್ಲಿದ್ದ ಮತ್ತೊಬ್ಬ ಪೂಜ್ಯರಾದ ಭಾಲ್ಕಿ ಹೀರೆಮಠದ ಬಸವಲಿಂಗ ಪಟ್ಟದದೇವರು ಹೇಳಿದರೆಂದು ವರದಿ ಮಾಡಿದೆ.

In Public domain. Digitization Muthulakshmi Research Academy

ಕೂಡಲಸಂಗಮ ಪಂಚಮಸಾಲಿ ಪೀಠಾಧಿಪತಿಯಾದ ಜಯಮೃತ್ಯುಂಜಯ ಸ್ವಾಮೀಜಿಯವರು "ಲಿಂಗಾಯತದ ಹೊಸ ಅಲೆ ಸೃಷ್ಟಿಯಾಗಿದೆ ಅದು ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮ ಘೋಷಣೆ ಆಗುವವರೆಗೂ ತಣ್ಣಗಾಗದು. ಆದರೆ ಮನುವಾದಿಗಳು ಲಿಂಗಾಯತರು ಸ್ವತಂತ್ರವಾಗುವುದನ್ನು ತಡೆಯುತ್ತಿದ್ದಾರೆ ಆದರೆ ಲಿಂಗಾಯತರ ಅಲೆಯನ್ನು ಅವರಿಂದ ತಡೆಯಲು ಸಾಧ್ಯವಿಲ್ಲ" ಎಂದು ಹೇಳಿದರೆಂದು ವರದಿ ಮಾಡಿದೆ. ಈ ಸಭೆಯಲ್ಲಿ ಮಾತನಾಡಿದ ಲಿಂಗಾಯತ ನಾಯಕರೆಲ್ಲ ವೀರಶೈವ ಮಹಾಸಭೆಯ ನಡೆಯನ್ನು ಖಂಡಿಸಿದರು ಎಂದು ಹಿಂದೂ ಪತ್ರಿಕೆ ವಿಸ್ತಾರವಾಗಿ ಬಣ್ಣದ ಚಿತ್ರದೊಂದಿಗೆ ವರದಿ ಮಾಡಿದೆ. ರ್‍ಯಾಲಿಯಲ್ಲಿ ಉಸ್ತುರಮಠದ ಕೋರ್ಣೇಶ್ವರ ಶ್ರೀಗಳು, ಬೀದರ್ ಜಿಲ್ಲೆಯ ಬೆಲ್ದಾಳ ಶರಣರು, ಅಕ್ಕ ಅನ್ನಪೂರ್ಣ, ಅಕ್ಕ ಗಂಗಾಂಬಿಕೆ ಹಾಗು ಚನ್ನಬಸವ ಶ್ರೀಗಳು ಮಾತನಾಡಿದರು ಎಂದು ಕನ್ನಡ ಇಂಗ್ಲಿಷ್ ಹಿಂದಿ ಮರಾಠಿ ಪತ್ರಿಕೆಗಳು ವರದಿ ಮಾಡಿದ್ದವು.

ಲಿಂಗಾಯತ ಧರ್ಮ ಸಮನ್ವಯ ಸಮಿತಿ ಬೀದರ್ ಜಿಲ್ಲೆಯವರು ಜುಲೈ ೧೯, ೨೦೧೭ರಂದು ಮುಖ್ಯಮಂತ್ರಿಯವರಿಗೆ ಮನವಿ ಮಾಡಿಕೊಂಡಿದ್ದು, ಅದನ್ನು ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಿದ್ದಾರೆ. ಮನವಿಪತ್ರದ ಪೂರ್ಣ ವಿವರ.

ವಿಷಯ: ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಕರ್ನಾಟಕದಲ್ಲಿ ಇರುವವರೆಲ್ಲರೂ ಲಿಂಗಾಯತರೆ. ಕರ್ನಾಟಕ ತಮಿಳುನಾಡು, ಕೇರಳ ಮತ್ತು ಪಾಂಡಿಚೇರಿ ಗಡಿಭಾಗದಲ್ಲಿ ಮಾತ್ರ ವೀರಶೈವರಿದ್ದಾರೆ. ವಾಸ್ತವವಾಗಿ ನೋಡಿದರೆ ಕರ್ನಾಟಕದಲ್ಲಿ ಇರುವವರಾರೂ ವೀರಶೈವರಲ್ಲ. ೧೨ನೆಯ ಶತಮಾನದಲ್ಲಿ ಮಹಾಮಾನವತಾವಾದಿ ವಿಶ್ವಗುರು ಬಸವಣ್ಣನವರ ನೇತೃತ್ವದಲ್ಲಿ ವಿವಿಧ ಜಾತಿ, ಪಂಥ, ಪಂಗಡಗಳ ೭೭೦ ಜನ ಶರಣರು ಅನುಭವ ಮಂಟಪದ ಮೂಲಕ ನೀಡಿರುವ ಕನ್ನಡಿಗರೇ ಸ್ಥಾಪಿಸಿದ ಏಕೈಕ ಧರ್ಮ ಲಿಂಗಾಯತ. ವಿಶ್ವಗುರು ಬಸವಣ್ಣನವರು ಸಂಶೋಧಿಸಿ ಕೊಟ್ಟ ಇಷ್ಟಲಿಂಗವು ಸಮಾನತೆಯ ಕುರುಹಾಗಿ ಎಲ್ಲ ಜಾತಿ, ಮತ, ಪಂಥದವರನ್ನು ಬೆಸೆಯಿತು. ಹೀಗಾಗಿ ಇವತ್ತಿಗೂ ಸಹ ಲಿಂಗಾಯತದಲ್ಲಿ ಎಪ್ಪತ್ತೊಂದು ಒಳ ಪಂಗಡಗಳಿವೆ. ಅದರಲ್ಲಿ ವೀರಶೈವವು ಒಂದು. ಗುರುವಿನಿಂದ ದೀಕ್ಷೆ ಪಡೆದು ಇಷ್ಟಲಿಂಗ ಧರಿಸಿದರೆ ಯಾವುದೇ ಜಾತಿಯವರಾಗಲಿ ಲಿಂಗಾಯತರಾಗುತ್ತಾರೆ. ಅಂತೆಯೇ ನಟವರ ಜಾತಿಯ ಅಲ್ಲಮಪ್ರಭು ದೇವರನ್ನು ಶೂನ್ಯಪೀಠದ ಜಗದ್ಗುರುಗಳನ್ನಾಗಿ ಗುರುಬಸವಣ್ಣನವರು ನೇಮಕ ಮಾಡಿದ್ದರು.

ಸಮಗಾರ ಹರಳಯ್ಯ, ಕುರುಬ ಗೊಲ್ಲಾಳೇಶ್ವರ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಮಾದಾರ ಚೆನ್ನಯ್ಯ, ಹೊಲೆಯ ನಾಗಿದೇವ,

In Public domain. Digitization Muthulakshmi Research Academy

ಮೋಳಿಗೆಯ ಮಾರಯ್ಯ-ಮಹಾದೇವಮ್ಮ, ಮರುಳು ಶಂಕರದೇವ, ತುರಿಗಾಹಿ ರಾಮಣ್ಣ ಮುಂತಾದ ಅಮರಗಣಂಗಳನ್ನು ಬಸವಣ್ಣನವರು ರೂಪಿಸಿದರು. ಪುರೋಹಿತಶಾಹಿ ಹಾಗೂ ವರ್ಣಾಶ್ರಮದ ವೈದಿಕ ವ್ಯವಸ್ಥೆ, ಜಾತೀಯತೆ ಮತ್ತು ಅಸ್ಪೃಶ್ಯತೆಯ ವಿರುದ್ಧ ಸಿಡಿದೆದ್ದ ಶ್ರೀ ಗುರು ಬಸವಣ್ಣನವರು ಶೋಷಣೆಗೆ ಒಳಗಾದ ಜನಾಂಗಗಳಿಗೆ ಪ್ರೋತ್ಸಾಹ ನೀಡಿದ್ದರು. ದಲಿತರು ಮತ್ತು ಅಸ್ಪೃಶ್ಯರೆಲ್ಲರೂ ತಂಡೋಪತಂಡವಾಗಿ ಬಂದು ಸಂತೋಷದಿಂದ ಗುರು ಬಸವಣ್ಣನವರ ಧರ್ಮ ಸ್ವೀಕರಿಸಿದರು. ಲಿಂಗಾಯತ ಧರ್ಮವು ದೀನ-ದಲಿತರ ಮತ್ತು ಅಸ್ಪೃಶ್ಯರಿಗಾಗಿ ಕೊಡಲ್ಪಟ್ಟ ಧರ್ಮ ಎಂಬುದನ್ನು ತಾವು ಅರಿತವರಾಗಿದ್ದೀರೆಂದು ನಾವು ಭಾವಿಸಿದ್ದೇವೆ. ಆದ್ದರಿಂದ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ನೀಡುವುದೆಂದರೆ ಮಾನವಕುಲಕ್ಕೆ ಸಮಾನತೆ ಸ್ವಾತಂತ್ರ್ಯವನ್ನು ಮನ್ನಿಸಿದಂತೆ.

"ವೀರಶೈವ ಮಹಾಸಭಾ ಲಿಂಗಾಯತರ ಪ್ರಾತಿನಿಧಿಕ ಸಂಸ್ಥೆಯಲ್ಲ". ವೀರಶೈವ ಮಹಾಸಭಾ ಎಂಬ ಸಂಸ್ಥೆಯು ಲಿಂಗಾಯತ ಅಥವಾ ಅಖಂಡ ಲಿಂಗಾಯತ ಸಮಾಜದ ಪ್ರಾತಿನಿಧಿಕ ಸಂಸ್ಥೆಯಲ್ಲ. ಅದು ಕೇವಲ ವೀರಶೈವ ಪಂಗಡದ ಸಂಸ್ಥೆಯಾಗಿದ್ದು ಎಲ್ಲಾ ಬಸವಾನುಯಾಯಿಗಳಿಗೆ ಅದು ಸಂಬಂಧಪಟ್ಟಿದ್ದಲ್ಲ. ಲಿಂಗಾಯತ ಸಮುದಾಯದಲ್ಲಿ ಎಪ್ಪತ್ತೊಂದು ಒಳಪಂಗಡಗಳಿವೆ. ಆದ್ದರಿಂದ ಲಿಂಗಾಯತ ಬಳಸುವುದು ಸೂಕ್ತ. ಒಂದು ವೇಳೆ ವೀರಶೈವ ಮಹಾಸಭೆಯವರು ಕೇಳುವುದಾದರೆ ವೀರಶೈವಕ್ಕೆ ಪ್ರತ್ಯೇಕ ಮಾನ್ಯತೆ ಕೇಳಲಿ. ಲಿಂಗಾಯತರೊಂದಿಗೆ ವೀರಶೈವ ಪದವನ್ನು ಕೂಡಿಸಿ ಹೇಳಬಾರದೆಂದು ನಾವು ಆಗ್ರಹಿಸುತ್ತೇವೆ. "ಲಿಂಗಾಯತ ಮತ್ತು ವೀರಶೈವ ಬೇರೆ ಬೇರೆ". ವಿಶ್ವಗುರು ಬಸವಣ್ಣನವರಿಂದ ಸ್ಥಾಪಿತವಾದ ಅನುಭವ ಮಂಟಪದ ಮೂಲಕ ಹುಟ್ಟಿದ ಧರ್ಮ ಲಿಂಗಾಯತ ಧರ್ಮ. ವೀರಶೈವ ಎಂಬುದು ಶೈವದ ಒಂದು ಪಂಥ. ಭಾರತದಲ್ಲಿ ಶೈವ ಮತ್ತು ವೈಷ್ಣವ ಎಂಬ ಎರಡು ಪ್ರಮುಖ ವಾಹಿನಿಗಳಿವೆ. ಶಿವನ ಆರಾಧಕರು ಶೈವರು. ವಿಷ್ಣುವಿನ ಆರಾಧಕರು ವೈಷ್ಣವರು. ಇವರೆಡೂ ಸೇರಿ ಇಂದು ಹಿಂದೂ ಆಗಿದೆ. ಶೈವರಲ್ಲಿ ಏಳು ಪ್ರಭೇದಗಳಿವೆ. ಆ ಸಪ್ತಶೈವಗಳಲ್ಲಿ ವೀರಶೈವ ಒಂದು ಪಂಥ. ಶೈವರು ಮತ್ತು ವೈಷ್ಣವರು ವೇದ ಆಗಮ ಪುರಾಣ ಮತ್ತು ಶಾಸ್ತ್ರಗಳನ್ನು ಒಪ್ಪುತ್ತಾರೆ. ಆದರೆ ಬಸವಪ್ರಣೀತ ಲಿಂಗಾಯತ ಧರ್ಮವು ವೇದಗಳನ್ನು ಖಂಡಿಸಿದೆ. ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳನಿಕ್ಕುವೆ, ಆಗಮದ ಮೂಗು ಕೊಯ್ಯುವೆ ತರ್ಕದ ಬೆನ್ನ ಬಾರನೆತ್ತುವೆ ಎಂದು ಸಾರಿ ವಿಶ್ವಗುರು ಬಸವಣ್ಣನವರು ಸಮಾನತೆ ಸಾರುವ ವಚನ ಸಾಹಿತ್ಯದ ತಳಹದಿಯ ಮೇಲೆ ಅವೈದಿಕವಾದ ಹೊಸ ಧರ್ಮವನ್ನು ಕೊಟ್ಟರು. ಅದುವೇ ಪ್ರಗತಿಪರ ಲಿಂಗಾಯತ ಧರ್ಮ.

In Public domain. Digitization Muthulakshmi Research Academy

ಕರ್ನಾಟಕದಲ್ಲಿ ಇರುವವರೆಲ್ಲ ಲಿಂಗಾಯತರೆ ಇದ್ದು ಆ ಲಿಂಗಾಯತರೇ ವೀರಶೈವ ಮಹಾಸಭೆಯ ಅಜ್ಞಾನಯುಕ್ತ ಗೊಂದಲದಲ್ಲಿ ತಮ್ಮನ್ನು ತಾವು ವೀರಶೈವರೆಂದು ಹೇಳಿಕೊಳ್ಳುತ್ತಿರುವುದು ವಿಷಾದದ ಸಂಗತಿಯಾಗಿದೆ. ಮಹಾರಾಷ್ಟ್ರದಲ್ಲಿ ಈಗಾಗಲೇ ವೀರಶೈವ ಮಹಾಸಭೆಯವರು ತಾವು ವೀರಶೈವರಲ್ಲ ಅಖಂಡ ಲಿಂಗಾಯತರೆಂದು ಮಹಾರಾಷ್ಟ್ರದ ಲಿಂಗಾಯತರು ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆಗಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಹೀಗೆ ಕರ್ನಾಟಕದಲ್ಲಿ ನಾವು ೧೯೯೭, ೨೦೦೫ ಮತ್ತು ೨೦೧೫ರಲ್ಲಿ ಕೇಂದ್ರ ಸರಕಾರಕ್ಕೆ ಮನವಿ ಕೊಟ್ಟಿದ್ದೇವೆ. ಮೂರು ಭಾರಿ ಬೃಹತ್ ಆಂದೋಲನ ಮಾಡಿದ್ದೇವೆ. ಒಂದು ಧರ್ಮವು ಯಾವ ರಾಜ್ಯದಲ್ಲಿ ಸ್ಥಾಪನೆಯಾಗಿದೆಯೋ ಮತ್ತು ಎಲ್ಲಿ ಹೆಚ್ಚು ಅನುಯಾಯಿಗಳನ್ನು ಹೊಂದಿರುವುದೋ ಆ ರಾಜ್ಯ ಸರ್ಕಾರದಿಂದ ಶಿಫಾರಸ್ಸು ಅಗತ್ಯವಾಗಿರುತ್ತದೆ. ಸಮಾಜವಾದಿಗಳೂ ಸಮತಾ ತತ್ವದಲ್ಲಿ ವಿಶ್ವಾಸ ಉಳ್ಳವರೂ ವೈಚಾರಿಕ ಹಿನ್ನೆಲೆಯಲ್ಲಿ ಬೆಳೆದುಬಂದ ದಿಟ್ಟತನವುಳ್ಳವರು ಆದ ತಮ್ಮಿಂದ ಮಾತ್ರ ಲಿಂಗಾಯತಕ್ಕೆ ಮಾತ್ರ ಸಾಂವಿಧಾನಿಕ ಮಾನ್ಯತೆ ನೀಡುವ ಐತಿಹಾಸಿಕ ನ್ಯಾಯ ದೊರೆಯುವುದು ಸಾಧ್ಯ ಎಂಬುದು ಕರ್ನಾಟಕ ಲಿಂಗಾಯತರ ಭರವಸೆಯಾಗಿದೆ. ತಾವು ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡುವ ಮೂಲಕ ಕೋಟ್ಯಂತರ ಲಿಂಗಾಯತರ ಭಾವನೆಗೆ ಸ್ಪಂದಿಸಬೇಕೆಂದು ಈ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ.

ವೀರಶೈವರ ಅರ್ಜಿ ಕೇಂದ್ರ ಸರ್ಕಾರದಿಂದ ತಿರಸ್ಕಾರಗೊಂಡಿದೆ. ಅಖಿಲ ಭಾರತ ವೀರಶೈವ ಮಹಾಸಭಾದವರು ಭಾರತ ಸರ್ಕಾರಕ್ಕೆ ಈಗಾಗಲೇ ಮನವಿ ಸಲ್ಲಿಸಿ ವೀರಶೈವ ಲಿಂಗಾಯತ ಧರ್ಮಕ್ಕೆ ಮಾನ್ಯತೆ ನೀಡಬೇಕೆಂದು ಕೋರಿದ್ದರು. ಆದರೆ ಅವರ ಅರ್ಜಿಯು ತಿರಸ್ಕಾರಗೊಂಡಿದೆ. ತಮಿಳುನಾಡು ಉಚ್ಚ ನ್ಯಾಯಾಲಯವು ಈ ಕುರಿತು ತೀರ್ಪು ನೀಡಿದೆ. ವೀರಶೈವ ಪದವನ್ನು ಲಿಂಗಾಯತಕ್ಕೆ ಸಮಾನವಾಗಿ ಬಳಸುವವುದರಿಂದ ಮಾನ್ಯತೆ ಸಿಗಲು ಸಾಧ್ಯವಿಲ್ಲ. ಏಕೆಂದರೆ ವೀರಶೈವವು ವೈದಿಕ ಆಚರಣೆಯ ಒಂದು ಪಂಥ.

ಆದರೆ ಲಿಂಗಾಯತವು ಒಂದು ಸ್ವತಂತ್ರ ಪರಿಪೂರ್ಣ ಧರ್ಮ. ತಾವು ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡುವಾಗ ಕೇವಲ ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ ನೀಡುವಂತೆ ಆಗ್ರಹಿಸಬೇಕೆಂದು ಕೋರುತ್ತೇವೆ. ಜೈನ, ಬೌದ್ಧ, ಸಿಖ್, ಇಸ್ಲಾಂ, ಮತ್ತು ಕ್ರೈಸ್ತ ಧರ್ಮಗಳಂತೆ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಸಿಗಲೇಬೇಕು. ಯಾವ ಕಾರಣಕ್ಕಾಗಿ ಜೈನ, ಬೌದ್ಧ, ಸಿಖ್ ಧರ್ಮಗಳಿಗೆ ಮಾನ್ಯತೆ ಕೊಡಲಾಗಿದೆಯೋ ಆ ಎಲ್ಲಾ ಲಕ್ಷಣಗಳು ಲಿಂಗಾಯತ ಧರ್ಮಕ್ಕಿವೆ. ಈ ಮನವಿಗೆ ಡಾ.ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ

In Public domain. Digitization Muthulakshmi Research Academy

ಅಹ್ಮದಪುರ, ಜಗದ್ಗುರು ಮಾತೆ ಮಹಾದೇವಿ, ಶ್ರೀ ಬಸವಲಿಂಗ ಪಟ್ಟದದೇವರು, ಶ್ರೀ ಬಸವಾನಂದ ಸ್ವಾಮಿಜಿ ನವದೆಹಲಿ, ಶ್ರೀ ಶಿವಾನಂದ ಸ್ವಾಮಿಗಳು ಹಲಸೂರು, ಬೆಲ್ದಾಳ ಶರಣರು, ಅಕ್ಕ ಅನ್ನಪೂರ್ಣ, ಅಕ್ಕ ಗಂಗಾಂಬಿಕೆಯವರು, ಶ್ರೀ ಬಸವಪ್ರಭು ಸ್ವಾಮೀಜಿ, ಶ್ರೀ ಕೋರಣೇಶ್ವರ ಸ್ವಾಮೀಜಿ, ಶಾಸಕರಾದ ರಾಜಶೇಖರ ಪಾಟೀಲ ಹುಮನಾಬಾದ, ಮಲ್ಲಿಕಾರ್ಜುನ ಖೂಬಾ, ಅಶೋಕ ಖೇಣಿ, ಪ್ರಭು ಚವ್ಹಾಣ ಅಲ್ಲದೆ ಮಾಜಿ ಶಾಸಕರು ರಾಜಕೀಯ ನಾಯಕರು, ಸಾಮಾಜಿಕ ಹೋರಾಟಗಾರರು ಆದಿಯಾಗಿ ೫೦ ಜನರು ಸಹಿ ಮಾಡಿದ್ದರು.[೨]

ರ್‍ಯಾಲಿಯ ಪರಿಣಾಮ

'apolitical' ಅಂದರೆ 'ಪಕ್ಷಾತೀತ'ವಾದ ಬೃಹತ್ ಸಭೆಯಾಗಿತ್ತು ಎಂದು ಪ್ರಾದೇಶಿಕ ಹಾಗೂ ರಾಷ್ಟ್ರೀಯ ಮಾಧ್ಯಮಗಳು ಹೇಳಿದವು. ಅದು ನಿಜವೂ ಆಗಿತ್ತು. "ಸರ್ವ ಪಕ್ಷಗಳ ನಾಯಕರು ಈ ಸಭೆಯಲ್ಲಿ ಭಾಗವಹಿಸಿದರೂ ರಾಜಕೀಯ ನಾಯಕರಿಗೆ ವೇದಿಕೆಗೆ ಕರೆಯಲಿಲ್ಲ ಹಾಗೂ ಅವರಿಗೆ ಜನರನ್ನು ಉದ್ದೇಶಿಸಿ ಮಾತಾಡುವ ಅವಕಾಶ ನೀಡಲಿಲ್ಲ" ಎನ್ನುತ್ತಾರೆ ಸಂಘಟಕ ಬಾಬು ವಾಲಿ. ರಾಜಕೀಯೇತರ ವ್ಯಕ್ತಿಗಳಿಂದ ಈ ಸಭೆ ಆಯೋಜನೆಗೊಂಡಿದ್ದರೂ ರಾಜಕೀಯದ ವಾಸನೆಯಿದೆ ಎಂದು ಕೆಲ ಪತ್ರಿಕೆಗಳು ವರದಿ ಮಾಡಿದ್ದವು (ಡೆಕ್ಕನ್ ಹೆರಾಲ್ಡ್ ವರದಿ), ವಾಸ್ತವವಾಗಿ ಇದರ ಲಾಭ ಪಡೆಯಲು ಆಡಳಿತ ಪಕ್ಷವಾದ ಕಾಂಗ್ರೆಸ್ ತುದಿಗಾಲ ಮೇಲೆ ನಿಂತಿತ್ತು. ಅದು ನಿಜವೆಂದು ಮುಂದಿನ ದಿನಗಳಲ್ಲಿ ನಮಗೂ ಅರಿವಾಯಿತು.

ಲಿಂಗಾಯತರು ಕರ್ನಾಟಕದಲ್ಲಿ ಬಹು ಪ್ರಭಾವಿ ಜನಾಂಗ. ೧೨ನೆಯ ಶತಮಾನದಿಂದಲೇ ಜಾಗೃತಗೊಂಡ ಸಮಾಜವಾಗಿರುವುದರಿಂದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಮುಂಚೂಣಿಯಲ್ಲಿರುವ ಸಮಾಜ. ವಿಜಯನಗರ, ಕೆಳದಿ, ಸೋಂದೆ, ಕಿತ್ತೂರ, ಬೆಳವಡಿ ಅರಸರಲ್ಲದೆ ಉತ್ತರ ಕರ್ನಾಟಕದ ಅನೇಕ ದೇಸಗತಿ ಮನೆತನಗಳಾದ ಹಂದಿಗನೂರು, ಚಚಡಿ, ವಂಟಮೂರಿ, ತಲ್ಲೂರ, ಆಲಮೇಲ, ಇಂತಹ ಜಮೀನುದಾರ ದೇಸಾಯಿಯವರು ಲಿಂಗಾಯತರಾಗಿದ್ದರು. ಕಾರಣ ಈ ಸಮಾಜ ಪ್ರಬಲ ಸಮಾಜ. ರಾಜಕೀಯವಾಗಿ ಸ್ವಾತಂತ್ರದ ನಂತರವೂ ಈ ಸಮಾಜದ ಹತ್ತು ಜನ ಮುಖ್ಯಮಂತ್ರಿಗಳಾಗಿ ಬಹುವರ್ಷಗಳ ಕಾಲ ಆಳ್ವಿಕೆ ಮಾಡಿದ್ದಾರೆ. ಲಿಂಗಾಯತರು ಒಂದು ಕಡೆ ಸೇರಿ ಸಭೆ ಮಾಡಿದ್ದು ರಾಜಕೀಯ ಲಾಭಕ್ಕಾಗಿ ಎಂದು ತಿಳಿಯುವುದು ಸ್ವಾಭಾವಿಕ. ಅದರಂತೆ ಸಾಮಾನ್ಯವಾಗಿ ಇಂತಹ ಸಭೆಗಳಿಂದ ರಾಜಕೀಯ ಲಾಭ ನಿರೀಕ್ಷಿಸುವುದು ಸಾಮಾನ್ಯ. ಜನಸಂಖ್ಯಾ ದೃಷ್ಟಿಯಿಂದ ಲಿಂಗಾಯತರದು ದೊಡ್ಡ ಸಮಾಜ. ಆದರೆ ಸಮಾಜದ ಸಂಖ್ಯಾಬಲ ನಿಖರವಾಗಿ ತಿಳಿಯಲು

In Public domain. Digitization Muthulakshmi Research Academy

ಸಾಧ್ಯವಾಗಿಲ್ಲ. ಕಾರಣ ೧೯೪೧ರಿಂದ ಭಾರತದಲ್ಲಿ ಜಾತಿ ಆಧಾರಿತ ಅಥವಾ ಧರ್ಮ ಆಧಾರಿತ ಜನಗಣತಿ ಆಗಿಲ್ಲ. ಕಾರಣ ಭಾರತ ಜಾತ್ಯತೀತ ರಾಷ್ಟ್ರ. ಬ್ರಿಟಿಷರ ಕಾಲದ ಅಂಕಿಸಂಖ್ಯೆಗಳ ಆಧಾರದಲ್ಲಿ ಲಿಂಗಾಯತರ ಜನಸಂಖ್ಯೆ ಕರ್ನಾಟಕದ ಒಟ್ಟು ಜನಸಂಖ್ಯೆಯ ಶೇ. ೧೭ರಷ್ಟು ಎಂದು ಬಲವಾಗಿ ನಂಬಲಾಗಿದೆ. ಇದರಲ್ಲಿ ಅತಿ ಹಿಂದುಳಿದ (ST) ಅಥವಾ ಹಿಂದುಳಿದ ವೃತ್ತಿನಿರತ (SC) ಸಮಾಜಗಳು ಸೇರಿಲ್ಲ. ಕರ್ನಾಟಕದಲ್ಲಿ ಒಕ್ಕಲಿಗರು, ಬಾಗಶಃ ಕುರುಬರು, ಬ್ರಾಹ್ಮಣರು ಹಾಗೂ ಗಡಿಯಾಚಿನ ಧರ್ಮಗಳ ಅನುಯಾಯಿಗಳನ್ನು ಹೊರತುಪಡಿಸಿದರೆ ಕರ್ನಾಟಕ ಲಿಂಗಾಯಿತರ ಜನಸಂಖ್ಯೆಯ ಇಡೀ ಜನಸಂಖ್ಯೆಯ ಶೇ ೭೦-೭೫ರಷ್ಟು ಭಾಗವಾಗುವುದು. ಅಂದರೆ ಕರ್ನಾಟಕದಲ್ಲಿ ಲಿಂಗಾಯತ ಧರ್ಮ ಬಹುಸಂಖ್ಯಾತ ಧರ್ಮ ಆದರೆ ಭಾರತದ ಒಕ್ಕೂಟದ ವ್ಯವಸ್ಥೆಯಲ್ಲಿ ಅಲ್ಪಸಂಖ್ಯಾತ ಧರ್ಮ. ಇರಲಿ, ಇದು ನಮ್ಮ ಚರ್ಚೆಯ ವಿಷಯವಲ್ಲ.

ಬೀದರ್ ರ್‍ಯಾಲಿಯ ಲಾಭ ಪಡೆಯಲು ಆಡಳಿತ ಪಕ್ಷವಾಗಿದ್ದ ಕಾಂಗ್ರೆಸ್ ಹವಣಿಸುತಿತ್ತು. ಅಲ್ಲದೆ ಅದನ್ನು ಪಡೆಯಲು ಆ ಪಕ್ಷದ ಸಿದ್ಧಾಂತಗಳು ಲಿಂಗಾಯತ ಧರ್ಮ ಸಿದ್ಧಾಂತಗಳಿಗೆ ಹತ್ತಿರವಾಗಿವೆ. ಲಿಂಗಾಯತ ಜ್ಯಾತ್ಯತೀತ ಧರ್ಮ. ಸಮ ಸಮಾಜವಾದವನ್ನು ಪ್ರತಿಪಾದಿಸುವ ಧರ್ಮ. ಭಾರತದಲ್ಲಿರುವ ಎಲ್ಲ ಧರ್ಮಗಳನ್ನು ಪ್ರೀತಿಸಿ ಇವನಾರವ ಇವನಾರವ ಎನ್ನದಿರುವ ಧರ್ಮ, ಹೀಗಾಗಿ ಈ ಧರ್ಮದ ಸಿದ್ಧಾಂತಗಳು ಕಾಂಗ್ರೆಸ್ ಪಕ್ಷದ ಸಿದ್ಧಾಂತಕ್ಕೆ ಹತ್ತಿರವಾಗಿವೆ. ಇನ್ನೊಂದು ಪಕ್ಷವಾದ ಬಿ.ಜೆ.ಪಿ. ಹಿಂದೂಧರ್ಮಕ್ಕೆ ಹತ್ತಿರವಾದ ಪಕ್ಷ. One religion, one nation, one leader ಎನ್ನುವ ಸಿದ್ಧಾಂತ ಲಿಂಗಾಯತ ತತ್ವವಲ್ಲ. ಭಾ.ಜ.ಪ. ರಾಷ್ಟ್ರೀಯ ಸ್ವಯಂ ಸೇವಕ ಸಂಘ ಬೆಂಬಲಿತ ಪಕ್ಷ. ಆರ್.ಎಸ್. ಎಸ್. ಹಿಂದೂ ಸಂಘಟನೆಯ ಸಂಸ್ಥೆ. ಇದು ವೇದ, ಆಗಮ, ಪುರಾಣ ಹಾಗೂ ಶ್ರೇಣೀಕೃತ ಜಾತಿವ್ಯವಸ್ಥೆಯಲ್ಲಿ ನಂಬುಗೆ ಇಟ್ಟಿದೆ. ಈ ಎಲ್ಲಾ ಸಿದ್ಧಾಂತಗಳನ್ನು ಧಿಕ್ಕರಿಸಿದ್ದು ಲಿಂಗಾಯತ ಧರ್ಮ. ಭಾ.ಜ.ಪ.ವು 'ಲಿಂಗಾಯತ ಒಂದು ಜಾತಿ ಅದು ಧರ್ಮವಲ್ಲ ಅದು ಹಿಂದೂ ಧರ್ಮದ ಒಂದು ಭಾಗ ಎನ್ನುತ್ತ ಹಿಂದೂಗಳಲ್ಲಿ ಲಿಂಗಾಯತವು ಒಂದು ಜಾತಿ' ಎನ್ನುತ್ತದೆ. ಈ ಧರ್ಮಸಂಕಟದ ಅಡಿಯಲ್ಲಿ ಭಾರತೀಯ ಜನತಾ ಪಕ್ಷ ರಾಜಕೀಯವಾಗಿ ಬೆಂಬಲಿಸಬೇಕೋ ಬೇಡವೋ ಎಂಬ ಗೊಂದಲದಲ್ಲಿತ್ತು. ೨೦೧೩ರಲ್ಲಿ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ನೀಡಬೇಕೆಂಬ ಮನವಿಗೆ ಭಾ.ಜ.ಪ.ದ ನಾಯಕರಾದ ಯಡಿಯೂರಪ್ಪನವರು ತಿಳಿದೋ ತಿಳಿಯದೆಯೋ ಹಸ್ತಾಕ್ಷರ ಮಾಡಿದ್ದರು. ಆಗ ಅವರಿಗೆ ಧರ್ಮ ಒಡೆದಂತೆ ಕಂಡಿರಲಿಲ್ಲ. ನಂತರದ ದಿನಗಳಲ್ಲಿ ಕಾಂಗ್ರೆಸ್ ಪಕ್ಷ ಧರ್ಮ ಒಡೆಯುವ ಕೆಲಸಕ್ಕೆ ಕೈ ಹಾಕಿದೆ ಎಂದು ಆರೋಪಿಸಿದರು.

In Public domain. Digitization Muthulakshmi Research Academy

ರ್‍ಯಾಲಿಯ ನೇರ ಪರಿಣಾಮ ಲಿಂಗಾಯತ ಧರ್ಮದ ಮತ್ತೊಂದು ಮಹತ್ವದ ಘಟ್ಟಕ್ಕೆ ತಂದು ನಿಲ್ಲಿಸಿತು. ಸುಪ್ತವಾಗಿದ್ದ ಲಿಂಗಾಯತರನ್ನು ಜಾಗೃತರಾಗಲು ಪ್ರೇರೇಪಿಸಿತು. ನಮ್ಮ ಧರ್ಮ ಯಾವುದು? ಅದರ ಸಿದ್ಧಾಂತ ತತ್ವಗಳೇನು? ಅದರ ಆಚರಣೆಗಳೇನು? ಎಂದು ತಿಳಿಯಲು ನವಯುವಕರು ಆಸಕ್ತರಾದರು. ಇಂಟರ್‌ನೆಟ್ ಯುಗದ ಭಾರತದಲ್ಲಿ ಮಾಧ್ಯಮ ಪ್ರತಿಯೊಬ್ಬರ ಅಂಗೈಯಲ್ಲಿದೆ, ಕ್ಷಣಾರ್ಧದಲ್ಲಿ ಸಂಪರ್ಕಿಸುವ ಸಂಪರ್ಕ ಕ್ರಾಂತಿಯಾಗಿದೆ. ಸಾಮಾಜಿಕ ಜಾಲತಾಣ ಎಂಬ ಮಾಯಾವಿ ಎಲ್ಲರನ್ನು ವಿಸ್ಮಯ ಗೊಳಿಸಿದೆ. ಶತಶತಮಾನಗಳ ಕಾಲದಿಂದಲೂ ಜನಸಾಮಾನ್ಯರಿಂದ ದೂರವಾದ ಲಿಂಗಾಯತರ ಧರ್ಮಗ್ರಂಥವಾದ ವಚನ ಸಾಹಿತ್ಯ ನಾಗರಿಕರ ಅಂಗೈಯಲ್ಲಿದೆ. ಶತಮಾನಗಳಿಂದ ಸಾಧಿಸಲಾಗದ ಪ್ರಚಾರವು ಕೆಲವೇ ದಿನಗಳಲ್ಲಿ ಸಾಮಾಜಿಕ ಜಾಲತಾಣದ ಕೃಪೆಯಿಂದ ಜನಸಾಮಾನ್ಯರ ಕೈ ಸೇರಿತು. ರ್‍ಯಾಲಿಯ ಅದ್ಭುತ ಯಶಸ್ಸು ಸಂಘಟಕರಿಗೆ ಹೊಸ ಚೈತನ್ಯ ನೀಡಿತು. ಬಹುದಿನಗಳ ಕನಸು ನನಸಾಗಬಹುದು ಎಂಬ ಆಸೆ ಚಿಗುರಿತು. ಅದಕ್ಕೆ ಪೂರಕವೆಂಬಂತೆ ಪ್ರಸ್ತುತ ಅಧಿಕಾರದಲ್ಲಿದ್ದ ಸರಕಾರದ ನೀತಿಗಳು ಹತ್ತಿರವಾಗಿದ್ದವು.

"ರ್‍ಯಾಲಿಯ ನಂತರ ನಾವು ಮುಖ್ಯಮಂತ್ರಿಗಳನ್ನು ಕಾಣಲು ಬೆಂಗಳೂರಿಗೆ ಬಂದೆವು. ಮುಖ್ಯಮಂತ್ರಿಗಳಿಗೆ ಮಾಧ್ಯಮದ ಮುಖಾಂತರ ವರದಿ ಸಿಕ್ಕಿತ್ತು. ಮಾತಾಜಿ ಮತ್ತೊಂದು ಮನವಿ ಕೊಡಲು ತೀರ್ಮಾನಿಸಿದ್ದರು. ಆಗ ನಾವು ಜಲಸಂಪನ್ಮೂಲ ಸಚಿವರಾದ ಎಂ.ಬಿ.ಪಾಟೀಲರನ್ನು ಕಂಡೆವು. ಅವರು ಈಗಾಗಲೇ ಈ ವಿಷಯದಲ್ಲಿ ಕಾರ್ಯಪ್ರವೃತ್ತರಾಗಿದ್ದಾಗಿ ತಿಳಿಸಿದರು. ಸರಕಾರ ಇದರ ಬಗ್ಗೆ ಗಂಭೀರವಾಗಿ ಚಿಂತಿಸುತ್ತದೆ ಎಂದೂ ಹೇಳಿದರು" ಎಂದು ಅಂದಿನ ದಿನಗಳನ್ನು ನೆನಪಿಸಿಕೊಂಡರು ಬಸವರಾಜ ದನ್ನೂರ.

ವೈಯಕ್ತಿಕವಾಗಿ ನಾನು ಆ ಸಮಯದಲ್ಲಿ ಅಮೆರಿಕೆಯಲ್ಲಿದ್ದೆ. ಸಚಿವ ಎಂ.ಬಿ.ಪಾಟೀಲ ಹಾಗೂ ಒಬ್ಬ ಸ್ವಾಮೀಜಿಯ ಮಧ್ಯೆ ಟಿ.ವಿ. ಡಿಬೇಟ್ ನಡೆಯುತ್ತಿತ್ತು. ಅದು ಸಚಿವರ ಘನತೆಗೆ ತಕ್ಕುದ್ದಲ್ಲ ಎನಿಸಿತು. ಅನೇಕ ವರ್ಷಗಳ ಕಾಲ ಸಂಪರ್ಕದಲ್ಲಿರದ ಸಚಿವರು ಘೋನಿನಲ್ಲಿ ಸಿಕ್ಕರು. 'ನೀವು ಮುಖ್ಯಮಂತ್ರಿಯ ಸ್ಥಾನದಲ್ಲಿರುವವರು, ನೀವ್ಯಾಕೆ ಇಂತಹವರೊಂದಿಗೆ ಡಿಬೇಟ್ ಮಾಡುತ್ತಿದ್ದೀರಿ' ಎಂದು ನೇರವಾಗಿ ಪ್ರಶ್ನಿಸಿದೆ. ಅದಕ್ಕೆ ಅವರು ಸಮಜಾಯಿಷಿ ನೀಡಿದರು. ಆಗ ಲಿಂಗಾಯತ ಧರ್ಮದ ಬಗ್ಗೆ ಮಾತು ತಿರುಗಿಕೊಂಡವು. ಡಾ.ಕಲಬುರ್ಗಿಯವರ ಅನುಪಸ್ಥಿತಿ ನಮ್ಮ ಚರ್ಚೆಯಲ್ಲಿ ಬಂತು. ಅವರ ಸ್ಥಾನ ಡಾ.ವೀರಣ್ಣ ರಾಜೂರ ಹಾಗೂ ಡಾ.ಎನ್.ಜಿ. ಮಹೇದೇವಪ್ಪ ತುಂಬಲು ಅರ್ಹರು. ಅವರನ್ನು ಸಂಪರ್ಕಿಸಿ ಎಂದೆ. ಇತ್ತೀಚೆಗೆ ಡಾ.ಜಾಮದಾರ ಲಿಂಗಾಯತರ ಬಗ್ಗೆ ಓದಿಕೊಂಡಿದ್ದಾರೆ ಅವರನ್ನು ಸಂಪರ್ಕಿಸಬಹುದೆಂದು ಹೇಳಿದೆ.

In Public domain. Digitization Muthulakshmi Research Academy

ಅದರಂತೆ ಡಾ.ರಾಜೂರ ಹಾಗೂ ಡಾ.ಮಹಾದೇವಪ್ಪನವರ ವಿವರಗಳನ್ನು ನೀಡಿದೆ. ಆಗ ಸಚಿವರು ನೀವು ಅಮೆರಿಕೆಯಿಂದ ಬೇಗ ಬಂದು ಹೋರಾಟದಲ್ಲಿ ತೊಡಗಿಕೊಳ್ಳಿ ಎಂದು ಸಲಹೆ ನೀಡಿದರು.

ಜುಲೈ ೨೫, ೨೦೧೭ರಂದು ನಡೆದ ಸಚಿವ ಬಸವರಾಜ ರಾಯರೆಡ್ಡಿಯವರ ಮಾಧ್ಯಮ ಗೋಷ್ಠಿ ಲಿಂಗಾಯತ ಹೋರಾಟದ ದಿಕ್ಕನ್ನೇ ಬದಲಾಯಿಸಿತು. ಅಂದು ಅವರು 'ವೀರಶೈವ-ಲಿಂಗಾಯತ ಸಮುದಾಯವನ್ನು ಪ್ರತ್ಯೇಕ ಧರ್ಮವೆಂದು ಘೋಷಿಸುವ ಸಂಬಂಧ ಅಭಿಪ್ರಾಯ ಸಂಗ್ರಹಿಸಲು ಈ ಸಮುದಾಯದ ಐವರು ಸಚಿವರು ಮುಂದಿನ ತಿಂಗಳು ರಾಜ್ಯದಾದ್ಯಂತ ಪ್ರವಾಸ ಮಾಡಲಿದ್ದಾರೆ. ಸಚಿವರಾದ ಶರಣಪ್ರಕಾಶ ಪಾಟೀಲ, ಎಸ್.ಎಸ್. ಮಲ್ಲಿಕಾರ್ಜುನ, ಈಶ್ವರ ಖಂಡ್ರೆ, ವಿನಯ ಕುಲಕರ್ಣಿ ಮತ್ತು ಬಸವರಾಜ ರಾಯರೆಡ್ಡಿ ವಿವಿಧ ಭಾಗಗಳ ಮಠಾಧೀಶರು ಹಾಗೂ ಸಮಾಜದ ಮುಖಂಡರನ್ನು ಭೇಟಿ ಮಾಡಲಿದ್ದಾರೆ. 'ವೀರಶೈವ-ಲಿಂಗಾಯತರು ಹಿಂದೂಧರ್ಮದ ಭಾಗವೇ ಆಗಿದ್ದರೂ ಹಿಂದುತ್ವದ ಭಾಗ ಅಲ್ಲ. ಹಿಂದೂಧರ್ಮವನ್ನು ಯಾರೂ ಸ್ಥಾಪನೆ ಮಾಡಿಲ್ಲ. ಅದೊಂದು ಸಂಸ್ಕೃತಿ. ಸಿಂಧೂನದಿ ತಟದಿಂದ ಬಂದ ಈ ಸಂಸ್ಕೃತಿ ಆಯಾ ಕಾಲಕ್ಕೆ ತಕ್ಕಂತೆ ಬದಲಾವಣೆ ಕಂಡಿದೆ. ಆದರೆ ಹಿಂದುತ್ವ ಎಂದರೆ ಮನುಸ್ಮೃತಿ, ವರ್ಣಭೇದ ಪ್ರತಿಪಾದಿಸುವುದಾಗಿದೆ" ಎಂದರು. 'ಪಟ್ಟಭದ್ರ ಹಿತಾಸಕ್ತಿಗಳಿಂದ ಹಿಂದುತ್ವದ ಹೆಸರಿನಲ್ಲಿ ದಬ್ಬಾಳಿಕೆ, ಜಾತಿ, ಲಿಂಗತಾರತಮ್ಯ ನಡೆಯುತ್ತಿದೆ. ಈ ಗೊಂದಲ ಪರಿಹರಿಸಲು ರಾಜ್ಯದಾದ್ಯಂತ ಪ್ರವಾಸ ಮಾಡುತ್ತೇವೆ' ಎಂದು ಸ್ಪಷ್ಟಪಡಿಸಿದರು. 'ವೀರಶೈವ ಮತ್ತು ಲಿಂಗಾಯತ ಎರಡೂ ಒಂದೇ ಆಗಿದ್ದು, ಪ್ರತ್ಯೇಕ ಧರ್ಮ ಎಂದು ಘೋಷಿಸುವಂತೆ ಮುಖ್ಯಮಂತ್ರಿಗಳ ಮೇಲೆ ವೀರಶೈವ ಮಹಾಸಭಾದ ಮುಖಂಡರು ಒತ್ತಾಯಿಸುತ್ತಿದ್ದಾರೆ. ಮುಖ್ಯಮಂತ್ರಿ ಅವರಾಗಿಯೇ ಈ ಮಾತನ್ನು ಎಲ್ಲೂ ಹೇಳಿಲ್ಲ. ಜಾತಿ, ಧರ್ಮದ ಹೆಸರಿನಲ್ಲಿ ಮತರಾಜಕೀಯ ಮಾಡಬೇಕಾದ ಅವಶ್ಯಕತೆಯೂ ಅವರಿಗಿಲ್ಲ" ಎಂದು ರಾಯರೆಡ್ಡಿ ಹೇಳಿದರು. 'ವೀರಶೈವ ಲಿಂಗಾಯತ ಧರ್ಮವೇ ಮಾನವ ಧರ್ಮ. ಈ ಬಗ್ಗೆ ವಿವಾದ ಅನಗತ್ಯ. ನಾವು ಚುನಾವಣಾ ರಾಜಕೀಯ ಮಾಡುತ್ತಿಲ್ಲ. ಲಿಂಗಾಯತರನ್ನು ಒಡೆಯುವ ಕೆಲಸ ಮುಖ್ಯಮಂತ್ರಿ ಮಾಡುತ್ತಿಲ್ಲ" ಎಂದು ಪ್ರತಿಪಾದಿಸಿದರು. "ಹಿಂದುತ್ವಕ್ಕೂ ವೀರಶೈವ ಸಮುದಾಯಕ್ಕೂ ವ್ಯತ್ಯಾಸಗಳಿವೆ. ವೀರಶೈವರಲ್ಲಿ ಮೂಢನಂಬಿಕೆಗಳಿಲ್ಲ, ಪ್ರಗತಿಪರ ಚಿಂತಕರು, ವಿಚಾರವಂತರು, ಸಮಪಾಲು-ಸಮಬಾಳು ತತ್ವಕ್ಕೆ ಬದ್ಧರಾದವರು ವೀರಶೈವರು" ಎಂದರು. "ಆರ್.ಎಸ್.ಎಸ್. ಕಚೇರಿಯಲ್ಲಿ ಬಸವಣ್ಣನವರ ಭಾವಚಿತ್ರ ಹಾಕುತ್ತಾರೆಯೇ?

In Public domain. Digitization Muthulakshmi Research Academy

ಯಡಿಯೂರಪ್ಪ ಮೊದಲು ವೀರಶೈವ ತತ್ವ ಕಲಿಯಲಿ" ಎಂದರು. "ಚುನಾವಣೆ ಹೊಸ್ತಿಲಲ್ಲಿರುವಾಗ ನಿಮಗೆ ಪ್ರತ್ಯೇಕ ಧರ್ಮ ಘೋಷಣೆ ವಿಷಯ ನೆನಪಾಯಿತೆ" ಎಂಬ ಪ್ರಶ್ನೆಗೆ, "ಹಾಗೇನೂ ಇಲ್ಲ, ಹಿಂದುತ್ವದ ಹೆಸರಿನಲ್ಲಿ ಬಿಜೆಪಿ ಶೋಷಣೆ ಮಾಡುತ್ತಿದೆ, ಹಿಂದುತ್ವದ ಆಚಾರ ವಿಚಾರಗಳಿಗೂ ಲಿಂಗಾಯತರ ಆಚಾರ ವಿಚಾರಗಳಿಗೂ ಬಹಳ ವ್ಯತ್ಯಾಸ ಇದೆ" ಎಂದರು[5]

ಮೇಲಿನ ಪತ್ರಿಕಾಗೋಷ್ಠಿಯಿಂದ ಕಾಂಗ್ರೆಸ್ ಪಕ್ಷವು ರಾಜಕಾರಣದಿಂದ ಧರ್ಮಕಾರಣಕ್ಕೆ ಇಳಿದಿರುವುದು ಸ್ಪಷ್ಟವಾಗುತ್ತದೆ. ಉನ್ನತ ಶಿಕ್ಷಣ ಸಚಿವರ ಹೇಳಿಕೆಯಲ್ಲಿಯೂ ಸ್ಪಷ್ಟತೆ ಕಾಣದು. ಅವರು ಲಿಂಗಾಯತ ಶಬ್ದವನ್ನು ವೀರಶೈವ ಶಬ್ದಕ್ಕೆ ಪರ್ಯಾಯವಾಗಿ ಬಳಸಿದಂತೆ ಕಂಡುಬರುವುದು ಅಥವಾ ಅವರ ಉದ್ದೇಶವು ಇವೆರಡು ಮತಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗುವ ಪ್ರಯತ್ನವೂ ಆಗಿರಬಹುದು. ಬೀದರ್ ರ್‍ಯಾಲಿಯ ಕೂಗು ವೀರಶೈವ ಹಾಗೂ ಹಿಂದೂಧರ್ಮಗಳ ವಿರುದ್ಧವಾಗಿತ್ತು. ಅಲ್ಲಿ ಲಿಂಗಾಯತ ಸಿದ್ಧಾಂತಗಳ ಸ್ಪಷ್ಟತೆ ಇತ್ತು. ರಾಜಕಾರಣಿಯಾದ ಉನ್ನತ ಶಿಕ್ಷಣ ಸಚಿವರು ಈ ಧರ್ಮಸೂಕ್ಷ್ಮತೆ ಅರಿಯದೆ ಹೋಗಿರಬಹುದು.

ಇಂತಹ ಲಿಂಗಾಯತ ನಾಯಕರು ಹನ್ನೆರಡನೆಯ ಶತಮಾನದಲ್ಲಿಯೂ ಇದ್ದಿರಬಹುದು, ಇಲ್ಲದಿದ್ದರೆ ವಚನವನ್ನಾಡುವ ಪ್ರಮೇಯ ಏನಿತ್ತು? ಇಂತಹ ದಿನಗಳು ಮುಂದೆ ಬರಬಹುದೆಂದು ಊಹಿಸಿರಬಹುದೇ ಚಾಣಾಕ್ಷ ಸಿದ್ದರಾಮಯ್ಯನವರು. ತಮ್ಮನ್ನು ಸನ್ಮಾನ ಮಾಡುವಾಗ ವೇದಿಕೆಯ ಮೇಲಿದ್ದ ಮಹಾಸಭೆಯ ಮಹಾವೀರರು ವೀರಾವೇಶದಿಂದ ಮಾತಾಡುವಾಗ ಮುಖ್ಯಮಂತ್ರಿಗಳ ಮುಖದಲ್ಲಿದ್ದ ಮುಗುಳುನಗೆಯು ಮುಂದಿನ ದಿನಗಳ ಮುನ್ಸೂಚನೆಯಾಗಿತ್ತೇ?

'ಹಿಂದೂಧರ್ಮದ ನಂಟು ತ್ಯಜಿಸಲಿ' ಎಂದು ಹಿರಿಯ ಸಾಹಿತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷರಾದ ಚಂಪಾ(ಚಂದ್ರಶೇಖರ ಪಾಟೀಲ) ಅವರು ಕರೆ ನೀಡಿದರು. ವೀರಶೈವರ ಮೇಲೆ ವಾಗ್ದಾಳಿ ಮಾಡುತ್ತ 'ಹಿಂದೂ (ವೈದಿಕ) ಮತ್ತು ಲಿಂಗಾಯತ ಧರ್ಮಗಳಲ್ಲಿ ಸ್ಪಷ್ಟತೆ ಇದೆ. ವೀರಶೈವರು ಹಿಂದೂಧರ್ಮದ ಭಾಗ ಅಲ್ಲ ಎಂದು ಸ್ಪಷ್ಟವಾಗಿ ಹೇಳಿದಾಗ ಮಾತ್ರ ಲಿಂಗಾಯತ ಧರ್ಮದವರಾಗಲು ಸಾಧ್ಯ', ಎನ್ನುತ್ತ ಮುಂದುವರಿದು 'ವೀರಶೈವ ಮತ್ತು ಲಿಂಗಾಯತ ಸಮುದಾಯದವರು ಹಟಕ್ಕೆ ಬಿದ್ದವರ ಹಾಗೆ ವಾಗ್ವಾದ ಮಾಡುವುದರಿಂದ ಪ್ರಯೋಜನವಿಲ್ಲ, ಪರಿಹಾರ ಕಂಡುಕೊಳ್ಳುವ ಬಗ್ಗೆ ಚಿಂತಿಸಬೇಕು, ಎರಡು ಸಮುದಾಯಗಳ ಮುಖಂಡರು ಒಂದೇ ವೇದಿಕೆಗೆ ಬಂದು ಗೊಂದಲ ಪರಿಹರಿಸಿಕೊಳ್ಳಬೇಕು.

In Public domain. Digitization Muthulakshmi Research Academy

ಆದರೆ ಅದಕ್ಕೆ ಪೂರಕ ವಾತಾವರಣ ಸೃಷ್ಟಿಸಲು ಯಾರೂ ಸಿದ್ಧರಿಲ್ಲ' ಎಂದು ಬೇಸರಪಟ್ಟುಕೊಂಡರು. ಈಗ ಹೋರಾಟವು ಸಾಹಿತ್ಯಿಕ ವಲಯದತ್ತ ಪಸರಿಸಿತು. ವಿಶ್ವವಿದ್ಯಾಲಯದ ಪ್ರೊಫೆಸರ್‌ಗಳು ವಿದ್ಯಾವಂತರು ಸಾಮಾಜಿಕ ಜಾಲತಾಣದಲ್ಲಿ ಚರ್ಚಿಸಲಾರಂಭಿಸಿದರು.

ಹೋರಾಟದ ಸಮಯದಲ್ಲಿ ಅರಳಿದ ಲಿಂಗಾಯತ ಸಾಹಿತ್ಯ

ನಮ್ಮ ಐತಿಹಾಸಿಕ ಪರಂಪರೆಯಲ್ಲಿ ಓದು ಬರಹವು ಬ್ರಾಹ್ಮಣರ ಸೊತ್ತಾಗಿತ್ತು. ಅವರು ಉಳ್ಳವರ ಇತಿಹಾಸವನ್ನು ಬರೆದು, ಅವರನ್ನು ಸಂಪ್ರೀತಗೊಳಿಸುವುದೇ ಕಾಯಕವಾಗಿತ್ತು. ಭಾರತದ ಇತಿಹಾಸವೆಂದರೆ ರಾಜರುಗಳ ಮಧ್ಯ ನಡೆಯುವ ಸೋಲು-ಗೆಲುವುಗಳ ವಿವರಣೆ ಮಾತ್ರ. ಲಿಂಗಾಯತರು ಶಿಕ್ಷಣವಂತರಾಗಲು ಪ್ರಾರಂಭಿಸಿದ್ದೇ ಬ್ರಿಟಿಷರ ಆಗಮನದ ನಂತರ. ಮೆಕಾಲೆ ಎಂಬ ಮಹಾನುಭಾವನ ಶಿಕ್ಷಣ ನೀತಿಯಿಂದ. ಅದಕ್ಕೂ ಮೊದಲು ಲಿಂಗಾಯತರು ಓದು ಬರಹಕ್ಕೂ ಬ್ರಾಹ್ಮಣರ ಮೇಲೆ ಅವಲಂಬಿತರಾಗಿದ್ದರು. ಬ್ರಾಹ್ಮಣರು ಮೌಢ್ಯ ಬಿತ್ತಿ, ಪುರೋಹಿತಶಾಹಿಯನ್ನು ಬೆಳೆಸಿ, ಶೋಷಣೆ ಮಾಡುವ ಗುರಿಯಿಂದಲೇ ಅವರ ಸಾಹಿತ್ಯ ರಚನೆಯಾಗುತ್ತಿತ್ತು. ಇದನ್ನರಿತು ಲಿಂಗಾಯತ ಸಮಾಜದ ಚರಿತ್ರೆಯ ಮುಖ್ಯ ಆಧಾರ ಶರಣರ ವಚನ, ಶರಣ ಸಾಹಿತಿಗಳ ಪುರಾಣ ಶಾಸ್ತ್ರ, ಪವಾಡ, ಪ್ರಕ್ಷಿಪ್ತತೆ, ಇತ್ಯಾದಿಗಳಿಂದಾಗಿ ಇವು ಶುದ್ಧ ಆಕರಗ್ರಂಥಗಳಾಗಿ ಉಳಿದುಬಂದಿಲ್ಲ. 'ಪುರಾಣದೃಷ್ಟಿ'ಯ ಇವುಗಳಿಗೆ ಬದಲು ನಾವು ಬಳಸಿಕೊಳ್ಳಬೇಕಾದ ಆಧುನಿಕ ಸಾಮಗ್ರಿಯೆಂದರೆ ವಿದೇಶಿ ವಿದ್ವಾಂಸರ 'ಇತಿಹಾಸದೃಷ್ಟಿ' ಬರಹಗಳು. ಇವು ವಿದೇಶ ಪ್ರವಾಸಿಗರ-ವಿದ್ವಾಂಸರ ರಚನೆಗಳು, ಗೆಜೆಟಿಯರ್ ದಾಖಲೆಗಳು, ಜನಗಣತಿ ವರದಿಗಳು. ಲಿಂಗಾಯತ ಸಾಹಿತ್ಯವನ್ನು ಉತ್ತಿ, ಬಿತ್ತಿ, ಬೆಳಸಬೇಕು' ಎಂದು ಹೇಳುತ್ತಾರೆ ವಿದ್ವಾಂಸ ಡಾ.ಎಂ.ಎಂ.ಕಲಬುರ್ಗಿ[೭]

ಮೆಕಾಲೆ ಶಿಕ್ಷಣದ ಫಲಾನುಭವಿಯಾದ(೧೮೭೦-೮೦) ಗೌರವಾನ್ವಿತ ನ್ಯಾಯಾಧೀಶ ಶ್ರೀ ವೀರಭದ್ರಪ್ಪ ಹಾಲಭಾವಿಯವರ ಒಂದು ಮಾತು ನಮ್ಮ ಕರಾಳ ಚರಿತ್ರೆಯನ್ನು ತೋರಿಸುತ್ತದೆ. "ಹಳೆಯ ಶಾಸ್ತ್ರ ಪುರಾಣಗಳಲ್ಲಿ ಲಿಂಗಾಯತ ಶಬ್ದವು ದೊರಕುವುದಿಲ್ಲ. ಅವುಗಳಲ್ಲಿ ವೀರಶೈವ, ಲಿಂಗಾಂಗಿ, ಲಿಂಗೀ ಬ್ರಾಹ್ಮಣ ಶಬ್ದಗಳೇ ದೊರಕುತ್ತವೆ." ೧,೯೬,೦೦೦ ವಚನಗಳನ್ನು ರಚಿಸಿದ್ದ ಈ ಧರ್ಮಕ್ಕೆ ತನ್ನದೇ ಹೆಸರೂ ಕೂಡ ಮಾಯವಾದದ್ದು ಎಂಥಾ ಘೋರ ಅನ್ಯಾಯ. ಈ ಅನ್ಯಾಯಕ್ಕೆ ಇಂದಿಗೂ ಬೆಲೆ ತೆರುತ್ತಲಿದೆ ಲಿಂಗಾಯತ ಧರ್ಮ. ವಿಶ್ವವ್ಯಾಪಿಯಾಗಬೇಕಾದ ಧರ್ಮವು ಇಂದು ಅಳಿವಿನ ಅಂಚಿನಲ್ಲಿರುವ ಮುಖ್ಯ

In Public domain. Digitization Muthulakshmi Research Academy

ಕಾರಣಗಳು ಮೂರು. ಒಂದು ಶಿಕ್ಷಣ, ಎರಡು ಸಾಹಿತ್ಯ, ಮೂರು ಲಿಂಗಾಯತರ ಅಸಡ್ಡೆ (ವಚನ ಪಿತಾಮಹ ಫ.ಗು.ಹಳಕಟ್ಟಿಯವರು ವಚನಗಳನ್ನು ಸಂಶೋಧನೆ ಮಾಡುವ ಪೂರ್ವದಲ್ಲಿ ವಚನಗಳ ಅಧ್ಯಯನ ಲಿಂಗವಂತರಿಗೆ ಇರಲಿಲ್ಲ. ವಚನಗಳಲ್ಲಿ ೧೦೧ ಕಡೆ 'ಲಿಂಗವಂತ' ಶಬ್ದಗಳಿವೆ. ಆದರೆ ಕೆಲವು ವಚನಗಳಲ್ಲಿ 'ಲಿಂಗವಂತ' ಶಬ್ದವನ್ನು ತೆಗೆದುಹಾಕಿ 'ವೀರಶೈವ ಶಬ್ದ ತುರುಕಲಾಗಿದೆ' ಎಂದು ಇತ್ತೀಚಿನ ಸಂಶೋಧನೆಗಳಿಂದ ತಿಳಿದುಬರುತ್ತದೆ. ಬಸವೋತ್ತರ ಕಾಲದ ಹರಿಹರನ ಸಾಹಿತ್ಯದಲ್ಲಿ ಲಿಂಗವಂತ ಪದ ಬಳಕೆಯಾಗಿದೆ. ಬಸವಣ್ಣನವರ ಮಗ ಸಿದ್ಧರಸನಿಗೆ 'ಹೊಂಗಡದ ಲಿಂಗವಂತ'ನೆಂದಾಗಿಯೂ ಮಹಾದೇವಿಯನ್ನು 'ಹೊಂಗಡದ ಲಿಂಗವಂತೆ' ಎಂದು ಹರಿಹರನ ಸಾಹಿತ್ಯದಲ್ಲಿದೆ[೮]

ಕರ್ನಾಟಕದಲ್ಲಿ ಲಿಂಗಾಯತ ಅರಸರು ಆಳಿ ಹೋದರೂ ಲಿಂಗಾಯತ ಸಾಹಿತ್ಯ ಬೆಳೆಯುವ ಬದಲು ವೀರಶೈವ ಸಾಹಿತ್ಯ ಹುಲುಸಾಗಿ ಬೆಳೆಯಿತು. ವಿಜಯನಗರದ ಅರಸರು, ಕೆಳದಿ ರಾಜರು, ಕಿತ್ತೂರಿನ ಅರಸರು, ಸೋದೆ ಅರಸರು, ಕಳಲೆ ಅರಸರು, ಮೈಸೂರು ಅರಸರು, ಬೆಳವಡಿ ದೇಸಾಯರು, ಹಾಗಲವಾಡಿ ಅರಸರು, ಬೀಳಗಿ ಅರಸರು, ಬಿಜ್ಜಾವರದ ಆಡಳಿತಗಾರರು, ಕೊಡಗಿನ ಅರಸರು, ಹಂಡೆ ಪಾಳೆಯಗಾರರು ಇನ್ನೂ ಅನೇಕ ಅರಸುಮನೆತನಗಳು ಲಿಂಗಾಯತ ಧರ್ಮವನ್ನು ಪಾಲಿಸಿದರೂ ಲಿಂಗಾಯತ ಸಾಹಿತ್ಯವನ್ನು ಬೆಳೆಸಲಿಲ್ಲ. ಇದಕ್ಕೆ ಕಾರಣ ವೈದಿಕ ಸನಾತನ ಧರ್ಮಗಳ ಏಣಿಶ್ರೇಣಿ ಜಾತಿವ್ಯವಸ್ಥೆ ಆಗಿರಬಹುದೆ? ಇರಬಹುದು. ವಚನ ಪಿತಾಮಹ ಫ.ಗು.ಹಳಕಟ್ಟಿಯವರೇ ತಮ್ಮ ಗ್ರಂಥಗಳಲ್ಲಿ ಬಸವಣ್ಣನವರ ಬಗ್ಗೆ ಬರೆಯುತ್ತ "ಬಸವೇಶ್ವರನ ಚರಿತ್ರೆಯನ್ನು ಬರೆಯುವುದಕ್ಕೋಸ್ಕರ ಬಹು ಜನರು ನಮಗೆ ಸೂಚಿಸುತ್ತಾ ಇದ್ದಾರೆ. ಆದರೆ ಈ ಕಾರ್ಯ ಬಹಳ ಬಿಕ್ಕಟ್ಟಿನದೆಂದು ನಮಗೆ ತೋರಿದ್ದರಿಂದ ಈ ಸಾಹಸವನ್ನು ಕೈ ಕೊಂಡಿರುವುದಿಲ್ಲ. ಯಾಕೆಂದರೆ ಬಸವೇಶ್ವರನ ವಿಷಯವಾಗಿ ನಂಬಲರ್ಹವಾದ ಸಂಗತಿಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುವುದಿಲ್ಲ. ಅವರ ಚರಿತ್ರೆಯ ಗ್ರಂಥಗಳು ಅನೇಕವಿರುತ್ತವೆಂಬುದು ನಿಜವು. ಆದರೆ ಅವುಗಳಲ್ಲಿ ನಿರ್ದೇಶಿಸಲ್ಪಟ್ಟ ಸಂಗತಿಗಳು ಎಷ್ಟರ ಮಟ್ಟಿಗೆ ನಂಬಲರ್ಹವಾದವುಗಳೆಂಬುದನ್ನು ಕಂಡುಹಿಡಿಯುವುದು ಬಹಳ ದುಸ್ತರವಿರುತ್ತದೆ." ಮುಂದುವರಿಯುತ್ತಾ "ಅವನ ಚರಿತ್ರೆಯು ಉಪಲಬ್ಧವಾಗದಿರಲಿಕ್ಕೆ ಕೆಲವು ಕಾರಣಗಳಿವೆ. ಅವನ ಚಳುವಳಿಯಿಂದ ಸಮಾಜದಲ್ಲಿ ಒಂದು ಕ್ಷೋಭವು ಎದ್ದಿತು. ಅವನು ಧರ್ಮಬಾಹಿರನೆಂದು ಮೊದಲು ಎಣಿಸಲ್ಪಟ್ಟವನು. ಹೀಗೆ ಎಣಿಸಲ್ಪಟ್ಟವನ ಚರಿತ್ರೆಯನ್ನು ಆಗಿನವರು ಬರೆಯುವರಾರು? ಆರಂಭಕಾಲದಲ್ಲಿ ಬಸವೇಶ್ವರನಿಗೆ ಸಹಾಯವಾದವರು ಪ್ರಮುಖ ಸಮಾಜದವರಲ್ಲ. ಅವನಿಗೆ ಸಹಾಯವಾದವರು

In Public domain. Digitization Muthulakshmi Research Academy

ಒಬ್ಬ ಅಗಸ, ಒಬ್ಬ ಕಿನ್ನರಿ ಬಾರಿಸುವವ, ಒಬ್ಬ ಮುದ್ದಲಿಗ, ಒಬ್ಬ ಒಡ್ಡರ ನಾಯಕ, ಒಬ್ಬ ನಾಪಿತ, ಹೊಲೆಯ, ಘೋರ, ಕಟ್ಟಿಗೆ ಮಾರಿ ಉಪಜೀವಿಸುವನೊಬ್ಬ, ದೇಶತ್ಯಾಗ ಮಾಡಿದ ಒಬ್ಬ ಸ್ತ್ರೀಯಳು ಇಂತವರೇ ಇದ್ದಾರೆ. ಕ್ರೈಸ್ತನಿಗೆ ಮೊದಲು ಅನುಯಾಯಿಗಳಾದವರು ಇಂಥವರೇ. ಮಹಮ್ಮದ, ಬುದ್ಧ ಇವರ ಸ್ಥಿತಿಯಾದರೂ ಹೀಗೇ ಇದೆ. ಮೇಲಿನ ತರಗತಿಯ ಸಮಾಜದವರು ಇಂಥ ಮಹಾತ್ಮರನ್ನು ಆರಂಭದಲ್ಲಿ ಪೀಡಿಸುತ್ತಾರೆ" ಎಂದು ಹೇಳುತ್ತಾರೆ ವಚನ ಪಿತಾಮಹ.[5]

ವಚನಗಳು ಹೊರಬಂದ ನಂತರ ಪರಸ್ಥಿತಿ ಬದಲಾಯಿತು. ಅಲ್ಲದೆ ಜನರ ಮನಸ್ಥಿತಿ ಬಲದಿಂದ ಎಡಕ್ಕೆ ಚಲಿಸಲಾರಂಭಿಸಿತು. ಸಾಮಾಜಿಕ ಕಳಕಳಿಯುಳ್ಳ ಸಮಾಜವಾದಿ ಸರಕಾರಗಳು ಜಗತ್ತಿನೆಲ್ಲೆಡೆಯಲ್ಲಿ ಸ್ಥಾಪಿಸಲ್ಪಟ್ಟವು. ಫ್ರೆಂಚ್ ಕ್ರಾಂತಿ, ರಶ್ಯನ್ ರೆವೆಲ್ಯೂಶನ್, ಅಮೆರಿಕೆಯ ಕ್ರಾಂತಿ, ಚೀನಾದಲ್ಲಿ ಕಮ್ಯುನಿಸ್ಟ್ ಆಡಳಿತ ಜಗತ್ತಿನ ಜನರ ಚಿಂತನೆಯನ್ನು ಬದಲಿಸಿತು. ಊಳಿಗಮಾನ್ಯ ಪದ್ಧತಿಯ ಬದಲಾಗಿ 'ಉಳುವವನೆ ಒಡೆಯ' ಸಿದ್ಧಾಂತ ಬಂದ ನಂತರ ಜನರ ಯೋಚನೆಯ ದಿಕ್ಕು ಬದಲಾಯಿತು. ಇಂದು ಬಸವಣ್ಣನವರ ಚಿಂತನೆ ಜಗತ್ತಿಗೆ ಮಾದರಿಯಾಗಿದೆ. ಇದೇ ಸಮಯದಲ್ಲಿ ಕರ್ನಾಟಕದ ಅನೇಕ ಸಾಹಿತಿಗಳು ಲಿಂಗಾಯತ ಧರ್ಮವನ್ನು ಜನಮಾನಸದಲ್ಲಿ ಮತ್ತೊಮ್ಮೆ ಬಿತ್ತಲು ಗ್ರಂಥಗಳ ರಚನೆ ಪ್ರಾರಂಭಿಸಿ, ಮುದ್ರಿಸಿ, ಜನಗಳ ಕೈಗಿತ್ತರು. ಅವರಲ್ಲಿ ಒಬ್ಬರಾದ ಡಾ.ಲಕ್ಷ್ಮಣ ಕೌಂಟೆ ಬರೆಯುತ್ತಾರೆ. "ಶರಣಮಾರ್ಗ ಒಂದು ಗುಂಪಿನದು; ಪುರಾಣದ ಮಾರ್ಗ ಇನ್ನೊಂದು ಗುಂಪಿನದು. ಈ ದೇಶದಲ್ಲಿ ಧರ್ಮವನ್ನೇ ದಾರಿ ತಪ್ಪಿಸುವ ಸಮಯಸಾಧಕರಿದ್ದಾರೆ. ನಕಲಿ ದಾಖಲೆಗಳನ್ನು ಸೃಷ್ಟಿ ಮಾಡುವಲ್ಲಿ ಪ್ರಾಚೀನ ಕಾಲದಿಂದಲೂ ಹಿಂದೆ ಬಿದ್ದವರಿಲ್ಲ. ಪ್ರಕ್ಷಿಪ್ತ ವಚನಗಳು, ಪ್ರಕ್ಷಿಪ್ತ ಗ್ರಂಥಗಳು, ಪ್ರಕ್ಷಿಪ್ತ ಶಿಲಾಶಾಸನ-ತಾಮ್ರಶಾಸನ ಮೊದಲಾದವು ಬಸವಣ್ಣನವರ ನಾಡಿನಲ್ಲೂ ಹೇರಳವಾಗಿ ಸಿಗುತ್ತವೆ" ಎಂದು ವೀರಶೈವ ಸಾಹಿತ್ಯವನ್ನು ಪರೋಕ್ಷವಾಗಿ ನಿಂದಿಸುತ್ತ ಇದೇ ಸಮಯದಲ್ಲಿ ಲಿಂಗಾಯತ ಸ್ವತಂತ್ರ ಧರ್ಮ ಎಂಬ ಗ್ರಂಥವನ್ನು ರಚಿಸಿದರು. ಅದರಲ್ಲಿ ಮುಂದುವರಿದು ಹೀಗೆ ಹೇಳುತ್ತಾರೆ. "ಲಿಂಗಾಯತ ಧರ್ಮದಂಥ ಧರ್ಮ ಜಗತ್ತಿನಲ್ಲಿಯೇ ಇನ್ನೊಂದು ಇಲ್ಲ ಎನ್ನುವುದನ್ನು ನಾನು ಘಂಟಾಘೋಷವಾಗಿ ಹೇಳುತ್ತೇನೆ; ಕುಲ ನೆಲೆ ಬಯಸದ, ಹೆಣ್ಣು ಗಂಡು ತರತಮವಲ್ಲದ, ಬಡವ ಬಲ್ಲಿದ ಎಂದು ನೋಡದ; ಹಿರಿದು ಕಿರಿದು ಎನ್ನುವ ಅಂತಸ್ತು ಗಮನಿಸದ ಮತ್ತು ಇನ್ನೂ ಅನೇಕ ವೈಶಿಷ್ಟವುಳ್ಳ ಧರ್ಮ ಇದಾಗಿದೆ. ಮನುಷ್ಯ ತನ್ನ ಮನಸ್ಸಿನ ಕೊಳೆ ತೊಳೆದುಕೊಳ್ಳುವುದಕ್ಕೆ ಬಸವಣ್ಣನ ಲಿಂಗಾಯತ ಧರ್ಮ ದಿವ್ಯ ಔಷಧವಾಗಬಹುದು" ಎಂದಿದ್ದಾರೆ.[6]

ಕರ್ನಾಟಕ ಸರ್ಕಾರದ ರಾಷ್ಟ್ರೀಯ ಬಸವ ಪುರಸ್ಕಾರ ಪ್ರಶಸ್ತಿ ವಿಜೇತ

In Public domain. Digitization Muthulakshmi Research Academy

ರಂಜಾನ್ ದರ್ಗಾ ಅವರು "ಲಿಂಗಾಯತ ಧರ್ಮದಲ್ಲಿ ಏನುಂಟು ಏನಿಲ್ಲ" ಎಂಬ ಪುಸ್ತಕವನ್ನು ಇದೇ ಸಮಯದಲ್ಲಿ ಓದುಗರ ಕೈಯಲ್ಲಿಟ್ಟರು. "ಲಿಂಗಾಯತ ಧರ್ಮ ಭಾರತದ ಮೊದಲ ಏಕದೇವೋಪಾಸನ ಧರ್ಮವಾಗಿದೆ; ಇಡೀ ಜಗತ್ತಿನಲ್ಲಿ ದೇವಸ್ಥಾನಗಳಿಲ್ಲದ ಧರ್ಮ ಎಂದರೆ ಲಿಂಗಾಯತ ಧರ್ಮ ಒಂದೇ ಆಗಿದೆ. ಈ ಧರ್ಮದಲ್ಲಿ ಮಾನವರೇ ಜೀವಂತ ದೇವಾಲಯಗಳಾಗಿದ್ದಾರೆ. ಮಾನವರೊಳಗೇ ದೇವರಿದ್ದಾನೆ. ಆತ ಅಗಮ್ಯ, ಅಗೋಚರ, ಅಪ್ರತಿಮ ಮತ್ತು ಅಪ್ರಮಾಣನಾಗಿದ್ದಾನೆ. ಹೀಗಾಗಿ ಆತನ ಬಳಿ ಹೋಗಲು, ಅತನನ್ನು ನೋಡಲು, ಅತನ ಜೊತೆ ಹೋಲಿಸಲು ಮತ್ತು ಆತನ ಉದ್ದಗಲಗಳನ್ನು ಅಳೆಯಲು ಸಾಧ್ಯವಿಲ್ಲ. ಆತನೇ ಸೃಷ್ಟಿಕರ್ತನಾಗಿದ್ದು ಕಣ್ಣಿಗೆ ಕಾಣುವುದೆಲ್ಲವೂ ಅತನ ಸೃಷ್ಟಿಯಾಗಿದೆ" ಎಂದು ಬರೆಯುತ್ತಾರೆ.[೧೧]

ಲಿಂಗಾಯತ-ವೀರಶೈವ ಇವೆರಡು ಪರ್ಯಾಯ ಹೆಸರುಗಳಲ್ಲ. ಇವೆರಡೂ ಬೇರೆ ಬೇರೆ ಎಂದು ಮೊತ್ತಮೊದಲ ಬಾರಿಗೆ ತಿಳಿಸಿಕೊಟ್ಟವರು ಸಂಶೋಧಕ ಡಾ.ಎಂ.ಎಂ.ಕಲಬುರ್ಗಿಯವರು. ಲಿಂಗಾಯತ ಧರ್ಮಕ್ಕೆ ಹೊಸ ಆಯಾಮ ತಂದುಕೊಟ್ಟವರಿವರು. ತಮ್ಮ ಪ್ರಾಣವನ್ನೇ ಲಿಂಗಾಯತಕ್ಕಾಗಿ ತ್ಯಜಿಸಿದ ಸಂಶೋಧಕ. ಅವರು ಬಯಲಲ್ಲಿ ಬಯಲಾದ ನಂತರ ಅವರ ಅಪ್ರಕಟಿತ ಬರಹಗಳ ಗ್ರಂಥ "ಲಿಂಗಾಯತ ಸ್ವತಂತ್ರ ಧರ್ಮ" ಎಂಬ ಹೆಸರಿನಿಂದ ಹೊರಬಂತು. ಇದರಲ್ಲಿ ವೀರಶೈವರ ಇತಿಹಾಸ, ಭೂಗೋಲ, ಪಂಚಾಚಾರ್ಯರ ನಿಜಸ್ವರೂಪ, ಬಸವಣ್ಣ, ಪ್ರಾಚೀನ ಲಿಂಗಾಯತ ಸಾಹಿತ್ಯದ ಒಂದು ಅನಿವಾರ್ಯತೆ, ಎಂಬಿತ್ಯಾದಿ ಹದಿನಾರು ಅಧ್ಯಾಯಗಳಿವೆ ಇದು ೨೦೧೭ರಲ್ಲಿ ಕಲಬುರ್ಗಿ ರ್‍ಯಾಲಿಯಲ್ಲಿ ಬಿಡುಗಡೆಯಾಯಿತು[೧೨]

ದಕ್ಷಿಣ ಕರ್ನಾಟಕದಲ್ಲಿ ಲಿಂಗಾಯತರಿಗಿಂತ ವೀರಶೈವರ ಸಂಖ್ಯೆ ಹೆಚ್ಚೆಂದು ಮೇಲ್ನೋಟಕ್ಕೆ ಕಂಡುಬಂದರೂ ಅಂತರಂಗದಲ್ಲಿ ಬಸವಸಿದ್ಧಾಂತದ ಲಿಂಗಾಯತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ಸಾಹಿತ್ಯದ ಮತ್ತು ಅಭ್ಯಾಸದ ಕೊರತೆಯಿಂದ ವೀರಶೈವ ಲಿಂಗಾಯತ ಒಂದೇ ಎನ್ನುವ ಮುಗ್ಧ ಲಿಂಗಾಯತರೂ ಇದ್ದಾರೆ. ಪಂಚಾಚಾರ್ಯರ ನಿಜಬಣ್ಣವನ್ನು ಬಯಲಿಗೆಳೆಯುವ ಸಾಹಿತಿ ಪ್ರೊ. ಸಿ.ಎಚ್.ಮರಿದೇವರು ಇದೇ ಸಮಯದಲ್ಲಿ 'ಅಡ್ಡಪಲ್ಲಕ್ಕಿ ಉತ್ಸವ ಮತ್ತು ದಸರಾ ದರ್ಬಾರು'[೧೩] ಎಂಬ ಗ್ರಂಥ ಹೊರತಂದರು. ಪಂಚಪೀಠಗಳ ಅಡ್ಡಪಲ್ಲಕ್ಕಿ ಎಂಬ ಅಮಾನವೀಯ ಉತ್ಸವಗಳ ವಿರುದ್ಧ ಸಮರ ಸಾರಿರುವ ಇವರು, ಹರಿತವಾದ ಲೇಖನಗಳನ್ನು ಬರೆದಿದ್ದಾರೆ. ಅಡ್ಡಪಲ್ಲಕ್ಕಿ ಉತ್ಸವವನ್ನು ತಡೆಯಲೇಬೇಕೆಂಬ ಸಂಕಲ್ಪದಲ್ಲಿ ನವಯುವಕರಿಗೆ ಅನೇಕ ಸಲಹೆಗಳನ್ನು ಇತ್ತಿದ್ದಾರೆ.

"ಲಿಂಗಾಯತ ಸಂಸ್ಕೃತಿ" ಎಂಬ ಅತ್ಯಂತ ಮಹತ್ವದ ಕೃತಿ ಇದೇ

In Public domain. Digitization Muthulakshmi Research Academy

ಸಮಯದಲ್ಲಿ ಹೊರಬಂತು. ಇದೊಂದು ಮೌಲಿಕ ಕೃತಿ. ಲಿಂಗಾಯತ ಧರ್ಮದ ಆಳ, ಅಗಲ, ವಿಸ್ತಾರವನ್ನು ಈ ಕೃತಿಯಲ್ಲಿ ಅರುಹಿದ್ದಾರೆ. ಈ ಕೃತಿಯಲ್ಲಿ ಡಾ.ಎಂ.ಆರ್.ಸಾಖರೆ, ಪ್ರೊ.ಎಂ.ಆರ್.ಶ್ರಿನಿವಾಸಮೂರ್ತಿ, ಡಾ.ಡಿ.ಸಿ.ಪಾವಟೆ, ಡಾ.ಎಂ.ಎಸ್.ಹುಣಶ್ಯಾಳ, ಡಾ.ಎಂ.ಎಂ.ಕಲಬುರ್ಗಿ, ಜೀರಗೆ ಬಸವಲಿಂಗಪ್ಪ, ಡಾ. ರಾಮಕೃಷ್ಣ ಮರಾಠೆ, ಡಾ.ಸರಜೂ ಕಾಟ್ಕರ್, ಪ್ರಕಾಶ ಗಿರಿಮಲ್ಲನವರ, ಡಾ.ಎನ್.ಜಿ.ಮಹಾದೇವಪ್ಪ, ಡಾ.ಟಿ.ಆರ್.ಚಂದ್ರಶೇಖರ, ಚಂಪಾ, ನೀಲಗಂಗಯ್ಯ ಪೂಜಾರ, ಕೋ.ಚೆನ್ನಬಸಪ್ಪ ಮುಂತಾದವರು ಬರೆದ ಮೌಲಿಕ ಐತಿಹಾಸಿಕ ಲೇಖನಗಳ ಒಂದು ಜ್ಞಾನಭಂಡಾರ ಈ ಕೃತಿ. ಇಂತಹ ಸುಪ್ರಸಿದ್ಧ ಲೇಖಕರು ಬರೆದ ಲೇಖನಗಳನ್ನು ಸಂಪಾದಿಸಿ, ಅಚ್ಚು ಹಾಕಿಸಿದ್ದರು ಬೆಳಗಾವಿಯ ಸರಜೂ ಕಾಟ್ಕರ್. ಅವರಿಗೆ ಬೆನ್ನುಲುಬಾಗಿದ್ದರು ಪ್ರಕಾಶ ಗಿರಿಮಲ್ಲನವರ. ಈ ಕೃತಿಯನ್ನು ಜಗತ್ತಿನ ಮುಂದಿಟ್ಟವರು ಬೆಳದಿಂಗಳು ಪ್ರಕಾಶನ ಬೆಳಗಾವಿಯವರು. ಇದು ಹುಬ್ಬಳ್ಳಿಯ ರ್‍ಯಾಲಿಯಲ್ಲಿ ಬಿಡುಗಡೆಯಾಗಿತ್ತು. "ಬಿಡುಗಡೆಯ ದಿನವೇ ಒಂದು ಲಕ್ಷ ರೂಪಾಯಿಯ ಪುಸ್ತಕಗಳು ಮಾರಾಟವಾದವು"[೧೪] ಎಂದು ಹೆಮ್ಮೆಯಿಂದ ಹೇಳುತ್ತಾರೆ ಪ್ರಕಾಶ ಗಿರಿಮಲ್ಲನವರ. ಪ್ರತಿ ಲಿಂಗಾಯತರು ಓದಬೇಕಾದ ಕೃತಿ.

ಬೀದರ್ ಜಿಲ್ಲೆಯ ಸೋಮನಾಥ ಯಾಳವಾರ ಸಂಪಾದಕತ್ವದಲ್ಲಿ 'ಲಿಂಗಾಯತಂ ಭೊ ಸ್ವತಂತ್ರಶೀಲ' ಎಂಬ ೪೫೦ ಪುಟಗಳ ಒಂದು ಗ್ರಂಥ ಇದೇ ಸಮಯದಲ್ಲಿ ಪ್ರಕಟವಾಯಿತು. ಲಿಂಗಾಯತ ಸ್ವತಂತ್ರ ಎಂದು ಹನ್ನೆರಡನೆಯ ಶತಮಾನದಲ್ಲಿ ಹೇಳಿದೆ. ಸಿದ್ಧರಾಮೇಶ್ವರ ಈ ಒಂದು ವಚನದಲ್ಲಿ.

ಭಕ್ತಿಯುಕ್ತನುಮಲ್ಲ, ಮುಕ್ತಿಗ್ರಾಹಕನಲ್ಲ,
ಪಥದ ವೇದ್ಯನುವಲ್ಲದೆಂತೆಂತೋ?
ಕರ್ಮ ಕಾಯಕನಲ್ಲ, ಕಾಲಾಗ್ನಿಯಲ್ಲ, ತನ್ನಲ್ಲಿ ತಾನೇ
ಆಕಾರಂ ಭೋ! ಆಗಮ ವಯವೋನ್ನಮಃ
ನಾ ದೇವದೇವ ಲಿಂಗಾಯತಂ ಭೋ
ಸ್ವತಂತ್ರಶೀಲ ಕಪಿಲಸಿದ್ಧ ಮಲ್ಲಿನಾಥಾ ಆತನೆ ಅಚ್ಚ ಶರಣಂ ಭೋ

ವೀರಶೈವ ವಾದಿಗಳು ಹಾಗೂ ಪಂಚಾಚಾರರು ವಚನಗಳಲ್ಲಿ ಲಿಂಗಾಯತ ಶಬ್ದವಿಲ್ಲ, ವೀರಶೈವ ಶಬ್ದಗಳು ಇಷ್ಟೊಂದು ಬಾರಿ ಬಂದಿವೆ ಎಂದು ಲೆಕ್ಕಿಗನ ವರದಿ ಒಪ್ಪಿಸುತ್ತಾರೆ. ಬಸವಣ್ಣ ವೀರಶೈವ ಧರ್ಮವನ್ನು 'ಪರಿಷ್ಕರಿಸಿದವ' 'ಸುಧಾರಣೆ ಮಾಡಿದವ' ಎಂದು ಹೇಳುವ ಪಂಚಾಚಾರ್ಯರು ವಚನಗಳನ್ನು ಓದಲಿ. ಲಿಂಗಾಯತ ಒಂದು ಸ್ವತಂತ್ರ ಧರ್ಮ ಎಂದು ವಚನಗಳಲ್ಲಿಯೇ ಇದೆ. ಅದನ್ನು ಓದುಗರಿಗೂ ಹಾಗೂ ಆಲೋಚಕರಿಗೂ ಈ ಗ್ರಂಥದಲ್ಲಿ ನಾಡಿನ ಹೆಸರಾಂತ ಲೇಖಕರ ಬಿಡಿ ಲೇಖನಗಳು ಲಿಂಗಾಯತ ಧರ್ಮ ಹೇಗೆ ಸ್ವತಂತ್ರ

In Public domain. Digitization Muthulakshmi Research Academy

ಧರ್ಮ ಎಂಬುದನ್ನು ಸುಮಾರು ೪೫೦ ಪುಟಗಳಲ್ಲಿ ವಿವರಿಸಿವೆ.[೧೫]

ಶರಣ ಸಾಹಿತ್ಯದ ಮೇಲೆ ನೂರಕ್ಕೂ ಹೆಚ್ಚು ಗ್ರಂಥ ರಚನೆ ಮಾಡಿದ ನಾಡಿನ ಹಿರಿಯ ಚೇತನ ಸಾಣೇಹಳ್ಳಿಯ ಪೂಜ್ಯ ಪಂಡಿತಾರಾಧ್ಯ ಶ್ರೀಗಳು. ಲಿಂಗಾಯತ ಧರ್ಮದ ಮೂಲ ಸಿದ್ಧಾಂತಗಳನ್ನು ಸರಳ ಭಾಷೆಯಲ್ಲಿ ಕನ್ನಡ ನಾಡಿನ ಪತ್ರಿಕೆಗಳಲ್ಲಿ ಹರಿತವಾದ ಲೇಖನಗಳ ಮೂಲಕ ಮತ್ತು ಪುಸ್ತಕಗಳ ಮುಖಾಂತರ ಹರಡುತ್ತಲಿದ್ದಾರೆ. ಅಂದಿನ ದಿನಗಳಲ್ಲಿ ಲಿಂಗಾಯತ ಮತ್ತು ವೀರಶೈವರ ಭಿನ್ನಾಭಿಪ್ರಾಯವನ್ನು ಖಂಡಿಸುತ್ತ 'ಬೀದಿ ರಂಪಾಟ ಬೇಡ' ವೆಂದಿದ್ದರು. ಧರ್ಮ ದಯಾಮೂಲವಾಗಿ ವ್ಯಕ್ತಿಯ ಬದುಕಿನ ರೀತಿ-ನೀತಿಗಳಿಗೆ ಅನ್ವಯಿಸಿದ್ದು. ಅದು ಬೀದಿಯ ರಂಪವಾಗಬೇಕಾಗಿಲ್ಲ. ಭಾರತದಲ್ಲಿರುವವರೆಲ್ಲ ಹಿಂದೂಧರ್ಮದ ಪರಿಧಿಯಲ್ಲಿ ಬರುವರು ಎನ್ನುವ ವಾದ ಒಂದು ಕಡೆ. ವೀರಶೈವ ಧರ್ಮವೂ ಹಿಂದೂ ಧರ್ಮದ ಒಂದು ಭಾಗ ಎಂದು ಅದಕ್ಕೆ ಆಧಾರ ಕೊಡುವ ಪ್ರಯತ್ನ ಇನ್ನೊಂದೆಡೆ. 'ಹಿಂದೂ' ಪದ ಬೌಗೋಳಿಕ ವ್ಯಾಪ್ತಿಗೆ ಸೇರಿದ್ದೇ ಅಥವಾ ಅದೊಂದು ಧರ್ಮವೇ ಎನ್ನುವ ಚರ್ಚೆಯೂ ನಡೆಯುತ್ತಿದೆ. ಅದು ಬೌಗೋಳಿಕ ವ್ಯಾಪ್ತಿಗೆ ಸೇರಿದ್ದು ಎನ್ನುವುದಾದರೆ ಭಾರತದಲ್ಲಿರುವ ಎಲ್ಲ ಧರ್ಮಗಳು ಹಿಂದೂ ಪ್ರದೇಶಕ್ಕೆ ಸೇರಿದವುಗಳೇ. 'ಹಿಂದೂ' ಧರ್ಮ ಎನ್ನುವುದಾದರೆ ಬಸವಣ್ಣನವರು ಪ್ರತಿಪಾದಿಸಿದ 'ಲಿಂಗಾಯತ' ಧರ್ಮ ಅದಕ್ಕೆ ಸೇರುವುದಿಲ್ಲ. ಏಕೆಂದರೆ ಹಿಂದೂ ಧರ್ಮ ಅನೇಕ ಅಸಮಾನತೆಗಳ ಆಗರ. ಅಲ್ಲಿ ಲಿಂಗ ಸಮಾನತೆ ಇಲ್ಲ. ಜಾತ್ಯತೀತ ಮನೋಭಾವವಿಲ್ಲ. ಬಹುದೇವೋಪಾಸನೆ ಇದೆ. ಮೌಢ್ಯವಿದೆ. ಪೌರೋಹಿತ್ಯ ಪ್ರಮುಖವಾಗಿದೆ. ಸ್ಥಾವರ ದೇವರುಗಳಲ್ಲಿ ನಂಬಿಕೆ ಇದೆ. ಕರ್ಮಸಿದ್ಧಾಂತಕ್ಕೆ ಅಂಟಿಕೊಂಡಿದೆ. ಹೀಗೆ ಅಸಮಾನತೆಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಬಸವಣ್ಣನವರು ಪ್ರತಿಪಾದಿಸಿರುವ 'ಲಿಂಗಾಯತ' ಧರ್ಮದಲ್ಲಿ ಸರ್ವರೂ ಸಮಾನರು. ಹೆಣ್ಣು- ಗಂಡು ಎನ್ನುವ ಅಂತರವಿಲ್ಲ. 'ಸಕಲ ಜೀವಾತ್ಮರಿಗೆ ಲೇಸು ಬಯಸುವುದೇ ಈ ಧರ್ಮದ ಧ್ಯೇಯ' ದೇವನೊಬ್ಬ ನಾಮ ಹಲವು ಎನ್ನುವಂತೆ ಏಕದೇವೋಪಾಸನೆಗೆ ಒತ್ತು ಕೊಡಲಾಗಿದೆ. ಇಷ್ಟಲಿಂಗ ಹೊರತು ಸ್ಥಾವರಲಿಂಗ ಪೂಜೆಗೆ ಅವಕಾಶವಿಲ್ಲ. ಇಂಥ ಇನ್ನೂ ಹಲವು ಸಂಗತಿಗಳ ಕಾರಣದಿಂದ ಲಿಂಗಾಯತ ಧರ್ಮ ಹಿಂದೂಧರ್ಮಕ್ಕಿಂತ ವಿಭಿನ್ನವಾದದ್ದು. ಜೈನ, ಬೌದ್ಧ, ಸಿಖ್ ಇತ್ಯಾದಿ ಧರ್ಮಗಳಂತೆ ಲಿಂಗಾಯತವೂ ಒಂದು ಸ್ವತಂತ್ರ ಧರ್ಮ. ಇದು ಹಿಂದೂಧರ್ಮದ ಭಾಗ ಅಲ್ಲವೇ ಅಲ್ಲ. ಲಿಂಗಾಯತ ಎನ್ನುವುದು ಒಂದು ತತ್ವ, ಸಿದ್ಧಾಂತ, ಅದೊಂದು ಜಾತಿಯಲ್ಲ. ಅಂಗದ ಮೇಲೆ ಲಿಂಗ ಧರಿಸಿವರೆಲ್ಲರೂ ಲಿಂಗಾಯತರೇ. ಶ್ರೀಗುರುವಿನಿಂದ ದೀಕ್ಷೆ ಪಡೆದು ಯಾರು

In Public domain. Digitization Muthulakshmi Research Academy

ಬೇಕಾದರೂ ಲಿಂಗಾಯತರಾಗಬಹುದು. ಆಗ ಅವರು ಪೂರ್ವಜನ್ಮವಳಿದು ಪುನರ್ಜಾತರಾಗುವರು. ನರಜನ್ಮ ಹೋಗಿ ಹರಜನ್ಮ ಪ್ರಾಪ್ತವಾಗುವುದು. ಈ ನೆಲೆಯಲ್ಲಿ ಲಿಂಗಾಯತ ಸ್ವತಂತ್ರ ಧರ್ಮ. ಅದರ ಸ್ಥಾಪಕರು ವಿಶ್ವಗುರು ಬಸವಣ್ಣನವರು. ಹನ್ನೆರಡನೆಯ ಶತಮಾನದ ಅನುಭವಿ ಅಲ್ಲಮಪ್ರಭುದೇವರು 'ಬಸವಣ್ಣ ಎನಗೆಯೂ ಗುರು ನಿನಗೆಯೂ ಗುರು' ಎಂದು ಗೌರವಿಸಿದ್ದಾರೆ. 'ದೇವರಿಗೆ ಹೆಸರಿಟ್ಟವರೇ ಬಸವಣ್ಣನವರು' ಎಂದು ಸಿದ್ಧರಾಮೇಶ್ವರರು ಹೇಳುತ್ತಾರೆ. 'ಬಸವಣ್ಣನಿದ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರ' 'ಬಸವಣ್ಣನೇ ಗುರು' ಎನ್ನುವ ನಿರ್ಣಯ ಶರಣೆ ಮಹಾದೇವಿ ಅಕ್ಕನದು. ಹೀಗೆ ಬಸವಣ್ಣನವರ ಸಮಕಾಲೀನ ಶರಣರು ಬಸವಣ್ಣನವರೇ ಲಿಂಗಾಯತದ ಧರ್ಮಗುರು ಎಂದು ಮನದುಂಬಿ ಹೇಳಿದ್ದಾರೆ. 'ಲಿಂಗಾಯತ' ಶಬ್ದವು ಎಂಟು ವಚನಕಾರರ ಹತ್ತು ವಚನಗಳಲ್ಲಿ ಹನ್ನೆರಡು ಕಡೆ ಪ್ರಸ್ತಾಪಿತವಾಗಿದೆ. ಲಿಂಗವಂತ ಶಬ್ದ ಇಪ್ಪತ್ಮೂರು ವಚನಕಾರರ ನೂರಾರು ವಚನಗಳಲ್ಲಿ ನೂರ ಎಪ್ಪತ್ಮೂರು ಕಡೆ ಬಳಕೆಯಾಗಿದೆ. ಲಿಂಗಾಯತ ಲಿಂಗವಂತ ಸಮಾನಾರ್ಥಕ ಪದಗಳು.

ಲಿಂಗವಂತನ ನಡೆ ನುಡಿ ಚಾರಿತ್ರ ನಿಂದಕವನಾಡಿದಡೆ
ಆ ಲಿಂಗ ನಿಮ್ಮ ಹಲ್ಲ ಕಳವ; ಆ ಲಿಂಗ ನಿಮ್ಮ ನರಕಕ್ಕಿಕ್ಕುವ
ಆ ಲಿಂಗವಂತ ಲಿಂಗಪ್ರಾಣಿಯಾಗಿಪ್ಪ
ಇದು ಸತ್ಯವಚನ ಇದ ಕೇಳಿ ಲಿಂಗವಂತನ ನಾಸ್ತಿಕವನಾಡಿದಡೆ
ರೌರವನರಕದಲ್ಲಿಕ್ಕುವ ಕಾಣಾ ಗುಹೇಶ್ವರಾ

'ಲಿಂಗಾಯತ' ಧರ್ಮ ಎನ್ನುವುದು ಅರ್ಥಪೂರ್ಣ. ವೀರಶೈವ- ಲಿಂಗಾಯತ ಧರ್ಮ ಎನ್ನುವವರು ಬಸವಣ್ಣನವರನ್ನು ಧರ್ಮಗುರು ಎಂದು ಒಪ್ಪಲು ಸಿದ್ಧರಿಲ್ಲ. ಅವರು ಹೇಳುವ ಪಂಚಾಚಾರ್ಯರನ್ನು ಗುರು ಎಂದು ಲಿಂಗಾಯತ ಧರ್ಮೀಯರು ಒಪ್ಪಲು ಸಿದ್ಧರಿಲ್ಲ. ಲಿಂಗಾಯತ, ವೀರಶೈವ ಎನ್ನುವ ಪದಗಳು ಹಿಂದೆ ಒಂದೇ ಅರ್ಥದಲ್ಲಿ ಬಳಕೆಯಾಗುತ್ತಿದ್ದವು. ಕ್ರಮೇಣ ಗುರು ಮತ್ತು ವಿರಕ್ತವರ್ಗದ ಗುರು – ಜಗದ್ಗುರುಗಳ ತಿಕ್ಕಾಟದಿಂದ ಗುರುವರ್ಗದ ಮಠಾಧೀಶರು ಪಂಚಾಚಾರ್ಯರನ್ನೂ, ವಿರಕ್ತವರ್ಗದ ಮಠಾಧೀಶರು ಬಸವಣ್ಣನವರನ್ನೂ ತಮ್ಮ ಗುರುಗಳೆಂದು ಅಂಗೀಕರಿಸಿದ ನೆಲೆಯಲ್ಲಿ ಇವೆರಡು ಬೇರೆ ಬೇರೆ ಎನ್ನುವಂತಾಗಿದೆ. ಉಭಯ ವರ್ಗದವರೂ ಬಸವಣ್ಣನವರನ್ನೇ ಗುರು ಎಂದು ಒಪ್ಪಿಕೊಳ್ಳುವದಾದರೆ ಸಮಸ್ಯೆ ಉದ್ಭವಿಸದು. ಆದರೆ ಇದಕ್ಕೆ ಗುರುಪರಂಪರೆಯ ಮಠಾಧೀಶರು ಸಿದ್ಧರಿಲ್ಲ. ಅವರು ಬಸವಣ್ಣನವರನ್ನು ಮತೋದ್ಧಾರಕ ಎನ್ನುತ್ತಾರೆಯೇ ಹೊರತು ಮತಸ್ಥಾಪಕ ಎನ್ನುವುದಿಲ್ಲ. ಮತವೇ ಬೇರೆ ಧರ್ಮವೇ ಬೇರೆ. ಅದು ಚರ್ಚೆಯ ವಿಷಯ. ಅದೇನೇ ಇದ್ದರೂ ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಕರು.

In Public domain. Digitization Muthulakshmi Research Academy

ಈ ನೆಲೆಯಲ್ಲಿ ಅವರವರ ಧರ್ಮ ಅವರಿಗೆ ಶ್ರೇಷ್ಠವಾದದ್ದು. ಇದನ್ನರಿತು ತಮ್ಮ ಧರ್ಮದ ತತ್ವ ಸಿದ್ಧಾಂತಗಳನ್ನು ವ್ಯಕ್ತಿಗತ ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಬೇಕಿದೆ. ಅದನ್ನು ಚರ್ಚೆಯ ವಿಷಯವಾಗಿಸಿ ಹಗರಣ ಮಾಡುವ ಅಗತ್ಯವಿಲ್ಲ. ಲಿಂಗಾಯತ ಧರ್ಮೀಯರಿಗೆ 'ಬಸವಣ್ಣನವರೇ ಧರ್ಮಗುರುಗಳು' 'ವಚನ ಸಾಹಿತ್ಯವೇ ಧರ್ಮಗ್ರಂಥ'; 'ಲಿಂಗಾಯತ' ಧರ್ಮ ನಡೆನುಡಿ ಸಿದ್ಧಾಂತಕ್ಕೆ ಮನ್ನಣೆ ನೀಡಿದೆ. ಮಾದಾರ ಚೆನ್ನಯ್ಯನವರು ಹೇಳುವಂತೆ 'ನಡೆ-ನುಡಿ ಸಿದ್ಧಾಂತವಾದಲ್ಲಿ ಕುಲ-ಹೊಲೆ ಸೂತಕವಿಲ್ಲ'[೧೬] ಈ ದಿಶೆಯಲ್ಲಿ ಗುರು ಬಸವಣ್ಣನವರು ಪ್ರತಿಪಾದಿಸಿದ ಲಿಂಗಾಯತ ಧರ್ಮ ಒತ್ತು ಕೊಟ್ಟದ್ದು ನಡೆ ನುಡಿ ಒಂದಾದ ಅಂತರಂಗ ಮತ್ತು ಬಹಿರಂಗ ಶುದ್ಧಿಗೆ ಎಂಬ ಒಂದು ವಿಸ್ತೃತ ಲೇಖನವನ್ನು ಪ್ರಜಾವಾಣಿ ಪ್ರಕಟಿಸಿತ್ತು.

ಪೂಜ್ಯ ನಿಜಗುಣಪ್ರಭು ತೋಂಟದಾರ್ಯ ಶಾಖಾಮಠ ಮುಂಡರಗಿಯ ಶ್ರೀಗಳು ಬಸವನಾಡಿನ ಚೇತನ. ಅವರ ಅನುಭಾವದ ನುಡಿಗಳನ್ನು ಆಲಿಸುತ್ತಿದ್ದರೆ 'ಗಡಿಯಾರದ ಮುಳ್ಳುಗಳು ಅಷ್ಟೇಕೇ ಜೋರಾಗಿ ಓಡುತ್ತಿವೆ' ಎನಿಸದಿರದು. ಕರ್ನಾಟಕದಲ್ಲಿ ವಿರಕ್ತಪರಂಪರೆಯ ಮಠಗಳಲ್ಲಿ ಬಸವಣ್ಣನವರು ಹಾಗೂ ಲಿಂಗಾಯತರ ಬಗ್ಗೆ ಕರಾರುವಾಕ್ಕಾಗಿ ಮಾತನಾಡುವವರಲ್ಲಿ ಶ್ರೀ ನಿಜಗುಣಾನಂದ ಸ್ವಾಮಿಗಳು ಅಗ್ರಗಣ್ಯರು. ಅವರು ಬೀದರ್ ನಗರದಲ್ಲಿ ನುಡಿದ ನುಡಿಗಳ ಸಂಕಲನ "ಶರಣ ಧರ್ಮ ದರ್ಶನ ಪ್ರವಚನ ಸಾರ"[೧೭] ಎಂಬ ಕೃತಿಯನ್ನು ಹೊರತಂದಿದ್ದರು ಹೂವಿನಹಳ್ಳಿಯ ಮಹಾಂತೇಶ ಎಸ್. ಕಂಬಾರ ಅವರು. ೩೨೫ ಪುಟಗಳ ಕೃತಿ ಓದುತ್ತಿದ್ದಂತೆ ಸ್ವಾಮೀಜಿಯವರ ಮಾತುಗಳು ಕಿವಿಯಲ್ಲಿ ಬಿದ್ದಂತಾಗವುದು. ಈ ಕೃತಿಯೂ ಕೂಡ ಲಿಂಗಾಯತ ಹೋರಾಟದ ಸಮಯದಲ್ಲಿ ಬಿಡುಗಡೆಯಾಯಿತು.

ಲಿಂಗಾಯತ ಜಾಗೃತಿ ಕ್ಷೇತ್ರ ಎಂದೇ ಪರಿಚಿತ ಗದುಗಿನ ತೋಂಟದಾರ್ಯ ಮಠ. ಈ ಮಠದಲ್ಲಿ ಮಠದ ಕಾಯಕ ಮಾಡುತ್ತ, ವಿದ್ಯಾರ್ಜನೆಯ ಹಸಿವನ್ನು ತಣಿಸುತ್ತ ಸಾಹಿತ್ಯದ ಕೃಷಿಯನ್ನೂ ಮಾಡಿದವರು ಲೇಖಕ ಪ್ರಕಾಶ ಗಿರಿಮಲ್ಲನವರ. ಇವರ 'ವಚನ ಧರ್ಮ ವೈಚಾರಿಕ ವಿವೇಚನೆ" ಲಿಂಗಾಯತ ಜಾಗೃತಿಯ ಸಮಯವಾದ ೨೦೧೭-೧೮ರ ಅವಧಿಯಲ್ಲಿ ಪ್ರಕಟಣೆಯಾಯಿತು. ೧೬೨ ಪುಟಗಳ ಈ ಕೃತಿಯಲ್ಲಿ ಲೇಖಕರು ಶರಣರ ವಚನಗಳನ್ನು ವೈಚಾರಿಕವಾಗಿ ವಿಶ್ಲೇಷಣೆ ಮಾಡಿದ್ದಾರೆ.

ಡಾ.ಅಮರೇಶ ನುಗಡೋಣಿ ಅವರು ತಮ್ಮ ಸಂಪಾದಕತ್ವದಲ್ಲಿ 'ಶೂನ್ಯ ಸಂಪಾದನೆಗಳು: ಸಾಂಸ್ಕೃತಿಕ ಮುಖಾಮುಖಿ' ಎಂಬ ವಿದ್ವತ್ಪೂರ್ಣ ಲೇಖನಗಳ ಗ್ರಂಥ ತಂದರು.[೧೮]

In Public domain. Digitization Muthulakshmi Research Academy

ಮಾಧ್ಯಮಗಳ ಕೊಡುಗೆ: ಮಾಧ್ಯಮಗಳು ಲಿಂಗಾಯತ ಹೋರಾಟದ ಸಮಯದಲ್ಲಿ ಅದ್ಭುತವಾದ ಕಾರ್ಯ ಮಾಡಿದ್ದವು. ದೃಶ್ಯಮಾಧ್ಯಮಗಳು ಲಿಂಗಾಯತರ ಒಳಪಂಗಡದ ಜಗಳವನ್ನು ವೈಭವೀಕರಿಸಿ ಜನರಿಗೆ ಮನರಂಜನೆಯನ್ನು ಒದಗಿಸುವ ಕೆಲಸವನ್ನೂ ಮಾಡಿದ್ದವು. ನ್ಯಾಶನಲ್ ನ್ಯೂಸ್ ಚಾನಲ್‌ಗಳು ಲಿಂಗಾಯತ ಧರ್ಮದ ಹೋರಾಟವನ್ನು ರಾಷ್ಟ್ರಮಟ್ಟಕ್ಕೆ ತಲುಪಿಸಿದ್ದವು. ನಾನು ಟೈಮ್ಸ್ ನೌ, ಇಂಡಿಯಾ ಟುಡೆ, ಎನ್‌ಡಿ ಟಿ.ವಿ, ನ್ಯೂಸ್ ಎಕ್ಸ್, ಇವುಗಳಲ್ಲದೆ ಅನೇಕ ರಾಷ್ಟ್ರೀಯ ಮಾಧ್ಯಮಗಳೊಂದಿಗೆ ನನ್ನ ವಿಚಾರ ಹಂಚಿಕೊಂಡಿದ್ದೆ. ಬಿ.ಬಿ.ಸಿ.ಯು ನಮ್ಮನ್ನು ಹುಡುಕಿಕೊಂಡು ಬಂದು ಲಿಂಗಾಯತವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಮುಟ್ಟಿಸಿತ್ತು.

ಕನ್ನಡದ ವಿಶ್ವಾಸಾರ್ಹ ಪತ್ರಿಕೆಯಾದ 'ಪ್ರಜಾವಾಣಿ'ಯು ಲಿಂಗಾಯತ ಧರ್ಮದ ಬೇಡಿಕೆಗೆ ಹೊಸ ಆಯಾಮ ನೀಡಿತ್ತು. ಎರಡು ವರ್ಷಗಳ ಕಾಲ ನಿರಂತರವಾಗಿ ಲಿಂಗಾಯತ ಧರ್ಮದ ಬಗ್ಗೆ ನಡೆಯುವ ಚರ್ಚೆ, ಸುದ್ದಿಗಳನ್ನು ಓದುಗರಿಗೆ ಒದಗಿಸುತ್ತಿತ್ತು. ಗೌರಿ ಲಂಕೇಶ್ ಪತ್ರಿಕೆಯು ಸಮಸಮಾಜದ ಕನಸನ್ನು ಕಂಡ ಪತ್ರಿಕೆಯಾಗಿತ್ತು. ಬಸವಣ್ಣನವರ ಸಮಾಜವಾದದ ಸಿದ್ಧಾಂತದ ಪ್ರಬಲ ಸಮರ್ಥಕರಾಗಿ ಕೆಲಸ ಮಾಡಿತ್ತು. ಸ್ವತಃ ಗೌರಿಯವರ ಲೇಖನಗಳಲ್ಲದೆ, ವಿಶ್ವಾರಾಧ್ಯ ಸತ್ಯಂಪೇಟೆ, ಯೋಗೇಶ್ ಮಾಸ್ಟರ್‌ರವರು ನಿರಂತರವಾಗಿ ಜನರಿಗೆ ಹೋರಾಟದ ಕೆಚ್ಚನ್ನು ಮೂಡಿಸುತ್ತ, ಸತ್ಯವನ್ನು ತಿಳಿಸುತ್ತ ಚಳುವಳಿಯ ಕಾವನ್ನು ಕಾಪಾಡಿದ್ದರು. ಕೊನೆಗೊಂದು ದಿನ ಇದೇ ಕಾರಣಕ್ಕಾಗಿಯೇ ಗೌರಿ ಲಂಕೇಶರು ಹಂತಕನ ಗುಂಡಿಗೆ ಬಲಿಯಾದರು.

ಈ ಎರಡು ವರ್ಷಗಳ ಅವಧಿಯಲ್ಲಿ ಲಿಂಗಾಯತ ಸಾಹಿತ್ಯ ಅದ್ವಿತೀಯವಾಗಿ ಬೆಳೆಯಿತು. ಅನೇಕ ಸಾಹಿತಿಗಳು, ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ತಮ್ಮ ಕೃತಿಗಳನ್ನು ಪ್ರಕಟಿಸಿದ್ದರು.

ಕೊನೆ ಟಿಪ್ಪಣಿಗಳು

೧. ಮನು ವಿ. ದೇವದೇವನ್ ಒಬ್ಬ ಸಂಶೋಧಕ ಮತ್ತು ಪತ್ರಕರ್ತ ಇವರು ಬೀದರ್ ರ್‍ಯಾಲಿಯ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಬರೆದ ಲೇಖನ.

೨. The article published by Indian Express. Available archives article of I.E, Published on July 21 2017.

೩. The Hindu: Updated by S.Bageshree on July 29, 2017: available Hindu archives.

೪. The article Published by Indian Express. Available archives article of I.E, Published on July 21 2017.

In Public domain. Digitization Muthulakshmi Research Academy

೫. ಮನವಿ ಪತ್ರದ ಮೂಲ ದಾಖಲೆಯನ್ನು ಲಿಂಗಾಯತ ಹೋರಾಟ ಸಮನ್ವಯ ಸಮಿತಿಯ ಅಧ್ಯಕ್ಷರಾದ ಬೀದರ್ ಪಟ್ಟಣ ನಿವಾಸಿ ಶ್ರೀಕಾಂತಸ್ವಾಮಿ ನೀಡಿದ್ದಾರೆ. ಅವರಿಗೆ ಅಭಿನಂದನೆಗಳು.
೬. ಪ್ರಜಾವಾಣಿ , ಜುಲೈ ೨೬,೨೦೧೭.
೭. ಶರಣಶ್ರೀ, ಪ್ರಧಾನ ಸಂಪಾದಕರು, ಡಾ.ಎಂ.ಎಂ.ಕಲಬುರ್ಗಿ, ಪು. ಸಂ. VI.
೮. ಹರಿಹರನ ರಗಳೆಗಳು, ಒಂದು ಸಾಂಸ್ಕೃತಿಕ ಅಧ್ಯಯನ. ಸಂಶೋಧಕರು. ಡಾ. ಸದಾನಂದ ಪಾಟೀಲ, ಪು. ಸಂ. ೧೨೯.
೯. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ, ಸಂಪುಟ ೧೧, ಚರಿತ್ರೆ ಸಾಹಿತ್ಯ ೨.ಪು. ಸಂ. ೩,೪.
೧೦. ಲಿಂಗಾಯತ ಸ್ವತಂತ್ರ ಧರ್ಮ, ಲೇಖಕರು. ಡಾ. ಲಕ್ಷ್ಮಣ ಕೌಂಟೆ. ಪು. ಸಂ. ೧೨,೧೩
೧೧. "ಲಿಂಗಾಯತ ಧರ್ಮದಲ್ಲಿ ಏನುಂಟು ಏನಿಲ್ಲ", ಲೇಖಕರು, ರಂಜಾನ್ ದರ್ಗಾ, ಲಡಾಯಿ ಪ್ರಕಾಶನ, ಗದಗ.
೧೨. ಡಾ.ಎಂ.ಎಂ. ಕಲಬುರ್ಗಿ ಲಿಂಗಾಯತ ಸ್ವತಂತ್ರ ಧರ್ಮ, ಲೇಖಕರು, ಡಾ. ಎಂ.ಎಂ. ಕಲಬುರ್ಗಿ, ಪ್ರಕಾಶಕರು, ವಚನ ಪಿತಾಮಹ ಫ. ಗು.ಹಳಕಟ್ಟಿ ಸಂಶೋಧನಾ ಕೇಂದ್ರ ವಿಜಾಪುರ.
೧೩. ಅಡ್ಡ ಪಲ್ಲಕ್ಕಿ ಉತ್ಸವ ಮತ್ತು ದಸರಾ ದರ್ಬಾರು, ಲೇಖಕರು. ಪ್ರೊ. ಸಿ.ಎಚ್. ಮರಿದೇವರು, ಉದಯಬಾನು ಪ್ರಕಾಶನ, ತುಮಕೂರು. ೧೪.
೧೪. ಲಿಂಗಾಯತ ಸಂಸ್ಕೃತಿ, ಪ್ರಧಾನ ಸಂಪಾದಕರು, ಸರಜೂ ಕಾಟ್ಕರ್, ಬೆಳದಿಂಗಳ ಪ್ರಕಾಶನ, ಬೆಳಗಾವಿ.
೧೫. ಲಿಂಗಾಯತಂ ಭೋ ಸ್ವತಂತ್ರಶೀಲ, ಪ್ರಧಾನ ಸಂಪಾದಕರು, ಸೋಮನಾಥ ಯಾಳವಾರ.
೧೬. ಪ್ರಜಾವಾಣಿ, ದಿನಪತ್ರಿಕೆ ಜುಲೈ ೨೫, ೨೦೧೭.
೧೭. ಶರಣ ಧರ್ಮ ಪ್ರವಚನ ಸಾರ, ಸಂಪಾದಕರು, ಮಹಾಂತೇಶ ಎಸ್. ಕುಂಬಾರ

In Public domain. Digitization Muthulakshmi Research Academy

ಅಧ್ಯಾಯ ನಾಲ್ಕು

ಗಟ್ಟಿಗೊಂಡ ಲಿಂಗಾಯತ ಆಕ್ರೋಶ

ಬೀದರ್‌ನಲ್ಲಿ ನಡೆದ ಲಿಂಗಾಯತ ಸಭೆಯ ಅಭೂತಪೂರ್ವ ಯಶಸ್ಸು ಲಿಂಗಾಯತರಲ್ಲಿ ಒಂದು ಹೊಸ ಹುಮ್ಮಸ್ಸನ್ನು ಸೃಷ್ಟಿಸಿತ್ತು. ಲಿಂಗಾಯತದ ಹಸಿವು ಜನಕ್ಕಿದೆ ಎಂಬ ವಾಸನೆ ರಾಜಕೀಯ ನಾಯಕರಿಗೆ ತಲುಪಲಾರಂಭಿಸಿತ್ತು. ಈಗಾಗಲೇ ಭಾರತೀಯ ಜನತಾ ಪಕ್ಷ ಹಿಂದುತ್ವದ ಅಜೆಂಡಾದ ಮೇಲೆ ರಾಜಕೀಯ ಲಾಭ ಗಳಿಸಿದ ಉದಾಹರಣೆ ಅವರೆದುರಿಗಿತ್ತು. ಹಿಂದುತ್ವದ ಅಶ್ವಮೇಧವನ್ನು ಕಟ್ಟಿಹಾಕುವುದು ಕೇವಲ ಅಲ್ಪಸಂಖ್ಯಾತರ ಓಲೈಕೆಯಿಂದ ಮಾತ್ರ ಸಾಧ್ಯವಿರಲಿಲ್ಲ. ಬಹುಸಂಖ್ಯಾತರಲ್ಲಿ ಒಂದು ಸಮಾಜವನ್ನು ತನ್ನತ್ತ ತಿರುಗಿಸಿಕೊಂಡು ರಾಜಕೀಯ ಯಶಸ್ಸು ಸಾಧಿಸಬಹುದೆಂದು ಕಾಂಗ್ರೆಸ್ ನಾಯುಕರಿಗೆ ಅನಿಸಿದ್ದರಲ್ಲಿ ತಪ್ಪಿಲ್ಲ. ಇಂತಹದೊಂದು ತಂತ್ರವನ್ನು ರಾಜಕೀಯ ಪಕ್ಷಗಳು ಹುಡುಕುವುದರಲ್ಲಿ ತಪ್ಪು ಕಾಣದು. ಅದು ಅವರ ರಾಜಕೀಯ ತಂತ್ರಗಾರಿಕೆ. 'Sometimes, a random move by a political party may yield big political dividends and seeing this, his followers and people may term him a visionary and master strategist'[1] (ರಾಜಕೀಯುದಲ್ಲಿ ಕೆಲವು ನಡೆಗಳು ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚಿನ ಯಶಸ್ಸು ಗಳಿಸಿ ಅತ್ಯಂತ ಜನಪ್ರಿಯವಾಗುತ್ತವೆ. ಆ ಘಟನೆಗೆ ಕಾರಣನಾದ ನಾಯಕನನ್ನು ಶ್ರೇಷ್ಠ ದಾರ್ಶನಿಕನನ್ನಾಗಿಸಿ ಬಿಡುತ್ತವೆ.) ಎಂದು ಬರೆಯುತ್ತಾರೆ, Deccam Chronicle ಪತ್ರಿಕೆಯವರು. ಇದು ಒಂದು ಪ್ರಯತ್ನ. ಪ್ರಯತ್ನಕ್ಕೆ ಯಾವಾಗಲೂ ಯಶಸ್ಸು ಲಭಿಸುತ್ತದೆ ಎನ್ನುವುದೂ ತಪ್ಪು. ಪ್ರಯತ್ನಕ್ಕೆ ಯಶಸ್ಸು

In Public domain. Digitization Muthulakshmi Research Academy

ಸಿಗದೆಂದು ಸುಮ್ಮನಿದ್ದರೆ ಇಂದು ಬಸವಣ್ಣನವರು ಜೀವಂತವಾಗಿರುತ್ತಿರಲಿಲ್ಲ. ಜಯಾಪಜಯ ಒಂದೇ ನಾಣ್ಯದ ಎರಡು ಮುಖಗಳು. 'ಅಧಿಕಾರಾವಧಿಯ ಐದನೆಯ ವರ್ಷವನ್ನು ಬಿಟ್ಟರೆ ರಾಜ್ಯ ಕಾಂಗ್ರೆಸ್ ಸರ್ಕಾರ ಮೊದಲ ನಾಲ್ಕು ವರ್ಷಗಳ ಕಾಲ ಎಲ್ಲ ಹಂತಗಳಲ್ಲಿ ಲಿಂಗಾಯುತವಿರೋಧಿ ಧೋರಣೆಯನ್ನು ಪ್ರದರ್ಶಿಸಿದ್ದು ವಾಸ್ತವ. ಕಡೆ ವರ್ಷ ಎಚ್ಚೆತ್ತು, ಹಲವು ಲಿಂಗಾಯತ ಪರ ಭಾವನಾತ್ಮಕ ಕ್ರಮಗಳನ್ನು ಕೈಗೊಂಡಿತು'[9] ಎಂದು ಹಿರಿಯ ಪತ್ರಕರ್ತ ಡಿ.ಉಮಾಪತಿ ಬರೆಯುತ್ತಾರೆ. ತಡವಾಗಿಯಾದರೂ ಆಳುವ ಪಕ್ಷ ಲಿಂಗಾಯತರ ನೈಜವಾದ ಬೇಡಿಕೆಗೆ ಸ್ಪಂದಿಸುವುದಾಗಿ ಹೇಳಿದ್ದು ಲಿಂಗಾಯತರಿಗೆ ಹೆಮ್ಮೆ ತರಿಸಿತ್ತು.

ಇಡೀ ದೇಶದಲ್ಲಿ ಕಾಂಗ್ರೆಸ್ ಪಕ್ಷ ಪತನ ಕಂಡಾಗ, ಈ ಹಿಂದೆಯೂ ಕರ್ನಾಟಕ ರಾಜ್ಯವು ಕಾಂಗ್ರೆಸ್ ಪಕ್ಷಕ್ಕೆ ಜೀವದಾನ ನೀಡಿತ್ತು. ತುರ್ತುಪರಿಸ್ಥಿತಿಯ ನಂತರ ಇಂದಿರಾಗಾಂಧಿಯವರು ಅಸಹಾಯಕರಾಗಿ ಮುಖ ಮುಚ್ಚಿಕೊಂಡು ಕುಳಿತಾಗ, ದೇವರಾಜ ಅರಸು ಅವರನ್ನು ಚಿಕ್ಕಮಗಳೂರಿಗೆ ಕರೆತಂದು,ಇಂದಿರಾ ಎಂಬ ಕರ್ನಾಟಕದ ಹಿರಿಮಗಳಿಗೆ ಲೋಕಸಭೆಯ ಸದಸ್ಯತ್ವದ ಕಾಣಿಕೆಯನ್ನು ನೀಡಿತ್ತು. ನೈತಿಕವಾಗಿ ಕುಸಿದುಹೋಗಿದ್ದ ಇಂದಿರಾಗಾಂಧಿಯವರನ್ನು ಪುನಃ ಪ್ರಧಾನಿಯನ್ನಾಗಿ ಮಾಡಿದ್ದೇ ಕರ್ನಾಟಕ ಕಾಂಗ್ರೆಸ್ ಪಕ್ಷ. ಮೋದಿ ಎಂಬ ಬಿರುಗಾಳಿ ದೇಶದಲ್ಲೆಡೆ ಬೀಸಿದಾಗ ತರೆಗಲೆಗಳಂತೆ ಹಾರಿಹೋಗಿದ್ದ ಕಾಂಗ್ರೆಸ್ಸಿಗೆ ಕರ್ನಾಟಕ ಭರವಸೆಯ ಬೆಳಕನ್ನು ತೋರಿಸಿತ್ತು. ವಿಧಾನಸಭೆಯ ಉಪಚುನಾವಣೆಗಳು ಕಾಂಗ್ರೆಸ್ ಪಕ್ಷ ಎಲ್ಲವನ್ನು ಕಳೆದುಕೊಂಡಿಲ್ಲ ಎಂದು ಸಾರಿತ್ತು. ಲಿಂಗಾಯತರಿಗೆ ಅಸ್ಮಿತೆಯನ್ನು ನೀಡಿದರೆ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬಹುದೆಂದಿದ್ದರು ಸಚಿವ ಎಂ.ಬಿ. ಪಾಟೀಲರು. ಸಚಿವ ಪಾಟೀಲರ ಮಾತಿಗೆ ಸಮ್ಮತಿಸಿದ್ದರು ಮುಖ್ಯಮಂತ್ರಿ ಸಿದ್ದರಾಮಯ್ಯನವರು. ಇವರಿಬ್ಬರ ಅಂತರಾಳ ಬಗೆದರೆ ಇವರಿಬ್ಬರಲ್ಲಿಯೂ ಸಾಮಾಜಿಕ ನ್ಯಾಯದ ಸಸಿಯನ್ನು ಕಾಣಬಹುದು. ಇವರಿಬ್ಬರೂ ಕಾಯಕತತ್ವದಲ್ಲಿ ನಂಬಿಕೆ ಇಟ್ಟವರು. ಬಸವಸಿದ್ಧಾಂತವನ್ನು ಒಪ್ಪಿಕೊಂಡವರು. ದಾಸೋಹವನ್ನು ನಿಜ ಅರ್ಥದಲ್ಲಿ ಪಾಲಿಸಿದವರು. ಇವರಿಬ್ಬರೂ ಜಂಗಮರು. ಸ್ಥಾವರವಿರೋಧಿಗಳು. ಮೇಲ್ನೋಟಕ್ಕೆ ಇವರ ನಡೆ ರಾಜಕೀಯ ಲಾಭಕ್ಕಾಗಿ ಎಂಬಂತೆ ಕಂಡರೂ, ಇವರಿಬ್ಬರೂ ಅಂತರಾತ್ಮದಲ್ಲಿ ಬಸವಣ್ಣನವರ ಅನುಯಾಯಿಗಳು.

ಅಕ್ಟೋಬರ್ ಮೊದಲ ವಾರದಲ್ಲಿ ತಮ್ಮ ಮನೆಗೆ ಕರೆದಿದ್ದರು ಸಚಿವ ಎಂ.ಬಿ.ಪಾಟೀಲರು. 'ಒಂದು ಸಭೆ ಮಾಡೋಣ' ಎಂದರು ಸಭೆಯ ರೂಪರೇಷೆಗಳನ್ನು ಅವರ ಆಪ್ತ ಅಧಿಕಾರಿಗಳೊಂದಿಗೆ ಚರ್ಚಿಸಿ ಎಂದಿದ್ದರು.

In Public domain. Digitization Muthulakshmi Research Academy

ಅವರ ಆತ್ಮೀಯರಲ್ಲಿ ಒಬ್ಬರಾದ ಪ್ರೊ.ಗಲಗಲಿ ಅವರೊಂದಿಗೆ ಈ ವಿಷಯವಾಗಿ ಸುದೀರ್ಘ ಚರ್ಚೆ ಮಾಡಿದ್ದೆವು. ಎರಡು ಸಾವಿರ ಜನ ಸೇರಿ ಲಿಂಗಾಯತದ ಬಗ್ಗೆ ಚರ್ಚೆ ಮಾಡೋಣ ಎಂದು ಎಲ್ಲರೂ ಸೂಚಿಸಿದರು. ಡಾ.ಜಯಣ್ಣ ಮೊದಲಬಾರಿ ಭೇಟಿಯಾಗಿದ್ದು ಇದೇ ಸಂದರ್ಭದಲ್ಲಿ. ಕಲ್ಬುರ್ಗಿಯಿಂದ ಪ್ರೊ. ಮಾಕಳ ಬಂದಿದ್ದರು. ಲಿಂಗಾಯತ ಧರ್ಮದ ಬಗ್ಗೆ ಅವರು ದಾಖಲೆಗಳನ್ನು ಸಂಗ್ರಹಿಸುತ್ತಿದ್ದರು. ಭಾರತ ಸರ್ಕಾರ ಜೈನಧರ್ಮಕ್ಕೆ ಮಾನ್ಯತೆ ನೀಡುವ ಸಂದರ್ಭದಲ್ಲಿ ಎದುರಿಸಿದ ಅಡೆತಡೆಗಳನ್ನು ಅವರು ಅಭ್ಯಾಸ ಮಾಡಿದ್ದರು. ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಪ್ರಿನ್ಸಿಪಲ್ ಸೆಕ್ರೆಟರಿ ಆಗಿ ಸೇವೆ ಸಲ್ಲಿಸುತ್ತಿದ್ದ ಸಮಯದಲ್ಲಿ ಡಾ. ಜಾಮದಾರ ಅವರನ್ನು ನಾಲ್ಕಾರು ಬಾರಿ ಡಾ.ಕಲಬುರ್ಗಿಯವರ ಜೊತೆಯಾಗಿ ಕಂಡಿದ್ದೆ. ನಮ್ಮ ಪರಿಚಯ 'ಹಲೋಕ್ಕೆ' ಮಾತ್ರ ಸೀಮಿತವಾಗಿತ್ತು. ಅವರು ನಾವೆಲ್ಲರೂ ಸೇರಿ ಮೊದಲಬಾರಿ ಸಚಿವರ ಆಪ್ತಕಚೇರಿಯಲ್ಲಿ ಸಭೆ ಮಾಡಿದ್ದೆವು.

ಸಭೆಗೆ ವಿರಕ್ತಮಠಗಳ ಪೂಜ್ಯರನ್ನು ಮಾತ್ರ ಕರೆಯಲು ಉದ್ದೇಶಿಸಿದ್ದೆವು. ಹಿಂದೆ ಕೂಡಲಸಂಗಮದಲ್ಲಿ ಗುರು-ವಿರಕ್ತರ ಸಭೆಯ ನಂತರ ಗುರುವರ್ಗದವರ ಅಂತರಂಗದ ಅರಿವು ನಮಗಿತ್ತು. ಅವರು ಬಸವಣ್ಣನವರನ್ನು ಧರ್ಮಸ್ಥಾಪಕರು ಎಂದು ಒಪ್ಪಿಕೊಳ್ಳಲಾರದು ಎಂಬ ಸಂಗತಿ ನಮಗೆ ಮನದಟ್ಟಾಗಿತ್ತು. ನಾಡಿನ ಪ್ರಮುಖ ವಿರಕ್ತಮಠಗಳಿಗೆ ಅಹ್ವಾನ ನೀಡಲು ಸಿದ್ಧತೆಗಳು ಪ್ರಾರಂಭವಾದವು. ಗದುಗಿನ ತೋಂಟದಾರ್ಯ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿಯವರ ನೇತೃತ್ವದಲ್ಲಿ ಸಭೆಯ ಆಯೋಜನೆ ಮಾಡಲು ನಿರ್ಧರಿಸಿದ್ದೆವು. ಬೆಳಗಾವಿ ರುದ್ರಾಕ್ಷಿಮಠದ ಶ್ರೀ ಸಿದ್ಧರಾಮಸ್ವಾಮಿಗಳು, ಬಾಲ್ಕಿಯ ಹಿರೇಮಠದ ಶ್ರೀ ಬಸವಲಿಂಗ ಪಟ್ಟದ್ದೇವರು, ಕೂಡಲಸಂಗಮ ಪಂಚಮಸಾಲಿ ಪೀಠದ ಶ್ರೀ ಜಯಮೃತ್ಯುಂಜಯ ಸ್ವಾಮಿಗಳು ಇಳಕಲ್ ಮಹಾಂತ ಮಠದ ಪೂಜ್ಯರಾದ ಮಹಾಂತ ಅಪ್ಪಗಳು, ಧಾರವಾಡದ ಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಶ್ರೀಗಳಲ್ಲದೆ ಉತ್ತರ ಕರ್ನಾಟಕದ ಪ್ರಮುಖ ಮಠಾಧೀಶರನ್ನು ಅಹ್ವಾನಿಸಿದ್ದೆವು. ಪಕ್ಷಭೇದವಿಲ್ಲದೆ ರಾಜಕೀಯ ನಾಯಕರಿಗೆ ಸಭೆಗೆ ಬರಲು ವಿನಂತಿಸಿಕೊಂಡಿದ್ದೆವು. ಪರ ಊರುಗಳಿಂದ ರಾಜಕೀಯ ಹಿರಿಯ ಕಿರಿಯ ನಾಯಕರು ಸಭೆಗೆ ಬರುತ್ತಾರೆಂದು ನಮ್ಮ ಊಹೆಯಾಗಿತ್ತು.

ಜ್ಞಾನ ಹೆಚ್ಚಿಸಿದ ಜ್ಞಾನಜ್ಯೋತಿ ಸಭೆ

ಸಭೆಯುನ್ನು ಬೆಂಗಳೂರಿನ ಮಧ್ಯಭಾಗದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ಮಾಡುವುದಾಗಿ ನಿರ್ಧಾರವಾಗಿತ್ತು. ವಿಶಾಲವಾದ

In Public domain. Digitization Muthulakshmi Research Academy

ಸಭಾಂಗಣವದು. ಎರಡು ಸಾವಿರ ಜನರು ಕುಳಿತುಕೊಳ್ಳಬಹುದಾದ ಸಭಾಂಗಣ. ವೇದಿಕೆಯ ಮೇಲೆ ಕೇವಲ ಧಾರ್ಮಿಕ ನಾಯಕರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ವಿಧಾನಪರಿಷತ್ತಿನ ಅಧ್ಯಕ್ಷರಾಗಿದ್ದ ಹಿರಿಯರಾದ ಬಸವರಾಜ ಹೊರಟ್ಟಿಯವರಿಗೆ ವಹಿಸಲು ಕೇಳಿಕೊಳ್ಳಬೇಕೆಂದು ನಿರ್ಧರಿಸಿದ್ದೆವು. ಇಬ್ಬರು ಮಾತ್ರ ಸಭೆಯಲ್ಲಿ ಸಭೆಯನ್ನು ಉದ್ದೇಶಿಸಿ ಮಾತನಾಡಲು ಸೂಚಿಸಲಾಗಿತ್ತು. ಡಾ.ಜಾಮದಾರ ಈಗಾಗಲೇ ಲಿಂಗಾಯತ ಧರ್ಮದ ವಿಷಯದಲ್ಲಿ ಲೇಖನಗಳನ್ನು ಬರೆದು ವಿದ್ವಾಂಸರಾದ ಡಾ. ಚಿದಾನಂದಮೂರ್ತಿ ಅವರೊಂದಿಗೆ ವೈಚಾರಿಕ ಸಂಘರ್ಷಕ್ಕೆ ಒಳಗಾಗಿದ್ದರು. ಕಲಬುರ್ಗಿ ಸರ್ ಕೊರತೆಯನ್ನು ಡಾ.ಜಾಮದಾರ್ ತುಂಬಿಕೊಡುವವರು ಎಂಬ ಭರವಸೆ ಸಚಿವ ಎಂ.ಬಿ.ಪಾಟೀಲರಿಗಿತ್ತು. ಸಭೆಯಲ್ಲಿ ವೀರಶೈವರ ಗಲಾಟೆಯನ್ನು ನಿರೀಕ್ಷಣೆ ಮಾಡಿದ್ದೆವು. ವಿಷಯವನ್ನು ಪೊಲೀಸರ ಗಮನಕ್ಕೂ ತಂದಿದ್ದೆವು. ಎರಡು ಪೊಲೀಸ್ ವ್ಯಾನ್‌ಗಳು ಅಂಗಳದಲ್ಲಿ ಬಂದು ನಿಂತಿದ್ದವು. ಮೀಡಿಯಾದವರು ಕಿಕ್ಕಿರಿದು ತುಂಬಿದ್ದರು. ಆದರೆ ಅವರಿಗೆ ಲೈವ್ ಟೆಲಿಕಾಸ್ಟ್ ಮಾಡಲು ಅವಕಾಶ ನೀಡಲಿಲ್ಲ. ಸಭೆಯಲ್ಲಿ ಅದ್ಭುತವಾಗಿ ಲಿಂಗಾಯತ ಧರ್ಮದ ವಿಷಯ ಮಂಡಿಸಿದ್ದರು ಡಾ.ಜಾಮದಾರ. ಅಂದಿನ ಸಭೆಯಲ್ಲಿ ಒಂದು ಗಂಟೆ ನಲವತ್ತೈದು ನಿಮಿಷಗಳ ತಮ್ಮ ಮಾತಿನಲ್ಲಿ ಅವರು ವೀರಶೈವರ ಸ್ವಾರ್ಥ, ಆಧಾರಗಳ ತಿರುಚುವಿಕೆ ಮತ್ತು ಮೌಢ್ಯಗಳ ವಿಸ್ತಾರವಾಗಿ ಮಾತನಾಡಿದ್ದರ ಕುರಿತು (ದೀರ್ಘವಾದ ಭಾಷಣದ ವರದಿಯನ್ನು ಸ್ನೇಹಿತರು ನನಗೆ ಈ ಪುಸ್ತಕ ಬರೆಯುವ ಸಂದರ್ಭದಲ್ಲಿ ಒದಗಿಸಿದ್ದಾರೆ).

"ಚಿದಾನಂದಮೂರ್ತಿ ಅವರು ಪಂಚಪೀಠಗಳ ಮುಖವಾಣಿಯಂತೆ ವರ್ತಿಸುತ್ತಿದ್ದಾರೆ. ಲಿಂಗಾಯತ ಮತ್ತು ವೀರಶೈವ ನಡುವಿನ ತಿಕ್ಕಾಟಕ್ಕೆ ಸಂಬಂಧಿಸಿ ೧೯೯೮ರಲ್ಲಿ 'ವಚನಶೋಧ' ಎಂಬ ತಮ್ಮ ಗ್ರಂಥದಲ್ಲಿ 'ಸಿದ್ಧಾಂತ ಶಿಖಾಮಣಿ'ಯ ಕಾಲಮಾನದ ಬಗ್ಗೆ ಬರೆಯುತ್ತಾ 'ಸಿದ್ಧಾಂತ ಶಿಖಾಮಣಿ'ಯ ಕಾಲ ಕ್ರಿಸ್ತಶಕ ೧೧೬೦-೧೧೮೦ ಕ್ಕಿಂತ ನಿಶ್ಚಿತವಾಗಿಯೂ ಹಿಂದೆಯಲ್ಲ. ಬಹುಶಃ ೧೩-೧೪ನೇ ಶತಮಾನದ ಕೃತಿ" ಎಂದು ಬರೆದಿದ್ದರು. ಮರುವರ್ಷ ೧೯೯೯ರಲ್ಲಿ ಅವರ ಗುರುಗಳೂ, ಪಂಚಪೀಠಗಳಲ್ಲಿ ಒಂದಾದ ಕಾಶಿಪೀಠದ ಪೂಜ್ಯ ಶ್ರೀ ಚಂದ್ರಶೇಖರಸ್ವಾಮಿ ಅವರು 'ಸಿದ್ಧಾಂತ ಶಿಖಾಮಣಿ ಸಮೀಕ್ಷಾ' ಎಂಬ ತಮ್ಮ ಪಿಎಚ್.ಡಿ. ಪ್ರಬಂಧವನ್ನು ಪ್ರಕಟಿಸಿ ಸಿದ್ಧಾಂತ ಶಿಖಾಮಣಿಯು ರಾಮಾಯಣಕ್ಕಿಂತ ಹಳೆಯ ಗ್ರಂಥ ಎಂಬ ಅಭಿಪ್ರಾಯವನ್ನು ತೇಲಿಬಿಟ್ಟರು. ಆಗ ಪೇಚಿಗೆ ಸಿಲುಕಿದ ಚಿದಾನಂದಮೂರ್ತಿಯವರು ೨೦೦೦ದಲ್ಲಿ "ವೀರಶೈವ ಧರ್ಮ: ಭಾರತೀಯ ಸಂಸ್ಕೃತಿ" ಎಂಬ ಇನ್ನೊಂದು ಗ್ರಂಥವನ್ನು ಬರೆದರು.

In Public domain. Digitization Muthulakshmi Research Academy

ಅದರಲ್ಲಿ ಅವರ ಅಭಿಪ್ರಾಯ ಹೀಗಿದೆ: ನಾನೇನೋ ಸಿದ್ಧಾಂತ ಶಿಖಾಮಣಿಯ ಕರ್ತೃ ಬಸವಣ್ಣನವರ ಹಿರಿಯ ಸಮಕಾಲೀನನೆಂದು, ಅದು ಬಸವನ ಕಾಲದಲ್ಲಿಯೇ ರಚಿತವಾಗಿದ್ದು, ಬಸವನ ಅಧ್ಯಯನಕ್ಕೆ ಲಭ್ಯವಾಗಿತ್ತೆಂದು ಸಾಧಾರಣವಾಗಿ ತರ್ಕಿಸಿದ್ದೇನೆ. ಹೀಗಿದೆ ಅವರ ಬೌದ್ಧಿಕ ಪ್ರಾಮಾಣಿಕತೆ! ಉಪಜಾತಿಯ ಅಭಿಮಾನ ಮತ್ತು ಗುರುಸೇವಾ ಭಾವನೆಗಳು ಅವರು ಉಲ್ಟಾ ಹೊಡೆಯಲು ಕಾರಣವಾಗಿರಬಹುದು! ೨೦೦೩ರಲ್ಲಿ ಕಾಶಿ ಶ್ರೀಗಳು ಮತ್ತು ಚಿದಾನಂದ ಮೂರ್ತಿಯವರ ಬದಲಾದ ಅಭಿಪ್ರಾಯವು ಸಂಪೂರ್ಣವಾಗಿ ಸತ್ಯಕ್ಕೆ ದೂರವೆಂದು ಕುಂದೂರಿನ ಇಮ್ಮಡಿ ಶಿವಬಸವ ಶ್ರೀಗಳು ತಮ್ಮ 'ಸಿದ್ಧಾಂತ ಶಿಖಾಮಣಿ ಹಾಗೂ ಶ್ರೀಕರ ಭಾಷ್ಯ: ನಿಜದ ನಿಲುವು' ಎಂಬ ಗ್ರಂಥದಲ್ಲಿ ಸಿದ್ಧಪಡಿಸಿದ್ದಾರೆ. ಚಿದಾನಂದಮೂರ್ತಿಯವರು ಕನ್ನಡ ಸಾಹಿತ್ಯದ ಮಹಾನ್ ಸಂಶೋಧಕರು. ಆದ್ದರಿಂದ ಸಾರ್ವಜನಿಕರು ಅವರ ವಾದವು ಸತ್ಯವೆಂದು ತಿಳಿಯುವ ಸಾಧ್ಯತೆ ಇದೆ. ತದ್ವಿದಿತವಾಗಿ ಅವರ ವಾದದ ಪ್ರತಿಯೊಂದು ಬಿಂದುವು ಸತ್ಯಕ್ಕೆ ಮಾಡಿರುವ ಘೋರ ಅನ್ಯಾಯವಾಗಿದೆ. ೨೦೦೦ದಿಂದ ಬಸವಣ್ಣನ ಬಗ್ಗೆ ಅವರು ಅದೇ ತರಹದ ವಾದಗಳನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಸುಳ್ಳೊಂದನ್ನು ಪದೇ ಪದೇ ನೂರಾರು ಸಲ ಹೇಳಿದರೆ ಅದನ್ನು ಜನರು ಸತ್ಯವೆಂದು ನಂಬುತ್ತಾರೆ ಎಂದು ಅವರು ನಂಬಿದಂತಿದೆ. ಡಾ. ಚಿದಾನಂದಮೂರ್ತಿಯವರು ನನಗೊಂದು ಪತ್ರ ಕಳಿಸಿದ್ದರು. ಆ ಪತ್ರದಲ್ಲಿ ಅವರ ಸ್ವತಂತ್ರವಾದ ವಾದಗಳೇ ಇಲ್ಲ. ಬದಲಿಗೆ ಅದರ ಎರಡು ಮೂರಾಂಶ ಭಾಗವು ಮಠಾಧಿಪತಿಗಳ ಮತ್ತು ಕೆಲವು ಪ್ರಸಿದ್ಧ ವ್ಯಕ್ತಿಗಳ ಅಭಿಪ್ರಾಯಗಳನ್ನು ಹೊಂದಿದೆ. ಪ್ರಮುಖ ಮಠಾಧಿಪತಿಗಳಲ್ಲಿ ರಂಭಾಪುರಿ ಪೀಠದ ಪೂಜ್ಯ ಪ್ರಸನ್ನ ರೇಣುಕರ ಹೇಳಿಕೆ, ಕೇದಾರ ಪೀಠದ ಪೂಜ್ಯ ರಾವಳ್ ಭೀಮಾಶಂಕರ್ ಸ್ವಾಮಿಗಳ ಹೇಳಿಕೆ, ಕಾಶಿ ಪೀಠದ ಪೂಜ್ಯ ಚಂದ್ರಶೇಖರ ಶಿವಾಚಾರ್ಯರ ಹೇಳಿಕೆ, ಶ್ರೀಶೈಲ ಪೀಠದ ಪೂಜ್ಯ ಉಮಾಪತಿ ಪಂಡಿತಾರಾಧ್ಯರ ಹೇಳಿಕೆ, ದಾವಣಗೆರೆಯ ಪೂಜ್ಯ ಸದ್ಯೋಜಾತ ಸ್ವಾಮಿಗಳ ಹೇಳಿಕೆ, ಪೂಜ್ಯ ಲಿಂಗೈಕ್ಯ ಹಾನಗಲ್ ಕುಮಾರ ಸ್ವಾಮಿಗಳು ಹೇಳಿಕೆ, ವ್ಯಾಕರಣತೀರ್ಥ ಚಂದ್ರಶೇಖರಶಾಸ್ತ್ರಿಗಳ ಹೇಳಿಕೆ, ದಿ. ಸಿದ್ಧಯ್ಯ ಪುರಾಣಿಕರ ಹೇಳಿಕೆಗಳಿವೆ. ಇವರೆಲ್ಲರೂ ಪಂಚಪೀಠಗಳಿಗೆ ಸಂಬಂಧಿಸಿದವರೆಂದು ಬೇರೆ ಹೇಳಬೇಕಾಗಿಲ್ಲ. ಇವರೆಲ್ಲ ವೀರಶೈವ ಮತ್ತು ಲಿಂಗಾಯತ ಎರಡೂ ಒಂದೇ ಎಂದು ಹೇಳುವವರು. ಪಂಚಾಚಾರ್ಯರೇ ಲಿಂಗಾಯತ ಧರ್ಮದ ಸ್ಥಾಪಿತರೆಂದು, ಲಿಂಗಾಯತವು ಹಿಂದೂ ಧರ್ಮದ ಒಂದು ಭಾಗವೆಂದು, ಲಿಂಗಾಯತರು ವೇದ, ಆಗಮ, ಉಪನಿಷತ್ತು, ಬ್ರಾಹ್ಮಣಕ, ಆರಣ್ಯಕಗಳನ್ನು ಒಪ್ಪುತ್ತಾರೆಂದು ವಾದಿಸುವುದು ಮತ್ತು

In Public domain. Digitization Muthulakshmi Research Academy

ಉಪಜಾತಿಯಿಂದ ಜಂಗಮರು ಚಿದಾನಂದಮೂರ್ತಿಗಳು ಅದೇ ಗುಂಪಿನವರೆಂದು ಬಹುತೇಕರಿಗೆ ಗೊತ್ತಿದೆ. ಇದು ಓತಿಕ್ಯಾತದ ಜಗಳದಲ್ಲಿ ಬೇಲಿಯೇ ಓತಿಕ್ಯಾತಕ್ಕೆ ಸಾಕ್ಷಿ ಎಂಬಂತೆ ಭಾಸವಾಗುತ್ತದೆ! ವೀರಶೈವ ಲಿಂಗಾಯತರಲ್ಲದ ಕೆಲವು ಗಣ್ಯರ ಹೇಳಿಕೆಗಳನ್ನು ಮೂರ್ತಿಯವರು ನೀಡಿದ್ದಾರೆ. ಬಹಳ ವಿಚಿತ್ರವೆಂದರೆ ಸ್ವಾಮಿ ವಿವೇಕಾನಂದರ ಹೇಳಿಕೆ, ಗಾಂಧೀಜಿಯವರ ಹೇಳಿಕೆ, ಪೂಜ್ಯ ಶ್ರೀ ವೀರೇಂದ್ರ ಹೆಗಡೆಯವರ ಹೇಳಿಕೆ, ಬಾಲಗಂಗಾಧರನಾಥ ಸ್ವಾಮಿಗಳ ಹೇಳಿಕೆ, ಶಿವರಾಮ ಕಾರಂತರ ಹೇಳಿಕೆ, ಆಲೂರು ವೆಂಕಟರಾಯರ ಹೇಳಿಕೆ, ರಾಮಕೃಷ್ಣ ಆಶ್ರಮದ ಪೂಜ್ಯ ಸ್ವಾಮಿ ಹರ್ಷಾನಂದರ ಹೇಳಿಕೆಗಳು ಯಾವುದೇ ರೀತಿಯಲ್ಲಿ ಲಿಂಗಾಯತಕ್ಕೆ ಅಥವಾ ವೀರಶೈವಕ್ಕೆ ಅಥವಾ ಹಿಂದೂಧರ್ಮ ಮತ್ತು ಲಿಂಗಾಯತ ನಡುವಿನ ಸಂಬಂಧಕ್ಕೆ ಸಂಬಂಧಿಸಿಯೇ ಇಲ್ಲ. ಇವರೆಲ್ಲರೂ ಕೇವಲ ಹಿಂದೂಧರ್ಮದ ವಿಶೇಷತೆಗಳನ್ನು ಬೇರೆ ಬೇರೆ ಸಂದರ್ಭದಲ್ಲಿ ಹಾಡಿ ಹೊಗಳಿದ್ದಾರೆಯೇ ಹೊರತು, ಲಿಂಗಾಯತ/ವೀರಶೈವ ಧರ್ಮ ಮತ್ತು ಹಿಂದೂಧರ್ಮಗಳ ಕುರಿತು ತುಲನಾತ್ಮಕವಾಗಿ ಅವರು ಯಾರೂ ಚಕಾರ ಶಬ್ದವನ್ನು ಎತ್ತಿದ್ದು ಈ ಉದ್ಧರಣಗಳಲ್ಲಿ ಇಲ್ಲವೇ ಇಲ್ಲ. ಆದ್ದರಿಂದ ಅವುಗಳ ವಿಶ್ಲೇಷಣೆ ಅನಗತ್ಯ. ಮುಖ್ಯ ಪ್ರಶ್ನೆಗಳಿಗೆ ಸಂಬಂಧವೇ ಇಲ್ಲದ ಇಂತಹ ಉದ್ಧರಣಗಳನ್ನು ಚಿದಾನಂದ ಮೂರ್ತಿಯವರು ಏಕೆ ನೀಡುತ್ತಾರೆ? ಉತ್ತರ ಬಹಳಷ್ಟು ಸರಳ: ತಮ್ಮ ಅಪಾರವಾದ ಓದಿನ ಪ್ರದರ್ಶನ ಮತ್ತು ಅಮಾಯಕರನ್ನು ದಾರಿ ತಪ್ಪಿಸುವ ಉದ್ದೇಶ ಇದರಲ್ಲಿದೆ ಎನ್ನದೆ ಬೇರೆ ದಾರಿ ಇಲ್ಲ. ಲ್ಯಾಟಿನ್ ಭಾಷೆಯುಲ್ಲಿ argument ad haminam ಎನ್ನುತ್ತಾರೆ ಅಭಿಪ್ರಾಯುವನ್ನು ವಿಶ್ಲೇಷಿಸಿ ಅರ್ಥೈಸಿ ಒಪ್ಪಬೇಕೆ ಹೊರತು ಯಾರ ಅಭಿಪ್ರಾಯವಿದು ಎಂಬುದನ್ನು ನೋಡಿ ಒಪ್ಪುವುದು ಅಥವಾ ತಿರಸ್ಕರಿಸುವುದು ಬುದ್ಧಿವಂತರ ಲಕ್ಷಣವಲ್ಲ. ವೀರಶೈವವು ಪಂಚಾಚಾರ್ಯರು ಹೇಳುವಂತೆ 'ಹಿಂದೂಧರ್ಮದ ಭಾಗವಾಗಿದ್ದರೆ ಅದು ಎಂದೂ ಲಿಂಗಾಯತವಾಗದು. ಲಿಂಗಾಯತ-ವೀರಶೈವ ದ್ವಂದ್ವದ ಸಮಸ್ಯೆ ಇಂದು ನಿನ್ನೆಯದಲ್ಲ. ಅದು ಆರು ಶತಮಾನಗಳಿಂದ ಅಂತ್ಯಕಾಣದ ಸಮಸ್ಯೆ. ಈ ಸಮಸ್ಯೆಯನ್ನು ಸೃಷ್ಟಿಸಿದವರು ವಿವಿಧ ಪ್ರಕಾರದ ಹಿಂದೂ ಶೈವಪಂಥಗಳಿಂದ ಬಂದು ಬಸವಣ್ಣನ ಲಿಂಗಾಯತವನ್ನು ಸೇರಿದ ಜನರು. ಅವರಲ್ಲಿ ಕಾಳಾಮುಖರು, ಪಾಶುಪತರು, ಕಾಪಾಲಿಕರು, ಲಕುಲೀಶರು, ಕೆಲವು ನಾಥಪಂಥಿಗಳು ಮತ್ತು ಆಂಧ್ರದ ಆರಾಧ್ಯಶೈವ ಬ್ರಾಹ್ಮಣರು ಪ್ರಮುಖರು. ೧೫ನೇ ಶತಮಾನದ ಅಂತ್ಯದ ಸುಮಾರಿಗೆ ಮೇಲೆ ತಿಳಿಸಿದ ಮೊದಲನೇ ಐದು ಪಂಥಿಕರು ಬಹುತೇಕ ಬಸವಣ್ಣನನ್ನು ಸಂಪೂರ್ಣ ಒಪ್ಪಿಕೊಂಡು ತಮ್ಮ ಮೂಲರೂಪವನ್ನು

In Public domain. Digitization Muthulakshmi Research Academy

ಕಳೆದುಕೊಂಡು ಲಿಂಗಾಯತ ವಿರಕ್ತಮಠಗಳಾಗಿ ಪರಿವರ್ತನೆಗೊಂಡರು. ಆದ್ದರಿಂದಲೇ ವಿರಕ್ತಮಠಗಳು ಹೆಚ್ಚಾಗಿ ಬಸವಣ್ಣನ ತತ್ವಗಳನ್ನು ಪಾಲಿಸುತ್ತವೆ ಮತ್ತು ವೀರಶೈವರ ಪಂಚಾಚಾರವನ್ನು ಆದಷ್ಟು ಮಟ್ಟಿಗೆ ಬದಿಗಿಡಲು ಪ್ರಯತ್ನಿಸುತ್ತವೆ. ಆದುದರಿಂದಲೇ ಉದ್ಭವವಾಗಿದ್ದು ಗುರು–ವಿರಕ್ತರ ಸಮಸ್ಯೆ. ಆಂಧ್ರದ ಆರಾಧ್ಯ ಬ್ರಾಹ್ಮಣರು ತಮ್ಮ ಮೂಲ ಬ್ರಾಹ್ಮಣ್ಯವನ್ನು ಬಿಡದೆ, ಬಸವಣ್ಣ ಮತ್ತು ಶರಣರು ಸ್ಥಾಪಿಸಿದ ಲಿಂಗಾಯತವನ್ನು ಸಂಪೂರ್ಣವಾಗಿ ಪಾಲಿಸಿದೆ, ಎರಡನ್ನೂ ಸೇರಿಸಿ ಬಸವಧರ್ಮವನ್ನು ಹದಗೆಡಿಸಿಬಿಟ್ಟರು. ತಮ್ಮ ಪ್ರಾಬಲ್ಯವನ್ನು ಸಾಧಿಸಲು ಯಾವುದೇ ಐತಿಹಾಸಿಕ ಆಧಾರವಿಲ್ಲದ ಕಟ್ಟುಕಥೆಗಳನ್ನು ಆಧರಿಸಿ ಪಂಚಪೀಠಗಳನ್ನು ಸೃಷ್ಟಿಸಿದರು. ವೀರಶೈವ ಎಂಬ ಹೊಸ ವಾದವನ್ನು ನಿರ್ಮಿಸಿ ಕ್ಲಿಷ್ಟ ಸಮಸ್ಯೆಗಳನ್ನು ಸೃಷ್ಟಿಸಿದ್ದಾರೆ. ವಿರಕ್ತಮಠಗಳ ಯತಿಗಳನ್ನು ದಾರಿ ತಪ್ಪಿಸುವ ಕಾರ್ಯಗಳನ್ನು ೨೦ನೇ ಶತಮಾನದ ಆದಿಯಿಂದ ಪಂಚಪೀಠದ ಪ್ರವರ್ತಕರು ಪ್ರಾರಂಭಿಸಿದ್ದಾರೆ. 'ವೇದಕ್ಕೆ ಒರೆಯ ಕಟ್ಟುವೆ ಶಾಸ್ತ್ರಕ್ಕೆ ನಿಗಳನಿಕ್ಕುವೆ, ಆಗಮದ ಮೂಗು ಕೊಯ್ಯುವೆ' ಎಂದವನು ಬಸವಣ್ಣ. ಮುಂದುವರಿದು 'ವೇದವೆಂಬುದು ಓದಿನ ಮಾತು ಪುರಾಣವೆಂಬುದು ಪುಂಡರ ಗೋಷ್ಠಿ' ಎಂದವರು ಶರಣರೇ. 'ಸ್ಮೃತಿಗಳು ಸಮುದ್ರದ ಪಾಲಾಗಲಿ, ಶ್ರುತಿಗಳು ವೈಕುಂಠವ ಸೇರಲಿ, ಆಗಮಗಳು ವಾಯುವ ಹೊಂದಲಿ, ಎಮ್ಮ ನುಡಿ ಮಹಾಲಿಂಗದ ಗ್ರಂಥಿಯಾಗಲಿ' ಎಂದಿದ್ದ ಸಿದ್ಧರಾಮರ ಧರ್ಮದಲ್ಲಿ ವೇದ, ಆಗಮ, ಶಾಸ್ತ್ರ, ಪುರಾಣ, ಉಪನಿಷತ್ತುಗಳನ್ನು ಪಂಚಪೀಠಗಳು ಸೇರಿಸಿಬಿಟ್ಟವು. ಆದ್ದರಿಂದಲೇ ವೇದ ಮತ್ತು ಶೈವಾಗಮಗಳನ್ನು ಆಧರಿಸಿದ ಸಿದ್ಧಾಂತ ಶಿಖಾಮಣಿಯನ್ನು ತಮ್ಮ ಮೂಲ ಗ್ರಂಥವೆಂದು ಅವರು ವಾದಿಸುತ್ತಿದ್ದಾರೆ. ಅದು ೧೪ನೇ ಶತಮಾನದಲ್ಲಿ ಬರೆದ ಗ್ರಂಥವೆಂಬುದಕ್ಕೆ ಆ ಗ್ರಂಥದಲ್ಲಿ ಅದರ ಲೇಖಕರು ನೀಡಿದ, ಆಧಾರಗಳು ಸಾಕು. ವರ್ಣಾಶ್ರಮ ಸಿದ್ಧಾಂತವನ್ನು ಆಧರಿಸಿದ 'ಜಾತಿ' ಪದ್ಧತಿಯನ್ನು, ಜಾತಿಯನ್ನು ಆದರಿಸಿದ 'ಕರ್ಮ'ಸಿದ್ಧಾಂತವನ್ನು, ಕರ್ಮ ಸಿದ್ಧಾಂತವನ್ನು ಆಧರಿಸಿದ 'ಪಾಪ' ಮತ್ತು 'ಪುಣ್ಯ'ಗಳನ್ನು, ಪಾಪ ಪುಣ್ಯಗಳನ್ನು ಆಧರಿಸಿದ 'ಸ್ವರ್ಗ' ಮತ್ತು 'ನರಕ'ಗಳನ್ನು, ಸ್ವರ್ಗ ನರಕಗಳನ್ನು ಆಧರಿಸಿದ 'ಜನ್ಮ' 'ಪುನರ್ಜನ್ಮ'ಗಳನ್ನು ಲಿಂಗಾಯತವು ಸಂಪೂರ್ಣವಾಗಿ ತಿರಸ್ಕರಿಸುತ್ತದೆ. ಇವುಗಳಿಗೆ ಸಂಬಂಧಿಸಿದ ಭಾಷೆ ಹೇಗಿದೆ ನೋಡಿ. 'ಮರ್ಮವನ್ನು ಅರಿದವಂಗೆ ಕರ್ಮವಿಲ್ಲ' ಎಂದವನು ಚೆನ್ನಬಸವಣ್ಣ. 'ಮನದೊಳಗೆ ಘನವೇದ್ಯವಾದ ಬಳಿಕ ಪುಣ್ಯವಿಲ್ಲ ಪಾಪವಿಲ್ಲ' ಎಂಬುದು ಅಲ್ಲಮನ ಉವಾಚ. ಬಸವಣ್ಣ ಹೇಳಿದ್ದು 'ಇಹಲೋಕ ಪರಲೋಕ ಬೇರಿಲ್ಲ ಕಾಣಿರೋ ಸತ್ಯವ ನುಡಿಯುವುದೇ ಸ್ವರ್ಗಲೋಕ, ಮಿಥ್ಯವ ನುಡಿವುದೇ ನರಕಲೋಕ, ಇಹಲೋಕವೆಂಬುದು ಪರಲೋಕವೆಂಬುದು ನಾನು ನೀನಾದ

In Public domain. Digitization Muthulakshmi Research Academy

ಬಳಿಕ' ಎಂಬುದು ಶರಣ ಸಿದ್ಧರಾಮರ ನಂಬಿಕೆ. 'ಇಹಲೋಕ ಪರಲೋಕ ತಾನಿರ್ದಲ್ಲಿ' ಎಂಬುದು ಮತ್ತೆ ಅಲ್ಲಮನ ಮಾತು 'ಹುಟ್ಟುವಾತ ನಾನಲ್ಲವಯ್ಯ, ಹೊಂದುವಾತ ನಾನಲ್ಲವಯ್ಯ ನಿಜನರಿದ ಬಳಿಕ ಮತ್ತೆ ಹುಟ್ಟಲುಂಟೇ? ಎಂಬುದು ಆದಯ್ಯನ ವಾದ. ಹೀಗೆ ಶರಣರು ಹಿಂದೂಧರ್ಮದ ಮೂಲತತ್ವಗಳನ್ನೇ ತಿರಸ್ಕರಿಸಿದವರು. ಅವರೇ ಲಿಂಗಾಯತದ ಸಂಸ್ಥಾಪಕರು. ವೇದಪ್ರಣೀತ ವರ್ಣಾಶ್ರಮ ಧರ್ಮದಿಂದ ಹುಟ್ಟಿದ ಕರ್ಮಸಿದ್ಧಾಂತವನ್ನು, ಅದರಿಂದ ಹುಟ್ಟಿದ ಜಾತಿ ಪದ್ಧತಿಯನ್ನು, ಕರ್ಮ ಸಿದ್ಧಾಂತದಿಂದ ಹುಟ್ಟಿದ ಪಾಪ ಪುಣ್ಯಗಳನ್ನು, ಪಾಪ ಪುಣ್ಯಗಳಿಂದ ಹುಟ್ಟಿದ ಸ್ವರ್ಗ ನರಕಗಳನ್ನು, ಸ್ವರ್ಗ ನರಕಗಳಿಂದ ಹುಟ್ಟಿದ ಜನ್ಮ ಪುನರ್ಜನ್ಮಗಳನ್ನು ನಂಬುವ ಹಿಂದೂಧರ್ಮವು ಇವೆಲ್ಲಗಳಿಗೆ ಆಧಾರವಾದ ವೇದ, ಆಗಮಗಳು ವೀರಶೈವರಿಗೆಸರ್ವಮಾನ್ಯವಾಗಿವೆ ಎಂದು ನಮ್ಮ ಘನ ವಿದ್ವಾಂಸರಾದ ಚಿದಾನಂದಮೂರ್ತಿಯವರು ಮತ್ತು ಪಂಚಪೀಠಾಧ್ಯಕ್ಷರುಗಳು ಬಹಳ ಭಾವುಕರಾಗಿ ವಾದಿಸುತ್ತಾರೆ. ಹಾಗಾದರೆ ಲಿಂಗಾಯತ ಮತ್ತು ವೀರಶೈವ ಎರಡು ಒಂದೇ ಎಂಬುದು ಹೇಗೆ ಸಾಧ್ಯ? ಇದು ಪೂರ್ವ ಪಶ್ಚಿಮಗಳನ್ನು ಒಂದುಗೂಡಿಸುವಂತೆ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ಬಸವಣ್ಣನ ಶುದ್ಧ ಲಿಂಗಾಯತವನ್ನು ಅಶುದ್ಧಗೊಳಿಸಿದವರು ಯಾರು? ಈ ಮೂಲಕ ಈಗಿನ ಆಂತರಿಕ ವೈರುಧ್ಯಗಳಿಗೆ, ಗೊಂದಲಗಳಿಗೆ ಕಾರಣರಾದವರು ಯಾರು? ಎಂಬುದು ಸ್ಪಷ್ಟವಾಗಬಹುದಲ್ಲದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಚಿದಾನಂದಮೂರ್ತಿಯವರು ೧೯೦೪ರಷ್ಟು ಹಿಂದೆಯೇ ವೀರಶೈವ ಮಹಾಸಭೆಯ ವೀರಶೈವರು ಹಿಂದೂಗಳು ಎಂಬ ನಿರ್ಣಯ ತೆಗೆದುಕೊಂಡಿತ್ತು. ಆದರೆ ೧೯೪೦ರಲ್ಲಿ ಅದೇ ಮಹಾಸಭೆಯು ಉಲ್ಟಾ ಹೊಡೆದು ವೀರಶೈವರು ಹಿಂದೂಗಳಲ್ಲವೆಂದು ನಿರ್ಣಯ ಕೈಗೊಂಡಿದ್ದರು ಎಂದು ಬರೆದಿದ್ದಾರೆ. ೧೯೪೦ರ ನಿರ್ಣಯಕ್ಕೆ ಯಾರು ಕಾರಣರು? ಮತ್ತು ಯಾಕೆ? ಎಂಬುದನ್ನು ಐತಿಹಾಸಿಕ ಸಂದರ್ಭಗಳ ಮಾಹಿತಿಯೊಂದಿಗೆ ವಿವರ ನೀಡುತ್ತೇನೆ ಕೇಳಿ. ಹಡಪದ ಸಮಾಜದವರು, ಶಿವಾಚಾರದ ನಗರ್ತರು, ತಲಕಾಡಿನ ವೆಲ್ಲಾಳುಗೌಡರು, ವಾಲ್ಮೀಕಿ ಸಮಾಜದ ಹಿರಿಯರು, ೨೦೧೧ರ ಜಾತಿ ಜನಗಣತಿಯಲ್ಲಿ ತಮ್ಮನ್ನು ಹಿಂದೂ ಎಂದು ಬರೆಸಲು ಚಿದಾನಂದ ಮೂರ್ತಿಯವರು ಒತ್ತಾಯಿಸಿದ್ದರು. ವೀರಶೈವರ ಕಾಶಿಪೀಠದ ಶ್ರೀಗಳು ಮತ್ತು ಜಂಗಮರು ಅದೇ ಬೇಡಿಕೆಯನ್ನು ಬೆಂಬಲಿಸಿದ್ದರು ಎಂದು ಬರೆದಿದ್ದಾರೆ. ಹೌದು, ಆದರೆ ಅಂಥ ಕೆಳಜಾತಿಯವರನ್ನು ಹೇಗೆ ನಡೆಸಿಕೊಂಡರು ಮತ್ತು ಯಾಕೆ ಎಂಬುದನ್ನು ವಿವರಿಸುತ್ತೇನೆ. ಜಂಗಮರು ಮತ್ತು ವೀರಶೈವರು, ಕಾಶಿಪೀಠದ ಶ್ರೀಗಳು ಹಿಂದೂ ಎಂದು ಬರೆಸಲು ಒತ್ತಾಯಿಸಿದ ಹಿನ್ನೆಲೆ ಏನು ಎಂಬುದರ

In Public domain. Digitization Muthulakshmi Research Academy

ಸಂಪೂರ್ಣ ವಿವರಗಳು ಈ ರೀತಿ ಇವೆ. ಇವಲ್ಲದೆ ಜಾತಿ ಜನಗಣತಿಯ ಬಗ್ಗೆ ನಾನು ಈ ಹಿಂದೆ ಪ್ರಜಾವಾಣಿಯಲ್ಲಿ ಎರಡು ಮೂರು ಲೇಖನಗಳಲ್ಲಿ ಜಾತಿ ಜನಗಣತಿಯನ್ನು ಲಿಂಗಾಯತರು ಏಕೆ ವಿರೋಧಿಸುತ್ತಾರೆ ಎಂಬ ಬಗ್ಗೆ ಇನ್ನಷ್ಟು ಕಾರಣಗಳನ್ನು ಪ್ರಸ್ತಾಪಿಸಿದ್ದೆ. ಹದಿನಾಲ್ಕನೇ ಶತಮಾನದಿಂದ ಮೇಲೆ ವಿವರಿಸಿದ ಗೊಂದಲಗಳನ್ನು ಸೃಷ್ಟಿಸಿದವರು ಪಂಚಾಚಾರ್ಯರು. ಲಿಂಗಾಯತದಲ್ಲಿ ಲಿಂಗಧಾರಣವನ್ನು 'ಸೂತ್ರ'ಗಳ ಮಟ್ಟಕ್ಕೆ ಮುಟ್ಟಿಸಿ ಅದಕ್ಕೆ ಪುರೋಹಿತಶಾಹಿಯನ್ನು ಸೃಷ್ಟಿಸಿದವರು. (ಲಿಂಗಧಾರಣ ಚಂದ್ರಿಕೆ ಎಂತಹ ಗ್ರಂಥಗಳ ಮೂಲಕ). ಆರಾಧ್ಯ ಬ್ರಾಹ್ಮಣರು ಬಸವಣ್ಣ ಯಾರಿಗೂ ಲಿಂಗ ಕಟ್ಟಲಿಲ್ಲ (ಒಬ್ಬನನ್ನು ಬಿಟ್ಟು), ಕಟ್ಟಿಕೊಳ್ಳಲು ಯಾರಿಗೂ ಒತ್ತಾಯ ಮಾಡಲಿಲ್ಲ. ತೋಳಿನ ಬಲದಿಂದ ಲಿಂಗಾಯತ ಧರ್ಮವು ಹುಟ್ಟಲಿಲ್ಲ, ಆದರೆ ತೋಳ್ಬಲದಿಂದ ಅದನ್ನು ನಿರ್ನಾಮ ಮಾಡುವ ಪ್ರಯತ್ನಗಳು ನಡೆದವು. ಬಸವಣ್ಣ ಯಾವುದೇ ಮಠಗಳನ್ನು ಸ್ಥಾಪಿಸಲಿಲ್ಲ. ಯಾವ ಮಠದ ಮುಖ್ಯಸ್ಥನೂ ಅವನಲ್ಲ. ಅನುಭವ ಮಂಟಪಕ್ಕೆ ಅಲ್ಲಮನನ್ನು ಅಧ್ಯಕ್ಷನನ್ನಾಗಿ ಮಾಡಿದ ಬಸವಣ್ಣನ ಮನೋಭಾವನೆಯನ್ನು ಗಮನಿಸಬೇಕು. ೧೫ನೇ ಶತಮಾನದ ಶೂನ್ಯಸಂಪಾದನೆಯಲ್ಲಿ ಬರುವ ಮಠಗಳೆಲ್ಲವೂ ಬಸವಪೂರ್ವದ ಮಠಗಳಲ್ಲ. ಈಗಿರುವ ಲಿಂಗಾಯತ ಮಠಗಳೆಲ್ಲವೂ ಬಸವಣ್ಣನ ನಂತರ ಲಿಂಗಾಯತವನ್ನು ಸೇರಿದವರ ಮಠಗಳು. ಬಸವಣ್ಣನ ಜಂಗಮವನ್ನು ಜಾತಿಯ ರೂಪಕ್ಕೆ ತಿರುಗಿಸಿ ಆ ಜಾತಿಯವರಿಗೆ ಪುರೋಹಿತಶಾಹಿಯ ಅಧಿಕಾರವನ್ನು ನೀಡಿದವರು ಪಂಚಾಚಾರ್ಯರು. ಬಸವಣ್ಣನವರು ಪುರೋಹಿತಶಾಹಿಯನ್ನು ಬಗ್ಗುಬಡಿದರೆ, ಪಂಚಪೀಠಗಳು ತಮ್ಮದೇ ಆದ ಪುರೋಹಿತಶಾಹಿಯನ್ನು ಸೃಷ್ಟಿಸಿ ಅವರಿಗೆ 'ಪಟ್ಟದದೇವರು', 'ಶಾಖಾಮಠಗಳು' ಇತ್ಯಾದಿ ಹೆಸರಿಟ್ಟರು. ಅವರ ಅನುಯಾಯಿಗಳಿಗೆ 'ಪೂಜ್ಯವಾನ' ಆದವರು ಪಂಚಪೀಠಗಳಿಗೆ ವಿಧೇಯರಾದ ಇಂದಿನ ಹಿರೇಮಠ, ಚಿಕ್ಕಮಠದ ಸ್ವಾಮಿಗಳು. ವಿಜಯನಗರದ ಅರಸರ ಕಾಲದಿಂದ(೧೪ನೇ ಶತಮಾನ) ಸುಮಾರು ೧೯೪೦ರವರೆಗೆ(ಐದು ಶತಮಾನಗಳಲ್ಲಿ) ಪಂಚಾಚಾರ್ಯರು ಲಿಂಗಾಯತ ಧರ್ಮೀಯರನ್ನು ಎಂಥ ಅಂಧಕಾರಕ್ಕೆ ತಳ್ಳಿದರೆಂದರೆ ತಾವೆಲ್ಲ ಹಿಂದೂ ಧರ್ಮದ ಅನುಯಾಯಿಗಳೇ ಎಂದು ನಂಬಿದ್ದರು, ಮತ್ತು ಆ ಧರ್ಮದ ಎಲ್ಲ ಅನಾಚಾರಗಳನ್ನು ಆಚರಿಸುತ್ತಿದ್ದರು. ಸುಮುಹೂರ್ತ, ಹಿಂದೂ ಹಬ್ಬ ಹುಣ್ಣಿಮೆಗಳು, ಮಡಿ ಮೈಲಿಗೆಗಳನ್ನು ನಂಬುತ್ತಿದ್ದರು. ೧೮೮೦ರ ಸುಮಾರಿಗೆ ಮೈಸೂರಿನ ಲಿಂಗಾಯತರು ತಾವೂ ಬ್ರಾಹ್ಮಣರೆಂದು ವಾದಿಸತೊಡಗಿದರು. ಆದರೆ ಅದನ್ನು ಬ್ರಾಹ್ಮಣರು ಒಪ್ಪುತ್ತಿರಲಿಲ್ಲ. ಕ್ಷೌರಿಕರು, ಮಾದಿಗರು, ಸಮಗಾರರು ಲಿಂಗಾಯತರಾಗಿರುವಾಗ

In Public domain. Digitization Muthulakshmi Research Academy

ನೀವೆಂಥ ಬ್ರಾಹ್ಮಣರೆಂದು ಅಂದಿನ ಶುಭೋದಯ ಪತ್ರಿಕೆಯಲ್ಲಿ ಲಿಂಗಾಯತರನ್ನು ಹೀಗಳೆಯುತ್ತಿದ್ದರು. ಆದ್ದರಿಂದ ಆಗಿನ ಲಿಂಗಾಯತ ಮುಖಂಡರುಗಳಾದ ಎನ್. ಆರ್.ಕರಿಬಸವಶಾಸ್ತ್ರಿಗಳು, ಯಜಮಾನ ವೀರಸಂಗಪ್ಪನವರಂಥವರು ಕೆಳವರ್ಗದ ಲಿಂಗಾಯತರು ಲಿಂಗಾಯಿತರಲ್ಲವೆಂದು ವಾದಿಸಿದ್ದರು ಎಂಬುದನ್ನು 'ಸ್ಟಾರ್ ಆಫ್ ಮೈಸೂರು' ಪತ್ರಿಕೆ ದಾಖಲಿಸಿದೆ. ವೀರಶೈವರಲ್ಲಿ ಕೆಳಜಾತಿಯ ಲಿಂಗಾಯತರು ವೀರಶೈವರಲ್ಲವೆಂಬ ಮೈಸೂರಿನ ಆರಾಧ್ಯರ ವಾದದ ಪರಿಣಾಮ ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದ ಬಹುತೇಕ ಕಡೆ ವಿಸ್ತಾರವಾಯಿತು. ಇದು ಪಂಚಾಚಾರ್ಯರ ಮಹಿಮೆ! ಅದು ಮುಂದುವರಿಯಿತು. ಆದ್ದರಿಂದ ಹಡಪದ, ನಾಯಕ, ಮಡಿವಾಳ, ಗಾಣಿಗರಂತಹ ಜಾತಿಯ ಲಿಂಗಾಯತರು ಹಿಂದೂ ಎಂದು ಜನಗಣತಿಯಲ್ಲಿ ಬರೆಸಲು ಮುಂದಾಗಿದ್ದರೆ ಅದಕ್ಕೆ ಕಾರಣ ಹಿಂದೂ ಧರ್ಮದ ಜಾತಿಪದ್ಧತಿಯನ್ನು ಲಿಂಗಾಯತರು ಮುಂದುವರಿಸಿ ಮೇಲೆ ಕೆಳಗೆ ಎಂಬ ಭೇದಭಾವವನ್ನು ಅನುಸರಿಸುತ್ತಿರುವ ಚಿದಾನಂದಮೂರ್ತಿ ಯಂತವರು ಮತ್ತು ಅವರ ಪಂಚಪೀಠದ ಗುರುಗಳು! ಆದಾಗ್ಯೂ ಚಿದಾನಂದಮೂರ್ತಿಗಳು ಲಿಂಗಾಯತರು 'ಒಡೆದು ಆಳುವ' ನೀತಿಯನ್ನು ಅನುಸರಿಸುತ್ತಾರೆಂದು ಬರುವುದು ಒಂದು ವಿಪರ್ಯಾಸದ ವ್ಯಂಗ್ಯವಲ್ಲವೇ? ಐತಿಹಾಸಿಕ ಕಾರಣಗಳಲ್ಲದೆ ದೇಶದ ಇಂದಿನ ವಿಚಿತ್ರ ಸನ್ನಿವೇಶದಲ್ಲಿ ತಮ್ಮನ್ನು ಹಿಂದೂ ಎಂದು ಬರೆಸಿ ಸರ್ಕಾರದಿಂದ ರಿಸರ್ವೇಶನ್ ಸೌಲಭ್ಯ ಪಡೆಯುವುದು ಕೆಳವರ್ಗದ ಲಿಂಗಾಯತರ ಮತ್ತು ಮೇಲ್ವರ್ಗದ ಜಂಗಮರ ಉದ್ದೇಶವಾಗಿತ್ತು. ಆದರೆ ಜಂಗಮರು 'ಬೇಡಜಂಗಮ'ರೆಂದು ರಿಸರ್ವೇಶನ್ ಉಳಿಸಲು ಹಂಬಲಿಸಿದರೆ ಲಿಂಗಾಯತ ಧರ್ಮಕ್ಕೆ ಏಕೆ ಅಂಟಿಕೊಂಡಿದ್ದಾರೆ? ಕಾಶಿ ಶ್ರೀಗಳಿಗೆ ಲಿಂಗಾಯತರು ಹಿಂದೂಗಳಾಗಿ ಉಳಿದರೆ ಮಾತ್ರ ಅವರ ಅಸ್ತಿತ್ವಕ್ಕೆ ಧಕ್ಕೆಯಿಲ್ಲ. ಲಿಂಗಾಯತರು ಲಿಂಗಾಯತರಾದರೆ ವೀರಶೈವಕ್ಕೆ ಮೂರು ಕವಡೆ ಕಾಸಿನ ಬೆಲೆ ಇರುವುದಿಲ್ಲ. ಅಂತೂ ಸರ್ಕಾರದ 'ಒಡೆದಾಳುವ' ನೀತಿಗೆ ಕೈಗೂಡಿಸಿದವರು ಚಿದಾನಂದಮೂರ್ತಿಗಳು ಮತ್ತು ಅವರ ಪಂಚಪೀಠದ ಗುರುಗಳು! ಲಿಂಗಾಯತರು ಬ್ರಾಹ್ಮಣರೆಂದು ೧೯ನೇ ಶತಮಾನದ ಕೊನೆಯ ಭಾಗದಿಂದ ೨೦ನೇ ಶತಮಾನದ ಮಧ್ಯದವರೆಗಿನ ಹಿನ್ನೆಲೆಯಲ್ಲಿ ಎದ್ದು ಬಂದವರು ದಕ್ಷಿಣ ಮತ್ತು ಮಧ್ಯ ಕರ್ನಾಟಕದಲ್ಲಿ ಪೂಜ್ಯಶ್ರೀ ಹಾನಗಲ್ ಕುಮಾರಸ್ವಾಮಿಗಳು ಮತ್ತು ಉತ್ತರ ಕರ್ನಾಟಕದಲ್ಲಿ ಕಾಶಿನಾಥ ಶಾಸ್ತ್ರಿಗಳು. ಇವರಿಬ್ಬರ ಉದ್ದೇಶವೆಂದರೆ ವೀರಶೈವ ಸಮಾಜವನ್ನು ಸಂಘಟಿಸುವುದು ಮತ್ತು ಪಂಚಾಚಾರ್ಯ ತತ್ವಗಳನ್ನು ಸುಸಂಘಟಿತವಾಗಿ ಪ್ರಚಾರ ಮಾಡುವುದು. ಅದಕ್ಕಾಗಿ ಧಾರವಾಡ ಜಿಲ್ಲೆಯ ನಾಗನೂರಿನವರಾದ ಕಾಶಿನಾಥ ಶಾಸ್ತ್ರಿಗಳು ತಮ್ಮ ಉದ್ದೇಶಕ್ಕೆ ಹೆಚ್ಚು ಅವಕಾಶ

In Public domain. Digitization Muthulakshmi Research Academy

ಇರುವ ಮೈಸೂರಿನಲ್ಲಿ 'ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್' ಸ್ಥಾಪಿಸಿದರು. 'ಪಂಚಾಚಾರ್ಯ ಪ್ರಭ' ಎಂಬ ನಿಯತಕಾಲಿಕವನ್ನು ಮತ್ತು 'ಕಾಶೀನಾಥ ಗ್ರಂಥ ಮಾಲಾ' ಎಂಬ ಪುಸ್ತಕ ಪ್ರಕಾಶನ ಮಾಲಿಕೆಯನ್ನು ಪ್ರಾರಂಭಿಸಿದರು. ಅವುಗಳ ಮುಖ್ಯ ಉದ್ದೇಶವೆಂದರೆ ವಿರಕ್ತಮಠಗಳ ವಿರುದ್ಧ, ಬಸವಧರ್ಮದ ವಿರುದ್ಧ ಹಾಗೂ ಶರಣರ ವಿರುದ್ಧ ಇಲ್ಲ ಸಲ್ಲದ ಅನಾಗರಿಕ ಲೇಖನಗಳನ್ನೂ ಗ್ರಂಥಗಳನ್ನೂ ಪ್ರಕಟಿಸುವುದು ಮತ್ತು ಪಂಚಾಚಾರ್ಯರನ್ನು ಪ್ರಸಿದ್ಧಗೊಳಿಸುವುದೇ ಆಗಿತ್ತು. ಇವರೇ ಸಿದ್ಧಾಂತ ಶಿಖಾಮಣಿಯನ್ನು ತಮ್ಮ ಉದ್ದೇಶಕ್ಕೆ ತಕ್ಕಂತೆ ತಿದ್ದಿ ಬರೆದು ಪ್ರಚಾರ ಮಾಡಿದರು. ಕಾಶಿನಾಥ ಶಾಸ್ತ್ರಿಗಳ ಪ್ರಚೋದನೆಯಿಂದ ಶಾಂತಪ್ಪ ಕುಬುಸದವರು ಬರೆದ 'ಬಸವಾದಿ ನಿಜತತ್ವ ದರ್ಪಣವು' ಎಂಬ ಗ್ರಂಥದಲ್ಲಿ ಬಸವಣ್ಣ ಮತ್ತು ಇತರ ಶರಣರ ವಿರುದ್ಧ ಎರಡು ನೂರು ಉದ್ಧಟ ಪ್ರಶ್ನೆಗಳನ್ನು ಕೇಳಲಾಗಿತ್ತು. ಆ ಅವಮಾನಕರ ಪುಸ್ತಕವನ್ನು ನಿರ್ಬಂಧಿಸಲು ಧಾರವಾಡದ ಸಿದ್ದರಾಮಪ್ಪ ಪಾವಟೆಯವರು ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ದಾವೇ ಹೂಡಿ ಗೆದ್ದರು. ಆಗ ಗ್ರಂಥಕರ್ತರು ಕ್ಷಮೆ ಕೇಳಬೇಕಾಯಿತು. ಈ ದುಷ್ಟ ಶಾಂತಪ್ಪನ ನಿಜ ಜೀವನಚರಿತ್ರೆಯನ್ನು ಪಂಚಾಚಾರ್ಯ ಪ್ರೆಸ್‌ನಲ್ಲಿ ಮ್ಯಾನೇಜರ್ ಆಗಿದ್ದ ಎನ್.ಗುಂಡಾಶಾಸ್ತ್ರಿ ಎಂಬುವವರು ಬರೆದಿದ್ದಾರೆ. ಇವೆಲ್ಲವೂ ಪಂಚಾಚಾರ್ಯ ಆಶೀರ್ವಾದದಿಂದ ನಡೆದ ಕೃತ್ಯಗಳು! ಇನ್ನು ಪೂಜ್ಯ ಹಾನಗಲ್ ಕುಮಾರಸ್ವಾಮಿಗಳ ಬಗ್ಗೆ ಒಂದಿಷ್ಟು ಮಾಹಿತಿಗಳು. ಹೈದರಾಬಾದ್ ನಿಜಾಮನ ಆಡಳಿತಕ್ಕೆ ಒಳಪಟ್ಟ ಪರಿಳಿ ವೈಜನಾಥ ದೇವಸ್ಥಾನದಲ್ಲಿ(ಈಗ ಮಹಾರಾಷ್ಟ್ರದ ಭೀಡು ಜಿಲ್ಲೆಯಲ್ಲಿದೆ) ಪೂಜೆ ಮಾಡುತ್ತಿದ್ದ ಬ್ರಾಹ್ಮಣರ ಸ್ಥಾನಗಳಲ್ಲಿ ಲಿಂಗಾಯತರನ್ನು ನೇಮಿಸಬೇಕೆಂಬ ವಿವಾದ ಹೈದರಾಬಾದ್ ನಿಜಾಮನ ಹೈಕೋರ್ಟ್ ಮಟ್ಟ ತಲುಪಿತ್ತು. ಆ ವ್ಯಾಜ್ಯದಲ್ಲಿ ಮುಖ್ಯವಾದವೆಂದರೆ ಲಿಂಗಾಯತರು 'ಲಿಂಗಿ ಬ್ರಾಹ್ಮಣರು'. ಆದ್ದರಿಂದ ವೈಜನಾಥ (ಶಿವ) ಪೂಜೆ ಮಾಡುವ ಅಧಿಕಾರವನ್ನು ಲಿಂಗಾಯತರಿಗೆ ಕೊಡಬೇಕು ಎಂಬುದಾಗಿತ್ತು. ಇದು ಮೈಸೂರಿನ ಲಿಂಗಾಯತರಿಂದ ನಡೆದ ಪ್ರೇರಣೆಯಿಂದ ಉದ್ಭವಿಸಿದ ವ್ಯಾಜ್ಯವಾಗಿತ್ತು. ಆ ವ್ಯಾಜ್ಯದ ಹಿನ್ನೆಲೆಯ ನಾಯಕರಲ್ಲಿ ಪೂಜ್ಯ ಹಾನಗಲ್ ಕುಮಾರಸ್ವಾಮಿಗಳು ಒಬ್ಬರು. ಇಂದೋರಿನಲ್ಲಿ ಸಂಸ್ಕೃತ ಶಾಲೆಯ ಪ್ರಾಚಾರ್ಯರಾಗಿದ್ದ ಧಾರವಾಡ ಜಿಲ್ಲೆಯ ವಿರೂಪಾಕ್ಷ ಒಡೆಯರ್ ಅವರು ಕುಮಾರಸ್ವಾಮಿಗಳ ಕೋರಿಕೆಯಂತೆ ವಕಾಲತ್ತು ವಹಿಸಿದ್ದರು. 'ಲಿಂಗಾಯತರು ಲಿಂಗಿ ಬ್ರಾಹ್ಮಣರು' ಎಂದು ನ್ಯಾಯಲಯಕ್ಕೆ (ಟ್ರಿಬ್ಯುನಲ್) ಮನವರಿಕೆ ಮಾಡಿಕೊಟ್ಟರು. ವೈಜನಾಥನ ಪೂಜಾರಿಕೆ ಲಿಂಗಾಯತರಿಗೆ ದೊರೆಯಿತು. ನೋಡಿ ಹೇಗಿದೆ ಪಂಚಾಚಾರ್ಯರ ಪ್ರಭಾವ! ಎಲ್ಲಿಯ ಬಸವ

In Public domain. Digitization Muthulakshmi Research Academy

ಎಲ್ಲಿಯ ಲಿಂಗಿ ಬ್ರಾಹ್ಮಣರು! ಮಹಾಮೇಧಾವಿಯಾಗಿದ್ದ ಪೂಜ್ಯ ಹಾನಗಲ್ ಕುಮಾರಸ್ವಾಮಿಗಳ ಮಾರ್ಗದರ್ಶನದಲ್ಲಿ ೧೯೦೪ರಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಸ್ಥಾಪಿಸಲಾಯಿತು. ಇತ್ತೀಚೆಗೆ ಸುಮಾರು ೧೦ ವರ್ಷಗಳ ಹಿಂದೆ ಅದನ್ನು ವೀರಶೈವ ಲಿಂಗಾಯತ ಮಹಾಸಭೆ ಎಂದು ಬದಲಾಯಿಸಲಾಗಿದೆ. ಪೂಜ್ಯ ಹಾನಗಲ್ ಕುಮಾರಸ್ವಾಮಿಗಳ ಮಾರ್ಗದರ್ಶನದಲ್ಲಿ ೧೯೦೪ರಲ್ಲಿ ನಡೆದ ಮಹಾಸಭೆಯ ಮೊದಲ ಅಧಿವೇಶನದಲ್ಲಿಯೇ ವೀರಶೈವರು ವೇದ, ಉಪನಿಷತ್ತುಗಳನ್ನು, ಶಾಸ್ತ್ರ ಪುರಾಣಗಳನ್ನು, ಆಗಮಗಳನ್ನು ಒಪ್ಪುತ್ತಾರೆ. ವೀರಶೈವರು ಹಿಂದೂಗಳು ಲಿಂಗಾಯತ ಮಠಗಳಿಗೆ ಜಂಗಮ ಜಾತಿಯವರನ್ನೇ ಸ್ವಾಮಿಗಳನ್ನಾಗಿ ನೇಮಿಸಬೇಕು ಎಂಬೆಲ್ಲ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಹಾಗಾದರೆ ಮಹಾಸಭೆಯ ಅಂತಹ ನಿರ್ಣಯಗಳನ್ನು ತೆಗೆದುಕೊಳ್ಳಲು ಮಾರ್ಗದರ್ಶನ ನೀಡಿದವರು ಯಾರು? ಈ ಅಂಶಗಳನ್ನು ೩೬ ವರ್ಷಗಳ ಬಳಿಕ ೧೯೪೦ರಲ್ಲಿ ನಡೆದ ಮಹಾಸಭೆಯ ಅಧಿವೇಶನದಲ್ಲಿ ರದ್ದುಗೊಳಿಸಲಾಯಿತು. ಅದನ್ನೇ ಚಿದಾನಂದಮೂರ್ತಿಯವರು ಬಹುದೊಡ್ಡ ತಪ್ಪು ಎನ್ನುವಂತೆ ನನಗೆ ಕಳಿಸಿದ ಪತ್ರದಲ್ಲಿ ಬಿಂಬಿಸಿದ್ದಾರೆ. ಹಾಗಾದರೆ ಪ್ರಕಾಂಡ ಪಂಡಿತರನ್ನು ಹೊಂದಿದ ಅಖಿಲ ಭಾರತ ವೀರಶೈವ ಮಹಾಸಭೆಯು ಆ ನಿರ್ಣಯವನ್ನು ಏಕೆ ಬದಲಿಸಿತು ಎನ್ನುವುದನ್ನು ಚಿದಾನಂದಮೂರ್ತಿಗಳು ಹೇಳುವುದಿಲ್ಲ. ಅದನ್ನು ಹೇಳಿದರೆ ಅವರ ಹೂರಣ ಹೊರಬೀಳುತ್ತದೆ. ವೀರಶೈವ ಧರ್ಮದ ಪ್ರಚಾರವನ್ನು ಸುಸಜ್ಜಿತವಾಗಿ ಮಾಡಲು ಪೂಜ್ಯ ಹಾನಗಲ್ ಕುಮಾರ ಸ್ವಾಮಿಗಳು ೧೯೧೯ರಲ್ಲಿ ಪಂಚಪೀಠಗಳ ಶಾಖೆಗಳ ಮುಖ್ಯಸ್ಥರಾಗಿದ್ದ ಎಲ್ಲ ಪಟ್ಟಚರಾಧಿಕಾರಿಗಳ ಸಮ್ಮೇಳನವನ್ನು ನಡೆಸಿದರು. ಮತ್ತು "ಅಖಿಲ ಭಾರತೀಯ ಗುರುವರ್ಗೋತ್ತೇಜಕ' ಸಂಘವನ್ನು ಸ್ಥಾಪಿಸಿದರು. ಆ ಮೂಲಕ ವೀರಶೈವ ಪಂಥದ ಗುರುವರ್ಗಕ್ಕೆ ಸುಸಜ್ಜಿತ ಪ್ರಚಾರಕ್ಕೆ ಅವಕಾಶವಾಯಿತು. ಎಂತಹ ಮುಂಧೋರಣೆ! ಬಸವಣ್ಣನಿಗೆ ಮತ್ತು ಶರಣರಿಗೆ ಹಾಗೂ ಶರಣ ಸಾಹಿತ್ಯಕ್ಕೆ ವಿರಕ್ತಮಠಗಳ ಸ್ವಾಮಿಗಳು ಒತ್ತು ನೀಡುತ್ತಾರೆ. ಸಿದ್ಧಾಂತ ಶಿಖಾಮಣಿಗೆ ಅವರು ಅಷ್ಟೊಂದು ಮಹತ್ವ ಕೊಡುವುದಿಲ್ಲ ಹಿಂದೂ ಶೈವಧರ್ಮವನ್ನು ಅವರು ಒಪ್ಪುವುದಿಲ್ಲ. ಅದನ್ನು ಕಡಿಮೆ ಮಾಡಿ ಸಿದ್ಧಾಂತ ಶಿಖಾಮಣಿ ವೇದ ಉಪನಿಷತ್ತು ಆಗಮಗಳನ್ನು ಒಪ್ಪಿಕೊಳ್ಳುವಂತೆ ಮಾಡುವ ಅಗತ್ಯತೆಗಳನ್ನು ಪೂಜ್ಯ ಕುಮಾರಸ್ವಾಮಿಗಳು ಮನಗಂಡಿದ್ದರು. ಆಗ ಅವರಿಗೆ ಹೊಳೆದ ಬಹು ಮುಂಧೋರಣೆಯ ಉಪಾಯವೆಂದರೆ ಎಲ್ಲ ವೀರಶೈವ ಲಿಂಗಾಯತ ವಟುಗಳಿಗೆ ಒಂದೇ ರೀತಿಯ ತರಬೇತಿಯನ್ನು ನೀಡಿದರೆ ಆ ವ್ಯತ್ಯಾಸಗಳೆಲ್ಲವೂ ತಾವಾಗಿಯೇ ಹೊರಟುಹೋಗುತ್ತವೆ ಎಂಬ ವಿಚಾರ. ಅದಕ್ಕಾಗಿಯೇ ಅವರು ಬಾದಾಮಿಯ

In Public domain. Digitization Muthulakshmi Research Academy

ಸಮೀಪದಲ್ಲಿರುವ ಶಿವಯೋಗ ಮಂದಿರದಲ್ಲಿ ವಟುಗಳಿಗೆ ತರಬೇತಿ ಕೇಂದ್ರವನ್ನು ೧೯೧೦ರಲ್ಲಿ ಸ್ಥಾಪಿಸಿದರು. ಈಗ ಅದು ಚೆನ್ನಾಗಿ ಬೆಳೆಯುತ್ತಿದೆ. ಶಿವಯೋಗ ಮಂದಿರದಲ್ಲಿ ಎಲ್ಲ ವೀರಶೈವ ಲಿಂಗಾಯತ ವಟುಗಳಿಗೆ ಪ್ರಮುಖವಾಗಿ ವೀರಶೈವ ಸಿದ್ಧಾಂತ ಶಿಖಾಮಣಿ, ಶಕ್ತಿವಿಶಿಷ್ಟಾದ್ವೈತ, ವೇದ, ಉಪನಿಷತ್ತು, ಆಗಮ, ಲಿಂಗಧಾರಣ ಪದ್ಧತಿ, ದೀಕ್ಷಾ, ಅಯ್ಯಾಚಾರ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಶಿವಯೋಗ ಮಂದಿರದಲ್ಲಿ ತರಬೇತಿ ಪಡೆದ ಸ್ವಾಮಿಗಳಿಗೆ ಈಗ ಹೆಚ್ಚಿನ ಮನ್ನಣೆ ಇದೆ. ಬಸವನ ವಿಶ್ವ ಮಾನವೀಯ ಸಮಾನತೆಯ ಅಂಶಗಳಿಗೆ ಅಲ್ಲಿ ಮಾನ್ಯತೆಯಿಲ್ಲ ಮತ್ತು ತರಬೇತಿಯನ್ನು ನೀಡುವುದಿಲ್ಲ. ಇತ್ತೀಚೆಗೆ ೧೦ವರ್ಷಗಳ ಹಿಂದೆ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ ಎಂದು ಓರ್ವ ಸ್ವಾಮೀಜಿಯವರು ನನಗೆ ತಿಳಿಸಿದ್ದಾರೆ. ಏನು ಬದಲಾವಣೆಯಾಗಿದೆ? ಎಂಬುದು ಗೊತ್ತಿಲ್ಲ. ಚಿದಾನಂದ ಮೂರ್ತಿ ಅವರು ತಮ್ಮ ಪತ್ರದಲ್ಲಿ ಶಿವಯೋಗ ಮಂದಿರದ ಸ್ಥಾಪನೆಯ ಅಂಶವನ್ನು ಪ್ರಸ್ತಾಪಿಸಿದ್ದಾರೆ. ಹೇಗಿದೆ ನೋಡಿ ಲಿಂಗಾಯತರನ್ನು ದಿಕ್ಕು ತಪ್ಪಿಸುವ ಪ್ರಯತ್ನಗಳು. ಕಳೆದ ೧೦೭ ವರ್ಷಗಳಲ್ಲಿ ಶಿವಯೋಗ ಮಂದಿರದಲ್ಲಿ ತರಬೇತಿ ಪಡೆದ ಸುಮಾರು ಎಂಟನೂರು ಗುರುವಿರಕ್ತ ಮಠಗಳು ಬಹುತೇಕ ಲಿಂಗಾಯತ ಸ್ವಾಮಿಗಳು ಈಗ ನಿಜವಾಗಿಯೂ ಅಂತರಾತ್ಮದಲ್ಲಿ ತಾವು ಅಲ್ಲಿ ಪಡೆದ ತರಬೇತಿಯ ಅಂಶಗಳನ್ನು ಆಚರಿಸುತ್ತಾರೆ. ಇವೆಲ್ಲವುಗಳ ಹೊರತಾಗಿಯೂ ಅನೇಕ ವಿರಕ್ತಮಠದ ಸ್ವಾಮಿಗಳು ಬಹು ನಿಷ್ಠೆಯಿಂದ ಶರಣತತ್ವವನ್ನು ಪಾಲಿಸುತ್ತಾರೆ ಮತ್ತು ಅವುಗಳ ಪ್ರಚಾರಕ್ಕೆ ತಮ್ಮ ಜೀವಮಾನವನ್ನೇ ಮುಡುಪಾಗಿಟ್ಟಿದ್ದಾನೆ. ತುಮಕೂರಿನ ಸಿದ್ಧಗಂಗಾ ಮಠದ ಶ್ರೀಗಳು, ಧಾರವಾಡ ಅಥಣಿ ಹುಬ್ಬಳ್ಳಿಯ ಮಠಾಧೀಶರು, ಸಿರಿಗೆರೆಯ ತರಳುಬಾಳು ಮಠಾಧೀಶರು, ಗದುಗಿನ ತೋಂಟದಾರ್ಯ ಮಠವು, ಇಳಕಲ್ ಮಹಾಂತ ಸ್ವಾಮಿಗಳು, ಬಾಲ್ಕಿಯ ಪಟ್ಟದ್ದೇವರು ಇನ್ನೂ ನೂರಾರು ವಿರಕ್ತಮಠಗಳು ಶರಣತತ್ವಗಳ ಪರಿಪಾಲನೆಯಲ್ಲಿ ಮುಂಚೂಣಿಯಲ್ಲಿದ್ದಾರೆ ಇಲ್ಲದಿದ್ದರೆ ಇಂದು ಬಸವತತ್ವ ನಿರ್ನಾಮವಾಗಬಹುದಾಗಿತ್ತು. ಪಂಚಾಚಾರ್ಯರ ಬಗ್ಗೆ ಇನ್ನೊಂದಿಷ್ಟು ಮಾಹಿತಿ ಹಂಚಿಕೊಳ್ಳಲು ಬಯಸುವೆ. ಸಿದ್ಧಾಂತ ಶಿಖಾಮಣಿಯ ಆಂತರಿಕ ವಿರೋಧಾಭಾಸಗಳನ್ನು ಗಮನಿಸಿದರೆ ಐವರು ಪಂಚಾಚಾರ್ಯರಲ್ಲಿ ಇಬ್ಬರ ಅಸ್ತಿತ್ವಕ್ಕೆ ಯಾವುದೇ ಐತಿಹಾಸಿಕ ಪೌರಾಣಿಕ ಆಧಾರಗಳಿಲ್ಲ. ಈ ಐವರನ್ನು ಆಚಾರರನ್ನಾಗಿ ಮಾಡಿದವರು ಯಾರು? ಯಾವಾಗ? ಎಂಬುದಕ್ಕೆ ಸೂಕ್ತ ತೃಪ್ತಿಕರ ಆಧಾರಗಳು ಇಲ್ಲ. ಕೃತಯುಗ, ತ್ರೇತಾಯುಗ, ದ್ವಾಪರಯುಗಗಳಲ್ಲಿ ಧರ್ಮ ಪ್ರಚಾರ ಮಾಡಿದ್ದೇವೆ. ಎಂದು ರಾಮಾಯಣದ ವಿಭೀಷಣನಿಗೆ,

In Public domain. Digitization Muthulakshmi Research Academy

ಅಗಸ್ತ್ಯನಿಗೆ, ಶಿವನ ಮಹಿಮೆಯನ್ನು ವಿವರಿಸಿದ್ದಾಗಿಯೂ ಶಂಕರಾಚಾರ್ಯರಿಗೆ ಚಂದ್ರಮೌಳೇಶ್ವರ ಲಿಂಗವನ್ನು ನೀಡಿದ್ದೇವೆ ಎಂದು ಸಿದ್ಧಾಂತ ಶಿಖಾಮಣಿಯ ಲೇಖಕರು ಹೇಳುತ್ತಾರೆ. ಇಷ್ಟೆಲ್ಲ ಚಮತ್ಕಾರಿ ಕಾರ್ಯಗಳನ್ನು ಮಾಡಿದ ಈ ಪಂಚಪೀಠಗಳ ಬಗ್ಗೆ ಯಾವುದೇ ವೇದ, ಆಗಮ, ಉಪನಿಷತ್ತು, ಬ್ರಾಹ್ಮಣಕ, ಆರಣ್ಯಕ ಅಥವಾ ಶಂಕರಾಚಾರ್ಯರಿಗೆ ಸಂಬಂಧಿಸಿದ ಗ್ರಂಥಗಳಲ್ಲಿಯೂ ರಾಮಾಯಣದಲ್ಲೂ ಅಥವಾ ಭಾರತದ ಸುದೀರ್ಘ ಇತಿಹಾಸಕ್ಕೆ ಸಂಬಂಧಿಸಿದ ಯಾವುದೇ ಹಳೆಯ ಗ್ರಂಥಗಳಲ್ಲಿಯೂ ಪಂಚಾಚಾರ್ಯರ ಬಗ್ಗೆ ಒಂದೇ ಒಂದು ಚಕಾರ ಶಬ್ದವು ಏಕಿಲ್ಲ? ಹಾಗಾದರೆ ಇವರ ಇತಿಹಾಸವೆಲ್ಲ ಸ್ವಯಂನಿರ್ಮಿತ ಕಟ್ಟುಕತೆಗಳೇ? ಇವನ್ನೆಲ್ಲ ಸೃಷ್ಟಿಸಿದವರು ಯಾರು? ಏಕೆ? ಯಾವಾಗ? ವಿಜಯನಗರದ ದೊರೆಗಳಲ್ಲಿ ಸಂಗಮ ವಂಶದ ರಾಜರು ೧೪-೧೫ನೇ ಶತಮಾನಗಳಲ್ಲಿ ಅವರಿಗೆ ರಾಜಾಶ್ರಯ ನೀಡಿ ವಚನ ಸಾಹಿತ್ಯದ ಬೆಳವಣಿಗೆಯನ್ನು ಪ್ರೋತ್ಸಾಹಿಸಿದರು. ಪುಂಗನೂರು, ಕೆಳದಿ ಮತ್ತು ಕೊಡಗಿನ ಅರಸರು ಲಿಂಗಾಯತರಾಗಿದ್ದರು. ಮೈಸೂರಿನ ಒಡೆಯರು ಹದಿನೇಳನೆಯ ಶತಮಾನದವರೆಗೂ ಲಿಂಗಾಯತರಾಗಿದ್ದರು. ಆದರೆ ಅವರು ಯಾಕೆ ಪಂಚಪೀಠಗಳನ್ನು ಸ್ಥಾಪಿಸಲಿಲ್ಲ? ಎಲ್ಲ ಅಂಶಗಳನ್ನು ಸಾಧಾರಣವಾಗಿ ಬಳಸಿಕೊಂಡು ಲಿಂಗಾಯತ ಸ್ವತಂತ್ರ ಧರ್ಮವೆಂದೂ, ಪಂಚಪೀಠಗಳು ನಂತರದ ಅಧ್ವಾನಗಳೆಂದೂ ಸಿದ್ಧಪಡಿಸಲು ಅಪಾರವಾದ ಐತಿಹಾಸಿಕ ಸಾಮಗ್ರಿ ಈಗ ಲಭ್ಯವಿದೆ. ಅದು ಆಧುನಿಕ ಯುಗದಲ್ಲಿ ನಡೆದ ವಚನಶಾಸ್ತ್ರ ಸಾಹಿತ್ಯದ ಆವಿಷ್ಕಾರಗಳು ನಿರ್ಮಿಸಿದ ಗಂಭೀರ ಬೆಳವಣಿಗೆ. ಇಂದು ಲಿಂಗಾಯತ ಸಮುದಾಯವು ಅತ್ಯಂತ ಕಠಿಣ, ಆಂತರಿಕ ವೈರುಧ್ಯಗಳಿಂದ, ತಿಕ್ಕಾಟಗಳಿಂದ, ವಿವಿಧ ತಾಂತ್ರಿಕ ಸಮಸ್ಯೆಗಳಿಂದ ತತ್ತರಿಸಿ ಹೋಗಿದೆ. ಈಗ ನಮಗೆ ಬೇಕಿರುವುದು ಇಂದಿನ ವೈಜ್ಞಾನಿಕ ಯುಗಮಾನದ ಮನೋಭಾವಕ್ಕೆ ಸಂಪೂರ್ಣವಾಗಿ ಸರಿಹೊಂದುವ ೧೨ನೇ ಶತಮಾನದ ಬಸವಣ್ಣನ ಲಿಂಗಾಯತ ಧರ್ಮವೇ ಹೊರತು ಪಂಚಾಚಾರ್ಯರು ಅಶುದ್ಧಗೊಳಿಸಿರುವ ನೂರೆಂಟು ಆಂತರಿಕ ವೈರುಧ್ಯಗಳಿಂದ ಕೂಡಿದ ವೀರಶೈವ ಅಲ್ಲ. ೧೨ನೇ ಶತಮಾನದ ಬಸವಣ್ಣನ ಮತ್ತು ಶರಣರು ಸ್ಥಾಪಿಸಿದ ಲಿಂಗಾಯತದ ಮರು ಅವಿಷ್ಕಾರವು ೨೦ನೇ ಶತಮಾನದ ಅವಿಸ್ಮರಣೀಯ ಸೋಜಿಗಗಳಲ್ಲಿ ಒಂದಾಗಿದೆ. ಶಾಶ್ವತಸತ್ಯವನ್ನು ಬಹುಕಾಲ ಮುಚ್ಚಿಡಲು ಸಾಧ್ಯವಿಲ್ಲ. ಅದಕ್ಕೆ ಮೂಲ ಆಧಾರವೆಂದರೆ ಹತ್ತಾರು ಸಾವಿರ ವಚನಗಳನ್ನು ಪತ್ತೆ ಹಚ್ಚಿ, ಪರಿಷ್ಕರಿಸಿ, ಪ್ರಕಟಿಸಿದ್ದು. ಅದರ ಹಿಂದೆ ಫ. ಗು.ಹಳಕಟ್ಟಿ, ಎಂ.ಎಂ.ಕಲಬುರ್ಗಿಯಂತಹವರ ನೂರಾರು ವೈಜ್ಞಾನಿಕ ಮನೋಭಾವದ ಶರಣರ ಕಠಿಣ ಪರಿಶ್ರಮವಿದೆ. ಎಲ್ಲೋ ಹೇಗೋ ಏಕೋ

In Public domain. Digitization Muthulakshmi Research Academy

ಮುಚ್ಚಿಡಲಾಗಿದ್ದ, ತಿರಸ್ಕೃತ, ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಲ್ಪಟ್ಟ ೨೨ ಸಾವಿರಕ್ಕೂ ಹೆಚ್ಚು ವಚನಗಳ ಸಂಗ್ರಹಣೆ, ಸಾವಿರಾರು ಶರಣರ ಚರಿತ್ರೆಗಳ ಬರವಣಿಗೆ, ಹತ್ತಾರು ಶಿಲಾ ಶಾಸನಗಳ ಶೋಧನೆ, ವಚನಗಳ ಬಹುಮುಖಿ ಅಧ್ಯಯನಗಳು, ವಚನಗಳ ಅರ್ಥೈಸುವಿಕೆ, ವಿವಿಧ ಭಾಷೆಗಳಲ್ಲಿ ವಚನಗಳನ್ನು ಭಾಷಾಂತರಗೊಳಿಸುವುದು ಅಸಾಮಾನ್ಯ ಕೆಲಸವೇ ಸರಿ. ವಚನಗಳನ್ನು ೧೫ ಸಂಪುಟಗಳಲ್ಲಿ ಕರ್ನಾಟಕ ಸರ್ಕಾರವೇ ಎರಡು ಬಾರಿ ಮುದ್ರಿಸಿದೆ. ಇದಕ್ಕೂ ಹೆಚ್ಚಾಗಿ ಸುಮಾರು ಒಂದು ಸಾವಿರಕ್ಕೂ ಹೆಚ್ಚಿನ ವಿರಕ್ತಮಠಗಳು ಹೇಗೆ ಬಸವನ ತತ್ವಗಳನ್ನು ಎಲ್ಲ ಅಡೆತಡೆಗಳ ವಿರೋಧಗಳ ನಡುವೆಯೂ ಉಳಿಸಿಕೊಂಡು ಬಂದವು ಮತ್ತು ಬೆಳೆಸಿದವು, ಬಸವತತ್ವಗಳನ್ನು ೬೦೦ ವರ್ಷ ಪರಿಪಾಲಿಸಿದವು ಎಂಬುದಂತೂ ಅತ್ಯಂತ ಸೋಜಿಗದ ಸಂಗತಿ. ಸುಮಾರು ೧೮೮೦ರಿಂದ ಬೆಳೆದುಬಂದ ಶರಣಧರ್ಮ ಸಂಬಂಧಿ ಪತ್ರಿಕೆಗಳು ಮಹತ್ವದ ಪಾತ್ರ ವಹಿಸಿವೆ. 'ಸ್ಟಾರ್ ಆಫ್ ಮೈಸೂರು' 'ಶಿವಾನುಭವ' 'ಮಹಾಮನೆ' 'ಬಸವ ಬೆಳಗು' 'ಬಸವ ಜರ್ನಲ್' ಬಸವಪಥ', 'ಬಸವ ದರ್ಶನ' ಮಹಾರಾಷ್ಟ್ರದ 'ಸಂಗಮ' ಆಂಧ್ರಪ್ರದೇಶದ 'ಬಸವ ಪ್ರಭು' ಇತ್ಯಾದಿ ನಿಯತಕಾಲಿಕೆಗಳು ಲಿಂಗಾಯತದ ಬೆಳವಣಿಗೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ. ಜೊತೆ ಜೊತೆಗೆ ಸಿದ್ಧಾಂತ ಶಿಖಾಮಣಿಯನ್ನು ವೈಜ್ಞಾನಿಕವಾಗಿ, ಐತಿಹಾಸಿಕವಾಗಿ ವಿಶ್ಲೇಷಿಸಿ ಅದರ ಸತ್ಯಾಸತ್ಯತೆಯನ್ನು ೧೯೪೨ರಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಬರೆದು ಬಿಚ್ಚಿಟ್ಟ ಎಂ.ಆರ್. ಸಾಖರೆಯವರ 'ಲಿಂಗಾಯತ ಧರ್ಮದ ಇತಿಹಾಸ ಮತ್ತು ದರ್ಶನ' ಎಂಬ ಗ್ರಂಥವಾಗಲಿ. ಕ್ರಿಶ್ಚಿಯನ್ ಧರ್ಮದ ಉತ್ತಂಗಿ ಚನ್ನಪ್ಪನವರಿಂದ ೧೯೪೦ರ ದಶಕದಲ್ಲಿ ಬರೆಯಲ್ಪಟ್ಟ 'ಅನುಭವ ಮಂಟಪ' ಐತಿಹಾಸಿಕ ಅಧ್ಯಯನದ ಮಹತ್ವದ ಸಾಧನೆಗಳು. ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರ 'ಸೇಯಿಂಗ್ಸ್ ಆಫ್ ಬಸವಣ್ಣ', ಆರ್.ಆರ್.ದಿವಾಕರ ಅವರ 'ವಚನಶಾಸ್ತ್ರ' ಎಂ.ಆರ್.ಶ್ರೀನಿವಾಸಮೂರ್ತಿ ಅವರ 'ವಚನಶಾಸ್ತ್ರ ಸಾರ' ಜೊತೆಗೆ ೧೯ನೇ ಶತಮಾನದಲ್ಲಿ ಲಿಂಗಾಯತ ಧರ್ಮವನ್ನು ಕುರಿತು ಪಾಶ್ಚಾತ್ಯ ಲೇಖಕರದ ಸಿ.ಪಿ.ಬ್ರೌನ್, ಉರ್ತ್, ವಿಲ್ಸನ್, ಕಿಟೆಲ್, ಮೋಗ್ಲಿಂಗ್, ಜೆಂಕಿನ್ಸ್, ಎಂಥೋವನ್, ಎಡ್ಗರ್ ಥರ್ಸ್ಟನ್, ಅಬೆ ದುಬ್ಬೆ, ಅರ್ಥರ್ ಮೈಲ್ಸ್, ಫ್ರಾನ್ಸಿಸ್ ಬುಕ್ಯಾನನ್ ಮತ್ತು ೨೦ನೇ ಶತಮಾನದಲ್ಲಿ ಬಿ.ಪಿ.ರೈಸ್, ಬಿ.ಎಲ್.ರೈಸ್, ಜೇಮ್ಸ್ ಕ್ಯಾಂಬೆಲ್, ವಿಲಿಯಂ ಮೆಕಾರ್ವಿಕ್, ಜೆ.ಎನ್. ಫರಕೈರ್, ಮೈಕಲ್ ಬ್ಲೇಕ್, ಇವರ ಗ್ರಂಥಗಳು ಲಿಂಗಾಯತವನ್ನು ಸರಿಯಾಗಿ ಅರ್ಥ ಮಾಡಿಸಿ ಕೊಡುವಲ್ಲಿ ಬಹಳಷ್ಟು ಪ್ರಮುಖ ಪಾತ್ರ ವಹಿಸಿವೆ. ಇತ್ತೀಚೆಗೆ ೨೦೦೩ರಲ್ಲಿ ಮೈಸೂರು ಜಿಲ್ಲೆಯ ಕುಂದೂರಿನ ಡಾ.ಇಮ್ಮಡಿ ಶಿವಬಸವಸ್ವಾಮಿಗಳು ಬರೆದ 'ಸಿದ್ಧಾಂತ ಶಿಖಾಮಣಿ ಹಾಗೂ

In Public domain. Digitization Muthulakshmi Research Academy

ಶ್ರೀಕರ ಭಾಷೆ ನಿಜ ನಿಲುವು' ಎಂಬ ಗ್ರಂಥವು ಮತ್ತು ೨೦೧೧ರಲ್ಲಿ ಹಂಪಿ ವಿಶ್ವವಿದ್ಯಾಲಯವು ಪ್ರಕಟಿಸಿದ ಬೋರಟ್ಟಿ ವಿಜಯಕುಮಾರ್ ಅವರ 'ಹಿರಿಯರ ಹಿರಿತನ ಹಿಂದೇನಾಯಿತು' ಎಂಬ ಗ್ರಂಥ ಲಿಂಗಾಯತದ ಮೇಲೆ ಬೆಳಕು ಚೆಲ್ಲಿದ್ದವು. ಈ ಎಲ್ಲ ಹಿನ್ನೆಲೆಯಲ್ಲಿ ಮೂಡಿ ಬರುವ ನಿರ್ಣಯವೆಂದರೆ, ಎಲ್ಲ ಜನರನ್ನು ಎಲ್ಲ ಕಾಲಕ್ಕೂ ಮೂರ್ಖರನ್ನಾಗಿ ಮಾಡುವುದು ಸಾಧ್ಯವಿಲ್ಲ. ವೈಜ್ಞಾನಿಕ ಯುಗದಲ್ಲಿ ಕಟ್ಟುಕಥೆಗಳು, ಮೂಢನಂಬಿಕೆಗಳು ಬಹಳ ದಿನ ಬದುಕಲಾರವು. ಈ ಅಂಶಗಳನ್ನು ಪೂಜ್ಯ ಡಾ.ಚಿದಾನಂದಮೂರ್ತಿಯವರು ಮತ್ತು ವೀರಶೈವರು ತಮ್ಮ ಸ್ವಾರ್ಥವನ್ನು ಬದಿಗಿಟ್ಟು ಸತ್ಯವನ್ನು ಒಪ್ಪಿಕೊಂಡರೆ ಎಲ್ಲರಿಗೂ ಒಳ್ಳೆಯದು, ಅವರಲ್ಲಿ ಪಂಚಾಚಾರ್ಯರೂ ಸೇರುತ್ತಾರೆ".

ಡಾ.ಎಸ್.ಎಂ.ಜಾಮದಾರರ ಸುದೀರ್ಘವಾದ ಮಾತುಗಳನ್ನು ತದೇಕ ಚಿತ್ತದಿಂದ ಆಲಿಸಿದ್ದರು ಸಭಿಕರು. ಅವರಲ್ಲಿ ಲಿಂಗಾಯತ ಧರ್ಮವನ್ನು ಬೋಧಿಸುವ, ಪ್ರಚಾರಪಡಿಸುವ ವಿರಕ್ತಮಠಾಧೀಶರು ಆಸಕ್ತಿಯಿಂದ ಮಾತುಗಳನ್ನು ಆಲಿಸಿದ್ದರು. ಅಂತಹ ಕೇಳುಗರಲ್ಲಿ ವೇದಿಕೆಯ ಮೇಲೆ ಗದುಗಿನ ಪೂಜ್ಯ ಜಗದ್ಗುರುಗಳೊಂದಿಗೆ, ಶ್ರೀ ಬಸವಜಯಮೃತ್ಯುಂಜಯ ಸ್ವಾಮಿಗಳು ಪಂಚಮಸಾಲಿ ಪೀಠ ಕೂಡಲಸಂಗಮ, ಶ್ರೀ ಬಸವಲಿಂಗ ಪಟ್ಟದ್ದೇವರು ಬಾಲ್ಕಿ ಹಿರೇಮಠ ಸಂಸ್ಥಾನ, ಶ್ರೀ ಶಿವಾನಂದ ಸ್ವಾಮಿಗಳು ಹಲಸೂರು ಮಠ, ಶ್ರೀ ಸಿದ್ಧರಾಮ ಮಹಾಸ್ವಾಮಿಗಳು ರುದ್ರಾಕ್ಷಿಮಠ ಬೆಳಗಾವಿ, ಶ್ರೀ ಗುರು ಮಹಾಂತೇಶ ಅಪ್ಪಗಳು ಇಳಕಲ್ಲ. ಡಾಕ್ಟರ್ ವಿಜಯ ಮಹಾಂತೇಶಸ್ವಾಮಿಗಳು ಇಳಕಲ್ಲ, ಚಿತ್ತರಗಿಮಠ, ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಮುರುಘಾಮಠ ಧಾರವಾಡ, ಶ್ರೀ ಗುರುಬಸವ ಸ್ವಾಮಿಗಳು ಯರನಾಳ, ಶ್ರೀ ಬಸವ ರಮಾನಂದ ಸ್ವಾಮಿಗಳು ಡಾಬಸ್ ಪೇಟೆ ಶ್ರೀ ಅಭಿನವ ಷಣ್ಮುಖ ಶಿವಯೋಗಿ ಸ್ವಾಮಿಗಳು, ಶ್ರೀ ಗುರುಬಸವಸ್ವಾಮಿಗಳು ಪಾಂಡೋಮಟ್ಟಿ ಮಠ ದಾವಣಗೆರೆ, ಶ್ರೀ ಶಿವಬಸವ ಸ್ವಾಮಿಗಳು ಗಚ್ಚಿನಮಠ ಅಥಣಿ, ಶ್ರೀ ಮಲ್ಲಿಕಾರ್ಜುನಸ್ವಾಮಿಗಳು ರುದ್ರದೇವರ ಮಠ ಸಿರ್ಸಿ, ಶ್ರೀ ಶಾಂತಲಿಂಗ ಮಹಾಸ್ವಾಮಿಗಳು ಹೊಸಮಠ ಹಾವೇರಿ, ಶ್ರೀ ಬಸವಮರುಳು ಸಿದ್ಧಸ್ವಾಮಿಗಳು ಬಸವ ಕೇಂದ್ರ ಶಿವಮೊಗ್ಗ, ಶ್ರೀ ಸಿದ್ಧಲಿಂಗಮಹಾಸ್ವಾಮಿಗಳು ಲಿಂಗಸ್ಗೂರು, ಚೆಲುವೆ ಸ್ವಾಮಿ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ದಯಾನಂದ ಶ್ರೀಗಳು ಬೆಂಗಳೂರು, ಶ್ರೀ ರುದ್ರಮುನಿ ಸ್ವಾಮೀಜಿ, ಶಂಕರಲಿಂಗ ಸ್ವಾಮಿಗಳು ಶಂಕರಲಿಂಗ ಗುಂಡಿ, ಶ್ವಾಸಗುರು ವಚನಾನಂದ ಸ್ವಾಮೀಜಿ, ಶ್ರೀ ಶಿವಾನಂದ ಸ್ವಾಮಿಗಳು ಅನುಭವ ಮಂಟಪ ಬಸವ ಕಲ್ಯಾಣ, ಶ್ರೀ ಗುರುಬಸವ ಪಟ್ಟದ್ದೇವರು ಭಾಲ್ಕಿ, ಶರಣೆ ಅಕ್ಕಮಹಾದೇವಿ ತಾಯಿ

In Public domain. Digitization Muthulakshmi Research Academy

ಶೀಲಾಮಠ, ಶರಣೆ ಜಯದೇವಿ ತಾಯಿ ಗುರುಮಲ್ಲೇಶ ದಾಸೋಹಮಠ ಕೆ.ಆರ್.ನಗರ, ಶರಣೆ ಚಿನ್ಮಯದೇವಿ ಗುರುಮಲ್ಲೇಶಮಠ, ಬಸವಕೇತೇಶ್ವರ ಸ್ವಾಮಿಗಳು ಮಾದಾರಪೀಠ ಚಿತ್ರದುರ್ಗ, ಶ್ರೀ ಬಸವಪ್ರಭು ಸ್ವಾಮಿಗಳು ವಿರಕ್ತಮಠ ದಾವಣಗೆರೆ ಇವರೆಲ್ಲರೂ ವೇದಿಕೆ ಮೇಲೆ ಆಸೀನರಾಗಿದ್ದರು. ಸಭೆಯ ನಂತರ ಪತ್ರಿಕಾವರದಿಗಾರರನ್ನು ಉದ್ದೇಶಿಸಿ ಪ್ರಮುಖ ಮಠಾಧೀಶರು ಲಿಂಗಾಯತ ಧರ್ಮದ ಸಿದ್ಧಾಂತಗಳನ್ನು ವಿವರಿಸುತ್ತ ಅದು ಹೇಗೆ ವೈದಿಕ ಧರ್ಮದಿಂದ ಭಿನ್ನವೆಂದು ತಿಳಿಸಿದ್ದರು.

ಸಭಾಭವನದ ವೇದಿಕೆಯ ಎದುರಿನಲ್ಲಿ ಕರ್ನಾಟಕ ಸರ್ಕಾರದ ಹಿರಿಯ ಸಚಿವರಾದ ಬಸವರಾಜ ರಾಯರೆಡ್ಡಿ, ಡಾ.ಶರಣಪ್ರಕಾಶ್ ಪಾಟೀಲ, ವಿನಯ ಕುಲಕರ್ಣಿ ಡಾ.ಎಂ.ಬಿ. ಪಾಟೀಲ ಇವರೊಂದಿಗಿದ್ದರು ಶಾಸಕರಾದ ಜಿ. ಎಸ್.ಪಾಟೀಲ, ಕಲ್ಬುರ್ಗಿಯ ಮಾಲೀಕಯ್ಯ ಗುತ್ತೇದಾರ್, ವಿದಾನಪರಿಷತ್ ಸದಸ್ಯ ಮೋಹನ್ ಕೊಂಡಜ್ಜಿ, ಮಾಜಿ ಶಾಸಕರಾದ ಅಲ್ಲಂ ವೀರಭದ್ರಪ್ಪ, ಮಾಜಿ ಶಾಸಕರಾದ ಶ್ರೀ ಮಹದೇವ ಹೊರಟ್ಟಿ, ಗದಗಿನ ಪ್ರಭಣ್ಣ ಹುಣಸಿಕಟ್ಟಿ, ಬೀದರಿನ ಬಾಬು ವಾಲಿ, ಬಸವರಾಜ ದನ್ನೂರ, ಹುಬ್ಬಳ್ಳಿಯ ರಾಜಶೇಖರ ಮೆಣಸಿನಕಾಯಿ, ಗಣೇಶ ಪಾಟೀಲ, ಕಲ್ಬುರ್ಗಿಯ ಎಸ್.ಎಸ್.ಪಾಟೀಲ ವಕೀಲರು, ಕರ್ನಾಟಕದ ನಾನಾ ಭಾಗಗಳಿಂದ ಬಂದಿದ್ದ ಹಿರಿಯ ಕಿರಿಯ ನಾಯಕರು, ಲಿಂಗಾಯತ ಧರ್ಮಾಭಿಮಾನಿಗಳು, ಅಧಿಕಾರಿಗಳಿದ್ದರು. ಸಭೆ ಅದ್ಭುತ ಯಶಸ್ಸು ಗಳಿಸಿತ್ತು. ಲಿಂಗಾಯತ ಧರ್ಮ ಹೇಗೆ? ಯಾಕೆ? ಹಿಂದೂ ಧರ್ಮಕ್ಕಿಂತ ಭಿನ್ನ ಮತ್ತು ಲಿಂಗಾಯತವು ವೀರಶೈವಕ್ಕಿಂತ ಹೇಗೆ ಭಿನ್ನ ಎಂದು ವಿವರವಾಗಿ ಚರ್ಚೆಯಾಯಿತು. ಲಿಂಗಾಯತ ಮತ್ತು ವೀರಶೈವ ಒಂದೇ ಎಂದು ಹೇಳುತ್ತ, ಅದು ಹಿಂದೂಧರ್ಮದ ಭಾಗ ಎಂದು ಸುಳ್ಳು ಹೇಳುವ ಪಂಚಪೀಠಾಧೀಶರ ನಡೆಯನ್ನು ನಾಡಿನ ಎದುರಿಗೆ ಬಿಚ್ಚಿಟ್ಟಿತ್ತು ಈ ಸಭೆ. ಸಭೆಯ ನಂತರ ಕನ್ನಡ ನಾಡಿನಾದ್ಯಂತ ಚರ್ಚೆಗಳು ಪ್ರಾರಂಭವಾದವು.

ಲಿಂಗಾಯತ ಧರ್ಮದ ಇತಿಹಾಸದಲ್ಲಿ ಹೊಸ ಐತಿಹಾಸಿಕ ಅಧ್ಯಾಯವನ್ನು ಬರೆದವು ಕರ್ನಾಟಕದ ಐದು ಲಿಂಗಾಯತ ರ್‍ಯಾಲಿಗಳು. ಲಿಂಗಾಯತ ಧರ್ಮ ಬೀದರಿನಲ್ಲಿ ಬೆಳಗಿದ ದೀಪದ ಪ್ರಕಾಶ ಇಡೀ ಕರ್ನಾಟಕದ ತುಂಬ ಪಸರಿಸಿತು. ಸುಪ್ತವಾಗಿದ್ದ ಲಿಂಗಾಯತ ಧರ್ಮದ ಬೇಡಿಕೆಯ ಬೀಜಗಳು ಚಿಗುರೊಡೆಯಲಾರಂಭಿಸಿದವು. ಈ ಧರ್ಮಕ್ಕೆ ದೇಶದ ಸಾರ್ವಭೌಮನ ಅಥವಾ ಸಾಮಂತ ರಾಜರ ರಾಜಾಶ್ರಯ ಎಂದೂ ದೊರಕಿರಲಿಲ್ಲ. ಅಂದು ಬಿಜ್ಜಳನ ಪ್ರಧಾನಿಯಾಗಿದ್ದ ಬಸವಣ್ಣನವರಿಂದ ಸ್ಥಾಪಿತವಾದ ಧರ್ಮದ ತೇರನ್ನು ನಿರಂತರವಾಗಿ ಎಳೆದವರು ಚಕ್ರಾಧಿಪತಿಗಳಲ್ಲ, ಸಾಮಂತ

In Public domain. Digitization Muthulakshmi Research Academy

ರಾಜರಲ್ಲ, ಅವರ ಆಸ್ಥಾನದಲ್ಲಿದ್ದ ಅಮಾತ್ಯರು. ಕಲ್ಯಾಣಕ್ರಾಂತಿಯ ನಂತರ ಮುಳುಗುತ್ತಲಿದ್ದ ಧರ್ಮವನ್ನು ಎತ್ತಿಹಿಡಿಯಲು ಬಂದವರು ಅಮಾತ್ಯರೇ. ವಿಜಯನಗರದ ಪ್ರೌಢದೇವರಾಯ ಮತ್ತು ಆತನ ಅಮಾತ್ಯರುಗಳಾಗಿದ್ದ ಲಕ್ಕಣ್ಣ ದಂಡೇಶ ಮತ್ತು ಜಕ್ಕಣಾರ್ಯ ಅವರ ಅಪರಿಮಿತ ಸೇವೆ ಈ ಧರ್ಮಕ್ಕೆ ಲಭಿಸಿತು(೧೪೧೯–೪೬)[೩]. ಅಮಾತ್ಯರಿಂದ ಆರಂಭವಾದ ಧರ್ಮದ ತೇರನ್ನು ಮತ್ತೆ ಕರ್ನಾಟಕದ ಅಮಾತ್ಯರು ಎಳೆಯಲಾರಂಭಿಸಿದ್ದು ಈ ಧರ್ಮದ ವೈಶಿಷ್ಟ್ಯ. ಹಿಂದೆ ಮೈಸೂರು ಅರಸರು ಇದಕ್ಕೆ ಮನಸೋತು ಕೆಲವರ್ಷ ಲಿಂಗಾಯತ ಧರ್ಮವನ್ನು ಪಾಲಿಸಿದರೆ ಆಸ್ಥಾನದಲ್ಲಿದ್ದ ವೈದಿಕರು ಅದನ್ನು ಮುಂದುವರಿಯಗೊಡಲಿಲ್ಲ. ಆದರೆ ಅದು ಅವರದೇ ರಾಜ್ಯದಿಂದ ಸಿಡಿದುಹೋದ ಪಕ್ಕದ ರಾಜ್ಯ ಕೆಳದಿಯಲ್ಲಿ ಅರಳಿತ್ತು. ಸಾಮಂತರಾಜ 'ಮನೆಧರ್ಮ' ಆಗಿ ಉಳಿದ ಈ ಧರ್ಮ ಎಂದೂ ಆಸ್ಥಾನ ಅಥವಾ ರಾಜಧರ್ಮವಾಗಲಿಲ್ಲ.

ಅಂಥದೊಂದು ಪದವಿ ಇದಕ್ಕೆ ಬೇಕಾಗಿಯೂ ಇರಲಿಲ್ಲವೆಂದೇ ಹೇಳಬಹುದು. ಕಾರಣ ಈ ಧರ್ಮವು ಕಾಯಕಯೋಗಿಗಳು ನಡೆದು ಕಟ್ಟಿದ ಒಂದು ವಿಶಿಷ್ಟ ಧರ್ಮವಾಗಿದೆ. ಚಿಂತಕ ಡಾ.ದೇವನೂರ ಮಹಾದೇವ ಅವರ ಮಾತುಗಳು ಇಂತಿವೆ. "ಬಹುಶಃ ಜಗತ್ತಿನಲ್ಲಿ ಎಲ್ಲ ಧರ್ಮಗಳಿಗೂ ಒಬ್ಬ ಪ್ರವಾದಿ, ಉಳಿದವರೆಲ್ಲರೂ ಅನುಯಾಯಿಗಳು. ಆದರೆ ೧೨ನೆಯ ಶತಮಾನದ ವಚನಾಂದೋಲನದಲ್ಲಿ ಒಬ್ಬ ಪ್ರವಾದಿಯೂ ಇಲ್ಲ. ಅವನ ಅನುಯಾಯಿಗಳು ಇಲ್ಲ. ಇಲ್ಲಿ ಎಲ್ಲರೂ ತಂತಮ್ಮ ಪ್ರಜ್ಞೆಯನ್ನೇ ತಮ್ಮ ದೈವ ಮಾಡಿಕೊಂಡ ಒಂದು ಸಮೂಹವಾಗಿ ಅರಳುವ ಒಂದು ಅದ್ಭುತ. ಜಗತ್ತಿನಲ್ಲಿ ಎಲ್ಲೂ ಇಲ್ಲದ್ದು ಈ ನೆಲದಲ್ಲಿ ಸಂಭವಸಿಬಿಟ್ಟಿತ್ತು."[೩] ಹೌದು ಈ ಚಮತ್ಕಾರ ನಡೆದದ್ದು ಕನ್ನಡದ ನೆಲದಲ್ಲಿ. ಕನ್ನಡಿಗರಿಂದ, ದಕ್ಷಿಣ ಭಾರತದ ದ್ರಾವಿಡರಿಂದ.

ಬೆಳಗಾವಿ ರ್‍ಯಾಲಿ

ಕಲ್ಯಾಣಕ್ರಾಂತಿಯ ನಂತರ ಬಿಜ್ಜಳನ ಸೈನ್ಯ ಶರಣರನ್ನು ವಧೆ ಮಾಡಲಾರಂಭಿಸಿದಾಗ ಕಲ್ಯಾಣ ತೊರೆದ ಶರಣರು ಬೆಳ್ಳಿ, ಬಂಗಾರ, ನಾಣ್ಯಗಳನ್ನು ಹೊತ್ತೊಯ್ಯಲಿಲ್ಲ. ಅವರು ತಮ್ಮ ತಲೆಯ ಮೇಲೆ ಹೊತ್ತೊಯ್ದಿದ್ದು ವಚನದ ಗಂಟುಗಳನ್ನು. ಹತ್ಯಾಕಾಂಡದ ನಂತರ ರಾತ್ರೋರಾತ್ರಿ ಕಲ್ಯಾಣ ತೊರೆದು ಹೊರಟುನಿಂತದ್ದು ದಕ್ಷಿಣಕ್ಕಿರುವ ಉಳವಿಯತ್ತ. ಕಾರಣ ಉಳವಿ ಎಂಬುದು ಒಂದು ದಟ್ಟಡವಿ. ಕಲ್ಯಾಣ ರಾಜ್ಯದ ಸರಹದ್ದಿನ ಆಚೆಗಿದ್ದ ಪ್ರದೇಶ.

ಬೆಳಗಾವಿ ಜಿಲ್ಲೆ ಲಿಂಗಾಯತದ ಹೃದಯ. ಈ ಜಿಲ್ಲೆಯ ಜನಸಾಮಾನ್ಯ ರಕ್ತದಲ್ಲಿ ಅನ್ಯಾಯದ ವಿರುದ್ಧ ಸಿಡಿದೇಳುವ ಗುಣವಿದೆ. ಕ್ರಾಂತಿಯ ಕುರುಹಿದೆ. ಶೌರ್ಯದ ಕಿಚ್ಚಿದೆ. ಸುಪ್ತವಾಗಿದ್ದ ಲಿಂಗಾಯತದ ಅಭಿಮಾನವನ್ನು ಬಡಿದೆಬ್ಬಿಸಿದ

In Public domain. Digitization Muthulakshmi Research Academy

ಕೀರ್ತಿ ಪೂಜ್ಯ ಲಿಂಗಾನಂದ ಸ್ವಾಮೀಜಿಯವರಿಗೆ ಮಾತೆ ಮಹಾದೇವಿಯವರಿಗೆ ಸಲ್ಲುತ್ತದೆ. ಕಠಿಣಕಾಲದಲ್ಲಿ ಲಿಂಗಾಯತರಿಗೆ ಮಾರ್ಗದರ್ಶನ ನೀಡಿ, ತ್ರಿವಿಧ ದಾಸೋಹ ಮಾಡಿದ್ದು ನಾಗನೂರು ರುದ್ರಾಕ್ಷಿಮಠ. ಉತ್ತರ ಕರ್ನಾಟಕದಲ್ಲಿ ಅಕ್ಷರಕ್ರಾಂತಿಗೆ ಕಾರಣೀಕರ್ತ ಇದೆ ಬೆಳಗಾವಿಯ ಅರಟಾಳ ರುದ್ರಗೌಡರು ಮತ್ತು ಕೆ.ಎಲ್.ಇ. ಸಂಸ್ಥೆಯ ರೂವಾರಿಗಳಾದ ಬೆಳಗಾವಿಯ ಸಪ್ತರ್ಷಿಗಳು. ಇಂತಹ ಹಿನ್ನೆಲೆಯ ಬೆಳಗಾವಿಯ ಲಿಂಗಾಯತ ನವಯುವಕರಿಗೆ ಬೀದರಿನ ಲಿಂಗಾಯತ ಮಹಾ ಅಧಿವೇಶನ ಸ್ಫೂರ್ತಿ ನೀಡಿತು. ಬೀದರಿನ ಅಧಿವೇಶನಕ್ಕೆ ಆಹ್ವಾನವಿಲ್ಲದೆ ಮೂವತ್ತು ಕಾರುಗಳಲ್ಲಿ ೪೦೦ ಕಿ.ಮೀ. ಪ್ರವಾಸ ಮಾಡಿ ಮಹಾಧಿವೇಶನವನ್ನು ಕಣ್ತುಂಬಿಕೊಂಡವರು ಇದೇ ಬೆಳಗಾವಿ ಯುವಕರು.

ಬೀದರ್ ಅಧಿವೇಶನದ ದಿನಗಳನ್ನು ಸ್ಮರಿಸುತ್ತ ಶಂಕರ ಗುಡಸ್ ಹೇಳುತ್ತಾರೆ. "ಬೀದರಿನಲ್ಲಿ ಲಿಂಗಾಯತ ಅಧಿವೇಶನ ಇದೆ ಹೋಗೋಣವೆ?" ಕೇಳಿದರು ನಮ್ಮ ರಾಷ್ಟ್ರೀಯ ಬಸವದಳದ ಅಧ್ಯಕ್ಷರಾದ ಅಶೋಕ ಬೆಂಡಿಗೇರಿಯವರು. ಏನಾದರೂ ಮಾಡಬೇಕೆಂದು ದಿನವೂ ಚಿಂತಿಸುತ್ತಿದ್ದ ನಮಗೆ ಅದು ಪ್ರೇರಣೆ ಆದೀತು ಎಂಬ ಸಣ್ಣ ದೀಪ ಕಂಡಂತಾಯಿತು. 'ಸರಿ' ಎಂದೆವು ನಾನು, ವೀರೇಶ ಹಲಕಿ. ನಮ್ಮ ಪ್ರಯಾಣದ ವಿಷಯ ಗುಟ್ಟಾಗಿ ಉಳಿಯದೆ ಪಸರಿಸಿಬಿಟ್ಟಿತು. ಎರಡೇ ದಿನದಲ್ಲಿ ಮೂವತ್ತು ಕಾರುಗಳು ಹೊರಡಲಣಿಯಾದವು. "ಬೀದರಿನ ಅಧಿವೇಶನ ನಮ್ಮ ಲಿಂಗಾಯತ ಅಸ್ಮಿತೆಯನ್ನು ಬಡಿದೆಬ್ಬಿಸಿತು. ಮರಳಿ ಬರುವ ದಾರಿಯಲ್ಲಿ ಎಲ್ಲರ ಮನದಲ್ಲೂ ಒಂದೆ ಜಪ. 'ನಾವೂ ಇಂತಹ ಕಾರ್ಯಕ್ರಮವನ್ನು ಬೆಳಗಾವಿಯಲ್ಲಿ ಮಾಡಲೇಬೇಕು' ಎಂಬುದು. ಎರಡನೆಯ ದಿವಸಕ್ಕೆ ರಾಷ್ಟ್ರೀಯ ಬಸವದಳ ಪದಾಧಿಕಾರಿಗಳ ಸಭೆ ಕರೆದೆವು. ಸಭೆ ಮಾಡುವ ಬಗ್ಗೆ ಎಲ್ಲರ ಒಲವಿದೆ ಎಂದು ಮನದಟ್ಟಾಯಿತು. ರಾಷ್ಟ್ರೀಯ ಬಸವದಳವಲ್ಲದೆ ಬಸವಪರ ಸಂಘಟನೆಗಳೆಲ್ಲವೂ ಸೇರಿ ಕಾರ್ಯಕ್ರಮ ಮಾಡೋಣ ಎಂಬ ಅಭಿಪ್ರಾಯ ಬಹು ಸದಸ್ಯರಿಂದ ಬಂದಿತು. ಎಲ್ಲರ ಅಭಿಪ್ರಾಯದಂತೆ ವಚನಪಿತಾಮಹ ಫ.ಗು.ಹಳಕಟ್ಟಿ ಭವನದಲ್ಲಿ ೧೨೦ ಬಸವಪರ ಸಂಘಟನೆಗಳ ಒಂದು ಸಭೆ ಕರೆದೆವು. ಸಭೆ ಅಭೂತಪೂರ್ವವಾಗಿತ್ತು. ಭಾಗವಹಿಸಿದವರೆಲ್ಲರಿಗೂ ಬಸವನ ಹಸಿವಿತ್ತು. ಸಂಘಟನೆಗಳ ಪದಾಧಿಕಾರಿಗಳ ಉತ್ಸಾಹ ನಮ್ಮ ಮನೋಭಾವವನ್ನು ನೂರ್ಮಡಿಗೊಳಿಸಿತ್ತು. 'ಇದನ್ನು ಇನ್ನಷ್ಟು ವಿಸ್ತಾರಗೊಳಿಸೋಣ' ಎಂದ ಗೆಳೆಯ ವೀರೇಶ ಹಲಕಿ. 'ಆಗಲಿ' ಎಂದೆ ನಾನು. ರಾಷ್ಟ್ರೀಯ ಬಸವದಳ ಕಣಬರಗಿಯಲ್ಲಿ ಎರಡನೆಯ ಪೂರ್ವಭಾವಿ ಸಭೆ ಕರೆಯಲು ನಿರ್ಧರಿಸಿದೆವು. ೨೪೪ ಬಸವಪರ ಸಂಘಟನೆಗಳಿಗೆ ಕರೆ ಹೋಯಿತು. ಸುಮಾರು ಐದು ನೂರು ಪದಾಧಿಕಾರಿಗಳು ಸಭೆಯಲ್ಲಿ

In Public domain. Digitization Muthulakshmi Research Academy

ಪಾಲ್ಗೊಂಡರು. ಅವರಲ್ಲಿ ಯಾರೊಬ್ಬರೂ ಅಪಸ್ವರ ತೆಗೆಯಲಿಲ್ಲ, ಮಂದಿನ ಸಭೆಯ ಜಯಾಪಜಯಗಳ ಬಗ್ಗೆ ಮಾತಾಡಲಿಲ್ಲ. ನಮಗೆಲ್ಲರಿಗೂ ಬಸವನ ಹುಚ್ಚು ಹಿಡಿದಿತ್ತು. ಆ ಹುಚ್ಚು ನನ್ನದೊಬ್ಬನದೇ ಆಗಿರಲಿಲ್ಲ. ಅದಾಗಿತ್ತು ಲಿಂಗಾಯತ ಅಸ್ಮಿತೆಯ ಹುಚ್ಚು. ತರುಣರಾದ ನಮಗೆ ಮಾರ್ಗದರ್ಶನದ ಅವಶ್ಯಕತೆ ಇತ್ತು. ಸರಿಯಾದ ಮಾರ್ಗದರ್ಶನ ನಾಗನೂರು ಮಠದಿಂದ ಸಿಗುತ್ತದೆ ಎಂಬ ಭಾವನೆ ಎಲ್ಲರದಾಗಿತ್ತು. ಸಭೆಯಲ್ಲಿದ್ದ ಐದು ನೂರು ಜನರ ಒಂದು ಗುಂಪು ನಾಗನೂರ ಮಠದತ್ತ ಹೊರಳಿತು. ಇಷ್ಟೊಂದು ಜನರು ಒಮ್ಮೆಲೇ ಬಂದದ್ದು ಕಂಡ ಸೆಕ್ಯುರಿಟಿ ಅಲರ್ಟ್ ಆಯಿತು. 'ದೊಡ್ಡಗುಂಪು ಶ್ರೀ ಸಿದ್ಧರಾಮ ಸ್ವಾಮೀಜಿ ಕಾಣಲು ಬಂದಿದೆ' ಎಂಬ ಸಂದೇಶ ಸ್ವಾಮಿಗಳಿಗೆ ತಲುಪಿತ್ತು. ಸನ್ಯಾಸಿಗೆ ಯಾರ ಭಯ! "ಎಲ್ಲರನ್ನೂ ಒಳಗೆ ಬಿಡು, ಹಾಲಿನಲ್ಲಿ ಅವರಿಗೆ ಉಪಚಾರ ಮಾಡಿ" ಎಂದರು ಗುರುಗಳು. ಎರಡೇ ನಿಮಿಷದಲ್ಲಿ ಅಪ್ಪಾ ಅವರು ಬಂದರು. "ಏನು ಎಲ್ಲರಿಗೂ ನಾನು ಒಂದೇ ಸಮಯದಲ್ಲಿ ನೆನಪಾಗಿ ಬಿಟ್ಟಿದ್ದೆನಲ್ಲ?" ಎಂದರು ಮುಗುಳ್ನಗುತ್ತ. ಅಶೋಕ ಬೆಂಡಿಗೇರಿ ಬಂದ ವಿಷಯ ತಿಳಿಸಿದರು. ಆಗ ಸ್ವಾಮಿಗಳು "ನಾನು ಮಾಡಬೇಕಾದ ಕೆಲಸವನ್ನು ನೀವು ನನಗೆ ನೆನಪಿಸುತ್ತಿದ್ದೀರಿ. ನೀವು ನನಗೆ ಆನೆಯ ಬಲವನ್ನು ತುಂಬಿದ್ದೀರಿ. ಹಗಲು ರಾತ್ರಿಯೆನ್ನದೆ ಈ ಕಾರ್ಯ ಇಂದಿನಿಂದಲೇ ಮಾಡೋಣ" ಎಂದುಬಿಟ್ಟರು. ಗುಡ್ಡ ಕಡ್ಡಿಯಾಗಿತ್ತು, ತಲೆ ಮೇಲಿನ ಭಾರ ಇಳಿದಿತ್ತು. ಬಂದವರೆಲ್ಲರೂ ಸಾರ್ಥಕ ಭಾವದಿಂದ ಗುರುಗಳಿಗೆ ವಂದಿಸಿ ಹೊರನಡೆದೆವು.

'ದೇಶ ಕಟ್ಟಲು ಒಬ್ಬನೆ ಸಾಕು' ಎಂಬ ನಾಡುನುಡಿ ಎಲ್ಲರೂ ಕೇಳಿದ್ದೇವೆ. ಬೆಳಗಾವಿ ಅಧಿವೇಶನ ಮಾಡಿದ್ದು ಯಾವ ರಾಷ್ಟ್ರೀಯ ಅಥವಾ ಪ್ರಾದೇಶಿಕ ನಾಯಕನಲ್ಲ. ಅದನ್ನು ಸಾಕಾರಗೊಳಿಸಿದ್ದು ನವಯುವಕರು. ಸಂಘಟನೆಯ ಇನ್ನೊಂದು ಸ್ತಂಭವಾಗಿದ್ದ ಬೈಲಹೊಂಗಲದ ವೀರೇಶ ಹಲಕಿ ಹೇಳುತ್ತಾರೆ "ಬೀದರ್ ರ‍್ಯಾಲಿಯು ನಮ್ಮನ್ನು ಕೊರೆಯುತ್ತಿತ್ತು. ನಮ್ಮ ಸಂಗಡಿಗರು ಅದನ್ನು ಸಾಕಾರಗೊಳಿಸಲು ಹಾತೊರೆಯುತ್ತಿದ್ದರು. ಗೆಳೆಯರ ಉತ್ಸಾಹ ತಣ್ಣಗಾಗುವ ಮುಂಚೆ ನಾವು ರ‍್ಯಾಲಿಯ ದಿನಾಂಕ, ಸಭೆ ನಡೆಯುವ ಸ್ಥಳದ ಬಗ್ಗೆ ನಿರ್ಣಯ ಕೈಗೊಳ್ಳಬೇಕಾಗಿತ್ತು. ಕಬ್ಬಿಣ ಕಾದಾಗಲೇ ಬಡಿದು ಆಕಾರಕ್ಕೆ ತರಬೇಕೆಂಬಂತೆ ಗೆಳೆಯರ ಹಸಿವನ್ನು ಇಂಗಿಸಲು ಬೀದರ್ ರ‍್ಯಾಲಿಯು ನಡೆದ ಒಂದು ತಿಂಗಳೊಳಗಾಗಿ ಎರಡನೆಯ ರ‍್ಯಾಲಿ ಮಾಡಲು ಮನದಲ್ಲಿ ನಿಶ್ಚಯಿಸಿಬಿಟ್ಟಿದ್ದೆ. ಕೇವಲ ಔಪಚಾರಿಕ ಒಪ್ಪಿಗೆ ಪಡೆಯುವುದು ಮಾತ್ರ ಬಾಕಿಯಿತ್ತು. ನಮ್ಮ ವಿಚಾರವನ್ನು ಗುರುಗಳ ಎದುರಿಗಿಟ್ಟೆವು. "ಕೇವಲ ೨೫-೨೬ ದಿನದಲ್ಲಿ ಅಷ್ಟೊಂದು ದೊಡ್ಡ ಪ್ರಮಾಣದ ಸಭೆ ನಡೆಸಬಹುದೆ?

In Public domain. Digitization Muthulakshmi Research Academy

ಎಂದು ಕೇಳಿದರು ಪೂಜ್ಯ ಸಿದ್ಧರಾಮ ಸ್ವಾಮೀಜಿ. ಆಗ ಶಂಕರ ಗುಡಸ್ "ಅಪ್ಪಾರ ಬೆಳಗಾವಿ ಜಿಲ್ಲೆಯಲ್ಲಿ ಒಂಬತ್ತು ನೂರು ಹಳ್ಳಿಗಳಿವೆ. ಅವುಗಳಲ್ಲಿ ಶೇ. ೭೦ರಷ್ಟು ಹಳ್ಳಿಗಳನ್ನು ಕವರ್ ಮಾಡೋಣ. ನೀವು ಜವಾಬ್ದಾರಿ ಹಂಚಿಕೊಡಿ. ನಾವು ಹಳ್ಳಿ ಹಳ್ಳಿಗೆ ಹೋಗಿ ಜನರನ್ನು ಆಹ್ವಾನಿಸುತ್ತೇವೆ" ಎಂದಿದ್ದರು ಶಂಕರ. "ಶಂಕರ ಗುಡಸ್ ಒಬ್ಬ ದೈತ್ಯ ಕೆಲಸಗಾರ. ಗುಡಸ್ ಅವರ ಇಡೀ ಕುಟುಂಬ ಲಿಂಗಾಯತ ಸಮಾಜದ ಒಳಿತಿಗಾಗಿ ದುಡಿಯುತ್ತಿರುವ ಕಟ್ಟಾ ಅಭಿಮಾನಿ ಕುಟುಂಬ. ತನು ಮನ ಧನವನ್ನು ಲಿಂಗಾಯತ ಸಮಾಜಕ್ಕಾಗಿ ಮೀಸಲಿಟ್ಟ ಕುಟುಂಬ" ಎನ್ನುತ್ತಾರೆ ವೀರೇಶ ಹಲಕಿ ತಮ್ಮ ಸ್ನೇಹಿತನ ವ್ಯಕ್ತಿತ್ವವನ್ನು ವಿವರಿಸುತ್ತಾ.

ಬೆಳಗಾವಿಯಿಂದ ಬೇರೆ ಜಿಲ್ಲೆಗಳಿಗೆ ಸಂಪರ್ಕಿಸುವ ರಸ್ತೆಯ ಆಧಾರದಲ್ಲಿ ನಮ್ಮ ಸಂಘಟನೆ ರೂಪರೇಷೆಗಳು ತಯಾರಾದವು. ಯರಗಟ್ಟಿಯತ್ತ ಸಾಗುವ ಹಳ್ಳಿಗಳನ್ನು ಸಂಪರ್ಕಿಸಲು ಒಂದು ತಂಡ, ಸವದತ್ತಿಯ ಮಾರ್ಗವಾಗಿ ಬೈಲಹೊಂಗಲ ಸವದತ್ತಿ ತಾಲ್ಲೂಕಿನ ಹಳ್ಳಿಗಳನ್ನು ಸಂಪರ್ಕಿಸಲು ಒಂದು ತಂಡ, ಕಿತ್ತೂರು ಹಾಗೂ ಧಾರವಾಡದವರೆಗಿನ ಹಳ್ಳಿಗಳನ್ನು ಸಂಪರ್ಕಿಸುವ ಮತ್ತೊಂದು ತಂಡ, ಕೊಲ್ಲಾಪೂರ ಮಾರ್ಗದ ತಂಡ ಹಾಗೂ ವಡಗಾಂವ ಖಾನಾಪುರ ತಾಲ್ಲೂಕಿನ ಹಳ್ಳಿಗಳನ್ನು ಮುಟ್ಟುವ ಇನ್ನೊಂದು ತಂಡವನ್ನು ಕಟ್ಟಿದೆವು. ಪ್ರತಿ ತಂಡದಲ್ಲಿ ಎರಡು ವಾಹನ ಮತ್ತು ಇಪ್ಪತ್ತು ಕಾರ್ಯಕರ್ತರ ಪಡೆಯಿತ್ತು. ಯಾವುದೇ ಕಾರಣಕ್ಕೂ ಹತ್ತು ಕಾರ್ಯಕರ್ತರಿಗಿಂತ ಕಡಿಮೆ ಜನರು ಪ್ರಚಾರಕ್ಕೆ ತೆರಳುವಂತಿಲ್ಲ ಎಂಬ ಜವಾಬ್ದಾರಿ ತಂಡದ ನಾಯಕನಿಗೆ ವಹಿಸಲಾಗಿತ್ತು.

ಜನಜಾಗೃತಿ ಮಾಡುವಾಗಿನ ಒಂದು ಅಪರೂಪದ ಪ್ರಸಂಗವನ್ನು ನೆನಪಿಸಿಕೊಳ್ಳುತ್ತಾರೆ ಅವರಾದಿಯ ಅಶೋಕ ಅಳ್ನಾವರ ಅವರು. "ನೇಸರಗಿ ಹತ್ತಿರವಿರುವ ಮೊಹರೆ ಎಂಬ ಹಳ್ಳಿಯಲ್ಲಿ ಲಿಂಗಾಯತರು ಹಿಂದುಗಳಲ್ಲ. ನಮ್ಮ ಧರ್ಮ ಬೇರೆ ಹಿಂದೂಧರ್ಮ ಬೇರೆ ಎಂದು ನಾವು ಮಾತು ಪ್ರಾರಂಭಿಸಿದ್ದೆವು. ಆಗ ಅಲ್ಲೊಬ್ಬ ಹಿರಿಯರು ನಮ್ಮ ಮಾತಿಗೆ ಸಹಮತ ವ್ಯಕ್ತಪಡಿಸದೆ ನಮ್ಮೊಂದಿಗೆ ವಾದಕ್ಕೆ ಇಳಿದರು. ಯಾವ ಆಧಾರದಲ್ಲಿ ಈ ಧರ್ಮ ಹಿಂದೂಧರ್ಮದ ಭಾಗವಲ್ಲ ಹೇಳಿ ಎಂದು ನಮಗೆ ಸವಾಲು ಹಾಕಿದರು. ಆಗ ನಮ್ಮೊಂದಿಗಿದ್ದ ಎಲ್ಲ ಕಾರ್ಯಕರ್ತರು ತಮ್ಮ ತಮ್ಮ ನಿಲುವುಗಳನ್ನು ಮಂಡಿಸಿದರು. ಆಗ ಆ ಹಿರಿಯರು "ನನಗೆ ಸರಿಯಾದ ವಿಷಯವನ್ನು ತಿಳಿಸಿದ್ದಕ್ಕೆ ದನ್ಯವಾದಗಳು" ಎಂದರು.

ಈ ಘಟನೆಯ ಮುಂದುವರಿದ ಭಾಗವು ಇನ್ನೂ ಕುತೂಹಲಕರ ಮತ್ತು ಆಶ್ಚರ್ಯಕರವಾಗಿದೆ ಎನ್ನುತ್ತಾರೆ ಕಿತ್ತೂರಿನ ಚಂದ್ರೇಗೌಡ ಪಾಟೀಲರು.

In Public domain. Digitization Muthulakshmi Research Academy

"ಸಮಾರಂಭದ ದಿನ ಇಡೀ ಬೆಳಗಾವಿ ಬಾರ್ ಕೌನ್ಸಿಲ್ ಸದಸ್ಯರು ಕೋರ್ಟ್ ಹಾಲ್‌ಗೆ ಹೋಗುವಾಗ ಧರಿಸುವ ಕರಿಕೋಟು ಧರಿಸಿಕೊಂಡು ಸಭೆಗೆ ಬಂದಿದ್ದರು. ವಕೀಲರೆಲ್ಲ ಸಾಮಾನ್ಯರಂತೆ ನೆಲದ ಮೇಲೆ ಕುಳಿತು ನಮ್ಮ ಸಮಾಜದ ಘನತೆಯನ್ನು ಎತ್ತಿಹಿಡಿದು ಮೇಲು ಕೀಳು ಎಂಬ ಭಾವನೆಯನ್ನು ತೊಡೆದುಹಾಕಿ ಎಂದು ತಮ್ಮ ಸದಸ್ಯರಿಗೆ ಕಿವಿಮಾತು ಹೇಳಿದವರು ಅಂದು ವಾದವನ್ನು ಒಪ್ಪಿಕೊಂಡ ಮುಳುವಾಡಮಠ ವಕೀಲರು" ಎನ್ನುತ್ತಾರೆ. ಮುಳವಾಡ ವಕೀಲರು ಸಾಮಾನ್ಯರಲ್ಲ. ಬೆಳಗಾವಿ ಬಾರ್ ಕೌನ್ಸಿಲ್ ಅಧ್ಯಕ್ಷರು ಹಾಗು ಪ್ರಭಾವಿ ಕಾನೂನು ತಜ್ಞರಾಗಿದ್ದರು.

ಉತ್ತರ ಕರ್ನಾಟಕದ ಪ್ರಮುಖ ಹಾಗೂ ಪ್ರಭಾವಿ ಮಠಗಳಲ್ಲಿ ನಾಗನೂರು ರುದ್ರಾಕ್ಷಿ ಶ್ರೀ ಮಠವು ಒಂದು. ಈ ಮಠವು ಇಂದು ಅನೇಕ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ. ಇದರ ಪೀಠಾಧಿಪತಿ ಪೂಜ್ಯ ಸಿದ್ಧರಾಮ ಶ್ರೀಗಳು. ಡಾಕ್ಟರೇಟ್ ಪಡೆದ ವಿದ್ವಾಂಸರು. ಲಿಂಗಾಯತ ಧರ್ಮದ ಮುಂಚೂಣಿಯಲ್ಲಿ ನಿಲ್ಲುವ ಪೂಜ್ಯರು. ಅಂದು ಈ ಪೂಜ್ಯರು ಮಠದಲ್ಲಿ ಕುಳಿತು ಧರ್ಮಪ್ರಸಾರ ಮಾಡಲಿಲ್ಲ. ಬೆಳಗಾವಿ ಜಿಲ್ಲೆಯ ಪ್ರಮುಖ ನಗರಗಳಾದ ಗೋಕಾಕ್, ಸವದತ್ತಿ, ಖಾನಾಪುರ ನಗರಗಳಿಗೆ ಭೇಟಿ ಕೊಟ್ಟು ಜನರಿಗೆ ಧರ್ಮದ ಪಾಠವನ್ನು ಮಾಡಿದ್ದರು. ಹಳ್ಳಿಗಳಿಗೆ ಹೋಗಿ ಜನಸಂಪರ್ಕ ಸಭೆಗಳನ್ನು ಮಾಡಿದ್ದರು. ನಾಗನೂರು ಮಠದಿಂದ ಕನಿಷ್ಠ ಒಂದು ಲಕ್ಷ ಜನರಿಗೆ ಅಂದು ಅನ್ನ ದಾಸೋಹ ಮಾಡಿದ್ದರು. ಬೈಲೂರು ಮಠದ ಪೂಜ್ಯ ನಿಜಗುಣಾನಂದ ಶ್ರೀಗಳು ಕಿತೂರು ಭಾಗದಲ್ಲಿ ಸಭೆಗಳನ್ನು ಮಾಡಿ ಪಕ್ಕದ ಜಿಲ್ಲಾ ಕೇಂದ್ರ ಧಾರವಾಡ ನಗರದಲ್ಲಿಯೂ ಪೂರ್ವಬಾವಿ ಸಭೆ ಮಾಡಿ ಅಲ್ಲಿಯ ಜನರಿಗೆ ಸಭೆಯಲ್ಲಿ ಭಾಗವಹಿಸಲು ಕೇಳಿಕೊಂಡಿದ್ದರು. ಪಂಚಮಸಾಲಿ ಸಮಾಜದ ಜಗದ್ಗುರುಗಳಾದ ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ನಾಲ್ಕು ದಿನಗಳ ಕಾಲ ಈ ಕಾರ್ಯಕ್ಕಾಗಿ ಬೈಲಹೊಂಗಲದಲ್ಲಿ ವಾಸ್ತವ್ಯ ಹೂಡಿದ್ದರು ಎನ್ನುತ್ತಾರೆ ಅವರೊಂದಿಗೆ ಜನಸಂಪರ್ಕ ಸಭೆಗಳಲ್ಲಿ ನಿರಂತರವಾಗಿ ಭಾಗವಹಿಸಿದ ರವಿ ಬಾಗೋಡಿ ಮತ್ತು ಈರಣ್ಣ ಬಾವಿಯವರು. ಈರಣ್ಣ ಬಾವಿಯವರು ಮೂವತ್ತು ಹಳ್ಳಿಗಳ ಜವಾಬ್ದಾರಿ ವಹಿಸಿದ್ದಾಗಿ ಅವರ ಕಾರ್ಯವನ್ನು ಕೊಂಡಾಡುತ್ತಾರೆ ಶಂಕರ ಗುಡಸ್.

ಇಂದಿನ ದಿನಗಳಲ್ಲಿ ಮೀಸಲಾತಿಯ ಸೌಲಭ್ಯಕ್ಕಾಗಿ ಧರ್ಮದ ಕಾಲಂನಲ್ಲಿ ಲಿಂಗಾಯತ ಎಂದು ನಮೂದಿಸದೆ ಹಿಂದೂ ಎಂದು ನಮೂದಿಸುವ ಅನೇಕ ಕಾಯಕ ಸಮಾಜಗಳು ಕರ್ನಾಟಕದಲ್ಲಿವೆ. ಇದಕ್ಕೆ ಅಪವಾದಗಳು ಇವೆ. ಇಂದಿಗೂ "ನಮಗೆ ಧರ್ಮದ ಸಿದ್ಧಾಂತಗಳು ಮುಖ್ಯ, ಮೀಸಲಾತಿ ಎಂಬ

In Public domain. Digitization Muthulakshmi Research Academy

ಭಿಕ್ಷೆಗಾಗಿ ಧರ್ಮ ಬಿಡೆವು" ಎಂದು ಹೇಳುವ ಸಮಾಜಗಳು ಇವೆ. ಇದಕ್ಕೊಂದು ಉದಾಹರಣೆ ಎಂದರೆ ಬೆಳಗಾವಿ ಜಿಲ್ಲೆಯ ನೇಸರಗಿ ಭಾಗದಲ್ಲಿರುವ ಈರಣ್ಣ ಬಡಿಗೇರ ಅವರು. ಲಿಂಗಾಯತಕ್ಕೆ ಬಹುದೇವೋಪಾಸನೆ ಸಲ್ಲದು. ಅದು ಕೇವಲ ನಿರಾಕಾರ ಶಿವನನ್ನು ಮಾತ್ರ ಪೂಜಿಸುತ್ತದೆಂದು ತಮ್ಮ ಮನೆತನಕ್ಕೆ ಮೀಸಲಾದ ಗ್ರಾಮದೇವತೆ ದ್ಯಾಮವ್ವನ ಗುಡಿ ಪೂಜಾರಿಕೆಯನ್ನು ತೊರೆದಿದ್ದಾರೆ. ಇವರು ಹಗಲು ರಾತ್ರಿ ಒಂದು ಮಾಡಿ ಬೆಳಗಾವಿಯ ಸ್ವತಂತ್ರ ಧರ್ಮದ ಹೋರಾಟದ ಪ್ರಥಮ ಸಭೆಯನ್ನು ಯಶಸ್ವಿಗೊಳಿಸಿದ್ದರು ಎನ್ನುತ್ತಾರೆ ಸಂಘಟಕರು.

"ಬೆಳಗಾವಿ ಸಭೆಗೆ ತನು ಮನ ಧನಸಹಾಯ ನೀಡಿದ್ದಾರೆ. ಅವರಲ್ಲಿ ಅನ್ಯಧರ್ಮೀಯರು ಸಹ ಇದ್ದಾರೆ. ಅಂತಹವರಲ್ಲಿ ಸವದತ್ತಿಯ ಆನಂದ ಛೋಪ್ರಾ ಪ್ರಮುಖರು" ಎಂದು ದಿ.ಛೋಪ್ರಾ ಅವರನ್ನು ನೆನಸಿಕೊಳ್ಳುತ್ತಾರೆ ಸವದತ್ತಿ ತಾಲ್ಲೂಕಿನ ಅಸುಂಡಿ ಗ್ರಾಮದ ಪಂಚಾಯಿತಿ ಅಧ್ಯಕ್ಷ ನರಗುಂದ ಅವರು. 'ಲಿಂಗಾಯತ ಧರ್ಮದಲ್ಲಿ ಜನ್ಮ ತಳೆದು, ದಿನನಿತ್ಯ ಹಣೆಗೆ ಕುಂಕುಮ ಇಟ್ಟು, ನೂರು ದೇವರಿಗೆ ಪೂಜೆ ಸಲ್ಲಿಸುವ, ಲಿಂಗಾಯತ ಸಿದ್ಧಾಂತಗಳನ್ನು ಗಾಳಿಗೆ ತೂರಿ ತಾವಿರುವ ರಾಜಕೀಯ ಪಕ್ಷವೇ ಮುಖ್ಯ ಎನ್ನುವವರು ಇದ್ದಾರೆ. ಅಂತಹವರಲ್ಲಿ ಆನಂದ ಮಾಮಣಿ ಎನ್ನುವ ಲಿಂಗಾಯತರೂ ಇದೇ ಸಮಾಜದಲ್ಲಿ ಇದ್ದಾರೆ' ಎನ್ನುತ್ತಾರೆ ಹೆಸರು ಬಹಿರಂಗಪಡಿಸದ ಲಿಂಗಾಯತ ಧರ್ಮದ ಸವದತ್ತಿಯ ನಗರ ನಿವಾಸಿಯೊಬ್ಬರು. ಸಮಾಜದಲ್ಲಿ ಕೆಟ್ಟದ್ದು ಇದ್ದಾಗಲೇ ಒಳ್ಳೆಯದಕ್ಕೆ ಬೆಲೆ ಹೆಚ್ಚು ಎನ್ನುತ್ತ ಕೆ.ಎಲ್.ಇ. ಸಂಸ್ಥೆಯ ಪ್ರಭಾಕರ ಕೋರೆಯವರನ್ನು ನೆನೆಯುತ್ತಾರೆ ಸಂಘಟಕರು. "ಲಿಂಗಾಯತರು ಸಭೆ ಮಾಡುವುದಾದರೆ ನಮ್ಮ ಕಾಲೇಜು ಮೈದಾನವನ್ನೇ ಕೊಡುತ್ತೇವೆ. ನೀವು ನಿಶ್ಚಿಂತೆಯಿಂದ ಇರಿ" ಎಂದು ಹುರಿದುಂಬಿಸಿ ನಮಗೆ ಲಿಂಗರಾಜ ಕಾಲೇಜು ಮೈದಾನವನ್ನು ಕೊಟ್ಟರು ಎಂದು ಪ್ರಭಾಕರ ಕೋರೆಯವರನ್ನು ನೆನೆಯುತ್ತಾರೆ ಸಂಘಟಕರು. "ಅವರಂತೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಒಂದು ಲಕ್ಷ ಜನರಿಗೆ ದಾಸೋಹದ ವ್ಯವಸ್ಥೆಯನ್ನು ಮಾಡಿದ್ದು ಮರೆಯಲಾದೀತೆ" ಎನ್ನುತ್ತಾರೆ ಶಂಕರ ಗುಡಸ್. ಶಾಸಕಿ ಶ್ರೀಮತಿ ಶಶಿಕಲಾ ಜೊಲ್ಲೆಯವರ ಸಹಾಯವನ್ನು ನೆನೆಯುತ್ತ, ಇವರು ಭಾ.ಜ.ಪ.ದ ಶಾಸಕಿಯಾದರೂ ನಮ್ಮ ಕರೆಗೆ ಓಗೊಟ್ಟು ತಮ್ಮ ಕ್ಷೇತ್ರದ ಜನರಿಗೆ ವಾಹನ ಸೌಲಭ್ಯ ಕಲ್ಪಿಸಿದ್ದನ್ನು ಕೊಂಡಾಡುತ್ತಾರೆ ಸಂಘಟಕರು.

ನಮ್ಮ ಪೂರ್ವಭಾವಿ ಸಭೆಗಳಲ್ಲಿ ಮುಂಬರುವ ರ್‍ಯಾಲಿಗಳಲ್ಲಿ ರಾಜಕಾರಣಿಗಳನ್ನು ಆಹ್ವಾನಿಸಬೇಕೇ ಬೇಡವೇ ಎಂಬ ಗಂಭೀರ ಚರ್ಚೆಯಾಗಿತ್ತು. ರಾಜಕಾರಣಿಗಳನ್ನು ಧರ್ಮಸಭೆಗಳಿಂದ ದೂರವಿಡಬೇಕು ಎಂಬ ಬಲವಾದ ವಾದವನ್ನು

In Public domain. Digitization Muthulakshmi Research Academy

ಕೆಲವರು ಮಂಡಿಸಿದರೆ, ರಾಜಕೀಯದಲ್ಲಿ ಧರ್ಮ ಇಲ್ಲ. ಆದರೆ ಧರ್ಮದಲ್ಲಿ ರಾಜಕೀಯ ಇದೆಯೆಂದರು ಒಬ್ಬ ಹಿರಿಯರು. 'ಧರ್ಮದ ಬಳ್ಳಿಗೆ ರಾಜಕೀಯ ಎಂಬ ಮರದ ಆಸರೆ ಬೇಕು. ಮರದ ಸಹಾಯದಿಂದ ಬಳ್ಳಿ ಮೇಲೇರಿ ಮರದ ಕೊಂಬೆಗಳನ್ನು ಇನ್ನಷ್ಟು ಸುಂದರಗೊಳಿಸುತ್ತದೆ' ಎಂಬ ವಾದ ಸರಿ ಎನಿಸಿತು. ರಾಜಕೀಯ ನಾಯಕರನ್ನು ಸಭೆಗೆ ಅಹ್ವಾನಿಸುವುದೆಂದು ತೀರ್ಮಾನವಾಯಿತು ಎನ್ನುತ್ತಾರೆ ರಾ.ಬ.ದ. ಜಿಲ್ಲಾ ಅಧ್ಯಕ್ಷರಾದ ಅಶೋಕ ಬೆಂಡಿಗೇರಿ. ಇನ್ನೂ ಸಭೆಗೆ ಒಬ್ಬ ಸ್ಪೀಕರ್ ಅವಶ್ಯಕತೆ ಚರ್ಚೆಗೆ ಬಂತು. ಆಗ ಶಂಕರ ಗುಡಸ್ ಅವರು ಮಾಜಿ ಐ.ಎ.ಎಸ್. ಅಧಿಕಾರಿ ಶ್ರೀ ಶಿವಾನಂದ ಜಾಮದಾರ ಅವರನ್ನು ಆಹ್ವಾನಿಸಬೇಕು ಎಂದರು. ಅದಕ್ಕೆ ಸಭೆಯಲ್ಲಿ ಪರವಿರೋಧ ಅಭಿಪ್ರಾಯ ವ್ಯಕ್ತವಾದವು. ಆಗ ಎಲ್ಲರೂ ವಿದ್ವಾಂಸ ಎಂ.ಎಂ.ಕಲಬುರ್ಗಿಯವರ ಅನುಪಸ್ಥಿತಿ ನೆನೆದು ಮರುಗಿದರು. ಇಂದು ಅವರಿದ್ದರೆ? ಎಂದು ಆಕಾಶದತ್ತ ನೋಡಿದರು. ಕೊನೆಗೆ ಡಾ.ಜಾಮದಾರ ಅವರು ಲಿಂಗಾಯತದ ಬಗ್ಗೆ ಇತ್ತೀಚಿನ ಲೇಖನಗಳನ್ನು ಉದಾಹರಿಸಿ ಅವರನ್ನು ಕರೆಯಬಹುದು ಮತ್ತು ಅವರನ್ನು ಕರೆಯುವ ಜವಾಬ್ದಾರಿಯನ್ನು ಶಂಕರ ಗುಡಸ್ ಅವರಿಗೆ ನೀಡಲಾಗಿತ್ತು ಎಂದರು ಸಂಘಟಕರು.

"ಲಿಂಗಾಯತ ಸ್ವತಂತ್ರ ಧರ್ಮ ಹೋರಾಟ ಸಮಿತಿ"ಯು ಕರೆದ ಸಭೆಯು ಬೆಳಗಾವಿಯ ಲಿಂಗರಾಜ ಕಾಲೇಜು ಮೈದಾನದಲ್ಲಿ ಬೆಳಗ್ಗೆ ಸರಿಯಾಗಿ ೧೦.೩೦ಕ್ಕೆ ಪ್ರಾರಂಭವಾಯಿತು. ಅಲ್ಲಿ ಸೇರಿದ್ದ ಲಕ್ಷ ಲಕ್ಷ ಜನರನ್ನು ಸ್ವಾಗತಿಸಲು ಎದ್ದುನಿಂತವರು ಬೆಳಗಾವಿ ರುದ್ರಾಕ್ಷಿ ಮಠದ ಪೀಠಾಧಿಪತಿಯಾದ ಶ್ರೀ ಸಿದ್ಧರಾಮ ಸ್ವಾಮೀಜಿಯವರು. ಸುಮಾರು ೨೦೦ ಮಠಾಧೀಶರು ಸೇರಿದ ಸಭೆಯಲ್ಲಿ ರಾಜಕೀಯ ನಾಯಕರು ಪಾಲ್ಗೊಂಡಿದ್ದರು. ಆ ಸಭೆ ನಿಜವಾಗಿಯೂ ಪಕ್ಷಾತೀತ ಸಭೆಯಾಗಿತ್ತು. ಕಾರಣ ಕಾಂಗ್ರೆಸ್, ಬಿ.ಜೆ.ಪಿ. ಮತ್ತು ಜನತಾದಳದ ನಾಯಕರೆಲ್ಲರೂ ಭಾಗವಹಿಸಿದ್ದರು.

ಗದುಗಿನ ತೋಂಟದಾರ್ಯ ಮಠದ ಜಗದ್ಗುರುಗಳಾಗಿದ್ದ ಶ್ರೀ ಸಿದ್ಧಲಿಂಗಮಹಾಸ್ವಾಮೀಜಿಯವರು ಸಾನ್ನಿಧ್ಯ ವಹಿಸಿದ್ದರು. ನಿಡಸೋಸಿ ಮಠದ ಶ್ರೀ ಶಿವಲಿಂಗೇಶ್ವರ ಮಠದ ಪೂಜ್ಯರು ಅಧ್ಯಕ್ಷತೆ ವಹಿಸಿದ್ದರು. ಚಿತ್ರದುರ್ಗದ ಮುರುಘಾಶರಣರು, ಭಾಲ್ಕಿ ಹಿರೇಮಠದ ಶ್ರೀ ಬಸವಲಿಂಗ ಪಟ್ಟದ್ದೇವರು, ಬೀದರ್ ಜಿಲ್ಲೆಯ ಹುಲಸೂರಿನ ಮಠಾಧೀಶರು, ಕೂಡಲಸಂಗಮದ ಶ್ರೀ ಜಯಮೃತ್ಯುಂಜಯ ಸ್ವಾಮೀಜಿಯವರು, ಪೂಜ್ಯ ಮಾತೆ ಮಹಾದೇವಿಯವರು, ಅಕ್ಕ ಅನ್ನಪೂರ್ಣನವರು, ಬೈಲೂರು ಮಠದ ನಿಜಗುಣಾನಂದ ಶ್ರೀಗಳು, ಅಥಣಿ ಮೋಟಗಿ ಮಠದ ಪೂಜ್ಯರು, ಶ್ರೀ

In Public domain. Digitization Muthulakshmi Research Academy

ಚನ್ನಬಸವ ಸ್ವಾಮೀಜಿಯವರಲ್ಲದೆ ಬೆಳಗಾವಿ ಧಾರವಾಡ ಮತ್ತು ವಿಜಾಪುರ ಜಿಲ್ಲೆಯ ಅನೇಕ ಮಠಾಧೀಶರು ಅತಿಥಿಗಳಾಗಿ ವೇದಿಕೆಯನ್ನು ಅಲಂಕರಿಸಿದ್ದರು. ಇವರೊಂದಿಗೆ ಕರ್ನಾಟಕ ಸರಕಾರದ ಸಚಿವರಾದ ವಿನಯ ಕುಲಕರ್ಣಿ, ಶಾಸಕರಾದ ಪ್ರಕಾಶ ಹುಕ್ಕೇರಿ, ಗಣೇಶ ಹುಕ್ಕೇರಿ, ಶಶಿಕಲಾ ಜೊಲ್ಲೆ, ಬಸವರಾಜ ಹೊರಟ್ಟಿ, ಸಭಾಪತಿ ವೀರಣ್ಣ ಮತ್ತಿಕಟ್ಟಿ, ಶಾಸಕರಾದ ಅಶೋಕ ಖೇಣಿ, ಮಾಜಿ ಮಂತ್ರಿ ಎ.ಬಿ.ಪಾಟೀಲ, ಮಾಜಿ ಸಂಸದ ಎಸ್.ಸಿದ್ನಾಳ, ರಂಜಾನ್ ದರ್ಗಾ ಇದ್ದರು. ನಾನು ಸಭೆಯಲ್ಲಿ ಸ್ವಲ್ಪ ವಿಳಂಬವಾಗಿ ವೇದಿಕೆ ಏರಿದೆ. ಎರಡನೆಯ ಸಾಲಿನಲ್ಲಿ ಎ.ಬಿ.ಪಾಟೀಲ ಮತ್ತು ಲಕ್ಷ್ಮೀ ಹೆಬ್ಬಾಳ್ಕರರ ಮಧ್ಯದ ಸೀಟನ್ನು ನೀಡಿದರು. ಹಿಂದಿನ ಸಾಲಿನಲ್ಲಿ ಹಿರಿಯರಾದ ಮಾಜಿ ಸಂಸದರಾದ ಎಸ್.ಬಿ.ಸಿದ್ನಾಳ ಕುಳಿತಿದ್ದರು. ನನಗೆ ಕಸಿವಿಸಿಯಾಗಿ ಅವರನ್ನು ನನ್ನ ಸ್ಥಳದಲ್ಲಿ ಕುಳಿತುಕೊಳ್ಳಲು ಕೇಳಿಕೊಂಡರು. ವಯೋವೃದ್ಧರು ಮುಂದೆ ಬರಲಿಲ್ಲ. ನನ್ನ ಸ್ನೇಹಿತ ಧಾರವಾಡದ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಪಾಟೀಲರು ಅವರ ಜೊತೆಗಿದ್ದರು. ಉರಿಬಿಸಿಲಿನಲ್ಲಿ ತಲೆಯ ಮೇಲೆ ಟೊಪ್ಪಿಗೆ ಅಥವಾ ವರ್ತಮಾನ ಪತ್ರಿಕೆಗಳು ಜನರಿಗೆ ನೆರಳನ್ನು ಒದಗಿಸಿದ್ದವು. ಮೈದಾನದ ಆಚೆ ಬದಿಯಲ್ಲಿರುವ ಕಾಲೇಜಿನ ಮೆಟ್ಟಿಲುಗಳ ಮೇಲೆ, ಕೈತೋಟದ ಹುಲ್ಲಿನ ಮೇಲೆ, ಅಲ್ಲಿರುವ ಮರದ ನೆರಳಲ್ಲಿ ಕುಳಿತಿದ್ದ ಸಾವಿರಾರು ಬಸವ ಭಕ್ತರು ಪ್ರಮುಖರಾಡುವ ಮಾತುಗಳನ್ನು ಕೇಳುತ್ತಲಿದ್ದರು.

ಇನ್ನು ಅಂದಿನ ಸಭೆಯ ಶಿಸ್ತನ್ನು ನನ್ನ ಜೀವಮಾನದಲ್ಲಿ ಮರೆಯುವಂತಿಲ್ಲ. ನೂರಾರು ಯುವಕರು ತಲೆಯ ಮೇಲೆ ನಾನು ಲಿಂಗಾಯತ ಎಂಬ ಬರಹದ ಟೊಪ್ಪಿಗೆ ಧರಿಸಿ ಶಿಸ್ತಿನಿಂದ ಒಳಬಂದು ಬರಿ ನೆಲದಲ್ಲಿ ಆಸೀನರಾಗುತ್ತಿದ್ದನ್ನು ಕಂಡು ಧನ್ಯತಾಭಾವ ಮೂಡುತ್ತಿತ್ತು. "They wore Gandhi caps with slogans seeking separate religion status written on them"[೪] ಎಂದು ದಾಖಲಿಸುತ್ತದೆ Indian Express ಆಂಗ್ಲ ಪತ್ರಿಕೆ. ಬೆಳಗಾವಿ ಜಿಲ್ಲೆಯ ವಕೀಲರ ಸಂಘದ ಸದಸ್ಯರಾದ ಸುಮಾರು ಐನೂರು ವಕೀಲರು ಕರಿ ಕೋಟು ತೊಟ್ಟು ಆ ಬಿಸಿಲಿನಲ್ಲಿ ವೇದಿಕೆಯ ಮುಂಭಾಗದ ಅಂಗಳದಲ್ಲಿ ಆಸೀನರಾಗಿದ್ದನ್ನು ಹೇಗೆ ಮರೆಯಲಿ? ಲಿಂಗಭೇದ ಎಣಿಸದ ಧರ್ಮ ಲಿಂಗಾಯತ ಧರ್ಮ. ಲಿಂಗಾಯತ ಮಾತೆಯರು ಇಡೀ ಜಿಲ್ಲೆಯ ಬೇರೆ ಬೇರೆ ಪ್ರದೇಶಗಳಿಂದ ಬಂದಿದ್ದರು. ಅವರು ಕೈಬೀಸಿಕೊಂಡು ಬಂದಿರಲಿಲ್ಲ, ಬಗಲಲ್ಲಿ ರೊಟ್ಟಿ ಚೀಲವನ್ನು ನೇತಾಕಿಕೊಂಡು ಬಂದಿದ್ದರು. 'ನೀನುಂಡು ನಿನ್ನ ತಟ್ಟೆಯಲ್ಲಿಯೇ ಇನ್ನೊಬ್ಬನಿಗೆ ಉಣ್ಣಿಸು' ಎಂಬ ಲಿಂಗಾಯತ ದಾಸೋಹದ ಸಿದ್ಧಾಂತವನ್ನು ತಾಯಂದಿರು ಅಕ್ಷರಶಃ ಅಂದು ಪಾಲಿಸಿದ್ದರು.

In Public domain. Digitization Muthulakshmi Research Academy

ಸಭೆಯಲ್ಲಿ ಭಾಗವಹಿಸಿದ ಲಿಂಗಾಯತರ ಸಂಖ್ಯೆಯ ಬಗ್ಗೆ ಒಮ್ಮತದ ಅಭಿಪ್ರಾಯ ಮೂಡಿಸದ ಗೋದಿ ಮೀಡಿಯಾಗಳು ಈ ರೀತಿಯಾಗಿ ಬರೆಯುತ್ತವೆ. "The city of Belagavi turned a sea of white and saffron on Tuesday when members of various lingayat organisations and seers joined the mega rally demanding independent religion status for their community." [೫] ವರದಿ ಮಾಡುತ್ತದೆ ಹಿಂದೂ ಪತ್ರಿಕೆ. "A massive rally attended by close to one lakh people on Lingaraj College ground here on tuesday" [೬] ಎಂದು ಬರೆಯುತ್ತದೆ Indian express. ಇನ್ನೊಂದು ರಾಷ್ಟ್ರೀಯ ಪತ್ರಿಕೆಯಾದ The Times of India ಹೀಗೆ ವರದಿ ಮಾಡುತ್ತದೆ. "A mega Lingayat convention and rally organized at Lingaraj College Grounds here on Tuesday to put pressure on the state and central governments to accord the separate religion status to the community saw lakhs of people."[೭] ಇನ್ನೊಂದು ಇಂಗ್ಲಿಷ್ ಪತ್ರಿಕೆಯಾದ Bangalore Mirror ದವರು "Lakhs of people from the Lingayat community assembled at the rally in Belgaum Lingaraj college grounds" ಎಂದು ಬರೆಯುತ್ತವೆ. ಬೆಳಗಾವಿಯಲ್ಲಿ ಇಂಟೆಲಿಜೆನ್ಸ್ ವಿಭಾಗದಲ್ಲಿ ಆಗ ಕಾರ್ಯ ಮಾಡುತ್ತಿದ್ದ, ಹೆಸರು ಹೇಳಲು ಇಚ್ಛಿಸದ ಅಧಿಕಾರಿಯೊಬ್ಬರು ಹೇಳಿದ್ದು. "ಅಂದಾಜು ಮೂರು ಲಕ್ಷದಷ್ಟು ಜನರು ಬೆಳಗಾವಿಯ ಹೊರಗಿನಿಂದ ಬಂದವರ ಸಂಖ್ಯೆಯಾಗಿದ್ದರೆ ೬೫–೭೫ ಸಾವಿರದಷ್ಟು ಸ್ಥಳೀಯ ಲಿಂಗಾಯತರು ಭಾಗವಹಿಸಿದ್ದರು ಎಂದು ಸರಕಾರಕ್ಕೆ ವರದಿ ಸಲ್ಲಿಸಿದ್ದೆ. ಸಭೆಯು ಪ್ರಾರಂಭವಾಗುವ ೪೫ ನಿಮಿಷಕ್ಕಿಂತ ಮೊದಲು ನಾನು ರೈಲಿನಿಂದಿಳಿದು ಟ್ಯಾಕ್ಸಿ ಹತ್ತಿ ಸನ್ಮಾನ್ ಹೋಟೇಲಿಗೆಂದು ಹೊರಟಾಗ ದಾರಿಯಲ್ಲಿಯ ಅಪಾರ ಜನರನ್ನು ಕಂಡು ವಿಸ್ಮಿತನಾಗಿದ್ದೆ. ನಾನು ಕುಳಿತಿರುವ ಟ್ಯಾಕ್ಸಿ ಮುಂದೆ ಚಲಿಸದಾದಾಗ ಬೋಗಾರವೇಸದಲ್ಲಿ ಕೆಳಗಿಳಿದು ನಡೆಯುತ್ತಲೇ ಸನ್ಮಾನ್ ಹೋಟೆಲ್ ತಲುಪಲು ನನಗೆ ೩೦ ನಿಮಿಷ ಹಿಡಿದಿತ್ತು. ಕಾಲಿಡಲು ಪರದಾಡಿದ್ದೆ. ಲಿಂಗರಾಜ ಕಾಲೇಜು ರಸ್ತೆಯಲ್ಲಿ ಡಿ.ಸಿ. ಆಫೀಸ್ ವರೆಗೂ ಜನರು ಕಾಣುತ್ತಿದ್ದರು. ನಂತರ ವೇದಿಕೆಯ ಮೇಲೆ ಕುಳಿತಾಗ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್ ಅವರಲ್ಲಿ ವಿಷಯ ಹೇಳಿದಾಗ ಅವರು ಹೇಳಿದ್ದು ಗೋಂಧಳಿ ಗಲ್ಲಿ, ಸಿವಿಲ್ ಹಾಸ್ಪಿಟಲ್ ರೋಡ್, ಸಮಾದೇವಿ ಗಲ್ಲಿ, ಕ್ಲಬ್ ರೋಡಿನಲ್ಲಿಯೂ ಅದೇ ಸ್ಥಿತಿ ಎಂದು ವಿವರಿಸಿದರು. ವಿಜಯ ಕರ್ನಾಟಕವು "ರ್‍ಯಾಲಿ ಮತ್ತು ಸಮಾವೇಶದ ಕುರಿತು ಸಾಕಷ್ಟು ಪ್ರಚಾರ ಕೈಗೊಂಡ ಪರಿಣಾಮ

In Public domain. Digitization Muthulakshmi Research Academy

ಲಕ್ಷಾಂತರ ಜನ ಸೇರಿದ್ದರು. ಲಿಂಗರಾಜ ಕಾಲೇಜು ಮೈದಾನದಲ್ಲಿ ಸ್ಥಳಾವಕಾಶದ ಕೊರತೆಯಾಗಿ, ರಸ್ತೆಯಲ್ಲೂ ಸೇರಲು ಸ್ಥಳಾವಕಾಶದ ಕೊರತೆಯಾಗಿ, ಗಲ್ಲಿಗಳಲ್ಲಿ ಜನ ನಿಲ್ಲುವಂತಾಗಿತ್ತು" ಎಂಬ ಮರುದಿನ ಪತ್ರಿಕೆಯ ವರದಿಯನೋದಿ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರರ ಮಾತುಗಳ ಸತ್ಯತೆಯನ್ನು ಮನಗಂಡೆ.

ದಿನಾಂಕ ೨೩-೮-೨೦೧೭ರ ವಿಜಯ ಕರ್ನಾಟಕ ಪತ್ರಿಕೆಯ ವರದಿಯಲ್ಲಿ "ಚರಿತ್ರೆಯಲ್ಲಿ ದಾಖಲಾದ ಲಿಂಗಾಯತ ಸಮಾವೇಶ" ಎಂದು ತಲೆಬರಹ ನೀಡಿ; 'ಬೆಳಗಾವಿಯಲ್ಲಿ ನಾಡಿನ ಎಲ್ಲೆಡೆಯ ಲಕ್ಷಾಂತರ ಬಸವ ಭಕ್ತರ ಧರ್ಮೋತ್ಸಾಹ; ಪಕ್ಷಭೇದ ಮರೆತು ಪಾಲ್ಗೊಂಡ ರಾಜಕೀಯ ನಾಯಕರು' ಎಂದು ಬರೆಯುತ್ತ ಈ ಕೆಳಗಿನ ವಿವರವಾದ ವರದಿ ನೀಡಿದೆ. "ಸ್ವತಂತ್ರ ಧರ್ಮದ ಮಾನ್ಯತೆಗಾಗಿ ಮಂಗಳವಾರ ನಡೆದ ಲಿಂಗಾಯತ ಸಮಾವೇಶ ಮತ್ತು ಮಹಾರ್‍ಯಾಲಿ ಗಡಿನಾಡು ಬೆಳಗಾವಿಯ ಚರಿತ್ರಾರ್ಹ ಕಾರ್ಯಕ್ರಮವಾಗಿ ದಾಖಲಾಯಿತು" ಎಂದು ಪ್ರಶಂಸೆಯ ನುಡಿಗಳನ್ನು ಬರೆದಿದೆ. ಮುಂದುವರಿದು "ರ್‍ಯಾಲಿ ಸಮಾವೇಶದ ಮೂಲಕ ಸ್ವತಂತ್ರ ಧರ್ಮದ ಮಾನ್ಯತೆಯ ಹಕ್ಕೊತ್ತಾಯವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ರವಾನಿಸಲಾಯಿತು. ಸಿಖ್, ಜೈನ ಮತ್ತು ಬೌದ್ಧರಂತೆ ಲಿಂಗಾಯತ ಧರ್ಮಕ್ಕೆ ಬೇಡಿಕೆ ಸಲ್ಲಿಸಲಾಯಿತು. ನಾಗನೂರು ರುದ್ರಾಕ್ಷಿಮಠದ ಶ್ರೀ ಡಾ.ಸಿದ್ಧರಾಮ ಮಹಾಸ್ವಾಮೀಜಿ ನೇತೃತ್ವದಲ್ಲಿ ನಾಡಿನ ವಿರಕ್ತಮಠಾಧೀಶರು, ಪಕ್ಷಭೇದ ಮರೆತು ಲಿಂಗಾಯತ ನಾಯಕರು ಮತ್ತು ಸಂಘಸಂಸ್ಥೆಗಳ ಮುಖಂಡರು ಸಮಾವೇಶದಲ್ಲಿ ಭಾಗಿಯಾಗಿ ತಮ್ಮ ನಿಲುವು ಸಾರಿದರು. ವಾಹನಗಳಿಗೆ ಧರ್ಮಧ್ವಜ, ಬಸವೇಶ್ವರರ ಭಾವಚಿತ್ರ ಕಟ್ಟಿಕೊಂಡು ಬಂದದ್ದು ಗಮನ ಸೆಳೆಯಿತು. ದೂರದಿಂದ ಬಂದವರಿಗಾಗಿ ನಾನಾ ಕಡೆಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು. ಮುಸ್ಲಿಂ ಸಮಾಜದ ರೆಹಮಾನ್ ಫೌಂಡೇಶನ್ ಮತ್ತು ಆಲ್ ಇಂಡಿಯಾ ಏಕ್ತಾ ಫೋರಂ ವತಿಯಿಂದ ಸಮಾವೇಶದ ಸ್ಥಳ ಮತ್ತು ರಾಣಿ ಚೆನ್ನಮ್ಮ ವೃತ್ತದಲ್ಲಿ ಮಿನರಲ್ ವಾಟರ್ ಬಾಟಲ್ ವಿತರಿಸಲಾಯಿತು. ಮಧ್ಯಾಹ್ನ ೩ ಗಂಟೆಗೆ ಸಮಾವೇಶ ರ್‍ಯಾಲಿಯಾಗಿ ಮಾರ್ಪಟ್ಟಾಗ ದೃಷ್ಟಿದೂರಕ್ಕೂ ಲಿಂಗಾಯತರೇ ಕಾಣಿಸುತ್ತಿದ್ದರು. ರಾಣಿ ಚೆನ್ನಮ್ಮ ವೃತ್ತದಲ್ಲೂ ಅಷ್ಟೇ ಪ್ರಮಾಣದ ಜನ ಸೇರಿದ್ದರು. ಲಿಂಗರಾಜ ಕಾಲೇಜಿನಿಂದ ಹೊರಟ ರ್‍ಯಾಲಿ ರಾಣಿ ಚೆನ್ನಮ್ಮ ವೃತ್ತದಲ್ಲಿ ಸಮಾವೇಶಗೊಂಡಿತು. ಮಠಾಧೀಶರು ರಾಜಕಾರಣಿಗಳು ಹೋರಾಟದ ನಿಲುವು ಸ್ಪಷ್ಟಪಡಿಸಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರಕಾರಕ್ಕೆ ಮನವಿ ರವಾನಿಸಲಾಯಿತು. "ವರದಿಯನ್ನು ಮುಖಪುಟದಲ್ಲಿ ಪ್ರಕಟಿಸಿ ಸಮಾವೇಶದಲ್ಲಿ ಸಮಾಗಮಗೊಂಡ ಜನಸಾಗರದ ಬಣ್ಣದ ಚಿತ್ರವನ್ನು ಪ್ರಕಟಿಸಿದೆ.[೮]

In Public domain. Digitization Muthulakshmi Research Academy

ಪ್ರಜಾವಾಣಿ ಪತ್ರಿಕೆ ದಿನಾಂಕ ೨೩.೮.೨೦೧೭ರಲ್ಲಿ ಡಾ.ಜಾಮದಾರ, ಗದುಗಿನ ತೋಂಟದಾರ್ಯ ಮಠದ ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿ, ಕೂಡಲಸಂಗಮದ ಶ್ರೀ ಜಯಮೃತ್ಯುಜಯ ಸ್ವಾಮೀಜಿ ಮತ್ತು ಸಚಿವ ವಿನಯ ಕುಲಕರ್ಣಿಯವರ ಮಾತುಗಳನ್ನು ದಾಖಲಿಸಿದೆ. ಲಿಂಗಾಯತ ಸ್ವತಂತ್ರ ಧರ್ಮ ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ ಮಾತನಾಡಿ "ನಮ್ಮ ಧರ್ಮ ಲಿಂಗಾಯತ ಹೊಸಧರ್ಮ ಹೋರಾಟಕ್ಕಾಗಿ ಅಲ್ಲ. ೯೦೦ ವರ್ಷಗಳಿಂದಲೇ ಲಿಂಗಾಯತ ಧರ್ಮ ಇದೆ. ಭಾರತದಲ್ಲಿ ಜೈನ, ಸಿಖ್, ಬೌದ್ಧ ಧರ್ಮಗಳ ರೀತಿಯಲ್ಲಿಯೇ ಲಿಂಗಾಯತ ಧರ್ಮಕ್ಕೂ ಸಾಂವಿಧಾನಿಕ ಮಾನ್ಯತೆ ಕೊಡಬೇಕು ಎನ್ನುವುದಷ್ಟೇ ನಮ್ಮ ಬೇಡಿಕೆ ಎಂದು ಸ್ಪಷ್ಟಪಡಿಸಿದರು. ಲಿಂಗಾಯತರು ಎಂದೂ ಹಿಂದೂಧರ್ಮದ ಒಳಗೆ ಇಲ್ಲ. ಹೀಗಾಗಿ ಹಿಂದೂಧರ್ಮ ಬಿಟ್ಟು ಹೋಗುತ್ತಾರೆ ಎನ್ನುವ ಪ್ರಶ್ನೆಯೂ ಇಲ್ಲ, ಇಷ್ಟಕ್ಕೂ ಹಿಂದೂಧರ್ಮಕ್ಕೆ ಬಂದರೆ ಬ್ರಾಹ್ಮಣರ ಸ್ಥಾನ ಕೊಡುತ್ತಾರೆಯೇ? ಅಲ್ಲಿಯೂ ಲಿಂಗಾಯುತರಿಗೆ ಸಿಗುವುದು ಶೂದ್ರರ ಸ್ಥಾನವೇ. ಇದು ಐತಿಹಾಸಿಕ ಸತ್ಯ" ಎನ್ನುತ್ತಾ ಪೇಜಾವರ ಶ್ರೀಗಳ ಹೇಳಿಕೆಗೆ ತಿರುಗೇಟು ನೀಡಿದರು. ಗದುಗಿನ ತೋಂಟದಾರ್ಯ ಪೀಠದ ಜಗದ್ಗುರು ಶ್ರೀ ಸಿದ್ಧಲಿಂಗ ಸ್ವಾಮೀಜಿಯವರ ಮಾತುಗಳಲ್ಲಿ ಆಯ್ದಭಾಗವಾದ ಈ ಮಾತುಗಳನ್ನು ಪ್ರಕಟಿಸಿದೆ. "ಲಿಂಗಾಯತ ಆಚರಣೆಯ ಮೇಲೆ ಕನ್ನಡಿ ಮೇಲಿನ ಧೂಳಿನಂತೆ ವೀರಶೈವ ಬಂದು ನಿಂತಿದೆ. ಅಲ್ಲಿಂದಲೇ ಲಿಂಗಾಯತರು ದಾರಿ ತಪ್ಪಿದ್ದಾರೆ. ಈಗ ಸ್ವಾಮೀಜಿಗಳಿಗೆ ಬಸವಧರ್ಮದ ಬಗ್ಗೆ ತರಬೇತಿ ನಡೆಯಬೇಕು" ಎಂದು ಬಾಕ್ಸ್ ಐಟಂ ವರದಿ ಹೇಳುತ್ತದೆ. ಶ್ರೀ ಬಸವಜಯಮೃತ್ಯುಂಜಯ ಸ್ವಾಮಿಗಳ ಮಾತನ್ನು ಉಲ್ಲೇಖಿಸುತ್ತ "ಬಹುತೇಕ ರಾಜಕಾರಣಿಗಳು ಲಿಂಗಾಯತ ಎಂದು ಹೇಳಿಕೊಳ್ಳಲು ಹಿಂಜರಿಯುತ್ತಾರೆ. ಗುಲಾಮರಾಗಿ ಬದಕುವ ಪ್ರಯತ್ನ ಯಾರೂ ಮಾಡಬಾರದು. ಕೆಲವರು ಸಂಘಟನೆ ಒಡೆಯುವ ಕೆಲಸ ಮಾಡುತ್ತಿದ್ದಾರೆ. ವೀರಶೈವ ಮಹಾಸಭಾದಂತೆ ಅಖಿಲ ಭಾರತ ಲಿಂಗಾಯತ ಮಹಾಸಭಾವನ್ನು ಸ್ಥಾಪಿಸುವ ಅವಶ್ಯಕತೆ ಇದೆ. ಸಚಿವ ವಿನಯ ಕುಲಕರ್ಣಿಯವರ ಮಾತಿನ ವರದಿ. "ಲಿಂಗಾಯತರು ಒಂದಾಗಿದ್ದೇವೆ ಎನ್ನುವುದನ್ನು ದೇಶಕ್ಕೆ ತೋರಿಸುವ ಸಲುವಾಗಿ ೨೫ ಲಕ್ಷ ಲಿಂಗಾಯತರೊಂದಿಗೆ ಬೆಂಗಳೂರು ಚಲೋ ನಡೆಸೋಣ, ಸಂಘಟನೆ ಬಲಪಡಿಸಲು ಪ್ರತಿ ಊರಿನಲ್ಲಿ ಬಸವಸೇನೆ ಸ್ಥಾಪಿಸಬೇಕು" ಎಂದು ವಿಜಯ ಕರ್ನಾಟಕ ವರದಿ ಮಾಡಿದೆ.

ಜನರ ಮೇಲೆ ಪ್ರಭಾವ ಬೀರುವ ವಿದ್ಯುನ್ಮಾನ ಮಾಧ್ಯಮಗಳು ಬೆಳಗಾವಿ ಸಮಾವೇಶಕ್ಕೆ ಮಹತ್ವದ ಸ್ಥಾನ ನೀಡಿ ಪ್ರೈಂ ಟೈಮ್ ಸಮಯದಲ್ಲಿ ಪ್ರಸಾರ

In Public domain. Digitization Muthulakshmi Research Academy
ಮಾಡಿದವು. ಪ್ರಮುಖವಾಗಿ ಟಿ.ವಿ.೯, ಸುವರ್ಣ ನ್ಯೂಸ್, ಪಬ್ಲಿಕ್ ಟಿ.ವಿ. ಮಾಧ್ಯಮ ಸಂಸ್ಥೆಗಳು ಸಭೆ ಪ್ರಾರಂಭಕ್ಕೆ ಮುನ್ನ, ಸಭೆ ನಡೆಯುವಾಗ ಮತ್ತು ಸಭೆಯ ನಂತರವೂ ಸುದ್ದಿ ಪ್ರಸರಣ ಮಾಡಿದ್ದವು. ಎಲ್ಲ ಮಾಧ್ಯಮಗಳು ಬೆಳಗಾವಿ ಸಭೆಯು ಒಂದು ಐತಿಹಾಸಿಕ ಸಭೆಯೆಂದು ಬಣ್ಣಿಸಿದ್ದವು. ಮಾಧ್ಯಮಗಳಿಗೆ ಸಂದರ್ಶನ ನೀಡುವ ಸಮಯದಲ್ಲಿ ಪೂಜ್ಯರ ಮಾತುಗಳಲ್ಲಿ ದ್ವಂದ್ವ ಅಭಿಪ್ರಾಯ ವ್ಯಕ್ತವಾದವು. ಬೈಲೂರಿನ ನಿಜಗುಣಾನಂದ ಶ್ರೀಗಳು ರಾಜಕಾರಣಿಗಳನ್ನು ಈ ಸಭೆಗೆ ಕರೆಯುವುದಿಲ್ಲ ಎಂದರೆ ಸಭೆಯಲ್ಲಿ ರಾಜಕಾರಣಿಗಳು ಭಾಗವಹಿಸಿದ್ದರು. ಇನ್ನೊಬ್ಬ ಶ್ರೀಗಳಾದ ಶ್ರೀ ಬಸವಜಯಮೃತ್ಯುಂಜಯ ಸ್ವಾಮೀಜಿವರು ಬಿ.ಜೆ.ಪಿ. ನಾಯಕರಾದ ಯಡಿಯೂರಪ್ಪನವರ ಮನವೊಲಿಸಿ ಪ್ರಧಾನಿ ಮೋದೀಜಿಯವರಿಗೆ ಮನವಿ ಸಲ್ಲಿಸುವುದಾಗಿ ಹೇಳಿದರು. ಅದೇ ಸಮಯದಲ್ಲಿ ಸಭೆಯಲ್ಲಿ ಭಾಷಣಕಾರರು ಕೇಂದ್ರ ಸರಕಾರದ ವಿರುದ್ಧ ನಿಲ್ಲುವ ಸೂಚನೆಗಳನ್ನು ವ್ಯಕ್ತಪಡಿಸುತ್ತಲೇ ಇದ್ದರು. ಡಾ.ಜಾಮದಾರ ಅವರ ಮಾತುಗಳು ಏಣಿಶ್ರೇಣಿ ಆಧಾರಿತ ಜಾತಿ ಲಿಂಗಾಯತರ ಮುಂದುವರಿದ ಭಾಗದಂತಿತ್ತು. ಇಂತಹ ಮಾತುಗಳನ್ನು ೧೮೯೧ರ ಜನಗಣತಿ ಸಮಯದಲ್ಲಿ ಮೈಸೂರು ಭಾಗದ ವೀರಶೈವ ನಾಯಕರಾದ ವೀರಸಂಗಪ್ಪನವರು ಆಡಿದ್ದರು. ಅಂದು ಅವರು ಮೈಸೂರು ಅರಸರನ್ನು ಲಿಂಗಾಯತರಿಗೂ ಬ್ರಾಹ್ಮಣ ಸ್ಥಾನಮಾನವನ್ನು ನೀಡಬೇಕೆಂದು ಕೇಳಿದ್ದರು. ಅಂದೇ ಬಸವಣ್ಣನವರ ಆಸೆ ಮಣ್ಣುಪಾಲಾಗಿತ್ತು. ಶರಣರು ಬಯಸಿದ್ದು ಏಣಿಶ್ರೇಣಿಯಿಲ್ಲದ ಲಿಂಗಾಯತ ಸಮಾಜವನ್ನು. ಇಂದಿನ ನಮ್ಮ ಹೋರಾಟವು ಅದನ್ನೇ ಬಯಸುತ್ತದೆ. ಅದು ಲಿಂಗಾಯತ ಧರ್ಮದ ಪ್ರಬಲವಾದ ಸಿದ್ಧಾಂತ. ಆದರೆ ಡಾ.ಜಾಮದಾರ ಲಿಂಗಾಯತರಿಗೆ ಬ್ರಾಹ್ಮಣರ ಸ್ಥಾನಮಾನ ನೀಡುತ್ತಾರೆಯೆ? ಎಂದು ಕೇಳಿದ್ದು ಮಾತಿನ ಭರದಲ್ಲೋ ಅಥವಾ ನಿಜವಾದ ಕಳಕಳಿಯೋ ಎಂಬ ದ್ವಂದ್ವ ಉಂಟಾಗಿತ್ತು. ಹಿಂದೂಧರ್ಮದಲ್ಲಿ ಲಿಂಗಾಯತರಿಗೆ ಬ್ರಾಹ್ಮಣ ಸ್ಥಾನಮಾನ ನೀಡಿದರೆ, ನಮಗೆ ಧರ್ಮಮಾನ್ಯತೆಯ ಅವಶ್ಯಕತೆ ಇಲ್ಲವೇ? ಲಿಂಗಾಯತರಿಂದು ಸ್ಥಾನಮಾನಕ್ಕಾಗಿ ಹೋರಾಡುತ್ತಿದ್ದಾರೆಯೇ? ಅಥವಾ ವಚನಗಳ ಆಧಾರದಲ್ಲಿರುವ ಲಿಂಗಾಯತ ಧರ್ಮದ ಅಸ್ಮಿತೆಗಾಗಿ ಹೋರಾಡುತ್ತಿದ್ದಾರೆಯೇ ಎಂಬ ಗಂಭೀರ ಪ್ರಶ್ನೆ ಏಳುತ್ತದೆ.

ಇವೆಲ್ಲ ದ್ವಂದ್ವ ಹೇಳಿಕೆಗಳ ಮಧ್ಯೆಯೂ ಬೆಳಗಾವಿಯ ಸಭೆಯು ಮಹತ್ತರವಾದ ಸಂದೇಶವನ್ನು ನಾಡಿನ ಜನರಿಗೆ ನೀಡಿತು.

೧. ಲಿಂಗಾಯತರ ಅಗಾಧ ಶಕ್ತಿಯನ್ನು ದೇಶಕ್ಕೆ ಸಾರುವಲ್ಲಿ ಸಭೆ ಸಫಲವಾಗಿತ್ತು.

In Public domain. Digitization Muthulakshmi Research Academy

೨. ಜನಸಂಘಟನೆಯನ್ನು ಒಬ್ಬ ಜನಸಾಮಾನ್ಯನು ಮಾಡಬಹುದು ಎಂದು ಸಂಘಟಕರು ನಿರೂಪಿಸಿದರು.

೩. ಲಿಂಗಾಯತದ ಹಸಿವು ಜನಸಾಮಾನ್ಯರಲ್ಲಿದೆಯೆಂದು ಈ ಸಭೆ ಸಾಬೀತುಪಡಿಸಿತು.

೪. ಲಿಂಗಾಯತರ ಸ್ವತಂತ್ರ ಧರ್ಮದ ಮಾನ್ಯತೆಯನ್ನು ಸರಕಾರಗಳು ಮನ್ನಿಸಲೇಬೇಕು ಎಂಬ ಸ್ಪಷ್ಟ ಸಂದೇಶ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ಹೋಯಿತು.

೬. ಈ ಸಮಾವೇಶವು ಲಿಂಗಾಯತದ ಅಸ್ಮಿತೆಯ ಪ್ರತೀಕವಾಗಿತ್ತು. ಅಲ್ಲದೆ ಲಿಂಗಾಯತರ ಸ್ವಾಭಿಮಾನವನ್ನು ಹೆಚ್ಚಿಸಿತು.

ಸಾಧಿಸದೆ ಇರುವ ಕೆಲ ವಿಷಯಗಳು

೧. ಸಭೆಯಲ್ಲಿ ಅಥವಾ ಸಭೆಯ ಪೂರ್ವದಲ್ಲಿ ನೀಡಿದ ಪೂಜ್ಯರ ಹೇಳಿಕೆಗಳು ದ್ವಂದ್ವ ನಿಲುವುಗಳಿಂದ ಕೂಡಿದ್ದವು.

೨. ಲಿಂಗಾಯತ ಸ್ವತಂತ್ರ ಧರ್ಮದ ಬೇಡಿಕೆಗೆ ಸಾಂಘಿಕ ಹೋರಾಟದ ಅವಶ್ಯಕತೆಯಿದೆ ಎಂದೆನಿಸಿತು.

೩. ಭಾಗವಹಿಸಿದವರಲ್ಲಿ ಸಮನ್ವಯದ ಕೊರತೆಯಿದೆ ಎಂಬ ಭಾವನೆ ಬರದೆ ಇರಲಿಲ್ಲ.

ಕೊನೆ ಟಿಪ್ಪಣಿಗಳು

೧. Deccan chronicle, Dated November 13, 2017.

೨. ಪ್ರಜಾವಾಣಿ ಪತ್ರಿಕೆ ಜೂನ್ ೫, ೨೦೧೮.

೩. ಬೆಂಗಳೂರು ನಗರದ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ, ಡಾ.ಬಿ.ಸಿ.ವೀರಪ್ಪ, ಪು.ಸಂ.೪೬.

೪. ೧೨ ಶತಮಾನದ ಕಲ್ಯಾಣ ರಾಜ್ಯದ ಗಡಿ ಸರಹದ್ದು ಇಂದಿನ ದಾರವಾಡ ಜಿಲ್ಲೆಯ ಯಲ್ಲಾಪುರಕ್ಕೆ ಕೊನೆಗೊಳ್ಳುತ್ತದೆ ಎಂಬ ದಾಖಲಾತಿಗಳು ದೊರೆಯುತ್ತವೆ.

೫. The Hindu archives Published on 22nd August 2017.

೬. Indian Express archives updated on 23, Aug, 2017.

೭. Bangalore Mirror dated 23, Aug 2017

೮. ವಿಜಯ ಕರ್ನಾಟಕ ದಿನಾಂಕ ಆಗಸ್ಟ್ ೨೩, ೨೦೧೭.

In Public domain. Digitization Muthulakshmi Research Academy

ಅಧ್ಯಾಯ ಐದು

ಒಳಬೇಗುದಿ

ಲಿಂಗಾಯತ ಪ್ರತ್ಯೇಕ ಧರ್ಮದ ಹೋರಾಟ ಮೇಲ್ನೋಟಕ್ಕೆ ಹಿಂದೂ-ವೀರಶೈವ-ಲಿಂಗಾಯತ ಧರ್ಮಗಳ ಮಧ್ಯೆ ಇರುವ ಸೈದ್ಧಾಂತಿಕ ಹೋರಾಟವೆಂದು ತೋರಿದರೂ ಅಸಲಿನಲ್ಲಿ ಇದು ಹಾಗಿರಲಿಲ್ಲ. ಹೋರಾಟದ ಮುಂಚೂಣಿಯಲ್ಲಿದ್ದವರು ಮೂವರು ಪಾತ್ರಧಾರಿಗಳು. ಮೊದಲನೇ ಪಾತ್ರಧಾರಿ ಅಖಿಲ ಭಾರತ ವೀರಶೈವ ಮಹಾಸಭೆ. ಎರಡನೆಯ ಪಾತ್ರಧಾರಿ ಕರ್ನಾಟಕದ ಧಾರ್ಮಿಕ ನಾಯಕರು. ಮೂರನೆಯ ಪಾತ್ರದಲ್ಲಿ ಎರಡು ರಾಜಕೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿ.ಜೆ.ಪಿ.

ಲಿಂಗಾಯತರ ಹೋರಾಟವು ಈ ಮೂವರು ಪಾತ್ರಧಾರಿಗಳ ಮಧ್ಯೆ ಸಿಕ್ಕಿಹಾಕಿಕೊಂಡು ಏದುಸಿರು ಬಿಡುವ ಮಟ್ಟಕ್ಕೆ ಬಂದಿತ್ತು. ಇವರೆಲ್ಲರ ಸ್ವಾರ್ಥತನದ ಚಾಣಕ್ಯ ನಡೆ ಅಮಾಯಕ ಹೋರಾಟಗಾರರ ದಾರಿ ತಪ್ಪಿಸುತ್ತಿತ್ತು. ಅನೇಕ ರಾಜಕೀಯ ಒಳಸಂಚುಗಳು ಸಾಮಾನ್ಯನಿಗೆ ನಿಲುಕದ ವಿಷಯಗಳಾಗಿದ್ದವು. ಅನೇಕ ಬಾರಿ ನಮ್ಮ ಹೋರಾಟದ ಮೂಲಕಾರಣದ ಮೇಲೆ ಕಂಬಳಿ ಎಳೆಯುವ ಪ್ರಸಂಗಗಳು ತೇಲಿಬರುತ್ತಿದ್ದವು.

ಲಿಂಗಾಯತರ ಹೋರಾಟವನ್ನು ಪ್ರಾರಂಭಿಸಿದವರೇ ವೀರಶೈವ ಮಹಾಸಭೆಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪ ಮತ್ತು ಅವರ ಟೀಂ. ಇವರೊಂದಿಗೆ ಎಂ.ಬಿ.ಪಾಟೀಲ, ವಿನಯ ಕುಲಕರ್ಣಿ, ಶರಣಪ್ರಕಾಶ ಪಾಟೀಲ ಮತ್ತು 'ಲೆಕ್ಕಕ್ಕುಂಟು ಆಟಕ್ಕಿಲ್ಲ' ಎನ್ನುವ ಮನೋಭಾವದ ಬಸವರಾಜ ರಾಯರಡ್ಡಿ. ಈ

In Public domain. Digitization Muthulakshmi Research Academy

ಹೊರಾಟವು ದಿನಗಳೆದಂತೆ ಇವರುಗಳ ಮಧ್ಯದ ಈರ್ಷೆಯಿಂದ ಸೋಲು-ಗೆಲುವಿನ ಹೋರಾಟವಾಗಿ ಮಾರ್ಪಟ್ಟಿತ್ತು.

ಎರಡನೆಯದಾಗಿ ಧರ್ಮಗುರುಗಳು: ಕರ್ನಾಟಕದಲ್ಲಿ ೪೦೦೦ ಮಠಗಳಿವೆ ಎಂಬ ಒಂದು ಅಂದಾಜಿದೆ. ಈ ವೃತ್ತಿಗೆ ಬಸವಣ್ಣನವರು ಒದಗಿಸಿಕೊಟ್ಟ ಒಂದು ಘನವಾದ ಐತಿಹ್ಯವಿದೆ. ಲಿಂಗಾಯತದ ಸಿದ್ಧಾಂತ ಪ್ರಕಾರ ಜಂಗಮ ಅರಿಷಡ್ವರ್ಗಗಳನ್ನು ಮೀರಿದವನು. ಅವನು ನಿರಾಭಾರಿ, ಹರಿವ ನೀರಿನಂತೆ ಚಲಿಸುವವ, ಜಾತಿ, ಮತ, ಪಂಥವೆನ್ನದೆ ಎಲ್ಲರಿಗೂ ಬಸವ ಸಿದ್ಧಾಂತವನ್ನು ಬೋಧಿಸುವವ, ಮನೆ-ಮಠ ತೊರೆದು ಧರ್ಮವನ್ನೇ ಉಸಿರಾಗಿಸಿಕೊಂಡು, ಅದನ್ನು ಪಸರಿಸುವ ಪ್ರಚಾರಕ. ಆದರೆ ಈ ಹೋರಾಟದಲ್ಲಿ ಅವರ ಅಸಲಿ ಮುಖ ಬಯಲಾಗಿತ್ತು. ಅನೇಕ ವಿರಕ್ತಮಠಗಳ ಜಂಗಮರು 'ನೀರಿಗಿಂತ ರಕ್ತ ಗಟ್ಟಿ' ಎಂದು ತಮ್ಮ ಮೂಲ ಜಾತಿಜಂಗಮರ ಪುರೋಹಿತಶಾಹಿ ವರ್ಗದವರತ್ತ ವಾಲಿದರು. ಸಿದ್ಧಾಂತದಿಂದ ವಿಮುಖರಾಗಿ ಸಂಸಾರಿಗಳಿಗಿಂತ ಹೆಚ್ಚು ಸ್ವಾರ್ಥಿಗಳಾಗಿ ವ್ಯವಹರಿಸಿದರು. ಈ ಹೋರಾಟವು ಜಂಗಮರಿಬ್ಬರ ಮಧ್ಯೆ ನಡೆಯುತ್ತಿರುವ ಶ್ರೇಷ್ಠತೆಯ ವೇದಿಕೆಯಾಗಿ ಪರಿವರ್ತಿತವಾಗಲಾರಂಭಿಸಿತ್ತು.

ಕೊನೆಯದಾಗಿ: ರಾಷ್ಟ್ರ ರಾಜಕಾರಣ ಮಾಡುತ್ತಿರುವ ಪ್ರಮುಖ ರಾಜಕೀಯ ಪಕ್ಷಗಳಾದ ಭಾರತೀಯ ಜನತಾ ಪಕ್ಷ ಮತ್ತು ಕಾಂಗ್ರೆಸ್ ಪಕ್ಷಗಳು ಜನರ ಭಾವನೆಗಳೊಂದಿಗೆ ಚೆಲ್ಲಾಟವಾಡುತ್ತ ಚಳುವಳಿಯಿಂದ ತಮ್ಮ ಪಕ್ಷಕ್ಕಾಗುವ ಲಾಭ ನಷ್ಟಗಳ ವ್ಯಾಪಾರಿಗಳಾಗಿ ಬಿಟ್ಟಿದ್ದರು. ಇಲ್ಲಿ ಭಾಗವಹಿಸಿದ ಈ ಮೂವರು ಬೆಂಕಿಯಿಂದ ಉರಿಯುತ್ತಿರುವ ಮನೆಯಲ್ಲಿ ಗಳ ಹಿರಿಯುವ ಕೆಲಸವನ್ನು ಬಹಳ ನಿಷ್ಠೆಯಿಂದ ಮಾಡುತ್ತಿದ್ದರು. ಕಾಂಗ್ರೆಸ್ ಪಕ್ಷದ ನಾಯಕರ ಮತ್ಸರ ಕಾಂಗ್ರೆಸ್ಸಿಗರೆಲ್ಲರೂ ಒಂದೇ ಎನ್ನುವುದನ್ನು ಕಾಂಗ್ರೆಸ್ ಪಕ್ಷದ ನಾಯಕರು ಮರೆತು ಶತಮಾನಗಳೇ ಗತಿಸಿದೆ. ಪಂಡಿತ ನೆಹರು ಅವರ ಕಾಲದಿಂದಲೂ "ಕಾಂಗ್ರೆಸ್ ಪಕ್ಷಕ್ಕೆ ಕಾಂಗ್ರೆಸ್ಸಿಗರೇ ಎದುರಾಳಿಗಳು" ಎಂಬ ಹೇಳಿಕೆ ಇಂದಿಗೂ ಪ್ರಸ್ತುತ ಎಂದು ಮತ್ತೊಮ್ಮೆ ಸಿದ್ಧಪಡಿಸಿತ್ತು ಈ ಹೋರಾಟ.

ವೀರಶೈವ ಮಹಾಸಭೆಯವರೇ ಲಿಂಗಾಯತ ಧರ್ಮಕ್ಕೆ ಮಾನ್ಯತೆ ಬೇಕೆಂದವರು. "ಆಯಿತು ಕೊಡುತ್ತೇವೆ ಬನ್ನಿ" ಎಂದಿತ್ತು ಸರ್ಕಾರ. ಅದನ್ನು ಪಡೆದ ಶ್ರೇಯ ಯಾರಿಗೆ ಸಲ್ಲಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯ ಪ್ರಾರಂಭವಾಗಿತ್ತು. ಕಾಂಗ್ರೆಸ್ ನಾಯಕರ ರೋಗಗ್ರಸ್ತ ಮನಸ್ಥಿತಿಯ ಚಿತ್ರಗಳು ಈ ಹೋರಾಟದುದ್ದಕ್ಕೂ ಪ್ರದರ್ಶನಗೊಳ್ಳುತ್ತಲೇ ಹೋಗುತ್ತವೆ. ಅಖಿಲ ಭಾರತ ವೀರಶೈವ ಮಹಾಸಭೆಯಲ್ಲಿದ್ದ ಇಬ್ಬರು ಪ್ರಮುಖ ಪದಾಧಿಕಾರಿಗಳು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು ಹಾಗೂ ಸಿದ್ಧರಾಮಯ್ಯನವರ ಸಚಿವ ಸಂಪುಟದ ಸದಸ್ಯರು.

In Public domain. Digitization Muthulakshmi Research Academy

ವೀರಶೈವ ಮಹಾಸಭೆಯು ಲಿಂಗಾಯತರ ಏಳಿಗೆಗಾಗಿ ಹುಟ್ಟಿಕೊಂಡ ಸಂಸ್ಥೆ. ತನ್ನ ಗುರಿಯಿಂದ ಅದು ವಿಮುಖಗೊಂಡು ಅನೇಕ ದಶಕಗಳಾಗಿವೆ. ಅದೊಂದು ಧಾರ್ಮಿಕ ಅಥವಾ ಸಮಾಜೋದ್ಧಾರಕ ಸಂಸ್ಥೆಯಾಗಿ ಇಂದು ಉಳಿದುಕೊಂಡಿಲ್ಲ. ಅದೀಗ ರಾಜಕೀಯ ನಾಯಕರ ಬ್ರಿಡೀಂಗ್ ಕೇಂದ್ರವಾಗಿದೆ. ಈ ಸಂಸ್ಥೆಯನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಂಡು, ರಾಜಕೀಯ ಮೆಟ್ಟಿಲಾಗಿ ಪರಿವರ್ತಿತವಾಗಿದ್ದು ಲಿಂಗಾಯತರ ಮಹಾದುರಂತ. ಈ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷರೂ ಇದಕ್ಕೆ ಹೊರತಾಗಿಲ್ಲ.

ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರು ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರೂ ಆಗಿರುವ ಶಾಮನೂರು ಶಿವಶಂಕರಪ್ಪನವರ ಹೋರಾಟದ ಪೂರ್ವದಲ್ಲಿ ಮಾತಾಡಿದ ಮಾತುಗಳಿವು. "ವೀರಶೈವ ಲಿಂಗಾಯತ ಸ್ವತಂತ್ರ ಧರ್ಮ ಎನ್ನುವುದನ್ನು ನಾಲ್ವತ್ತು ವರ್ಷಗಳಿಂದಲೂ ಹೇಳಿಕೊಂಡು ಬಂದಿದ್ದೇವೆ. ಈಗಲೂ ಹಾಗೂ ಮುಂದೆಯೂ ಇದನ್ನೇ ಹೇಳುತ್ತೇವೆ. ಈ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ" ತಾವಲ್ಲದೆ ರಂಭಾಪೂರಿ ಹಾಗೂ ಶ್ರೀಶೈಲ ಪೀಠದ ಸ್ವಾಮಿಗಳು ಇದಕ್ಕೆ ಸಹಮತ ವ್ಯಕ್ತಪಡಿಸಿದ್ದಾರೆ. "ಸಮುದಾಯದ ೫೦-೬೦ ಸ್ವಾಮಿಗಳ ಸಭೆಯನ್ನು ಸದ್ಯದಲ್ಲಿ ಕರೆಯುವಂತೆ ರಾಜ್ಯಘಟಕದ ಅಧ್ಯಕ್ಷ ತಿಪ್ಪಣ್ಣ ಅವರಿಗೆ ತಿಳಿಸಿದ್ದೇನೆ"[೧] ಎಂದಿದ್ದರು. ಹೋರಾಟದ ನಾಲ್ಕು ತಿಂಗಳ ನಂತರ ಮಾಧ್ಯಮಗಳಲ್ಲಿ ತಮ್ಮ ಅಸಮಾಧಾನವನ್ನು ಅನೇಕ ಪತ್ರಿಕೆಗಳಲ್ಲಿ ತೋಡಿಕೊಂಡಿದ್ದರು. ಅವರು ಪ್ರಜಾವಾಣಿ ಪತ್ರಿಕೆಗೆ ನೀಡಿದ ಸಂದರ್ಶನ ಗಮನಿಸಿ.

ಪ್ರಜಾವಾಣಿ : ಹಲವು ಸ್ವಾಮಿಗಳು, ಹಿರಿಯರೂ ಲಿಂಗಾಯತ ಧರ್ಮ ಪ್ರತ್ಯೇಕ ಆಗಬೇಕು ಎನ್ನುತ್ತಿದ್ದಾರಲ್ಲ?

ಅಧ್ಯಕ್ಷರ ಉತ್ತರ : ಹೌದು, ಆ ಮಾತೆ ಮಹಾದೇವಿ, ಗದುಗಿನ ಸ್ವಾಮಿ, ಜಯಮೃತ್ಯುಂಜಯ ಸ್ವಾಮೀಜಿ ಎಲ್ಲಾ ಇದರೊಟ್ಟಿಗೆ ಒಬ್ಬೊಬ್ಬರಾಗಿ ಸೇರ್ತಾ ಇದ್ದಾರೆ. ಆ ಎಂ.ಬಿ.ಪಾಟೀಲನಂತೂ ಹುಚ್ಚಾಪಟ್ಟೆ ಮಾತಾಡೋಕೆ ಶುರು ಮಾಡಿದ.

ಪ್ರಜಾವಾಣಿ : ಪ್ರತ್ಯೇಕ ಲಿಂಗಾಯತ ಧರ್ಮ ಆಗೋದು ತಪ್ಪಾ?

ಉತ್ತರ : ಪ್ರತ್ಯೇಕ ಆದರೆ ವೀರಶೈವರು ಎಲ್ಲಿಗೆ ಹೋಗಬೇಕು? ಈ ಲಿಂಗಾಯತರನ್ನೇನು ಬಸವಣ್ಣ ಮಾಡಿದ್ನಾ? ಇದು ಮೊದಲೇ ಇತ್ತು. ಹಂಗಂತ ಬಸವಣ್ಣ ಹೇಳಿದ್ದಾನೆ.

ಪ್ರಜಾವಾಣಿ : ಲಿಂಗಾಯತ ವೀರಶೈವರ ತಳಸಮುದಾಯಗಳ ಅಭಿಪ್ರಾಯ ಆಲಿಸಿದ್ದೀರಾ?

In Public domain. Digitization Muthulakshmi Research Academy

ಉತ್ತರ : ನಾನು ಯಾವುದಕ್ಕೂ ಹೋಗಿಲ್ಲಪ್ಪಾ, ನಾನು ಬಂದಿರೋದು ೨೩ನೆಯ ಅಧ್ಯಕ್ಷನಾಗಿ, ನನಗೆ ಇದೆಲ್ಲಾ ಗೊತ್ತಿಲ್ಲ. ಈಗ ಶುರುವಾಗಿದೆ. ನಾನು ಏನು ಮಾಡಲಿ ಇದನ್ನು ತಗೊಂಡು.

ಪ್ರಜಾವಾಣಿ : ವೀರಶೈವ ಮಹಾಸಭಾ ಸಮುದಾಯವನ್ನು ಗುತ್ತಿಗೆ ತೆಗೆದುಕೊಂಡಿದೆಯಾ?

ಉತ್ತರ : ಇದು ಗುತ್ತಿಗೆಗಿಂತಲೂ ಹೆಚ್ಚಿಗೆ?[೨]

ಮಹಾಸಭೆಯ ಅಧ್ಯಕ್ಷರ ನುಡಿಮುತ್ತುಗಳಿವು "ಲಿಂಗಾಯತ ಪ್ರತ್ಯೇಕವಾದಿಗಳು ತಮ್ಮ ವೈಯಕ್ತಿಕ ಸಾಧನೆಗೆ ಹಾತೊರೆಯುತ್ತಿದ್ದು ಸ್ವಪ್ರತಿಷ್ಠೆಯ ಬೆನ್ನು ಬಿದ್ದಿದ್ದಾರೆ, ಇವರಿಗೆಲ್ಲಾ ನಾಚಿಕೆಯಾಗಬೇಕು"[೩] ಎಂಬ ಹೇಳಿಕೆ ನೀಡಿದ್ದರು ವೀರಶೈವ ಮಹಾಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಚಿವ ಈಶ್ವರ ಖಂಡ್ರೆಯವರು. ಇವೆಲ್ಲ ಹೇಳಿಕೆಗಳು ಕಾಂಗ್ರೆಸ್ ಪಕ್ಷದ ನಾಯಕರ ಮನಸ್ಥಿತಿಗೆ ಹಿಡಿದ ಕನ್ನಡಿಯಾಗಿತ್ತು. ಇವರಲ್ಲಿರುವ ರಾಜಕೀಯ ಮಹತ್ವಾಕಾಂಕ್ಷೆಯು ತಾವು ಆಚರಿಸುವ ಧರ್ಮವನ್ನೂ ತುಷ್ಟೀಕರಿಸುವ ಮಟ್ಟಕ್ಕೂ ಹೋಗಿತ್ತು. ಶಾಮನೂರು ಶಿವಶಂಕರಪ್ಪನವರ ಪುತ್ರರೂ ಸಚಿವರೂ ಆಗಿದ್ದ ಎಸ್.ಎಸ್.ಮಲ್ಲಿಕಾರ್ಜುನ ಅವರು "ಮನೆ ಅಂದ ಮೇಲೆ ಮನೆಯಲ್ಲಿ ಎಲ್ಲರೂ ಒಂದೇ ತರಹ ಇರುವುದಿಲ್ಲ, ಮನೆ ಹಾಳು ಮಾಡುವವರು ಇರುತ್ತಾರೆ, ಉದ್ಧಾರ ಮಾಡುವವರು ಇರುತ್ತಾರೆ" ಎಂದುಬಿಟ್ಟಿದ್ದರು. ಮುಂದುವರಿದು "ಯಾರು ಮನೆ ಹಾಳು ಮಾಡುತ್ತಿದ್ದಾರೆ, ಯಾರು ಉದ್ಧಾರ ಮಾಡುತ್ತಿದ್ದಾರೆ ಎನ್ನುವುದು ಮುಂದೆ ಗೊತ್ತಾಗುತ್ತದೆ ಎಂದು ಪರೋಕ್ಷವಾಗಿ ಸಚಿವ ಎಂ.ಬಿ.ಪಾಟೀಲ ವಿರುದ್ಧ ಕಿಡಿ ಕಾರಿದ್ದರು"[೪].

ಮುಖ್ಯಮಂತ್ರಿಗಳಿಗೆ 'ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆ ನೀಡಿ' ಎಂದು ಕೇಳಿದ ಕಾಂಗ್ರೆಸ್ ನಾಯಕರು ಕೇವಲ ಮೂರು ತಿಂಗಳ ಅವಧಿಯಲ್ಲಿ 'ಅದರ ಅವಶ್ಯಕತೆ ಇಲ್ಲ' ಎನ್ನುವ ಮಟ್ಟಕ್ಕೆ ಇಳಿಯಲು ಕಾರಣಗಳೇನು? ಈ ಮೂರು ತಿಂಗಳ ಅವಧಿಯಲ್ಲಿ ರಾಜಕೀಯದಲ್ಲಾದ ಬದಲಾವಣೆಗಳೇನು?

ಮೊದಲನೆಯದಾಗಿ ಇದನ್ನು ರಾಜಕೀಯಗೊಳಿಸಿದ್ದೇ ರಾಜಕಾರಣಿಗಳದೊಂದು ದೊಡ್ಡ ಷಡ್ಯಂತ್ರ. ಅಖಿಲ ಭಾರತ ವೀರಶೈವ ಮಹಾಸಭಾ ಒಂದು ಮನವಿ ಸಲ್ಲಿಸುತ್ತದೆ. ಆ ಮನವಿಗೆ ಸ್ಪಂದಿಸಿದ ಸರಕಾರ 'ಒಟ್ಟಾಗಿ ಬನ್ನಿ' ಎಂದು ಹೇಳುತ್ತದೆ. ಒಟ್ಟಾಗಿ ಹೋಗಿ ವಿಷಯವನ್ನು ಸಾರ್ವಜನಿಕಗೊಳಿಸದೆ ಕಾರ್ಯ ಮಾಡಿದ್ದರೆ 'ಈ ಕಗ್ಗಂಟಿ'ನ ಪ್ರಶ್ನೆಯೇ ಇರುತ್ತಿರಲಿಲ್ಲ. ಇದಲ್ಲದೆ ಇನ್ನೊಂದು ದಾರಿಯೂ ಇತ್ತು. ಲಿಂಗಾಯತ ಮತ್ತು ವೀರಶೈವರ ಅಭಿವೃದ್ಧಿ ಬಯಸುವ

In Public domain. Digitization Muthulakshmi Research Academy
ವೀರಶೈವ ಮಹಾಸಭೆಯು ಇವರಿಬ್ಬರನ್ನು ಕರೆದು "ಇದು ನಮ್ಮ ಧರ್ಮಕ್ಕೆ ಒದಗಿದ ಒಂದು ಸುವರ್ಣಾವಕಾಶ"ವೆಂದು ಲಿಂಗಾಯತ ಹಾಗೂ ವೀರಶೈವರ ನಾಯಕರು, ಪೂಜ್ಯರಿಗೆ ಹೇಳಿ, ಒಗ್ಗಟ್ಟಾಗಿ ಹೋಗಿ ಮುಖ್ಯಮಂತ್ರಿಗಳೆದುರು ಮತ್ತೊಮ್ಮೆ ಮನವಿ ಸಲ್ಲಿಸಿ ತಮ್ಮ ಕಾರ್ಯ ಸಾಧಿಸಬಹುದಿತ್ತು. ಆದರೆ ರಾಜಕಾರಣಿಗಳು ಹಿಡಿದ ದಾರಿ ಇವೆರಡೂ ದಾರಿಗಳಿಗಿಂತ ಭಿನ್ನವಾಗಿತ್ತು. ಈ ವಿಷಯವನ್ನು ಸಾರ್ವಜನಿಕಗೊಳಿಸಿ, ಜನರನ್ನು ಬೀದಿಗೆ ತಂದು, ತಾವು ಮಾಡಿದ ಕಾರ್ಯಕ್ಕೆ ಶ್ಲಾಘನೆಯ ಕೂಲಿ ಪಡೆಯುವುದಾಗಿತ್ತು. ಮುಂಬರುವ ಚುನಾವಣೆಯಲ್ಲಿ ಮತ ಪಡೆಯುವ ಹುನ್ನಾರವಿತ್ತು. ಒಂದು ರಾಜಕೀಯ ಪಕ್ಷಕ್ಕೆ ಒಂದು ವಿಷಯದಿಂದ ಲಾಭವಾಗುತ್ತದೆ ಎಂದಾಗ, ಎದುರಾಳಿ ಪಕ್ಷವು ಅದು ಎಷ್ಟೇ ಜನಪ್ರಿಯ ವಿಷಯವಾಗಿರಲಿ ಅದರಲ್ಲಿ ರಾಜಕೀಯ ಮಾಡಿಯೇ ಮಾಡುತ್ತದೆ. ರಾಜಕಾರಣಿಗಳ ಮನಸ್ಥಿತಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿರುವ ರಂಗಕರ್ಮಿ ಪ್ರಸನ್ನ ಅವರ ಹೇಳಿಕೆ ತುಂಬ ಮಾರ್ಮಿಕವಾಗಿದೆ. "ನಾವು ಲಿಂಗಾಯತರೋ ಅಥವಾ ವೀರಶೈವರೋ ಎಂಬುದನ್ನು ನಾವೇ ನಿರ್ಧರಿಸಿಕೊಳ್ಳಬೇಕು. ಹೆಚ್ಚು ಮಾತಾಡಿದಷ್ಟು ಕಾಂಗ್ರೆಸ್ ವಿರುದ್ಧ ಬಿಜೆಪಿ ಅಥವಾ ಬಿಜೆಪಿ ವಿರುದ್ಧ ಕಾಂಗ್ರೆಸ್ ಎಂಬ ಪ್ರಯತ್ನವಷ್ಟೇ ಆಗಿ ಉಳಿಯುತ್ತದೆ"[೫] ಎಂಬ ಹೇಳಿಕೆ ಈ ಹೋರಾಟವನ್ನು ರಾಜಕೀಯ ಪಕ್ಷಗಳು ಯಾವ ದಿಕ್ಕಿನತ್ತ ಕೊಂಡೊಯ್ಯುತ್ತವೆ ಎಂಬುದನ್ನು ಸೂಚಿಸುತ್ತಿದೆ.

ವೀರಶೈವ ಮಹಾಸಭೆಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪನವರು ಒಳರಾಜಕೀಯ ಮಾಡುತ್ತಾರೆ. ಮೊದಲನೆಯದಾಗಿ ಅನ್ಯಕೋಮಿನ ಸಿದ್ದರಾಮಯ್ಯನವರು ಲಿಂಗಾಯತರಾಗುವುದು ಅಥವಾ ಸಾಮಾಜಿಕ ನಾಯಕನಾಗಿ ಜನಪ್ರಿಯನಾಗುವುದು ಅವರಿಗೆ ಸಹ್ಯವಾಗುವುದಿಲ್ಲ. ಎರಡನೆಯದಾಗಿ ತಮ್ಮೆದುರು ಬೆಳೆದ ತರುಣ ಎಂ.ಬಿ.ಪಾಟೀಲ ಲಿಂಗಾಯತ ನಾಯಕನಾಗಿ ಹೊರಹೊಮ್ಮುವುದು ಅವರಿಗೆ ಸುತರಾಂ ಇಷ್ಟವಿರಲಿಲ್ಲ. ದೇವರಾಜ ಅರಸರ ಕಾಲದಿಂದಲೂ ಕಾಂಗ್ರೆಸ್ ಪಕ್ಷದ ಖಜಾಂಚಿಯಾಗಿ ಸೇವೆ ಸಲ್ಲಿಸಿದ ೯೦ ವರ್ಷದ ಹಿರಿಯ ನಾಯಕರು ಈ ಅವಕಾಶವನ್ನು ಹೇಗೆ ಬಿಟ್ಟಾರು? ಇವರೊಂದಿಗೆ ಮಧ್ಯಕರ್ನಾಟಕದ ರಾಜಕೀಯ ನಾಯಕರು ಪಕ್ಷಭೇದ ಮರೆತು ಒಂದಾದರು. ಇದಕ್ಕೆ ಪರ್ಯಾಯ ಮಾರ್ಗ ಹುಡುಕಿದರು. ವೀರಶೈವರನ್ನು ಎಬ್ಬಿಸಿ ಕೂರಿಸಿ, ಸಮಸ್ಯೆಗೆ ಪರಿಹಾರ ಕಂಡುಕೊಂಡರು.

ಇದೇ ವೀರಶೈವ ಮಹಾಸಭೆ ೨೦೦೮ರಲ್ಲಿ ಮತ್ತು ೨೦೧೩ರಲ್ಲಿ ಭಾ.ಜ.ಪದ ಅಧ್ಯಕ್ಷರಾದ ಯಡಿಯೂರಪ್ಪನವರನ್ನೊಳಗೊಂಡು ಅಂದಿನ ಯು.ಪಿ.ಎ ಸರಕಾರಕ್ಕೆ ಪ್ರತ್ಯೇಕ ಧರ್ಮಕ್ಕೆ ಬೇಡಿಕೆಯನ್ನಿಟ್ಟು ಮನವಿ ಸಲ್ಲಿಸಿತ್ತಲ್ಲವೆ? ಆಗ ಬಸವಣ್ಣನವರು

In Public domain. Digitization Muthulakshmi Research Academy

ಲಿಂಗಾಯತ ಧರ್ಮ ಸ್ಥಾಪಕರಾಗಿದ್ದು ಈಗ "ಲಿಂಗಾಯತರನ್ನು ಬಸವಣ್ಣ ಮಾಡಿದ್ನಾ" ಎಂದು ಕೇಳುವುದರಲ್ಲಿ ಈ ವೀರಶೈವ ಮಹಾಸಭಾ ಅಧ್ಯಕ್ಷರಿಗೆ ಯಾವ ನೈತಿಕತೆ ಇದೆ? ಮೇಲಾಗಿ ಜೂನ್ ತಿಂಗಳಲ್ಲಿ ಮುಖ್ಯಮಂತ್ರಿಗಳನ್ನು ಸನ್ಮಾನಿಸಿ ಲಿಂಗಾಯತ ಸ್ವತಂತ್ರ ಧರ್ಮದ ಬೇಡಿಕೆಯನ್ನಿಟ್ಟಿದ್ದು ಇದೇ ವೀರಶೈವ ಮಹಾಸಭೆಯಲ್ಲವೆ? ಇದು ಸಮಸ್ತ ಆಖಿಲ ಭಾರತ ವೀರಶೈವ ಮಹಾಸಭೆಯ ಇಂಗಿತವಾಗಿತ್ತೇ? ಇಲ್ಲದಿರಬಹುದು ಎಂಬ ಸಂದೇಹಗಳನ್ನು ನೀಡುತ್ತವೆ ಅಂದಿನ ದಿನಗಳಲ್ಲಿರುವ ವಿದ್ಯಮಾನಗಳನ್ನು ಗಮನಿಸಿ ವರದಿ ನೀಡುತ್ತಿದ್ದ ಪ್ರಜಾವಾಣಿ ಪತ್ರಿಕೆಯ ವರದಿಗಳು.

ಸ್ವತಂತ್ರ ಲಿಂಗಾಯತ ಧರ್ಮದ ಬೇಡಿಕೆಯ ವಿಷಯದಲ್ಲಿ ಸಿದ್ದರಾಮಯ್ಯನವರ ಸಂಪುಟ ಈ ವಿಷಯದಲ್ಲಿ ಒಡೆದು ಹೋಗಿತ್ತು. ಅತ್ತ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಕರ್ನಾಟಕದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಎಚ್ಚರಿಕೆಯಿಂದ ಗಮನಿಸುತ್ತಿತ್ತು. ಭಾರತೀಯ ಜನತಾ ಪಕ್ಷದ ಬೆನ್ನೆಲುಬಾದ ಲಿಂಗಾಯತರ ಸಂಖ್ಯೆಯಲ್ಲಿ ಶೇ. ಶಿರಷ್ಟು ಮತ ಕಾಂಗ್ರೆಸ್‌ನತ್ತ ವಾಲಿದರೆ ಮತ್ತೆ ಅಧಿಕಾರಕ್ಕೆ ಬರಬಹುದು ಎಂಬ ದೂರಾಲೋಚನೆ ಕಾಂಗ್ರೆಸ್ಸಿನ ದೆಲ್ಲಿ ದೊರೆಗಳಲ್ಲಿತ್ತು. ರ್‍ಯಾಲಿಗಳಿಗೆ ಸೇರುತ್ತಿರುವ ಲಿಂಗಾಯತ ಜನಸಂಖ್ಯೆ ಅವರ ಬಾಯಿಯನ್ನು ಕಟ್ಟಿಹಾಕಿತ್ತು. ಇದೊಂದು double edge sword ಆಗಬಹುದೆಂಬ ಆತಂಕವು ಅದಕ್ಕಿತ್ತು. ಇದನ್ನರಿತು ನಾವೆಲ್ಲ ಪದೇ ಪದೇ ಎಂ.ಬಿ.ಪಾಟೀಲರನ್ನು ಎಚ್ಚರಿಸಿ 'ಮಾನ್ಯತೆ ಕೊಡದೇ ಹೋದಲ್ಲಿ ನಾವೆಲ್ಲರೂ ಅವಮಾನಕ್ಕೆ ಗುರಿಯಾಗುತ್ತೇವೆ. ಶತಾಯ ಗತಾಯ ರಾಜ್ಯ ಸರಕಾರ ಲಿಂಗಾಯತರ ಪರವಾಗಿ ನಿರ್ಣಯ ತೆಗೆದುಕೊಳ್ಳಲೇಬೇಕೆಂದು' ಒತ್ತಾಯಿಸುತ್ತಿದ್ದೆವು. ಅಂದಿನ ಸರಕಾರದಲ್ಲಿ ಎಂ.ಬಿ.ಪಾಟೀಲರು ಬಹು ಪ್ರಭಾವಿ ನಾಯಕರಾಗಿದ್ದರು. ಮುಖ್ಯಮಂತ್ರಿಗಳಲ್ಲದೆ ಕಾಂಗ್ರೆಸ್ ಪಕ್ಷದ ವರಿಷ್ಠರೂ ಅವರ ಮಾತಿಗೆ ಮನ್ನಣೆ ಕೊಡುತ್ತಿದ್ದರು. ಅಂದಿನ ದಿನಗಳಲ್ಲಿ ಮೇಲ್ನೋಟಕ್ಕೆ ಎಲ್ಲರೂ ಹೋರಾಟದೊಂದಿಗೆ ಇದ್ದಾರೆ ಎಂದು ಕಂಡರೂ ವಾಸ್ತವವಾಗಿ ಸಂಪೂರ್ಣ ಲಿಂಗಾಯತ ಸಮಾಜವಾಗಲಿ, ಅನ್ಯಸಮಾಜದ ಶಾಸಕರಾಗಲಿ, ಮಂತ್ರಿಗಳಾಗಲಿ ಇರಲಿಲ್ಲ. ಅಷ್ಟೇಕೆ ಲಿಂಗಾಯತ ಸಮಾಜದ ಲಿಂಗಾಯತ ಒಳಪಂಗಡದ ರೆಡ್ಡಿ ಸಮಾಜ, ಬಣಜಿಗ ಸಮಾಜ, ಗಾಣಿಗ ಸಮಾಜ, ಸಾದರ ಸಮಾಜ ಸಂಪೂರ್ಣವಾಗಿ ಬೆಂಬಲಿಸುತ್ತಿರಲಿಲ್ಲ. ಆದರೂ ಅವರ ಬೆಂಬಲ ಇಲ್ಲವೆಂತಲೂ ಇರಲಿಲ್ಲ. ಇವರ ನಡೆಯು "ಗೆದ್ದರೆ ನಾನು ಆಡಿದ್ದೆ, ಸೋತರೆ ನೋಡಲು ಬಂದಿದ್ದೆ" ಎನ್ನುವ ಸ್ಥಿತಿಯಲ್ಲಿತ್ತು.

ಅಖಿಲ ಭಾರತ ವೀರಶೈವ ಮಹಾಸಭೆಯವರು "ಬಸವಣ್ಣನವರು ಲಿಂಗಾಯತ ಧರ್ಮಸ್ಥಾಪಕರು" ಎಂದು ಈ ಹಿಂದೆ ಪದೇ ಪದೇ ಹೇಳಿಕೊಂಡಿದ್ದಾರೆ.

In Public domain. Digitization Muthulakshmi Research Academy

ಅದನ್ನು ದಾಖಲೆ ರೂಪದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ೨೦೦೯, ೨೦೧೩ ಮತ್ತು ೨೦೧೭ರಲ್ಲಿ ನೀಡಿದ್ದರು. ಅದಕ್ಕೆ ಭಾರತೀಯ ಜನತಾ ಪಕ್ಷದ ನಾಯಕರು ಸಮ್ಮತಿಸಿದ್ದರು. ಲಿಂಗಾಯತ ಸ್ವತಂತ್ರ ಧರ್ಮದ ಬೇಡಿಕೆಯ ವಿರುದ್ಧ ಹೋರಾಡುತ್ತಿದ್ದ, ವೀರಶೈವ ಪ್ರತಿಪಾದಕರು ಮತ್ತು ಪಂಚಪೀಠಾಧೀಶ್ವರರು ವೀರಶೈವ ಮಹಾಸಭೆಯ ನಿರ್ಣಯವೇ ಅಂತಿಮ ಎಂದಾಗ, ನಮ್ಮ ನಾಯಕರು 'ಅ.ಭಾ.ವಿ. ಮಹಾಸಭೆಯು ಈಗಾಗಲೇ ಅನೇಕ ಬಾರಿ ಈ ವಿಷಯವನ್ನು ಇತ್ಯರ್ಥಪಡಿಸಿ, ರಾಜ್ಯ ಹಾಗೂ ಕೇಂದ್ರ ಸರಕಾರಗಳಿಗೆ ಪತ್ರ ಬರೆದಿದೆ' ಎಂದು ಹೇಳಿ ವೀರಶೈವ ಮಹಾಸಭೆಯ ದ್ವಿಮುಖ ನೀತಿಯನ್ನು ಜನರೆದುರು ಇಡಬಹುದಾಗಿತ್ತು. ಸಚಿವ ಎಂ.ಬಿ.ಪಾಟೀಲರು ಏಕೆ ದೊಡ್ಡಮಟ್ಟದಲ್ಲಿ ಪ್ರಶ್ನಿಸಲಿಲ್ಲ. ಸರಕಾರಕ್ಕೆ ಸಲ್ಲಿಸಿದ ದಾಖಲೆಗಳನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಬಹುದಾಗಿತ್ತು. ಒಂದು ಸಮಯ ಪತ್ರಿಕೆಗಳು ಮಾನ್ಯತೆ ನೀಡದಾದಾಗ ಜಾಹೀರಾತಿನ ಮೊರೆ ಹೋಗಬಹುದಾಗಿತ್ತು. ಆದರೆ ಈ ವಿಷಯದಲ್ಲಿ ನಮ್ಮ ನಾಯಕರು ಗಮನ ಹರಿಸದೇ ಇದ್ದಿದ್ದು, ಮೌನವಾಗಿ ಉಳಿದಿದ್ದು ನನಗೆ ಇಂದಿನವರೆಗೂ ನಿಗೂಢವಾಗಿ ಪರಿಣಮಿಸಿದೆ.

ಜಂಗಮರ ಪವಾಡಗಳು

ಬಸವಣ್ಣನವರು ಜೈನಧರ್ಮವನ್ನು ಪ್ರಸಾರ ಮಾಡುವ ಜೈನಮುನಿಗಳ ಕಾರ್ಯವೈಖರಿ ತ್ಯಾಗಗಳನ್ನು ಕಂಡಿದ್ದರು. ಅವರಂತೆ ಲಿಂಗಾಯತ ಧರ್ಮಕ್ಕೂ ತತ್ವ ಪ್ರಚಾರಕರ ಅವಶ್ಯಕತೆಯಿದೆಯೆಂದಿದ್ದರು. ಅವರಿಗೆ ಸಮಾಜದ ಉನ್ನತ ಸ್ಥಾನ ನೀಡಿ 'ಜಂಗಮ ಬಂದರೆ ಶಿವ ಪೂಜೆಯನ್ನು ಮರೆಯಬೇಕು' ಎಂಬ ಸಂದೇಶ ನೀಡಿ ಜಂಗಮನ ಮಹತ್ವವನ್ನು ತನ್ನವರಿಗೆ ಹೇಳಿದ್ದರು. 'ಜಂಗಮ' ಅಂದರೆ ರಭಸವಾಗಿ ಹರಿಯುವ, ಜೈನಮುನಿಗಳಂತೆ ಸರ್ವಸ್ವವನ್ನು ತ್ಯಜಿಸಿ, ಊರಿಂದ ಊರಿಗೆ ಹೋಗಿ ಧರ್ಮಪ್ರಚಾರ ಮಾಡುತ್ತ, ತನ್ನ ಭಕ್ತರಿಗೆ ಸದ್ಬುದ್ಧಿ ನೀಡುವ ಪರಮಪಾವನ ಜಂಗಮ.

ಇಂದು ಲಿಂಗಾಯತ ಜಂಗಮರಲ್ಲಿ ಮೂರು ವರ್ಗಗಳಿವೆ.

ಮೊದಲನೆಯ ವರ್ಗ: ವೀರಶೈವ ಧರ್ಮದ ಹಿಂಬಾಲಕರು, ವೀರಶೈವಧರ್ಮ ಹಿಂದೂಧರ್ಮದ ಭಾಗ ಎಂದು ನಂಬುವವರು. ಹಿಂದೂಧರ್ಮದ ಆಚರಣೆಗಳನ್ನು ಪಾಲಿಸುತ್ತ ಅದರೊಂದಿಗೆ ಶರಣರು ಪ್ರತಿಪಾದಿಸಿದ ಅಷ್ಟಾವರಣಗಳನ್ನು ಪಾಲಿಸುವ ಗುರುವರ್ಗದ ಜಂಗಮರು. ಇವರು ಪ್ರತಿ ಹಳ್ಳಿ ಮತ್ತು ನಗರ ಪ್ರದೇಶಗಳಲ್ಲಿರುವವರು. ಇವರಿಂದಲೇ ಬಹುಪಾಲು ಧಾರ್ಮಿಕ ಕಾರ್ಯಗಳು ಜರುಗುತ್ತವೆ.

In Public domain. Digitization Muthulakshmi Research Academy

ಎರಡನೆಯವರ್ಗ: ಈ ಜಂಗಮರು ವೀರಶೈವ/ಲಿಂಗಾಯತ ಜಂಗಮರು. ಲಿಂಗಾಯತ/ವೀರಶೈವರು ಹಿಂದೂಧರ್ಮದ ಭಾಗ ಎಂದು ಹೇಳುತ್ತ 'ಬಸವಣ್ಣನವರೇ ನಮ್ಮ ಧರ್ಮಗುರುಗಳು' ಎಂದು ಬಹಿರಂಗದಲ್ಲಿ ಹೇಳುತ್ತ ಅಂತರಂಗದಲ್ಲಿ ವೀರಶೈವವನ್ನು ಅಪ್ಪಿಕೊಂಡಿರುವ ಜಂಗಮರು. ಇವರಿಗೆ ಸಿದ್ಧಾಂತ ಅಥವಾ ತತ್ವ ಮುಖ್ಯವಲ್ಲ. ಜಂಗಮವು ಸಹ ಒಂದು ವೃತ್ತಿ. ಅದರಿಂದ ಸ್ವ-ಅಭಿವೃದ್ಧಿಯನ್ನು ಬಯಸುವುದಲ್ಲದೆ ಸಮಾಜದ ಮೂಂಚೂಣಿ ನಾಯಕತ್ವ ಬಯಸುವ ಮನಸ್ಥಿತಿಯ ಜಂಗಮ ಸಮಾಜ. ಕರ್ನಾಟಕದ ಬಹುತೇಕ ಭಾಗದಲ್ಲಿ ದೊಡ್ಡ ದೊಡ್ಡ ಮಠಗಳನ್ನು ಸ್ಥಾಪಿಸಿ ಅವುಗಳ ಅಡಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತ ಅವುಗಳನ್ನು ವ್ಯಾಪಾರಿ ಸಂಸ್ಥೆಯನ್ನಾಗಿ ಮಾಡಿ, ಲಾಭ ಗಳಿಸುತ್ತ, "ಧರ್ಮ ಪ್ರಚಾರದ ಕಷ್ಟಕ್ಕೆ ಕರೆಯಬೇಡಿ ಊಟಕ್ಕೆ ಮಾತ್ರ ಮರೆಯಬೇಡಿ" ಎಂಬ ಹೊಸ ಸಿದ್ಧಾಂತವನ್ನು ಮೈಗೂಡಿಸಿಕೊಂಡು ಮುನ್ನಡೆಯುತ್ತಿರುವ ಎರಡನೆಯ ಜಂಗಮ ಪಂಗಡ.

ಮೂರನೆಯ ವರ್ಗ: ಜಂಗಮವರ್ಗದ ಸಂಖ್ಯೆ ಅತಿ ವಿರಳ. ಇವರು ಜನಸಾಮಾನ್ಯರಾಗಿಯೂ ಇದ್ದಾರೆ. ಇವರಲ್ಲಿ ಕೆಲವರು ಜಂಗಮದೀಕ್ಷೆ ಪಡೆದು, ಮಠ ಸ್ಥಾಪಿಸಿ, ತಮ್ಮ ಕೈಲಾದಷ್ಟು ಲಿಂಗಾಯತ ಧರ್ಮ ಪ್ರಚಾರ ಮಾಡುವ ನಿಜ ಜಂಗಮರೂ ಇದ್ದಾರೆ. ಇವರು ಬಸವಣ್ಣನವರ ಸಿದ್ಧಾಂತ ತತ್ವಗಳನ್ನು ಪಾಲಿಸುವವರು. ಅಷ್ಟಾವರಣ ಪಂಚಾಚಾರಗಳನ್ನು ಪಾಲಿಸುತ್ತ ಬಾಹ್ಯ ಒತ್ತಡಕ್ಕೆ ಮಣಿದು 'ಲೋಕದ ಡೊಂಕನು ನೀನೇಕೆ ತಿದ್ದುವಿ' ಎನ್ನುವ ಜಾಣ ಕುಲದವರು. ಬಸವತತ್ವದ ಜಂಗಮರು ಅಲ್ಪಸಂಖ್ಯಾತರು. ಈಗಾಗಲೇ ಹೇಳಿದಂತೆ ಜಂಗಮ ಎಂದರೆ ಚಲಿಸುವ ನೀರು. ನೀರು ಚಲಿಸುವಿಕೆಯನ್ನು ಬಿಟ್ಟು ನಿಂತು ಬಿಟ್ಟರೆ ಅದು ಕಲ್ಮಷವಾಗಲಾರದೆ? ಬಸವಣ್ಣನವರು ಕಂಡಿದ್ದ ಜಂಗಮ ಇಂದು ರಭಸವಾಗಿ ಹರಿಯುವ ನೀರಾಗಿಲ್ಲ. ಆದು ಮಠವೆಂಬ ತಡೆಗೋಡೆಯನ್ನು ನಿರ್ಮಿಸಿಕೊಂಡಿರುವ ಕೆರೆಯಾಗಿವೆ. ಕೆಲವೊಂದು ಬೃಹತ್ ತಡೆಗೋಡೆ ನಿರ್ಮಿಸಿಕೊಂಡು ಬತ್ತಲಾರದ ಬೃಹತ್ ಅಣೆಕಟ್ಟುಗಳಾಗಿ ಬದಲಾಗಿವೆ. ಶರಣರು ಕಂಡ ಜಂಗಮ ಕನಸು ಹದಿಮೂರನೆಯ ಶತಮಾನದಲ್ಲಿಯೇ ಕರಗಿ ಹೋಗಿ ಇಂದು ಅವುಗಳು ವ್ಯಾಪಾರಿ ಕೇಂದ್ರಗಳಾಗಿವೆ. ಇಂದಿನ ಬಹುತೇಕ ಲಿಂಗಾಯತ ಜಂಗಮರಲ್ಲಿ ಮೇಲೆ ಕಾಣಿಸಿದ ಯಾವುದೇ ಲಕ್ಷಣಗಳು ಇಲ್ಲ. ಆಡಂಬರ, ವಿಲಾಸಿ ಜೀವನವೇ ಇವರ ಲಕ್ಷಣವಾಗಿದೆ. ಇಂದಿನ ಮಠಗಳು ಅರಮನೆಗಳನ್ನು ಮೀರಿಸುತ್ತವೆ. ನಾಲ್ಕಾರು ಸಹಾಯಕರು ಇವರ ಆಜ್ಞೆಗಾಗಿ ಸದಾ ಕಾಯುತ್ತಿರುತ್ತಾರೆ. ದೇಶ ವಿದೇಶಗಳಲ್ಲಿ ಮಠದ ಹೆಸರಿನಲ್ಲಿ ಆಸ್ತಿಗಳಿವೆ. ಕೆಲವು ಮಠಗಳಿಗೆ ಹಿಂದಿನ ಸಂಸ್ಥಾನಿಕರು ನೀಡಿದ ಸಂಪತ್ತನ್ನು ತಮ್ಮ ಸ್ವಂತ

In Public domain. Digitization Muthulakshmi Research Academy

ಆಸ್ತಿಯಂತೆ ಮಾರುತ್ತ ವಿಲಾಸಿಗಳಾಗಿ ಐಷಾರಾಮಿ ವಾಹನಗಳಲ್ಲಿ ಸುತ್ತುತ್ತಿದ್ದಾರೆ. ರಾಜಕೀಯ ಅವರ ಮತ್ತೊಂದು ಕಾಯಕವಾಗಿದೆ. ರಾಜಕಾರಣಿಗಳ ಮೇಲೆ ಆಡಳಿತಗಾರರ ಮೇಲೆ ಪ್ರಭಾವ ಬೀರುವುದು ವೃತ್ತಿಯಾಗಿದೆ. ಸನ್ಯಾಸಿಗಳೆಂದು ಹೇಳಿಕೊಂಡು ಅತ್ಮಸಾಕ್ಷಿಯನ್ನು ಮಾರಿಕೊಂಡ ಜಂಗಮರನ್ನಿಂದು ಕಾಣುತ್ತೇವೆ.

ಪಂಚಪೀಠಾಧೀಪತಿಗಳಿಗೆ ಭಕ್ತರ ಹೆಗಲ ಮೇಲೆ ಕುಳಿತುಕೊಳ್ಳುವುದು ಹವ್ಯಾಸವಾಗಿದೆ. "ಐದು ಬೆರಳಿಗೆ ಉಂಗುರಗಳು, ಬಂಗಾರದ ಕಿರೀಟ, ಬೆಳ್ಳಿಯ ಪಲ್ಲಕ್ಕಿಯಲ್ಲಿ ಮಾನವನ ಹೆಗಲ ಮೇಲೆ ಕುಳಿತುಕೊಳ್ಳುವ ಇವರು ಲಿಂಗಾಯತರ ತತ್ವಗಳನ್ನು ಹೇಗೆ ಪಾಲಿಸಿಯಾರು"[೬] ಎಂಬ ಡಾ. ಸಿ.ಎಚ್. ಮರಿದೇವರ ಹೇಳಿಕೆ ಸಮಂಜಸ. ಜನರನ್ನು ವಿದ್ಯಾವಂತರನ್ನಾಗಿ ಮಾಡಿದರೆ ಸತ್ಯದ ಅರಿವು ಹೆಚ್ಚಾಗುವುದು. ಜನರು ಅಶಿಕ್ಷಿತರಾದರೆ ಅವರಿಗೆ ಮೌಢ್ಯ ಬೋಧಿಸಿ ಅವರನ್ನು ಶೋಷಣೆಗೆ ಒಳಪಡಿಸಬಹುದು. ಅದೇ ಅಲ್ಲವೇ ಚಾತುರ್ವರ್ಣದ ಸಿದ್ಧಾಂತ. ಈ ಜಂಗಮರಿಗೆ ಲಿಂಗಾಯತರ ಜಂಗಮ ಸ್ಥಾನ ಮಾತ್ರ ಬೇಕು, ಆದರೆ ಲಿಂಗಾಯತ ತತ್ವ ಸಿದ್ಧಾಂತ ಬೇಕಿಲ್ಲ.

'ಜಂಗಮ' ಶಬ್ದವು ಜಾತಿಜಂಗಮವಾಗಿ ಪರಿವರ್ತಿತವಾಗಲಾರಂಭಿಸಿದಾಗ ಬಂದವರು ಪೂಜ್ಯ ಲಿಂಗಾನಂದ ಸ್ವಾಮಿಗಳು. ಬಸವನ ಬಾಗೇವಾಡಿಯ ಮನಗೂಳಿಯಲ್ಲಿ ಜನಿಸಿದ ಇವರು ಬಸವಣ್ಣನವವರ ಸಿದ್ಧಾಂತಗಳನ್ನು ಜನರಿಗೆ ಮುಟ್ಟಿಸಬೇಕೆಂದು ಎದ್ದುನಿಂತರು. ಅವರ ಆಸೆಗಳಿಗೆ ನೀರೆರೆದವರು ಮಾತೆ ಮಹಾದೇವಿಯವರು. ಇಬ್ಬರೂ ಸೇರಿ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶಗಳಲ್ಲಿ ಬಸವಣ್ಣನವರ ಸಂದೇಶಗಳನ್ನು ಸಾರಿ ಸಾರಿ ಹೇಳಿದರು. ಇತ್ತ ಸ್ಥಾವರವಾಗಿದ್ದ ಪಂಚಪೀಠಗಳು ಏಳಲಾರದ ಭಾರದೊಂದಿಗೆ ಕುಸಿದುಹೋಗಿದ್ದವು. ಆಗ ಅವರಿಗೆ ತೋರಿದ್ದು ಎದುರಾಳಿಯ ತೇಜೋವಧೆ. ಅದರಲ್ಲಿ ಅವರು ಭಾಗಶಃ ಜಯಶಾಲಿಯಾದರು. ಆದರೆ ಸತ್ಯವನ್ನು ಬಹಳ ಕಾಲ ಮರೆಮಾಚಲಾಗಲಿಲ್ಲ. ಅಲ್ಲಿಂದಲೇ ಪ್ರಾರಂಭವಾಯಿತು "ಜಂಗಮ ಜಗಳ" ವಿರಕ್ತರು ಮತ್ತು ಗುರುವರ್ಗದವರ ಮಧ್ಯೆ ಕಾಲಕಾಲಕ್ಕೆ ಸಣ್ಣ ಪುಟ್ಟ ವ್ಯತ್ಯಾಸಗಳು ಬರುತ್ತಿದ್ದವು. ಅದನ್ನು ಬಗೆಹರಿಸಲು ಹಿಂದೊಮ್ಮೆ ವೀರಶೈವ ಮಹಾಸಭಾ ಕೂಡಲಸಂಗಮದಲ್ಲಿ ಸಭೆ ಸೇರಿ ವಿರಕ್ತರು ಮತ್ತು ಗುರುವರ್ಗದ ಪಂಚಾಚಾರ್ಯರು 'ಲಿಂಗಾಯತ ಜಂಗಮ'ರಾಗಿ ಎಂದು ಕೇಳಿಕೊಂಡಿತ್ತು. ಸಮಾಗಮದ ಸಮುದ್ರ ಮಂಥನದಲ್ಲಿ ಅಮೃತಕ್ಕಿಂತ ವಿಷವೇ ಹೆಚ್ಚಿಗೆ ದೊರೆಯಿತು. ಪ್ರಯತ್ನ ಫಲಿಸಲಿಲ್ಲ. ಅದು ಯಾರಿಗೂ ಬೇಕಾಗಿರಲಿಲ್ಲ.

ಲಿಂಗಾಯತ ಧರ್ಮ ಹೋರಾಟವನ್ನು ಒಂದರ್ಥದಲ್ಲಿ ಪ್ರಾರಂಭಿಸಿದವರು ಮಾತೆ ಮಹಾದೇವಿಯವರೇ ಎಂದು ಹೇಳಬಹುದು. "ಸಿದ್ದರಾಮಯ್ಯನವರು

In Public domain. Digitization Muthulakshmi Research Academy

ಅಧಿಕಾರ ವಹಿಸಿಕೊಂಡ ಕೆಲದಿನಗಳ ನಂತರ ಅವರನ್ನು ಭೆಟ್ಟಿಯಾದಾಗ 'ಲಿಂಗಾಯತ ಚರ್ಚೆ' ಆಗಿತ್ತು. 'ಸಂದರ್ಭ ಬಂದಾಗ ಚರ್ಚಿಸೋಣ' ಎಂದಿದ್ದರಂತೆ ಮುಖ್ಯಮಂತ್ರಿಗಳು. ೨೦೧೩ರ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ ಬೀದರ್ ಶ್ರಿಕಾಂತಸ್ವಾಮಿಯವರು. ಶ್ರಿಕಾಂತಸ್ವಾಮಿ ಮಾತಾಜಿಯವರ ಹಿಂಬಾಲಕರು. ಮಾತಾಜಿ ಮತ್ತು ಸಿದ್ಧರಾಮಯ್ಯ ಲಿಂಗಾಯತವನ್ನು ಸಕಾಲದಲ್ಲಿ ಮುನ್ನೆಲೆಗೆ ತಂದು ಪರಸ್ಪರ ಲಾಭ ಪಡೆಯಲು ಯತ್ನಿಸಿರಬಹುದೇ? ಲಿಂಗಾಯತರ ಹಿತ ಬಯಸುತ್ತಿದ್ದ ಮಾತೆಮಹಾದೇವಿಯವರಿಗೆ ಪ್ರತ್ಯೇಕ ಧರ್ಮ ಮತ್ತು ಸಿದ್ದರಾಮಯ್ಯನವರಿಗೆ ರಾಜಕೀಯದ ಗೆಲವು. ಇಬ್ಬರಿಗೂ ಲಾಭ. ಇದರಲ್ಲಿ ಕಳೆದುಕೊಳ್ಳುವುದು ಏನೂ ಇರಲಿಲ್ಲ.

'ಇಲ್ಲ' ಇದರಲ್ಲಿ ದೊಡ್ಡಮಟ್ಟದಲ್ಲಿ ಕಳೆದುಕೊಳ್ಳಲಿದ್ದೇವೆ ಎಂದು ಪಂಚಪೀಠಾಧಿಪತಿಗಳು ಭಾವಿಸಿದ್ದರು. "ರಾಜ್ಯ ಸರಕಾರ ಲಿಂಗಾಯತ ಪ್ರತ್ಯೇಕ ಧರ್ಮಕ್ಕೆ ಶಿಫಾರಸು ಮಾಡುವ ಹಿಂದೆ ಪಂಚಪೀಠಗಳನ್ನು ನಾಶ ಮಾಡುವ ಹುನ್ನಾರವಿದೆ" ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಆಪಾದಿಸಿದರು[೭]. ಮುಂದುವರೆದು "ಪ್ರತ್ಯೇಕ ಧರ್ಮದ ಹೋರಾಟಗಾರರು ವೀರಶೈವ ಮಠಗಳನ್ನು ಸಮಾಜದ ಮುಖ್ಯವಾಹಿನಿಯಿಂದ ದೂರ ಇಡಬೇಕು ಎಂಬ ದುಷ್ಟ ಆಲೋಚನೆ ಹೊಂದಿದ್ದಾರೆಂದು" ಹೇಳಿದ್ದರು. ಅವರೆಂದೂ ಬಸವಣ್ಣನವರನ್ನು ಲಿಂಗಾಯತದ ಧರ್ಮ ಸ್ಥಾಪಕನೆಂದು ಒಪ್ಪಿಕೊಂಡಿಲ್ಲ. ಲಿಂಗಾಯತ ಸ್ವತಂತ್ರ ಧರ್ಮವೆಂದು ಅವರು ಕನಸಿನಲ್ಲಿಯೂ ಎಣಿಸಿಲ್ಲ. ಕಾಶಿಪೀಠದ ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ "ಸಂವಿಧಾನತಜ್ಞರ ಪ್ರಕಾರ ದೇಶದಲ್ಲಿ ಹೊಸ ಧರ್ಮ ಘೋಷಣೆಗೆ ಅವಕಾಶವಿಲ್ಲ. ಯಾವುದೇ ಸಮುದಾಯಕ್ಕೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಲು ರಾಜ್ಯ ಸರಕಾರಕ್ಕೆ ಸಾಧ್ಯವಿಲ್ಲ. ಆದರೆ ಚುನಾವಣೆ ಕಾರಣಕ್ಕೆ ಜನರನ್ನು ಮರುಳು ಮಾಡುವ ಕೆಲಸ ನಡೆದಿದೆ" ಎಂದು ಹೋರಾಟಗಾರರಿಗೆ ಅವಮಾನ ಮಾಡಿದ್ದರು[೮]. ಅವರು ತಾವು ಹಿಂದೂಗಳೆಂದೇ ಹೇಳಿದ್ದರು ಮತ್ತು ಹೇಳುತ್ತಲೂ ಇದ್ದಾರೆ. "ವೇದ, ಆಗಮ, ಉಪನಿಷತ್ ಪ್ರತಿಪಾದಿತವಾದ ಈ ಧರ್ಮ ಆದರ್ಶ ಮೌಲ್ಯಗಳನ್ನು ಬೆಳೆಸಿಕೊಂಡು ಬಂದಿದೆ. ಜಗದ್ಗುರು ರೇಣುಕಾದಿ ಪಂಚಾಚಾರ್ಯರು ವೀರಶೈವ ಧರ್ಮವನ್ನು ಸ್ಥಾಪಿಸಿದರೆ ಬಸವಾದಿ ಶಿವಶರಣರು ಇನ್ನಷ್ಟು ಬೆಳೆಸಿದರು. ಆಗಮೋಕ್ತ ಕಾಲದಲ್ಲಿ ಹಾಗೂ ಬಸವಪೂರ್ವದಲ್ಲಿ ವೀರಶೈವ ಇತ್ತು ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳು ಲಭ್ಯವಿವೆ" ಎಂದು ಪೂಜ್ಯರು ಜುಲೈ ೩೦, ೨೦೧೭ರಂದು ರಂಭಾಪುರಿ ಪೀಠದ ಜಗದ್ಗುರುಗಳು ಮಾಧ್ಯಮದವರೊಂದಿಗೆ ಮಾತಾಡುತ್ತ ಹೇಳುತ್ತಾರೆ.

In Public domain. Digitization Muthulakshmi Research Academy

"ರೇಣುಕಾಚಾರ್ಯರ ತತ್ವಗಳಿಗೆ ಮಾರುಹೋಗಿ ವೀರಶೈವ ಧರ್ಮ ಸ್ವೀಕರಿಸಿದ್ದ ಬಸವಣ್ಣ ಆ ಮೂಲಕ ತಾನೊಬ್ಬನೇ ಉದ್ಧಾರವಾಗದೇ ತನ್ನ ಹಿಂಬಾಲಕರನ್ನು ಉದ್ಧರಿಸಿದ" ಎನ್ನುತ್ತಾರೆ ರಂಭಾಪುರಿ ಪೀಠದ ಜಗದ್ಗುರು ವೀರಸೋಮೇಶ್ವರ ಸ್ವಾಮೀಜಿಯವರು. ಮುಂದುವರಿದು ಬಸವಣ್ಣನವರು ವೀರಶೈವರ ಅನುಯಾಯಿ ಎಂದು ಪ್ರತಿಷ್ಠಾಪಿಸಲು "ಮುಂದಿನ ದಿನಗಳಲ್ಲಿ ಗುರುವಿರಕ್ತರ ಮಠಗಳಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮೊದಲು ಪಂಚಪೀಠದ ಜಗದ್ಗುರುಗಳನ್ನು ನೆನೆಯಬೇಕು. ನಂತರ ಬಸವೇಶ್ವರರನ್ನು ನೆನೆಯಬೇಕು, ಕೊನೆಗೆ ಹಾನಗಲ್ ಕುಮಾರಸ್ವಾಮಿಗಳನ್ನು ನೆನೆಯಬೇಕು" ಎಂದು ಫರ್ಮಾನು ಹೊರಡಿಸಿ ತೇಪೆ ಹಚ್ಚುವ ಕೆಲಸ ಮಾಡುತ್ತಾರೆ ಜಗದ್ಗುರುಗಳು. "ವೀರಶೈವವು ಪಂಚಾಚಾರ್ಯರು ಹೇಳುವಂತೆ ಹಿಂದೂಧರ್ಮದ ಭಾಗವಾಗಿದ್ದರೆ ಅದು ಎಂದೂ ಲಿಂಗಾಯತವಾಗದು. ಲಿಂಗಾಯತ ವೀರಶೈವ ದ್ವಂದ್ವದ ಸಮಸ್ಯೆ ಇಂದು ನಿನ್ನೆಯದಲ್ಲ, ಅದು ಆರು ಶತಮಾನಗಳಿಂದ ಅಂತ್ಯ ಕಾಣದ ಸಮಸ್ಯೆ. ಆ ಸಮಸ್ಯೆಯನ್ನು ಸೃಷ್ಟಿಸಿದವರು ವಿವಿಧ ಪ್ರಕಾರದ ಹಿಂದೂ ಶೈವಪಂಥಗಳಿಂದ ಬಂದು ಬಸವಣ್ಣನ ಲಿಂಗಾಯತವನ್ನು ಸೇರಿದ ಜನರು. ಅವರಲ್ಲಿ ಕಾಳಾಮುಖರು, ಪಾಶುಪತರು, ಕಾಪಾಲಿಕರು, ಲಕುಲೀಶರು, ಕೆಲವು ನಾಥಪಂತಿಗಳು ಮತ್ತು ಆಂಧ್ರದ ಆರಾಧ್ಯ ಶೈವಬ್ರಾಹ್ಮಣರು ಪ್ರಮುಖರು. ಅದರೆ ೧೫ ಶತಮಾನದ ಅಂತ್ಯದ ಸುಮಾರಿಗೆ ಮೇಲೆ ತಿಳಿಸಿದ ಮೊದಲನೆಯ ಐದು ಪಂಥಿಕರು ಬಹುತೇಕ ಬಸವಣ್ಣನವರು ಒಪ್ಪಿಕೊಂಡು ತಮ್ಮ ಮೂಲರೂಪವನ್ನು ಕಳೆದುಕೊಂಡು ಲಿಂಗಾಯತದ ಇಂದಿನ ವಿರಕ್ತಮಠಗಳಾಗಿ ಪರಿವರ್ತನೆಗೊಂಡರು. ಆದ್ದರಿಂದಲೇ ವಿರಕ್ತಮಠಗಳು ಹೆಚ್ಚಾಗಿ ಬಸವಣ್ಣನ ತತ್ವಗಳನ್ನು ಪಾಲಿಸುತ್ತವೆ ಮತ್ತು ವೀರಶೈವರ ಪಂಚಾಚಾರವನ್ನು ಆದಷ್ಟು ಮಟ್ಟಿಗೆ ಬದಿಗಿಡಲು ಪ್ರಯತ್ನಿಸುತ್ತವೆ. ಆದ್ದರಿಂದ ಉದ್ಭವವಾಗಿದ್ದು ಗುರು ವಿರಕ್ತರ ಸಮಸ್ಯೆ" ಎಂದು ಬರೆಯುತ್ತಾರೆ ಡಾ.ಜಾಮದಾರ ಅವರು.

ಲಿಂಗಾಯತ ಹೋರಾಟ ಸೈದ್ಧಾಂತಿಕ ಹೋರಾಟವಾಗಿತ್ತು. ಅದರೆ ಪಂಚಪೀಠಾಧೀಶ್ವರರಿಗೆ ಸೈದ್ಧಾಂತಿಕವಾಗಿ ಉತ್ತರಿಸಲು ಬೇಕಾಗಿರುವ ಸಾಹಿತ್ಯದ ಕೊರತೆ ಇತ್ತು. ಇವರ ಸಾಹಿತ್ಯವು ಹನ್ನೆರಡನೆಯ ಶತಮಾನದ ನಂತರ ಬರೆಯಲಾದ ಖೊಟ್ಟಿ ಇತಿಹಾಸ ಮತ್ತು ಸಾಹಿತ್ಯವೆಂದು ಲಿಂಗಾಯತ ವಿದ್ವಾಂಸರು, ಸಾಹಿತಿಗಳು, ಮಠಾಧಿಪತಿಗಳು ಸಿದ್ಧಪಡಿಸಿದ್ದರು. ಸಿದ್ಧಾಂತ ಶಿಖಾಮಣಿಯಲ್ಲಿ ಐದು ಜನ ಪಂಚಾಚಾರ್ಯರು ಶಿವನ ಆಣತಿಯಂತೆ ಭೂಲೋಕಕ್ಕೆ ಇಳಿದು ಬಂದರು ಎಂದು ಹೇಳುತ್ತದೆ. ಐವರು ಪಂಚಾಚಾರ್ಯರು ಆಯೋನಿಜನಕರು ಎಂದಿದೆ. ಇವರು ಶಿವಲಿಂಗದ ಶಿಲೆಯಲ್ಲಿ ಉದ್ಭವರಾದವರೆಂದೂ ಹೇಳಿ ನಾಲ್ಕೂ ಯುಗಗಳಲ್ಲಿ

In Public domain, Digitization Muthulakshmi Research Academy

ಜನಿಸಿದವರೆಂದು ಹೇಳುತ್ತ ಕೃತಯುಗದಲ್ಲಿ ರೇಣುಕ, ಧೇನುಕ, ಧಾರುಖ, ಗಜಕರ್ಣ ಮತ್ತು ಘಂಟಾಕರ್ಣ ಎಂದೂ, ಕಲಿಯುಗದಲ್ಲಿ ರೇವಣಾರಾಧ್ಯ, ಮರುಳಾರಾಧ್ಯ, ಪಂಡಿತಾರಾಧ್ಯ, ಏಕೋರಾಮಾರಾಧ್ಯ, ವಿಶ್ವಾರಾಧ್ಯರೆಂದಾಗಿದ್ದಾರೆ ಎಂದು ಹೇಳುತ್ತಾರೆ. ಈ ಹೇಳಿಕೆಯ ತಾತ್ಪರ್ಯ ಇಷ್ಟೇ. ಜಗತ್ತಿನ ಉಗಮದೊಂದಿಗೆ ವೀರಶೈವವು ಉಗಮವಾಗಿದೆ ಎಂದೂ. ಇವರ ಧರ್ಮಗ್ರಂಥ ಸಿದ್ಧಾಂತ ಶಿಖಾಮಣಿಯು ಅತ್ಯಂತ ಪ್ರಾಚೀನ ಗ್ರಂಥ. ರಾಮಾಯಣಕ್ಕಿಂತಲೂ ಪೂರ್ವದ್ದು. ವೇದ ಆಗಮಗಳನ್ನು ಯಾವಾಗ ಬರೆಯಲಾಯಿತೆಂದು ಹೇಳುವುದು ಹೇಗೆ ಕಷ್ಟವೋ ಹಾಗೆ ಸಿದ್ಧಾಂತ ಶಿಖಾಮಣಿಯೂ ಪ್ರಾಚೀನ ಗ್ರಂಥ ಎನ್ನುತ್ತಾರೆ ವೀರಶೈವ ಪರವಿದ್ದ ವಿದ್ವಾಂಸರು.[೧೦]

"ಸಿದ್ಧಾಂತ ಶಿಖಾಮಣಿಯ ಆಂತರಿಕ ವಿರೋಧಾಭಾಸಗಳನ್ನು ಗಮನಿಸಿದರೆ ಐವರು ಪಂಚಾಚಾರ್ಯರಲ್ಲಿ ಈರ್ವರ ಅಸ್ತಿತ್ವಕ್ಕೆ (ಕಾಶಿ ಮತ್ತು ಕೇದಾರ) ಯಾವುದೇ ಐತಿಹಾಸಿಕ, ಪೌರಾಣಿಕ ಆಧಾರವೇ ಇಲ್ಲ. ಈ ಐವರನ್ನು ಆಚಾರ್ಯರನ್ನಾಗಿ ಮಾಡಿದವರು ಯಾರು? ಯಾವಾಗ? ಎಂಬುದಕ್ಕೆ ಸೂಕ್ತ ತೃಪ್ತಿಕರ ಆಧಾರಗಳೇ ಇಲ್ಲ. ಕೃತಯುಗ, ತ್ರೇತಾಯುಗ, ದ್ವಾಪರಯುಗಗಳಲ್ಲಿ ಧರ್ಮಪ್ರಚಾರ ಮಾಡಿದ್ದೇವೆಂದೂ, ರಾಮಾಯಣದ ವಿಭೀಷಣನಿಗೆ ಸಲಹೆ ನೀಡಿದ್ದೇವೆಂದೂ, ಅಗಸ್ತ್ಯನಿಗೆ ಶಿವನ ಮಹಿಮೆಯನ್ನು ವಿವರಿಸಿದ್ದೇವೆಂದೂ, ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ನೀಡಿದ್ದೇವೆಂದೂ ಸಿದ್ಧಾಂತ ಶಿಖಾಮಣಿಯ ಲೇಖಕರು ಹೇಳುತ್ತಾರೆ. ಇವೆಲ್ಲ ಚಮತ್ಕಾರಿ ಕಾರ್ಯಗಳನ್ನು ಮಾಡಿದ ಬಗ್ಗೆ ಯಾವುದೇ ವೇದ, ಆಗಮ, ಉಪನಿಷತ್ತು, ಬ್ರಾಹ್ಮಣಕ ಅಥವಾ ಶಂಕರಾಚಾರ್ಯರರಿಗೆ ಸಂಬಂಧಿಸಿದ ಗ್ರಂಥಗಳಲ್ಲೂ, ರಾಮಾಯಣದಲ್ಲೂ ಅಥವಾ ಭಾರತದ ಸುದೀರ್ಘ ಇತಿಹಾಸಕ್ಕೆ ಸಂಬಂಧಿಸಿದ ಯಾವುದೇ ಹಳೆಯ ಗ್ರಂಥದಲ್ಲಿ ಪಂಚಾಚಾರ್ಯರ ಬಗ್ಗೆ ಒಂದೇ ಒಂದು ಶಬ್ದವೇಕಿಲ್ಲ? ಎಂದು ಪ್ರಶ್ನಿಸುತ್ತಾರೆ ಲಿಂಗಾಯತ ವಿದ್ವಾಂಸರು.[೧೧]

ಲಿಂಗಾಯುತ ಹೋರಾಟದ ರ್‍ಯಾಲಿಗಳಲ್ಲಿ ಜನಬೆಂಬಲವು ಪಂಚಪೀಠಾಧೀಶ್ವರರನ್ನು ಚಿಂತೆಗೀಡು ಮಾಡಿದ್ದವು. ಮಾಧ್ಯಮಗಳಲ್ಲಿ ನಿರಂತರವಾಗಿ ಪರ ವಿರೋಧ ಚರ್ಚೆಗಳು ನಡೆಯುತ್ತಿದ್ದವು. ಭಾರತೀಯ ಜನತಾ ಪಕ್ಷಕ್ಕೆ ಲಿಂಗಾಯತರನ್ನು ವಿಭಾಗಿಸುವ ಪ್ರಯತ್ನದ ಮೊದಲ ಹೆಜ್ಜೆಯಾಗಿ ಪಂಚಪೀಠಾಧೀಶ್ವರರನ್ನು ಓಲೈಸಲಾರಂಭಿಸಿದರು. ಅಲ್ಲದೆ ಅದು ಸಹಜವೂ ಆಗಿತ್ತು. ಕಾರಣ ಪಂಚಪೀಠಾದೀಶ್ವರರು ವೀರಶೈವ ಲಿಂಗಾಯತರು ಹಿಂದುಗಳೆಂದು ವಾದಿಸುತ್ತಿದ್ದರು. ಅವರ ಸಹಾಯದಿಂದ ಗುರುವರ್ಗದವರು ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದರು.

In Public domain. Digitization Muthulakshmi Research Academy

ಲಿಂಗಾಯತ ಹೋರಾಟ ಹಾಗೂ ಪ್ರತಿ ಹೋರಾಟವು ಲಿಂಗಾಯತ ಧರ್ಮದ ಇತಿಹಾಸದಲ್ಲೊಂದು ಕಪ್ಪುಚುಕ್ಕೆ. ಲಿಂಗಾಯತ ಧರ್ಮಕ್ಕೆ ಪ್ರತ್ಯೇಕ ಧರ್ಮದ ಸ್ಥಾನಮಾನ ಬೇಡವೆಂದೂ, ಲಿಂಗಾಯತವು ಹಿಂದೂಧರ್ಮದ ಭಾಗವೆಂದೂ ವಾದಿಸುವ ಗುರುಪರಂಪರೆಯ ಸ್ವಾಮೀಜಿಗಳು ಲಿಂಗಾಯತ ಸಮಾಜಕ್ಕೆ ನೀಡಿದ ಕಾಣಿಕೆಯು ನಗಣ್ಯವಲ್ಲ. ಆದರೆ ಇಂದಿನ ಅವರ ಕಠಿಣ ನಿಲುವು ಪರ ವಿರೋಧ ಎಂಬ ಸನ್ನಿವೇಶವನ್ನು ನಿರ್ಮಾಣ ಮಾಡಿದ್ದು ಲಿಂಗಾಯತರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರಿಸಿತ್ತು. ಜಗದ ನಿಯಮದಂತೆ ಬದಲಾದ ಸನ್ನಿವೇಶದಲ್ಲಿ ಬದಲಾವಣೆಗೊಳ್ಳುವುದು ಪ್ರಕೃತಿ ನಿಯಮ. ಗುರುವರ್ಗದ ಮಠಗಳು ಹಾಗೂ ವಿರಕ್ತವರ್ಗದ ಮಠಗಳೆಂದು ಈ ಸಮಯದಲ್ಲಿ ಎರಡು ಗುಂಪುಗಳಾಗಿ ಬಿಟ್ಟಿದ್ದವು. ಗುರುಪರಂಪರೆಯ ಸ್ವಾಮಿಗಳ ಮುಂದಾಳತ್ವವನ್ನು ರಂಭಾಪುರಿ ಪೀಠದ ಜಗದ್ಗುರು ಶ್ರೀ ವೀರಸೋಮೇಶ್ವರ ಸ್ವಾಮೀಜಿಯವರು, ಕಾಶಿ ಜಂಗಮವಾಡಿ ಶ್ರೀ ಮಠದ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿಯವರು, ಶ್ರೀಶೈಲಪೀಠದ ಜಗದ್ಗುರು ಶ್ರೀಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರು ಮುಂದಾಳತ್ವ ವಹಿಸಿದ್ದರೆ, ಕೇದಾರ ಮತ್ತು ಉಜ್ಜಯಿನಿ ಪೀಠಗಳ ಪೀಠಾಧಿಪತಿಗಳು ಮುಂಚೂಣಿಯಲ್ಲಿರಲಿಲ್ಲ. ಉತ್ತರಾಖಂಡದಲ್ಲಿರುವ ಕೇದಾರ ಪೀಠವು ಲಿಂಗಾಯತ ಹೋರಾಟದ ಪರವಾಗಿ ಅಥವಾ ವಿರುದ್ಧವಾಗಿ ತನ್ನ ನಿಲುವನ್ನು ಪ್ರಕಟಿಸಲಿಲ್ಲ. ಮತ್ತು ಸಭೆ ಸಮಾರಂಭಗಳಲ್ಲಿಯೂ ಭಾಗವಹಿಸಲಿಲ್ಲ. ಅಲ್ಲದೆ ಅವರ ನಿಲುವು ಈ ನಾಲ್ವರ ನಿಲುವಿಗಿಂತಲೂ ಭಿನ್ನವಾಗಿತ್ತೆಂದು ತಿಳಿದುಬರುತ್ತದೆ. ಮಧ್ಯಪ್ರದೇಶದ ಉಜ್ಜಯಿನಿಯಲ್ಲಿ ಐದನೆಯ ಪಂಚಾಚಾರ್ಯರ ಪೀಠವಿದೆಯೆಂದು ಹೇಳಿದರೂ, ಕರ್ನಾಟಕದ ಬಳ್ಳಾರಿ ಜಿಲ್ಲೆಯ ಉಜ್ಜಯಿನಿಯಲ್ಲಿ ಪಂಚಾಚಾರ್ಯ ಮಠಗಳ ಒಂದು ಪೀಠವಿದೆ. ಈ ಮಠದ ಶ್ರೀ ಸಿದ್ಧಲಿಂಗ ದೇಶಿಕೇಂದ್ರ ಶಿವಾಚಾರ್ಯರು ಹೋರಾಟದ ವಿರೋಧಿ ಪಾಳೆಯದಲ್ಲಿದ್ದರೂ ಹೆಚ್ಚಾಗಿ ಅವರ ಪ್ರತಿಭಟನೆಯ ಸಭೆಗಳಲ್ಲಿ ಭಾಗವಹಿಸಲಿಲ್ಲ. ಅವರು ಬಾದಾಮಿಯ ಶಿವಯೋಗಮಂದಿರದ ಸಭೆಯಲ್ಲಿ ಭಾಗವಹಿಸಿದರೂ ಈ ಹೇಳಿಕೆ ಅವರ ಸಮಾಜ ಕಾಳಜಿಯನ್ನು ಎತ್ತಿ ತೋರಿಸುವಂತಿತ್ತು. "ನಮ್ಮನ್ನು ನಂಬಿ ಜೀವಕೊಡಲು ಸಿದ್ಧರಾದ ಭಕ್ತರ ಹಿತ ಕಾಯಲು ಹಾಲು ನೀರಿನ ಸಮನ್ವಯದಂತೆ ಗುರುವಿರಕ್ತರು ಜತೆಯಾಗಿ ಕೂಡಿಕೊಂಡು ಹೋಗಬೇಕು" ಎನ್ನುವ ಅವರ ನುಡಿ ಗಮನಾರ್ಹ[15]

ಈ ಐವರು ಪಂಚಾಚಾರ್ಯರ ಶಾಖಾಮಠಗಳು ಅಥವಾ ಅವರ ಶಿಷ್ಯಮಠಗಳೆಂದು ಕರೆಯಲಾಗುವ ಕರ್ನಾಟಕದ ಅನೇಕ ಭಾಗಗಳ ಮಠಾಧೀಶರು ವಿರೋಧ ವ್ಯಕ್ತಪಡಿಸಿದ್ದರು. ಶಿವಯೋಗಮಂದಿರದ ಅಧ್ಯಕ್ಷ ಡಾ.ಸಂಗನಬಸವ ಸ್ವಾಮೀಜಿ, ಬಾಳೆಹೊಸೂರು ಮಠದ ದಿಂಗಾಲೇಶ್ವರ

In Public domain. Digitization Muthulakshmi Research Academy

ಸ್ವಾಮೀಜಿ, ಕೊಟ್ಟೂರು ಸಂಸ್ಥಾನದ ಶ್ರೀ ಸಂಗನಬಸವ ಸ್ವಾಮೀಜಿ, ಹಾಲಕೇರಿ ಅನ್ನದಾನೀಶ್ವರ ಸಂಸ್ಥಾನ ಮಠದ ಅಭಿನವ ಅನ್ನದಾನಿ ಸ್ವಾಮೀಜಿ, ವಿ.ಕೆ.ಸಲಗರ ಮಠದ ದ್ವಿತೀಯ ಸಾಂಬಶಿವಾಚಾರ್ಯರು, ವಿಜಾಪುರ ಜಿಲ್ಲೆಯ ಜಾಲಹಳ್ಳಿ ಮಠದ ಜಯಶಾಂತಲಿಂಗೇಶ್ವರ ಶಿವಾಚಾರ್ಯ ಸ್ವಾಮೀಜಿ, ಬಂಥನಾಳದ ವೃಷಭಲಿಂಗೇಶ್ವರ ಸ್ವಾಮೀಜಿ, ಬಬಲೇಶ್ವರದ ಡಾ. ಮಹಾದೇವ ಶಿವಾಚಾರ್ಯ ಸ್ವಾಮೀಜಿ, ಶೂರ್ಪಾಲಿಯ ಸುನಂದಮ್ಮಾ ತಾಯಿ, ಕೊಣ್ಣೂರಿನ ಹೊರಗಿನ ಮಠದ ಡಾ.ವಿಶ್ವಪ್ರಭು ಸ್ವಾಮೀಜಿ, ಶಹಾಪುರದ ಸುಗುಣೇಶ್ವರ ಶ್ರೀಗಳು, ಹಿರೇಪಡಸಲಗಿಯ ಹಿರೇಮಠದ ಶರಣಬಸವ ಶ್ರೀಗಳು, ಹನ್ನೂರಿನ ವಿಶ್ವನಾಥ ಶಾಸ್ತ್ರಿಗಳು, ಕಡಪಟ್ಟಿಯ ಶ್ರೀಶೈಲ ಶ್ರೀಗಳು, ಸಿದ್ಧಾಪುರದ ನೀಲಮ್ಮ ತಾಯಿ, ಬಾಳೆಹೊನ್ನೂರಿನ ಗಂಗಾಧರ ಶಿವಾಚಾರ್ಯ ಸ್ವಾಮೀಜಿ, ಸಿಂದಗಿಯ ಪ್ರಭು ಸಾರಂಗದೇವ ಸ್ವಾಮೀಜಿ, ಮನಗೂಳಿಯ ಸಂಗನಬಸವ ಸ್ವಾಮಿ, ಕೋಲಾರದ ದಿಗಂಬರೇಶ್ವರ ಮಠದ ಕಲ್ಲಿನಾಥ ಸ್ವಾಮಿಜಿ, ಮಮದಾಪುರ ವಿರಕ್ತಮಠದ ಅಭಿನವ ಮುರುಘೇಂದ್ರ ಸ್ವಾಮಿಜಿ, ಯರನಾಳ ವಿರಕ್ತಮಠದ ಸಂಗನಬಸವ ಸ್ವಾಮೀಜಿ, ನಾಗಠಾಣದ ಉದಯಲಿಂಗೇಶ್ವರ ಸ್ವಾಮೀಜಿಗಳು ವಿವಿಧ ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು. ಇವರಲ್ಲಿ ಯರನಾಳ ವಿರಕ್ತಮಠದ ಸಂಗನಬಸವ ಸ್ವಾಮೀಜಿ ಕೆಲವು ಭಾರಿ ಲಿಂಗಾಯತ ಹೋರಾಟದ ಸಭೆಗಳಲ್ಲಿಯೂ ಭಾಗವಹಿಸಿದ್ದರು. ಅದರಂತೆ ಬೆಳಗಾವಿ ಜಿಲ್ಲೆಯ ನಿಡುಸೋಸಿ ಮಠದ ಶ್ರೀಗಳು ಗುರುವರ್ಗದ ಮಠಗಳ ಸಭೆಯಲ್ಲಿ ಭಾಗವಹಿಸಿದ್ದರೆಂಬ ಮಾಹಿತಿಯೂ ಇತ್ತು. ಪ್ರಮುಖವಾಗಿ ಹುಬ್ಬಳ್ಳಿಯ ಮೂರುಸಾವಿರ ಮಠದ ಪೂಜ್ಯರ ದ್ವಂದ್ವ ನಿಲುವು ಎಲ್ಲರನ್ನು ಅಚ್ಚರಿಗೊಳಿಸಿತ್ತು. ಗುರುವರ್ಗ ಮಠಾಧೀಶರ ವಕ್ತಾರರಾಗಿ ದಿಂಗಾಲೇಶ್ವರ ಶ್ರೀಗಳು ಲಿಂಗಾಯತ ಸ್ವತಂತ್ರ ಧರ್ಮದ ಬೇಡಿಕೆಯನ್ನು ಕಟುವಾಗಿ ಟೀಕಿಸುವರಲ್ಲಿ ಪ್ರಮುಖರಾಗಿದ್ದರು.

ವೀರಶೈವರು ತಮ್ಮ ಕಾರ್ಯಾಚರಣೆಯ ಭಾಗವಾಗಿ ವಹಿಸಿಕೊಂಡಿದ್ದು 'ಶಿವಯೋಗ ಮಂದಿರ.' ಈ ಶಿವಯೋಗಮಂದಿರದ ಸ್ಥಾಪನೆಯ ಉದ್ದೇಶ ಲಿಂಗಾಯತರನ್ನು ವೀರಶೈವರನ್ನಾಗಿಸುವ ಉದ್ದೇಶದಿಂದಲ್ಲ.[೧೩] ಭವ್ಯ ಇತಿಹಾಸವುಳ್ಳ, ನೂರಿಪ್ಪತ್ತು ವರ್ಷಗಳಿಂದ ನಿರಂತರವಾಗಿ ಬಸವಣ್ಣನವರ ಕನಸಿನ ಜಂಗಮತ್ವವನ್ನು ಬೋಧಿಸುವ ಸಂಸ್ಥೆಯು ಗುರು ವಿರಕ್ತ ಪೂಜ್ಯರಿಗೂ ಪಾಠ ಮಾಡಿತ್ತು. ಇಂತಹ ಸಂಸ್ಥೆಯಲ್ಲಿ ಗುರು ವಿರಕ್ತಸ್ವಾಮಿಗಳ ಸಭೆಯನ್ನು ಸೆಪ್ಟೆಂಬರ್ ನಾಲ್ಕರಂದು ಪಂಚಪೀಠಾಧೀಶ್ವರರು ಹಮ್ಮಿಕೊಂಡಿದ್ದರು. ಸಭೆಯ ಮುಖ್ಯ ಉದ್ದೇಶಗಳನ್ನು ಪತ್ರಿಕಾಗೋಷ್ಠಿಯಲ್ಲಿ ತಿಳಿಸುತ್ತ ರಂಭಾಪುರಿ ಪೀಠದ ಶ್ರೀಗಳು "ವೀರಶೈವ ಲಿಂಗಾಯತ ಎರಡು ಒಂದೇ. ವೀರಶೈವ ಧರ್ಮದಿಂದ

In Public domain. Digitization Muthulakshmi Research Academy

ಲಿಂಗಾಯತ ಬೇರ್ಪಡಿಸಿ ಸ್ವತಂತ್ರ ಧರ್ಮಕ್ಕೆ ಆಗ್ರಹಿಸುತ್ತಿರುವುದು ಸರಿಯಲ್ಲ. ಬಸವಣ್ಣ 'ಶೈವನಿಂದ ವೀರಶೈವನಾದ' ಎಂದು ಹೇಳಿರುವಾಗ ಕೆಲವು ಮಠಾಧೀಶರು ಲಿಂಗಾಯತ ಧರ್ಮಸ್ಥಾಪಕ ಪಟ್ಟ ಕಟ್ಟಬೇಕೆಂದು ಹೊರಟಿರುವುದು ಹಾಸ್ಯಾಸ್ಪದ. ಬಸವಣ್ಣನಿಗಿಂತಲೂ ಪೂರ್ವದಲ್ಲಿ ವೀರಶೈವ ಧರ್ಮವಿತ್ತು" ಎಂದರು. ಮುಂದುವರಿದು ಸಮಾಜದಲ್ಲಿ ಶಾಂತಿ ಸಾಮರಸ್ಯ ಮೂಡಿಸಲು ಪಂಚಪೀಠಗಳು ಮೊದಲಿನಿಂದಲೂ ಮಾರ್ಗದರ್ಶನ ಮಾಡುತ್ತಾ ಬಂದಿವೆ. ಕೆಲವು ಮಠಾಧೀಶರು ಪಂಚಪೀಠಗಳನ್ನು ಟೀಕಿಸಿದ್ದಾರೆ. ನಮ್ಮ ಉದಾರತೆಯನ್ನು ತಪ್ಪಾಗಿ ತಿಳಿದುಕೊಂಡಿದ್ದಾರೆ. ಪಂಚಪೀಠಗಳ ಬಗ್ಗೆ ಸಲ್ಲದ ಮಾತುಗಳು ಕೇಳಿ ಬರುತ್ತಿರುವಾಗ ಭಕ್ತರು ತಟಸ್ಥರಾಗಿರುವುದು ನಮಗೆ ನೋವು ತಂದಿದೆ. ಇಂದು ರಾಜಕೀಯದ ಹೊಸ್ತಿಲಿನಲ್ಲಿ ಧರ್ಮ ನಿಂತಿದೆ. ಧರ್ಮ ಮತಗಳಿಕೆ ಯಂತ್ರ ಆಗಬಾರದು"[೧೪] ಎಂದರು. ಶ್ರೀಗಳು ಆಕ್ರೋಶಭರಿತರಾಗಿ ಮಾತಾಡಿದಂತಿದೆ. ಮೊದಲನೆಯದಾಗಿ ಶಿವಯೋಗಮಂದಿರದ ಸ್ಥಾಪಕರು ಪಂಚಪೀಠಾಧೀಶ್ವರರು ಅಲ್ಲ. ಶಿವಯೋಗಮಂದಿರ ಸ್ಥಾಪನೆಯ ಉದ್ದೇಶ ವಿರಕ್ತ ಚಿಂತನೆಯ ಮೇಲೆ ನಿಜಜಂಗಮತ್ವದ ತರಬೇತಿ ನೀಡಲು ಕಟ್ಟಿದ ಸಂಸ್ಥೆ. ಈ ಸಂಸ್ಥೆಯನ್ನು ಕಟ್ಟಿದವರು ಜಾತಿ ಮೀರಿದ ಲಿಂಗಾಯತರಾಗಿದ್ದರು.[೧೫] ಎರಡನೆಯದಾಗಿ ಅರಿಷಡ್ವರ್ಗಗಳನ್ನು ಮೀರಿದ ಪೂಜ್ಯರು, ತನ್ನ ಭಕ್ತನು ತಪ್ಪು ಮಾಡಿದಾಗ ಅವನ ಅಜ್ಞಾನವನ್ನು ಜ್ಞಾನದ ಮೂಲಕ ಪರಿಹರಿಸಬೇಕು. ಇಂತಹ ವಿಷಮ ಸನ್ನಿವೇಶದಲ್ಲಿ ತಾವೇ ಸಭೆಗಳನ್ನು ಕರೆದು ಲಭ್ಯವಿರುವ ಆಧಾರಗಳನ್ನು ಪರಿಶೀಲಿಸಿ ಮೌಢ್ಯರಹಿತವಾದ, ಜನಹಿತವಾದ, ಎಲ್ಲರಿಗೂ ಒಪ್ಪಿತವಾದ ನಿರ್ಣಯ ತೆಗೆದುಕೊಳ್ಳಬಹುದಾಗಿತ್ತು. ವೈಜ್ಞಾನಿಕ ಯುಗದಲ್ಲಿ ಪುರಾಣಗಳನ್ನು ಆಧಾರವಾಗಿಟ್ಟುಕೊಂಡ ಹಾಸ್ಯಾಸ್ಪದ ಮಾತುಗಳು ಪೀಠದಿಂದಲೇ ಬರುತ್ತಿವೆಯೇ ಹೊರತು ಲಿಂಗಾಯತ ಸಿದ್ಧಾಂತ ತಿಳಿದವರಿಂದ ಅಲ್ಲ. ಕೊನೆಯದಾಗಿ ಪಂಚಪೀಠಗಳು ಜನತೆಗೆ ನೀಡಿದ 'ಮಾರ್ಗದರ್ಶನ' ಎಲ್ಲರಿಗೂ ತಿಳಿದಿದೆ. ನೂರಾರು ವರ್ಷಗಳಿಂದ ಇರುವ ಪಂಚಪೀಠದ ಮಠಗಳು ಲಿಂಗಾಯತ/ ವೀರಶೈವಧರ್ಮ ಬೋಧನೆ ಮಾಡಿದ್ದರೆ, ಲಿಂಗಾಯತ ಧರ್ಮವು ಇಂದು ಸಮುದ್ರದಾಚೆಗಿನ ಧರ್ಮವಾಗಿರಬಹುದಾಗಿತ್ತು. ವ್ಯತಿರಿಕ್ತವಾಗಿ ಧರ್ಮದ ಆಚರಣೆ ಸಂಕುಚಿತಗೊಳ್ಳುತ್ತದೆ. ಅದು ಪಟ್ಟಭದ್ರ ಹಿತಾಸಕ್ತಿಗಳ ಕೈಗೊಂಬೆಯಾಗಿ ಹಿಂದೂಧರ್ಮದ ಏಣಿಶ್ರೇಣಿ ಜಾತಿಯಾಗಿ ಮಾರ್ಪಟ್ಟಿದೆ.

೨೦೧೭ ಸೆಪ್ಟೆಂಬರ್ ನಾಲ್ಕರಂದು ಶಿವಯೋಗಮಂದಿರದಲ್ಲಿ ನಡೆದ ಗುರು–ವಿರಕ್ತರ ಜಂಟಿಸಭೆ ವಿಫಲವಾಗಿತ್ತು. ಕೇವಲ ಪಂಚಪೀಠಗಳನ್ನು ಬೆಂಬಲಿಸುವ ಗುರುವರ್ಗದವರು ಮತ್ತು ಜಂಗಮ ಸಮಾಜದ

In Public domain. Digitization Muthulakshmi Research Academy

ಅಂಧಾಭಿಮಾನಿಯಾದ ವಿರಕ್ತವರ್ಗದ ಮಠದ ಸ್ವಾಮಿಗಳು ಮಾತ್ರ ಸಭೆಯಲ್ಲಿ ಭಾಗವಹಿಸಿದ್ದರು. ವೀರಶೈವರ ಮುಖವಾಣಿಯಾಗಿದ್ದ ಪಂಚಪೀಠದ ರಂಭಾಪುರಿ, ಶ್ರೀಶೈಲ, ಕಾಶಿ ಮತ್ತು ಉಜ್ಜಯಿನಿ ಪೀಠಗಳ ಜಗದ್ಗುರುಗಳು ಸಭೆಯಲ್ಲಿದ್ದರು. ಸಭೆಯಲ್ಲಿದ್ದ ವಿರಕ್ತಮಠದ ಮಠಾಧೀಶರಾದ ಹುಬ್ಬಳ್ಳಿಯ ಮೂರುಸಾವಿರ ಮಠದ ಗುರುಸಿದ್ಧರಾಜಯೋಗಿಂದ್ರ ಸ್ವಾಮೀಜಿಯಂತಹ ವಿರಕ್ತಮಠದ ಸ್ವಾಮೀಜಿಗಳು ಅಲ್ಲಿದ್ದರು. ವೀರಶೈವವನ್ನು ಬೆಂಬಲಿಸುವ ವಿರಕ್ತಮಠದ ಸ್ವಾಮಿಗಳಿಗೆ ಲಿಂಗಾಯತ ಸತ್ಯವೆಂದು ತಿಳಿದರೂ ಅದನ್ನು ಬಹಿರಂಗವಾಗಿ ಒಪ್ಪಿಕೊಳ್ಳಲಾರದ ಕುರುಡು ಜಾತಿಪ್ರೇಮಕ್ಕೆ ಅಂಟಿಕೊಂಡಂತ್ತಿತ್ತು. "ಸತ್ಯವನ್ನು ಒಪ್ಪಿಕೊಳ್ಳಲು ಸಾಧ್ಯವಾಗದ ಸ್ಥಿತಿಯಲ್ಲಿ ನಾನಿದ್ದೇನೆ" ಎಂದಿದ್ದರು ಮೂರು ಸಾವಿರ ಮಠದ ಪೂಜ್ಯರು. "ಒಂದು ಕಾಲದಲ್ಲಿ ಹಿಂದೂಧರ್ಮದ ಭಾಗವಾಗಿದ್ದ ಜೈನ ಸಮಾಜ ಇದೀಗ ಸ್ವತಂತ್ರವಾಗಿರುವಂತೆ ಲಿಂಗಾಯತವು ಸ್ವತಂತ್ರವಾಗಲಿದೆ. ಇದರಿಂದ ಹಿಂದೂಧರ್ಮಕ್ಕೆ ಯಾವುದೇ ಹಾನಿಯಿಲ್ಲ"[೧೬]. ತದನಂತರದ ಹೇಳಿಕೆ ಅವರ ಓದಿಗೆ ಸಾಕ್ಷಿಯಾಗಿತ್ತು. ಲಿಂಗಾಯತದ ಸಿದ್ಧಾಂತದ ಅರಿವು ಅವರಲ್ಲಿದೆ. ಈ ಸೈದ್ಧಾಂತಿಕ ಸ್ಪಷ್ಟತೆಯನ್ನು ಅವರು ಸಭೆಯಲ್ಲಿ ಮಂಡಿಸಿದ್ದರಂತೆ. ಕಾರಣ ವಿರಕ್ತವರ್ಗದ ಅಭಿಪ್ರಾಯ ವೀರಶೈವರ ವಿಚಾರಗಳಿಗೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿರುವುದನ್ನು ಗಮನಿಸಿದ ಉಜ್ಜಯಿನಿ ಪೀಠದ ಜಗದ್ಗುರುಗಳು ಸಭೆಯ ನಂತರ "ಇಲ್ಲಿಯವರೆಗೂ ಆಗಬಾರದ್ದು ಆಗಿ ಮನಸ್ಸು ಕಸಿವಿಸಿಗೊಂಡಿದೆ. ಗುರುವಿರಕ್ತರ ವೈಮನಸ್ಸು ಮರೆಯೋಣ. ಇನ್ನು ಮುಂದೆ ಪರಸ್ಪರರನ್ನು ಅಲ್ಲಸಲ್ಲದ ಮಾತುಗಳಿಂದ ದೂಷಿಸುವುದು ಬಿಡೋಣ" ಎಂಬ ಪಶ್ಚಾತ್ತಾಪದ ಮಾತುಗಳಂತಿದ್ದ ಹೇಳಿಕೆಯನ್ನು ಮಾಧ್ಯಮಗಳಿಗೆ ನೀಡಿದ್ದರು. ಮುಂದುವರಿದು "ಈ ಕೂಡುವಿಕೆಯ ಅಸ್ಮಿತೆಯಾಗಿ ಹಾನಗಲ್ ಕುಮಾರಶಿವಯೋಗಿಗಳ ಜಯಂತಿಯನ್ನು ಪ್ರತಿವರ್ಷ ಆಚರಿಸೋಣ" ಎಂದಿದ್ದರು. ಶ್ರೀಗಳ ನುಡಿಗಳು ಮತ್ತೆ ರಾಜಕೀಯದ ನುಡಿಗಳಂತಿದ್ದವು. ಅವರು ಬಸವಣ್ಣನವರನ್ನು ಒಪ್ಪಿಕೊಳ್ಳದೆ, ಲಿಂಗಾಯತ ಸಿದ್ಧಾಂತವನ್ನು ಒಪ್ಪಿಕೊಳ್ಳದೆ ಜಂಗಮ ಸಮಾಜದ ಸ್ವಾಮೀಜಿಗಳ ಒಂದುಗೂಡುವಿಕೆಯು ಇಂಗಿತವನ್ನು ವ್ಯಕ್ತಪಡಿಸಿದ್ದರು. 'ಬೀಳಲಿರುವ ದೊಣ್ಣೆ ಏಟು ತಪ್ಪಿದರೆ ಹನ್ನೆರಡು ವರ್ಷ ಆಯುಷ್ಯವಂತೆ' ಎಂಬ ಕುಹಕನಡೆಯು ಅವರದಾಗಿರಬಹುದು. "ಸ್ವಾಮಿಗಳು ಒಂದಾದರೆ ಭಕ್ತರೇನು ಮಾಡುತ್ತಾರೆ?" ಎಂಬ ಅಹಮ್ಮನ್ನು ಸ್ವಾಮೀಜಿ ಪ್ರದರ್ಶಿಸಿದ್ದರು. "ಕೆಳಗೆ ಬಿದ್ದರೂ ಮೀಸೆ ಮಣ್ಣಾಗಿಲ್ಲ" ಎಂಬ ಅವರ ಮನಸ್ಥಿತಿ ಮತ್ತು diehard attitude. ಲಿಂಗಾಯತರಿಗೆ ಅಂದು ಗುರುವಿರಕ್ತರ ಸಮನ್ವಯ ಬೇಕಾಗಿರಲಿಲ್ಲ. ಇದು ಲಿಂಗಾಯತದ ಅಸ್ಮಿತೆಯ ಪ್ರಶ್ನೆ. ಅದನ್ನು

In Public domain. Digitization Muthulakshmi Research Academy

ಉಳಿಸಿಕೊಳ್ಳುವುದು ಗುರುವಿರಕ್ತ ಮತ್ತು ಸಮಸ್ತ ಲಿಂಗಾಯತರ ಕರ್ತವ್ಯವಾಗಿತ್ತು. ಲಿಂಗಾಯತದ ಅಸ್ಮಿತೆಯಾದ ಲಿಂಗಾಯತ ಧರ್ಮಕ್ಕೆ ಅಲ್ಪಸಂಖ್ಯಾತ ಮಾನ್ಯತೆ, ಮೇಲಾಗಿ ಹಾನಗಲ್ ಕುಮಾರಸ್ವಾಮಿಗಳು ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಕರೂ ಅಲ್ಲ, ಅವರು ವೀರಶೈವರ ಹಿತ ಕಾಪಾಡಲು 'ವೀರಶೈವ ಮಹಾಸಭಾ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣರಾದವರು ಎಂದು ವಾದ ಮಾಡುವವರು ಇದ್ದರು.

ಶತಶತಮಾನಗಳಿಂದ ಧರ್ಮಗುರುಗಳಾಗಿ ಲಿಂಗಾಯತ ಧರ್ಮದ ತಾತ್ವಿಕ ಆಚರಣೆಗಳನ್ನು ಜನಮಾನಸದಲ್ಲಿ ಬಿತ್ತದೆ ಶ್ರೇಷ್ಠತೆಯ ವ್ಯಸನದಲ್ಲಿ ಶತಮಾನಗಳನ್ನು ಕಳೆದ ತಮಗಿಂತಲೂ ಒಂದು ಹೆಜ್ಜೆ ಮುಂದಡಿಯಿಟ್ಟ ಲಿಂಗಾನಂದ ಸ್ವಾಮಿಗಳನ್ನು ಹಾಗೂ ಮಾತೆ ಮಹಾದೇವಿಯವರನ್ನು ಹಳಿಯುವುದೇ ಪಂಚಪೀಠಗಳ ಕಾಯಕವಾಗಿತ್ತು. ಲಿಂಗಾಯತ ಧರ್ಮದ ತತ್ವಗಳನ್ನು ಜನಮಾನಸದಲ್ಲಿ ಬಿತ್ತಿದ್ದ ಮಾತೆ ಮಹಾದೇವಿಯವರು ಪಂಚಪೀಠಾಧಿಪತಿಗಳಿಗೆ ಪ್ರಥಮ ವೈರಿಗಳೆಂದು ಬಗೆದಿದ್ದರು. "ಕೆಲವರು ಲಿಂಗಾಯತ ಸ್ವತಂತ್ರ ಧರ್ಮದ ಹೆಸರಿನಲ್ಲಿ ಬಸವಣ್ಣನ ಆಶಯಗಳಿಗೆ ಕಳಂಕ ತರುವ ರೀತಿ ನಡೆದುಕೊಳ್ಳುತ್ತಿದ್ದಾರೆ. ವಚನಗಳ ಅಂಕಿತ ತಿದ್ದಿದವರಿಗೆ ಮಣೆ ಹಾಕುತ್ತಿದ್ದಾರೆ" ಎಂದು ಪರೋಕ್ಷವಾಗಿ ಮಾತೆ ಮಹಾದೇವಿಯವರನ್ನು ಟೀಕಿಸಿದ್ದರು[೧೭] ಇವರು ಲಿಂಗಾಯತ ಹೋರಾಟದ ಮೂಲ ಆಶಯಗಳನ್ನೇ ಅರಿತಿರಲಿಲ್ಲ. ಇದೊಂದು ಗುರುವಿರಕ್ತರ ಮಧ್ಯೆ ಇರುವ ವೈಚಾರಿಕ ಹೋರಾಟವೆಂದು ಭಾವಿಸಿ ಮಠಗಳ ಶ್ರೇಷ್ಠತೆಯನ್ನು ಪ್ರತಿಷ್ಠಾಪಿಸುವ ಪ್ರಸ್ತಾಪವೆಂದುಕೊಂಡತಿತ್ತು. "ಬಸವಾದಿ ಶರಣರ ತತ್ವ ಹಾಗೂ ವಚನ ಸಾಹಿತ್ಯದ ಸಾರವೇ ವೀರಶೈವ ಧರ್ಮದ ತಿರುಳಾಗಿದೆ. ಸ್ವತಂತ್ರ ಧರ್ಮ ಎನ್ನುವವರು ಅವುಗಳನ್ನು ಬಿಟ್ಟು ಹೋಗಲಿ"[೧೮] ಎಂದು ಶ್ರೀಶೈಲ ಪೀಠಾಧೀಶರು ವಿಚಿತ್ರವಾದ ಹೇಳಿಕೆ ನೀಡಿದ್ದರು. ಲಿಂಗಾಯತ ಸ್ವತಂತ್ರ ಧರ್ಮದ ಹೋರಾಟದ ಉದ್ದೇಶವೇ ಬಸವಣ್ಣನವರ ತತ್ವವನ್ನು ಉಳಿಸಿ-ಬೆಳೆಸುವುದು ಮತ್ತು ಅವರು ಸ್ಥಾಪಿಸಿದ ಲಿಂಗಾಯತ ಧರ್ಮದ ಅಸ್ಮಿತೆಯನ್ನು ಕಾಪಾಡುವುದಾಗಿತ್ತು. ಬಸವಸಿದ್ಧಾಂತವನ್ನು ಅವರು ಒಪ್ಪುವುದಾದರೆ ಈ ಹೋರಾಟ-ಹಾರಾಟದ ಅವಶ್ಯಕತೆಯೇ ಇಲ್ಲ. ಈ ಮಾತುಗಳು ಅವರು ಲಿಂಗಾಯತ ಸಿದ್ಧಾಂತವನ್ನು ಅರಿತು ಹೇಳಿದ ನುಡಿಗಳೋ ಅಥವಾ ಆವೇಶದಲ್ಲಿ ಹೇಳಿದ ಹೇಳಿಕೆಯೋ ತಿಳಿಯಲಿಲ್ಲ.

ಈ ಸಮಾವೇಶದಲ್ಲಿ ವಿರಕ್ತಮಠದ ಹುಬ್ಬಳ್ಳಿ ಮೂರುಸಾವಿರ ಮಠದ ಶ್ರೀ ಗುರುಸಿದ್ಧರಾಜಯೋಗಿಂದ್ರ ಸ್ವಾಮೀಜಿ, ಕೊಳದ ಮಠದ ಶಾಂತವೀರ ಸ್ವಾಮೀಜಿ ಭಾಗವಹಿಸಿದ್ದರು. ಈ ಸಮಾವೇಶಕ್ಕೆ ತನು ಮನ ಧನ ಸಹಾಯ ನೀಡಿದವರು

In Public domain. Digitization Muthulakshmi Research Academy

ಜಂಗಮ ಸಮಾಜದ ಪ್ರಮುಖರಾಗಿದ್ದ ಕೆ.ಎಲ್.ಇ. ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರೂ, ವಿಧಾನಪರಿಷತ್ ಸದಸ್ಯರೂ ಹಾಗೂ ಬಿ.ಜೆ.ಪಿ.ಯ ನಾಯಕರಾಗಿದ್ದ ಮಹಾಂತೇಶ ಕವಟಗಿಮಠ ಹಾಗೂ ಬೀಳ್ಯೂರ ಮಹಾಸ್ವಾಮಿಗಳು ಕಟ್ಟಿದ ಬಸವೇಶ್ವರ ವಿಧ್ಯಾವರ್ಧಕ ಸಂಘದ ಅಧ್ಯಕ್ಷ ಹಾಗೂ ಮಾಜಿ ಶಾಸಕರಾದ ವೀರಣ್ಣ ಚರಂತಿಮಠರು, ಸಭೆಯಲ್ಲಿ ಜಿ.ಎಸ್.ನ್ಯಾಮಗೌಡ, ಹುನಗುಂದ ಕ್ಷೇತ್ರದ ಮಾಜಿ ಶಾಸಕ ದೊಡ್ಡನಗೌಡ ಪಾಟೀಲ, ಎಂ.ಕೆ.ಪಟ್ಟಣಶೆಟ್ಟಿ ಮತ್ತು ರೋಣದ ಶಾಸಕ ಜಿ.ಎಸ್.ಪಾಟೀಲ ಮತ್ತಿತರರು ಭಾಗವಹಿಸಿದ್ದರು. ಇದರಿಂದ ಸ್ಪಷ್ಟವಾಗಿ ಭಾರತೀಯ ಜನತಾ ಪಕ್ಷವು ಲಿಂಗಾಯತ ಧರ್ಮವನ್ನು ತನ್ನ ಲಾಭಕ್ಕಾಗಿ ಜಾತಿಗಳಲ್ಲಿ ವಿಂಗಡಿಸಿ ಜಂಗಮ ಸಮಾಜ, ರೆಡ್ಡಿ ಸಮಾಜ, ಗಾಣಿಗ ಸಮಾಜ ಮತ್ತು ಬಣಜಿಗ ಸಮಾಜಗಳನ್ನು ಲಿಂಗಾಯತ ಧರ್ಮ ಸಿದ್ಧಾಂತಗಳಿಂದ ದೂರ ಮಾಡುವ ಮತ್ತು ಮುಂಬರುವ ಚುನಾವಣೆಯಲ್ಲಿ ಮತಗಳ ಧ್ರುವೀಕರಣ ಮಾಡುವ ಕೆಲಸಕ್ಕೆ ಕೈ ಹಾಕಿತ್ತು. ೮೫೦ ವರ್ಷಗಳ ನಂತರ ಪ್ರಾರಂಭವಾದ ಹೋರಾಟವು ನಿರ್ಣಾಯಕ ಮಟ್ಟ ಮುಟ್ಟುವ ಪೂರ್ವದಲ್ಲಿಯೇ ಲಿಂಗಾಯತ ಒಳಪಂಗಡಗಳಿಂದಲೇ ಮುರಿಯುವ ಷಡ್ಯಂತ್ರವನ್ನು ಆರ್.ಎಸ್. ಎಸ್. ಮಾಡಿತ್ತು.

ಪತ್ರಕರ್ತೆ ಗೌರಿ ಲಂಕೇಶ ಕೊಲೆ

ಇವನಾರವ ಇವನಾರವ ಎನ್ನದೆ ಇವನಮ್ಮನ ಎನ್ನಿ ಎಂಬ ಧ್ಯೇಯದ ಧರ್ಮ ಪ್ರಚಾರಕರಾದ ಜಂಗಮರಿಂದ, ಲಿಂಗಾಯತ ಸ್ವತಂತ್ರ ಧರ್ಮದ ಹೋರಾಟಗಾರರಿಗೆ ಹಾಗೂ ಚಿಂತಕರಿಗೆ ಬುದ್ಧಿ ಕಲಿಸುವ ಆಕ್ರೋಷದ ಮಾತುಗಳು ಹೊರಬೀಳಲಾರಂಭಿಸಿದ್ದವು. ಲಿಂಗಾಯತ ಧರ್ಮಕ್ಕೆ ಅಲ್ಪ ಸಂಖ್ಯಾತ ಮಾನ್ಯತೆ ಕೊಟ್ಟರೆ ರಕ್ತಕ್ರಾಂತಿಯಾದೀತು! ಎಂದು ಎಚ್ಚರಿಕೆ ನೀಡಲಾರಂಭಿಸಿದ್ದರು. ಸೈದ್ಧಾಂತಿಕ ವಿರೋಧಿಗಳನ್ನು ವೈಯುಕ್ತಿಕ ವಿರೋಧಿಗಳಂತೆ ಭಾವಿಸಲಾರಂಭಿಸಿದರು. ಇವರ ಮಾತುಗಳು ಕೇವಲ ಎಚ್ಚರಿಕೆಯಾಗದೆ ಗೌರಿ ಲಂಕೇಶರ ಹತ್ಯೆಯೊಂದಿಗೆ ಕಾರ್ಯರೂಪಕ್ಕೆ ಇಳಿದಂತಿತ್ತು. ಸೆಪ್ಟೆಂಬರ್ ೫, ೨೦೧೭ರಂದು ಪತ್ರಕರ್ತೆ ಗೌರಿ ಲಂಕೇಶ ಕೊಲೆಯಾಗಿತ್ತು. ಇಂತಹದೇ ಕಾರಣಗಳಿಂದ ಈ ಹಿಂದೆ ಡಾ. ಎಂ. ಎಂ. ಕಲಬುರ್ಗಿ ಮತ್ತು ಲಿಂಗಣ್ಣ ಸತ್ಯಂಪೇಟೆಯವರನ್ನು ಅವರನ್ನು ಕೊನೆಗಾಣಿಸಲಾಗಿತ್ತು. ಅಂದು ಮೂರನೆಯ ಕೊಲೆಯು ನಡೆದು ಹೋಗಿತ್ತು. "ಚಡ್ಡಿಗಳ ಮಾರಣಹೋಮ' ಎಂಬ ಲೇಖನವನ್ನು ಬರೆಯದೆ ಹೋಗಿದ್ದರೆ ಗೌರಿ ಲಂಕೇಶ ಬದುಕಿರುತ್ತಿದ್ದಳು" ಎಂದಿದ್ದರು ಡಿ. ಎನ್. ಜೀವರಾಜ ಎಂಬ ಭಾರತೀಯ ಜನತಾ ಪಕ್ಷದ ಶಾಸಕರು. ಗೌರಿ ಲಿಂಗಾಯತ ಧರ್ಮ ಶಾಸ್ತ್ರವನ್ನು ಓದಿದ್ದರು. ವಚನಗಳನ್ನು ಅರಿತಿದ್ದರು. ಲಿಂಗಾಯತ ಒಂದು ಶ್ರೇಷ್ಠ ಧರ್ಮ ಎಂದಿದ್ದರು. ಲಿಂಗ-ಜಾತಿಗಳಲ್ಲಿ ವಿಶ್ವಾಸವಿಲ್ಲ ಎಂದಿದ್ದು ಅವರ ಮಹಾ ಅಪರಾಧವಾಗಿತ್ತು,

In Public domain, Digitization Muthulakshmi Research Academy

'ಹಿಂದೂಸ್ಥಾನದಲ್ಲಿ ಹಿಂದೂಗಳು ಮಾತ್ರ ಇರಬೇಕು. ಹಿಂದೂ ಧರ್ಮವನ್ನು ಟೀಕಿಸುವವರು ಇರಲೇ ಬಾರದು' ಎಂಬಂತಿದೆ ಸನಾತನವಾದಿಗಳ ನಡೆ. ಬಿಸಿರಕ್ತದ ಯುವಕರನ್ನು ಧರ್ಮಾಂಧರನ್ನಾಗಿಸುವ ಚಟುವಟಿಕೆಗಳನ್ನು ಪ್ರಾರಂಭಿಸಿತ್ತು ಪುಣೆಯ 'ಸನಾತನ ಸಂಸ್ಥೆ'. ಮಹಾರಾಷ್ಟದ ಮತ್ತು ಕರ್ನಾಟಕದ ಕೆಲ ಧರ್ಮಾಂಧ ಯುವಕರು ಅದರ ಸದಸ್ಯರಾಗಿದ್ದರು. ಅವರಲ್ಲಿ ಪ್ರಮುಖರಾದವರು ಅಮೊಲ ಕಾಳೆ, ಪರುಷರಾಮ ವಾಗಮೊರೆ, ಗಣೇಶ ಮಿಸ್ಕಿನ್, ಅಮಿತಿ ಬಡ್ಡಾ, ಭರತ ಕುರಣೆ, ಸುರೇಶ ಎಚ್. ಎಲ್, ವಾಸುದೇವ, ಸೂರ್ಯವಂಶಿ, ಮನೋಹರ ಎಡ್ವೆ, ಶ್ರೀಕಾಂತ ಪಂಗರಕರ, ನವೀನ ಕುಮಾರ ಮತ್ತು ರಶೀಕೇಷ ದಿಯೋಡಿಕರ ಎಂಬ ಹಿಂದೂ ಧರ್ಮ ರಕ್ಷಕರು. ಇವರೆಲ್ಲರ ನಾಯಕ ಅಮೊಲ ಕಾಳೆ ಎಂಬ ಪುಣೆಯ ೨೩ ವರ್ಷದ ತರುಣ. ಗೌರಿ ಲಂಕೇಶ ಹತ್ಯೆಯ ಪ್ರಮುಖ ಆರೋಪಿಯಾಗಿ ಮುಂದೆ ಪೊಲೀಸರ ಬಂಧಿಯಾದ. ಇವನೇನು ಅನಕ್ಷರಸ್ತನಲ್ಲ. ಬಿ.ಇ ಮೆಕ್ಯಾನಿಕಲ್ ಇಂಜನಿಯರಿಂಗ ಪದವಿದರ. ಮೇಲಾಗಿ ಇವನು ಶಿವ ಭಕ್ತ, ಅಸಲಿನಲ್ಲಿ ಋಗ್ವೇದದ ರುದ್ರನ ಭಕ್ತನಾಗಿದ್ದ. ಈಗಾಗಲೇ ಮೂವರು ಹಿಂದೂ ಪ್ರತಿಪಾದಕರಲ್ಲದವರನ್ನು ಇಲ್ಲವಾಗಿಸಿದ್ದ. ಇವನಿಗೆ ಸಿಕ್ಕಿದ್ದ ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಪ್ರಶಾಂತ ವಾಗಮೊರೆ ಎಂಬ ತಲೆ ಮಾಸದ ಅಮಾಯಕ ಹುಡುಗ. ಅವನ ಸಹಾಯದಿಂದ ಸೆಪ್ಟೆಂಬರ್ ೫, ೨೦೧೭ ರಂದು ಹದಿನೇಳು ಗುಂಡುಗಳನ್ನು ಗೌರಿ ಲಂಕೇಶಳ ಬಡಕಲ ದೇಹದಲ್ಲಿ ನುಗ್ಗಿಸಿದ್ದ.

ಹಿಂದೂ ಧರ್ಮಾಂಧರ ಮನಸ್ಥಿತಿ ಬಗ್ಗೆ ಒಂದೆರಡು ವಾಕ್ಯಗಳನ್ನು ಇಲ್ಲಿ ಸೇರಿಸಿದರೆ ವಿಷಯಾಂತರವಾಗದೆಂದು ಭಾವಿಸುತ್ತೇನೆ. "if any one said any thing insulting about Hindu religion, I would get very upset. I would have thoughts of taking violent actions against such people" ಎಂಬ ಹೇಳಿಕೆಯನ್ನು ನೀಡುತ್ತಾನೆ ಗೌರಿ ಹತ್ಯೆಯ ಪ್ರಮುಖ ರೂವಾರಿ ಅಮೋಲ ಕಾಳೆ. ಈ ಹೇಳಿಕೆಯನ್ನು ಅವನು ನೀಡಿದ್ದು ಪತ್ರಕರ್ತರ ಎದುರಲ್ಲ. ಈ ಸತ್ಯವನ್ನು ಒಪ್ಪಿಕೊಂಡದ್ದು ಎಸ್.ಐ. ಟಿ. ಎದರು. ಇವನ ಧರ್ಮಾಂದತೆಗೆ ಮೂಲವಾಗಿದ್ದು ಜಯಂತ ಬಾಲಾಜಿ ಅಠವಳೆ ರಚಿತ 'ಕ್ಷಾತ್ರ ಧರ್ಮ ಸಾಧನಾ' ಎಂಬ ಪುಸ್ತಕ. ಈ ಪುಸ್ತಕದಲ್ಲಿರುವ ಒಂದು ವಾಕ್ಯ ಹೀಗಿದೆ "ಹಿಂದೂ ಧರ್ಮವನ್ನು ಪಾಲಿಸುವವರು 'ಸಾದಕರು', ಪಾಲಿಸದವರು 'ದುರ್ಜನರು'ರೆಂದು. ಈ ಒಂದು ವಾಕ್ಯ ಇವನ ಜೀವನವನ್ನೇ ಬದಲಾಯಿಸುತ್ತದೆ. ಮೌಢ್ಯ ವಿರೋಧಿಸುವ ಗೋವಿಂದ ಫನ್ಸಾರೆ, ನರೇಂದ್ರ ಧಾಬೋಲ್ಕರ್, ಡಾ.ಎಂ.ಎಂ.ಕಲಬುರ್ಗಿ ಮತ್ತು ಗೌರಿ ಲಂಕೇಶರು ಇವನಿಗೆ ದುರ್ಜನರಾಗಿ ಕಾಣುತ್ತಾರೆ. 'ಹಿಂದೂ ಧರ್ಮವನ್ನು ಉದ್ಧಾರ ಮಾಡುವ ಆರ್. ಎಸ್. ಎಸ್. ಚಡ್ಡಿಗಳ ಮಾರಣ ಹೋಮ' ಎಂದು ಬರೆದ ಪತ್ರಕರ್ತೆ

In Public domain. Digitization Muthulakshmi Research Academy
ಗೌರಿ ಲಂಕೇಶ, ಹಿಂದೂ ಮೌಢ್ಯ ವಿರೋಧಿಸುವ ಮೈಸೂರಿನ ಪ್ರೊ ಕೆ. ಎಸ್. ಭಗವಾನ್, 'ಒಬ್ಬನೆ ದೇವರು' ಎನ್ನುವ ನಿಜಗುಣಾನಂದ ಸ್ವಾಮೀಜಿ ಇವರು ಅವನ ಮುಂದಿನ ಗುರಿಯಾಗುತ್ತಾರೆ.

ಇಂತಹ ಗಂಡಾಂತರ ಕಾರ್ಯ ಮಾಡುವ ಮತ್ತು ಯುವಕರನ್ನು ಧರ್ಮಾಂಧರನ್ನಾಗಿಸುವ 'ಸನಾತನ ಸಂಸ್ಥೆ' ಹುಟ್ಟಿಕೊಂಡಿದ್ದೇ ಇತ್ತೀಚೆಗೆ ಅಂದರೆ ೧೯೯೦ರಲ್ಲಿ. ಮುಖ್ಯ ಕಚೇರಿ ಗೋವೆಯ ಪೋಂಡಾದಲ್ಲಿದೆ. ಇದರ ಸದಸ್ಯರು ೨೦೦೭ ಮತ್ತು ೨೦೦೯ರಲ್ಲಿ ತಮ್ಮ ಅಸ್ತಿತ್ವವನ್ನು ತೋರಿಸಲು ಮಹಾರಾಷ್ಟ್ರ ಮತ್ತು ಕರ್ನಾಟಕದ ಜನವಸತಿ ಪ್ರದೇಶದಲ್ಲಿ ಬಾಂಬು ಸಿಡಿಸುತ್ತಾರೆ. ಪೊಲಿಸರ ಕೈಗೆ ಸಿಕ್ಕಿಬೀಳುತ್ತಾರೆ. ೨೦೧೧ರಲ್ಲಿ ಇವೆರಡು ರಾಜ್ಯ ಸರಕಾರಗಳು ಈ ಸಂಸ್ಥೆಯನ್ನು ಬಹಿಸ್ಕರಿಸಲು ಮನವಿ ಸಲ್ಲಿಸಿದಾಗ ಕೇಂದ್ರ ರಾಜ್ಯ ಸರ್ಕಾರಗಳ ಮನವಿಯನ್ನು ಪುರಸ್ಕರಿಸುವುದಿಲ್ಲ. ನಿಯಂತ್ರಣ ರಹಿತ ಸರಕಾರದ ನೀತಿಯಿಂದ ಇವರು ಪುಕ್ಕಗಳು ಬಲಿಯುತ್ತವೆ. ಸಾಕ್ಷಿ ಸಿಗದಂತೆ 'ಬಲಿ ಹಾಕುವುದ'ನ್ನು ಕರಗತ ಮಾಡಿಕೊಳ್ಳುತ್ತಾರೆ. ಗುರಿ ತಪ್ಪದಂತೆ ಪಿಸ್ತುಲು ಸಿಡಿಸುವ ತರಬೇತಿ ಪಡೆಯುತ್ತಾರೆ. ಸೈದ್ಧಾಂತಿಕ ವೈರಿಗಳ ಹಣೆಗೆ ಗುಂಡಿಕ್ಕುವುದನ್ನು ಪ್ರಾಕ್ಟೀಸ್ ಮಾಡುತ್ತಾರೆ. ಮೂವರನ್ನು ಮುಗಿಸುತ್ತಾರೆ.ಪೊಲೀಸರ ಕೈಗೆ ಸಿಗದೆ, ಮುಂದಿನ ಬೇಟೆಗೆ ಸಿದ್ಧವಾಗುತ್ತಾರೆ. ಇಂತಹದೇ ಇದೊಂದು ಸಂಸ್ಥೆ 'ಹಿಂದೂ ಜಾಗರಣ ಸಮೀತಿ' ಸನಾತನ ಸಂಸ್ಥೆಯ ಇನ್ನೊಂದು ಘಟಕ. ಇದು ಸರಿಯಾದ ಸಂಸ್ಥೆಯೆಂದು ಅಮೋಲ ಕಾಳೆ ಅಲ್ಲಿಗೆ ಹೋಗುತ್ತಾನೆ. ಇಲ್ಲಿಯ ಹಿರಿಯ ಸದಸ್ಯನಾದ ಕಾಕಾನ (ಶಶಿಕಾಂತ ರಾಣೆ) ವಿಶ್ವಾಸ ಸಂಪಾದಿಸುತ್ತಾನೆ. ಕಾಕಾನ ಏಕೈಕ ಗುರಿ ಹಿಂದೂ ವಿರೊಧಿಗಳ ಮಾರಣ ಹೋಮ ಮಾಡುವುದು. ಆದರೆ ಕಾಕಾ ಹೃದಯಸ್ಥಂಬನದಿಂದ ಸಾವನ್ನಪ್ಪುತ್ತಾನೆ. ಕಾಕಾನ ಆಸೆಗಳು ಇಡೇರುವುದಿಲ್ಲ. ಅಮೋಲ ಕಾಳೆ ಕಾಕಾನ ಆಸೆಯನ್ನು ಈಡೇರಿಸವ ಸಂಕಲ್ಪ ಮಾಡುತ್ತಾನೆ. ತನ್ನಂತೆ ಯೋಚಿಸುವ ಮೋಠಾಭಾಯಿನ್ನು ಪರಿಚಯಿಸಿಕೊಳ್ಳುತ್ತಾನೆ. 'ಮೋಠಾಭಾಯಿಯ ಮಾತು ಕೇಳುತ್ತಲಿದ್ದರೆ ರಕ್ತ ಕುದಿಯತ್ತದೆ' ಎಂದು ಅವನ ಅನುಯಾಯಿಆಗುತ್ತಾನೆ. ಅಮೋಲ ಕಾಳೆಯ ಕೈಗೆ ಜಂಬೇ (ಚೂರಿ) ಸಿಗುತ್ತದೆ. ಮೆಕ್ಯಾನಿಕಲ್ ಇಂಜನಿಯರ್ ಜಂಬೇ ಬೇಡ ಪಿಸ್ತೂಲ ಬೇಕೆನ್ನುತ್ತಾನೆ. ಹಿಂದೂ ರಾಷ್ಟ್ರ ಕಟ್ಟಲು ಅದೂ ಬರುತ್ತದೆ. ಮುಂದಿನ ಬಲಿ 'ಕುತ್ತಿ ಗೌರಿ' ಯಾಗಬೇಕೆಂದು ಅವರು ನಿರ್ಧರಿಸುತ್ತಾರೆ.

ಯಾರು ಈ ಗೌರಿ? ಕಳೆದ ಶತಮಾನದ ಎಂಬತ್ತರ ದಶಕದಲ್ಲಿ ಓದುಗರನ್ನು ಮರಳು ಮಾಡುವ ಪತ್ರಿಕೆ ಕನ್ನಡದಲ್ಲಿ ಪ್ರಾರಂಭವಾಗಿತ್ತು. ಶಿವಮೊಗ್ಗದ ಮೇಷ್ಟ್ರು ಅದರ ಸಂಪಾದಕರು. ತಮ್ಮದೆ ಹೆಸರನ್ನು ಪತ್ರಿಕೆಗೆ ಇಟ್ಟು "ಲಂಕೇಶ ಪತ್ರಿಕೆ" ಎಂದು ಕರೆದಿದ್ದರು. ಸರಕಾರಗಳನ್ನು ಬದಲಾಯಿಸುವ ಮಟ್ಟಕ್ಕೆ ಬೆಳೆಯಿತು

In Public domain. Digitization Muthulakshmi Research Academy

ಕನ್ನಡದ ಟ್ಯಾಬ್ಲೈಡ್. ಆದರೆ ಮೇಷ್ಟ್ರು ಹಟಾತ್ ಕಣ್ಮರೆಯಾಗಿಬಿಟ್ಟರು. ಹಿರಿಯ ಮಗಳು ಗೌರಿ ಜನಪ್ರಿಯ ಪತ್ರಿಕೆಯ ಜವಾಬ್ದಾರಿ ಹೊತ್ತುಕೊಳ್ಳಲು ಬಂದರು. ಅವರು ಇಲ್ಲಿಗೆ ಬರುವ ಮುಂಚೆ ಇಂಗ್ಲಿಷ್ ಭಾಷೆಯ ರಾಷ್ಟ್ರೀಯ ಮಾಧ್ಯಮಗಳಲ್ಲಿ ಕೃಷಿ ಮಾಡಿದ್ದರು. ಹಠಾತ್ತಾಗಿ ತೆರವಾದ ತಂದೆಯ ಸ್ಥಾನವನ್ನು ತುಂಬಬೇಕಾಗಿತ್ತು. ಅಪ್ಪನ ಇಲ್ಲದಿರುವಿಕೆ ಅವರಿಗೆ ಭಾರವಾದರೂ ಕರ್ತವ್ಯದಿಂದ ವಿಮುಖರಾಗುವಂತಿರಲಿಲ್ಲ. ಆದರೆ ಇವರು ಅಂದುಕೊಂಡಂತೆ ಆಗಲಿಲ್ಲ. ಕಾರಣ ಇವರ ಕಿರಿಯ ಸೋದರನಾದ ಇಂದ್ರಜೀತ್ ಲಂಕೇಶ ಅಕ್ಕನ ಎಡಪಂತಿ ನಿಲುವುಗಳನ್ನು ಸಮರ್ಥಿಸುತ್ತಿರಲಿಲ್ಲ. ಅಂತರ ಹೆಚ್ಚಾಗಲಾರಂಭಿಸಿತು. ಅಕ್ಕ ತಮ್ಮನ ಕಿರಿಕಿರಿಯಿಂದ ದೂರವಾಗಿ ತನ್ನದೆ "ಗೌರಿ ಲಂಕೇಶ" ಎಂಬ ಹೊಸ ಪತ್ರಿಕೆ ಪ್ರಾರಂಭಿಸಿದರು.

ನೋಡ ನೋಡುತ್ತಿದ್ದಂತೆ ಹತ್ತಾರು ಸಾವಿರ ಜನರು 'ಗೌರಿ ಲಂಕೇಶ' ಪತ್ರಿಕೆ ಕೈಗೆತ್ತಿಕೊಂಡು ಓದಲಾರಂಭಿಸಿದರು. ಬಲ ಪಂತೀಯರನ್ನು ಕಟುವಾಗಿ ಟೀಕಿಸಲು ಪ್ರಾರಂಭಿಸಿದರು. ಅವರ ಸಾವಿಗೆ ಮೂಲ ಕಾರಣಗಳನ್ನು ಈ ರೀತಿ ವಿಶ್ಲೇಷಣೆ ಮಾಡುತ್ತಾರೆ ಮಿಸ್ ಶಾ. "Forbidden Stories, a Paris-based non-profit organisation, investigated the video from YouTube that was downloaded onto one of the murderers' laptops. Police revealed to the research firm that the video, which features a five-minute excerpt of a 15- minute - long speech in which Gouri Lankesh discusses the plurality of Hinduism, was used as an element in a "gradual indoctrination process." ಇವರನ್ನು ಕೊಲ್ಲಲು ಇದೊಂದೆ ಕಾರಣವಲ್ಲ. "ಲಿಂಗಣ್ಣ ಸತ್ಯಂಪೇಟೆ, ಎಂ. ಎಂ. ಕಲಬುರ್ಗಿಯವರ ಹತ್ಯೆಯ ನಂತರ ಪೋಲಿಸ ವೈಫಲ್ಯ ಕೊಲೆಗಡುಕರ ಸ್ಥೈರ್ಯ ಹೆಚ್ಚಿಸಿತ್ತು. ಅವರು ಹಲವಾರು ಜನರಿಗೆ ಬುದ್ಧಿ ಕಲಿಸುವ ವಿಚಾರದಲ್ಲಿದ್ದರು. ಆದರೆ ಗೌರಿ ಅಮ್ಮನ ಹತ್ಯೆಯ ನಂತರ ಇಡೀ ದೇಶ ಒಂದಾಗಿ ಪ್ರತಿಭಟನೆಗೆ ಇಳಿದಿದ್ದೂ, ಸರಕಾರವು ಶತಾಯು ಗತಾಯು ತಪ್ಪಿತಸ್ತರನ್ನು ಹುಡುಕಲಾರಂಭಿಸಿದ್ದೂ ಕೊಲೆಗಡುಕರ ಮನೋ ಸ್ಥೈರ್ಯವನ್ನು ಕುಗ್ಗಿಸಿತ್ತು. ಇಲ್ಲದೆ ಹೋಗಿದ್ದರೆ ಇನ್ನೇಷ್ಟು ಅನಾಹುತಗಳಾಗುತ್ತಿದ್ದವೋ" ಎನ್ನುತ್ತಾರೆ ಹಿರಿಯ ಪತ್ರಕರ್ತ ನರಸಿಂಹ ಮೂರ್ತಿ.

ಪತ್ರಿಕೆ ನಡೆಸುವುದು ಸುಲಭದ ಕೆಲಸವಲ್ಲ. ಅಪ್ಪನಂತೆ ತನ್ನದೂ ಜಾಹಿರಾತು ಹೊರತುಪಡಿಸಿದ ಪತ್ರಿಕೆಯನ್ನಾಗಿಸುವ ಇಚ್ಛೆ ಗೌರಿಯವರದು. ಒಂದು ದಿನ ಗೌರಿಯವರು ವಿಶೇಷ ಸಂಚಿಕೆಗೆ ಜಾಹಿರಾತು ಪಡೆಯಲು ಎಂ. ಬಿ. ಪಾಟೀಲರ ಬಿ. ಎಲ್. ಡಿ. ಆಫಿಸಿಗೆ ಬಂದಿದ್ದರು. ಆಗ ಗೌರಿ ಲಂಕೇಶರನ್ನು ಸಚಿವ

In Public domain. Digitization Muthulakshmi Research Academy
ಪಾಟೀಲರು ಪರಿಚಯಿಸಿದ್ದರು. ಪೀಚು ದೇಹದ ಆಧುನಿಕ ಹೆಣ್ಣಾಗಿದ್ದರು ಗೌರಿ ಲಂಕೇಶ. ಲಿಂಗಾಯತ ಹೋರಾಟದ ಪರ್ವ ದಿನಗಳವು. ಲಿಂಗಾಯತ ಧರ್ಮದ ಬಗ್ಗೆ, ಹೋರಾಟದ ಬಗ್ಗೆ ಅನೇಕ ಲೇಖನಗಳನ್ನು ಪ್ರಕಟಿಸುತ್ತಿದ್ದರಂತೆ ಗೌರಿಲಂಕೇಶ. "ನಾನು ಪ್ರತಿವಾರವು ವೀರಶೈವ-ಲಿಂಗಾಯತ-ಹಿಂದೂ ಮಧ್ಯ ಇರುವ ವ್ಯತ್ಯಾಸಗಳ ಬಗ್ಗೆ ಲೇಖನಗಳನ್ನು ಬರೆಯುತ್ತಲೇ ಇದ್ದೇ. ಇನ್ನಷ್ಟು ಶಾರ್ಪ ಆಗಿ ಬರಲಿ ಎಂದು ನಮ್ಮನ್ನೆಲ್ಲ ಹುರುದುಂಬಿಸುತ್ತಿದ್ದರು" ಎನ್ನುತ್ತಾರೆ ಯೋಗೇಶ ಮಾಸ್ತರ. ಕಲ್ಬುರ್ಗಿ ಬೃಹತ್ ಸಾರ್ವಜನಿಕ ಸಭೆಯಲ್ಲಿ ಗೌರಿ ಲಂಕೇಶರವರಿಗೆ ಬಸವಾಂಜಲಿ ಅರ್ಪಿಸಿ, ಲಿಂಗಾಯತ ಸ್ವತಂತ್ರ ಧರ್ಮದ ಕಾಣಿಕೆಯನ್ನು ಅವರಿಗೆ ನೀಡಲು ಬಯಸಿ ಕಣ್ಣಿರಾಗಿದ್ದೆವು.

ಸೈದ್ಧಾಂತಿಕವಾಗಿ ಸಾಗಬೇಕಾದ ಹೋರಾಟವು ಹಿಂಸಾ ಮಾರ್ಗಹಿಡಿದಿತ್ತು. ಶರಣ ಧರ್ಮ ಶಾಂತಿಯನ್ನು ವೈಚಾರಿಕತೆಯನ್ನು ಬೆಳಸಿದ ಧರ್ಮ. ಇವನಾರವ ಇವನಾರವ ಎನ್ನದೆ ಎಲ್ಲರನ್ನೂ ಅಪ್ಪಿಕೊಂಡ ಧರ್ಮ. ಲಿಂಗಾಯತ ಹೋರಾಟವು ಸಮಾಜದ ಎಲ್ಲ ವರ್ಗದ ಜನರನ್ನು ಕೂಡಿಸುವುದಾಗಿತ್ತು. 'ಧರ್ಮ ಒಡೆಯುತ್ತಿದ್ದಾರೆ' ಎಂದು ಲಿಂಗಾಯತರ ಮೇಲೆ ವೈದಿಕ ಮೇಡಿಯಾಗಳು ಹರಿಹಾಯುತ್ತಿದ್ದರು. 'ಯಾವ ಧರ್ಮವನ್ನು ಯಾರು ಒಡೆಯುತ್ತಿದ್ದಾರೆ' ? ಎಂದು ಅವರು ತಿಳಿಸುತ್ತಿರಲಿಲ್ಲ. "ಕೂಡಿಯೇ ಇಲ್ಲ ಹೀಗಾಗಿ ಸಮಾಜ ಒಡೆಯುವ ಪ್ರಶ್ನೆಯೇ ಬರುವದಿಲ್ಲ" ಎಂದು ಡಾ. ಜಾಮದಾರ ವೀರಶೈವ ಮತ್ತು ಹಿಂದೂ ಧರ್ಮಾಧಿಕಾರಿಗಳ ವಿರುದ್ಧ ಗುಡುಗಿದ್ದರು. (ವಿಜಯ ಕರ್ನಾಟಕ) ಅದಕ್ಕೂ ಸ್ವಲ್ಪ ಮುಂದೆ ಹೋಗಿ ನಾನು "ಹಿಂದೂ ಧರ್ಮ ಒಡೆದದ್ದು ಹನ್ನೆರಡನೆಯ ಶತಮಾನದಲ್ಲಿ. ಆ ಕಾರ್ಯ ಮಾಡಿದವರು ಬಸವಣ್ಣನವರು " ಎಂದು ಹೇಳಿದ್ದೆ. ಅದನ್ನೇ ಮುಂದಿನ ದಿನಗಳಲ್ಲಿ ಮಾನ್ಯ ಮುಖ್ಯಮಂತ್ರಿಯವರು ಪುನರುಚ್ಚರಿಸಿದ್ದರು.

ಅಕ್ಟೋಬರ್ ೨೧,೨೦೧೭ರಂದು ನಾವು ಪತ್ರಿಕಾ ಗೋಷ್ಠಿಯನ್ನು ಕರೆದು ಆರ್. ಎಸ್. ಎಸ್. ನಿಲುವುಗಳ ಬಗ್ಗೆ ಸದೀರ್ಘವಾಗಿ ಮಾತಾಡಿದ್ದೆವು. "ಲಿಂಗಾಯತರ ಹೋರಾಟದಿಂದ ಪೇಜಾವರ ಶ್ರೀಗಳು ಮತ್ತು ಆರ್. ಎಸ್. ಎಸ್. ನಾಯಕರು ಅತೀ ಗಾಬರಿಯಾಗಿದ್ದಾರೆ. ಲಿಂಗಾಯತರು ದೇಶ ಭಕ್ತರು, ನಮ್ಮ ಇತಿಹಾಸ ಪುರುಷರು ಈ ಭೂಮಿಗಾಗಿ ಪ್ರಾಣ ತೆತ್ತಿದ್ದಾರೆ, ಕೆಳದಿ ರಾಜರು, ಬೆಳವಡಿ ಮಲ್ಲಮ್ಮ, ಕಿತ್ತೂರ ಚೆನ್ನಮ್ಮ, ಮೈಲಾರ ಮಹಾದೇವಪ್ಪ ದೇಶಕ್ಕಾಗಿ ರಕ್ತ ಚಲ್ಲಿದ್ದಾರೆ. ಡಾ. ಎಸ್ ನಿಜಲಿಂಗಪ್ಪನವರಲ್ಲದೆ ಅನೇಕ ಲಿಂಗಾಯತ ನಾಯಕರು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಜೈಲುವಾಸವನ್ನು ಅನುಭವಿಸಿದ್ದಾರೆ. ಎರಡನೆಯ ಮಹಾಯುದ್ಧದಲ್ಲಿ ಲಿಂಗಾಯತ ರೆಜಿಮಂಟ್ ಸ್ಥಾಪನೆ ಮಾಡಿ, ಆಳುವ ಸರಕಾರಗಳಿಗೆ ನಿಷ್ಠೆಯನ್ನು ತೋರಿದ್ದಾರೆ, ಸ್ವಾತಂತ್ರ್ಯಕ್ಕಾಗಿ ಉಪವಾಸ

In Public domain. Digitization Muthulakshmi Research Academy
ಮಾಡಿ ಮಡಿದಿದ್ದಾರೆ, ಎಂದು ಹೇಳುತ್ತ ಲಿಂಗಾಯತರೇನು ಭಯೋತ್ಪಾದಕರೆ? ದೇಶದ್ರೋಹಿಗಳೆ? ರಾಷ್ಟ ಭಕ್ತಿಗೆ ಭಂಗ ತರುವವರೆ? ಇವರಿಂದ ದೇಶಕ್ಕೆ ಯಾವ ತರಹದ ಹಾನಿಯಾಗಿದೆ? ಖಾರವಾಗಿ ಆರ್ ಎಸ್. ಎಸ್. ಸಂಘಟನೆ ರಕ್ತಪಾತದ ಬಗ್ಗೆ ಮಾತುಗಳಿಗೆ ಉತ್ತರ ಕೊಟ್ಟಿದ್ದರು. "ಲಿಂಗಾಯತ ಹೋರಾಟ ತೀವ್ರಗೊಂಡರೆ ರಕ್ತಪಾತ ಆಗಲಿದೆ ಎಂದು ಸಂಘಪರಿವಾರದವರು ಹೇಳಿದ್ದಾರೆ. ಈಗಾಗಲೇ ಸಿದ್ಧಾಂತಕ್ಕೆ ಹೋರಾಟ ಮಾಡಿದ ಮೂವರು ಲಿಂಗಾಯತರು ಬಲಿಯಾಗಿದ್ದಾರೆ. ಎಂದು ನಾವು ಪತ್ರಿಕಾ ಗೋಷ್ಠಿಯಲ್ಲಿ ಹಿಂದೂ ಸಂಘಟನೆಗಳ ಬಗ್ಗೆ ಮಾತಾಡಿದ್ದೆವು.[೧೭]

"ಪಂಚಪೀಠಗಳು ಮತ್ತು ವೀರಶೈವ ಮಹಾಸಭಾ ಬಗ್ಗೆ ಮಾತೆ ಮಹಾದೇವಿ ಅವರು ಸಲ್ಲದ ಮಾತುಗಳನ್ನಾಡಿದ್ದು ಅವರ ವಿರುದ್ದ ಕಾನೂನು ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ವೀರಶೈವ ಲಿಂಗಾಯತ ಸಮನ್ವಯ ಸಮಿತಿ ಸಂಘಟಕರೊಂದಿಗೆ ಚರ್ಚಿಸಲಾಗುವುದು"[೧೮] ಎಂದು ರಂಭಾಪುರಿ ಪೀಠದ ಜಗದ್ಗುರು ಡಾ. ಪ್ರಸನ್ನ ರೇಣುಕ ವೀರಸೋಮೇಶ್ವರ ಸ್ವಾಮೀಜಿ ಹೇಳಿಕೆ ನೀಡಿದ್ದರು. ಶ್ರಿಮಧ್ ವೀರಶೈವ ಸದ್ಬೋಧನಾ ಸಂಸ್ಥೆ ದಾವಣಗೆರೆ ಘಟಕದವರು ದಿನಾಂಕ ೩೧. ೭. ೨೦೧೭ರಂದು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿ ಮಾತೆ ಮಾಹಾದೇವಿಯವರ ನಡೆಯನ್ನು ಖಂಡಿಸಿದ್ದರು. ಇಂತಹದೆ ಇನ್ನೊಂದು ಪತ್ರವು ಅಖಿಲ ಕರ್ನಾಟಕ ಕ್ಷೇಮಾಭಿವೃದ್ಧಿ ಸಂಘ ,ವಿಜಾಪುರ ಘಟಕವು ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿ "ಈ ಧರ್ಮವನ್ನು ಒಡೆಯಲಿಕ್ಕೆ ಮತ್ತು ಅದರ ವಿರುದ್ಧ ಅವಹೇಳನ ಮಾಡುತ್ತಿರುವ ವ್ಯಕ್ತಿಗಳನ್ನು ಬಂಧಿಸಬೇಕು" ಎಂಬ ಒತ್ತಾಯವನ್ನು ಮಾಡಿದ್ದರು. ದಾರವಾಡದ ಅರಳಿಕಟ್ಟಿ ಗ್ರಾಮ ಪಂಚಾಯತ ವತಿಯಿಂದ ಸಲ್ಲಿಸಿದ ಅರ್ಜಿಯಲ್ಲಿ "ಮಾತೆ ಮಹಾದೇವಿಯವರು ಪಂಚಪೀಠಗಳ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು" ಎಂದು ರಾಜ್ಯ ಸರ್ಕಾರವನ್ನು ವತ್ತಾಯಿಸಿದ್ದರು. ಮಾತೆ ಮಹಾದೇವಿಯವರ ಚಾರಿತ್ರ ಹರಣಮಾಡುವ ವೀರಶೈವ ಗುಂಪಿನವರ ಒಂದು ಅನಾಮದೇಯ ಪತ್ರವು ಮುಖ್ಯಮಂತ್ರಿಗಳ ಕಚೇರಿಗೆ ಸಲ್ಲಿಸಲ್ಪಟ್ಟಿತ್ತು.

ಕೊನೆ ಟಿಪ್ಪಣಿಗಳು:

೧. ಪ್ರಜಾವಾಣಿ ಜುಲೈ ೨೭, ೨೦೧೭.

೨. ಪ್ರಜಾವಾಣಿ, ಸೆಪ್ಟೆಂಬರ್ ೧೭, ೨೦೧೭. ಸಂದರ್ಶಕರು ಬಿ.ಎಸ್. ಷಣ್ಮುಖಪ್ಪ.

೩. ಪ್ರಜಾವಾಣಿ ಸೆಪ್ಟೆಂಬರ್ ೧೧, ೨೦೧೭.

೪. ಪ್ರಜಾವಾಣಿ ಮಾರ್ಚ್ ೨೫, ೨೦೧೮.

In Public domain. Digitization Muthulakshmi Research Academy
೫. ಪ್ರಜಾವಾಣಿ ಅಗಷ್ಟ ೩೧, ೨೦೧೭.
೬. ಅಡ್ಡ ಪಲ್ಲಕ್ಕಿ ಉತ್ಸವ ಮತ್ತು ದಸರಾ ದರ್ಬಾರು, ಲೇ: ಪ್ರೊ.ಸಿ.ಎಚ್.ಮರಿದೇವರು.
೭ ಪ್ರಜಾವಾಣಿ ಜುಲೈ ೩೦, ೨೦೧೭.
೮. ಪ್ರಜಾವಾಣಿ ಮಾರ್ಚ್ ೨೨, ೨೦೧೮.
೯. ಪ್ರಜಾವಾಣಿ ಮಾರ್ಚ್ ೧೪, ೨೦೧೮.
೧೦. ಆಧಾರ; ಕುರುಬರ ಕುಲಗುರು ರೇವಣಸಿದ್ಧ; ಲೇ. ಚಂದ್ರಕಾಂತ ಬಿಜ್ಜರಗಿ.
೧೧ ವಿವರಕ್ಕಾಗಿ ಅನುಬಂಧ; ವೀರಶೈವ ಓದಿ.
೧೨. ಪ್ರಜಾವಾಣಿ ಸೆಪ್ಟೆಂಬರ್ ೧೮,೨೦೧೭
೧೩ ಶಿವಯೋಗ ಮಂದಿರ: ಲಾರ್ಡ್ ಮೆಕಾಲೆ ಶಿಕ್ಷಣನೀತಿಯು ಭಾರತದ ಇತಿಹಾಸವನ್ನೇ ಬದಲಾಯಿಸಿತು. ಕರ್ಮಸಿದ್ಧಾಂತವನ್ನು ನಂಬಿದ್ದ ಭಾರತೀಯರು ಕಾಯಕಸಿದ್ಧಾಂತದಿಂದ ಕರ್ಮವನ್ನೂ ಬದಲಾಯಿಸಬಹುದು ಎಂಬ ಸತ್ಯ ಕಂಡುಕೊಂಡು ಬಹುಪಾಲು ಆಳುವ ವರ್ಗದ ರಾಜ ಮಹಾರಾಜರು, ಅವರ ಮಂತ್ರಿ ಪರಿಷತ್ ಸದಸ್ಯರು, ಭಾರತೀಯ ಶ್ರೀಮಂತರು ತಮ್ಮ ಮಕ್ಕಳನ್ನು ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಕಳಿಸಿದರು. ಇತ್ತ ಭಾರತದಲ್ಲಿಯೂ ಬ್ರಿಟಿಷರು ಇಂಗ್ಲಿಷ್ ಶಾಲೆಗಳನ್ನು ತೆರೆದರು. ಅವರಿಗೆ ಮುಖ್ಯವಾಗಿ ಇಂಗ್ಲಿಷ್ ಭಾಷೆಯನ್ನು ಅರಿತ ಕಾರಕೂನರ ಅವಶ್ಯಕತೆ ಇತ್ತು. ಭಾರತೀಯರಿಗೆ ಇಂಗ್ಲಿಷ್ ಶಿಕ್ಷಣ ನೀಡಿ ಕೆಳವರ್ಗದ ಆಡಳಿತಕ್ಕೆ ಅವರನ್ನು ನಿಯಮಿಸಿದಲ್ಲಿ ಆಡಳಿತ ವೆಚ್ಚದಲ್ಲಿ ಗಮನಾರ್ಹ ಉಳಿತಾಯ ಸಾಧಿಸುವ ಬಹುಮುಖ್ಯ ಕಾರಣವೂ ಇತ್ತು. ಅಂದಿನವರೆಗೆ ಬ್ರಾಹ್ಮಣರು ಮಾತ್ರ ಓದು ಬರಹ ಬಲ್ಲವರಾಗಿದ್ದರು. ಅವರು ಕೆಳವರ್ಗದ ಕೆಲಸಕ್ಕೆ ಬ್ರಿಟಿಷರಿಗೆ ಸಹಾಯಕರಾಗಿದ್ದರು. ಬ್ರಾಹ್ಮಣರಿಗೆ ಸಮುದ್ರ ದಾಟುವುದು ಧರ್ಮಬಾಹಿರವಾಗಿತ್ತು. ಮಹಾತ್ಮ ಗಾಂಧಿಯವರು ಹೆಚ್ಚಿನ ವ್ಯಾಸಂಗಕ್ಕಾಗಿ ಲಂಡನ್ನಿಗೆ ತೆರಳಲು ಸಿದ್ಧವಾದಾಗ ಅವರಿಗೆ ಅವರದೇ ಸ್ವಧರ್ಮದವರು ಅಡ್ಡಿ ಮಾಡಿದ್ದರು. "ಸಮುದ್ರ ದಾಟಲು ನಮ್ಮ ಧರ್ಮದಲ್ಲಿ ಅವಕಾಶವಿಲ್ಲ"ವೆಂದು ಪ್ರತಿಪಾದನೆ ಮಾಡಿದ್ದರು. ಲಿಂಗಾಯತರಿಗೆ ಅಂತಹ ಕಟ್ಟಳೆಗಳೇನೂ ಇರಲಿಲ್ಲ. ಕನ್ನಡಿಗ ಡೆಪ್ಯುಟಿ ಚನ್ನಬಸಪ್ಪನವರು ಇಂಗ್ಲಿಷ್ ವ್ಯಾಸಂಗ ಮಾಡಿ ಉನ್ನತ ಹುದ್ದೆಯಲ್ಲಿದ್ದರು. ಅವರು ಲಿಂಗಾಯತ ಯುವಕರ ಕಣ್ಮಣಿಯಾಗಿದ್ದರೆ. ಅರಟಾಳ ರುದ್ರಗೌಡರು, ಗಿಲಗಂಚಿ ಗುರುಸಿದ್ದಪ್ಪನವರು, ಒಂಟಮುರಿ ದೇಸಾಯಿವರು ಇಂಗ್ಲಿಷ್ ಶಾಲೆಗಳಿಗೆ ದಾಖಲಾದರು. ಇವರು ಬ್ರಿಟಿಷ್ ಅಧಿಕಾರಿಗಳ ಸಹಾಯಕರಾಗಿ ಕಾರ್ಯ ಮಾಡುವಾಗ ಆಡಳಿತದಲ್ಲಿದ್ದರೆ ಏನೆಲ್ಲ ಸಾದಿಸಬಹುದೆಂದು ಕಣ್ಣಾರೆ ಕಂಡಿದ್ದರು. ಲಿಂಗಾಯತರ ಬಡತನಕ್ಕೆ, ಅಜ್ಞಾನಕ್ಕೆ ಶಿಕ್ಷಣವೇ ಮೂಲಕಾರಣವೆಂದರು. ಲೌಕಿಕ ಶಿಕ್ಷಣವಲ್ಲದೆ ಧಾರ್ಮಿಕ ಶಿಕ್ಷಣವೂ ಬೇಕೆಂದರು. ವೇದ, ಉಪನಿಷತ್, ಬ್ರಾಹ್ಮಣಕ, ಪುರಾಣಗಳು ಸಂಸ್ಕೃತ ಭಾಷೆಯಲ್ಲಿದ್ದವು. ಅವುಗಳನ್ನು ಓದಿದವರು ಮಾತ್ರ ಸಮಾಜದ ಮೇಲ್ವರ್ಗದಲ್ಲಿ ಗುರುತಿಸಿಕೊಳ್ಳುತ್ತಿದ್ದರು. ಲೌಕಿಕ ಶಿಕ್ಷಣ ಸಂಸ್ಥೆಗಳೊಂದಿಗೆ ಧಾರ್ಮಿಕ

In Public domain. Digitization Muthulakshmi Research Academy

ಶಿಕ್ಷಣದ ಅವಶ್ಯಕತೆ ಕಂಡು ವೀರಶೈವ ಮಹಾಸಭೆಯ ನಾಲ್ಕನೆಯ ಅಧಿವೇಶನದಲ್ಲಿ ಅದನ್ನು ಪ್ರಸ್ತಾಪಿಸಿದರು.

೧೯೦೮ರಲ್ಲಿ ನಡೆದ ಶ್ರೀಮದ್ವೀರಶೈವರ ನಾಲ್ಕನೆಯ ಮಹಾ ಅಧಿವೇಶನದಲ್ಲಿ ಕೈಗೊಂಡ ನಿರ್ಣಯ "ವೀರಶೈವ ಸಮಾಜದಲ್ಲಿ ಸದ್ಯ ದುರ್ದೈವದಿಂದ ಧರ್ಮಗ್ಲಾನಿಯುಂಟಾಗುತ್ತಿದ್ದು, ಅದನ್ನು ಹೋಗಲಾಡಿಸುವುದಕ್ಕೆ 'ಶೂನ್ಯಸಿಂಹಾಸನಾಧ್ಯಕ್ಷರು' 'ಪಟ್ಟದ ದೇವರು' 'ಚರಮೂರ್ತಿಗಳು' ಮೊದಲಾದ ಪೂಜ್ಯರಾದ ಸ್ವಾಮಿಗಳಿಗೆ ಯೋಗ್ಯವಾದ ಶಿಕ್ಷಣವನ್ನು ಕೊಟ್ಟು, ಅವರಿಂದ ಸಮಾಜದಲ್ಲಿ ಭಕ್ತಮಾಹೇಶ್ವರರಿಬ್ಬರಿಗೂ ಶಿವಾನುಭವ ಶಾಸ್ತ್ರಜ್ಞಾನವನ್ನು ಪ್ರಸಾರಗೊಳಿಸಲಿಕ್ಕೂ ಶ್ರೀ ಶಿವಯೋಗಮಂದಿರವನ್ನು ಸ್ಥಾಪಿಸಿತಕ್ಕದ್ದು" ಎಂಬ ನಿರ್ಣಯಯನ್ನು ಅಂಗೀಕರಿಸಲಾಯಿತು. ಈಗಾಗಲೇ ಅಸ್ತಿತ್ವದಲ್ಲಿರುವ ಪಂಚಪೀಠಗಳು ತಮ್ಮ ಕರ್ತವ್ಯಲೋಪದಿಂದಲ್ಲವೇ ಇವರು ಬೇರೊಂದು ಸಂಸ್ಥೆಯನ್ನು ಕಟ್ಟಿದ್ದು. ಈ ಸಂಸ್ಥೆಯ ರೂವಾರಿಗಳೆಲ್ಲರೂ ವಿರಕ್ತಮಠಾಧೀಶರಾಗಿದ್ದವರು. ಅವರಲ್ಲಿ ಪ್ರಮುಖರು ಹಾನಗಲ್ ಕುಮಾರ ಸ್ವಾಮಿಗಳು, ಬಿಳ್ಳೂರು ಮಠದ ಗುರುಬಸವ ಸ್ವಾಮಿಜಿಯವರು(ಮೂಲ ಹೆಸರು: ಜೇವಪ್ಪ, ರಾಮನಗೌಡ ಪಾಟೀಲ) ಮತ್ತು ಚಿತ್ತರಗಿ-ಇಲಕಲ್ ಮಠದ ಮಹಾಂತಶಿವಯೋಗಿಗಳು. ದಾವಣಗೆರೆಯ ಚಂದ್ರಶೇಖರ ಶಾಸ್ತ್ರಿಗಳು ಮಂಡಿಸಿದ್ದ ಠರಾವನ್ನು ಬೆಂಬಲಿಸಿ, ಆರ್ಥಿಕ, ಸಾಮಾಜಿಕ ಸ್ಥಾನಮಾನ ನೀಡಿದವರು ಸೋಲಾಪುರದ ಶ್ರೀಮಂತ ವಾರದ ಮಲ್ಲಪ್ಪನವರು, ರಾ.ಬ.ಅರಟಾಳ ರುದ್ರಗೌಡರು, ದಾವಣಗೆರೆಯ ಮಾಗಾನಹಳ್ಳಿ ದೊಡ್ಡಬಸಪ್ಪನವರು, ಹುಬ್ಬಳಿಯ ವಕೀಲರಾದ ಸಿದ್ದರಾಮಪ್ಪ ಪಾವಟೆಯವರು. ಇದರ ಭಾಗವಾಗಿ ಚಿತ್ತರಗಿ-ಇಳಕಲ್ ಮಠದ ಪೂಜ್ಯ ಮಹಾಂತ ಶಿವಯೋಗಿಗಳು ಆಶೀರ್ವಾದ ನೀಡಿ ಅವರು ತೋರಿದ ಸ್ಥಳದಲ್ಲಿ ಫೆಬ್ರವರಿ ೭, ೧೯೦೯ರ ರಥಸಪ್ತಮಿಯ ದಿನದಂದು ಶಿವಯೋಗಮಂದಿರವನ್ನು ಸ್ಥಾಪಿಸಲಾಗಿತ್ತು"(ಅರಟಾಳ ರುದ್ರಗೌಡರ ಚರಿತ್ರೆ, ಪು.ಸಂ. ೩೩೨).

೧೪. ಪ್ರಜಾವಾಣಿ ಸೆಪ್ಟೆಂಬರ್ ೨, ೨೦೧೭.

೧೫. ವಿವರಕ್ಕಾಗಿ ಟಿಪ್ಪಣಿ ೧೩ ನೋಡಿ.

೧೬. ವಿಜಯ ಕರ್ನಾಟಕ ಪತ್ರಿಕೆ ವರದಿ.

೧೭. ಪ್ರಜಾವಾಣಿ ಅಕ್ಟೋಬರ್ ೨೨, ೨೦೧೭

೧೮. ಪ್ರಜಾವಾಣಿ ಅಕ್ಟೋಬರ್ ೧೫, ೨೦೧೭

In Public domain. Digitization Muthulakshmi Research Academy

ಅಧ್ಯಾಯ ಆರು

ತಾರ್ಕಿಕ ಅಂತ್ಯದತ್ತ ತಿರುಗಿದ ಚಳುವಳಿ ಹೆಜ್ಜೆಗಳು

ಬೀದರ್ ಮತ್ತು ಕಲ್ಬುರ್ಗಿ ರ‍್ಯಾಲಿಗಳ ಹಿಂದೆ ಮಾತೆ ಮಹಾದೇವಿಯವರ ಕೈಚಳಕ ಸ್ಪಷ್ಟವಾಗಿ ಗೋಚರಿಸುತ್ತದೆ. ವೀರಶೈವ ಮಹಾಸಭೆಯವರು ಮುಖ್ಯಮಂತ್ರಿಗಳನ್ನು ಸನ್ಮಾನಿಸಿದ ಎರಡು ದಿನಗಳ ಅಂತರದಲ್ಲಿ ಅವರು ತಮ್ಮ ಬೀದರ್ ಜಿಲ್ಲೆಯ ರಾಷ್ಟ್ರೀಯ ಬಸವದಳದ ಪ್ರಮುಖರನ್ನು ಸಂಪರ್ಕಿಸಿ ಬೀದರ್‌ನಲ್ಲಿ ಬೃಹತ್ ಸಮಾವೇಶವನ್ನು ಆಯೋಜಿಸಲು ಹೇಳುತ್ತಾರೆ. ಅದರ ನಂತರ ಕಲಬುರ್ಗಿ ರ‍್ಯಾಲಿಯನ್ನು ನಾವು ಆಯೋಜಿಸುತ್ತೇವೆ ಎಂದು ಮುಂದೆ ಬಂದವರು ಅವರ ಸಂಘಟನೆಗಳ ಪ್ರಮುಖರು. ಅವರಲ್ಲಿ ಆರ್.ಜಿ.ಶೆಟಗಾರ ಮತ್ತು ರವೀಂದ್ರ ಶಾಬಾದಿಯವರು ಪ್ರಮುಖರು. ಇವರಿಬ್ಬರೂ ಮಾತೆ ಮಹಾದೇವಿಯವರ ರಾಷ್ಟ್ರೀಯ ಬಸವದಳದ ಪ್ರಮುಖ ಪದಾಧಿಕಾರಿಗಳು. ಇವರ ತಯಾರಿಯನ್ನು ಗಮನಿಸಿದರೆ ಲಿಂಗಾಯತ ಚಳುವಳಿಯಲ್ಲಿ ಕಾಂಗ್ರೆಸ್ ಪಕ್ಷ ಹಾಗೂ ಮಾತೆ ಮಹಾದೇವಿಯವರ ಮಧ್ಯ ಏನಾದರೂ ಒಳಒಪ್ಪಂದವಾಗಿತ್ತೇ ಎಂಬ ಅನುಮಾನ ಬಾರದೇ ಇರದು.

ಕಲಬುರ್ಗಿ ಸಭೆಯ ಪೂರ್ವತಯಾರಿ: ಗಡಿನಾಡ ಬೀದರ್‌ನಲ್ಲಿ ಜರುಗಿದ ಸಮಾವೇಶದ ಕಂಪು ಉತ್ತರ ಕರ್ನಾಟಕವಲ್ಲದೆ ದಕ್ಷಿಣ ಮಹಾರಾಷ್ಟ್ರದಲ್ಲಿ ಪಸರಿಸಿತು. ಕಲ್ಬುರ್ಗಿ ರ‍್ಯಾಲಿಯ ವಿಷಯವನ್ನು ಚರ್ಚಿಸಲು ಹಿರಿಯರಾದ ಶರಣ ಶ್ರೀ ನಡಕಟ್ಟಿಯವರ ಅಧ್ಯಕ್ಷತೆಯಲ್ಲಿ ಬಸವಪರ ಸಂಘಟನೆಗಳ ಪದಾಧಿಕಾರಿಗಳೆಲ್ಲ ಸಭೆ ಸೇರಿ, ಲಿಂಗಾಯತ ಸಮನ್ವಯ ಸಮಿತಿಯನ್ನು ರಚಿಸಿಕೊಂಡರು. ಅದರ ನೇತೃತ್ವವನ್ನು ಶ್ರೀ ಆರ್.ಜಿ.ಶೆಟಗಾರ ಮತ್ತು ಶಾಬಾದಿ

In Public domain. Digitization Muthulakshmi Research Academy

ವಹಿಸಿದರು. ಅಲ್ಲದೆ ತ್ವರಿತವಾಗಿ ಕಲಬುರ್ಗಿಯಲ್ಲಿ ಒಂದು ಬೃಹತ್ ಸಭೆಯನ್ನು ತಕ್ಷಣವೇ ಆಯೋಜಿಸಲು ಮುಂದಾದರು.

ಇತ್ತ ಪೂಜ್ಯ ಸ್ವಾಮೀಜಿಗಳ ಅಭಿಪ್ರಾಯ ಸಂಗ್ರಹದ ಜವಾಬ್ದಾರಿ ವಹಿಸಿಕೊಂಡಿದ್ದ ಕರ್ನಾಟಕ ಸರಕಾರದ ಸಚಿವರಲ್ಲಿ ಕಲಬುರ್ಗಿ ಜಿಲ್ಲೆಯ ಸಚಿವರಾದ ಡಾ.ಶರಣಪ್ರಕಾಶ ಪಾಟೀಲರು ಕೂಡ ಒಬ್ಬರು. ಈ ವಿಷಯವನ್ನು ಅವರ ಗಮನಕ್ಕೆ ತಂದು ವ್ಯವಸ್ಥಿತ ರೀತಿಯಲ್ಲಿ ಸಭೆ ಜರುಗಿಸಬೇಕೆಂಬ ಬಯಕೆಯನ್ನು ಸಚಿವರ ಎದುರಿನಲ್ಲಿ ಈ ಸಮನ್ವಯ ಸಮಿತಿಯವರು ಪ್ರಸ್ತಾಪ ಮಾಡಿದ್ದರು. ಕೆಲದಿನಗಳ ನಂತರ ಬೆಂಗಳೂರಿನಲ್ಲಿ ಸಚಿವ ಶ್ರೀ ಎಂ.ಬಿ.ಪಾಟೀಲರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಕಲಬುರ್ಗಿ ರ್‍ಯಾಲಿಯ ವಿಷಯ ಚರ್ಚೆಗೆ ಬಂತು. ಅದರ ಸಿದ್ಧತೆಯ ಬಗ್ಗೆ ತಿಳಿದುಕೊಳ್ಳಿಯೆಂದು ನನಗೆ ಮತ್ತು ಡಾ.ಜಾಮದಾರ ಅವರಿಗೆ ಸೂಚಿಸಿದರು. ನಾನೊಮ್ಮೆ ಕಲಬುರ್ಗಿಗೆ ಭೆಟ್ಟಿ ನೀಡಿ, ರ್‍ಯಾಲಿಯ ಸಿದ್ಧತೆಯ ಬಗ್ಗೆ ಸ್ಥಳೀಯರೊಂದಿಗೆ ಚರ್ಚಿಸಿದೆ. ಸರಿಯಾದ ತಯಾರಿಯಾಗಿಲ್ಲವೆಂದು ನನಗೆ ಮನವರಿಕೆ ಆಯಿತು. ಅದನ್ನು ಸಚಿವ ಶರಣಪ್ರಕಾಶ ಪಾಟೀಲರಿಗೆ ವಿವರಿಸಿದೆ. ಸಿದ್ಧತೆಗಳು ಸ್ಥಳೀಯ ಶಾಸಕರಾದ ಶ್ರೀ ಬಿ.ಆರ್.ಪಾಟೀಲರಿಗೂ ತೃಪ್ತಿ ತಂದಿರಲಿಲ್ಲ. ಅವರೂ ಕೂಡ ಸಭೆಯನ್ನು ಮುಂದೂಡುವಂತೆ ಸಲಹೆ ನೀಡಿದರು. ಸಭೆ ಮುಂದೂಡಲು ಆಯೋಜಕರನ್ನು ಸಚಿವ ಪಾಟೀಲರು ಕೇಳಿಕೊಂಡರು.

ಸೆಪ್ಟೆಂಬರ್ ೧೦ರಂದು ಸಮಾವೇಶ ನಡೆಸಲು ಸ್ಥಳೀಯ ಮುಖಂಡರು ನಿರ್ಧರಿಸಿದ್ದರು. ಅದನ್ನು ಬೆಂಗಳೂರಿನಲ್ಲಿದ್ದ ನಮ್ಮೆಲ್ಲರ ಗಮನಕ್ಕೂ ತಂದು ನಮಗೂ ಭಾಗವಹಿಸಲು ಆಹ್ವಾನ ನೀಡಿದ್ದರು. ಯಾವುದೇ ಸಭೆ ನಡೆಯುವ ಪೂರ್ವದಲ್ಲಿ ಆಯಾ ಸಭೆಗಳ ಪೂರ್ವಸಿದ್ಧತೆಗಳ ಬಗ್ಗೆ ಮನವರಿಕೆ ಮಾಡಿಕೊಳ್ಳಬೇಕೆಂದು ನಾವೀಗಾಗಲೆ ನಿರ್ಧರಿಸಿಯಾಗಿತ್ತು. ಕಲಬುರ್ಗಿಯಲ್ಲಿ ಆಯೋಜಿಸಲಿರುವ ಸೆಪ್ಟೆಂಬರ್ ೧೦ರಂದು ನಡೆಯಲಿರುವ ಸಭೆಯ ಪೂರ್ವತಯಾರಿಯನ್ನು ಪರೀಕ್ಷಿಸಲು ನಾನು ಡಾ.ಜಾಮದಾರ ಮತ್ತು ಡಾ.ಜಯಣ್ಣ ಕಲಬುರ್ಗಿಗೆ ಹೋದೆವು. ಸೆಪ್ಟೆಂಬರ್ ೩ ಭಾನುವಾರದಂದು ಬಸವಮಂಟಪದಲ್ಲಿ ಸಭೆ ಕರೆದಿದ್ದರು. ಅಂದಿನ ಸಭೆಯಲ್ಲಿ ಕಲಬುರ್ಗಿಯ ಬಸವಪರ ಸಂಘಟನೆಗಳ ಎಲ್ಲ ಪದಾಧಿಕಾರಿಗಳು ಭಾಗವಹಿಸಿದ್ದರು. ಶರಣೆ ಕೆ. ನೀಲಾ ಮತ್ತು ಪ್ರೊ.ಮೀನಾಕ್ಷಿ ಬಾಳಿ ಮಾತನಾಡಿದರು. ಅಂದಿನ ಸಭೆಯಲ್ಲಿ ಪ್ರಚಾರ ಸಮಿತಿ, ಸಂಘಟನಾ ಸಮಿತಿ, ಪ್ರಸಾದ ಸಮಿತಿ, ಮಹಿಳಾ ಸಂಘಟನಾ ಸಮಿತಿ ಮತ್ತು ಸಾಹಿತ್ಯ ಸಮಿತಿ ಎಂದು ಐದು ಸಮಿತಿಗಳನ್ನು ರಚಿಸಿ ಮುಂಬರುವ ರ್‍ಯಾಲಿಯಲ್ಲಿ ಸೇವೆ ಸಲ್ಲಿಸುವ ಕಾರ್ಯಕರ್ತರ ಹೆಸರು ಹಾಗೂ ಅವರ ದೂರವಾಣಿ ಸಂಖ್ಯೆಗಳನ್ನು ನೀಡಿದ್ದರು.

In Public domain. Digitization Muthulakshmi Research Academy
ಪ್ರಚಾರ ಸಮಿತಿ: ಸರ್ವಶ್ರೀ ಮಂಜುನಾಥ ಕಾಳೆ, ಶಿವಾನಂದ ಪಿಸ್ತಿ, ವಿಜಯಕುಮಾರ ತೇಗಲತಿಪ್ಪಿ, ಕಲ್ಯಾಣ ಕಮಾರ, ವಿ.ವೀರಣ್ಣ ಲೊಡ್ಡಣ, ಸತೀಶ ಸಜ್ಜನ, ಚಿತ್ತಾಪುರದ ನಾಗರಾಜ ಕಾಮಾ, ಅಯ್ಯಣ್ಣ ನಂದಿ, ಮನೋಹರ ಜೀವಣಗಿ, ಡಾ.ರಾಜಕುಮಾರ ಮಲ್ಕಪ್ಪಗೋಳ, ಮಲ್ಲನಗೌಡ ಪಾಟೀಲ, ವಿಶ್ವನಾಥ ಪಾಟೀಲ, ಧನರಾಜ ತಾಂಬೋಳೆ, ಅಶೋಕ ಕಟ್ಟಿಮನಿ, ಜಗದೇವಪ್ಪಾ ಪಾಟೀಲ, ಕೆ.ಬಿ. ಜಮಶೆಟ್ಟಿಯವರಿದ್ದರು.

ಸಂಘಟನಾ ಸಮಿತಿ: ಸರ್ವಶ್ರೀ ಶಿವಲಿಂಗಪ್ಪಾ ಬಂಡಕ, ಶಿವಶರಣ ದೇಗಾಂವ, ಸೋಮನಾಥ ರಬಶೆಟ್ಟಿ, ಮಲ್ಲನಗೌಡ ಬನ್ನೂರ, ಶಿವಶರಣಪ್ಪ ಕಲಶೆಟ್ಟಿ, ಜಗನ್ನಾತ ಬಿಳಗುಂಡಿ, ಅಣವೀರ ಕಾಳಗಿ, ರವೀಂದ್ರ ಸಜ್ಜನ ಸೆಟ್ಟಿ, ಜಗದೀಶ ಪಾಟೀಲ.

ಪ್ರಸಾದ ಸಮಿತಿ: ಸರ್ವಶ್ರೀ ಜಂಬನಗೌಡ ಶೀಲವಂತ, ಹಣಮಂತ ಕುಸನೂರ, ಬಸವರಾಜ ಮಂಕದ್, ಬಸವರಾಜ ಧೂಳಾಗುಂಡಿ, ಬಾಬುರಾವ ಸುಷೆಟ್ಟಿ, ಹಣಮಂತರಾವ ಪಾಟೀಲ ಹಾವನೂರ, ದಾದಾಗೌಡ ಪಾಟೀಲ, ಶಾಂತಪ್ಪ ಪಾಟೀಲ ಸಣ್ಣೂರ, ರಮೇಶ ಆರ್ ದುತ್ತರಗಿ, ಗುರುಬಸಪ್ಪ ಪಾಟೀಲ, ಶಿವಾನಂದ ಯಳವಂತಗಿ.

ಮಹಿಳಾ ಸಮಿತಿ: ಶರಣೆಯರಾದ ಮಾಲತಿ ರೇಷ್ಮೀ, ಮಹಾದೇವಿ ಕೆಸರಟಗಿ, ಸುಮಾ ಬಂದರವಾಡ, ಜಗದೇವಿ ಎಸ್. ಚಟ್ಟಿ, ನೀಲಾಂಬಿಕಾ ಚೌಕಿಮಠ, ಆಶಾದೇವಿ ಖೂಬಾ, ಸಾವಿತ್ರಿ ಪಾಟೀಲ, ವಿಶಾಲಕ್ಷಿ ಕರಡಿ, ಶಾಂತಾ ನಾಗೇಶ ವಾಲಿ, ಜಯಶ್ರಿ ಚಟ್ನಳ್ಳಿ, ಭವಾನಿ ಚಟ್ನಳ್ಳಿ, ಶಶಿಕಲಾ ದಂಡೋತಿ, ರೇಣುಕಾ ಡಾಂಗೆ, ಆಶಾ ಮಾಕಾ, ಅಂಬಿಕಾ ದುರ್ಗಿ, ವೀರಮ್ಮ ಆವಧೂತಮಠ.

ಈ ಸಮಿತಿಗಳಲ್ಲಿ ಕಲಬುರ್ಗಿ ಪಟ್ಟಣದ ಕೆಲ ಪ್ರಮುಖ ಲಿಂಗವಂತರಾದ ಲಿಂಗಾಯತ ಧರ್ಮವನ್ನು ಆಧರಿಸಿ ಬೆಳೆಸುತ್ತಿರುವ ಹೆಸರುಗಳು ಪಟ್ಟಿಗಳಲ್ಲಿ ಕಾಣಲಿಲ್ಲ. ಎಚ್.ಕೆ.ಇ. ಸೊಸೈಟಿಯ ಡಾ.ಬಿಳಗುಂದಿಯವರು, ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ನಿಗ್ಗುಡಗಿ, ಶರಣ ನಡಕಟ್ಟಿ, ಶರಣ ಮಹಗಾಂವಕರ ಮತ್ತು ಶರಣೆ ವಿಲಾಸವತಿ ಖೂಬಾ ಅವರ ಹೆಸರುಗಳು ಕಾಣಲಿಲ್ಲ. ಅವರು ನಮ್ಮೊಂದಿಗಿದ್ದಾರೆ ಎಂದು ಸಂಘಟಕರು ನಮಗೆ ತಿಳಿಸಲೂ ಇಲ್ಲ. ಅಸಲಿನಲ್ಲಿ ಇವರು ಲಿಂಗಾಯತ ಧರ್ಮಕ್ಕಾಗಿ ತನು ಮನ ಧನವನ್ನು ಧಾರೆಯೆರೆಯುವ ಬಸವಭಕ್ತರಾಗಿದ್ದರು. ಡಾ.ಬಿಳಗುಂದಿಯವರು ನಮಗೆ ಎಲ್ಲ ಸಹಾಯ ಸಹಕಾರ ನೀಡುವ ಭರವಸೆ ನೀಡಿ ನಮಗೆ ಅಂದು ಆತಿಥ್ಯ ನೀಡಿದ್ದರು. ಅಲ್ಲದೆ ಜಿಲ್ಲೆಯ ರಾಜಕೀಯ ನಾಯಕರನ್ನು ಸಂಪರ್ಕಿಸಿದಾಗ ಅವರಿಗೆ ರ‍್ಯಾಲಿಯ ಮಾಹಿತಿ ಇರಲಿಲ್ಲ. ಶಾಸಕರಾದ ಎಂ.ವೈ.ಪಾಟೀಲ, ಮಾಜಿ ಶಾಸಕರಾದ ಅಲ್ಲಮಪ್ರಭು ಪಾಟೀಲ ಮತ್ತು ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ

In Public domain. Digitization Muthulakshmi Research Academy

ಅನೇಕ ಮುಖಂಡರಿಗೆ ವಿಷಯ ಮುಟ್ಟಿಸಿರಲಿಲ್ಲ. ಇದೊಂದು ಪಕ್ಷಾತೀತವಾದ ಆಂದೋಲನವಾಗಿ ಮಾಡಲು ನಾವು ಪ್ರಯತ್ನಿಸುತ್ತಿದ್ದೆವು. ಜಿಲ್ಲೆಯ ಎಲ್ಲ ರಾಜಕೀಯ ಪಕ್ಷಗಳ ಹಿರಿಯ ಕಿರಿಯ ನಾಯಕರು ಸಭೆಯಲ್ಲಿ ಭಾಗವಹಿಸಬೇಕೆಂಬ ಅಪೇಕ್ಷೆ ನಮ್ಮದಾಗಿತ್ತು.

ಸಭೆ ನಡೆಯುವ ಸ್ಥಳ ಪರೀಕ್ಷಿಸಿದೆವು. ಸುಮಾರು ೫೦ ಸಾವಿರ ಜನರಿಗಾಗುವಷ್ಟು ಸ್ಥಳಾವಕಾಶ ಅಲ್ಲಿತ್ತು. ಅದು ನಮಗೆ ಸಾಲದೆ ಬರಬಹುದು ಎನಿಸಿತು. ಕಾರಣ ಹಿಂದಿನ ಸಭೆಯ ಅನುಭವ ನಮ್ಮನ್ನು ಎಚ್ಚರಿಸಿತ್ತು. ಬೆಳಗಾವಿಯ ಸಭೆಯನ್ನು ಕೆ.ಎಲ್.ಇ. ಸಂಸ್ಥೆಯ ಆವರಣದಲ್ಲಿ ಕೈಗೊಂಡಿದ್ದರು. ಐದು ಲಕ್ಷ ಜನ ಅಲ್ಲಿ ಸೇರಿದ್ದರು. ಬೊಗಾರ ವೇಸ ಸರ್ಕಲ್‌ದಿಂದ ಚೆನ್ನಮ್ಮನ ವೃತ್ತದವರೆಗೆ, ಇತ್ತ ಸಿವಿಲ್ ಹಾಸ್ಪಿಟಲ್ ಎದುರಿನ ರಸ್ತೆಗಳಲ್ಲಿಯೂ ನಿಲ್ಲಲು ಸಾಲದಷ್ಟು ಸ್ಥಳಾಭವವಾಗಿತ್ತು. ಅಂದು ಬೆಳಗಾವಿ ಸ್ತಬ್ಧವಾಗಿತ್ತು. ಇನ್ನೊಂದು ವಿಭಾಗವಾದ ಕಲ್ಬುರ್ಗಿಯಲ್ಲಿಯೂ ಇದೇ ಅನುಭವವಾಗುವುದೆಂಬ ವಿಶ್ವಾಸ ನಮ್ಮದಾಗಿತ್ತು. ಸ್ಥಳೀಯ ರಾಜಕೀಯದ, ಬಣರಾಜಕೀಯದ ಕಾರಣ ಸಂಘಟಕರು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎಂಬ ವಾಸನೆ ನಮಗೆ ಬಡಿಯಿತು.

ನಾವು ಸಭೆಯ ಸಿದ್ಧತೆಗಳ ಬಗ್ಗೆ ಕೇಳಿದಾಗ ಕೆಲ ವಿಷಯಗಳಲ್ಲಿ ಸಮರ್ಪಕ ಉತ್ತರ ದೊರೆಯಲಿಲ್ಲ. ಸಭೆಯನ್ನು ಮತ್ತೊಮ್ಮೆ ಮುಂದೂಡುವುದು ಒಳಿತು ಎಂದು ಡಾ.ಜಾಮದಾರ ಅಭಿಪ್ರಾಯ ವ್ಯಕ್ತಪಡಿಸಿದರು. ಸಭೆಯಲ್ಲಿ ಚರ್ಚಿತವಾದ ವಿಷಯವನ್ನು ಆಗ ದೆಹಲಿಯಲ್ಲಿ ಬೀಡು ಬಿಟ್ಟಿದ್ದ ಸಚಿವ ಎಂ.ಬಿ.ಪಾಟೀಲರ ಗಮನಕ್ಕೆ ತಂದು ಅವರ ಅಭಿಪ್ರಾಯವನ್ನು ಪಡೆದು ಸಭೆಯನ್ನು ಮತ್ತೊಮ್ಮೆ ಮುಂದೂಡಲು ನಿರ್ಧರಿಸಿದೆವು. ಅದನ್ನು ಸಚಿವ ಶರಣಪ್ರಕಾಶ ಪಾಟೀಲರ ಗಮನಕ್ಕೆ ತಂದು ಎರಡು ವಾರಗಳ ನಂತರ ಸಭೆ ನಡೆಸಬಹುದೆಂದು ಸೂಚಿಸಿದೆವು. ಕಾರ್ಯಕರ್ತರು ಅಸಮಾಧಾನ ವ್ಯಕ್ತಪಡಿಸಿದರೂ ನಮ್ಮ ಅಭಿಪ್ರಾಯ ಮನ್ನಿಸಿ, ತಮ್ಮ ಒಪ್ಪಿಗೆ ಸೂಚಿಸಿದರು. ಭಾನುವಾರ ರಾತ್ರಿ ನಡೆದ ಸಭೆಯ ವಿವರಗಳನ್ನು ಶರಣಪ್ರಕಾಶ ಪಾಟೀಲರು ಪತ್ರಿಕಾ ಪ್ರಕಟಣೆಯಲ್ಲಿ ಈ ರೀತಿ ನೀಡಿದರು. "ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆಗಾಗಿ ನಗರದಲ್ಲಿ ಸೆ. ೧೦ರಂದು ಹಮ್ಮಿಕೊಳ್ಳಲು ನಿರ್ಧರಿಸಿದ್ದ ಲಿಂಗಾಯತ ರ್‍ಯಾಲಿಯನ್ನು ಸೆಪ್ಟೆಂಬರ್ ೨೪ರಂದು ನಡೆಸಲು ಇಲ್ಲಿನ ಲಿಂಗಾಯತ ಸಮನ್ವಯ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಕಾರಣಾಂತರಗಳಿಂದ ಎರಡು ಬಾರಿ ರ್‍ಯಾಲಿ ಮುಂದೂಡಲಾಗಿದೆ. ಇದರಿಂದ ಬಸವಾಭಿಮಾನಿಗಳು ನಿರಾಶರಾಗಬಾರದು. ಸೆಪ್ಟೆಂಬರ್ ೨೪ರಂದು ಎಲ್ಲರ ಆಸೆಯಂತೆ ಮಹಾರ್‍ಯಾಲಿ ನಡೆಯುವುದು"[೧] ಎಂದು ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡಿದರು.

In Public domain. Digitization Muthulakshmi Research Academy

ಕಲ್ಬುರ್ಗಿ ರ್‍ಯಾಲಿ

ಸೆಪ್ಟೆಂಬರ್ ೨೪ರಂದು ನಡೆಯಲಿರುವ ಸಭೆಗೆ ಬೆಂಗಳೂರಿನಿಂದ ಡಾ.ಜಾಮದಾರ ನಾನು ಮತ್ತು ಡಾ.ಜಯಣ್ಣ ರೈಲಿನ ಮುಖಾಂತರ ಪ್ರಯಾಣ ಬೆಳೆಸಿದೆವು. ನಮಗೆಲ್ಲರಿಗೂ ಕಲಬುರ್ಗಿಯ ಐವಾನಶಾಹಿ ಗೆಸ್ಟ್ ಹೌಸ್‌ನಲ್ಲಿ ರೂಮುಗಳನ್ನು ಕಾಯ್ದಿರಿಸಲಾಗಿತ್ತು. ಅಲ್ಲೊಂದು ಚಿಕ್ಕ ವಿಷಯ ಘಟಿಸಿತು. ಐವಾನಶಾಹಿ ಗೆಸ್ಟ್ ಹೌಸ್ ನಿಜಾಮರಿಗಾಗಿ ಕಟ್ಟಿದ ವಸತಿಗೃಹ. ಹೈದರಾಬಾದ್ ನಿಜಾಮರು ಕಲಬುರ್ಗಿಗೆ ರೈಲಿನಲ್ಲಿ ಬರುತ್ತಿದ್ದರಂತೆ. ಅದಕ್ಕಾಗಿ ರೈಲು ಹಳಿಗಳನ್ನು ಅತಿಥಿ ಗೃಹದ ಬಾಗಿಲವರೆಗೂ ಜೋಡಿಸಿದ್ದಾರೆ. ಜಗತ್ತಿನ ಅತಿ ಶ್ರೀಮಂತ ರಾಜನಿಗಾಗಿ ಒಳ್ಳೆಯ ವ್ಯವಸ್ಥಿತವಾಗಿ ಕಟ್ಟಿದ ಅತಿಥಿಗೃಹವದು. ಈಗಲೂ ನಾಲ್ಕಾರು ಕೋಣೆಗಳು ಬಹಳ ಚೆನ್ನಾಗಿವೆ. ಚೆನ್ನಾಗಿರುವ ಒಂದು ಕೋಣೆಗೆ ನನ್ನ ಸಾಮಾನುಗಳನ್ನು ಸಾಗಿಸಲಾಗಿತ್ತು. ನಾನು ಅಲ್ಲಿ ಹೋಗಿ ಇಳಿದುಕೊಂಡುಬಿಟ್ಟೆ. ಅರ್ಧಗಂಟೆಯಲ್ಲಿ ಅಲ್ಲಿಯ ಅಭಿಯಂತರ ಬಂದು "ಸರ್ ಇದು ಸಚಿವರಾದ ವಿನಯ ಕುಲಕರ್ಣಿ ಅವರಿಗೆ ಕಾಯ್ದಿರಸಲಾಗಿದೆ. ತಾವೇ ಅವರೆಂದು ತಪ್ಪಾಗಿ ತಮಗೆ ನೀಡಲಾಗಿದೆ. ತಮಗೆ ಇನ್ನೊಂದು ಕೋಣೆ ನೀಡಲಾಗುವುದು. ದಯವಿಟ್ಟು ಕ್ಷಮಿಸಿ" ಎಂದು ವಿಧೇಯತೆಯಿಂದ ನಡುಗಲಾರಂಭಿಸಿದರು. ಅದೇ ಸಮಯಕ್ಕೆ ಸಚಿವ ವಿನಯ ಕುಲಕರ್ಣಿ ಅಲ್ಲಿಗೆ ಬಂದರು. ಅಭಿಯಂತರ ಇನ್ನೂ ದಿಗಿಲಿಗೆ ಬಿದ್ದರು. ಭಯದಿಂದ ಬೆವರಲಾರಂಭಿಸಿದರು. ಆಗ ನಾನು "ಹಾಗಿದ್ದರೆ ನನ್ನ ಬ್ಯಾಗನ್ನು ಅಲ್ಲಿಗೆ ಶಿಫ್ಟ್ ಮಾಡಿ" ಎಂದೆ. ನಡೆದ ವೃತ್ತಾಂತ ಗಮನಿಸಿದ ಸಚಿವರು "ಅಣ್ಣಾ ನೀವು ಇಲ್ಲೇ ಇರಿ, ನಾನು ನಿಮ್ಮ ಕೋಲಿಗೆ ಹೋಗುತ್ತೇನೆ" ಎಂದು ಹೊರಟೇಹೋದರು. ಸಚಿವರು ಸಾದಾ ರೂಮಿಗೆ ತೆರಳಿದ್ದರು. ಸಾದಾಮನುಷ್ಯ ಸಚಿವರ ಕೋಣೆಯಲ್ಲಿ ತಂಗಿದ್ದ. ಇದು ವಿನಯ ಕುಲಕರ್ಣಿಯವರ ವಿನಯವಂತಿಕೆ.

ಸೆಪ್ಟೆಂಬರ್ ೨೩ರಂದು ಸರಣಿ ಸಭೆಗಳು ನಡೆದವು. ಅವುಗಳಲ್ಲಿ ಪ್ರಮುಖವಾದವುಗಳನ್ನು ಉಲ್ಲೇಖಿಸಬಯಸುವೆ. ರ್‍ಯಾಲಿಯ ತಯಾರಿ ಭರ್ಜರಿಯಾಗಿಯೇ ಇತ್ತು. ಕನಿಷ್ಠ ಮೂರು ಲಕ್ಷ ಜನ ಸೇರಬಹುದೆಂದು ಇಂಟಲಿಜೆನ್ಸ್ ಅಧಿಕಾರಿಗಳು ಅಂದಾಜಿಸಿದ್ದರು. ಆರು ಜನ ಸಚಿವರು ಭಾಗವಹಿಸುತ್ತಾರೆಂಬ ವರದಿಯಿತ್ತು. ಹಿರಿಯರಾದ ಶ್ರೀ ಬಸವರಾಜ ಹೊರಟ್ಟಿಯವರಲ್ಲದೆ ಅಕ್ಕಪಕ್ಕದ ಜಿಲ್ಲೆಗಳ ಶಾಸಕರು, ಮಾಜಿ ಶಾಸಕರು ಭಾಗವಹಿಸುವ ನಿರೀಕ್ಷೆ ಎಲ್ಲರಲ್ಲಿತ್ತು. ಮಧ್ಯಾಹ್ನದ ಸಮಯ ಸ್ಥಳೀಯ ಮುಖಂಡರು ನಾವಿರುವ ಕೋಣೆಯ ಬಾಗಿಲು ಬಡಿದರು. ಒಳಬಂದವರೆ ದುಗುಡದಿಂದ ಸೋಫಾದಲ್ಲಿ ಆಸೀನರಾದರು.

In Public domain. Digitization Muthulakshmi Research Academy

"ಸರ್ ನಾಳಿನ ಸಭೆಗೆ ಶರಣಬಸಪ್ಪ ಅಪ್ಪಾ ಅವರನ್ನು ಕರೆದಿಲ್ಲ. ಅವರಿಲ್ಲದೆ ಕಲ್ಬುರ್ಗಿಯಲ್ಲಿ ಸಭೆಯನ್ನು ಯೋಚಿಸುವುದು ಸಹ ಅಸಾಧ್ಯ" ಎಂದರು. ಅವರು ಮಾತಾಡುವ ಧಾಟಿಯಲ್ಲಿ ಇವರು ಶರಣಬಸಪ್ಪ ಅಪ್ಪಾ ಅವರೇ ಕಳಿಸಿದ ಗಿರಾಕಿ ಎಂದು ನಮ್ಮೆಲ್ಲರಿಗೂ ತಿಳಿದುಹೋಯಿತು. ಆಗ ಡಾ.ಜಾಮದಾರ ರವರು "ಅದೇಗೆ ಅಚಾತುರ್ಯ ಆಗಿದೆ. ಶರಣಬಸಪ್ಪ ಅಪ್ಪಾ ಅವರು ಸಭೆಯಲ್ಲಿ ಇರಲೇಬೇಕು. ಬಹುಶಃ ಸ್ಥಳೀಯರು ಅವರು ವೀರಶೈವ ಮಹಾಸಭೆಯ ಮಾಜಿ ಅಧ್ಯಕ್ಷರು ಮತ್ತು ವೀರಶೈವ ಪ್ರತಿಪಾದಕರೆಂದು ಬಿಟ್ಟಿರಬಹುದು. ಅವರು ಸಭೆಗೆ ಬಂದರೆ ನಮಗೂ ಗೌರವ. ಆದರೆ ಅವರು ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಕರು ಮತ್ತು ವೀರಶೈವರು ಬಸವಣ್ಣನವರನ್ನು ಒಪ್ಪುತ್ತಾರೆಂದು ಹೇಳುವರೇ? ಆಗಲಿಕ್ಕಿಲ್ಲ. ಇದೆಲ್ಲ ಸಮಸ್ಯೆಯಾಗಬಹುದೆಂದು ಸ್ಥಳೀಯ ಕಾರ್ಯಕರ್ತರು ಅವರನ್ನು ಅಹ್ವಾನಿಸಿರಲಿಕ್ಕಿಲ್ಲ" ಎಂದರು.

ಆಗಂತುಕರು "ಹಾಗೇನಿಲ್ಲ ಸರ್ ಅವರು ಬಸವಣ್ಣನವರನ್ನು ಒಪ್ಪುತ್ತಾರೆ" ಎಂದರು. "ಹಾಗಾದರೆ ನೀವು ಹೋಗಿ ಅಪ್ಪಾ ಅವರಲ್ಲಿ ಈ ವಿಷಯ ಪ್ರಸ್ತಾಪಿಸಿ. ಅವರಿಗೆ ಅಭ್ಯಂತರವಿಲ್ಲವೆನ್ನುವುದಾದರೆ ನಾವು ಅವರನ್ನು ಗೌರವ ಪೂರ್ವಕವಾಗಿ ಸಭೆಗೆ ಕರೆಯುತ್ತೇವೆ". ಎಂದು ದಾಳ ಉರುಳಿಸಿದರು.

ಸ್ಥಳೀಯನ ಮುಖ ಇಂಗು ತಿಂದ ಮಂಗನಂತಾಗಿತ್ತು. "ಸರಿ ಸರ್ ನಾನು ಅಪ್ಪಾ ಅವರೊಂದಿಗೆ ಮಾತಾಡಿ ಬರುವೆ" ಎಂದು ಹೊರನಡೆದರು.

ಗಂಟೆಯಲ್ಲಿ ಮರಳಿ ಬಂದು "ಸರ್ ನೀವು ಬಂದ ವಿಷಯ ಶರಣಬಸಪ್ಪ ಅಪ್ಪಾ ಅವರಿಗೆ ಗೊತ್ತಾಗಿದೆ. ನಿಮ್ಮನ್ನು ದಾಸೋಹದ ಮನೆಗೆ ಕರೆಯಲು ನನ್ನನ್ನೇ ಕಳಿಸಿದ್ದಾರೆ" ಎಂದರು. "ನಾವು ಹೇಳಿದ ವಿಷಯ ಚರ್ಚಿಸಿದ್ದೀರಲ್ಲವೆ?" ಎಂದರು ಕರ್ನಾಟಕದ ಸರಕಾರದ ಮಾಜಿ ಕಾರ್ಯದರ್ಶಿ. "ಸರ್ ಅವರಿಗೆ ಅಭ್ಯಂತರ ಇಲ್ಲ ಎನಿಸುತ್ತಿದೆ, ತಾವು ಒಂದು ಮಾತು ಹೇಳಿದರೆ ಎಲ್ಲ ಸರಿ ಹೋಗುತ್ತದೆ" ಎಂದರು ಆಗಂತುಕರು. ನಸುನಕ್ಕ ಡಾ.ಜಾಮದಾರರು "ನಡೀರಿ ಹೋಗಿ ಬರೋಣ" ಎಂದರು. ಮುಂದಿನ ಗಂಟೆಯಲ್ಲಿ ನಾವೆಲ್ಲ ಅವರ ದರ್ಬಾರ್ ಹಾಲಿನಲ್ಲಿದ್ದೆವು. ನಾವು ಕುಳಿತ ಎರಡು ನಿಮಿಷದ ತರುವಾಯ ತಲೆಯ ಮೇಲೆ ಪೇಟಾ ಧರಿಸಿ, ದೋತರ ಉಟ್ಟಿದ್ದ ೮೫ ವರ್ಷದ ಹಿರಿಯರು ಹಾಲಿನಲ್ಲಿ ಕಾಲಿಟ್ಟರು. ಸೌಜನ್ಯದಿಂದ ನಾವು 'ಶರಣು' ಎಂದೆವು. ಅವರು ಸೌಜನ್ಯಯುತವಾಗಿ ನಡೆದುಕೊಳ್ಳುತ್ತ ಲೋಕಾಭಿರಾಮವಾಗಿ ಮಾತಿಗಿಳಿದರು. ವಿಷಯ ಮೂಲಕ್ಕೆ ತಿರುಗಿಕೊಂಡಿತು. 'ನಾಳೆಯ ಸಭೆಗೆ ತಾವು ಬರಬೇಕು' ಎಂದು ಆಹ್ವಾನ ನೀಡಿದರು ಡಾ.ಜಾಮದಾರ. 'ಆಯಿತು ಬರತೀನಿ' ಎಂದುತ್ತರಿಸಿದರು ಶರಣಬಸಪ್ಪ ಅಪ್ಪಾ ಅವರು ತಕ್ಷಣಕ್ಕೆ. ಆಗ ಸಾಹೇಬರು 'ನಾಳೆ ಸೇರಲಿರುವುದು

In Public domain. Digitization Muthulakshmi Research Academy
ಬಸವಭಕ್ತರ ಸಭೆ. ತಾವು ಬಸವಣ್ಣನವರ ಬಗ್ಗೆ ಮಾತಾಡುವಾಗ ಅವರು ಧರ್ಮಸ್ಥಾಪಕರು ಎನ್ನುವುದನ್ನು ಒತ್ತಿ ಹೇಳಿರಿ' ಎಂದರು. ಉತ್ತರವಾಗಿ ಹಿರಿಯರು 'ಸತ್ಯ ಹೇಳುವುದರಲ್ಲಿ ಸಂಶಯ ಏಕೆ' ಎಂದುಬಿಟ್ಟರು. ನಮ್ಮ ಪ್ರಾಬ್ಲಂ ಸಾಲ್ವ್ ಆಗಿತ್ತು. ಅದು ಇದು ಮಾತಾಡಿ ನಗುತ್ತ ಹೊರಬಂದೆವು.

ಸಚಿವರಾದ ಎಂ.ಬಿ.ಪಾಟೀಲ, ಕಲಬುರ್ಗಿ ಜಿಲ್ಲೆಯ ಉಸ್ತುವಾರಿ ಸಚಿವ ಶರಣಪ್ರಕಾಶ ಪಾಟೀಲ, ಸಚಿವ ವಿನಯ ಕುಲಕರ್ಣಿ ಅವರೊಂದಿಗೆ ಮರುದಿನದ ಕಾರ್ಯಕ್ರಮದ ಪಟ್ಟಿಯನ್ನು ತಯಾರಿಸುತ್ತಿದ್ದೆವು. ಆಗ ನಾವಿರುವ ಐವಾನಶಾಹಿಗೆ ಮತ್ತೊಂದು ಗಂಡಾಂತರ ತೇಲಿಬಂತು. ಮಾತೆ ಮಹಾದೇವಿಯವರ ವಚನಾಂಕಿತ ತಿದ್ದಿದ ವಿಷಯದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪು ಹೊರಬಿದ್ದಿತ್ತು. ಅದು ಮಾತಾಜಿ ವ್ಯತಿರಿಕ್ತವಾಗಿತ್ತು. ನಮ್ಮ ನಿಲುವುಗಳನ್ನು ವಿರೋಧಿಸುವವರಿಗೆ ಹೊಸ ಅಸ್ತ್ರ ಸಿಕ್ಕಿತ್ತು. ಈ ಹಿನ್ನೆಲೆಯಲ್ಲಿ ಮರುದಿನ ನಡೆಯಲಿರುವ ಬೃಹತ್ ಸಭೆಯಲ್ಲಿ ಸಭಿಕರು ಗಲಾಟೆ ಮಾಡುವ ಸಂಭವ ಇದೆ ಎಂದು ಸ್ಥಳೀಯರು ತಿಳಿಸಿದರು. ಅಂತಹ ಘಟನೆಗಳು ನಡೆಯುವ ಸಂಭವವನ್ನೂ ತಳ್ಳಿಹಾಕುವಂತಿರಲಿಲ್ಲ.

ಮರುದಿನ ನಡೆಯಲಿರುವ ಸಭೆಯಲ್ಲಿ ಭಾಗವಹಿಸಲು ಮಾತೆ ಮಹಾದೇವಿಯವರು ಆಗಲೇ ಕಲಬುರ್ಗಿಗೆ ಬಂದು ಸಜ್ಜನ ಎಂಬ ಭಕ್ತರ ಮನೆಯಲ್ಲಿ ತಂಗಿದ್ದಾರೆಂದು ತಿಳಿಸಿದರು. ಮಾತೆ ಮಹಾದೇವಿಯವರ ಮನವೊಲಿಸಿ ಆದ ಅಚಾತುರ್ಯದ ಬಗ್ಗೆ ವಿಷಾದ ವ್ಯಕ್ತಪಡಿಸಿ ಸಮಸ್ಯೆಗೆ ಅಂತ್ಯ ಹಾಡಬಹುದು ಎಂದು ಡಾ.ಜಾಮದಾರ ಸಲಹೆ ನೀಡಿದರು. ಸಲಹೆಯನ್ನು ಅವರ ಮುಂದಿಟ್ಟು ಬಗೆಹರಿಸಬಹುದೆಂದು ಅವರಿಗೆ ಸೂಚಿಸಬೇಕೆಂದು ತೀರ್ಮಾನಿಸಿದೆವು. ಸಚಿವರಾದ ಎಂ.ಬಿ.ಪಾಟೀಲ, ಶರಣಪ್ರಕಾಶ ಪಾಟೀಲ, ವಿನಯ ಕುಲಕರ್ಣಿ, ಡಾ.ಜಾಮದಾರ ನಾನು ಮತ್ತು ಡಾ.ಜಯಣ್ಣ ಮಾತಾಜಿಯವರನ್ನು ಕಾಣಲು ಸಜ್ಜನರ ಮನೆಗೆ ಹೊರಟೆವು. ಸಚಿವರ ಕಾರುಗಳನ್ನು ಹಿಂಬಾಲಿಸಿದವು ಸ್ಥಳೀಯ ನಾಯಕರ ಕಾರುಗಳು. ಸಜ್ಜನರ ಮನೆಯು ಚಿಕ್ಕದಾಗಿತ್ತು. ಸ್ಥಳಾಭಾವ ಎದುರಾಯಿತು. ಎಲ್ಲರನ್ನು ಹೊರಗೆ ಕಳಿಸಿ ನಾವು ಆರು ಜನ ಮತ್ತು ಮಾತಾಜಿ ಹಾಗೂ ಅವರ ಪರಮ ಶಿಷ್ಯರು ಮಾತ್ರ ಚರ್ಚೆಗೆ ಕುಳಿತೆವು. ಬಹಳ ಗೌರವದಿಂದ ಎಂ.ಬಿ.ಪಾಟೀಲರು ವಿಷಯ ಮಂಡಿಸಿದರು. ಅದಕ್ಕೆ ಸಾಥ್ ನೀಡಿದರು ಶರಣಪ್ರಕಾಶ ಪಾಟೀಲರು. ನಮ್ಮ ಬೇಡಿಕೆಗೆ ಮಾತಾಜಿ ಒಪ್ಪಲಿಲ್ಲ. 'ಕ್ಷಮೆ ಕೇಳುವ ಪ್ರಶ್ನೆಯೇ ಇಲ್ಲ' ಎಂದು ಖಡಾಖಂಡಿತವಾಗಿ ಹೇಳಿದರು. ಆದರೆ ವಿವಾದಿತ ಪುಸ್ತಕವನ್ನು ಮರುಮುದ್ರಿಸುವುದಿಲ್ಲವೆಂಬ ಭರವಸೆ ನೀಡಿದರು. ಉಪಾಯ ಕಾಣದೆ ಹೊರನಡೆದೆವು. ಮರುದಿವಸ ಸಭೆಯಲ್ಲಿ ಗಲಾಟೆಯನ್ನು ನಿರೀಕ್ಷೆ ಮಾಡುತ್ತ ಐ.ಬಿ. ಸೇರಿದೆವು.

In Public domain. Digitization Muthulakshmi Research Academy

ದಿನಾಂಕ ೨೪ ಸೆಪ್ಟೆಂಬರ್ ಬಂದೇ ಬಿಟ್ಟಿತು. ಸೆಪ್ಟೆಂಬರ್‌ನಲ್ಲಿ ಕರ್ನಾಟಕದಲ್ಲಿ ಹವಾಮಾನ ಚೆನ್ನಾಗಿರುವುದು. ಆದರೆ ಕಲಬುರ್ಗಿಯಲ್ಲಿ ಎರಡೇ ಕಾಲಗಳು. ಅಲ್ಲಿ ಬೇಸಿಗೆ ಮತ್ತು ಅತಿ ಬೇಸಿಗೆ. ಬೆಳಗಿನ ಜಾವ ಸಾಮಾನ್ಯ ಟೆಂಪರೇಚರ್ ೨೮-೨೭ ಇರುವುದು. ಬಿಸಿಲೇರಿದಂತೆ ೩೫-೩೭ ತಲುಪುವುದು. ಅಂದಿನ ಕಾರ್ಯಕ್ರಮದಲ್ಲಿ ಮೊದಲು ಮೆರವಣಿಗೆ ನಂತರ ಜಗತ್ ಸರ್ಕಲ್ ನಲ್ಲಿರುವ ಜಗಜ್ಯೋತಿ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸಭೆ ನಡೆಯುವ ಸ್ಥಳಕ್ಕೆ ಮೆರವಣಿಗೆಯಲ್ಲಿ ಹೋಗುವುದು. ಸಭೆ ಮುಗಿದ ನಂತರ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಮನವಿ ಅರ್ಪಿಸುವ ಕಾರ್ಯಕ್ರಮ ಇತ್ತು.

ನಾವಂದುಕೊಂಡಂತೆ ಎಲ್ಲವೂ ಸುಸೂತ್ರವಾಗಿ ನಡೆದಿತ್ತು. ಕಲಬುರ್ಗಿ ನಗರವನ್ನು ಒಳಸೇರುವ ಎಲ್ಲ ರಸ್ತೆಗಳಲ್ಲಿ ಪರ ಊರಿನಿಂದ ಬರುವ ಭಕ್ತರಿಗಾಗಿ ದಾಸೋಹದ ವ್ಯವಸ್ಥೆ ಮಾಡಲಾಗಿತ್ತು. ಉತ್ತರ ಕರ್ನಾಟಕದ ತರಹೇವಾರಿ ಅಡುಗೆಯಾದ ಜೋಳದ ಕಟಿ ರೊಟ್ಟಿ, ಎರಡು ತರಹದ ಪಲ್ಯ, ಸೇಂಗಾದ ಹಿಂಡಿ ಮೊಸರು, ಅನ್ನ ಸಾಂಬಾರ ಮೇಲೆ ಸಿರಾ ಮಾಡಿಸಲಾಗಿತ್ತು. ಮೂರು ಲಕ್ಷದ ಜನರು ಬರುವ ನೀರಿಕ್ಷೆಯ ಅನುಗುಣವಾಗಿ ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿತ್ತು. ಸ್ಥಳೀಯರು ಭಾರಿ ಸಂಖ್ಯೆಯಲ್ಲಿ ಸೇರುವ ಸಂಭವವಿದೆಯೆಂದು ಪ್ರಸಿದ್ಧ ವೈದ್ಯ ಡಾ.ಜಗನ್ನಾಥ ಬಿಜಾಪುರ ಅವರು ಹೇಳುತ್ತಲಿದ್ದರು. ಮೆರವಣಿಗೆ ನಗರೇಶ್ವರ ದೇವಾಲಯದಿಂದ ಪ್ರಾರಂಭವಾಗಿ ಎನ್.ವಿ. ಗ್ರೌಂಡ್ ಸೇರಲಿತ್ತು. ಇದು ಕಿರಾಣಾ ಬಜಾರ್ ಸೂಪರ್ ಮಾರ್ಕೆಟ್ ಮುಖಾಂತರ ಹೊರಡಲಿತ್ತು. ನಾಲ್ಕು ಕಿ.ಮೀ. ದೂರವನ್ನು ಕ್ರಮಿಸಲಿತ್ತು. ಸ್ಥಳೀಯ ಮುಸ್ಲಿಂ ಬಾಂಧವರು ರಸ್ತೆಯಲ್ಲಿ ಬಿಸಿಲಿನ ಬಾಧೆ ಇಂಗಿಸಲು ಬಾಳೆಹಣ್ಣು ಮತ್ತು ನೀರನ್ನು ಕೊಡುವ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದರು. ಅದರ ಮೇಲ್ವಿಚಾರಣೆಯನ್ನು ಸ್ಥಳೀಯರಲ್ಲದೆ ನೆರೆಹೊರೆಯ ಲಿಂಗಾಯತ ಅಭಿಮಾನಿಗಳು ನಿರ್ವಹಿಸುತ್ತಿದ್ದರು. ಸ್ಥಳೀಯ ಜೇವರ್ಗಿಯ ಮಾಜಿ ಶಾಸಕರಾದ ಅಲ್ಲಮಪ್ರಭು ಪಾಟೀಲರು ಚುರುಕಾಗಿ ಓಡಾಡುತ್ತಿದ್ದರು. ಆಳಂದದ ಶಾಸಕ ಬಿ.ಆರ್.ಪಾಟೀಲರು, ನನ್ನ ಆತ್ಮೀಯ ಮಿತ್ರರಾದ ಶಾಸಕ ಅಜಯಸಿಂಗ್ ಅವರು ತಮ್ಮ ಮನೆಯ ಕಾರ್ಯಕ್ರಮವೆಂಬಂತೆ ಭಾವಿಸಿ ಮುತುವರ್ಜಿಯಿಂದ ಕಾರ್ಯ ಮಾಡುತ್ತಿದ್ದರು. ಇದಕ್ಕೆಲ್ಲ ಸೂತ್ರಧಾರರಾಗಿದ್ದರು ಪ್ರಭಾವಿ ಜನಸಂಪನ್ಮೂಲ ಸಚಿವರಾದ ಶ್ರೀ ಎಂ.ಬಿ.ಪಾಟೀಲರು.

ಉರಿಬಿಸಿಲಿನಲ್ಲಿ ಪ್ರಾರಂಭವಾದ ಮೆರವಣಿಗೆ ನಾಲ್ಕು ಕಿ.ಮೀ. ಸಾಗಲಿತ್ತು. ಜನರ ಉತ್ಸಾಹ ಕಂಡು ನಾವೆಲ್ಲರೂ ಹೆಜ್ಜೆ ಹಾಕಲಾರಂಭಿಸಿದೆವು. ದೂರದರ್ಶನ ಕ್ಯಾಮರಾಗಳು ನಮ್ಮನ್ನು ಸುತ್ತುವರಿಯುತ್ತಿದ್ದವು. ಉತ್ಸಾಹಿ ಯುವಕರು

In Public domain. Digitization Muthulakshmi Research Academy
ತಾವು ಇತಿಹಾಸದ ಸಾಕ್ಷಿಯಾಗಲು ತಾ ಮುಂದು ನಾ ಮುಂದು ಎಂದು ಗಲಾಟೆ ಮಾಡಲಾರಂಭಿಸಿದರು. ಅವರ ಉತ್ಸಾಹ ಕಂಡು ನಾನು ವಿ.ಐ.ಪಿ. ಕಾರಿಡಾರ್‌ದಿಂದ ಹೊರಬಂದು ಸಾವಧಾನವಾಗಿ ಹೆಜ್ಜೆ ಹಾಕಲಾರಂಭಿಸಿದೆ. ಆಗಲೇ ಕಂಡಿದ್ದು ಅನ್ಯಧರ್ಮೀಯರ ಹೃದಯ ವೈಶಾಲ್ಯತೆ. ಯಾರೋ ಒಬ್ಬರು ಕಬ್ಬಿನ ಹಾಲನ್ನು ನೀಡಿದರು, ಮತ್ತೊಬ್ಬರು ನೀರಿನ ಬಾಟಲಿ ನೀಡಿದರು. ಬಾಳೆಹಣ್ಣು ತಿನ್ನಿ ಬಿಸಿಲನ್ನು ತಡೆಯಬಹುದು ಎಂದು ಮುಸ್ಲಿಂ ಮಧ್ಯವಯಸ್ಕ ಸಲಹೆಯನ್ನು ಇತ್ತ. ಆಗ ದೂರದರ್ಶನ ಕ್ಯಾಮರಾಕ್ಕೆ ಸಚಿವರು ಸಿಕ್ಕಿದ್ದರು. ರ್‍ಯಾಲಿ ಮಧ್ಯದಲ್ಲಿಯೇ ಅಂದಿನ ವೈದ್ಯಕೀಯ ಸಚಿವರಾದ ಡಾ.ಶರಣಪ್ರಕಾಶ ಪಾಟೀಲರು ಮಾಧ್ಯಮಗಳೊಂದಿಗೆ ಮಾತಾಡುತ್ತ "ವಚನ ಸಾಹಿತ್ಯ ಒಂದು ಶ್ರೇಷ್ಠ ಸಾಹಿತ್ಯ, ಅದನ್ನು ನಮ್ಮ ಮಕ್ಕಳು ಓದಬೇಕು. ಅದರಲ್ಲಿರುವ ಮಾನವೀಯ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅಲ್ಲದೆ ಅದನ್ನು ಮುಂದಿನ ಪೀಳಿಗೆಗೆ ಹೊತ್ತೊಯ್ಯಬೇಕು. ಲಿಂಗಾಯತ ಧರ್ಮವು ಸ್ವತಂತ್ರ ಧರ್ಮ. ಆ ಧರ್ಮಕ್ಕೆ ಧರ್ಮಮಾನ್ಯತೆ ನೀಡಿದರೆ ಈ ಸಮಾಜವು ಶ್ರೇಷ್ಠ ಸಮಾಜವಾಗಿ ಪರಿವರ್ತನೆ ಆಗುತ್ತದೆ" ಎಂದರು. ಕೂಡಲಸಂಗಮದ ಪಂಚಮಸಾಲಿ ಸ್ವಾಮೀಜಿಯವರು ಅದೇ ರ್‍ಯಾಲಿಯಲ್ಲಿ ಭಾಗವಹಿಸಿ ಮುನ್ನಡೆಯುವಾಗ ಮಾಧ್ಯಮದವರ ಪ್ರಶ್ನೆಗಳಿಗೆ ಉತ್ತರಿಸುತ್ತ "ಲಿಂಗಾಯತ ಧರ್ಮ ದಕ್ಷಿಣ ಭಾರತದಲ್ಲಿ ಹುಟ್ಟಿದ ಮೊದಲ ಧರ್ಮ. ಇದು ಬಸವಣ್ಣನವರಿಂದ ಸ್ಥಾಪಿತ ಧರ್ಮ ಎನ್ನುತ್ತ ಲಿಂಗಾಯತ ಧರ್ಮವನ್ನು ಜನಮಾನಸಕ್ಕೆ ತಲುಪಿಸಲು ರಾಷ್ಟ್ರೀಯ ಬಸವಸೇನೆ ಕಲಬುರ್ಗಿ ರ್‍ಯಾಲಿಯ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬರಲಿದೆಯೆಂದು ತಿಳಿಸಿದರು. ತುಮಕೂರಿನ ಸಿದ್ಧಗಂಗಾ ಶ್ರೀಗಳು ಲಿಂಗಾಯತ ಧರ್ಮದವರಾಗಿದ್ದು ಅವರು ಲಿಂಗಾಯತ ಹೋರಾಟವನ್ನು ಬೆಂಬಲಿಸಿದ್ದಾರೆಂದು ಹೇಳಿದರು.

ಎನ್.ವಿ.ಗ್ರೌಂಡಿನಲ್ಲಿ ವಿಶಾಲವಾದ ವೇದಿಕೆಯನ್ನು ನಿರ್ಮಿಸಿದ್ದರು. ಮುನ್ನೂರು ಜನರು ಕುಳಿತುಕೊಳ್ಳಬಹುದಾದ ವಿಶಾಲ ವೇದಿಕೆಯದು. ಒಂದು ಕಡೆ ಪೂಜ್ಯರು ಇನ್ನೊಂದು ಬದಿಯಲ್ಲಿ ರಾಜಕೀಯ ನಾಯಕರು ಕೂಡುವುದೆಂದು ನಾವು ಹಿಂದಿನ ರಾತ್ರಿ ಯೋಜಿಸಿದ್ದೆವು. ಆದರೆ ಕೆಲವು ಮಠಾಧಿಪತಿಗಳಿಗೆ ವೇದಿಕೆಯ ಮಧ್ಯದ ಸ್ಥಳವೇ ಬೇಕಾಗಿತ್ತು. ಎಲ್ಲರೂ ಟೆಲಿವಿಜನ್ ಕ್ಯಾಮರಾಗಳಿಗೆ ಕಾಣುವ ಸ್ಥಳಕ್ಕಾಗಿ ಪ್ರಯತ್ನಿಸುವುದನ್ನು ಕಂಡು ಇವರ ಬಗ್ಗೆ ಜುಗುಪ್ಸೆ ಬಂತು. ಅರಿಷಡ್ವರ್ಗಗಳನ್ನು ತೊರೆದ ಜಂಗಮರು ಇವರೇನಾ ಎಂದು ನನ್ನನ್ನು ನಾನೇ ಕೇಳಿಕೊಂಡೆ. ಒಬ್ಬ ಜಂಗಮರಿಗೆ ಸಭೆಯನ್ನು ಕಂಟ್ರೋಲಿಗೆ ತೆಗೆದುಕೊಳ್ಳಬೇಕಾಗಿತ್ತು. ನಾನು ನಿಷ್ಠುರವಾಗಿ 'ಕ್ಷಮಿಸಿ ಸ್ಥಳೀಯರಿಗೆ ಅವಕಾಶ ನೀಡೋಣ' ಎಂದು ಪ್ರೊಫೆಸರ್ ಮೀನಾಕ್ಷಿ ಬಾಳಿಯವರಿಗೆ

In Public domain. Digitization Muthulakshmi Research Academy

ನಿರ್ವಹಣೆಯ ಜವಾಬ್ದಾರಿ ನೀಡಿದೆ. ನಿರ್ವಹಣೆ ವಹಿಸಬೇಕೆನ್ನುವ ಪೂಜ್ಯರು ಮುನಿಸಿನಿಂದ ಕೆಳಗಿಳಿದು ಹೊರನಡೆದರು. ನಾವೇನು ಕ್ಯಾರೆ ಎನ್ನಲಿಲ್ಲ. ಹೋದ ದಾರಿಗೆ ಸುಂಕವಿಲ್ಲವೆಂದು ಮತ್ತೈದು ನಿಮಿಷದಲ್ಲಿ ಮರಳಿ ಬಂದರು. ಇವರಿಗಿಂತ ಯಾವುದೇ ಅಪೇಕ್ಷೆ ಇಲ್ಲದೆ ಉರಿಬಿಸಿಲಿನಲ್ಲಿ ಕುಳಿತ ಕೇಳುಗನು ನನಗೆ ಬಸವಣ್ಣನಾಗಿ ಕಂಡ. ಇರಲಿ.

ಸಭೆಯಲ್ಲಿ ನಾಲ್ವರು ಮಾನ್ಯ ಸಚಿವರುಗಳಾದ ಶ್ರೀ ಎಂ.ಬಿ.ಪಾಟೀಲ, ಶ್ರೀ ಶರಣಪ್ರಕಾಶ ಪಾಟೀಲ, ಶ್ರೀ ಬಸವರಾಜ ರಾಯರೆಡ್ಡಿ ಹಾಗೂ ಶ್ರೀ ವಿನಯ ಕುಲಕರ್ಣಿಯವರಲ್ಲದೆ ಸರ್ವಶ್ರೀ ಮಾಜಿ ಸಚಿವರಾದ ಮಾಲಕರೆಡ್ಡಿಯವರು, ಅಲ್ಲಮಪ್ರಭು ಪಾಟೀಲ, ಬಸವರಾಜ ಹೊರಟ್ಟಿ, ಬೆಳಗಾವಿ ನಾಗನೂರು ಮಠದ ಶ್ರೀ ಸಿದ್ಧರಾಮ ಸ್ವಾಮೀಜಿ, ಕೂಡಲಸಂಗಮ ಪೀಠದ ಜಯಮೃತ್ಯುಂಜಯ ಸ್ವಾಮೀಜಿಯವರು, ಗದುಗಿನ ತೋಂಟದಾರ್ಯ ಮಠದ ಪೂಜ್ಯರಾದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಕಲಬುರ್ಗಿಯ ಶರಣಬಸಪ್ಪ ಅಪ್ಪಾ ಅವರು, ಸಾರಂಗಮಠದ ಸ್ವಾಮೀಜಿ, ಪೂಜ್ಯ ಮಾತೆ ಮಹಾದೇವಿಯವರು, ಬೈಲೂರು ಮಠದ ಶ್ರೀ ನಿಜಗುಣಾನಂದ ಸ್ವಾಮೀಜಿಯವರು, ಮೋಟಗಿ ಮಠದ ಶ್ರೀ ಪ್ರಭುಚೆನ್ನಬಸವ ಪೂಜ್ಯರು, ಮಾತೆ ಮಹಾದೇವಿ ಮಠದ ಶರಣೆಯರು, ಅಕ್ಕ ಅನ್ನಪೂರ್ಣ, ಅಕ್ಕಾ ಗಂಗಾಂಬಿಕೆ, ಪೂಜ್ಯ ವಾಗ್ದೇವಿ ತಾಯಿ, ಬೆಲ್ದಾಳ ಶರಣರಲ್ಲದೆ ಶ್ರೀ ಚನ್ನಬಸವಾನಂದ ಶ್ರೀಗಳು, ಬೀದರಿನ ಅಕ್ಕ ಗಂಗಾಂಬಿಕೆ, ಬೆಂಗಳೂರಿನ ಬೇಲಿಮಠದ ಪೂಜ್ಯರು, ಇನ್ನೂ ಅನೇಕ ಮಠಾಧೀಶರು, ಜಗದ್ಗುರುಗಳು ವೇದಿಕೆಯ ಮೇಲೆ ನೂರಕ್ಕೂ ಹೆಚ್ಚು ಮಠಾಧೀಶರು ಆಸೀನರಾಗಿದ್ದರು. ಬೆಂಗಳೂರಿನಿಂದ ಬಂದು ಕೊನೆಯ ಕುರ್ಚಿಯಲ್ಲಿ ಕುಳಿತ ಬಸವ ಸಮಿತಿಯ ಅಧ್ಯಕ್ಷರಾದ ಅರವಿಂದ ಜತ್ತಿಯವರನ್ನು ಸಚಿವರು ಮುಂದೆ ಕರೆದು ಕೂಡಿಸಿದ್ದು ಸ್ಥಳಾಭಾವದ ಸಂಕೇತವಾಗಿತ್ತು. ಯಾವಾಗಲೂ ಮೊದಲಿನ ಸಾಲಿನಲ್ಲಿ ಆಸೀನನಾಗುತ್ತಿದ್ದ ನಾನು ಕೂಡ ಅನೇಕ ಬಾರಿ ಅತಿಥಿಗಳಿಗೆ ಜಾಗ ಬಿಟ್ಟು ಕದಲಿದ್ದು ಇದೆ. ಇದು ಡಾ.ಜಾಮದಾರರಿಗೂ ಆದ ಅನುಭವ. “ಇಲ್ಲಿ ಯಾರೂ ಮುಖ್ಯರಲ್ಲ ಅಮುಖ್ಯರಲ್ಲ” ಎಂಬ ಕುವೆಂಪು ಅವರ ನುಡಿಗಳು ಲಿಂಗಾಯತ ನಾಯಕರಲ್ಲಿ ಎದ್ದುಕಾಣುತ್ತಿತ್ತು.

ಶರಣ ಶಂಕರ ದೇಸಾಯಿ ಕಲ್ಲೂರ ಹಾಗೂ ಶರಣ ಸಿದ್ದಣ್ಣ ಹೂಗಾರ ಅವರ ವಚನ ಗಾಯನದೊಂದಿಗೆ ಕಾರ್ಯಕ್ರಮಕ್ಕೆ ನಾಂದಿ ಹಾಡಲಾಯಿತು. ಸಮಾವೇಶದಲ್ಲಿ ಮೊದಲಿಗೆ ಮಾತಾಡಿದ ಡಾ.ಜಾಮದಾರ ಅವರು ವೀರಶೈವರ ಮೇಲೆ ವಾಗ್ದಾಳಿ ಮಾಡುತ್ತ ಅವರು ಪವಿತ್ರ ಹಾಗೂ ಪುರಾತನ ಎಂದು ಹೇಳುವ “ಸಿದ್ಧಾಂತ ಶಿಖಾಮಣಿ” ಗ್ರಂಥದ ಪ್ರಾಚೀನತೆಯನ್ನು ಪ್ರಶ್ನಿಸಿದರು. ಅದು

In Public domain. Digitization Muthulakshmi Research Academy

ಇತ್ತೀಚಿನ ೧೫೫ನೆಯ ಶತಮಾನದ ಗ್ರಂಥ ಎನ್ನುತ್ತ ಶಂಕರಾಚಾರ್ಯರಾಗಲಿ ಅಥವಾ ಇನ್ನಿತರ ಯಾವುದೇ ಹಿಂದೂಧರ್ಮದ ಪೂಜ್ಯರು ವೀರಶೈವರು ಈ ಗ್ರಂಥವನ್ನು ಉಲ್ಲೇಖ ಏಕೆ ಮಾಡಲಿಲ್ಲ ಎಂದು ಪ್ರಶ್ನಿಸಿದರು. 'ವೀರಶೈವರಿಗೆ ಇತಿಹಾಸವಿಲ್ಲ ಪುರಾಣ ಮಾತ್ರ ಇದೆ' ಎಂದರು. ಇವರಿಂದ ವಿರಕ್ತಮಠಗಳು ಜಾಗೃತವಾಗಿರಬೇಕೆಂದು ಕರೆ ನೀಡಿದರು.

ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಸಚಿವ ಎಂ.ಬಿ.ಪಾಟೀಲರು ವೀರಶೈವರು ಲಿಂಗಾಯತ ಧರ್ಮದ ಒಂದು ಪಂಗಡ ಎಂದು ಹೇಳಿದರು. ಪಂಚಮಸಾಲಿ, ಬಣಜಿಗ, ಸಾದರು, ಗಾಣಿಗರು, ರೆಡ್ಡಿಗಳು ಎಂದು ನೂರು ಸಮಾಜಗಳಲ್ಲಿ ವೀರಶೈವ ಜಂಗಮರು ಒಂದು ಸಮಾಜ ಎಂದರು. ಈ ಧರ್ಮವನ್ನು ರೈಲಿಗೆ ಹೋಲಿಸುತ್ತ ರೈಲಿನ ಎಂಜಿನ್ ಬಸವಣ್ಣನವರು ಅದರ ಡಬ್ಬಿಗಳಾಗಿ ಈ ಸಮಾಜದ ಪಂಗಡಗಳು ಎಂದರು. ರಾಷ್ಟ್ರೀಯ ಬಸವಸೇನೆಯ ಧ್ವಜವನ್ನು ನೂತನ ಅಧ್ಯಕ್ಷರಾದ ವಿನಯ ಕುಲಕರ್ಣಿಯವರಿಗೆ ಹಸ್ತಾಂತರಿಸುತ್ತ ಒಂದು ಸೂಕ್ಷ್ಮ ಮಾತು ಹೇಳಿದರು. ರಾಷ್ಟ್ರೀಯ ಬಸವಸೇನೆಯ ಕಚೇರಿಗಳು ವಿರಕ್ತಮಠಗಳಾಗಲಿವೆ ಎಂದು ಬಿಟ್ಟರು. ಈ ಒಂದು ಹೇಳಿಕೆ ಲಿಂಗಾಯತ ಹೋರಾಟಕ್ಕೆ ಮುಂಬರುವ ದಿನಗಳಲ್ಲಿ ಕಂಟಕವಾಗಿ ಪರಿಣಮಿಸಿತು. ಜಾತಿ ಜಂಗಮರು ಬಸವಣ್ಣನವರ ಆಶಯಗಳನ್ನು ಮರೆತು, ಇಂದು ಲಿಂಗಾಯತ ಧರ್ಮವನ್ನು ಮರೆತು ಕೇವಲ ಮಠದ ಹಿತಾಸಕ್ತಿ ಸ್ವಹಿತಾಸಕ್ತಿಗಳನ್ನು ಕಾಪಾಡುವ ಧಾರ್ಮಿಕ ಕಟ್ಟಡಗಳಾಗಿವೆ. ಇಂದು ಅವರಿಗೆ ಧರ್ಮಪ್ರಸಾರ ಮುಖ್ಯವಲ್ಲ. ಅವರಿಗೆ ತಮ್ಮ ವೈಯಕ್ತಿಕ ಹಿತಾಸಕ್ತಿಗಳು ಮುಖ್ಯವಾಗಿವೆ. ಲಿಂಗಾಯತ ಧರ್ಮ ಜಾಗೃತವಾದಷ್ಟು ಅವರಿಗೆ ತೊಂದರೆ ಹೆಚ್ಚು. ಇದು ಎಲ್ಲ ಮಠಗಳಿಗೆ ಅನ್ವಯಿಸದೆ ಹೋದರೂ ಬಹುತೇಕ ಮಠಗಳಿಗೆ ಅನ್ವಯಿಸುವುದು. ಕನ್ನಡದ ವಿದ್ವಾಂಸ ಲಿಂಗಾಯತ ಧರ್ಮದ ಹೃದಯವಾಗಿದ್ದ ಶರಣ ದಿ. ಡಾ.ಎಂ.ಎಂ. ಕಲಬುರ್ಗಿಯವರು ರಚಿಸಿದ, ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದಿಂದ ಪ್ರಕಟಿಸಲಾದ "ಲಿಂಗಾಯತ ಸ್ವತಂತ್ರ ಧರ್ಮ" ಎಂಬ ಕೃತಿಯನ್ನು ಬಿಡುಗಡೆ ಮಾಡಿದರು ಸಚಿವ ಎಂ.ಬಿ.ಪಾಟೀಲರು.

ಸಮಾರಂಭದಲ್ಲಿ ಭಾಗವಹಿಸಿದ ಇನ್ನೊಬ್ಬ ಸಚಿವರಾದ ಶ್ರೀ ಬಸವರಾಜ ರಾಯರೆಡ್ಡಿಯವರು ಜಗತ್ತಿನಲ್ಲಿ ಯಾವ ಧರ್ಮವೂ ಮಾನವರಲ್ಲಿ ಭೇದ ಎಣಿಸುವ ಧರ್ಮಗಳಿಲ್ಲ. ಆದರೆ ನಮ್ಮ ದೇಶದಲ್ಲಿ ಬಹುಸಂಖ್ಯಾತರು ಆಚರಿಸುವ ಹಿಂದೂಧರ್ಮದಲ್ಲಿ ಜಾತಿಭೇದ, ವರ್ಣಭೇದ, ಲಿಂಗಭೇದವನ್ನು ಹುಟ್ಟುಹಾಕಿದ್ದು ಈ ಧರ್ಮದಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳು. ಆದರೆ 'ಲಿಂಗಾಯತ ಧರ್ಮ ಮಾನವ ಧರ್ಮ' ಇಲ್ಲಿ ಮನಸ್ಸೇ ದೇವರು ಮತ್ತು

In Public domain. Digitization Muthulakshmi Research Academy

ಆ ಮನಸ್ಸಿರುವ ದೇಹವೇ ದೇವಾಲಯ ಎಂದರು; ನಾವು ಲಿಂಗಾಯತ ಧರ್ಮಕ್ಕೆ ಮಾನ್ಯತೆ ಕೊಡಿ ಎಂದು ಕೇಳುವುದು ಕೇವಲ ಮೀಸಲಾತಿ ಕೊಡಿ ಎಂದು ಕೇಳಲು ಅಲ್ಲ. ನಮ್ಮ ಬೇಡಿಕೆ ನಮ್ಮ ಅಸ್ಮಿತೆಗಾಗಿ ಎಂದು ಹೇಳಿದರು. ಲಿಂಗಾಯತ ಧರ್ಮ ಹಿಂದೂಧರ್ಮದ ಭಾಗವಲ್ಲ ಎಂದು ಹೇಳುವುದನ್ನು ಮರೆಯಲಿಲ್ಲ. ಇದೇ ಸಂದರ್ಭದಲ್ಲಿ ಮಾತೆ ಮಹಾದೇವಿಯವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ತಾವು ರಚಿಸಿದ ವಿವಾದಿತ "ಬಸವ ವಚನ ದೀಪ್ತಿ" ಪುಸ್ತಕವನ್ನು ಮರುಮುದ್ರಣ ಮಾಡುವುದಿಲ್ಲ ಎಂದು ಹೇಳಿದರು.

ಶರಣ ಬಸಪ್ಪ ಅಪ್ಪಾ ಅವರು ಮಾತನಾಡುವಾಗ ಅವರ ಬಾಯಿಂದ ವೀರಶೈವ ಪದವು ಜಾರಿ ಬಂದಾಗ ಜನರು 'ಹೋ' ಎಂದು ಪ್ರತಿಭಟಿಸಿದರು. ನೆರೆದ ಪ್ರೇಕ್ಷಕರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತ ಅವರು ತಮ್ಮ ಮಾತನ್ನು ಸುಧಾರಿಸಿಕೊಂಡು ಬಸವಣ್ಣನವರನ್ನು ಕೊಂಡಾಡಿ ಚಪ್ಪಾಳೆ ಗಿಟ್ಟಿಸಿಕೊಂಡರು.

ಲಿಂಗಾಯುತ ರ್‍ಯಾಲಿಯ ಬಗ್ಗೆ ಹಿಂದೂ ಪತ್ರಿಕೆಯಲ್ಲಿ ಕುಮಾರ್ ಬುರುಡಿಕಟ್ಟಿಯವರು ಈ ರೀತಿಯಾಗಿ ಬರೆಯುತ್ತಾರೆ "This is the fourth rally in the last two months after Bidar, Belagavi and Lathur (Maharashtra) ಒಂದು ಬಣ್ಣದ ಚಿತ್ರವನ್ನು ಮುದ್ರಿಸುತ್ತ "traffic movement in the area came to standstill for hours as large number of crowds filled the streets" ಹೀಗೆ ಬರೆಯುತ್ತ over 20 lingayat mutts, including Mate Mahadevi, Sharanbasappa Appa, Tontadarya swamiji and community leaders across party lines including minister Sharan Parakash Patil, M.B.Patil, Vinay Kulakarni, Basavaraj Rayareddy and ex ministers Basavaraj Horatti etc participated in the huge gathering".[9]

ಶರಣಪ್ರಕಾಶ ಪಾಟೀಲರ ಮಾತನ್ನು ದಿ ಹಿಂದೂ ಈ ರೀತಿ ರಿಪೋರ್ಟ್ ಮಾಡಿತು. "We had been an independent religion since the 12th century. We are not simply demanding for its constitutional recognition. We will not rest till our demand is met" ರಾಷ್ಟ್ರೀಯ ಬಸವಸೇನೆಯನ್ನು ಅಸ್ತಿತ್ವಕ್ಕೆ ತಂದು ಅದರ ಅಧ್ಯಕ್ಷರೆಂದು ಮತ್ತೊಬ್ಬ ಮಂತ್ರಿ ವಿನಯ ಕುಲಕರ್ಣಿಯವರನ್ನು ಅಧ್ಯಕ್ಷರಾಗಿಚುನಾಯಿತರಾಗಿದ್ದಾರೆಂದು ಹೇಳುತ್ತ, ಅವರಿಗೆ ರಾಷ್ಟ್ರೀಯ ಬಸವಸೇನೆಯ ಧ್ವಜವನ್ನು ಹಸ್ತಾಂತರಿಸುತ್ತ ನೀರಾವರಿ ಮಂತ್ರಿ ಎಂ.ಬಿ.ಪಾಟೀಲರು ಹೇಳಿದರು. "We need to build a new india, Ours is tradition of Anubhav Mantap. We will take a special membership

In Public domain. Digitization Muthulakshmi Research Academy
drive to expand the base of RBS. All virakta mathas will be our offices" ಮುಂದುವರಿದು "if veershaivas want an independent religion tag for thier sect, we dont have any problem, let them try. But they are trying to associate with lingayats and demand for veershaiva-lingayat religion. Which we oppaose, they should not take lingayat term"[೩] ಎಂ.ಬಿ.ಪಾಟೀಲರು ಮುಂಬರುವ ರ್‍ಯಾಲಿಗಳ ದಿನಾಂಕಗಳನ್ನು ಸಹ ಇದೇ ರ್‍ಯಾಲಿಯಲ್ಲಿ ಪ್ರಕಟಿಸುತ್ತ "next mobilisation would be held on November 5th at Nehru Maidan in Hubballi, on 19 November in B.R. Ambedkar Stadium in Bijapur before holding a national conference in Bengaluru on December 10 where over 20 lakh people would be mobilised".

ಅಂದಿನ ರ್‍ಯಾಲಿಯ ವಿಶೇಷ ವರದಿಯನ್ನು ಪ್ರಕಟಿಸುತ್ತ ಮತ್ತೊಂದು ಇಂಗ್ಲಿಷ್ ಪತ್ರಿಕೆಯಾದ Deccan Herald ರ್‍ಯಾಲಿಯೂ ಅಭೂತ ಪೂರ್ವವಾಗಿತ್ತು ಎಂದು ವರದಿ ಮಾಡಿತು. Lingayats hold huge rally in Kalaburgi for separate religion ಎಂಬ ಹೆಡ್ ಲೈನಿನೊಂದಿಗೆ ಬಣ್ಣ ಬಣ್ಣದ ಚಿತ್ರಗಳೊಂದಿಗೆ ವರದಿ ಮಾಡಿತ್ತು: A massive rally was taken out in kalaburgi on sunday, seeking separate religion status for Lingayat. ಪಕ್ಕದ ಜಿಲ್ಲೆಗಳಾದ ಯಾದಗಿರಿ, ಬೀದರ್, ವಿಜಾಪುರಗಳಿಂದಲ್ಲದೆ ಪಕ್ಕದ ರಾಜ್ಯಗಳಾದ ಮಹಾರಾಷ್ಟ್ರ, ತೆಲಂಗಾಣ ರಾಜ್ಯಗಳಿಂದ ಸಾವಿರಾರು ಜನರು ಎನ್.ವಿ. ಗ್ರೌಂಡ್‌ನಲ್ಲಿ ಸೇರಿದ್ದರು ಎಂದಿದೆ Deccan Herald. ಗಣಿ ಮತ್ತು ಭೂವಿಜ್ಞಾನ ಸಚಿವರಾದ ವಿನಯ ಕುಲಕರ್ಣಿಯವರು "If we don't get what we want , then there will be a new revolution in 21st century"[೪] ಎಂದು ಹೇಳಿದರು ಎನ್ನುತ್ತದೆ ಈ ವರದಿ.

ಕನ್ನಡ ಪತ್ರಿಕೆಯಾದ ವಿಜಯ ಕರ್ನಾಟಕವು "ಸ್ವತಂತ್ರ ಧರ್ಮಕ್ಕಾಗಿ ಲಿಂಗಾಯತರ ಬೃಹತ್ ರ್‍ಯಾಲಿ ಬಸವನಾಡಿನಲ್ಲಿ ಶಕ್ತಿ ಪ್ರದರ್ಶನ"[೫] ಎಂಬ ಹೆಡ್ ಲೈನಿನಲ್ಲಿ ಮುಖಪುಟದ ವರದಿಯನ್ನು ಪ್ರಕಟಿಸಿತು. "ಸುಡುಬಿಸಿಲನ್ನು ಲೆಕ್ಕಿಸದೆ ಸಾವಿರಾರು ಜನ ಲಿಂಗಾಯತರು ಧ್ವಜ ಹಿಡಿದು, ನಗರದ ಪ್ರಮುಖ ರಸ್ತೆಗಳಲ್ಲಿ ಘೋಷಣೆಗಳನ್ನು ಕೂಗುತ್ತ ಮೆರವಣಿಗೆ ನಡೆಸಿದರು. ನಂತರ ಎನ್.ಬಿ.ಮೈದಾನದಲ್ಲಿ ಬೃಹತ್ ಸಮಾವೇಶ ನಡೆಯಿತು"; "ಪ್ರತ್ಯೇಕ ಧರ್ಮ ಹೋರಾಟದಿಂದ ಯಾವುದೇ ಕಾರಣಕ್ಕೂ ಹಿಂದೆ ಸರಿಯುವುದಿಲ್ಲ. ರಾಜ್ಯ ಮತ್ತು ಕೇಂದ್ರ ಸರಕಾರಗಳು ನಮ್ಮ ಬೇಡಿಕೆ ಈಡೇರಿಸದಿದ್ದರೆ

In Public domain. Digitization Muthulakshmi Research Academy

ಕಾನೂನು ಹೋರಾಟ ಆರಂಭಿಸುವುದಕ್ಕೂ ಹಿಂಜರಿಯುವುದಿಲ್ಲ ಎಂದು ಒಕ್ಕೊರಲಿನಿಂದ ಘೋಷಿಸಿದ್ದಾರೆ" ಎಂದು ಮುಖಪುಟದ ವರದಿ ಮಾಡಿತ್ತು. ಇಂದು ಕಂಬಿ ಹಿಂದಿರುವ ಚಿತ್ರದುರ್ಗದ ಶಿವಮೂರ್ತಿ ಮುರುಘಾಸ್ವಾಮಿಯವರು "ಲಿಂಗಾಯತ ಎನ್ನುವವರು ಮೊದಲು ಬಸವಣ್ಣನನ್ನು ಒಪ್ಪಿಕೊಳ್ಳಬೇಕು. ಸಚಿವರಾದ ಶರಣಪ್ರಕಾಶ ಪಾಟೀಲ, ವಿನಯ ಕುಲಕರ್ಣಿ, ಬಿ.ಆರ್.ಪಾಟೀಲ, ಬಸವರಾಜ ರಾಯರೆಡ್ಡಿ ಇವರೆಲ್ಲ ಈ ಕಾಲದ ಸಾಮಾಜಿಕ ನಾಯಕರು. ಇದು ಸೈದ್ಧಾಂತಿಕ ಹೋರಾಟವಾಗಿದೆ. ಪ್ರಾಣ ಪಣಕ್ಕಿಟ್ಟು ಹೋರಾಟಕ್ಕೆ ಸಿದ್ಧರಾಗಿ" ಎಂದು ಕರೆ ನೀಡಿದರು ಎಂದು ವರದಿ ಮಾಡಿದೆ. ಜಿಲ್ಲಾ ಉಸ್ತುವಾರಿ ಸಚಿವರಾದ ಶರಣಪ್ರಕಾಶ ಪಾಟೀಲರು "ಲಿಂಗಾಯತ ಎನ್ನುವುದು ಎಲ್ಲರನ್ನು ಅಪ್ಪಿ ಒಪ್ಪಿಕೊಂಡು ಬಾಳುವ ನಡೆಸುವಂತದ್ದು. ಸಮುದಾಯದಲ್ಲಿ ಇರುವ ಸಣ್ಣ ಪುಟ್ಟ ವ್ಯತ್ಯಾಸಗಳನ್ನು ಸರಿಪಡಿಸಿಕೊಂಡು ಒಂದಾಗಿ ಮಾನ್ಯತೆ ಪಡೆಯುತ್ತೇವೆ" ಎಂದಾಡಿದ ಮಾತುಗಳು ಗಮನಾರ್ಹ. ಇವರು ವೀರಶೈವರ ಒತ್ತಡದಲ್ಲಿರುವ ಸಂಕೇತ ಎಂಬಂತೆ ತಮ್ಮ ರಾಜಕೀಯ ಜೀವನವನ್ನು ಪಣಕ್ಕಿಡದೆ ಸಹಕಾರ ಮನೋಭಾವನೆಯಿಂದ ಧರ್ಮಮಾನ್ಯತೆ ಪಡೆಯುವ ಸೂಕ್ಷ್ಮತೆ ಅವರ ಮಾತಿನಲ್ಲಿ ಕಾಣಬಹುದು.

ವಿದ್ವಾಂಸ ಡಾ.ಎಂ.ಎಂ.ಕಲಬುರ್ಗಿ ಮತ್ತು ಪತ್ರಕರ್ತೆ ಗೌರಿಲಂಕೇಶ್ ಅವರ ಹತ್ಯೆ ಮಾಡಿದವರನ್ನು ಕೂಡಲೇ ಬಂಧಿಸಬೇಕೆಂಬ ಗೊತ್ತುವಳಿಯನ್ನು ಸ್ವೀಕರಿಸಲಾಯಿತು ಎಂದೂ ಕೂಡ ಈ ಪತ್ರಿಕೆ ವರದಿ ಮಾಡಿತ್ತು.

ಸಭೆಯ ಮಹತ್ವದ ಅಂಶಗಳು

೧. "ಲಿಂಗಾಯತ ಧರ್ಮ ಜಗುಲಿಯ ಧರ್ಮ ಅಲ್ಲ, ಅದು ಜಾಗತಿಕ ಧರ್ಮ" ಅದು ಲಿಂಗಾಯತರ ಅಸ್ಮಿತೆಯಂದು ಸಭೆ ಸಿದ್ಧಪಡಿಸಿತ್ತು.

೨. ಈ ಸಭೆಯ ಪೂರ್ವದಲ್ಲಿಯೇ ಲಿಂಗಾಯತ ಧರ್ಮದಲ್ಲಿ ರಾಜಕೀಯ ಪ್ರವೇಶ ಪಡೆದಿತ್ತು. ಇದು ಕೇವಲ 'ರಾಜಕೀಯ ನಾಟಕ' ಎನ್ನುವ ಮಟ್ಟಕ್ಕೆ ಇಳಿದಿತ್ತು ಲಿಂಗಾಯತರ ಪಕ್ಷವೆಂದು ಬಿಂಬಿಸಿಕೊಂಡ ಭಾರತಿಯ ಜನತಾ ಪಕ್ಷ.

೩. ರಾಜಕೀಯ ನಾಯಕರು ಭಾವಾವೇಶದಲ್ಲಿ "ಲಿಂಗಾಯತ ವಿರಕ್ತಮಠಗಳು ರಾಷ್ಟ್ರೀಯ ಬಸವಸೈನ್ಯದ ಕಚೇರಿಗಳಾಗಲಿವೆ" ಎಂಬ ಹೇಳಿಕೆಯು ವಿರಕ್ತಮಠದ ಜಂಗಮಸ್ವಾಮಿಗಳಿಗೆ ಗಂಭೀರ ಪರಿಣಾಮ ಬೀರಿತ್ತು. ಮಠದ ಆಸ್ತಿ ಸಾರ್ವಜನಿಕ ಆಸ್ತಿಯೆಂಬ ಸತ್ಯವನ್ನು ಅವರು ಮರೆತಿದ್ದರು. ಮಠದ ಆಸ್ತಿ ಪಟ್ಟಾಧಿಕಾರಿಯ ಆಸ್ತಿ ಎಂಬ ಭಾವನೆಯಲ್ಲಿದ್ದವರಿಗೆ ಇದೊಂದು ದೊಡ್ಡ

In Public domain. Digitization Muthulakshmi Research Academy
ಷಡ್ಯಂತ್ರ ಎಂದುಕೊಂಡು ಅವರಿಗೆ ಅಸುರಕ್ಷತೆಯ ಭಾವನೆ ಮೂಡಿಸಿತ್ತು. ಲಿಂಗಾಯತದ ಹೋರಾಟ 'ಮುಂದೊಂದು ದಿನ ತಮಗೆ ಬರಬಹುದಾದ ಕಂಟಕ' ಎಂದು ಭಾವಿಸಿಬಿಟ್ಟರು ವಿರಕ್ತ ಮಠಾಧೀಶರು.

೪. ವಿರಕ್ತ ಮಠಾಧೀಶರು ಹೋರಾಟದಿಂದ ದೂರ ಸರಿಯಲು ಆಂತರ್ಯದಲ್ಲಿ ನಿರ್ಧರಿಸಿಬಿಟ್ಟಿದ್ದರು. ಗುರುವರ್ಗದ ಪರಂಪರೆಯವರಾದ ಜಂಗಮಜಾತಿಯ ಈ ಮಠಾಧಿಪತಿಗಳು ಆಂತರ್ಯದಲ್ಲಿ ಈ ಹೋರಾಟವನ್ನು ಮುರಿಯಲು ಸಂಕಲ್ಪಗೊಳಿಸಿದ್ದರು.

೫. ಕರ್ನಾಟಕ ಸರಕಾರಕ್ಕೆ ಲಿಂಗಾಯತ ರ್‍ಯಾಲಿಗಳಿಗೆ ಸಿಗುತ್ತಿರುವ ಜನಬೆಂಬಲ ಅಚ್ಚರಿ ತರಿಸಿತ್ತು. ಅದನ್ನು ರಾಜಕೀಯಕ್ಕೆ ಉಪಯೋಗಿಸಿಕೊಂಡು ಭಾರತಿಯ ಜನತಾ ಪಕ್ಷವನ್ನು ಸೋಲಿಸಬಹುದು ಎಂಬ ದೂರಾಲೋಚನೆ ಅವರದಾಗಿತ್ತು.

ಕೊನೆ ಟಿಪ್ಪಣಿಗಳು

೧. ವಿಜಯಕರ್ನಾಟಕ, ಸೆಪ್ಟೆಂಬರ್ ೪, ೨೦೧೭

೨. The Hindu Archives, 3rd Dec. 2021

೩. The Hindu Archives, 3rd Dec. 2021

೪. Deccan Herald, 25th Sep. 2017

೫. ವಿಜಯಕರ್ನಾಟಕ, ಸೆಪ್ಟೆಂಬರ್ ೨೫, ೨೦೧೭

In Public domain. Digitization Muthulakshmi Research Academy

ಅಧ್ಯಾಯ ಏಳು

ದಕ್ಷಿಣ ಕರ್ನಾಟಕದ ಎರಡು ಪ್ರಮುಖ ಲಿಂಗಾಯತ ಮಠಗಳು

ಕೂಡಲಸಂಗಮ ಪೂಜ್ಯರಾದ ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿ, ಡಾ.ಜಾಮದಾರ, ಡಾ,ಜಯಣ್ಣ ನಾವೆಲ್ಲ ಸೇರಿಕೊಂಡು ಮೈಸೂರಿನ ಸುತ್ತೂರು ಮಠಕ್ಕೆ ಲಿಂಗಾಯತ ಹೋರಾಟದ ವಿಷಯವನ್ನು ಚರ್ಚಿಸಲು ಭೆಟ್ಟಿ ಕೊಟ್ಟೆವು. ಆದರದಿಂದ ಆದರಿಸಿ ನಮಗೆ ಪೂಜ್ಯರನ್ನು ಭೆಟ್ಟಿ ಮಾಡಿಸಿದರು. ಡಾ.ಜಾಮದಾರ ಮಾತು ಪ್ರಾರಂಭಿಸಿದರು. ಯಾವುದೇ ಪ್ರತಿಕ್ರಿಯೆಯನ್ನು ನೀಡದೆ ಸ್ವಾಮೀಜಿ ಅವರ ಮಾತುಗಳನ್ನು ಚಿತ್ತದಿಂದ ಕೇಳುತ್ತಲಿದ್ದರು. ನನಗೆ ವೈಯಕ್ತಿಕವಾಗಿ ಸ್ವಾಮೀಜಿ ಪರಿಚಿತರು. ಅನೇಕ ಭಾರಿ ಮಠದಿಂದ ನನ್ನನ್ನು ಸನ್ಮಾನಿಸಿದ್ದರು. ಅವರೊಂದಿಗೆ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ಪ್ರವಾಸವನ್ನೂ ಮಾಡಿದ್ದೆ. ಅವರಿಗೆ ಲಿಂಗಾಯತ ಧರ್ಮದ ಕಾರಣಕ್ಕಾಗಿ ನಾನು ಬಂದಿದ್ದು ಇಷ್ಟವಾಗಿರಲಿಕ್ಕಿಲ್ಲ. ಅವರು ನನ್ನೊಡನೆ ಯಾವುದೇ ಮಾತನ್ನೂ ಆಡಲಿಲ್ಲ. ಸಭೆಯ ಗಂಭೀರತೆಯನ್ನು ಅರಿತು ನಾನೂ ಮಾತಾಡಲಿಲ್ಲ. ಡಾ.ಜಯಣ್ಣ ಕೂಡ ಸುಮ್ಮನಿದ್ದರು. ಕೂಡಲಸಂಗಮ ಶ್ರೀಗಳು ಮಾತಾಡಿದರು. ಅವರ ಮಾತನ್ನು ಕೇಳುತ್ತ ಕುಳಿತರು. ನಮಗೆ ಶ್ರೀಗಳ ಸಂದೇಶ ಸಿಕ್ಕಿತ್ತು. ಎದ್ದು ಹೊರಡಲಣಿಯಾದೆವು. “ಆಯಿತು ಎಲ್ಲರೂ ಸೇರಿ ಚರ್ಚಿಸೋಣ” ಎಂದು ಎದ್ದುನಿಂತರು. ಕೂಡಲಸಂಗಮ ಶ್ರೀಗಳನ್ನು ಒಳಗೆ ಕರೆದರು. ನಾವು ಒಬ್ಬರ ಮುಖ ಒಬ್ಬರು ನೋಡಿಕೊಂಡೆವು. ಸ್ವಾಮೀಜಿಯವರಿಗೆ ಸನ್ಮಾನ ಮಾಡಿ ಕಳಿಸಿಕೊಟ್ಟರು. ‘ಈ ಮಠವು ನಮಗೆ ಸ್ಪಂದಿಸದು’ ಎನ್ನುತ್ತ ಹೊರಬಂದೆವು.

ಸುತ್ತೂರು ಮಠದ ದರ್ಶನದ ನಂತರ ತುಮಕೂರು ಸಿದ್ಧಗಂಗಾ ಮಠಕ್ಕೂ ಭೆಟ್ಟಿ ನೀಡಿದೆವು. ನಾವು ಮಠ ಸೇರಿದಾಗ ಸಂಜೆ ೬.೩೦ ಆಗಿರಬಹುದು.

In Public domain. Digitization Muthulakshmi Research Academy
ಮೊದಲು ಕಿರಿಯ ಶ್ರೀಗಳನ್ನು ಕಂಡೆವು. 'ಪ್ರಸಾದ ಮಾಡಿರಿ' ಎಂದರು ಶ್ರೀಗಳು. ಪ್ರಸಾದದ ನಂತರ ಕಿರಿಯ ಶ್ರೀಗಳಲ್ಲಿ ಲಿಂಗಾಯತ–ವೀರಶೈವ–ಹಿಂದೂ ಧರ್ಮದ ಬಗ್ಗೆ ಸವಿಸ್ತಾರವಾಗಿ ಚರ್ಚಿಸಿದೆವು. ಸ್ವಾಮೀಜಿಯವರು ಲಿಂಗಾಯತ ಧರ್ಮದ ಸಿದ್ಧಾಂತಗಳನ್ನು ಚೆನ್ನಾಗಿ ಅಭ್ಯಾಸ ಮಾಡಿರುವ ಸಂಗತಿ ನಮಗೆ ಅರಿವಾಯಿತು. ಅವರು ನಮ್ಮ ಅಭಿಪ್ರಾಯಗಳನ್ನು ಒಪ್ಪುತ್ತಿದ್ದರು. ನಾವು ಸಂತೋಷದಿಂದ ಹಿರಿಯ ಶ್ರೀಗಳ ಆಶೀರ್ವಾದ ಪಡೆಯಲು ಇಚ್ಚಿಸಿದಾಗ ತಡಸಂಜೆಯ ಸಮಯದಲ್ಲೂ ಶ್ರೀಗಳ ಭೆಟ್ಟಿಗೆ ವ್ಯವಸ್ಥೆ ಮಾಡಿದರು. ಕಿರಿಯ ಶ್ರೀಗಳು ನಮ್ಮನ್ನು ಹಳೆಮಠಕ್ಕೆ ಕರೆದೊಯ್ದುರು. ಹಳೆಮಠವು ಆಡಳಿತ ಕಚೇರಿಯಿಂದ ನೂರು ಮೀಟರ್ ಅಂತರದಲ್ಲಿದೆ. ಅದೊಂದು ಪುರಾತನ ಕಟ್ಟಡ. ಹತ್ತಾರು ಮೆಟ್ಟಿಲುಗಳನ್ನೇರಿದ ನಂತರ ಸಿಗುವ ಕಲ್ಲಿನ ಕಟ್ಟಡವೇ ಹಳೆಮಠ. ಸ್ವಾಮೀಜಿಯವರ ಆವಾಸ ಸ್ಥಾನದ ಎದುರು ಒಂದು ದೇವಸ್ಥಾನವಿದೆ. ಬಲಭಾಗದಲ್ಲಿ ಪೂಜ್ಯ ಶ್ರೀ ಶಿವಕುಮಾರ ಸ್ವಾಮೀಜಿಯವರ ವಿಶ್ರಾಂತಿ ಸ್ಥಳ. ಬಾಗಿಲು ದಾಟಿ ಒಳಸರಿದರೆ ಸಿಗುವುದು ಸುಮಾರು ೨೫X೨೫ ಅಳತೆಯ ಒಂದು ಹಜಾರ. ಹಜಾರದ ಒಳಗಡೆ ಇನ್ನೊಂದು ಚಿಕ್ಕ ಕೋಣೆ. ಅದೇ ಹಿರಿಯ ಶ್ರೀಗಳ ಮಲಗುವ ಕೋಣೆ. ನಾವು ಒಳನಡೆದಾಗ ಶ್ರೀಗಳ ಕೋಣೆಯ ಬಾಗಿಲು ಹಾಕಿತ್ತು. ಪ್ರೊ.ವೀರಭದ್ರಪ್ಪ ಅವರೊಂದಿಗೆ ಗುರುಗಳು ಚರ್ಚಿಸುತ್ತಿದ್ದಾರೆಂದು ತಿಳಿಸಿದರು. ಸಾಮಾನ್ಯವಾಗಿ ದಿನದ ಕೊನೆಯ ಬೆಟ್ಟಿಯೇ ವೀರಭದ್ರಪ್ಪನವರದು. ಈ ಪರಿಪಾಟ ಅನೇಕ ವರ್ಷಗಳವರೆಗೂ ನಿರಂತರವಾಗಿ ನಡೆದುಕೊಂಡು ಬಂದಿದೆಯಂತೆ. ಮಠದಲ್ಲಿ ಆದ ಘಟನೆಗಳನ್ನು ಅರುಹುವುದು ವೀರಭದ್ರಪ್ಪನವರ ಕರ್ತವ್ಯವಂತೆ. ಇವರ ಬೆಟ್ಟಿಯ ನಂತರವೇ ಶ್ರೀಗಳು ಮೂರು ಗಂಟೆಗಳ ಕಾಲ ನಿದ್ರಾವಸ್ಥೆಗೆ ಜಾರುವುದಂತೆ. ನಾವು ಅಂದರೆ ಪಂಚಮಸಾಲಿ ಜಗದ್ಗುರುಗಳು, ಡಾ.ಜಾಮದಾರ ಮತ್ತು ನಾನು ಅಲ್ಲೇ ನಿಂತುಕೊಂಡು ಕಾಯಲಾರಂಭಿಸಿದೆವು. ಮಠದಿಂದ ಸನ್ಮಾನಿತನಾಗಿದ್ದರೂ ಹಳೆಮಠವನ್ನು ನೋಡಿರಲಿಲ್ಲ. ಕಾರಣ ನಾನು ತಡರಾತ್ರಿ ಮಠಕ್ಕೆ ಹೋಗಿರಲಿಲ್ಲ. ಒಂಬತ್ತು ಕಂಬಗಳಿರುವ ವಿಶಿಷ್ಟವಾದ ಒಂದು ಚೌಬಾರ ಅಲ್ಲಿದೆ. ಕಂಬಗಳ ಮೇಲೆ ಕಾಳಾಮುಖರ ಕಲ್ಲು ಕೆತ್ತನೆಗಳಿವೆ. ಹಜಾರದ ನೆಲಕ್ಕೆ ಗ್ರಾನೈಟ್ ಹಾಕಿದೆ. ಅದರ ಶುಭ್ರತೆ ನನಗೆ ಬಲು ಹಿಡಿಸಿತು. ಕಿರಿಯ ಶ್ರೀಗಳು ಅದೇ ಹಜಾರದಲ್ಲಿಯೇ ಮಲಗುವುದಂತೆ. ಅವರ ಹಾಸಿಗೆಯನ್ನು ಸಿದ್ಧಪಡಿಸಿ ಸೊಳ್ಳೆಪರದೆ ಕಟ್ಟುತ್ತಿದ್ದರು. ಕಿರಿಯ ಶ್ರೀಗಳು ನೆಲದ ಮೇಲೆ ತೆಳ್ಳನೆಯ ಹತ್ತಿ ಹಾಸಿಗೆಯ ಮೇಲೆ ಮಲಗುವುದನ್ನು ಕಂಡು ನನಗೆ ಅಚ್ಚರಿ ಆಗಿತ್ತು. ಪೂಜ್ಯರ ಮಲಗುವ ಕೋಣೆಯ ಬಾಗಿಲು ತೆರೆಯಿತು. ಪ್ರೊ.ವೀರಭದ್ರಪ್ಪ ಹೊರಬಂದು ನನ್ನನ್ನು ಕಂಡು ಆತ್ಮೀಯತೆಯಿಂದ ಮಾತಾಡಿಸಿದರು. ಕೋಣೆಯೊಳಗೆ ಕಾಲಿಟ್ಟೆವು,

In Public domain. Digitization Muthulakshmi Research Academy

೧೦x೧೨ ಅಳತೆಯ ಕೋಣೆ ಇರಬಹುದು. ಅಲ್ಲೊಂದು ಒರಗುಕಲ್ಲಿನ ಮಂಚದಾಕಾರದ ಕಟ್ಟೆ ಇದೆ. ಅದರ ಮೇಲೊಂದು ಹತ್ತಿಯ ಗಾದಿ. ಅದರ ಮೇಲೆಯೇ ೧೧೦ ವಯಸ್ಸಿನ ಪೂಜ್ಯರು ಒರಗಿಕೊಂಡಿದ್ದರು. ನಾವು ಬಂದ ವಿಷಯ ಶ್ರೀಗಳಿಗೆ ಕೂಗಿ ಹೇಳಿದರು. ಸ್ವಾಮೀಜಿಯವರು ಬಹಳ ಬಳಲಿದ್ದಂತೆ ಕಂಡರು. ನಾವು ನಮಸ್ಕರಿಸಿದಾಗ 'ಪ್ರಸಾದ ಮಾಡಿರಿ' ಎಂದರು. ಅದು ಅವರು ಸಾಮಾನ್ಯವಾಗಿ ಭಕ್ತರಿಗೆ ಬಳಸುವ ಮೊದಲ ನುಡಿ. ಅವರ ಕೆಲವು ಮಾತುಗಳು ಸ್ಪಷ್ಟವಾಗಿ ಕೇಳುತ್ತಿರಲಿಲ್ಲ. ಕೆಲವು ಬಾರಿ ಅವರು ಅರೆಪ್ರಜ್ಞಾವಸ್ಥೆಗೆ ಜಾರುತ್ತಿದ್ದರು ಎನಿಸುತ್ತಿತ್ತು. ಪಂಚಮಸಾಲಿ ಶ್ರೀಗಳು ನಾವು ಬಂದ ವಿಷಯದ ಬಗ್ಗೆ ಹೇಳಿದರು. ಮಾಡ್ರಿ... ಮಾಡ್ರಿ... ಎಂದರು. ಆಗ ಅವರ ಆಪ್ತ ಸಹಾಯಕನಾದ ಮಲ್ಲಯ್ಯನು ಇವರು ವೀರಶೈವ-ಲಿಂಗಾಯತದ ಬಗ್ಗೆ ಹೇಳುತ್ತಿದ್ದಾರೆ ಎಂದು ಶ್ರೀಗಳಿಗೆ ಗಟ್ಟಿಯಾಗಿ ಹೇಳಿದ. ಆಗ ಡಾ.ಜಾಮದಾರ ವಿಷಯವನ್ನು ಮನದಟ್ಟು ಮಾಡಲು ಮೊದಲ್ಗೊಂಡರು. "ಲಿಂಗಾಯತ ಮಾಡ್ರಿ... ಮಾಡ್ರಿ?" ಎಂದರು. ಹಿರಿಯ ಜೀವಕ್ಕೆ ಕಷ್ಟ ಕೊಡುವುದು ಬೇಡ ಎನಿಸಿತ್ತು. ಅದೇ ಕಾರಣಕ್ಕಾಗಿ ನಮ್ಮ ಮನೆಗೆ ಅವರನ್ನು ಪಾದಪೂಜೆಗೆ ಕರೆಯುವುದನ್ನು ಐದು ವರ್ಷಗಳ ಹಿಂದೆಯೇ ನಿಲ್ಲಿಸಿಬಿಟ್ಟಿದ್ದೆ. ಆವರು ವಿಶ್ರಾಂತಿ ಪಡೆಯಲಿ ಎಂದು ಹೊರಬಂದೆವು. ಅಲ್ಲಿದ್ದ ಮಲ್ಲಯ್ಯನನ್ನು ಹೊರಗೆ ಕರೆದರು ಕೂಡಲಸಂಗಮ ಶ್ರೀಗಳು. ನಿನ್ನ ಹೇಸರೇನಪ್ಪ ಎಂದರು. ಉತ್ತರ ಇತ್ತ. ಅಡ್ಡ ಹೆಸರು ಎಂದರು. ಅವನು ಜಾತಿ ಜಂಗಮನಾಗಿದ್ದ. ಅಲ್ಲದೆ ವೀರಶೈವವಾದಿಯೂ ಆಗಿದ್ದ. ಅವನು ಶ್ರೀಗಳ ಸೇವೆ ಮಾಡುತ್ತಿದ್ದ. ಹಡೆದ ತಾಯಿಯಂತೆ ಶ್ರೀಗಳ ಎಲ್ಲ ಜವಾಬ್ದಾರಿ ವಹಿಸಿಕೊಂಡಿದ್ದಾನೆ ಎಂದು ಮಠದ ಇತರ ಸಹಾಯಕರು ಅವನ ಹಿನ್ನೆಲೆ ಹೇಳಿದರು. ಮುಂಬರುವ ಗೊಂದಲಗಳಿಗೆ ಅವನೇ ಮೂಲವಾಗಿದ್ದ.

ಮರುದಿನದ ಪ್ರಜಾವಾಣಿ ಪತ್ರಿಕೆಯಲ್ಲಿ ನಮ್ಮ ಹೇಳಿಕೆಯನ್ನು ಸವಿಸ್ತಾರವಾಗಿ ಪ್ರಕಟಿಸಿದ್ದರು. "ಲಿಂಗಾಯತ ಸ್ವತಂತ್ರ ಧರ್ಮ ಬೇಡಿಕೆಗೆ ಸಿದ್ಧಗಂಗಾ ಶ್ರೀಗಳು ಮತ್ತು ಸುತ್ತೂರು ಶ್ರೀಗಳು ಪರೋಕ್ಷ ಬೆಂಬಲ ವ್ಯಕ್ತಪಡಿಸುವುದರೊಂದಿಗೆ ಹೋರಾಟ ತೀವ್ರಗೊಳ್ಳುತ್ತದೆ. ಸಮಾಜದ ಒಳಿತಿಗಾಗಿ ನಡೆಯುವ ಸಮಷ್ಟಿ ಹೋರಾಟಕ್ಕೆ ನನ್ನ ಬೆಂಬಲವಿದೆ. ಬಸವತತ್ವ ಬಿಟ್ಟು ನಮಗೆ ಅಸ್ತಿತ್ವ ಇಲ್ಲ. ಬಸವ ಬೇರೆಯಲ್ಲ, ಎಡೆಯೂರು ಸಿದ್ಧಲಿಂಗ ಬೇರೆಯಲ್ಲ" ಎಂಬ ಅಭಿಪ್ರಾಯವನ್ನು ಸಿದ್ಧಗಂಗಾ ಕಿರಿಯ ಶ್ರೀಗಳು ವ್ಯಕ್ತಪಡಿಸಿದ್ದಾರೆ ಎಂದು ಕೂಡಲಸಂಗಮದ ಜಯಮೃತ್ಯುಂಜಯ ಸ್ವಾಮೀಜಿ ಮತ್ತು ಸ್ವತಂತ್ರ ಲಿಂಗಾಯತ ಹೋರಾಟ ಸಮಿತಿಯ ಸಂಚಾಲಕ ಎಸ್.ಎಂ.ಜಾಮದಾರ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು. ಸುತ್ತೂರುಶ್ರೀ ಜೊತೆ ಚರ್ಚಿಸಿದ್ದೇವೆ. ಬಿನ್ನಾಭಿಪ್ರಾಯಗಳನ್ನು ಸಮನ್ವಯದಿಂದ

In Public domain. Digitization Muthulakshmi Research Academy
ಬಗೆಹರಿಸಿಕೊಂಡು ಪ್ರತ್ಯೇಕ ಧರ್ಮ ಮಾನ್ಯತೆಗೆ ಬೇಡಿಕೆ ಮುಂದಿಡುವಂತೆ ಸಲಹೆ ನೀಡಿದ್ದಾರೆ. ಸಮನ್ವಯ ಸಾಧಿಸಲು ನೀವೇ ನೇತೃತ್ವ ವಹಿಸಿದರೆ ಬೌದ್ಧಿಕ, ಧಾರ್ಮಿಕ ಭಿನ್ನಾಭಿಪ್ರಾಯಗಳು ಬಗೆಹರಿಸಬಹುದು ಎಂದು ಅವರಲ್ಲಿ ವಿನಂತಿಸಿದ್ದೇವೆ. "ವೀರಶೈವ ಲಿಂಗಾಯತ ಧರ್ಮ ಗೊಂದಲ ನಿವಾರಣೆಗೆ ರಾಜ್ಯ ಸರಕಾರ ತಜ್ಞರ ಸಮಿತಿ ರಚಿಸಬೇಕು. ವೀರಶೈವರು ಮತ್ತು ಲಿಂಗಾಯತರು ನಮ್ಮದೇ ಶ್ರೇಷ್ಠ ಎಂದು ಪರಸ್ಪರ ಅಭಿಪ್ರಾಯಪಡುತ್ತಿದ್ದಾರೆ. ತಜ್ಞರ ಸಮಿತಿ ವೈಚಾರಿಕ ವೈರುಧ್ಯಗಳನ್ನು ವಾಸ್ತವಿಕ ನೆಲೆಯಲ್ಲಿ ಅಧ್ಯಯನ ಮಾಡಲಿ. ಸಮಿತಿ ನೀಡುವ ವರದಿ ಆಧಾರದಲ್ಲಿ ಪ್ರತ್ಯೇಕ ಧರ್ಮ ಮಾನ್ಯತೆಗೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಲಿ"[೧] ಎಂದು ಆಗ್ರಹಿಸಿದರು. ಎಂಬ ಹೇಳಿಕೆಯನ್ನು ಪ್ರಜಾವಾಣಿ ಪ್ರಕಟಿಸಿತ್ತು.

ಮಠದೊಳಗಣ ಬೆಕ್ಕು

ಕಲ್ಬುರ್ಗಿ ಮತ್ತು ಹುಬ್ಬಳ್ಳಿಯ ರ್‍ಯಾಲಿಗಳ ಮಧ್ಯದ ಅವಧಿಯಲ್ಲಿ ಅನೇಕ ಮಹತ್ವದ ಬೆಳವಣಿಗೆಗಳಾದವು. ಅಂದು ಭಾನುವಾರ ಸೆಪ್ಟೆಂಬರ್ ೧೦, ಫೋನು ಹೊಡೆದುಕೊಳ್ಳುತ್ತಿತ್ತು. 'ಯಾರು' ಎಂದೆ. ಅತ್ತ ಕಡೆಯಿಂದ "ಸಾಹೇಬರು ನಿಮ್ಮನ್ನು ಕರೆಯುತ್ತಿದ್ದಾರೆ ಬೇಗನೆ ಬರಬೇಕಂತೆ" ಪರಿಚಿತ ಧ್ವನಿ ಎಂ.ಬಿ.ಪಾಟೀಲರ ಆಪ್ತ ಸಹಾಯಕನದಾಗಿತ್ತು. ನಾನು ಹಾಸಿಗೆಯಿಂದೆದ್ದು ಬೆಳಗಿನ ಕಾರ್ಯಕ್ರಮ ಮುಗಿಸಿ ಸಚಿವರ ಗೇಟಿನಲ್ಲಿದ್ದಾಗ "ನಿಮ್ಮ ದಾರಿ ಕಾಯ್ದು ಸಾಹೇಬರು ಡಾ. ಜತೆ ಸೇರಿ ತುಮಕೂರಿಗೆ ಹೋದರು, ಅರ್ಜೆಂಟ್‌ನಲ್ಲಿದ್ದರು" ಎಂದ ಮನೆಯಲ್ಲಿಯ ಸಹಾಯಕ. ಇದೇನು ನನಗೆ ಹೊಸದಾಗಿರಲಿಲ್ಲ. 'ಸರಿ' ಎಂದು ನಾನು ಮನೆ ಸೇರಿ ರಜಾ ದಿನವನ್ನು ಕಳೆದೆ.

ಮರುದಿನದ ಪ್ರಜಾವಾಣಿಯಲ್ಲಿ ಸಚಿವರ ವಿವರವಾದ ಹೇಳಿಕೆ ಬಂದಿತ್ತು. "ಲಿಂಗಾಯತ ಸ್ವತಂತ್ರ ಧರ್ಮಕ್ಕಾಗಿ ನಡೆಸುತ್ತಿರುವ ಹೋರಾಟದಲ್ಲಿ ಅಂಜದೆ ಮುನ್ನಡೆಯಿರಿ ಎಂದು ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿಗಳು ಆಶೀರ್ವಾದ ಮಾಡಿದ್ದಾರೆ ಎಂದು ಜಲಸಂಪನ್ಮೂಲ ಸಚಿವ ಎಂ.ಬಿ.ಪಾಟೀಲ ತಿಳಿಸಿದರು." "ಮಠದ ಅಧಿಕಾರಿಗಳು ಭಾನುವಾರ ಬೆಳಗ್ಗೆ ನನ್ನನ್ನು ಮತ್ತು ಡಾ.ಜಯಣ್ಣ ಅವರನ್ನು ಕರೆಸಿಕೊಂಡು ಶ್ರೀಗಳನ್ನು ಭೇಟಿ ಮಾಡಿಸಿದರು. ಈ ವೇಳೆ ಶ್ರೀಗಳು ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟಕ್ಕೆ ತಮ್ಮ ಮುಕ್ತ ಬೆಂಬಲ ಸೂಚಿಸಿದರು ಎಂದು ಅವರು ಮಾಧ್ಯಮಗೋಷ್ಠಿಯಲ್ಲಿ ಹೇಳಿದರು." "ನಡೆದಾಡುವ ಬಸವಣ್ಣ ಎಂದೇ ಖ್ಯಾತರಾಗಿರುವ ಶ್ರೀಗಳ ಬೆಂಬಲದಿಂದ ನಮ್ಮ ಹೋರಾಟಕ್ಕೆ ಆನೆಬಲ ಬಂದಿದೆ. ಅದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಸಿದ್ಧಗಂಗಾ ಶ್ರೀಗಳು ಸಮುದಾಯದ ಸರ್ವೋಚ್ಚ ಸ್ವಾಮೀಜಿ.

In Public domain. Digitization Muthulakshmi Research Academy

ಅವರ ನಂತರವೇ ಇನ್ನುಳಿದವರು. ಇವರ ಹೇಳಿಕೆಯ ಮುಂದೆ ನಾಡಿನ ಇನ್ನಾವುದೇ ಸ್ವಾಮಿಗಳ ಮಾತು, ಹೇಳಿಕೆ, ಸ್ಪಷ್ಟನೆ ನಮ್ಮ ಪಾಲಿಗೆ ಗೌಣವಾಗಲಿದೆ. ಯಾರ ಮಾತಿಗೂ ಹೆಚ್ಚು ತಲೆ ಕೆಡಿಸಿಕೊಳ್ಳದೆ ಸ್ವತಂತ್ರ ಧರ್ಮದ ಮಾನ್ಯತೆಗಾಗಿ ನಡೆಸುತ್ತಿರುವ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲಿದ್ದೇವೆ"" ಎಂದು ಅವರು ಸ್ಪಷ್ಟಪಡಿಸಿದರು.

ನಮಗೆಲ್ಲ ಇದೊಂದು ಸಾಮಾನ್ಯ ಹೇಳಿಕೆಯಾಗಿತ್ತು. ಅದು ಬಹುಮುಖ್ಯ ಹೇಳಿಕೆಯಾಗಬಹುದೆಂದು ಸ್ವತಃ ಹೇಳಿಕೆ ನೀಡಿದ ಸಚಿವರು ಕಲ್ಪಿಸಿ ಕೊಂಡಿರಲಿಕ್ಕಿಲ್ಲ. ಇದೊಂದು ದೊಡ್ಡಮಟ್ಟದ ಸಂಚಲನ ಸೃಷ್ಟಿಸಬಹುದೆಂದು ನಾವಾರೂ ಊಹಿಸಿರಲಿಲ್ಲ. ಈಗಾಗಲೇ ಸಚಿವರು ನಾಡಿನ ಪ್ರಮುಖ ಮಠಗಳಿಗೆ ಭೇಟಿ ನೀಡಿ ವಿರಕ್ತಮಠಗಳ ಪೂಜ್ಯರನ್ನು ಕಂಡು ಲಿಂಗಾಯತ ಸ್ವತಂತ್ರ ಧರ್ಮದ ಬಗ್ಗೆ ಚರ್ಚಿಸಿದ್ದರು. ಅದರಂತೆ ತುಮಕೂರು ಮಠಕ್ಕೂ ಹೋಗಿ ಬಂದಿದ್ದು ನನಗೇನೂ ವಿಶೇಷ ಕಾಣಲಿಲ್ಲ.

ನಮಗೆ ಇದು ವಿಶೇಷ ಕಾಣದೆ ಹೋದರೂ ಮೈಸೂರು ಭಾಗದ ವೀರಶೈವ/ಲಿಂಗಾಯತ ಪಂಥದವರಿಗೆ ಇದು ಅತ್ಯಂತ ವಿಶೇಷತೆಯಿಂದ ಕೂಡಿತ್ತು. ಸಿದ್ಧಗಂಗಾ ಮಠದ ಆಸುಪಾಸಿನ ಜಿಲ್ಲೆಗಳಾದ ಬೆಂಗಳೂರು, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲದೆ ಮಧ್ಯ ಕರ್ನಾಟಕದ ಜಿಲ್ಲೆಯ ಲಿಂಗಾಯತ ರಾಜಕಾರಣಿಗಳಿಗೆ ಇದೊಂದು ರಾಜಕೀಯ ಪ್ರಮುಖ ತಿರುವಾಗಲಿತ್ತು. ದಕ್ಷಿಣ ಕರ್ನಾಟಕದಲ್ಲಿ ತುಮಕೂರು ಮತ್ತು ಸುತ್ತೂರು ಮಠಗಳ ಶ್ರೀರಕ್ಷೆ ಇಲ್ಲದೆ ಇಲ್ಲಿಯ ರಾಜಕೀಯ ನಾಯಕರಿಗೆ ಭವಿಷ್ಯವಿಲ್ಲ. ದೃಶ್ಯಮಾಧ್ಯಮಗಳು ಇದೊಂದು ಮಹತ್ವದ ಹೆಜ್ಜೆ ಎಂದು ವರದಿ ಮಾಡುತ್ತಲಿದ್ದವು. ಲಿಂಗಾಯತ ಧರ್ಮವಿರೋಧಿಗಳ ಮನಸ್ಸುಗಳಲ್ಲಿ ಈ ಹೇಳಿಕೆ ಅಲ್ಲೋಲ ಕಲ್ಲೋಲ ಸೃಷ್ಟಿಸಿತು.

ಲಿಂಗಾಯತ ಧರ್ಮದಲ್ಲಿ ಇನ್ನೊಂದು 'ಗೌಡಲಿಂಗಾಯತ' ಎಂಬ ಕಾಯಕ ಸಮಾಜವಿದೆ. ಇವರ ಕುಲಕಸಬು ಕೃಷಿ. ಗೌಡಲಿಂಗಾಯತರು ಸಾಮಾನ್ಯವಾಗಿ ತುಮಕೂರು ಅಥವಾ ಸುತ್ತೂರು ಮಠಗಳಿಗೆ ಶ್ರದ್ಧೆಯಿಂದ ನಡೆದುಕೊಳ್ಳುತ್ತಾರೆ. ಸುತ್ತೂರು ಹಾಗೂ ತುಮಕೂರು ಮಠಗಳು ವಿರಕ್ತಪರಂಪರೆಯ ಮಠಗಳು. ಇಲ್ಲಿರುವ ಪೀಠಾಧಿಪತಿಗಳು ಗುರುವರ್ಗದವರಲ್ಲ. ಭಕ್ತವರ್ಗದವರು. ಮೂಲತಃ ಬಸವಣ್ಣನಿಂದ ಆರಂಭವಾಗಿದ್ದ ಈ ಸಮಾಜ ಅಲ್ಲಲ್ಲಿಯ ಸ್ಥಳೀಯ ಪ್ರಭಾವಗಳಿಂದಾಗಿ ಗುರುವರ್ಗ(ಇದರ ಸರಿಯಾದ ಹೆಸರು ಆಚಾರ್ಯವರ್ಗ), ವಿರಕ್ತವರ್ಗ(ಇದರ ಸರಿಯಾದ ಹೆಸರು ಗುರುವರ್ಗ), ಆರೂಢವರ್ಗಗಳಲ್ಲಿ ಬಿಚ್ಚಿಕೊಂಡಿದೆ. ಹೀಗಿದ್ದರೂ ಈ ಸಮಾಜಕ್ಕೆ ಸೈದ್ಧಾಂತಿಕ ತಾಯಿಬೇರು ವಿರಕ್ತಸಂಪ್ರದಾಯ ಎನ್ನುತ್ತಾರೆ ಡಾ.ಎಂ.ಎಂ.ಕಲಬುರ್ಗಿ. ಸುತ್ತೂರು ಮಠವು

In Public domain. Digitization Muthulakshmi Research Academy
ಬಸವಪೂರ್ವಕಾಲದ್ದೆಂದು ಸುತ್ತೂರು ಮಠದವರು ಹೇಳಿಕೊಳ್ಳುತ್ತಾರೆ. ಅದರಂತೆ ತುಮಕೂರು ಮಠದ ಇತಿಹಾಸವನ್ನು ಸಹ ೧೨ನೆಯ ಶತಮಾನಕ್ಕೆ ತಳ್ಳಿಕೊಂಡು ಹೋಗುತ್ತಾರೆ ಮಠದ ಇತಿಹಾಸಕಾರರು. ಇದರ ಸತ್ಯಾಸತ್ಯತೆ ಹೀಗಿದೆ.

ಸಿದ್ಧಗಂಗಾಬೆಟ್ಟದ ಹತ್ತಿರದಲ್ಲಿ ಇನ್ನೊಂದು ಐತಿಹಾಸಿಕ ಬೆಳಗುಂಬಾ ಬೆಟ್ಟವಿದೆ. ಇಲ್ಲಿ ಪುರಾತನ ಸಿದ್ಧರಾಮೇಶ್ವರ ದೇವಸ್ಥಾನವಿದೆ. ತುಮಕೂರು ಸಿದ್ಧಗಂಗಾ ಮಠವು ಬೆಳಗುಂಬಾ ಬೆಟ್ಟವನ್ನು ಅಳವಡಿಸಿಕೊಂಡು ಸಿದ್ಧಗಂಗಾ ಬೆಟ್ಟದಲ್ಲಿ ಮಠ ಸ್ಥಾಪನೆಯಾಗಿದೆ ಎಂದು ಜನ ನಂಬಿದ್ದಾರೆ. ಲಿಂಗಾಯತ ಧರ್ಮದ ಮೂರನೆಯ ಶೂನ್ಯ ಪೀಠಾಧಿಪತಿ ಶ್ರೀ ಸಿದ್ಧರಾಮರ ತಪೋಭೂಮಿಯಾಗಿತ್ತೆಂಬ ಐತಿಹ್ಯ ಈ ದೇವಸ್ಥಾನದ್ದು. ಶಿವಗಂಗಾ ಪ್ರಾಂತದಲ್ಲಿದ್ದ ಈ ಪ್ರದೇಶದಲ್ಲಿ ಸಿದ್ಧರಾಮ, ರೇವಣಸಿದ್ಧ ಹಾಗೂ ಮರುಳಸಿದ್ಧರೆಂಬ ಮೂವರು ಬಸವಣ್ಣನವರ ಸಮಕಾಲೀನ ಶರಣರು ಇಲ್ಲಿ ನೆಲೆಸಿದ್ದರು ಎಂದು ನಂಬಿಕೆಯಿದೆ. ಬೆಳಗುಂಬಾ ಬೆಟ್ಟದಲ್ಲಿ ಈ ಶರಣರು ಅನುಷ್ಠಾನಗೈದಿದ್ದರೆಂದು ಜನರು ಹೇಳುತ್ತಾರೆ. ಈ ಇತಿಹಾಸದ ಪುಟಗಳಲ್ಲಿ ಈ ಮಠವು ಹನ್ನೆರಡನೆಯ ಶತಮಾನದಲ್ಲಿತ್ತು ಎಂಬುದಕ್ಕೆ ಸ್ಪಷ್ಟವಾದ ವಿವರಣೆ ಇಲ್ಲ. ಸಿದ್ಧರಾಮ, ರೇವಣಸಿದ್ಧರು ಸಮಕಾಲೀನರಲ್ಲ. ಇವರಲ್ಲಿ ರೇವಣಸಿದ್ಧರು ಹಿರಿಯರು ಎಂದು ಸಂಶೋಧಕರ ಅಭಿಪ್ರಾಯವಿದೆ. ಇನ್ನು ಸಿದ್ಧರಾಮರು ಈ ಕ್ಷೇತ್ರದಲ್ಲಿ ಸಂಚರಿಸಿರಬಹುದು. ಬಹುಕಾಲ ಇಲ್ಲಿಯೇ ತಂಗಿದ್ದರೆಂಬುದು ನಂಬಲರ್ಹವಲ್ಲ. ಸಿದ್ಧರಾಮೇಶ್ವರರು ಶೂನ್ಯಪೀಠದ ಮೂರನೆಯ ಪೀಠಾಧಿಪತಿ. ಇಲ್ಲಿ ಮೂವರು ಶರಣರ ಉಲ್ಲೇಖವಿದೆ. ಈ ಪೂಜ್ಯರು ಲಿಂಗಾಯತ ಧರ್ಮ ಸ್ಥಾಪಿಸಿದ ೭೭೦ ಶರಣರಲ್ಲಿ ಪ್ರಮುಖರು. ಇವರಲ್ಲಿ ಒಬ್ಬರಾದ ರೇವಣಸಿದ್ಧರನ್ನು ವೀರಶೈವರು ರೇಣುಕಾಚಾರ್ಯರೆಂದು ಕರೆಯುತ್ತಾರೆಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ. ಇವರು ಬಸವಣ್ಣನವರ ಹಿರಿಯ ಸಮಕಾಲೀನರಂತೆ. ಇನ್ನೊಬ್ಬರು ಮರುಳಸಿದ್ಧರು. ಇವರು ಉಜ್ಜಯಿನಿಯಲ್ಲಿ ಮಠ ಸ್ಥಾಪಿಸಿದ್ದರೆಂದೂ ಆ ಮಠವನ್ನು ಪಂಚಪೀಠಾಧಿಪತಿಗಳು ವಶಕ್ಕೆ ತೆಗೆದುಕೊಂಡಿದ್ದಾರೆಂದು, ಸಿರಿಗೆರೆ ಮಠದವರು ವ್ಯಾಜ್ಯ ಹೂಡಿದ್ದಾರೆ. ಒಟ್ಟಾರೆಯಾಗಿ ಈ ಸಿದ್ಧಗಂಗಾಮಠವು ವಿರಕ್ತಪರಂಪರೆಯ ಮಠ. ವೀರಶೈವರ ಗುರುವರ್ಗದ ಮಠವಲ್ಲ ಎಂಬುದು ಸ್ಪಷ್ಟ. ಇನ್ನೊಂದು ಐತಿಹ್ಯದ ಪ್ರಕಾರ ಗೋಸಲ ಸಿದ್ಧೇಶ್ವರರು ಎಡೆಯೂರು ಸಿದ್ಧಲಿಂಗೇಶ್ವರರ ಪರಂಪರೆಯವರು ಎಂದು ಮಠದ ಪೂಜ್ಯರೇ ಹೇಳುತ್ತಾರೆ. ಎಡೆಯೂರು ಸಿದ್ಧಲಿಂಗೇಶ್ವರರ ಅವಧಿಯು ಲಿಂಗಾಯತ ಧರ್ಮದ ಮೂರನೇ ಘಟ್ಟ ಎನ್ನುತ್ತದೆ ಲಿಂಗಾಯತ ಧರ್ಮದ ಇತಿಹಾಸ. ಇರಲಿ. ಇದು ನಮ್ಮ ಚರ್ಚಿತ ವಿಷಯವೂ ಅಲ್ಲ.

In Public domain. Digitization Muthulakshmi Research Academy

ತುಮಕೂರು ಶ್ರೀ ಸಿದ್ಧಗಂಗಾ ಮಠ ಮತ್ತು ಇತಿಹಾಸ

ಸಿದ್ಧಗಂಗಾ ಮಠದ ಮೂಲಪುರುಷರು ಗೋಸಲ ಸಿದ್ಧೇಶ್ವರರು ಎನ್ನುತ್ತದೆ ಶ್ರೀಮಠದ ಇತಿಹಾಸ. ಯಾರು ಈ ಗೋಸಲ ಸಿದ್ಧೇಶ್ವರರು ಎಂಬ ಪ್ರಶ್ನೆ ಮೂಡುವುದು ಸಹಜ. ಉತ್ತರವು ದೀರ್ಘವಾಗಿದೆ. ಈ ಇತಿಹಾಸ ಪ್ರಾರಂಭವಾಗುವುದು ವೀರಬಣಂಜುಗಳೆಂದು ಕರೆಸಿಕೊಳ್ಳುವ ಐನೂರು ವಣಿಕರ ಸಂಘದಿಂದ. ಐಹೊಳೆಯ ಮೂಲದವರಾದ ಇವರ ಕಾಯಕ ವ್ಯಾಪಾರ. ಮೂಲತಃ ಇವರು ಲಿಂಗಪೂಜಕರು. ಶಿವನ ಆರಾಧಕರು. ಶೈವರು. ಇವರ ಕೊಡು–ಕೊಳ್ಳುವ ಕಾರಣಕ್ಕಾಗಿ ದೂರದೂರದ ಊರುಗಳಿಗೆ ವ್ಯಾಪಾರಕ್ಕೆ ಹೋಗುತ್ತಿದ್ದರು. ಅಂತಹದೇ ಒಂದು ಪ್ರಮುಖವಾದ ವ್ಯಾಪಾರಿ ಕೇಂದ್ರವಾಗಿತ್ತು ಮದುರೈ ಪಟ್ಟಣ. ಇವರು ಎತ್ತಿನ ಸವಾರಿ ಮಾಡುತ್ತಿದ್ದರು. ಕತ್ತೆಗಳ ಮೇಲೆ ಸಾಮಾನುಗಳನ್ನು ಸಾಗಿಸುತ್ತಿದ್ದರು. ಉತ್ತರ ಕರ್ನಾಟಕದ ಉತ್ಪನ್ನಗಳನ್ನು ಕೊಂಡೊಯ್ದು ಮದುರೈ ಸಂತೆಯಲ್ಲಿ ಮಾರಿ ಅಲ್ಲಿ ಕೊಂಡ ವಸ್ತುಗಳನ್ನು ಉತ್ತರ ಕರ್ನಾಟಕದ ಉರುಗಳಲ್ಲಿ ಮಾರುವುದು ಇವರ ಕಾಯಕವಾಗಿತ್ತು. ಇವರನ್ನು ಮಹಾನಾಡಸೆಟ್ಟಿ, ವಾಲಿಸೆಟ್ಟಿ, ಪಟ್ಟಣಸೆಟ್ಟಿ, ಗುಡಾರದಸೆಟ್ಟಿ, ಬಳೆಸೆಟ್ಟಿ, ಕುಂಬಾರಸೆಟ್ಟಿ, ಬಣಕಾರಸೆಟ್ಟಿ ಎಂದು ಗುರುತಿಸುತ್ತಿದ್ದರು(ಇವರ ಬಗ್ಗೆ ಅನೇಕ ಶಾಸನಗಳಲ್ಲಿ ಉಲ್ಲೇಖವಿದೆ). ಇವರು ತಾವು ತಂಗುವ ಸ್ಥಳಗಳಲ್ಲಿ ತಮ್ಮ ಧಾರ್ಮಿಕ ಆಚರಣೆಗಾಗಿ ದೇವಾಲಯಗಳನ್ನು ನಿರ್ಮಿಸುತ್ತಿದ್ದರು. "ವೀರಬಣಂಜುಗಳು ದೇವಾಲಯದ ಪಕ್ಕದಲ್ಲಿಯೇ ಒಂದು ಮಠವನ್ನು ಕಟ್ಟಿಸಿ ಸಮಯಾಚಾರಕ್ಕೆ ಅಲ್ಲಿ ಪ್ರಭುದೇವರ(ಅಲ್ಲಮಪ್ರಭು) ಪರಂಪರೆವಿಡಿದು ಜಂಗಮ ಪ್ರಭುವೊಬ್ಬನನ್ನು ನೆಲೆಗೊಳಿಸಿದರು. ಆ ಜಂಗಮಮೂರ್ತಿಗಳೇ ಹರದನಹಳ್ಳಿಯ ಗೋಸಲದೇವರು. ಅಂದರೆ ಗೋಸಲಸಿದ್ಧೇಶ್ವರ ಸ್ವಾಮಿಗಳು"[೪] ಎನ್ನುತ್ತಾರೆ ಚನ್ನಪ್ಪ ಎರೆಸೀಮೆಯವರು. ಅನುಕೂಲ ಹಾಗೂ ಧಾರ್ಮಿಕ ವಿಧಿವಿಧಾನಗಳನ್ನು ನೋಡಿಕೊಳ್ಳಲು ಮಠಗಳನ್ನು ಸ್ಥಾಪಿಸುತ್ತಿದ್ದರು. ಆ ಮಠಗಳ ಜೀವನೋಪಾಯಕ್ಕೆ ಜಮೀನುಗಳನ್ನು ಖರೀದಿಸಿ ಮಠದಲ್ಲಿರುವ ಜಂಗಮನಿಗೆ ದಾಸೋಹ ಮಾಡುತ್ತಿದ್ದರು. ಅವರು ಸ್ಥಾಪಿಸಿದ ಇಂತಹ ಮಠಗಳಲ್ಲಿ ಗೋಸಲಮಠವು ಒಂದಾಗಿತ್ತು ಎನ್ನುತ್ತಾರೆ ಸಂಶೋಧಕರು. ಇನ್ನೊಂದು ವಾದದ ಪ್ರಕಾರ ಗೋಸಲಸಿದ್ಧೇಶ್ವರರು ನೂರೊಂದು ಶರಣರ ಭಾಗವಾಗಿದ್ದರು ಎನ್ನುತ್ತಾರೆ ಚನ್ನಪ್ಪ ಎರೆಸೀಮೆಯವರು. ಇವರು ಕ್ರಿ.ಶ. ೧೩೦೦-೧೩೫೫ರ ಸುಮಾರಿಗೆ ಸಿದ್ಧಗಂಗೆಯಲ್ಲಿ ಮಠ ಸ್ಥಾಪನೆ ಮಾಡಿದರು. ಚಾಮರಾಜನಗರ ಜಿಲ್ಲೆಯ ಹರದನಹಳ್ಳಿಯ ನಿರಂಜನ ಜಗದ್ಗುರು ಪೀಠಾಚಾರ್ಯರಲ್ಲಿ ೧೫ನೆಯ ಪೀಠಾಧಿಪತಿಗಳು ಗೋಸಲಸಿದ್ಧೇಶ್ವರರು. ಇವರು ಸಿದ್ಧಗಂಗೆಯಲ್ಲಿ ಸ್ಥಾಪಿಸಿದ ಮಠವೇ ಇಂದಿನ ಸಿದ್ಧಗಂಗಾ ಮಠ. ಇಂದೂ ಕೂಡ ಅವರು ಸ್ಥಾಪಿಸಿದ ಮಠವನ್ನು ಕಾಣಬಹುದು[೫].

In Public domain, Digitization Muthulakshmi Research Academy

ಈ ಮಠಕ್ಕೆ ಮತ್ತು ಎಡೆಯೂರು ಸಿದ್ಧಲಿಂಗೇಶ್ವರ ಮಠಕ್ಕೆ ಅವಿನಾಭಾವ ಸಂಬಂಧವಿದೆ. ತೋಂಟದ ಸಿದ್ಧಲಿಂಗ ಯತಿಗಳು ಕರ್ನಾಟಕದಲ್ಲಿ ಮಠಪರಂಪರೆಗೆ ಮೂಲಕಾರಣರು ಎನ್ನಬಹುದು. ಮಠಸಂಸ್ಕೃತಿ ಮತ್ತು ಶ್ರೀ ಸಿದ್ಧಗಂಗಾ ಮಠದ ಚರಿತ್ರೆಯನ್ನು ಬರೆಯುತ್ತ ಚನ್ನಪ್ಪ ಎರೆಸೀಮೆಯವರು "ಸಾಮಾನ್ಯವಾಗಿ ಈಗ ಸಮಾಜದಲ್ಲಿರುವ ಜಂಗಮ ರೇವಣ್ಣರ ಮಠಗಳಿಗೂ ಅನೇಕ ಪಟ್ಟಾಧ್ಯಕ್ಷರ ಮಠಮಾನ್ಯಗಳಿಗೂ ಶ್ರೀ ತೋಂಟದಾರ್ಯರಿಗೂ ಒಂದಿಲ್ಲೊಂದು ಬಗೆಯ ಸಂಬಂಧವಿದ್ದೇ ಇದೆ. ಕಲ್ಯಾಣದ ಪ್ರಭುದೇವರ ಪರಂಪರೆಯನ್ನು ಮುಂದುವರಿಸಿಕೊಂಡು ಧರ್ಮೋದ್ಧಾರದ, ಸಮಾಜ ಸಂಸ್ಕರಣದ, ಕಾರ್ಯನಿಷ್ಠೆಯ, ವಿವಿಧೋದ್ದೇಶ ಸಾಧನೆಗಾಗಿ ಆವಿರ್ಭಾವಗೊಂಡ ಶೂನ್ಯಪೀಠದ ಕಾರ್ಯಗಳು" ಎನ್ನುತ್ತಾರೆ ಚನ್ನಪ್ಪ ಎರೆಸೀಮೆಯವರು. ತುಮಕೂರು ಶ್ರೀ ಸಿದ್ಧಗಂಗಾಮಠವು ಅಲ್ಲಮಪ್ರಭುದೇವರ ಶೂನ್ಯಪೀಠದ ಸಿದ್ಧಾಂತದ ಆಧಾರದಲ್ಲಿ ಸ್ಥಾಪಿತವಾದ ವಿರಕ್ತಮಠವೆಂದು ತಮ್ಮ ಲೇಖನದಲ್ಲಿ ಸ್ಪಷ್ಟಪಡಿಸಿದ್ದಾರೆ. ಈ ಲೇಖನವು ಶ್ರೀಮಠವೇ ಹೊರತಂದಿರುವ ಶ್ರೀ ಶಿವಕುಮಾರ ಸ್ವಾಮೀಜಿಯವರ ಶತಮಾನೋತ್ಸವ ಕಾರ್ಯಕ್ರಮದ ಪ್ರಯುಕ್ತ ರಾಷ್ಟ್ರಕವಿ ಡಾ.ಜಿ.ಎಸ್.ಶಿವರುದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ತಂದ 'ಸಿದ್ಧಶೈಲ' ಗುರುವಂದನ ಮಹಾಸಂಪುಟದಲ್ಲಿ ಮೂಡಿಬಂದಿದೆ.

ತುಮಕೂರು ಶ್ರೀಮಠದ ಮೂಲಪುರುಷರು ಶ್ರೀ ಗೋಸಲಸಿದ್ಧೇಶ್ವರರು. ಈ ಗೋಸಲ ಮಠವು ೧೩–೧೪ನೆಯ ಶತಮಾನದಲ್ಲಿ ಬಹಳ ಉಚ್ಛ್ರಾಯ ಸ್ಥಿತಿಯಲ್ಲಿತ್ತು ಎಂದು ಹೇಳಲಾಗುತ್ತದೆ. ಕಾಲನ ಕೈಯಲ್ಲಿ ಸಿಕ್ಕು ತುಮಕೂರು ಮಠವು ಕೆಲವು ಶತಮಾನಗಳ ಕಾಲ ಸುಪ್ತಾವಸ್ಥೆಯಲ್ಲಿತ್ತು. ಅನೇಕ ವರ್ಷಗಳ ಕಾಲದ ನಂತರ ಬಂದವರು ಶ್ರೀ ಅಟವಿ ಸ್ವಾಮಿಗಳು. ಇವರು ಮೂಲದಲ್ಲಿ ಹಾನಗಲ್ಲು ತಾಲ್ಲೂಕಿನ ಕೂಡಲಸಂಗಮ ಗ್ರಾಮದವರಾಗಿದ್ದು ಇವರು ಪೂಜಾನಿಷ್ಠರು. ಕೂಡಲಸಂಗಮದಲ್ಲಿ ಮನನೋವಿನ ಪ್ರಸಂಗದಿಂದ ಆ ಊರನ್ನು ತೊರೆದು ಅನೇಕ ವರ್ಷಗಳ ಕಾಲ ಅಜ್ಞಾತದಿಂದಿದ್ದ ಸ್ವಾಮಿಗಳು ಮುಂದೊಂದು ದಿನ ಗುಬ್ಬಿಯಲ್ಲಿ ಕಾಣಿಸಿಕೊಂಡರು. ಸಿದ್ಧಹಸ್ತರಾದ ಇವರನ್ನು ಅಲ್ಲಿಯ ಜನ ಪೂಜ್ಯಭಾವನೆಯಿಂದ ಕಾಣುತ್ತಿರಲು ಅಲ್ಲಿ ಧಾರ್ಮಿಕ ಕಾರ್ಯಗಳನ್ನು ನೆರವೇರಿಸುತ್ತಿದ್ದ ಸಮಯದಲ್ಲಿ ಸಿದ್ಧಗಂಗೆಗೆ ಭೆಟ್ಟಿ ನೀಡಿದರು. ಆಗ ಸಿದ್ಧಗಂಗೆಯ ಕ್ಷೇತ್ರಾಧಿಪತಿಗಳಾಗಿದ್ದ ಶ್ರೀ ಸಿದ್ಧಲಿಂಗಶಿವಯೋಗಿಗಳು ಅಟವಿಸ್ವಾಮಿಗಳಿಗೆ ಧಾರ್ಮಿಕ ಕಾರ್ಯಗಳನ್ನು ವಹಿಸಿ ಅವರು ನಿವೃತ್ತರಾದರು. ಅಟವಿ ಸ್ವಾಮೀಜಿಯವರು ಶಿಕ್ಷಿತರಾಗಿದ್ದರು. ಸಂಸ್ಕೃತ ಭಾಷೆಯಲ್ಲಿ ಪ್ರಭುತ್ವ ಹೊಂದಿದ್ದರು. ಲಿಂಗಾಯತ ಧಾರ್ಮಿಕ ಗ್ರಂಥಗಳನ್ನು ಪಠಣ ಮಾಡುತ್ತಿದ್ದರು.

In Public domain. Digitization Muthulakshmi Research Academy
ನಂತರ ಇಲ್ಲಿಯೇ ಒಂದು ಸಂಸ್ಕೃತ ಶಾಲೆಯನ್ನು ಪ್ರಾರಂಭಿಸಿ ಮಕ್ಕಳಿಗೆ ಅನ್ನ, ಆಶ್ರಯ ನೀಡಲಾರಂಭಿಸಿದರು. ಇವರ ನಂತರ ಲಕ್ಕೂರಿನ ಪಟೇಲ ಮನೆತನದ ರುದ್ರಪ್ಪ ಎಂಬುವವರು ಈ ಮಠದ ಪೀಠಾಧಿಪತಿಗಳಾಗಿ ಸಿದ್ಧಗಂಗೆಯ ಉದ್ಧಾನಪ್ಪನಾದರು. ಇವರನ್ನು ಉದ್ದಾನ ಶಿವಯೋಗಿ ಎಂದು ಅಟವಿಸ್ವಾಮಿಗಳು ನವನಾಮಕರಣ ಮಾಡಿದರು. ಇವರು ಪ್ರಭಾವಿ ಜಂಗಮರಾಗಿದ್ದರು. ತಪೋನಿಷ್ಠರಾಗಿದ್ದರು. ಕಾಯಕಯೋಗಿಯಾಗಿದ್ದರು. ಶೂನ್ಯಪೀಠದ ಸಿದ್ಧಾಂತದಂತೆ ಇವರು ಅಷ್ಟಾವರಣ ಪಾಲಿಸುತ್ತ ಕಾಯಕ ದಾಸೋಹಕ್ಕೆ ಹೆಚ್ಚಿನ ಮನ್ನಣೆಯಿತ್ತರು. ಇವರ ನಂತರ ಶ್ರೀ ಮಠದ ಕರ್ಣಧಾರತ್ವವನ್ನು ವಹಿಸಿದವರೇ ಕಾಯಕಯೋಗಿ, ಶಿಕ್ಷಣಪ್ರೇಮಿ, ತ್ರಿವಿಧ ದಾಸೋಹಿ ಶ್ರೀ ಶಿವಕುಮಾರ ಸ್ವಾಮೀಜಿಯವರು. ಪೂಜ್ಯ ಶ್ರೀ ಶಿವಕುಮಾರ ಸ್ವಾಮೀಜಿಯವರು ಸ್ವಾತಂತ್ರ್ಯಪೂರ್ವದಲ್ಲಿ ಬಿ.ಎಸ್ಸಿ ಪದವಿ ಪಡೆದವರು. ಪ್ರಾಜ್ಞರು. ಮಠದ ಇತಿಹಾಸವನ್ನು ಚೆನ್ನಾಗಿ ಅರಿತುಕೊಂಡವರು. ಇವರು ಲಿಂಗಾಯತ ಧರ್ಮದ ಅಸ್ಮಿತೆಗೆ ಮನ್ನಣೆ ನೀಡಿರಲಿಲ್ಲ ಎನ್ನುವುದು ಹಾಸ್ಯಾಸ್ಪದ.

ಸಿದ್ಧಗಂಗಾ ಶ್ರೀಗಳು ಈ ರೀತಿಯಾಗಿ ಹೇಳಿದ್ದರೆಂದು ವರದಿಯಾಗುತ್ತಲೇ ಫೀಲ್ಡಿಗಿಳಿದುಬಿಟ್ಟರು ಬಿ.ಜೆ.ಪಿ. ನಾಯಕರಾದ ಬೆಂಗಳೂರಿನ ವಿ.ಸೋಮಣ್ಣ ಮತ್ತು ತುಮಕೂರು ಸಂಸದರಾದ ಜಿ.ಎಸ್.ಬಸವರಾಜ. ಸಂಸದರು ಶ್ರೀಗಳ ಲಿಖಿತ ಹೇಳಿಕೆಯನ್ನೂ ಪಡೆದದ್ದಾಗಿ ತಿಳಿಸುತ್ತ ಅದನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿದರು. “ದಿನಾಂಕ ೧೦.೯.೨೦೧೭ರಂದು ಕರ್ನಾಟಕ ಸರಕಾರದ ಜಲಸಂಪನ್ಮೂಲ ಸಚಿವರಾದ ಮಾನ್ಯ ಎಂ.ಬಿ.ಪಾಟೀಲರು ಶ್ರೀ ಸಿದ್ಧಗಂಗಾ ಮಠಕ್ಕೆ ಭೇಟಿ ನೀಡಿದಾಗ ಅವರು ನಮ್ಮೊಡನೆ ವೀರಶೈವ-ಲಿಂಗಾಯತ ಸ್ವತಂತ್ರ ಧರ್ಮದ ಬಗ್ಗೆ ಚರ್ಚಿಸಿದಾಗ, ‘ವೀರಶೈವ ಪದ ವಿದ್ಯಾವಂತರ’ ಮತ್ತು ನಗರಪ್ರದೇಶದಲ್ಲಿ ಬಳಕೆಯಲ್ಲಿದೆ. ‘ಲಿಂಗಾಯತ ಪದ ಗ್ರಾಮೀಣ ಪ್ರದೇಶದಲ್ಲಿ ಬಳಕೆಯಲ್ಲಿದ್ದು’ ಈ ಎರಡು ಪದಗಳು ಒಂದೇ ಆಗಿದ್ದು, ಎಲ್ಲ ಧಾರ್ಮಿಕ ಮುಖಂಡರು ಹಾಗೂ ಸಮಾಜಬಾಂಧವರು ಒಂದು ಕಡೆ ಕುಳಿತು ಸರ್ವಸಮ್ಮತವಾದ ನಿರ್ಧಾರ ತೆಗೆದುಕೊಳ್ಳುವುದು ಸೂಕ್ತ”[೭] ಎಂಬ ಒಕ್ಕಣಿಕೆಯ ಪತ್ರವನ್ನು ಪೂಜ್ಯರ ಹಸ್ತಾಕ್ಷರದೊಂದಿಗೆ ಪ್ರಕಟಿಸಿದ್ದರು.

ಸ್ವಂತ ಜಿಲ್ಲೆಯಾದ ವಿಜಾಪುರದಲ್ಲಿ ತಂಗಿದ್ದ ಸಚಿವ ಪಾಟೀಲರಿಗೆ ಈ ವಿಷಯ ಶಾಕ್ ನೀಡಿತ್ತು. ಅವರು ವಿಚಲಿತರಾಗಿ ಮಾಧ್ಯಮ ಗೋಷ್ಠಿಯನ್ನು ಕರೆದು “ನಾನು ಹೇಳಿಕೆಯನ್ನು ತಿರುಚಿಲ್ಲ. ಶ್ರೀಗಳು ಹೇಳಿದ್ದನ್ನೇ ನಾನು ಮರುದಿನ ಸುದ್ದಿಗೋಷ್ಠಿಯಲ್ಲಿ ಹೇಳಿದ್ದೇನೆ. ನಾನು ನನ್ನ ತಾಯಿ, ಮಡದಿ ಹಾಗೂ ಮಕ್ಕಳೊಂದಿಗೆ ತುಮಕೂರಿನ ಶ್ರೀ ಮಠಕ್ಕೆ ಭೇಟ್ಟಿ ನೀಡಿ ಮಠದಲ್ಲಿ ತಲೆ

In Public domain, Digitization Muthulakshmi Research Academy
ತೊಳೆದುಕೊಳ್ಳುತ್ತೇನೆ ಎಂದು ಬಹು ಭಾವುಕರಾಗಿ ಮಾತನಾಡಿದ್ದರು. ಸಚಿವ ಪಾಟೀಲರು ಹೇಳಿಕೆಯನ್ನು ತಿರುಚಿದ್ದರೆ ಅವರ ಮಾತಿನಲ್ಲಿ ಈ ರೀತಿಯಾದ ಭಾವೋದ್ವೇಗ ಇರುವುದಿಲ್ಲ. The Hindu ಪತ್ರಿಕೆ ವರದಿ ನೋಡಿ "Today is my happiest moment in life. The modern Basavanna (as he described Dr. Shivakumara Swami) has supported the cause for separate tag of our community," Mr. Patil said, adding that his views were "final." Asked whether he would consult the Akhila Bharatha Veerashaiva Mahasabha or any expert on the issue of separate religion tag for Lingayats, Mr. Patil said: "There is no need for any consultation in the future... The 110- year-old seer is the senior most and his opinion is final"೮ ಎಂದು ವರದಿ ಮಾಡಿತ್ತು. ಅವರು ಸುಳ್ಳು ಹೇಳಿದ್ದರೆ ಇಷ್ಟೊಂದು ಸ್ಪಷ್ಟತೆ ತೋರುವ ಅವಶ್ಯಕತೆ ಇರುತ್ತಿರಲಿಲ್ಲ. ಅಸಲಿಗೆ ಪಾಟೀಲರು ಸುಳ್ಳು ಹೇಳಿರಲಿಲ್ಲ. ಅದನ್ನು ನಂತರದಲ್ಲಿ ಮಠದಲ್ಲಿದ್ದ ಸೇವಾವರ್ಗದವರು ಅದನ್ನು ಸಾಕ್ಷೀಕರಿಸಿದ್ದರು. ಸೇವಾವರ್ಗದಲ್ಲಿ ಒಬ್ಬರಾದ ಪ್ರಜಾ ಟಿ.ವಿ. ಎಂಬ ವಿದ್ಯುನ್ಮಾನ ಮಾಧ್ಯಮಕ್ಕೆ ಹೇಳಿಕೆ ನೀಡಿ ಬುದ್ಧಿಯವರು ಹೇಳಿದ್ದನ್ನೇ ಸಚಿವರು ನುಡಿದಿದ್ದಾರೆಂದು ತಿಳಿಸಿದರು.

ಸಚಿವರ ಮರುಹೇಳಿಕೆ ಬರುತ್ತಲೇ ಬೆಂಗಳೂರಿನ ಮಾಜಿ ಸಚಿವ ವಿ.ಸೋಮಣ್ಣ ಮಾಧ್ಯಮಗಳ ಎದುರಲ್ಲಿ ಬಣ್ಣ ಬಣ್ಣದ ಕಾಗೆಗಳನ್ನು ಹಾರಿಸಲಾರಂಭಿಸಿದರು. ಸಚಿವರನ್ನು ಏಕವಚನದಲ್ಲಿ ಸಂಬೋಧಿಸಿ "ಪೂಜ್ಯರು ಬೆಂಕಿ, ಅವರ ಹೇಳಿಕೆಯನ್ನು ತಿರುಚಿದರೆ, ನೀನು ಸುಟ್ಟುಕೊಂಡು ಹೋಗುತ್ತೀಯಾ, ನಿನಗೆ ಗೊತ್ತಿಲ್ಲವಾ? ನಿನ್ನ ತಂದೆಯವರು ನನ್ನ ಮನೆಗೆ ಸ್ಕೂಟರಿನಲ್ಲಿ ಬರುತ್ತಿದ್ದರು"೯ ಎಂದು ಸಚಿವರನ್ನು ನಿಂದಿಸಿದ್ದರು. ಅಸಲಿಗೆ ಎಂ.ಬಿ.ಪಾಟೀಲರ ತಂದೆ ದಿವಂಗತ ಬಿ.ಎಂ.ಪಾಟೀಲರು ವೀರೇಂದ್ರ ಪಾಟೀಲರ ಸಚಿವ ಸಂಪುಟದ ಪ್ರಭಾವಿ ಸಚಿವರಾಗಿದ್ದರು. ಶ್ರೀಮಂತ ಕುಟುಂಬದಿಂದ ಬಂದ ಅವರು ಅಂದಿನ ದಿನಗಳಲ್ಲೂ ರೈಲು ಅಥವಾ ಬಸ್ಸಿನಲ್ಲಿ ಪ್ರವಾಸ ಮಾಡುತ್ತಿರಲಿಲ್ಲ. ಆ ಸಮಯದಲ್ಲಿ ಉನ್ನತ ಕಾರು ಎಂದು ಕರೆಸಿಕೊಳ್ಳುತ್ತಿದ್ದ fiat ಕಾರಿನಲ್ಲಿ ಯಾವಾಗಲೂ ಪ್ರಯಾಣಿಸುತ್ತಿದ್ದರು. ಆ ಕಾಲದಲ್ಲಿ ಸೋಮಣ್ಣ ಜನತಾ ಬಜಾರಿನಲ್ಲಿ ಸಾಮಾನ್ಯ ನೌಕರನಾಗಿ ಬಟ್ಟೆ ಮಾರುತ್ತಿದ್ದರು. ಈ ಹೇಳಿಕೆಯಿಂದ ತಾವೊಬ್ಬ ಮಹಾನ್ ಸುಳ್ಳುಗಾರ ಎಂಬುದನ್ನು ಪ್ರದರ್ಶಿಸಿಬಿಟ್ಟರು.

ವಿವಾದ ತಾರಕಕ್ಕೆ ಏರುತ್ತಿದ್ದಂತೆ ಎಂ.ಬಿ.ಪಾಟೀಲರು ಆತ್ಮಶಾಂತಿಗಾಗಿ ಕೂಡಲಸಂಗಮದ ಸಂಗಮನಾಥನಲ್ಲಿ ಪ್ರಾರ್ಥನೆ ಸಲ್ಲಿಸಲು ಕುಟುಂಬ ಸಮೇತರಾಗಿ ಭೇಟಿ ನೀಡಿದ್ದರು. ಅಲ್ಲಿ ನೆರೆದ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸುತ್ತ "ಸಂಗಮನಾಥನ ಸಾಕ್ಷಿಯಾಗಿ ನಾನು ಶ್ರೀಗಳ ಮಠದಲ್ಲಿ

In Public domain. Digitization Muthulakshmi Research Academy

ಕಂಡಿದ್ದನ್ನು, ಕಿವಿಯಾರೇ ಕೇಳಿದ್ದನ್ನು ಮಾತ್ರ ಹೇಳಿದ್ದೇನೆ. ನಾನು ಸುಳ್ಳು ಹೇಳಿದ್ದರೆ ಸಂಗಮನಾಥನು ನನ್ನ ಕುಟುಂಬವನ್ನು ಸರ್ವನಾಶಮಾಡಲಿ"[೧೦] ಎಂದು ಕಣ್ಣೀರಾದರು.

ಸಚಿವರ ಕೂಡಲಸಂಗಮ ಕ್ಷೇತ್ರ ಭೆಟ್ಟಿಯನ್ನು ಯಡಿಯೂರಪ್ಪನವರು ಲೇವಡಿ ಮಾಡುತ್ತ "ಮಾಡಿದ ತಪ್ಪಿನ ಅರಿವಾಗಿ ಪ್ರಾಯಶ್ಚಿತ್ತಕ್ಕಾಗಿ ಕೂಡಲಸಂಗಮದ ಐಕ್ಯಮಂಟಪದಲ್ಲಿ ಧ್ಯಾನಕ್ಕೆ ಕೂತಿದ್ದರು" ಎನ್ನುತ್ತ ಮುಂದುವರಿದು "ವಿನಾಶಕಾಲೇ ವಿಪರೀತ ಬುದ್ಧಿ ಎಂಬಂತೆ ವರ್ತಿಸಿದ ಸಚಿವ ಪಾಟೀಲ ಸಿದ್ಧಗಂಗಾ ಶ್ರೀಗಳ ಬಗ್ಗೆ ಮಾತನಾಡದೆ ಮೌನವಾಗಿರುವುದು ಒಳ್ಳೆಯದು; ಸಚಿವರು ಮಾಡುವ ಕೆಲಸ ಬಿಟ್ಟು ಬೇರೆ ಕೆಲಸ ಮಾಡುತ್ತಿದ್ದಾರೆ, ಇಲಾಖೆಯ ಕೆಲಸ ಮಾಡಲು ಪುರುಸೊತ್ತು ಇಲ್ಲದಿದ್ದರೆ ರಾಜೀನಾಮೆ ನೀಡಿ ಬೇರೆಯವರಿಗೆ ಅವಕಾಶ ನೀಡಲಿ" ಎಂದು ಆಗ್ರಹಿಸಿದರು[೧೧]. ಯಡಿಯೂರಪ್ಪನವರ ಹೇಳಿಕೆಯನ್ನು ಬಲವಾಗಿ ಖಂಡಿಸಿದ ಮಾತೆ ಮಹಾದೇವಿಯವರು "ಕೂಡಲಸಂಗಮದ ಬಸವಣ್ಣನ ಐಕ್ಯಮಂಟಪದಲ್ಲಿ ಕುಳಿತ ಸಚಿವ ಎಂ.ಬಿ.ಪಾಟೀಲ ಪ್ರಾಯಶ್ಚಿತ್ತ ಮಾಡಿಕೊಂಡಿಲ್ಲ ಬದಲಿಗೆ ಹೋರಾಟ ಮುಂದುವರಿಸಿಕೊಂಡು ಹೋಗಲು ಶಕ್ತಿ ನೀಡುವಂತೆ ಧ್ಯಾನ ಮಾಡಿದ್ದಾರೆ. ಆ ಮೂಲಕ ತಮ್ಮ ಮನೋಭಾವ ಹೆಚ್ಚಿಸಿಕೊಂಡಿದ್ದಾರೆ"[೧೨] ಎಂದು ತಿರುಗೇಟು ನೀಡಿದ್ದರು. ಕೂಡಲಸಂಗಮದ ಶ್ರೀ ಜಯಮೃತ್ಯುಂಜಯ ಸ್ವಾಮೀಜಿಯವರು "ಕೆಲವರ ಒತ್ತಾಯದಿಂದ ಶಿವಕುಮಾರ ಸ್ವಾಮೀಜಿ ಹೇಳಿಕೆ ಬದಲಾಯಿಸಿದ್ದಾರೆ. ಆದರೆ ಸಿದ್ಧಗಂಗಾ ಮಠವು ಬಸವಣ್ಣನ ಸಂಪ್ರದಾಯದ ಎಡೆಯೂರು ಸಿದ್ಧಲಿಂಗೇಶ್ವರ ಪರಂಪರೆಯ ಮಠ. ಬಸವಣ್ಣ ಎಂದರೆ ಲಿಂಗಾಯತ; ಸಿದ್ಧಲಿಂಗ ಶಿವಯೋಗಿ ಎಂದರೆ ವಚನ ಸಾಹಿತ್ಯ ಎಂಬುದನ್ನು ಎಂದಿಗೂ ಅಳಿಸಲು ಸಾಧ್ಯವಿಲ್ಲ" ಎಂದರು. "ಎಂ.ಬಿ.ಪಾಟೀಲರು ಯಾವುದೇ ರೀತಿಯ ಗೊಂದಲಕ್ಕೆ ಕಿವಿಗೊಡದೆ ವಚನ ಎಂಬ ಹೆದ್ದಾರಿಯಲ್ಲಿ ಮುನ್ನಡೆಯಲಿ, ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರ ಮಾತುಗಳನ್ನು ಕೆಲವರು ತಿರುಚುವ ಪ್ರಯತ್ನ ಮಾಡಿದ್ದರು. ಅದೇ ರೀತಿ ಲಿಂಗಾಯತ ಧರ್ಮ ಚಳುವಳಿಯಲ್ಲಿ ಸಿದ್ಧಗಂಗಾ ಶ್ರೀಗಳ ಲಿಂಗಾಯತ ಪರವಾದ ನುಡಿಗಳನ್ನು ಬೇರೆ ರೀತಿಯಲ್ಲಿ ಬಿಂಬಿಸುವ ಪ್ರಯತ್ನ ಕೆಲವರು ಮಾಡುತ್ತಿದ್ದಾರೆ. ನಮಗೆಲ್ಲರಿಗೂ ಶ್ರೀಗಳ ಆಶೀರ್ವಾದ ಇದ್ದೇ ಇದೆ" ಎಂದು ಪತ್ರಿಕೆಗಳಿಗೆ ಹೇಳಿಕೆ ನೀಡಿದ್ದರು.

ಮಾತೆ ಮಹಾದೇವಿಯವರು ಸೆಪ್ಟೆಂಬರ್ ೧೩ ಬುಧವಾರದಂದು ಬಾಗಲಕೋಟೆಯಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ "ಕೇಂದ್ರ ಸರಕಾರ ನಿಮ್ಮನ್ನು ಭಾರತರತ್ನ ಪ್ರಶಸ್ತಿಗೆ ಪರಿಗಣಿಸಿದೆ. ಹಾಗಾಗಿ ಲಿಂಗಾಯತ ಪ್ರತ್ಯೇಕ ಧರ್ಮದ ವಿಚಾರದಲ್ಲಿ

In Public domain. Digitization Muthulakshmi Research Academy
ತಟಸ್ಥರಾಗಿರಿ" ಎಂದು ಸಿದ್ಧಗಂಗಾ ಶ್ರೀಗಳ ಮೇಲೆ ಬಿ.ಜೆ.ಪಿ. ನಾಯಕರು ಒತ್ತಡ ಹೇರಿದ್ದಾರೆಂದು" ಆರೋಪಿಸಿದರು. ತಮಗೆ ಖಚಿತ ಮಾಹಿತಿ ಇದೆ ಎನ್ನುತ್ತ ಅಗತ್ಯವಿದ್ದಲ್ಲಿ ಸುದ್ದಿಮೂಲವನ್ನು ಬಹಿರಂಗಪಡಿಸುವುದಾಗಿ ಹೇಳಿದ್ದರು. ಬಿ.ಜೆ.ಪಿ. ಮುಖಂಡರಾದ ಬಿ.ಎಸ್.ಯಡಿಯೂರಪ್ಪ, ವಿ.ಸೋಮಣ್ಣ ಮತ್ತು ಜಿ.ಎಸ್.ಬಸವರಾಜು ಸೇರಿ ಷಡ್ಯಂತ್ರ ರಚಿಸಿದ್ದಾರೆ. ಅವರೊಂದಿಗೆ ವೀರಶೈವ ಮಹಾಸಭಾ ಮುಖಂಡರು ಕೈ ಜೋಡಿಸಿದ್ದಾರೆ ಎಂದು ಹರಿಹಾಯ್ದರು. ಈ ಷಡ್ಯಂತ್ರ ಸತ್ಯವೆಂದು ಮೇಲ್ನೋಟಕ್ಕೆ ಕಾಣುತ್ತಿತ್ತು. ಇದೇ ಸಮಯದಲ್ಲಿ ಲಿಂಗಾಯತರ ಹಿತ ಕಾಪಾಡುತ್ತೇವೆ ಎಂದು ಹೇಳುವ ವೀರಶೈವ ಮಹಾಸಭೆಯ ಪದಾಧಿಕಾರಿಗಳು ಶಾಮನೂರು ಶಿವಶಂಕರಪ್ಪನವರ ಅಧ್ಯಕ್ಷತೆಯಲ್ಲಿ ಸಿದ್ಧಗಂಗಾ ಮಠಕ್ಕೆ ಭೆಟ್ಟಿ ನೀಡಿ ಲಿಂಗಾಯತ ಹೋರಾಟಕ್ಕೆ ಬೆಂಬಲ ನೀಡದಿರಲು ಪೂಜ್ಯರನ್ನು ಕೇಳಿಕೊಂಡರು. ಭೆಟ್ಟಿಯ ನಂತರ ಪೌರಾಡಳಿತ ಸಚಿವ ಈಶ್ವರ ಖಂಡ್ರೆಯವರು ಪತ್ರಿಕಾಕರ್ತರನ್ನು ಉದ್ದೇಶಿಸಿ "ಸಚಿವ ಎಂ.ಬಿ.ಪಾಟೀಲ ಶ್ರೀಗಳ ಹೇಳಿಕೆಯನ್ನು ತಿರುಚಿದ್ದಾರೆ. ಶ್ರೀಗಳು 'ವೀರಶೈವ ಲಿಂಗಾಯತ ಒಂದೇ ಪದ'. ಪಟ್ಟಣಗಳಲ್ಲಿ ವೀರಶೈವರೆಂದು ಕರೆದರೆ ಹಳ್ಳಿಗಳಲ್ಲಿ ಲಿಂಗಾಯತ ಎಂದು ಕರೆಯುತ್ತಾರೆ" ಎಂದು ಮಾಧ್ಯಮಗಳ ಎದುರು ತಿಪ್ಪೆ ಸಾರಿಸಿ ತಮ್ಮ ಸಹ ಸಚಿವರನ್ನು ಅವಮಾನಗೊಳಿಸಿದ್ದರು.

ಕೂಡಲಸಂಗಮದಿಂದ ಸಚಿವ ಎಂ.ಬಿ.ಪಾಟೀಲರು ಬೆಂಗಳೂರಿಗೆ ಹಿಂದಿರುಗಿದ್ದರು. ಅವರು ಬಹಳ ವಿಚಲಿತಗೊಂಡಿದ್ದರು. ಈ ಗೊಂದಲಗಳಿಂದ ಮಾನಸಿಕವಾಗಿ ಬಹಳ ಬಳಲಿದ್ದರು. ರಾಜಕೀಯಕ್ಕೆ ಕುಟುಂಬವನ್ನು ಎಂದೂ ಬಳಸಿಕೊಳ್ಳದ ಮರ್ಯಾದಸ್ಥ ಕುಟುಂಬದಿಂದ ಬಂದವರು. ಸಚಿವರ ತಾಯಿಯಾದ ಶ್ರೀಮತಿ ಕಮಲಾಬಾಯಿಗೌಡತಿಯವರು ಮನೆಯ ಹೊಸ್ತಿಲು ದಾಟಿದವರಲ್ಲ. ಅವರಿಂದಲೂ ಆಣೆ ಮಾಡಿಸುವುದಾಗಿ ಭಾವುಕರಾಗಿ ಹೇಳಿಬಿಟ್ಟಿದ್ದರು. ಅವರು ಬೆಂಗಳೂರಿಗೆ ಬಂದಿರುವ ವಿಷಯ ತಿಳಿದು ದಿನಾಂಕ ೧೩ರಂದು ನಾವೆಲ್ಲರೂ ಬಿ.ಎಲ್.ಡಿ. ಸಂಸ್ಥೆಯಲ್ಲಿ ಸಭೆ ಸೇರಿದ್ದೆವು. ಸಭೆಯಲ್ಲಿ ಶ್ರಿಯುತರಾದ ಬಸವರಾಜ ಹೊರಟ್ಟಿಯವಯವರು, ಸಚಿವ ವಿನಯ ಕುಲಕರ್ಣಿ, ಡಾ.ಶರಣಪ್ರಕಾಶ ಪಾಟೀಲ, ಶಾಸಕರಾದ ಬಿ.ಆರ್.ಪಾಟೀಲ, ನಾನು, ಡಾ.ಜಯಣ್ಣ ಪಾಲುಗೊಂಡಿದ್ದೆವು. ಬಹಳ ಚರ್ಚೆಯಾದ ನಂತರ ಸತ್ಯವನ್ನು ಜನರೆದರು ಇಡುವ ತೀರ್ಮಾನಕ್ಕೆ ಬಂದೆವು. ನಗರದ ಕ್ಯಾಪಿಟಲ್ ಹೋಟೆಲಿನಲ್ಲಿ ಪತ್ರಿಕಾಗೋಷ್ಠಿ ಕರೆಯಲಾಯಿತು. ಮೊದಲಿಗೆ ಹೊರಟ್ಟಿಯವರು ಮಾತನಾಡುತ್ತ ಸಚಿವರ ವಿರುದ್ಧ ಸೋಮಣ್ಣ ಆಡಿದ ಮಾತುಗಳಿಂದ ಎಂ.ಬಿ.ಪಾಟೀಲರ ಕುಟುಂಬ ನೊಂದುಕೊಂಡಿದೆ. ಅವರ ಕುಟುಂಬಕ್ಕೆ ನಾವೆಲ್ಲ ನೈತಿಕ, ತಾತ್ವಿಕ ಮತ್ತು ಸಾಮಾಜಿಕ ಬೆಂಬಲ

In Public domain. Digitization Muthulakshmi Research Academy

ಸೂಚಿಸುತ್ತಿದ್ದೇವೆ ಎಂದರು. ಶಾಸಕ ಬಿ.ಆರ್.ಪಾಟೀಲ ಮಾತನಾಡಿ ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆ ವಿಷಯದಲ್ಲಿ ಸಿದ್ಧಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ನಿಲುವು ಬದಲಾಯಿಸುವುದರ ಹಿಂದೆ ಆರ್.ಎಸ್.ಎಸ್. ಕೈವಾಡ ಇದೆ ಎಂದು ನೇರ ಆಪಾದನೆ ಮಾಡಿದರು. “ಪಾಟೀಲರ ಹೇಳಿಕೆಯಿಂದ ಸಂಘ ಪರಿವಾರ ಗಾಬರಿಯಾಗಿಬಿಟ್ಟಿದೆ. ತಮ್ಮ ಗತಿ ಏನು? ಎಂದು ಷಡ್ಯಂತ್ರ ರಚಿಸಿ, ರಾತ್ರೋರಾತ್ರಿ ಶ್ರೀಗಳ ಸಂದೇಶ ಬದಲಿಸಿ ಎಂಬ ಸಂದೇಶ ದೆಹಲಿಯಿಂದ ಬಂದಿದೆ” ಎಂದರು ಬಿ.ಆರ್.ಪಾಟೀಲ. ಡಾ.ಜಾಮದಾರ “ಶ್ರೀಗಳ ಭೆಟ್ಟಿಯ ಸಮಯದಲ್ಲಿ ಅಲ್ಲಿಯ ಆಡಳಿತಾಧಿಕಾರಿ ಶಿವಕುಮಾರ ಅವರು ಪ್ರಜಾ ಟಿ.ವಿ.ಗೆ ಸ್ಪಷ್ಟನೆ ನೀಡಿದ್ದಾರೆ. ಅದರ ಅಡಿಯೋ ನಮ್ಮಲ್ಲಿ ಇದೆ” ಎಂದರು. “೯೦೦ ವರ್ಷಗಳ ಹಿಂದೆ ಬಸವಣ್ಣನವರ ಕಾಲದಲ್ಲಿಯೂ ಸೋಮಣ್ಣನಂತಹ ಕೊಂಡಿ ಮಂಚಣ್ಣಗಳಿದ್ದರು ಎನ್ನುತ್ತ ಲಿಂಗಾಯತ ಧರ್ಮದ ಹೋರಾಟವನ್ನು ಯಾರಿಂದಲೂ ಹತ್ತಿಕ್ಕಲು ಸಾಧ್ಯವಿಲ್ಲ” ಎಂದರು ಸಚಿವ ವಿನಯ ಕುಲಕರ್ಣಿ. ‘ಸಚಿವ ಪಾಟೀಲರ ತಂದೆಯನ್ನು ನಾನು ಸ್ಕೂಟರಿನಲ್ಲಿ ಕೂಡ್ರಿಸಿಕೊಂಡು ಹೋಗುತ್ತಿದ್ದೆ’ ಎಂದಿದ್ದ ಸೋಮಣ್ಣನವರ ಹೇಳಿಕೆಯನ್ನು ನಾನು ಖಂಡಿಸುತ್ತಾ “ಅಂದು ಸೋಮಣ್ಣ ಜನತಾ ಬಜಾರಿನ ನೌಕರನಾಗಿದ್ದ, ಆಗ ಅವರು ಎಷ್ಟು ಸ್ಥಿತಿವಂತರಾಗಿದ್ದರು ಎಂಬುದನ್ನು ಸ್ಪಷ್ಟಪಡಿಸಲಿ”[೧೩] ಎಂದು ಮಾತಾಡಿದ್ದೆ.

ಶತಶತಮಾನಗಳಿಂದಲೂ ಸನಾತನಿಗಳು ಲಿಂಗಾಯುತವನ್ನು ತುಳಿಯುತ್ತಲೇ ಬಂದವರು. ಬೀದರ್, ಬೆಳಗಾವಿ ಮತ್ತು ಕಲ್ಬುರ್ಗಿಯಲ್ಲಿ ಸಭೆಗಳಲ್ಲಿಯ ಜನೋತ್ಸಾಹವೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದವರ ನಿದ್ರೆಗೆಡಿಸಿತ್ತು. ಈಗಾಗಲೇ ಇದರ ಸರ್ವೋಚ್ಚ ನಾಯಕರು ಲಿಂಗಾಯತರ ಬೇಡಿಕೆ ‘ಧರ್ಮವಿಭಜನೆ’ ಎಂದಿದ್ದರು. ಇದರ ಮೇಲೆ ಗಾಯಕ್ಕೆ ಬರೆ ಎಳೆದಂತೆ ಆರ್.ಎಸ್.ಎಸ್. ಹಿರಿಯ ಪ್ರಚಾರಕರಾದ ಸು.ರಾಮಣ್ಣನವರು ಲಿಂಗಾಯತರಿಗೆ ಅವಮಾನವಾಗುವಂತಹ ಮಾತುಗಳನ್ನು ಬಾಗಲಕೋಟೆಯ ಪಥಸಂಚಲನದ ಕಾರ್ಯಕ್ರಮದಲ್ಲಿ ಆಡಿಬಿಟ್ಟರು. “ಕಾವಿ ವಸ್ತ್ರಧಾರಿಗಳು ವಿಶ್ವವನ್ನೇ ಒಂದುಗೂಡಿಸುವ ಹೊಣೆ ಹೊತ್ತಿರುತ್ತಾರೆ. ಆದರೆ ಅಂತಹವರ ಪೈಕಿಯೂ ‘ಬುದ್ಧಿ ಭ್ರಷ್ಟರಾದ’ ಕೆಲವರು ಧರ್ಮ ಒಡೆಯುವ ಕೆಲಸಕ್ಕೆ ಮುಂದಾಗಿದ್ದು ನಾವು ಅವರನ್ನು ಸಮರ್ಥವಾಗಿ ಎದುರಿಸಲಿದ್ದೇವೆ”, ಮುಂದುವರಿಯುತ್ತಾ ವಿಘ್ನಸಂತೋಷಿಗಳಾದ ಇವರದು ಶನಿಸಂತಾನ ಎಂದು ಜರಿದರು.[೧೪] ‘ಲಿಂಗಾಯತರ ಬೇಡಿಕೆ ಪರಿಶೀಲಿಸುತ್ತೇನೆ’ ಎಂದು ಹೇಳಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಮನಸ್ಸಿನಲ್ಲಿಟ್ಟುಕೊಂಡು “ಧರ್ಮದ ಪರಿಕಲ್ಪನೆಯನ್ನೇ ತಿಳಿಯದವರು ಲಿಂಗಾಯತ ಪ್ರತ್ಯೇಕ ಧರ್ಮ ಎಂದು ಹೇಳುತ್ತಿದ್ದಾರೆ. ಅವರು

In Public domain, Digitization Muthulakshmi Research Academy

ಭ್ರಮೆಗೆ ಒಳಗಾಗಿರುವುದು ಕಂಡು ದುಃಖವಾಗುತ್ತದೆ. ತಮ್ಮ ಹೆಸರಿನಲ್ಲಿ 'ರಾಮ' ಎಂದು ಇಟ್ಟುಕೊಂಡಿರುವ ದೊಡ್ಡ ರಾಜಕಾರಣಿಯೊಬ್ಬರು ಚುನಾವಣೆಯಲ್ಲಿ ಗೆಲ್ಲಲೇಬೇಕು ಎಂಬ ಕಾರಣಕ್ಕೆ ಹಿಂದೂ ಸಮಾಜವನ್ನು ಒಡೆಯುವ ಕೆಲಸಕ್ಕೆ ಕೈ ಹಾಕಿದ್ದಾರೆ" ಎಂದರು.

'ಸಿದ್ಧರಾಮ' ಎಂಬ ಹೆಸರಿನ ಶರಣರೇ ೧೨ನೆಯ ಶತಮಾನದಲ್ಲಿ ಹಿಂದೂಧರ್ಮವನ್ನು ಧಿಕ್ಕರಿಸಿ ಹೊರಬಂದಿದ್ದು ಈ ಹಿಂದೂ ನಾಯಕರಿಗೆ ಗೊತ್ತಿಲ್ಲವೆ? ತಂದೆ ತಾಯಿಗಳು ತಮಗಿಟ್ಟಿರುವ ಹೆಸರುಗಳನ್ನು ಪ್ರಜ್ಞಾಪೂರ್ವಕವಾಗಿ ಪಾಲಿಸುವಂತಿದ್ದರೆ ಬಿ.ಜೆ.ಪಿ.ಯಲ್ಲಿ ಅರ್ಧಕ್ಕಿಂತ ಹೆಚ್ಚು ನಾಯಕರು ಮತ್ತು ಕಾರ್ಯಕರ್ತರು ಆರ್.ಎಸ್.ಎಸ್. ಬಿಟ್ಟು ಹೊರಬರಬೇಕಾಗುತ್ತದೆ ಮತ್ತು ಆ ಕಚೇರಿಯ ಬಾಗಿಲು ಮುಚ್ಚಬೇಕಾಗುತ್ತದೆ. ಎಂಬ ಸತ್ಯವನ್ನು ಅರಿಯದ ಆರ್.ಎಸ್.ಎಸ್. ನಾಯಕರಿವರು. ಕರ್ನಾಟಕದಲ್ಲಿ ಲಿಂಗಾಯತರ ಪಕ್ಷವೆಂದು ಬಿಂಬಿಸಿ, ಲಿಂಗಾಯತ ನಾಯಕರನ್ನು ಮುಂಚೂಣಿಯಲ್ಲಿಟ್ಟ ಬಿ.ಜೆ.ಪಿ.ಯ ಬೆನ್ನೆಲುಬಾದ ಆರ್.ಎಸ್.ಎಸ್. ಸಂಘಟನೆಯ ಪ್ರಮುಖ ಪದಾಧಿಕಾರಿಯೊಬ್ಬ ಲಿಂಗಾಯತರನ್ನು ವಿಘ್ನಸಂತೋಷಿಗಳೆಂದೂ ಇವರು 'ಶನಿಸಂತಾನ' ಎಂದೂ ಸಂಬೋಧಿಸಿ ಇಡೀ ಲಿಂಗಾಯತ ಸಮಾಜವನ್ನು ಹೀಗಳೆದ. ಇನ್ನೊಬ್ಬ ಹಿಂದೂ ಹುಲಿ ಶ್ರೀರಾಮ ಸೇನೆಯ ಸಂಸ್ಥಾಪಕ ಪ್ರಮೋದ ಮುತಾಲಿಕ್ "ಲಿಂಗಾಯತ ಮತ್ತು ವೀರಶೈವ ಪ್ರತ್ಯೇಕ ಧರ್ಮ ವಿವಾದ ರಾಜಕೀಯ ಕುತಂತ್ರ, ಸಮಾಜವನ್ನು ಒಡೆದು ಆಳುವ ಕೆಲಸ"[೧೫] ಎನ್ನುತ್ತ ಇದೆಲ್ಲಕ್ಕೂ ಆಳುವ ಪಕ್ಷವಾದ ಕಾಂಗ್ರೆಸ್ ಪಕ್ಷವನ್ನು ಮೂಲವಾಗಿಸಿದರು. ಲಿಂಗಾಯತ ಧರ್ಮದವರಾಗಿ ಅವರ ಮತಗಳ ಬಲದಿಂದ ಚುನಾಯಿತರಾದ ತುಮಕೂರು ಸಂಸದ ಜಿ.ಎಸ್.ಬಸವರಾಜು ಅವರಿಗೆ ಲಿಂಗಾಯತರ ಹೋರಾಟ ಲಿಂಗಾಯತರ ಅಸ್ಮಿತೆಯಾಗಿ ಕಾಣದೆ ರಾಜಕೀಯ ಲಾಭಕ್ಕಾಗಿ ಎಂಬಂತೆ ಕಂಡಿತು. "ಲಿಂಗಾಯತ ಧರ್ಮ ಸ್ಥಾಪನೆ ವಿವಾದ ಸಂಪೂರ್ಣ ರಾಜಕೀಯ ಪ್ರೇರಿತವಾದದ್ದು"[೧೬] ಎಂದು ಹೇಳಿಕೆ ನೀಡಿದರು.

ಭಾರತೀಯ ಜನತಾ ಪಕ್ಷವು ಲಿಂಗಾಯತರ ನೈಜ ಬೇಡಿಕೆಯನ್ನು ಸಂಪೂರ್ಣ ಅರ್ಥ ಮಾಡಿಕೊಳ್ಳದೆ ಹೋಯಿತು. ಲಿಂಗಾಯತ-ವೀರಶೈವರ ಸೈದ್ಧಾಂತಿಕ ಇತಿಹಾಸವನ್ನು ಅದೆಂದೂ ಪರಿಶೀಲಿಸಲೇ ಇಲ್ಲ. ಇವೆರಡು ಪಂಥಗಳ ಮಧ್ಯೆ ಇರುವ ಸಿದ್ಧಾಂತದ ಗೋಡೆಯು ಅವರಿಗೆ ಕಾಣಿಸಲೇ ಇಲ್ಲ. ಲಿಂಗಾಯತವು ಹಿಂದೂಧರ್ಮದಿಂದ ಹನ್ನೆರಡನೆಯ ಶತಮಾನದಲ್ಲಿ ಹೊರಹೋಗಿದೆ ಎಂಬ ಐತಿಹಾಸಿಕ ಸತ್ಯವನ್ನು ಕಂಡರೂ ಕಾಣದಂತಿರುವುದು ಇವರ ಜಾಣಕುರುಡು ಎನ್ನಬಹುದು. ಈ ಎರಡು ಧರ್ಮಗಳಲ್ಲಿರುವ ವಿಭಿನ್ನವಾದ ಆಚಾರ, ವಿಚಾರ, ಸಿದ್ಧಾಂತಗಳನ್ನು ಅಭ್ಯಸಿಸಿ ಒರೆಗೆ ಹಚ್ಚುವ ಕೆಲಸ ಮಾಡಲಿಲ್ಲ. ಲಿಂಗಾಯತ

In Public domain. Digitization Muthulakshmi Research Academy

ಹೋರಾಟವು ಕಾಂಗ್ರೆಸ್ ಪಕ್ಷದ ರಾಜಕೀಯ ನಾಟಕದ ಇನ್ನೊಂದು ಅಂಕ ಎಂದು ಕೈ ತೊಳೆದುಕೊಂಡು ಬಿಟ್ಟಿತು. ಈ ಹಿಂದೆ ತಮ್ಮದೇ ನಾಯಕರು ಲಿಂಗಾಯತ ಸ್ವತಂತ್ರ ಧರ್ಮ ಬೇಡಿಕೆಯನ್ನು ಒಪ್ಪಿ ಅನುಮೋದಿಸಿ ಹಸ್ತಾಕ್ಷರ ಮಾಡಿದ್ದರೆಂಬುದನ್ನು ಕೂಡ ಈಗ ಮರೆತಿದ್ದರು. 'ರಾಜಕೀಯ ಲಾಭಕ್ಕಾಗಿ ಕಾಂಗ್ರೆಸ್ ಲಿಂಗಾಯತರನ್ನು ಬಳಸಿಕೊಳ್ಳುತ್ತಿದ್ದಾರೆ, ತಮ್ಮ ಬುಟ್ಟಿಯಲ್ಲಿರುವ ಮತಗಳನ್ನು ಕಸಿಯುವ ಕುತಂತ್ರ' ಎಂದು ಭಾವಿಸಿ ಲಿಂಗಾಯತರ ಆತ್ಮಸಾಕ್ಷಿಯನ್ನು ಅರಿಯದೇ ಹೋದರು. ಇದು ನ್ಯಾಯಯುತವಾದ ನೈಜ ಹೋರಾಟವೆಂದು ಅವರೆಂದೂ ಮನ್ನಿಸಲಿಲ್ಲ. ಇದು ಲಿಂಗಾಯತರ ಮತ್ತೊಂದು ದೊಡ್ಡ ದೌರ್ಭಾಗ್ಯ. ಇದನ್ನು ಬಿ.ಜೆ.ಪಿ. ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಉಪಮುಖ್ಯಮಂತ್ರಿ ಆರ್.ಅಶೋಕರು ಈ ಚಳುವಳಿಯನ್ನು ರಾಜಕೀಯಗೊಳಿಸದ್ದರು. "ಜಾತಿ ಜಾತಿಗಳ ಮಧ್ಯೆ ವಿಷ ಬೀಜ ಬಿತ್ತುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಒಡೆದಾಳುವ ನೀತಿ ಅನುಸರಿಸುತ್ತಿದ್ದಾರೆ; ವೀರಶೈವ ಲಿಂಗಾಯತ ಮತ್ತು ಇತರ ಜಾತಿಗಳ ಮಧ್ಯೆ ಕಲಹ ಹುಟ್ಟುಹಾಕಿ ಅವರಿಗೂ ಅದಕ್ಕೂ ಸಂಬಂಧವೇ ಇಲ್ಲ ಎನ್ನುವಂತೆ ಸಿದ್ದರಾಮಯ್ಯ ವರ್ತಿಸುತ್ತಿದ್ದಾರೆ; ಪಕ್ಷದ ಅಧ್ಯಕ್ಷ ಅಮಿತ್ ಷಾ ಬಂದುಹೋದ ಮೇಲೆ ಕಾಂಗ್ರೆಸ್ ನಾಯಕರ ನಿದ್ದೆಯೇ ಹಾರಿಹೋಗಿದೆ" ಎನ್ನುತ್ತ ಲಿಂಗಾಯತ ಹೋರಾಟವನ್ನು ಕಾಂಗ್ರೆಸ್ ಪಕ್ಷದ ಚುನಾವಣಾ ಹೋರಾಟ ಎಂಬಂತೆ ಬಿಂಬಿಸುತ್ತಿದ್ದರು.

ಕೊನೆ ಟಿಪ್ಪಣಿಗಳು

೧. ಪ್ರಜಾವಾಣಿ ಸೆಪ್ಟೆಂಬರ್ ೩, ೨೦೧೭.

೨. ಪ್ರಜಾವಾಣಿ ಸೆಪ್ಟೆಂಬರ್ ೧೧, ೨೦೧೭.

೩. ಮೊದಲನೆಯ ಶೂನ್ಯ ಸಿಂಹಾಸನದ ಪೀಠಾಧಿಪತಿಗಳು ಶ್ರೀ ಅಲ್ಲಮಪ್ರಭುದೇವರು, ಎರಡನೆಯ ಪೀಠಾಧಿಪತಿಗಳು ಶೀ ಚೆನ್ನಬಸವಣ್ಣನವರು ಮತ್ತು ಮೂರನೆಯ ಹಾಗೂ ಕೊನೆಯ ಪೀಠಾಧಿಪತಿಗಳು ಶ್ರೀ ಸಿದ್ಧರಾಮೇಶ್ವರರು. ಇವರ ಅನೇಕ ದೇವಸ್ಥಾನಗಳನ್ನು ಇಂದು ಕರ್ನಾಟಕ, ಆಂದ್ರ ಮತ್ತು ಮಹಾರಾಷ್ಟ್ರಗಳಲ್ಲಿ ಕಾಣಬಹುದು.

೪. ಸಿದ್ಧಶೈಲ; ಗುರುವಂದನ ಮಹಾಸಂಪುಟ ಪು.ಸಂ.೧೭.

೫. ಇಂದು ಈ ಕಟ್ಟಡವನ್ನು ಕಲ್ಮಠ ಅಥವಾ ಹಳೆಮಠ ಎನ್ನುತ್ತಾರೆ. ಬಯಲಲ್ಲಿ ಬಯಲಾದ ಪೂಜ್ಯ ಶ್ರೀ ಶಿವಕುಮಾರಸ್ವಾಮೀಜಿಯವರು ಈ ಹಳೆಯ ಕಟ್ಟಡದಲ್ಲಿಯೇ ಮಲಗುತ್ತಿದ್ದರು. ಇದು ಒಂಬತ್ತು ಕಂಬಗಳಿರುವ ಕಲ್ಲುಹೊದಿಕೆಯ ಪುರಾತನ ಕಟ್ಟಡ, ಇಲ್ಲಿರುವ ಕಲ್ಲಿನ ಕಂಬಗಳಳ ಮೇಲೆ ಕಾಳಾಮುಖರ ಕಾಲದ ಉಬ್ಬು ಚಿತ್ರಗಳಿವೆ.

೬. ಸಿದ್ಧಶೈಲ, ಶ್ರೀಸಿದ್ಧಗಂಗಾ ಪ್ರಕಾಶನ, ಶ್ರೀಸಿದ್ಧಗಂಗಾ ಮಠ, ತುಮಕೂರು.

೭. ದೃಶ್ಯ ಮಾಧ್ಯಮದ ವರದಿಗಳು.

೮. The Hindu: archives.

In Public domain. Digitization Muthulakshmi Research Academy

೯. ದೃಶ್ಯ ಮಾಧ್ಯಮಗಳ ವರದಿ.

೧೦. ದೃಶ್ಯ ಮಾಧ್ಯಮಗಳ ವರದಿಗಳು.

೧೧. ಪ್ರಜಾವಾಣಿ ಸೆಪ್ಟೆಂಬರ್ ೧೪, ೨೦೧೭.

೧೨. ಪ್ರಜಾವಾಣಿ ಸೆಪ್ಟೆಂಬರ್ ೧೪, ೨೦೧೭.

೧೩. "ಸಿದ್ಧಗಂಗಾ ಶ್ರೀಗಳ ಹೇಳಿಕೆ ಬದಲು" ಪ್ರಜಾವಾಣಿ ಸೆಪ್ಟೆಂಬರ್ ೧೫, ೨೦೧೭.

೧೪. "ಬುದ್ಧಿ ಭ್ರಷ್ಟರಿಂದ ಧರ್ಮ ಒಡೆಯುವ ಕಾರ್ಯ". ಸು.ರಾಮಣ್ಣ; ಪ್ರಜಾವಾಣಿ ಅಕ್ಟೋಬರ್ ೨,೨೦೧೭.

೧೫. ಪ್ರಜಾವಾಣಿ ಜುಲೈ ೨೭, ೨೦೧೭.

೧೬. ಪ್ರಜಾವಾಣಿ ಜುಲೈ ೨೭, ೨೦೧೭.

In Public domain. Digitization Muthulakshmi Research Academy

ಅಧ್ಯಾಯ ಎಂಟು

ಹುಬ್ಬಳ್ಳಿ ರ್‍ಯಾಲಿ

ಬೀದರ್, ಬೆಳಗಾವಿ ಮತ್ತು ಕಲಬುರ್ಗಿ ರ್‍ಯಾಲಿಗಳ ಜಯಭೇರಿ ಲಿಂಗಾಯತರಲ್ಲಿ ಹೊಸ ಭರವಸೆಯನ್ನು ಮೂಡಿಸಿತ್ತು. ಒಂಬತ್ತನೂರು ವರ್ಷಗಳ ಇತಿಹಾಸದಲ್ಲಿ ಲಿಂಗಾಯತರು ಇಷ್ಟೊಂದು ದೊಡ್ಡ ಮಟ್ಟದಲ್ಲಿ ಸಂಘಟಿತರಾಗಿರಲಿಲ್ಲ. ಬೀದಿಗಿಳಿದಿರಲಿಲ್ಲ. ಲಿಂಗಾಯತ ಧರ್ಮವು ಲಿಂಗಾಯತ ಧರ್ಮೀಯನ ಹೊಸ್ತಿಲಿಗೆ ಸೀಮಿತವಾಗಿತ್ತು. ಭಾರತವು ಸ್ವಾತಂತ್ರ್ಯಗೊಳ್ಳುವ ಪೂರ್ವದಲ್ಲಿ ಇಂತಹ ಬೇಡಿಕೆಯ ಅವಶ್ಯಕತೆ ಇರಲಿಲ್ಲ. ಧರ್ಮದ ಅಸ್ಮಿತೆಗಿಂತ ಜೀವನ ನಿರ್ವಹಣೆ ಪ್ರಮುಖ ವಾಗಿತ್ತು. ಅಲ್ಲದೆ ಆಳುವ ಸರ್ಕಾರಗಳು ಧರ್ಮವನ್ನು ಆಧರಿಸಿ ತನ್ನ ಪ್ರಜೆಗಳಿಗೆ ಸೌಲಭ್ಯಗಳನ್ನು ನೀಡುತ್ತಿರಲಿಲ್ಲ. ಭಾರತ ಚಿಒಚಿ ಭಾಗಗಳಲ್ಲಿ ಒಡೆದು ಹೋಗಿತ್ತು. ಚಿಒಚಿ ರಾಜರು ತಮ್ಮ ತಮ್ಮ ಗಡಿಯನ್ನು ಗುರುತಿಸಿಕೊಂಡು ತಮ್ಮ ಗಡಿಯೊಳಗಿನ ಪ್ರದೇಶವೇ ತಮ್ಮ ದೇಶವೆಂದುಕೊಂಡಿದ್ದರು. ಒಟ್ಟಾಗಿದ್ದ ಭಾರತದ ಕಲ್ಪನೆ ಅವರಲ್ಲಿ ಇದ್ದಿರಲಿಲ್ಲ. ಅದಕ್ಕಾಗಿ ಆಂಗ್ಲ ಲೇಖಕ ಚಾರ್ಲ್ಸ್ ಗ್ರಾಂಟ್ ಹೀಗೆ ಎನ್ನುತ್ತಾನೆ. "ಹಿಂದೂಸ್ತಾನದವರಿಗೆ ದೇಶಭಕ್ತಿ ಎಂಬುದೇ ಗೊತ್ತಿಲ್ಲ" ರಾಜಶಾಹಿ ಪದ್ಧತಿಯಲ್ಲಿ ಧರ್ಮ ಅತ್ಯಂತ ಮಹತ್ವದ ಸ್ಥಾನ ಪಡೆದಿರಲಿಲ್ಲ. ಅಲ್ಲಿ ಪ್ರಜೆಗಳಿಗೆ ತಮ್ಮ ತಮ್ಮ ಧರ್ಮಗಳನ್ನು ಆಚರಿಸಿಕೊಳ್ಳುವ ಸ್ವಾತಂತ್ರ್ಯವನ್ನು ರಾಜಪ್ರಭುತ್ವ ಸಾಮಾನ್ಯವಾಗಿ ನೀಡಿತ್ತು. ರಾಜ ತಾನು ಪಾಲಿಸುವ ಧರ್ಮವನ್ನು ಪ್ರಜೆಗಳೂ ಪಾಲಿಸಲೇಬೇಕೆಂಬ ಒತ್ತಾಯವನ್ನು ಯಾವ ರಾಜನೂ ಮಾಡಿರಲಿಲ್ಲ. ಮುಸ್ಲಿಂ ರಾಜರ ಆಳ್ವಿಕೆಯಲ್ಲಿ ರಾಜಕೀಯ

In Public domain. Digitization Muthulakshmi Research Academy

ಲಾಭಕ್ಕೋಸ್ಕರ ಪ್ರಜೆಗಳಾದ ಹಿಂದೂಧರ್ಮದವರು ಅಥವಾ ಇನ್ನಾವುದೋ ಧರ್ಮದವರು ಧರ್ಮಾಂತರವಾಗಿರಬಹುದು. ಅದರೆ ಅದು ಕತ್ತಿಯ ಮೊನಚಿನ ಅಂಜಿಕೆಯಿಂದಲ್ಲ. ಭಾರತದಲ್ಲಿ ಧರ್ಮಾಂತರದ ದಾಖಲೆಗಳು ವಿಚಿತ್ರವೆನಿಸುವಷ್ಟರ ಮಟ್ಟಿಗಿವೆ. ಏಳನೆಯ ಶತಮಾನದಲ್ಲಿ ಮಲಬಾರಿನ ಚೆರುಮಾನ್ ಪೆರುಮಾಳ್ ರಾಜ ಮೆಕ್ಕಾಕ್ಕೆ ಹೋಗಿ ಮುಸ್ಲಿಮನಾಗಿ ಮತ್ತು ಅಲ್ಲಿಯೇ ನಿಧನರಾದ ಕಥೆ ಇದೆ. ಅದೇ ಕಾರಣವಾಗಿ ಇಸ್ಲಾಂಧರ್ಮವು ಏಳನೆಯ ಶತಮಾನದಲ್ಲಿ ಕೇರಳದಲ್ಲಿ ನೆಲೆಸಿತೆಂಬ ದಾಖಲೆ ದೊರೆಯುತ್ತವೆ. ಇರಲಿ.

ಕಲ್ಯಾಣಕ್ರಾಂತಿಯ ನಂತರ ಲಿಂಗಾಯತದ ಕಿಡಿ ಎಂದೂ ಜ್ವಾಲಾಮುಖಿಯಾಗಿ ಸ್ಫೋಟಗೊಂಡಿರಲಿಲ್ಲ. ಕಲ್ಯಾಣಕ್ರಾಂತಿಯ ನಂತರ ಮೊದಲ ಬಾರಿಗೆ ದೊಡ್ಡ ಮಟ್ಟದ ವೈಚಾರಿಕ ಕ್ರಾಂತಿ ಬೀದರ್ ಮತ್ತು ಬೆಳಗಾವಿ, ಕಲಬುರ್ಗಿಯಲ್ಲಾಗಿತ್ತು. ಲಿಂಗಾಯತ ಧರ್ಮದ ಬೇಡಿಕೆ ಜನಸಾಮಾನ್ಯರಿಂದ ಹೆಚ್ಚುತ್ತ ಹೋಯಿತು. ಈ ಹಿಂದೆ ಅಂದರೆ ಜುಲೈ ೨೭, ೨೦೧೭ರಂದು ಅಖಿಲ ಭಾರತ ವೀರಶೈವ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪ "ಸ್ವತಂತ್ರ ಧರ್ಮದ ಹೋರಾಟದಿಂದ ಹಿಂದೆ ಸರಿಯಲ್ಲ" ಎಂದು ಹೇಳಿದ್ದರು. ಆದರೆ ಬೆಳಗಾವಿ ಸಭೆಯ ನಂತರ ಅ.ಭಾ.ವೀ.ಮ.ಸಭಾದ ನಿಲುವಿನಲ್ಲಿ ಭಾರಿ ಬದಲಾವಣೆ ಕಂಡಿತು. "ಲಿಂಗಾಯತ ಪ್ರತ್ಯೇಕವಾದಿಗಳು ತಮ್ಮ ವೈಯಕ್ತಿಕ ಸಾಧನೆಗೆ ಹಾತೊರೆಯುತ್ತಿದ್ದು ಸ್ವಪ್ರತಿಷ್ಠೆಯ ಬೆನ್ನು ಬಿದ್ದಿದ್ದಾರೆ. ಇವರಿಗೆ ನಾಚಿಕೆ ಆಗಬೇಕು"[೧] ಎಂದು ವೀರಶೈವ ಮಹಾಸಭೆಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆಯವರು ಪರೋಕ್ಷವಾಗಿ ಸಚಿವರಾದ ಎಂ.ಬಿ.ಪಾಟೀಲ ಮತ್ತು ವಿನಯ ಕುಲಕರ್ಣಿ ವಿರುದ್ಧ ಕಿಡಿ ಕಾರಿದರು. ಭಾರತಿಯ ಜನತಾ ಪಕ್ಷ ತಟಸ್ಥವಾಗಿ ಉಳಿಯಲು ನಿರ್ಧರಿಸಿತು. "ಲಿಂಗಾಯತದಿಂದ ವೀರಶೈವ ಪದ ತೆಗೆದರೆ ಹೋರಾಟ"[೨] ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯರು ಹೇಳಿದ್ದರು. ಲಿಂಗಾಯತ ಧರ್ಮ ಹೋರಾಟದ ಮುಂಚೂಣಿಯಲ್ಲಿದ್ದ ಗದುಗಿನ ಜಗದ್ಗುರು ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿವರಿಗೆ "ತೋಂಟದ ಶ್ರೀಮಠ ಬಿಡಲಿ"[೩] ಎಂದು ದಿಂಗಾಲೇಶ್ವರ ಸ್ವಾಮೀಜಿ ಹೇಳಿಕೆ ನೀಡಿದರು[೩] ಸಾಹಿತಿಗಳು, ವಿಚಾರವಂತರು, ವಿದ್ವಾಂಸರು, ಧರ್ಮಾಧಿಕಾರಿಗಳು, ವಿರಕ್ತರು, ಗುರುವರ್ಗದವರೆಂದು ಸಮಾಜದ ವಿವಿಧ ವರ್ಗದವರು ತಮ್ಮ ತಮ್ಮ ನಿಲುವುಗಳನ್ನು ಸಾರ್ವಜನಿಕವಾಗಿ ವ್ಯಕ್ತಪಡಿಸಲು ಪ್ರಾರಂಭಿಸಿದರು. ದಿನನಿತ್ಯ ಮಾಧ್ಯಮಗಳಲ್ಲಿ ಇದೊಂದು ಪ್ರಮುಖ ಸುದ್ದಿಯಾಗಿ ಪ್ರಕಟವಾಗುತ್ತಿತ್ತು. ವಿದ್ಯುನ್ಮಾನದ ಮಾಧ್ಯಮಗಳಿಗೆ ಇದೊಂದು ಉಪಜೀವನದ ಕಾಯಕವಾಯಿತು. ದಿನನಿತ್ಯ ಟೆಲಿವಿಜನ್ ಸ್ಟುಡಿಯೋಗಳಲ್ಲಿ ಪರ ವಿರೋಧ ಚರ್ಚೆಗಳು ಆಗಲಾರಂಭಿಸಿದವು. ವಿಚಾರಗಳಲ್ಲಿ ಪರಸ್ಪರ ಹೊಂದಾಣಿಕೆ ಆಗದ ಸಮಯದಲ್ಲಿ ಕೈ ಕೈ ಮಿಲಾಯಿಸುವ ಹಂತಕ್ಕೆ ಹೋಯಿತು.

In Public domain. Digitization Muthulakshmi Research Academy

ಸಿದ್ಧರಾಮಯ್ಯನವರ ಸರಕಾರದ ಲಿಂಗಾಯತ ಮಂತ್ರಿಗಳಲ್ಲಿ ಎರಡು ಭಾಗವಾಯಿತು. ಒಂದು ಭಾಗ ವೀರಶೈವರ ಪರವಾದರೆ ಇನ್ನೊಂದು ಭಾಗ ಲಿಂಗಾಯತರ ಪರವಾಯಿತು. ವೀರಶೈವ ಮಹಾಸಭೆಯ ಫಲಾನುಭಾವಿಗಳಾದ ಸಚಿವ ಈಶ್ವರ ಖಂಡ್ರೆ ಮತ್ತು ಎಸ್.ಎಸ್.ಮಲ್ಲಿಕಾರ್ಜುನ ಅವರು 'ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಮಾನ್ಯತೆಯೇ ಬೇಡ' ಎನ್ನುವ ಮಟ್ಟಕ್ಕೆ ಹೋದರು. ಇತ್ತ ಮಾನ್ಯರಾದ ಎಂ.ಬಿ.ಪಾಟೀಲ, ಶರಣಪ್ರಕಾಶ ಪಾಟೀಲ, ಬಸವರಾಜ ರಾಯರೆಡ್ಡಿ ಮತ್ತು ವಿನಯ ಕುಲಕರ್ಣಿಯವರು ಲಿಂಗಾಯತ ಧರ್ಮಕ್ಕೆ ಅಲ್ಪಸಂಖ್ಯಾತ ಮಾನ್ಯತೆ ಬೇಕೇ ಬೇಕು ಎಂದು ಹಟ ಹಿಡಿದು ಹೋರಾಡಲು ಅಣಿಯಾದರು. ಲಿಂಗಾಯತದ ಪರವಾಗಿದ್ದ ಸಚಿವರು ಶಕ್ತಿ ಪ್ರದರ್ಶನಕ್ಕೆ ನಿಂತಂತೆ ತಮ್ಮ ಇರುವಿಕೆಯನ್ನು ಪ್ರದರ್ಶಿಸಲು ಲಿಂಗಾಯತ ಹೋರಾಟಕ್ಕೆ ಇನ್ನಿಲ್ಲದ ಶಕ್ತಿ ತುಂಬಲು ಪ್ರಯತ್ನಿಸಲಾರಂಭಿಸಿದರು.

ಹುಬ್ಬಳ್ಳಿಯ ರ್‍ಯಾಲಿಗೆ ಪ್ರಚಾರದ ಅವಶ್ಯಕತೆ ಇರಲಿಲ್ಲ. ಪ್ರತಿನಿತ್ಯ ಮಾಧ್ಯಮಗಳು ಲಿಂಗಾಯತ–ವೀರಶೈವ–ಹಿಂದೂ ಎಂಬ ಚರ್ಚೆಗಳನ್ನು ಹುಟ್ಟುಹಾಕುತ್ತಲೇ ಇದ್ದವು. ಡಾ.ಜಾಮದಾರ, ನಾನು ಮತ್ತು ಡಾ.ಜಯಣ್ಣ ಲಿಂಗಾಯತ ಧರ್ಮದ ಕೋರ್ ಕಮಿಟಿಯ ಸದಸ್ಯರಾಗಿದ್ದೆವು. ಪ್ರತಿನಿತ್ಯ ಕಚೇರಿಗೆ ತೆರಳುವಂತೆ ನಾವು ಕೂಡ ದಿನನಿತ್ಯ ಬಿ.ಎಲ್.ಡಿ.ಯ ಬೆಂಗಳೂರಿನ ಕಚೇರಿಯಲ್ಲಿ ಸೇರುತ್ತಿದ್ದೆವು. ಮೀಡಿಯಾಗಳೊಂದಿಗೆ ಮಾತಾಡುವುದು ನಿತ್ಯ ದಿನಚರಿಯಾಗಿತ್ತು. ಪರ ವಿರೋಧಗಳ ಚರ್ಚೆ ತಾರಕಕ್ಕೆ ಏರಿತ್ತು. ಹೊಸ ಯೋಜನೆಗಳ ಬಗ್ಗೆ ಸಚಿವರು ನಮ್ಮೊಂದಿಗೆ ನಿತ್ಯವೂ ಚರ್ಚಿಸುತ್ತಿದ್ದರು.

ರಾಷ್ಟ್ರೀಯ ಬಸವಸೇನೆ

ರಾಷ್ಟ್ರೀಯ ಬಸವಸೇನೆಯ ಕಲ್ಪನೆ ಹರಳುಗಟ್ಟಿದ್ದು ಸಚಿವರ ಮಟ್ಟದಲ್ಲಿ ಆಗಿರಬಹುದು. ಲಿಂಗಾಯತ ಹೋರಾಟದ ಎರಡನೆಯ ಸಭೆಯಾದ ಬೆಳಗಾವಿಯ ಸಭೆಯಲ್ಲಿ ಸಚಿವ ವಿನಯ ಕುಲಕರ್ಣಿಯವರು ಇದರ ಬಗ್ಗೆ ಹೇಳಿದ್ದನ್ನು ಓದುಗರು ಸೂಕ್ಷ್ಮವಾಗಿ ಗಮನಿಸಬೇಕು. ಸಚಿವರಾದ ಎಂ.ಬಿ.ಪಾಟೀಲರಿಗೆ ರಾಷ್ಟ್ರೀಯ ಬಸವಸೇನೆಯನ್ನು ಅಗಾಧವಾಗಿ ಬೆಳೆಸುವ ಹಂಬಲ ಇತ್ತು. ಅದಕ್ಕಾಗಿ ಅವರು ತನು ಮನ ಧನವನ್ನು ಧಾರೆಯರೆಯಲು ಸಿದ್ಧರಿದ್ದರು. ಆರ್.ಬಿ.ಎಸ್. ಸಂಸ್ಥೆಯನ್ನು ಆರ್.ಎಸ್.ಎಸ್. ಸಂಸ್ಥೆಯ ಪರ್ಯಾಯ ಸಂಸ್ಥೆಯನ್ನಾಗಿ ಬೆಳೆಸಬೇಕೆಂಬ ದೊಡ್ಡ ಕನಸನ್ನು ಕಾಣುತ್ತಿದ್ದರು. 'ಆದಕ್ಕೆ ಶುಲ್ಕವಿಲ್ಲದೆ ಸದಸ್ಯತ್ವ' ನೀಡಬೇಕು. 'ಕರ್ನಾಟಕದ ಪ್ರತಿಯೊಬ್ಬ ಲಿಂಗಾಯತ ಯುವಕ ರಾಷ್ಟ್ರೀಯ ಬಸವಸೇನೆಯ ಸದಸ್ಯನಾಗಬೇಕು' ಎಂದು ಬಯಸಿದ್ದರು. ಅದರ ರೂಪರೇಷೆಗಳನ್ನು ಸಿದ್ಧಪಡಿಸಲು ನಮ್ಮನ್ನು ಕೇಳಿಕೊಂಡಿದ್ದರು. ಒಂದು ಚಿಕ್ಕ ಜಾಹೀರಾತು ಕಂಪನಿಯನ್ನು ಗೊತ್ತು

In Public domain. Digitization Muthulakshmi Research Academy

ಮಾಡಿ ಅದಕ್ಕೆ ಈ ಕೆಲಸವನ್ನು ಮಾಡಲು ಆದೇಶ ಮಾಡಿದ್ದರು. ಅದರ ಮೇಲುಸ್ತುವಾರಿಯನ್ನು ನಮ್ಮ ಟೀಮಿಗೆ ವಹಿಸಿದ್ದರು(ಡಾ.ಜಾಮದಾರ, ನಾನು, ಡಾ.ಜಯಣ್ಣ). ಸತ್ಯವಾಗಿ ಹೇಳುವುದಾದರೆ ನಮಗೆ ಅದರ ಬಗ್ಗೆ ಹೆಚ್ಚು ಒಲವು ಇರಲಿಲ್ಲ. ನಾನು ಅದರಿಂದ ದೂರ ಸರಿಯಲಾರಂಭಿಸಿದೆ. ಬಸವರಾಜ ಎಂಬ ಯುವಕನನ್ನು ಅದರ ಕಾರ್ಯದರ್ಶಿ ಮಾಡಿ ನಾನು ಹಿಂದೆ ಸರಿದೆ. ಅದಕ್ಕೆ ಕಾರಣವೂ ಇತ್ತು. ಆರ್.ಬಿ.ಎಸ್. ಯುವಪಡೆಯಾಗಿತ್ತು. ಅದು ಮುಂಬರುವ ಜಾಗತಿಕ ಲಿಂಗಾಯತ ಮಹಾಸಭೆಯ ಯೂತ್ ವಿಂಗ್ ಆಗಲಿತ್ತು. ಸದಸ್ಯರ ಗರಿಷ್ಠ ವಯಸ್ಸನ್ನು ೪೫ಕ್ಕೆ ಮಿತಿಗೊಳಿಸಲಾಗಿತ್ತು. ನಾನಾಗಲೇ ೪೫ನ್ನು ಕ್ರಾಸ್ ಮಾಡಿದ್ದೆ. ಹೀಗಾಗಿ ನಾನು ಆ ಜವಾಬ್ದಾರಿಯಿಂದ ವೈಯಕ್ತಿಕವಾಗಿ ಹಿಂದೆ ಸರಿದಿದ್ದೆ. ಆರ್.ಬಿ.ಎಸ್. ಮುಖಪುಟದ ಜಾಹೀರಾತನ್ನು ನಾವು ಬಹಳ ಚರ್ಚಿಸಿ ಒಪ್ಪಿಕೊಂಡಿದ್ದೆವು. ಹುಬ್ಬಳ್ಳಿ ರ್‍ಯಾಲಿಯ ಹಿಂದಿನ ದಿವಸ ಕನ್ನಡದ ಎಲ್ಲ ಪತ್ರಿಕೆಯಲ್ಲಿ ಅದರ ಜಾಹೀರಾತು ಪ್ರಕಟವಾಗಿತ್ತು.

ಹುಬ್ಬಳ್ಳಿಯ ರ್‍ಯಾಲಿಯ ಸಂಪೂರ್ಣ ಶ್ರೇಯ ಸಚಿವ ವಿನಯ ಕುಲಕರ್ಣಿಯವರಿಗೆ ಸಲ್ಲುತ್ತದೆ. ತರುಣರಾದ ವಿನಯ ಕುಲಕರ್ಣಿ ದೈತ್ಯ ಕೆಲಸಗಾರರು. ಕನಿಷ್ಠ ಒಂದು ತಿಂಗಳ ಕಾಲ ಹುಬ್ಬಳ್ಳಿ ರ್‍ಯಾಲಿಗಾಗಿ ಮೀಸಲಿಟ್ಟಿದ್ದರು. ೪೮೦ ಹಳ್ಳಿಗಳಿಗೆ ಭೇಟಿ ನೀಡಿ ನೂರಾರು ಸಭೆಗಳನ್ನು ಮಾಡಿದ್ದರು. ಅವರನ್ನು ರ್‍ಯಾಲಿಯ ಸಮಯದಲ್ಲೊಮ್ಮೆ ಕಾಣುವ ಅವಕಾಶ ನನಗೆ ಸಿಕ್ಕಿತ್ತು. ಅವರ ಮುಖ ನೋಡಿ ಗಾಬರಿಯಿಂದ "ಏನಾಗಿದೆ ನಿಮ್ಮ ಮುಖಕ್ಕೆ" ಎಂದು ಕೇಳಿದ್ದೆ. ಸಚಿವರ ಮುಖ ಬಿಸಿಲಿನಿಂದ ಸುಟ್ಟುಹೋಗಿತ್ತು. ಹುಬ್ಬಳ್ಳಿಯ ರ್‍ಯಾಲಿಯ ಜಯಾಪಜಯದ ಸಂಪೂರ್ಣ ಕ್ರೆಡಿಟ್ ಸಚಿವ ಕುಲಕರ್ಣಿಯವರಿಗೆ ಸಲ್ಲಬೇಕು.

ರ್‍ಯಾಲಿಯ ಎರಡು ದಿನ ಮುಂಚೆ ಹುಬ್ಬಳ್ಳಿಗೆ ಸಚಿವರಾದ ಶ್ರೀ ಎಂ.ಬಿ.ಪಾಟೀಲ ಮತ್ತು ಶ್ರೀ ಬಸವರಾಜ ಹೊರಟ್ಟಿಯವರೊಂದಿಗೆ ಹೋಗಿದ್ದೆವು. ಸಚಿವರು ಹೋಟೆಲಿನಲ್ಲಿ ತಂಗಿದ್ದರು. ನಮಗೆ ಹುಬ್ಬಳ್ಳಿ ಸರ್ಕೀಟ್ ಹೌಸಿನಲ್ಲಿ ಹೊರಟ್ಟಿ ಸಾಹೇಬರು ರೂಮು ಕಾಯ್ದಿರಿಸಿದ್ದರು. ಒಂದು ಸಂಜೆಯ ಸಮಯ ರಾಷ್ಟ್ರೀಯ ಟೆಲಿವಿಷನ್ ಇಂಡಿಯಾ ಟುಡೆಯವರು ನನ್ನನ್ನು ಹುಡುಕಿಕೊಂಡು ಸರ್ಕೀಟ್ ಹೌಸ್‌ಗೆ ಬಂದರು. ನಾನು ಅವರೊಂದಿಗೆ ಮಾತನಾಡಲಿಲ್ಲ. ನಮ್ಮ ನಾಯಕರಾದ ಎಂ.ಬಿ.ಪಾಟೀಲರೊಂದಿಗೆ ಮಾತಾಡಿ ಎಂದು ಅವರನ್ನು ಹೋಟೆಲ್‌ಗೆ ಕರೆದೊಯ್ದೆ. ಒಂದು ಗಂಟೆಯ ದೀರ್ಘವಾದ ಸಂದರ್ಶನ ನೀಡಿದ್ದರು.

ಹುಬ್ಬಳ್ಳಿ ನಗರದ ಹೃದಯ ಭಾಗದಲ್ಲಿರುವ ನೆಹರು ಮೈದಾನದಲ್ಲಿ ದಿನಾಂಕ ೫.೧೧.೨೦೧೭ರಂದು ನಡೆಯಲಿರುವ ಐತಿಹಾಸಿಕ ಸಭೆಗಾಗಿ ಪೆಂಡಾಲ್

In Public domain. Digitization Muthulakshmi Research Academy
ಸಿದ್ಧವಾಗುತ್ತಿತ್ತು. "ಪೆಂಡಾಲನ್ನು ಒಮ್ಮೆ ನೋಡಿಕೊಂಡು ಬರೋಣ ನಡೆಯಿರಿ" ಎಂದರು ಹಿರಿಯ ನಾಯಕರಾದ ಬಸವರಾಜ ಹೊರಟ್ಟಿಯವರು. ಸಚಿವರು ಹಾಗೂ ಶಾಸಕರೊಂದಿಗೆ ನಾವೂ ಕಾರನ್ನು ಏರಿದ್ದೆವು.

೨೫೦ ಅಡಿ ಉದ್ದ ೪೦ ಅಡಿ ಅಗಲದ ವೇದಿಕೆಯನ್ನು ನಿರ್ಮಿಸಿದ್ದರು. ವೇದಿಕೆ ಪಕ್ಕದಲ್ಲಿ ಕಂಬಗಳನ್ನು ನೆಡುವ ಕಾರ್ಯ ನಡೆದಿತ್ತು. ಸಚಿವ ಎಂ.ಬಿ.ಪಾಟೀಲರು 'ಕಂಬ ಏಕೆ ನೆಡುತ್ತಿದ್ದೀರಿ' ಎಂದರು. ಆಗ "ಸರ್ ಅತಿಥಿಗಳಿಗೆ ನೆರಳನ್ನು ಒದಗಿಸಲು ಹೇಳಿದ್ದಾರೆ, ವೇದಿಕೆಯ ಬದಿಯಲ್ಲಿ ದೊಡ್ಡ ದೊಡ್ಡ ಎರಡು ವಾಟರ್ ಕೂಲರ್‌ಗಳು ಇರಲಿವೆ. ಮೇಲೆ ಫ್ಯಾನುಗಳ ವ್ಯವಸ್ಥೆಯನ್ನೂ ಮಾಡುವೆ" ಎಂದರು ಕಾಂಟ್ರಾಕ್ಟರ್. ಆಗ ಸಚಿವರು "ನಾವು ಕೂಲರ್‌ಗಳಿರುವ ಪೆಂಡಾಲದ ನೆರಳಿನಲ್ಲಿ ನಿಂತು ಭಾಷಣ ಮಾಡುವಾಗ, ಕೇಳುಗರು ಬಿರುಬಿಸಿಲಿನಲ್ಲಿ ನೆಲದಲ್ಲಿ ಕೂತು ನಮ್ಮ ಮಾತುಗಳನ್ನು ಕೇಳಬೇಕೇ? ಕಂಬಗಳನ್ನು ಹಾಕುವ ಅವಶ್ಯಕತೆ ಇಲ್ಲ. ಭಾಷಣಕಾರರು ಜನರಿಗೆ ಕಾಣುವಂತೆ ಮಾತ್ರ ವೇದಿಕೆ ನಿರ್ಮಿಸಿ. ಜನರು ಬಿಸಿಲಿನಲ್ಲಿ ನಿಂತು ಕೇಳುವಾಗ ನಾವೂ ಬಿಸಿಲಿನಲ್ಲಿ ನಿಂತು ಮಾತಾಡತೀವಿ" ಎಂದರು ಸಚಿವರು. ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ... ಎಂಬ ವಚನ ನೆನಪಾಯಿತು.

"ಲಿಂಗಾಯತ ಸ್ವತಂತ್ರ ಧರ್ಮದ ಹೋರಾಟ" ಎಂಬ ವಾಕ್ಯದ ಬ್ಯಾಕ್ ಡ್ರಾಪ್ ತಯಾರಾಗಿ ಬಂದಿತ್ತು. ಬ್ಯಾಕ್‌ಡ್ರಾಪ್ ವಿಷಯದಲ್ಲಿ ನಾವು ಬೆಂಗಳೂರಿನಲ್ಲಿ ತೆಗೆದುಕೊಂಡ ನಿರ್ಣಯ ನೆನಪಾಯಿತು. ಅಲ್ಲಿರುವ ಬ್ಯಾಕ್‌ಡ್ರಾಪ್ ಅದರಂತಿರಲಿಲ್ಲ. ಬ್ಯಾಕ್‌ಡ್ರಾಪ್ ಬದಲಾಯಿಸಿ ಹೊಸ ಬ್ಯಾಕ್‌ಡ್ರಾಪ್‌ನಲ್ಲಿ "ಲಿಂಗಾಯತ ಅಲ್ಪಸಂಖ್ಯಾತ ಧರ್ಮ ಮಾನ್ಯತೆಗಾಗಿ" ಎಂದು ಬರೆಸಲು ಸೂಚಿಸಿದೆವು. ಲಿಂಗಾಯತ ಧರ್ಮ ಹೋರಾಟದ ಪ್ರಾರಂಭದ ದಿನಗಳಲ್ಲಿ "ಲಿಂಗಾಯತ ಸ್ವತಂತ್ರ ಧರ್ಮದ ಹೋರಾಟ"ವೆಂದೇ ಎಲ್ಲರೂ ಹೇಳುತ್ತಿದ್ದರು. ಆ ಬಗ್ಗೆ ಕಾನೂನು ತೊಡಕುಗಳ ವಿಷಯವಾಗಿ ನಮ್ಮಲ್ಲಿ ಸುದೀರ್ಘ ಚರ್ಚೆಯಾಗಿತ್ತು. "ಧರ್ಮದ ಆಧಾರದಲ್ಲಿ ಪ್ರತ್ಯೇಕ ಸ್ಥಾನಮಾನ ಬೇಕು ಎಂದು ಕೇಳುವುದಕ್ಕೆ ಸಂವಿಧಾನದಲ್ಲಿ ಅವಕಾಶವಿಲ್ಲ; ಲಿಂಗಾಯತರು ಭಾಷಾ ಅಥವಾ ಧಾರ್ಮಿಕ ಅಲ್ಪಸಂಖ್ಯಾತ ಸ್ಥಾನಮಾನ ಕೇಳಿಕೊಳ್ಳಬಹುದೇ ಹೊರತು ಪ್ರತ್ಯೇಕ ಧರ್ಮ ಎಂದು ಕೇಳುವುದಕ್ಕೆ ಸಂವಿಧಾನದಲ್ಲಿ ಅವಕಾಶ ಇಲ್ಲ" ಎಂದು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದ್ದರು ದಕ್ಷ ಲೀಗಲ್ ಸಂಸ್ಥೆಯ ಮುಖ್ಯಸ್ಥ ಎಸ್.ಬಸವರಾಜ ಅವರು. ಇದಕ್ಕೆ ಇನ್ನೊಂದು ದಾರಿ ತೋರಿಸುತ್ತ "ಸಂವಿಧಾನದ ೨೫, ೨೯ ಮತ್ತು ೩೦ನೇ ವಿಧಿಯ ಅನುಸಾರ ಭಾಷಾ ಅಲ್ಪಸಂಖ್ಯಾತರೆಂದು ಕೇಳಿಕೊಳ್ಳಬಹುದು" ಎಂದಿದ್ದರು ಸಹಾಯಕ ಸಾಲಿಸಿಟರ್ ಜನರಲ್ ಕೃಷ್ಣ ಎಸ್. ದೀಕ್ಷಿತ ಅವರು.

In Public domain. Digitization Muthulakshmi Research Academy

ಮುಂದುವರಿದು "ಧಾರ್ಮಿಕ ಅಥವಾ ಭಾಷಾ ಅಲ್ಪಸಂಖ್ಯಾತ ಸ್ಥಾನಮಾನ ಪಡೆಯುವುದರಿಂದ ಚುನಾವಣೆಯಲ್ಲಿ, ಶಿಕ್ಷಣಕ್ಷೇತ್ರದಲ್ಲಿ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಪಡೆಯಲು ಅವಕಾಶ ಇದೆ" ಎಂದು ತಮ್ಮ ಅಭಿಪ್ರಾಯ ತಿಳಿಸಿದ್ದರು.

ನೆಹರು ಮೈದಾನದಲ್ಲಿ ೫೦,೦೦೦ ಕುರ್ಚಿಗಳನ್ನು ಹಾಕಬಹುದಂತೆ. ನಮ್ಮ ಮನೆಯಲ್ಲಿ ಮೇಲೆ ಕುಳಿತರೂ ಅಷ್ಟೇ ಕೆಳಗೆ ಕುಳಿತರೂ ಅಷ್ಟೇ ಎಂಬ ಮನೋಭಾವನೆ ನಮ್ಮವರಲ್ಲಿ ಬೆಳೆದಿತ್ತು. ಯಾರೂ comfort ಕೇಳುತ್ತಿರಲಿಲ್ಲ. ಕಾರಣ ಕುರ್ಚಿ ಹಾಕಿರಲಿಲ್ಲ. ಅದಕ್ಕೆ ಇನ್ನೊಂದು ಕಾರಣವೂ ಇತ್ತು. 'ಸ್ಥಳಾವಭಾವ.' ಒಂದು ಕುರ್ಚಿಯ ಸ್ಪೇಸ್‌ನಲ್ಲಿ ಇಬ್ಬರು ನಿಲ್ಲಬಹುದು. ಕುರ್ಚಿ ಬೇಡ ಎಂದಿದ್ದರು ಸ್ಥಳೀಯ ಸಂಘಟಕರು. ಆದರೆ ನೆಹರು ಮೈದಾನವು ಒಂದು ಸ್ಟೇಡಿಯಂ. ಅಲ್ಲಿ .ಪ್ರೇಕ್ಷಕರ ಗ್ಯಾಲರಿಯೂ ಇದೆ. ಅಲ್ಲಿರುವ ಕಂಬಗಳಿಗೆ ಶರಣರ ಲೈಫ್ ಸೈಜ್ ಕಟೌಟ್ ಕಟ್ಟುವುದು ಒಳಿತು ಎನಿಸಿತು. ಡಾ.ನಾಲವಾಡರಲ್ಲಿ ಬೇಡಿಕೆ ಇಟ್ಟೆ (ಮರುದಿನ ಬೆಳಗ್ಗೆ ನಾವು ಸ್ಟೇಜ್ ಏರುವ ಸಮಯದಲ್ಲಿ ಸುತ್ತಲೂ ಕಣ್ಣಾಡಿಸಿದಾಗ ನಮ್ಮ ಪೂಜ್ಯ ಶರಣರು ಕಂಬಗಳಿಗೆ ಒರಗಿಕೊಂಡು ನಿಂತಿದ್ದರು. ಶರಣರ ಇನ್ನೂರು ಕಟೌಟ್‌ಗಳು ೪–೫ ತಾಸುಗಳಲ್ಲಿ ತಯಾರಾಗಿ ಸಮಾವೇಶಕ್ಕೆ ಮೆರುಗು ತಂದಿದ್ದವು. ಡಾ.ನಾಲವಾಡರನ್ನು ಮನಸ್ಸಿನಲ್ಲಿ ವಂದಿಸಿದೆ).

ವೇದಿಕೆಗೆ ಸರ್ ಸಿದ್ದಪ್ಪ ಕಂಬಳಿಯೆಂದು ಹೆಸರಿಡಲು ನಿರ್ಧರಿಸಲಾಗಿತ್ತು ಸ್ವಾತಂತ್ರ್ಯಪೂರ್ವದಲ್ಲಿ ಡಾ.ಬಾಬಾಸಾಹೇಬರನ್ನು ಗುರುತಿಸಿ ಅವರಿಗೆ ಕೆಲಸ ಕೊಡಿಸಿದ್ದ ಮಹಾ ಮಾನವತಾವಾದಿ ಸರ್ ಸಿದ್ದಪ್ಪ ಕಂಬಳಿಯವರು ಹುಬ್ಬಳ್ಳಿಯಲ್ಲಿ ಜನಿಸಿದವರು. ತಮ್ಮ ಜೀವಮಾನವನ್ನು ಲಿಂಗಾಯತರ ಏಳಿಗೆಗಾಗಿ ಮೀಸಲಿಟ್ಟ ಧೀಮಂತ ನಾಯಕನ ಹೆಸರನ್ನು ವೇದಿಕೆಗೆ ಇಡಲು ಸ್ಥಳೀಯ ನಾಯಕರಾದ ಅರವಿಂದ ಕಟಗಿಯವರು ಸೂಚಿಸಿದ್ದರು. ಅದರಂತೆ ಅವರ ಹೆಸರಿನ ಕಟೌಟ್ ಅಲ್ಲಿತ್ತು. ಉತ್ತರ ಕರ್ನಾಟಕದ ಪ್ರಮುಖ ಪಟ್ಟಣ ಹುಬ್ಬಳ್ಳಿ, ಧಾರವಾಡ ಜಿಲ್ಲೆಯ ಒಂದು ತಾಲ್ಲೂಕು. ಜಿಲ್ಲಾ ಕೇಂದ್ರಕ್ಕಿಂತ ತಾಲ್ಲೂಕು ಕೇಂದ್ರವೇ ದೊಡ್ಡದು. ಈ ಜಿಲ್ಲೆಯ ಮುಖ್ಯ ಉದ್ಯೋಗ ಕೃಷಿ. ಕೃಷಿಕನ ಮಾರುಕಟ್ಟೆಯಾಗಿ ಹುಟ್ಟಿಕೊಂಡ ಹುಬ್ಬಳ್ಳಿ ಇಂದು ಔದ್ಯೋಗಿಕ ನಗರವಾಗಿ ಮಾರ್ಪಟ್ಟಿದೆ. ಇಂದಿನ ಹುಬ್ಬಳ್ಳಿ ಮೊದಲು ಪೂವಳ್ಳಿಯಾಗಿತ್ತು. ಧಾರ್ಮಿಕ ಕ್ಷೇತ್ರವಾಗಬೇಕಾದ ಹುಬ್ಬಳ್ಳಿ ಲೌಕಿಕ ಕ್ಷೇತ್ರವಾಗಿ ಬದಲಾಗಿದ್ದು ಕೌತುಕವೇ ಸರಿ. ಇದಕ್ಕೆ ಕಾರಣ ಲಿಂಗಾಯತ ಧಾರ್ಮಿಕ ನಾಯಕರ ಅಸಡ್ಡೆಯೂ ಕಾರಣವಾಗಿರಬಹುದು. ಹುಬ್ಬಳ್ಳಿ ಮತ್ತು ಧಾರವಾಡ ಮಧ್ಯದಲ್ಲಿರುವ ಉಣಕಲ್ ಗ್ರಾಮದಲ್ಲಿ ಇಂದು 'ಚಂದ್ರಮೌಳೀಶ್ವರಲಿಂಗ'ವೆಂದು ಕರೆಯುವ ಶಿವನ ಐದು ಮುಖಗಳನ್ನು ಹೊಂದಿರುವ 'ಸದ್ಯೋಜಾತ ಲಿಂಗವು' ಅತಿ ಪುರಾತನ ಲಿಂಗ. ಈ ಐದು ಮುಖಗಳ ಸ್ಥಾವರ ಲಿಂಗದ ನಾಲ್ಕು ಮುಖಗಳು

In Public domain. Digitization Muthulakshmi Research Academy

ನಾಲ್ಕು ದಿಕ್ಕುಗಳತ್ತಿದ್ದರೆ ಐದನೆಯ ಮುಖವು ಈಶಾನ್ಯ(ಆಕಾಶ)ದತ್ತ ಮುಖ ಮಾಡಿದೆ. ಇಂತಹ ಲಿಂಗಗಳು ಭರತಖಂಡದಲ್ಲಿ ಕೇವಲ ಎರಡಿವೆ ಎನ್ನುತ್ತಾರೆ ನಿವೃತ್ತ ಐ.ಎ.ಎಸ್. ಅಧಿಕಾರಿ ಬಸ್ರೂರ್ ಸುಬ್ಬಾರಾವ್.[೪](ಇನ್ನೊಂದು ಲಿಂಗವು ಬಾದಾಮಿ ತಾಲ್ಲೂಕಿನ ಮಹಾಕೂಟದಲ್ಲಿದೆ). ಈ ಸ್ಥಾವರಲಿಂಗಗಳನ್ನು ನಾಥ ಮತ್ತು ಕಾಳಾಮುಖ ಪಂಥಗಳು ಪೂಜಿಸುತ್ತಿದ್ದವು. ಈ ಎರಡೂ ಪಂಥಗಳು ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿ ಇಷ್ಟಲಿಂಗ ಪೂಜಕರಾಗಿ ಲಿಂಗಾಯತ ಧರ್ಮೀಯರಾಗಿ ಮಾರ್ಪಟ್ಟವು(ಉತ್ತರ ಕರ್ನಾಟಕದಲ್ಲಿ ಬಹುಸಂಖ್ಯಾತರಾದ ಪಂಚಮಸಾಲಿಗಳು ಬಸವಪೂರ್ವಯುಗದಲ್ಲಿ ಕಾಳಾಮುಖಿಯಾಗಿದ್ದರು. ಇವರು ಸದ್ಯೋಜಾತ ಸ್ಥಾವರಲಿಂಗ ಪೂಜಕರಾಗಿದ್ದರು). ಶೈವ ಪಂಥದ ಕಾಳಾಮುಖ ಪರಂಪರೆಯನ್ನು ತೊರೆದು ಲಿಂಗಾಯತರಾಗಿ ಮಾರ್ಪಟ್ಟ ಶರಣ ಸಂಕುಲದ ಇಪತ್ತಮೂರು ಶರಣರು ಸದ್ಯೋಜಾತನನ್ನು ನೆನಸುತ್ತಾರೆ. ಅದರಲ್ಲಿ ಒಬ್ಬ ಶರಣ ಅವಸರದ ರೇಕಣ್ಣ ತನ್ನ ವಚನಗಳಲ್ಲಿ ಸದ್ಯೋಜಾತನನ್ನು ಅಂಕಿತ ನಾಮವಾಗಿ ಬಳಸಿ, ಆರಾಧಿಸಿದ್ದಾನೆ.

ಮುಟ್ಟುವುದು ತಟ್ಟುವುದು ಸೋಂಕುವುದು ಸುಳಿವುದು
ಲಿಂಗ ಮುಂತೆಂಬಲ್ಲಿ ಅಂಗ ಹಿಂಚೆಂಬಲ್ಲಿ ।
ಮುಂದುಹಿಂದಣ ಉಭಯವನರಿವುದಕ್ಕೆ ಸಂದೇಹಾಸ್ಪದವಾದಲ್ಲಿ ಅದು
ಅನರ್ಪಿತಭೇದ ಸದ್ಯೋಜಾತಲಿಂಗಕ್ಕೆ ॥[೫]

ಇನ್ನೊಬ್ಬ ಶರಣ ಶಿವಲೆಂಕ ಮಂಚಣ್ಣ ಸದ್ಯೋಜಾತನ ಇನ್ನೊಂದು ರೂಪವಾದ ಈಶಾನ್ಯಮೂರ್ತಿಯನ್ನು ತನ್ನ ವಚನಗಳಲ್ಲಿ ನೆನೆಯುತ್ತಾನೆ.

ಗುರು ಸೇವೆಯಲ್ಲಿ ತನು ಕರಗಿ,
ಲಿಂಗಸೇವೆಯಲ್ಲಿ ಮನ ಕರಗಿ,
ಜಂಗಮ ಸೇವೆಯಲ್ಲಿ ಧನ ಕರಗಿ,
ಮಹಾಘನವನರಿವಲ್ಲಿ ಪ್ರಕೃತಿ ಕರಗಿ,
ನಿಜ ನಿಶ್ಚಯವಾಗಿ ನಿಂದಾತನೆ ಸದ್ಭಕ್ತನು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗದಲ್ಲಿ.[೬]

ಕಾಳಾಮುಖರು ಹಾಗೂ ನಾಥಪಂಥದವರು ಹನ್ನೆರಡನೆಯ ಶತಮಾನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಲಿಂಗಾಯತ ಧರ್ಮವನ್ನು ಅಪ್ಪಿಕೊಂಡರು ಎನ್ನುವುದನ್ನು ಬಸ್ರೂರ್ ಸುಬ್ಬಾರಾವ್ ಅವರ ಈ ಕೆಳಗಿನ ಸಾಲುಗಳು ಸಾಕ್ಷೀಕರಿಸುತ್ತವೆ. The total reference to sadyojāta, sadyojāta Linga and ishānya come about

In Public domain. Digitization Muthulakshmi Research Academy

to 270. The total number of Vachanas composed by Ling sharana devotees of Sadyojāta exceeds 10,000, in short more sharanas refer to sadyojāta and Ishānya as god than to shiva/ Rudra''[೬]. ಇಂತಹದೇ ಇನ್ನೊಂದು ಲಿಂಗವು ಬಾದಾಮಿ ತಾಲ್ಲೂಕಿನ ಮಹಾಕೂಟದಲ್ಲಿಯೂ ಸ್ಥಾಪಿತವಾಗಿದ್ದರಿಂದ ಈ ಪ್ರದೇಶದಲ್ಲಿ ಲಿಂಗಾಯತರು ಹೆಚ್ಚಿನ ಸಂಖ್ಯೆಯಲ್ಲಿರುವ ಕಾರಣವನ್ನು ಈ ಆಧಾರದಲ್ಲಿ ಗ್ರಹಿಸಬಹುದು. ಇದರಿಂದ ಇನ್ನೊಂದು ವಿಷಯ ಸ್ಪಷ್ಟವಾಗುತ್ತದೆ. ಆರ್ಯರ ರುದ್ರ ಹಿಂದೂಗಳ ಶಿವ ಬೇರೆ ಬೇರೆ ಎಂದು ತಿಳಿದುಬರುತ್ತದೆ. ಅದರಂತೆ ವೀರಭದ್ರನ ತಂದೆಯಾದ ರುದ್ರನೂ ವೀರಶೈವರ ಶಿವ. ಲಿಂಗಾಯತರಾದ ಪಂಚಮಸಾಲಿಗಳು (ಪೂರ್ವದಲ್ಲಿ ಕಾಳಾಮುಖ) ಶಿವ 'ಈಶಾನ್ಯ' ಲಿಂಗದ ಆರಾಧಕರಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ. ವೀರಶೈವರ ಗುರುವರ್ಗದ ಪಂಚಪೀಠಗಳು ತಾವು ಪಂಚಮಸಾಲಿಗಳ ಗುರುಗಳೆಂದು ಕರೆದುಕೊಳ್ಳುವುದು ಬಹುಸಂಖ್ಯಾತ, ಮುಗ್ಧಕೃಷಿಕ ಪಂಚಮಸಾಲಿಗಳ ಹೆಗಲ ಮೇಲೆ ಸವಾರಿ ಮಾಡುವ ಉದ್ದೇಶದಿಂದ ಮಾತ್ರ.

ಇಂತಹ ಐತಿಹ್ಯದ ಹುಬ್ಬಳ್ಳಿ ೧೯ನೆಯ ಶತಮಾನದಲ್ಲಿ ಇನ್ನೊಂದು ಮಹತ್ವದ ಧಾರ್ಮಿಕ ಬೆಳವಣಿಗೆಗೆ ಕಾರಣವಾಗಿತ್ತು. ಭಾರತೀಯ ರೈಲಿನ ನೈಋತ್ಯ ರೈಲ್ವೆ ವಿಭಾಗದ ಹುಬ್ಬಳ್ಳಿಯ ರೈಲು ನಿಲ್ದಾಣವು ಕರ್ನಾಟಕದ ಶ್ರೇಷ್ಠ ಅನುಭಾವಿ ಹಾಗು ಸಂತ ಸಿದ್ಧಾರೂಢರ ಹೆಸರಿನಿಂದ ಕರೆಯಲ್ಪಡುತ್ತದೆ. ಪೂಜ್ಯ ಸಿದ್ಧಾರೂಢರು ಮೂಲತಃ ಭಾಲ್ಕಿಯಲ್ಲಿ ಜನಿಸಿದ ಲಿಂಗಾಯತರು. ಪ್ರಾರಂಭದ ಶಿಕ್ಷಣ ಗುಮಗುಂಟಾದ ಗಜದಂಡರಿಂದ ಪಡೆಯುತ್ತಾರೆ. ಹೆಚ್ಚಿನ ಜ್ಞಾನದಾಹವನ್ನು ಗರಗದ ಮಡಿವಾಳಪ್ಪನವರಿಂದ ಸಂತೈಸಿಕೊಳ್ಳುತ್ತಾರೆ. ಕಾಯಕ, ದಾಸೋಹ ಮತ್ತು ಸರಳಜೀವನ ಇವರ ಮಂತ್ರವಾಗಿತ್ತು. ಈ ನೆಲದ ಧಾರೆಯಾದ ಇನ್ನೊಂದು ಆರೂಢ ಸಿದ್ಧಾಂತವನ್ನು ಬೆಳಕಿಗೆ ತಂದವರು ಸಿದ್ಧಾರೂಢರು. ಆರೂಢರ ಅನುಭಾವಿಗಳಾಗಿ ದೇಶದಲ್ಲೆಲ್ಲ ಹೆಸರು ವಾಸಿಯಾಗುತ್ತಾರೆ. ಇವರಿಗೆ ತಲೆಬಾಗಿದವರಲ್ಲಿ ಲೋಕಮಾನ್ಯ ತಿಲಕರಿಂದ ಮಹಾತ್ಮಾ ಗಾಂಧಿಜಿಯಂಥವರು ಇದ್ದರು. ರಾಷ್ಟ್ರಪತಿಗಳು ಮಠಕ್ಕೆ ಬಂದರೂ ಇವರನ್ನು ಸ್ವಾಗತಿಸಲು ನಿಲ್ಲದೆ ಕಾಯಕದಲ್ಲಿ ತೊಡಗಿದ್ದ ಕಾಯಕನಿಷ್ಠರು ಈ ಪೂಜ್ಯರು. ಇವರ ಕಾಯಕಭೂಮಿ ಹುಬ್ಬಳ್ಳಿ. ಇಂತಹ ಹುಬ್ಬಳ್ಳಿಯಲ್ಲಿ ಇನ್ನೊಂದು ವಿರಕ್ತಮಠವಿದೆ. ಅದೇ ಮೂರುಸಾವಿರ ಮಠ. ಈ ಮಠವು ತನ್ನ ಚರಿತ್ರೆಯನ್ನು ಬಸವೋತ್ತರ ಯುಗಕ್ಕೆ ತೆಗೆದುಕೊಂಡು ಹೋಗಲು ಪ್ರಯತ್ನಿಸಿದರೂ ಅದಕ್ಕೆ ಸಾಕ್ಷಿಗಳ ಕೊರತೆಯಿದೆ. ಈ ಮಠವೂ ಹುಬ್ಬಳ್ಳಿಯ ಪಕ್ಕದ ಕಿತ್ತೂರ ಸಂಸ್ಥಾನವು ಅವನತಿ ಹೊಂದಿದ ನಂತರ ಕಿತ್ತೂರ ಅರಮನೆಯ ಕಟ್ಟಿಗೆಯನ್ನು ಬ್ರಿಟಿಷರ ಸಹಾಯದಿಂದ ಕಿತ್ತು ತಂದು ಮರು ಜೋಡಣೆ ಮಾಡಿ ಮಠಕ್ಕೆ

In Public domain. Digitization Muthulakshmi Research Academy
ಉಪಯೋಗಿಸಿದೆ ಎಂಬ ಕಥೆಗಳು ಜನಸಾಮಾನ್ಯರಲ್ಲಿ ಹರಿದಾಡುತ್ತವೆ. ಇವೆಲ್ಲವೂ ಆಧಾರರಹಿತ ಕಥೆಗಳು. ಇರಲಿ. ಅಂದಿನ ಹುಬ್ಬಳ್ಳಿ ರ್‍ಯಾಲಿಯಲ್ಲಿ ಈ ಮಠದ ಇಂದಿನ ಪೀಠಾಧ್ಯಕ್ಷರಾದ ರಾಜಯೋಗಿ ಶ್ರೀ ಗುರುಸಿದ್ಧ ಶ್ರೀಗಳ ಅನುಪಸ್ಥಿತಿ ಎದ್ದು ಕಾಣುತ್ತಿತ್ತು.

ನೆಹರು ಮೈದಾನದಲ್ಲಿ ಕನಿಷ್ಠ ಮೂರು ಲಕ್ಷ ಲಿಂಗಾಯತರು ಸೇರಲಿದ್ದಾರೆ ಎಂದು ಮಾಧ್ಯಮಗಳು ಬಿಂಬಿಸಿದ್ದವು. ಇಂತಹ ಒಂದು ಬೃಹತ್ ಸಭೆಯನ್ನು ನಿಯಂತ್ರಿಸಲು ಎರಡು ಸಾವಿರಕ್ಕೂ ಅಧಿಕ ಪೊಲೀಸರನ್ನು ನಿಯೋಜಿಸಲಾಗುವುದು. ಐದು ಕೆ.ಎಸ್.ಆರ್.ಪಿ. ತುಕಡಿ, ಹತ್ತು ಡಿ.ಎ.ಆರ್, ಒಂದು ಆರ್.ಸಿ.ಎಫ್. ತುಕಡಿ, ಹತ್ತು ಡಿ.ಎಸ್.ಪಿ, ನಲ್ವತ್ತು ಇನ್‌ಸ್ಪೆಕ್ಟರ್‌ಗಳು, ಎಂಬತ್ತಕ್ಕೂ ಹೆಚ್ಚು ಸಬ್ ಇನ್‌ಸ್ಪೆಕ್ಟರ್‌ಗಳು ಕಾರ್ಯ ನಿರ್ವಹಿಸಲಿದ್ದಾರೆ ಎಂದು ವಿಜಯ ಕರ್ನಾಟಕ ವರದಿ ಮಾಡಿತ್ತು[8]. ಮಾಧ್ಯಮಗಳ ನಿರೀಕ್ಷೆಗಿಂತ ಹೆಚ್ಚಿನ ಜನ ಸೇರಿದ್ದರು ಎಂದು ನಮ್ಮ ಅಂದಾಜಾಗಿತ್ತು. ಬೆಳಗಾವಿಯ ಲಿಂಗಾಯತ ಹೋರಾಟದ ಸಭೆಯು ಒಂದು ಹೊಸ ಸಂಪ್ರದಾಯ ಹುಟ್ಟುಹಾಕಿತ್ತು. 'ನಾನು ಲಿಂಗಾಯತ' ಮತ್ತು 'ಲಿಂಗಾಯತ ಸ್ವತಂತ್ರ ಧರ್ಮ' ಎಂದು ಮುದ್ರಿಸಿದ ಟೊಪ್ಪಿಗೆಗಳನ್ನು ಲಿಂಗಾಯತರು ತಲೆ ಮೇಲೆ ಧರಿಸಿ ಹೊಸ ಪ್ರಯೋಗ ಮಾಡಿದ್ದರು. ಅದು ಎಲ್ಲ ರ್‍ಯಾಲಿಗಳಲ್ಲಿ ಪುನರಾವರ್ತನೆ ಆಗುತ್ತಿತ್ತು. ಹುಬ್ಬಳ್ಳಿಯ ಸಭೆಯಲ್ಲಿ ಐದು ಲಕ್ಷ ಟೊಪ್ಪಿಗೆಗಳನ್ನು ವಿತರಿಸಿದ್ದರಂತೆ ಸ್ಥಳೀಯ ಕಾರ್ಯಕರ್ತರು. ಲಿಂಗಾಯತ ಸ್ವತಂತ್ರ ಧರ್ಮದ ಬೇಡಿಕೆಯ ಕಾರಣಗಳು ಮತ್ತು ಅದರಿಂದ ಜನಸಾಮಾನ್ಯ ಲಿಂಗಾಯತರಿಗಾಗುವ ಅನುಕೂಲತೆಗಳನ್ನು ವಿವರಿಸಿ ಐದು ಲಕ್ಷ ಬಣ್ಣದ ಲೀಫ್ ಲೆಟ್‌ಗಳನ್ನು ನಾವು ಬೆಂಗಳೂರಿನಿಂದ ಮುದ್ರಿಸಿ ಕಳಿಸಿದ್ದೆವು.

ಸರ್ ಸಿದ್ದಪ್ಪ ಕಂಬಳಿ ವೇದಿಕೆಯಲ್ಲಿ ಎಂದಿನಂತೆ ನಾಡಿನ ವಿರಕ್ತ ಮಠಗಳ ಪೂಜ್ಯರು ಆಸೀನರಾಗಿದ್ದರು. ಸಾನ್ನಿಧ್ಯ ವಹಿಸಿಕೊಂಡಿದ್ದರು ಗದುಗಿನ ತೋಂಟದಾರ್ಯ ಮಠದ ಜಗದ್ಗುರುಗಳಾದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು. ನಾಡಿನ ಹಿರಿಯ ಪತ್ರಕರ್ತ ನಾಡೋಜ ಪಾಟೀಲ ಪುಟ್ಟಪ್ಪನವರ ಉಪಸ್ಥಿತಿ ಸಭೆಗೆ ಮೆರುಗು ತಂದಿತ್ತು. 'ಸಭೆ ಲಿಂಗಾಯತರಿಂದ ತುಂಬಿ ತುಳುಕುತ್ತಿತ್ತು. ಕಣ್ಣು ಹಾಯಿಸಿದಷ್ಟು ದೂರಕ್ಕೂ ಲಿಂಗಾಯತ ಧರ್ಮದ ಹೋರಾಟಗಾರರೇ ಕಾಣುತ್ತಿದ್ದರು' ಎಂದು ಮರುದಿನದ ಪತ್ರಿಕೆಯಲ್ಲಿ ಸಭೆಯ ವಿವರ ನೀಡಿತ್ತು ವಿಜಯ ಕರ್ನಾಟಕ.

ಸಮಾರಂಭದ ಪ್ರಮುಖ ರೂವಾರಿ ಸಚಿವ ವಿನಯ ಕುಲಕರ್ಣಿಯವರು ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ "ಬೆಳವಡಿ ಮಲ್ಲಮ್ಮ, ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣನವರನ್ನು ನೆನಪಿಸಿಕೊಳ್ಳುತ್ತ ಈ ಸಮಾವೇಶ ಯಾವುದೇ ಧರ್ಮ, ಪಕ್ಷ ಅಥವಾ ಜಾತಿ ವಿರುದ್ಧವಾಗಿ ಸಂಘಟಿಸಿದ ಸಮಾವೇಶವಲ್ಲ

In Public domain. Digitization Muthulakshmi Research Academy

ಎಂದರು. ಲಿಂಗಾಯತರ ಹಿರಿಮೆಯನ್ನು ಕೊಂಡಾಡುತ್ತ ಲಿಂಗಾಯತರು ಕಾಯಕ, ದಾಸೋಹದ ಸಿದ್ಧಾಂತಗಳನ್ನು ನಂಬಿಕೊಂಡು ಜೀವನ ನಡೆಸುವ ಜನ ಎನ್ನುತ್ತ, ಲಿಂಗಾಯತ ಮಕ್ಕಳ ಇಂದಿನ ಭವಿಷ್ಯದ ಬಗ್ಗೆ ಚಿಂತನೆ ಮಾಡಿದರು. ಲಿಂಗಾಯತ ಧರ್ಮದ ಮಕ್ಕಳು ಶ್ರೇಷ್ಠಶ್ರೇಣಿಯಲ್ಲಿ ತೇರ್ಗಡೆಯಾದರೂ ಒಳ್ಳೆಯ ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾತಿ ದೊರೆಯದ ಸಮಸ್ಯೆಯಿದೆ. ಈ ಸಮಸ್ಯೆಗೆ ಒಂದೇ ಉತ್ತರ, ಅದು ಲಿಂಗಾಯತ ಧರ್ಮಕ್ಕೆ ಅಲ್ಪಸಂಖ್ಯಾತ ಧರ್ಮದ ಮಾನ್ಯತೆ. ಲಿಂಗಾಯತ ಧರ್ಮವು ಅಲ್ಪಸಂಖ್ಯಾತ ಧರ್ಮವೆಂದು ಪರಿಗಣಿಸಿದರೆ ಲಿಂಗಾಯತರು ನಡೆಸುವ ಶಿಕ್ಷಣ ಸಂಸ್ಥೆಗಳಲ್ಲಿ ಲಿಂಗಾಯತರಿಗೆ ಒಟ್ಟು ಸೀಟುಗಳಲ್ಲಿ ಶೇ. ೫೦ರಷ್ಟು ಸೀಟುಗಳನ್ನು ಲಿಂಗಾಯತ ಮಕ್ಕಳು ಪಡೆಯಬಹುದು ಎಂದರು. ರಾಜ್ಯ ಹಾಗೂ ಕೇಂದ್ರ ಸರಕಾರದ ಉದ್ಯೋಗ ನೇಮಕಾತಿಯಲ್ಲಿ ಶೇ. ೫ ರಷ್ಟು ಮೀಸಲಾತಿ ಸಿಗುವುದು ಎಂದರು. ಪಂಚಪೀಠದ ವೀರಶೈವರ ಬಗ್ಗೆ ಹೇಳುತ್ತ, ಅವರಿಗಾಗಲೇ ಹಿಂದೂಗಳೆಂದು ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಅವರು ಹಿಂದೂಧರ್ಮದಲ್ಲಿಯೇ ಮುಂದುವರಿಯಲಿ, ಆದರೆ ಬಸವಣ್ಣನವರ ಹೆಸರು ಹೇಳುವ ಲಿಂಗಾಯತ ವಿರಕ್ತಮಠಗಳು ಜಾತಿಜಂಗಮರು ಹೂಡಿದ ಕೂಪಕ್ಕೆ ಬೀಳದೆ ಬಸವ ಸಿದ್ಧಾಂತದ ಜಂಗಮರಾಗಬೇಕೆಂದು ಕೇಳಿಕೊಂಡರು. ವಿರಕ್ತಮಠದ ಎಲ್ಲ ಪೂಜ್ಯರು ಈ ಸಮಯದಲ್ಲಿ ಲಿಂಗಾಯತರೊಂದಿಗೆ ನಿಲ್ಲಬೇಕು ಎಂದು ಕರೆ ನೀಡಿದರು. ಅವರು ಬಂದರೆ ಅವರಿಗೆ ಸ್ವಾಗತ ಮಾಡುತ್ತ ಅವರಿಗೆ ಇನ್ನೂ ಹೆಚ್ಚಿನ ಸ್ಥಾನಮಾನ ನೀಡುವುದಾಗಿ ಹೇಳಿದರು. ೯೯ ಕಾಯಕನಿರತ ಸಮಾಜದದೊಂದಿಗೆ ವೀರಶೈವ ಸಮಾಜವು ಸಹ ಜೊತೆಯಾಗಲಿ ಎಂದು ಆಶಿಸಿದರು.

ಬೀದರ್ ಮತ್ತು ಬೆಳಗಾವಿ ಮಹಾಸಮ್ಮೇಳನಗಳನ್ನು ತಪ್ಪಿಸಿಕೊಂಡಿದ್ದ ಸಮ್ಮೇಳನದ ಕೇಂದ್ರಬಿಂದುವಾಗಿದ್ದ ಸಚಿವ ಎಂ.ಬಿ.ಪಾಟೀಲರು ೪೦ ನಿಮಿಷಗಳ ದೀರ್ಘಕಾಲ ಲಕ್ಷಾಂತರ ಜನರನ್ನು ಉದ್ದೇಶಿಸಿ ಮಾತನಾಡಿದರು. "ಕಲ್ಯಾಣಕ್ರಾಂತಿಯ ಸಮಯದಲ್ಲಿ ಶರಣರು ತಾಯಿ ಮಗುವನ್ನು ರಕ್ಷಿಸುವ ರೀತಿಯಲ್ಲಿ ವಚನಗಳನ್ನು ರಕ್ಷಿಸುತ್ತ, ಅವುಗಳನ್ನು ತಲೆಯ ಮೇಲೆ ಹೊತ್ತು ತಂದು ನಮಗೆ ಅಮೂಲ್ಯವಾದ ಸಂಪತ್ತನ್ನು ನೀಡಿದ್ದಾರೆ" ಎಂದು ಮಾತು ಪ್ರಾರಂಭಿಸಿದ ಸಚಿವರು ಲಿಂಗಾಯತ ಧರ್ಮದ ಇತಿಹಾಸವನ್ನು ಎಳೆ ಎಳೆಯಾಗಿ ಬಿಚ್ಚಿಟ್ಟರು. ವರ್ಣಾಶ್ರಮ ಧರ್ಮವನ್ನು ಬಸವಾದಿ ಶರಣರು ಯಾವ ರೀತಿ ತ್ಯಜಿಸಿದರು? ಮೈಸೂರು ಮಹಾರಾಜರ ದಿವಾನ ಶ್ರೀರಂಗಾಚಾರ್ಯಲು ಕುಟಿಲ ಕಾರಸ್ಥಾನದಿಂದ ಲಿಂಗಾಯತರಾಗಿದ್ದ ನಾವು ಹಿಂದೂಗಳಾದೆವು, ನಾವು ಕೇವಲ ಹಿಂದೂಗಳಾಗದೆ ಹಿಂದೂಧರ್ಮದ ಶೂದ್ರರೂ ಆದೆವು. ೧೯೪೨ರಲ್ಲಿಯೇ ಲಿಂಗಾಯತ ಧರ್ಮದ ಕೂಗು ಕೇಳಿತ್ತು. ಅಂದು ಲಿಂಗಾಯತ ಧರ್ಮ ಮಾನ್ಯತೆಗಾಗಿ ಲಿಂಗಾಯತರ

In Public domain. Digitization Muthulakshmi Research Academy

ಐವತ್ತೈದು ಪ್ರಮುಖರು ಪತ್ರದ ಮುಖಾಂತರ ಬೇಡಿಕೆ ಸಲ್ಲಿಸಿದ್ದರು. ಆ ಪತ್ರಕ್ಕೆ ಸಹಿ ಹಾಕಿದವರಲ್ಲಿ ಅರಟಾಳ ರುದ್ರಗೌಡರು, ಲಿಂಗರಾಜ ದೇಸಾಯಿಯವರಲ್ಲದೆ ಕೆ.ಎಲ್.ಇ. ಸಂಸ್ಥೆಯನ್ನು ಕಟ್ಟಿದ ಸಪ್ತರ್ಷಿಗಳು ಸಹಿ ಹಾಕಿದ್ದರು ಎಂದು ಇತಿಹಾಸವನ್ನು ನೆನಪಿಸಿಕೊಂಡರು. ಸ್ವಾತಂತ್ರ್ಯಪೂರ್ವದಲ್ಲಿ ಕಟ್ಟಿದ ಲಿಂಗಾಯತ ಸಂಸ್ಥೆಗಳು ಇಂದು ಬಲಾಢ್ಯವಾಗಿ ಬೆಳದಿವೆ. ಅಂದು ಕಟ್ಟಿದ ಎಲ್ಲ ಸಂಸ್ಥೆಗಳ ಹೆಸರುಗಳನ್ನು ಉಲ್ಲೇಖಿಸುತ್ತ ಕರ್ನಾಟಕ ಲಿಂಗಾಯತ ಎಜುಕೇಶನ್ ಸೊಸೈಟಿ, ಬಿಜಾಪುರ ಲಿಂಗಾಯತ ವಿಧ್ಯಾವರ್ಧಕ ಸಂಸ್ಥೆ, ಬಾಗಲಕೋಟ ಲಿಂಗಾಯತ ವಿದ್ಯಾವರ್ಧಕ ಸಂಘಗಳಿಗೆ ಅಂದೇಕೆ ಲಿಂಗಾಯತ ಸಂಸ್ಥೆಗಳು ಎಂದು ಹೆಸರು ಇಟ್ಟಿದ್ದಾರೆ. ಅಂದು ವೀರಶೈವ ಪದ ಇದ್ದರೆ ವೀರಶೈವದ ಹೆಸರು ಏಕೆ ಇಡಲಿಲ್ಲ? ಎಂದು ಕೇಳುತ್ತ, ವೀರಶೈವವು ಲಿಂಗಾಯತ ಧರ್ಮದ ೯೯ ಪಂಗಡದಲ್ಲೊಂದು ಎಂದರು. ಇಂದು ೯೯ ಪಂಗಡಗಳಿಗೆ ಲಿಂಗಾಯತ ಧರ್ಮ ಬೇಕಾಗಿದೆ. ಆದರೆ ಕೇವಲ ಒಂದು ಪಂಗಡವಾದ ವೀರಶೈವರು ಮಾತ್ರ ಲಿಂಗಾಯತ ಧರ್ಮಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವುದು ಏತಕ್ಕೆ ಎಂದರು. ವೀರಶೈವರು ಪೂಜ್ಯರನ್ನು ಶಿಲೋದ್ಭವರು ಎನ್ನುತ್ತಾರೆ. ನಾನಾದರೂ ನಮ್ಮ ಪೂಜ್ಯರೆಂದು ಅದನ್ನು ಒಪ್ಪಿಕೊಂಡರೂ ಭಾರತದ ಇತರ ಪ್ರಾಜ್ಞರು ಒಪ್ಪಿಕೊಳ್ಳಬಹುದೆ? ಎಂದು ಸಭಿಕರಲ್ಲಿ ಪ್ರಶ್ನೆ ಮಾಡಿದರು.

ರಾಜಕಾರಣಿಗಳು ತಮ್ಮ ಸಿದ್ಧಾಂತ ಅಥವಾ ಭಾವನೆಗಳಿಗೆ ಸ್ಪಂದಿಸದೇ ಇರುವ ವ್ಯಕ್ತಿಗಳ ವಿರುದ್ಧವಾಗಿ ಅವಕಾಶ ಸಿಕ್ಕಾಗ ಪ್ರತಿಕ್ರಿಯೆ ವ್ಯಕ್ತಪಡಿಸಿ ಹರಿಹಾಯುವುದು ಸಾಮಾನ್ಯ. ಲಿಂಗಾಯತ ಧರ್ಮದ ಮಾನ್ಯತೆಯ ವಿಷಯದಲ್ಲಿ ಈ ಕೆ.ಎಲ್.ಇ. ಸಂಸ್ಥೆಯ ಪ್ರಮುಖ ಪದಾಧಿಕಾರಿಯಾದ ಪ್ರಭಾಕರ ಕೋರೆಯವರು ಮಹಾರಾಷ್ಟ್ರದ ಒಂದು ಸಭೆಯಲ್ಲಿ ಬೆಂಬಲ ವ್ಯಕ್ತಪಡಿಸಿದ್ದರು. ಅಲ್ಲದೆ ಕೆಲ ತಿಂಗಳ ಹಿಂದೆ ನಡೆದ ಬೆಳಗಾವಿಯ ಸಮಾವೇಶಕ್ಕೂ ಕೆ.ಎಲ್.ಇ. ಸಂಸ್ಥೆಗೆ ಸೇರಿದ ಮೈದಾನವನ್ನು ನೀಡಿ ಸಮಾವೇಶಕ್ಕೆ ಬೆಂಬಲ ಸೂಚಿಸಿದ್ದರು. ಕೆಲದಿನಗಳ ಅಂತರದಲ್ಲಿ ನಡೆದ ಹುಬ್ಬಳ್ಳಿ ರ್‍ಯಾಲಿಗೆ ಮತ್ತು ಲಿಂಗಾಯತ ಧರ್ಮದ ಮಾನ್ಯತೆಗೆ ಆಕ್ಷೇಪ ಎತ್ತುವುದು ಅವರ ಘನತೆಗೆ ತಕ್ಕುದಾಗಿರಲಿಲ್ಲ. ಅದನ್ನು ಕಾರವಾಗಿ ಪ್ರಶ್ನಿಸಿದ್ದರು ರಾಜ್ಯ ಸರಕಾರದ ಮಂತ್ರಿಯಾದ ಎಂ.ಬಿ.ಪಾಟೀಲರು. ಅವರಿಗೆ ಕೋರೆಯವರು ಲಿಂಗಾಯತರಾಗಿ, ಬೃಹತ್ ಲಿಂಗಾಯತ ಸಂಸ್ಥೆಯ ಪ್ರಮುಖ ಪದಾಧಿಕಾರಿಯಾಗಿ ಲಿಂಗಾಯತ ಹಿತ ಕಾಯುವಲ್ಲಿ ಹಿಂದೆ ಬೀಳುವುದಲ್ಲದೆ ಅದನ್ನು ವೀರೊಧಿಸುವುದು ಅಪರಾಧವಾಗಿ ಕಂಡಿದ್ದರಲ್ಲಿ ಸಹಜವಾಗಿತ್ತು. ಸಚಿವರು ತಮ್ಮ ಭಾಷಣದ ಕೆಲ ನಿಮಿಷಗಳನ್ನು ಕೋರೆಯವರ ಕಾಲು ಎಳೆಯುವುದರಲ್ಲಿ ವ್ಯಯಿಸಿದರು. ಸಚಿವ ಪಾಟೀಲರು

In Public domain. Digitization Muthulakshmi Research Academy

ಕೋರೆಯವರಿಗೆ ತಮ್ಮ ಸ್ವಂತ ಕ್ಷೇತ್ರದಲ್ಲಿ ಬೆಂಬಲವಿಲ್ಲವೆಂಬ ಮಾತುಗಳನ್ನಾಡಿದ್ದರೇ ಹೊರತು ವೈಯಕ್ತಿಕವಾಗಿ ಅವರನ್ನು ಅವಮಾನಗೊಳಿಸಿರಲಿಲ್ಲ. ವಿಜಯ ಕರ್ನಾಟಕ ಪತ್ರಿಕೆಯು ದಿನಾಂಕ ೬.೧೧.೨೦೧೭ರಂದು ಹುಬ್ಬಳ್ಳಿ ರ್‍ಯಾಲಿಯ ಬಗ್ಗೆ ವರದಿ ಮಾಡುತ್ತ, 'ನನ್ನ ವಿರುದ್ಧ ನಿಂತು ಗೆಲ್ಲಲಿ: ಕೋರೆಗೆ ಪಾಟೀಲ ಸವಾಲು' ಎಂಬ ತಲೆಬರಹ ನೀಡಿ ಕೋರೆಯವರಿಗೆ ಪಾಟೀಲರು ಹಾಕಿದ ಸವಾಲಿನ ವರದಿ ಪ್ರಕಟಿಸಿತ್ತು. ಗ್ರಾಮಪಂಚಾಯಿತಿಗೂ ಆರಿಸಿ ಬರುವ ಸಾಮರ್ಥ್ಯವಿಲ್ಲದ ರಾಜ್ಯಸಭೆಯ ಸದಸ್ಯ ಪ್ರಭಾಕರ ಕೋರೆ ತಮ್ಮ ಸ್ವಂತ ಊರು ಅಂಕಲಿ ಗ್ರಾಮದಲ್ಲಿ ನನ್ನ ವಿರುದ್ಧ ಸ್ಪರ್ಧಿಸಿ ಗೆಲ್ಲಲಿ ಎಂದು ಜಲಸಂಪನ್ಮೂಲ ಸಚಿವ ಎಂ.ಬಿ.ಪಾಟೀಲ ಸವಾಲೆಸೆದಿದ್ದಾರೆ ಎಂದು ಪ್ರಕಟಿಸಿತ್ತು. ಆ ಹೇಳಿಕೆಗೆ ಶಾಮನೂರು ಶಿವಶಂಕರಪ್ಪನವರು ಮರುದಿವಸ Deccan chronicle ಪತ್ರಿಕೆಯಲ್ಲಿ ಪ್ರತಿಕ್ರಿಯಿಸಿದ್ದು ಹೀಗೆ: The minister M.B.Patil used very bad words against Prabhakar Kore, a BJP M.P. ಆದರೆ ಪ್ರಭಾಕರ ಕೋರೆಯವರು ಸಚಿವರ ಮಾತಿಗೆ ಪ್ರತಿಕ್ರಿಯೆ ನೀಡಲು ಬಯಸದೆ. "ಎಂ.ಬಿ.ಪಾಟೀಲ ಹೇಳಿಕೆ ಕುರಿತು ಪ್ರತಿಕ್ರಿಯೆ ನೀಡಲು ಬಯಸುವದಿಲ್ಲ" ಎಂದು ಹೇಳಿದರು. ಅದನ್ನು ವಿ.ಕ. ಪ್ರಕಟಿಸಿತ್ತು. ಆದರೆ ಜಗದ್ಗುರುಗಳಾದ ಗದದ ತೋಂಟದ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿಯವರು; "ಏಷ್ಯಾ ಖಂಡದಲ್ಲಿಯೇ ದೊಡ್ಡ ಸಂಸ್ಥೆಯಾಗಿ ಕೆ.ಎಲ್.ಇ. ಬೆಳೆದಿದೆ. ಅಂತಹ ಲಿಂಗಾಯತ ಸಂಸ್ಥೆಯಲ್ಲಿ ಇದ್ದುಕೊಂಡು ಪ್ರಭಾಕರ ಕೋರೆಯವರು ಲಿಂಗಾಯತ ವಿರೋಧಿ ಹೇಳಿಕೆ ನೀಡುವುದು ತಪ್ಪು" ಎಂದು ವಿಜಯ ಕರ್ನಾಟಕ ವರದಿಗಾರನಿಗೆ ಪ್ರತಿಕ್ರಿಯೆ ನೀಡಿದ್ದರು.

Star of Mysore ಪತ್ರಿಕೆ ಡಾ.ಜಾಮದಾರ ಸಭೆಯಲ್ಲಿ ಮಾತಾಡಿದ್ದನ್ನು "An alternative organisation of lingayats would be formed if Akhil Bharatiya veershaiva mahasabha fails to change it stance" ಎಂದು ವರದಿ ಮಾಡುತ್ತದೆ. ವೀರಶೈವ ಮಹಾಸಭೆಯ ದ್ವಂದ್ವ ನಿಲುವಿನ ಬಗ್ಗೆ ಡಾ.ಜಾಮದಾರ ಮಾತಾಡುತ್ತ, "ಒಂದಡೆ ಸ್ವತಂತ್ರ ಧರ್ಮಕ್ಕಾಗಿ ಹೋರಾಟ ಮಾಡುತ್ತಿರುವ ವೀರಶೈವರು, ಮತ್ತೊಂದೆಡೆ ಬಸವಣ್ಣ ಲಿಂಗಾಯತ ಎಂದು ಕೋರ್ಟ್‌ಗೆ ಅಫಿಡೆವಿಟ್ ಸಲ್ಲಿಸಿದ್ದಾರೆ. ವೀರಶೈವರ ಇಂತಹ ದ್ವಂದ್ವ ನಿಲುವುಗಳಿಗೆ ಪಂಚಪೀಠಗಳೇ ಕಾರಣ. ವೀರಶೈವರು ಕುಂಭಕರ್ಣ ನಿದ್ದೆಯಿಂದ ಹೊರಬಂದಿಲ್ಲ. ನಮ್ಮ ಬೇಡಿಕೆಯ ವಿರುದ್ಧವಾಗಿ ಪ್ರತಿಭಟನೆ ಮಾಡುತ್ತಿರುವವರು ಬೆರಳೆಣಿಕೆಯಷ್ಟಿದ್ದಾರೆ. ಅಜ್ಞಾನದಿಂದ ಈ ರೀತಿ ನಡೆದುಕೊಳ್ಳುತ್ತಿದ್ದಾರೆ" ಎಂದು ವಿಜಯ ಕರ್ನಾಟಕ ಪತ್ರಿಕೆ ವರದಿ ಮಾಡಿದೆ. ಇವರು ಬಹುಶಃ ವೀರಶೈವ ಮಹಾಸಭೆಯ ಬಗ್ಗೆ ಹೇಳುವಾಗ ವೀರಶೈವವೆಂದು ಬಳಸಿರಬಹುದು.

In Public domain. Digitization Muthulakshmi Research Academy

ವೇದಿಕೆಯ ಮೇಲಿದ್ದ ಮತ್ತೊಬ್ಬ ಪೂಜ್ಯರಾದ ಮಾತೆ ಮಹಾದೇವಿಯವರು "ವಚನ ಸಾಹಿತ್ಯ ಭಾಷಣ ಅಲಂಕಾರಕ್ಕಲ್ಲ. ಅನುಷ್ಠಾನ ಮಾಡಬೇಕು. ನಮಗೆ ರಾಜಕೀಯ ಉದ್ದೇಶವಿಲ್ಲ. ನಮ್ಮ ಜತೆ ಕಾಂಗ್ರೆಸ್, ಜೆಡಿಎಸ್ ಇದೆ. ಬಿಜೆಪಿಗೂ ಆಹ್ವಾನ ನೀಡಿದ್ದೇವೆ" ಎಂದರು ಇಂದು ಪೋಕ್ಸೋ ಕಾಯಿದೆಯ ಅನ್ವಯ ಆರೋಪಿಯಾಗಿ ಜೈಲುಕಂಬಿಯ ಹಿಂದಿರುವ ಮುರುಘಾಶರಣರು ಅಂದು ಹೀಗೆ ಹೇಳಿದ್ದರು. "ಮಠಾಧೀಶರು ಮತ್ತು ಧಾರ್ಮಿಕವಾಗಿ ಮಾತ್ರ ಇದ್ದ ಸ್ವತಂತ್ರ ಲಿಂಗಾಯತ ಧರ್ಮದ ಹೋರಾಟಕ್ಕೆ ಜನನಾಯಕರೂ ಕೈ ಜೋಡಿಸುತ್ತಿರುವುದು ಖುಷಿಯಾಗಿದೆ" ಎಂದಿದ್ದರು.

ಮತ್ತೊಬ್ಬ ಹುಬ್ಬಳ್ಳಿಯ ರ್‍ಯಾಲಿಯ ರೂವಾರಿ ಹಿರಿಯ ಜೆ.ಡಿ.ಎಸ್. ನಾಯಕರು ಹಾಗೂ ಲಿಂಗಾಯತ ಹೋರಾಟಕ್ಕೆ ಪಕ್ಷಾತೀತ ಹೋರಾಟವೆಂಬುದನ್ನು ಬಿಂಬಿಸಿದ ಶ್ರೀ ಬಸವರಾಜ ಹೊರಟ್ಟಿಯವರ ಮಾತುಗಳನ್ನು ಪತ್ರಿಕೆಗಳು ಈ ರೀತಿ ದಾಖಲಿಸಿವೆ. "The veershaiva maha sabha should join hands with them under single ambrella of lingayat to exert pressure on the government for minority tag. Maintaining that there is no politics involved in separating Lingayat from Veerashaiva. Horatti said that it was very essential for veerashaiva leaders to join hands with lingayat to uplift the downtrodden people with the community." ಹೊರಟ್ಟಿಯವರ ನುಡಿಗಳು ಒಬ್ಬ ದೂರದೃಷ್ಟಿಯುಳ್ಳ ಹಿರಿಯ ರಾಜಕೀಯ ನಾಯಕನ ಮಾತುಗಳಾಗಿದ್ದವು. ನಾಡಿನಲ್ಲಿ ನಡೆಯುತ್ತಿರುವ ವೀರಶೈವರ ಹಾದಿಬೀದಿ ಹೋರಾಟ, ಕಿರುಚಾಟವು ಒಂದು ಬದಿಯಲ್ಲಿದ್ದರೆ ಇನ್ನೊಂದು ಬದಿಯಲ್ಲಿ ಲಿಂಗಾಯತರ ಬೇಡಿಕೆಯು ಸಮಸ್ತನಾಡಿನ ಕಲ್ಯಾಣಕ್ಕಾಗಿತ್ತು. ಅವರು ಮಾತುಗಳಲ್ಲಿ 'ಹಿಂದುಳಿದ ವರ್ಗ'ಕ್ಕಾಗಿ ಎನ್ನುವುದು ಲಿಂಗಾಯತರ ೯೮ ಕಾಯಕಜೀವಿಗಳ ಕಲ್ಯಾಣದ ಆಶಯಕ್ಕಾಗಿತ್ತು. ಅಲ್ಲದೆ ಅದು ಬಸವಣ್ಣನವರ ಕನಸು ಆಗಿತ್ತಲ್ಲವೆ? ಅವರ ಮಾತುಗಳು ಲಿಂಗಾಯತ ಸಿದ್ಧಾಂತಕ್ಕೆ ಪೂರಕವಾಗಿದ್ದವು. ವೀರಶೈವರ ಬಗ್ಗೆ ಅದೇ ವೇದಿಕೆಯಲ್ಲಿ ಒಬ್ಬ ಸ್ವಾಮೀಜಿಯವರು ಮಾತಾಡಿದ ಅವಹೇಳನಕಾರಿ ಮಾತುಗಳಿಂದಾದ ಹಾನಿಯನ್ನು ತುಂಬಿಕೊಳ್ಳುವ ಒಬ್ಬ ಮುತ್ಸದ್ದಿಯ ಮಾತುಗಳಾಗಿದ್ದವು. ಬೆಳಗಾವಿಯ ನಾಗನೂರು ರುದ್ರಾಕ್ಷಿಮಠದ ಪೂಜ್ಯರಾದ ಡಾ.ಸಿದ್ಧರಾಮ ಮಹಾಸ್ವಾಮೀಜಿಯವರು "ಅಖಿಲ ಭಾರತ ವೀರಶೈವ ಮಹಾಸಭಾ, ಲಿಂಗಾಯತ ಸ್ವತಂತ್ರ ಧರ್ಮ ಹೋರಾಟಕ್ಕೆ ಅಡ್ಡಿಯಾಗಿದೆ. ಅದು ತನ್ನ ದ್ವಂದ್ವ ನಿಲುವು ಬಿಟ್ಟು ಹೋರಾಟಕ್ಕೆ ಬೆಂಬಲ ಸೂಚಿಸಬೇಕು. ಇಲ್ಲದಿದ್ದರೆ ಪರ್ಯಾಯ ಸಂಸ್ಥೆ ಕಟ್ಟುತ್ತೇವೆ" ಎಂದರು. ಮುಂದುವರಿದು ಲಿಂಗಾಯತ

In Public domain. Digitization Muthulakshmi Research Academy

ಪ್ರತ್ಯೇಕ ಧರ್ಮ ಆಗಬೇಕು, ವಚನಗಳೇ ಧರ್ಮಗ್ರಂಥ ಎನ್ನುವುದನ್ನು ಒಪ್ಪಬೇಕು.

ಸಾನ್ನಿಧ್ಯ ವಹಿಸಿದ್ದ ಗದುಗಿನ ಪೂಜ್ಯರು "ಹೋರಾಟ ಕುರಿತು ಹೊಂದಿರುವ ತನ್ನ ನಿಲುವಿನಲ್ಲಿ ಬದಲಾವಣೆ ಮಾಡಿಕೊಳ್ಳದಿದ್ದರೆ ಪರ್ಯಾಯವಾಗಿ ಅಖಿಲ ಭಾರತ ಲಿಂಗಾಯತ ಮಹಾಪರಿಷತ್ ರಚನೆ ಅನಿವಾರ್ಯವಾಗುತ್ತದೆ" ಎಂದರು. "ನಾವು ಧಾರ್ಮಿಕ ಅಲ್ಪಸಂಖ್ಯಾತರಾಗಲು ಲಿಂಗಾಯತ ಧರ್ಮ ಮಾನ್ಯತೆ ಪಡೆಯಬೇಕಿದೆ. ಎಲ್ಲಿಯವರೆಗೆ ಹೋರಾಟ ಮಾಡುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಬೇಡಿಕೆ ಈಡೇರುವುದಿಲ್ಲ. ಗುರಿ ಮುಟ್ಟಲು ಒಗ್ಗಟ್ಟಿನ ಹೋರಾಟ ಅವಶ್ಯ. ಈ ಹೋರಾಟಕ್ಕೆ ಎಲ್ಲರೂ ಕೈ ಜೋಡಿಸಬೇಕಾಗಿದೆ" ಎಂದು ಕರೆ ನೀಡಿದ್ದರು.

ಹುಬ್ಬಳ್ಳಿ ರ್‍ಯಾಲಿ–ದೃಷ್ಟಿ ಬೊಟ್ಟುಗಳು

ಕಲಬುರಗಿಯ ಸುಲಫಲ ಮಠದ ಸಾರಂಗ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ "ಪಂಚಪೀಠಾಧೀಶರು ಲಿಂಗಾಯತ ಸಮಾಜದ ಪೀಡಕರು. ವೀರಶೈವರು ಈ ಹೋರಾಟದಿಂದ ಹಿಂದೆ ಸರಿಯಲು ರಂಭಾಪುರಿ ಶ್ರೀಗಳ ಕೈವಾಡವಿದೆ. ಮನುಷ್ಯರ ಹೆಗಲ ಮೇಲೆ ಹತ್ತಿ ಮೆರೆಯುವವರನ್ನು ಕಲ್ಲಿನಿಂದ ಹೊಡೆಯಬೇಕು. ಬಸವತತ್ವ ಪಾಲಿಸಿದ ಕಾರಣಕ್ಕೆ ಕಲಬುರಗಿಯ ಶರಣಬಸಪ್ಪ ಅಪ್ಪ ಅವರಿಗೆ ಗಂಡುಮಗು ಹುಟ್ಟಿತು. ಬಸವತತ್ವ ಪಾಲಿಸಿದರೆ ಒಳ್ಳೆಯದಾಗುತ್ತದೆ ಎಂಬುದಕ್ಕೆ ಇದೇ ನಿದರ್ಶನ" ಎಂದು ಲಿಂಗಾಯತ ಸಿದ್ಧಾಂತಗಳನ್ನು ಗಾಳಿಗೆ ತೂರಿಬಿಟ್ಟರು. ಪೂಜ್ಯರಾದವರಿಂದ ಇಂತಹ ಮಾತುಗಳನ್ನು ಪ್ರಜ್ಞಾವಂತ ಲಿಂಗಾಯತ ಸಮಾಜ ಬಯಸುವುದಿಲ್ಲ. ಬಿಸಿ ರಕ್ತದ ಯುವಕರು ಚಪ್ಪಾಳೆ ಹೊಡೆದರು. ಚಪ್ಪಾಳೆಯನ್ನು ಗಿಟ್ಟಿಸಿಕೊಳ್ಳಲು ಹಟಕ್ಕೆ ಬಿದ್ದವರಂತೆ ಇವರ ನಂತರ ಪಂಚಮಸಾಲಿ ಗುರುಗಳು ಒಂದು ಹೆಜ್ಜೆ ಮುಂದೆ ಹೋಗಿಬಿಟ್ಟಿದ್ದರು.

ವೇದಿಕೆಯಲ್ಲಿದ್ದ ಪಂಚಮಸಾಲಿ ಜಗದ್ಗುರುಗಳಾದ ಕೂಡಲಸಂಗಮ ಪೀಠದ ಶ್ರೀ ಬಸವಜಯ ಮೃತ್ಯುಂಜಯ ಸ್ವಾಮೀಜಿಯವರು ಮಾತಿನ ಭರದಲ್ಲಿ ತಪ್ಪು ನುಡಿಗಳನ್ನಾಡಿಬಿಟ್ಟರು. "ಲಿಂಗಾಯತರ ತಂದೆ ಬಸವಣ್ಣನವರು. ವೀರಶೈವರ ತಂದೆ ಯಾರು? ಅವರಿಗೆ ಐದು ಜನರು ತಂದೆಯರಿದ್ದಾರೆಯೇ?" ಎಂದು ಕೇಳಿಬಿಟ್ಟರು. ವೇದಿಕೆಯ ಮೇಲಿದ್ದವರಿಗೆಲ್ಲ ಗರ ಬಡಿದಂತಾಯಿತು. ವೇದಿಕೆಯ ಮೊದಲ ಸಾಲಿನಲ್ಲಿದ್ದ ನಾವೆಲ್ಲರೂ ಒಬ್ಬರ ಮುಖವನ್ನು ಒಬ್ಬರು ನೋಡಿಕೊಂಡೆವು. ಪ್ರಜ್ಞಾವಂತರಿಗೆ ಮಾತಿನ ತೀವ್ರತೆ ಅರ್ಥವಾಗಿತ್ತು. 'ಮಾತು ಬಾಯಿಂದ ಜಾರಿತ್ತು ಮತ್ತು ಒಡೆದಿತ್ತು.' ನಾನು ವೇದಿಕೆಯನ್ನು ಇಳಿದು ಬೆಂಗಳೂರಿಗೆ ಹೊರಡಲು ಕಾರನ್ನು ಏರಿದೆ. ನನ್ನೊಂದಿಗೆ ಡಾ.ಜಯಣ್ಣ ಹಾಗೂ ಪತ್ರಕರ್ತ ಷಣ್ಮುಖಪ್ಪರು ಹೊರಟುನಿಂತರು. ಬೆಂಗಳೂರು ತಲುಪುವವರೆಗೂ ಸಂಕಟಪಟ್ಟೆವು. ಆಗಾಗ ಕಣ್ಣೀರು ಬರುವುದನ್ನು ಕಂಡು ಷಣ್ಮುಖಪ್ಪನವರು ನನ್ನನ್ನು ದಾರಿಯುದ್ದಕ್ಕೂ ಸಮಾಧಾನಪಡಿಸಿದ್ದರು.

In Public domain. Digitization Muthulakshmi Research Academy

"ವಿರಕ್ತಮಠದ ಸ್ವಾಮೀಜಿಗಳು ತಮ್ಮ ನಿಲುವು ಬದಲಿಸಿಕೊಳ್ಳದಿದ್ದರೆ ಮುಂಬರುವ ದಿನಗಳಲ್ಲಿ ಅವರ ವಿರುದ್ಧವೂ ಹೋರಾಟ ಮಾಡಬೇಕಾಗುತ್ತದೆ; ಪ್ರತ್ಯೇಕ ಲಿಂಗಾಯತ ಧರ್ಮಕ್ಕೆ ಬೆಂಬಲ ನೀಡದಿರುವ ವಿರಕ್ತಮಠಗಳ ಮಠಾಧೀಶರು ಇನ್ನಾದರೂ ಎಚ್ಚೆತ್ತುಕೊಳ್ಳಲಿ. ವಿರಕ್ತಮಠಗಳು ಲಿಂಗಾಯತರಿಗೆ ಸೇರಿದ್ದು. ನಮ್ಮ ಹಿರಿಯರು ದಾನ ನೀಡಿದ ಆಸ್ತಿಗಳನ್ನು ಪಡೆದು ಮೆರೆಯುತ್ತವೆ ಎನ್ನುತ್ತ ವೀರಶೈವ ಬಿಟ್ಟು ಲಿಂಗಾಯತ ಧರ್ಮ ಹೋರಾಟಕ್ಕೆ ಕೈಜೋಡಿಸುವಂತೆ ಮತ್ತೊಮ್ಮೆ ವಿರಕ್ತಮಠಗಳ ಮಠಾಧೀಶರಿಗೆ ವಿನಂತಿಸುತ್ತೇನೆ" ಎಂದು ಪರೋಕ್ಷವಾಗಿ ಹುಬ್ಬಳ್ಳಿಯ ಮೂರುಸಾವಿರ ಮಠದ ಪೂಜ್ಯರನ್ನು ಉದ್ದೇಶಿಸಿ ಮಾತಾಡಿದ್ದರು ಸಚಿವ ವಿನಯ ಕುಲಕರ್ಣಿ.

"ದಶಕಗಳಿಂದ ಕೆ.ಎಲ್.ಇ. ಅನ್ನ ಉಣ್ಣುತ್ತಿರುವ ಕೋರೆ, ಉಂಡ ಮನೆಯ ಜಂತಿ ಎಣಿಸುತ್ತಿದ್ದಾರೆ. ಹೀಗೆಯೇ ಮುಂದುವರಿದರೆ ಕೆ.ಎಲ್.ಇ. ಸಂಸ್ಥೆಯಿಂದಲೇ ಜಾಗ ಖಾಲಿ ಮಾಡಿಸಬೇಕಾಗುತ್ತದೆ" ಎಂದು ಜಲಸಂಪನ್ಮೂಲ ಸಚಿವರಾದ ಎಂ.ಬಿ.ಪಾಟೀಲರು ಕೋರೆಯವರ ಮೇಲೆ ಹರಿಹಾಯ್ದರು. "ವೀರಶೈವ ಮಹಾಸಭಾದವರು ಕುರ್ಚಿಗಾಗಿ ರಾಜಕೀಯ ಮಾಡುತ್ತಿದ್ದಾರೆ. ಅವರ ಬಳಿ ಬೌದ್ಧಿಕ ಬಂಡವಾಳ ಇಲ್ಲ. ವೀರಶೈವರು ತಮ್ಮ ಧರ್ಮಸ್ಥಾಪಕ ಕಲ್ಲಿನಲ್ಲಿ ಹುಟ್ಟಿದ ಎನ್ನುತ್ತಾರೆ. ವೈಜ್ಞಾನಿಕ ಯುಗದಲ್ಲಿ ಇಂತಹ ವಿವರಣೆಯನ್ನು ಸುಪ್ರಿಂಕೋರ್ಟ್‌ನಲ್ಲಿ ಹೇಳಿದರೆ 'ಶಟ್ ಅಪ್, ನಾನ್ಸೆನ್ಸ್, ಗೆಟ್ ಔಟ್' ಎಂದು ಹೊರಗಟ್ಟುತ್ತಾರೆ" ಎಂದರು ಸಚಿವರು.

ಧರ್ಮದ ಹೋರಾಟಕ್ಕೆ ಇದೊಂದು ಕಪ್ಪುಚುಕ್ಕೆಯಾಗಿ ಪರಣಮಿಸಿತು. ಒಂದೇ ಒಂದು ಮಾತಿನಿಂದ ನಮಗೆ ಸಿಗಬೇಕಾದ ಪ್ರಚಾರ ಸಿಗದೆ ಹೋಗಿ ಅದು ಅಪಪ್ರಚಾರಕ್ಕೆ ದಾರಿಯನ್ನು ಒದಗಿಸಿತ್ತು. ವೇದಿಕೆಯ ಮಾತುಗಳು ತಿರುಗುಬಾಣವಾಗುತ್ತವೆ ಎಂಬ ಅರಿವು ನಮಗಿತ್ತು. ವೀರಶೈವರಿಗೆ ನಮ್ಮನ್ನು ದ್ವೇಷಿಸಲು ಇನ್ನೊಂದು ಅಸ್ತ್ರ ಸಿಕ್ಕಂತಾಗಿತ್ತು. ಮಾಧ್ಯಮಗಳು ನಮ್ಮ ಸಮಾವೇಶದ ಸಾಧನೆಯನ್ನು ಬಣ್ಣಿಸದೆ ಈ ವಿಷಯ ಮಾತನಾಡಿದ ಅರ್ಧಗಂಟೆಯಲಿ Breaking News ಎಂದು ಅರಚಲಾರಂಭಿಸಿದ್ದವು. ಕ್ಷಣಕಾಲದಲ್ಲಿ ಅಸಹಾಯಕರಾಗಿದ್ದೆವು. ಸಂಘಟನೆಗೆ ದೊಡ್ಡ ಹೊಡೆತ ಬಿದ್ದಿತ್ತು. ಮರುದಿನದ ಇಂಗ್ಲಿಷ್ ಪೇಪರಿನಲ್ಲಿ ಇದೇ ವಿಷಯ ಹೈಲೈಟ್ ಆಗಿತ್ತು "Those born to one father are lingayts. Those born to five fathers are veershaivas. Basavanna is our father, but Veershaivas have five fathers" ' mrutunjaya swamy said. ಉಳಿದೆಲ್ಲ ವಿಷಯಗಳನ್ನು ಕವರ್ ಮಾಡದೆ ಇದನ್ನು ಮಾತ್ರ ಹೈಲೈಟ್ ಮಾಡಿದ್ದರು.

ನಾವು ಡ್ಯಾಮೇಜ್ ಕಂಟ್ರೋಲ್ ಗೆ ಇಳಿದೆವು. ಮೊದಲು ವೇದಿಕೆಯ ಮೇಲಿದ್ದ ಹಿರಿಯ ಶ್ರೀಗಳಿಂದ ಹೇಳಿಕೆ ಬಯಸಿದ್ದೆವು. ಮಾತೆ ಮಹಾದೇವಿಯವರು ಶ್ರೀ

In Public domain. Digitization Muthulakshmi Research Academy

ಜಯಮೃತ್ಯುಂಜಯ ಸ್ವಾಮಿಗಳ ನೆರವಿಗೆ ಬಂದಿದ್ದರು "He might have used those words but he did not mean to insult Veerashaivas. He was extremely emotional as this issue matters to a lot of people. Veerashaivas have five Gurus Panch Acharyas who headed the Panch Peetha. Lingayats consider themselves the children of Basavanna, that was what he meant to say"[೧೦]. ಲಿಂಗಾಯತ ಹೋರಾಟ ಸಮಿತಿಯ ಅಧ್ಯಕ್ಷರಾದ ಶ್ರೀ ಬಸವರಾಜ ಹೊರಟ್ಟಿಯವರೇ ಸ್ವಾಮೀಜಿಯವರ ಮಾತಿಗೆ ಕ್ಷಮೆ ಯಾಚಿಸಿದ್ದರು. ಅವರ ಪರವಾಗಿ ತಪ್ಪನ್ನು ಒಪ್ಪಿಕೊಂಡು ಹೇಳಿಕೆ ನೀಡಿದ್ದರು. ``I agree. It was mistake. He must have spoken in an emotional state. what he said was in bad taste"[೧೧] ಎಂದರು. ವಿದ್ಯುನ್ಮಾನಗಳು ಸಮಾವೇಶದ ಸಾಧನೆಯನ್ನು ಮರೆಮಾಚಿ ಇದೇ ವಿಷಯವನ್ನು Breaking News ಎಂದು ತೋರಿಸಿದ್ದರು. ನಮ್ಮ ಶ್ರಮವೆಲ್ಲವೂ ಹೊಳೆಯಲ್ಲಿ ಹುಣಿಸೆ ಹಣ್ಣನ್ನು ತೊಳೆದಂತಾಗಿತ್ತು.

ಇಂತಹ ಹೇಳಿಕೆಗಳಿಗಾಗಿ ವೀರಶೈವ ಮಹಾಸಭೆ ಕಾಯುತ್ತಿತ್ತು. ಅವರು ಹಾಕಿದ ಟ್ರ್ಯಾಪ್‌ನಲ್ಲಿ ಲಿಂಗಾಯತ ನಾಯಕರು ಸಿಕ್ಕಿಹಾಕಿಕೊಂಡಿದ್ದರು. ಹುಬ್ಬಳ್ಳಿಯ ರ್‍ಯಾಲಿಗಿಂತ ಮೊದಲು ರಾಜಕೀಯದ ಆಟಗಳು ವಿಧಾನಸೌಧದ ಮೂರನೆಯ ಮಹಡಿಯಲ್ಲಿ ನಡೆದುಹೋಗಿದ್ದವು. ವೀರಶೈವ ಮಹಾಸಭೆಯವರಿಗೆ ಇದು ಸೋಲು ಗೆಲುವುಗಳ ಆಟವಾಗಿತ್ತು. ಅದನ್ನು ಶಾಮನೂರು ಅವರ ಬಾಯಿಂದಲೇ ಕೇಳಿ. "It is good, their downfall has begun, we have an upper hand now"(Deccan chronicle) ಬಸವಣ್ಣನವರಿಂದ ಲಿಂಗಾಯತರಾದ ಶಾಮನೂರು ಶಿವಶಂಕರಪ್ಪ, ಈಶ್ವರ ಖಂಡ್ರೆ, ಯಡಿಯೂರಪ್ಪನವರು, ಪ್ರಭಾಕರ ಕೋರೆಯವರು, ಇಂದಿನ ಅನೇಕ ಬಿಜೆಪಿಯ ಲಿಂಗಾಯತ ನಾಯಕರು ತಮ್ಮ ರಾಜಕೀಯ ಲಾಭಗಳಿಗಾಗಿ ತಮ್ಮ ಧರ್ಮವನ್ನೇ ಕೊಲ್ಲುವ ಧರ್ಮಭ್ರಷ್ಟರಾಗಿಬಿಟ್ಟಿದ್ದರು. ಇವರೆಲ್ಲರ ಭಾವನೆಗಳಿಗೆ ಧ್ವನಿ ನೀಡಿದಂತಿದೆ ಶಾಮನೂರು ಶಿವಶಂಕರಪ್ಪನವರ 'ಡೆಕ್ಕನ್ ಕ್ರಾನಿಕಲ್' ಎಂಬ ಆಂಗ್ಲ ಪತ್ರಿಕೆಗೆ ನೀಡಿದ ಸಂದರ್ಶನ.[೧೨]

ಸಂದರ್ಶನದ ಆಯ್ದ ಭಾಗ

Question : The hubballi rally by the lingayats held last sunday turned out to be ugly with many speakers hitting out at leaders and religious below the belt. What

In Public domain. Digitization Muthulakshmi Research Academy

message according to you, have they sent out with the rally?

S.S. answers : No message has been sent out. The speakers only spoke ill of others. One swamiji said if you were born to one, than you are Lingayat and if you are born to five, you are veershaiva. On hearing this, a lrarge number of people got upset and expressed their displeasure. Then minister M.B.Patil usued very bad words against Prabhakar Kore, a BJP MP. The organisers had claimed that five lakh people would attend the rally, but the information I got was that there were only 50000. It was a failure.

Question : Four are five months back when this whole thing started, the focus was on religion status. Now, it has reached a stage where they (Lingayat leaders) attack every other leader or religion. Why?

S.S. answers : Intially they were doing good and got a good public response. As the months passed by, they seemed to have drifted from their path and after the Hubli rally, it is clear they are losing acceptance in the community. It is good, their downfall has begun. We have the upper hand now. The Veerashaiva mahasabha was not set up by me. it is 110 years old. it was started by Hanagal Kumarswamy and I am the 23 president.

Question : There Were demands for religion status for quite some time. How can a demand which could not become an issue for 100 years, became one two or three days after the felicitation of the CM? You can see who is behind this.

In Public domain. Digitization Muthulakshmi Research Academy

S.S. answers : Last time when congrees was in power at the center, it was Patil (M.B.Patil) who took us to meet shinde(Sushil kumar Shinde) form Solapur, the than home minister who is Mr Patil's neighbour. Now people have turned their back on them. you wait for a few more days and see what happens.

Question : In hindsight, did you feel you made a mistake by honouring the chief minister?

S.S. answers : (laughs) I already said yes to this question. when the legislature session was going on, all these leaders (from the community) came to me and said that the CM had taken a historic decision to make it compulsory to install Basavanna's porttrait in government offices and renamed Vijayapura Womens University after Akkamahadevi, so we should facilitate him. I immediately agreed. The CM gave us four days for organising the event. We did not have time to properly organise a rally. Still we from ABVM held a big function in palace grounds. When we planned it, these leaders had promised to share the cost, but none paid a paisa(laughs).

Question : Did you meet CM after the controversay broke out?

S.S. answers : Yes. He said all should come together and then he would take a call on religion status. After the difference cropped up, we met three or four times to evolve a consensus. Boath fiction agreed to set up a committee drawing five from each side. But withen four days they said no the idea. I could not

In Public domain. Digitization Muthulakshmi Research Academy

figure out why they suddenly said no. Then, they said they would conduct a survey. and there after one swamiji after swamiji started singing different tunes. The leaders particularly Mr S.M.Jamadar had claimed that Veershaivas had originally come from Andhra Pradesh and therefore, they had not inhherited Basaveshwar's traditions. sometimes, I just laugh at such claims, some one said Basavanna was not a Brahmin, at times they say whatever they feel. like saying veerashaivas are different from lingayats. It is like saying Bharat and india are different. An expert has already asked Mr. Jamadar a question: Did basavanna, in his vachnas usued the word lingayat? Basavanna actually told his guru 'I was shaiva and you made me a veershaiva.'

Question : What is your game plan? we were told that a rally would be held in Gadag in december first week to give fitting reply to lingayat rally?

S.S. answers: We have no specific plan, let them do it, our strategy is to wait and watch. Pontiffs from Panch Peetha had planned a rally in Gadag. We (ABVM) said, 'Do not drag us' into it. They wanted us to come and inaugurate the rally. We are not ready for this.

Question : Water resources minister M.B.Patil said he would like to become CM...

S.S. answers : (Laughs) The seat is not vacant now, when the election comes we will see what happens.

Question : But he has the support of Lakhas of Lingayats

S.S. answers : what are you saying? do not think the community is with him. No doubt, he has support of few leaders,

In Public domain. Digitization Muthulakshmi Research Academy

Let him resign and come out and then check his popularity. He will see it for himself (the reality)

Question : Will this benefit the CM politically?

S.S. answers : (pauses) It depends on his moves. If he recomends religion status Veerashaiva-Lingayat, than he will get huge support from the community.

ದೂರದೃಷ್ಟಿಯ ಪರಿಣಾಮಗಳು

ಹುಬ್ಬಳ್ಳಿ ಸಮಾವೇಶದಲ್ಲಿ ಉತ್ತರ ಕರ್ನಾಟಕದ ಬಹುದೊಡ್ಡ ವಿರಕ್ತಮಠವೊಂದರ ಪೀಠಾಧಿಪತಿಗಳ ಅನುಪಸ್ಥಿತಿ ಎದ್ದು ಕಾಣುತ್ತಿತ್ತು. ಅದನ್ನು ಸಚಿವ ವಿನಯ ಕುಲಕರ್ಣಿ ಬಹಿರಂಗವಾಗಿ ತೋಡಿಕೊಂಡರು. "ಹುಬ್ಬಳ್ಳಿಯಲ್ಲಿ ಸಮಾವೇಶ ನಡೆದರೂ ಮೂರುಸಾವಿರ ಮಠದ ಶ್ರೀಗಳು ದೂರ ಉಳಿದಿರುವುದು ತಪ್ಪು" ಎಂದರು[೮] ಇದಕ್ಕೆ ಉತ್ತರವಾಗಿ ಶ್ರೀಗಳು "ಸತ್ಯವನ್ನು ಒಪ್ಪಿಕೊಳ್ಳಲಾಗದ ಸ್ಥಿತಿಯಲ್ಲಿದ್ದೇನೆ" ಎನ್ನುತ್ತ "ಯಾರನ್ನು ಬೆಂಬಲಿಸುವುದು?" ಎಂದು ಮೂರು ಸಾವಿರ ಮಠದ ಶ್ರೀಗಳು ಗೊಂದಲ ತೋಡಿಕೊಂಡರು. "ಹಾನಗಲ್ ಕುಮಾರಸ್ವಾಮಿಗಳು ಸ್ಥಾಪಿಸಿರುವ ವೀರಶೈವ ಸಂಪ್ರದಾಯದ ಮಠದ ಸ್ವಾಮೀಜಿ ತಾವಾಗಿರುವುದರಿಂದ ಲಿಂಗಾಯತ ಸ್ವತಂತ್ರ ಧರ್ಮದ ಹೋರಾಟದಲ್ಲಿ ಯಾರನ್ನು ಬೆಂಬಲಿಸಬೇಕು" ಎಂಬ ಗೊಂದಲದಲ್ಲಿರುವುದಾಗಿ ಶ್ರೀ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ಹೇಳಿದರು. ಮುಂದುವರಿದು "ಲಿಂಗಾಯತ ಎನ್ನುವುದು ಸತ್ಯ ಎಂದು ಹೇಳದೆ ಪರೋಕ್ಷವಾಗಿ ಸತ್ಯವನ್ನು ಒಪ್ಪಿಕೊಳ್ಳಲು ಸಾಧ್ಯವಾಗದ ಸ್ಥಿತಿಯಲ್ಲಿ ನಾನಿದ್ದೇನೆ" ಎಂದು ತಮ್ಮ ಅಸಹಾಯಕತೆಯನ್ನು ಬಹಿರಂಗಪಡಿಸಿದರು. "ಶಿವಯೋಗ ಮಂದಿರದಲ್ಲಿ ಪ್ರತಿದಿನ ಪ್ರಸಾದವಾದ ಬಳಿಕ ವಚನವನ್ನು ಓದಿ ಹೇಳುವ ಸಂಪ್ರದಾಯ ಇಂದಿಗೂ ಇದೆ. ಅಲ್ಲದೆ ಹಾನಗಲ್ ಕುಮಾರಸ್ವಾಮಿಗಳು ತಾವು ಬರೆಯುತ್ತಿದ್ದ ಪ್ರತಿಯೊಂದು ಪತ್ರದ ಮೇಲೆ 'ಗುರುಬಸವಲಿಂಗಾಯ ನಮಃ' ಎಂದು ಬರೆಯುತ್ತಿದ್ದರು. ಹೀಗಾಗಿ ಸ್ವತಂತ್ರ ಧರ್ಮವನ್ನು ಬೆಂಬಲಿಸುವುದರಲ್ಲಿ ಅರ್ಥವಿದೆ"[೯] ಎಂದು ಹೇಳಿದರು

"ಲಿಂಗಾಯತ ಧರ್ಮದ ಆಚರಣೆಯಲ್ಲಿ 'ಬ್ಯಾಕ್ ಆಫೀಸ್' ಕೊರತೆಯಿದೆ" ಎಂದು ಮಾಜಿ ಬ್ಯಾಂಕ್ ಅಧಿಕಾರಿ ಮಹಾದೇವಪ್ಪ ಹೇಳಿದ್ದರು. ಅದು ಅರ್ಧಸತ್ಯವೆಂದು ನನ್ನ ಭಾವನೆ. ಬಸವಣ್ಣನವರು ಜಂಗಮತ್ವಕ್ಕೆ ಮಹತ್ವ ಕೊಟ್ಟಿದ್ದು ಲಿಂಗಾಯತ ಧರ್ಮ ಪ್ರಚಾರ ಮಾಡಲಿಯೆಂದು. "ಜಂಗಮ ಬಂದರೆ ಲಿಂಗಪೂಜೆಯನ್ನು ಮರೆ" ಎಂದು ಹೇಳಿದ್ದು 'ಜಂಗಮ ಎಂಬ ಬ್ಯಾಕ್ ಆಫಿಸಿ'ನ

In Public domain. Digitization Muthulakshmi Research Academy

ಮಹತ್ವವನ್ನು ಸಾರಲು. ಅಂದು ಸ್ಥಾಪನೆಯಾದ ಬ್ಯಾಕ್ ಆಫೀಸ್ ಇಂದು ಕರಪ್ಟ್ ಆಗಿದೆ. ಅರಿಷಡ್ವರ್ಗಗಳನ್ನು ತೊರೆದ ಜಂಗಮನಾಗುವುದನ್ನು ಕಡೆಗಣಿಸಿ, ಮಠ ಕಾಯುವ ಮಠಾಧಿಪತಿಯಾದರು ಇಂದಿನ ಜಂಗಮರು. ಭವಿ ಬಳಸುವ ಸೌಲಭ್ಯಗಳು ತಮಗೂ ಇರಲಿ ಎಂದರು. ಕಠಿಣವಾದ ಧರ್ಮಪ್ರಚಾರವನ್ನು ಮರೆತು ಮಠಕ್ಕೆ ಬಂದ ಭಕ್ತರ ಓಲೈಸುವ ಕಾಯಕಯೋಗಿಗಳಾದರು. ಗುರುಕುಲದ ಶಿಕ್ಷಣವನ್ನು ನೀಡದೆ ಭಕ್ತ ನೀಡುವ ಡೊನೇಶನ್ ಎಂಬ ಕಾಣಿಕೆಯ ಮೇಲೆ ಕಣ್ಣಿಟ್ಟು ಜಂಗಮತ್ವವನ್ನು ಮರೆತರು. ಮೇಲೆ ಹೇಳಿದ ಶ್ರೀಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಸತ್ಯದತ್ತ ವಾಲಿದರೆ ಶ್ರೀಮಂತ ವೀರಶೈವರಿಂದ ದೂರವಾಗಬೇಕಾಗುತ್ತದೆ. ಅವರನ್ನು ಕಾಯ್ದು ಕೊಂಡರೆ ಲಿಂಗಾಯತ ಧರ್ಮ ಸಿದ್ಧಾಂತಕ್ಕೆ ತಿಲಾಂಜಲಿ ಇಡಬೇಕಾಗುತ್ತದೆ. 'ಇಂದು ಬದುಕಿ ನಾಳೆ ಸಾಯುವುದೇ ಶ್ರೇಷ್ಠ' ಎಂದು material satisfactionಗೆ ಶರಣಾದವರು ಲಿಂಗಾಯತ ಜಂಗಮರು.

ಬೀದರ್, ಬೆಳಗಾವಿ ಸಭೆಗಳು ಲಿಂಗಾಯತರನ್ನು ಬೆಸೆದಿದ್ದವು. ಆದರೆ ಹುಬ್ಬಳ್ಳಿ ಸಭೆ ಲಿಂಗಾಯತರಲ್ಲಿರುವ ಒಡಕನ್ನು ತೋರಿಸಿತ್ತು. ಲಿಂಗಾಯತ ಪಂಗಡಗಳನ್ನು ಒಂದೆಡೆ ತರುವ ಪ್ರಯತ್ನದಲ್ಲಿ ನಮ್ಮ ನಾಯಕರು ಹಾಗೂ ಧರ್ಮಗುರುಗಳು ಸೋತಿದ್ದರು. ಲಿಂಗಾಯತ ಧರ್ಮದ ಪ್ರಮುಖ ಪಂಗಡವಾದ ಸಾದ ಲಿಂಗಾಯತರು ದೂರವಾದರು. ಲಿಂಗಾಯತರೆಡ್ಡಿಗಳು ಸಹ ಸಾವಕಾಶವಾಗಿ ಸ್ಥಳ ಖಾಲಿ ಮಾಡಲಾರಂಭಿಸಿದ್ದರು. ಅವರ ನಾಯಕರಾದ ಬಸವರಾಜ ರಾಯರಡ್ಡಿ ಮಾತ್ರ ಲಿಂಗಾಯತ ಹೋರಾಟದೊಂದಿಗೆ ಗುರುತಿಸಿಕೊಂಡಿದ್ದರೂ ಪೂರ್ಣ ಮನಸ್ಸಿನಿಂದಲ್ಲ. ರೆಡ್ಡಿ ಸಮಾಜದ ಬಹುತೇಕ ನಾಯಕರು ದೂರ ಸರಿಯುವ ಪ್ರಯತ್ನದಲ್ಲಿದ್ದರು. ಈ ಸಮಾಜದ ನಾಯಕರು ಹುಬ್ಬಳ್ಳಿ ಸಮಾವೇಶದಲ್ಲಿ ಕಾಣಿಸಿಕೊಳ್ಳಲಿಲ್ಲ. ಇದು Deccan chronicle ಪತ್ರಿಕೆಗೆ ಶಾಮನೂರು ಶಿವಶಂಕರಪ್ಪನವರು ನೀಡಿದ ಸಂದರ್ಶನವನ್ನು ಗಮನಿಸಿದರೆ ಸಾದರು ದೂರವಾಗುವುದು ಸ್ಪಷ್ಟವಾಗುವುದು. ಲಿಂಗಾಯತ ಸಮಾಜದ ಗಾಣಿಗ ಲಿಂಗಾಯತರಿಗೆ ಕೇಂದ್ರ ಓ.ಬಿ.ಸಿ.ಯಲ್ಲಿ 'ಹಿಂದೂಗಾಣಿಗ' ಎಂದು ನಮೂದಿಸಿದರೆ ಮೀಸಲಾತಿ ಸೌಲಭ್ಯ ದೊರಕುವುದು. ಕಾರಣ, ಈ ಸಮಾಜದವರು ಸಹ ಲಿಂಗಾಯತ ಹೋರಾಟದಿಂದ ದೂರ ಸರಿಯಲಾರಂಭಿಸಿದ್ದರು. ಲಿಂಗಾಯತ ಬಣಜಿಗ ಸಮಾಜವು ಮೊದಲಿನಿಂದಲೂ ಬಿ.ಜೆ.ಪಿ.ಯ ಪರ ಒಲವಿದ್ದವರು. ಬಿ.ಜೆ.ಪಿ. ಈ ವಿಷಯದಲ್ಲಿ ಯಾವಾಗ ತಟಸ್ಥವಾಯಿತೋ ಅಂದೇ ಅವರು ಈ ಧರ್ಮಹೋರಾಟದಿಂದ ಹೊರಹೋದರು. ಇನ್ನು ಉಳಿದಿರುವುದು ಹಿಂದುಳಿದ ಹಾಗೂ ದಲಿತ ಸಮಾಜಗಳು. ಬಹುತೇಕ ದಲಿತರು ಬೌದ್ಧಧರ್ಮ

In Public domain. Digitization Muthulakshmi Research Academy

ಸೇರಿ ಬೌದ್ಧರಾಗಿ ಬಿಟ್ಟಿದ್ದರು. ಉನ್ನತ ಲಿಂಗಾಯತ ಸಮಾಜಗಳು ಇವರನ್ನೆಂದೂ ಲಿಂಗಾಯತರೆಂದು ಮನ್ನಿಸಿರಲಿಲ್ಲ. ಅಸ್ಪೃಶ್ಯತೆ ಈಗಲೂ ಜಾರಿಯಲ್ಲಿದೆ. ದೇವರ ಜಗಲಿಯ ಮೇಲೆ ಮಾತ್ರ ಬಸವಣ್ಣನಿದ್ದ. ಆದರೆ ಅವನ ಸಿದ್ಧಾಂತಗಳು ಎಂದೋ ಮಾಯವಾಗಿದ್ದವು. ಕಾರಣ ಈ ಸಮಾಜಗಳು ತಾವೂ ಲಿಂಗಾಯತರೆಂದು ಎಂದೂ ಹೇಳಿಕೊಂಡಿರಲಿಲ್ಲ. ನೇಕಾರರು ಸಹ ಮೀಸಲಾತಿಗಾಗಿ ಹಿಂದೂಗಳಾಗಿ ಮಾರ್ಪಟ್ಟಿದ್ದರು. ಅಷ್ಟೇಕೆ ಕೇಂದ್ರ ಓ.ಬಿ.ಸಿ ಪಟ್ಟಿಯಲ್ಲಿರುವ ೩೮ ಲಿಂಗಾಯತ ಪಂಗಡಗಳಿಗೆ ಮೀಸಲಾತಿಯ ಕಾರಣ ಅವರು ಹಿಂದೂಧರ್ಮವನ್ನು ಬಿಟ್ಟು ಕದಲುವಂತಿರಲಿಲ್ಲ. ಇದು ಅಸಲಿ ಸತ್ಯ.

ಕೊನೆ ಟಿಪ್ಪಣಿಗಳು

೧. ಪ್ರಜಾವಾಣಿ ಸೆಪ್ಟೆಂಬರ್ ೧೧, ೨೦೧೭.

೨. ಪ್ರಜಾವಾಣಿ ಜುಲೈ ೩೦, ೨೦೧೭.

೩. ಪ್ರಜಾವಾಣಿ ಸೆಪ್ಟೆಂಬರ್ ೦೩, ೨೦೧೭.

೪. ಲಿಂಗಾಯತ ದರ್ಶನ, ಲೇ.ಬಸ್ರೂರ್ ಸುಬ್ಬರಾವ, ಮಂಗೇಶ ಪಬ್ಲಿಷರ್ಸ. ಪಂಚ ಮುಖದ ಲಿಂಗ ಅಥವಾ ಈಶಾನ್ಯ ಲಿಂಗದ ಬಗ್ಗೆ ಬಸ್ರೂರ ಸುಬ್ಬರಾವ ಬರೆಯುತ್ತಾರೆ. Iam neither a lingayat nor a veershaiva. Iam Sarsatwa Brahmana....ಎನ್ನುತ್ತ ಮುಂದುವರಿದು ಬರೆಯುತ್ತಾರೆ. My deity of choice is sadyojata. The sadyojata ling at Mahakut is out side the main temple. Its four identical faces look in different directions. From whichever direction devotees come, whatever may be the caste, whichever form and name of shiva they worship, they will see the same welcoming face of the same God. They are free to enter because there are no walls or doors. In the temple of sadyojata, all are welcome

೫. ವಚನ, ಸಂಪಾದಕರು, ಡಾ.ಎಂ.ಎಂ.ಕಲಬುರ್ಗಿ, ಪ್ರಕಾಶಕರು, ಬಸವ ಸಮಿತಿ ಬೆಂಗಳೂರು, ಪು.ಸಂ. ೩೭೧.

೬. ವಚನ, ಸಂಪಾದಕರು, ಡಾ.ಎಂ.ಎಂ. ಕಲಬುರ್ಗಿ, ಪ್ರಕಾಶಕರು ಬಸವ ಸಮಿತಿ ಬೆಂಗಳೂರು, ಪು.ಸಂ. ೫೨೫.

೭. ಲಿಂಗಾಯತ ದರ್ಶನ, ಲೇ. ಬಸ್ರೂರ್ ಸುಬ್ಬರಾವ, ಮಂಗೇಶ ಪಬ್ಲಿಷರ್ಸ, ಪು. ಸಂ. ೧೦೦.

೮. ವಿಜಯ ಕರ್ನಾಟಕ ನವೆಂಬರ್ ೬, ೨೦೧೭.

೯. The News minute Dated 25th September 2017.

೧೦. The News minute Dated 25th September 2017.

೧೧. The News minute Dated 25th September 2017.

೧೨. Deccan chronicle 13th November 2017

In Public domain. Digitization Muthulakshmi Research Academy

ಅಧ್ಯಾಯ ಒಂಭತ್ತು

ಲಿಂಗಾಯತರಿಗೆ ಬೇಕಾಗಿತ್ತು ಪ್ರಾತಿನಿಧಿಕ ಸಂಸ್ಥೆ

"ಅಖಿಲ ಭಾರತ ವೀರಶೈವ ಮಹಾಸಭಾ ಲಿಂಗಾಯತ ಸ್ವತಂತ್ರ ಧರ್ಮ ಹೋರಾಟಕ್ಕೆ ಅಡ್ಡಿಯಾಗಿದೆ. ಅದು ತನ್ನ ದಂದ್ವ ನಿಲುವು ಬಿಟ್ಟು ಹೋರಾಟಕ್ಕೆ ಬೆಂಬಲ ಸೂಚಿಸಬೇಕು, ಇಲ್ಲದಿದ್ದರೆ ಮತ್ತೊಂದು ಪರ್ಯಾಯ ಸಂಸ್ಥೆ ಕಟ್ಟುತ್ತೇವೆ" ಎಂದು ಬೆಳಗಾವಿಯ ರುದ್ರಾಕ್ಷಿ ಮಠದ ಪೂಜ್ಯರಾದ ಶ್ರೀ ಸಿದ್ಧರಾಮ ಸ್ವಾಮೀಜಿ ಹುಬ್ಬಳ್ಳಿಯ ಬೃಹತ್ ಸಭೆಯಲ್ಲಿ ಗುಡುಗಿದ್ದರು.

ಹೌದು, ಪೂಜ್ಯರ ಹೇಳಿಕೆಯಲ್ಲಿ ಸತ್ಯಾಂಶ ಇತ್ತು. ಸಮಗ್ರ ಲಿಂಗಾಯತ ಸಮಾಜದ ಹಿತ ಕಾಪಾಡಬೇಕಾದ ಸಂಸ್ಥೆ ಇಂದು. ತನ್ನ ಸಂಸ್ಥೆಗೆ "ವೀರಶೈವ" ಎಂಬ ಹೆಸರಿದೆ ಎನ್ನುವ ಕಾರಣಕ್ಕಾಗಿ ಲಿಂಗವಂತರ ಹಿತ ಮರೆತದ್ದು ದುರಂತ. ವೀರಶೈವ ಮಹಾಸಭೆಯನ್ನು ಉತ್ತರ ಕರ್ನಾಟಕದ ಪುಣ್ಯಪುರುಷರು ಸ್ಥಾಪಿಸಿದ್ದರು. ಅಂದು ಸ್ಥಾಪಿತ ವೀರಶೈವ ಮಹಾಸಭೆಯನ್ನು ಕುರಿತು ಕವಿಯು ಈ ರೀತಿಯಾಗಿ ಬಣ್ಣಿಸಿದ್ದಾನೆ

ಧಾರವಾಡದ ಚೆನ್ನಬಸವೇಶ್ವರ ಪ್ರತೀತ। ವಾರದ ಮಲ್ಲೇಶ್ವರ ಸ್ವಾಭಿಮಾನ ಸಂ-।
ಪ್ರೇರಿತ ಪ್ರಭು ರುದ್ರಗೌಡ ಗಿಲಗಿಂಚಿ ಗುರುಸಿದ್ಧಾರ್ಯ ಸಿರಸಂಗಿಯಾ॥
ಧೀರ ಲಿಂಗೇಂದ್ರ ಗುಣಗಣಸಾಂದ್ರ ವಂಟಮೂರಿ।
ಧಾರುಣಪತಿ ಲಖಮನಾರ್ಯ ನೂರೊಂದಪ್ಪ।
ಚಾರುತರ ಕಿತ್ತೂರ ರೇವಣಾರ್ಯ ಪ್ರಮುಖರೊಳ್
ಚರಿಪುದಖಿಳಜನರು॥
ಕಂದ ಈ ರುದ್ರಪ್ರಭುನೀತಿಯ। ನೋರಣದಿಂದೋದಿ
ಕೇಳ್ವುದೊಮ್ಮನದಿಂದಂ॥
ದೂರುವರೆ ದೋಷಮಿರ್ದೊಡೆ। ಸೂರಿಗಳೊಲ್ಪಿಂದೆ ತಿರ್ದ ತಿಳುಪದೆ
ಪುರಿಡಿಂ॥[1]

In Public domain. Digitization Muthulakshmi Research Academy

ರವಿ ಕಾಣದ್ದನ್ನು ಕವಿ ಕಾಣುತ್ತಾನೆ ಎನ್ನುತ್ತಾರೆ ಪ್ರಾಜ್ಞರು. ಶತಮಾನಗಳ ನಂತರ ವೀರಶೈವ ಲಿಂಗಾಯತ ಬೇರೆ ಬೇರೆ ಎಂಬ ಭಿನ್ನಾಭಿಪ್ರಾಯ ತಲೆದೋರಿದಾಗ ಈ ಹಿರಿಯರಿದ್ದರೆ ಇಂದು ಎಷ್ಟೊಂದು ನೊಂದುಕೊಳ್ಳುತ್ತಿದ್ದರು? ಇಂದು ಈ ಪರಿಸ್ಥಿತಿ ಬರುತ್ತಿತ್ತೆ? ಅಂದು ಅವರು ಕಟ್ಟಿದ ವೀರಶೈವ ಮಹಾಸಭೆಯ ಮುಖ್ಯಗುರಿ ಸಮಾಜದ ಸರ್ವತೋಮುಖ ಏಳಿಗೆ. ಅಂದು ಇವರಾರಿಗೂ 'ವೀರಶೈವ' ಅಥವಾ 'ಲಿಂಗಾಯತ' ಎಂಬ ಹೆಸರು ಮುಖ್ಯವಾಗಿ ಕಾಣಲಿಲ್ಲ. 'ಹೆಸರು ಕಲ್ಲಪ್ಪಾದರು ಇರಲಿ, ಮಲ್ಲಪ್ಪಾದರು ಇರಲಿ, ಒಟ್ಟಾರೆ ಕೂಸು ಚೆನ್ನಾಗಿರಲಿ ಎಂದು ಕೂಸಿನ ಒಳಿತನ್ನು ಬಯಸುವ ಪಾಲಕರಂತಿತ್ತು.' 'ವೀರಶೈವ-ಲಿಂಗಾಯತ ಎಂದಿಗೂ ಒಂದೇ ಆಗಿದ್ದು, ಬೇರ್ಪಡಲು ಸಾಧ್ಯವಿಲ್ಲ. ವೀರಶೈವ ಪಾರಿಭಾಷಿಕ ಪದವಾದರೆ ಲಿಂಗಾಯತ ರೂಢಿವಾಚಕ ಪದ' ಎಂದಿದ್ದರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಉಜ್ಜಯಿನಿ ಜಗದ್ಗುರುಗಳು.[೨] ಇದನ್ನೇ ಹೇಳಿಯಲ್ಲವೇ ನಮ್ಮ ಪೂರ್ವಜರ ದಿಕ್ಕುತಪ್ಪಿಸಿದ್ದು. ಯಾರೋ ಅಂತರಂಗದಲ್ಲೊಂದು ಬಹಿರಂಗದಲ್ಲೊಂದು ದ್ವಿಮುಖನೀತಿಯನ್ನು ಹೊಂದಿದವರನ್ನು ವಿದ್ವಾಂಸರೆಂದು ಪರಿಗಣಿಸಿ 'ಶ್ರೀಮದ್ವೀರಶೈವ ಮಹಾಸಭೆ' ಯೆಂದು ನಾಮಕರಣ ಮಾಡಿದ್ದರು. ಮೂವತ್ತೆಂಟು ಸಮಾಜಗಳಲ್ಲಿ ಒಂದಾದ ವೀರಶೈವರು. ಮುಂದೊಂದು ದಿನ 'ಲಿಂಗಾಯತರು ಹಿಂದೂಗಳು. ಶರಣರು ವೇದವನ್ನು ಒಪ್ಪಿಕೊಂಡಿದ್ದರು' ಎಂಬ ಅಸಂಬದ್ಧ ಹೇಳಿಕೆ ನೀಡಬಹುದು ಎಂದು ಅವರು ಊಹಿಸಿರಲಿಲ್ಲ. ಲಿಂಗಾಯತವನ್ನೇ ಒಂದು ಜಾತಿಯನ್ನಾಗಿ ಮಾಡಿ ವೈದಿಕರ ಅಡಿಯಲ್ಲಿ ತುರುಕಿ ಶೂದ್ರರನ್ನಾಗಿ ಪರಿಗಣಿಸುವ ಹುನ್ನಾರ ಮಾಡಬಹುದು ಎಂದು ಅವರು ಯೋಚಿಸಿರಲೂ ಇಲ್ಲ. ಶೈವಧರ್ಮದಿಂದ ಬೇರ್ಪಡೆಯಾಗಿ ಹೊರಬಂದ 'ಲಿಂಗಾಯತವು ಧರ್ಮವೇ' ಅಲ್ಲ ಎಂದು ಹೇಳುವ ದಾಷ್ಟ್ಯ ತೋರಬಹುದು ಎಂದು ಈ ಪೂಜ್ಯರು ಎಣಿಸಿರಲೂ ಇಲ್ಲ, ಊಹಿಸಿರಲೂ ಇಲ್ಲ. ಮುಂದೆ ಈ ವೀರಶೈವರು ಹಿಂದೂಧರ್ಮದ ಭಾಗವೆಂದು ಕ್ಯಾತೆ ತೆಗೆಯುತ್ತಾರೆಂದು ಮಹಾಸಭೆಯನ್ನು ಕಟ್ಟಿದ ನಾಯಕರಾರು ಯೋಚಿಸಿರಲಿಲ್ಲ. ವೀರಶೈವ ಮಹಾಸಭೆಯ ಮತಬ್ಯಾಂಕ್ ರಾಜಕಾರಣ ಮಾತ್ರ ಮಾಡುತ್ತ, ಧರ್ಮಸಿದ್ಧಾಂತಗಳನ್ನು ಮರೆತು ಎಡಬಿಡಂಗಿ ನಿಲುವು ತಳೆಯುತ್ತಿತ್ತು. 'ಲಿಂಗಾಯತರಿಗೆ ಜನಗಣತಿಯಲ್ಲಿ ಜೈನ, ಬೌದ್ಧ, ಸಿಖ್ಖರಂತೆ ಪ್ರತ್ಯೇಕ ಕಾಲಂ ನೀಡಿ' ಎಂದು ಸರಕಾರಗಳಿಗೆ ಮನವಿ ಸಲ್ಲಿಸುತ್ತಾರೆ. ಇದರೊಂದಿಗೆ ವೀರಶೈವ ಎಂಬ ಶಬ್ದವನ್ನು ಸೇರಿಸಿ ಶೈವಧರ್ಮದ ಉಲ್ಲೇಖವನ್ನೂ ಮಾಡುತ್ತಾರೆ. ಇನ್ನೊಂದು ಕಡೆ 'ವೀರಶೈವ ಲಿಂಗಾಯತ ಧರ್ಮದ ಮಾನ್ಯತೆಗೆ ಒತ್ತಾಯಿಸಿ ಅಖಿಲ ಭಾರತ ವೀರಶೈವ ಮಹಾಸಭಾ ೩೮ ವರ್ಷಗಳ ಹಿಂದೆಯೇ ಕೇಂದ್ರ

In Public domain. Digitization Muthulakshmi Research Academy
ಸರಕಾರಕ್ಕೆ ಮನವಿ ಸಲ್ಲಿಸಿದೆ' ಎಂಬ ದ್ವಂದ್ವ ಹೇಳಿಕೆಯನ್ನೂ ಮಹಾಸಭೆಯ ಪ್ರಧಾನ ಕಾರ್ಯದರ್ಶಿ ಹಾಗೂ ಸಚಿವ ಈಶ್ವರ ಖಂಡ್ರೆಯವರು ನೀಡುತ್ತಾರೆ.

ಇಂತಹ ದ್ವಂದ ನಿಲುವುಗಳನ್ನು ಹೊಂದಿದ ವೀರಶೈವ ಮಹಾಸಭೆಯು ಪರ್ಯಾಯವಾಗಿ 'ಲಿಂಗಾಯತ ಮಹಾಸಭೆಯನ್ನು ಅಸ್ತಿತ್ವಕ್ಕೆ ತರಬೇಕಾಗುತ್ತದೆ ಎಂದಿದ್ದರು ಬೆಳಗಾವಿಯ ರುದ್ರಾಕ್ಷಿ ಮಠದ ಶ್ರೀ ಸಿದ್ಧರಾಮ ಸ್ವಾಮೀಜಿಯವರು. ಸಮಾಜ ಕಟ್ಟುವ ಕೆಲಸ ಬಹಳ ಕಠಿಣವಾಗಿದ್ದು, ಅದನ್ನು ಒಡೆಯುವುದು ತುಂಬ ಸುಲಭ. ಈ ಮಹಾಸಭೆಯನ್ನು ಲಿಂಗಾಯತ ಸಮಾಜದ ಉದ್ಧಾರಕರು ಕಟ್ಟಿದ್ದಾರೆ. ಅಂತಹ ಮಹಾನುಭಾವರು ಕಟ್ಟಿದ ಸಂಸ್ಥೆಗಳು ಇಂದು ದೇಶ-ವಿದೇಶದಲ್ಲಿ ಹಬ್ಬಿಕೊಂಡಿವೆ. ಈ ಸಂಸ್ಥೆಯೂ ಕೂಡ ಶತಮಾನವನ್ನು ಆಚರಿಸಿಕೊಂಡಿದೆ. ಶಿರಸಂಗಿ ಲಿಂಗರಾಜ ದೇಸಾಯಿಯವರು, ಕೆ.ಪಿ.ಪುಟ್ಟಣ್ಣಶೆಟ್ಟರು, ರಾಜಾಲಖಮಣಗೌಡರು, ವಾರದ ಮಲ್ಲಪ್ಪನವರು, ಮಾಮಲೇ ದೇಸಾಯಿಯವರು, ಅರಟಾಳ ರುದ್ರಗೌಡರು, ಶಾಂತವೀರಪ್ಪ ಮೆಣಸಿನಕಾಯಿಯವರು, ಸರ್ ಸಿದ್ದಪ್ಪ ಕಂಬಳಿಯವರು, ಫ. ಗು.ಹಳಕಟ್ಟಿಯವರು. ಎಸ್.ಎಸ್.ಬಸವನಾಳರು, ಎಂ.ಎಸ್.ಸರ್ದಾರರು, ಡಿ.ಸಿ.ಪಾವಟೆಯವರು ಮತ್ತು ತುಮಕೂರಿನ ಶ್ರೀ ಶಿವಕುಮಾರಸ್ವಾಮಿಗಳಂತಹ ಮಹಾಪುರುಷರು ವೀರಶೈವ ಮಹಾಸಭೆಯ ಅಧ್ಯಕ್ಷ ಪದವಿಯನ್ನು ಅಲಂಕರಿಸಿದ ಸಂಸ್ಥೆಯನ್ನು ವಿಭಾಗಿಸಲು ಯಾರಿಗೆ ಮನಸ್ಸಾದೀತು? ಇಂದಿನ ಆಡಳಿತ ಮಂಡಳಿಯವರಿಗೂ ಸತ್ಯದ ಅರಿವು ಮೂಡಿಸಲು ನಾನು ಸ್ವತಃ ಪ್ರಯತ್ನಕ್ಕೆ ಅಣಿಯಾದೆ. ಸ್ವಕ್ಷೇತ್ರದಲ್ಲಿದ್ದ ಸಚಿವ ಈಶ್ವರ ಖಂಡ್ರೆಯವರನ್ನು ಕಾಣಲು ಭಾಲ್ಕಿಗೆ ಹೋದೆ. ಪರಿಪರಿಯಾಗಿ ಕೇಳಿಕೊಂಡೆ. 'ನಿಮ್ಮ ತಂದೆಯವರಾದ ಭೀಮಣ್ಣ ಖಂಡ್ರೆಯವರು ಬಸವಣ್ಣನವರ ಕಟ್ಟಾ ಬೆಂಬಲಿಗರು, ಅವರಿಗಾಗಿ ಹಾಗೂ ಲಿಂಗಾಯತಕ್ಕಾಗಿ ಜೀವ ಸವೆಸಿದವರು' ಎಂದು ಹಳೆಯ ವಿಷಯವನ್ನೂ ನೆನಪಿಸಿದೆ. ಆಗ ಸಚಿವರು ಒಂದು ಪ್ರಶ್ನೆಯನ್ನು ಮುಂದಿಟ್ಟರು 'ಹಾಗಿದ್ದರೆ 'ಆಗಮ'ದಲ್ಲಿ ಬರೆದಿದ್ದೆಲ್ಲವೂ ಸುಳ್ಳಾ' ಎಂದು ಪ್ರಶ್ನೆ ಮಾಡಿದರು. 'ಸತ್ಯ ಮಿಥ್ಯಗಳನ್ನು ಚರ್ಚಿಸಲು ಒಂದು ತಜ್ಞರ ಸಮಿತಿ ಮಾಡೋಣ, ಅವರು ಕೊಡುವ ತೀರ್ಮಾನವನ್ನು ಎಲ್ಲರೂ ಒಪ್ಪಿಕೊಳ್ಳೋಣ' ಎಂಬ ಸಲಹೆಯನ್ನು ಕೊಟ್ಟು ಅರ್ಧ ದಿನ ವಾದಿಸಿದ್ದೆ. ರಾಜಕಾರಣಿಗಳಿಗೆ ಸತ್ಯ ಬೇಕಾಗುವುದಿಲ್ಲ. ಚುನಾವಣೆಯಲ್ಲಿ ಗೆಲುವು, ಅಧಿಕಾರ, ವೈಯಕ್ತಿಕ ಸ್ಥಾನಮಾನಗಳು ಮಾತ್ರ ಮುಖ್ಯವಾಗುತ್ತವೆ. ವೀರಶೈವ ಮಹಾಸಭೆಯಲ್ಲಿದ್ದವರೆಲ್ಲರೂ ರಾಜಕೀಯ ನಾಯಕರು. ಅವರಿಗೆ ಬಸವಣ್ಣ ಮುಖ್ಯವಲ್ಲ. 'ತಾನು' ಎಂಬ ಅಹಂ ಮುಖ್ಯ.

ನಾವು ಒಂದು ಕ್ಷಣ ವೀರಶೈವ-ಲಿಂಗಾಯತ ಒಂದೇ ಎಂದು ಒಪ್ಪಿಕೊಂಡರೂ ವೀರಶೈವರು ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಕರು. ವಚನಗಳು

In Public domain. Digitization Muthulakshmi Research Academy

ಲಿಂಗಾಯತ ಧರ್ಮಗ್ರಂಥ, ಕನ್ನಡ ಧರ್ಮಭಾಷೆ. ಈ ಧರ್ಮದ ಸ್ಥಾಪನೆಯ ಕಾಲ ೧೨ನೆಯ ಶತಮಾನ ಎಂದು ಒಪ್ಪಿಕೊಳ್ಳುತ್ತಾರೆಯೇ? ಇವರು ಪ್ರತಿಪಾದಿಸುವ ವೀರಶೈವಕ್ಕೆ ಬೇಕಾದ ಪೂರ್ವೇತಿಹಾಸ ಇದೆಯೇ? ನಿಜದಲ್ಲಿ ವೀರಶೈವರಿಗೆ ಇಂತಹ ಇತಿಹಾಸವಿಲ್ಲ. ವೀರಶೈವವೂ ಸಹ ಲಿಂಗಾಯತರ ನೂರು ಕಾಯಕವೃತ್ತಿಯಲ್ಲಿ ಒಂದು ಪಂಗಡ. ಅವರು ತಾವು ಲಿಂಗಾಯತವನ್ನು ಒಪ್ಪಿಕೊಳ್ಳದಿದ್ದಲ್ಲಿ ಅವರು ಬೇರೆಯಾಗಿ ಸ್ವತಂತ್ರ ಧರ್ಮದ ಮಾನ್ಯತೆಗಾಗಿ ಅರ್ಜಿ ಹಾಕಿಕೊಳ್ಳಲಿ, ಇಲ್ಲದಿದ್ದಲ್ಲಿ ಬಸವ ಪ್ರಣೀತ ಲಿಂಗಾಯತ ಸಂಘಟನೆಗಳೊಂದಿಗೆ ಕೈ ಜೋಡಿಸಿ ತಮ್ಮನ್ನು ನಂಬಿಕೊಂಡ ಭಕ್ತರಿಗೆ ಸಾಮಾಜಿಕ, ರಾಜಕೀಯ, ಧಾರ್ಮಿಕ ಹಕ್ಕುಗಳನ್ನು ನೀಡಲು ಸರ್ಕಾರಗಳನ್ನು ಒತ್ತಾಯಿಸಬೇಕಲ್ಲವೆ? ಕಾಪಾಲಿಕರು, ಕಾಳಾಮುಖರು, ನಾಥಪಂಥದವರು, ಶೈವಪರಂಪರೆಯ ಅನೇಕ ಪಂಥಗಳು ತಮ್ಮ ಪೂರ್ವಾಪರ ತೊರೆದು ಬಸವಣ್ಣನವರ ಸಿದ್ಧಾಂತಗಳನ್ನು ಒಪ್ಪಿಕೊಂಡು, ಲಿಂಗಾಯತಕ್ಕೆ ತಲೆ ಬಾಗಿದ್ದರು. ಅಂದಿನ ಹೊಸ ಯೋಚನೆಯ ಸಮಾಜಕ್ಕೆ ಬೇಕಾದ ಸಿದ್ಧಾಂತವನ್ನು ಒಪ್ಪಿಕೊಂಡು ದೇಶ–ವಿದೇಶಗಳಿಂದ ಜನ ಲಿಂಗಾಯತ ಧರ್ಮವನ್ನು ಒಪ್ಪಿಕೊಂಡಿದ್ದರು. ಪ್ರಜಾಪ್ರಭುತ್ವದ ಪಾರ್ಲಿಮೆಂಟನ್ನು ಕಟ್ಟಿದ್ದರು.

ವೀರಶೈವ ಮಹಾಸಭೆಯ ಪ್ರಾರಂಭದ ದಿನಗಳಲ್ಲಿಯ ಅಭಿಪ್ರಾಯದಂತೆ ಇಂದಿಗೂ ಅಂತಹದೇ ಚಿಂತನೆಯಲ್ಲಿರುವ ಕೆಲವು ನಾಯಕರು ಹೆಸರು ಮುಖ್ಯವಲ್ಲ ಜನಕ್ಕೆ ಅನುಕೂಲವಾದರೆ ಸಾಕು ಎನ್ನುವ ಜನಾನುರಾಗಿ ವಿಚಾರಧಾರೆಯನ್ನು ಹೊಂದಿದ್ದರು. 'ಲಿಂಗಾಯತ ವೀರಶೈವ ಎಂಬುದು ಒಂದೇ, ಆದರೆ ಅಲ್ಪಸಂಖ್ಯಾತ ಧರ್ಮವಾದರೆ ಕೆಲ ಸೌಲಭ್ಯ ಸಿಗಬಹುದೆಂದು ಸಿದ್ದರಾಮಯ್ಯ ಕಾಳಜಿ ತೋರಿದರು' ಎನ್ನುತ್ತಾರೆ ಶಾಸಕ ಅಶೋಕ ಖೇಣಿ. ಇವರಂತೆಯೇ ಅನೇಕ ಸಮಾಜಜೀವಿಗಳು ನೈಜ ಕಳಕಳಿಯನ್ನು ಹೊಂದಿದ್ದರು.

'ಲಿಂಗಾತಯ ಧರ್ಮಕ್ಕೆ ಅಲ್ಪಸಂಖ್ಯಾತ ಧರ್ಮದ ಸ್ಥಾನಮಾನ ನೀಡುತ್ತೇನೆ' ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ರಾಜಕೀಯ ಕಾರಣಕ್ಕಾಗಿ ಕಾಂಗ್ರೆಸ್ ಪಕ್ಷದ ಹಿರಿಯ ಸದಸ್ಯ ಮತ್ತು ವೀರಶೈವ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪನವರು ಮುಖ್ಯಮಂತ್ರಿಗಳ ಬಗ್ಗೆ ಹಗುರವಾಗಿ ಮಾತನಾಡಲು ಪ್ರಾರಂಭಿಸಿದ್ದರು.

ಹುಬ್ಬಳ್ಳಿ ರ್‍ಯಾಲಿಯ ನಂತರ ವೀರಶೈವ ಮಹಾಸಭೆಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪನವರು ನಿಲುವು ಬದಲಾಗಿತ್ತು. ಅವರು Deccan Chronical ಎಂಬ ಪತ್ರಿಕೆಯೊಂದಿಗೆ ನಡೆಸಿದ ಈ ಸಂದರ್ಶನದಲ್ಲಿ ಒಂದು ಕುಹಕದ ಪ್ರಶ್ನೆಗೆ ನೀಡಿದ ಉತ್ತರ ಅವರ ಮನಸ್ಸಾಕ್ಷಿಯ ಕನ್ನಡಿಯಾಗಿತ್ತು. ಅಲ್ಲದೆ ಮುಖ್ಯಮಂತ್ರಿಗಳಿಗೆ ಸನ್ಮಾನ ಮಾಡಿದ್ದು ತಪ್ಪು ಎನ್ನುವಂತಹ ಹೇಳಿಕೆಯನ್ನೂ ಸಹ ನೀಡಿದ್ದರು.

In Public domain. Digitization Muthulakshmi Research Academy

'ನಾನೇನು ಅವರಿಗೆ ಸನ್ಮಾನ ಮಾಡು ಎಂದು ಹೇಳಿದೆನೆ?' ಎಂದು ತಿರುಗಿ ಉತ್ತರ ನೀಡಿದ್ದರು ಮುಖ್ಯಮಂತ್ರಿಗಳು.

ವಿಷಯ ದಿನದಿಂದ ದಿನಕ್ಕೆ ಗೊಂದಲದ ಗೂಡಾಗಲಾರಂಭಿಸಿತ್ತು. ರಾಜ್ಯದ ಗಲ್ಲಿ ಗಲ್ಲಿಗಳಲ್ಲಿ ಪರ–ವಿರೊಧ ಚರ್ಚೆ ವ್ಯಾಪಿಸಲಾರಂಭಿಸಿತ್ತು. ರ‍್ಯಾಲಿಗೆ ಹೋದರೆ ಪೂಜೆಗೆ ಬರುವುದಿಲ್ಲ ಎಂದು ಗುರುವರ್ಗದ ಮಠಾಧೀಶರು ಹೇಳಲಾರಂಭಿಸಿದರು. 'ರ‍್ಯಾಲಿಯಲ್ಲಿ ಪಾಲ್ಗೊಳ್ಳುವವರ ಮನೆಗಳಲ್ಲಿ ಯಾವುದೇ ಶುಭಕಾರ್ಯಗಳಿಗೆ ಕರೆದರೂ ಹೋಗುವುದಿಲ್ಲ'[೫] ಎಂದು ಹೇಳಿಕೆ ನೀಡಿದರು ಕೊತ್ತಲ ಬಸವೇಶ್ವರ ದೇವಸ್ಥಾನದ ಸದಾಶಿವ ಸ್ವಾಮೀಜಿ. ಇದು ಅವರೊಬ್ಬರ ಹೇಳಿಕೆಯಾಗಿರಲಿಲ್ಲ. ಸದಾಶಿವ ಸ್ವಾಮೀಜಿಯವರು ಗುರುವರ್ಗದವರ (ಜಂಗಮಸಮಾಜದ) ಮುಖವಾಣಿಯಾಗಿದ್ದರು. ಲಿಂಗಾಯತ ಧರ್ಮ ಮಾನ್ಯತೆಯನ್ನು ಕೇಳಿದ್ದ ವೀರಶೈವ ಮಹಾಸಭಾ ಉಲ್ಟಾ ಹೊಡೆಯಲಾರಂಭಿಸಿತ್ತು. ಅದಕ್ಕೆ ಸೈದ್ಧಾಂತಿಕ ಕಾರಣಗಳೇನೂ ಇರಲಿಲ್ಲ. ಕೇವಲ ರಾಜಕಾರಣಿಗಳ ಮಧ್ಯೆ ಇರುವ ಅಸೂಯೆ ಭಿನ್ನಾಭಿಪ್ರಾಯದಲ್ಲಿ ಬದಲಾಗಿತ್ತು. ನೂರಾರು ವರ್ಷಗಳ ನಂತರ ಲಿಂಗಾಯತಕ್ಕೆ ಒದಗಿಬಂದ ಒಳ್ಳೆಯ ಅವಕಾಶ ಕೈತಪ್ಪಿಹೋಗುವ ಲಕ್ಷಣಗಳು ಹೆಚ್ಚಾಗಲಾರಂಭಿಸಿದ್ದವು. ಲಿಂಗಾಯತರ ಹಿತರಕ್ಷಣೆ ವೀರಶೈವ ಮಹಾಸಭೆಯಿಂದ ಅಸಾಧ್ಯ ಎಂಬುದು ದೃಢವಾಗಲಾರಂಭಿಸಿತ್ತು. ನಮ್ಮವರಲ್ಲಿ ಸಾಂಘಿಕ ಹೋರಾಟವು ಒಂದು ನೋಂದಾಯಿತ ಸಂಸ್ಥೆಯಿಂದ ಮಾತ್ರ ಸಾಧ್ಯ ಎಂಬ ಅಭಿಪ್ರಾಯ ಗಟ್ಟಿಗೊಳ್ಳಲಾರಂಭಿಸಿತ್ತು.

ನಮ್ಮ ವಿಚಾರಗಳು ಹರಳುಗಟ್ಟುತ್ತಿರುವ ಸಮಯದಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ವಿಸ್ತೃತ ವರದಿ ಪ್ರಕಟವಾಗಿತ್ತು. 'ವಿಶ್ವ ಲಿಂಗಾಯತ ಮಹಾಸಭಾ' ಶೀಘ್ರ ಅಸ್ತಿತ್ವಕ್ಕೆ ಎಂಬ ತಲೆಬರಹದೊಂದಿಗೆ ಪ್ರಜಾವಾಣಿ ವರದಿಗಾರರಾದ ಬಿ.ಎಸ್. ಷಣ್ಮುಖಪ್ಪ 'ಶೀಘ್ರದಲ್ಲೇ ವಿಶ್ವ ಲಿಂಗಾಯತ ಮಹಾಸಭಾ(ವಿ.ಎಲ್.ಎಂ.) ಅಸ್ತಿತ್ವಕ್ಕೆ ಬರಲಿದೆ. ಇದರ ಮೊದಲ ಅಧ್ಯಕ್ಷರಾಗಿ ಜೆ.ಡಿ.ಎಸ್.ನ ಬಸವರಾಜ ಹೊರಟ್ಟಿ ಹಾಗೂ ಮಹಾಪ್ರಧಾನ ಕಾರ್ಯದರ್ಶಿಯಾಗಿ ಶಿವಾನಂದ ಜಾಮದಾರ ಕಾರ್ಯ ನಿರ್ವಹಿಸಲಿದ್ದಾರೆ. ಆಗಸ್ಟ್ ೩೧ರಂದು ನಗರದ ಬಿ.ಎಲ್.ಡಿ.ಇ. ಸಂಸ್ಥೆಯ ಕಚೇರಿಯಲ್ಲಿ ನಡೆದ ಮೊದಲ ಸಭೆಯಲ್ಲಿ ಈ ತೀರ್ಮಾನ ಕೈಕೊಳ್ಳಲಾಗಿದೆ. ಅಮೆರಿಕ, ಲಂಡನ್, ದುಬೈ, ಆಸ್ಟ್ರೇಲಿಯ ಸೇರಿದಂತೆ ವಿವಿಧ ದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಸವತತ್ವ ಪ್ರಚಾರ ಮಾಡುವ ಎಲ್ಲ ಸಂಘಟನೆಗಳನ್ನು ಈ ವಿ.ಎಲ್.ಎಂ.ದ ಆಶ್ರಯದ ಅಡಿಯಲ್ಲಿ ತರಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಅಧ್ಯಕ್ಷ ಮಂಡಳಿಯಲ್ಲಿ ವಿರಕ್ತಮಠದ ಎಲ್ಲ ಪ್ರಮುಖ ಸ್ವಾಮಿಗಳು, ಉಪಾಧ್ಯಕ್ಷರಾಗಿ ಆರರಿಂದ ಎಂಟು ಜನ ಹಿರಿಯರು, ೧೨ ಜನ ಸದಸ್ಯರು ಮತ್ತು

In Public domain. Digitization Muthulakshmi Research Academy

ಕಾರ್ಯದರ್ಶಿಗಳಾಗಿ ಸಚಿವ ಎಂ.ಬಿ.ಪಾಟೀಲ ಮತ್ತು ವಿನಯ ಕುಲಕರ್ಣಿ ಇರುತ್ತಾರೆ. ಪರಿಷತ್‌ನ ರೂಪರೇಷೆ, ಬೈಲಾಗಳ ಸ್ವರೂಪದ ಕೆಲಸ ಕಾರ್ಯಗಳನ್ನು ಜಾಮದಾರ ನೇತೃತ್ವದ ತಂಡವು ಸಿದ್ಧಪಡಿಸಲಿದೆ. ಕಲ್ಬುರ್ಗಿ, ವಿಜಾಪುರಗಳಲ್ಲಿ ನಡೆಯಲಿರುವ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ರ್‍ಯಾಲಿಗಳು ಮುಕ್ತಾಯವಾಗುವುದರ ಒಳಗೆ ಅಖಿಲ ಭಾರತ ವೀರಶೈವ ಮಹಾಸಭೆ ತನ್ನ ಹೆಸರನ್ನು 'ಲಿಂಗಾಯತ ಮಹಾಸಭಾ' ಎಂದು ಬದಲಾಯಿಸಿಕೊಳ್ಳಬೇಕು. ಇಲ್ಲವಾದಲ್ಲಿ 'ಪ್ರತ್ಯೇಕ ಲಿಂಗಾಯತ ಮಹಾಸಭಾ' ಅಸ್ತಿತ್ವಕ್ಕೆ ತರುವುದು ನಿಶ್ಚಿತ' ಎಂಬ ನಿರ್ಧಾರಕ್ಕೆ ಈ ಸಭೆ ಒಕ್ಕೊರಲ ಸಮ್ಮತಿ ಸೂಚಿಸಿದೆ. ಈ ಸಭೆಯಲ್ಲಿ ಮುರುಘಾಮಠದ ಶಿವಮೂರ್ತಿಶರಣರು, ಕೂಡಲಸಂಗಮದ ಪಂಚಮಸಾಲಿ ಪೀಠದ ಜಯಮೃತ್ಯುಂಜಯಸ್ವಾಮೀಜಿ, ಮುಂಡರಗಿಯ ತೋಂಟದಾರ್ಯ ಮಠದ ಶ್ರೀನಿಜಗುಣಾನಂದ ಸ್ವಾಮೀಜಿ, ಸಚಿವರಾದ ಎಂ.ಬಿ.ಪಾಟೀಲ, ವಿನಯ ಕುಲಕರ್ಣಿ, ಮಾಜಿ ಸಚಿವ ಎ.ಬಿ.ಪಾಟೀಲ, ಶಾಸಕ ಬಿ.ಆರ್.ಪಾಟೀಲ. ವಿಜಯಾನಂದ ಕಾಶಪ್ಪನವರ, ವಿಧಾನಪರಿಷತ್ ಸದಸ್ಯ ಮೋಹನ ಕೊಂಡಜ್ಜಿ, ಕೈಗಾರಿಕೋದ್ಯಮಿ ಜಿ.ಬಿ.ಪಾಟೀಲ, ಡಾ.ಜಯಣ್ಣ ಸಾಹಿತಿ, ಡಾ.ಜಿ.ಎನ್. ಮಲ್ಲಿಕಾರ್ಜುನಪ್ಪ ಇದ್ದರು ಎಂದು ವಿಸ್ತೃತವಾದ ವರದಿ ಮಾಡಿತ್ತು

ದುಡುಕುವುದು ಬೇಡ: ಲಿಂಗಾಯತ ಸ್ವತಂತ್ರ ಧರ್ಮ ಚಳುವಳಿಯ ಮುಂಚೂಣಿಯಲ್ಲಿರುವ ಗದುಗಿನ ತೋಂಟದ ಶ್ರೀಸಿದ್ಧಲಿಂಗಸ್ವಾಮೀಜಿ, ಇಳಕಲ್ಲಿನ ಮಹಾಂತ ಅಪ್ಪಗಳು, ನಾಗನೂರಿನ ರುದ್ರಾಕ್ಷಿಮಠದ ಶ್ರೀಸಿದ್ಧರಾಮಸ್ವಾಮೀಜಿ, ನಿಡಸೋಶಿಯ ಶ್ರೀಪಂಚಮ ಶಿವಲಿಂಗೇಶ್ವರಸ್ವಾಮಿಗಳು, ಇವರೆಲ್ಲರೂ ಶಿವಯೋಗ ಮಂದಿರದಲ್ಲಿ ಅಧ್ಯಯನ ಮಾಡಿದವರು. ಇವರಿಗೆಲ್ಲ ಹಾನಗಲ್ ಕುಮಾರಸ್ವಾಮಿಗಳ ಮೇಲೆ ಅಪಾರ ಗೌರವ ಇರುವುದು. ವೀರಶೈವ ಮಹಾಸಭಾ ಆರಂಭಗೊಂಡಿದ್ದೇ ಹಾನಗಲ್ ಕುಮಾರಸ್ವಾಮಿಗಳ ಸಾನ್ನಿಧ್ಯದಲ್ಲಿ. 'ಹೀಗಾಗಿ ವೀರಶೈವ ಮಹಾಸಭಾ ಲಿಂಗಾಯತ ಮಹಾಸಭಾ ಎಂದಾಗಲಿ ಎಂದು ಇವರು ಕಾಯುತ್ತಿದ್ದಾರೆ. ಪ್ರತ್ಯೇಕ ಮಹಾಸಭಾಕ್ಕೆ ದುಡುಕುವುದು ಬೇಡ. ಶಿವಶಂಕರಪ್ಪ ಖಂಡಿತ ಬದಲಾಗುತ್ತಾರೆ ಎಂಬ ವಿಶ್ವಾಸದಿಂದ ಸ್ವಾಮಿಗಳು ಕಾಯುತ್ತಿದ್ದಾರೆ' ಎಂದು ಈ ಸ್ವಾಮಿಗಳ ನಿಕಟವರ್ತಿಗಳು ತಿಳಿಸಿದ್ದಾರೆ.[೮] ಎಂಬ ಅನಧಿಕೃತ ಸುದ್ದಿ ಪ್ರಕಟವಾಗಿತ್ತು. ಆದರೆ ಸ್ವಾಮೀಜಿಗಳ ಆಶಯ ಕೈಗೂಡಲಿಲ್ಲ.

ಇದೆಲ್ಲ ಬೆಳವಣಿಗೆಗಳು ಲಿಂಗಾಯತಕ್ಕೆ ಧಕ್ಕೆ ತರುವಂಥ ವಿಷಯಗಳಾಗಿದ್ದವು. enough is inough ಎಂದುಕೊಂಡ ನಾವು ಲಿಂಗಾಯತ ಪ್ರಾತಿನಿಧಿಕ ಸಂಸ್ಥೆಯನ್ನು ಕಟ್ಟುವ ಕಾರ್ಯವನ್ನು ಪ್ರಾರಂಭಿಸಿದೆವು.

In Public domain. Digitization Muthulakshmi Research Academy

ಈಗಾಗಲೇ ಲಿಂಗಾಯತರು ಹೆಸರಿನ ಭಾರದಿಂದ ಬಳಲುತ್ತಿದ್ದರು. ಲಿಂಗಾಯತ ಮಹಾಸಭೆಯಂದು ಕರೆಸಿಕೊಳ್ಳಬೇಕಾದ ಸಂಸ್ಥೆಯು ಯಾರದೋ ಕುತಂತ್ರದಿಂದ ಶ್ರೀಮದ್ವೀರಶೈವ ಮಹಾಸಭಾವಾಗಿ ಸ್ಥಾಪನೆಯಾಗಿತ್ತು. ಅದರ ಫಲವನ್ನು ಲಿಂಗಾಯತರು ಇಂದಿಗೂ ಅನುಭವಿಸುತ್ತಲಿದ್ದಾರೆ. ಕಾರಣ ನಾವು ಬಹಳ ಜಾಗರೂಕತೆಯಿಂದ ಹೆಸರನ್ನು ಇಡಲು ಯೋಚಿಸುತ್ತಿದ್ದೆವು. ಶರಣರದು ವಿಶ್ವಬಂಧುತ್ವದ ಆದರ್ಶ. ಇವರಲ್ಲಿ ಅಗ್ರಗಣ್ಯರಾದ ಬಸವಣ್ಣನವರು ವಿಶ್ವಗುರುಗಳು. ಲಿಂಗಾಯತ ಧರ್ಮದ ಸರಳ ಸಿದ್ಧಾಂತಗಳು ವಿಶ್ವವನ್ನು ಒಂದುಗೂಡಿಸುವ ಸಿದ್ಧಾಂತಗಳು. ಲಿಂಗಾಯತವು ಭಾರತದ ಗಡಿಯಾಚೆ ಹೋಗಿರದೆ ಇರಬಹುದು. ಅದರೆ ಅದರ ಆದರ್ಶಗಳೊಮ್ಮೆ ವಿಶ್ವಕ್ಕೆ ಪರಿಚಯವಾದರೆ ಅವು ಜಗತ್ತಿನ ನಾಗರಿಕರೆಲ್ಲರ ಮನ ಗೆಲ್ಲುತ್ತವೆ. ಅಂತಹ ಆದರ್ಶಗಳನ್ನು ಪಸರಿಸಲಿರುವ ಸಂಸ್ಥೆಯ ಹೆಸರು ಮತ್ತು ವ್ಯಾಪ್ತಿ ವಿಶ್ವಮಟ್ಟದಲ್ಲಿ ಇರಬೇಕು. ಇಂತಹ ಸಂಸ್ಥೆಗೆ 'ವಿಶ್ವ ಲಿಂಗಾಯತ ಮಹಾಸಭಾ' ಎಂದು ನಾಮಕರಣವಾಗಬೇಕು ಎಂದು ನಮ್ಮೆಲ್ಲರ ಆಶೆಯಾಗಿತ್ತು. 'ವಿಶ್ವ ಲಿಂಗಾಯತ ಮಹಾಸಭೆ' ಎಂದು ನೋಂದಾಯಿಸಲು ಮುಂದಾದೆವು. ಕರ್ನಾಟಕ ಸರಕಾರದ ನೋಂದಾಯಿತ ಸಂಸ್ಥೆಗಳ ಪಟ್ಟಿಯಲ್ಲಿ ಆ ಹೆಸರು ಈಗಾಗಲೇ ನೋಂದಾವಣೆಗೊಂಡಿತ್ತು. ಆ ಸಂಸ್ಥೆ ಹುಬ್ಬಳ್ಳಿಯಲ್ಲಿ ಸ್ಥಾಪಿತವಾಗಿದ್ದರೂ ಚಲಾವಣೆಯಲ್ಲಿ ಇರಲಿಲ್ಲ. ಅದೇ ಸಂಸ್ಥೆಯನ್ನು ನಾವು ಮುಂದುವರಿಸಿಕೊಂಡು ಹೋಗಲು ಬಯಸಿ ಸಂಸ್ಥೆಯ ಪದಾದಿಕಾರಿಗಳನ್ನು ಸಂಪರ್ಕಿಸಿದೆವು. ಆದರೆ ಸಂಸ್ಥೆಯನ್ನು ಅವರು ಬಿಟ್ಟುಕೊಡಲು ಒಪ್ಪಲಿಲ್ಲ.

ಸರಿಯಾದ ಹೆಸರಿನ ಬಗ್ಗೆ ನಮ್ಮ ಮೂವರಲ್ಲಿ(ಡಾ.ಜಾಮದಾರ, ಡಾ.ಜಯಣ್ಣ ಮತ್ತು ನಾನು) ಚರ್ಚೆ ಪ್ರಾರಂಭವಾಯಿತು. 'ವಿಶ್ವ'ದ ಪರ್ಯಾಯ ಶಬ್ದವನ್ನು ಲಿಂಗಾಯತಕ್ಕೆ ಜೋಡಿಸಿದರೆ ನಮ್ಮ ಕೆಲಸ ಸುಲಭ ಎಂದುಕೊಳ್ಳುತ್ತ, ನಾನು 'ವಿಶ್ವ'ದ ಪರ್ಯಾಯ ಶಬ್ದಕ್ಕಾಗಿ ಯೋಚಿಸಲಾರಂಭಿಸಿದ್ದೆ.' ವಿಶ್ವ'ದ ಪರ್ಯಾಯ ಶಬ್ದ 'ಜಾಗತಿಕ' ಅಲ್ಲವೆ? ಅಲ್ಲದೆ ಈ ಶಬ್ದವೂ ಸಾಮಾನ್ಯ ಜನರಾಡುವ ಸರಳ ಮತ್ತು ಸಾಮಾನ್ಯ ಶಬ್ದ. ಅದೇ ನಮ್ಮ ಸಂಸ್ಥೆಯ ಹೆಸರಾಗಲಿ ಎಂದು ನಾನು ಬಯಸಿ ಡಾ.ಜಾಮದಾರರಿಗೆ ಸೂಚಿಸಿದೆ. ಅವರಿಗೂ ಹೆಸರು ಇಷ್ಟವಾಯಿತು. ಈಗಾಗಲೇ ನೋಂದಾಯಿತ ಸಂಸ್ಥೆಗಳ ಪಟ್ಟಿಯಲ್ಲಿ 'ಜಾಗತಿಕ ಲಿಂಗಾಯತ ಮಹಾಸಭಾ' ಎಂಬ ಹೆಸರು ಕಾಣಿಸಲಿಲ್ಲ. ಲಿಂಗಾಯತರ ಪ್ರಾಥಮಿಕ ಸಂಸ್ಥೆಯಾಗಿ 'ಜಾಗತಿಕ ಲಿಂಗಾಯತ ಮಹಾಸಭಾ'ವನ್ನು ದಾಖಲಿಸಲು ನಿರ್ಧರಿಸಿದೆವು. ಬೈಲಾ ತಯಾರಿಸುವ ಜವಾಬ್ದಾರಿಯನ್ನು ನಮ್ಮ ತಂಡಕ್ಕೆ ವಹಿಸಿದರು. 'ಜಾಗತಿಕ ಲಿಂಗಾಯತ ಮಹಾಸಭೆ'ಯನ್ನು ಧಾರ್ಮಿಕ, ಸಾಮಾಜಿಕ ಸಂಸ್ಥೆಯನ್ನಾಗಿ ಕಟ್ಟುವ ಮಹದಾಸೆ ನಮ್ಮಲ್ಲಿತ್ತು.

In Public domain. Digitization Muthulakshmi Research Academy

ಕಾನೂನು ಹಾಗೂ ಆಡಳಿತದ ಅಪಾರ ಅನುಭವ ಹೊಂದಿದ್ದ ಡಾ.ಜಾಮದಾರ ಒಂದು ಒಳ್ಳೆಯ ಬೈಲಾ ತಯಾರು ಮಾಡಿದ್ದರು. ಅದನ್ನು ನೋಂದಣಿಗಾಗಿ ಕಳಿಸಿದ್ದೆವು. ಆದರೆ ನೋಂದಣಾಧಿಕಾರಿ ನಾವು ಕಳಿಸಿದ ಬೈಲಾ ತಿರಸ್ಕರಿಸಿದರು. ಸರಕಾರದ Formatನಲ್ಲಿಯೇ ನಮ್ಮ ಬೈಲಾ ನೋಂದಣಿ ಮಾಡಿಸಬೇಕೆಂದು ಹಟ ಹಿಡಿದರು. ಅಂತಿಮವಾಗಿ ಅವರು ತಿಳಿಸಿದ Formatನಲ್ಲಿ ನಮ್ಮ bylaw ಮಾಡಿ ಸಂಸ್ಥೆಯ ನೋಂದಣಿಗಾಗಿ ಕಳಿಸಿದ್ದೆವು. ಬಿ.ಎಲ್.ಡಿ. ಸಂಸ್ಥೆಯ ಅಧಿಕಾರಿಗಳು ನೋಂದಣಿ ಪ್ರಕ್ರಿಯೆ ಜವಾಬ್ದಾರಿ ವಹಿಸಿಕೊಂಡಿದ್ದರು. ಸಹಿ ಮಾಡಲು ಅನಕೂಲವಾಗಲಿ ಎಂದು ಬಸವರಾಜ ಎ.ಪಿ. ಅವರಿಗೆ ಅದರ ಜವಾಬ್ದಾರಿ ವಹಿಸಿದ್ದೆವು.

ಇಂತಹ ಒಂದು ಐತಿಹಾಸಿಕ ಸಂಸ್ಥೆಗೆ ಕರ್ನಾಟಕದ ಎಲ್ಲ ಸ್ತರದ ಜನರು ಈ ಸಂಸ್ಥೆಯಲ್ಲಿರಲಿ ಎಂದು ಬಯಸಿದ್ದರು ಸಚಿವರಾದ ಎಂ.ಬಿ. ಪಾಟೀಲರು. ಅದರಂತೆ ಸಮಾಜದ ಎಲ್ಲ ವರ್ಗದ ಕಾಯಕ ಜೀವಿಗಳನ್ನು ಒಳಗೊಂಡ ಒಂದು ಕಾರ್ಯಕಾರಿ ಸಮಿತಿಯೊಂದಿಗೆ ನೊಂದಣಿಗೆ ಬೈಲಾ ಕಳಿಸಿದ್ದೆವು.

In Public domain. Digitization Muthulakshmi Research Academy

ಜಾಗತಿಕ ಲಿಂಗಾಯತ ಮಹಾಸಭಾ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು

ಕ್ರ ಸಂ.	ಹೆಸರು	ವಯಸ್ಸು	ಉದ್ಯೋಗ	ವಿಳಾಸ
1.	**Sri M.B. Patil**	53	social worker	Nandan vana, No 2. 4th Main, Sadashiva-nagar Bangalore- 80.
2.	**Sri Basavaraj Horatti**	72	Social Work	Adaveshwar Sadan, Veman Beedi, Hubli-20.
3.	**Sri S.M. Jamadar**	65	Social Work	F1, 1st C Main, HSR layout, Bangalore -34.
4.	**Sri A.B.Patil**	65	Social Work	282, Sector 2, Shiva-basav Nagar, Belagavi
5.	**Sri G.B.Patil**	60	Business	284, 1st Main, 407 S.F.S. Yelahanka New Town Bangalore – 64
6.	**Dr. Jayanna C**	49	Doctor	365, 2nd cross, 2nd Main, 3rd Block, 3rd Stage Medical Profession Basaveshwar Nagar Bangalore -10
7.	**Smt. Mangala K.R.**	48	Social Work	No. 212, 5th Main, AECS Layout, Sanjay Nagar, Bangalore - 94.
8.	**Sri Basavaraj AP**	40	Social Work	Ajjanahalli Post, Ponnasamudra, Taluk Arisikere, Dist. Has-san

In Public domain. Digitization Muthulakshmi Research Academy

ಜಾಗತಿಕ ಲಿಂಗಾಯತ ಮಹಾಸಭಾ ಸ್ಥಾಪನೆ

ಜನವರಿ ೨೩, ೨೦೧೮ ಮಂಗಳವಾರ ಲಿಂಗಾಯತ ಇತಿಹಾಸದಲ್ಲಿ ಸೇರ್ಪಡೆಯಾಗಲಿರುವ ಮತ್ತೊಂದು ಘಟನೆ ನಡೆದುಹೋಯಿತು. ಲಿಂಗಾಯತರಿಂದಲೇ ಸ್ಥಾಪಿಸಲ್ಪಟ್ಟ ನೂರು ವರ್ಷಗಳ ಇತಿಹಾಸ ಹೊಂದಿರುವ ಅಖಿಲ ಭಾರತ ವೀರಶೈವ ಮಹಾಸಭೆಯು ಇಬ್ಭಾಗವಾಗಲಿತ್ತು.

ಒಂದು ವರ್ಷದ ಹಿಂದೆ ಮೊತ್ತ ಮೊದಲ ಬಾರಿಗೆ 'ಲಿಂಗಾಯತರೆಂದರೆ ಯಾರು' ಎಂಬ ವೈಚಾರಿಕ ಸಭೆ ಜ್ಞಾನಜ್ಯೋತಿ ಸಭಾಂಗಣದಲ್ಲಿ ಜರುಗಿತ್ತು. "ಇದೆ ಜ್ಞಾನಜ್ಯೋತಿ ಸಭಾಂಗಣದಲ್ಲಿಯೇ ಲಿಂಗಾಯತದ ಹೊಸ ಇತಿಹಾಸ ಸೃಷ್ಟಿಯಾಗಿದೆ. ಅದೇ ಸಭಾಂಗಣದಲ್ಲಿ ಸಭೆ ಕರೆಯೋಣ" ಎಂದರು ಸಚಿವ ಎಂ.ಬಿ.ಪಾಟೀಲರು. ಅದಕ್ಕೆ ಧ್ವನಿಗೂಡಿಸಿದ್ದರು ಇನ್ನೊಬ್ಬ ಸಚಿವ ವಿನಯ ಕುಲಕರ್ಣಿಯವರು. ಹಿರಿಯರಾದ ಬಸವರಾಜ ಹೊರಟ್ಟಿಯವರೂ ಸಹ ಅದಕ್ಕೆ ಸಮ್ಮತಿಯನ್ನು ಕೊಟ್ಟರು. ಬೆಂಗಳೂರಿನ ಹೃದಯಭಾಗದಲ್ಲಿದೆ ಬೆಂಗಳೂರು ವಿಶ್ವವಿದ್ಯಾಲಯದ ಹಳೆಯ ಕಟ್ಟಡ. ಇದರ ಅಡಿಯಲ್ಲಿದೆ ಜ್ಞಾನಜ್ಯೋತಿ ಸಭಾಂಗಣ. ಸಾವಿರ ಜನರು ಕೂಡಲು ವ್ಯವಸ್ಥೆ ಇರುವ ದೊಡ್ಡ ಸಭಾಂಗಣವದು. ಬಂದ ಅತಿಥಿಗಳಿಗೆ ಪ್ರಸಾದದ ವ್ಯವಸ್ಥೆಗೆ ಸ್ಥಳಾವಕಾಶ ಅಲ್ಲಿದೆ. ನೂರಾರು ವಾಹನಗಳನ್ನೂ ಸಹ ನಿಲ್ಲಿಸಬಹುದಾದ, ಸರ್ವವ್ಯವಸ್ಥೆಯನ್ನು ಹೊಂದಿದ, ಸುಂದರ ಸಭಾಂಗಣ ಜ್ಞಾನಜ್ಯೋತಿ ಸಭಾಂಗಣ.

ನಾಡಿನ ಮೂಲೆ ಮೂಲೆಯಲ್ಲಿರುವ ಸಮಾಜದ ನಾಯಕರಿಗೆ ಕರೆ ಮಾಡಿ 'ಜನವರಿ ೨೩ ಮಂಗಳವಾರದಂದು ಜಾಗತಿಕ ಲಿಂಗಾಯತ ಮಹಾಸಭಾ ಅಸ್ತಿತ್ವಕ್ಕೆ ಬರಲಿದೆ ಎಂದು ಸಭೆ ನಡೆಯುವ ಸ್ಥಳ, ಮತ್ತಿತರ ವಿವರಗಳನ್ನು ತಿಳಿಸಿ ಅವರಿಗೂ ಬರಲು ಆಮಂತ್ರಣ ನೀಡಲಾಯಿತು. ಲಿಂಗಾಯತ ಇತಿಹಾಸದ ಮೈಲುಗಲ್ಲಾಗಲಿರುವ ಜಾಗತಿಕ ಲಿಂಗಾಯತ ಮಹಾಸಭೆಯ ಪ್ರಥಮ ಸಭೆಯಲ್ಲಿ ಭಾಗಿಯಾಗಲು ನಾಡಿನ ವಿರಕ್ತಮಠಗಳ ಪೂಜ್ಯರು, ವಿದ್ವಾಂಸರು, ಹಿರಿಯರು, ಉತ್ಸಾಹಿ ಯುವಕರು ಸಭೆಗೆ ನಾಡಿನ ಮೂಲೆ ಮೂಲೆಗಳಿಂದ ಆಗಮಿಸಿ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಸೀನರಾಗಿದ್ದರು. ಕರ್ನಾಟಕವಲ್ಲದೆ ಮಹಾರಾಷ್ಟ್ರದಿಂದಲೂ ಲಿಂಗಾಯತ ಧರ್ಮೀಯರು ಸಭೆಗೆ ಆಗಮಿಸಿದ್ದರು. ವಿರಕ್ತಮಠಗಳ ಪೂಜ್ಯರಾದ ಗದುಗಿನ ತೋಂಟದಾರ್ಯ ಪೀಠದ ಜಗದ್ಗುರುಗಳಾದ ಶ್ರೀ ಸಿದ್ಧಲಿಂಗಸ್ವಾಮೀಜಿವರು, ಇಳಕಲ್ ಮಠದ ಪೂಜ್ಯ ಮಹಾಂತಪ್ಪ ಅಪ್ಪಗಳು, ಬೆಳಗಾವಿ ರುದ್ರಾಕ್ಷಿಮಠದ ಶ್ರೀ ಸಿದ್ಧರಾಮ ಸ್ವಾಮೀಜಿವರು, ಭಾಲ್ಕಿಯ ಹಿರೇಮಠದ ಶ್ರೀಬಸವಲಿಂಗ ಪಟ್ಟದ್ದೇವರು, ಪಂಚಮಸಾಲಿ ಸಮಾಜದ ಜಗದ್ಗುರುಗಳಾದ ಕೂಡಲಸಂಗಮದ ಶ್ರೀ ಜಯಮೃತ್ಯುಂಜಯಸ್ವಾಮೀಜಿಯವರು, ಅಥಣಿ

In Public domain. Digitization Muthulakshmi Research Academy

ಗಚ್ಚಿನಮಠದ ಶ್ರೀಪ್ರಭುಚನ್ನಬಸವ ಸ್ವಾಮೀಜಿಯವರು, ನಿಷ್ಕಲಮಠದ ಶ್ರೀನಿಜಗುಣಾನಂದ ಸ್ವಾಮೀಜಿಯವರು, ಮೈಸೂರಿನ ಹೊಸಮಠದ ಶ್ರೀಚಿದಾನಂದ ಸ್ವಾಮೀಜಿಯವರು, ಮಾತೆ ಮಹಾದೇವಿಯವರು ಮತ್ತು ಇವರೊಂದಿಗೆ ಸುಮಾರು ಇನ್ನೂರು ಮಠಾಧೀಶರು ಸಭೆಗೆ ಆಗಮಿಸಿದ್ದರು. ಆಗಮಿಕರಲ್ಲಿ ಕಾಂಗ್ರೆಸ್ ಪಕ್ಷದ ಪ್ರಮುಖ ನಾಯಕರಿದ್ದರು. ಜಾತ್ಯತೀತ ಜನತಾದಳದ ಹಿರಿಯ ನಾಯಕರಾದ ಬಸವರಾಜ ಹೊರಟ್ಟಿಯವರು, ಸಂಯುಕ್ತ ಜನತಾ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾದ ಡಾ.ಎಂ.ಪಿ.ನಾಡಗೌಡರು ಹಾಜರಿದ್ದು ಇದೊಂದು ಪಕ್ಷಾತೀತ ಸಭೆಯೆಂದು ಸಾಬೀತು ಮಾಡಿದ್ದರು. ಭಾರತೀಯ ಜನತಾ ಪಕ್ಷವು ಲಿಂಗಾಯತರ ಪಕ್ಷವೆಂದೂ ಹೇಳಿಕೊಂಡರೂ ಲಿಂಗಾಯತರ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡಿ ತಾವು ಹಿಂದೂವಾದಿಗಳೆಂದು ಬಹಿರಂಗಪಡಿಸಿದ್ದರು. ಆ ಪಕ್ಷದ ಪದಾಧಿಕಾರಿಗಳು ಯಾರೂ ಸಭೆಗೆ ಬಂದಿರಲಿಲ್ಲ. ಪ್ರಾರಂಭದಲ್ಲಿ ಲಿಂಗಾಯತರಿಗೆ ಬೆಂಬಲ ವ್ಯಕ್ತಪಡಿಸಿದ ಬೆಳಗಾವಿಯ ಕೆ.ಎಲ್.ಇ. ಸಂಸ್ಥೆಯ ಕಾರ್ಯದರ್ಶಿಯಾದ ಪ್ರಭಾಕರ ಕೋರೆಯವರಾಗಲಿ, ಬೆಳಗಾವಿಯ ಸಂಸದ ಅಂಗಡಿಯವರಾಗಲಿ, ಮಾಜಿ ಸಚಿವೆ ಶ್ರೀಮತಿ ಶಶಿಕಲಾ ಜೊಲ್ಲೆಯವರಾಗಲಿ, ಬಸವಣ್ಣನವರ ಕಟ್ಟಾ ಅನುಯಾಯಿಗಳೆಂದು ಹೇಳಿಕೊಳ್ಳುವ ಧಾರವಾಡದ ಮಾಜಿ ಶಾಸಕ ಚಂದ್ರಕಾಂತ ಬೆಲ್ಲದವರಾಗಲಿ, ಬಸವಣ್ಣನವರ ಹುಟ್ಟೂರಾದ ಬಸವನ ಬಾಗೇವಾಡಿಯ ಕಾಂಗ್ರೆಸ್ ಪಕ್ಷದ ಶಾಸಕರಾದ ಶಿವಾನಂದ ಪಾಟೀಲರಾಗಲಿ ಸಭೆಗೆ ಆಗಮಿಸಿರಲಿಲ್ಲ. ಸಿದ್ದರಾಮಯ್ಯನವರ ಸಚಿವ ಸಂಪುಟದ ಹಿರಿಯ ಸದಸ್ಯರಾದ ಜಲಸಂಪನ್ಮೂಲ ಸಚಿವರಾದ ಎಂ.ಬಿ. ಪಾಟೀಲರು, ಗಣಿಸಚಿವರಾದ ವಿನಯ ಕುಲಕರ್ಣಿಯವರು, ಉನ್ನತ ಶಿಕ್ಷಣ ಸಚಿವರಾದ ಬಸವರಾಜ ರಾಯರೆಡ್ಡಿಯವರು ಮತ್ತು ವೈದ್ಯಕೀಯ ಶಿಕ್ಷಣ ಸಚಿವರಾದ ಶರಣಪ್ರಕಾಶ ಪಾಟೀಲರು ಉಪಸ್ಥಿತರಿದ್ದು ಆಸಕ್ತಿಯಿಂದ ಸಭೆಯಲ್ಲಿ ಭಾಗವಹಿಸಿದ್ದರು. ಇವರೊಂದಿಗೆ ಚಿಕ್ಕೋಡಿ ಸಂಸದರಾದ ಪ್ರಕಾಶ ಹುಕ್ಕೇರಿಯವರು, ಅವರ ಸುಪುತ್ರರಾದ ಶಾಸಕ ಗಣೇಶ ಹುಕ್ಕೇರಿಯವರು, ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನರು, ರೋಣದ ಶಾಸಕ ಜಿ.ಎಸ್.ಪಾಟೀಲರು, ಬೀದರ ಶಾಸಕ ಅಶೋಕ ಖೇಣಿಯವರು, ರಾಮದುರ್ಗದ ಶಾಸಕ ಅಶೋಕ ಪಟ್ಟಣ ಅವರು, ದಾವಣಗೆರೆಯ ಶಾಸಕ ಮೋಹನ ಕೊಂಡಜ್ಜಿಯವರಲ್ಲದೆ ಅನೇಕ ಮಾಜಿ ಸಚಿವರು, ಮಾಜಿ ಶಾಸಕರಿಂದ ಸಭಾಂಗಣ ಕಳೆಗಟ್ಟಿತ್ತು. ವಿದ್ವಾಂಸರಾದ ಪ್ರೊ.ವೀರಣ್ಣ ರಾಜೂರ, ಪ್ರೊ. ಮಹಾದೇವಪ್ಪ, ಪ್ರೊ. ಚಂದ್ರಶೇಖರ ಪಾಟೀಲ, ಗೊ.ರು.ಚ, ಪ್ರೊ.ಟಿ.ಆರ್.ಚಂದ್ರಶೇಖರ ಅವರು ಸಭೆಯಲ್ಲಿ ಪ್ರಮುಖ ಆಕರ್ಷಣೆಯಾಗಿದ್ದರು. ಪರ ಊರುಗಳಿಂದ ಬಂದ ಲಿಂಗಾಯತರು ಸರಿಯಾದ ಸಮಯಕ್ಕೆ ಸಭಾಂಗಣದಲ್ಲಿ ಆಸೀನರಾಗಿದ್ದರು.

In Public domain. Digitization Muthulakshmi Research Academy

ಕರ್ನಾಟಕ ಸರಕಾರದ ಗೃಹ ಖಾತೆಯ ಮಾಜಿ ಕಾರ್ಯದರ್ಶಿಯಾದ ಡಾ.ಶಿವಾನಂದ ಜಾಮದಾರ ಹೊಸ ಜವಾಬ್ದಾರಿ ವಹಿಸಿಕೊಳ್ಳಲು ತಯಾರಾಗಿದ್ದರು. ಬೆಳಗಿನ ಉಪಾಹಾರದೊಂದಿಗೆ ಸಭೆಯನ್ನು ಹತ್ತು ಗಂಟೆಗೆ ಪ್ರಾರಂಭಿಸಲು ನಿರ್ಧರಿಸಲಾಗಿತ್ತು. ಸಭೆಯನ್ನು ನಡೆಸುವ ಜವಾಬ್ದಾರಿ ನಾನಲ್ಲದೆ ಡಾ.ಜಯಣ್ಣ ಅವರದೂ ಆಗಿತ್ತು. ಲಿಂಗಾಯತ ಹೋರಾಟವು ರಾಜಕೀಯ ನಾಯಕರಿಂದ ಪ್ರಭಾವಿತವಾಗಿದ್ದರೂ ಅದು ಕಾಂಗ್ರೆಸ್ಸಿನ ಏಕಪಕ್ಷದ ಹೋರಾಟವಾಗಿರಲಿಲ್ಲ. ಅದೊಂದು ಪಕ್ಷಾತೀತ ಹೋರಾಟವಾಗಿತ್ತು. ಬಸವಣ್ಣನವರ ಸಿದ್ಧಾಂತಗಳಲ್ಲಿ ನಂಬುಗೆಯಿರುವ ರಾಜಕೀಯ ನಾಯಕರು ಪಕ್ಷಾತೀತವಾಗಿ ಅಲ್ಲಿ ಸೇರಿದ್ದರು. ವೇದಿಕೆಯ ಮೇಲೆ ಕೇವಲ ವಿರಕ್ತ ಪೂಜ್ಯ ಮಠಾಧೀಶರುಗಳಿಗೆ ಮಾತ್ರ ಅವಕಾಶ ನೀಡಲಾಗಿತ್ತು. ಕರ್ನಾಟಕ ಶಾಸಕಾಂಗ ಸಭೆಯ ಮೇಲ್ಮನೆಯ ಸದಸ್ಯರಾದ ಬಸವರಾಜ ಹೊರಟ್ಟಿಯವರು ಮಾತ್ರ ಪೂಜ್ಯರೊಂದಿಗೆ ವೇದಿಕೆಯ ಮಧ್ಯಭಾಗದಲ್ಲಿ ಆಸೀನರಾಗಿದ್ದರು. ವೇದಿಕೆಯ ಮುಂದಿನ ಆಸನಗಳಲ್ಲಿ ಕರ್ನಾಟಕದ ಪ್ರಮುಖ ಸಚಿವರು, ಸಂಸದರು, ಮಾಜಿ ಮಂತ್ರಿಗಳು, ಮಾಜಿ ಶಾಸಕರು, ಜಿಲ್ಲಾ ಪಂಚಾಯತ್ ಅಧ್ಯಕ್ಷರು ಮತ್ತು ಸದಸ್ಯರು ಆಸೀನರಾಗಿದ್ದರು. ಅವರೊಂದಿಗೆ ಲಿಂಗಾಯತ ಧರ್ಮವನ್ನು ಆಳವಾಗಿ ಸಂಶೋಧನೆ ಮಾಡಿದ ವಿದ್ವಾಂಸರು ಅಲ್ಲಿದ್ದರು. ಸರಳತೆ ಲಿಂಗಾಯತ ಧರ್ಮದ ಮೂಲ ಲಕ್ಷಣ. ಸಭೆಯನ್ನು ಅರ್ಥಪೂರ್ಣವಾಗಿ ಸರಳವಾಗಿ ಆಯೋಜಿಸಲು ನಿರ್ಧರಿಸಲಾಗಿತ್ತು. ಆಡಂಬರವನ್ನು ಲಿಂಗಾಯತ ಸಿದ್ಧಾಂತ ಒಪ್ಪದು. ಹಾರ ತುರಾಯಿಯನ್ನು ಲಿಂಗಾಯತವು ಒಪ್ಪುವುದಿಲ್ಲ. ವಚನ ಗಾಯನದೊಂದಿಗೆ ಸಭೆ ಆರಂಭವಾಯಿತು. ನಾನು ಸ್ವಾಗತ ಭಾಷಣ ಮಾಡಬೇಕಾಗಿತ್ತು. ಆದರೆ ಅದೇ ಸಮಯದಲ್ಲಿ ಪದಾಧಿಕಾರಿಗಳ ಪಟ್ಟಿಯನ್ನು ಬಹಿರಂಗಗೊಳಿಸಬೇಕಾಗಿತ್ತು. ಕೊನೆ ಗಳಿಗೆಯಲ್ಲಿ ಹೆಸರು ಬದಲಾವಣೆ ಮಾಡುವ ಪರಿಸ್ಥಿತಿ ಬಂದಿತ್ತು. ಶಾಸಕರಾದ ಬಿ.ಆರ್.ಪಾಟೀಲರು ಕಾರ್ಯಕಾರಿ ಸಮಿತಿಯಲ್ಲಿರಲು ಒಪ್ಪಿಕೊಳ್ಳಲಿಲ್ಲ. ಅವರನ್ನು ಬಿಡಲು ಎಂ.ಬಿ.ಪಾಟೀಲರಿಗೆ ಮನಸ್ಸಿರಲಿಲ್ಲ. ಮನವೊಲಿಸುವ ಕಾರ್ಯವನ್ನು ಸಚಿವರು ಮಾಡಲಾರಂಭಿಸಿದ್ದರು. ಅಲ್ಲಿರಲು ನನಗೂ ಸೂಚಿಸಿದ್ದರು. ಬಂದ ಅತಿಥಿಗಳನ್ನು ಡಾ.ಜಾಮದಾರ ಸ್ವಾಗತಿಸಿದರೆಂದು ನಂತರ ನನಗೆ ತಿಳಿದುಬಂತು.

ಜಾಗತಿಕ ಲಿಂಗಾಯತ ಮಹಾಸಭೆಯ ಪ್ರಪ್ರಥಮ ಅಧ್ಯಕ್ಷ ಪದವಿಯ ಭಾರ ಹೊರಲಿದ್ದ ಕರ್ನಾಟಕ ವಿಧಾನ ಪರಿಷತ್‌ನಲ್ಲಿ ಮೂವತ್ತಾರು ವರ್ಷಗಳಿಂದಲೂ ನಿರಂತರ ಸೇವೆ ಸಲ್ಲಿಸುತ್ತಿರುವ ಹಿರಿಯರಾದ ಶ್ರೀ ಬಸವರಾಜ ಹೊರಟ್ಟಿಯವರಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆ ಮತ್ತು ಪಂಚಪೀಠಾಧೀಶರ ಬಗ್ಗೆ ಇರುವ ಗೌರವಯುತವಾದ ಭಾವವು ವಿಷಾದದಲ್ಲಿ

In Public domain. Digitization Muthulakshmi Research Academy

ಬದಲಾಗಿತ್ತು. ನಿಜ ಲಿಂಗಾಯತರಾದ ಇವರು ಇವನಾರವ ಎನ್ನದೆ ಇವ ನಮ್ಮವ ಎನ್ನುವ ಸಹಬಾಳ್ವೆಯ ಸಂಕೇತದಂತಿರುವ ಅವರ ಮಾತಿನಲ್ಲಿ ವಿಷಾದದ ಛಾಯೆಯನ್ನು ಗುರುತಿಸಬಹುದಾಗಿತ್ತು. ಅಧಿಕಾರದ ಗದ್ದುಗೆ ಹಿಡಿಯಲು ಈ ಸಂಸ್ಥೆಯನ್ನು ಹುಟ್ಟುಹಾಕಿಲ್ಲ. ಲಿಂಗಾಯತ ಅಸ್ಮಿತೆಯನ್ನು ಬಡಿದೆಬ್ಬಿಸಲು ಹುಟ್ಟುಹಾಕಿರುವ ಸಂಸ್ಥೆ ಇದು ಎನ್ನುತ್ತ. "ಇದು ಯಾರ ವಿರುದ್ಧವೂ ಹುಟ್ಟುಹಾಕಿದ ಸಂಘಟನೆಯಲ್ಲ. ನಮಗೆ ನಮ್ಮ ಅಸ್ತಿತ್ವ ಮುಖ್ಯವಾಗಿದೆ, ಲಿಂಗಾಯತ ಬಡ ವರ್ಗದ ಜನರ ಭವಿಷ್ಯಕ್ಕಾಗಿ ಜಾಗತಿಕ ಲಿಂಗಾಯತ ಮಹಾಸಭೆ ಜನ್ಮ ತಾಳಿದೆ"[೧] ಎಂದಿದ್ದರು. ವೀರಶೈವ ಲಿಂಗಾಯತ ಒಂದೇ ಎನ್ನುತ್ತ ಬಸವಣ್ಣನವರು ಧರ್ಮ ಸ್ಥಾಪಕರಲ್ಲ ಎನ್ನುವ ಪಂಚಪೀಠಾಧೀಶರ ಬಗ್ಗೆ ಬಸವರಾಜ ಹೊರಟ್ಟಿಯವರು "ಪಂಚಪೀಠಾಧೀಶರು ಬಾಹ್ಯವಾಗಿ ಬಸವಣ್ಣನವರ ಹೆಸರು ಹೇಳುತ್ತಾರೆ, ಆಂತರಿಕವಾಗಿ ಅವರು ಬಸವಣ್ಣನವರ ವಿರೋಧಿಗಳಾಗಿದ್ದಾರೆ"[೨] ಎಂಬ ಕಟು ಸತ್ಯವನ್ನು ಸಭೆಯ ಮುಂದಿಟ್ಟರು. ಹೋರಾಟದ ಪ್ರಾರಂಭದ ದಿನಗಳಿಂದಲೂ ತಮ್ಮ ತನು ಮನವನ್ನು ಅರ್ಪಿಸಿಕೊಂಡಿದ್ದ ಹೊರಟ್ಟಿಯವರು ತಾವು ಅಖಿಲ ಭಾರತ ವೀರಶೈವ ಮಹಾಸಭೆಯೊಂದಿಗೆ ನಡೆಸಿದ ಸಂಧಾನಗಳು ಮುರಿದುಬಿದ್ದುದನ್ನು ಸ್ಮರಿಸಿಕೊಳ್ಳುತ್ತ, ಅವರೊಂದಿಗೆ ನಮ್ಮ ಎಲ್ಲ ಮನವೊಲಿಸುವ ಚರ್ಚೆಗಳು ವಿಫಲವಾದ ಕಾರಣ ಅನಿವಾರ್ಯವಾಗಿ ಜಾಗತಿಕ ಲಿಂಗಾಯತ ಮಹಾಸಭಾ ಅಸ್ತಿತ್ವಕ್ಕೆ ಬಂದಿದೆ"[೬] ಎಂದು ಭಾವುಕರಾದರು. ಆದರೆ ತಮ್ಮ ನಿರ್ಧಾರ ಅಚಲವಾದುದೆಂದು ಹೇಳಲು ಅವರು ಮರೆಯಲಿಲ್ಲ, ನಾವು ಯಾವುದಕ್ಕೂ ಜಗ್ಗದೆ ಬಗ್ಗದೆ ಮುನ್ನಡೆಯುತ್ತೇವೆ"[೬] ಎಂದು ಮತ್ತೊಮ್ಮೆ ಸಭಿಕರೆದುರು ಹೇಳಿದರು.

ಜಾಗತಿಕ ಲಿಂಗಾಯುತ ಮಹಾಸಭೆಯು ಪ್ರಮುಖ ಪಾತ್ರಧಾರಿ ನಿಜಲಿಂಗಾಯುತ ಡಾ.ಎಂ.ಬಿ.ಪಾಟೀಲರು ವಿಜಾಪುರದ ಮಹಿಳಾ ವಿಶ್ವವಿದ್ಯಾಲಯಕ್ಕೆ ಶರಣೆ ಅಕ್ಕಮಹಾದೇವಿ ಹೆಸರಿಡಲು ಕಾರಣೀಕರ್ತರು, ಶರಣ ಸಾಹಿತ್ಯವನ್ನು ಮನೆ ಮನೆಗೆ ಮುಟ್ಟಿಸುವ ನಿಟ್ಟಿನಲ್ಲಿ ವಚನಪಿತಾಮಹ ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿ ಅದರ ಅಡಿಯಲ್ಲಿ ಕೋಟಿ ಕೋಟಿ ಹಣವನ್ನು ವ್ಯಯಿಸಿ ಲಿಂಗಾಯತ ಸಾಹಿತ್ಯವನ್ನು ಮುದ್ರಿಸಿ, ಅದನ್ನು ಮನೆಮನೆಗೆ ಮುಟ್ಟಿಸುವ ನಿರಂತರ ಪ್ರಯತ್ನದಲ್ಲಿರುವವರು. ಲಿಂಗಾಯತವನ್ನು ಸ್ವತಂತ್ರ ಧರ್ಮವನ್ನಾಗಿಸಲು ಅವರ ಸತತ ಪ್ರಯತ್ನ ಶ್ಲಾಘನೀಯ. ಅವರು ಸಭೆಯನ್ನು ಉದ್ದೇಶಿಸಿ ಮಾತನಡುತ್ತ "ನನಗೆ ಯಾವುದೇ ಹುದ್ದೆ ಬೇಡ, ಸಾಮಾನ್ಯ ಸದಸ್ಯನಾಗಿ ಕಾರ್ಯ ನಿರ್ವಹಿಸುತ್ತೇನೆ. ಸಂಸ್ಥೆಯನ್ನು ಮಾದರಿಯಾಗಿ ಬೆಳೆಸುವ ದೊಡ್ಡ ಜವಾಬ್ದಾರಿ ನನ್ನ ಮೇಲಿದೆ. ಹಾಗಾಗಿ ಪ್ರಕಾಶ ಹುಕ್ಕೇರಿಯವರ (ನನಗೆ ಕಾರ್ಯಾಧ್ಯಕ್ಷ ಸ್ಥಾನ ಒಪ್ಪಿಕೊಳ್ಳುವ) ಕೋರಿಕೆಯನ್ನು ನಿರಾಕರಿಸಿದ್ದೇನೆ.

In Public domain. Digitization Muthulakshmi Research Academy

ನಾನು ಬೇರೆಯವರಿಗೆ ಉದಾಹರಣೆಯಾಗಿ ಉಳಿಯಬೇಕೆನ್ನುವ ಕಾರಣದಿಂದ ಈ ತೀರ್ಮಾನ ಕೈಗೊಂಡಿದ್ದೇನೆ" ಎಂದರು. ಸಾಮಾನ್ಯವಾಗಿ ರಾಜಕಾರಣಿಗಳು ತಮ್ಮ ಸ್ವಾರ್ಥ ಸಾಧನೆಗಾಗಿ ತಾವಿರುವ ಪಕ್ಷಗಳನ್ನೇ ವಿಭಜಿಸುವರು. ತಮಗೆ ತಕ್ಕುದಾದ ಸ್ಥಾನಗಳು ಸಿಗದಾಗ ಮತ್ತೊಂದು ಸಂಸ್ಥೆಯನ್ನು ಹುಟ್ಟುಹಾಕುವರು. ಈ ನಿಯಮಕ್ಕೆ ಅಪವಾದ ಎನ್ನುವಂತೆ ಎಂ.ಬಿ.ಪಾಟೀಲರು ಜಾಗತಿಕ ಲಿಂಗಾಯತ ಮಹಾಸಭೆಯ ಕಾರ್ಯಾಧ್ಯಕ್ಷ ಹುದ್ದೆಯನ್ನು ನಿರಾಕರಿಸಿದರು. ಲಿಂಗಾಯತ ಧರ್ಮಕ್ಕೆ ಅಲ್ಪಸಂಖ್ಯಾತ ಧರ್ಮದ ಸ್ಥಾನಮಾನ ಸಿಗುತ್ತದೆ ಎಂಬ ಅಚಲ ವಿಶ್ವಾಸವನ್ನು ಅವರು ಹೊಂದಿದ್ದರು. ಇದು ಅವರ ವೇದಿಕೆಯ ಹೇಳಿಕೆಯಾಗಿರಲಿಲ್ಲ. ಅವರ ಹೇಳಿಕೆಯನ್ನು ಸಮರ್ಥಿಸಲು ದಾಖಲಾತಿಗಳನ್ನು ಹೊಂದಿಸಲು ಅವರು ಹರಸಾಹಸ ಪಡುತ್ತಿದ್ದರು. ಅದಕ್ಕಾಗಿ ವಿದ್ವಾಂಸರನ್ನು ವಿಶ್ವಾಸಕ್ಕೆ ತಗೆದುಕೊಂಡು ಅವರಿಗೆ ಭಾರತದ ಯಾವುದೇ ಭಾಗಕ್ಕೆ ಹೋಗಿ ಬರುವ ವೆಚ್ಚವನ್ನು ಭರಿಸುತ್ತಿದ್ದರು. ವಿವಿಧ ಗ್ರಂಥಾಲಯಗಳನ್ನು ಸಂದರ್ಶಿಸಲು ವಿಜಾಪುರದ ಸಂಶೋಧಕ ಕೃಷ್ಣ ಕೋಲ್ಹಾರ ಕುಲಕರ್ಣಿಯವರಿಗೆ ಮನವಿ ಮಾಡಿಕೊಂಡು, ಅಮೂಲ್ಯ ದಾಖಲೆಗಳನ್ನು ಹೊಂದಿಸಲು ಮುಂಬೈ, ಕೋಲ್ಕತಾ ನಗರಗಳಿಗೆ ಅವರನ್ನು ಕಳಿಸಿ ದಾಖಲೆಗಳನ್ನು ಸಂಪಾದಿಸಿದ್ದರು. ಅವರಿಗೆ ಲಿಂಗಾಯತ ಧರ್ಮದ ಗೆಲುವಿನ ಬಗ್ಗೆ ಅದಮ್ಯ ವಿಶ್ವಾಸವಿತ್ತು. "ಇದು ಕೇವಲ ಚುನಾವಣೆಯ ಹೋರಾಟವಲ್ಲ. ಅಲ್ಪಸಂಖ್ಯಾತ ಆಯೋಗ, ರಾಜ್ಯ, ಕೇಂದ್ರ, ಸರ್ವೋಚ್ಚ ನ್ಯಾಯಾಲಯ ಎಲ್ಲೇ ಹೋದರೂ ನಮಗೆ ಗೆಲುವು ಸಿಗುತ್ತದೆ. ಕೊನೆಯುಸಿರು ಇರುವವರೆಗೂ ಲಿಂಗಾಯತ ಧರ್ಮ ಸ್ಥಾಪನೆ ಮಾಡಲು ಹೋರಾಡುತ್ತೇವೆ. ಅದನ್ನು ಪಡೆದುಕೊಳ್ಳುತ್ತೇವೆ" ಎಂದು ಶಪಥ ಮಾಡಿದ್ದರು.

ಬಸವಣ್ಣನವರನ್ನು ಸ್ಥಾವರದಿಂದ ಬಿಡಿಸಿ ಜಂಗಮತ್ವಕ್ಕೆ ತರಲು ಕಿಂಚಿತ್ತಾದರೂ ಪ್ರಯತ್ನಿಸಿದವರಲ್ಲಿ ಗದುಗಿನ ತೋಂಟದಾರ್ಯಮಠದ ಡಾ.ಸಿದ್ಧಲಿಂಗಮಹಾಸ್ವಾಮಿಗಳು ಅಗ್ರಗಣ್ಯರು. ಇವರು ಸದಾ ಅಧ್ಯಯನಶೀಲರು. ಡಾ. ಎಂ.ಎಂ.ಕಲಬುರ್ಗಿಯವರ ಗರಡಿಯಲ್ಲಿ ಬೆಳೆದ ತರುಣ ಸಿದ್ಧಲಿಂಗಸ್ವಾಮೀಜಿ ಗದಗ ಮಠದ ಸಾನ್ನಿಧ್ಯವಹಿಸಿದ್ದು ಲಿಂಗಾಯತಕ್ಕೆ ಒಂದು ದೊಡ್ಡ ಕೊಡುಗೆಯೆ ಸರಿ. ಗದುಗಿನ ಮಠದ ಪೀಠಾಧಿಪತಿಯಾಗಿ, ಜಗದ್ಗುರುಗಳಾಗಿ ಭಕ್ತರ ಕಾಣಿಕೆಯನ್ನು ಪಡೆಯುತ್ತ ಲಿಂಗಾಯತವನ್ನು ಮರೆತು ಉಳಿದ ಮಠಾಧೀಶರಂತೆ ಇವರು ಸ್ಥಾವರವಾಗಬಹುದಾಗಿತ್ತು. ಆದರೆ ಇವರು ಮರೆತ ಲಿಂಗಾಯತ ಧರ್ಮವನ್ನು ಅರಿತ ಮಾನವರಾಗಿ ಬೆಳಗಲು ಕಂಕಣಬದ್ಧರಾಗಿದ್ದು ಲಿಂಗಾಯತರ ಪುಣ್ಯವೇ ಸರಿ. ಇವರು ಮಠಾಧೀಶ ಪದವಿಯಿಂದ ಜ್ಞಾನ ಹಂಚುವ ಪುಸ್ತಕದ ಸ್ವಾಮಿಯಾದದ್ದು

In Public domain. Digitization Muthulakshmi Research Academy

ಕೌತುಕವೇ ಸರಿ. ಗದುಗಿನ ಮಠವಿಂದು ಸಾವಿರಾರು ಪುಸ್ತಕಗಳನ್ನು ಮುದ್ರಿಸಿ ಲಿಂಗಾಯತರ ಧಾರ್ಮಿಕ ಜ್ಞಾನವನ್ನು ಹೆಚ್ಚಿಸಲು ಕಂಕಣಬದ್ಧವಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ವಿದೇಶಿಗರು ಲಿಂಗಾಯತದ ಬಗ್ಗೆ ಬರೆದ ಸಾಹಿತ್ಯವನ್ನು ಕನ್ನಡಕ್ಕೆ ಭಾಷಾಂತರಿಸುವ ಕೆಲಸವನ್ನು ಗದುಗಿನಮಠ ಮುತುವರ್ಜಿಯಿಂದ ಮಾಡುತ್ತಿದೆ. ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿಯವರು ಲಿಂಗಾಯತ ಧರ್ಮ ಸ್ವತಂತ್ರ ಧರ್ಮವಾಗಲು ಹಗಲು ರಾತ್ರಿ ಒಂದು ಮಾಡಿದ್ದರು. ಅವರು ಲಿಂಗಾಯತದ ಎಲ್ಲ ರ್‍ಯಾಲಿಗಳಲ್ಲಿ ದಿವ್ಯಸಾನ್ನಿಧ್ಯ ವಹಿಸುತ್ತಿದ್ದರು. ಗದುಗಿನ ಜಗದ್ಗುರುಗಳ ಸಾನ್ನಿಧ್ಯದಲ್ಲಿಯೇ ಜಾಗತಿಕ ಲಿಂಗಾಯತ ಮಹಾಸಭಾ ತನ್ನ ಮೊದಲ ಸಭೆಯನ್ನು ಕಂಡಿತ್ತು. 'ಧರ್ಮ ವಿಭಜಿಸುವವರು ದೇಶದ್ರೋಹಿಗಳು'[೧೦] ಎಂಬ ವೀರಶೈವ ಮಠಾಧೀಶರಗಳ ಹೇಳಿಕೆಯನ್ನು ಖಂಡಿಸುತ್ತ ಡಾ. ಸಿದ್ಧಲಿಂಗ ಸ್ವಾಮೀಜಿ(ತೋಂಟದಾರ್ಯ ಮಠ, ಡಂಬಳ-ಗದಗ) ಅವರು "ಅಂದೋಲಾ ಕರುಣೇಶ್ವರ ಮಠದ ಸಿದ್ಧಲಿಂಗಸ್ವಾಮಿಯೋ ಒಬ್ಬ ಈಡಿಯಟ್"[೧೧] ಎಂದು ವೀರಶೈವ ಮಠಾಧೀಶರಿಗೆ ಪ್ರತ್ಯುತ್ತರ ನೀಡಿದ್ದರು.

ಅಖಿಲ ಭಾರತ ವೀರಶೈವ ಮಹಾಸಭೆಯ ಸದಸ್ಯತ್ವಕ್ಕೆ ರಾಜೀನಾಮೆ

ಸಾಮಾನ್ಯ ಸದಸ್ಯರು, ಆಜೀವ ಸದಸ್ಯರು, ಪೋಷಕರು, ಮಹಾಪೋಷಕರು ಎಂದು ವಿವಿಧ ಬಗೆಯ ಸದಸ್ಯತ್ವಗಳನ್ನು ಹೊಂದಿದ್ದ ಐದುನೂರಕ್ಕು ಹೆಚ್ಚು ಸದಸ್ಯರು ಅಖಿಲ ಭಾರತ ವೀರಶೈವ ಮಹಾಸಭೆಗೆ ರಾಜೀನಾಮೆ ಸಲ್ಲಿಸಿ, ಜಾಗತಿಕ ಲಿಂಗಾಯತ ಮಹಾಸಭೆಯ ಸದಸ್ಯರಾದರು. ರಾಜೀನಾಮೆ ಸಲ್ಲಿಸಿದವರಲ್ಲಿ ಪ್ರಮುಖರಾದ ಶ್ರೀಯುತರಾದ ಬಸವರಾಜ ಹೊರಟ್ಟಿ, ಡಾ.ಎಂ.ಬಿ.ಪಾಟೀಲ, ಬಸವರಾಜ ರಾಯರೆಡ್ಡಿ, ಡಾ.ಶರಣಪ್ರಕಾಶ ಪಾಟೀಲ, ವಿಜಯಾನಂದ ಕಾಶಪ್ಪನವರ ಮತ್ತಿತರ ಗಣ್ಯರು ಸೇರಿದ್ದರು. ಬೆಳಗಾವಿ ವೀರಶೈವ ಮಹಾಸಭೆಯ ಕಚೇರಿಯ ಕಟ್ಟಡವನ್ನು ಕಟ್ಟಲು ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದ್ದ ಬೆಳಗಾವಿಯ ರುದ್ರಾಕ್ಷಿ ಮಠದ ಶ್ರೀಗಳಾದ ಡಾ. ಸಿದ್ಧರಾಮ ಮಹಾಸ್ವಾಮಿಗಳು ಧಾರ್ಮಿಕ ನಾಯಕರಲ್ಲಿ ಪ್ರಮುಖರು. "ದಾವಣಗೆರೆ, ಮಂಡ್ಯ, ಮೈಸೂರು, ಶಿವಮೊಗ್ಗ, ಜೇವರ್ಗಿ, ಬೀದರ್, ಕಲಬುರ್ಗಿ, ಮಾನ್ವಿ, ತುಮಕೂರು, ನವಲಗುಂದ, ರಾಮದುರ್ಗ, ಚಾಮರಾಜನಗರ, ಧಾರವಾಡ ಸೇರಿದಂತೆ ಮೂವತ್ತು ಜಿಲ್ಲೆಗಳ ಅಖಿಲ ಭಾರತ ವೀರಶೈವ ಮಹಾಸಭಾದ ನಾಲ್ಕುನೂರಕ್ಕೂ ಹೆಚ್ಚು ಪದಾಧಿಕಾರಿಗಳು ರಾಜೀನಾಮೆ ಸಲ್ಲಿಸಿ ಜಾಗತಿಕ ಲಿಂಗಾಯತ ಮಹಾಸಭಾಕ್ಕೆ ಸೇರ್ಪಡೆಯಾದರು"[೧೨] ಎಂದು ವರಿದಿ ಮಾಡಿತ್ತು ಪ್ರಜಾವಾಣಿ ಪತ್ರಿಕೆ.

In Public domain. Digitization Muthulakshmi Research Academy

'ನನ್ನ ಜೀವನದಲ್ಲಿ ಇಂತಹ ದೃಶ್ಯವನ್ನು ನೋಡಿರಲಿಲ್ಲ. ಜಾಗತಿಕ ಲಿಂಗಾಯತ ಮಹಾಸಭಾದ ಹುಟ್ಟು ಇಪ್ಪತ್ತೊಂದನೆಯ ಶತಮಾನದ ಪರಿವರ್ತನಾ ವಿದ್ಯಮಾನ' ಎಂದು ಸಭೆಯಲ್ಲಿ ಭಾಗವಹಿಸಿದ್ದ ಪ್ರೊ.ಚಂದ್ರಶೇಖರ್ ಪಾಟೀಲ ಬಣ್ಣಿಸಿದರು. ಮುಂದುವರಿದು 'ನಾನು ಜಾತಿಯಲ್ಲಿ ಜಂಗಮ, ರಂಭಾಪುರಿ ಪೀಠಕ್ಕೆ ಸೇರಿದವನು. ಆದರೆ ಇವತ್ತು ಎಂ.ಬಿ.ಪಾಟೀಲ ನನಗೆ ಲಿಂಗಾಯತ ಎಂದರೇನು ಎಂಬುದನ್ನು ತೋರಿಸಿದ್ದಾರೆ. ಸತ್ಯವನ್ನು ಒಪ್ಪಿಕೊಂಡವನು ಬದುಕುವ ನೈತಿಕ ಹಕ್ಕು ಹೊಂದಿರುತ್ತಾನೆ. ಹಾಗಾಗಿಯೇ ನಾನು ಜಾತಿ ಜಂಗಮರ ಪರವಾಗಿ ಎಲ್ಲ ವೀರಶೈವರೂ ಈ ಮಹಾ ಪ್ರವಾಹದಲ್ಲಿ ಒಂದಾಗಿ ಸೇರಬೇಕು ಎಂದು ಒತ್ತಾಯಿಸುತ್ತಿದ್ದೇನೆ. ಇನ್ನು ಕೆಲವೇ ದಿನಗಳಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಅಲ್ಪಸಭಾ ಆಗುತ್ತದೆ' ಎಂದು ಲೇವಡಿ ಮಾಡಿದ ಚಂಪಾ 'ವೀರಶೈವರನ್ನು ಬ್ರಾಹ್ಮಣರೂ ದೂರ ತಳ್ಳುತ್ತಾರೆ, ಹಾಗಾಗಿ ಅವರು ಹಿಂದುಗಳಾಗಲು ಸಾಧ್ಯವಿಲ್ಲ. ಎಡಬಿಡಂಗಿಗಳಾಗುತ್ತಾರೆ' ಎಂದು ಕುಟುಕಿದರು. ಇನ್ನೊಬ್ಬ ವಿದ್ವಾಂಸ ಗೋ.ರು.ಚ. ಮಾತನಾಡಿ ಜಾಗತಿಕ 'ಲಿಂಗಾಯತ ಮಹಾಸಭಾ ಹುಟ್ಟುಹಾಕಿರುವ ನಾಯಕರು ಎಂದಿಗೂ ತಮ್ಮ ಸಂಕಲ್ಪದಿಂದ ಹಿಂದೆ ಸರಿಯಬಾರದು' ಎಂದು ಕಿವಿಮಾತು ಹೇಳಿದರು.[೮೩]

ಸಭೆಯ ನಂತರ ನಾಡಿನ ಪೂಜ್ಯರೆಲ್ಲರೂ ಜ್ಞಾನಜ್ಯೋತಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು.

ಜಾಗತಿಕ ಲಿಂಗಾಯತ ಮಹಾಸಭೆಯ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಬೇಕಾಗಿತ್ತು. ಹಿರಿಯರಾದ ಬಸವರಾಜ ಹೊರಟ್ಟಿಯವರ ಅಧ್ಯಕ್ಷತೆಯಲ್ಲಿ ಸಚಿವ ಎಂ.ಬಿ. ಪಾಟೀಲ, ಶರಣಪ್ರಕಾಶ ಪಾಟೀಲ, ಬಸವರಾಜ ರಾಯರೆಡ್ಡಿ, ಮಾಜಿ ಸಚಿವ ಡಾ.ಮಾಲಕರೆಡ್ಡಿ ಮತ್ತು ಮುಂಡರಗಿಯ ಎಸ್.ಎಸ್.ಪಾಟೀಲರೊಂದಿಗೆ ಸಣ್ಣದೊಂದು ಸಭೆ ನಡೆದಿತ್ತು. ವೀರಶೈವ ಮಹಾಸಭೆಗೆ ರಾಜೀನಾಮೆ ಸಲ್ಲಿಸಿದ ನಂತರ ಜಾಗತಿಕ ಲಿಂಗಾಯತ ಮಹಾಸಭಾದ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲು ಅಲ್ಲೊಂದು ಚಿಕ್ಕ ಆಯ್ಕೆ ಸಮಿತಿಯನ್ನು ರಚಿಸಲಾಯಿತು. ಈಗಾಗಲೇ ರಾಷ್ಟ್ರೀಯ ಅಧ್ಯಕ್ಷರೆಂದು ಶ್ರೀ ಬಸವರಾಜ ಹೊರಟ್ಟಿಯವರನ್ನು ಗುರುತಿಸಲಾಗಿತ್ತು. ಅವರ ಅಧ್ಯಕ್ಷತೆಯಲ್ಲಿಯೇ ಕಳೆದೊಂದು ವರ್ಷದಿಂದ ಸಭೆ ಸಮಾರಂಭಗಳು ನಡೆಯುತ್ತಿದ್ದವು. ಹೊಸ ಅಧ್ಯಕ್ಷರ ನೇಮಕ ಕೇವಲ ಔಪಚಾರಿಕವಾಗಿತ್ತು. ಆದರೆ ಉಳಿದ ಆಡಳಿತ ಮಂಡಳಿಯ ಆಯ್ಕೆಯ ಬಗ್ಗೆ ಕೆಲವರಲ್ಲಿ ಕುತೂಹಲವಿತ್ತು. ನೂತನ ಪದಾಧಿಕಾರಿಗಳು ಒಂದೇ ಸಮಾಜಕ್ಕೆ ಸೇರಿದವರಾಗದೆ ಸಂಪೂರ್ಣ ಲಿಂಗಾಯತ ಒಳಪಂಗಡಗಳ ಪ್ರತಿನಿಧಿಗಳನ್ನು ಒಳಗೊಳ್ಳಬೇಕು ಎಂಬ ಅಲಿಖಿತ ನಿರ್ಣಯಕ್ಕೆ ಎಲ್ಲರೂ ಧ್ವನಿಗೂಡಿಸಿದರು.

In Public domain. Digitization Muthulakshmi Research Academy

ಸದ್ಯಕ್ಕೆ ಸಂಪೂರ್ಣವಾಗಿ ಕಾರ್ಯಕಾರಿ ಮಂಡಳಿಯನ್ನು ಹೆಸರಿಸಲಾಗದು; ಸಭೆಯಲ್ಲಿರುವ ಪ್ರಮುಖರನ್ನು ಒಳಗೊಂಡ ಒಂದು ಕಾರ್ಯಕಾರಿ ಸಮಿತಿ ಕಾರ್ಯ ವಹಿಸಲಿ ಎಂದು ಎಲ್ಲರೂ ಅಭಿಪ್ರಾಯಪಟ್ಟರು. ಅದರಂತೆ ಕೆಳಗೆ ಕಾಣಿಸಿದ ಮಹನೀಯರನ್ನು ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಮತ್ತಿತರ ಆಡಳಿತ ಮಂಡಳಿಯ ಸದಸ್ಯರನ್ನಾಗಿ ಹೆಸರಿಸಲಾಗಿತ್ತು.

ರಾಷ್ಟ್ರ ಸಮಿತಿ

ಅಧ್ಯಕ್ಷರು

ಶ್ರೀ ಬಸವರಾಜ **ಹೊರಟ್ಟಿ**,ವಿಧಾನಪರಿಷತ್ ಸದಸ್ಯರು, ಮಾಜಿ ಮಂತ್ರಿಗಳು

ಹಿರಿಯ ಉಪಾಧ್ಯಕ್ಷರು

ಡಾ.ಎ.ಬಿ.ಮಾಲಕರೆಡ್ಡಿ, ಮಾಜಿ ಮಂತ್ರಿಗಳು.

ಶ್ರೀ **ಪ್ರಕಾಶ ಹುಕ್ಕೇರಿ,** ಸಂಸದರು, ಚಿಕ್ಕೋಡಿ ಕ್ಷೇತ್ರ

ಶ್ರೀ **ಅರವಿಂದ ಜತ್ತಿ,** ಅಧ್ಯಕ್ಷರು, ಬಸವ ಸಮಿತಿ

ಶ್ರೀ **ಬಸವರಾಜ ರಾಯರೆಡ್ಡಿ,** ಮಾನ್ಯ ಸಚಿವರು

ಶ್ರೀ **ಎ.ಬಿ.ಪಾಟೀಲ,** ಮಾಜಿ ಸಚಿವರು

ಶ್ರೀ **ಅಶೋಕ ಖೇಣಿ,** ಶಾಸಕರು

ಶ್ರೀ **ಅಶೋಕ ಪಟ್ಟಣ,** ಶಾಸಕರು.

ಶ್ರೀ **ಶಂಕರ ಬಿದರಿ,** ಪೊಲೀಸ್ ಮಹಾ ನಿರ್ದೇಶಕರು (ನಿ).

ಡಾ.ಎಂ.ಪಿ.ನಾಡಗೌಡ, ಮಾಜಿ ಶಾಸಕರು.

ಮಹಾಪ್ರಧಾನ ಕಾರ್ಯದರ್ಶಿ

ಡಾ. ಶಿವಾನಂದ ಜಾಮದಾರ ಐ.ಎ.ಸ್.(ನಿ)

ಪ್ರಧಾನ ಕಾರ್ಯದರ್ಶಿಗಳು

ಶ್ರೀ **ಜಿ.ಎಸ್.ಪಾಟೀಲ,** ಶಾಸಕರು

ಶ್ರೀ **ಜಿ.ಬಿ.ಪಾಟೀಲ,** ಉದ್ದಿಮೆದಾರರು.

ಶ್ರೀ **ಪ್ರಕಾಶ ತಪಶೆಟ್ಟಿ ಅಧ್ಯಕ್ಷರು,** ಬಸವೇಶ್ವರ ಕೋ ಆಪ್ ಬ್ಯಾಂಕ್. ಬಾಗಲಕೋಟೆ.

ಶ್ರೀ **ಅಜಯಕುಮಾರ ಸರನಾಯಕ,** ಮಾಜಿ ಸಚಿವರು, ಬಾಗಲಕೊಟೆ

ಕಾರ್ಯಕಾರಿ ಸದಸ್ಯರು

ಶ್ರೀ **ಎಸ್.ಎಸ್.ಪಾಟೀಲ,** ಮಾಜಿ ಸಚಿವರು

ಶ್ರೀ **ಡಿ.ಆರ್.ಇನಾಮದಾರ,** ಮಾಜಿ ಸಚಿವರು

ಶ್ರೀ **ವಿನಯ ಕುಲಕರ್ಣಿ,** ಮಾನ್ಯ ಸಚಿವರು

In Public domain. Digitization Muthulakshmi Research Academy

ಕರ್ನಾಟಕ ರಾಜ್ಯ ಸಮಿತಿ

ಅಧ್ಯಕ್ಷರು

ಶ್ರೀ ಶರಣಪ್ರಕಾಶ ಪಾಟೀಲ, ಮಾನ್ಯ ಸಚಿವರು

ಉಪಾಧ್ಯಕ್ಷರು

ಪ್ರೊ. ಎನ್.ಜಿ. ಮಹಾದೇವಪ್ಪ
ಶ್ರೀ ರಾಜಶೇಖರ ಪಾಟೀಲ, ಮಾಜಿ ಸಚಿವರು
ಶ್ರೀ ಅಲ್ಲಮಪ್ರಭು ಪಾಟೀಲ, ಮಾಜಿ ಶಾಸಕರು
ಶ್ರೀ. ನಂಜಪ್ಪ ಗುಂಡ್ಲುಪೇಟೆ, ಮಾಜಿ ಶಾಸಕರು
ಶ್ರೀ ಎನ್.ಎಸ್.ಖೇಡ, ಮಾಜಿ ಶಾಸಕರು
ಶ್ರೀ ಎಸ್ ಎಂ.ನಾಗರಾಜ, ಮಾಜಿ ಶಾಸಕರುಮ ತರೀಕೆರೆ
ಶ್ರೀ ಶಿವಾನಂದ ಬೆಲ್ಲದ, ಧಾರವಾಡ
ಶ್ರೀ ಎಸ್.ಎಂ. ಚಂದ್ರಶೇಖರ, ಮಾಜಿ ಶಾಸಕರು
ಶ್ರೀ ನಂದಿಹಳ್ಳಿ ಹಾಲಪ್ಪ, ಮಾಜಿ ಶಾಸಕರು

ಮಹಾ ಪ್ರಧಾನ ಕಾರ್ಯದರ್ಶಿ

ಡಾ. ಸಿ.ಜಯಣ್ಣ

ಪ್ರಧಾನ ಕಾರ್ಯದರ್ಶಿಗಳು

ಶ್ರೀ ವಿಜಯಾನಂದ ಕಾಶಪ್ಪನವರ, ಶಾಸಕರು
ಪ್ರೊ. ಟಿ.ಆರ್.ಚಂದ್ರಶೇಖರ
ಪ್ರೊ. ವೀರಣ್ಣ ರಾಜೂರ
ಶ್ರೀ ಶ್ರಿಕಾಂತಸ್ವಾಮಿ, ಬೀದರ್
ಶ್ರೀ ವಿಶ್ವಾರಾಧ್ಯ ಸತ್ಯಂಪೇಟೆ, ಯಾದಗಿರಿ
ಶ್ರೀ ರಾಜಶೇಖರ ಮೆಣಸಿನಕಾಯಿ, ಹುಬ್ಬಳ್ಳಿ
ಶ್ರೀ ಅಶೋಕ ಬೇವಿನಮರದ
ಶ್ರೀ ಬಸವರಾಜ ಬುಳ್ಳಾ
ಶ್ರೀಮತಿ ಲಕ್ಷ್ಮಿ ಹೆಬ್ಬಾಳ್ಕರ್
ಶ್ರೀಮತಿ ರೋಹಿಣಿ ಬಾಬಾಸಾಹೇಬ
ಶ್ರೀ ನಾಗರಾಜ ಚೆಬ್ಬಿ
ಶ್ರೀ ಮಹಾದೇವಪ್ಪ ಮೈಸೂರು
ಶ್ರೀ ಎನ್.ಎಸ್.ರಾಜು

In Public domain. Digitization Muthulakshmi Research Academy

ಕಾರ್ಯದರ್ಶಿಗಳು

ಶ್ರೀ ಸಂತೋಷ ಬೆಳ್ಳಪ್ಪಾ
ಶ್ರೀ ವಿ.ಐ.ಅಳಗುಂಡಗಿ
ಶ್ರೀ ಅಶೋಕ ಬಿಜಾಪುರ
ಶ್ರೀ ಕಿರಣ ಸಾಧುನವರ
ಶ್ರೀ ಶಾಬಾದಿ ಕಲಬುರ್ಗಿ
ಶ್ರೀ ನಡಕಟ್ಟಿ ಕಲಬುರ್ಗಿ
ಶ್ರೀ ಉಮೇಶ ಕೊಲ್ಲೂರ
ಶ್ರೀ ಜಿ.ಬಿ.ಸಾಲಕ್ಕಿ ಬಿಜಾಪುರ
ಶ್ರೀ ರಾಜಶೇಖರ ಉಮರಾಣಿ
ಶ್ರೀ ಸಂಜಯ ಕಿತ್ತೂರ
ಶ್ರೀಮತಿ ದಾಕ್ಷಾಯಿಣಿ ಬಿರಾದಾರ, ಮುದ್ದೇಬಿಹಾಳ
ಶ್ರೀ ಯು.ಎಂ. ಗುರಲಿಂಗಪ್ಪಗೌಡ, ರಾಣೆಬೆನ್ನೂರು
ಶ್ರೀ ಬಾಬು ವಾಲಿ, ಬೀದರ್
ಶ್ರೀ ಕಿರಣ ಖಂಡ್ರೇ, ಬೀದರ್
ಶ್ರೀ ಚಿಂತಾಮಣಿ ವಿ.ಸಿಂದಗಿ, ಹುಬ್ಬಳ್ಳಿ

ಕಾರ್ಯಕಾರಿ ಸಮಿತಿ ಸದಸ್ಯರು

ಶ್ರೀಮತಿ ಅಕ್ಕಮಹಾದೇವಿ, ನರಗುಂದ

ಜಿಲ್ಲಾ ಅಧ್ಯಕ್ಷರು

ದಾವಣಗೆರೆ: ಶ್ರೀ ಶಿವಕುಮಾರ ಎಂ.
ದಾವಣಗೆರೆ: ಶ್ರೀ ಮಹಾಂತೇಶ ಅಗಡಿ ಆರ್.ಬಿ.ಎಸ್. ಅಧ್ಯಕ್ಷರು

ನೂತನ ಪದಾಧಿಕಾರಿಗಳಿಗೆ ವೇದಿಕೆಯ ಮೇಲಿರುವ ಪೂಜ್ಯರು ಒಳ್ಳೆಯ ಕಾರ್ಯ ತಮ್ಮಿಂದಾಗಲಿ ಎಂದು ಹಾರೈಸಿದರು. ಸಮಯದ ಅಭಾವದಿಂದ ವೇದಿಕೆಯ ಮೇಲಿದ್ದ ಮಠಾಧೀಶರು ಸಭೆಯನ್ನು ಉದ್ದೇಶಿಸಿ ಮಾತನಾಡಲಿಲ್ಲ. ಸಾನ್ನಿಧ್ಯ ವಹಿಸಿದ್ದ ಎಡೆಯೂರು ಶ್ರೀ ಜಗದ್ಗುರು ಸಂಸ್ಥಾನಮಠ ಡಂಬಳ-ಗದಗದ ಡಾ.ತೋಂಟದ ಸಿದ್ಧಲಿಂಗಮಹಾಸ್ವಾಮಿಗಳು ಚುಟುಕಾಗಿ ಹೊಸ ಕಾರ್ಯಕಾರಿ ಮಂಡಳಿಗೆ ಶುಭಾಶಯ ಕೋರಿದರು.

In Public domain. Digitization Muthulakshmi Research Academy

ಕೊನೆ ಟಿಪ್ಪಣಿಗಳು

೧. ಅರಟಾಳ ರುದ್ರಗೌಡರ ಚರಿತ್ರೆ; ಲೇಖಕರು; ಬಸವಯ್ಯ ಹಿರೇಮಠ(ಕಂಬಿ); ಪ್ರಕಾಶಕರು: ಪ್ರಸಾರಾಂಗ, ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ, ಬೆಳಗಾಂವಿ. ಪು.ಸಂ.೨೨೮.

೨. ವಿಜಯ ಕರ್ನಾಟಕ ಡಿಸೆಂಬರ್ ೧೧, ೨೦೧೭.

೩. ಪ್ರಜಾವಾಣಿ ಪತ್ರಿಕೆ ಸೆಪ್ಟೆಂಬರ್ ೧೮, ೨೦೧೭.

೪. ಪ್ರಜಾವಾಣಿ ವರದಿ.

೫. Deccan chronicle .

೬. ಪ್ರಜಾವಾಣಿ ಪತ್ರಿಕೆ ಸೆಪ್ಟೆಂಬರ್ ೧೮, ೨೦೧೭.

೭. ಪ್ರಜಾವಾಣಿ ಪತ್ರಿಕೆ ಸೆಪ್ಟೆಂಬರ್ ೮, ೨೦೧೭.

೮. ಪ್ರಜಾವಾಣಿ ಪತ್ರಿಕೆ ಸೆಪ್ಟೆಂಬರ್ ೮, ೨೦೧೭.

೯. ಪ್ರಜಾವಾಣಿ ಪತ್ರಿಕೆ ಸೆಪ್ಟೆಂಬರ್ ೮, ೨೦೧೭.

೧೦. ಪ್ರಜಾವಾಣಿ ಪತ್ರಿಕೆ ಜನವರಿ ೨೪, ೨೦೧೮.

೧೧. ಪ್ರಜಾವಾಣಿ ಪತ್ರಿಕೆ ಜನವರಿ ೨೪, ೨೦೧೮.

೧೨. ಮೇಲಿನ ಪತ್ರಿಕೆ ಮತ್ತು ಅದೇ ದಿನಾಂಕ.

೧೩. ಮೇಲಿನ ಪತ್ರಿಕೆ ಮತ್ತು ಅದೇ ದಿನಾಂಕ.

೧೪. ಮೇಲಿನ ಪತ್ರಿಕೆ ಮತ್ತು ಅದೇ ದಿನಾಂಕ.

In Public domain. Digitization Muthulakshmi Research Academy

ಅಧ್ಯಾಯ ಹತ್ತು

ರಾಜಕೀಯ ಪಕ್ಷಗಳ ನಾಟಕದೊಂದಿಗೆ ಮುಂದುವರಿದ ಚಳುವಳಿ

ವೈದಿಕ ಧರ್ಮದ ಪತಾಕೆಯನ್ನು ಹಿಡಿದ ಹಿಂದೂ ಮೂಲಭೂತವಾದಿಗಳ ಸಂಘಟನೆ ರಾಷ್ಟ್ರೀಯ ಸ್ವಯಂಸೇವಕ ಸಂಘ ಲಿಂಗಾಯತ ಧರ್ಮದ ಬೇಡಿಕೆಯಿಂದ ಕೆಂಡಾಮಂಡಲವಾಗಿತ್ತು. ವೈದಿಕ ಅಥವಾ ಸನಾತನ ಧರ್ಮದಿಂದ ಬೌದ್ಧ, ಜೈನ ಮತ್ತು ಸಿಖ್ ಧರ್ಮಗಳು ಹೊರಹೋದಾಗ ಬಾಯ್ಬಿಡದ ಹಿಂದುತ್ವವಾದಿಗಳು ಲಿಂಗಾಯತ ಸ್ವತಂತ್ರ ಧರ್ಮದ ಬೇಡಿಕೆ ಇಟ್ಟಾಗ ಧರ್ಮ ಒಡೆಯುತ್ತಿದ್ದಾರೆ ಎಂದು ಆಪಾದಿಸುತ್ತಿದ್ದರು. ಆರ್.ಎಸ್.ಎಸ್. ತರಬೇತಿ ಕೇಂದ್ರದಲ್ಲಿ ಪದವಿ ಪಡೆದವರೇ ಇಂದಿನ ಭಾರತೀಯ ಜನತಾ ಪಕ್ಷದ ನಾಯಕರು. ಆ ಸಂಸ್ಥೆಯಲ್ಲಿ ದೊಣ್ಣೆ ತಿರುಗಿಸಿದವರು ಬಾಜಪದ ಇಂದು ಮುಂಚೂಣಿ ನಾಯಕರು. ಇವರ ಮೂಲ ಉದ್ದೇಶ ಭಾರತವನ್ನು ಜ್ಯಾತ್ಯತೀತ ರಾಷ್ಟ್ರದಿಂದ ಮುಕ್ತಗೊಳಿಸಿ ಹಿಂದೂ ರಾಷ್ಟ್ರ ಸ್ಥಾಪಿಸುವುದು. ಈಗಿರುವ ಸಂವಿಧಾನ ಬದಲಾಯಿಸಿ ಮನುಶಾಸ್ತ್ರ ಆಧಾರಿತ ಸಂವಿಧಾನ ರೂಪಿಸಿ, ಏಣಿಶ್ರೇಣಿ ಸಮಾಜವನ್ನು ರೂಪಿಸುವುದು. ಲಿಂಗಾಯತ ಸ್ವತಂತ್ರ ಧರ್ಮದ ಕೂಗು ಇಂದಿನದಲ್ಲ, ಈ ಬೇಡಿಕೆ ದೇಶ ಸ್ವತಂತ್ರವಾಗುವ ಪೂರ್ವದಿಂದಲೂ ಇತ್ತು. ಅದನ್ನು ಸತತವಾಗಿ ಚಿವುಟಿ ಹಾಕುತ್ತ ಬಂದಿರುವುದು ಹಿಂದೂವಾದಿಗಳ ಹುನ್ನಾರದಿಂದ. ಇತ್ತೀಚಿನ ದಿನಗಳಲ್ಲಿ ಅಂದರೆ ೨೦೧೩ರಲ್ಲಿ ಮಹಾರಾಷ್ಟ್ರ ರಾಜ್ಯ ಸರಕಾರ ವೀರಶೈವ ಲಿಂಗಾಯತ ಸಮುದಾಯಕ್ಕೆ ಪ್ರತ್ಯೇಕ ಧರ್ಮದ ಸ್ಥಾನಮಾನ ನೀಡುವಂತೆ ಕೇಂದ್ರ ಸರಕಾರಕ್ಕೆ ಸಲ್ಲಿಸಿದ ಮನವಿಯನ್ನು ಕೇಂದ್ರ ಸರಕಾರ ತಿರಸ್ಕರಿಸಿತ್ತು ಎಂಬ ಸುಳ್ಳು ಹೇಳಿಕೆಯನ್ನು ಬಂಡವಾಳ ಮಾಡಿಕೊಂಡು

In Public domain. Digitization Muthulakshmi Research Academy

ಕೇಂದ್ರ ಸಚಿವ ಅನಂತಕುಮಾರ್ "ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರಕಾರ ರಾಜಕೀಯ ದುರುದ್ದೇಶದಿಂದ ಲಿಂಗಾಯತ ಸ್ವತಂತ್ರ ಧರ್ಮದ ಬೇಡಿಕೆಯನ್ನು ಬಳಸಿಕೊಳ್ಳುವ ಮೂಲಕ ಒಡೆದು ಆಳುವ ನೀತಿ ಅನುಸರಿಸುತ್ತಿದೆ" ಎಂದು ದೂರಿದ್ದರು. ಮುಂದುವರಿದು "ಬ್ರಿಟಿಷರು ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿದ್ದರು. ರಾಬರ್ಟ್ ಕ್ಲೈವ್ ಈ ಕೆಲಸ ಮಾಡಿದ್ದ ಮೊದಲ ಬ್ರಿಟಿಷ್ ಅಧಿಕಾರಿಯಾಗಿದ್ದರು. ಇದೀಗ ಮತಬ್ಯಾಂಕ್ ರಾಜಕಾರಣದ ದುರುದ್ದೇಶದಿಂದ ಅದೇ ನೀತಿ ಅನುಸರಿಸುತ್ತಿರುವ ಸಿದ್ದರಾಮಯ್ಯ ಕರ್ನಾಟಕದ ರಾಬರ್ಟ್ ಕ್ಲೈವ್ ಎನಿಸಿಕೊಂಡಿದ್ದಾರೆ" ಎಂದು ಟೀಕಿಸುತ್ತ "ಮಹಾರಾಷ್ಟ್ರ ಸರಕಾರದ ಶಿಫಾರಸ್ಸನ್ನು ಯು.ಪಿ.ಎ. ಸರಕಾರ ತಿರಸ್ಕರಿಸಿದ್ದಲ್ಲದೆ ವೀರಶೈವ–ಲಿಂಗಾಯತ ಸಮುದಾಯವು 'ಹಿಂದೂಧರ್ಮದ ಒಂದು ಪಂಗಡ' ಎಂಬ ಅಭಿಪ್ರಾಯಪಟ್ಟಿದೆ. ಆದರೂ ಹಿಂದೂಧರ್ಮವನ್ನು ವಿಭಜಿಸುವ ಕೆಟ್ಟ ರಾಜಕಾರಣವನ್ನು ಸಿದ್ದರಾಮಯ್ಯ ಸರಕಾರ ಮಾಡುತ್ತದೆ"[1] ಎಂದಿದ್ದರು. ಕೇಂದ್ರ ಸಚಿವರು ಒಂದು ಅಂಶವನ್ನು ಮರೆಮಾಚಿದ್ದರು. ಲಿಂಗಾಯತ ಸ್ವತಂತ್ರ ಧರ್ಮದ ಇಂದಿನ ಹೋರಾಟ 'ವೀರಶೈವ/ಲಿಂಗಾಯತ' ಧರ್ಮದ ಹೋರಾಟವಲ್ಲ. ಅದು ಕೇವಲ 'ಲಿಂಗಾಯತ' ಧರ್ಮದ ಹೋರಾಟ. ಈ ವಿಷಯವನ್ನು ಮಾತೆ ಮಹಾದೇವಿಯವರು ಹಾಗೂ ಇಂದಿನ ಹೋರಾಟಗಾರರು ಈಗಾಗಲೇ ಅನೇಕ ಬಾರಿ ಸ್ಪಷ್ಟಪಡಿಸಿದ್ದು, ಲಿಂಗಾಯತ ಧರ್ಮಕ್ಕೆ ಮಾನ್ಯತೆ ಕೇಳಿದ್ದಾರೆ. ಈ ವಿಷಯವನ್ನು ಜಾಣತನದಿಂದ ಇವರು ಮರೆಮಾಚುತ್ತಿದ್ದರು. 'ವೀರಶೈವ ಲಿಂಗಾಯತವು' ನಿಶ್ಚಿತವಾಗಿಯೂ ಹಿಂದೂಧರ್ಮದ ಭಾಗ. ಆದರೆ 'ಲಿಂಗಾಯತವು' ಹಿಂದೂಧರ್ಮದ ಭಾಗವಲ್ಲ. ವೀರಶೈವ ಎನ್ನುವ ಒಂದು ಪಂಥವು ಲಿಂಗಾಯತ ಧರ್ಮದಲ್ಲಿರುವ ನೂರಾರು ಪಂಥದಂತೆ ಒಂದು ಪಂಥವಷ್ಟೇ. 'ವೀರಶೈವ' ಪದವನ್ನು ಲಿಂಗಾಯತಕ್ಕೆ ಜೋಡಿಸುತ್ತ ಲಿಂಗಾಯತವನ್ನು ಹಿಂದೂಧರ್ಮದ ಒಂದು ಜಾತಿ ಮಾಡಿದ ಹುನ್ನಾರ ಹಿಂದೂವಾದಿಗಳ ಒಂದು ವ್ಯವಸ್ಥಿತವಾದ ಷಡ್ಯಂತ್ರ. ಹಿರಿಯ ಸಾಹಿತಿ ಚಂದ್ರಶೇಖರ ಪಾಟೀಲ(ಚಂಪಾ) ಅವರು "ವೀರಶೈವ ಲಿಂಗಾಯತದ ಒಂದು ಪಂಗಡ" ಎನ್ನುತ್ತ ಜಾತಿಜಂಗಮರಾದ ವೀರಶೈವರನ್ನು "ಜಂಗಮರೆಂದರೆ ಅವರೇನು ಮೇಲಿನಿಂದ ಉದರಿದವರಲ್ಲ. ನೆಲದಿಂದ ಉದ್ಭವವಾದವರಲ್ಲ. ನಾನು ಕೂಡ ಒಬ್ಬ ಜಂಗಮನೇ. ಎಲ್ಲರೂ ಕಾಯಕನಿಷ್ಠೆ ಹೊಂದಿ ಲಿಂಗಾಯತರಾಗಬೇಕು. ವೀರಶೈವ ಮಠಾಧೀಶರು ಲಿಂಗಾಯತ ಧರ್ಮದ ಸತ್ಯವನ್ನು ಒಪ್ಪಿಕೊಂಡು ಅದರೊಳಗೆ ಬರಬೇಕು"[2] ಎಂದು ಜಾತಿ ಜಂಗಮರನ್ನು ಕೇಳಿಕೊಂಡಿದ್ದರು.

In Public domain. Digitization Muthulakshmi Research Academy

ಅಲ್ಲಮಪ್ರಭುವಿನ ಶೂನ್ಯಸಿಂಹಾಸನ ಸಿದ್ಧಾಂತದ ಆಧಾರದಲ್ಲಿ ಸ್ಥಾಪಿತವಾದ ಅನೇಕ ವಿರಕ್ತಮಠಗಳು, ಗುರುವರ್ಗದ ಮಠದವರಂತೆ 'ವೀರಶೈವರು ಲಿಂಗಾಯತರು ಬೇರೆಯಲ್ಲ' ಎಂದು ಹೇಳುತ್ತ ತಮ್ಮ ಅಜ್ಞಾನ ಪ್ರಯೋಗಿಸುತ್ತಿದ್ದರು. ಲಿಂಗಾಯತ ಸಿದ್ಧಾಂತವನ್ನು ಅರಿತ ಸ್ವಾಮೀಜಿಗಳನ್ನು ವೈಯಕ್ತಿಕ ಕಾರಣಗಳಿಂದ ದೂಷಿಸುವುದು ಇದೇ ಸಮಯದಲ್ಲಿ ಕಾಣಿಸಿಕೊಂಡಿತು. ರಂಬಾಪುರಿ ಸ್ವಾಮೀಜಿ ಮತ್ತು ವಿರಕ್ತ ಮಠಾಧೀಶರು ಮಾಡಿಕೊಂಡಿರುವ ಗೊಂದಲವಿದು. ಹಿಂದೂ ಎಂದರೆ ಬಲ, ಲಿಂಗಾಯತ ಎಂದರೆ ಎಡ, ವೀರಶೈವ ಎಂದರೆ ಎಡಬಿಡಂಗಿ. ಎಡ ಹಾಗೂ ಬಲಪಂಥೀಯರಲ್ಲಿ ಯಾವುದೇ ಗೊಂದಲ ಇಲ್ಲ"[3] ಎಂದಿದ್ದರು.

ದಕ್ಷಿಣ ಕರ್ನಾಟಕದ ಚಾಮರಾಜನಗರ ಜಿಲ್ಲೆಯಲ್ಲಿ ಮಂಟೇಸ್ವಾಮಿ ಮತ್ತಿತರ ಶರಣರ ಪ್ರಭಾವದಿಂದ ವಿರಕ್ತಮಠಗಳ ಸಂಖ್ಯೆ ಅಧಿಕವಾಗಿವೆ. ಈ ಭಾಗದಲ್ಲಿ ಬಹುಪಾಲು ವಿರಕ್ತಮಠಗಳು ಇಲ್ಲಿರುವ ಎರಡು ಪ್ರಮುಖ ಮಠಗಳ ಆಶ್ರಯದಲ್ಲಿ ಇರಲು ಬಯಸುತ್ತವೆ. ಇವೆರಡೂ ಪ್ರಮುಖ ಮಠಗಳ ಅಂತರಂಗದ ಇಂಗಿತವನ್ನು ಅರಿತೇ ಅವರು ತಮ್ಮ ಅಭಿಪ್ರಾಯವನ್ನು ಬಹಿರಂಗಪಡಿಸುತ್ತಾರೆ. ಲಿಂಗಾಯತ ಧರ್ಮದ ಹೋರಾಟಕ್ಕೆ ಕೈ ಜೋಡಿಸಿ ಎಂದು ಕೇಳಲು ಅಂತಹ ಅನೇಕ ಮಠಗಳನ್ನು ನಾನು ವೈಯಕ್ತಿಕವಾಗಿ ಸಂದರ್ಶಿಸಿ ನಾನೇ ಕಂಡುಕೊಂಡ ಸತ್ಯ ಇಲ್ಲಿ ಪ್ರಸ್ತುತ ಪಡಿಸುತ್ತಿರುವೆ. ಇಂತಹ ಮಠಗಳಲ್ಲಿ ಒಂದಾದ ಮರಿಯಾಲ ಮಠದ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿಯವರು. 'ನೀವು ಬಹಿರಂಗವಾಗಿ ಕಾಣಿಸಿಕೊಂಡು ನಮ್ಮ ಹೋರಾಟ ಬೆಂಬಲಿಸಿ' ಎಂದಾಗ ಅವರು ಹೋರಾಟವನ್ನು ಬೆಂಬಲಿಸಿ ತಾವು ನೀಡಿದ ಪತ್ರಿಕಾ ಹೇಳಿಕೆಯ ವರದಿಯನ್ನು ನನ್ನ ಕೈಗಿತ್ತು ತಮ್ಮ ಅಸಹಾಯಕತೆಯನ್ನು ತೋಡಿಕೊಂಡಿದ್ದರು.[4]

ಜನಸಾಮಾನ್ಯರ ಅಭಿಪ್ರಾಯವು ಲಿಂಗಾಯತ ಸ್ವತಂತ್ರ ಧರ್ಮವೆಂಬ ಹರಳುಗಟ್ಟುತ್ತಿತ್ತು. ವೀರಶೈವರ ಬಗ್ಗೆ ಜುಗುಪ್ಸೆ ಬರಲಾರಂಭಿಸಿತ್ತು. ಅವರ ನಿಜಬಣ್ಣ ಬಯಲಾಗಲಾರಂಭಿಸಿತ್ತು. ಸತ್ಯವನ್ನು ಅರಿತ ಜನ ಲಿಂಗಾಯತ ಹೋರಾಟಕ್ಕೆ ಕೈ ಜೋಡಿಸಲಾರಂಭಿಸಿದ್ದರು. "ವೀರಶೈವರು ಕಾಲಕಾಲಕ್ಕೆ ಲಿಂಗಾಯತರನ್ನು ಶೋಷಣೆ ಮಾಡುತ್ತಲೇ ಬಂದಿದ್ದಾರೆ. ಪ್ರತ್ಯೇಕ ಧರ್ಮದ ಕೂಗು ಎದ್ದಾಗಲೆಲ್ಲ ಅವರು ಗೊಂದಲ ಸೃಷ್ಟಿಸುತ್ತಾರೆ; ಜಾತಿ ಜಂಗಮರು ಈಗಾಗಲೇ ಕರ್ನಾಟಕ ರಾಜ್ಯ ವೀರಶೈವ ಅರ್ಚಕರ ಮತ್ತು ಪುರೋಹಿತರ ಸಂಘ ರಚಿಸಿಕೊಂಡಿದ್ದಾರೆ. ಈ ಸಂಘಕ್ಕೆ ಸರ್ಕಾರದ ಮಾನ್ಯತೆಯನ್ನು ಕೇಳಿದ್ದಾರೆ. ಅಲ್ಲದೆ ಸರಕಾರದಿಂದ ಮಾಸಾಶನ ಕೇಳಿದ್ದಾರೆ. ಇವರ ಧೋರಣೆಗಳು ಪಕ್ಕಾ ವೈದಿಕ ಆಚರಣೆಯಿಂದ ಕೂಡಿವೆ"[5] ಎಂದು ಪಂಚಮಸಾಲಿ ಹಿತರಕ್ಷಣಾ ಸಮಿತಿ ಪತ್ರಿಕಾ ಪ್ರಕಟನೆ ನೀಡಿತ್ತು

In Public domain. Digitization Muthulakshmi Research Academy

ಹುಬ್ಬಳ್ಳಿಯ ಸಭೆಯ ನಂತರ ಲಿಂಗಾಯತ ಅಲ್ಪಸಂಖ್ಯಾತ ಧರ್ಮ ಮಾನ್ಯತೆಯ ಬೇಡಿಕೆಯ ವಿಚಾರವಾಗಿ ಹೋರಾಟಗಾರರೆಲ್ಲ ಸ್ವಲ್ಪ ಮಂಕಾದಂತೆ ಕಾಣುತ್ತಲಿದ್ದರು. ನಾವು ಆ ಸಭೆಯಿಂದ ಗಳಿಸುವುದಕ್ಕಿಂತ ಕಳೆದುಕೊಂಡಿದ್ದು ಹೆಚ್ಚಾಗಿತ್ತು. ಅಚಾತುರ್ಯಗಳನ್ನು ಸರಿಪಡಿಸಲು ಸ್ವಲ್ಪ ಸಮಯ ಹಿಡಿಯಿತು. ಆದರೆ ಲಿಂಗಾಯತ ನಾಯಕರಾದ ಎಂ.ಬಿ.ಪಾಟೀಲ ವಿಚಲಿತರಾಗಿರಲಿಲ್ಲ. ಟೆಂಪರರಿ ಸೆಟ್ ಬ್ಯಾಕ್ ಎಂದುಕೊಂಡಿದ್ದರು.

ಹುಬ್ಬಳ್ಳಿಯ ಕಾರ್ಯಕ್ರಮದ ಕೆಲದಿನಗಳ ನಂತರ ಸಂಘಟನೆಯ ಕಾರಣಕ್ಕಾಗಿ ನಾನು ಮತ್ತೆ ಹುಬ್ಬಳ್ಳಿಗೆ ಹೋಗಿದ್ದೆ. ಅಲ್ಲಿಯ ಸಭೆಯ ನಂತರ ಶ್ರೀ ಬಸವರಾಜ ಹೊರಟ್ಟಿಯವರೊಂದಿಗೆ ಗದಗಿಗೆ ಹೋದೆವು. ಅಲ್ಲಿ ಸಚಿವ ಎಂ.ಬಿ.ಪಾಟೀಲರು ಬಂದಿದ್ದರು. ತವರುಜಿಲ್ಲೆಯ ಸಚಿವರಾದ ಶ್ರೀ ಎಚ್.ಕೆ.ಪಾಟೀಲರೊಂದಿಗೆ ಚರ್ಚೆ. ಚರ್ಚೆಯ ನಂತರ ನಮಗೆಲ್ಲ ಔತಣಕೂಟ ಇತ್ತು.

ವಿಜಾಪುರದಲ್ಲಿ ಜರುಗಲಿರುವ ರ್‍ಯಾಲಿಯ ಪೂರ್ವಬಾವಿ ಸಭೆಯನ್ನು ಕರೆದಿದ್ದರು. ನಾನು, ಶ್ರೀ ಬಸವರಾಜ ಹೊರಟ್ಟಿಯವರು ವಿಜಾಪುರವನ್ನು ತಲುಪಿದಾಗ ಸಂಜೆ ಐದು ಗಂಟೆ. ಸಭೆ ನಡೆಯುವ ಸ್ಥಳವಾದ ಸಿದ್ಧೇಶ್ವರ ದೇವಸ್ಥಾನದ ಮಂಗಲ ಕಾರ್ಯಾಲಯಕ್ಕೆ ಹೋದೆವು. ಮಂಗಲ ಕಾರ್ಯಾಲಯ ತುಂಬಿತ್ತು. ಆ ಸಭೆಗೆ ಬೀದರಿನ ಬೆಲ್ದಾಳ ಶರಣರನ್ನು ನಾನೇ ಆಹ್ವಾನಿಸಿದ್ದೆ. ಅವರ ಅಪಾರವಾದ ಅನುಭಾವದ ನುಡಿಗಳನ್ನು ನಾವು ಹಿಂದಿನ ಬೃಹತ್ ಸಭೆಗಳಲ್ಲಿ ಸಮಯದ ಅಭಾವದಿಂದ ಕೇಳಲಾಗಿರಲಿಲ್ಲ. ಅದನ್ನು ಸರಿದೂಗಿಸುವ ಸದವಕಾಶ ಎಂದು ಅವರನ್ನು ಆಹ್ವಾನಿಸಿದ್ದೆ. ಜಿಲ್ಲಾ ಉಸ್ತುವಾರಿ ಸಚಿವರು ಅಂದಿನ ಸಭೆಗೆ ಬರುವ ಕಾರಣ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅತಿಥಿಗಳಾಗಿ ಆಗಮಿಸಿದ ಶ್ರೀ ಬಸವರಾಜ ಹೊರಟ್ಟಿ ಮತ್ತು ಬೀದರ್ ಬೆಲ್ದಾಳ ಶರಣರು ಚೆನ್ನಾಗಿ ಮಾತನಾಡಿ ಲಿಂಗಾಯತ ಧರ್ಮದ ಸ್ಥಾನಮಾನದ ಅವಶ್ಯಕತೆಗಳನ್ನು ಜನರಿಗೆ ವಿವರಿಸಿದರು. ಬೀದರ್ ಶರಣರ ಹಣಕಾಸಿನ ಪರಿಸ್ಥಿತಿ ಉಳಿದ ಮಠಗಳಿಂತಿಲ್ಲ. ಕಾರಿನಲ್ಲಿ ಬಂದುಹೋಗಲು ವಿನಂತಿಸಿಕೊಂಡಿದ್ದೆ. ಕಾರಿನ ಬಾಡಿಗೆ ಕೊಡಬೇಕಾಗಿತ್ತು. ಆಗ ಸ್ಥಳೀಯ ಸಂಘಟಕರು ಕಾಣಿಕೆ ನೀಡುವಲ್ಲಿ ಸಣ್ಣತನವನ್ನು ತೋರಿಸಿದ್ದರು. ಆವರು ಸಚಿವರ ಆತ್ಮೀಯರಾಗಿದ್ದರು. ವಿಷಯವನ್ನು ಸಚಿವರ ಗಮನಕ್ಕೆ ತಂದರೆ ರಾದ್ಧಾಂತವಾಗುವುದೆಂದು ನಾನು ಸುಮ್ಮನಾದೆ. ಅತಿಥಿಗಳ ಅವಮಾನಕ್ಕೆ ನಾನೇ ಅಪರೋಕ್ಷವಾಗಿ ಕಾರಣನಾದೆನಲ್ಲ ಎಂಬ ನೋವು ತುಂಬ ದಿನಗಳವರೆಗೆ ಇತ್ತು. ನಾವು ಸಭೆಗಳಲ್ಲಿ ಮಾತ್ರ 'ಇವ ನಮ್ಮವ ಇವ ನಮ್ಮವ' ಎನ್ನುತ್ತೇವೆ ಆದರೆ ಅಂತರಂಗದಲ್ಲಿ 'ಇವನಾರವ ಇವನಾರವ' ಎನ್ನುತ್ತೇವೆ ಎಂಬ ಕಹಿಸತ್ಯ ನನಗೆ ಆಗಿತ್ತು.

In Public domain. Digitization Muthulakshmi Research Academy

ಅಂದು ರಾತ್ರಿ ಸಚಿವರ ಮನೆಯಲ್ಲಿ ಊಟ. ಊಟದ ನಂತರ ತಡರಾತ್ರಿಯವರೆಗೂ ಮೂವರು(ಶ್ರೀ ಎಂ.ಬಿ.ಪಾಟೀಲ, ಶ್ರೀ ಬಸವರಾಜ ಹೊರಟ್ಟಿಯವರು ಮತ್ತು ನಾನು) ಸೇರಿ ಚರ್ಚೆ ಮಾಡಿದ್ದೆವು. ಈ ಮುಂಚೆ ನಡೆದ ರ್‍ಯಾಲಿಗಳಲ್ಲಿ ಬೆಳಗಾವಿಯ ರ್‍ಯಾಲಿ ಹೆಚ್ಚು ಮಹತ್ವದ್ದು ಹಾಗೂ ಶಿಸ್ತಿನಿಂದ ಕೂಡಿತ್ತು. ಆ ಸಭೆ ನಮ್ಮ ಮೇಲೆ ತುಂಬ ಪ್ರಭಾವ ಬೀರಿತ್ತು. ಅಂದಿನ ಸಭೆಯಲ್ಲಿ ಎಂ.ಬಿ.ಪಾಟೀಲರು ಭಾಗವಹಿಸಿರಲಿಲ್ಲ. ಆ ಸಭೆಯ ಶಿಸ್ತು ಮತ್ತು ಸಂಘಟನೆಯ ಬಗ್ಗೆ ಸಚಿವರಿಗೆ ಮನವರಿಕೆ ಮಾಡಲು ವಿಶೇಷ ಪ್ರಯತ್ನಪಟ್ಟೆ. ವಿಜಾಪುರ ಜಿಲ್ಲೆ ಬಸವಣ್ಣನವರ ಜನ್ಮ ಸ್ಥಾನ. ಜಿಲ್ಲೆಯ ಕೇಂದ್ರಸ್ಥಾನದಿಂದ ೫೦ ಕಿ.ಮೀ. ಅಂತರದಲ್ಲಿದೆ ಬಸವನ ಬಾಗೇವಾಡಿ. ಹಿತ್ತಲ ಗಿಡ ಮದ್ದಲ್ಲ ಎಂಬಂತೆ ಬಸವಣ್ಣನವರ ಜನ್ಮಭೂಮಿಯಲ್ಲಿ ಅವರ ಸಮಾಜವಾದ ಸಿದ್ಧಾಂತಕ್ಕೆ ಮಂಕು ಕವಿದಿದೆ. ಜಾತಿ ಜಾತಿಗಳ ಮಧ್ಯೆ ಗುದ್ದಾಟ ಎಲ್ಲಿಗಿಂತಲೂ ಹೆಚ್ಚಾಗಿದೆ. ಬಸವಣ್ಣ ಹುಟ್ಟಿದ ಬಸವನ ಬಾಗೇವಾಡಿಯಲ್ಲಿ ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಉತ್ಸವಗಳು ಜರಗುತ್ತವೆ. ಪ್ರತಿ ಹಳ್ಳಿಯಲ್ಲೂ ವೈಭವದ ದೇವಸ್ಥಾನಗಳಿವೆ. ಹಳ್ಳಿಗಳಲ್ಲಿರುವ ವಿರಕ್ತಮಠಗಳು ವೀರಶೈವ ಮಠಗಳಾಗಿವೆ. ವೈದಿಕ ಆಚರಣೆಯ ಕೇಂದ್ರಗಳಾಗಿವೆ. ಹಳೆ ಮಠಗಳಿದ್ದ ಜಾಗದಲ್ಲಿ ಐಷಾರಾಮಿ ಹೊಸ ಮಠಗಳು ವಾಸ್ತುವಿನ ಆಧಾರದಲ್ಲಿ ಕಟ್ಟಲ್ಪಡುತ್ತಿವೆ. ಪಂಚಮಸಾಲಿ, ಜಂಗಮ, ಬಣಜಿಗ, ರೆಡ್ಡಿ, ಈ ಸಮಾಜಗಳನ್ನು ಮಾತ್ರ ಲಿಂಗಾಯತರೆಂದು ಗುರುತಿಸುತ್ತಾರೆ. ಒಳಪಂಗಡಗಳಾದ ಕಾಯಕವರ್ಗದ ಪಂಗಡಗಳನ್ನು ಅವರ ಜಾತಿಗಳಿಂದ ಗುರುತಿಸಿ ಅವರನ್ನು ಈ ಧರ್ಮದಿಂದ ಕೈ ಬಿಟ್ಟಿದ್ದಾರೆ. ಒಬ್ಬ ಪ್ರತಿಷ್ಠಿತ ಲಿಂಗಾಯತ ಮನೆತನದಲ್ಲಿ ಜನಿಸಿದ ಅಮಾಯಕ ಯುವಕನೊಬ್ಬ ನನ್ನನ್ನು ಪ್ರಶ್ನಿಸಿದ್ದ. ತಾನು ಲಿಂಗಾಯತನೋ? ವೀರಶೈವನೋ? ಎಂದು. ಇಂತಹ ನಾಡಿನಲ್ಲಿ ಬಸವಣ್ಣನವರ ತತ್ವಗಳು ನಮ್ಮ ರ್‍ಯಾಲಿಯ ಮುಖಾಂತರವಾಗಿ ಹರಡಲಿ ಎಂದು ನನ್ನಾಸೆಯಾಗಿತ್ತು. ಜಿಲ್ಲೆಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಜನಸಂಪರ್ಕ ಸಭೆಗಳನ್ನು ಸ್ಥಳೀಯ ವಿರಕ್ತಮಠಾಧೀಶರೊಂದಿಗೆ ಮಾಡಿ, ಅದಕ್ಕೆ ಸ್ಥಳೀಯ ಲಿಂಗಾಯತ ಕಾರ್ಯಕರ್ತರು ಕೈ ಜೋಡಿಸಲಿ ಎಂದು ಆಸೆಪಟ್ಟಿದ್ದೆ. ಇದೊಂದು ಧರ್ಮಜಾಗೃತಿಯ ಕಾರ್ಯಕ್ರಮವಾಗಿಸಲು ಒಳ್ಳೆಯ ಸದವಕಾಶ ಎಂದು ಇಡೀ ಜಿಲ್ಲೆಯನ್ನು ಸಂಚರಿಸಿ ಜನರಿಗೆ ಮುಂಬರುವ ರ್‍ಯಾಲಿಯ ಆಶಯಗಳನ್ನು ತಿಳಿಸವುದಾಗಿ ಸಚಿವರು ಹಾಗೂ ಶ್ರೀ ಹೊರಟ್ಟಿಯವರಿಗೆ ತಿಳಿಸಿದೆ. ನನ್ನ ಮಾತಿಗೆ ಉತ್ತರಿಸುತ್ತ "ತಲೆ ಕೆಡಿಸಿಕೊಳ್ಳಬೇಡಿ ಜನ ಸೇರುತ್ತಾರೆ" ಎಂದಿದ್ದರು ಸಚಿವರು. ಅವರು ನುಡಿದಂತೆ ವಿಜಾಪುರ ಸಭೆಗೆ ಜನ ಸೇರಿತ್ತು. ಆದರೆ ಅವರು 'ಜನವಾಗಿದ್ದರು ಲಿಂಗಾಯತರಾಗಿರಲಿಲ್ಲ.'

In Public domain. Digitization Muthulakshmi Research Academy

ರದ್ದಾದ ಬೆಂಗಳೂರು ಸಭೆ–ಸದ್ದಾದ ವಿಜಾಪುರ ಸಭೆ

ರಾಜ್ಯದ ನಾಲ್ಕು ಕಂದಾಯ ವಿಭಾಗಗಳಾದ ಬೆಳಗಾವಿ, ಕಲಬುರ್ಗಿ, ಮೈಸೂರು ನಗರಗಳಲ್ಲಿ ಧರ್ಮಜಾಗೃತಿಯ ಸಮಾವೇಶ ಮಾಡುವುದಲ್ಲದೆ ರಾಜಧಾನಿ ಬೆಂಗಳೂರಿನಲ್ಲಿ ಒಂದು ಐತಿಹಾಸಿಕ ಸಭೆ ಮಾಡುವುದೆಂದು ಚಿಂತಿಸಲಾಗಿತ್ತು. "ಬೆಂಗಳೂರಿನಲ್ಲಿ ಡಿ.೧೦ಕ್ಕೆ ಲಿಂಗಾಯತ ರಾಷ್ಟ್ರಮಟ್ಟದ ರ್‍ಯಾಲಿ ನಡೆಯಲಿದ್ದು ಅದರಲ್ಲಿ ೨೫ ಲಕ್ಷ ಜನರನ್ನು ಸೇರಿಸಲಾಗುವುದು"[೬] ಎಂದು ಸಚಿವ ಎಂ.ಬಿ. ಪಾಟೀಲರು ಕಲ್ಬುರ್ಗಿ ರ್‍ಯಾಲಿಯಲ್ಲಿ ಮುಂದಿನ ಸಭೆಗಳ ವೇಳಾಪಟ್ಟಿಯನ್ನು ಪ್ರಕಟಿಸಿದ್ದರು ಇದನ್ನು ಅನುಮೋದಿಸುತ್ತ ಮುಂದೆ ನಡೆದ ಸಭೆಗಳಲ್ಲಿ ದಿನಾಂಕಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡುತ್ತ ರಾಜಕೀಯ ಮುಖಂಡರು ಹೇಳಿಕೆಗಳನ್ನು ನೀಡುತ್ತಿದ್ದರು.

ನಮ್ಮ ಯೋಜನೆಯಂತೆ ಮುಂದಿನ ಸಭೆಯನ್ನು ಮೈಸೂರಿನಲ್ಲಿ ಮಾಡಬೇಕಾಗಿತ್ತು. ಮೈಸೂರಿನ ಸಭೆಯ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಆ ಸಭೆಯನ್ನು ಬೆಂಗಳೂರಿನ ಸಭೆಯೊಂದಿಗೆ ಸೇರಿಸುವ ನಿರ್ಣಯ ಕೈಗೊಂಡಿದ್ದೆವು. ಡಿಸೆಂಬರ್ ೧೦ರಂದು ಬೃಹತ್ ಸಭೆ ಬೆಂಗಳೂರಿನಲ್ಲಾಗಲಿದೆ ಎಂದು ಎಲ್ಲ ನಾಯಕರು ಹೇಳಿಕೆ ನೀಡಿದ್ದರು. ಇಪ್ಪತ್ತೈದು ಲಕ್ಷ ಲಿಂಗಾಯತರು ಒಂದೆಡೆ ಸೇರಿ ಲಿಂಗಾಯತ ಧರ್ಮದ ಬಗ್ಗೆ ಚರ್ಚೆ ಮಾಡಿದರೆ ಅದೊಂದು ವಿಶ್ವದಾಖಲೆಯಾಗುವುದು. ಅದನ್ನು ಮಾಡುವ ಕನಸು ಕಂಡಿದ್ದರು ಎಂ.ಬಿ.ಪಾಟಿಲರು ಮತ್ತು ಅವರ ಸಹಚರರು. ಅದಕ್ಕಾಗಿ ಚಿಂತನೆ ನಡೆದಿತ್ತು. ಈಗಾಗಲೇ ಧರ್ಮಮಾನ್ಯತೆ ವಿಷಯ ರಾಷ್ಟ್ರಮಟ್ಟದಲ್ಲಿ ಸುದ್ದಿ ಮಾಡಿತ್ತು. ರಾಜಕೀಯ ಪಕ್ಷಗಳು ತಮ್ಮ ನಿಲುವನ್ನು ಪ್ರಕಟಿಸಿದ್ದವು.

ಬೆಂಗಳೂರು ಸಮಾವೇಶದ ಸಾಧ್ಯಾಸಾಧ್ಯತೆಗಳ ಬಗ್ಗೆ ನಾನು ಗಂಭೀರವಾಗಿ ಯೋಚನೆ ಮಾಡಲಾರಂಭಿಸಿದ್ದೆ. ಇದು ಸಾಧ್ಯವೇ? ೨೫ ಲಕ್ಷ ಜನರನ್ನು ಒಂದೆಡೆ ಸೇರಿಸುವುದೆಂದರೆ ಇಡೀ 'ಕತಾರ್ ದೇಶ'ದ ಜನಸಂಖ್ಯೆಯನ್ನು ಒಂದೆಡೆ ಸೇರಿಸಿದಂತೆ ಅಥವಾ ನೆರೆಯ 'ಭೂತಾನ್ ದೇಶ'ದ ಜನಸಂಖ್ಯೆಯ ಮೂರು ಪಟ್ಟು ಜನರನ್ನು ಒಂದೆಡೆ ಸೇರಿಸಬೇಕು. ಇದು ಸಾಧ್ಯವೇ? ಬೆಂಗಳೂರು ಆಸುಪಾಸಿನಲ್ಲಿ ೨೫ ಲಕ್ಷ ಲಿಂಗಾಯತ ಅಭಿಮಾನಿಗಳಿದ್ದಾರೆಯೇ? ಅಷ್ಟೊಂದು ಸಂಖ್ಯೆಯಲ್ಲಿ ಸ್ಥಳೀಯರು ಭಾಗವಹಿಸಬಹುದೇ? ಇಲ್ಲ. ಬೆಂಗಳೂರಿನಲ್ಲಿ ಯಾವ ಸಭೆಗೂ ಜನ ಸೇರುವುದಿಲ್ಲ. ಬೆಂಗಳೂರು ನಗರ ಕಾಸ್ಮೋಪಾಲಿಟನ್ ಸಿಟಿ. "ಇದು ಎಲ್ಲರ ಊರು. ಆದರೆ ಈ ಊರಿನವರು ಯಾರೂ ಇಲ್ಲ." ಇದಕ್ಕೆ ದಾರಿ ಎಂದರೆ ಉತ್ತರ ಕರ್ನಾಟಕದ ಜಿಲ್ಲೆಗಳಿಂದ ಜನರು ಬೆಂಗಳೂರಿನಲ್ಲಿ ಬಂದು ಸೇರಬೇಕು. ಅವರು ಬಸ್ಸು, ರೈಲು ಅಥವಾ ಕಾರಿನಲ್ಲಿ

In Public domain. Digitization Muthulakshmi Research Academy

ಬರಬೇಕು. ಇಪ್ಪತ್ತೈದು ಲಕ್ಷ ಜನರು ಪರ ಊರಿನಿಂದ ಬಂದರೆ ಬೆಂಗಳೂರು ತಡೆದುಕೊಳ್ಳಬಹುದೇ? ಟ್ರಾಫಿಕ್ ಸಮಸ್ಯೆಯಾಗದೇ? ಒಂದು ವೇಳೆ ಆಡಳಿತ ನಮ್ಮ ಬೇಡಿಕೆಗೆ ಒಪ್ಪಿಕೊಂಡು ಸಮ್ಮತಿಸಿದಲ್ಲಿ ಇಷ್ಟೊಂದು ಜನರನ್ನು ಹೇಗೆ ತರುವುದು? ಎಲ್ಲ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸುತ್ತಾ ಹೋದೆ.

ಒಂದು ರೈಲಿನಲ್ಲಿ ಸಾಮಾನ್ಯವಾಗಿ ೧೦೦೦ ಜನರು ಪ್ರಯಾಣಿಸಬಹುದು (೯೦ ಸೀಟಿನ ಒಂದು ಬೋಗಿX10 ಬೋಗಿಗಳ ಒಂದು ರೈಲು). ಉತ್ತರ ಕರ್ನಾಟಕದಿಂದ ಬೆಂಗಳೂರಿಗೆ ಬರಲು ಇಂತಹ ೨೫೦೦ ರೈಲುಗಳು ಬೇಕು, ಅಷ್ಟೊಂದು ರೈಲುಗಳನ್ನು ವ್ಯವಸ್ಥೆ ಮಾಡುವುದು ಅಸಾಧ್ಯ. ಇನ್ನೊಂದು ಸಾಧ್ಯಾಸಾಧ್ಯತೆ ಬಸ್ಸುಗಳು. ಒಂದು ಬಸ್ಸಿನಲ್ಲಿ ೪೫ ಜನರು ಪ್ರಯಾಣಿಸಿದರೆ ೧೦,೦೦೦ ಜನರನ್ನು ಸಾಗಿಸಲು ೨೨೨ ಬಸ್ಸುಗಳು ಬೇಕು. ೨೫ ಲಕ್ಷ ಜನಕ್ಕೆ ೫೫,೫೦೦ ಬಸ್ಸುಗಳು ಬೇಕು! ದೇಶದಲ್ಲಿ ಒಳ್ಳೆಯ ಸಾರಿಗೆ ಸಂಸ್ಥೆಯೆಂದು ಹೆಸರು ಪಡೆದ ಹಾಗೂ ದೇಶದ ಸಾರಿಗೆ ಸಂಸ್ಥೆಗಳಲ್ಲಿ ಐದನೇ ಸ್ಥಾನ ಪಡೆದ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿರುವ ಒಟ್ಟು ಬಸ್ಸುಗಳ ಸಂಖ್ಯೆಯೇ ೮೧೧೩. ಇದನ್ನು ಗಮನಿಸಿದರೆ ದಕ್ಷಿಣ ಭಾರತದ ಎಲ್ಲ ರಾಜ್ಯಗಳ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಬಾಡಿಗೆ ಪಡೆಯಬೇಕಾಗುತ್ತದೆ. ಇದೂ ಕೂಡ ಅಸಾಧ್ಯ. ಇನ್ನು ಕಾರುಗಳಲ್ಲಿ ಬಂದರೆ ಇಷ್ಟೊಂದು ಜನ ಸಾಗಿಸಲು ಕನಿಷ್ಠ ೬.೫೦.೦೦೦ ಕಾರುಗಳು ಬೇಕು! ಇಂದಿನವರೆಗೆ ಕರ್ನಾಟಕದಲ್ಲಿ ರಿಜಿಸ್ಟರ್ಡ್ ಆಗಿರುವ ಕಾರುಗಳ ಒಟ್ಟು ಸಂಖ್ಯೆಯೇ ೨೩.೪೭ ಲಕ್ಷ. ಅಂದರೆ ಕರ್ನಾಟಕದಲ್ಲಿರುವ ಕಾರುಗಳ ಒಟ್ಟು ಸಂಖ್ಯೆಯ ೧/೪ ಭಾಗದ ಕಾರುಗಳು ಲಿಂಗಾಯತ ರ್‍ಯಾಲಿಗಾಗಿ ರಸ್ತೆಗೆ ಇಳಿಯಬೇಕು. ಸಾಧ್ಯವೇ? ಇವೆಲ್ಲಕ್ಕೂ ಬೇಕಾಗುವ ಇಂಧನ, ಒಮ್ಮೆಲೆ ಇಷ್ಟೊಂದು ವಾಹನ ರಸ್ತೆಗಿಳಿದರೆ? ನೆನೆಸಿಕೊಳ್ಳಲು ಭಯಾನಕ. ಇವರಿಗೆಲ್ಲ ಊಟ ವಸತಿ, ಅವರನ್ನು ಕಂಟ್ರೋಲ್ ಮಾಡುವುದು ಸಾಧ್ಯವೇ? ಕೋಟಿ ಕೋಟಿ ಹಣವನ್ನು ವ್ಯಯಿಸಿ ಇಂತಹ ಒಂದು ಪ್ರಹಸನ ಅವಶ್ಯಕ ಇದೆಯೇ? ಎಂದು ಸಚಿವ ಪಾಟೀಲರನ್ನು ಕೇಳಿದೆ. ಅವರಿಗೆ ನನ್ನ ಮಾತುಗಳು ನಾಟಿದವು. ಒಪ್ಪಿದರು. ಬೆಂಗಳೂರಿನ ಸಭೆಯನ್ನು ರದ್ದು ಮಾಡಿದೆವು. ಅದೇ ಸಮಯದಲ್ಲಿ ಬಿಜಾಪುರ ನಗರದಲ್ಲಿ ಸಭೆ ಮಾಡಲು ನಿರ್ಧರಿಸಿದೆವು.

ವಿಜಯಪುರ ರ್‍ಯಾಲಿಯ ಪೂರ್ವಭಾವಿ ಸಭೆಗಳು

ಅವಿಭಾಜ್ಯ ವಿಜಯಪುರ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಪೂರ್ವಭಾವಿ ಸಭೆಗಳು ಜರುಗಿದ್ದವು. ಸಚಿವ ಎಂ.ಬಿ.ಪಾಟೀಲರು ಇಂದಿನ ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ, ಜಮಖಂಡಿ, ಮುಧೋಳ, ಹುನಗುಂದ ಪಟ್ಟಣಗಳಲ್ಲಿ ಸಾರ್ವಜನಿಕ ಸಭೆಗಳನ್ನು ಮಾಡಿ ಜನರಿಗೆ ಲಿಂಗಾಯತ ಧರ್ಮದ ಹೋರಾಟದ ಅವಶ್ಯಕತೆಯನ್ನು ವಿವರಿಸಿದ್ದರು. ಅವಿಭಾಜ್ಯ ವಿಜಾಪುರ ಜಿಲ್ಲೆಯ ಒಂದು

In Public domain. Digitization Muthulakshmi Research Academy

ತಾಲ್ಲೂಕು ಇಂದಿನ ಬಾಗಲಕೋಟೆ ಜಿಲ್ಲೆ. ಬಾಗಲಕೋಟೆಯು ಇಂದು ಕರ್ನಾಟಕದ ಶ್ರೀಮಂತ ಜಿಲ್ಲೆ. ಅದಕ್ಕೆ ಮುಖ್ಯ ಕಾರಣ ಫಲವತ್ತಾದ ಭೂಮಿ, ಖನಿಜ ಸಂಪತ್ತು ಮತ್ತು ಈ ಪ್ರದೇಶದಲ್ಲಿರುವ ಶಿಕ್ಷಣ ಸಂಸ್ಥೆಗಳು. ವಿಜಾಪುರ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾಗಿದ್ದ ಬಾಗಲಕೋಟೆಯಲ್ಲಿ ಮೊತ್ತಮೊದಲ ಸಂಸ್ಕೃತ ಪಾಠಶಾಲೆ ಪ್ರಾರಂಭವಾಗಿದ್ದು ೧೯೦೬ರಲ್ಲಿ. ಇದರ ಹಿಂದಿರುವ ಲಿಂಗಾಯತರ ಪ್ರಯತ್ನ ಇಲ್ಲಿ ದಾಖಲೆಗೆ ಅರ್ಹ ಬೆಳಗಾವಿಯಲ್ಲಿ ಅರಟಾಳ ರುದ್ರಗೌಡರು ಹಚ್ಚಿದ ದೀಪದ ಬೆಳಕು ಬಾಗಲಕೋಟೆಯವರೆಗೆ ಪಸರಿಸಿತ್ತು. ಶಿಕ್ಷಣ ವಂಚಿತ ಪ್ರದೇಶಕ್ಕೆ ಶಿಕ್ಷಣದ ದೀಪ ಹಚ್ಚಲು ಮುಂದಾದರು ವಿಜಾಪುರ ಜಿಲ್ಲೆಯ ದಕ್ಷಿಣ ಭಾಗದ ಲಿಂಗಾಯತ ನಾಯಕರು. ಅವರಿಗೆ ಐದು ರೂಪಾಯಿಯ ಬೆಳ್ಳಿ ನಾಣ್ಯ ನೀಡಿ ಆಶೀರ್ವಾದ ಮಾಡಿ ಸಮಾಜ ಸೇವೆ ಮಾಡಲು ಪ್ರೇರೇಪಿಸಿದವರು ಬೀಳೂರ ಮಹಾಸ್ವಾಮಿಗಳು ಹಾಗೂ ಕೋಹಳ್ಳಿ ಪಟ್ಟಾಧ್ಯಕ್ಷರು. ಐದು ರೂಪಾಯಿಯ ಬೆಳ್ಳಿ ನಾಣ್ಯದಿಂದ ಪ್ರಾರಂಭವಾದ ಫಂಡಿಗೆ "ಶ್ರೀ ಬಸವೇಶ್ವರ ವಿಧ್ಯಾವರ್ಧಕ ಫಂಡ್" ಎಂದು ಬಸವಣ್ಣನವರ ಹೆಸರಿಟ್ಟರು ಬೀಳೂರ ಅಜ್ಜನವರು. ಬಸವೇಶ್ವರ ಶಿಕ್ಷಣ ಫಂಡ್‌ಗೆ ನೀರಿನ ಝರಿಯ ರೂಪದಲ್ಲಿ ಹರಿದುಬಂದ ಹಣದ ಒಟ್ಟು ಮೊತ್ತ ೮೦೦೦ ರೂಪಾಯಿಗಳಿಗೆ ವೃದ್ಧಿಸಿದವರು ರಕ್ಕಸಗಿಯ ಸಂಗಪ್ಪ ದೇಸಾಯಿಯವರು, ಚಿತ್ತವಾಡಿಗಿಯ ನಾಡಗೌಡರು ಇವರಿಗೆ ಬೆನ್ನೆಲುಬಾಗಿ ನಿಂತವರು ಸ್ಥಳೀಯ ಘಟಬಸಪ್ಪ ಲಿಂ. ಮೋಟಗಿ, ವಿಜಾಪುರದ ವಕೀಲರಾದ ಫ.ಗು.ಹಳಕಟ್ಟಿ ಶಿಕ್ಷಣ ಕ್ಷೇತ್ರದ ಸಿದ್ದರಾಮಪ್ಪ ಸೆಟ್ಟಿ ಅವರು. ಶ್ರೀ ಬಸವೇಶ್ವರ ವಿಧ್ಯಾವರ್ಧಕ ಫಂಡಿನಿಂದ ಮೊದಲು ಸ್ಥಾಪಿತವಾದದ್ದು ಸಂಸ್ಕೃತ ಪಾಠಶಾಲೆ. ಬಾಗಲಕೋಟದಲ್ಲಿ ಶಿಕ್ಷಣ ಕ್ರಾಂತಿ ಮಾಡಿದ ಇಂದಿನ ಬಿ.ವಿ.ವಿ.ಎಸ್. ಸಂಘದ ಮೂಲದ ಹೆಸರು "ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘ." ಅದೀಗ 'ವೀರಶೈವ ವಿಧ್ಯಾವರ್ಧಕ ಸಂಘ'ವಾಗಿದೆ. ಇಂದು ವೀರಶೈವರ ಸಭೆ ಸಮಾರಂಭಗಳಿಗೆ ವ್ಯವಸ್ಥೆ ಮಾಡುವವರು ಇದೇ ಬಾಗಲಕೋಟೆ, ವೀರಶೈವ ವಿಧ್ಯಾವರ್ಧಕ ಸಂಘದ ಅಧ್ಯಕ್ಷರಾದ ಚರಂತಿಮಠರು ಸಂಘಕ್ಕೆ ತನು ಮನ ಧನವನ್ನು ನೀಡಿದ ದಿ.ಪಿ.ಎಂ.ನಾಡಗೌಡರ ಹೆಸರನ್ನೇ ಮರೆಮಾಚಲು ವೀರಶೈವ ಶಕ್ತಿಗಳು ಕಾರ್ಯ ಮಾಡುತ್ತಿವೆ. ಈ ಹಿನ್ನೆಲೆಯಲ್ಲಿ ಬಾಗಲಕೋಟೆಯಲ್ಲಿ ಪೂರ್ವಭಾವಿ ಸಭೆ ಮಹತ್ವ ಪಡೆದುಕೊಂಡಿತ್ತು.

ಜಗದ್ಗುರು ಮಾತೆ ಮಹಾದೇವಿಯವರ ಮಠದ ಸ್ವಾಮೀಜಿಗಳು ವಿಜಾಪುರ ನೆರೆಯ ಮಹಾರಾಷ್ಟ್ರದ ಗಡಿಯ ಪಟ್ಟಣಗಳಲ್ಲಿ ಸಂಪರ್ಕ ಸಭೆಗಳನ್ನು ಮಾಡಿ ಜನರಿಗೆ ಲಿಂಗಾಯತ ಧರ್ಮದ ಆಚಾರ ವಿಚಾರ ಸಿದ್ಧಾಂತಗಳ ಬಗ್ಗೆ ಅರಿವು ಮೂಡಿಸಿದ್ದರು. ನಾನು ರ‍್ಯಾಲಿಯ ಹತ್ತು ದಿವಸ ಮೊದಲು ಹೋಗಿ

In Public domain. Digitization Muthulakshmi Research Academy

ವಿಜಾಪುರ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ಅಲ್ಲಿಯ ಸ್ಥಳೀಯ ವಿರಕ್ತಮಠದ ಸ್ವಾಮೀಜಿಗಳು ಮತ್ತು ಸ್ಥಳೀಯ ನಾಯಕರ ನೆರವಿನೊಂದಿಗೆ ಅನೇಕ ಸಣ್ಣ ಸಣ್ಣ ಸಭೆಗಳನ್ನು ಮಾಡಿದ್ದೆ. ವಿಜಾಪುರದ ಸಿಂದಗಿಯಲ್ಲಿ ಇಂದು ಶಾಸಕರಾಗಿರುವ ಶ್ರೀ ಅಶೋಕ ಮನಗೂಳಿಯವರೊಂದಿಗೆ ಜನಸಂಪರ್ಕ ಸಭೆ ಮಾಡಿದ್ದೆವು. ಸಿಂದಗಿ ಪಟ್ಟಣದಲ್ಲಿ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಶ್ರೀ ಚಂದ್ರಶೇಖರ ನಾಗರಬೆಟ್ಟ ಅವರು ತಮ್ಮ ಶಿಕ್ಷಣ ಸಂಸ್ಥೆಗಳಿಗೆ ನಮ್ಮನ್ನು ಆಹ್ವಾನಿಸಿ ಮಕ್ಕಳಿಗೆ ಹಾಗೂ ಅವರ ಪಾಲಕರಿಗೆ ಬಸವಣ್ಣನವರ ಸಾಮಾಜಿಕ ನ್ಯಾಯದ ಬಗ್ಗೆ ಮಾತಾಡಲು ಕೇಳಿಕೊಂಡಿದ್ದರು. ಸಭೆಯನ್ನು ಉದ್ದೇಶಿಸಿ ಮಾತನಾಡಿ ವಿಜಾಪುರ ರ್‍ಯಾಲಿಗೆ ಬರಲು ವಿನಂತಿಸಿಕೊಂಡೆ. ಅಂದೇ ಸಂಜೆ ಅದೇ ತಾಲ್ಲೂಕಿನ ದೊಡ್ಡ ಗ್ರಾಮವಾದ ಕೊರವಾರ ಗ್ರಾಮದಲ್ಲಿ ಸಭೆ ಮಾಡಿದ್ದೆವು. ಸ್ವಗ್ರಾಮದ ನ್ಯಾಯವಾದಿ ಮತ್ತು ಗಡಿನಾಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಅಶೋಕ ಛಾಯಾಗೋಳ ಅವರ ಸಹಾಯ ಸ್ಮರಣೀಯ. ಸಿಂದಗಿ ತಾಲ್ಲೂಕಿನ ನಾಯಕರಾದ ಶ್ರೀ ಸಾಹೇಬಗೌಡ ಪೋಲಿಸ ಪಾಟೀಲ, ನ್ಯಾಯವಾದಿ ಶ್ರೀ ಬಾಬಾಗೌಡ ಪೋಲಿಸ ಪಾಟೀಲರು ಸಹಾಯ ಸಹಕಾರ ನೀಡಿದ್ದರು.

ಅದೇ ತಾಲ್ಲೂಕಿನ ದೇವರ ಹಿಪ್ಪರಗಿಯಲ್ಲಿಯೂ ಸಭೆ ನಡೆಸಿ ವಿಜಾಪುರ ರ್‍ಯಾಲಿಯನ್ನು ಯಶಸ್ವಿಗೊಳಿಸಲು ಕೇಳಿಕೊಂಡೆವು. ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀ ಎನ್.ಆರ್.ಪಾಟೀಲರ ಸಹಕಾರ ಮರೆಯುವಂತಿಲ್ಲ. ದೇವರ ಹಿಪ್ಪರಗಿ ಮತಕ್ಷೇತ್ರದ ಜನರನ್ನು ಸಭೆಗೆ ಕರೆತರುವುದಾಗಿ ಭರವಸೆಯನ್ನಿತ್ತು ಸಭೆಯ ದಿನ ಸ್ವಂತ ಖರ್ಚಿನಿಂದ ಸಾವಿರಾರು ಜನರನ್ನು ವಿಜಾಪುರಕ್ಕೆ ಕರೆತಂದಿದ್ದರು. ಮರುದಿನ ಬಸವಣ್ಣನವರ ಜನ್ಮಸ್ಥಳ ಇಂಗಳೇಶ್ವರಕ್ಕೆ ಹೋಗಿ ಅಲ್ಲಿಯ ವಚನಮಂಟಪ ಕಟ್ಟಿದ ಹಿರಿಯ ಪೂಜ್ಯರನ್ನು ಕಂಡು ಸಭೆಗೆ ಬರಲು ಆಹ್ವಾನ ನೀಡಿದ್ದೆವು. ಬಸವನ ಬಾಗೇವಾಡಿಯಲ್ಲಿ ಹಿರಿಯರಾದ ಹೆಚ್.ವೈ. ಮೇಟಿ ಸರ್ ಅವರ ಮುಂದಾಳತ್ವದಲ್ಲಿ ಸ್ಥಳೀಯ ವಿರಕ್ತಮಠದ ಪೂಜ್ಯರಾದ ಶ್ರೀ ಸಿದ್ಧಲಿಂಗ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಹಿರಿಯರಾದ ಶ್ರೀ ಶಿವನಗೌಡ ಬಿರಾದಾರ, ಡಾ.ಮಡಿಕೇಶ್ವರ, ಶಂಕರಗೌಡ ಬಿರಾದಾರ ಮಾತಾಡಿದರು. ಬಸವನ ಬಾಗೇವಾಡಿಯ ಪುರಸಭಾ ಅಧ್ಯಕ್ಷರಾದ ವೀರಣ್ಣ ಪಟ್ಟಣಶೆಟ್ಟಿಯವರು ಆಗಮಿಸಿ ವಿಜಾಪುರ ರ್‍ಯಾಲಿಗೆ ಬಾಗೇವಾಡಿಯಿಂದ ಬರುವ ಜನರ ಊಟೋಪಚಾರದ ವ್ಯವಸ್ಥೆಯನ್ನು ಮಾಡುವುದಾಗಿ ಹೊರೆ ಹೊತ್ತರು. ಬಸವನ ಬಾಗೇವಾಡಿಯ ಸ್ಥಳೀಯ ಕಾಂಗ್ರೆಸ್ ಶಾಸಕರು ರ್‍ಯಾಲಿಯಿಂದ ದೂರ ಉಳಿದರು. ಅಲ್ಲದೇ ಯಾವುದೇ ಸಹಾಯ ಸಹಕಾರವನ್ನು ಅವರು ನೀಡಲಿಲ್ಲ ಮತ್ತು ರ್‍ಯಾಲಿಗೆ ಬೆಂಬಲಿಸಲಿಲ್ಲ.

In Public domain. Digitization Muthulakshmi Research Academy

ಹೊಸದಾಗಿ ನಿರ್ಮಾಣವಾದ ನಿಡಗುಂದಿ ತಾಲ್ಲೂಕಿನ ಹಿರಿಯ ನಾಯಕರಾದ ರಾಮನಗೌಡ ಪಾಟೀಲರು, ರೇವಡಿ ಸಾಹುಕಾರರು, ವ್ಯಾಪಾರಸ್ಥರಾದ ಹೊಸಮನಿಯವರು, ಇಜೇರಿಯವರು, ಉದ್ಯಮಿ ಕುಂಬಾರ ಅವರು, ಎಸ್.ಎಂ.ಪಟ್ಟಣಶೆಟ್ಟಿಯವರು, ಸಜ್ಜನ ಅವರು, ಸಂಭಾಜಿಯವರು ತುಂಬ ಮುತುವರ್ಜಿಯಿಂದ ರ‍್ಯಾಲಿಗೆ ಕೈ ಜೋಡಿಸುತ್ತೇವೆ ಎಂದು ಭರವಸೆ ನೀಡಿ ತಾಲ್ಲೂಕಿನ ಲಿಂಗಾಯತ ಬಂಧುಗಳಿಗೆ ಲಿಂಗಾಯತ ಧರ್ಮದ ಹೋರಾಟದಲ್ಲಿ ಭಾಗವಹಿಸಲು ಪ್ರೇರೇಪಿಸಿದರು. ನಿಡಗುಂದಿ ಸಭೆಯ ನಂತರ ಮುದ್ದೇಬಿಹಾಳದಲ್ಲಿ ಒಂದು ಸಭೆಯನ್ನು ಹಿರಿಯರಾದ ಬಾಪುಗೌಡ ಪಾಟೀಲ ಸರ್ ಆಯೋಜಿಸಿದ್ದರು. ಸಭೆಗೆ ಬೆಳ್ಳಿ ಬಂಗಾರ ವ್ಯಾಪಾರಸ್ಥರಾದ ರವಿ ಗೂಳಿಯವರು ಆತಿಥ್ಯ ನೀಡಿದ್ದರು. ಸ್ಥಳೀಯರಾದ ಪ್ರಿನ್ಸಿಪಾಲ ಇಟಗಿಯವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತ್ತು. ನಾಗರಬೆಟ್ಟದ ಪಾಟೀಲ ವಕೀಲರು, ಮುತ್ತಣ್ಣ ಗೂಳಿ, ಶ್ರಿಂಗಾರಿ ಗೌಡರು ವೇದಿಕೆಯ ಮೇಲಿದ್ದರು. ಶ್ರಿಂಗಾರಿಗೌಡರು ಬಸವಾಭಿಮಾನಿಗಳು. ಮುದ್ದೇಬಿಹಾಳದಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲುಗೊಳ್ಳುವುದಾಗಿ ಹೇಳಿದ್ದರು. ಅಂದು ಮುದ್ದೇಬಿಹಾಳದಲ್ಲಿ ತಂಗಿ ಮರುದಿನ ತಾಳಿಕೋಟೆಯಲ್ಲಿ ಒಂದು ಸಣ್ಣ ಸಭೆ ಮಾಡಿದ್ದೆವು. ಆ ಸಭೆಗೆ ಸ್ಥಳೀಯ ಮುಖಂಡರಾದ ಗುರಲಿಂಗಪ್ಪ ಕಶೆಟ್ಟಿಯವರು, ಎಂ.ಎಂ.ಪಾಟೀಲರು, ಡಿ.ವ್ಹಿ.ಪಾಟೀಲರು, ಕಾಂಗ್ರೆಸ್ ಮುಖಂಡರಾದ ವಿಧಾನಸಭೆಗೆ ಸ್ಪರ್ಧಿಸಿದ್ದ ಪಾಟೀಲರು ಭಾಗವಹಿಸಿದ್ದರು. ಆ ಸಭೆಯ ನಂತರ ನಾಲತವಾಡದಲ್ಲಿ ಸಭೆಯಲ್ಲಿ ಭಾಗವಹಿಸಿದ್ದೆ. ಆ ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಎಂ.ಎಸ್.ಪಾಟೀಲ ಅಧ್ಯಕ್ಷತೆ ವಹಿಸಿಕೊಂಡಿದ್ದರು. ನಾಲತವಾಡ ದೇಶಮುಖರ ಮನೆತನದವರು ಆಗಮಿಸಿದ್ದರು. ಸ್ಥಳೀಯ ವೀರೇಶ ಇಲಕಲ್ ಪಾದರಸದಂತೆ ಓಡಾಡಿ ಕೆಲಸ ಮಾಡಿದ್ದರು. ಬಾಗೇವಾಡಿ ಬಸವಣ್ಣನವರ ಜನ್ಮಸ್ಥಾನವಲ್ಲ, ಅವರು ಮನಗೂಳಿಯಲ್ಲಿ ಜನಿಸಿದ್ದರು ಎಂಬ ಗೊಂದಲ ಎಬ್ಬಿಸಿದ್ದರು ಬ್ರಿಟಿಷ್ ಇತಿಹಾಸಕಾರರು. ಇದರ ಬಗ್ಗೆ ವ್ಯಾಪಕ ಸಂಶೋಧನೆಗಳಾಗಿ ಮನಗೂಳಿ ಬಸವಣ್ಣ ಮತ್ತು ಬಾಗೇವಾಡಿಯಲ್ಲಿ ಜನಿಸಿದ ಬಸವಣ್ಣ ಬೇರೆ ಬೇರೆಯೆಂದು ನಿರೂಪಿಸಿದರು ಸಂಶೋಧಕರು. ಇಂತಹ ಮನಗೂಳಿಯಲ್ಲಿ ನಾವು ಮನಗೂಳಿ ಗೌಡ್ರು ಎಂದು ಪ್ರಸಿದ್ಧರಾದ ಅಪ್ಪೂಗೌಡ್ರ ಮನೆಯಲ್ಲಿ ಸಭೆ ಮಾಡಿದ್ದೆವು. ೨೫ ಸಾವಿರ ಜನಸಂಖ್ಯೆಯ ಪಟ್ಟಣ ಪಂಚಾಯಿತಿ ಊರು ಮನಗೂಳಿ. ಧರ್ಮಕಾರ್ಯಕ್ಕೆ ಸಹಾಯ ಮಾಡುತ್ತ ಬಂದ ಮನಗೂಳಿಯ ನಾಗರಿಕರು ದೊಡ್ಡ ಸಂಖೆಯಲ್ಲಿ ರ‍್ಯಾಲಿಗೆ ಬರುವುದಾಗಿ ಹೇಳಿದ್ದರು. ಮನಗೂಳಿ ಪಕ್ಕದ ಊರು ಊಕ್ಕಲಿ. ಅಲ್ಲಿಯ ಹಿರಿಯರಾದ ಅಣ್ಣಾಸಾಹೇಬ ಪಾಟೀಲರು ಎಂ.ಬಿ.ಪಾಟೀಲರ ಸಂಬಂಧಿಗಳೂ ಹೌದು. ಇದೇ ಮನೆತನದ ಹೆಣ್ಣುಮಗಳು ದಾನಶೂರ ಲಿಂಗರಾಜ ದೇಸಾಯಿವರ

In Public domain. Digitization Muthulakshmi Research Academy

ಪತ್ನಿ. ಇವರ ಮನೆಗೆ ಭೆಟ್ಟಿ ನೀಡಿ ಸಭೆಗೆ ಬರಲು ವಿನಂತಿಸಿಕೊಂಡಿದ್ದೆವು. ಅಲ್ಲಿರುವ ಪಾಟೀಲ ವಕೀಲರು ನಮ್ಮೊಂದಿಗೆ ಕೈ ಜೋಡಿಸಿದ್ದರು.

ಅಂದು ರಾತ್ರಿ ವಿಜಯಪುರದಲ್ಲಿ ತಂಗಿ ಮರುದಿವಸ ಕೊಲ್ಹಾರ ಪಟ್ಟಣದಲ್ಲಿ ಲಿಂಗಾಯತ ಧರ್ಮ ಜಾಗೃತಿ ಕೆಲಸಕ್ಕೆ ಹೋಗಿದ್ದೆ. ಕೊಲ್ಹಾರ ಇಂದು ತಾಲ್ಲೂಕು ಆಗಿದೆ. ಆ ಊರಿನ ಮೊಸರು ಆ ಭಾಗದಲ್ಲಿ ಪ್ರಸಿದ್ಧ. ಆ ಊರಿನಲ್ಲೊಂದು ದೇಸಗತಿ ಮನೆತನವಿದೆ. ಒಂದು ಕಾಲದಲ್ಲಿ ಸಾವಿರಾರು ಎಕರೆಯ ಭೂ ಒಡೆಯರು. ವಿಜಾಪುರ ಜಿಲ್ಲೆಯ ಒಂದು ದೊಡ್ಡ ಶ್ರೀಮಂತ ಮನೆತನ. ಆ ಮನೆತನದ ಡಾ.ಅಣ್ಣಪ್ಪ ದೇಸಾಯಿಯವರು ನನ್ನ ಆತ್ಮೀಯ ಸ್ನೇಹಿತರು. ಅವರು ಗಾಣಿಗ ಸಮಾಜದವರಾದರೂ ಹಿಂದೂ ಗಾಣಿಗ ಎಂದು ತಮ್ಮ ದಾಖಲೆಗಳಲ್ಲಿ ಕಾಣಿಸಿರಲಿಲ್ಲ. ನಾನು "ಹಿಂದೂ ಗಾಣಿಗರಿಗೆ ಮೀಸಲಾತಿ ಇದೆಯಲ್ಲ" ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಕೇಳಿದ್ದೆ. "ಮೀಸಲಾತಿಗಾಗಿ ಧರ್ಮ ಬಿಟ್ಟವರು ಲಿಂಗಾಯತರು ಹ್ಯಾಂಗ ಆಗತಾರ, ಮೀಸಲಾತಿಗಾಗಿ ಧರ್ಮ ಬಿಡಕಾಗತದ ಏನ್ರಿ ಗೌಡ್ರ" ಎಂದಿದ್ದರು. ಈ ಪುಸ್ತಕ ಬರೆಯುವ ಸಮಯದಲ್ಲಿ ಅವರಿಲ್ಲ. ಬಯಲಲ್ಲಿ ಬಯಲಾಗಿದ್ದಾರೆ. ಆದರೆ ಅವರ ಧರ್ಮಾಭಿಮಾನ ಮಾತುಗಳು ಇಂದು ಜೀವಂತವಾಗಿವೆ, ಬದುಕಿವೆ. ಅವರು ತಮ್ಮೂರಿಂದ ಅಧಿಕ ಸಂಖ್ಯೆಯಲ್ಲಿ ಜನರನ್ನು ತರುವುದಾಗಿ ಹೇಳಿ ನನಗಾಗಿ ತಮ್ಮ ವಾಡೆಯಲ್ಲಿ ಊರಿನ ಪ್ರಮುಖರ ಸಭೆಯನ್ನು ಕೂಡಿಸಿದರು. ಅವರಿಂದ ನನಗೆ ಮಾತು ಕೊಡಿಸಿದ್ದರು. ವಿಜಾಪುರ ಜಿಲ್ಲೆ ನನ್ನ ಜಿಲ್ಲೆ. ನನಗೆ ಅಪಾರವಾದ ಬಂಧು ಬಳಗವಿದೆ. ಪ್ರತಿಯೊಂದು ಮನೆಗೆ ಕರೆ ಮಾಡಿ ಸಮ್ಮೇಳನಕ್ಕೆ ಬರಲು ವಿನಂತಿಸಿಕೊಂಡಿದ್ದೆ. ಕರೆ ಮಾಡಿ ಹೇಳುವುದೇ ಒಂದು ದಿನ ತೆಗೆದುಕೊಂಡಿತ್ತು. ನನ್ನಂತೆ ಅನೇಕರು ದುಡಿದಿದ್ದಾರೆ.

ನಾನೇ ಅತ್ಯಂತ ಕಡಿಮೆ ದುಡಿದಿದ್ದೇನೆ ಎಂದು ಹೇಳುವೆ. ದುಡಿದವರೆಲ್ಲರ ಹೆಸರುಗಳನ್ನು ಇಲ್ಲಿ ಸ್ಥಳಾವಭಾವದಿಂದ ಕಾಣಿಸಲಾಗಿಲ್ಲ. ಅಲ್ಲದೆ ಈ ಪುಸ್ತಕವನ್ನು ಘಟನೆಯ ಆರು ವರ್ಷದ ನಂತರ ಬರೆಯುತ್ತಿದ್ದೇನೆ. ಯಾರದಾದರೂ ಹೆಸರು ದಾಖಲಿಸದಿದ್ದಲ್ಲಿ ಅದು ನನ್ನ ತಪ್ಪು. ನನ್ನ ಮರೆವಿನ ತಪ್ಪು. ವಿಜಾಪುರದ ಸಭೆ ಇನ್ನೆರಡು ದಿನದಲ್ಲಿ ಸೇರಲಿತ್ತು. ಇಲಕಲ್‌ನಲ್ಲಿ ಒಂದು ಪೂರ್ವಭಾವಿ ಸಭೆ. ಪೂಜ್ಯ ಮಹಾಂತ ಅಪ್ಪಗಳು ಉಪಸ್ಥಿತರಿದ್ದರು. ಬಹಳ ಕುಸಿದಿದ್ದರು. ಆರೋಗ್ಯ ತುಂಬಾ ಕೆಟ್ಟಿತ್ತು. ನಾನು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ "ಅಪ್ಪಾಜಿ ನಿಮ್ಮ ಕಾಲಾವಧಿಯಲ್ಲಿ ನಾವು ಸ್ವತಂತ್ರ ಧರ್ಮದ ಮಾನ್ಯತೆ ಪಡೆಯುತ್ತೇವೆ. ನೀವು ನಿಶ್ಚಿಂತೆಯಿಂದ ಇರಿ. ನೀವು ದೂರದಿಂದಲೇ ವಿಜಾಪುರ ಕಾರ್ಯಕ್ರಮ ಯಶಸ್ವಿಯಾಗಲಿ ಎಂದು ಹಾರೈಸಿ" ಎಂದು ಅವರನ್ನು ಕೇಳಿಕೊಂಡಿದ್ದೆ.

In Public domain. Digitization Muthulakshmi Research Academy
ನನ್ನ ಮಾತುಗಳು ಸತ್ಯವಾಗಿದ್ದವು. ಮುಂದೆರಡು ತಿಂಗಳಲ್ಲಿ ರಾಜ್ಯ ಸರಕಾರ ಧರ್ಮಮಾನ್ಯತೆ ನೀಡಿತ್ತು.

ಕಾರ್ಯಕ್ರಮದ ಹಿಂದಿನ ದಿನ ವಿಜಾಪುರಕ್ಕೆ ಡಾ.ಜಾಮದಾರ ಬಂದರು. ಡಾ.ಜಯಣ್ಣ ಅವರೂ ಜೊತೆಗೂಡಿದರು. ವಿಜಾಪುರ ಸಭೆಯ ಸಂಪೂರ್ಣ ಜವಾಬ್ದಾರಿಯನ್ನು ಸಚಿವರಾದ ಎಂ.ಬಿ.ಪಾಟೀಲರು ನಿರ್ವಹಿಸಿದ್ದರು. ಅಂದಿನ ಸಭೆಯ ಯಶಸ್ಸಿನ ಶ್ರೇಯ ದೈತ್ಯ ಸಂಘಟನೆಯ ಶ್ರೇಷ್ಠರಾದ ಅವರಿಗೆ ಮಾತ್ರ ಸಲ್ಲಬೇಕು. ಅಂದಿನ ಸಭೆ ಮರುದಿನ ನಡೆಯಲಿರುವ ಸಭೆಯಲ್ಲಿ ಜವಾಬ್ದಾರಿ ಹಂಚಲು ಸಭೆ ಸೇರಿತ್ತು. ಸ್ವಕ್ಷೇತ್ರವಾದ ಬಬಲೇಶ್ವರ ಕ್ಷೇತ್ರದಿಂದ ಬಂದ ನಾಯಕರು ವಿಜಯಪುರ ನಗರದ ನಾಯಕರನ್ನು ಸೇರಿಕೊಂಡರು. ಸಭೆಯಲ್ಲಿ ಸಣ್ಣ, ಅತಿ ಸಣ್ಣ ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸಿದ್ದರು. ಅವರು ನೀಡುವ ನಿರ್ದೇಶನದಲ್ಲಿ ಕಾಳಜಿ ಇರುತ್ತಿತ್ತು. ಜಯದ ಹಸಿವು ಕಾಣುತ್ತಿತ್ತು.

ವಿಜಯಪುರದಲ್ಲಿ ಲಿಂಗಾಯತ ಜಾಗೃತಿ

ಇತಿಹಾಸ ಪ್ರಸಿದ್ಧ ಆದಿಲ್‌ಶಾಹಿ ಕಾಲದ ಐತಿಹಾಸಿಕ ಕಟ್ಟಡಗಳು ಇಂದು ಕಣ್ಣಿಗೆ ಕಂಡರೆ, ಕಾಣದಿರುವ ಕಟ್ಟಡಗಳು ಅದೆಷ್ಟೋ. ಜಮೀನುಗಳಲ್ಲಿ ಹುದುಗಿಹೋಗಿರುವ ಲಿಂಗಾಯತ ಧರ್ಮದ ಅಡಿಗಲ್ಲುಗಳು ಇದೇ ವಿಜಯಪುರ ಜಿಲ್ಲೆಯವು. ಈ ಧರ್ಮದ ನಿರ್ಮಾತರಾದ ಏಳುನೂರಾ ಎಪ್ಪತ್ತು ಶರಣರಲ್ಲಿ ವಿಜಯಪುರ(ಅವಿಭಜಿತ ವಿಜಾಪುರ) ಜಿಲ್ಲೆಯ ಶರಣ ಶರಣೆಯರ ಸಂಖ್ಯೆ ಮೂವತ್ತೆರಡು! ವಿಜಾಪುರ ನಗರ ಕರ್ನಾಟಕದ ಗಡಿ ಜಿಲ್ಲೆ. ನಗರದ ಉತ್ತರಕ್ಕೆ ಮಹಾರಾಷ್ಟ್ರದ ಗಡಿ ಜಿಲ್ಲೆಯಾದ ಸೋಲಾಪುರ ನಗರವಿದೆ. ದಕ್ಷಿಣಕ್ಕೆ ದೋಣಿ ಮತ್ತು ಕೃಷ್ಣಾ ನದಿಗಳಿವೆ. ವಿಜಾಪುರದಲ್ಲಿಯೂ ಪಕ್ಕದ ಕಲ್ಬುರ್ಗಿಯಂತೆ ಎರಡೇ ಕಾಲಗಳು ಬೇಸಿಗೆ ಮತ್ತು ಅತಿಬೇಸಿಗೆ. ಕೃಷ್ಣಾ ಹಾಗೂ ದೋಣಿ ನದಿಗಳ ತಟದಲ್ಲಿ ಫಲವತ್ತಾದ ಕೃಷಿಗೆ ಸಹಕಾರಿಯಾದ ಎರೆಭೂಮಿ ಇದೆ. ಜಿಲ್ಲೆಯ ಮಧ್ಯಭಾಗದಲ್ಲಿ ತೋಟಗಾರಿಕೆಗೆ ಅನುಕೂಲಕರವಾದ ಮಸಾರಿ ಭೂಮಿಯೂ ಇದೆ. ತೊಗರಿ, ಹೆಸರು, ಸೂರ್ಯಪಾನ, ಶೇಂಗಾ, ದ್ವಿದಳ ದಾನ್ಯಗಳಲ್ಲದೆ ಸಜ್ಜೆ, ನವಣೆ ಇಲ್ಲಿಯ ಮುಂಗಾರಿ ಹಂಗಾಮಿನ ಪ್ರಮುಖ ಬೆಳೆಗಳು. ಇತ್ತೀಚೆಗೆ ನೀರಾವರಿ ಪ್ರದೇಶ ವಿಸ್ತರಣೆಯಿಂದಾಗಿ ತೋಟಗಾರಿಕೆ ಅಭಿವೃದ್ಧಿ ಹೊಂದಿದೆ. ದ್ರಾಕ್ಷಿ, ದಾಳಿಂಬೆ, ನಿಂಬೆ ತೋಟಗಾರಿಕೆಯ ಪ್ರಮುಖ ಫಲಗಳು. ಕೆಲವು ಕ್ಷೇತ್ರಗಳಲ್ಲಿ ಈರುಳ್ಳಿಯೂ ಪ್ರಮುಖ ಬೆಳೆಯಾಗಿದೆ. ಹಿಂಗಾರಿ ಹಂಗಾಮಿನಲ್ಲಿ ಜೋಳ, ಹತ್ತಿ, ಗೋದಿಯನ್ನೂ ಬೆಳೆಯುತ್ತಾರೆ.

ಇಂದಿನ ಬಿಜಾಪುರ ಹಿಂದೆ ತರ್ದವಾಡಿ ನಾಡಾಗಿತ್ತು. ಅಂದಿನ ತರ್ದವಾಡಿ ಗಡಿಗಳೇ ಇಂದಿನ ವಿಭಜಿತ ವಿಜಯಪುರ ಜಿಲ್ಲೆಯ ಗಡಿಗಳು. ಜಿಲ್ಲೆಯಲ್ಲಿ

In Public domain. Digitization Muthulakshmi Research Academy

ಹರಿಯುವ ನದಿಗಳು ಮೂರು. ಭೀಮಾ ಹಾಗೂ ಕೃಷ್ಣಾ ದೊಡ್ಡ ನದಿಗಳು. ಭೀಮಾ ನದಿಯು ರಭಸವಾಗಿ ಹರಿದರೂ ಪ್ರವಾಹದ ಆತಂಕ ಕಡಿಮೆ. ಕಾರಣ ಭೀಮೆಯ ಅಂಚಿನಲ್ಲಿ ಸಾಂಸ್ಕೃತಿಕ ಗ್ರಾಮಗಳು ಆವರಣಗೊಂಡಿದ್ದರೆ, ಕೃಷ್ಣಾ ಶಾಪಗ್ರಸ್ತ ನದಿ ಎನಿಸಿಕೊಂಡಿದೆ. ಕೃಷ್ಣಾ ನದಿಗೆ ಪೆರ್ದೊರೆ, ಕೃಷ್ಣಾವೇಣ್ಣಾ ಅಲ್ಲದೆ 'ಹುಚ್ಚುಹೊಳೆ' ಎಂದೂ ಹೆಸರಿದೆ. ಎಲ್ಲೋ ಬಿದ್ದ ಮಳೆಯ ನೀರು ಮುಂದೆ ಪ್ರವಾಹವಾಗಿ ಹರಿದು ನದಿ ತಟದ ಜನರ ಬದುಕಿಗೆ ಮಾರಕವಾಗಿ ಪರಿಣಮಿಸಿದ ನದಿಗೆ 'ಹುಚ್ಚುಹೊಳೆ' ಎನಿಸಿಕೊಂಡಿದ್ದು ಅಚ್ಚರಿಯೇನಲ್ಲ. ನದಿಯಿಂದ ದೂರವಾದ ಎತ್ತರದ ಪ್ರದೇಶಗಳಲ್ಲಿ ಜನವಸತಿಯ ಕುರುಹುಗಳು ಪ್ರಾಚೀನ ಕಾಲದಿಂದಲೂ ಇವೆ. ಇತಿಹಾಸದ ಪುಟಗಳನ್ನು ತಡಕಾಡಿದಾಗ ಇಂದಿನ ಬಿಜಾಪುರ ಪಟ್ಟಣದ ಕುರುಹುಗಳು ಸಿಗುವವು. ರಾಷ್ಟ್ರಕೂಟರ ಕಾಲದಿಂದ ಕ್ರಿ.ಶ. ೯೭೩ರಲ್ಲಿ ತೈಲಪನು ಈ ಪ್ರದೇಶವನ್ನು ಆಳುತ್ತಿದ್ದನೆಂಬ ಶಾಸನಗಳಿವೆ. ರಾಷ್ಟ್ರಕೂಟರ ಶಾಸನಗಳಿಂದ ಪ್ರಾರಂಭಿಸಿ ದೇವಗಿರಿ ಯಾದವರ ಆಡಳಿತದ ಅಂತ್ಯಕ್ಕೆ ಕನ್ನಡ ಶಾಸನಗಳು ಮಾಯವಾಗುತ್ತವೆ. ನಂತರ ಮಹಮ್ಮದೀಯ ಅರಸರ ಆಡಳಿತ ಈ ನಾಡಿನಲ್ಲಿ. ಮುಸ್ಲಿಂ ಆಳ್ವಿಕೆಯ ಕಾಲದ ಒಂದು ಶಾಸನದಲ್ಲಿ(ಕ್ರಿ.ಶ. ೧೩೨೦) ಬಿಜಾಪುರವನ್ನು ದಕ್ಷಿಣ ವಾರಣಾಸಿ ಎಂದು ಕರೆದು 'ವಿಜಯಾಪುರ' ಎಂಬ ಉಲ್ಲೇಖವಿದೆ. ಈ ನಾಡಿನಲ್ಲಿ ವೀರಯೋಧರೊಂದಿಗೆ ವಿದ್ವಾಂಸರು ವಾಸಿಸಿದ ನಾಡು ಇದಾಗಿತ್ತು. ಏಳನೇ ಶತಮಾನದಲ್ಲಿ ಗಣಿತ ವಿದ್ವಾಂಸ ಭಾಸ್ಕರಾಚಾರ್ಯರು ವಿಜಾಪುರ ಜಿಲ್ಲೆಯವರು. ವಿಷ್ಣುಭಟ್ಟ (ಕ್ರಿ.ಶ. ೧೦೭೯) ಮತ್ತು ಲಕ್ಷ್ಮೀಧರ ಭಟ್ಟೋಪಾಧ್ಯಾಯ ಮೊದಲಾದ ಬ್ರಾಹ್ಮಣ ವಿದ್ವಾಂಸರು ಈ ನಾಡಲ್ಲಿ ಬಾಳಿ ಬದುಕಿದವರು. ವಿಜಯಪುರ ಹನ್ನೆರಡನೆಯ ಶತಮಾನದಲ್ಲಿ ಬಿಜ್ಜಳನ ಅಂಕಿತದ ಪ್ರದೇಶವಾಗಿತ್ತು. ಬಸವಣ್ಣನವರಲ್ಲದೆ ನೆರೆಯ ಸೊನ್ನಲಾಪುರದ ಶರಣ ಸಿದ್ಧರಾಮನ ಪ್ರಭಾವದಿಂದ ಈ ನಾಡು ಶರಣರ ಬೀಡಾಗಿತ್ತು. ಬಸವಣ್ಣನವರು ಇದೇ ಜಿಲ್ಲೆಯಲ್ಲಿ ಜನಿಸಿದ ಕಾರಣವೋ ಅಥವಾ ನೆರೆಯ ಪಟ್ಟಣವಾದ ಸೊನ್ನಲಾಪುರದ ಸಿದ್ಧರಾಮನ ಪ್ರಭಾವವೋ ಈ ಪ್ರದೇಶದಲ್ಲಿ ಶರಣರ ಸಂಖ್ಯೆ ಅಧಿಕ ಇರಬಹುದು. ಬಸವಣ್ಣ ಹಾಗೂ ಅಕ್ಕನಾಗಮ್ಮನ ಜನ್ಮಸ್ಥಳ ಬ.ಬಾಗೇವಾಡಿ ವಿಜಾಪುರ ನಗರದಿಂದ ೫೦ ಕಿ.ಮೀ. ಅಂತರದಲ್ಲಿದೆ. ಮಡಿವಾಳ ಮಾಚಿದೇವ ಮತ್ತು ಮಲ್ಲಿಕಾರ್ಜುನ ದೇವರ ಹುಟ್ಟೂರು ದೇವರ ಹಿಪ್ಪರಗಿಯು ೩೫ ಕಿ.ಮೀ. ಅಂತರದಲ್ಲಿದೆ. ಶೂನ್ಯಸಿಂಹಾಸನದ ಎರಡನೆಯ ಪೀಠಾಧಿಪತಿ ಚೆನ್ನಬಸವಣ್ಣ ಮತ್ತು ಶರಣ ಸಂಗಮೇಶ್ವರದ ಅಪ್ಪಣ್ಣನವರ ಜನ್ಮಸ್ಥಳವು ಕಪ್ಪಡಿಸಂಗಮ. ನುಲಿಯ ಚಂದಯ್ಯನ ಊರು ಶಿವಣಗಿ ೨೦ ಕಿ.ಮೀ. ಹತ್ತಿರದಲ್ಲಿದೆ. ವೀರಗೊಲ್ಲಾಳನ ಗೊಲಗೇರಿ ೫೦ ಕಿ.ಮೀ. ಅಂತರದಲ್ಲಿದೆ. ಹಡಪದ ಅಪ್ಪಣ್ಣ ಮತ್ತು ತಾಯಿ ಲಿಂಗಮ್ಮಳ ಊರು

In Public domain. Digitization Muthulakshmi Research Academy
ಮಸಬಿನಾಳ ೩೫ ಕಿ.ಮೀ. ಅಂತರದಲ್ಲಿದೆ. ಇಂಡಿಯ ಶರಣ ಶಾಂತಯ್ಯನ ಜನ್ಮಸ್ಥಾನ ಇಂಡಿ ಪಟ್ಟಣ ೬೦ ಕಿ.ಮೀ. ಅಂತರದಲ್ಲಿದೆ. ಶರಣ ನಿರ್ವಾಣ ಸಾರಂಗದೇವನ ಸ್ವಂತೂರು ವಿಜಾಪುರ ಪಟ್ಟಣವೆ. ಶಿವಯೋಗಿ ಮಲ್ಲರಸನ ಜನ್ಮಭೂಮಿ ವಿಜಾಪುರ ಜಿಲ್ಲೆಯ ಐಹೊಳೆಯು ವಿಜಾಪುರದಿಂದ ೧೦೦ ಕಿ.ಮೀ. ಅಂತರದಲ್ಲಿದೆ. ಶಿವದೇವ ಜನಸಿದ ಕಪ್ಪಡಿ ಸಂಗಮವು ೮೦ ಕಿ.ಮೀ. ದೂರದಲ್ಲಿದೆ. ಇನ್ನೊಬ್ಬ ಶರಣ ಶಿವದೇವಯ್ಯನ ತಾಳಿಕೋಟೆ ೮೦ ಕಿ.ಮೀ. ಅಂತರದಲ್ಲಿದೆ. ಇಂದು ಜಾಗೃತ ಸ್ಥಾನವೆಂದು ಕರೆಸಿಕೊಳ್ಳುವ ಶರಣೆ ದಾನಮ್ಮ ದೇವಿಯ ಹುಟ್ಟೂರು ವಿಜಯಪುರದ ಹತ್ತಿರದ ಉಮರಾಣಿ. ಗೋರಖನಾಥನ ಜನ್ಮ ಮತ್ತು ವಾಸಸ್ಥಳ ಐತಿಹಾಸಿಕ ಕ್ಷೇತ್ರವಾದ ಪಟ್ಟದಕಲ್ಲು. ಹಾವಿನಹಾಳ ಕಲ್ಲಯ್ಯ ಶರಣರು ಜನಿಸಿದ್ದು ವಿಜಾಪುರ ನಗರದ ಹತ್ತಿರದ ಹಾವಿನಾಳ. ಇಳಿಹಾಳ ಬೊಮ್ಮಯ್ಯ ವಿಜಾಪುರದ ಅವಿಭಜಿತ ಜಿಲ್ಲೆಯ ಬಾಗಲಕೋಟೆ ಹತ್ತಿರದ ಇಳಿಹಾಳದವರು. ಶರಣ ಚಂದಿಮರಸ ಮತ್ತು ಶರಣ ನಿಜಗುಣಯೋಗಿ ಚಿಮ್ಮಲಿಗೆಯವರು. ಶಂಕರ ದಾಸಿಮಯ್ಯನವರು ಹುನಗುಂದ ತಾಲ್ಲೂಕಿನ ಕಂದಗಲ್ಲಿನವರು. ಕೇವೂರಿನ ಬೊಮ್ಮಯ್ಯ ವಿಜಾಪುರದ ಹತ್ತಿರದ ಕೇವೂರಿನವರು. ಇಷ್ಟೊಂದು ಶರಣರು ಜನಿಸಿದ ನಾಡು ಇದೇ ವಿಜಾಪುರ ಜಿಲ್ಲೆ. ಇವರೆಲ್ಲರೂ ವಿಜಯಪುರದ ಸುತ್ತಮುತ್ತಲಿನವರೆ. ಲಿಂಗಾಯತರಿಗೆ ಚೇತೋಹಾರಿ ಕ್ಷೇತ್ರಗಳಾಗಬೇಕಿದ್ದ ಈ ಕ್ಷೇತ್ರಗಳು ಇಂದು ಹಾಳುಕೊಂಪೆಗಳಾಗಿವೆ.

ಸಭೆಯ ಪೂರ್ವತಯಾರಿ

ಎಂಟು ಕಡೆಂಯು ಪ್ರಸಾದದ ವ್ಯವಸ್ಥೆಯುನ್ನು ಎಂಟು ಜನ ಮುಖಂಡರಿಗೆ ವಹಿಸಲಾಯಿತು. ನಗರ ಸೌಂದರ್ಯೀಕರಣ ಒಬ್ಬರಿಗೆ ವಹಿಸಲಾಯಿತು. ಸಭೆ ನಡೆಯುವ ಸ್ಥಳದ ಮೇಲ್ವಿಚಾರಣೆಗೆ ಇನ್ನೂರು ಹುಡುಗರ ಪಡೆಯನ್ನು ತಯಾರಿಸಿ ಎಂದು ಸೂಚನೆ ನೀಡಿದರು. ಸಭೆಗೆ ಆಗಮಿಸಿದ್ದ ಇಸ್ಲಾಂ ಸಂಘಟನೆಗಳು ನೀರಿನ ವ್ಯವಸ್ಥೆ ಮಾಡುವುದಾಗಿ ತಿಳಿಸಿದವು. ಜೈನರು ನೀರು ಹಣ್ಣುಹಂಪಲು ನೀಡಲು ಮಹಾತ್ಮ ಗಾಂಧಿ ರಸ್ತೆಯಲ್ಲಿ ಚಿಕ್ಕ ಚಿಕ್ಕ ಸ್ಟಾಲ್ ಹಾಕುತ್ತೇವೆಯೆಂದರು. ಸ್ಥಳೀಯ ಸಚಿವರ ಪ್ರಭಾವ ಎದ್ದು ಕಾಣುತ್ತಿತ್ತು. ಜನ ಅವರ ಕಣ್ಣ ಸನ್ನೆಗಾಗಿ ಕಾಯುತ್ತಿತ್ತು. ಅವರು ಇಚ್ಛೆಗಳು ತಕ್ಷಣ ಕಾರ್ಯರೂಪಕ್ಕೆ ಬರುತಿದ್ದವು. ವಿಜಾಪುರ ಜಿಲ್ಲೆಯ ರಾಜಕೀಯ ನಾಯಕರ ನಂಟು ನನಗೆ ಚಿಕ್ಕಂದಿನಿಂದಲೂ ಇದೆ. ದಿವಂಗತ ಪಿ.ಎಂ.ನಾಡಗೌಡರು ತುಂಬ ಪ್ರಭಾವಶಾಲಿ ನಾಯಕರಾಗಿದ್ದರು ಎಂದು ಹಿರಿಯರು ಹೇಳಿದ್ದು ಕೇಳಿದ್ದೆ. ಆದರೆ ಅಂದು ಎಂ.ಬಿ.ಪಾಟೀಲರ ಪ್ರಭಾವ ಕಣ್ಣಾರೆ ಕಾಣುತ್ತಿದ್ದೆ. ಅಂದಿನ ಸಿದ್ದರಾಮಯ್ಯನವರ ಸರಕಾರದಲ್ಲಿ ಅತ್ಯಂತ ಪ್ರಭಾವಿ ಸಚಿವ ಎಂ.ಬಿ.ಪಾಟೀಲರಾಗಿದ್ದರು. ಶ್ಯಾಡೋ

In Public domain. Digitization Muthulakshmi Research Academy
ಸಿ.ಎಂ. ಎಂದು ಸಂಪುಟದ ಸಹೋದ್ಯೋಗಿಗಳು, ಶಾಸಕರು, ಕಾಂಗ್ರೆಸ್ ಪಕ್ಷದ ನಾಯಕರು ಅವರನ್ನು ಕರೆಯುತ್ತಿದ್ದರು. ಅವರ ಕಾರ್ಯವೈಖರಿ ಹತ್ತಿರದಿಂದ ನೋಡುವ ಅವಕಾಶ ಸಿಕ್ಕಿತ್ತು. ಜನ ಹೇಳುತ್ತಿರುವುದು ಸತ್ಯ ಎನಿಸಿತ್ತು.

ಮನಗೂಳಿ ರಸ್ತೆ, ತೊರವಿ ರಸ್ತೆ, ಸೊಲಾಪುರ ರಸ್ತೆ, ಇಂಡಿ ರೋಡ್, ಸಿಂದಗಿ ರಸ್ತೆ, ಬಾಗಲಕೋಟೆ ರಸ್ತೆಗಳು ವಿಜಾಪುರ ನಗರ ಒಳಸೇರುವ ಸ್ಥಳದಲ್ಲಿ ಸಾವಿರ ಸಾವಿರ ಜನರಿಗೆ ಪ್ರಸಾದದ ವ್ಯವಸ್ಥೆ ಆಗಿತ್ತು. ಸಿರಾ, ಉಪ್ಪಿಟ್ಟು ಬೆಳಗಿನ ಉಪಾಹಾರಕ್ಕೆ. ಮಧ್ಯಾಹ್ನದ ಪ್ರಸಾದದಲ್ಲಿ ಜೋಳದ ರೊಟ್ಟಿ, ಕಾಳಿನ ಪಲ್ಯ, ಸೇಂಗಾ ಹಿಂಡಿ, ಮೊಸರು, ಅನ್ನ ಸಾಂಬಾರು ಹಾಗೂ ಶಿರಾ ಊಟದ ಮೆನು ಇತ್ತು. ಪರ ಊರುಗಳಿಂದ ಬಂದ ಜನರು ಅಲ್ಲಿ ಪ್ರಸಾದ ಸ್ವೀಕರಿಸಿ ಒಳಬರಬೇಕಿತ್ತು. ಯಾವ ಊರು, ಎಷ್ಟು ಜನ, ಗಾಡಿಯ ವಿವರವನ್ನು ದಾಖಲಿಸಿಕೊಳ್ಳುವ ವ್ಯವಸ್ಥೆಯನ್ನು ಸಚಿವರ ಆಪ್ತರಾದ ಮಹಾಂತೇಶ ಬಿರಾದಾರ ಅವರ ಮುಂದಾಳತ್ವದಲ್ಲಿ ನಡೆಯುತ್ತಿತ್ತು. ಅವರ ಹಿಂದಿರುವ ಸಾವಿರಾರು ಕಾರ್ಯಕರ್ತರ ದೊಡ್ಡ ಪಡೆ ನಮ್ಮನ್ನು ವಿಸ್ಮಯಗೊಳಿಸಿತ್ತು.

ಹಿಂದಿನ ದಿನ ಫ.ಗು.ಹಳಕಟ್ಟಿ ಭವನದಲ್ಲಿ ಪತ್ರಿಕಾಗೋಷ್ಠಿ. ಅದರಲ್ಲಿ ಕೂಡಲಸಂಗಮದ ಶ್ರೀಗಳು, ಡಾ.ಜಾಮದಾರ, ನಾನು, ಡಾ.ಜಯಣ್ಣ ಉಪಸ್ಥಿತರಿದ್ದೆವು. ಅಂದಿನ ಪತ್ರಿಕಾಗೋಷ್ಠಿಯಲ್ಲಿ ಲಿಂಗಾಯತ ಧರ್ಮದ ದಾಖಲೆಗಳಾದ ಮೈಸೂರು ಸಂಸ್ಥಾನದ ಜನಗಣತಿ ದಾಖಲೆ, ಬಾಂಬೆ ಹಾಗೂ ಮದ್ರಾಸ್ ಪ್ರೆಸಿಡೆನ್ಸಿಗಳಲ್ಲಿ ಲಿಂಗಾಯತ ಧರ್ಮದ ಜನಗಣತಿ ದಾಖಲೆಗಳನ್ನು ಮಾಧ್ಯಮಗಳಿಗೆ ನೀಡಲಾಯಿತು. ಎರಡನೆಯ ಮಹಾಯುದ್ಧದಲ್ಲಿ ಲಿಂಗಾಯತ ಬ್ರಿಗೇಡ್ ಸ್ಥಾಪನೆ ಹಾಗೂ ಅಂದಿನ ಹೋರಾಟದ ವಿವರ ನೀಡಿದೆವು.

ವಿಜಾಪುರದ ಲಿಂಗಾಯತ ಧರ್ಮ ಅಲ್ಪಸಂಖ್ಯಾತ ಮಾನ್ಯತೆಗಾಗಿ ಸೇರಿದ ಸಭೆಯನ್ನು ಇಂದಿನ ಅಂಬೇಡ್ಕರ್ ಮೈದಾನದಲ್ಲಿ ಏರ್ಪಡಿಸಲಾಗಿತ್ತು. ವಿಜಾಪುರದ ಮಧ್ಯಭಾಗದಲ್ಲಿ ಈ ಸ್ಥಳವು ಸ್ಟೇಶನ್ ರೋಡ್‌ನಲ್ಲಿ ದರ್ಬಾರ್ ಹೈಸ್ಕೂಲ್ ಎದುರುಗಡೆ ಇದೆ. ನಾವು ಪುಟ್ಟ ಮಕ್ಕಳಿದ್ದಾಗ ಈ ಮೈದಾನಕ್ಕೆ ರಾಣಿ ಬಗೀಚ ಎಂದು ಕರೆಯುತ್ತಿದ್ದರಂತೆ. ಅದನ್ನು ನೋಡಲು ಜನ ಹಳ್ಳಿಗಳಿಂದ ಬರುತ್ತಿದ್ದರಂತೆ. ಅದೀಗ ಆಟದ ಮೈದಾನವಾಗಿದೆ. ಇದು ರಾಜಕೀಯ ಪಕ್ಷಗಳ ಮೇಲಾಟಕ್ಕೆ ವೇದಿಕೆಯನ್ನು ನೀಡುತ್ತದೆ. ಎಂದಾದರೊಮ್ಮೆ ಇಲ್ಲ ಪಂದ್ಯಾಟಗಳು ನಡೆಯುತ್ತವೆ(sport meet). ಮೈದಾನದಲ್ಲಿ ಒಂದು ಲಕ್ಷ ಜನ ಸೇರಲು ಅವಕಾಶ ಇದೆಯಂತೆ. ನಾವು ಎರಡುವರೆ ಮೂರುಲಕ್ಷ ಲಕ್ಷ ಜನ ಬರುವ ನಿರೀಕ್ಷೆ ಇಟ್ಟುಕೊಂಡಿದ್ದೆವು. ಈ ಮೈದಾನದ ಆಚೆ ವಿಶಾಲವಾಗಿ ಹರಡಿದ ದರ್ಬಾರ್ ಹೈಸ್ಕೂಲ್ ಗ್ರೌಂಡ್ ಇದೆ. ಪಕ್ಕದಲ್ಲಿ

In Public domain. Digitization Muthulakshmi Research Academy
ನೂರು ಅಡಿ ಅಗಲದ ರಸ್ತೆಗಳಿವೆ(ಸ್ಟೇಶನ್ ರೋಡ್, ಶಾಪೇಟಿ ರೋಡ್). ಇವೆಲ್ಲವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವೇದಿಕೆ ನಿರ್ಮಾಣ ಮಾಡಲು ಆದೇಶ ನೀಡಿದ್ದರು ಸಚಿವ ಪಾಟೀಲರು. ಬೃಹತ್ ವೇದಿಕೆ ನಿರ್ಮಾಣವಾಗುತ್ತಿತ್ತು. “ನಾನ್ನೂರು ಜನ ಪ್ರಮುಖರು ವೇದಿಕೆಯನ್ನು ಅಲಂಕರಿಸಲಿದ್ದಾರೆ. ಅವರಿಗಾಗಿ ಒಳ್ಳೆಯ ಕುರ್ಚಿಗಳನ್ನು ವ್ಯವಸ್ಥೆ ಮಾಡಿ” ಎಂದು ಕಾಂಟ್ರಾಕ್ಟರ್ ಭಾಗವಾನ ಅವರಿಗೆ ನಿರ್ದೇಶನ ನೀಡುತ್ತಲಿದ್ದರು ಸ್ಥಳೀಯ ನಾಯಕರು. ಸಚಿವರೊಂದಿಗೆ ಸ್ಥಳ ಪರಿಶೀಲನೆ ಮಾಡಿದೆವು. ಕೊನೆಗಳಿಗೆಯಲ್ಲಿ electronic display ಬೋರ್ಡನ್ನು ವೇದಿಕೆಯ ಹಿಂಬದಿಗೆ ಜೋಡಿಸುವ ಸಲಹೆ ಬಂತು. ‘ಎಸ್ ಮಾಡಿರಿ’ ಎಂದರು ಸಚಿವರು. ಅದರೆ ಅದು ಫೇಲ್ಯೂವರ್ ಎಂದು ಸಭೆ ಆರಂಭವಾದ ನಂತರ ತಿಳಿಯಿತು. ಕಾರಣ ವೇದಿಕೆ ಪೂರ್ವಕ್ಕೆ ಮುಖ ಮಾಡಿತ್ತು. ಸೂರ್ಯನ ಬಿಸಿಲು ವೇದಿಕೆ ಮೇಲಿದ್ದವರ ಮುಖದ ಮೇಲೆ ಬೀಳುತ್ತಿತ್ತು. electronic display ಬೋರ್ಡಿನ ಮೇಲೆಯೂ ಸೂರ್ಯನ ಕಿರಣಗಳು ಬೀಳುತ್ತಿದ್ದವು. ಕಾರಣ ಕಾರ್ಯಕ್ರಮದ imageಗಳು ಬ್ಲರ್ ಆಗಿ ಕಾಣುತ್ತಲಿದ್ದವು. ಕಾರ್ಯಕ್ರಮದ ನಿರೂಪಣೆ ಮಾಡುವ ವಿಚಾರವಾಗಿ ಸಣ್ಣ ಭಿನ್ನಾಭಿಪ್ರಾಯವಾಗಿತ್ತು ಎಂದು ಸಭೆಯ ನಂತರ ತಿಳಿಯಿತು.

ಸಭೆಯ ಹಿಂದಿನ ದಿವಸ ಮಹಾತ್ಮ ಗಾಂಧಿ ರೋಡಿನಲ್ಲಿರುವ ಎಲ್ಲ ವೃತ್ತಗಳನ್ನು ಶೃಂಗಾರ ಮಾಡಿದ್ದರು. ಸೀರಿಯಲ್ ಸೆಟ್‌ಗಳಿಂದ ವೃತ್ತಗಳು ಜಗಮಗಿಸುತ್ತಿದ್ದವು. ರಸ್ತೆಯ ಮಧ್ಯದ ವಿದ್ಯುತ್ ಕಂಬಗಳಿಗೆ ನಾಯಕರ ಆಳೆತ್ತರದ ಕಟೌಟ್‌ಗಳನ್ನು ಕಟ್ಟಲಾಗಿತ್ತು. ಕಟೌಟ್‌ಗಳಲ್ಲಿದ್ದ ಎಲ್ಲ ನಾಯಕರು ಚುನಾವಣೆ ಸಮೀಪಿಸುತ್ತಿದ್ದಂತೆ ಹೋರಾಟದ ಹಾದಿಯನ್ನು ಬಿಟ್ಟು ಚುನಾವಣೆಯಲ್ಲಿ ಗೆಲ್ಲಲು ಲಿಂಗಾಯತರು ವೀರಶೈವರು ಒಂದು ಎಂದು ವೀರಶೈವ ಲಿಂಗಾಯತರನ್ನು ಬೆಂಬಲಿಸಿ ಚುನಾವಣೆ ಎದುರಿಸಿದ್ದರು. ಅವರಲ್ಲಿ ಕೆಲವರು ಸೋತರು. ‘ನನಗೆ ಅಗಸರ ನಾಯಿಯ’ ನೆನಪಾಗುತ್ತದೆ ಇಂದಿಗೂ ಕೂಡ. ಇರಲಿ. ಹೋರಾಟಪಕ್ಷ ರಾಜಕೀಯದತ್ತ ಹೊರಳುತ್ತದೆ ಎಂಬ ಅಳುಕು ಪ್ರಾರಂಭವಾಗಿತ್ತು. ಬಸವಭಕ್ತರಿಗೆ ರಾಜಕೀಯ ನಾಯಕರ ಶ್ರೀರಕ್ಷೆ ಬೇಕಾಗಿತ್ತು. ಹಿರಿಯ ಪತ್ರಕರ್ತ ಡಿ.ಉಮಾಪತಿಯವರ ಒಂದು ಸಂದರ್ಶನದಲ್ಲಿ ಬಾಗಲಕೋಟೆಯ ಯುವಕನ ಉತ್ತರ ನಮ್ಮೆಲ್ಲರ ಭಾವನೆಯ ಪ್ರತೀಕದಂತಿದೆ. “ರಾಜಕಾರಣಿಗಳು ಇಲ್ಲದೇ ಹೋಗಿದ್ದರೆ ಈ ಚಳುವಳಿ ಇಷ್ಟು ವೇಗದಿಂದ ವ್ಯಾಪಕವಾಗುತ್ತಿರಲಿಲ್ಲ. ಧರ್ಮ ಮತ್ತು ರಾಜಕಾರಣ ಪರಸ್ಪರ ಕೂಡಿದ್ದು ಈ ಚಳುವಳಿಗೆ ‘ಪೂರಕವೇ ವಿನಾ ಮಾರಕ ಅಲ್ಲ.’ ಕಳೆದ ಮೂವತ್ತು ವರ್ಷಗಳಿಂದ ನಡೆದುಕೊಂಡು ಬಂದಿರುವ ಈ ಚಳವಳಿಗೆ ಬಲ ಬಂದಿದ್ದೇ

In Public domain. Digitization Muthulakshmi Research Academy

ರಾಜಕಾರಣ ಪ್ರವೇಶದಿಂದ"[6] ಇಂತಹ ಸಂದಿಗ್ಧ ಪರಿಸ್ಥಿತಿ ಬರಬಾರದೆಂದು ನಾನು ಶರಣರ ಆಳೆತ್ತರದ ಕಟೌಟ್‌ಗಳನ್ನು ಡಾ.ನಾಲವಾಡರ ಸಹಾಯದಿಂದ ಹುಬ್ಬಳ್ಳಿಯಲ್ಲಿ ಹಾಕಿಸಿದ್ದೆ. ಆದರೆ ವಿಜಾಪುರದಲ್ಲಿ ನಾಯಕರ ಭಾವಚಿತ್ರಗಳನ್ನು ಹಾಕುವ ವಿಷಯ ನಮಗೆ ತಿಳಿದಿರಲಿಲ್ಲ. ಇರಲಿ, ಅದೇನೂ ದೊಡ್ಡ ವಿಷಯವಲ್ಲ. ನಾವು ನಗರಪ್ರದಕ್ಷಿಣೆ ಮಾಡುತ್ತಲಿದ್ದೆವು. ಗಾಂಧಿ ರಸ್ತೆಯನ್ನು ಸ್ವಚ್ಛಗೊಳಿಸಿ ನೀರು ಸಿಂಪಡಿಸಲಾಗಿತ್ತು. ನಗರವು ನವವಧುವಿನಂತೆ ಶೃಂಗಾರಗೊಂಡಿತ್ತು. ನಮ್ಮ ವಾಹನದ ಎದುರಿಗೆ ಮಹಾಂತೇಶನ ಬಿರಾದಾರ ವಾಹನ ಬರುತ್ತಿತ್ತು. ಸಂತೋಷ ವ್ಯಕ್ತಪಡಿಸಲು ಕೆಳಗಿಳಿದೆ. "ವಿಜಾಪುರದಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿದೆ. ವೃತ್ತಗಳಲ್ಲಿ ಸಿಹಿಕಬ್ಬನ್ನು ಕಟ್ಟಿದ್ದಾರೆ. ಬಾಳೆದಿಂಡುಗಳನ್ನು ಕಟ್ಟಿದ್ದರೆ ಇನ್ನಷ್ಟು ಶೃಂಗಾರವಾಗುತ್ತಿತ್ತು" ಎಂದು ಸಣ್ಣ ಸಲಹೆಯೊಂದಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದೆ. ಮರುದಿನ ಸಭೆಗೆ ಹೋಗುವ ಸಮಯದಲ್ಲಿ ಬಾಳೆಗೊನೆಗಳಿರುವ ಬಾಳೆದಿಂಡುಗಳು ವಿಜಾಪುರದ ಸಮಸ್ತ ಸರ್ಕಲ್‌ಗಳನ್ನು ಅಲಂಕರಿಸಿದ್ದವು. 'ಬೇಷ್ ಬಿರಾದಾರ ಮಹಾಂತೇಶ' ಎಂದು ಮನಸ್ಸಿನಲ್ಲಿ ಅವರನ್ನು ವಂದಿಸಿದ್ದೆ.

ಬಿ.ಎಲ್.ಡಿ. ಸಂಸ್ಥೆಯ ಎನ್.ಆರ್.ಐ. ಗೆಸ್ಟಹೌಸನಲ್ಲಿ ನಮ್ಮ ವಾಸ್ತವ್ಯವಿತ್ತು. ಬಿಜಾಪುರದಲ್ಲಿ ಸಾಮಾನ್ಯವಾಗಿ ಸಚಿವರು ಅಲ್ಲಿಯೆ ಸಭೆಮಾಡುವರಂತೆ. ಬೆಳಗ್ಗೆದ್ದು ಬೇಗನೆ ಹಾಸ್ಟೆಲ್ಲಿಗೆ ಬಂದಿದ್ದರು. ಕೊನೆಯ ಸುತ್ತಿನ ತಯಾರಿಯ ಬಗ್ಗೆ ಚರ್ಚಿಸಲು ನಮ್ಮನ್ನು ಕರೆದರು.. ಹುಬ್ಬಳ್ಳಿಯ ಘಟನೆ ಮರುಕಳಿಸದಂತೆ ತಡೆಯುವುದು ನಮ್ಮ ಉದ್ದೇಶವಾಗಿತ್ತು. ಮಾತಿನ ಬರದಲ್ಲಿ ಸಚಿವರು ಒಂದು ಅವಮಾನಕರ ಶಬ್ದ ನನ್ನನ್ನು ಘಾಸಿಗೊಳಿಸಿತ್ತು. ಆದರೆ ಅದು ಅವರ ಹೃದಯದಿಂದ ಬಂದ ಮಾತು ಆಗಿರಲಿಲ್ಲವೆಂದು ನಂತರ ತಿಳಿಯಿತು.

ಸಭೆ ಹನ್ನೊಂದು ಗಂಟೆಗೆ ಡಾ. ಅಬೇಡ್ಕರ್ ಮೈದಾನದಲ್ಲಿ ನಿಗದಿಯಾಗಿತ್ತು. ಸ್ಥಳೀಯ ಯುವಕರು ಸಚಿವರನ್ನು ಬೈಕ ಮೇಲೆ ಕರೆದುಕೊಂಡು ಹೋಗಲು ನಿಶ್ಚಯಿಸಿದ್ದರು. ಆ ಕಾರಣ ಮೋಟರ್ ಬೈಕ್ ರ್ಯಾಲಿಯನ್ನು ಆಯೋಜಿಸಿದ್ದರು. ಅದು ಬಿ.ಎಲ್.ಡಿ.ಯ ಆಟದ ಮೈದಾನದಿಂದ ಅಂಬೇಡ್ಕರ ಮೈದಾನ ತಲುಪಲಿತ್ತು. ಸಚಿವರು ಬೈಕ ರ್ಯಾಲಿಯಲ್ಲಿ ಬರಲಿದ್ದರು. ಆಗಲೇ ಸಮಯ ಹನ್ನೊಂದು ಘಂಟೆಯಾಗಿತ್ತು. ಸಮಯದ ಪರಿಪಾಲನೆ ಮಾಡುವ ನಾನು "ಬೇಗ ಪ್ರಾರಂಭ ಮಾಡಿರಿ" ಎಂದೆ. ಸಂಘಟಕರು ನಿರೀಕ್ಷಿಸಿದಷ್ಟು ಬೈಕುಗಳು ಅಲ್ಲಿ ಸೇರಿರಲಿಲ್ಲವಂತೆ. ಸಾವಿರಾರು ಗಾಡಿಗಳಿಗೆ ಬೆಳಗ್ಗೆ ಪೆಟ್ರೋಲ್ ತುಂಬಿಸಿಕೊಂಡು ಹೋದವರ ಅರ್ಧದಷ್ಟೂ ಬೈಕುಗಳು ಅಲ್ಲಿರಲಿಲ್ಲ. ಸಚಿವರ ಎದರುಗಡೆ ಸಂಘಟಕರು ಅವಮಾನ ತಪ್ಪಿಸಿಕೊಳ್ಳಲು ಪರದಾಡುತ್ತಿದ್ದರು. ನನಗೆ ವಿಷಯ ಸರಿಕಾಣಲಿಲ್ಲ. ಕಾರನ್ನೇರಿ ಸಭೆ ನಡೆಯಲಿರುವ ಡಾ.ಅಂಬೇಡ್ಕರ್ ಮೈದಾನದತ್ತ ಹೊರಟೆ.

In Public domain. Digitization Muthulakshmi Research Academy

ದೂರದೂರಕ್ಕೂ ಕಣ್ಣಿಗೆ ಕಾಣುವಷ್ಟು ಜನರು ಬಿಸಿಲನ್ನು ಲೆಕ್ಕಿಸದೆ ಸಭೆಯಲ್ಲಿತುಂಬಿದ್ದರು. ಡಾ. ಅಂಬೇಡ್ಕರ ಮೈದಾನ, ದರ್ಬಾರ ಹೈಸ್ಕೂಲ ಮೈದಾನವಲ್ಲದೆ ಸ್ಟೇಶನ್ ರಸ್ತೆಯಲ್ಲಿಯೂ ಜನ ತುಂಬಿದ್ದರು. ವೇದಿಕೆಯ ಪಕ್ಕದ ಶಾಪೇಟಿ ರಸ್ತೆಯೂ ತುಂಬಿ ಹೋಗಿತ್ತು.. ೪೦೦Xೞ೦ ಅಳತೆಯ ವೇದಿಕೆಗೆ ವಚನ ಪಿತಾಮಹ ಫ.ಗು. ಹಳಕಟ್ಟಿ ಎಂದು ನಾಮ ಫಲಕ ಹಾಕಿದ್ದರು. ವೇದಿಕೆಯ ಮೇಲು ಹೊದಿಕೆಯನ್ನು ಹಾಕಿರಲಿಲ್ಲ. ಬಿಸಿಲು ಚುರುಗುಟ್ಟುತ್ತಿತ್ತು. ವೇದಿಕೆಯ ಮೇಲೆ ಉಪಸ್ಥಿತರಿದ್ದರು ನಾಡಿನ ಪ್ರಮುಖ ವಿರಕ್ತ ಮಠಾಧೀಶರು. ಅವರಲ್ಲಿ ಪ್ರಮುಖರಾದವರೆಂದರೆ ಮಹಾರಾಷ್ಟ್ರದ ಅಹ್ಮದಪುರದ ಶ್ರೀಗಳಾದ ಶತಾಯುಷಿ ಶ್ರೀಶಿವಾಚಾರ್ಯ ಮಹಾಸ್ವಾಮೀಜಿಯವರು. ಗದುಗಿನ ತೋಂಟದಾರ್ಯ ಮಠದ ಜಗದ್ಗುರುಗಳಾದ ಶ್ರೀ ಸಿದ್ದಲಿಂಗಸ್ವಾಮೀಜಿಯವರು, ಬೆಳಗಾವಿ ರುದ್ರಾಕ್ಷಿಮಠದ ಶ್ರೀ ಸಿದ್ಧರಾಮ ಸ್ವಾಮೀಜಿಯವರು, ಕೂಡಲಸಂಗಮದ ಶ್ರೀಬಸವಜಯಮೃತ್ಯುಂಜಯ ಸ್ವಾಮಿಗಳು, ಮುಂಡರಗಿಮಠದ ಶ್ರೀ ನಿಜಗುಣಾನಂದ ಸ್ವಾಮಿಗಳು, ಮಾತೆ ಮಹಾದೇವಿಯವರು, ಇಂಗಳೇಶ್ವರದ ಶ್ರೀಗಳು ವಿಜಾಪುರ ಜಿಲ್ಲೆಯ ಅನೇಕ ಮಠಾಧೀಶರು ವೇದಿಕೆಯನ್ನು ಅಲಂಕರಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಎಂದಿನಂತೆ ಶ್ರೀ ಬಸವರಾಜ ಹೊರಟ್ಟಿಯವರು ವಹಿಸಿಕೊಂಡಿದ್ದರು. ಅವರ ಪಕ್ಕದಲ್ಲಿ ಕರ್ನಾಟಕ ಸರಕಾರದ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ, ವಿನಯ ಕುಲಕರ್ಣೀಯವರಿದ್ದರು., ಮೊದಲ ಬಾರಿಗೆ ದಲಿತ ಸಮಾಜದ ನಾಯಕರೊಬ್ಬರು ನಮ್ಮ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದರು. ಅವರು ಬಾಗಲಕೊಟೆಯ ಉಸ್ತವರಿ ಸಚಿವರಾದ ಆರ್.ಬಿ.ತಿಮ್ಮಾಪುರ, ಅವರೊಂದಿಗೆ ಆಳಂದ ಶಾಸಕರಾದ ಬಿ.ಆರ್. ಪಾಟೀಲ, ಮಾಜಿ ಶಾಸಕರಾದ ಡಾ.ಎಂ. ಪಿ. ನಾಡಗೌಡ ಮತ್ತು ಸ್ಥಳೀಯ ಹಿರಿಯ ಕಿರಿಯ ನಾಯಕರಿದ್ದರು.

ಸಭೆ ಪ್ರಾರಂಭವಾಯಿತು. ಸಭೆಯ ಸಂಚಾಲನೆಯನ್ನು ಅಥಣಿಯ ಮೋಟಗಿಮಠದ ಶ್ರೀಗಳಾದ ಪ್ರಭುಚನ್ನಬಸವ ಸ್ವಾಮಿಗಳು ಮತ್ತು ನಿಜಗುಣಾನಂದ ಸ್ವಾಮಿಗಳು ವಹಿಸಿಕೊಂಡಿದ್ದರು. ಸಭೆ ಸುಮಾರು ಹನ್ನೆರಡು ಗಂಟೆ ಮೂವತ್ತು ನಿಮಿಷಕ್ಕೆ ಪ್ರಾರಂಭವಾಯಿತು. ಸಚಿವ ಎಂ.ಬಿ.ಪಾಟೀಲರ ಸಾರ್ವಜನಿಕ ಸಂಪರ್ಕ ಅಧಿಕಾರಿಯಾದ ಮಹಂತೇಶ ಬಿರಾದಾರ ವೇದಿಕೆಯ ಮೇಲಿರುವ ಗಣ್ಯರನ್ನು ಮತ್ತು ಪೂಜ್ಯರನ್ನು ಸಭೆಗೆ ಪರಿಚಯಿಸಿದ್ದರು. ರಾಜಕಾರಣಿಗಳು ತಮಗೆ ತಿಳಿದದ್ದನ್ನು ಹೇಳಿದರು. ಧರ್ಮದ ಸಭೆ ರಾಜಕೀಯ ಸಭೆಯಾಗಿ ಪರಿವರ್ತನೆಗೊಂಡಿತ್ತು. ಸಭೆಯಲ್ಲಿ ಪ್ರಮುಖವಾಗಿ ಇಬ್ಬರು ಮಾತುಗಳು ಗಮನ ಸೆಳೆದಿದ್ದವು. ಈ ಸಭೆಯ ರೂವಾರಿಗಳಾದ ಸಚಿವ ಎಂ. ಬಿ. ಪಾಟೀಲರು ಮೂಕ್ಕಾಲು ಗಂಟೆ ಸಭಿಕರನ್ನು ಉದ್ದೇಶಿಸಿ ಮಾತನಾಡಿದ್ದರು. ಪ್ರಾರಂಭದಲ್ಲಿ ಅವರು ಬಸವಣ್ಣನವರು ಯಾಕೆ

In Public domain. Digitization Muthulakshmi Research Academy

ಶೈವ ಶಾಖೆಯನ್ನು ತೊರೆದರು ಮತ್ತು ಯಾಕೆ ಲಿಂಗಾಯತ ಧರ್ಮವನ್ನು ಸ್ಥಾಪಿಸಿದರೆಂದು ಹೇಳುತ್ತ, 'ಶೈವ ಶಾಖೆಯನ್ನು ತೋರೆದ ಅವರು ಅದ್ಹೇಗೆ ಮತ್ತೊಮ್ಮೆ ವೀರಶೈವವನ್ನು ಅಪ್ಪಿಕೊಳ್ಳಲು ಸಾಧ್ಯ?' ಎಂದರು. ಸೂಚ್ಯವಾಗಿ ಭಕ್ತ ಹಾಗೂ ಮಠಾಧೀಶ್ವರರ ಮಧ್ಯದಲ್ಲಿರುವ ಸಂಬಂಧಗಳನ್ನು ಚರ್ಚಿಸುತ್ತ ಮಠಾಧೀಶರಿಂದು ಸ್ವಾರ್ಥಕ್ಕಾಗಿ ಲಿಂಗಾಯತ ಧರ್ಮ ಸಿದ್ಧಾಂತಗಳನ್ನು ಮರೆಯುತ್ತಿದ್ದಾರೆಂದು ಹೇಳಿದರು. 'ಲಿಂಗಾಯತ ಸ್ವತಂತ್ರ ಧರ್ಮ ಈ ಮೊದಲೆ ಇತ್ತು' ಎಂದು ಬ್ರಿಟಿಷ ಸರ್ಕಾರದ ಐತಿಹಾಸಿಕ ದಾಖಲೆಗಳನ್ನು ಜನರೆದರು ತೆರೆದಿಟ್ಟರು. '೧೮೭೧ರ ಮೈಸೂರು ರಾಜ್ಯದ ಜನಗಣಿತಿಯಲ್ಲಿ ಎ. ಡಬ್ಲು. ಎಸ್. ಲಿಂಡ್ಸೇ ಯಂಬ ಬ್ರಿಟಿಷ್ ಅಧಿಕಾರಿ ಲಿಂಗಾಯತ ಮತ್ತು ಜೈನರನ್ನು ಇತರ ವರ್ಗವೆಂದು ಪರಿಗಣಿಸಿ ಹಿಂದೂ ಧರ್ಮದ ಕಾಲಂಮ್ಮಿನಲ್ಲಿ ಸೇರಿಸಿರಲಿಲ್ಲ.' ಎಂಬ ಐತಿಹಾಸಿಕ ಸತ್ಯವನ್ನು ಜನರೆದುರು ಎಳೆಎಳೆಯಾಗಿ ಬಿಚ್ಚಿಟ್ಟರು.' ಸ್ವತಂತ್ರ ಚಿಂತನೆಯ ಬ್ರಿಟಿಷ್ ಅಧಿಕಾರಿ ಲಿಂಡ್ಸೇಯವರು ಲಿಂಗಾಯತವು ಹಿಂದೂ ಧರ್ಮದ ಒಂದು ಜಾತಿಯಲ್ಲ ಅದೊಂದು ಸ್ಪಷ್ಟ ಸಿದ್ಧಾಂತ ಹೊಂದಿರುವ ಧರ್ಮ' ಎಂದು ಹೇಳಿದ್ದ ದಾಖಲೆಗಳನ್ನು ಸಭಿಕರೆದುರು ಪ್ರದರ್ಶನ ಮಾಡಿದ್ದರು. '೧೮೭೧ರ ಈ ಜನಗಣತಿ ವರದಿಯಲ್ಲಿ ಲಿಂಗಾಯತ ಸಮಾಜಗಳ ವಿವರಗಳಲ್ಲಿ ವೀರಶೈವ ಎಂಬ ಪದವೇ ಇರಲಿಲ್ಲ. ಅಲ್ಲಿದ್ದುದು ಕೇವಲ ೨೮ ಕಾಯಕ ಆಧರಿಸಿದ ಸಮಾಜಗಳ ವಿವರ ಮಾತ್ರ. ಆದರೆ ೧೮೮೧ ಅದೇ ಮೈಸೂರು ರಾಜ್ಯದ ಜನಗಣತಿಯ ಸಮಯದಲ್ಲಿ ತಮೀಳ ಬ್ರಾಹ್ಮಣ ದಿವಾನ ಶ್ರೀರಂಗ ಚಾರ್ಯಲು ಎಂಬವನ ಕುತಂತ್ರದಿಂದ ಲಿಂಗಾಯತರನ್ನು ಹಿಂದೂಗಳೆಂದು ದಾಖಲಿಸಲಾಯಿತು' ಎಂದರು. 'ಮೈಸೂರು ಅರಸರು ಐವತ್ತು ವರ್ಷಗಳ ಕಾಲ ಅಧಿಕಾರದಿಂದ ವಂಚಿತರನ್ನಾಗಿಸಲು ಲಿಂಗಾಯತರು ಕಾರಣರಾಗಿದ್ದರು' ಎಂಬ ಐತಿಹಾಸಿಕ ಗುಟ್ಟನ್ನು ಹೊರಹಾಕಿದರು. ಮುಂದೆ ಮೈಸೂರಿನಲ್ಲಿ ಇದರ ಬಗ್ಗೆ ಅನೇಕ ಹೋರಾಟದ ನಂತರ ೧೯೪೧ರ ಜನಗಣತಿಯಲ್ಲಿ ಲಿಂಗಾಯತರನ್ನು ಇತರೇ ವರ್ಗಗಳಲ್ಲಿ ಸೇರಿಸಿ ಲಿಂಗಾಯತ ಸಮಾಜಗಳ ಪಟ್ಟಿಯಲ್ಲಿ ವೀರಶೈವರನ್ನು ೩೮ನೆಯ ಸಂಖ್ಯೆಯಲ್ಲಿ ಸೇರಿಸಲಾಯಿತು ಎಂದು ಇತಿಹಾಸದ ಪುಟಗಳನ್ನು ಜನರೆದುರು ಹೇಳಿದರು. ಮುಂದುವರಿದು ಕೆ.ಎಲ್.ಇ ಸಂಸ್ಥೆಯನ್ನು ಸ್ಥಾಪಿಸಿದ ಸಪ್ತರ್ಷಿಗಳಲ್ಲಿ ಒಬ್ಬರಾದ ಎಂ.ಎಸ್. ಸರದಾರ ಮತ್ತು ಎಸ್.ಕೆ.ಒಡೆಯರ್ ಅವರನ್ನು ಜ್ಞಾಪಿಸಿಕೊಳ್ಳುತ್ತ ೧೯೪೨ ವೀರಶೈವ ಮಹಾಸಭೆಯೊಂದಿಗಿನ ಭಿನ್ನಾಭಿಪ್ರಾಯದ ವಿಷಯಗಳನ್ನು ಜನರೆದುರು ತರೆದಿಡುತ್ತಾರೆ. 'ಸ್ವಾತಂತ್ರ್ಯದ ಪೂರ್ವದಲ್ಲಿ ಮತ್ತು ಸಂವಿಧಾನ ರೂಪಗೊಳ್ಳುವ ಪೂರ್ವದಲ್ಲಿ ಲಿಂಗಾಯತವು ಒಂದು ಸ್ವತಂತ್ರ ಧರ್ಮವಾಗಿತ್ತು. ಎರಡನೆಯ ಮಹಾಯುದ್ಧದ ಸಮಯದಲ್ಲಿ

In Public domain. Digitization Muthulakshmi Research Academy

ಅಂದಿನ ಬ್ರಿಟಿಷ್ ಸರಕಾರಕ್ಕೆ ಲಿಂಗಾಯತ ಬ್ರಿಗೇಡ್ ಸ್ಥಾಪಿಸಿ, ಲಿಂಗಾಯತರು ದೇಶ ವಿರೋಧಿಗಳಲ್ಲ' ಎಂದು ಸಾಭೀತು ಮಾಡಿದ್ದರು ಎಂದರು. ೧೯೪೪ ರಲ್ಲಿ ಬೆಳಗಾವಿಯ ಎಂ.ಎಸ್. ಸರ್ದಾರ ಅವರು ಮುಂಬೈಯಲ್ಲಿ ಬ್ರಿಟಿಷ್ ವೈಸ್ ರಾಯ್ ಅವರನ್ನು ಸಂಪರ್ಕಿಸಿ ಲಿಂಗಾಯತ ಧರ್ಮ ಅಲ್ಪ ಸಂಖ್ಯಾತ ಧರ್ಮವೆಂದು ಮನವರಿಕೆ ಮಾಡಿಕೊಟ್ಟು, ಲಿಂಗಾಯತ ಧರ್ಮವನ್ನು ಜೈನ ಬೌದ್ಧ ಹಾಗೂ ಸಿಖ್ ಧರ್ಮಗಳಂತೆ ಅಲ್ಪ ಸಂಖ್ಯಾತ ಧರ್ಮವೆಂದು ಪರಿಗಣಿಸಲು ಕೇಳಿಕೊಂಡಿದ್ದ ದಾಖಲೆಯನ್ನು ಸಭೆ ಎದರು ಮಂಡಿಸುತ್ತಾರೆ ಲಿಂಗಾಯತ ಹೋರಾಟ ಇಂದಿನದಲ್ಲ ಅದಕ್ಕೆ ಶತಮಾನಗಳ ಇತಿಹಾಸವಿದೆ. ಲಿಂಗಾಯತಕ್ಕಾಗಿ ದುಡಿದು, ಮಡಿದ ಮಹನಿಯರಾದ ತಮ್ಮಣ್ಣಪ್ಪ ಚಿಕ್ಕೋಡಿ, ಆಲಮೇಲ ದೇಶಮುಖರು, ಅರಟಾಳ ರುದ್ರಗೌಡರು, ಶಿರಸಂಗಿ ಲಿಂಗರಾಜರು, ವಂಟಮುರಿ ದೇಸಾಯಿವರು ಮತ್ತು ಅನೇಕ ಉತ್ತರ ಕರ್ನಾಟಕದ ಮುತ್ಸದ್ಧಿಗಳನ್ನು ನೆನಪಿಸಿಕೊಂಡರು. ನಂತರ ಅವರ ಮಾತುಗಳು ಸ್ಥಳೀಯ ರಾಜಕೀಯದತ್ತ ಹೊರಳಿತ್ತು. ಸುದೀರ್ಘವಾದ ನಾಲ್ವತ್ತೈದು ನಿಮಿಷಗಳ ಭಾಷಣದ ಮಧ್ಯ ಮಧ್ಯ ಕೊಂಬು ಕಹಳೆಗಳ ಸದ್ದು ವಿಜಾಪುರದ ಸಂಸ್ಕೃತಿಯನ್ನು ಬಿಂಬಿಸುತ್ತಿತ್ತು.

ವೇದಿಕೆಯ ನಿಯಂತ್ರಣ ಸಚಿವರ ಆಪ್ತರ ಕೈಯಲ್ಲಿತ್ತು. ತಮಗೆ ಸರಿ ಕಂಡವರಿಗೆ ಮಾತ್ರ ಸಭೆಯನ್ನು ಉದ್ದೇಶಿಸಿ ಮಾತಾಡಲು ಅವಕಾಶ ನೀಡಲಾಗುತ್ತಿತ್ತು. 'ದುಡಿದವರನ್ನು ಕಡೆಗಣಿಸುತ್ತಿದ್ದಾರೆ' ಎಂದು ನಮ್ಮ ಹಿಂದಿನ ಸಾಲಿನಲ್ಲಿ ಕುಳಿತವರ ಆಕ್ಷೇಪಣೆ ಮುಂದಿನ ಸಾಲಿನಲ್ಲಿ ಆಸೀನರಾದ ನಮ್ಮ ಕಿವಿಗಳನ್ನೂ ತಲುಪುತ್ತಿತ್ತು. ಕೆಲವೇ ಕೆಲವು ಮಠಾದೀಶರಿಗೆ ಸಭೆಯನ್ನು ಉದ್ದೇಶಿಸಿ ಮಾತನಾಡಲು ಕೇಳಿಕೊಂಡಿತ್ತು. ಅವರಲ್ಲಿ ಬೆಳಗಾವಿಯ ರುದ್ರಾಕ್ಷಿಮಠದ ಶ್ರೀಗಳಾದ ಸಿದ್ದರಾಮಸ್ವಾಮೀಜಿಯವರು, ಬಾಲ್ಕಿಯ ಹಿರೇಮಠದಶ್ರೀಗಳು ಮಾತನಾಡಿದ್ದರು. ಸಚಿವರಾದ ವಿನಯ ಕುಲಕರ್ಣಿ, ಬಸವರಾಜ ರಾಯರೆಡ್ಡಿ ಮತ್ತು ಪಕ್ಕದ ಜಿಲ್ಲೆ ಕಲ್ಬುರ್ಗಿಯ ಡಾ. ಶರಣಪ್ರಕಾಶ ಪಾಟೀಲರು ಮಾತಾಡಿದರು. ಸಭೆಯ ಅಧ್ಯಕ್ಷತೆಯನ್ನು ಬಸವರಾಜ ಹೊರಟ್ಟಿಯವರು ವಹಿಸಿಕೊಂಡಿದ್ದರು. ಅವರು ಎಂದಿನಂತೆ ವಿಜಾಪುರ ಸಭೆಯ ಉದ್ದೇಶ ಮತ್ತು ವೀರಶೈವ ಮಹಾಸಭೆಯ ದ್ವಿಮುಖ ನೀತಿಯ ಬಗ್ಗೆ ಹೇಳಿದರು. ಸಾನಿಧ್ಯ ವಹಿಸಿದ್ದ ಗದುಗಿನ ಜಗದ್ಗುರು ತೋಂಟದಾರ್ಯ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ಈ ಎಲ್ಲ ಸಚಿವರು 'ನಿಜಲಿಂಗಾಯತ'ರೆಂದು ಬಣ್ಣಿಸುತ್ತ ಅಸಾಧ್ಯವಾಗಿದ್ದನ್ನು ಸಾಧ್ಯವಾಗಿಸುತ್ತಿದ್ದಾರೆ ಎಂದು ಅವರುಗಳನ್ನು ಶ್ಲಾಘಿಸಿದರು. ವೇದಿಕೆಯ ಮೇಲಿದ್ದ ಮಹನಿಯರು ಹಿಂದಿನ ಬಹಿರಂಗ ಸಭೆಗಳಲ್ಲಿ ಹೇಳಿದ ವಿಷಯಗಳನ್ನೆ ಹೆಚ್ಚು ಕಡಿಮೆ ಇಲ್ಲಿಯೂ ವ್ಯಕ್ತಪಡಿಸಿದ್ದರು. ಚುರುಗುಟ್ಟುವ ಬಿಸಿಲಿನಲ್ಲಿ ಭಾಷಣ ಕೇಳುವುದು 'ಶಿಕ್ಷೆ'

In Public domain. Digitization Muthulakshmi Research Academy
ಎನಿಸತೊಡಗಿತು. ಮರುದಿವಸ ಬೆಳಗಾವಿ ಸಂಕೇಶ್ವರದಲ್ಲಿ ಎ.ಬಿ.ಪಾಟೀಲರ ತಂದೆಯವರಿಗೆ ನೂರು ವರ್ಷ ತುಂಬಿದ ಹಿನ್ನಲೆಯಲ್ಲಿ ಒಂದು ದೊಡ್ಡ ಸಭೆಯನ್ನು ಹಾಕಿಕೊಂಡಿದ್ದರು. ಅದಕ್ಕೆ ಬರಲೇಬೇಕೆಂಬ ಪ್ರೀತಿಯ ಒತ್ತಾಯ ಅವರದಿತ್ತು. ಕಾರಣ ಸಭೆಮುಗಿಯುತ್ತಿದ್ದಂತೆ ನಾವು ಬೆಳಗಾವಿಯ ಹಾದಿ ತುಳಿದೆವು. ವಿಜಾಪುರ ಪಟ್ಟಣವನ್ನು ಬಿಟ್ಟು ನಮ್ಮ ವಾಹನ ಬೆಳಗಾವಿಯತ್ತ ಚಲಿಸುತ್ತಲಿತ್ತು.

ದಾರಿಯಲ್ಲಿ ನಾವು ಸಾಗುವಾಗ ಕಂಡ ದೃಶ್ಯ ಮರೆಯಲಾಗದು. ಅಂದಿನ ಸಭೆಗೆ ಬಂದ ಜನರಿಗೆ ವಿಜಾಪುರದ ಬಾಗವಾನರು ಹಣ್ಣು ಹಂಚುತ್ತಿದ್ದ ದೃಶ್ಯ ಕಂಡಿತು. ಜೈನ ಸಮಾಜದವರು ನೀರು ಮತ್ತು ತಂಪು ಪಾನಿಯ ಸಣ್ಣ ಸಣ್ಣ ಘಟಕಗಳನ್ನು ರಸ್ತೆಯುದ್ದಕ್ಕೂ ಹಾಕಿದ್ದು ನೋಡಿ ಮನತುಂಬಿ ಬಂತು. ವಿವಿಧತೆಯಲ್ಲಿ ಏಕತೆಯನ್ನು ಮೆರೆಯುವ ಭಾರತೀಯರಿಗೆ ಮನದಲ್ಲಿ ವಂದಿಸಿದೆ.

ಕೊನೆ ಟಿಪ್ಪಣಿಗಳು

೧. ಪ್ರಜಾವಾಣಿ, ಮಾರ್ಚ್ ೨೧, ೨೦೧೭.

೨. ಪ್ರಜಾವಾಣಿ, ೨೧, ಮಾರ್ಚ್, ೨೦೧೮

೩. ಪ್ರಜಾವಾಣಿ, ಅಕ್ಟೋಬರ್ ೨೨, ೨೦೧೭.

೪ ಪ್ರಜಾವಾಣಿ, ಜುಲೈ ೨೨, ೨೦೧೭.

೫. ವಿಜಯ ಕರ್ನಾಟಕ, ೨೫-೯-೨೦೧೭

In Public domain. Digitization Muthulakshmi Research Academy

ಅಧ್ಯಯ ಹನ್ನೊಂದು

ಮೆತ್ತಗಾದ ಸರ್ಕಾರ

ಕರ್ನಾಟಕ ಹಾಗೂ ನೆರೆಯ ರಾಜ್ಯಗಳಾದ ಮಹಾರಾಷ್ಟ್ರ, ತೆಲಂಗಾಣ ರಾಜ್ಯಗಳಲ್ಲಿಯೂ ಧರ್ಮಮಾನ್ಯತೆ ವಿಷಯದಲ್ಲಿ ಸಾರ್ವಜನಿಕ ಚರ್ಚೆ, ಸಭೆಗಳಾಗಿ ಸಾಕಷ್ಟು ಸಾರ್ವಜನಿಕ ಬೆಂಬಲ ಸಿಕ್ಕಿತ್ತು. ವಿಜಾಪುರ ರ್‍ಯಾಲಿಯ ನಂತರ ಲಿಂಗಾಯತ ಧರ್ಮದ ವಿಷಯದಲ್ಲಿ ಸರಕಾರದ ಮೇಲೆ ಇನ್ನಷ್ಟು ಒತ್ತಡ ಹಾಕುವ ಅವಶ್ಯಕತೆ ಇರಲಿಲ್ಲ. ಕರ್ನಾಟಕದಲ್ಲಿ ಚುನಾವಣೆಯ ನೀತಿಸಂಹಿತೆ ಮುಂದಿನ ಎರಡು ಮೂರು ತಿಂಗಳಲ್ಲಿ ಬರಬಹುದಾಗಿತ್ತು. ಸಚಿವರಾದ ಎಂ.ಬಿ.ಪಾಟೀಲ, ಶರಣಪ್ರಕಾಶ ಪಾಟೀಲ, ಬಸವರಾಜ ರಾಯರೆಡ್ಡಿ ಮತ್ತು ವಿನಯ ಕುಲಕರ್ಣಿಯವರು ಒಂದು ಮಹತ್ವದ ಸಭೆ ಮಾಡಿ ಪರಸ್ಥಿತಿಯ ಅವಲೋಕನ ಮಾಡಿದರು. ಮುಖ್ಯಮಂತ್ರಿಗಳು ಲಿಂಗಾಯತ ಅಲ್ಪಸಂಖ್ಯಾತ ಮಾನ್ಯತೆ ನೀಡುವ ಪರವಾಗಿದ್ದರೂ ಅವರ ಸಂಪುಟದಲ್ಲಿ ಏಕಾಭಿಪ್ರಾಯ ಇರಲಿಲ್ಲ. ಲಿಂಗಾಯತ ಕೋಟಾದ ಅಡಿಯಲ್ಲಿ ಮಂತ್ರಿಗಳಾಗಿದ್ದ ಈಶ್ವರ ಖಂಡ್ರೆಯವರು ಬಹಿರಂಗವಾಗಿ "ವೀರಶೈವ ಲಿಂಗಾಯತರು ಬೇರೆ ಅಲ್ಲ, ಸ್ವತಂತ್ರ ಧರ್ಮಕ್ಕೆ ಎಷ್ಟೇ ಹೋರಾಟ ಮಾಡಿದರೂ ಅದು ತಾತ್ಕಾಲಿಕ, ಯಾವುದೇ ಕಾರಣಕ್ಕೂ ಲಿಂಗಾಯತ-ವೀರಶೈವ ವಿಘಟನೆ ಆಗಲು ಬಿಡುವುದಿಲ್ಲ. ಲಿಂಗಾಯತರು ಕೆಟ್ಟರೆ ಕರ್ನಾಟಕವೇ ಕೆಡುತ್ತದೆ. ಗುರು ವಿರಕ್ತರ ಪರಂಪರೆ ಮುಂದುವರಿಸಿಯೇ ತೀರುತ್ತೇವೆ" ಎಂದು ಗುಡುಗಿದ್ದರು. ಇದೇ ಸಚಿವ ಸಂಪುಟದ ಇನ್ನೊಬ್ಬ ಸಚಿವರು ವೀರಶೈವ ಮಹಾಸಭೆಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪ "It is good their downfall has begun, we have an upper hand

In Public domain. Digitization Muthulakshmi Research Academy

now" ಎಂದು ಚುನಾವಣೆ ಫಲಿತಾಂಶವನ್ನು ವಿಶ್ಲೇಷಿಸುತ್ತಿರುವರಂತೆ ಹೇಳಿದ್ದರು. ನಾನೊಂದು ದಿವಸ ಬಿ.ಎಲ್.ಡಿ. ಸಂಸ್ಥೆಯಲ್ಲಿದ್ದೆ. ಆಗ ಅಲ್ಲಿಗೆ ಸಚಿವ ಪರಮೇಶ್ವರ ಬಂದಿದ್ದರು. 'ಎಂ.ಬಿ. ಎಲ್ಲಿ' ಎಂದು ಪಾಟೀಲರ ಸಹಾಯಕರನ್ನು ಕೇಳಿದರು. ಆಗ ಅವರು "ಲಿಂಗಾಯತ ಮುಖಂಡರ ಸಭೆ ನಡೆಯುತ್ತಿದೆ. ಅದರಲ್ಲಿ ಸಾಹೇಬರು ಬಿಜಿಯಾಗಿದ್ದಾರೆ" ಎಂದು ಉತ್ತರಿಸಿದಾಗ "ಏನಪ್ಪ ನಿಮ್ಮ ಸಾಹೇಬ... ಎನ್ನುತ್ತ" ತಮ್ಮ ಅಸಮಾಧಾನ ಹೊರಹಾಕಿದ್ದರು. ಮೊದಮೊದಲು ಬೆಂಬಲ ವ್ಯಕ್ತಪಡಿಸಿದ್ದ ಅ.ಭಾ.ವೀ.ಮ. ಸಭೆಯು ಸಂಪೂರ್ಣವಾಗಿ ಎದುರಾಳಿಯಾಗಿಬಿಟ್ಟಿತ್ತು. ಲಿಂಗಾಯತ ವಿರೋಧಿಗಳೆಲ್ಲರೂ ಮುಖ್ಯಮಂತ್ರಿಗಳಿಗೆ ಈ ಗೊಂದಲದಿಂದ ಹೊರಗೆ ಬರಲು ಒತ್ತಡ ಹಾಕುತ್ತಿದ್ದಾರೆ ಎಂಬ ಸುದ್ದಿಗೆ ರೆಕ್ಕೆ ಮೂಡಿದ್ದವು. ಆದರೆ ಮಾನ್ಯ ಮುಖ್ಯಮಂತ್ರಿಗಳು ಬಂಡೆಯಂತೆ ಗಟ್ಟಿಯಾಗಿ ಸಿದ್ಧಾಂತದ ಪರವಾಗಿದ್ದರು. ಸಮಾಜವಾದಿ ಸಿದ್ದರಾಮಯ್ಯನವರು ಬಸವಣ್ಣನವರ ಆಶಯಗಳನ್ನು ಕಾರ್ಯರೂಪದಲ್ಲಿ ತರಲು ಗಟ್ಟಿ ಮನಸ್ಸು ಮಾಡಿದ್ದರು. ಯಾವುದೇ ಒತ್ತಡಕ್ಕೆ ಮಣಿಯದೆ ಸಿದ್ದರಾಮಯ್ಯನವರ ಸರ್ಕಾರವು ಒಂದು ಮಹತ್ವದ ಅಧಿಸೂಚನೆಯನ್ನು ದಿನಾಂಕ ೧೫.೧೨.೨೦೧೭ರಂದು ಹೊರಡಿಸಿತ್ತು.

ಕರ್ನಾಟಕ ಸರಕಾರದ ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಕಾಸಸೌಧ, ಬೆಂಗಳೂರು. ಇವರಿಂದ ಒಂದು ಇತಿಹಾಸ ಸೃಷ್ಟಿಸುವ ಆದೇಶ ಹೊರಬೀಳುತ್ತದೆ.

ಸಂಖ್ಯೆ: MWD 645MDS2017 Date: December. ೧೫, ೨೦೧೭

ಇವರಿಂದ,
ಸರ್ಕಾರದ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ವಿಕಾಸಸೌಧ, ಬೆಂಗಳೂರು

ಇವರಿಗೆ,
ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಆಯೋಗ
ವಿ. ವಿ. ಗೋಪುರ
ಬೆಂಗಳೂರು.

ಮಾನ್ಯರೇ,
ವಿಷಯ: ಲಿಂಗಾಯತ ಧರ್ಮವನ್ನು ಪ್ರತ್ಯೇಕ ಧರ್ಮವನ್ನಾಗಿ ಪರಿಗಣಿಸುವ ಕುರಿತು ಸ್ವೀಕೃತವಾಗಿರುವ ಮನವಿಗಳ ಬಗ್ಗೆ.

In Public domain. Digitization Muthulakshmi Research Academy

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಲಿಂಗಾಯತ ಧರ್ಮದ ಮಾನ್ಯ ಸದಸ್ಯರು ಹಾಗೂ ಲಿಂಗಾಯತ ಧರ್ಮದ ಪ್ರಮುಖ ಗಣ್ಯರು ಹಾಗೂ ನಾಯಕರು ಸಲ್ಲಿಸಿರುವ ೩೬ ಮನವಿಗಳನ್ನು ಇದರೊಂದಿಗೆ ಲಗತ್ತಿಸಿದೆ. ಲಿಂಗಾಯತ ಧರ್ಮವನ್ನು ಸ್ವತಂತ್ರ ಧರ್ಮವೆಂದು ಪರಿಗಣಿಸಲು ಹಾಗೂ ಈ ಧರ್ಮದವರನ್ನು ಅಲ್ಪಸಂಖ್ಯಾತರ ಜನಾಂಗದವರನ್ನಾಗಿ ಪರಿಗಣಿಸುವ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದ ಅಡ್ವೊಕೇಟ್ ಜನರಲ್ ಅವರು ನೀಡಿರುವ ಅಭಿಪ್ರಾಯದ ಹಿನ್ನೆಲೆಯಲ್ಲಿ ಹಾಗೂ ಸನ್ಮಾನ್ಯ ಮುಖ್ಯಮಂತ್ರಿಯವರು ಆದೇಶಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ೧೯೯೪ರಲ್ಲಿನ ಪ್ರಾವಧಾನಗಳಂತೆ ಹಾಗೂ ಕಂಡಿಕೆ–೩೮ರಲ್ಲಿನ ಅಭಿಪ್ರಾಯದಂತೆ ಮನವಿಗಳನ್ನು ಹಾಗೂ ಅರ್ಜಿಗಳನ್ನು ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಿ, ಈ ಅರ್ಜಿಗಳನ್ನು ಪರಿಶೀಲಿಸಿ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಭಿಪ್ರಾಯವನ್ನು ಕೂಡಲೇ ಸರ್ಕಾರಕ್ಕೆ ನೀಡುವಂತೆ ತಿಳಿಸಲು ನಿರ್ದೇಶಿತವಾಗಿದ್ದೇನೆ. ಇದಕ್ಕೆ ಸಂಬಂಧಿಸಿದ ಸದರಿ ಕಡತದಲ್ಲಿನ ಅಡ್ವೊಕೇಟ್ ಜನರಲ್ ಅಭಿಪ್ರಾಯ ಮತ್ತು ಸಿ.ಆ.ಸು.ಇ. ಇಲಾಖೆಯವರ ಅಭಿಪ್ರಾಯ ಮತ್ತು ಮಾನ್ಯ ಮುಖ್ಯಮಂತ್ರಿಯವರ ಆದೇಶದ ಪ್ರತಿಗಳನ್ನು ಹಾಗೂ ಅರ್ಜಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ
ಸಹಿ
(ಅಕ್ರಂ ಪಾಷಾ)
ಸರ್ಕಾರದ ಆದೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ

ಸರಕಾರದ ಅಧಿಸೂಚನೆ ದಿನಾಂಕ ೧೫.೧೨.೨೦೧೭ರಂತೆ ಅಲ್ಪಸಂಖ್ಯಾತರ ಆಯೋಗ ಒಂದು ತಜ್ಞರ ಸಮಿತಿ ರಚನೆ ಮಾಡಿ ಪ್ರೊಸೀಡಿಂಗ್ ಮಾಡಿತ್ತು. ದಿನಾಂಕ ೧೫.೧೨.೨೦೧೭ರಂದು ರಾಜ್ಯ ಅಲ್ಪಸಂಖ್ಯಾತ ಅಯೋಗವು ಒಂದು ಸಮಿತಿಯನ್ನು ರಚಿಸಿತು. ಅದರ ಯತಾವತ್ತಾದ ಪತ್ರ:

In Public domain. Digitization Muthulakshmi Research Academy

Proceedings of the secretary

KARNATAKA STATE MINORITIES COMMISSION.

VV TOWERS BANGALORE

sub: Recognition of Lingayats / Veerashaiva Lingayats as religious minority.

Ref : MWD 645 MDS 2017 dt. 15.12.2017

The government in the Minority Welfare Department has forwarded the representations received from various groups and individuals belonging to the community of Lingayats/ Veerashaiva Lingayats seeking recognition of their community as a religious minority, to the Karnataka State Minority Commission, to examine and give its opinion. In order to evaluate the various representations received and the issues raised therein, The Karnataka State Minorities Commission considered it necessary to constitue an Expert Committee.

Hence the following order:

An expert committee is here by constituted with members mentioned herein to examine, the representations received from various groups, individuals belonging to the communities of the Lingayats/ Veerashaiva Lingayats for treating their community as a separate religion and a minority and to make necessary recommendations to the commission within a period of four weeks.

1. **Justice H.N. Nagamohan Das**: Former Judge, High court of Karnataka, Senior Advocate Supreme Court of India
2. **Prof. S.G. Siddaramaih,** Chairman Kannada Development Authority
3. **Dr. Ramakrishna Marathe,** Lecturer, B. K. College, Belagavi
4. **Dr. Sarjoo Katkar,** Principal Correspondent, The New Indian Express
5. **Dr. Mujaffar Assadi,** Professor of Political Science, University of Mysore
6. **Pro. Purushottam Bilimale,** Head, Kannada Language Chair, JNU, New Delhi

In Public domain. Digitization Muthulakshmi Research Academy

7. **Dr. C.S.Dwarakanath,** Former Chairman, Karnataka State Commission for Backward Classes

The secretary of the Karnataka state minority commission will be the secretary for this expert committee. He shall co-ordinate with the members and provide all necessary assistance during the meetings conducted. The report of the expert committee shall be placed before the commission for consideration and making suitable recommendations to the government.

sd.
S. Anees Siraj
Secretary
Karnataka State Minorities Commission

ಲಿಂಗಾಯತ ಮತ್ತು ವೀರಶೈವ ಪರವಾಗಿ ಪ್ರತ್ಯೇಕ ಧರ್ಮದ ಕುರಿತು ಜಿಲ್ಲಾಧಿಕಾರಿಗಳ ಹಾಗೂ ಸಾರ್ವಜನಿಕರಿಂದ ಬಂದಿರುವ ಮನವಿಗಳು ಇಂತಿದ್ದವು.

೧. **ಡಾ.ಶಾಮನೂರು ಶಿವಶಂಕರಪ್ಪ,** ಮಾಜಿ ಸಚಿವರು ಹಾಗೂ ಅಧ್ಯಕ್ಷರು, ಅಖಿಲ ಭಾರತ ವೀರಶೈವ ಮಹಾಸಭಾ. ವಿಷಯ: ವೀರಶೈವ–ಲಿಂಗಾಯತ ಸಮಾಜಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ನೀಡಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸುವ ಕುರಿತು.

೨. **ಶ್ರೀ ಸಿ.ವಿ.ವೆಂಕಟಕುಂಟೆ,** ಸಾ.ನರೇಗಲ್, ತಾ.ರೋಣ. ಜಿಲ್ಲಾ ಧಾರವಾಡ, ವಿಷಯ: ಲಿಂಗಾಯತರಿಗೆ ವೀರಶೈವರ ಶೋಷಣೆಯಿಂದ ಮುಕ್ತಿ ನೀಡುವ ಕುರಿತು.

೩. **ಪೂಜ್ಯ ಜಗದ್ಗುರು ಮಾತೆ ಮಹಾದೇವಿಯವರು,** ರಾಷ್ಟ್ರೀಯ ಬಸವದಳ ಟ್ರಸ್ಟ್, ಚಳ್ಳಕೆರೆ. ಅವರಿಂದ ಚಿತ್ರದುರ್ಗ ಜಿಲ್ಲಾಧಿಕಾರಿಗಳ ಮುಖಾಂತರ ಕಳಿಸಿರುವ ಮನವಿ. ವಿಷಯ: ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮ ಮಾನ್ಯತೆ ನೀಡುವ ಕುರಿತು.

೪. **ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ** ಹಿರೇಕಲ್ಮಠ, ಇವರು ದಾವಣಗೆರೆ ಜಿಲ್ಲಾಧಿಕಾರಿಗಳ ಮುಖಾಂತರ ಕಳಿಸಿರುವ ಮನವಿ. ವಿಷಯ: ವೀರಶೈವ ಲಿಂಗಾಯತರಲ್ಲಿ ಒಡಕುಂಟು ಮಾಡುವವರನ್ನು ತಹಂಬದಿಗೆ ತರುವ ಕುರಿತು.

೫. **ಜಗದ್ಗುರು ರೇಣುಕಾಚಾರ್ಯ** ಸೇವಾ ಸಮಿತಿ ಭದ್ರಾವತಿ, ಇವರು ಭದ್ರಾವತಿ ತಹಸೀಲ್ದಾರರ ಮುಖಾಂತರ ಕಳಿಸಿದ ಮನವಿ. ವಿಷಯ: ಪ್ರತ್ಯೇಕ

In Public domain. Digitization Muthulakshmi Research Academy

ಲಿಂಗಾಯತ ಧರ್ಮದ ಬೇಡಿಕೆ ತಿರಸ್ಕರಿಸುವ ಹಾಗೂ ರಂಭಾಪುರಿ ಶ್ರೀಗಳ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡುವ ಕುರಿತು.

೭. **ಶ್ರೀ ಅಜಯ ಹಿರೇಮಠ,** ಧಾರವಾಡ ಜಿಲ್ಲಾ ಅಧ್ಯಕ್ಷರು, ವೀರಶೈವ ಯುವವೇದಿಕೆ, ಹುಬ್ಬಳ್ಳಿ, ಇವರು ಧಾರವಾಡ ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಿದ ಮನವಿ. ವಿಷಯ: ವೀರಶೈವ ಯುವವೇದಿಕೆಯ ವತಿಯಿಂದ ಬೃಹತ್ ಪ್ರತಿಭಟನೆ ಕುರಿತು.

೮. **ಶ್ರೀ ಪ್ರಕಾಶ ಬೆಂಡಿಗೇರಿ,** ವೀರಶೈವ ಲಿಂಗಾಯತ ಸಮಾಜ ಬಾಂಧವರು, ಇವರು ಧಾರವಾಡ ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಿದ ಮನವಿ. ವಿಷಯ: ವೀರಶೈವ ಲಿಂಗಾಯತ ಸಮಾಜದ ಮನವಿ ಪತ್ರದ ಕುರಿತು.

೮. **ಅಧ್ಯಕ್ಷರು, ಅಖಂಡ ಲಿಂಗಾಯತ ಮಹಾಸಭಾ,** ಮಾದಳ್ಳಿ, ಮೈಸೂರು ತಾಲ್ಲೂಕು, ಇವರ ಮೈಸೂರು ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಿದ ಮನವಿ. ವಿಷಯ: ಲಿಂಗಾಯತ ಧರ್ಮಕ್ಕೆ ಕೇಂದ್ರ ಸರಕಾರದಿಂದ ಸ್ವತಂತ್ರ ಧರ್ಮ ಮಾನ್ಯತೆಗೆ ರಾಜ್ಯ ಸರಕಾರದ ಶಿಫಾರಸ್ಸು ಕುರಿತು.

೯. **ಶ್ರೀ ಓಂ ಸಂಗಮೇಶ್ವರ** ಈ. ಐಹೊಳ್ಳಿ, ರಾಜ್ಯಾಧ್ಯಕ್ಷರು, ಜೈ ಲಿಂಗಾಯತ ಯುವಕ ಮಂಡಳ, ಹುಬ್ಬಳ್ಳಿ, ಇವರು ಧಾರವಾಡ ಜಿಲ್ಲಾ ಅಧ್ಯಕ್ಷರ ಮುಖಾಂತರ ಸಲ್ಲಿಸಿದ ಮನವಿ.

೧೦. **ಅಧ್ಯಕ್ಷರು, ಲಿಂಗಾನುಭವಿ ಶರಣರ ಬಳಗ,** ಹಿರೆಹೊನ್ನಿಹಳ್ಳಿ ಕಲಘಟಗಿ ತಾಲ್ಲೂಕು ಇವರು ಧಾರವಾಡ ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಿದ ಮನವಿ. ವಿಷಯ: ಲಿಂಗಾಯತ ಸ್ವತಂತ್ರ ಧರ್ಮವೆಂದು ಮಾನ್ಯತೆ ನೀಡುವ ಕುರಿತು.

೧೧. **ಶ್ರೀ ಶಿವಶಂಕರ ಆರ್. ಬುಜಂಗ,** ಸಾಮಾಜಿಕ ಕಾರ್ಯಕರ್ತರು, ಅಶೋಕ ಕಾಂಪ್ಲೆಕ್ಸ್, ಬ್ರಹ್ಮಪುರ, ಕಲ್ಬುರ್ಗಿ. ವಿಷಯ: ವೀರಶೈವ ಲಿಂಗಾಯತ ಹಿಂದೂಧರ್ಮದ ಒಂದು ಭಾಗ. ಅದನ್ನು ಬೇರ್ಪಡಿಸಿ ಲಿಂಗಾಯತ ಪ್ರತ್ಯೇಕ ಧರ್ಮಕ್ಕಾಗಿ ನಡೆಯುತ್ತಿರುವ ಹೋರಾಟದ ಕುರಿತು.

೧೨. **ಲಿಂಗಾಯತ ಸಮಾಜ, ಬಿ. ಅರಳಿಕಟ್ಟಿ ಗ್ರಾಮ,** ಹುಬ್ಬಳ್ಳಿ ತಾಲ್ಲೂಕು, ಧಾರವಾಡ ಜಿಲ್ಲೆ. ಇವರು ಧಾರವಾಡ ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಿದ ಮನವಿ. ವಿಷಯ: ಮಾತೆ ಮಹಾದೇವಿಯವರು ಶ್ರೀ ರಂಭಾಪುರಿ ಜಗದ್ಗುರುಗಳ ಬಗ್ಗೆ ಲಘುವಾಗಿ ಮಾತಾಡಿರುವುದನ್ನು ಖಂಡಿಸಿ ಪ್ರತಿಭಟನಾ ಮೆರವಣಿಗೆ ಕುರಿತು.

In Public domain. Digitization Muthulakshmi Research Academy

೧೩. **ಲಿಂಗಾಯತ ಧರ್ಮ ಸಮನ್ವಯ ಸಮಿತಿ,** ಅಥಣಿ. ಇವರು ಬೆಳಗಾವಿ ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಿದ ಮನವಿ. ವಿಷಯ: ಲಿಂಗಾಯತ ಧರ್ಮಕ್ಕೆ ಕೇಂದ್ರ ಸರಕಾರದಿಂದ ಸ್ವತಂತ್ರ ಧರ್ಮ ಮಾನ್ಯತೆಗೆ ರಾಜ್ಯ ಸರಕಾರ ಶಿಫಾರಸು ಮಾಡುವ ಕುರಿತು.

೧೪. **ಶ್ರೀ ಮಲ್ಲಿಕಾರ್ಜುನ ಕೋರಿ,** ಎ.ಪಿ.ಎಂ.ಸಿ. ಹತ್ತಿರ, ಇಳಕಲ್, ಬಾಗಲಕೋಟೆ ಜಿಲ್ಲೆ, ವಿಷಯ: ಲಿಂಗಾಯತ ಜಾತಿಯೋ? ಧರ್ಮವೋ? ಕುರಿತು.

೧೫. **ಶ್ರೀ ಕೆ.ಎಂ. ಸುಬ್ಬಯ್ಯ,** ೩ನೇ ಹಂತ, ಬಸವೇಶ್ವರ ನಗರ, ಬೆಂಗಳೂರು-೭೯. ವಿಷಯ: ಲಿಂಗಾಯತ ಸ್ವತಂತ್ರ ಧರ್ಮ ಕೇಂದ್ರಕ್ಕೆ ಪ್ರಸ್ತಾವನೆ ಕುರಿತು.

೧೬. **ಅಖಿಲ ಕರ್ನಾಟಕ ಜಂಗಮ ಕ್ಷೇಮಾಭಿವೃದ್ಧಿ ಮಹಾಸಭೆ,** ವಿಜಯಪುರ ಇವರು, ವಿಜಾಪುರ ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಿದ ಮನವಿ. ವಿಷಯ: ರಂಭಾಪುರಿ ಶ್ರಿಗಳಿಗೆ ಅಪಮಾನಿಸಿದವರನ್ನು ಬಂಧಿಸುವ ಕುರಿತು.

೧೭. **ಜಗದ್ಗುರು ಪಂಚಾಚಾರ್ಯ ಪ್ರಸೀದಂತು ಶ್ರೀ ಷ. ಭ. ಒಡೆಯರ್** ಚನ್ನಮಲ್ಲಿಕಾರ್ಜುನ ಮಹಾಸ್ವಾಮಿಗಳು. ಇವರು ದಾವಣಗೆರೆ ಅಪರ ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಿದ ಮನವಿ. ವಿಷಯ: ವೀರಶೈವ ಲಿಂಗಾಯತರಲ್ಲಿ ಒಡಕುಂಟು ಮಾಡುವವರನ್ನು ತಹಬದಿಗೆ ತರುವ ಕುರಿತು.

೧೮. **ಶ್ರೀ ಸಿ.ವಿ. ಪಾಟೀಲ,** ಅಧ್ಯಕ್ಷರು, ವೀರಶೈವ ಸಮಾಜ, ಬಸವಕೇಂದ್ರ, ಲಿಂಗವಂತ ನೌಕರರ ಕ್ಷೇಮಾಭಿವೃದ್ಧಿ ಸಂಘ, ರಾಯಚೂರು. ಇವರು ರಾಯಚೂರ ಅಪರ ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಿದ ಮನವಿ. ವಿಷಯ: ವೀರಶೈವ ಸ್ವತಂತ್ರ ಧರ್ಮವೆಂದು ಮಾನ್ಯತೆ ನೀಡುವ ಕುರಿತು.

೧೯. **ಶ್ರೀಮತಿ ಸೀಮಾ ಮಸೂತಿ** ಮಾಜಿ ಶಾಸಕಿ ಧಾರವಾಡ. ವಿಷಯ: ಲಿಂಗಾಯತ ಧರ್ಮದ ತೊಂದರೆಗಳ ಕುರಿತು.

೨೦. **ಶ್ರೀ ರಾಜು ಕುಳಗೇರಿ,** ಇವರು ಕಲ್ಬುರ್ಗಿ ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಿದ ಮನವಿ. ವಿಷಯ: ಪ್ರತ್ಯೇಕ ಅಲ್ಪಸಂಖ್ಯಾತ ಧರ್ಮದ ಮಾನ್ಯತೆಗಾಗಿ ವೀರಶೈವ ಲಿಂಗಾಯತ ಸಮಾಜವನ್ನು ಒಡೆದು ಭಾಗ ಮಾಡಿ ರಾಜಕೀಯ ಮಾಡುತ್ತಿರುವ ಕುರಿತು.

೨೧. **ಶ್ರೀ ಎಸ್.ಬಿ.ರಾಜಶೇಖರಯ್ಯ,** ಬಿನ್ ಬಸವಣ್ಣ, ಮಾದನಹಳ್ಳಿ ಗ್ರಾಮ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ. ವಿಷಯ: ನಮ್ಮ ಸಮಾಜದಲ್ಲಿ ಲಿಂಗಾಯತ ವೀರಶೈವ ಒಂದೇ ನಿರ್ಧಾರದ ಬಗ್ಗೆ.

In Public domain. Digitization Muthulakshmi Research Academy

೨೨. **ಶ್ರೀ ಬ್ರಹ್ಮರ್ಶಿ**, ವಿಷಯ: ವೀರಶೈವ ಸಮಾಜದವರ ನಡವಳಿಕೆಗಳ ಕುರಿತು.

೨೩. **ಶ್ರೀ ಎನ್.ರಾಮಕೃಷ್ಣ**, ವಿಷಯ: ಲಿಂಗಾಯತ ಧರ್ಮವನ್ನು ಪ್ರತ್ಯೇಕ ಸ್ವತಂತ್ರ ಧರ್ಮ ಮಾಡುವ ಕುರಿತು.

೨೪. **ಶ್ರೀ ಸಿದ್ದರಾಜ ಬಿರಾದಾರ**, ಮಹಾಗಾಂವ, ವೀರಶೈವ ಲಿಂಗಾಯತ ಬಳಗ ಕಲಬುರಗಿ. ಇವರು ಕಲಬುರಗಿ ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಿದ ಮನವಿ. ವಿಷಯ: ಎಂ.ಬಿ.ಪಾಟೀಲರು ಜಲಸಂಪನ್ಮೂಲ ಸಚಿವರು ಇವರನ್ನು ಸಂಪುಟದಿಂದ ವಜಾ ಮಾಡುವ ಕುರಿತು.

೨೫. **ಶ್ರೀ ವೈಜನಾಥ ಕಾಮಥಾಣೆ**, ಅಧ್ಯಕ್ಷರು, ಅಖಿಲ ಭಾರತ ವೀರಶೈವ ಮಹಾಸಭಾ, ಬೀದರ್ ಜಿಲ್ಲೆ ವಿಷಯ: ಲಿಂಗಾಯತ ಧರ್ಮವನ್ನು ಪ್ರತ್ಯೇಕ ಧರ್ಮ ಮಾಡುವ ಕುರಿತು.

೨೬. **ಶ್ರೀ ವಿರುಪಾಕ್ಷ ಬಳ್ಳೊಳ್ಳಿ**, ಅಧ್ಯಕ್ಷರು, ಲಿಂಗಾಯತ ಪ್ರಗತಿಶೀಲ ಸಂಘ, ಗದಗ-ಬೆಟಗೇರಿ. ವಿಷಯ: ಲಿಂಗಾಯತ ಧರ್ಮವನ್ನು ಸ್ವತಂತ್ರ ಧರ್ಮವೆಂದು ಘೋಷಿಸುವ ಕುರಿತು.

೨೭. **ಶ್ರೀ ಶಿ.ಗು. ವಸ್ತ್ರದ**, ಲಿಂಗಾಯತ ಸರ್ವಧರ್ಮ ಸಮನ್ವಯ ಸಮಿತಿ, ಅಥಣಿ ಬೆಳಗಾವಿ ಜಿಲ್ಲೆ. ವಿಷಯ: ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆ ನೀಡುವ ಕುರಿತು.

೨೮. **ಅಧ್ಯಕ್ಷರು, ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆ**, ದಾವಣಗೆರೆ. ಇವರು ಅಪರ ಜಿಲ್ಲಾಧಿಕಾರಿಗಳು ದಾವಣಗೆರೆ ಇವರ ಮುಖಾಂತರ ಸಲ್ಲಿಸಿದ ಮನವಿ. ವಿಷಯ: ಪಂಚಪೀಠಾಧೀಶ್ವರರಿಗೆ ಅವಮಾನ ಮಾಡಿ ವೀರಶೈವ ಧರ್ಮ ಅಪಚಾರ, ಅವಮಾನ ಮಾಡಿದವರನ್ನು ಬಂಧಿಸಿ ಶಿಕ್ಷಿಸುವ ಕುರಿತು.

೨೯. **ಡಾ. ಶ್ರೀನಿವಾಸ ಎನ್., ಅಪರ ಕಾರ್ಯದರ್ಶಿ**, ಮಾನ್ಯ ಗೃಹಸಚಿವರ ಕಾರ್ಯಾಲಯ, ನಂ. ೧೪೧, ೧ನೇ ಮಹಡಿ ವಿಕಾಸಸೌಧ, ಬೆಂಗಳೂರು. ವಿಷಯ: ಮೌಢ್ಯಮುಕ್ತ ಕರ್ನಾಟಕದ ನಿರ್ಮಾಣ ಕುರಿತು.

೩೦. **ಅಧ್ಯಕ್ಷರು, ರಾಷ್ಟ್ರೀಯ ಬಸವದಳ ಟ್ರಸ್ಟ್**, ಬಸವಮಂಟಪ ವಿನೋಬನಗರ, ಶಿವಮೊಗ್ಗ. ವಿಷಯ: ಪೂಜ್ಯ ಮಾತೆ ಮಹಾದೇವಿಯವರ ಕುರಿತು ರಂಭಾಪುರಿ ಶ್ರೀಗಳು ವ್ಯಕ್ತಪಡಿಸಿರುವ ಮಾತುಗಳನ್ನು ಖಂಡಿಸುವ ಕುರಿತು.

೩೧. **ಕಾಲಜ್ಞಾನ. ವಿಷಯ:** ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮ ಮಾನ್ಯತೆ ನೀಡುವ ಕುರಿತು.

In Public domain. Digitization Muthulakshmi Research Academy

೩೧. **ಶ್ರೀ ಬಿ.ಪಿ. ಐಸ್ವಾಮಿಗೌಡ,** ಅಧ್ಯಕ್ಷರು, ವೀರಶೈವ ಸಂಘ, ಅರಳಿಪೇಟೆ, ಹಾಸನ. ವಿಷಯ: ವೀರಶೈವ ಲಿಂಗಾಯತ ಇತ್ತೀಚಿನ ವಿವಾದದ ಬಗ್ಗೆ ಕೆಲವರು ವಸ್ತುಸ್ಥಿತಿಯನ್ನು ಬರೆದು ಪ್ರಕಟಿಸಿರುವ ಪತ್ರಗಳ ಕುರಿತು.

೩೨. **ಡಾ. ಮಾತೆ ಮಹಾದೇವಿ,** ಸಂಸ್ಥಾಪಕ ಅಧ್ಯಕ್ಷರು, ಲಿಂಗಾಯತಧರ್ಮ ಮಹಾಸಭಾ(ರಿ). ವಿಷಯ: ಲಿಂಗಾಯತ ಧರ್ಮಕ್ಕೆ ಧಾರ್ಮಿಕ ಅಲ್ಪಸಂಖ್ಯಾತರ ಸೌಲಭ್ಯ ನೀಡಲು ಕೇಂದ್ರ ಸರಕಾರಕ್ಕೆ ಸೂಕ್ತ ಶಿಫಾರಸು ಮಾಡಲು ಮನವಿ.

೩೪. **ಶ್ರೀ ಶಿವಕುಮಾರ ಉಪ್ಪಿನ** ಮತ್ತು ಬಸವಾಭಿಮಾನಿ ಗೆಳೆಯರು. ವಿಷಯ: ಲಿಂಗಾಯತ ಧರ್ಮಕ್ಕೆ ಅಲ್ಪಸಂಖ್ಯಾತ ಧರ್ಮದ ಮಾನ್ಯತೆ ನೀಡಲು ಮನವಿ.

೩೫. **ಅಪರ ಜಿಲ್ಲಾಧಿಕಾರಿಗಳು,** ಬೆಳಗಾವಿ. ವಿಷಯ: ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆಗೆ ಬಂದ ಅರ್ಜಿಗಳು.

ಇದಲ್ಲದೆ ವೀರಶೈವ ಮಹಾಸಭಾ ಅಧ್ಯಕ್ಷರು ಎರಡು ಬಾರಿ ಮನವಿ ಸಲ್ಲಿಸಿದ್ದರು. ಲಿಂಗಾಯತ ಧರ್ಮ ವೇದಿಕೆ ಅಧ್ಯಕ್ಷರಾದ ಶ್ರೀ ಬಸವರಾಜ ಹೊರಟ್ಟಿಯವರು ಸೇರಿದಂತೆ ವಿವಿಧ ಸ್ವಾಮೀಜಿಗಳು ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಿಸಿರುವ ಮನವಿಗಳನ್ನು ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರಾದ ತುಷಾರ ಗಿರಿನಾಥ ಅವರು ನೇರವಾಗಿ ಅಧ್ಯಕ್ಷರು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗಕ್ಕೆ ಹಸ್ತಾಂತರಿಸಿದರು. ಮೂವತ್ತು ನಾಲ್ಕು ಅರ್ಜಿಗಳ ರಾಜ್ಯದ ವಿವಿಧಡೆಯಿಂದ ಬಂದಿದ್ದವು. ಲಿಂಗಾಯತ ಸ್ವತಂತ್ರ ಧರ್ಮ ಹೋರಾಟ ಸಮಿತಿಯವರು ಮತ್ತು ಲಿಂಗಾಯತ ಧರ್ಮ ಅಲ್ಪಸಂಖ್ಯಾತ ಧರ್ಮದ ಹೋರಾಟ ಸಮೀತಿಯವರು ರ್‍ಯಾಲಿ ಸಮಯದಲ್ಲಿ ಆಯಾ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಅರ್ಜಿಗಳು ನೇರವಾಗಿ ಮುಖ್ಯಮಂತ್ರಿಗಳ ಕಚೇರಿಗೆ ತಲುಪಿದ್ದವು. ಆರುವರೆ ಕೋಟಿ ಜನಸಂಖ್ಯೆಯ ಕರ್ನಾಟಕದಲ್ಲಿ ಸುಮಾರು ಐವತ್ತು ಅರ್ಜಿಗಳು ಮಾತ್ರ ಸರಕಾರಕ್ಕೆ ಬಂದಿದ್ದವು. ಆದರೆ ಲಿಂಗಾಯತರ ಹೋರಾಟದಲ್ಲಿ ಲಕ್ಷ ಲಕ್ಷ ಜನ ಭಾಗವಹಿಸಿ ತಮ್ಮ ಬೆಂಬಲವನ್ನು ಲಿಂಗಾಯತ ಅಲ್ಪಸಂಖ್ಯಾತ ಧರ್ಮವಾಗಲಿ ಎಂದು ಬಯಸಿದ್ದರು.

ಸರಕಾರವು ಬಹಳ ಎಚ್ಚರಿಕೆಯಿಂದ ಹೆಜ್ಜೆ ಇಡುತ್ತಿತ್ತು. ಸರಕಾರದ ಕಡೆಯಿಂದ ಎಲ್ಲಿಯೂ ಲೋಪವಾಗದಂತೆ ಎಚ್ಚರಿಕೆ ವಹಿಸಿತ್ತು. ಮಾನ್ಯ ಮುಖ್ಯಮಂತ್ರಿಗಳು ವಿಷಯ ಪಾರದರ್ಶಕವಾಗಿ ಚರ್ಚೆಯಾಗಲಿ ಎಂದು ಬಯಸಿದ್ದರು. ಕಾರಣ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಯವರ ಅಧ್ಯಕ್ಷತೆಯಲ್ಲಿ

In Public domain. Digitization Muthulakshmi Research Academy

ತಜ್ಞರ ಸಭೆ ರಚಿಸಿತ್ತು. ಲಿಂಗಾಯತ ಅಥವಾ ವೀರಶೈವೇತರರನ್ನು ಮಾತ್ರ ತಜ್ಞರ ಸಮಿತಿಯ ಸದಸ್ಯರನ್ನಾಗಿ ನೇಮಿಸಿತ್ತು, ಸದಸ್ಯರೆಲ್ಲರೂ ಉನ್ನತ ವ್ಯಾಸಂಗ ಮಾಡಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಂಶೋಧನೆ ಕೈಗೊಂಡು ಡಾಕ್ಟರೇಟ್ ಪಡೆದ ವಿದ್ವಾಂಸರಾಗಿದ್ದರು. ಆರಂಭದಲ್ಲಿ ಸಮಿತಿಯ ವರದಿಯನ್ನು ನಾಲ್ಕು ವಾರಗಳಲ್ಲಿ ಸಲ್ಲಿಸುವಂತೆ ಸೂಚಿಸಿದ್ದರು. ತದನಂತರದಲ್ಲಿ ಅವಧಿಯನ್ನು ವಿಸ್ತರಿಸಲಾಗಿತ್ತು. ಲಿಂಗಾಯತ ಧರ್ಮ ಲಿಂಗತಾರತಮ್ಯ ಮಾಡದ ಧರ್ಮ, ಅನೇಕ ಶರಣೆಯರು ಕಟ್ಟಿದ ಧರ್ಮ ಇದಾಗಿತ್ತು. ಮಹಿಳೆಯ ಅನುಪಮಸ್ಥಿತಿ ಕಾಣುತ್ತಿತ್ತು. ಸರಕಾರ ಅದನ್ನು ಸರಿಪಡಿಸಿ ಶ್ರೀಮತಿ ಹನುಮಾಕ್ಷಿ ಗೋಗಿಯೆಂಬ ಪ್ರಾಜ್ಞ ಮಹಿಳೆಯನ್ನು ಸದಸ್ಯೆಯನ್ನಾಗಿ ಸೇರಿಸಲಾಯಿತು. ಇವರು ಕೂಡ ಹಿಂದುಳಿದ ಪಂಗಡದವರಾಗಿದ್ದರು. ಸಾರ್ವಜನಿಕರಿಂದ ಬಂದ ಅರ್ಜಿಗಳಲ್ಲಿ ಲಿಂಗಾಯತರ ಪರವಾಗಿರುವ ಅರ್ಜಿಗಳು ಮತ್ತು ವೀರಶೈವರ ಪರವಾಗಿ ಸಲ್ಲಿಸಿರುವ ಅಹವಾಲುಗಳನ್ನು ವಿಂಗಡಿಸಲಾಯಿತು. ಬಂದಿರುವ ಮನವಿಗಳಲ್ಲಿ ವೀರಶೈವ ಸಮುದಾಯದ ಒಟ್ಟು ೨೨ ಮನವಿಗಳಿದ್ದವು. ಅರ್ಜಿ ಸಲ್ಲಿಸಿದವರ ಮುಖ್ಯ ಸಾರಾಂಶವನ್ನು ಮಾತ್ರ ಹೆಕ್ಕಿ ತೆಗೆದು ಓದುಗರಿಗೆ ಒದಗಿಸಲಾಗಿದೆ.

ಅ. ಕಲ್ಬುರ್ಗಿಯ ಶ್ರೀ ಶಿವಶಂಕರ ಆರ್. ಬುಜಂಗ ಅವರು ನೀಡಿದ ಮನವಿಯ ಸಾರಾಂಶ ಹೀಗಿದೆ.

೧. ವೀರಶೈವ/ ಲಿಂಗಾಯತ ಹಿಂದೂಧರ್ಮದ ಒಂದು ಭಾಗ.

೨. ವೀರಶೈವ ಲಿಂಗಾಯತ ಧರ್ಮದ ಬೀದಿ ಹೋರಾಟ ಸಮಾಜದ ಸ್ವಾಸ್ಥ್ಯ ಹಾಳುಮಾಡುತ್ತದೆ.

೩. ವೀರಶೈವ, ಲಿಂಗಾಯತ ಒಂದು ನಾಣ್ಯದ ಎರಡು ಮುಖಗಳು.

೪. ವೀರಶೈವ ಲಿಂಗಾಯತ ಧರ್ಮಕ್ಕೆ ಪ್ರಾಚೀನ ಇತಿಹಾಸವಿದ್ದು ಇದರ ವಿಷಯವಾಗಿ ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ಅನೇಕ ಪುಸ್ತಕಗಳಿವೆ, ಲೇಖನಗಳಿವೆ.

೫. ಹಿಂದೂ ಕಾನೂನುಗಳ ಅಡಿಯಲ್ಲಿ ಕ್ರಿಶ್ಚಿಯನ್ನರು, ಹಿಂದೂಗಳು, ಜೈನರು, ಸಿಖ್ಖರು, ಬೌದ್ಧರು ಬರುತ್ತಾರೆ. ಹಾಗೆ ಅಷ್ಟಾವರಣ, ಪಂಚಾಚಾರ, ಷಟ್ಸ್ಥಳ ವೀರಶೈವ ಲಿಂಗಾಯತರಿಗೆ ಅನ್ವಯಿಸುತ್ತವೆ. ಆದ್ದರಿಂದ ಅವು ಬೇರೆ ಬೇರೆ ಅಲ್ಲ.

೬. ಕಲಬುರ್ಗಿಯ ಚನ್ನಬಸಪ್ಪ ಅಪ್ಪ ಹಾಗೂ ಶ್ರೀಶೈಲ ಜಗದ್ಗುರುಗಳು ಗುರು-ವಿರಕ್ತರಲ್ಲಿ ಭೇದಭಾವವಿಲ್ಲವೆಂದು ಹೇಳಿದ್ದಾರೆ. ಅದರೆ ಮಾತೆ

In Public domain. Digitization Muthulakshmi Research Academy
ಮಹಾದೇವಿಯವರು ಮತ್ತು ಚಿದಾನಂದಮೂರ್ತಿಯವರ ಬೇರೆ ವಾದ ಮಂಡಿಸುತ್ತಾರೆ.

೭. ಇದು ಬಿ.ಜೆ.ಪಿ.ಯ ನಾಯಕರಾದ ಯಡಿಯೂರಪ್ಪನವರನ್ನು ಅಶಕ್ತಗೊಳಿಸುವ ಹೋರಾಟವಾಗಿದೆ.

೮. ಸಿದ್ಧಗಂಗಾ ಶ್ರೀಗಳ ಪ್ರಸ್ತಾಪ ಮಾಡುವುದು ಸರಿಯಲ್ಲ. ಮಾತೆ ಮಹಾದೇವಿ ಅವರ ಬಗ್ಗೆ ಹಗುರವಾಗಿ ಮಾತಾಡುವುದೂ ಸರಿಯಲ್ಲ.

೯. ಅಲ್ಪಸಂಖ್ಯಾತ ಧರ್ಮದ ಸೌಲಭ್ಯ ಇವರಿಗೆ ಕೊಡುವುದರಿಂದ ಬೇರೆ ಧರ್ಮದವರು ಮೀಸಲಾತಿಯಿಂದ ವಂಚನೆಗಳಿಗೆ ಒಳಗಾಗುತ್ತಾರೆ. ಅಲ್ಪಸಂಖ್ಯಾತ ಧರ್ಮದ ಆಸೆ ತೋರಿಸುವುದು ತರವಲ್ಲ.

೧೦. ಲಿಂಗಾಯತ ಶಬ್ದವನ್ನು ಯಾವ ವಚನಗಳಲ್ಲಿಯೂ ಬಳಸಿಲ್ಲ.

೧೧. ಕಾಂಗ್ರೆಸ್ ಪಕ್ಷದವರಿಂದ ಮತಗಳು ವಿಭಜನೆ ಆಗುತ್ತವೆ. ಇವರು ತಮ್ಮ ಹೇಳಿಕೆಗೆ ಯಾವುದೇ ಸಮರ್ಥನೆ ಅಥವಾ ದಾಖಲೆಗಳನ್ನು ನೀಡಿಲ್ಲ.

ಆ. ಬೆಂಗಳೂರಿನ ನಾಗರಿಕರಾದ ಎನ್. ರಾಮಕೃಷ್ಣ ಅವರು ಲಿಂಗಾಯತ ಧರ್ಮವನ್ನು ಪಾಲಿಸುವವರಲ್ಲ. ಅವರು ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರದ ಒಂದು ಪ್ರತಿಯನ್ನು ತಮ್ಮ ಅಹವಾಲಿಗೆ ಲಗತ್ತಿಸಿ ಕರ್ನಾಟಕದಲ್ಲಿ ಲಿಂಗಾಯತರು ಸ್ವತಂತ್ರ ಧರ್ಮ ಕೇಳುತ್ತಿರುವುದು ಸರಿಯಲ್ಲವೆಂದೂ, ಈ ಹೋರಾಟ ಬಸವಣ್ಣನವರ ಸಿದ್ಧಾಂತವಾದ ವಿಶ್ವಬಂಧುತ್ವವನ್ನು ತಳ್ಳಿಹಾಕುತ್ತದೆ ಎಂಬ ಮನವಿಸಲ್ಲಿಸಿದ್ದರು. ಮುಂದುವರಿದು ಲಿಂಗಾಯತರಿಗೆ ಅಲ್ಪಸಂಖ್ಯಾತ ಸ್ಥಾನ ಕೊಟ್ಟರೆ ಬ್ರಾಹ್ಮಣರಿಗೂ ಕೊಡಬೇಕು ಎಂಬುದು ಇವರ ವಾದ.

ಇ. ಬಾಗಲಕೋಟೆ ಜಿಲ್ಲಾ ಇಲಕಲ್ ನಿವಾಸಿಯಾದ ಶ್ರೀ ಮಲ್ಲಿಕಾರ್ಜುನ ಬಕೂರಿಯವರು ತಮ್ಮ ಜಿಲ್ಲಾಧಿಕಾರಿಗಳಿಗೆ ಒಂದು ಪತ್ರ ಬರೆದು ಈ ಅಂಶಗಳನ್ನು ಎತ್ತಿ ಹಿಡಿದಿದ್ದಾರೆ. ಲಿಂಗ ಧರಿಸುವವರೆಲ್ಲರೂ ಲಿಂಗಾಯತರು. ಎಲ್ಲ ಜಾತಿಯವರು ಲಿಂಗ ಧರಿಸುತ್ತಾರೆ. ವೀರಶೈವ ಧರ್ಮದವರಾದ ಜಾತ ಮುನಿಗಳಿಂದ ಬಸವಣ್ಣನವರು ದೀಕ್ಷೆ ಪಡೆದರು. ರೇಣುಕಾಚಾರ್ಯರೇ ಈ ಧರ್ಮದ ಸ್ಥಾಪಕರು. ಸರ್ಕಾರದ ಸೌಲಭ್ಯಕ್ಕಾಗಿ ಅಲ್ಪಸಂಖ್ಯಾತ ಮಾನ್ಯತೆ ಪಡೆಯುವ ಬದಲು ಹಿಂದೂಧರ್ಮವನ್ನು ಬಲಪಡಿಸಬೇಕು. ಹಿಂದೂಧರ್ಮ ಮರೆಯಾಗುತ್ತದೆ ಎಂದು ತಮ್ಮ ಆತಂಕವನ್ನು ಹೊರಹಾಕಿದ್ದಾರೆ. ಈ ಪತ್ರಕ್ಕೆ ಒಬ್ಬರೇ ಸಹಿ ಹಾಕಿದ್ದಾರೆ. ದಾಖಲೆಗಳನ್ನು ನೀಡಿಲ್ಲ.

In Public domain. Digitization Muthulakshmi Research Academy

ಈ. ವಿಜಾಪುರ ಜಿಲ್ಲಾ ಘಟಕವಾದ ಅಖಿಲ ಕರ್ನಾಟಕ ಜಂಗಮ ಕ್ಷೇಮಾಭಿವೃದ್ಧಿ ಮಹಾಸಭೆಯವರು, ವಿಜಾಪುರ ಜಿಲ್ಲಾ ದಂಡಾಧಿಕಾರಿಗಳಿಗೆ ೨.೮.೨೦೧೭ರಲ್ಲಿ ೩೮ ಜನ ಸಹಿ ಹಾಕಿ ಒಂದು ಅರ್ಜಿ ಸಲ್ಲಿಸಿದ್ದು ಅದರಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಿದ್ದಾರೆ.

೧. ವೀರಶೈವದ ಒಳಿತಿಗಾಗಿ ಶ್ರೀ ರಂಭಾಪುರಿ ಜಗದ್ಗುರುಗಳು ಶ್ರಮಿಸುತ್ತಿದ್ದಾರೆ.

೨. ವೀರಶೈವ ಲಿಂಗಾಯತ ಧರ್ಮ ಪುರಾತನ ಧರ್ಮವಾಗಿದೆ.

೩. ವೀರಶೈವ ಲಿಂಗಾಯತ ಸಮಾಜಗಳು ಒಂದೇ ಸಂಸ್ಕಾರ ಮತ್ತು ಆಚಾರದಿಂದ ಕೂಡಿವೆ. ಅವುಗಳನ್ನು ಬೇರ್ಪಡಿಸಬಾರದು.

೪. ಅಖಿಲ ಭಾರತ ವೀರಶೈವ ಮಹಾಸಭೆಯವರ ಇಚ್ಛೆಯಂತೆ ವೀರಶೈವ-ಲಿಂಗಾಯತ ಎಂದು ಕೇಂದ್ರ ಸರಕಾರದ ಮಾನ್ಯತೆಗೆ ಇಡಬೇಕು.

೫. ಧರ್ಮದ ಅವಹೇಳನ ಮಾಡುವವರನ್ನು ಬಂಧಿಸಬೇಕು. ಇವರು ತಮ್ಮ ವಾದಗಳನ್ನು ಬಲಪಡಿಸುವ ಯಾವುದೇ ದಾಖಲೆಗಳನ್ನು ನೀಡಿಲ್ಲ.

ಉ. ಹೊನ್ನಾಳಿ ತಾಲ್ಲೂಕಿನ ಹಿರೇಕಲ್ಮಠದ ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ ಸ್ವಾಮಿಗಳು ಇವರು ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಅಹವಾಲನ್ನು ಆಗಸ್ಟ್ ೨, ೨೦೧೭ರಲ್ಲಿ ಸಲ್ಲಿಸಿದ್ದರು. ಆ ಅರ್ಜಿಯ ಸಾರಾಂಶ ಇದು.

೧. ವೀರಶೈವ ಧರ್ಮವು ವೇದ ಆಗಮ ಉಪನಿಷತ್ತುಗಳನ್ನು ಅವಲಂಬಿಸಿದೆ.

೨. ವೀರಶೈವ ಧರ್ಮದಲ್ಲಿ ನಾಲ್ಕು ಪರಂಪರೆಗಳಿವೆ. ಇದು ಅತ್ಯಂತ ಪ್ರಾಚೀನವಾದದ್ದು.

೩. ವೀರಶೈವ ಧರ್ಮ ಅನೇಕ ಜಾತಿಗಳನ್ನು ಒಳಗೊಂಡಿದೆ.

೪. ರೇಣುಕಾದಿ ಶರಣರು ಈ ಧರ್ಮಸ್ಥಾಪಕರು ಮತ್ತು ವೀರಶೈವ ಮಠಗಳ ಮೂಲಕ ಧರ್ಮಸಂಸ್ಕೃತಿಯನ್ನು ಪ್ರಚಾರ ಮಾಡುತ್ತಿದ್ದಾರೆ.

೫. ೧೨ನೇ ಶತಮಾನದ ಬಸವಾದಿ ಶರಣರು ಈ ಧರ್ಮಕ್ಕೆ ಹೊಸ ಆಯಾಮ ನೀಡಿ ಇದನ್ನು ಆಂದೋಲನವನ್ನಾಗಿ ಮಾಡಿದರು. ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ಸಮುದಾಯಗಳನ್ನು ವಿಭಜಿಸಲು ಪ್ರಯತ್ನಿಸುತ್ತಿದ್ದಾರೆ. ಧರ್ಮ ಒಡೆಯುವವರ ವಿರುದ್ಧ ಕ್ರಮ ಜರುಗಿಸಬೇಕು. ಈ ಮನವಿಗೆ ೫೦ಕ್ಕಿಂತ ಹೆಚ್ಚಿಗೆ ಜನ ಸಹಿ ಮಾಡಿ ಅನುಮೋದಿಸಿದ್ದಾರೆ. ತಮ್ಮ ಹೇಳಿಕೆಯನ್ನು ಸಮರ್ಥಿಸಲು ಯಾವುದೇ ದಾಖಲೆ ನೀಡಿಲ್ಲ.

In Public domain. Digitization Muthulakshmi Research Academy

ಊ. ಹನ್ನೆರಡು ಜನ ಸಹಿ ಮಾಡಿದ ಒಂದು ಅರ್ಜಿ ಶ್ರೀಮದ್ ವೀರಶೈವ ಸದ್ಬೋಧನಾ ಸಂಸ್ಥೆ ದಾವಣಗೆರೆ ಘಟಕ, ವೀರಶೈವ ಯುವ ವೇದಿಕೆ ಹುಬ್ಬಳ್ಳಿ ಇವರು ಸಲ್ಲಿಸಿದ ಮತ್ತೊಂದು ಮನವಿಗೆ ೩೦ ಜನರು ಹಸ್ತಾಕ್ಷರ ನೀಡಿ, ಇದೇ ವಿಷಯವಾಗಿ ವೀರಶೈವ ಲಿಂಗಾಯತ ಸಮಾಜ ಹುಬ್ಬಳ್ಳಿ ಇವರ ಮನವಿಯನ್ನು ೭೫ ಜನರು ಮತ್ತು ಪ್ರಕಾಶ ಬೆಂಡಿಗೇರಿ ಇವರ ಮನವಿಯನ್ನು ೯೦ ಜನರು ಸಹಿ ಮಾಡಿದ ಮನವಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದರು. ಈ ಮೇಲಿನ ಮನವಿಗಳಲ್ಲಿ ವೀರಶೈವ ಲಿಂಗಾಯತ ಧರ್ಮವನ್ನು ಬೇರ್ಪಡಿಸದೆ 'ವೀರಶೈವ-ಲಿಂಗಾಯತ ಎಂದು ಪರಿಗಣಿಸಿ ಸ್ವತಂತ್ರ ಧರ್ಮ ಎಂದು ಘೋಷಿಸಬೇಕು' ಎಂಬ ಸಾರಾಂಶದ ಮನವಿಯನ್ನು ನೀಡಿದ್ದವು.

ಋ. ಭದ್ರಾವತಿ ತಹಸೀಲ್ದಾರರ ಮೂಲಕ ಸಲ್ಲಿಸಿದ ಶ್ರೀ ಜಗದ್ಗುರು ರೇಣುಕಾಚಾರ್ಯ ಸೇವಾ ಸಮಿತಿಯವರು ಮತ್ತು ಅಖಿಲ ಭಾರತ ವೀರಶೈವ ಸೇವಾ ಸಮಾಜ, ಜಂಗಮ ಸೇವಾ ಸಮಿತಿ ಭದ್ರಾವತಿ ಎಂಬ ಸಂಸ್ಥೆಗಳಿಂದ ೨೩೦ ಜನರು ಸಹಿ ಮಾಡಿದ ಅಹವಾಲಿನಲ್ಲಿ ಈ ವಿಷಯ ಒಳಗೊಂಡಿದೆ. ಬಸವಣ್ಣನವರು ಬ್ರಾಹ್ಮಣರಾಗಿ ಹುಟ್ಟಿದರೂ ವೀರಶೈವ ಧರ್ಮ ಸ್ವೀಕರಿಸಿದರು. ಲಿಂಗಾಯತ ವೀರಶೈವ ಎರಡೂ ಒಂದೇ ಕಾರಣ ಧರ್ಮವನ್ನು ಬೇರ್ಪಡಿಸಬಾರದು ಎಂಬ ಸಾರಾಂಶ ಈ ಅರ್ಜಿಗಳದು. ಈ ಮೇಲಿನ ಅರ್ಜಿಗಳೊಂದಿಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿಲ್ಲ.

ಎ. ಬೆಂಗಳೂರಿನ ಬಿ.ಎಸ್. ನಟರಾಜ ಅವರು ವಿವರವಾಗಿ ವೀರಶೈವ ಧರ್ಮದ ಬಗ್ಗೆ ಬರೆಯುತ್ತ ವೀರಶೈವ ಧರ್ಮವನ್ನು ಜಗದ್ಗುರು ರೇಣುಕಾಚಾರ್ಯ ಸ್ಥಾಪಿಸಿದ್ದಾರೆ. ಅದೇ ಧರ್ಮವನ್ನು ಬಸವಣ್ಣನವರು ಸುಧಾರಣೆ ಮಾಡಿದ್ದಾರೆ ಎನ್ನುತ್ತ ಬಸವಣ್ಣ ವೀರಶೈವ ಧರ್ಮ ಸ್ಥಾಪಕರಲ್ಲ ಎನ್ನುವ ಸ್ಪಷ್ಟವಾದ ಅಭಿಪ್ರಾಯ ಮಂಡಿಸುತ್ತಾರೆ. ಶರಣರು ವೇದ ಮತ್ತು ಸಂಸ್ಕೃತ ಭಾಷೆಯ ವಿರೋಧಿಗಳಾಗಿರಲಿಲ್ಲ. ಅವರು ಸ್ಥಾವರದ ವಿರೋಧಿಗಳೂ ಆಗಿರಲಿಲ್ಲ. ಬಸವಣ್ಣನವರ ಪೂರ್ವದಲ್ಲಿಯೂ ವಚನ ಸಾಹಿತ್ಯವಿತ್ತು. ವಚನ ಗ್ರಂಥಗಳು ಮಾತ್ರವೇ ಲಿಂಗಾಯತ ಧರ್ಮಗ್ರಂಥಗಳಲ್ಲ. ಕನ್ನಡ ಭಾಷೆಯೇ ಲಿಂಗಾಯತ ಧರ್ಮ ಭಾಷೆ ಅಲ್ಲ. ಕೊಂಡಗುಳಿ ಕೇಶಿರಾಜ ಮತ್ತು ಜೇಡರ ದಾಸಿಮಯ್ಯರ ಹೆಸರನ್ನು ಅವರು ಉದಾಹರಿಸುತ್ತಾರೆ. ಬಸವಣ್ಣನವರ ವಚನಗಳಲ್ಲಿ ವೀರಶೈವರನ್ನು ಬೆಂಬಲಿಸುವ ಅಧಾರಗಳು ಇವೆ ಎನ್ನುತ್ತಾರೆ. ಜನಗಣತಿಯ ಆಧಾರಗಳು ಧರ್ಮದ ಪ್ರಮಾಣಗಳು ಆಗಲಾರವು ಎನ್ನುತ್ತ ತಜ್ಞರ ಸಮಿತಿಯ ಬಹುಸದಸ್ಯರು ಲಿಂಗಾಯತ

In Public domain. Digitization Muthulakshmi Research Academy

ಪಕ್ಷಪಾತಿಗಳು ಎಂದು ಆಪಾದಿಸಿದ್ದಾರೆ. ಇದರಲ್ಲಿ ಅಧ್ಯಕ್ಷರನ್ನು ಮತ್ತು ಸರಜೂ ಕಾಟ್ಕರ್ ಅವರನ್ನು ಹೊರತುಪಡಿಸಿ ಎಂದಿದ್ದಾರೆ.

ಏ. ಲಿಂಗಾಯತವು ವೀರಶೈವ ಪರ್ಯಾಯ ಪದ, ವೀರಶೈವ ಧರ್ಮವಾಚಕ ಲಿಂಗಾಯತವು ದೀಕ್ಷಾಸಂಸ್ಕಾರದಿಂದ ಬಂದಿದೆ ಎನ್ನುತ್ತಾರೆ. ಷಟ್ಸ್ಥಲ, ಅಷ್ಟಾವರಣ ಪಂಚಾಚಾರ ಈ ಮೂರು ವೀರಶೈವರ ಆಧಾರದ ತತ್ವಗಳು ಎನ್ನುತ್ತಾರೆ. ಇಷ್ಟಲಿಂಗದ ಬಗ್ಗೆ ಬರೆಯುತ್ತ "ಗುರು ದೀಕ್ಷೆ ನೀಡುವಾಗ ಇಷ್ಟಲಿಂಗವನ್ನು ಕೊಟ್ಟು ಆಶೀರ್ವದಿಸುತ್ತಾನೆ. ಹೀಗೆ ದೀಕ್ಷೆ ಪಡೆದ ವ್ಯಕ್ತಿ ವೀರಶೈವನೆನಿಸಿಕೊಳ್ಳುತ್ತಾನೆ, ಅವನನ್ನೇ ಲಿಂಗಾಯತ ಎಂದೂ ಕರೆಯಲಾಗುತ್ತದೆ" ಎಂದು ನಟರಾಜ ಅಭಿಪ್ರಾಯ ಪಡುತ್ತಾರೆ. ಬಸವಾದಿ ಶರಣರು ವೀರಶೈವವನ್ನು ಒಪ್ಪಿಕೊಂಡಿದ್ದರೂ ಹೊಸಧರ್ಮ ಸ್ಥಾಪಿಸಿಲ್ಲ. ೧೯೦೪ರಲ್ಲಿ ವೀರಶೈವ ಮಹಾಸಭೆಯು ತನ್ನ ಮೊದಲ ಅಧಿವೇಶನದಲ್ಲಿ ವೀರಶೈವ ಹಿಂದೂಧರ್ಮದ ಭಾಗ ಎಂದು ನಿರ್ಣಯ ಕೈಗೊಂಡಿದ್ದರು. ಬ್ರಿಟಾನಿಕಾ ವಿಶ್ವಕೋಶವನ್ನು ಉಲ್ಲೇಖಿಸುತ್ತ ವೀರಶೈವ ಲಿಂಗಾಯತದಲ್ಲಿ ಸೇರಿಕೊಂಡಿದೆ ಎಂಬ ಪ್ರಸ್ತಾಪವನ್ನು ಪ್ರಸಿದ್ಧ ವಿದ್ವಾಂಸರು ಅದರಲ್ಲಿ ನಮೂದಿಸಿದ್ದಾರೆ ಎಂದರು. ಬಸವಣ್ಣನವರ ವಚನಗಳಲ್ಲಿ ಲಿಂಗಾಯತ ಶಬ್ದವನ್ನು ಬಳಸಿಲ್ಲ. ಆದರೆ ಅವರು ಮೂರು ಬಾರಿ ವೀರಶೈವ ಶಬ್ದ ಬಳಸಿದ್ದಾರೆ ಎನ್ನುತ್ತಾರೆ. ಬಸವಣ್ಣನವರ ಒಂದು ವಚನ, ಚೆನ್ನಬಸವಣ್ಣನವರ ಎರಡು ಮತ್ತು ಅಕ್ಕಮಹಾದೇವಿಯವರ ಒಂದು ವಚನ ಉಲ್ಲೇಖಿಸಿ ಈ ಶರಣರು ವೇದಾಗಮಗಳನ್ನು ಒಪ್ಪಿಕೊಂಡಿದ್ದರು ಎನ್ನುವುದಕ್ಕೆ ಆಧಾರ ನೀಡುತ್ತಾರೆ. ಶರಣರು ಸಂಸ್ಕೃತ ಭಾಷೆಯನ್ನು ವಿರೋಧಿಸಿರಲಿಲ್ಲ. ಸುಮಾರು ೬೫೦ ಬಾರಿ ವಚನಗಳಲ್ಲಿ ಸಂಸ್ಕೃತವನ್ನು ಬಳಸಿದ್ದಾರೆ ಎನ್ನುತ್ತಾರೆ. 'ಓಂ ನಮಃ ಶಿವಾಯ' ಮಂತ್ರವು ಯುಜುರ್ವೇದದ ರುದ್ರ ಅಧ್ಯಾಯದ ಎಂಟನೆಯ ಋಕ್ಕುವಿನಲ್ಲಿದೆ. ಅದನ್ನು ಚೆನ್ನಬಸವಣ್ಣನವರು ತಮ್ಮ ವಚನಗಳಲ್ಲಿ ವಿವರಿಸಿದ್ದಾರೆ ಎನ್ನುತ್ತಾರೆ. ನಟರಾಜ ಅವರು ತಮ್ಮ ಅಹವಾಲಿನಲ್ಲಿ ದ್ವಂದ್ವ ನೀತಿಯನ್ನು ಪ್ರತಿಪಾದಿಸಿದ್ದಾರೆ. 'ಶರಣರು ಏಕೆ ವೇದಗಳನ್ನು ವಿರೋಧಿಸುತ್ತಾರೆ' ಎಂದು ಹೇಳಿದ್ದು, ಆದರೆ 'ಸಂಪೂರ್ಣವಾಗಿ ವೇದಗಳನ್ನು ಬಹಿಷ್ಕರಿಸಲಿಲ್ಲ' ಎಂಬ ಹೇಳಿಕೆಗೆ ಯಾವುದೇ ಆಧಾರ ನೀಡಿರುವುದಿಲ್ಲ. ಶಿವಾಗಮಗಳಲ್ಲಿಯೂ ವೇದಗಳಂತೆ ಪಶುಬಲಿ ಇದೆಯೆಂದು ನಟರಾಜ ಅಭಿಪ್ರಾಯಪಡುತ್ತಾರೆ. ವಚನಕಾರರು ಸ್ಥಾವರ ವಿರೋಧಿಗಳಾಗಿರಲಿಲ್ಲ ಎಂಬುದಕ್ಕೆ ಅವರ ವಚನಗಳಲ್ಲಿರುವ ಅಂಕಿತನಾಮಗಳೇ ಸಾಕ್ಷಿ ಎಂದು ನಟರಾಜ ವಾದಿಸುತ್ತಾರೆ. 'ಲಿಂಗಸಮಾನತೆ' ಮತ್ತು 'ವರ್ಣಾಶ್ರಮ'

In Public domain. Digitization Muthulakshmi Research Academy

ವಿರೋಧಿ ಮೌಲ್ಯಗಳನ್ನು ಶರಣರಿಗಿಂತ ಪೂರ್ವದಲ್ಲಿ ವೀರಶೈವ ಧರ್ಮ ಪ್ರತಿಪಾದಿಸಿದ್ದಕ್ಕೆ ಸಿದ್ಧಾಂತ ಶಿಖಾಮಣಿಯನ್ನು ಆಧಾರವಾಗಿ ನೀಡುತ್ತಾರೆ. ಶರಣರು ತಮ್ಮ ವಚನಗಳಲ್ಲಿ ವೀರಶೈವ ಪದವನ್ನು ಬಳಸಿದ್ದರೆಂಬುದಕ್ಕೆ ಸಾಕ್ಷಿಗಳನ್ನು ಒದಗಿಸಿದ್ದಾರೆ. ದೀಕ್ಷಾಬೋಧೆಯೆಂಬ ಕೆರೆಯ ಪದ್ಮರಸರ ಪುಸ್ತಕದ ಆಧಾರ ನೀಡಿದ್ದಾರೆ. ಪ.ಗು.ಹಳಕಟ್ಟಿಯವರ ವಚನಶಾಸ್ತ್ರಸಾರ ಪುಸ್ತಕದಲ್ಲಿ ವೀರಶೈವ ಪದ ಬಳಕೆಯ ಬಗ್ಗೆ ಹೇಳಿದ್ದಾರೆ. ಕೊನೆಯದಾಗಿ ನಟರಾಜ ಅವರು ಸಾಕ್ಷ್ಯ ಒದಗಿಸಲು ಎರಡು ತಿಂಗಳು ಕಾಲಾವಕಾಶ ಕೇಳಿದ್ದರು.

೫. ಕಲ್ಬುರ್ಗಿಯ ವೀರಶೈವ ಲಿಂಗಾಯತ ಬಳಗ ಇವರು ಸೆಪ್ಟೆಂಬರ್ ೧೪, ೨೦೧೭ರಂದು ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ಜಲಸಂಪನ್ಮೂಲ ಸಚಿವ ಎಂ.ಬಿ.ಪಾಟೀಲರನ್ನು ಸಂಪುಟದಿಂದ ಕೈ ಬಿಡಲು ಆಗ್ರಹಿಸಿದ್ದಾರೆ. ಇದೇ ರೀತಿಯಾಗಿ ಕಲ್ಬುರ್ಗಿ ಜಿಲ್ಲೆಯ ಶ್ರೀ ರಾಜು ಕೊಡಗೇರಿ ಮತ್ತು ಸುರೇಶ ಜೋಗುರ ಇವರು ಶ್ರೀ ಶಿವಕುಮಾರ ಸ್ವಾಮಿಗಳ ಹೇಳಿಕೆ ತಿರುಚಿದ, ಲಿಂಗಾಯತ ಧರ್ಮವನ್ನು ಒಡೆಯುತ್ತಿರುವ ಎಂ.ಬಿ.ಪಾಟೀಲರನ್ನು ಸಂಪುಟದಿಂದ ವಜಾ ಮಾಡಬೇಕೆಂಬ ಬೇಡಿಕೆ ಸಲ್ಲಿಸಿದ್ದಾರೆ.

೬. ನಂಜನಗೂಡು ತಾಲ್ಲೂಕಿನ ಮಾದನಹಳ್ಳಿ ಗ್ರಾಮದ ಶ್ರೀ ಎಸ್.ಬಿ.ನಂಜುಂಡಯ್ಯ ಅವರು ಲಿಂಗಾಯತ ಮತ್ತು ವೀರಶೈವ ಒಂದೇ. ಅದನ್ನು ಒಡೆಯಬಾರದು ಎಂದು ವಿನಂತಿಸಿದ್ದರು.

೭. ಹಾಸನ ಜಿಲ್ಲೆಯ ಶ್ರೀ ಬಿ.ಪಿ.ಐಶಾಮಿಗೌಡ ಅವರು ಲಿಂಗಾಯತ ಹಾಗೂ ವೀರಶೈವರಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ ಎನ್ನುತ್ತ ಲಿಂಗಾಯತ ಧಾರ್ಮಿಕ ಕಾರ್ಯಗಳಲ್ಲಿ ಪರೋಕ್ಷವಾಗಿ ಪಂಚಾಚಾರದ ಗುರುಗಳ ಉಪಸ್ಥಿತಿ ಇರುತ್ತದೆ. ಲಿಂಗಾಯತರೂ ಪಂಚಾಚಾರವನ್ನು ಸಂಕೇತಿಸುವ ಪಂಚಕಲಶಗಳನ್ನು ಸ್ಥಾಪಿಸಿ ಶುಭಕಾರ್ಯ ಮಾಡುತ್ತಾರೆ. ಈಗಿರುವ ಲಿಂಗಾಯತ, ವೀರಶೈವ ಮಠಗಳಲ್ಲಿ ಗುರುಗಳ ಸ್ಥಾನದಲ್ಲಿ ಜಂಗಮರೇ ಆಗಿದ್ದಾರೆ. ವಿರಕ್ತಮಠಗಳಿಗೂ ಜಂಗಮರೇ ಪೀಠಾಧಿಪತಿಗಳಾಗಿದ್ದಾರೆ. ಇವರೆಲ್ಲರೂ ಪಂಚಾಚಾರ್ಯರ ಪರಂಪರೆಯಲ್ಲಿ ಬಂದವರಾಗಿದ್ದಾರೆ. ಈ ಮಠಗಳಲ್ಲಿ ಸಂಸ್ಕೃತ ವೇದಾಧ್ಯಯನ ನಡೆಯುತ್ತದೆ. ಶಿವಯೋಗ ಮಂದಿರದಲ್ಲಿ ವೇದಾಂತ, ವೇದಾಧ್ಯಯನ ಬೋಧಿಸಲಾಗುತ್ತದೆ. ಇದಕ್ಕೆ ವೀರಶೈವ ಶಿವಯೋಗ ಮಂದಿರವೆಂದೇ ಹೆಸರಿದೆ. ಮಹಾಭಾರತ ಕಾಲದಿಂದಲೂ ವೀರಶೈವ ಇದೆ. ಇದನ್ನು ಸಿದ್ಧಾಂತ ಶಿಖಾಮಣಿಯಲ್ಲಿ ಉಲ್ಲೇಖಿಸಲಾಗಿದೆ. ವೀರಶೈವ-ಲಿಂಗಾಯತ ಬೇರೆ ಬೇರೆಯೆಂದು

In Public domain. Digitization Muthulakshmi Research Academy
ರಾಜಕೀಯ ಲಾಭಕ್ಕಾಗಿ ಸೃಷ್ಟಿಸಲಾಗಿದೆ. ಇವೆರಡರಲ್ಲಿ ಯಾವುದೇ ತರಹವಾದ ಬಿನ್ನಾಭಿಪ್ರಾಯವಿಲ್ಲ ಎಂದು ಮನವಿ ಸಲ್ಲಿಸಿದ್ದರು.

೩. ವೀರಭದ್ರಯ್ಯ ಚನಬಸಯ್ಯ ಹಿರೇಮಠ, ಸಾ. ಹೊಸಪೇಟೆ ಅವರು ೨೪-೧-೨೦೧೮ರಂದು ನೇರವಾಗಿ ಅಲ್ಪಸಂಖ್ಯಾತ ಅಯೋಗಕ್ಕೆ ಮನವಿ ಸಲ್ಲಿಸಿದ್ದು ಅದರ ಸಾರಾಂಶ ಹೀಗಿದೆ.

೧. ವೀರಶೈವ ಸಂಸ್ಥಾಪಕರೆಂದು ಭಾವಿಸಿರುವ ರೇವಣಸಿದ್ಧರ ಬಗ್ಗೆ ಆರು ತೆಲುಗು ಶಾಸನಗಳ ವಿವರ ಕೊಟ್ಟಿದ್ದಾರೆ. ಲೇಖಕರ ಅಭಿಪ್ರಾಯದಂತೆ ಇವು ಕ್ರಿಪೂ. ೬೦೦ರಿಂದ ಕ್ರಿಶ. ೫೦೦ ವರ್ಷಗಳ ಕಾಲದವು ಎನ್ನುತ್ತಾರೆ.

೨. ಹರಿಹರನ ಬಸವರಾಜದೇವರ ರಗಳೆಯಲ್ಲಿ ಉಲ್ಲೇಖಿಸಿದ ನಾಲ್ಕು ಸ್ಥಳಗಳಲ್ಲಿ ಬರುವ ವಾಕ್ಯಗಳು ವೀರಶೈವ ಧರ್ಮಕ್ಕೆ ಸಂಬಂಧಿಸಿದವು ಎಂದು ಅಭಿಪ್ರಾಯಪಟ್ಟಿದ್ದಾರೆ.

೩. ಲಿಂಗಾಯತ ಧರ್ಮವನ್ನು ಯಾರೂ ಹಾಗೂ ಯಾವ ಕಾಲದಲ್ಲಿಯೂ ಸ್ಥಾಪಿಸಿಲ್ಲ ಎಂದು ಇವರ ವಾದವಾಗಿದೆ.

೪. ಬಸವಣ್ಣನವರು ಶೈವನಿಂದ ವೀರಶೈವನಾದೆ ಎಂದು ಹೇಳಿದ್ದು ವಚನದಲ್ಲಿದೆ ಎಂದಿದ್ದಾರೆ. ವಚನದ ಸಂಖ್ಯೆಯನ್ನು ನಮೂದಿಸಿಲ್ಲ.

೫. ವಚನಗಳಲ್ಲಿ ಶರಣರು ಲಿಂಗಾಯತ ಪದವನ್ನೇ ಬಳಸಿಲ್ಲ. ಆದರೆ ವೀರಶೈವ ಪದವನ್ನು ಎರಡು ನೂರಕ್ಕೂ ಹೆಚ್ಚು ಬಾರಿ ಬಳಸಿದ್ದಾರೆಂದು ಅವರ ವಾದವಾಗಿದೆ.

೬. ಶರಣರು ಗುರುಪರಂಪರೆಯಾದ ಪಂಚಪೀಠಗಳನ್ನು ಒಪ್ಪಿಕೊಂಡಿದ್ದರು ಎನ್ನುತ್ತಾರೆ.

೭. ಗುರುವಿರುವುದು ಮಠ. ಅನುಭವ ಮಂಟಪವಾಗದು. ಭಕ್ತ ಜಂಗಮನಾಗಬಹುದೇ ಹೊರತು ಗುರುವಾಗಬಹುದೆಂದು ಬಸವಣ್ಣನ ಆದಿಯಾಗಿ ಯಾವುದೇ ಶರಣರು ಹೇಳಿಲ್ಲ ಎನ್ನುತ್ತಾರೆ.

೮. ಆರಾಧ್ಯರು, ವೀರಶೈವರು, ಬ್ರಾಹ್ಮಣರೆಂಬ ಬಗ್ಗೆ ಅರ್ಜಿದಾರರು ಕೆಲವು ಸತ್ಯ ಸಂಗತಿಗಳನ್ನು ತಿರುಚಿದ್ದಾರೆ. ಅವರು ಸ್ಪಷ್ಟವಾಗಿ ಆರಾಧ್ಯರು ಮತ್ತು ಆರಾಧ್ಯ ಬ್ರಾಹ್ಮಣರು ಒಂದೇ ಧರ್ಮಾಶ್ರಿತ ಜನಾಂಗಗಳು. ಗುರುಪರಂಪರೆಯಲ್ಲಿ ಇದು ಪಂಡಿತಾರಾಧ್ಯರೆಂದು ಹೇಳುತ್ತದೆ. ೧೨ನೆಯ ಶತಮಾನದಲ್ಲಿ ವೀರಶೈವವನ್ನು ಒಪ್ಪಿಕೊಂಡು ತಮ್ಮನ್ನು ಆರಾಧ್ಯ ಬ್ರಾಹ್ಮಣರೆಂದು ಕರೆದುಕೊಂಡಿದ್ದಾರೆ ಎಂದು ಬರೆಯುತ್ತಾರೆ.

In Public domain. Digitization Muthulakshmi Research Academy

೯. ಶರಣರು ತಮ್ಮ ಅಂಕಿತನಾಮವಾಗಿ ಕೆಲವು ದೇವರ ಹೆಸರುಗಳು ಸ್ಥಾವರಲಿಂಗಗಳಿಗೆ ಸಂಬಂಧಿಸಿವೆ. ಆದ್ದರಿಂದ ಶರಣರು ಸ್ಥಾವರಲಿಂಗ ಪೂಜಕರಲ್ಲ ಎಂಬುದು ಮಿಥ್ಯ ಎಂದು ಅವರು ಅಭಿಪ್ರಾಯಪಡುತ್ತಾರೆ.

೧೦. ಗೆಜೆಟಿಯರ್ ಗಳಲ್ಲಿ ಧರ್ಮ ದಾಖಲೆಯನ್ನು ಹಿರೇಮಠರು ಒಪ್ಪದಿರುವಂತೆ ತೋರುವುದು. ಆ ಧರ್ಮಗಳನ್ನು ಅವರು ಗೆಜೆಟಿಯರ್ ಧರ್ಮ ಎಂದು ಕರೆಯಬೇಕು ಎಂದು ಬೇಸರ ವ್ಯಕ್ತಪಡಿಸುತ್ತಾರೆ. ಮೇಲಿನ ಹತ್ತೂ ಅಂಶಗಳಲ್ಲಿ ಸ್ಪಷ್ಟವಾದ ಸಾಕ್ಷ್ಯಾಧಾರಗಳನ್ನು ಅರ್ಜಿದಾರರು ದಾಖಲಿಸಿಲ್ಲ.

೮೦. ಹಾಸನದ ವೀರಶೈವ ಸಂಘ ಅವರು ೨೧ ಕಾರಣಗಳನ್ನು ನೀಡಿದ ಅರ್ಜಿ ಈ ರೀತಿಯದ್ದಾಗಿದೆ.

೧. ವೀರಶೈವ ಲಿಂಗಾಯತ ಸಮಾಜ ನಾಲ್ಕು ಹಂತಗಳಲ್ಲಿ ರೂಪಗೊಂಡಿದ್ದು ಅದರಲ್ಲಿ ಪಂಚಪೀಠಾಧೀಶ್ವರರು ಒಂದಾಗಿದೆ ಎಂದು ಉಲ್ಲೇಖಿಸುತ್ತಾರೆ.

೨. ಪಂಚಪೀಠಗಳು ಹಾಗೂ ಅವರ ಶಾಖಾಮಠದ ಮಠಾಧೀಶರು ವೀರಶೈವ ಲಿಂಗಾಯತರ ಕ್ಷೇಮಾಭಿವೃದ್ಧಿಗೆ ಕಾರಣೀಭೂತರಾಗಿದ್ದಾರೆ.

೩. ಪಂಚಪೀಠದ ಜಂಗಮರು ವೀರಶೈವರ ಮನೆಯಲ್ಲಿ ಬಿನ್ನಹ ತೀರಿಸುತ್ತಾರೆ ಎನ್ನುವುದು ಸತ್ಯ. ಬಂದವರಿಗೆ ಪ್ರಸಾದ ನೀಡುವುದು ಸಂಪ್ರದಾಯ.

೪. ವಿರಕ್ತಸ್ವಾಮಿಗಳು ಸಮಾಜಕ್ಕೆ ಕೊಡುಗೆ ನೀಡಿದ್ದು ಸತ್ಯ, ಶರಣ ಸಂಪ್ರದಾಯವನ್ನು ಎತ್ತಿ ಹಿಡಿದಿದು ಸತ್ಯ. ಆದರೆ ಅವರು ವೀರಶೈವ ಲಿಂಗಾಯತರು ಎನ್ನುವುದು ಪ್ರಶ್ನಾರ್ಹವಾಗಿದೆ. ಅವು ಬಸವತತ್ವದ ಮಠಗಳಾಗಿವೆ.

೫. ಲಿಂಗಾಯತರು ಜಾತಕ, ಕುಂಡಲಿ, ರುದ್ರಾಭಿಷೇಕ, ಭವಿಷ್ಯ, ದಾನ ಸ್ವೀಕರಿಸುವುದು, ಅಡಿಪಾಯದ ಪೂಜೆ, ಗೃಹಪ್ರವೇಶ ಇವೆಲ್ಲವನ್ನು ನಂಬುತ್ತಾರೆ, ಆಚರಿಸುತ್ತಾರೆ ಎಂದಿದ್ದಾರೆ.

೬. ಲಿಂಗಾಯತರು ಪಂಚಕಲಶಗಳನ್ನು ಸ್ಥಾಪಿಸುತ್ತಾರೆ. ಇದು ಪಂಚಪೀಠಾಧೀಶರ ಸಂಕೇತವಾಗಿದೆ ಎನ್ನುತ್ತಾರೆ.

೭. ಪಂಚಪೀಠದ ಜಂಗಮ ಮಠಗಳ ವಂಶಸ್ಥರನ್ನೇ ವಟುಗಳನ್ನಾಗಿ ಸ್ವೀಕರಿಸಿ ಸಂಸ್ಕೃತ ಭಾಷೆಯಲ್ಲಿ ವೇದಾಧ್ಯಯನ ಮಾಡಿಸಿ, ದೀಕ್ಷೆ ಉಪನಯನವಾದ ನಂತರ ಪಂಚಪೀಠ ಅಥವಾ ಶಾಖಾಮಠದ ಸ್ವಾಮಿಗಳನ್ನಾಗಿ ಮಾಡುವ ಪದ್ಧತಿ ಇದೆಯೆಂದು ಅವರ ಪ್ರಮುಖ ವಾದ.

In Public domain. Digitization Muthulakshmi Research Academy

೮. ದೀಕ್ಷಾ ಉಪನಯನಗಳನ್ನು ವೀರಶೈವರು ಮಾಡುತ್ತಾರೆ. ಅದು ಸಹಜವಾಗಿ ವೈದಿಕ ಧರ್ಮದ ಬ್ರಾಹ್ಮಣರು ಮಾಡಿಕೊಳ್ಳುವ ಸಂಸ್ಕಾರವಾಗಿದೆ.

೯. ಕೇವಲ ಜಂಗಮರನ್ನೇ ಪಂಚಪೀಠ ಅಥವಾ ಶಾಖಾಮಠವಲ್ಲದೆ ವಿರಕ್ತಮಠಗಳಿಗೂ ಸ್ವಾಮಿಗಳನ್ನಾಗಿ ಮಾಡಿಕೊಳ್ಳುವುದು ಪದ್ಧತಿಯಾಗಿದೆ.

೧೦. ಗುರು ವಿರಕ್ತ ಮಠಗಳಲ್ಲಿ ವೇದಾಧ್ಯಯನ ಮಾಡಿದವರೇ ಹೆಚ್ಚಾಗಿದ್ದಾರೆ ಎಂಬುದು ಅರ್ಜಿದಾರರ ವಾದ.

೧೧. ರುದ್ರಾಭಿಷೇಕ ಪೂಜೆಯನ್ನು ಸಂಸ್ಕೃತದ ಮುಖಾಂತರ ನಡೆಸಲಾಗುತ್ತದೆ ಎಂದು ಅರ್ಜಿದಾರರು ಹೇಳುತ್ತಾರೆ.

೧೨. ದೀಕ್ಷೆ ಕೊಡುವವರು ಮತ್ತು ಅರ್ಚಕರು ಜಂಗಮರಾಗಿದ್ದಾರೆ.

೧೩. ಜಂಗಮ ವಂಶಸ್ಥರೇ ವಿರಕ್ತ ಪೀಠಾಧಿಪತಿಗಳಾಗುತ್ತಾರೆ. ಅವರು ಬಸವತತ್ವದ ಬೋಧನೆ ಮಾಡುತ್ತಾರೆ.

೧೪. ಪಂಚಾಚಾರ್ಯರೇ ವೀರಶೈವ ಲಿಂಗಾಯತರ ಮನೆಗಳಲ್ಲಿ ಧಾರ್ಮಿಕ ಕಾರ್ಯಗಳನ್ನು ಮಾಡುತ್ತಾರೆ.

೧೫. ಜನಗಣತಿಯಲ್ಲಿ ವೀರಶೈವರು ಹೆಚ್ಚಾಗಿದ್ದಾರೆ ಎಂದು ವೀರಶೈವ ಸಂಘ, ವೀರಶೈವ ಮಹಾಸಭೆ ಹೇಳಿದೆ.

೧೬. ಸಿದ್ಧಾಂತ ಶಿಖಾಮಣಿ ಪ್ರಾಚೀನ ಗ್ರಂಥವೆಂದು ಅರ್ಜಿದಾರರು ವಾದಿಸುತ್ತಾರೆ.

೧೭. ಪರಳಿಯ ವೈದ್ಯನಾಥೇಶ್ವರ ಪ್ರಕರಣದಲ್ಲಿ ವೀರಶೈವರು ಲಿಂಗೀ ಬ್ರಾಹ್ಮಣರು ಎಂದು ನಿರ್ಣಯವಾಗಿದೆ.

೧೮. ಶಿವಯೋಗ ಮಂದಿರದ ಟ್ರಸ್ಟನ್ನು ವೀರಶೈವ ಶಿವಯೋಗ ಮಂದಿರ ಎಂದು ಬದಲಾಯಿಸಲಾಗಿದೆ.

೧೯. ವೀರಶೈವರು ಲಿಂಗಾಯತರು ಹಿಂದೂಗಳಲ್ಲ ಎಂಬ ವಾದವನ್ನು ವಿರೋಧಿಸುತ್ತ ಲಿಂಗಾಯತರು ಬೇರೆ ಬೇರೆ ಜಾತಿಗಳಲ್ಲಿ ವೀರಶೈವರು ಹೆಣ್ಣು ಕೊಡುವುದರಿಂದ ಲಿಂಗಾಯತ ಮತ್ತು ವೀರಶೈವಗಳು ಪ್ರತ್ಯೇಕವಾದರೆ ಈ ಕುಟುಂಬಗಳಿಗೆ ತೊಂದರೆಯಾಗುತ್ತದೆ. "ಕೆಲವರು ಬಸವೇಶ್ವರರ ಬಗ್ಗೆ ಪ್ರೀತಿ ಇಟ್ಟುಕೊಂಡು ಇನ್ನು ಕೆಲವರು ಪಂಚಾಚಾರ್ಯರ ಬಗ್ಗೆ ಭಕ್ತಿ ಉಳ್ಳವರಾಗಿದ್ದು ಅವರಲ್ಲಿ ಎರಡು ಧರ್ಮದ ಬೇರ್ಪಡೆಯಿಂದ ಬಿರುಕು ಉಂಟಾಗುತ್ತದೆ" ಎಂದು ಹೇಳಿದ್ದಾರೆ.

ಅಃ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪ, ಉಪಾಧ್ಯಕ್ಷ ಎಂ.ತಿಪ್ಪಣ್ಣ ಮತ್ತು ಈಶ್ವರ ಖಂಡ್ರೆಯವರು

In Public domain. Digitization Muthulakshmi Research Academy

ಹಸ್ತಾಕ್ಷರ ಮಾಡಿದ ಮನವಿಯನ್ನು ೧೮.೧೦.೨೦೧೭ರಂದು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದರು.

೧. ವೀರಶೈವ ಲಿಂಗಾಯತ ಧರ್ಮಕ್ಕೆ ದೀರ್ಘ ಇತಿಹಾಸ, ಸಂಸ್ಕೃತಿ, ಪರಂಪರೆ ಇದೆ. ಇದು ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುತ್ತದೆ. ವರ್ಣ, ಲಿಂಗ, ಭೇದವಿಲ್ಲದ ಸಮ ಸಮಾಜದ ಆಶಯಗಳನ್ನು ಹೊಂದಿದೆ. ಈ ಧರ್ಮದ ಮಠಮಾನ್ಯಗಳು ಧರ್ಮ, ಜಾತಿ ತಾರತಮ್ಯ ಮಾಡದೆ ಉಚಿತ ಅನ್ನ, ಆಶ್ರಯ, ಶಿಕ್ಷಣ ನೀಡುತ್ತವೆ.

೨. ಹಾನಗಲ್ ಕುಮಾರಸ್ವಾಮಿಗಳು ೧೧೩ ವರ್ಷಗಳ ಹಿಂದೆ ಸಮಸ್ತ ಸಮಾಜಗಳನ್ನು ಒಗ್ಗೂಡಿಸಲು ಈ ಸಂಸ್ಥೆಯನ್ನು ಕಟ್ಟಿದ್ದರು. ಶಿರಸಂಗಿ ಲಿಂಗರಾಜರು, ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮಿಗಳು, ಡಿ.ಸಿ.ಪಾವಟೆಯವರು, ಸರ್ ಪುಟ್ಟಣ್ಣಚೆಟ್ಟಿಯವರು, ಸರ್ ಸಿದ್ದಪ್ಪ ಕಂಬಳಿಯವರು, ಫ.ಗು.ಹಳಕಟ್ಟಿಯವರಂತಹ ಮಹಾನುಭಾವರು ಈ ಸಂಸ್ಥೆಯ ಅಧ್ಯಕ್ಷರಾಗಿದ್ದರು.

೩. ವೀರಶೈವ ಮಹಾಸಭಾ ಗುರುವಿರಕ್ತರ ಮಧ್ಯೆ ಸಮನ್ವಯ, ಸಹಕಾರ ಮತ್ತು ಏಕತೆಗಾಗಿ ರಾಷ್ಟ್ರೀಯ ಸಮಾವೇಶವನ್ನು ೨೦೦೩ರಲ್ಲಿ ಕೂಡಲಸಂಗಮದಲ್ಲಿ ಹಮ್ಮಿಕೊಂಡಿತ್ತು.

೪. ಮಹಾಸಭೆಯ ಸಂವಿಧಾನದಲ್ಲಿ ವೀರಶೈವರೆಂದರೆ ಲಿಂಗಾಯತ, ಲಿಂಗವಂತ, ಲಿಂಗಧರ ಅಥವಾ ಬೇರೆ ಹೆಸರಿನಿಂದ ಕರೆಯುವವರನ್ನು ಈ ಸಮುದಾಯದವರೆಂದು ವ್ಯಾಖ್ಯಾನಿಸಿದೆ. ವೀರಶೈವ ಲಿಂಗಾಯತರು ಷಟ್ಸ್ಥಲ, ಪಂಚಾಚಾರ, ಅಷ್ಟಾವರಣ, ಆಚರಣೆ ಮಾಡುತ್ತಾರೆ. ಕಾರಣ ಇವರಲ್ಲಿ ಭೇದವಿಲ್ಲ.

೫. ವೀರಶೈವ ಮಹಾಸಭೆಯು ನಾಲ್ವತ್ತು ವರ್ಷಗಳಿಂದಲೂ ಲಿಂಗಾಯತರಿಗೋಸ್ಕರ ಜನಗಣತಿಯಲ್ಲಿ ಪ್ರತ್ಯೇಕ ಕೋಡ್ ಪಡೆಯಲು ಪ್ರಯತ್ನಿಸುತ್ತಿದೆ. ೧೯೯೬ ಮತ್ತು ೨೦೧೧ರಲ್ಲಿ ಮತ್ತೊಮ್ಮೆ ಪ್ರಯತ್ನಿಸಲಾಗಿತ್ತು. ಅದೇ ಪ್ರಯತ್ನವನ್ನು ಮುಂದುವರಿಸುತ್ತ ೨೦೧೩ರಲ್ಲಿ ೫೬ ಜನರು ಸಹಿ ಮಾಡಿ ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಿತ್ತು. ಅವರಲ್ಲಿ ಬಹುಪಾಲು ಜನ ಸಚಿವರು, ಸಂಸದರು, ಶಾಸಕರಾಗಿದ್ದರು. ಅದನ್ನು ಅಂದಿನ ಕೇಂದ್ರ ಗೃಹಸಚಿವರಾಗಿದ್ದ ಸುಶೀಲ ಕುಮಾರ ಶಿಂಧೆಯವರಿಗೆ ಸಲ್ಲಿಸಲಾಗಿತ್ತು. ಪ್ರತಿಗಳನ್ನು ಯು.ಪಿ.ಎ. ಅಧ್ಯಕ್ಷರಾಗಿದ್ದ ಶ್ರೀಮತಿ ಸೋನಿಯಾ ಗಾಂಧಿ ಹಾಗೂ ಅಂದಿನ ಸಚಿವ ಸಂಪುಟದ ಸದಸ್ಯರಾಗಿದ್ದ ಮಲ್ಲಿಕಾರ್ಜುನ

In Public domain. Digitization Muthulakshmi Research Academy

ಖರ್ಗೆ, ವೀರಪ್ಪ ಮೊಯ್ಲಿ, ಮನಿಯಪ್ಪ ಮತ್ತು ರೆಹಮಾನ್ ಖಾನ್ ಅವರಿಗೆ ನೀಡಲಾಗಿತ್ತು. ಆ ಮನವಿಗಳ ಪ್ರತಿಗಳನ್ನು ಈ ಮನವಿಯೊಂದಿಗೆ ಲಗತ್ತಿಸಿದೆ.

೬. ಶರಣೆ ಅಕ್ಕಮಹಾದೇವಿಯವರ ಹೆಸರನ್ನು ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡಿದ್ದು ಮತ್ತು ಬಸವಣ್ಣನವರ ಭಾವಚಿತ್ರಗಳನ್ನು ಸರಕಾರಿ ಕಚೇರಿಗಳಲ್ಲಿ ಹಾಕಲು ಆದೇಶ ಮಾಡಿದ್ದ ಮಾನ್ಯ ಮುಖ್ರಮಂತ್ರಿಗಳನ್ನು ಅಭಿನಂದಿಸಲು ೧೪.೬.೨೦೧೭ರಲ್ಲಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ನೀಡಬೇಕೆಂದು ವಿನಂತಿಸಲಾಗಿತ್ತು. ಸರ್ವೋಚ್ಚ ನ್ಯಾಯಾಲಯದ ಆದೇಶ (AIR-1971-SC1737) ಡಿ.ವ್ಹಿ.ಎ. ಕಾಲೇಜು vs ಪಂಜಾಬ ಯೂನಿವರ್ಸಿಟಿ ಮತ್ತು ಮಿತ್ತಲ್ vs ಯೂನಿಯನ್ ಆಫ್ ಇಂಡಿಯಾ (AIR-1983-SC) ಎರಡು ಆದೇಶಗಳನ್ನು ಉಲ್ಲೇಖಿಸುತ್ತಾ ವೀರಶೈವ ಲಿಂಗಾಯತವನ್ನು ಸ್ವತಂತ್ರ ಧರ್ಮವೆಂದು ಜೈನ, ಬೌದ್ಧ, ಸಿಖ್, ಮುಸ್ಲಿಂ, ಕ್ರಿಶ್ಚಿಯನ್ ಧರ್ಮಗಳಿಗೆ ನೀಡಿದ ಸ್ಥಾನವನ್ನು ನೀಡಬೇಕೆಂದು ಕೋರಲಾಗಿದೆ. ಇದನ್ನು ಜಾತಿ ಎಂದು ಅಥವಾ ಹಿಂದೂಧರ್ಮದ ಸಮುದಾಯವೆಂದು ಪರಗಣಿಸಬಾರದೆಂದು ವಿನಂತಿಸಲಾಗಿದೆ. ವೀರಶೈವ ಲಿಂಗಾಯತವನ್ನು ಪ್ರತ್ಯೇಕ ಧರ್ಮವೆಂದು ಪರಿಗಣಿಸಿ.

೭. ಭಾರತ ಸರಕಾರವು ಮೂವತ್ತೊಂದು ಲಿಂಗಾಯತ ಉಪಜಾತಿಗಳನ್ನು ಕೇಂದ್ರ ಸರಕಾರದ ಓಬಿಸಿ ವರ್ಗದಲ್ಲಿ ಕಾಣಿಸಿ ಮೀಸಲಾತಿ ಸೌಲಭ್ಯ ಒದಗಿಸಿದೆ.

೮. ವೀರಶೈವ ಲಿಂಗಾಯತವು ಪ್ರತ್ಯೇಕ ಧರ್ಮವಾಗಿದ್ದು ಇದು ಅನೇಕ ಶತಮಾನಗಳಿಂದ ಕರ್ನಾಟಕ ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಮತ್ತು ಗೋವಾದಲ್ಲಿ ಅಸ್ತಿತ್ವದಲ್ಲಿದೆ.

೯. ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಕಾನೂನು ಕಲಂ ೨೧ಬಿ, ಮತ್ತು ೩೧ಬಿಯ ಪ್ರಕಾರ ಜೈನ, ಬೌದ್ಧ, ಸಿಖ್ಖರಿಗೆ ನೀಡಿದ ಸ್ಥಾನವನ್ನು ಲಿಂಗಾಯತ ಧರ್ಮಕ್ಕೂ ನೀಡುವಂತೆ ಕೋರಿ ಅದನ್ನು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಲು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ.

೧೦. ಈ ಹಿಂದೆ ೨೦೧೪ರಲ್ಲಿ ಅಂದಿನ ಕೇಂದ್ರ ಗೃಹಸಚಿವರಾದ ಸುಶೀಲ ಕುಮಾರ ಸಿಂಧೆಯವರಿಗೆ ಪತ್ರದಲ್ಲಿದ್ದ ಈ ಕೆಳಗಿನ ಪ್ರಮುಖವಾದ ಅಂಶಗಳನ್ನು ಉಲ್ಲೇಖಿಸಿದ್ದನ್ನು ಪುನಃ ಉಚ್ಚರಿಸಿ ಅದರ ನಕಲನ್ನು ಲಗತ್ತಿಸಿದೆ. ಅವು ಇಂತಿವೆ.

In Public domain. Digitization Muthulakshmi Research Academy

೧೦**A**. ೧೯೦೪ರಲ್ಲಿ ಸ್ಥಾಪಿತವಾದ ರಾಷ್ಟ್ರಮಟ್ಟದ ಸಂಸ್ಥೆಯಾದ ವೀರಶೈವ ಮಹಾಸಭೆ ಲಿಂಗಾಯತರ ಹಿತರಕ್ಷಣೆಗಾಗಿ ಸ್ಥಾಪಿಸಿದ ಸಂಸ್ಥೆ.

೧೦**B**. ಜೈನ, ಬೌದ್ಧ, ಸಿಖ್, ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಹಿಂದೂಧರ್ಮಗಳಂತೆ ವೀರಶೈವ ಲಿಂಗಾಯತ ಧರ್ಮವು ಸ್ವತಂತ್ರ ಧರ್ಮವಾಗಿದೆ. ಅದು ಹಿಂದೂಧರ್ಮಕ್ಕಿಂತ ಸಂಪೂರ್ಣ ಭಿನ್ನವಾಗಿದೆ. ಅದಕ್ಕೆ ಪೂರಕವಾಗಿ ಸಾಕಷ್ಟು ಸಾಹಿತ್ಯ ಮತ್ತು ದಾಖಲೆಗಳಿವೆ.

೧೦**C**. ವೀರಶೈವ ಲಿಂಗಾಯತ ಧರ್ಮವು ಕಾಯಕ ಧರ್ಮವಾಗಿದೆ, ಅದು ಚಾತುರ್ವರ್ಣವನ್ನು ಖಂಡಿಸುತ್ತದೆ.

೧೦**D**. ಮಹಾವೀರ, ಬುದ್ಧ, ಗುರುನಾನಕರಂತೆ ಬಸವೇಶ್ವರರು ವೀರಶೈವ ಲಿಂಗಾಯತ ಧರ್ಮದ ಸ್ಥಾಪಕರಾಗಿದ್ದಾರೆ.

೧೦**E**. ವೀರಶೈವ ಲಿಂಗಾಯತ ಧರ್ಮವು ಪ್ರಾಚೀನ ಧರ್ಮವಾಗಿದ್ದು ಬಸವಣ್ಣನವರು ೧೨ನೆಯ ಶತಮಾನದಲ್ಲಿ ಪ್ರಸಾರ ಮಾಡಿದರು. ಈ ಧರ್ಮಕ್ಕೆ ತನ್ನದೇ ಆದ ದರ್ಶನ, ಸಿದ್ಧಾಂತ, ಸಂಪ್ರದಾಯ, ಪರಂಪರೆಗಳಿವೆ. ಅವು ಹಿಂದೂಧರ್ಮಕ್ಕಿಂತ ಬಿನ್ನವಾಗಿವೆ.

೧೦**F**. ಬಸವಣ್ಣನವರು ಸಮಾನತೆ, ಸಾಮಾಜಿಕ ನ್ಯಾಯ, ದಲಿತರ ಕಲ್ಯಾಣವನ್ನು ಬೋಧಿಸಿದರು, ಅಸ್ಪೃಶ್ಯತೆಯನ್ನು ನಿವಾರಿಸಿದರು. ವರ್ಗರಹಿತ, ಜಾತಿರಹಿತ ಸಮಾಜ ಕಟ್ಟಿದ್ದರು.

೧೦**G**. ಹನ್ನೆರಡನೆಯ ಶತಮಾನದಲ್ಲಿ ಅನುಭವ ಮಂಟಪವೆಂಬ ಆಧ್ಯಾತ್ಮಿಕ ಸಂಸತ್ತನ್ನು ಸ್ಥಾಪಿಸಿ ವರ್ಣ ವರ್ಗ ಲಿಂಗ ಭೇದವಿಲ್ಲದ ಸಮಾನತೆ ತತ್ವವನ್ನು ಸಾರಿದರು. ಅವುಗಳನ್ನೇ ಭಾರತದ ಸಂವಿಧಾನ ಅನುಕರಿಸಿದೆ. ಅದ್ದರಿಂದ ಇದು ಬಹಳ ಘನವಾದ ಧರ್ಮವಾಗಿದೆ.

೧೦**H**. ಬಸವಣ್ಣನವರು ಹಾಗೂ ಶಿವಶರಣರು ಬರೆದ ವಚನಗಳು ಮಾನವ ಹಕ್ಕುಗಳ ಕಲ್ಯಾಣರಾಜ್ಯದ ತತ್ವಗಳಾಗಿವೆ. ಕಾರಣ ವೀರಶೈವ ಲಿಂಗಾಯತ ಧರ್ಮವು ಜಗತ್ತಿನ ಮೊದಲನೆಯ ಪ್ರಜಾತಾಂತ್ರಿಕ ಧರ್ಮವಾಗಿದೆ.

೧೦**I**. ಪಂಡಿತ ಜವಾಹರಲಾಲ್ ನೆಹರು ಅವರು ತಮ್ಮ 'ಡಿಸ್ಕವರಿ ಆಫ್ ಇಂಡಿಯಾ'ದಲ್ಲಿ ಬಸವಣ್ಣನವರ ಮಹಾಕಾರ್ಯಗಳನ್ನು ದಾಖಲಿಸಿದ್ದಾರೆ. ಅರ್ಥರ್ ಮೈಲ್ಸ್ ಎಂಬ ಪಾಶ್ಚಾತ್ಯ ವಿದ್ವಾಂಸರು 'ಬಸವಣ್ಣನವರು ಭಾರತದ ಪ್ರಥಮ ಸ್ವತಂತ್ರ ವಿಚಾರವಾದಿಗಳಾಗಿದ್ದರು' ಎಂದು ಬರೆದಿದ್ದಾರೆ. ರೆವರಂಡ್ ಉತ್ತಂಗಿ ಚನ್ನಪ್ಪ ಅವರು 'ಬಸವಣ್ಣ ಅವರು ನಿಜವಾಗಿಯೂ ಒಬ್ಬ ಕ್ರಿಶ್ಚಿಯನ್ನರಾಗಿದ್ದರು' ಎಂದು ಬರೆಯುತ್ತಾರೆ.

In Public domain. Digitization Muthulakshmi Research Academy

೧೦J. ಈ ಹಿನ್ನೆಲೆಯಲ್ಲಿ ೨೦೦೩ರಲ್ಲಿ ಅಂದಿನ ರಾಷ್ಟ್ರಾಧ್ಯಕ್ಷರಾಗಿದ್ದ ಅಬ್ದುಲ್ ಕಲಾಂ ಆಜಾದ್ ಅವರು ಬಸವಣ್ಣನವರ ಅಶ್ವಾರೂಢ ಪುತ್ಥಳಿಯನ್ನು ಸಂಸತ್ ಭವನದ ಎದುರಿನಲ್ಲಿ ಅನಾವರಣಗೊಳಿಸಿದ್ದಾರೆ. ೨೦೦೬ರಲ್ಲಿ ಬಸವಣ್ಣನವರ ನಾಣ್ಯವನ್ನು ಅಂದಿನ ಪ್ರಧಾನಿ ಮನಮೋಹನ ಸಿಂಗ್ ಅವರು ಬಿಡುಗಡೆ ಮಾಡಿ, ಬಸವಣ್ಣನವರು ಭಾರತದೇಶದ ಮಹಾನ್ ಪುತ್ರ ಅವರ ಅನುಭವ ಮಂಟಪ ಪ್ರಜಾತಂತ್ರಕ್ಕೆ ನೀಡಿದ ಕೊಡುಗೆ ಎಂದು ಕೊಂಡಾಡಿದ್ದರು.

೧೦L. ಕಾಂಗ್ರೆಸ್ ಪಕ್ಷದ ತತ್ವಗಳು ಬಸವಣ್ಣನವರ ತತ್ವಗಳ ಅನುಕರಣೆಯೆಂದು ಕರೆದಿದ್ದರು ಯು.ಪಿ.ಎ. ಅಧ್ಯಕ್ಷರಾಗಿದ್ದ ಸೋನಿಯಾ ಗಾಂಧಿಯವರು. ಏಪ್ರಿಲ್ ೧೧, ೨೦೧೧ರಲ್ಲಿ ಮಹಾಸಭೆಯ ಶತಮಾನೋತ್ಸವ ಸಭೆಯಲ್ಲಿ ಅವರು ಮಾತನಾಡುತ್ತ ಕಾಂಗ್ರೆಸ್ ತತ್ವವು ಬಸವಣ್ಣನವರ ಉಪದೇಶ ಮತ್ತು ತತ್ವಗಳಿಗೆ ಅನುಗುಣವಾಗಿದ್ದು ಜಾತ್ಯತೀತ ಸಮಾಜವನ್ನು ಸ್ಥಾಪಿಸಲು ಹಸಿವು ಮತ್ತು ಲಿಂಗಭೇದವನ್ನು ಹೋಗಲಾಡಿಸಲು ಪ್ರಯತ್ನಿಸುತ್ತದೆ ಎಂದು ಲಿಂಗಾಯತ ಮಠಗಳ ಉಚಿತ ಶಿಕ್ಷಣ ಮತ್ತು ಪ್ರಸಾದವನ್ನು ನೀಡುತ್ತಿರುವ ಕೆಲಸವನ್ನು ಕೊಂಡಾಡಿದ್ದರು.

೧೦M. ೧೯೭೧ ಮತ್ತು ೧೯೮೩ರ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳಂತೆ 'ಬೌದ್ಧ, ಸಿಖ್, ಮುಸ್ಲಿಂ, ಕ್ರಿಶ್ಚಿಯನ್, ಅಲ್ಪಸಂಖ್ಯಾತ ಧರ್ಮಗಳು' ಎಂದು ನೀಡಿದ ಸ್ಥಾನವನ್ನು ಲಿಂಗಾಯತರಿಗೂ ನೀಡಿ, ಅವರನ್ನು ಹಿಂದೂಧರ್ಮದ ಭಾಗವಲ್ಲವೆಂದು ಪರಿಗಣಿಸುವಂತೆ ಕೋರಿದ್ದರು.

೧೦N. ಹಿಂದೂ ಕಾನೂನುಗಳಲ್ಲಿ ವೀರಶೈವ ಲಿಂಗಾಯತ ಧರ್ಮವನ್ನು ಪ್ರತ್ಯೇಕ ಧರ್ಮವೆಂದು ತೋರಿಸಲಾಗಿದೆ.

೧೦O. Principle of Hindu Lawದ ಪುಟ ೬೯೭ರಲ್ಲಿ ಲಿಂಗಾಯತರು ಮೂಲತಃ ಹಿಂದೂಗಳಾಗಿದ್ದನ್ನು ವಿರೋಧಿಸಿದರು. ಬಸವಣ್ಣನವರು ಈ ಧರ್ಮವನ್ನು ಸ್ಥಾಪಿಸಿದರು ಎಂದು ಹೇಳಲಾಗಿದೆ. ತ್ರಿಮೂರ್ತಿಗಳಲ್ಲಿ ಅವರು ಶಿವನನ್ನು ಮಾತ್ರ ಒಪ್ಪುತ್ತಾರೆಂದು, ವೇದಗಳನ್ನು ವಿಮರ್ಶೆ ಮಾಡುತ್ತಾರೆಂದು, ಬ್ರಾಹ್ಮಣರ ಪರಂಪರೆಯನ್ನು ತಿರಸ್ಕರಿಸುತ್ತಾರೆಂದು, ಅವರಲ್ಲಿ ಜಾತಿಭೇದಗಳಿಲ್ಲವೆಂದು, ತೀರ್ಥಯಾತ್ರೆ, ಉಪವಾಸ, ಶಿಕ್ಷೆ, ಬಲಿದಾನಗಳಿಗೆ ಅಲ್ಲಿ ಅವಕಾಶವಿಲ್ಲ. ಲಿಂಗವೇ ಅವರಿಗೆ ಪ್ರಶ್ನಾತೀತ ತತ್ವ, ಅದು ಶಿವನ ಸಂಕೇತವೆಂದು ಭಾವಿಸುತ್ತಾರೆಂದು ಹೇಳಲಾಗಿದೆ.

In Public domain. Digitization Muthulakshmi Research Academy

೧೦೭. ಸರ್ವೋಚ್ಚ ನ್ಯಾಯಾಲಯದ ೧೪.೧.೧೯೯೬ರ(ಯಜ್ಞಪುರುಷ ದಾಸ್/ಮೂಲ್ದಾಸ್ (AIR-1996-1110) ತೀರ್ಪಿನಲ್ಲಿ ಬಸವಣ್ಣನವರು ಲಿಂಗಾಯತ ಧರ್ಮ ಸ್ಥಾಪಕನೆಂದು ಹೇಳಲಾಗಿದೆ.

೧೧. ಲಿಂಗಾಯತ ಧರ್ಮದ ೩೧ ಸಮಾಜ(ಜಾತಿ)ಗಳನ್ನು ಓಬಿಸಿ ವರ್ಗಗಳೆಂದು ಭಾರತ ಸರಕಾರದ ಸಾಮಾಜಿಕ ನ್ಯಾಯ ಮಂತ್ರಾಲಯವು ೬೧೨.೧೯೯೩ರ ಅದಿಸೂಚನೆ ಹೊರಡಿಸಿದೆ. ಈ ಜಾತಿಯ ಜನರನ್ನು ಹಿಂದೂಗಳೆಂದು ಕರೆಯದೆ ಲಿಂಗಾಯತರೆಂದು ಕರೆದುದು ಲಿಂಗಾಯತವು ಜೈನ, ಬೌದ್ಧ, ಸಿಖ್ ಧರ್ಮಗಳಂತೆ ಸ್ವತಂತ್ರ ಧರ್ಮವೆಂದು ವೇದ್ಯವಾಗುತ್ತದೆ.

೧೨. ಲಿಂಗಾಯತವನ್ನು ಸ್ವತಂತ್ರ ಧರ್ಮವೆಂದು ಸಂವಿಧಾನದ ೨೫ನೇ ಪರಿಚ್ಛೇದದನ್ವಯ ಭಾರತ ಸರ್ಕಾರ ಪರಿಗಣಿಸಬೇಕು.

೧೩. ರಾಷ್ಟ್ರೀಯ ಅಲ್ಪಸಂಖ್ಯಾತ ಅಯೋಗದ ಕಾನೂನು ೧೯೯೨ ಕಲಂ ೨(ಸಿ) ಅನ್ವಯ ಲಿಂಗಾಯತರಿಗೆ ಅಲ್ಪಸಂಖ್ಯಾತ ಧರ್ಮದ ಸ್ಥಾನಮಾನ ನೀಡಿ, ಜನಗಣತಿಯಗಳಲ್ಲಿ ಇದಕ್ಕೆ ಪ್ರತ್ಯೇಕ ಧರ್ಮವನ್ನಾಗಿ ಪರಿಗಣಿಸಿ ಇನ್ನುಳಿದ ಆರು ಧರ್ಮಗಳಿಗೆ ನೀಡಿದಂತೆ ಲಿಂಗಾಯತ ಧರ್ಮವನ್ನು ಏಳನೆಯ ಧರ್ಮವೆಂದು ಪರಿಗಣಿಸಿ ಪ್ರತ್ಯೇಕ ಕೋಡ್ ನೀಡಬೇಕೆಂದು ವಿನಂತಿಸಿಕೊಂಡದ್ದನ್ನು ತಿಳಿಸುತ್ತಾರೆ. ಇವೆಲ್ಲವನ್ನು ಸಂಕ್ಷಿಪ್ತವಾಗಿಸಿ ೧೫ ಅಂಶಗಳ ಬೇಡಿಕೆಯನ್ನು ಸಲ್ಲಿಸಲಾಗಿದೆ.

೧. ಜೈನ, ಬೌದ್ಧ, ಸಿಖ್ಖರಂತೆ ಲಿಂಗಾಯತವು ಸ್ವತಂತ್ರ ಧರ್ಮವಾಗಿದೆ.

೨. ೧೨ನೆಯ ಶತಮಾನದಲ್ಲಿ ಬಸವಣ್ಣನವರು ಈ ಧರ್ಮ ಪ್ರಚಾರ ಮಾಡಿದರು.

೩. ಸಾಮಾಜಿಕ ನ್ಯಾಯ, ದಲಿತೋದ್ಧಾರ, ವರ್ಗರಹಿತ, ಜಾತಿರಹಿತ ಸಮಾಜದ ನಿರ್ಮಾಣದ ಗುರಿ ಹೊಂದಿರುವ ಈ ಧರ್ಮವು ಅಸ್ಪೃಶ್ಯತೆಯನ್ನು ತಿರಸ್ಕರಿಸುತ್ತದೆ.

೪. ಹನ್ನೆರಡನೆಯ ಶತಮಾನದಲ್ಲಿ ಅನುಭವ ಮಂಟಪ ಎಂಬ ಸಂಸತ್ತು ನಿರ್ಮಾಣವಾಗಿತ್ತು.

೫. ಇದರ ತತ್ವಗಳು ನಮ್ಮ ಸಂವಿಧಾನದ ತತ್ವಗಳಂತಿವೆ.

೬. ವರ್ಣಾಶ್ರಮ ಧರ್ಮವನ್ನು ತಿರಸ್ಕರಿಸಿ ಕಾಯಕವೇ ಪೂಜೆ ಎಂಬುದನ್ನು ಪರಿಗಣಿಸುತ್ತದೆ.

೭. ಬಾಲ್ಯವಿವಾಹವನ್ನು ನಿಷೇಧಿಸಿ, ವಿಧವಾವಿವಾಹವನ್ನು ಪುರಸ್ಕರಿಸುತ್ತದೆ.

In Public domain. Digitization Muthulakshmi Research Academy

೮. 'ಡಿಸ್ಕವರಿ ಆಫ್ ಇಂಡಿಯಾ' ಪುಸ್ತಕದಲ್ಲಿ ಬಸವಣ್ಣನವರ ಮಹತ್ವದ ವಿಚಾರಗಳನ್ನು ಹೇಳಲಾಗಿದೆ. ಅವರನ್ನು 'ಭಾರತದ ಪ್ರಥಮ ಸ್ವತಂತ್ರ ವಿಚಾರವಾದಿ' ಎಂದು ಅರ್ಥರ್ ಮೈಲ್ಸ್ ಹೇಳುತ್ತಾರೆ.

೯. ೨೦೦೬ರಲ್ಲಿ ಬಸವಣ್ಣನವರ ನಾಣ್ಯವನ್ನು ಭಾರತ ಸರಕಾರ ಬಿಡುಗಡೆ ಮಾಡಿದೆ.

೧೦. ವೀರಶೈವ ಮಹಾಸಭೆಯ ಶತಮಾನೋತ್ಸವ ಸಂದರ್ಭದಲ್ಲಿ ಬಸವಣ್ಣನವರ ತತ್ವಗಳನ್ನು ಯು.ಪಿ.ಎ. ಅಧ್ಯಕ್ಷೆ ಸೋನಿಯಾ ಗಾಂಧಿ ಪ್ರಶಂಸಿದ್ದಾರೆ.

೧೧. ಹಿಂದೂ ಕಾಯೆದೆಗಳಲ್ಲಿ ಲಿಂಗಾಯತವನ್ನು ಸ್ವತಂತ್ರ ಧರ್ಮ ಎಂದು ಪರಿಗಣಿಸಲಾಗಿದೆ.

೧೨. ೧೯೯೬ರಲ್ಲಿ ಸರ್ವೋಚ್ಚ ನ್ಯಾಯಾಲಯ ಬಸವಣ್ಣನವರನ್ನು ಲಿಂಗಾಯತ ಧರ್ಮ ಸ್ಥಾಪಕರೆಂದು ಹೇಳಿದೆ.

೧೩. ಲಿಂಗಾಯತರಿಗೆ ಪ್ರತ್ಯೇಕ ಜನಗಣತಿಯಲ್ಲಿ ಪ್ರತ್ಯೇಕ ಕೋಡ್ ಕೊಡದೆ ಇರುವುದರಿಂದ ಲಿಂಗಾಯತರ ಸಂಖ್ಯೆಯಲ್ಲಿ ಗೊಂದಲ ಸೃಷ್ಟಿಯಾಗಿದೆ.

೧೪. ಸಂವಿಧಾನದ ೧೪ನೇ ಪರಿಚ್ಛೇದ ಪರಿಗಣಿಸದೆ ಇರುವುದರಿಂದ ಲಿಂಗಾಯತ ಧರ್ಮಕ್ಕೆ ಅನ್ಯಾಯ ಮಾಡಲಾಗಿದೆ.

ಸಂವಿಧಾನದ ೨೯ನೆಯ ಪರಿಚ್ಛೇದದಂತೆ ವೀರಶೈವ ಲಿಂಗಾಯತವನ್ನು ಧಾರ್ಮಿಕ ಅಲ್ಪಸಂಖ್ಯಾತರೆಂದು ಪರಿಗಣಿಸಿ ಅವರ ಭಾಷೆ, ಲಿಪಿ ಮತ್ತು ಸಂಸ್ಕೃತಿಯನ್ನು ಕಾಪಾಡಬೇಕು ಎಂದು ವಿನಂತಿಸಿಕೊಳ್ಳಲಾಗಿದೆ.

ಲಿಂಗಾಯತ ಪರ ಸಂಘಟನೆಗಳು ವ್ಯಕ್ತಿಗಳು ಮನವಿಯ ಸಾರಾಂಶ

ಲಿಂಗಾಯತ ಧರ್ಮ ವೇದಿಕೆ ಆಗಸ್ಟ್ ೧೦, ೨೦೧೭ರಿಂದ ೨೫.೧.೨೦೧೮ ರವರೆಗೆ ಒಟ್ಟು ಏಳು ಮನವಿಗಳನ್ನು ಸಲ್ಲಿಸಿತ್ತು. ಅವುಗಳ ಸಾರಾಂಶ ಹೀಗಿದೆ.

ಬೀದರ್, ಕಲಬುರ್ಗಿ, ಹುಬ್ಬಳ್ಳಿ, ವಿಜಾಪುರ ನಗರಗಳಲ್ಲಿ ನಡೆದ ಬೃಹತ್ ಸಮಾವೇಶಗಳಲ್ಲಿ ಲಿಂಗಾಯತ ಧರ್ಮದ ಪ್ರಮುಖ ಮಠಾಧೀಶರು ಭಾಗಹಿಸಿದ್ದರು. ಈ ಸಭೆಗಳಲ್ಲಿ ರಾಜಕೀಯ, ಸಾಮಾಜಿಕ ರಂಗದ ಪ್ರಮುಖರು ಭಾಗವಹಿಸಿ ಲಿಂಗಾಯತ ಧರ್ಮಕ್ಕೆ ಅಲ್ಪಸಂಖ್ಯಾತ ಮಾನ್ಯತೆ ನೀಡಬೇಕೆಂಬ ಮನವಿಗೆ ಪ್ರಮುಖರೆಲ್ಲರೂ ಸಹಿ ಹಾಕಿದ್ದರು. ಪ್ರತಿಯೊಂದು ಸಭೆಯಲ್ಲಿ ನಾಲ್ಕು ಲಕ್ಷ ಲಿಂಗಾಯತರು ಭಾಗವಹಿಸಿದ್ದಕ್ಕೆ ಇದು ಸಾಕ್ಷಿ.

ಲಿಂಗಾಯತ ಧರ್ಮ ಸಮನ್ವಯ ಸಮಿತಿ ಬೀದರ್ ಜಿಲ್ಲೆಯವರು ಜುಲೈ ೧೯, ೨೦೧೭ರಂದು ಮುಖ್ಯಮಂತ್ರಿಯವರಿಗೆ ಮನವಿ ಮಾಡಿಕೊಂಡಿದ್ದು, ಅದನ್ನು

In Public domain. Digitization Muthulakshmi Research Academy

ಜಿಲ್ಲಾಧಿಕಾರಿಗಳ ಮುಖಾಂತರ ಸಲ್ಲಿಸಿದ್ದರು(ಈ ಮನವಿಯ ಪೂರ್ಣವಿವರ ಬೀದರ್ ರ್‍ಯಾಲಿಯ ಅಧ್ಯಾಯದಲ್ಲಿದೆ).

ಕ. ಲಿಂಗಾಯತ ಧರ್ಮ ವೇದಿಕೆ ಅವರು ದಿನಾಂಕ ೧೦.೮.೨೦೧೭ರಂದು ಒಂದು ಮನವಿಯನ್ನು

ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರಕಾರ
ಬೆಂಗಳೂರು-೧
ಇವರಿಗೆ ನೀಡಿದರು.

ವಿಷಯ: ಕರ್ನಾಟಕ ಸರಕಾರ ಸಿಖ್, ಬೌದ್ಧ ಮತ್ತು ಜೈನ ಧರ್ಮಗಳಿಗೆ ನೀಡಿರುವ ಮಾನ್ಯತೆಯನ್ನು ಲಿಂಗಾಯತ ಧರ್ಮಕ್ಕೂ ನೀಡುವ ಕುರಿತು ವಿನಂತಿ.

ಇಂದು ದಿನಾಂಕ ೧೦.೮.೨೦೧೭ರಂದು ಕರ್ನಾಟಕದ ಎಲ್ಲ ಭಾಗಗಳಿಂದ ಬಂದಿರುವ ಮಠಾಧೀಶರ, ರಾಜ್ಯದ ಎಲ್ಲ ಕಡೆಯಿಂದ ಪಕ್ಷಾತೀತವಾಗಿ ಬಂದ ಹಿರಿಯ ಕಿರಿಯ ರಾಜಕೀಯ ಧುರೀಣರ ಹಾಗೂ ಲಿಂಗಾಯತ ದರ್ಶನ ಇತಿಹಾಸ ಮತ್ತು ಸಮಾಜದ ಬಗ್ಗೆ ದೀರ್ಘವಾದ ಅಧ್ಯಯನ ಮಾಡಿದ ತಜ್ಞರ, ಕಾನೂನುತಜ್ಞರ ಹಾಗೂ ಬಹಳಷ್ಟು ಹಿರಿಯ ಲಿಂಗಾಯತ ಮುಖಂಡರ ಸಮಾಲೋಚನ ಸಭೆಯನ್ನು ಬೆಂಗಳೂರಿನಲ್ಲಿ ನಡೆಸಲಾಗಿದೆ. ಈ ಸಭೆಯಲ್ಲಿ ಲಿಂಗಾಯತ ಸಮುದಾಯದ ಇಂದಿನ ಪರಿಸ್ಥಿತಿಯನ್ನು ಮತ್ತು ಈ ಸಮಾಜಕ್ಕೆ ಸರ್ಕಾರಗಳಿಂದ ದೊರೆಯಬೇಕಾದ ಸೌಲಭ್ಯಗಳನ್ನು ಪಡೆಯುವ ಬಗ್ಗೆ ಮತ್ತು ಸಂವಿಧಾನದ ಪರಿಚ್ಛೇದ ೨೫, ೨೮, ೨೯ ಮತ್ತು ೩೦ರಲ್ಲಿ ದತ್ತವಾದ ಹಕ್ಕುಗಳನ್ನು ಪಡೆದುಕೊಳ್ಳುವ ಕುರಿತು ದಿನವಿಡೀ ಗಂಭೀರ ಚರ್ಚೆ ನಡೆಸಲಾಗಿದೆ. ಸಮಾಲೋಚನೆ ಅಂತ್ಯದಲ್ಲಿ ಈ ಬೃಹತ್ ಸಭೆಯು ಕೆಲವೊಂದು ನಿರ್ಣಯಗಳನ್ನು ತೆಗೆದುಕೊಂಡಿದೆ ಮತ್ತು ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳನ್ನು ಸಂಪರ್ಕಿಸಿ ಆ ಬಗ್ಗೆ ಮನವಿ ಸಲ್ಲಿಸುವಂತೆ ನಿರ್ಣಯಿಸಿದ ಪ್ರಕಾರ ನಾವೆಲ್ಲರೂ ಈ ಮನವಿಯನ್ನು ತಮಗೆ ಸಲ್ಲಿಸುತ್ತಿದ್ದೇವೆ. ಈ ಮನವಿಯನ್ನು ಗಂಭಿರವಾಗಿ ಪರಿಗಣಿಸಿ ನಮಗೆ ನಮ್ಮ ಹಕ್ಕುಗಳನ್ನು ನೀಡಲು ತಾವು ಸಹಾಯ ಮಾಡುವಿರಿ ಎಂದು ಮತ್ತು ಬೇಗ ದೊರಕಿಸಿಕೊಡುವಿರಿ ಎಂದು ಈ ಮೂಲಕ ಆಶಿಸುತ್ತಾ ಮನವಿ ಸಲ್ಲಿಸುತ್ತಿದ್ದೇವೆ.

ಧನ್ಯವಾದಗಳೊಂದಿಗೆ,
ಇಂತಿ ತಮ್ಮ ವಿಶ್ವಾಸಿಗಳು

In Public domain. Digitization Muthulakshmi Research Academy

ಶ್ರೀ ಬಸವರಾಜ ಹೊರಟ್ಟಿ,
ಅಧ್ಯಕ್ಷರು,
ಅಡಿವೇಶ್ವರ ಸದನ, ವೇಮನ ಬೀದಿ, ಹುಬ್ಬಳ್ಳಿ ೨೦

ಡಾ.ಎಸ್.ಎಂ.ಜಾಮದಾರ,
ಕಾರ್ಯದರ್ಶಿಗಳು,
HSR layout, ಬೆಂಗಳೂರು –೬೪

ಮನವಿ

ಕರ್ನಾಟಕದ ಲಿಂಗಾಯತ ಪ್ರಮುಖ ಮಠಾಧೀಶರುಗಳು, ಸಮಾಜದ ಮುಖಂಡರುಗಳು ಮತ್ತು ಚಿಂತಕರು ೨೦೧೭ ಆಗಸ್ಟ್ ೧೦ರಂದು ಕರ್ನಾಟಕದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರಿಗೆ ಲಿಂಗಾಯತ ಧರ್ಮಕ್ಕೆ ಜೈನ, ಸಿಖ್, ಬೌದ್ಧ ಧರ್ಮಗಳಿಗೆ ನೀಡಿರುವ ಎಲ್ಲ ಪ್ರಕಾರದ ಮಾನ್ಯತೆಯನ್ನು ಒಳಗೊಂಡಂತೆ ಲಿಂಗಾಯತ ಧರ್ಮಕ್ಕೂ ನೀಡಿ ನಮ್ಮ ಸಂವಿಧಾನದ ಪರಿಚ್ಛೇದ ೨೮, ೨೯ ಮತ್ತು ೩೦ರಲ್ಲಿನ ಹಕ್ಕುಗಳನ್ನು ದೊರಕಿಸಿಕೊಡುವಂತೆ ಕೋರಿ ನೀಡಿದ ಮನವಿ.

ಸನ್ಮಾನ್ಯ ಮುಖ್ಯಮಂತ್ರಿಗಳೇ,

ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭೆಯ ಅಭಿನಂದನ ಕಾರ್ಯಕ್ರಮದಲ್ಲಿ ತಾವು ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಪ್ರತ್ಯೇಕ ಧರ್ಮದ ಸ್ಥಾನಮಾನ ನೀಡಬೇಕೆಂಬ ಬಹುದಿನಗಳ ಬೇಡಿಕೆಯನ್ನು ಬೆಂಬಲಿಸುವುದಾಗಿ ಭರವಸೆ ನೀಡಿದ್ದಕ್ಕಾಗಿ ನಾವೆಲ್ಲರೂ ತಮಗೆ ಋಣಿಯಾಗಿದ್ದೇವೆ. ಈ ಮೂಲಕ ತಾವು ಐತಿಹಾಸಿಕ ನಿರ್ಣಯವೊಂದಕ್ಕೆ ಕಾರಣಪುರುಷರಾಗಿದ್ದೀರಿ. ಬಸವತತ್ವಗಳನ್ನು ಪಾಲಿಸುತ್ತಿರುವ ತಮ್ಮ ಸಾಮಾಜಿಕ ಜೀವನ ನಿಜವಾಗಿಯೂ ಶ್ಲಾಘನೀಯ. ಈ ವಿಷಯದಲ್ಲಿ ಈ ಕೆಳಗಿನ ಶಾಶ್ವತ ಸತ್ಯಸಂಗತಿಗಳನ್ನು ತಮ್ಮ ದಯಾಪರ ಗಮನಕ್ಕೆ ತರುತ್ತ ನಮ್ಮ ಮೂರು ವಿನಂತಿಗಳನ್ನು ತಮಗೆ ಸಲ್ಲಿಸುತ್ತಿದ್ದೇವೆ.

೧. ಲಿಂಗಾಯತ ಧರ್ಮವನ್ನು ೧೨ನೆಯ ಶತಮಾನದಲ್ಲಿ ಮಹಾತ್ಮ ಬಸವಣ್ಣನವರು ಸ್ಥಾಪಿಸಿದರು. ಈ ಸಂಗತಿಯನ್ನು ಭಾರತದ ಸರ್ವೋಚ್ಚ ನ್ಯಾಯಾಲಯವು ಜೈನಧರ್ಮ, ಸ್ವಾಮಿನಾರಾಯಣ ಪಂಥ, ರಾಮಕೃಷ್ಣ ಆಶ್ರಮ ಇತ್ಯಾದಿ ನಾಲ್ಕಾರು ಪ್ರಕರಣಗಳ ತೀರ್ಪುಗಳಲ್ಲಿ ಸ್ಪಷ್ಟವಾಗಿ ದಾಖಲಿಸಿದೆ(ಅನುಬಂಧ-೧. ಭಾರತದ ಪ್ರಸಿದ್ಧ ತತ್ವಜ್ಞಾನಿ ಡಾ. ಎಸ್. ರಾಧಾಕೃಷ್ಣನ್ ಅವರೂ 'ಹಿಂದೂ ಜೀವನ ಕ್ರಮ' ಎಂಬ ಪುಸ್ತಕದಲ್ಲಿ

In Public domain. Digitization Muthulakshmi Research Academy

ಅದೇ ಮಾತನ್ನು ಹೇಳಿದ್ದಾರೆ. ಲಿಂಗಾಯತ ಧರ್ಮದ ಇತಿಹಾಸವನ್ನು ಸಮಗ್ರವಾಗಿ ಸಂಶೋಧನೆ ಮಾಡಿದ ಹತ್ತಾರು ವಿದೇಶಿ ವಿದ್ವಾಂಸರೂ ಅದೇ ಅಂಶವನ್ನು ಸ್ಪಷ್ಟಪಡಿಸಿದ್ದಾರೆ. ಇತರ ಅನೇಕ ವಿದ್ವಾಂಸರು ಇದೇ ಸಂಗತಿಯನ್ನು ಸಿದ್ಧಪಡಿಸಿದ್ದಾರೆ(ಅನುಬಂಧ ೨). ಇವುಗಳ ಕೆಲವು ವಿವರಗಳನ್ನು ಅನುಬಂಧ ೧ರಲ್ಲಿಯೂ ನೀಡಿದ್ದೇವೆ. ಹೀಗಿದ್ದಾಗ್ಯೂ ಕೆಲವು ಪಂಗಡದವರು ತಾವೇ ಲಿಂಗಾಯತ ಧರ್ಮದ ಸಂಸ್ಥಾಪಕರೆಂದೂ ಬಸವಣ್ಣನು ಅವರ ಭಕ್ತನೆಂದೂ ಹೇಳಿಕೊಳ್ಳುವುದು ಹಾಸ್ಯಾಸ್ಪದ. ಆದ್ದರಿಂದ ಅವರ ವಾದವನ್ನು ತಾವು ಒಪ್ಪಬಾರದೆಂದು ನಾವು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

೨. ಬಸವಸ್ಥಾಪಿತ ಲಿಂಗಾಯತದಲ್ಲಿ ಹಿಂದೂಧರ್ಮದ ವರ್ಣಾಶ್ರಮ ಸಿದ್ಧಾಂತವಿಲ್ಲದ್ದರಿಂದ ಜಾತಿಭೇದಗಳಿಲ್ಲ. ಆದ್ದರಿಂದ ಜಾತಿ ಆಧಾರಿತ ಕರ್ಮ ಸಿದ್ಧಾಂತವಿಲ್ಲ. ಕರ್ಮಕ್ಕೆ ಬದಲಾಗಿ ಕಾಯಕವೇ ಕೈಲಾಸವಾಗಿದೆ. ಸ್ತ್ರೀಯರಿಗೆ ಪುರುಷರಷ್ಟೇ ಸ್ವಾತಂತ್ರ್ಯವಿದೆ. ಹೀಗೆ ಎಲ್ಲ ಮಾನವರಲ್ಲಿ ಸಮಾನತೆಯೇ ಲಿಂಗಾಯತದ ಮೂಲಮಂತ್ರ. ಸಮಾಜಮುಖಿಯಾದ 'ದಾಸೋಹ'(ಗಳಿಸಿ ಉಳಿಸಿದ ಸಂಪತ್ತನ್ನು ಸಮಾಜಕ್ಕೆ ನೀಡುವುದು) ಲಿಂಗಾಯತ ಮುಖ್ಯ ತತ್ವಗಳಲ್ಲಿ ಒಂದಾಗಿದೆ. ಲಿಂಗಾಯತವು ಸ್ವರ್ಗ-ನರಕ, ಪುನರ್ಜನ್ಮಗಳನ್ನು ನಂಬುವುದಿಲ್ಲ. ಬಹುದೇವೋಪಾಸನೆಗೆ ವಿರುದ್ಧವಾಗಿ ಏಕದೇವೋಪಾಸನೆ ಅದರ ಜೀವಾಳ. ಆದರೆ ಆ ದೇವರು ಗುಡಿಗುಂಡಾರಗಳಲ್ಲಿ, ಕಲ್ಲು ಮಣ್ಣು ಕಟ್ಟಿಗೆಯ ಮೂರ್ತಿಗಳಲ್ಲಿಲ್ಲ. ಅವನು ನಮ್ಮ ದೇಹದೊಳಗೆ ಮತ್ತು ನಮ್ಮ ದೇಹದ ಮೇಲಿನ ಇಷ್ಟಲಿಂಗದಲ್ಲಿದ್ದಾನೆ. ಆ ಮೂಲಕ ಗುಡಿಗುಂಡಾರಗಳಲ್ಲಿನ ಮೂರ್ತಿಗಳಿಗೆ ಪೂಜೆ ಮಾಡುವ ಅಥವಾ ಗುಡಿಗಳಿಗೆ ಹೋಗುವ ಅಗತ್ಯವಿಲ್ಲ. ಪುರೋಹಿತಶಾಹಿಗಳಿಗೆ ಅವಕಾಶವಿಲ್ಲ. ಪ್ರಾಣಿ ದಯೆ, ಶಾಕಾಹಾರ, ಪರಿಸರ ಪ್ರಜ್ಞೆ ಲಿಂಗಾಯತದ ಮೂಲತತ್ವಗಳು. ಅದಕ್ಕೆ ತನ್ನದೇ ಆದ ವಿಶ್ವದ ರೂಪ ರಚನೆಗಳ ಸಿದ್ಧಾಂತವಿದೆ. ಶಿವನೇ ಲಿಂಗಾಯತರ ದೇವನಾದರೂ ಆ ಶಿವನ ಕಲ್ಪನೆ ಹಿಂದೂ ಶಿವನ ಕಲ್ಪನೆಗಿಂತ ತೀರ ಭಿನ್ನವಾಗಿದೆ.

೩. ಹೀಗಿರುವ ವಿಶ್ವಮಾನವೀಯ ತತ್ವ ಮತ್ತು ಆಚರಣೆಗಳುಳ್ಳ ಬಸವ ಸ್ಥಾಪಿತ ಲಿಂಗಾಯತದಿಂದ ಆಕರ್ಷಣೆಗೊಂಡ ನೂರಾರು ಹಿಂದೂ ಜಾತಿ ಪಂಗಡ, ಉಪಪಂಗಡಗಳ ಲಿಂಗಾಯತರಾಗಿ ೧೨, ೧೩, ೧೪ನೆಯ ಶತಮಾನದಲ್ಲಿ ಪರಿವರ್ತನೆಗೊಂಡರು. ಲಿಂಗಾಯತದಲ್ಲಿ ಧರ್ಮಾಂತರಗೊಳ್ಳಲು ಈಗಲೂ ಅವಕಾಶವಿದೆ. ಹೀಗಾಗಿ ಲಿಂಗಾಯತದಲ್ಲಿ

In Public domain. Digitization Muthulakshmi Research Academy
ಈಗ ೯೯ ಉಪಜಾತಿಗಳಿವೆ(ಅನುಬಂಧ ೩. ಅವು ಕಾಲಾಂತರದಲ್ಲಿ ಉಪಜಾತಿಗಳಾಗಿಯೇ ಉಳಿಯಲು ಕಾರಣರಾದವರು ಲಿಂಗಾಯತರಲ್ಲ. ಲಿಂಗಾಯತವನ್ನು ಸೇರಿಕೊಂಡು ಒಳಗಿನಿಂದಲೇ ಅದನ್ನು ದಾರಿ ತಪ್ಪಿಸಿದ ಕೆಲವರು. ಆದಾಗ್ಯೂ ೧೮೮೧, ೧೮೯೧, ೧೯೦೧ರ ಅಂದಿನ ಮೈಸೂರು ರಾಜ್ಯದ ಜನಗಣತಿಯಲ್ಲಿ ಈ ಎಲ್ಲ ಪಂಗಡಗಳನ್ನು ಲಿಂಗಾಯತ ಉಪಪಂಗಡಗಳೆಂದೇ ನಮೂದಿಸಲಾಗಿದೆ (ಅನುಬಂದ ೪ಅ ಮತ್ತು ೪ಬ). ಅಂತಹ ಉಪಪಂಗಡದಲ್ಲಿ ವೀರಶೈವವೂ ಒಂದು. ಅದೇ ರೀತಿ ಕರ್ನಾಟಕ ಸರ್ಕಾರವು ನೇಮಿಸಿದ್ದ ನಾಲ್ಕು ಅಲ್ಪಸಂಖ್ಯಾತ ಆಯೋಗಗಳ ವರದಿಗಳಲ್ಲೂ ಲಿಂಗಾಯತ ಉಪಪಂಗಡಗಳನ್ನು 'ಲಿಂಗಾಯತ'ದ ಅಡಿಯಲ್ಲಿಯೇ ತೋರಿಸಲಾಗಿದೆ.

೪. ಹಿಂದೂ ಶೈವದ ವಿವಿಧ ಪಂಥಗಳಾಗಿದ್ದ ಕಾಳಾಮುಖ, ಪಾಶುಪತ, ಕಾಪಾಲಿಕ, ಲಕುಲೀಶ, ನಾಥಪಂಥ ಕೆಲವು ಕಾಶ್ಮೀರಿ ಶೈವರು ಹಾಗೂ ಆಂಧ್ರದ ಆರಾಧ್ಯ ಶೈವ ಬ್ರಾಹ್ಮಣರೂ ಬಸವ ಸ್ಥಾಪಿತ ಲಿಂಗಾಯತವನ್ನು ಸೇರಿಕೊಂಡರು. ಕಾಲಾಂತರದಲ್ಲಿ ಮೊದಲು ಆರು ಶೈವ ಪಂಥಗಳು ಬಸವಣ್ಣನವರ ಲಿಂಗಾಯತರಲ್ಲಿ ಲೀನವಾಗಿ ಹೋದರು (ಇಂದಿನ ವಿರಕ್ತಮಠಗಳು). ಆದರೆ ಆರಾಧ್ಯ ಬ್ರಾಹ್ಮಣರು ಸುಮಾರು ೧೩-೧೪ನೇ ಶತಮಾನದಲ್ಲಿ(ಬಸವಣ್ಣನ ನಂತರದ ಎರಡು ಶತಮಾನಗಳ ನಂತರ) ಆಧಾರವಿಲ್ಲದ ಅವೈಜ್ಞಾನಿಕವಾದ ಕಟ್ಟುಕಥೆಗಳನ್ನು ರಚಿಸಿ ತಾವೇ ಲಿಂಗಾಯತ ಧರ್ಮದ ಸ್ಥಾಪಕರೆಂದು ವಾದಿಸತೊಡಗಿದರು. "ಸಿದ್ಧಾಂತ ಶಿಖಾಮಣಿ," "ಲಿಂಗಧಾರಣ ಚಂದ್ರಿಕೆ"ಯಂತಹ ಅನೇಕ ನಿರಾಧಾರಿತ ಮತ್ತು ಕಟ್ಟುಕಥೆಗಳನ್ನು, ಮೂಢನಂಬಿಕೆಗಳ ಗ್ರಂಥಗಳನ್ನು ಬರೆದು, ಬಸವಣ್ಣನು ವಿರೋಧಿಸಿದ ಅನೇಕ ಹಿಂದೂ ಆಚರಣೆಗಳನ್ನು ಕ್ರಮೇಣ ಲಿಂಗಾಯತದಲ್ಲಿ ಅಳವಡಿಸಿದರು. ೧೪-೧೫ನೇ ಶತಮಾನದಲ್ಲಿ ಲಿಂಗಾಯತರಾಗಿದ್ದ ವಿಜಯನಗರ ಸಾಮ್ರಾಟರ ಮತ್ತು ಕೆಳದಿ ಕೊಡಗು ಮೈಸೂರು ಅರಸರ ಆಶ್ರಯದಲ್ಲಿ ಅದೇ ವೀರಶೈವರು ಬಸವಣ್ಣನ ಲಿಂಗಾಯತವನ್ನು ವೀರಶೈವ-ಲಿಂಗಾಯತವೆಂದು ಪರಿವರ್ತಿಸಿದರು.

೫. ವೀರಶೈವ ಗುಂಪಿಗೆ ಸೇರಿದ ಕೆಲವರು ಬಸವಣ್ಣನವರ ಮತ್ತು ಇತರ ಶರಣರ ಅನೇಕ ವಚನಗಳನ್ನು ತಮಗೆ ಅನುಕೂಲವಾಗುವಂತೆ ತಿದ್ದಿಕೊಂಡು ಪ್ರಕ್ಷಿಪ್ತಗೊಳಿಸಿದ್ದಾರೆ. ಇಂತಹ ಖೊಟ್ಟಿ ವಚನಗಳನ್ನು ಬಹಳಷ್ಟು ವಿದ್ವಾಂಸರು ಗುರುತಿಸಿ ಅವುಗಳ ಯಾದಿಯನ್ನೇ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ(ಅನುಬಂಧ-೫). ಲಿಂಗಾಯತರು ಹಿಂದೂಗಳಲ್ಲವೆಂದು

In Public domain. Digitization Muthulakshmi Research Academy
ನೂರಾರು ಪಂಡಿತರು, ಹತ್ತಾರು ವಿದೇಶಿ ಸಂಶೋಧಕರು ಮತ್ತು ಸರ್ವೋಚ್ಚ ನ್ಯಾಯಾಲಯವು ಖಡಾಖಂಡಿತವಾಗಿ ಸಿದ್ಧಪಡಿಸಿದ್ದಾರೆ. ಅದನ್ನು ಸಿದ್ಧಪಡಿಸಲು ಸಾಕಷ್ಟು ಸಾಕ್ಷಿ ಪುರಾವೆಗಳಿವೆ. ಅವಶ್ಯವಿದ್ದರೆ ಅದನ್ನು ನಾವು ಸಿದ್ಧಪಡಿಸಲು ಸಿದ್ಧರಿದ್ದೇವೆ. ಸತ್ಯ ಹೀಗಿರುವಾಗ ಪೇಜಾವರ ಪೀಠದಂತಹ ಕೆಲವು ಬ್ರಾಹ್ಮಣ ಮಠಾಧೀಶರು ಮತ್ತು ಸಾಹಿತಿ ಎಸ್. ಎಲ್.ಭೈರಪ್ಪನಂಥವರು ವೀರಶೈವ ಪಂಥದವರಿಗೆ ಬೆಂಬಲ ನೀಡುತ್ತಿದ್ದಾರೆ. ಅದಕ್ಕೆ ಕಾರಣಗಳನ್ನು ಪ್ರಾಜ್ಞರಾದ ತಾವು ಸುಲಭವಾಗಿ ಊಹಿಸಬಹುದು.

೬. ಹಿಂದೂ ವಿವಾಹ ಕಾನೂನು ೧೯೫೫, ಹಿಂದೂ ವಾರಸ ಕಾನೂನು ೧೯೫೬ರಲ್ಲಿ ಹಿಂದೂ ವ್ಯಾಖ್ಯಾನದಲ್ಲಿ ಬೌದ್ಧ, ಜೈನ, ಸಿಖ್ ಮತ್ತು ಲಿಂಗಾಯತ/ವೀರಶೈವ ಈ ನಾಲ್ಕು ಧರ್ಮಗಳನ್ನು ವಿಶೇಷವಾಗಿ ಹೆಸರಿಸಲಾಗಿದೆ. ಹಿಂದೂ ಅಡಿಯಲ್ಲಿ ಅವುಗಳನ್ನು ಸೇರಿಸಲಾಗಿದ್ದರೂ ಈ ಧರ್ಮಗಳು ಭಾರತದಲ್ಲಿ ಹುಟ್ಟಿದ್ದರೂ ಅವು ಹಿಂದೂಧರ್ಮಕ್ಕಿಂತ ಭಿನ್ನವಾಗಿವೆ ಎಂಬುದನ್ನು ಹಿಂದೂ ಕಾನೂನು ರಚಿಸಿದವರು ತಿಳಿದಿದ್ದರು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ ೧೯೬೪ರಲ್ಲಿ ಸಿಖ್ ಧರ್ಮಕ್ಕೆ, ೧೯೯೩ರಲ್ಲಿ ಬೌದ್ಧಧರ್ಮಕ್ಕೆ, ೨೦೧೪ರಲ್ಲಿ ಜೈನಧರ್ಮಕ್ಕೆ, 'ಅಲ್ಪಸಂಖ್ಯಾತ ಧರ್ಮ'ವೆಂಬ ಮಾನ್ಯತೆಯನ್ನು ಭಾರತ ಸರ್ಕಾರ ಹಾಗೂ ಅನೇಕ ರಾಜ್ಯ ಸರ್ಕಾರಗಳು ಈಗಾಗಲೇ ನೀಡಿವೆ. ವಾಸ್ತವಾಂಶ ಹೀಗಿದ್ದರೂ "ಅಲ್ಪಸಂಖ್ಯಾತ ಧರ್ಮ"ದ ಮಾನ್ಯತೆಯಿಂದ ಈವರೆಗೆ ಲಿಂಗಾಯತ ಧರ್ಮ ವಂಚಿತವಾಗಿದೆ. ಆದ್ದರಿಂದ ಸಂವಿಧಾನದ ಪರಿಚ್ಛೇದ ೨೮, ೨೯ ಮತ್ತು ೩೦ರಲ್ಲಿ ದತ್ತವಾದ ಹಕ್ಕುಗಳಿಂದ ಲಿಂಗಾಯತ ಸಮುದಾಯ ವಂಚಿತವಾಗಿದೆ.

೭. ವಸ್ತುಸ್ಥಿತಿ ಮೇಲೆ ವಿವರಿಸಿದಂತಿದ್ದರೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯು ಸರ್ಕಾರಕ್ಕೆ ಸಲ್ಲಿಸುವ ತನ್ನ ಮನವಿಯಲ್ಲಿ "ವೀರಶೈವ ಲಿಂಗಾಯತ" ಧರ್ಮಕ್ಕೆ ಮಾನ್ಯತೆ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಅದು ತಪ್ಪು. ಆದುದರಿಂದಲೇ ಈ ಹಿಂದೆ ಮೂರು ಬಾರಿ ಭಾರತ ಸರ್ಕಾರವು ನಮ್ಮ ಮನವಿಯನ್ನು ತಿರಸ್ಕರಿಸಿದೆ(ಅನುಬಂಧ-೬). ಅದೇ ರೀತಿಯಾಗಿ ಮತ್ತೊಮ್ಮೆ ಕೇಳಿಕೊಂಡರೆ ತಿರಸ್ಕಾರಗೊಳ್ಳುತ್ತದೆಯೆಂದು ನಮಗೆ ಗೊತ್ತಿದೆ. ಹಾಗಿದ್ದಲ್ಲಿ ರಾಜ್ಯ ಸರ್ಕಾರದ ಪ್ರಸ್ತಾವನೆಗೂ ಮಾನ್ಯತೆ ದೊರೆಯದೆ ಮುಜುಗರಕ್ಕೆ ಕಾರಣವಾಗುತ್ತದೆ. ಅದ್ದರಿಂದ ಮಹಾಸಭೆಯ ಮನವಿಯನ್ನು ತಿರಸ್ಕರಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇವೆ.

In Public domain. Digitization Muthulakshmi Research Academy

೧೯೦೪ರಲ್ಲಿ ಸ್ಥಾಪಿತವಾದ ಈ ಮಹಾಸಭೆಗೆ "ಲಿಂಗಾಯತ ಮಹಾಸಭೆ" ಎಂದು ಹೆಸರಿಸುವ ಬದಲು "ವೀರಶೈವ ಮಹಾಸಭೆ" ಎಂದು ಹೆಸರಿಡಲು ವೀರಶೈವಪರವಾಗಿದ್ದ ಅಂದಿನ ಬಲಾಢ್ಯ ಸ್ವಾಮಿಗಳ ಪ್ರಭಾವವೇ ಕಾರಣ. ಈಗ ವೀರಶೈವ ಸ್ವಾಮಿಗಳು ಲಿಂಗಾಯತ–ವೀರಶೈವ ಪದಗಳು ಪರ್ಯಾಯ(ಪೂರಕ)ಪದಗಳು ಎಂದು ಹೇಳುವ ಹುಸಿನಂಬಿಕೆಯಿಂದ ಲಿಂಗಾಯತ ಸಮಾಜದಲ್ಲಿ ಅನೇಕ ಪ್ರಮಾದಗಳು ಉಂಟಾಗಿವೆ. ಲಿಂಗಾಯತವನ್ನೇ ಸ್ಥಾಪಿಸಿದ ಬಸವಣ್ಣನವರನ್ನೇ ಮರೆಸುವಂತಹ ವೇದಿಕೆ ಮತ್ತು ಪ್ರಭಾವವಗಳು ಬೆಳೆದವು. ಆದುದರಿಂದಾಗಿಯೇ ಲಿಂಗಾಯತವು ಕಳೆದ ಒಂದನೂರು ವರ್ಷಗಳಲ್ಲಿ ಗೊಂದಲದ ಗೂಡಾಯಿತು. ಒಂದುನೂರು ವರ್ಷಗಳ ನಂತರ ಹತ್ತು ವರ್ಷಗಳ ಹಿಂದೆ ವೀರಶೈವ ಮಹಾಸಭೆಯನ್ನು 'ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ' ಎಂದು ತನ್ನ ಹೆಸರನ್ನು ಬದಲಾಯಿಸಿ ತಪ್ಪನ್ನು ಅರ್ಧ ಸರಿಪಡಿಸಿದೆ.

ಎರಡನೆಯದಾಗಿ ವೀರಶೈವ ಪರವಾದ ಸ್ವಾಮಿಗಳ ಒತ್ತಡದಿಂದ ವೀರಶೈವ ಮಹಾಸಭೆಯ ತನ್ನ ಪ್ರಥಮ ಅಧಿವೇಶನದಲ್ಲಿ 'ವೀರಶೈವವು ಹಿಂದೂಧರ್ಮದ ಒಂದು ಭಾಗ'ವೆಂದೂ, ವೀರಶೈವರು ವೇದ ಆಗಮ ಉಪನಿಷತ್ತು ಇತ್ಯಾದಿಗಳನ್ನು ಒಪ್ಪುತ್ತಾರೆ ಮತ್ತು ವೀರಶೈವ ಮಠಗಳಿಗೆ ಜಂಗಮ ಜಾತಿಯವರೇ ವಟುಗಳಾಗಬೇಕೆಂದು ೧೯೦೪ರಲ್ಲಿ ಗೊತ್ತುವಳಿಗಳನ್ನು ಸ್ವೀಕರಿಸಿತ್ತು. ೩೬ ವರ್ಷಗಳ ನಂತರ ಅಂದರೆ ೧೯೪೦ರ ಅಧಿವೇಶನದಲ್ಲಿಯೇ ಇದೇ ಮಹಾಸಭೆಯು ಆ ಗೊತ್ತುವಳಿಯನ್ನು ಪೂರ್ಣವಾಗಿ ೭೭ ವರ್ಷಗಳ ಹಿಂದೆಯೇ ರದ್ದುಗೊಳಿಸಿ ಬಸವತತ್ವವನ್ನು ಒಪ್ಪಿಕೊಂಡಿದೆ. ವೀರಶೈವ ಮಹಾಸಭೆಯು ತನ್ನ ಹಳೆಯ ಹುಸಿ ಪ್ರಭಾವದಿಂದ ಇನ್ನೂ ಹೊರಗೆ ಬಂದಿಲ್ಲವೆಂಬುದು ನಮಗೆ ಸ್ಪಷ್ಟವಾಗಿದೆ. ಅದ್ದರಿಂದ ನಾವು ಪ್ರತ್ಯೇಕ ಮನವಿಯನ್ನು ಸಲ್ಲಿಸುತ್ತಿದ್ದೇವೆ. ಸಮಸ್ತ ಲಿಂಗಾಯತ ಸಮುದಾಯದವರಾದ ನಾವೆಲ್ಲರೂ ತಮ್ಮಲ್ಲಿ ಈ ಕೆಳಗಿನ ವಿನಂತಿಗಳನ್ನು ಮಾಡುತ್ತಿದ್ದೇವೆ.

ಅ. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯಲ್ಲಿನ "ವೀರಶೈವ ಲಿಂಗಾಯತ"ವನ್ನು ಮಾನ್ಯ ಮಾಡಬಾರದು ಮತ್ತು ಕೇವಲ ಲಿಂಗಾಯತ ಧರ್ಮಕ್ಕೆ ಮಾನ್ಯತೆ ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಬ. ಕರ್ನಾಟಕ ಸರ್ಕಾರವು ಜೈನ, ಬೌದ್ಧ, ಸಿಖ್ ಧರ್ಮಗಳಿಗೆ ಈಗಾಗಲೇ ನೀಡಿರುವ ಎಲ್ಲ ಪ್ರಕಾರದ ಮಾನ್ಯತೆಯನ್ನು ಒಳಗೊಂಡಂತೆ ಲಿಂಗಾಯತ ಧರ್ಮಕ್ಕೂ ನೀಡಿ, ನಮ್ಮ ಸಂವಿಧಾನದ ಪರಿಚ್ಛೇದ ೨೮, ೨೯ ಮತ್ತು ೩೦ರಲ್ಲಿನ ಹಕ್ಕುಗಳನ್ನು ಲಿಂಗಾಯತ ಧರ್ಮಕ್ಕೂ ನೀಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿಸುತ್ತೇವೆ.

In Public domain. Digitization Muthulakshmi Research Academy

ಕ. ಲಿಂಗಾಯತರು ಕರ್ನಾಟಕವಷ್ಟೇ ಅಲ್ಲದೆ ಮಹಾರಾಷ್ಟ್ರ, ತೆಲಂಗಾಣ, ತಮಿಳುನಾಡು ಮತ್ತು ಕೇರಳ, ಗೋವಾ ರಾಜ್ಯಗಳಲ್ಲೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಆದ್ದರಿಂದ ರಾಷ್ಟ್ರೀಯ ಅಲ್ಪಸಂಖ್ಯಾತರ ಅಯೋಗ ಕಾನೂನು ೧೯೯೨ರ ಕಲಂ ೯(ಹ) ಅಡಿಯಲ್ಲಿ ಜೈನ, ಬೌದ್ಧ, ಸಿಖ್ ರಂತೆ ಲಿಂಗಾಯತವನ್ನು ರಾಷ್ಟ್ರಮಟ್ಟದಲ್ಲಿ "ಅಲ್ಪಸಂಖ್ಯಾತ ಧರ್ಮ"ವೆಂದು ಅಧಿಸೂಚನೆಗೊಳಿಸಲು ನಮ್ಮ ವಿನಂತಿಯನ್ನು ಅನುಮೋದಿಸಿ ಬೆಂಬಲಿಸಿ ತಾವು ಭಾರತ ಸರ್ಕಾರಕ್ಕೆ ರವಾನಿಸಬೇಕೆಂದು ನಮ್ರತೆಯಿಂದ ವಿನಂತಿಸಿಕೊಳ್ಳುತ್ತೇವೆ.

ಶರಣು ಶರಣಾರ್ಥಿಗಳೊಂದಿಗೆ

ಸಹಿ ಮಾಡಿದವರು

೧. ಪೂಜ್ಯ ತೋಂಟದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಗದಗ-ಡಂಬಳ.
೨. ಪೂಜ್ಯ ಜಯಮೃತ್ಯುಂಜಯ ಸ್ವಾಮಿಗಳು, ಪಂಚಮಸಾಲಿ ಪೀಠ, ಕೂಡಲಸಂಗಮ.
೩. ಶ್ರೀ ಬಸವಲಿಂಗ ಪಟ್ಟದೇವರು, ಭಾಲ್ಕಿ ಹಿರೇಮಠ ಸಂಸ್ಥಾನ, ಭಾಲ್ಕಿ.
೪. ಶ್ರೀ ಶಿವಾನಂದ ಮಹಾಸ್ವಾಮಿಗಳು, ಹುಲಸೂರು.
೫. ಶ್ರೀ ಸಿದ್ಧರಾಮ ಮಹಾಸ್ವಾಮಿಗಳು, ರುದ್ರಾಕ್ಷಿಮಠ, ಬೆಳಗಾವಿ
೬. ಶ್ರೀ ಗುರು ಮಹಾಂತೇಶಸ್ವಾಮಿಗಳು, ವಿಜಯ ಮಹಾಂತೇಶ ಮಠ, ಚಿತ್ತರಗಿ-ಇಲಕಲ್ಲ.
೭. ಡಾ. ವಿಜಯ ಮಹಾಂತೇಶ ಮಹಾಸ್ವಾಮಿಗಳು, ಇಲಕಲ್ ಚಿತ್ತರಗಿ ಮಠ, ಇಲಕಲ್.
೮. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಮುರುಘಾಮಠ, ಧಾರವಾಡ.
೯. ಶ್ರೀ ಗುರುಸಂಗನಬಸವ ಮಹಾಸ್ವಾಮಿಗಳು, ಯರನಾಳ.
೧೦. ಶ್ರೀ ಬಸವ ರಮಾನಂದ ಸ್ವಾಮಿಗಳು, ದಾಬಸ್‌ಪೇಟೆ.
೧೧. ಶ್ರೀ ಅಭಿನವ ಷ.ಭ್ರ.ಷಣ್ಮುಖ ಶಿವಯೋಗಿ ಸ್ವಾಮಿಗಳು.
೧೨. ಶ್ರೀ ಗುರುಬಸವ ಸ್ವಾಮಿಗಳು, ಪಾಂಡೋಮಟ್ಟಿ,
೧೩. ಶ್ರೀ ಶಿವಬಸವ ಸ್ವಾಮಿಗಳು, ಗಚ್ಚಿನ ಮಠ, ಅಥಣಿ.
೧೪. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ರುದ್ರದೇವರ ಮಠ, ಶಿರಸಿ.
೧೫. ಶ್ರೀ ಶಾಂತಲಿಂಗ ಸ್ವಾಮೀಜಿ, ಹೊಸಮಠ, ಹಾವೇರಿ.
೧೬. ಶ್ರೀ ಬಸವ ಮರುಳಸಿದ್ಧ ಸ್ವಾಮಿಗಳು, ಬಸವ ಕೇಂದ್ರ, ಶಿವಮೊಗ್ಗ.

In Public domain. Digitization Muthulakshmi Research Academy

೧೭. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಲಿಂಗಸುಗೂರು.

೧೮. ಶ್ರೀ ತಿಪ್ಪೇರುದ್ರಸ್ವಾಮಿಗಳು, ತಿಪ್ಪೇರುದ್ರ ಮಠ, ಚಳ್ಳಕೆರೆ.

೧೯. ಶ್ರೀ ಬಸವಕಿರಣ ಸ್ವಾಮಿಗಳು, ಶ್ರೀ ಚಲುವೇಸ್ವಾಮಿ ಮಠ, ನಾಗಗೊಂಡನಹಳ್ಳಿ.

೨೦. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ವಿರಕ್ತಮಠ, ಬ.ಬಾಗೇವಾಡಿ.

೨೧. ಶ್ರೀ ದಯಾನಂದ ಶ್ರೀಗಳು, ಬೆಂಗಳೂರು.

೨೨. ಶ್ರೀ ರುದ್ರಮುನಿ ಸ್ವಾಮೀಜಿ.

೨೩. ಶ್ರೀ ಶಂಕರಲಿಂಗ ಸ್ವಾಮಿಗಳು ಶಂಕರಲಿಂಗಗುಡಿ.

೨೪. ಸ್ವಾಸಗುರು ಶ್ರೀ ವಚನಾನಂದ ಸ್ವಾಮಿಜಿ.

೨೫. ಮಹಾಲಿಂಗದೇವರು, ಭಾಲ್ಕಿ.

೨೬. ಶ್ರೀ ಶಿವಾನಂದ ಸ್ವಾಮಿಗಳು, ಅನುಭವ ಮಂಟಪ, ಬಸವಕಲ್ಯಾಣ.

೨೭. ಶ್ರೀ ಗುರುಬಸವ ಪಟ್ಟದದೇವರು, ಭಾಲ್ಕಿ.

೨೮. ಶರಣೆ ಅಕ್ಕಮಹಾದೇವಿ ತಾಯಿ, ಶಿಲಾಮಠ.

೨೯. ಶರಣೆ ಜಯದೇವಿ ತಾಯಿ, ಗುರುಮಲ್ಲೇಶ ದಾಸೋಹ ಮಠ, ಕೆ.ಆರ್. ನಗರ.

೩೦. ಶರಣೆ ಚಿನ್ಮಯ ದೇವಿ ಗುರುಮಲ್ಲೇಶ ದಾಸೋಹ ಮಠ.

೩೧. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ವಿರಕ್ತಮಠ, ಬ್ಯಾಡಗಿ.

೩೨. ಶ್ರೀ ಬಸವ ಕೇತೇಶ್ವರ ಸ್ವಾಮಿಗಳು, ಮಾದಾರ ಗುರುಪೀಠ, ಚಿತ್ರದುರ್ಗ.

೩೩. ಶ್ರೀ ಬಸವಪ್ರಭು ಸ್ವಾಮಿಗಳು, ವಿರಕ್ತಮಠ ದಾವಣಗೆರೆ.

ನಿರ್ಣಯ ಮಂಡನೆ

ಶ್ರೀ ಬಸವರಾಜ ಹೊರಟ್ಟಿ, ವಿಧಾನಪರಿಷತ್ ಸದಸ್ಯರು

ಅನುಮೋದಕರು

೧. ಡಾ.ಎ.ಬಿ.ಮಾಲಕರೆಡ್ಡಿ, ಮಾಜಿ ಸಚಿವರು.

೨. ಶ್ರೀ ಎಸ್.ಎಸ್.ಪಾಟೀಲ, ಮಾಜಿ ಸಚಿವರು.

೩. ಶ್ರೀ ಬಿ.ಆರ್.ಪಾಟೀಲ, ಶಾಸಕರು.

೪. ಶ್ರೀ ವಿಜಯಾನಂದ ಕಾಶಪ್ಪನವರ, ಶಾಸಕರು.

೫. ಶ್ರೀ ಜಿ.ಬಿ.ಪಾಟೀಲ, ಕಾರ್ಯದರ್ಶಿಗಳು

೬. ಶ್ರೀ ನೀಲಕಂಟ ಅಸೂಟಿ, ಧಾರವಾಡ.

೭. ಶ್ರೀ ಅಲ್ಲಂ ವಿರಭದ್ರಪ್ಪ, ಮಾಜಿ ಸಚಿವರು.

೮. ಶ್ರೀ ಪ್ರಭಣ್ಣ ಹುಣಸಿಕಟ್ಟಿ, ಗದಗ.

In Public domain. Digitization Muthulakshmi Research Academy

೯. ಶ್ರೀ ಮಾಲೀಕಯ್ಯ ಗುತ್ತೇದಾರ, ಶಾಸಕರು.

೧೦. ಶ್ರೀ ಮೋಹನ ಕೊಂಡಜ್ಜಿ, ವಿಧಾನಪರಿಷತ್ ಸದಸ್ಯರು.

೧೧. ಶ್ರೀ ಎನ್. ಎಸ್. ಖೇಡ, ಮಾಜಿ ಶಾಸಕರು.

೧೨. ಶ್ರೀ ಮಹಾದೇವ ಹೊರಟ್ಟಿ, ಧಾರವಾಡ.

೧೩. ಶ್ರೀ ಬಾಬು ವಾಲಿ, ಬೀದರ್,

೧೪. ಶ್ರೀ ಬಸವರಾಜ ದನ್ನೂರು, ಬೀದರ್.

೧೫. ಶ್ರೀ ರಾಜಶೇಖರ ಮೆಣಸಿನಕಾಯಿ, ಹುಬ್ಬಳ್ಳಿ.

೧೬. ಶ್ರೀ ಗಣೇಶ ಪಾಟೀಲ, ಕಲ್ಬುರ್ಗಿ.

೧೭. ಶ್ರೀ ಎಸ್.ಎಸ್.ಶೆಟ್ಟರ, ವಕೀಲರು, ಗದಗ ಮುಂತಾದವರು.

ಅನುಬಂಧ ೧: ಸರ್ವೋಚ್ಚ **ನ್ಯಾಯಾಲಯದ ಕೆಲವು ತೀರ್ಪುಗಳು**

ಅನುಬಂಧ ೨: ಸಿಖ್, ಬೌದ್ಧ ಮತ್ತು ಜೈನಧರ್ಮಗಳಿಗೆ ಭಾರತ ಸರಕಾರ ನೀಡಿದ ರಾಷ್ಟ್ರೀಯ ಅಲ್ಪಸಂಖ್ಯಾತ ಮಾನ್ಯತೆಯ ಆದೇಶಗಳು.

ಅನುಬಂಧ ೩: ಖೊಟ್ಟಿ ವಚನಗಳಿಗೆ ಸಂಬಂಧಿಸಿದ ಲೇಖನಗಳು ಮತ್ತು ಪುಸ್ತಕಗಳ ಪಟ್ಟಿ.

ಅನುಬಂಧ ೪: ಲಿಂಗಾಯತವು ಹಿಂದೂಧರ್ಮವಲ್ಲವೆಂಬ ಬಗೆಗಿನ ಕೆಲವು ಪುಸ್ತಕಗಳು.

ಅನುಬಂಧ ೫: ಮೈಸೂರು ಮತ್ತು ಮುಂಬೈ ಪ್ರಾಂತದ ಜನಗಣತಿಯ ವಿವರ ಕೋಷ್ಟಕಗಳು.

ಅನುಬಂಧ ೬: ಲಿಂಗಾಯತ ಉಪಪಂಗಡಗಳ ಪಟ್ಟಿ.

ಖ. ವಿ. ಸೂ: ಓದುಗರಲ್ಲಿ ವಿನಂತಿ, ಬೆಂಗಳೂರಿನ ಜ್ಞಾನ ಜ್ಯೋತಿ ಸಭೆ, ಬೆಳಗಾವಿ, ಕಲ್ಬುರ್ಗಿ, ಹುಬ್ಬಳ್ಳಿ ಹಾಗೂ ವಿಜಾಪುರ ಸಭೆಗಳ ಸ್ವತಂತ್ರ ಧರ್ಮ ಬೇಡಿಕೆಯ ಮನವಿ ಪತ್ರಗಳ ಸಾರಾಂಶವು ಹೆಚ್ಚು ಕಡಿಮೆ ಒಂದೆ ಆಗಿರುವುದರಿಂದ ಇವುಗಳ ಹೊರತಾಗಿ ಹೆಚ್ಚಿನ ಅಂಶಗಳನ್ನು ಮಾತ್ರ ಇಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ.

In Public domain. Digitization Muthulakshmi Research Academy

ಆಗಸ್ಟ್ ೨೨. ೨೦೧೭.

ಇಂದ
ಲಿಂಗಾಯತ ಸ್ವತಂತ್ರ ಧರ್ಮ ಹೋರಾಟ ಸಮಿತಿ,
ಬೆಳಗಾವಿ.

ಗೆ
ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ
ಬೆಂಗಳೂರು-೧

ಮನವಿ ಪತ್ರ

ಅ. ಲಿಂಗಾಯತರೆಲ್ಲರೂ ಮೊದಲು ಭಾರತೀಯರು ತದನಂತರ ಲಿಂಗಾಯತರು. ಕಳೆದ ೯೦೦ ವರ್ಷಗಳಿಂದ ಭಾರತದಲ್ಲಿ ಲಿಂಗಾಯತರು ಅಸ್ತಿತ್ವದಲ್ಲಿದ್ದು, ದೇಶನಿಷ್ಠೆ, ದೇಶಭಕ್ತಿ, ದೇಶಸೇವೆಯಲ್ಲಿ ನಿರತರಾಗಿದ್ದರೂ ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರ ಈವರೆಗೂ ಲಿಂಗಾಯತ ಧರ್ಮಕ್ಕೆ ಪ್ರತ್ಯೇಕ ಧರ್ಮದ ಮತ್ತು ಅಲ್ಪಸಂಖ್ಯಾತ ಧರ್ಮದ ಮಾನ್ಯತೆ ನೀಡದಿರುವುದು ನ್ಯಾಯ ಸಮ್ಮತವಲ್ಲ.

ಆ. ಸಂವಿಧಾನದ ಪರಿಚ್ಛೇದ ೨೫, ೨೬, ೨೯ ಮತ್ತು ೩೦ರಲ್ಲಿ ದತ್ತವಾದ ಹಕ್ಕುಗಳನ್ನು ನಮಗೂ ನೀಡುವಂತೆ ಮನವಿ.

ಈ ಮನವಿಗೆ ಸಭೆಯಲ್ಲಿದ್ದಲಿಂಗಾಯತ ಮಠಾಧೀಶರು, ಹೋರಾಟ ಸಮಿತಿಯ ಸದಸ್ಯರು, ಮಂತ್ರಿಗಳು, ಶಾಸಕರು, ಸಮಾಜದ ಮುಖಂಡರು ಸಹಿ ಹಾಕಿದ್ದರು.

ಇಂದ ಸೆಪ್ಟೆಂಬರ್ ೨೪, ೨೦೧೭
ಲಿಂಗಾಯತ ಸ್ವತಂತ್ರ ಧರ್ಮ ಹೋರಾಟ ಸಮಿತಿ ಕಲ್ಬುರ್ಗಿ.
೧೭, ವಿ. ವಿ. ಹಾಸ್ಟೆಲ್, ಸೇಡಂ ರಸ್ತೆ,
ಕಲ್ಬುರ್ಗಿ

ಗೆ,
ಶ್ರೀ ಸಿದ್ಧರಾಮಯ್ಯನವರು.
ಮಾನ್ಯ ಮುಖ್ಯಮಂತ್ರಿಗಳು.
ಕರ್ನಾಟಕ ಸರ್ಕಾರ, ಬೆಂಗಳೂರು. ೧

In Public domain. Digitization Muthulakshmi Research Academy

ವಿಷಯ : 'ಲಿಂಗಾಯತ ಸ್ವತಂತ್ರ ಧರ್ಮ' ಎಂದು ಘೋಷಿಸಿ, ಅದನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಮನವಿ.

I. ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ನೇತೃತ್ವದ ಸಾಮಾಜಿಕ ಚಳವಳಿಯಲ್ಲಿ ಹುಟ್ಟಿ ಬಂದದ್ದೇ ಲಿಂಗಾಯತ ಧರ್ಮ.

II. ಇದು ವರ್ಣಾಶ್ರಮ, ಕರ್ಮ ಸಿದ್ಧಾಂತವನ್ನು, ಸ್ವರ್ಗ ನರಕಗಳನ್ನು, ಮತ್ತು ಪುನರ್ಜನ್ಮ ಎಂಬ ಕಟ್ಟು ಕಥೆಗಳನ್ನು ನಿರಾಕರಿಸುತ್ತದೆ.

ಸಹಿ

ಬಸವರಾಜ ಹೊರಟ್ಟಿ ಇವರೊಂದಿಗೆ ನಾಲ್ಕು ನೂರಕ್ಕೂ ಹೆಚ್ಚು ಪ್ರಮುಖರು ಸಹಿ ಹಾಕಿದ್ದರು. ಅಲ್ಲದೆ ಮೂರು ಲಕ್ಷಕ್ಕೂ ಹೆಚ್ಚು ಜನರು ಇದನ್ನು ಸಾಕ್ಷೀಕರಿಸಿದ್ದರು.

ಇಂದ ನವೆಂಬರ್ ೦೫, ೨೦೧೭

ಲಿಂಗಾಯತ ಸ್ವತಂತ್ರ ಧರ್ಮ ಹೋರಾಟ ಸಮಿತಿ,
ಹುಬ್ಬಳ್ಳಿ

ಗೆ,
ಶ್ರೀ ಸಿದ್ಧರಾಮಯ್ಯನವರು.
ಮಾನ್ಯ ಮುಖ್ಯಮಂತ್ರಿಗಳು.
ಕರ್ನಾಟಕ ಸರ್ಕಾರ, ಬೆಂಗಳೂರು. ೧

ವಿಷಯ : 'ಲಿಂಗಾಯತ ಸ್ವತಂತ್ರ ಧರ್ಮ' ಎಂದು ಘೋಷಿಸಿ, ಅದನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಮನವಿ.

ವಿಷಯ: 'ಲಿಂಗಾಯತ ಅಲ್ಪ ಸಂಖ್ಯಾತ ಸ್ವತಂತ್ರ ಧರ್ಮ' ಎಂದು ಘೋಷಣೆ ಮಾಡಲು ಮನವಿ.

೧. ತಾತ್ವಿಕ ಮತ್ತು ವಾಸ್ತುವಿಕ ಆಧಾರದ ಮೇಲೆ ಹಿಂದೂಧರ್ಮದಿಂದ ಬೇರ್ಪಟ್ಟ ಜೈನ, ಬೌದ್ಧ ಮತ್ತು ಸಿಖ್ ಧರ್ಮಗಳ ರೀತಿಯಲ್ಲಿ ಲಿಂಗಾಯತ ಧರ್ಮವು ಕಳೆದ ೯೦೦ ವರ್ಷಗಳಿಂದ ಅಸ್ತಿತ್ವದಲ್ಲಿದೆ.

೨. 'ದೇಶಕ್ಕೆ ಸ್ವಾತಂತ್ರ್ಯ ಬಂತು ನಮ್ಮ ಧರ್ಮಕ್ಕೆ ಸ್ವಾತಂತ್ರ ಹೋಯಿತು'. ಜೈನ, ಬೌದ್ಧ, ಸಿಖ್ ಧರ್ಮದವರೊಂದಿಗೆ ಲಿಂಗಾಯತವನ್ನು ಹಿಂದು

In Public domain, Digitization Muthulakshmi Research Academy

ಧರ್ಮದ ಪರಿಭಾಷೆಯಲ್ಲಿ ಸೇರಿಸಿದ್ದರಿಂದ ೧೯೫೧ರಿಂದ ನಮ್ಮನ್ನು ಹಿಂದೂ ಲಿಂಗಾಯತ ಎಂದು ಕರೆಯಲಾಗಿದ್ದು, ಇದು ನಮ್ಮ ಧಾರ್ಮಿಕ ಹಕ್ಕಿನ ಉಲ್ಲಂಘನೆ ಆಗಿದೆ.

೩. ೧೯೬೩ರಲ್ಲಿ ಸಿಖ್ ಧರ್ಮ, ೧೯೯೩ರಲ್ಲಿ ಬೌದ್ಧಧರ್ಮ, ೨೦೧೪ರಲ್ಲಿ ಜೈನಧರ್ಮಗಳಿಗೆ ಭಾರತ ಸರ್ಕಾರವು ಅಲ್ಪಸಂಖ್ಯಾತ ಭಾರತೀಯ ಧರ್ಮಗಳೆಂದು ಮಾನ್ಯತೆ ನೀಡಿದೆ.

೪. ಈ ಧರ್ಮಗಳಿಗೆ ದೇಶದ ಹತ್ತು ರಾಜ್ಯಗಳಲ್ಲಿ ಆಯಾ ರಾಜ್ಯಗಳ ಪರಿಧಿಯೊಳಗೆ ಈ ಧರ್ಮಗಳಿಗೆ ಮಾನ್ಯತೆ ನೀಡಲಾಗಿತ್ತು. ಆದ್ದರಿಂದ ಇತರ ಮೂರು ಭಾರತೀಯ ಧರ್ಮಗಳಿಗೆ ನೀಡಿದ ಪ್ರತ್ಯೇಕ ಸ್ವತಂತ್ರ ಧರ್ಮ ಮತ್ತು ಅಲ್ಪಸಂಖ್ಯಾತ ಸಮುದಾಯ ಎಂಬ ಮಾನ್ಯತೆಯನ್ನು ಲಿಂಗಾಯತ ಧರ್ಮಕ್ಕೆ ನೀಡದೆ ಇರುವುದರಿಂದ ತೀವ್ರ ಅನ್ಯಾಯವಾಗಿದೆ.

೫. ಈ ಅನ್ಯಾಯದ ವಿರುದ್ಧ ೧೯೪೦ರಿಂದ ಲಿಂಗಾಯತರು ಸ್ವತಂತ್ರ ಧರ್ಮದ ಮಾನ್ಯತೆಗಾಗಿ ಹೋರಾಟ ನಡೆಸುತ್ತಲೇ ಬಂದಿದ್ದಾರೆ. ಈಚಿನ ದಿನಗಳಲ್ಲಿ ಈ ಹೋರಾಟ ತೀವ್ರ ಸ್ವರೂಪವನ್ನು ಪಡೆದು, ಪ್ರತಿ ಸಾರ್ವಜನಿಕ ಸಭೆಗಳಿಗೂ ಲಕ್ಷಾಂತರ ಲಿಂಗಾಯತರು ತಮ್ಮ ಹಕ್ಕಿಗಾಗಿ ಧ್ವನಿ ಎತ್ತುತ್ತಿರುವುದು ಗಮನೀಯ. ಈ ಸಭೆಗಳಲ್ಲಿ ಅತ್ಯಂತ ಪ್ರಭಾವಿತರಾದ ಧರ್ಮ ಗುರುಗಳು, ಹಿರಿಯರು, ಮೇಧಾವಿಗಳು ಭಾಗವಹಿಸುತ್ತಿರುವುದು ಗಮನಾರ್ಹ.

೬. ಜಾತಿ, ಲಿಂಗಗಳ ಅಸಮಾನತೆ ಇಲ್ಲದ, ಮೌಢ್ಯಾಚರಣೆಗಳನ್ನು, ಅನಿಷ್ಟ ಸಂಪ್ರದಾಯಗಳನ್ನು ಧಿಕ್ಕರಿಸುವ ಮೂರ್ತಿಪೂಜೆ, ದೇವಾಲಯ ಸಂಸ್ಕೃತಿಗಳನ್ನು ಬಹಿಷ್ಕರಿಸುತ್ತಾ, ಸದಾಚಾರವನ್ನು ಬೆಂಬಲಿಸುತ್ತಾ, ಏಕದೇವೋಪಾಸನೆಯಲ್ಲಿ ನಂಬಿಕೆಯಿಟ್ಟಿರುವ ಲಿಂಗಾಯತ ಧರ್ಮವು ವಿಶ್ವಮಾನವ ಧರ್ಮದ ಸಂದೇಶವನ್ನು ಮೈಗೂಡಿಸಿಕೊಂಡಿದೆ. ಆದ್ದರಿಂದ ಭಾರತದ ಜಾತ್ಯತೀತ ವೈಜ್ಞಾನಿಕ ಮನೋಭಾವದ ಗಣರಾಜ್ಯಕ್ಕೆ ಇದು ಅತ್ಯಂತ ಸೂಕ್ತವಾದ ಧರ್ಮವಾಗಿದೆ. ಲಿಂಗಾಯತ ಧರ್ಮಕ್ಕೂ ಜೈನ, ಬೌದ್ಧ ಹಾಗೂ ಸಿಖ್ ಧರ್ಮಗಳಿಗೆ ನೀಡಿದ ಮಾನ್ಯತೆ ಈ ಧರ್ಮಕ್ಕೂ ನೀಡಬೇಕು.

ಸಹಿ

ಬಸವರಾಜ ಹೊರಟ್ಟಿ

ಅಧ್ಯಕ್ಷರು.

In Public domain. Digitization Muthulakshmi Research Academy

ಇವರೊಂದಿಗೆ ಪೂಜ್ಯ ಜಗದ್ಗುರುಗಳಾದ ತೋಂಟದ ಶ್ರೀ ಸಿದ್ಧಲಿಂಗ ಸ್ವಾಮೀಜಿಯವರು, ಕೂಡಲ ಸಂಗಮದ ಶ್ರೀ ಬಸವಜಯಮೃಂತ್ಯಂಜಯ ಸ್ವಾಮೀಜಿ, ಬೆಳಗಾವಿ ರುದ್ರಾಕ್ಷಿ ಮಠದ ಶ್ರೀ ಸಿದ್ಧರಾಮ ಸ್ವಾಮೀಜಿ, ಮಹಿಳಾ ಜಗದ್ಗುರು ಮಾತೆ ಮಹಾದೇವಿ, ಶ್ರೀ ನಿಜಗುಣಾನಂದ ಸ್ವಾಮೀಜಿ, ಅಥಣಿಯ ಗಚ್ಚಿನ ಮಠದ ಸ್ವಾಮೀಜಿಗಳು ಸಹಿ ಹಾಕಿದ್ದರು. ಐದನೂರಕ್ಕೂ ಹೆಚ್ಚು ಪ್ರಮುಖರು ಸಹಿ ಹಾಕಿದ್ದರು. ಇವರಲ್ಲದೆ ವೇದಿಕೆಯ ಮೇಲಿದ್ದ ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪನವರೊಂದಿಗೆ ಲಿಂಗಾಯತ ಧರ್ಮದ ಅನೇಕ ಮೇದಾವಿಗಳು ಸಹಿ ಹಾಕಿದ್ದರು. ಲಿಂಗಾಯತ ಅಲ್ಪ ಸಂಖ್ಯಾತ ವೇದಿಕೆಯ ಸಚಿವರಾದ ಎಂ. ಬಿ. ಪಾಟೀಲ, ಶರಣಪ್ರಕಾಶ ಪಾಟೀಲ, ವಿನಯ ಕುಲಕರ್ಣಿ ಇವರೊಂದಿಗೆ ಸದಸ್ಯರಾದ ಎಸ್. ಎಂ. ಜಾಮದಾರ, ಜಿ. ಬಿ. ಪಾಟೀಲ, ಡಾ. ಜಯಣ್ಣರೊಂದಿಗೆ ಐದ ನೂರು ಜನರು ಹಸ್ತಾಕ್ಷರ ಮಾಡಿದ್ದರು. ಇದಕ್ಕೆ ಸಭೆಯಲ್ಲಿ ಭಾಗವಹಿಸಿದ ನಾಲ್ಕು ಲಕ್ಷಕ್ಕೂ ಹೆಚ್ಚು ಜನರು ಈ ಪ್ರಸ್ತಾವನೆಗೆ ಜೈಕಾರ ಹಾಕಿ ಅನುಮೋದನೆ ನೀಡಿದ್ದರು.

ಲಿಂಗಾಯತ ಧರ್ಮದ ಬೇಡಿಕೆಗಾಗಿ ಸಲ್ಲಿಸಿದ ದಾಖಲೆಗಳು

ಲಿಂಗಾಯತ ಧರ್ಮ ವೇದಿಕೆಯು ಲಿಂಗಾಯತ ಸ್ವತಂತ್ರ ಧರ್ಮದ ಬೇಡಿಕೆಯ ಪೂರಕವಾಗಿ ಅನೇಕ ಸಾಕ್ಷಿಗಳನ್ನು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಆಯೋಗಕ್ಕೆ ಒದಗಿಸಿತ್ತು. ಇವುಗಳಲ್ಲಿ ಕೆಲವು ಪ್ರಮುಖ ದಾಖಲೆಗಳು ಈ ರೀತಿಯಾಗಿದ್ದವು.

ಜನಗಣತಿ ವರದಿಗಳು

೧. ಮೈಸೂರು ರಾಜ್ಯದ ಜನಗಣತಿ ವರದಿ ೧೮೭೧, ೧೮೮೧, ೧೮೯೧, ೧೯೦೧, ೧೯೧೧, ೧೯೨೧, ೧೯೩೧ ಮತ್ತು ೧೯೪೧ ವರದಿಗಳ ನಕಲುಗಳನ್ನು ನೋಂದಾಯಿತ ಸರಕಾರಿ ಅಧಿಕಾರಿಗಳಿಂದ ದೃಢೀಕರಿಸಿ ನೀಡಲಾಯಿತು.

೨ ಕೊಡಗು, ಬಾಂಬೆ ಮತ್ತು ಬರೋಡಾ ಸಂಸ್ಥಾನದ ೧೯೦೧ರ ಜನಗಣತಿಯ ವರದಿ.

೩. ಮದ್ರಾಸ್ ಪ್ರೆಸಿಡೆನ್ಸಿ ೧೮೭೧, ೧೮೮೧, ೧೮೯೧, ೧೯೦೧ ಮತ್ತು ಇದರ ನಂತರ ೧೯೪೧ರವರೆಗೆ ನಡೆದ ಜನಗಣತಿಯ ವರದಿಗಳನ್ನು ನೀಡಲಾಯಿತು.

೪. ಇವುಗಳಲ್ಲದೆ ಈ ವರದಿಗಳನ್ನು ಆಧರಿಸಿ ಬರೆದ ವಿದ್ವಾಂಸರ ಪುಸ್ತಕಗಳನ್ನು ದಾಖಲೆಯಾಗಿ ನೀಡಲಾಯಿತು.

In Public domain. Digitization Muthulakshmi Research Academy

ಅ. ಮೈಸೂರು ವಿಶ್ವವಿದ್ಯಾನಿಲಯದ ಪ್ರೊ. ಬೋರಟ್ಟಿಯವರ "Lingayats in Census of Old Mysore."

ಆ. ಡಾ. ಎಸ್.ಎಂ. ಜಾಮದಾರ ಅವರ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಲೇಖನ "Problems Created by Census."

ಈ ಮೇಲಿನ ವರದಿಗಳಲ್ಲಿ ಐತಿಹಾಸಿಕವಾಗಿ ಲಿಂಗಾಯತವು ಹಿಂದೂಧರ್ಮದ ಒಂದು ಜಾತಿಯಲ್ಲ. ಅದೊಂದು 'ಸ್ವತಂತ್ರ ಧರ್ಮ'ವಾಗಿತ್ತು ಮತ್ತು ಅದನ್ನು ಅನೇಕ ಸಂದರ್ಭಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಸತ್ಯವನ್ನು ಹೇಗೆ ತಿರುಚಿದ್ದರು ಎಂಬ ವಿವರಣೆಯನ್ನೂ ನೀಡಲಾಗಿತ್ತು.

ಲಿಂಗಾಯತರು ಹಿಂದೂಗಳಿಗಿಂತ ಭಿನ್ನ ಎಂದು ಅನೇಕ ಪಾಶ್ಚಾತ್ಯ ವಿದ್ವಾಂಸರು ಸುಮಾರು ಐದುನೂರು ವರ್ಷಗಳ ಹಿಂದಿನಿಂದಲೂ ಪ್ರತಿಪಾದಿಸುತ್ತ ಬಂದಿರುವ ದಾಖಲೆಗಳನ್ನು "ಲಿಂಗಾಯತ ಧರ್ಮ ವೇದಿಕೆ" ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಆಯೋಗಕ್ಕೆ ಸಲ್ಲಿಸಿತ್ತು.

೧. **The Travels of Pietro Della Valle in India**: ಜಿ. ಹಾವರ್ಸ್: ಎರಡು ಸಂಪುಟಗಳು; ಪ್ರಕಾಶಕರು: ದಿ ಹಾಕ್‌ಲ್ಯೂಟ್ ಸೊಸೈಟಿ(The Hakluyt Society London); ಪ್ರಥಮ ಮುದ್ರಣ ೧೮೯೨. ಇದೊಂದು ಪ್ರವಾಸ ಕಥನವಾದರೂ ಲಿಂಗಾಯತ ಧರ್ಮದ ಆಚಾರಗಳನ್ನು ತಿಳಿಸುತ್ತದೆ. ಡೆಲ್ಲಾವಿಲ್ಲೆ ಇಟಲಿಯ ನಿವಾಸಿ. ೧೬೨೩ರಲ್ಲಿ ಭಾರತದ ಸೂರತ್ ನಗರದ ಬಂದರಿನಲ್ಲಿ ಇಳಿಯುತ್ತಾನೆ. ಜಲಮಾರ್ಗದ ಮೂಲಕ ಕಲ್ಲಿಕೋಟೆಯನ್ನು ಪ್ರವೇಶಿಸಿ ಗೋವೆಯ ಮೂಲಕ ಕೆಳದಿ ಅರಸರ ಆಳ್ವಿಕೆಯನ್ನು ಕಣ್ಣಾರೆ ಕಾಣುತ್ತಾನೆ. ತನ್ನ ಅನುಭವಗಳನ್ನು ಇಟಲಿ ಭಾಷೆಯಲ್ಲಿ ಬರೆಯುತ್ತಾನೆ. ಇದನ್ನು ಮೊದಲ ಬಾರಿ ಇಂಗ್ಲಿಷ್ ಭಾಷೆಗೆ ಎಡ್ವರ್ಡ್ ಗ್ರೇ ಅನುವಾದಿಸುತ್ತಾನೆ. "ಲಿಂಗಾಯತರು ಬೇರೆ ಜಾತಿಯವರಿಗೆ ಮನೆಯೊಳಗೆ ಪ್ರವೇಶ ಮಾಡಲು ಅನುಮತಿ ನೀಡುತ್ತಿರಲಿಲ್ಲ; ಆಹಾರದ ವಿಷಯದಲ್ಲಿ ಬಹಳ ಕಟ್ಟುನಿಟ್ಟು; ಅವರು ಶಾಕಾಹಾರಿಗಳು; ಕೆಳದಿಯ ರಾಜರು ಇವನಿಗೆ ಬೆಳಗಿನ ಉಪಾಹಾರ ಕಳಿಸಿದಾಗ ಅದನ್ನು ತಂದುಣಿಸಿದ ಬ್ರಾಹ್ಮಣ ಹೀಗೆ ಹೇಳಿದ್ದಾಗಿ ಬರೆದಿದ್ದಾನೆ. "ಈ ರಾಜವಂಶದವರು ಲಿಂಗವಂತರು, ಉತ್ತಮ ಕುಲದವರು, ಅವರು ಯಾವುದೇ ಪ್ರಾಣಿಯನ್ನು ಕೊಲ್ಲುವುದಿಲ್ಲ ಮತ್ತು ಅದನ್ನು ತಿನ್ನುವುದಿಲ್ಲ. ಅಲ್ಲದೆ ಅಂತಹವುದನ್ನು ಬೇರೆ ಯಾರಿಗೂ ಕೊಡುವುದಿಲ್ಲ. ಹಾಗೆ ಕೊಡುವುದು ಪಾಪವೆಂದು ಪರಿಗಣಿಸುತ್ತಾರೆ" ಎಂದು ಹೇಳಿದ್ದಾಗಿ ಬರೆಯುತ್ತಾನೆ. ಜಂಗಮರ ಪಲ್ಲಕ್ಕಿ

In Public domain. Digitization Muthulakshmi Research Academy
ಉತ್ಸವ, ಲಿಂಗಾಯತರ ಶವಸಂಸ್ಕಾರದ ಬಗ್ಗೆ ಟಿಪ್ಪಣಿ ಮಾಡುತ್ತಾನೆ. ಲಿಂಗಾಯತ ರಾಣಿಯ ಪಾವಿತ್ರ್ಯತೆಯ ಬಗ್ಗೆ ಟಿಪ್ಪಣಿ ಮಾಡುತ್ತಾನೆ. ಇದರಿಂದ ೧೬ನೆಯ ಶತಮಾನದಲ್ಲಿ ಲಿಂಗಾಯತರ ಆಚರಣೆಗಳು ಹಿಂದೂಗಳ ಆಚರಣೆಗಿಂತ ಹೇಗೆ ಭಿನ್ನವಾಗಿದ್ದವು ಎಂದು ತಿಳಿದುಬರುವುದು.[೩]

೨. **"A journey from Madras through the Countries of Mysore, Canara and Malabar"**: by Dr. Francis Buchanan; Published under the Authority and Patronage of The honourable The Directors Of The East India Company. Republished by: Karnataka Gazetteer Dept. Govt Of Karnataka ಇದೊಂದು ಅದ್ಭುತವಾದ ಕೃತಿ. ಮೂರು ಸಂಪುಟಗಳಲ್ಲಿರುವ ಈ ಗ್ರಂಥದಲ್ಲಿ ಅನೇಕ ಭಾರಿ ಲಿಂಗಾಯತ ಧರ್ಮದ ರೀತಿ ನೀತಿ ಮತ್ತು ಅವರಲ್ಲಿರುವ ವೃತ್ತಿ ಆಧಾರಿತ ಪಂಗಡಗಳ ಬಗ್ಗೆ ಬರೆಯುತ್ತ "ಲಿಂಗಾಯತರು ಶಿವ ಪೂಜಕರಾಗಿದ್ದರು" ಎಂದು ಬರೆಯುತ್ತಾನೆ. ಬಸವಣ್ಣನವರ ಬಗ್ಗೆ ಅನೇಕ ಉಲ್ಲೇಖಗಳಿವೆ.[೪]

೩. **"Essay on the Creed, Customs and Literature of Jangamas:** by C.P. Brown: Published in ೧೮೪೦. ಇವರು ಲಿಂಗಾಯತರಲ್ಲಿ ಎರಡು ಧಾರೆಗಳನ್ನು ಗುರುತಿಸುತ್ತಾರೆ. ಒಂದನೆಯದು 'ಬಸವಧಾರೆ' ಮತ್ತು ಎರಡನೆಯದಾಗಿ 'ರೇಣುಕಾಚಾರ್ಯಧಾರೆ' ಎಂದು. "ಬಸವಣ್ಣನು ಬೌದ್ಧ ಹಾಗೂ ಜೈನರ ಪರಸ್ಪರ ವಿರುದ್ಧವಾದ ಹೇಳಿಕೆಗಳನ್ನು ತುಲನಾತ್ಮಕವಾಗಿ ಅಭ್ಯಸಿಸತೊಡಗಿದ. ಅವೆರಡು ಮತಗಳು ಮೂರ್ತಿಪೂಜೆ ಮಾಡುವಂಥವೆಂದು ಕಂಡುಕೊಂಡ. ನೆರೆಯ ಮಲಯ ಪ್ರಾಂಥದಲ್ಲಿ ಪ್ರಚಲಿತವಿದ್ದ ಕ್ರೈಸ್ತಧರ್ಮವನ್ನೂ ಸೂಕ್ಷ್ಮವಾಗಿ ನಿರೀಕ್ಷಿಸಿದ್ದುದ್ದರ ಪರಿಣಾಮವಾಗಿ, ಇವುಗಳಿಗಿಂತ ಒಂದು ಒಳ್ಳೆಯದಾದ ಮತದ ಅವಶ್ಯಕತೆ ಇದೆ ಎಂದು ಕಂಡುಕೊಂಡಿರುವ ಸಾಧ್ಯತೆಯೂ ಇದೆ. ಏನೇ ಆಗಲಿ, ಈ ಬ್ರಾಹ್ಮಣ ಪೌರೋಹಿತ್ಯವನ್ನು ತೊಲಗಿಸಬೇಕು ಎಂದು ಆತ ನಿರ್ಧರಿಸಿದ ಹಾಗೂ ಹಿಂದೂಗಳಲ್ಲಿ ಅತ್ಯಂತ ಪ್ರಾಚೀನವಾಗಿರುವ ಪ್ರತಿಮೆಯಾದ ಲಿಂಗವು ಸಂಕೇತಿಸುವ ಶಿವನಲ್ಲದೆ ಇನ್ನಾವ ದೈವವನ್ನು ಪೂಜಿಸಲು ನಿರಾಕರಿಸಿದ"[೫] ಎಂದು ಬರೆಯುತ್ತಾರೆ ಸಿ.ಪಿ. ಬ್ರೌನ್

೪. **"Hindu Manners, Customs and Ceremonies"** by Abbe Dubious: Oxford, at the clarendon press, Third edition

In Public domain. Digitization Muthulakshmi Research Academy

೧೯೦೫. ಅಬ್ಬೆ ದುಬಾಯ್ ಫ್ರೆಂಚನಾಗಿದ್ದ. ಮೂಲವೃತ್ತಿ ಕ್ರೈಸ್ತಧರ್ಮ ಪ್ರಚಾರ. ಭಾರತದಲ್ಲಿ ೩೧ ವರ್ಷಗಳ ಕಾಲ ಕಳೆದು ಇಲ್ಲಿಯ ಧರ್ಮಗಳ ಬಗ್ಗೆ ಉಲ್ಲೇಖಿಸಿದ್ದಾನೆ. "ಲಿಂಗಾಯತರು ಬೆಳ್ಳಿ ಕರಡಿಗೆಯಲ್ಲಿ ಲಿಂಗವನ್ನು ಇಟ್ಟು ಅದಕ್ಕೆ ದಾರದಿಂದ ಜೋಡಿಸಿ ಕೊರಳಿಗೆ ನೇತು ಹಾಕಿಕೊಂಡಿರುತ್ತಾರೆ; ಇವರನ್ನು ಬೇರೆಯವರು ಶಿವಾಚಾರದವರು ಅಥವಾ ಶಿವಭಕ್ತರೆಂದು ಗುರುತಿಸುತ್ತಾರೆ; ನಂದಿಯ ಅವತಾರನಾದ ಬಸವನಿಂದ ಅವರ ಧರ್ಮ ಸ್ಥಾಪನೆಯಾಗಿದೆ ಎಂದು ಲಿಂಗಾಯತರು ನಂಬಿದ್ದಾರೆ; ಬ್ರಾಹ್ಮಣರಂತೆ ಇವರು ಮಾಂಸಾಹಾರಿಗಳಲ್ಲ; ಮೃತರನ್ನು ಭೂಮಿಯಲ್ಲಿ ಹೂಳುತ್ತಾರೆ; ಇವರು ಮುಟ್ಟು, ಹೊಲೆ ಮುಂತಾದುವುಗಳನ್ನು ಆಚರಿಸುವುದಿಲ್ಲ; ಹೆಂಗಸರು ಮುಟ್ಟಾದರೆ ಅಥವಾ ಸಾವಿಗೆ ಸಂಬಂಧಿಸಿದ ದಿವಸ/ಕಾಲ ಮುಂತಾದವನ್ನು ಆಚರಿಸುವುದಿಲ್ಲ; ಗಾದೆ ಮಾತಿನಂತೆ "ಗಂಗೆಗೆ ಕಟ್ಟು ಇಲ್ಲ ಲಿಂಗಕ್ಕೆ ಹೊಲೆ ಇಲ್ಲ" ಎಂದು ನಂಬಿದವರು; ಇತರೆ ಹಿಂದೂಗಳಂತೆ ಮರುಜನ್ಮದಲ್ಲಿ ನಂಬಿಕೆ ಇಲ್ಲ. ಮೃತರ ಆತ್ಮಶಾಂತಿಗಾಗಿ ಮಾಡುವ ವಾರ್ಷಿಕ ತಿಥಿಗಳಲ್ಲಿ ನಂಬಿಕೆ ಇಲ್ಲ" ಎಂದು ಹಿಂದೂ ಹಾಗೂ ಲಿಂಗಾಯತದಲ್ಲಿರುವ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಗುರುತಿಸಿ ದಾಖಲಿಸಿದ್ದಾರೆ.[೬]

೫. **Caste and Tribes of South India** ಎಡ್ಗರ್ ಥರ್ಸ್ಟನ್; ಏಷಿಯಾ ಎಜುಕೇಶನಲ್ ಸರ್ವಿಸ್, ನವದೆಹಲಿ; ಪ್ರಥಮ ಮುದ್ರಣ ೧೯೦೯. ಥರ್ಸ್ಟನ್ ಮದ್ರಾಸ್ ಸರಕಾರಿ ವಸ್ತುಸಂಗ್ರಹಾಲಯದ ಸೂಪರಿಟೆಂಡೆಂಟಾಗಿ ಕಾರ್ಯ ನಿರ್ವಹಿಸುತ್ತಿದ್ದ ಬ್ರಿಟಿಷ್ ಅಧಿಕಾರಿಯಾಗಿದ್ದರು. ಇವರು ಬಹಳ ಪ್ರಭಾವಶಾಲಿ ಬ್ರಿಟಿಷ್ ಅಧಿಕಾರಿ. ಇವರಿಗೆ ಬೆಳಗಾಂ ಜಿಲ್ಲೆಯ ಪರಸಗಡ ಸಬ್ ಡಿವಿಜನ್ ಅಧಿಕಾರಿಯಾಗಿದ್ದ ಅರಟಾಳ ರುದ್ರಗೌಡರ ಪರಿಚಯವಾಗುತ್ತದೆ. ಇದು ಅವರಿಗೆ ಲಿಂಗಾಯತ ಧರ್ಮ, ಹಿಂದೂ ಧರ್ಮದಲ್ಲಿಯ ಜಾತಿಪದ್ಧತಿ, ಭಾರತೀಯ ಸಂಸ್ಕೃತಿಯನ್ನು ಆಳವಾಗಿ ಪರಿಚಯಿಸಿಕೊಳ್ಳಲು ಸಹಾಯ ಮಾಡಿತ್ತು. ಇವರು ಏಳು ಸಂಪುಟಗಳಲ್ಲಿ ಭಾರತಿಯ ಜಾತಿಪದ್ಧತಿಯ ಬಗ್ಗೆ ಬರೆದಿದ್ದು ಲಿಂಗಾಯತದ ಆಚಾರ, ಸಂಸ್ಕಾರ, ಸಾಹಿತ್ಯವೂ ಹಿಂದೂಗಳಿಗಿಂತ ಭಿನ್ನವೆಂದು ತಿಳಿಸಿದ್ದಾರೆ. ಸುದೀರ್ಘವಾಗಿ ಲಿಂಗಾಯತದ ಆಚಾರ, ಸಿದ್ಧಾಂತ, ತತ್ವಗಳನ್ನು ಅರಿತುಕೊಂಡು ಅವರು ಈ ರೀತಿಯಾಗಿ ಬರೆಯುತ್ತಾರೆ. "ಇತ್ತೀಚಿನ ಸಂಪ್ರದಾಯದಂತೆ ಲಿಂಗಾಯತ ಉಗಮವನ್ನು ಬ್ರಾಹ್ಮಣಿಕೆ ಕೂಡಿದ ಹಿಂದೂಗಳ ಜತೆ ತಳಕು ಹಾಕುವುದನ್ನು ಮಾಡುವುದೇ ಆಗಿದೆ. ವಿದ್ವಾಂಸರು ಸೂಚಿಸುವ ಸಂಸ್ಕೃತ ಗ್ರಂಥಗಳು ೫೦೦ ವರ್ಷಕ್ಕಿಂತ ಹಿಂದಿನವೇನಲ್ಲ. ಆದ್ದರಿಂದ ಲಿಂಗಾಯತ ಧರ್ಮವು ೧೨ನೆಯ

In Public domain. Digitization Muthulakshmi Research Academy

ಶತಮಾನಕ್ಕಿಂತ ಪ್ರಾಚೀನವೆಂದು ಅವುಗಳನ್ನು ಪರಿಗಣಿಸಲು ಸಾಧ್ಯವಾಗದು. ಅದು ಜಾತಿಭೇದಗಳನ್ನು ಗಮನಿಸುತ್ತಲೇ ಬಂದಿದೆ. ವಿಸ್ತಾರವಾದ ಹಿಂದೂ ಮಹಾಸಾಗರದಲ್ಲಿ ಲಿಂಗಾಯತ ಧರ್ಮ ಒಂದು ದ್ವೀಪವಾದರೆ ಸಾಗರದ ನೀರು ಇದರ ಗಟ್ಟಿತನವನ್ನು ದುರ್ಬಲಗೊಳಿಸುತ್ತದೆ ಎನ್ನುತ್ತಾರೆ ಕುಲಶಾಸ್ತ್ರ ಸಮೀಕ್ಷೆಯ ಮುಖ್ಯಸ್ಥರಾಗಿದ್ದ ಎಡ್ಗರ್ ಥರ್ಸ್ಟನ್.[೬]

೭. **"An historical Account of the Belgaum District, in Bombay Presidency"** by H.J. Stroke a Civil Servent in Bombay Presidency; Published & Printed Printed for govt. at Education Societies Press Buculla Bombay. ಇವನು ಬಸವಣ್ಣನವರ ಜೀವನಚರಿತ್ರೆಯನ್ನು ಬರೆಯುತ್ತ "ತಮ್ಮದೇ ಸಮುದಾಯದ ಸದಸ್ಯನೊಬ್ಬನು ಹೊಸ ಧರ್ಮ ಸ್ಥಾಪಿಸಿದ್ದರಿಂದ ತಮ್ಮ ಶ್ರೇಷ್ಠತೆ ಪ್ರತಿಷ್ಠಾಪಿಸಲು(ಬ್ರಾಹ್ಮಣರಿಗೆ) ಸಾಧ್ಯವಾಯಿತು" ಎನ್ನುತ್ತಾನೆ. ಈ ಮೂಲಕ ಬಸವಣ್ಣನವರು ಲಿಂಗಾಯತ ಹೊಸ ಧರ್ಮ ಸ್ಥಾಪಕರು ಎಂದು ಸ್ಪಷ್ಟಪಡಿಸುತ್ತಾನೆ. ಲಿಂಗಾಯತದ ವಿಶೇಷತೆಗಳನ್ನು ಬರೆಯುತ್ತ ಇನ್ನೊಂದು ಗಮನ ಸೆಳೆಯುವ ಹೇಳಿಕೆ ನೀಡುತ್ತಾನೆ. "ಮತಾಂತರಗೊಳಿಸಲು ಮನವೊಲಿಸುವಿಕೆ ಮುಖ್ಯಮಾರ್ಗವಾಗಿ ಕಂಡರೂ ಬಲಪ್ರಯೋಗ ಹಾಗೂ ಕಿರುಕಳ ನೀಡದೆ ಸ್ವಯಂಪ್ರೇರಣೆಯಿಂದ ತಟಸ್ಥವಾಗಿರುವುದು ಮೊದಲಿನ ಲಿಂಗಾಯತರಿಗೆ ಸಾಧ್ಯವಾಗಲಿಲ್ಲ. ಎದುರಾಳಿ ಧರ್ಮಗಳ ನಡುವೆ ಮಹಾಘರ್ಷಣೆಯಾಗಿರುವುದನ್ನು ಕೇಳಿದ್ದೇವೆ" ಎಂದು ಕಲ್ಯಾಣಕ್ರಾಂತಿಯ ಬಗ್ಗೆ ಪರೋಕ್ಷವಾಗಿ ಬರೆಯುತ್ತಾನೆ. ಜಾತಿಪದ್ಧತಿಯನ್ನು ತಿರಸ್ಕರಿಸಿದ ಬಹುದೊಡ್ಡ ಕಾರಣಕ್ಕಾಗಿಯೇ ಈ ಹೊಸ ಧರ್ಮವು ಶೀಘ್ರದಲ್ಲಿ ಅಭೂತಪೂರ್ವವಾಗಿ ಹರಡಿತು ಮತ್ತು ಈ ಧರ್ಮದಲ್ಲಿ ಎಲ್ಲರೂ ಸಮಾನರೆಂದು ಘೋಷಿಸಲಾಯಿತು" ಎಂದು ಲಿಂಗಾಯತ ಧರ್ಮ ವಿಶೇಷತೆಯನ್ನು ಬಣ್ಣಿಸುತ್ತಾನೆ.[೮]

೭. **"Lingayats in the encyclopedia of religion and ethics"** by Reginald Edward Enthoven CIE ಬ್ರಿಟಿಷ್ ಸಿವಿಲ್ ಸರ್ವೆಂಟ್ ಪದವಿ ಪಡೆದ ಅಧಿಕಾರಿಯಾಗಿದ್ದು ಮೂರು ಸಂಪುಟಗಳ The Tribes and Castes of Bombay ಎಂಬ ಗ್ರಂಥವನ್ನು ರಚಿಸಿದ್ದಾರೆ. ೧೯೦೧ ರಲ್ಲಿ ಬರೆದ ದೀರ್ಘ ಲೇಖನದಲ್ಲಿ ಲಿಂಗಾಯತ ಪ್ರತ್ಯೇಕ ಧರ್ಮ ಎಂಬ ಸ್ಪಷ್ಟವಾದ ಅಭಿಪ್ರಾಯ ಹೊಂದಿದ್ದರು. ಕುಲಶಾಸ್ತ್ರ ಅಧ್ಯಯನದ ಸಮಯದಲ್ಲಿ ಕಂಡುಕೊಂಡ ಸತ್ಯ "ಲಿಂಗಾಯತ ಪ್ರತ್ಯೇಕ ಧರ್ಮ" ಎಂಬುದು. "ಈ

In Public domain. Digitization Muthulakshmi Research Academy

ಧರ್ಮದ ಮೂಲಭೂತ ಲಕ್ಷಣವೆಂದರೆ ಯಾರಾದರೂ ಈ ಧರ್ಮವನ್ನು ಸೇರಿ ಲಿಂಗಾಯತರಾಗಬಹುದು; ಬ್ರಾಹ್ಮಣರು ಕೀಳುಜಾತಿಯ ಜನರನ್ನು ಶೋಷಿಸಿದ್ದರ ವಿರುದ್ಧವಾಗಿ ಅನೇಕ ಬ್ರಾಹ್ಮಣವಿರೋಧಿಗಳು ಹೊರಬಂದಿದ್ದು ಗಮನಾರ್ಹ. ಲಿಂಗಾಯತರು ಬ್ರಾಹ್ಮಣರು ನಂಬಿದ ಜಾತಿಶ್ರೇಷ್ಠತೆಯನ್ನು ಅಲ್ಲಗಳೆಯುವುದಲ್ಲದೆ ಇವರು ಜಾತಿವ್ಯವಸ್ಥೆಯನ್ನು ನಾಶಪಡಿಸಲು ಪ್ರಯತ್ನಿಸಿದರು" ಎಂದು ಬರೆಯುತ್ತಾರೆ. ಇವರು ಲಿಂಗಾಯತ ಆಚಾರ, ಸಂಸ್ಕಾರಗಳ ಬಗ್ಗೆ ಸುದೀರ್ಘವಾಗಿ ಬರೆದಿದ್ದಾರೆ. ಇವರು ಕೂಡ ಬೆಳಗಾವಿಯ ಡೆಪ್ಯೂಟಿ ಕಮಿಶನರ್ ಆಗಿದ್ದ ಅರಟಾಳ ರುದ್ರಗೌಡರ ಸಹಾಯದಿಂದ ಲಿಂಗಾಯತದ ಆಳ ಅಗಲಗಳನ್ನು ತಿಳಿದುಕೊಂಡಿದ್ದರು.[೯]

೮. **The land of Lingam** by Arthur Miles; published by Forton Noster Library London ಈ ಪುಸ್ತಕವು ಲಿಂಗಾಯತ ಧರ್ಮದ ಮೇಲೆ ಬೆಳಕು ಚೆಲ್ಲುತ್ತದೆ. ಅರ್ಥರ್ ಬರೆಯುತ್ತಾರೆ. "ಶಾಸ್ತ್ರೋಕ್ತವಾಗಿ ಯಾರು ಲಿಂಗವನ್ನು ಧರಿಸುತ್ತಾರೋ ಅವರು ಲಿಂಗಾಯತರಾಗಬಹುದು. ಸಂಸ್ಥಾಪಕರ ಬೋಧನೆತತ್ವ ಪ್ರಕಾರ(ಬಸವ ಬೋಧನೆ) ನಮಗೆ ತಿಳಿಯುವುದೇನೆಂದರೆ ಶೂದ್ರನ ಗುಡಿಸಿಲಿನಲ್ಲಿ ಪವಿತ್ರ ಲಿಂಗವಿದ್ದರೆ ಅದು ಜಗತ್ತಿನ ಎಲ್ಲ ದೊಡ್ಡ ಪ್ರದೇಶಕ್ಕಿಂತ ಮಿಗಿಲಾದದ್ದು. ಮುಂದುವರಿದು ಇತಿಹಾಸಕಾರರ ಪ್ರಕಾರ ೧೨ನೆಯ ಶತಮಾನದವರೆಗೂ ಲಿಂಗಾಯತ ಧರ್ಮದ ಯಾವುದೇ ಕುರುಹುಗಳಿಲ್ಲ; ಪುರಾಣಕಥೆಗಳು ಏನೇ ಹೇಳಿದರೂ ಬಸವಣ್ಣ ಭಾರತದ ಮೊದಲ ಮುಕ್ತ ಚಿಂತಕನಾಗಿದ್ದರೆಂಬುದನ್ನು ಅಲ್ಲಗಳೆಯಲಾಗುವುದಿಲ್ಲ." ಮುಂದುವರಿದು ಹೇಳುತ್ತಾನೆ. ಅವರನ್ನು ಭಾರತದ ಮೊದಲ ಮಾರ್ಟಿನ್ ಲೂಥರ್ ಎನ್ನಬಹುದು.[೧೦]

೯ **Lingayat as a sect**: by wiliam Mac Cormick: A Journal of the Royal Anthropological Institute of Great Britan and Ireland Vol-93 ಇದೊಂದು ಇಪ್ಪತ್ತನೇ ಶತಮಾನದ ಪ್ರಬಂಧ. ಇವರು ಒಂದು ವಿಶ್ಲೇಷಣಾತ್ಮಕ ಲೇಖನವನ್ನು ಬರೆದು ಲಿಂಗಾಯತ ಒಂದು 'ಪಂಗಡ' ಎಂದು ಹೇಳುತ್ತಾರೆ. ಇವರು ಭಾರತೀಯ ಇತಿಹಾಸಕಾರರಾದ ಭಂಡಾರ್ಕರ್ ಎಸ್.ಸಿ. ನಂದಿಮಠ, ಬಾಷ್ಯಂ ಹಾಗೂ ದಾಸ್ ಗುಪ್ತಾ ಅವರ ಅಭಿಪ್ರಾಯವನ್ನು ವಿಶ್ಲೇಷಣೆ ಮಾಡುತ್ತ ಇನ್ನೂ ಅನೇಕ ವಿದ್ವಾಂಸರ ಅಭಿಪ್ರಾಯಗಳನ್ನು ಉಲ್ಲೇಖಿಸುತ್ತ "ಲಿಂಗಾಯತ ಎನ್ನುವುದು ಹಿಂದೂ ಅಲ್ಲ. ಇದೊಂದು ಬೇರೆಯದ್ದೇ ಪಂಗಡ" ಎಂಬ ಶೈಕ್ಷಣಿಕ ವಿಶ್ಲೇಷಣೆ ವರದಿ ನೀಡುತ್ತಾರೆ.[೧೧]

In Public domain. Digitization Muthulakshmi Research Academy

೧೦. **Revolution of Mystics On the Social Aspects of Veerasaivism**: By Dr. J.P. Schouten, Kok Pharos Publishing House, The Netherlan ಕನ್ನಡಕ್ಕೆ; ಡಾ.ಟಿ.ಆರ್.ಚಂದ್ರಶೇಖರ; ಪ್ರಕಟನೆ; ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ. ಡಾ. ಜಾನ್ ಪೀಟರ್ ಶೌತನ್ ಒಬ್ಬ ಪ್ರಾಟೆಸ್ಟಂಟ್ ಪಾದ್ರಿ, ಸಮಾಜಶಾಸ್ತ್ರಜ್ಞ, ಹಾಲೆಂಡಿನ ನಾಗರಿಕ. ಇದೊಂದು ಅವರ ಅಮೂಲ್ಯ ಕೃತಿ. ಅದನ್ನು ಅರ್ಥಭರಿತವಾಗಿ ಕನ್ನಡ ಭಾಷೆಗೆ ಅನುವಾದಿಸಿ "ಅನುಭಾವಿಗಳ ಕ್ರಾಂತಿ" ಎಂಬ ತಲೆಬರಹದೊಂದಿಗೆ ಕನ್ನಡಿಗರಿಗೆ ನೀಡಿದ್ದಾರೆ ಡಾ.ಟಿ.ಆರ್.ಸಿ. "ವೀರಶೈವ(ಅವರ ಲಿಂಗಾಯತ) ಚಳವಳಿಯ ಮೂಲಪುರುಷ ಬಸವಣ್ಣನಾದರೂ ಸಹ ಇಲ್ಲಿ ನಾಯಕನಾಗಿ ಅವನೊಬ್ಬನೇ ಇರಲಿಲ್ಲ. ಅನುಭಾವವನ್ನು ಸಾಧಿಸಿಕೊಂಡಿದ್ದ ಹಲವಾರು ಅನುಭಾವಿಗಳು ಕಲ್ಯಾಣ ಸಮುದಾಯದ ಅನುಯಾಯಿಗಳಾಗಿದ್ದರು. ಇವರೆಲ್ಲರೂ ಭಕ್ತಿಪಂಥ ಮತ್ತು ಧಾರ್ಮಿಕ ಸಿದ್ಧಾಂತಗಳ ವಿಕಾಸಕ್ಕೆ ತಮ್ಮದೇ ಆದ ಕಾಣಿಕೆ ಸಲ್ಲಿಸಿದ್ದಾರೆ" ಎಂದು ಹೇಳುತ್ತ ಸಮಗ್ರ ಶ್ರೇಯವನ್ನು ಒಬ್ಬರಿಗೆ ಕೊಡದೇ ಇದು ಒಬ್ಬರಿಂದ ಕಟ್ಟಿದ ಧರ್ಮವಲ್ಲ ತಳಸಮುದಾಯದ ಅಲ್ಲಮ ಮತ್ತು ಸಿದ್ಧರಾಮರು ಇದಕ್ಕೆ ಕಾರಣೀಭೂತರು ಎಂದು ಬರೆಯುತ್ತಾರೆ. ಮೌಢ್ಯವನ್ನು ಹೇರುವ ವೀರಶೈವರನ್ನು ಯಥಾಸ್ಥಿತಿವಾದಿಗಳೆಂದು ಕರೆಯುತ್ತಾ ಅವರಿಗೆ ಚಾರಿತ್ರಿಕ ನೆಲೆ ಇಲ್ಲವೆಂದು ಸ್ಪಷ್ಟಪಡಿಸುತ್ತಾರೆ.[೨]

೧೧. **The Orgins of virasaiva Sects**: by Prof R. Michael Blake: Published by Motilal Banarasi Dass Publishers(p) Ltd, Delhi ಲೇಖಕರು ಉತ್ತರ ಅಮೆರಿಕದ ನಿವಾಸಿ. ಕ್ರೈಸ್ತಧರ್ಮೀಯರು. ಅಮೆರಿಕೆಯ ಪ್ರಸಿದ್ಧ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ. ಪಡೆದ ಪ್ರತಿಭಾನ್ವಿತರು. ಇವರು ವೀರಶೈವ ಅಥವಾ ಲಿಂಗಾಯತ ಪಂಗಡವೋ, ಧರ್ಮವೋ ಅಥವಾ ಹಿಂದೂಧರ್ಮದ ಜಾತಿಯೋ ಎಂಬ ಅತ್ಯಂತ ವಿಶ್ಲೇಷಣಾತ್ಮಕವಾದ ಗ್ರಂಥವಾದ "ಆರಿಜನ್ಸ್ ಆಫ್ ವೀರಶೈವ ಸೆಕ್ಟ್ಸ್" ಎಂಬ ೨೨೫ ಪುಟಗಳ ಗ್ರಂಥ ರಚಿಸಿದ್ದಾರೆ. ಇವರು ವೀರಶೈವ ಅಥವಾ ಲಿಂಗಾಯತರನ್ನು ಧಾರ್ಮಿಕವಾಗಿ ಪ್ರಾಟೆಸ್ಟಂಟ್ ಕ್ರೈಸ್ತರಂತೆ ಗುರುತಿಸುತ್ತಾರೆ. ಹಿಂದೂಗಳಿಗಿಂತ ಭಿನ್ನರು, ವಿಶಿಷ್ಟ ಸಂಪ್ರದಾಯ ಹೊಂದಿದ ವಿಶಾಲ ಧಾರ್ಮಿಕ ಸುಧಾರಣಾವಾದಿಗಳೆಂದು ಅಭಿಪ್ರಾಯಪಡುತ್ತಾರೆ. ಭಾರತೀಯ ಇತಿಹಾಸಕಾರರಾದ ಭಂಡಾರ್‌ಕರ್, ಬಾಷ್ಯಂ ಮತ್ತು ಮೆಕರ್ಮಾಕ್ ಅವರ ವಾದವನ್ನು ವಿಶ್ಲೇಷಣೆ ಮಾಡುತ್ತ ಧರ್ಮಕ್ಕೆ ಬೇಕಾಗುವ ಮೂಲ ಲಕ್ಷಣಗಳನ್ನು ಪಟ್ಟಿ ಮಾಡುತ್ತಾರೆ.[೩]

In Public domain. Digitization Muthulakshmi Research Academy

೧. ಒಂದು ನಿರ್ದಿಷ್ಟ ಗ್ರಂಥ ಮತ್ತು ನಿರ್ದಿಷ್ಟ ದೈವಕ್ಕೆ ಬದ್ಧನಾಗಿರುವುದು.

೨. ಇಷ್ಟದೈವಕ್ಕೆ ಭಕ್ತಿ ಹಾಗೂ ತತ್ವಾಚರಣೆಗಳಿಗೆ ಬದ್ಧನಾಗಿರುವುದು.

೩. ಮತಸ್ಥಾಪಕನ ಗುರುತಿಸುವಿಕೆ ಮತ್ತು ಅವನ ಬೋಧನೆಗಳಿಗೆ ಬದ್ಧನಾಗಿರುವುದು.

೪. ಪರಿವರ್ತನಶೀಲ ಉತ್ತೇಜಿತ, ವಿಗ್ರಹ ಬಲಿ, ಬಲಿ ಕೊಡುವುದರ ವಿರೋಧ, ಸರ್ವಜನಾಕರ್ಷಕ ಹಾಗೂ ಸಮಾನತೆಯ ಆಚರಣೆ ಮತ್ತು ದೇಶಿ ಭಾಷೆಯಲ್ಲಿ ತತ್ವ ಪ್ರಸಾರ ಮುಂತಾದವುಗಳು. ಇವುಗಳಿಗೆ ಉತ್ತರ ರೂಪವಾಗಿ ಅವರು ಲಿಂಗಾಯತದಲ್ಲಿ ಇವೆಲ್ಲವನ್ನೂ ಕಾಣುತ್ತಾರೆ.

ಅ. ಶ್ರುತಿ ಸಂಪ್ರದಾಯವನ್ನು ತ್ಯಜಿಸಿ ದೇಶೀಯ ಕನ್ನಡ ವಚನ ಸಂಪ್ರದಾಯವನ್ನು ಆಧರಿಸಿತ್ತು.

ಬ. ಶಿವನಲ್ಲಿನ ನಿಷ್ಠೆ ಮತ್ತು ಭಕ್ತಿಯನ್ನು ಅಂತರ್ಗತ ಮಾಡಿಕೊಂಡ ತತ್ವಾದರ್ಶ.

ಕ. ಬಸವನಲ್ಲಿ ದೈವಿ ಭಾವನೆ ಮತ್ತವನ ಬೋಧನೆಗಳ ಮನನ.

ಡ. ಯಜ್ಞ, ಯಾಗ, ಕರ್ಮಗಳನ್ನು ತ್ಯಜಿಸಿದ್ದಲ್ಲದೆ ವಿಗ್ರಹಾರಾಧನೆ ಮತ್ತು ಬ್ರಾಹ್ಮಣ ಪುರೋಹಿತಶಾಹಿಯ ಅವಗಣನೆ.

ಈ. ತನ್ನ ಸದಸ್ಯರನ್ನು ಸರ್ವಸಂಗ ಪರಿತ್ಯಾಗದ ಜತೆಗೆ ಮಿತವ್ಯಯದ ಬದುಕನ್ನು ಪ್ರತಿಪಾದಿಸಿದ್ದು, ಕೊನೆಯದಾಗಿ ಮರುಳ ಶಂಕರದೇವ ಮತ್ತು ಮಹದೇವಿಯಕ್ಕಳ ನಿಲುವುಗಳನ್ನು ಅನುಕರಿಸಿದುದು. ಇದನ್ನು ಪಾಶ್ಚಾತ್ಯ ಪಂಡಿತರಾದ ರೇನೋ ಮತ್ತು ಡುಮಾಂಟರು ಭಾರತಿಯ ಪಂಗಡಗಳ ವಾಸ್ತವತೆ ಮತ್ತು ಆದ್ಯತೆಗಳನ್ನು ಆಧರಿಸಿ ವಿವೇಚಿಸಿದ್ದನ್ನು ಮಾನ್ಯ ಮಾಡುತ್ತಾರೆ.[೧೪]

ಈ ಮೇಲಿನ ವರದಿಗಳಲ್ಲಿ ಐತಿಹಾಸಿಕವಾಗಿ ಲಿಂಗಾಯತವು ಹಿಂದೂಧರ್ಮದ ಒಂದು ಜಾತಿಯಲ್ಲ, ಅದೊಂದು 'ಸ್ವತಂತ್ರ ಧರ್ಮ'ವಾಗಿತ್ತು ಮತ್ತು ಅದನ್ನು ಅನೇಕ ಸಂದರ್ಭಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಸತ್ಯವನ್ನು ಹೇಗೆ ತಿರುಚಿದ್ದರು ಎಂಬ ವಿವರಣೆಯನ್ನೂ ನೀಡಲಾಗಿತ್ತು.

ಲಿಂಗಾಯತ ಧರ್ಮ ಹಿಂದೂಧರ್ಮಕ್ಕಿಂತಲೂ ಭಿನ್ನ ಎಂದು ಸಾದರಪಡಿಸುವ ಅನೇಕ ಗ್ರಂಥಗಳಲ್ಲಿ ಕೆಲವು ಆಯ್ದ ಗ್ರಂಥಗಳನ್ನು ದಾಖಲೆಯಾಗಿ ನೀಡಲಾಗಿತ್ತು.

- **History and Philosophy of Lingayats** by Prof. M.R.Sakhare: ಪ್ರೊ. ಎಂ.ಆರ್.ಸಾಖರೆ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ರಾಜಗೋಳಿ ಎಂಬ ಹಳ್ಳಿಯಲ್ಲಿ ಜನಿಸಿದ ಇವರು ಬೆಳಗಾವಿ ಹಾಗೂ ಕೊಲ್ಲಾಪುರಗಳಲ್ಲಿ

In Public domain. Digitization Muthulakshmi Research Academy
ಶಿಕ್ಷಣ ಪೂರೈಸಿದರು. ೧೯೧೪ರಲ್ಲಿ ಬಿ.ಎ. ಮೊದಲವರ್ಗದಲ್ಲಿ ಪಾಸಾಗಿ, ೧೯೧೬ರಲ್ಲಿ ಎಂ.ಎ. ಸ್ನಾತ್ತಕೋತ್ತರ ಪದವಿ ಪಡೆದರು. ಶಿಕ್ಷಣತಜ್ಞರಾದ ಇವರು ಬೆಳಗಾವಿಯ ಕೆ.ಎಲ್.ಇ. ಸಂಸ್ಥೆಯ ಸಪ್ತರ್ಷಿಗಳಲ್ಲಿ ಒಬ್ಬರು. ಕೆ.ಎಲ್.ಇ. ಸಂಸ್ಥೆಯ ಕಾರ್ಯದರ್ಶಿಯಾಗಿ ಏಳು ವರ್ಷ ಸೇವೆ ಸಲ್ಲಿಸಿದ್ದಾರು. ಇವರ ಬರಹಗಳು ಸಾರಸ್ವತ ಲೋಕದಲ್ಲಿ ಹೆಸರುವಾಸಿ. "ಲಿಂಗಧಾರಣ ಚರಿತೆ" ಇವರ ಮಹತ್ವದ ಕೃತಿಗಳಲ್ಲಿ ಒಂದು. ಲಿಂಗಾಯತ ಧರ್ಮ ಒಂದು ಸ್ವತಂತ್ರ ಧರ್ಮ ಎಂದು ಹೇಳಿ ಅದನ್ನು ನಿರೂಪಿಸಲು History and Philosophy of Lingaytss ಎಂಬ ಮಹತ್ವದ ಕೃತಿಯನ್ನು ರಚಿಸಿದ್ದಾರೆ.

- **The Lingayat Movement:** A Social Revolution in Karnataka by Prof B.S.Hanchinal; ಪ್ರೊ.ಬಿ.ಎಸ್.ಹಂಚಿನಾಳ(೧೮೮೯-೧೯೬೪) ಹುಬ್ಬಳ್ಳಿಯ ಶ್ರೀಮಂತ ಕುಟುಂಬದಲ್ಲಿ ಜನಿಸಿದ ಇವರು ಪುಣೆಯ ಪ್ರಸಿದ್ಧ ಡೆಕ್ಕನ್ ಕಾಲೇಜಿನಲ್ಲಿ ಪದವಿ ಪಡೆದಿದ್ದರು. ಕೆ.ಎಲ್.ಇ. ಸಂಸ್ಥೆಯಲ್ಲಿ ಶಿಕ್ಷಕ ವೃತ್ತಿ ಕೈಗೊಂಡು, ಅನೇಕ ಸಾಮಾಜಿಕ ಕಾರ್ಯಗಳನ್ನು ಮಾಡಿದ್ದಾರೆ. ಧಾರವಾಡ ಲಿಂಗಾಯತ ಅಸೋಸಿಯೇಷನ್, ಧಾರವಾಡ ವಿಧ್ಯಾವರ್ಧಕ ಸಂಘದ ರೂವಾರಿಗಳು. The Lingayat Movement: A Social Revolution in Karnataka ಎಂಬ ಮೌಲಿಕ ಕೃತಿಯ ರಚನೆಕಾರರು.
- **Bhakti Bhandari Basavanna** by M.R.Srinivasamurthy: ಮೈಸೂರು ರಾಮಚಂದ್ರರಾಯ ಶ್ರೀನಿವಾಸಮೂರ್ತಿ ಉರುಫ್ ಎಂ.ಆರ್.ಶ್ರೀ. ಎಂದು ಪರಿಚಿತರಾದ ಮೈಸೂರಿನ ಶ್ರಿನಿವಾಸಮೂರ್ತಿಗಳು ಒಬ್ಬ ಕವಿಗಳು, ಭಾಷಾತಜ್ಞರು, ಮೇಲಾಗಿ ಶಿಕ್ಷಣತಜ್ಞರು. ಮೈಸೂರಿನಲ್ಲಿ ೧೮೯೨ರಲ್ಲಿ ಜನಿಸುತ್ತಾರೆ. ಮೈಸೂರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾದ ಇವರು ನಂತರ ಉತ್ತಮ ಶಿಕ್ಷಕರಾಗಿ, ಶ್ರೇಷ್ಠ ಶಿಕ್ಷಣತಜ್ಞರಾಗಿ, ಒಳ್ಳೆಯ ವಾಗ್ಮಿಯಾಗಿ ಪರಿವರ್ತಿತರಾಗುತ್ತಾರೆ. ಬಸವಣ್ಣನವರ ಅಭಿಮಾನಿಯಾಗಿ ಬಸವಣ್ಣನವರ ಬಗ್ಗೆ ಎರಡು ಸಂಶೋಧನಾ ಕೃತಿಗಳನ್ನು ರಚಿಸುತ್ತಾರೆ. "ಭಕ್ತಿ ಭಂಡಾರಿ ಬಸವಣ್ಣ" ಮತ್ತು "ವಚನಧರ್ಮ ಸಾರ" ಇವರ ಪ್ರಮುಖ ಸಂಶೋಧನಾ ಕೃತಿಗಳು. ಇವರು ಲಿಂಗಾಯತ ಒಂದು ಸ್ವತಂತ್ರ ಧರ್ಮ ಎಂದು ನಿರೂಪಿಸಿದ್ದಾರೆ.
- **History of Lingayats** by Dr. D.C.Pavate; ಕರ್ನಾಟಕದ ವಿಶ್ವವಿದ್ಯಾಲಯದ ಕುಲಪತಿಯಾಗಿ, ನಂತರ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ ಕನ್ನಡದ ಶ್ರೇಷ್ಠ ಆಡಳಿತಗಾರ, ಶಿಕ್ಷಣತಜ್ಞ ಡಾ. ಡಿ.ಸಿ.ಪಾವಟೆಯವರು.

In Public domain. Digitization Muthulakshmi Research Academy

ಇವರಿಂದ ೧೯೬೩ ರಲ್ಲಿ ರಚಿತವಾದ "History of Lingayats" ಕೃತಿಯಲ್ಲಿ 'ಲಿಂಗಾಯತ ಒಂದು ಸ್ವತಂತ್ರ ಧರ್ಮ' ಎಂದು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ.

- ಇನ್ನೊಬ್ಬ ಶ್ರೇಷ್ಠ ಶಿಕ್ಷಣತಜ್ಞ ಪ್ರೊ.ಎಸ್.ಎಸ್.ಬಸವನಾಳ ಅವರು. ಧಾರವಾಡ ಜಿಲ್ಲೆಯ ಹಾವೇರಿಯಲ್ಲಿ ೧೮೯೩ರಲ್ಲಿ ಜನಿಸಿದ್ದರು. ಇವರು ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ೧೯೧೬ರಲ್ಲಿ ಸ್ನಾತಕೋತ್ತರ ಪದವಿ ಪರೀಕ್ಷೆಯನ್ನು ಪ್ರಪ್ರಥಮ ವರ್ಗದಲ್ಲಿ ಪಾಸಾಗಿದ್ದರು. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದ ಇವರು ಲಿಂಗಾಯತ ಸ್ವತಂತ್ರ ಧರ್ಮವೆಂದು ಪ್ರತಿಪಾದಿಸುವ ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ.
- **ಲಿಂಗಾಯತ ಸ್ವತಂತ್ರ ಧರ್ಮ**; ಡಾ.ಎಂ.ಎಂ.ಕಲಬುರ್ಗಿ: ಡಾ. ಕಲಬುರ್ಗಿಯವರು ತಮ್ಮ ಜೀವನಪರ್ಯಂತ ಲಿಂಗಾಯತಕ್ಕಾಗಿ ಜೀವ ಸವೆಸಿದವರು. ಅದಕ್ಕಾಗಿಯೇ ಹಂತಕನ ಗುಂಡಿಗೂ ಬಲಿಯಾದವರು. ಇವರು ತಮ್ಮ 'ಮಾರ್ಗ' ಸಂಪುಟಗಳಲ್ಲಿ 'ಲಿಂಗಾಯತ ಒಂದು ಸ್ವತಂತ್ರ ಧರ್ಮ' ಎಂದು ಪ್ರತಿಪಾದಿಸಿದ ಅನೇಕ ಲೇಖನಗಳನ್ನು ಕಾಣಬಹುದು.
- ಡಾ. ಲಕ್ಷ್ಮಣ ಕೌಂಟೆ ರಚಿತ **'ಲಿಂಗಾಯತ-ಸ್ವತಂತ್ರ ಧರ್ಮ'** ಎಂಬ ಕೃತಿಯಲ್ಲಿ ವೀರಶೈವ ಹಾಗೂ ಲಿಂಗಾಯತ ಬೇರೆ ಬೇರೆಯಂದು, ಲಿಂಗಾಯತ ಒಂದು ಸ್ವತಂತ್ರ ಧರ್ಮಯೆಂದು ದಾಖಲೆ ಸಮೇತ ನಿರೂಪಿಸಿದ್ದಾರೆ.
- **Homage To Basava"** written by h'be Justice P. B. Gajendragad, printed in 1968.

  "Mahatma Basava deserves a place of pride in this galaxy of great dissenters and redeemers: the religion which Basava preached was essentially a social religion. He was primarily a rebel and a revolutionary who opposed the Brahminisim of his time: he did away with all the obligatory rituals of Brahminism and liberated common men and women from the domination of priests
- **"Lingayats are not Hindus"** by Dr. N.G. Mahadevappa. ಕರ್ನಾಟಕ ವಿಶ್ವವಿದ್ಯಾಲಯದ ತತ್ವಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಮತ್ತು ವಿದ್ವಾಂಸರು ಡಾ.ಎನ್.ಜಿ.ಮಹಾದೇವಪ್ಪ ಅವರು. ಇವರು ಲಿಂಗಾಯತರು

In Public domain. Digitization Muthulakshmi Research Academy

ಹಿಂದುಗಳಲ್ಲ ಎಂಬ ಸಂಶೋಧನಾ ಕೃತಿಯನ್ನು ರಚಿಸಿದ್ದು ಅದರಲ್ಲಿ ಲಿಂಗಾಯತರು ಹೇಗೆ ಹಿಂದೂಗಳಲ್ಲ ಎಂಬುದನ್ನು ತತ್ವಶಾಸ್ತ್ರದ ಆಧಾರದಲ್ಲಿ ಚರ್ಚಿಸಿದ್ದಾರೆ.

- **Why Lingayats are not Hindus?** by D.N.Dhannur, published by Basava Balaga, Talikoti.
- **Srimad Jagadguru Basavanna Founded Veerashaiva Lingayat religion** by Sri Mrutunjaya swamiji of Mudhol printed in 1977

ಕೊನೆ ಟಿಪ್ಪಣಿಗಳು

೧. ಪ್ರಜಾವಾಣಿ ಸೆಪ್ಟೆಂಬರ್ ೧೧, ೨೦೧೭.

೨. Deccan chronicle .

೩. ಆಧಾರ, ಶರಣ ಶ್ರೀ. ಡಾ. ಶಿವಮೂರ್ತಿ ಮುರುಘಾ ಶರಣರ ಪೀಠಾರೋಹಣ ಬೆಳ್ಳಿಹಬ್ಬ ಸಂಭಾವನಾ ಗ್ರಂಥ. ಪ್ರಧಾನ ಸಂಪಾದಕರು, ಡಾ. ಎಂ. ಎಂ. ಕಲಬುರ್ಗಿ, ಪು. ಸಂ. ೧೩೯.

೪. ಮೇಲಿನ ಗ್ರಂಥ ಪು. ಸಂ. ೧೨೨.

೫. ಮೇಲಿನ ಗ್ರಂಥ ಪು. ಸಂ. ೫.

೬. ಮೇಲಿನ ಗ್ರಂಥ ಪು. ಸಂ. ೪೧-೧೦೦.

೭. ಮೇಲಿನ ಗ್ರಂಥ ಪು. ಸಂ. ೮೧.

೮. ಮೇಲಿನ ಗ್ರಂಥ ಪು. ಸಂ. ೧೪೨

೯. ಮೇಲಿನ ಗ್ರಂಥ ಪು. ಸಂ. ೧೫೧.

೧೦. ಮೇಲಿನ ಗ್ರಂಥ ಪು.ಸಂ. ೧೧೩.

೧೧ ಮೇಲಿನ ಗ್ರಂಥ, ಪು.ಸಂ. ೩೬೩-೩೬೪.

೧೨. Revolution Of Mystics on the social Aspects of Veerasaivism, by Dr JP Schoouten's. ಕನ್ನಡಕ್ಕೆ ಡಾ. ಟಿ. ಆರ್. ಚಂದ್ರಶೇಖರ ಪು.ಸಂ.೬

೧೩. ಶರಣಶ್ರೀ, ಪು. ಸಂ.೩೭೯.

೧೪. ಮೇಲಿನ ಗ್ರಂಥ ಪು. ಸಂ. ೩೮೫.

In Public domain. Digitization Muthulakshmi Research Academy

ಅಧ್ಯಾಯ ಹನ್ನೆರಡು

ತಜ್ಞರ ಸಮಿತಿಯ ಸುತ್ತಮುತ್ತ

'ವೀರಶೈವ-ಲಿಂಗಾಯತ ಧರ್ಮವನ್ನು ಸ್ವತಂತ್ರಧರ್ಮವೆಂದು ಘೋಷಿಸುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡುತ್ತೇನೆ' (೧೪.೬.೨೦೧೭) ಎಂದು ಹೇಳಿದ ಸರಿಯಾಗಿ ಆರು ತಿಂಗಳ ನಂತರ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮಾತನ್ನು ಉಸಿಕೊಳ್ಳುವ ವಿಷಯದಲ್ಲಿ ಮಹತ್ವದ ಹೆಜ್ಜೆಯನ್ನಿಟ್ಟದ್ದರು. ನ್ಯಾಯಮೂರ್ತಿ ನಾಗಮೋಹನ್ ದಾಸ್ ಆವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ರಚನೆ ಮಾಡಿದ್ದರು. ಕರ್ನಾಟಕ ಸರಕಾರ ತುಂಬ ಎಚ್ಚರಿಕೆಯ ಹೆಜ್ಜೆಗಳನ್ನು ಇಡುತ್ತಿತ್ತು. ಸಮಿತಿಗೆ ಯಾವುದೇ ತರಹದ ಒತ್ತಡ ಹಾಕದೆ ಪಾರದರ್ಶಕವಾಗಿರುವ ವಾತಾವರಣ ಸೃಷ್ಟಿ ಮಾಡಿತ್ತು. ಸಮಿತಿಗೆ ಸಹಾಯ ಸಹಕಾರ ನೀಡಲು ಹಿರಿಯ ಕೆ.ಎ.ಎಸ್. ಅಧಿಕಾರಿಯಾದ ಎಸ್.ಅನೀಸ್ ಸಿರಾಜ್ ಅವರನ್ನು ನೇಮಿಸಿತ್ತು.

ತಜ್ಞರ ಸಮಿತಿ ರಚನೆಯಾದ ಒಂದು ವಾರದಲ್ಲಿ ಆಯೋಗವು ಸಭಾಸೂಚನೆ ನೋಟಿಸನ್ನು ಎಲ್ಲ ಸದಸ್ಯರಿಗೆ ಕಳಿಸಿತ್ತು. ಸಮಿತಿಯು ತನ್ನ ಮೊದಲ ಸಭೆಯನ್ನು ಜನವರಿ ೬, ೨೦೧೮ರಂದು, ವಿಕಾಸಸೌಧದ ಎರಡನೆಯ ಮಹಡಿಯ ಕೊಠಡಿ ಸಂಖ್ಯೆ ೨೨೨ರಲ್ಲಿ ಕರೆದಿತ್ತು. ಈ ಮಧ್ಯ ವೀರಶೈವರು ತಜ್ಞರ ಸಮಿತಿಯು ಕಾನೂನುಬಾಹಿರ ಎಂದು ತಡೆಯಾಜ್ಞೆ ತರಲು ಕರ್ನಾಟಕ ಉಚ್ಚನ್ಯಾಯಾಲಯದ ಮೆಟ್ಟಿಲೇರಿದ್ದರು. ಇದನ್ನರಿತ ಸಮಿತಿ ಎಚ್ಚರದ ಹೆಜ್ಜೆಗಳನ್ನು ಇಡಲು ಬಯಸಿತ್ತು. ಆದರೂ ಮೊದಲ ಸಭೆಯಲ್ಲಿ ಮೂರು ವಿಷಯಗಳ ಮೇಲೆ ನಿರ್ಣಯ ಮಾಡಿತ್ತು.

೧. ಸಮಿತಿಯಲ್ಲಿ ಮಹಿಳೆಯರಿಗೆ ಸ್ಥಾನ ಕಲ್ಪಿಸಬೇಕು.

೨. ಅಲ್ಪಸಂಖ್ಯಾತ ಆಯೋಗಕ್ಕೆ ಕೇವಲ ೩೬ ಅರ್ಜಿಗಳು ಮಾತ್ರ ಬಂದಿದ್ದು. ಇಷ್ಟೊಂದು ದೊಡ್ಡ ಜನಸಂಖ್ಯೆಯನ್ನು ಹೊಂದಿದ ಸಮುದಾಯಕ್ಕೆ ಮತ್ತು

In Public domain. Digitization Muthulakshmi Research Academy
ವಿಷಯವು ಗಂಭೀರವಾಗಿರುವ ಕಾರಣ ಇನ್ನೂ ಹೆಚ್ಚು ಸಾರ್ವಜನಿಕ ಅಹವಾಲುಗಳನ್ನು ಪಡೆಯಲು ಬಯಸಿ ಎರಡು ವಾರಗಳ ಕಾಲಾವಕಾಶ ನೀಡಿ ಸಾರ್ವಜನಿಕ ತಿಳಿವಳಿಕೆ ಪತ್ರವನ್ನು ಪ್ರಸಿದ್ಧಿಪಡಿಸಲು ತಜ್ಞರೆಲ್ಲರೂ ಬಯಸಿದ್ದರು. ಅದಕ್ಕಾಗಿ ಕನ್ನಡ ಹಾಗೂ ಇಂಗ್ಲಿಷ್ ಭಾಷೆಯ ಪತ್ರಿಕೆಗಳಲ್ಲಿ ಜಾಹೀರಾತು ನೀಡುವಂತೆ ಇಲಾಖೆಗೆ ಸೂಚಿಸಿತ್ತು.

೩. ವಿಷಯ ಗಂಭೀರವಾಗಿರುವ ಕಾರಣ ಸಮಿತಿಗೆ ಹೆಚ್ಚಿನ ಆರು ತಿಂಗಳ ಕಾಲಾವಕಾಶ ನೀಡಬೇಕು.

ಮೂರು ವಿಷಯಗಳನ್ನು ಪರಿಶೀಲಿಸಲು ಸರ್ಕಾರವನ್ನು ಕೇಳಿಕೊಂಡು ಸಭೆಯನ್ನು ಮುಕ್ತಾಯಗೊಳಿಸಿದ್ದರು. ಅಸಲಿಗೆ ಸಮಿತಿಯು ಹೈ ಕೋರ್ಟಿನಲ್ಲಿ ವೀರಶೈವರು ಸಲ್ಲಿಸಿದ ರಿಟ್ ಅರ್ಜಿಯ ತೀರ್ಪಿಗಾಗಿ ಕಾಯುತ್ತಿತ್ತು.

ಕರ್ನಾಟಕ ರಾಜ್ಯ ಸರ್ಕಾರ ರಚಿಸಿದ ನ್ಯಾಯಮೂರ್ತಿ ನಾಗಮೋಹನದಾಸ್ ಸಮಿತಿ ಕಾನೂನುಬಾಹಿರ ಮತ್ತು ಆ ಸಮಿತಿ ಕಾರ್ಯನಿರ್ವಹಣೆಗೆ ತಡೆ ನೀಡಬೇಕೆಂದು ಎರಡು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು(PIL) ಕರ್ನಾಟಕದ ಉಚ್ಚನ್ಯಾಯಾಲಯದಲ್ಲಿ ಸಲ್ಲಿಕೆಯಾಗಿದ್ದವು. ಈ ಅರ್ಜಿಗಳ ವಿಚಾರಣೆ ಸಮಯದಲ್ಲಿ ನಮ್ಮ ವಾದವನ್ನೂ ಸಹ ಪರಿಗಣಿಸುವಂತೆ ನಾನು ವೈಯಕ್ತಿಕವಾಗಿ ಮಾನ್ಯ ಉಚ್ಚನ್ಯಾಯಾಲಯದ ಮೆಟ್ಟಲು ಹತ್ತಿ ಕೇವಿಯಟ್ ಅರ್ಜಿ ಸಲ್ಲಿಸಿದ್ದೆ. ಸಮಸ್ಯೆಯ ಗಂಭೀರತೆಯನ್ನು ಅರಿತು ಮಾನ್ಯ ಉಚ್ಚನ್ಯಾಯಾಲಯವು ಈ ಅರ್ಜಿಗಳನ್ನು ವಿಭಾಗೀಯ ಪೀಠಕ್ಕೆ ವರ್ಗಾಯಿಸಿತ್ತು. ಗೌರವಾನ್ವಿತ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಎಚ್. ಜಿ. ರಮೇಶ ಹಾಗು ನ್ಯಾಯಮೂರ್ತಿ ಪಿ. ಎಸ್. ದಿನೇಶಕುಮಾರ ಅವರಿದ್ದ ವಿಭಾಗಿಯ ಪೀಠದೆದುರು ಜನವರಿ ೫, ೨೦೧೮ರಂದು ವಿಚಾರಣೆಗೆ ಬಂದಿತ್ತು. ವೀರಶೈವರ ಪರವಾಗಿ ವಾದ ಮಂಡಿಸಲು ಹಿರಿಯ ನ್ಯಾಯವಾದಿಗಳಾದ ಜಿ.ಆರ್. ಗುರುಮಠ ಮತ್ತು ಅಶೋಕ ಹಾರ್ನಳ್ಳಿ ಹಾಜರಾಗಿದ್ದರು. ಸರಕಾರದ ಪರವಾಗಿ ಹಿರಿಯ ನ್ಯಾಯವಾದಿ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿಯವರೊಂದಿಗೆ ನನ್ನ ವಕೀಲರಾದ ನ್ಯಾಯವಾದಿ ಸ್ವಾಮಿಯವರು ಕೋರ್ಟಿಗೆ ಹಾಜರಾದರು.

ವೀರಶೈವರ ಪರ ವಾದ ಪ್ರಾರಂಭಿಸಿದ ನ್ಯಾಯವಾದಿ ಗುರುಮಠರು "ಸಮಿತಿಯ ಸದಸ್ಯರು ಪೂರ್ವಗ್ರಹಪೀಡಿತ ಭಾವನೆ ಹೊಂದಿದ್ದಾರೆ, ಇಂತಹವರಿಂದ ಪಾರದರ್ಶಕ ವರದಿ ನಿರೀಕ್ಷೆ ಅಸಾಧ್ಯ" ಎಂದು ವಾದ ಪ್ರಾರಂಭಿಸಿದರು. ಸಮಸ್ಯೆಯ ಆಳಕ್ಕೆ ಇಳಿಯಲು ಗೌರವಾನ್ವಿತ ನ್ಯಾಯಮೂರ್ತಿಗಳು "ಲಿಂಗಾಯತರು ವೀರಶೈವರು ಬೇರೆ ಬೇರೆಯೇ" ಎಂದು ಕೇಳಿದರು. ಆಗ ತಮ್ಮ ಕಕ್ಷಿದಾರರ

In Public domain. Digitization Muthulakshmi Research Academy

ಪರವಾಗಿ ಗುರುಮಠರು "ಸ್ವಾಮಿ ಎರಡೂ ಒಂದೇ. ಅದು ಇಂಡಿಯಾ ಮತ್ತು ಭಾರತ ಇದ್ದಂತೆ" ಎಂದು ಜಾಣ್ಮೆಯ ಉತ್ತರ ನೀಡಿದ್ದರು. ಗುರುಮಠರು ಮೂಲತಃ ಹೊಸಪೇಟೆ ಜಿಲ್ಲೆಯವರು. ಗುರುಮಠರಿಗೆ ಖಂಡಿತವಾಗಿ ಎರಡೂ ಪಂಗಡಗಳ ಅಂತರ ಗೊತ್ತಿತ್ತು. ವೃತ್ತಿ ಮತ್ತು ಸ್ವಹಿತಾಸಕ್ತಿ ಅವರನ್ನು ಸತ್ಯ ನುಡಿಯದಂತೆ ನಿರ್ಬಂಧಿಸಿತ್ತು. ನ್ಯಾಯವಾದಿ ಗುರುಮಠರು ಮತ್ತೊಂದು ದಾಖಲೆರಹಿತ ವಾದವನ್ನು ಮಂಡಿಸುತ್ತ "ನಾಲ್ಕು ಸಾವಿರ ವರ್ಷಗಳ ಇತಿಹಾಸವಿರುವ ಸಮುದಾಯವನ್ನು ಏಳು ಜನ ನಾಸ್ತಿಕರ ಸಮಿತಿ ನಾಲ್ಕು ವಾರಗಳಲ್ಲಿ ಹೇಗೆ ಆಖೈರುಗೊಳಿಸಲು ಸಾಧ್ಯ ಎಂದು ಪ್ರಶ್ನಿಸುತ್ತ ಸರಕಾರದ ಈ ಕ್ರಮ ಸಂವಿಧಾನದ ೧೪ನೇ ವಿಧಿಗೆ ವಿರುದ್ಧವಾಗಿದೆ" ಎಂದರು. ಇದೇ ವಿಷಯದ ಮೇಲಿದ್ದ ಇದೊಂದು ಪಿ.ಐ.ಎಲ್. ಪರವಾಗಿ ವಾದ ಮಂಡಿಸಲು ಹಿರಿಯ ನ್ಯಾಯವಾದಿ ಅಶೋಕ ಹಾರ್ನಳ್ಳಿ ಎದ್ದು ನಿಂತು "ಸರ್ಕಾರ ಮಲಗಿದ್ದವರನ್ನು ಬಡಿದೆಬ್ಬಿಸಿದೆ. ಇದರಿಂದ ಲಿಂಗಾಯತರು ಮತ್ತು ವೀರಶೈವರು ಬೀದಿಗಿಳಿದು ಜಗಳ ಕಾಯುತ್ತಿದ್ದಾರೆ" ಎಂದು ತಮ್ಮ ವಾದ ಮುಂದಿಡುತ್ತ "ಧರ್ಮದ ವಿಷಯದಲ್ಲಿ ಮಧ್ಯೆ ಪ್ರವೇಶಿಸಲು ಸರ್ಕಾರಕ್ಕೆ ಏನು ಅಧಿಕಾರವಿದೆ ಎಂದು ಪ್ರಶ್ನಿಸುತ್ತ "ಅಲ್ಪಸಂಖ್ಯಾತರ ಪ್ರಶ್ನೆ ಬೇರೆ, ಪ್ರತ್ಯೇಕ ಧರ್ಮದ ವಿಚಾರ ಬೇರೆ, ಜನರ ನಂಬಿಕೆಯ ವಿರುದ್ಧವಾಗಿ ಒಂದು ಸರ್ಕಾರ ಹೇಗೆ ತೀರ್ಮಾನ ತೆಗೆದುಕೊಳ್ಳುತ್ತದೆ? ಧರ್ಮದಲ್ಲಿಯೇ ನಂಬಿಕೆ ಇಲ್ಲದ ತಜ್ಞರು ಹೇಗೆ ತಾನೆ ಸರ್ವರೂ ಒಪ್ಪಿಕೊಳ್ಳುವಂತಹ ವರದಿ ನೀಡಬಲ್ಲರು? ಸಮಿತಿ ವರದಿಯನ್ನು ಬಿಡುಗಡೆ ಮಾಡದಂತೆ ನಿರ್ದೇಶಿಸಬೇಕೆಂದರು.

ಈ ವಾದಗಳಿಗೆ ಪ್ರತಿವಾದಿಸುತ್ತ ಅಡ್ವೊಕೇಟ್ ಜನರಲ್ ಶಶಿಕಿರಣ ಶೆಟ್ಟಿಯವರು "ವೀರಶೈವ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆ ಅಧ್ಯಯನಕ್ಕೆ ರಚಿಸಿರುವ ತಜ್ಞರ ಸಮಿತಿಯನ್ನು ವಿರೋಧಿಸುವವರು ರಾಜಕೀಯ ಮಾಡುತ್ತಿದ್ದಾರೆ" ಎಂದರು. ಇವರ ವಾದವನ್ನು ಬಲವಾಗಿ ಖಂಡಿಸುತ್ತ ನ್ಯಾಯವಾದಿ ಗುರುಮಠರು "ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಎಷ್ಟು ಗೌರವಾನ್ವಿತರು ಎಂಬುದನ್ನು ನಾನು ತೆರೆದ ಕೋರ್ಟಿನಲ್ಲಿ ಬಿಚ್ಚಿಡಬಲ್ಲೆ" ಎಂದು ಆಕ್ರೋಶಭರಿತರಾದರು. ಆಗ ನ್ಯಾಯ ಮೂರ್ತಿಗಳು ಇಬ್ಬರನ್ನು ಸಮಾಧಾನಪಡಿಸಿದರು. ನನ್ನ ನ್ಯಾಯವಾದಿಗಳಾದ ಸ್ವಾಮಿ ವಕೀಲರು ಆಸಕ್ತಿಯಿಂದ ಕಲಾಪಗಳನ್ನು ಗಮನಿಸುತ್ತ ತಮ್ಮ ಸರದಿಗಾಗಿ ಕಾಯುತ್ತಿದ್ದರು. ನಾನು ಸಹ ಕಲಾಪಗಳನ್ನು ಅತೀವ ಆಸಕ್ತಿಯಿಂದ ಆಲಿಸುತ್ತಿದ್ದೆ.

ವಾದ ಪ್ರತಿವಾದ ಆಲಿಸಿದ ಗೌರವಾನ್ವಿತ ವಿಭಾಗೀಯ ನ್ಯಾಯಪೀಠ ತಮ್ಮ ತೀರ್ಮಾನ ನೀಡುತ್ತ "ತಜ್ಞರ ಸಮಿತಿಗೆ ಕಾನೂನಿನ ಚೌಕಟ್ಟಿನಲ್ಲಿ ಯಾವುದೇ ಚಟುವಟಿಕೆ ನಡೆಸಲು ಸ್ವತಂತ್ರವಿದೆ. ಇದನ್ನು ರಚಿಸಿದ ಅಲ್ಪಸಂಖ್ಯಾತ ಆಯೋಗಕ್ಕೆ

In Public domain. Digitization Muthulakshmi Research Academy

ಶಾಸನಬದ್ಧ ಅಧಿಕಾರವಿದೆ. ಹೀಗಿರುವಾಗ ಈ ಪ್ರಕರಣದಲ್ಲಿ ಅರ್ಜಿದಾರರ ಆಕ್ಷೇಪಣೆಗಳು ಏನೇ ಇದ್ದರೂ ಅದನ್ನು ವಿವರವಾಗಿ ವಿಚಾರಣೆ ನಡೆಸಿ ತೀರ್ಮಾನಕ್ಕೆ ಬರಬೇಕಾಗುತ್ತದೆ. ಆದ್ದರಿಂದ ತಡೆ ನೀಡಲು ಸಾಧ್ಯವಿಲ್ಲ" ಎಂದು ಪೀಠ ತೀರ್ಪು ನೀಡಿತ್ತು. "ತಜ್ಞರು ಏನೇ ಕಾರ್ಯ ನಿರ್ವಹಿಸಿದರೂ ಅದು ಈ ಅರ್ಜಿಯ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ" ಎಂದು ಆದೇಶ ನೀಡಿದರು.

ಇದು ಲಿಂಗಾಯತರ ಮೊದಲ ವಿಜಯವಾಗಿತ್ತು. ಕಾನೂನು ತೊಡಕು ನಿವಾರಣೆಯಾಗುತ್ತಲೆ ಸರಕಾರ ತನ್ನ ಕಾರ್ಯಾಚರಣೆಯ ವೇಗವನ್ನು ಹೆಚ್ಚಿಸಿತು.

ಮೊದಲನೇ ಬೇಡಿಕೆಗೆ ಸ್ಪಂದಿಸುತ್ತ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗವು ಮಹಿಳಾ ಸದಸ್ಯೆಯನ್ನಾಗಿ ಶ್ರೀಮತಿ ಹನುಮಾಕ್ಷಿ ಗೋಗಿಯವರನ್ನು ನೇಮಿಸಿತ್ತು. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಜಾಹೀರಾತನ್ನು ಪ್ರಕಟಿಸಿತ್ತು. ಕನ್ನಡ ಭಾಷೆಯ ಜಾಹೀರಾತನ್ನು ಪ್ರಜಾವಾಣಿ, ಕನ್ನಡಪ್ರಭ, ವಿಜಯ ಕರ್ನಾಟಕ, ಉದಯವಾಣಿ ಮತ್ತು ಸಂಯುಕ್ತ ಕರ್ನಾಟಕದ ಪತ್ರಿಕೆಗಳಲ್ಲಿ ಈ ಕೆಳಗಿನ ಜಾಹೀರಾತನ್ನು ಪ್ರಕಟಿಸಿತ್ತು.

ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ

೫ನೇ ಮಹಡಿ, ವಿ.ವಿ.ಗೋಪುರ ಬೆಂಗಳೂರು ೫೬೦೦೦೧

ಸಾರ್ವಜನಿಕ ಪ್ರಕಟನೆ

Ksmc/Ec-2/2018 date 6.1.2018

ವೀರಶೈವ/ ಲಿಂಗಾಯತ ಸಮುದಾಯವನ್ನು ಅಲ್ಪಸಂಖ್ಯಾತ ಧರ್ಮವೆಂದು ಪರಿಗಣಿಸಬೇಕೆ ಎಂಬುದನ್ನು ಪರಾಮರ್ಶಿಸಿ ವರದಿ ನೀಡಲು ಅಲ್ಪಸಂಖ್ಯಾತ ಆಯೋಗವು ಮಾನ್ಯ ಶ್ರೀ ಎಚ್.ಎನ್. ನಾಗಮೋಹನದಾಸ್ ಇವರ ಅಧ್ಯಕ್ಷತೆಯಲ್ಲಿ ನೇಮಿಸಿರುವ ಸಮಿತಿ ದಿನಾಂಕ ೨೫. ೧. ೨೦೧೮ರ ಸಂಜೆ ೫ ಗಂಟೆಯೊಳಗೆ ಈ ಸಂಬಂಧವಾದ ತಮ್ಮ ಯಾವುದೇ ಅಹವಾಲುಗಳನ್ನು ಲಿಖಿತ ದಾಖಲೆಗಳೊಂದಿಗೆ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಲು ಸಾರ್ವಜನಿಕರಿಗೆ ತಿಳಿಸಿದೆ.

ಸಹಿ.

ಎಸ್. ಅನೀಸ್ ಸಿರಾಜ್, ಕಾರ್ಯದರ್ಶಿ.

ಈ ಜಾಹೀರಾತು ಜನವರಿ ೬-೭-೮ರಂದು ವಿವಿಧ ಕನ್ನಡ ಪತ್ರಿಕೆಗಳಲ್ಲಿ ಪ್ರಕಟಗೊಂಡಿತು. ಅದರಂತೆ ಹೊರ ರಾಜ್ಯಗಳಿಂದಲೂ ಜನರು ಇದಕ್ಕೆ ಸ್ಪಂದಿಸಲಿ ಎನ್ನುವ ಕಾರಣ ಇಂಗ್ಲಿಷ್ ಪತ್ರಿಕೆಗಳಲ್ಲಿಯೂ ಜಾಹಿರಾತನ್ನು ಪ್ರಕಟಿಸಲಾಯಿತು. The New Indian Express Madurai, Chennai, Chandigarh Editionಗಳಲ್ಲಿ ೮.೧.೨೦೧೮ರಂದು ಪ್ರಕಟವಾಗಿತ್ತು. Hindu, Times of india Delhi

In Public domain. Digitization Muthulakshmi Research Academy

and Bangalore Editionಗಳಲ್ಲಿ ೮.೧.೨೦೧೮ರಂದು ಜಾಹೀರಾತುಗಳು ಪ್ರಕಟವಾದವು.

KARNATAKA STATE MINORITY COMMISSION

5th floor, V.V.Towers, Bengaluru 560001

No. Ksmc / ec-2/2018 date 6.1.2018

PUBLIC NOTICE

Karnataka state minorities commission has constituted an expert committee under chairmanship of Justice Nagamohan Das, a former Judge, High Court of Karnataka, examine the representations received from various groups and individuals belonging to the community of Lingayats and Veerashaiva seeking recognition of the community as religious minority. Individuals/ organisations interested in this issue may submit their representations, if any, in writing with documentery evidence so as to reach the office of the secretary Karnataka State Minority Commission on or before 5.00pm on 25.01.2018

sd.
Anees Siraj
Secretary

ಮೊದಲ ಸಭೆಯ ಮೂರು ವಾರಗಳ ನಂತರ ಎರಡನೆಯ ಸಭೆಯನ್ನು ಜನವರಿ ೨೭, ೨೦೧೮ರಂದು ನಡೆಸಿತ್ತು. ಈ ಸಭೆಯಲ್ಲಿ ಎಲ್ಲ ಸದಸ್ಯರು ಹಾಜರಿದ್ದರು. ಜಾಹೀರಾತಿಗೆ ಸಾರ್ವಜನಿಕರು ಅಷ್ಟಾಗಿ ಸ್ಪಂದಿಸದೆ ಹೋದರೂ ವೀರಶೈವರ ಪರವಿರುವ ಜಂಗಮ ಸಮಾಜದವರು ಮನವಿಗಳನ್ನು ಸಲ್ಲಿಸಿದ್ದರು. ಸಾರ್ವಜನಿಕರಿಂದ ಹೆಚ್ಚುವರಿಯಾಗಿ ಮತ್ತೆ ೨೬ ಅರ್ಜಿಗಳು ಸಲ್ಲಿಸಲ್ಪಟ್ಟಿದ್ದವು. ಒಟ್ಟು ೬೨ ಲಿಖಿತ ಮನವಿಗಳು ಬಂದಿದ್ದವು. ಬಹುಜನರು ಬಯಸುವ ಸತ್ಯವಾದ ವರದಿಯನ್ನು ನೀಡುವ ಗುರಿಯೊಂದಿಗೆ ನೇರವಾಗಿ ಮನವಿದಾರರನ್ನು ವಿಚಾರಿಸುವ ನಿರ್ಧಾರವನ್ನು ಸಭೆ ಕೈಗೊಂಡಿತು. ಮನವಿದಾರರು ಸಮಿತಿ ಎದುರಿನಲ್ಲಿ ತಮ್ಮ ಅಹವಾಲು ಮತ್ತು ದಾಖಲೆಗಳನ್ನು ಸಲ್ಲಿಸುವ ಮತ್ತೊಂದು ಅವಕಾಶ ನೀಡಲು ನಿರ್ಧರಿಸಿತು. ಅದರಂತೆ ಅರ್ಜಿದಾರರಿಗೆ ಸಂದೇಶ ಕಳಿಸಲು ಕಾರ್ಯದರ್ಶಿಯವರನ್ನು ಕೇಳಿಕೊಂಡಿತು. ಮನವಿದಾರಿಗೆ ಒಂದು ವಾರದ

In Public domain. Digitization Muthulakshmi Research Academy

ಸಮಯ ನೀಡುತ್ತ, ಫೆಬ್ರವರಿ ಎರಡು ಮತ್ತು ಮೂರರಂದು ಮೂರನೆಯ ಸಭೆ ಸೇರಲು ಈ ಸಭೆಯಲ್ಲಿ ನಿರ್ಧರಿಸಲಾಯಿತು.

ತಜ್ಞರ ಸಮಿತಿಯು ಪಾರದರ್ಶಕ ವರದಿ ಸಲ್ಲಿಸಲಿ ಎಂದು ನಾವೆಲ್ಲರೂ ಬಯಸಿದ್ದೆವು. ಸಮಿತಿಯ ಸದಸ್ಯರ ಅಲ್ಪ ಸ್ವಲ್ಪ ಪರಿಚಯವಿದ್ದರೂ ಅವರೊಂದಿಗೆ ಮಾತಾಡಲು ಸೂಕ್ತ ಸಮಯವಲ್ಲವೆಂದು ಗ್ರಹಿಸಿ ನಾನು ಅವರನ್ನು ಸಂಪರ್ಕಿಸಿರಲಿಲ್ಲ. ಅಲ್ಪಸಂಖ್ಯಾತ ಆಯೋಗದೊಂದಿಗೆ ನಿರಂತರ ಸಂಪರ್ಕ ಇದ್ದರೂ ತಜ್ಞರ ಸಮಿತಿ ಸದಸ್ಯರೊಂದಿಗೆ ಸಂಪರ್ಕ ಮಾಡಿರಲಿಲ್ಲ. ಆ ದಿನಗಳನ್ನು ಅರಿಯುವ ಕುತೂಹಲದಿಂದ ನಾನು ಆರು ವರ್ಷಗಳ ತರುವಾಯ ಸಮಿತಿಯ ಸದಸ್ಯರಾಗಿದ್ದ ಬೆಳಗಾವಿಯ ನಿವಾಸಿ ರಾಮಕೃಷ್ಣ ಮರಾಠೆಯವರೊಂದಿಗೆ ಈ ಪುಸ್ತಕ ಬರೆಯುವ ಸಮಯದಲ್ಲಿ ಸಂದರ್ಶನ ಮಾಡಿದೆ.

ಸೌಜನ್ಯಮೂರ್ತಿಯಾದ ಪ್ರೊ.ಮರಾಠೆಯವರು ನನ್ನ ಪ್ರಶ್ನೆಗಳಿಗೆ ಬಿಡುವು ಮಾಡಿಕೊಂಡು ಶಾಂತವಾಗಿ ಉತ್ತರಿಸಿದರು.

ಪ್ರಶ್ನೆ : ಸರ್, ಶರಣು ಶರಣಾರ್ತಿ, ಲಿಂಗಾಯತ ಅಲ್ಪಸಂಖ್ಯಾತ ಧರ್ಮದ ಮಾನ್ಯತೆಯ ವಿಷಯದಲ್ಲಿ ಸರಕಾರ ರಚನೆ ಮಾಡಿದ ಜಸ್ಟೀಸ್ ನಾಗಮೊಹನದಾಸ್ ಸಮಿತಿಯಲ್ಲಿ ತಾವೂ ಒಬ್ಬ ಗೌರವಾನ್ವಿತ ಸದಸ್ಯರಾಗಿದ್ದಿರಿ. ಆ ಸಮಿತಿಯ ಕಾರ್ಯಾಚರಣೆಯ ದಿನಗಳನ್ನು ನೆನಪಿಸಿಕೊಂಡು ಅವುಗಳನ್ನು ನನ್ನೊಡನೆ ಹಂಚಿಕೊಳ್ಳಬಹುದೆ?

ಪ್ರೊ. ಮರಾಠೆ: ಶರಣು ಶರಣಾರ್ತಿ, ಅದೊಂದು ಜ್ಞಾನ ಹಂಚಿಕೊಳ್ಳುವ ಸಮಯವಾಗಿತ್ತು. ಜಸ್ಟೀಸ್ ನಾಗಮೋಹನದಾಸ್ ಒಬ್ಬ ಪ್ರತಿಭಾನ್ವಿತ, ಸರಳ ಹಾಗೂ ನೇರ ನುಡಿಯ ಸ್ವಭಾವದವರು. ಅವರೊಂದಿಗೆ ಕೆಲಸ ಮಾಡಿದ ದಿನಗಳ ಅವಿಸ್ಮರಣೀಯ. ಸಮಿತಿಯ ಉಳಿದ ಸದಸ್ಯರಾದ ಪ್ರೊ.ಬಿಳಿಮಲೆ, ಪ್ರೊ, ಎಸ್.ಜಿ.ಸಿದ್ಧರಾಮಯ್ಯ, ಪ್ರೊ.ಮುಜಾಫರ್ ಅಸ್ಸಾದಿ, ಡಾ.ಸರಜೂ ಕಾಟ್ಕರ್, ಡಾ.ಸಿ.ಎಸ್.ದ್ವಾರಕಾನಾಥ್ ಮತ್ತು ಶ್ರೀಮತಿ ಹನುಮಾಕ್ಷಿ ಗೋಗಿ ಇವರೆಲ್ಲರೂ ವಿದ್ವಾಂಸರು. ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಾಧನೆಗೈದವರು. ಇಂತಹವರೊಂದಿಗೆ ಕೆಲಸ ಮಾಡುವುದು ಸೌಭಾಗ್ಯವೆ ಸರಿ.

ಪ್ರಶ್ನೆ : ತಮಗೆ ಸರಕಾರದಿಂದಲಾಗಲಿ ಅಥವಾ ಅರೆಸರಕಾರಿ ಸಂಸ್ಥೆಗಳಿಂದ ಸಿಗಬೇಕಾದ ಮಾಹಿತಿ ಸಿಗುತ್ತಿತ್ತೆ?

ಪ್ರೊ. ಮರಾಠೆ : ಭಾರತದಲ್ಲಿ ಜನಿಸಿರುವ ಧರ್ಮಗಳಾದ ಜೈನ, ಬೌದ್ಧ, ಸಿಖ್

In Public domain. Digitization Muthulakshmi Research Academy

ಧರ್ಮಗಳಲ್ಲದೆ ಕಡಲಾಚೆಯ ಧರ್ಮಗಳ ತುಲನಾತ್ಮಕ ಅಧ್ಯಯನ ಮಾಡಿ ವರದಿ ಸಲ್ಲಿಸುವಂತೆ ನನಗೆ ಎರಡನೆಯ ಸಭೆಯಲ್ಲಿಯೇ ಕೇಳಿಕೊಳ್ಳಲಾಗಿತ್ತು. ನನಗೆ ಇದು ಆಸಕ್ತಿದಾಯಕ ವಿಷಯವಾದ್ದರಿಂದ ನನಗಾಗಲೇ ಧರ್ಮಗಳ ಬಗ್ಗೆ ಅಲ್ಪ ಸ್ವಲ್ಪ ಅಭ್ಯಾಸವಿತ್ತು, ಮೇಲಾಗಿ ನನಗೆ ಬೇಕಾದ ವಿಷಯಗಳನ್ನು ತಿಳಿಯಲು ನನ್ನಲ್ಲಿ ಒಂದು ದೊಡ್ಡ ಸಾಹಿತ್ಯಭಂಡಾರವಿದೆ. ಅಲ್ಲದೆ ಅಲ್ಪ ಸಂಖ್ಯಾತ ಆಯೋಗದ ಕಾರ್ಯದರ್ಶಿಯಾದ ಅನೀಸ್ ಸಿರಾಜ್ ಅವರು ಎಲ್ಲ ತರಹದ ಮಾಹಿತಿಯನ್ನು ತಕ್ಷಣ ಒದಗಿಸುತ್ತಿದ್ದರು. ಅದರಂತೆ ಉಳಿದ ತಜ್ಞರಿಗೂ ಕೂಡ ಅವರ ಆಸಕ್ತಿ ಹಾಗೂ ಅವರ ವಿದ್ವತ್ತಿನ ಹಿನ್ನೆಲೆಯಲ್ಲಿ ಬೇರೆ ಬೇರೆ ವಿಷಯಗಳ ಮೇಲೆ ವರದಿಗಳನ್ನು ನೀಡಲು ಕೇಳಿಕೊಂಡಿದ್ದರು ಸಮಿತಿಯ ಅಧ್ಯಕ್ಷರಾಗಿದ್ದ ನಾಗಮೋಹನದಾಸ್ ಸಾಹೇಬರು.

ಪ್ರಶ್ನೆ : ಐದು ಸಾವಿರ ವರ್ಷಗಳ ಇತಿಹಾಸವುಳ್ಳ ವೀರಶೈವ/ಲಿಂಗಾಯತ ಧರ್ಮವನ್ನು ಪರಾಮರ್ಶಿಸಲು ಒಂದು ತಿಂಗಳ ಕಾಲಾವಕಾಶ ಸಾಲದು ಎಂದು ವೀರಶೈವರು ಸಂದೇಹ ವ್ಯಕ್ತಪಡಿಸಿದ್ದರು. ನಿಮ್ಮ ಅಭಿಪ್ರಾಯ?

ಪ್ರೊ. ಮರಾಠೆ : ಲಿಂಗಾಯತ ಧರ್ಮ ಅಂಗೈಯಲ್ಲಿರುವ ವಜ್ರದಂತೆ. ಮುಚ್ಚಿದ ಅಂಗೈ ಬಿಡಿಸಿದರೆ ಅದರ ಹೊಳಪು ಕಂಡೇ ಕಾಣುವುದು. ಸರಳ ಸಿದ್ಧಾಂತದ ಧರ್ಮಕ್ಕೆ ಹೆಚ್ಚಿನ ಓದು ಬೇಕಾಗುವುದಿಲ್ಲ. ಅಲ್ಲದೆ ಪ್ರತ್ಯೇಕ ಧರ್ಮಕ್ಕೆ ಬೇಕಾದ ಸಾಹಿತ್ಯ ಮತ್ತು ದಾಖಲೆಗಳನ್ನು(ಪುಸ್ತಕಗಳನ್ನು) ಮನವಿಗಳೊಂದಿಗೆ ಅನೇಕ ಸಂಸ್ಥೆಗಳು ಸಲ್ಲಿಸಿದ್ದವು. ವೀರಶೈವರ ಪರವಾಗಿದ್ದ ದಾಖಲೆಗಳು ಅಷ್ಟಾಗಿರಲಿಲ್ಲ. ಅಲ್ಲದೆ ಲಭ್ಯವಿರುವ ಮತ್ತು ಅವರ ಪರವಾಗಿ ಸಲ್ಲಿಸಿರುವ ದಾಖಲೆಗಳು ವೀರಶೈವ ಲಿಂಗಾಯತ ಒಂದೇ ಎಂಬುದನ್ನು ಸಾಬೀತು ಪಡಿಸುವಷ್ಟು ಶಕ್ತಿಯುತವಾಗಿರಲಿಲ್ಲ.

ಪ್ರಶ್ನೆ : ವೀರಶೈವರ ಪರವಾಗಿದ್ದ ದಾಖಲೆಗಳಲ್ಲಿ ವೈಜ್ಞಾನಿಕ ಅಂಶಗಳು ಇದ್ದವೆ?

ಪ್ರೊ ಮರಾಠೆ : ನಮ್ಮ ಮೊದಲಿನ ಸಭೆಯಲ್ಲಿಯೇ ಅಧ್ಯಕ್ಷರು ಲಿಂಗಾಯತ ಧರ್ಮಕ್ಕೆ ಮಾನ್ಯತೆ ಬೇಡ ಎನ್ನುವ ಮನವಿಗಳ ಬಗ್ಗೆ ಹೆಚ್ಚು ಗಮನ ಕೊಡಿ. ಅವರ ಅಹವಾಲುಗಳಿಗೆ ಸಮರ್ಪಕವಾಗಿ

In Public domain. Digitization Muthulakshmi Research Academy

ಪರಿಗಣಿಸಲು ಹೆಚ್ಚಿನ ಸಮಯ ನೀಡಿ, ಅವರು ಸಲ್ಲಿಸಿದ ಮನವಿಯ ಅಂಶಗಳನ್ನು ಮತ್ತು ಆಧಾರಗಳನ್ನು ಕೂಲಂಕಷವಾಗಿ ಪರಿಗಣಿಸಿ ಎಂಬ ಕಿವಿಮಾತನ್ನು ಹೇಳಿದ್ದರು. ಒಟ್ಟಾರೆಯಾಗಿ ನಮಗೆ ಒಂದು ಪಾರದರ್ಶಕವಾದ ವೈಜ್ಞಾನಿಕ ಆಧಾರದಲ್ಲಿ, ಲಭ್ಯವಿರುವ ಧಾರ್ಮಿಕ, ಸಾಮಾಜಿಕ ಮತ್ತು ಕಾನೂನಾತ್ಮಕ ವಿವರವನ್ನೊಳಗೊಂಡ ಒಂದು ಪರಿಪೂರ್ಣ ವರದಿಯನ್ನು ಅಲ್ಪ ಸಂಖ್ಯಾತ ಆಯೋಗಕ್ಕೆ ಸಲ್ಲಿಸವು ಸಂಕಲ್ಪ ಮಾಡಿದ್ದೆವು.

ಪ್ರಶ್ನೆ : ಲಿಂಗಾಯತ ಮತ್ತು ವೀರಶೈವರ ಗುಂಪುಗಳ ಮನವಿಗಳಲ್ಲಿ ಅಗಾಧವಾದ ದಾಖಲೆಗಳನ್ನು ಸಲ್ಲಿಸಿದ್ದರು ಅವುಗಳನ್ನೆಲ್ಲ ಪರಿಶೀಲಿಸಲು ಸಮಯ ಸಾಕಾಗಿತ್ತೆ?

ಪ್ರೊ. ಮರಾಠೆ : ತಜ್ಞರ ಸಮಿತಿಯ ಸದಸ್ಯರು ಸಮಸ್ಯೆಯ ಆಳಕ್ಕಿಳಿಯಲು ಅವರ ಪೂರ್ವಾಪರ ಜ್ಞಾನ ಹೆಚ್ಚು ಸಹಕಾರಿಯಾಗಿತ್ತು. ಉದಾಹರಣೆಗೆ ಕಾನೂನು ವಿಷಯವನ್ನು ಅಧ್ಯಕ್ಷರು ನೋಡಿಕೊಂಡರು ಅದರಂತೆ ಉಳಿದ ಸದಸ್ಯರ ಮೂಲವೃತ್ತಿ ಮತ್ತು ಅನುಭವದ ಆಧಾರದಲ್ಲಿ ಕೆಲಸ ಹಂಚಿಕೆಯಾಗಿದ್ದರಿಂದ ನಮಗೇನು ಸಮಯದ ಅಭಾವ ಕಾಣಲಿಲ್ಲ. ತಜ್ಞರ ಸಮಿತಿ ಎಂದರೇ ಕೇವಲ ಲಭ್ಯವಿದ್ದ ದಾಖಲೆಗಳನ್ನು ಪರಿಶೀಲಿಸಿ ಕಾರಕೂನಿಕೆ ಮಾಡುವುದಲ್ಲ. ಧರ್ಮಮಾನ್ಯತೆ ಬೇಡ ಎನ್ನುವ ಸಾರ್ವಜನಿಕರೊಂದಿಗೂ ಮಾತಾಡಲು ನಾವು ಪ್ರಯತ್ನಿಸಿದ್ದೆವು. ಅವರಿಂದ ಹೆಚ್ಚಿನ ಮಾಹಿತಿಯನ್ನು ಪಡೆಯುವುದು ನಮ್ಮ ಗುರಿಯಾಗಿತ್ತು. ಅದಕ್ಕಾಗಿಯೇ ನಾವು ಕನ್ನಡವಲ್ಲದೆ ಇಂಗ್ಲಿಷ್ ಭಾಷೆಯಲ್ಲಿ ಜಾಹಿರಾತನ್ನು ಪ್ರಕಟಿಸಿ ಸಾರ್ವಜನಿಕ ಅಹವಾಲುಗಳನ್ನು ಸ್ವೀಕರಿಸಿ ಅವರೊಂದಿಗೆ ಚರ್ಚೆಯನ್ನು ಮಾಡಿದ್ದೆವು.

ಪ್ರಶ್ನೆ : ವೀರಶೈವರ ಪರವಾಗಿ ಎಷ್ಟು ಮನವಿಗಳು ಬಂದಿದ್ದವು?

ಪ್ರೊ. ಮರಾಠೆ : ಇಂದು ನನಗೆ ಸಂಖ್ಯೆ ಸರಿಯಾಗಿ ನೆನಪಿಲ್ಲ. ಪತ್ರಿಕಾ ಪ್ರಕಟನೆಯ ನಂತರ ಗಡುವಿನ ಒಳಗೆ ಬಂದ ಅಹವಾಲುಗಳು ನೇರವಾಗಿ ಅಲ್ಪ ಸಂಖ್ಯಾತ ಆಯೋಗಕ್ಕೆ ಸಲ್ಲಿಕೆಯಾಗಿದ್ದವು. ಅದನ್ನೂ ಮೀರಿ ನಾವು ಮತ್ತೆರಡು ದಿನಗಳ ಅವಧಿಯನ್ನು

In Public domain. Digitization Muthulakshmi Research Academy

ಸಾರ್ವಜನಿಕರಿಗೆ ನೀಡಿ ಅವರ ಮೌಖಿಕ ಮತ್ತು written ಅಹವಾಲನ್ನು ಸಲ್ಲಿಸಲು ಅವಕಾಶ ಕೊಟ್ಟಿದ್ದೆವು. ಜಸ್ಟೀಸ್ ನಾಗಮೋಹನದಾಸ್ ಸಾಹೇಬರು ಶಾಂತರೀತಿಯಿಂದ ಎಲ್ಲರ ಮೌಖಿಕ ಅಹವಾಲುಗಳನ್ನು ಕೇಳಿಸಿಕೊಂಡಿದ್ದರು. ಅದೊಂದು ಕೋರ್ಟ್‌ಹಾಲ್‌ಗಳಲ್ಲಿ ನಡೆಯುತ್ತಿರುವ ಕೇಸ್‌ಗಳ ವಿಚಾರಣೆಯಂತಿತ್ತು.

ಪ್ರಶ್ನೆ : ಗಂಭಿರ ವಿಷಯಗಳನ್ನು ಇತ್ಯರ್ಥ ಪಡಿಸುವಾಗ ಸದಸ್ಯರಲ್ಲಿ ಮತ್ತು ಅಧ್ಯಕ್ಷರಲ್ಲಿ ಯಾವುದೇ ವಿಷಯದ ಮೇಲೆ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿದ್ದವೆ?

ಪ್ರೊ. ಮರಾಠೆ : ಎಲ್ಲಾ ಸದಸ್ಯರು ತಮ್ಮ ತಮ್ಮ ಕ್ಷೇತ್ರದಲ್ಲಿ ಪರಿಣಿತಿ ಪಡೆದವರಾಗಿದ್ದರು ಮತ್ತು ಅವರೆಲ್ಲರೂ ಪ್ರಾಜ್ಞರು. ಅಧ್ಯಕ್ಷರು ವಹಿಸಿದ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಿದ್ದರು, ಮೇಲಾಗಿ ಸದಸ್ಯರು ಸಲ್ಲಿಸಿದ ವರದಿಗಳನ್ನು ಎಲ್ಲ ಸದಸ್ಯರು ಸೇರಿ ಪುನಃ ಚರ್ಚಿಸುತ್ತಿದ್ದೆವು. ಎಲ್ಲರ ಒಪ್ಪಿಗೆಯ ನಂತರವೆ ನಮ್ಮ ವರದಿಗಳನ್ನು ಅಧ್ಯಕ್ಷರು ಪರಿಗಣನೆಗೆ ತೆಗೆದುಕೊಳ್ಳುತ್ತಿದ್ದರು.

ಪ್ರಶ್ನೆ : ಅಂದರೆ ಯಾವುದೇ ವಿಷಯದಲ್ಲೂ ಭಿನ್ನಾಭಿಪ್ರಾಯ ಬರಲೇ ಇಲ್ಲವೆ?

ಪ್ರೊ. ಮರಾಠೆ : ಇಲ್ಲ ಒಂದು ವಿಷಯದ ಮೇಲೆ ಹೆಚ್ಚು ಚರ್ಚೆಯಾಗಿತ್ತು. ಸೈದ್ಧಾಂತಿಕವಾಗಿ ಲಿಂಗಾಯತ ಧರ್ಮ ಸ್ವತಂತ್ರ ಧರ್ಮವೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ ಆಚರಣೆಯಲ್ಲಿ ಅದು ಇದೆಯೇ ಎಂಬ ಪ್ರಶ್ನೆ ಎದುರಾಯಿತು. ಆಗ ಒಬ್ಬ ಸದಸ್ಯರು ಗಂಭೀರವಾದ ಒಂದು ಪ್ರಶ್ನೆ ಮಾಡಿದರು. "ಜಗತ್ತಿನಲ್ಲಿರುವ ಎಲ್ಲಾ ಧರ್ಮಗಳು ಪರಿಪೂರ್ಣವೆ? ಈ ಪ್ರಶ್ನೆಗೆ ಉತ್ತರಿಸುವುದು ಸುಲಭವಾಗಿರಲಿಲ್ಲ. ಜೈನ, ಬೌದ್ಧ, ಸಿಖ್ ಧರ್ಮಗಳು ತಮ್ಮ ಧರ್ಮಸಿದ್ಧಾಂತಗಳನ್ನು ನೂರಕ್ಕೆ ನೂರರಷ್ಟು ಪಾಲಿಸುವುದಿಲ್ಲ. ಅಥವಾ ಅರ್ಧದಷ್ಟನ್ನೂ ಆಚರಣೆಯಲ್ಲಿ ತಂದಿಲ್ಲ. ಜಗತ್ತಿನಾದ್ಯಂತ ಪ್ರಚಲಿತದಲ್ಲಿರುವ ಕ್ರಿಶ್ಚಿಯನ್ ಮತ್ತು ಇಸ್ಲಾಂ ಧರ್ಮಗಳ ಅನುಯಾಯಿಗಳು ಪರಿಪೂರ್ಣವಾಗಿ ತಮ್ಮ ಧರ್ಮ ಸಿದ್ಧಾಂತಗಳನ್ನು ಪಾಲಿಸುವುದಿಲ್ಲ. ಬಸವಣ್ಣನವರ ಲಿಂಗಾಯತ ಧರ್ಮ'

In Public domain. Digitization Muthulakshmi Research Academy

ಆಚರಣೆಯು ಧರ್ಮವಲ್ಲ ಇದು ವಿಚಾರವಂತ'ರ ಧರ್ಮವೆಂದು ಎಲ್ಲ ಸದಸ್ಯರು ಒಪ್ಪಿಕೊಂಡರು. ಮೇಲಾಗಿ ಕಾನೂನಾತ್ಮಕ ವಿಷಯಗಳು ಬರುವುದರಿಂದ ತಜ್ಞರಾದ ಅಧ್ಯಕ್ಷರು ಸಂವಿಧಾನದ ಪರಿಚ್ಛೇದಗಳ ಬಗ್ಗೆ ಗಂಭೀರವಾಗಿ ಚಿಂತಿಸುತ್ತಿದ್ದರು ಮತ್ತು ಸಂವಿಧಾನಬದ್ಧವಾದ ಹಕ್ಕುಗಳು ಸಮನಾಗಿ ಎಲ್ಲರಿಗೂ ಸಿಗಲಿ ಎಂದು ಅವರು ಬಯಸುತ್ತಿದ್ದರು.

ಪ್ರಶ್ನೆ : ವೀರಶೈವರೂ ಹಿಂದೂಗಳೆ?

ಪ್ರೊ. ಮರಾಠೆ : ಅವರು ಸಲ್ಲಿಸಿದ ದಾಖಲೆಗಳಲ್ಲಿ ವೀರಶೈವರು ಹಿಂದೂಧರ್ಮಕ್ಕಿಂತ ತಾವು ಭಿನ್ನವೆಂದು ಪ್ರತಿಪಾದಿಸಿಯೇ ಇಲ್ಲ. ಅವರ ವಾದ ಕೇವಲ ಲಿಂಗಾಯತ ಧರ್ಮಕ್ಕೆ ಮಾನ್ಯತೆ ಕೊಡಬೇಡಿ ಎಂದಾಗಿತ್ತು, ವೀರಶೈವ ಹಿಂದೂಧರ್ಮದ ಭಾಗ ಎಂದು ವಾದ ಮಾಡುತ್ತಿದ್ದರು. ವಾಸ್ತವವಾಗಿ ಲಿಂಗಾಯತವು ಹಿಂದೂಧರ್ಮದ ಭಾಗವಲ್ಲ, ಅದೊಂದು ಸ್ವತಂತ್ರ ಧರ್ಮವೆಂದು ಪರಿಗಣಿಸಲು ಜೈನ, ಬೌದ್ಧ, ಸಿಕ್ಕರಿಗಿಂತಲೂ ಹೆಚ್ಚಿನ ಪುರಾವೆಗಳಿವೆ.

ಇನ್ನೊಬ್ಬ ಗೌರವಾನ್ವಿತ ಸದಸ್ಯರಾದ ಪ್ರೊ. ಎಸ್.ಜಿ.ಸಿದ್ದರಾಮಯ್ಯನವರನ್ನು ಸಂಪರ್ಕಿಸಿದೆ. ಅವರು ನೀಡಿದ ಮಾಹಿತಿಯೂ ಇದೇ ತೆರನಾಗಿತ್ತು. ಅಧ್ಯಕ್ಷರು ವಿಷಯಗಳನ್ನು ಅವುಗಳ ಪ್ರಾಮುಖ್ಯತೆಯ ಆಧಾರದಲ್ಲಿ ವಿಂಗಡಿಸಿ ಪ್ರತಿಯೊಬ್ಬ ಸದಸ್ಯರಿಗೆ ಬೇರೆಬೇರೆ ವಿಷಯಗಳ ಮೇಲೆ ತಮ್ಮ ವರದಿ ನೀಡುವಂತೆ ತಿಳಿಸಿದ್ದರಂತೆ. ಪ್ರಮುಖವಾಗಿ, ಧರ್ಮ, ನ್ಯಾಯಾಂಗ ದೃಷ್ಟಿಯಲ್ಲಿ ಧರ್ಮ, ಹಿಂದೂ–ವೀರಶೈವ, ಲಿಂಗಾಯತ–ವೀರಶೈವ, ಲಿಂಗಾಯತ–ಹಿಂದೂ, ಆಯೋಗದ ವರದಿಗಳು, ಕುಲಶಾಸ್ತ್ರ ಅಧ್ಯಯನ, ನ್ಯಾಯಲಯದ ತೀರ್ಪುಗಳು ಮತ್ತು ಸಮಾಜೋ ಆರ್ಥಿಕ ಅಧ್ಯಯನ ವಿಷಯಗಳ ಮೇಲೆ ಆಯೋಗ ಹೆಚ್ಚಿನ ಗಮನ ನೀಡಿತ್ತಂತೆ.

ಫೆಬ್ರವರಿ ಎರಡು ಮತ್ತು ಮೂರರಂದು ಒಟ್ಟು ಹದಿನೆಂಟು ಜನರು ನ್ಯಾಯಮೂರ್ತಿ ನಾಗಮೋಹನದಾಸ್ ಎದುರು ಮೌಖಿಕವಾಗಿ ತಮ್ಮ ಅಭಿಪ್ರಾಯವನ್ನು ನೇರವಾಗಿ ಹಂಚಿಕೊಂಡಿದ್ದರು. ಅವರಲ್ಲಿ ವೀರಶೈವರ ಪರವಾಗಿ ಎಂಟು ಜನ ವಾದ ಮಂಡಿಸಿದವರಲ್ಲಿ ಹಾಸನದ ಬಿ.ಪಿ.ಐಶಾಮಿಗೌಡ, ಬೆಂಗಳೂರಿನ ಬಿ.ಎಸ್.ನಟರಾಜ, ಆರ್.ಆರ್.ಹಿರೇಮಠ, ಪ್ರಭುದೇವ ಕಲ್ಮಠ, ಹೆಬ್ಬಾಳದ ವಿಶ್ವನಾಥ ಹಿರೇಮಠರವರಲ್ಲದೆ, ಚಿಕ್ಕಮಗಳೂರಿನ ಶ್ರೀಪ್ರಸಾದ ಸಿರಿಮನೆ, ಕಲ್ಬುರ್ಗಿಯ ವೀರಭದ್ರಪ್ಪ ವರದಾನಿ, ದಾವಣಗೆರೆಯ ಆರ್.ಟಿ.ಪ್ರಶಾಂತವರು ಸೇರಿದ್ದರು.

In Public domain. Digitization Muthulakshmi Research Academy

ಲಿಂಗಾಯತ ಹಿಂದೂಧರ್ಮದ ಭಾಗವಲ್ಲ, ವೀರಶೈವ ಹಾಗೂ ಲಿಂಗಾಯತ ಬೇರೆ ಬೇರೆ ಮತ್ತು ಲಿಂಗಾಯತ ಒಂದು ಸ್ವತಂತ್ರ ಧರ್ಮ ಎಂದು ಹತ್ತು ಜನರು ಅಹವಾಲು ಸಲ್ಲಿಸಿದರು. ಅವರಲ್ಲಿ ಪುಣೆಯ ಶಶಿಕಾಂತ ಪಟ್ಟಣ, ಬೆಂಗಳೂರಿನ ಶ್ರೀಮತಿ ಕೆ.ಆರ್.ಮಂಗಳಾ, ಸದಾನಂದ ಚಟ್ನಳ್ಳಿ, ಪ್ರೊ.ಎಂ.ಜಿ. ಮಹಾದೇವಪ್ಪ, ಡಾ.ಎಸ್.ಎಂ.ಜಾಮದಾರ, ಡಾ.ಚಂದ್ರಶೇಖರ್, ದಾವಣಗೆರೆಯ ಹುಚ್ಚಪ್ಪ ಮಾಸ್ತರ, ಈಚಲಕರಂಜಿಯ ಬಸವಕುಮಾರ ಸ್ವಾಮೀಜಿ, ದಾರವಾಡದ ಡಾ.ವೀರಣ್ಣ ರಾಜೂರ ಮತ್ತು ಗದುಗಿನ ಶಿವಾನಂದ ಪಟ್ಟಣಶೆಟ್ಟಿಯವರು ಸೇರಿದ್ದಾರೆ.

ನಾನು ಎರಡು ದಿನವೂ ಸಭೆಯ ಕಾರ್ಯ ಕಲಾಪಗಳನ್ನು ಗಮನಿಸಿ ಕೆಳಗಿನ ಅಂಶಗಳನ್ನು ಗ್ರಹಿಸಿದ್ದೆ. ಶುಕ್ರವಾರ ಮತ್ತು ಶನಿವಾರದಂದು(ದಿನಾಂಕ ೨-೩ ಫೆಬ್ರವರಿ ೨೦೧೮) ನಾಗಮೋಹನದಾಸ್ ಅವರು ಸಭೆಯ ಅಧ್ಯಕ್ಷತೆ ವಹಿಸಿ, ಮನವಿಗಳನ್ನು ಸಲ್ಲಿಸಿದವರೊಂದಿಗೆ ನೇರವಾಗಿ ಸಂಭಾಷಣೆಗೆ ಇಳಿಯುತ್ತಿದ್ದರು. ಜಸ್ಟೀಸ್ ನಾಗಮೊಹನದಾಸ್ ಒಬ್ಬ ಹಿರಿಯ ನಾಗರಿಕರು. ೬೬ ವರ್ಷಗಳ(ಜನನ ೧೯೫೨) ಸಂತೃಪ್ತ ಜೀವನ ನಡೆಸಿದವರು. ಜೀವನದ ಎಲ್ಲ ಮಜಲುಗಳನ್ನು ದಾಟಿದವರು. ೨೭ ವರ್ಷಗಳ ಕಾಲ ಹೈಕೋರ್ಟ್ ವಕೀಲರಾಗಿ, ನಂತರ ನೇರವಾಗಿ ಕರ್ನಾಟಕದ ಉಚ್ಚನ್ಯಾಯಾಲಯದ ನ್ಯಾಯಾಧೀಶರೆಂದು (೨೧.೧೦.೨೦೦೪) ಹತ್ತು ವರ್ಷಗಳ ಕಾಲ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿ ನಿವೃತ್ತರಾದವರು. ಈಗ ಸರ್ವೋಚ್ಚ ನ್ಯಾಯಾಲಯದಲ್ಲಿ ಸೀನಿಯರ್ ಕೌನ್ಸಿಲ್ ಆಗಿ ಕಾರ್ಯ ನಿರ್ವಹಿಸುತ್ತಿರುವವರು. ಇವರು ಕೇವಲ ಸತ್ಯ ಪರಿಶೋಧಕರು. ನ್ಯಾಯಮೂರ್ತಿಗಳು ನ್ಯಾಯಾಲಯದ ಶೈಲಿಯಲ್ಲಿ ತಮ್ಮ ಸಂದೇಹಗಳನ್ನು ನಿವಾರಿಸಿಕೊಳ್ಳಲು ಪಾಟೀ ಸವಾಲು ಹಾಕುತ್ತಿದ್ದರು. ಈ ಎರಡು ದಿನಗಳ ಅವಧಿಯಲ್ಲಿ ನ್ಯಾಯಮೂರ್ತಿಗಳು ಶಾಂತವಾಗಿ ಹದಿನೆಂಟು ಜನರ ಹೇಳಿಕೆಗಳನ್ನು ಕೇಳುತ್ತ, ಮಧ್ಯಮಧ್ಯದಲ್ಲಿ ತಮಗಿರುವ ಸಂಶಯಗಳನ್ನು ಪರಿಹರಿಸಿಕೊಳ್ಳುತ್ತ ಸತ್ಯವನ್ನು ಕಂಡುಹಿಡಿಯುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದರು. ಅಹವಾಲು ಸಲ್ಲಿಸಿದವರೊಂದಿಗೆ ನಡೆದ ಸಭೆಯು ತುಂಬ ಕುತೂಹಲಕಾರಿಯಾಗಿತ್ತು. ವೀರಶೈವ ಪ್ರತಿಪಾದಕರು ಹತಾಶೆಯ ಭಾವವನ್ನು ವ್ಯಕ್ತಪಡಿಸುತ್ತ ಸಭೆಯ ಗಂಭೀರತೆಯನ್ನು ಹಾಳುಮಾಡುತ್ತಿದ್ದರು. ಸಮಿತಿಯ ಘಟನೆಯೂ ಪೂರ್ವನಿಯೋಜಿತ ಎಂದು ಅವರು ಭಾವಿಸಿದ್ದರು. ಹತಾಶೆ ಭಾವನೆಯಿಂದ ಸಂವಿಧಾನದ ಆಶಯಕ್ಕೆ ಧಕ್ಕೆ ತರುವಂತಹ ಕೆಲಸ ಇಲ್ಲಿ ನಡೆಯುತ್ತಿದೆ ಎಂದು ಆಪಾದಿಸುತ್ತಿದ್ದರು. ಈ ಸಮಿತಿಯು ಕಾನೂನುಬಾಹಿರ, ಸಮಿತಿಯ ಸದಸ್ಯರು ಎಡಪಂತೀಯರೆಂದು ಸದಸ್ಯರನ್ನು ಅವಮಾನ ಮಾಡುತ್ತ ವೈಯಕ್ತಿಕ ವಿಷಯಕ್ಕೂ ಕೈ ಹಾಕಿದ್ದರು. ಕೆಲವೊಮ್ಮೆ ವೀರಶೈವವಾದಿಗಳು ಆವೇಶಭರಿತ ಮಾತುಗಳನ್ನಾಡಿ ಧರ್ಮ ಒಡೆದರೆ

In Public domain. Digitization Muthulakshmi Research Academy
'ರಕ್ತಕ್ರಾಂತಿ'ಯಾದೀತು ಎಂದು ಆಡಳಿತವನ್ನು ಹೆದರಿಸುವ ಪ್ರಯತ್ನವನ್ನು ಮಾಡಿದ್ದರು. ಇವರಲ್ಲಿ ಕೆಲವರು ಆಹ್ವಾನಿತರಲ್ಲದಿದ್ದರೂ ನ್ಯಾಯಮೂರ್ತಿಗಳ ಎದುರು ತಮ್ಮ ಅಭಿಪ್ರಾಯ ಮಂಡಿಸಲು ಮುಂದಾದಾಗ ಅವರಿಗೆ ಅವಕಾಶ ನೀಡಿದ್ದು ಗಮನಾರ್ಹ.

ವೀರಶೈವರ ಪರವಾಗಿ ವಾದ ಮಂಡಿಸಿದವರಲ್ಲಿ ಬಹುತೇಕರು ಜಂಗಮ ಜಾತಿಗೆ ಸೇರಿದವರಾಗಿದ್ದರು. ಬೇಡಜಂಗಮ ಮೀಸಲಾತಿ ಬಯಸುವ ಜಂಗಮ ವರ್ಗವು ಒಂದು ಕಡೆ ದಲಿತವರ್ಗವಾಗಿ ಮೀಸಲಾತಿ ಕೇಳುತ್ತದೆ, ಇನ್ನೊಂದು ಕಡೆ ವೈದಿಕ ಧರ್ಮದ ಏಣಿಶ್ರೇಣಿಯ ಬ್ರಾಹ್ಮಣವರ್ಗದ ಮೇಲ್ಜಾತಿಯನ್ನು ಬಯಸುತ್ತದೆ. ಮೇಲಾಗಿ ಬಸವಣ್ಣನವರು ಸ್ಥಾಪಿಸಿದ ಸಮಸಮಾಜದ ಧರ್ಮಸಿದ್ಧಾಂತದ ಲಿಂಗಾಯತರನ್ನು ಧರ್ಮಕ್ಕೆ ವಿರೋಧ ಮಾಡುತ್ತದೆ. ಇದರಲ್ಲಿ ಕೇವಲ ಸ್ವಜಾತಿಪ್ರೀತಿ ಮತ್ತು ಸ್ವಾರ್ಥ ಮಾತ್ರ ಎದ್ದು ಕಾಣುತ್ತಿತ್ತು.

ಫೆಬ್ರವರಿ ಮೂರರಿಂದ ಮಾರ್ಚ್ ಮೊದಲ ವಾರದ ಒಳಗಾಗಿ ನ್ಯಾಯಮೂರ್ತಿ ನಾಗಮೋಹನದಾಸ್ ವರದಿ ಸಂಪೂರ್ಣಗೊಂಡಿತ್ತು. ಮೂವತ್ತು ದಿನಗಳಲ್ಲಿ ಎಂಟು ಜನ ವಿದ್ವಾಂಸರು ತಮಗೆ ಕೊಟ್ಟ ನಿರ್ದೇಶನವನ್ನು ಚಾಚೂ ತಪ್ಪದೆ ಪಾಲಿಸಿದ್ದರು. ಮೇಲಾಗಿ ಎಲ್ಲರೂ ತಮ್ಮ ತಮ್ಮ ವೃತ್ತಿಯಲ್ಲಿ ಪರಿಣತರು. ಅವರಿಗೆ ಆಸಕ್ತಿ ಮತ್ತು ಅಭ್ಯಾಸವಿದ್ದ ವಿಷಯಗಳ ಮೇಲೆ ಅವರಿಗೆ ವಿಷಯವನ್ನು ಹಂಚಲಾದ ಕಾರಣ ಹೆಚ್ಚಿನ ಸಮಯ ಬೇಕಾಗಿರಲಿಲ್ಲ. ಇದು ಬಹಳ ಮಹತ್ವದ ಕೆಲಸವಾಗಿತ್ತು. ಮೂವತ್ತು ಹಗಲುಗಳನ್ನು ರಾತ್ರಿಗಳೊಂದಿಗೆ ಸಮೀಕರಿಸಿದ್ದರು.

ಮಾರ್ಚ್ ಎರಡರಂದು ಮಾನ್ಯ ನ್ಯಾಯಮೂರ್ತಿಗಳು ತಜ್ಞರ ವರದಿಯನ್ನು ಅಲ್ಪಸಂಖ್ಯಾತ ಆಯೋಗದ ಕಾರ್ಯದರ್ಶಿ ಶ್ರೀ ಅನೀಲ್ ಸಿರಾಜ್ ಕೈಲಿಟ್ಟರು. ೯೦೦ ವರ್ಷಗಳ ನಂತರ ಲಿಂಗಾಯತರ ಕನಸು ನನಸಾಗಲು ಒಂದೆರಡು ಹೆಜ್ಜೆಗಳು ಮಾತ್ರ ಬಾಕಿ ಇದ್ದವು. ಮೊತ್ತಮೊದಲ ಬಾರಿ ಸಂವಿಧಾನಬದ್ಧವಾದ ಚುನಾಯಿತ ಸರಕಾರವೊಂದು ಶಾಸನಬದ್ಧ ತಜ್ಞರ ಸಮಿತಿಯನ್ನು ರಚಿಸಿ ಅವರಿಂದ ವರದಿ ಪಡೆದಿತ್ತು.

ಇತ್ತ ವಿಧಾನಸಭೆಯ ಚುನಾವಣೆ ಹೊಸ್ತಿಲಲ್ಲಿ ಕಾಯುತ್ತಿತ್ತು. ನಾವೆಲ್ಲ ದಿನನಿತ್ಯ ಎಂ.ಬಿ.ಪಾಟೀಲರನ್ನು ಒತ್ತಾಯಪಡಿಸುತ್ತಿದ್ದೆವು. ಚುನಾವಣಾ ನೀತಿಸಂಹಿತೆ ಜಾರಿಯಾದರೆ ನಾವು ಮಾಡಿದ ಕಾರ್ಯ ವ್ಯರ್ಥವಾಗಲಿದೆ ಎಂದು ಪದೇ ಪದೇ ಎಚ್ಚರಿಸುತ್ತಿದ್ದೆವು. ಅವರು ಕೂಡ ನಿರಂತರವಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೋರಿಕೆ ಸಲ್ಲಿಸುತ್ತಿದ್ದರಂತೆ. ವಿರೋಧಿಗಳ ಹೋರಾಟವು ತಾರಕಕ್ಕೆ ಏರಿತ್ತು.

ನ್ಯಾಯಮೂರ್ತಿ ನಾಗಮೋಹನದಾಸ್ ವರದಿಯು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗಕ್ಕೆ ಸಲ್ಲಿಕೆಯಾದ ಮರುಗಂಟೆಯಲ್ಲಿ ಮುಖ್ಯಮಂತ್ರಿಗಳ

In Public domain. Digitization Muthulakshmi Research Academy
ಗೃಹಕಚೇರಿಯಲ್ಲಿರುವ ಹಿರಿಯ ಅಧಿಕಾರಿಯ ಕೈ ಸೇರಿತ್ತು. ಗೌಪ್ಯತೆಯನ್ನು ಕಾಪಾಡಬೇಕಾದ ಅಲ್ಲಿಯ ಹಿರಿಯ ಅಧಿಕಾರಿಯೊಬ್ಬರು ಅದನ್ನು ತಮ್ಮ ಕೋಮಿನ ವಿಧಾನಸೌಧದ ಹಿರಿಯ ಸರಕಾರಿ ಅಧಿಕಾರಿಗೆ ನೀಡಿದ್ದರು. ಅದಕ್ಕೂ ಒಂದು ಬಲವಾದ ಕಾರಣವಿತ್ತು. ತಜ್ಞರ ಸಮಿತಿಯು ಲಿಂಗಾಯತ/ವೀರಶೈವರಿಗೆ ಅಲ್ಪಸಂಖ್ಯಾತ ಧರ್ಮದ ಮಾನ್ಯತೆ ನೀಡಲು ವರದಿಯಲ್ಲಿ ಶಿಫಾರಸ್ಸು ಮಾಡಿತ್ತು. ಈ ವರದಿಯನ್ನು ಸರಕಾರವು ಒಪ್ಪಿಕೊಂಡಿದ್ದೇ ಆದರೆ ಈಗಾಗಲೇ ಅಲ್ಲಿರುವ ಅಲ್ಪಸಂಖ್ಯಾತ ಧರ್ಮಗಳಾದ ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಜೈನ ಸಮುದಾಯದವರಿಗೆ ಮೀಸಲಾತಿಯ ಸೌಲಭ್ಯದಲ್ಲಿ ಕಡಿತವಾಗಲಿತ್ತು. ಕರ್ನಾಟಕದಲ್ಲಿ ದೊಡ್ಡಸಂಖ್ಯೆಯಲ್ಲಿರುವ ಶೇ.೧೩% ಲಿಂಗಾಯತರು ಅಲ್ಪಸಂಖ್ಯಾತ ಧರ್ಮದ ಅಡಿಯಲ್ಲಿ ಮೀಸಲಾತಿ ಪಡೆಯಲು ಅರ್ಹರಾದಲ್ಲಿ ಮೇಲಿನ ಧರ್ಮದವರಿಗೆ ಮೀಸಲಾತಿ ಸೌಲಭ್ಯವು ನಗಣ್ಯವಾಗಲಿತ್ತು.

ಮುಸ್ಲಿಂ ಮತ್ತು ಕ್ರಿಶ್ಚಿಯನ್ ಅಧಿಕಾರಿಗಳು ವರದಿಯ ಸಾಧಕ ಬಾಧಕಗಳನ್ನು ತಮ್ಮ ಧರ್ಮದ ಮಂತ್ರಿಗಳ ಗಮನಕ್ಕೆ ತಂದಿದ್ದರು. ರಾಜ್ಯಸರಕಾರಕ್ಕೆ ಇದೊಂದು ತಲೆನೋವಾಗುವ ಸಂದಿಗ್ಧ ಪರಸ್ಥಿತಿ. ಕೆಲವು ಧರ್ಮದವರಿಗೆ ಈ ವರದಿಯು ಮಾರಕವಾಗಲಿದೆ ಎಂದು ಭಾವಿಸಲಾರಂಭಿಸಿದ್ದರು. ರಾಜ್ಯ ಅಲ್ಪಸಂಖ್ಯಾತ ಆಯೋಗವು ತಮ್ಮವರ ಹಿತ ಕಾಪಾಡಲು ವರದಿಯನ್ನು ಸರಕಾರಕ್ಕೆ ಸಲ್ಲಿಸದೆ ವಿಳಂಬ ಧೋರಣೆಯನ್ನು ಅನುಸರಿಸಲು ನಿರ್ಧರಿಸಿದ್ದರು. ಇದರ ಸುಳಿವರಿತ ಲಿಂಗಾಯತ ಧರ್ಮದ ಪರವಾಗಿದ್ದ ಸಚಿವರಾದ ಎಂ.ಬಿ.ಪಾಟೀಲ ಮತ್ತು ವಿನಯ ಕುಲಕರ್ಣಿ ತಮ್ಮ ಪಟ್ಟು ಬಿಗಿಗೊಳಿಸಿದರು. ಹೈಕಮಾಂಡ್ ಅಂಗಳಕ್ಕೂ ಲಿಂಗಾಯತ ಧರ್ಮ ಅಡಿ ಇಟ್ಟಿತ್ತು. ದೆಲ್ಲಿ ದೊರೆಗಳು ಲಿಂಗಾಯತ ಸಚಿವರ ಕೈ ಬಿಡಲಿಲ್ಲ. ಲಿಂಗಾಯತ ಬೇಡೆಂಬ ಮಂತ್ರಿಗಳ ಪಡೆ ಮುಖ್ಯಮಂತ್ರಿಗಳ ಮೇಲೆ ಬಲವಾದ ಒತ್ತಡ ತರಲಾರಂಭಿಸಿದ್ದರು. ಕೊನೆಗೆ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಲಿ ಎಂಬ ಕರಾರಿನಿಂದ ವರದಿಯನ್ನು ಮಾರ್ಚ್ ೨, ೨೦೧೮ ರಂದು ಸರಕಾರಕ್ಕೆ ಹಸ್ತಾಂತರಿಸಲಾಗಿತ್ತು. ಅಲ್ಲಿಗೆ ನ್ಯಾಯ್ಯಮೂರ್ತಿ ನಾಗಮೋಹನದಾಸ್ ವರದಿಯ ಗೌಪ್ಯತೆ ಕೊನೆಗೊಂಡಿತ್ತು. ಈ ಮಧ್ಯ 'ಅಲ್ಪ ಸಂಖ್ಯಾತ ಸ್ಥಾನಮಾನ; ಆತಂಕ' ಎಂಬ ತಲೆಬರಹದ ಅಡಿಯಲ್ಲಿ ಪ್ರಜಾವಾಣಿ ಪತ್ರಿಕೆ ಮಾರ್ಚ್ ೧೪, ೨೦೧೮ರಲ್ಲಿ ಒಂದು ವರದಿಯನ್ನು ಪ್ರಕಟಿಸಿತ್ತು. ಮುಸ್ಲಿಂ ಪರವಾಗಿ ಆರ್.ರೋಷನ್ ಬೇಗ್ ಮತ್ತು ಕ್ರಿಶ್ಚಿಯನ್ ಪರ ಸಚಿವ ಕೆ.ಜೆ. ಜಾರ್ಜ್‌ರವರು ಮುಖ್ಯಮಂತ್ರಿಗಳೊಂದಿಗೆ ಮಾತುಕತೆ ನಡೆಸಿ ತಮ್ಮ ಅತಂಕ ವ್ಯಕ್ತಪಡಿಸಿದ್ದಾಗಿ ಪ್ರಜಾವಾಣಿ ವರದಿ ಮಾಡಿತ್ತು. 'ರಾಜ್ಯದಲ್ಲಿ ಲಿಂಗಾಯತರು ದೊಡ್ಡಸಂಖ್ಯೆಯಲ್ಲಿದ್ದಾರೆ. ಇವರಿಗೆ ಧಾರ್ಮಿಕ ಅಲ್ಪಸಂಖ್ಯಾತ ಸ್ಥಾನಮಾನ ನೀಡಿದರೆ ಮುಸ್ಲಿಂರಿಗೆ ಸಿಗುತ್ತಿರುವ ಮೀಸಲಾತಿ

In Public domain. Digitization Muthulakshmi Research Academy
ಮತ್ತು ಇತರ ಸೌಲಭ್ಯಗಳು ಕಡಿತವಾಗುತ್ತದೆ' ಎಂದು ತಿಳಿಸಿ ಮುಖ್ಯಮಂತ್ರಿಗಳನ್ನು ಇಕ್ಕಟ್ಟಿಗೆ ಸಿಲುಕಿಸಿದ್ದಾರೆಂದು ವರದಿ ಮಾಡಿತ್ತು. ಹಳೆಹುಲಿ ಸಿ.ಕೆ.ಜಾಫರ್ ಷರೀಫ್ ಸರಕಾರಕ್ಕೆ ಎಚ್ಚರಿಕೆ ಕೊಡುವ ಹೇಳಿಕೆಯನ್ನೂ ನೀಡಿದರು 'ಸರ್ಕಾರ ಈ ಬಗ್ಗೆ ಎಚ್ಚರಿಕೆ ವಹಿಸಬೇಕು. ಇಲ್ಲವಾದರೆ ಮುಸ್ಲಿಂ ಮತ್ತು ಲಿಂಗಾಯತ ಸಮುದಾಯದ ಬೆಂಬಲ ಕಳೆದುಕೊಳ್ಳಬಹುದು' ಎಂದು ಅಭಿಪ್ರಾಯಪಟ್ಟಿದ್ದರು. ವರದಿಯ ಪ್ರತಿಗಳು ಮಾಧ್ಯಮದವರಿಗೂ ತಲುಪಿದ್ದವು. ವರದಿಯ ಮುಖ್ಯ ಅಂಶಗಳನ್ನು ಪ್ರಜಾವಾಣಿ ಪತ್ರಿಕೆ ತನ್ನ ಮಾರ್ಚ್ ೧೬, ೨೦೧೮ರಲ್ಲಿ ವಿಸ್ತಾರವಾಗಿ ಪ್ರಕಟಿಸಲಿತ್ತು. ಅದರ ಹಿಂದಿನ ದಿನ ಮಾರ್ಚ್ ೧೫ರಂದು ಸುವರ್ಣ ನ್ಯೂಸ್ ಟಿ.ವಿ. ಡಿಬೆಟ್‌ನಲ್ಲಿ ನಾನು ಭಾಗವಹಿಸಿ ಮಾತಾಡುವ ಸಮಯದಲ್ಲಿ ವರದಿಯ ಮೇಲೆ ಅಭಿಪ್ರಾಯ ಕೇಳಿದರು. 'ವರದಿಯ ಬಗ್ಗೆ ನನಗೇನು ತಿಳಿಯದು ಕಾರಣ ನ್ಯಾಯಮೂರ್ತಿ ನಾಗಮೋಹನದಾಸ್ ವರದಿ ಗೌಪ್ಯ ವರದಿ' ಎಂದು ಬಲವಾಗಿ ಪ್ರತಿಪಾದಿಸಲಾರಂಭಿಸಿದ್ದೆ. ಅದಕ್ಕೆ ವೀರಶೈವ ಮಹಾಸಭೆಯ ಪದಾಧಿಕಾರಿಯಾದ ಸಚ್ಚಿದಾನಂದ ಮೂರ್ತಿಯವರು ವರದಿಯ ಕಾಗದಗಳು ರದ್ದಿ ಅಂಗಡಿಯಲ್ಲಿ ಬಿಕರಿಯಾಗುತ್ತಿವೆ ಎಂದು ನನ್ನನ್ನು ಅಪಹಾಸ್ಯ ಮಾಡಿ ವಾದ ಮಾಡಿದ್ದರು. ಅನೇಕ ಮಾಧ್ಯಮಗಳು ವರದಿಯನ್ನು ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಿಸಲಾರಂಭಿಸಿದ್ದರು. ಒಬ್ಬ ಪತ್ರಿಕಾ ವರದಿಗಾರ ವರದಿಯಲ್ಲಿರುವ ಅಧ್ಯಾಯಗಳಲ್ಲಿರುವ ವಿವರಗಳನ್ನು ಸಹ ನನಗೂ ಕೂಡ ನೀಡಿದ್ದ. ಐದು ಅಧ್ಯಾಯಗಳಿರುವ ವರದಿಯೆಂದು ಹೇಳಿದ್ದ.

ವರದಿಯ ಮುಖ್ಯ ಅಂಶಗಳನ್ನು ಪ್ರಜಾವಾಣಿ ಪತ್ರಿಕೆ ತನ್ನ ಮಾರ್ಚ್ ೧೬, ೨೦೧೮ರಲ್ಲಿ ವಿಸ್ತಾರವಾಗಿ ಪ್ರಕಟಿಸಿತ್ತು.

'ಲಿಂಗಾಯತ ಹಿಂದೂಧರ್ಮದ ಭಾಗವಲ್ಲ. ಹಿಂದೂ ಎಂದು ಈಗ ಕರೆದುಕೊಳ್ಳುತ್ತಿರುವ ವೈದಿಕ ಅಥವಾ ಮನುಧರ್ಮ ವರ್ಣವ್ಯವಸ್ಥೆಯ ವಿರುದ್ಧ ಹೋರಾಟ ನಡೆಸಿ ಜೀವ ತಳೆದ ಹೊಸ ಕ್ರಾಂತಿಕಾರಿ ಧರ್ಮ ಎಂದು ವೀರಶೈವ ಲಿಂಗಾಯತ ಧರ್ಮಕ್ಕೆ ಮಾನ್ಯತೆ ನೀಡುವ ಸಂಬಂಧ ಅಧ್ಯಯನ ನಡೆಸಲು ರಾಜ್ಯ ಸರಕಾರ ರಚಿಸಿದ್ದ ತಜ್ಞರ ಸಮಿತಿ ಪ್ರತಿಪಾದಿಸಿದೆ'.

'ಲಿಂಗಾಯತ, ಲಿಂಗವಂತ ಅಥವಾ ಲಿಂಗಾಯತ ಧರ್ಮ' ಎಂಬ ಅಧ್ಯಾಯದಲ್ಲಿ ಮೇಲು ಕೀಳಿನ ಶ್ರೇಣೀಕರಣದ ವ್ಯವಸ್ಥೆಯನ್ನು ಪಾಲಿಸುತ್ತಿದ್ದ ವೈದಿಕ ಅಥವಾ ಬ್ರಾಹ್ಮಣಧರ್ಮಕ್ಕೆ ವಿರುದ್ಧವಾಗಿ ಕಾಯಕಜೀವಿಗಳ ಚಳುವಳಿ ಹೇಗೆ ರೂಪಗೊಂಡಿತು ಎಂದು ತಜ್ಞರ ಸಮಿತಿ ಸರಕಾರಕ್ಕೆ ಕೊಟ್ಟಿರುವ ೨೧೦ ಪುಟಗಳ ವರದಿಯಲ್ಲಿ ವಿವರಿಸಲಾಗಿದೆ.

'ಲಿಂಗಾಯತಕ್ಕೆ ಸ್ಪಷ್ಟ ಇತಿಹಾಸವಿದೆ. ಪುರಾಣಕಲ್ಪಿತ ಪರಂಪರೆಯಲ್ಲ.

In Public domain, Digitization Muthulakshmi Research Academy
ಹನ್ನೆರಡನೆಯ ಶತಮಾನದಲ್ಲಿ ಜರುಗಿರುವ ಹೋರಾಟದ ಇತಿಹಾಸ ಕನ್ನಡ ನೆಲದಲ್ಲಿ ಕನ್ನಡ ಭಾಷೆಯನ್ನು ಧರ್ಮದ ಪರಿಭಾಷೆಯಾಗಿ ಬಳಸಿದ ಬೆಳೆಸಿದ ಚಳುವಳಿ ಸಂಸ್ಕೃತಕ್ಕೆ ಪರ್ಯಾಯವಾಗಿ ಇಲ್ಲಿನ ನೆಲದ ಭಾಷೆಯಲ್ಲಿ ಧಾರ್ಮಿಕ ವಿದಿವಿಧಾನಗಳನ್ನು ಅರ್ಥೈಸಿದ ಧರ್ಮ' ಎಂದು ತಜ್ಞರ ವರದಿ ಸ್ಪಷ್ಟವಾಗಿ ಹೇಳಿದೆ.

'ಲಿಂಗಾಯತ ಧರ್ಮತತ್ವ' ಲಿಂಗಾಯತವು ಒಂದು ಧರ್ಮ ಎಂಬುದನ್ನು ಪ್ರತಿಪಾದಿಸಲು ಅದಕ್ಕೆ ಇರುವ ವೈಶಿಷ್ಟ್ಯಗಳೇನು ಎಂಬುದನ್ನು ವರದಿ ವಿಶ್ಲೇಷಿಸಿದೆ. ವಚನ ಚಳುವಳಿಯ ಬಹುದೊಡ್ಡ ಶಕ್ತಿ ಎಂದರೆ ಧರ್ಮವನ್ನು ಪ್ರಜಾಪ್ರಭುತ್ವದ ಮಾದರಿಯಲ್ಲಿ ನಿರ್ವಚಿಸಿರುವುದು. ಏಕಾಭಿಪ್ರಾಯಕ್ಕಿಂತ ಬಹುತ್ವದ ಅಭಿಪ್ರಾಯಗಳನ್ನು ಗೌರವಿಸಿದ್ದು ವಚನಧರ್ಮದ ವಿಶೇಷ. 'ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ' ಎಂಬ ವಚನವೇ ಎಲ್ಲರನ್ನು ಒಳಗೊಳ್ಳುವ, ಯಾರನ್ನೂ ದ್ವೇಷಿಸದ, ನಿರ್ಬಂಧಿಸದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಧ್ವನಿಸುತ್ತದೆ' ಎಂದು ವರದಿ ಉಲ್ಲೇಖಿಸಿದೆ.

ಪ್ರತಿಯೊಂದು ಧರ್ಮಕ್ಕೂ ಅದರದ್ದೇ ಆದ ತಾತ್ವಿಕ ಆಚಾರ ವಿಚಾರಗಳನ್ನು ಸಾರುವ ಪಠ್ಯ ಇರುತ್ತದೆ. ವೈದಿಕ ಧರ್ಮಕ್ಕೆ ವೇದಾಗಮ, ಶಾಸ್ತ್ರ ಪುರಾಣಗಳು ಇದ್ದಂತೆ, ಮುಸ್ಲಿಮರಿಗೆ ಕುರಾನ್, ಕ್ರೈಸ್ತರಿಗೆ ಬೈಬಲ್ ಇದ್ದಂತೆ ಲಿಂಗಾಯತರಿಗೆ ವಚನಗಳೇ ಧಾರ್ಮಿಕ ಪಠ್ಯಗಳಾಗಿವೆ. ಹಿಂದೂಗಳು ಎಂದು ಕರೆದುಕೊಳ್ಳುವವರು ಸಂಸ್ಕೃತದ ಮಂತ್ರಗಳನ್ನೇ ನೆಚ್ಚಿಕೊಂಡರೆ ಲಿಂಗಾಯತರ ಮನೆಗಳಲ್ಲಿನ ಧಾರ್ಮಿಕ ಕಾರ್ಯಕ್ರಮಗಳು ವಚನಮಯವಾಗಿರುತ್ತವೆ. ವಚನಗಳೇ ಸ್ತುತಿ, ಸ್ತಿತಿ ಹಾಗೂ ಪರಮಗಂತವ್ಯ. ಇದು ಲಿಂಗಾಯತರ ಧಾರ್ಮಿಕ ವಿಧಿವಿಧಾನ ಎಂದು ವರದಿ ಹೇಳಿದೆ.

'ಧರ್ಮವೆಂದ ಮೇಲೆ ಧರ್ಮಗುರು ಇರುವುದು ಸಹಜ. ಈ ಚಳುವಳಿಯ ನೇತೃತ್ವ ವಹಿಸಿದ್ದು ಬಸವಣ್ಣ. ವರ್ಣವ್ಯವಸ್ಥೆಯಲ್ಲಿ ಅಸ್ಪೃಶ್ಯರು, ಪಂಚಮರು, ಶ್ವಪಚರು, ಚಂಡಾಲರು, ಹೊಲೆಯರು ಮಾದಿಗರನ್ನು ಕೀಳಾಗಿ ಕಾಣಲಾಗುತ್ತಿತ್ತು. ಅಂತಹ ಜನರ ಜತೆಗೆ ಗುರುತಿಸಿಕೊಂಡ ಬಸವಣ್ಣ ಅಪವರ್ಣೀಕರಣಗೊಂಡು ವೈದಿಕರ ಪವಿತ್ರೀಕರಣಕ್ಕೆ ವಿರುದ್ಧವಾಗಿ ಹೋರಾಟ ನಡೆಸಿದವರು. ಅವರದ್ದು ಬ್ರಾಹ್ಮಣ್ಯದ ವಿರೋಧದ ಉಗ್ರಮಾರ್ಗ. ಹೀಗಾಗಿ ಲಿಂಗಾಯತ ಎನ್ನುವುದು ಹಿಂದೂ ಅರ್ಥಾತ್ ವೈದಿಕಕ್ಕಿಂತ ಭಿನ್ನ' ಎಂದು ವರದಿ ಹೇಳಿದೆ.

'ಬಸವಣ್ಣನವರು ಪ್ರತಿಪಾದಿಸಿದ ಕಾಯಕ, ದಾಸೋಹ, ಅಷ್ಟಾವರಣ, ಷಟ್ಸ್ಥಲಗಳೇ ಧರ್ಮಮಾರ್ಗಗಳು. ಇದು ವೈದಿಕ ಧರ್ಮಕ್ಕೆ ಪರ್ಯಾಯವಾಗಿ ಹೊಸೆದ ಜೀವನಮಾರ್ಗ. ಲಿಂಗಾಯತ ಧರ್ಮ ಬಸವಣ್ಣನ ಧರ್ಮ. ಅವರು ವೈದಿಕಕ್ಕೆ ವಿರುದ್ಧವಾಗಿ ಬೆಳಸಿದ ಪರ್ಯಾಯ ಧರ್ಮ'. 'ಲಿಂಗಾಯತರು

In Public domain. Digitization Muthulakshmi Research Academy
ಬಲಾಢ್ಯರು, ಶ್ರೀಮಂತರು ಎಂಬುದು ಸತ್ಯವಲ್ಲ ಅದರಲ್ಲಿ ೯೯ ಉಪ ಜಾತಿಗಳಿವೆ. ಈ ಜಾತಿಗಳಲ್ಲಿ ಬಹುತೇಕರು ದಲಿತ ವರ್ಗಗಳಿಂದ, ಮಧ್ಯಮ ವರ್ಗಗಳಿಂದ ಬಂದವರು ಆರ್ಥಿಕ ಮಾನದಂಡದಿಂದ ಇಂದಿಗೂ ಬಡವರಾಗಿದ್ದು ಹಿಂದುಳಿದವರಾಗಿದ್ದಾರೆ' ಎಂದು ವರದಿ ಹೇಳಿದೆ.

೨೦೧೧ರ ಜನಗಣತಿಯ ಪ್ರಕಾರ ಲಿಂಗಾಯತರ ಜನಸಂಖ್ಯೆ ಶೇಕಡ ೧೨.೩ರಷ್ಟಿದೆ. ಇವರು ಮುಸ್ಲಿಮರಿಗಿಂತ ಕೇವಲ ಶೇ.೩ರಷ್ಟು ಹೆಚ್ಚಿದ್ದಾರೆ. ಪರಿಶಿಷ್ಟ ಜಾತಿ ಜನಸಂಖ್ಯೆ ಶೇ.೧೫ರಷ್ಟಿದೆ. ಈ ಹಿನ್ನೆಲೆಯಲ್ಲಿ ಸಂಖ್ಯಾತ್ಮಕವಾಗಿ ಲಿಂಗಾಯತರು ಒಂದು ಅಲ್ಪಸಂಖ್ಯಾತ ಸಮುದಾಯದವರೇ ಆಗಿದ್ದಾರೆ ಎಂದು ಪ್ರಸ್ತಾಪಿಸುವ ವರದಿಯು ಇದಕ್ಕಾಗಿ ಹಿಂದುಳಿದ ವರ್ಗಗಳ ಸ್ಥಿತಿಗತಿ ಅಧ್ಯಯನಕ್ಕಾಗಿ ರಾಜ್ಯ ಸರ್ಕಾರ ರಚಿಸಿದ್ದ ಆಯೋಗ ಸಮಿತಿಯ ವರದಿಯ ಅಂಕಿ ಅಂಶಗಳನ್ನು ನೀಡಿದೆ. ವೈದಿಕ ಧರ್ಮ ಪ್ರತಿಪಾದಿಸುವ ವೇದಪ್ರಮಾಣ ಹಾಗೂ ವೇದಾಗಮ ಶಾಸ್ತ್ರ ಪುರಾಣಗಳನ್ನು ತಿರಸ್ಕರಿಸಿರುವುದು. ಅದಕ್ಕೆ ಪರ್ಯಾಯವಾಗಿ ವಚನಗಳೇ ಪ್ರಮಾಣ ಎನ್ನುವುದು. ವೈದಿಕ ಧರ್ಮ ನಂಬುವ ಮೂಢನಂಬಿಕೆ, ವಾಸ್ತು, ಜೋತಿಷ್ಯ, ಪಂಚಾಂಗ, ವಾರ, ನಕ್ಷತ್ರ, ತಿಥಿಗಳನ್ನು ವಿರೋಧಿಸುವುದು. ಕಂದಾಚಾರಗಳನ್ನು ನಿರಾಕರಿಸುವುದು. ವೈದಿಕ ಧರ್ಮದಲ್ಲಿ ಬಹುದೇವೋಪಾಸನೆ ಇದ್ದರೆ, ಲಿಂಗಾಯತದಲ್ಲಿ ಏಕದೇವೋಪಾಸನೆ ಇದೆ. ನಿರಾಕಾರನಾದ ಪರಮಾತ್ಮನನ್ನು ಇಷ್ಟಲಿಂಗ ರೂಪದಲ್ಲಿ ಪೂಜಿಸುವುದು ಲಿಂಗಾಯತ ಮಾರ್ಗ. ವೈದಿಕ ಧರ್ಮದಲ್ಲಿ ಜಾತಿ ಲಿಂಗ ಭೇದಗಳಿವೆ ಆದರೆ ಶುದ್ಧ ಲಿಂಗಾಯತದಲ್ಲಿ ಜಾತಿ ಮತ್ತು ಲಿಂಗಭೇದಕ್ಕೆ ಅವಕಾಶವೇ ಇಲ್ಲ. ವೈದಿಕ ಧರ್ಮದಲ್ಲಿ ಶೂದ್ರರು ಮತ್ತು ಮಹಿಳೆಯರಿಗೆ ಮೋಕ್ಷ ಸಿಗುವುದಿಲ್ಲ. ವೇದ ಓದುವಂತಿಲ್ಲ, ಯಜ್ಞ ಮಾಡುವಂತಿಲ್ಲ, ಸಂಸ್ಕಾರ ಯೋಗ್ಯರೂ ಅಲ್ಲ. ಆದರೆ ಲಿಂಗಾಯತದಲ್ಲಿ ಇಷ್ಟಲಿಂಗ ದೀಕ್ಷೆಗೆ ಎಲ್ಲರೂ ಬಾಧ್ಯರು. ವರ್ಣ ಲಿಂಗತಾರತಮ್ಯ ಇಲ್ಲ (ಪ್ರಜಾವಾಣಿ, ಮಾರ್ಚ್ ೧೬, ೨೦೧೮)

ನ್ಯಾಯಮೂರ್ತಿ ನಾಗಮೋಹನದಾಸ್ ವರದಿಯ ನಿರ್ಣಯಗಳು (ಸಮಿತಿಯ ಮುಂದೆ ಉದ್ಭವವಾದ ಪ್ರಮುಖ ವಿವಾದಾಂಶಗಳು)

ಪ್ರಶ್ನೆ ಒಂದು: ವೀರಶೈವ ಲಿಂಗಾಯತ ಧರ್ಮ ಯಾವಾಗ ಹುಟ್ಟಿತು?

ಅ. ಲಿಂಗಾಯತ/ ವೀರಶೈವ ಧರ್ಮವು ಯಾವಾಗ ಸ್ಥಾಪಿಸಲ್ಪಟ್ಟಿತು ಎಂಬುದು ಸಮಿತಿಯು ನಡೆಸಿದ ವಿಚಾರಣೆಯಲ್ಲಿ ವೀರಶೈವರ ಗುಂಪುಗಳು ಸ್ಪಷ್ಟವಾದ ಮತ್ತು ನಂಬಲರ್ಹವಾದ ಐತಿಹಾಸಿಕ ಪುರಾವೆಗಳನ್ನು ನೀಡಿಲ್ಲ. ವೀರಶೈವ ವಿದ್ವಾಂಸರು ಸೂಚಿಸುವಂತೆ ವೀರಶೈವವೆಂಬ ಧರ್ಮದ

In Public domain. Digitization Muthulakshmi Research Academy

ಸ್ಥಾಪನೆಯ ಕಾಲವನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲವೆಂದು ಬಹುಶಃ ಅದು ಹಿಂದೂಧರ್ಮದಷ್ಟೇ ಹಳೆಯದೆಂಬ ಅಭಿಪ್ರಾಯ ಒಪ್ಪುವಂಥಾದ್ದಲ್ಲ. ಕಾರಣವೆಂದರೆ ವೀರಶೈವ ಎಂಬ ಹಿಂದೂಧರ್ಮದ ಪಂಥವು ಬಹಳ ವಿಶಿಷ್ಟವೆಂದು ಅನೇಕರು ಹೇಳುತ್ತಿರುವುದರಿಂದ ಈ ವಿಶಿಷ್ಟತೆಗಳು ಅಂದಾಜು ಯಾವ ಕಾಲದಲ್ಲಿ ಹುಟ್ಟಿರಬಹುದು ಎಂದು ತಿಳಿಯಲು ನಂಬಲರ್ಹವಾದ ಮಾಹಿತಿ ನೀಡಲು ಆ ಗುಂಪುಗಳಿಗೆ ಸಾಧ್ಯವಾಗಿಲ್ಲ.

ಆ. "ಸಿದ್ಧಾಂತ ಶಿಖಾಮಣಿ" ಎಂಬ ಗ್ರಂಥದಲ್ಲಿನ ಅಂಶಗಳನ್ನು ಒಪ್ಪಿದರೆ ವೀರಶೈವ ಧರ್ಮವು ಕೃತಯುಗದಷ್ಟು ಹಳೆಯದೆಂದು ನಂಬಬೇಕಾಗುತ್ತದೆ. ಹಿಂದೂ ಕಾಲಮಾನದಂತೆ ಅದು ನಲ್ವತ್ತೆರಡು ಲಕ್ಷ ಇಪ್ಪತ್ತು ಸಾವಿರ ವರ್ಷ ಹಳೆಯದು ಎಂದಾಗುತ್ತದೆ. ವಿಕಾಸ ಜೀವಶಾಸ್ತ್ರಜ್ಞರ ಮತ್ತು ಮಾನವಶಾಸ್ತ್ರಜ್ಞರ ಪ್ರಕಾರ ಪೃಥ್ವಿಯ ಮೇಲೆ ಈಗಿನ ರೂಪದಲ್ಲಿ ಮನುಷ್ಯರು ವಿಕಾಸ ಹೊಂದಿದ್ದು ಕೇವಲ ನಲವತ್ತು ಸಾವಿರ ವರ್ಷಗಳ ಹಿಂದೆ. ಈಗಿನಂತಹ ಮಾನವ ಸಮಾಜಗಳು ಹುಟ್ಟಿಕೊಂಡಿದ್ದು ಅತಿ ಹೆಚ್ಚೆಂದರೆ ಹತ್ತು ಹದಿನೈದು ಸಾವಿರ ವರ್ಷಗಳ ಹಿಂದೆ. ಮಾನವ ಸಮಾಜವೇ ರೂಪಗೊಳ್ಳದ ಕಾಲಮಾನದಲ್ಲಿ ಧರ್ಮವೆಂಬ ಸಂಸ್ಥೆ ಇತ್ತೆಂದು ಮತ್ತು ಅದುವೇ 'ವೀರಶೈವ' ಎಂದು ತಿಳಿಯುವುದು ಅಸಂಬದ್ಧ. ಆದ್ದರಿಂದ ಈ ವಾದವು ವೈಜ್ಞಾನಿಕವಲ್ಲ ಮತ್ತು ಒಪ್ಪುವಂತದ್ದೂ ಅಲ್ಲ. ಆದ್ದರಿಂದ ಸಿದ್ಧಾಂತ ಶಿಖಾಮಣಿಯಂತೆ ವೀರಶೈವದ ಕಾಲಮಾನವನ್ನು ನಿರ್ಧರಿಸುವುದು ಸರಿಯಲ್ಲ. ಶಿದ್ದಾಂತಶಿಖಾಮಣಿಯ ಬಹುತೇಕ ಆಧಾರಗಳೆಲ್ಲ ಪೌರಾಣಿಕವಾಗಿವೆ. ಪುರಾಣಗಳು ಇತಿಹಾಸವಲ್ಲ. ಅವುಗಳಿಂದ ಕೆಲವು ಇತಿಹಾಸದ ಅಂಶಗಳನ್ನು ಉಹಿಸಬಹುದು. ಆದಾಗ್ಯೂ ಆಯಾ ಪುರಾಣಗಳ ಕಾಲವನ್ನು ವೀರಶೈವರ ಗುಂಪು ನೀಡಿಲ್ಲ.

ಇ. ಹರಪ್ಪಾ ಮೊಹೆಂಜೊದಾರೋದಲ್ಲಿ ದೊರೆತ ಅವಶೇಷಗಳ ಪ್ರಕಾರ ಶೈವ ಧರ್ಮವು ಆಗಿನ ದ್ರಾವಿಡರ ಧರ್ಮವಾಗಿತ್ತೆಂಬ ವೈಜ್ಞಾನಿಕವಾದ ಅಭಿಪ್ರಾಯವನ್ನು ನಂಬಬಹುದು. ಶೈವಧರ್ಮವು ಕಾಲಾಂತರದಲ್ಲಿ ವೈದಿಕ ಹಿಂದೂಧರ್ಮದಲ್ಲಿ ಸಮ್ಮೇಳನಗೊಂಡಿದ್ದು ಈಗಿನ ಹಿಂದೂಧರ್ಮದಲ್ಲಿ ವೈದಿಕ ಮತ್ತು ಆಗಮಿಕ ಪರಂಪರೆಗಳು ಇವೆ ಎಂಬುದು ಸತ್ಯ.

ಈ. ಹರಪ್ಪಾ ಮೊಹೆಂಜೊದಾರೋದಲ್ಲಿನ ಮಾಹಿತಿಯ ಮೂಲ ಶೈವಧರ್ಮಕ್ಕೆ ಸಂಬಂಧಿಸಿದೆ. ಆದರೆ ಕಾಲಾಂತರದಲ್ಲಿ ಶೈವಧರ್ಮ ಒಡೆದುಹೋಯಿತು. ಮೂಲಶೈವವು ಬಹಳಷ್ಟು ಬದಲಾಗಿದ್ದು, ಹೊಸ ಪಂಥಗಳು ಪಾಶುಪತ, ಕಾಳಾಮುಖ, ಲಕುಲೀಶ, ನಾಥ, ಕಾಪಾಲಿಕ, ಕಾಶ್ಮೀರಿಶೈವ, ತಮಿಳುಶೈವ ಇತ್ಯಾದಿ

In Public domain. Digitization Muthulakshmi Research Academy

ಹುಟ್ಟಿಕೊಂಡವು. ಅವುಗಳಲ್ಲಿ ವೀರಶೈವವೂ ಒಂದು ಎಂದು ಸಾಬೀತುಪಡಿಸಲು ವೀರಶೈವ ಗುಂಪಿನ ಲೇಖಕರು ನೀಡಿದ ಮಾಹಿತಿ ಸಾಕಾಗುವುದಿಲ್ಲ. ಹೆಚ್ಚು ಮಾಹಿತಿಯ ಅಗತ್ಯವಿದೆ. ಅಂತಹ ಮಾಹಿತಿಯು ಪೌರಾಣಿಕವಾಗಿದ್ದರೆ ಅದರಿಂದ ಹೆಚ್ಚು ಪ್ರಯೋಜನವಿಲ್ಲ.

ಉ. ತಾವು ವಿಶೇಷ ಪಂಥವೆಂದು ಹೆಮ್ಮೆಪಟ್ಟುಕೊಳ್ಳುವ ವೀರಶೈವರು ಆ ವಿಶೇಷತೆಗಳು ಯಾವಾಗ ಹುಟ್ಟಿ ತಮಗೆ ವಿಶಿಷ್ಟತೆಯನ್ನು ನೀಡಿದವು ಎಂಬುದನ್ನು ಸಮರ್ಥಿಸಿಕೊಳ್ಳಬೇಕು. ಅದರ ನಿಖರ ಕಾಲಮಾನದ ಬಗ್ಗೆ ಯಾರೂ ಹೆಚ್ಚಿನ ಮಾಹಿತಿ ನೀಡಿಲ್ಲ. ಮೇಲೆ ವಿವರಿಸಿದಂತೆ ವೀರಶೈವರ ಗುಂಪಿನ ಬಹುತೇಕ ಲೇಖಕರು ಮೂಲಶೈವದ ಇತಿಹಾಸವೇ ತಮ್ಮ ಇತಿಹಾಸವೆಂದು ವಾದಿಸುತ್ತಾರೆ. ಇದು ಪೂರ್ಣಸತ್ಯವಲ್ಲ.

ಊ. ವೀರಶೈವವು ಶೈವದ ಒಂದು ಪಂಥವಾಗಿ ಹಿಂದೂಧರ್ಮದ ಒಂದು ಭಾಗವೆಂಬುದನ್ನು ತಿರಸ್ಕರಿಸಲಾಗದಿದ್ದರೂ ಮೂಲಶೈವದಿಂದ ವೀರಶೈವವೆಂಬ ವಿಶಿಷ್ಟ ಪಂಥವು ಯಾವಾಗ ಹುಟ್ಟಿತು ಎನ್ನುವುದು ಮುಖ್ಯ. ಹರಪ್ಪಾ ಮೊಹೆಂಜೊದಾರೋದ ಇತಿಹಾಸವೇ ವೀರಶೈವರ ಇತಿಹಾಸವೆನ್ನುವುದು ಒಪ್ಪತಕ್ಕ ವಾದವಲ್ಲ.

ಎ. ಪಾಶುಪತವೇ ಪರಿವರ್ತನೆಗೊಂಡು ವೀರಶೈವವಾಯಿತೆಂದು ಮೇಲೆ ಹೆಸರಿಸಿದ ಅನೇಕ ಲೇಖಕರ ಅಭಿಪ್ರಾಯವಾಗಿದೆ. ಸುಮಾರು ಕ್ರಿ.ಶ. ಎರಡನೇ ಶತಮಾನದಲ್ಲಿ ಲಕುಲೀಶ ಪಾಶುಪತವು ಗುಜರಾತದಲ್ಲಿತ್ತೆಂದು ತಿಳಿದುಬರುತ್ತದೆ. ಎಲ್.ಬಸವರಾಜು ಪ್ರಕಾರ ೧೪ನೇ ಶತಮಾನದ ಮಧ್ವಾಚಾರ್ಯರು ತಮ್ಮ 'ಸರ್ವದರ್ಶನ ಸಂಗ್ರಹ'ದಲ್ಲಿ ಪಾಶುಪತದ ಪ್ರಸ್ತಾಪ ಮಾಡಿದ್ದಾರೆ. ಆದರೆ ವೀರಶೈವ ಮತ್ತು ಕಾಳಾಮುಖದ ಪ್ರಸ್ತಾಪ ಮಾಡಿಲ್ಲ. ಬಸವರಾಜು ಅವರ ಪ್ರಕಾರ ಅವರು ವೀರಶೈವ ಮತ್ತು ಪಾಶುಪತ ಎರಡೂ ಒಂದೇ ಎಂದು ತಿಳಿದಿದ್ದರಿಂದ ವೀರಶೈವದ ಬಗ್ಗೆ ಹೇಳಿಲ್ಲ. ಮುಂದುವರಿದು ಅವರು ಕಾಳಾಮುಖವು ಆಗಲೇ ವೀರಶೈವದಲ್ಲಿ ಲೀನವಾಗಿತ್ತೆಂದು ಹೇಳುತ್ತಾರೆ. ಆದರೆ ಪಾಶುಪತ ಮತ್ತು ಕಾಳಾಮುಖ ಎರಡೂ ೧೨ನೇ ಶತಮಾನದ ಬಸವಣ್ಣನ ಕಾಲದ ಲಿಂಗಾಯತದಲ್ಲಿ ಲೀನವಾಗಿ ಹೋಗಿದ್ದರೂ, ಬಹಳ ಹಳೆಯ ಪಂಥವಾಗಿದ್ದ ಪಾಶುಪತವು ಅಲ್ಲಲ್ಲಿ ಅಲ್ಪಸ್ವಲ್ಪ ಉಳಿದುಕೊಂಡಿದ್ದರಿಂದ ಮಧ್ವಾಚಾರ್ಯರು ಪಾಶುಪತದ ಬಗ್ಗೆ ಪ್ರಸ್ತಾಪಿಸಿದ್ದಾರೆ! ಸರ್ವದರ್ಶನ ಸಂಗ್ರಹವು ಬಸವಣ್ಣನ ಕಾಲದ ಇನ್ನೂರು ವರ್ಷಗಳ ನಂತರ ಬರೆದ ಗ್ರಂಥ. ಅರ್ಥವಿಷ್ಟೇ ವೀರಶೈವವೆಂಬ ಪಂಥ ೧೨ನೇ ಶತಮಾನದಲ್ಲಿ ಇರಲಿಲ್ಲ.

In Public domain, Digitization Muthulakshmi Research Academy

ಏ. ಎಲ್. ಬಸವರಾಜು ಅವರ ಎರಡನೆಯ ಆಧಾರವೆಂದರೆ ಅಮರಗಣಂಗಳ ಕಾಲ. ಅಮರಗಣಂಗಳು ಎಂಟು ಪ್ರಕಾರಗಳಲ್ಲಿ ಎಂಟನೆಯವರು. ಬಸವಣ್ಣ ಮತ್ತು ಅವರ ಅಸಂಖ್ಯಾತ ಶರಣರು. ಅವರಿಗಿಂತ ಮೊದಲು ಮತ್ತು ತಮಿಳು ನಾಯನ್ಮಾರರ ನಡುವಿನ ಕಾಲದಲ್ಲಿ ವೀರಶೈವರು ಇದ್ದಿರಬಹುದೆಂಬುದು ಅವರ ಊಹೆ. ಬಸವಣ್ಣನವರಿಂದ ಮೊದಲು ವೀರಶೈವವೂ ಇತ್ತೆನ್ನಲು ಅಮರಗಣಂಗಳ ಸಂಗ್ರಹವನ್ನು ಹೊರತುಪಡಿಸಿ ಅದಕ್ಕೆ ನಂಬಲರ್ಹವಾದ ಇತರ ಪ್ರಬಲ ಆಧಾರಗಳು ಇಲ್ಲ. ಅಮರಗಣಂಗಳ ಮಾಹಿತಿಯು ಪಂಡಿತಾರಾಧ್ಯರ 'ಸಹಸ್ರನಾಮ ಸಂಗ್ರಹ'ದಿಂದ ಬಂದಿದೆ. ಅಷ್ಟಕ್ಕೂ ಅಮರಗಣಂಗಳನ್ನು ಪಂಡಿತಾರಾಧ್ಯರು ಸ್ಮರಿಸಲು ಕಾರಣ ಅವರು ಯಾವುದೋ ತಪ್ಪಿಗೆ ಪಶ್ಚಾತ್ತಾಪ ಪಟ್ಟು ಸಹಸ್ರನಾಮ ಜಪ ಮಾಡಲು ಆ ಸಹಸ್ರ ಸಂಖ್ಯೆಯ ನಾಮಗಳನ್ನು ಬರೆದರು. ಅವರಲ್ಲಿ ಬರುವ ಗಣೇಶ, ನಂದಿ ಇತ್ಯಾದಿಯವರು ಭೂಲೋಕದ ಮಾನವರಲ್ಲ! ಆದರೆ ಅಲ್ಲಿ ಪ್ರಸ್ತಾಪಿಸಿದ ಸಾವಿರ ಗಣಂಗಳ ಕಾಲಾನುಕ್ರಮವು ಐತಿಹಾಸಿಕವೋ ಪೌರಾಣಿಕವೋ ಗೊತ್ತಿಲ್ಲ. ಈಗ ಪುರಾಣವನ್ನು ಲೌಕಿಕಕ್ಕೆ ಸೇರಿಸಿ ಕಾಲಮಾನ ನಿರ್ಧರಿಸುವುದು ಸರಿಯೆನಿಸುವುದಿಲ್ಲ.

ಐ. ಚಿದಾನಂದಮೂರ್ತಿಯವರು ಕ್ರಿ.ಶ. ೧೦೮೦ ಸುಮಾರಿಗೆ ವೀರಶೈವವೆಂಬ ಒಂದು ಪಂಥವು ಇದ್ದಿರಬೇಕೆಂದು ಹೇಳಿದ್ದಾರೆ. ಅವರ ವಾದಕ್ಕೆ ಆಧಾರವೆಂದರೆ ಕೊಂಡಗೂಳಿ ಕೇಶಿರಾಜ, ಜೇಡರ ದಾಸಿಮಯ್ಯ, ಏಕಾಂತದ ರಾಮಯ್ಯನೆಂಬ ಶರಣರು ಬಸವಣ್ಣನಿಗಿಂತ ಕೆಲ ವರ್ಷಗಳ ಮೊದಲೇ ಇದ್ದರೆಂಬ ನಂಬಿಕೆಯೇ ಆಗಿದೆ. ಅಲ್ಲದೆ ಈ ಮೂರು ಜನರು (ಜೇಡರ ದಾಸಿಮಯ್ಯ, ಏಕಾಂತದ ರಾಮಯ್ಯ ಮತ್ತು ಕೊಂಡಗುಳಿ ಕೇಶಿರಾಜ) ಶ್ರೇಷ್ಠ ಶೈವರಾಗಿದ್ದರು ಎಂಬುದು ಸತ್ಯ. ಅವರು ವೀರಶೈವರು ಎಂಬುದಕ್ಕೆ ಪುರಾವೆಗಳಿಲ್ಲ. ಅವರು ವಚನಗಳಲ್ಲಿ 'ವೀರಶೈವ' ಪದ ಬಂದಿಲ್ಲ. ಆದರೆ ಕೊಂಡಗುಳಿ ಕೇಶಿರಾಜನ ಗ್ರಂಥವೆಂದು ತಿಳಿಯಲ್ಪಟ್ಟ 'ಶೀಲ ಮಹತ್ವದ ಕಂದ'ದಲ್ಲಿ ವೀರಶೈವ ಮತ್ತು ಲಿಂಗಾಯತ ಎರಡೂ ಪದಗಳು ಬರುತ್ತವೆ. ಆಗ ಈ ಎರಡು ಪದಗಳು ಬಳಕೆಯಲ್ಲಿರಲಿಲ್ಲ. ಆ ಪುಸ್ತಕವನ್ನು ಬೇರೆಯವರು ಬರೆದು ಕೇಶಿರಾಜನ ತಲೆಗೆ ಕಟ್ಟಿದ್ದರೆಂದೂ ಅದು ಖೊಟ್ಟಿ ಗ್ರಂಥವೆಂದೂ ಬಿ.ವಿ.ಮಲ್ಲಾಪುರ ಮತ್ತು ಎಂ.ಎಂ.ಕಲಬುರ್ಗಿಯವರು ಹೇಳಿದ್ದಾರೆ. ಆದ್ದರಿಂದ ಚಿದಾನಂದಮೂರ್ತಿ ಅವರದು ಉಹೆಯೇ ಹೊರತಾಗಿ ನಿಶ್ಚಿತ ಸತ್ಯವಲ್ಲವೆಂದು ಬಹುತೇಕರ ಅಭಿಪ್ರಾಯವಾಗಿದೆ. ಈ ಹಿನ್ನೆಲೆಯಲ್ಲಿ ೧೨ನೇ ಶತಮಾನದ ಶತಮಾನಕ್ಕೂ ಪೂರ್ವದಲ್ಲಿ ವೀರಶೈವವೆಂಬ ಧಾರ್ಮಿಕ ಪಂಥ ಇತ್ತು ಎನ್ನಲು ಬಲವಾದ ಪುರಾವೆಗಳಿಲ್ಲ.

ಓ. ಬಸವಣ್ಣನವರ ಮುಂಚೆ ವೀರಶೈವವು ಅಸ್ತಿತ್ವದಲ್ಲಿ ಇತ್ತೆಂದು

In Public domain. Digitization Muthulakshmi Research Academy
ಊಹೆಗಳನ್ನು ನಂಬಿದರೂ ಪಂಚಪೀಠಗಳು ಮತ್ತು ಸಿದ್ಧಾಂತ ಶಿಖಾಮಣಿ ಗ್ರಂಥವು ಬಸವಣ್ಣವರ ಕಾಲದ ಬಗ್ಗೆ ಒಂದೆರಡು ಶತಮಾನಗಳ ನಂತರವೇ ಹುಟ್ಟಿಕೊಂಡವು ಎಂಬುದಕ್ಕೆ ಹೆಚ್ಚು ಸಾಕ್ಷ್ಯಾಧಾರಗಳಿವೆ. ಈ ಎರಡು (ಸಿದ್ಧಾಂತ ಶಿಖಾಮಣಿ ಮತ್ತು ಪಂಚಪೀಠಗಳು) ಬಸವಣ್ಣನ ನಂತರ ಹುಟ್ಟಿಕೊಂಡವು ಎಂದಾದರೆ ವೀರಶೈವರ ವಾದವು ತನ್ನ ಬಹಳಷ್ಟು ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಆದರೆ ವೀರಶೈವವು ಯಾವಾಗ ಹುಟ್ಟಿತು ಎನ್ನುವ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುತ್ತದೆ.

೬. ಲಿಂಗಾಯತ ಧರ್ಮವು ೧೨ನೇ ಶತಮಾನದಲ್ಲಿ ಉತ್ತರಾರ್ಧದಲ್ಲಿ ಹುಟ್ಟಿತೆಂಬ ಬಗ್ಗೆ ಕಲ್ಯಾಣ ಚಾಲುಕ್ಯರ ಆ ಕಾಲದ ಇತಿಹಾಸವು ದಾಖಲಿಸಿದೆ. ಆರು ಶಿಲಾಶಾಸನಗಳು ವಿಶೇಷವಾಗಿ ಅರ್ಜುನವಾಡದ ಶಾಸನವು ಆ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲುತ್ತದೆ. ಐದನೆಯ ಮತ್ತು ಆರನೆಯ ಅಧ್ಯಾಯಗಳಲ್ಲಿ ಹನ್ನೆರಡಕ್ಕೂ ಹೆಚ್ಚು ಐತಿಹಾಸಿಕ ಆಧಾರಗಳನ್ನು ಲಿಂಗಾಯತದ ಕಾಲಮಾನದ ಬಗ್ಗೆ ನೀಡಲಾಗಿದೆ. ೧೨ನೇ ಶತಮಾನದ ಉತ್ತರಾರ್ಧದಲ್ಲಿ ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರಿಂದ ಲಿಂಗಾಯತ ಉದಯವಾಯಿತು ಎಂದು ಸಾಕಷ್ಟು ಐತಿಹಾಸಿಕ ಮಾಹಿತಿಯನ್ನು ನಮ್ಮ ಸಮಿತಿಗೆ ನೀಡಲಾಗಿದೆ. ಆದ್ದರಿಂದ ಲಿಂಗಾಯತವು ೧೨ನೇ ಶತಮಾನದ ಉತ್ತರಾರ್ಧದಲ್ಲಿ ಸ್ಥಾಪಿಸಲ್ಪಟ್ಟಿದೆ ಎಂದು ನಮ್ಮ ಸಮಿತಿಯು ನಂಬುತ್ತದೆ ಮತ್ತು ನಿರ್ಣಯಿಸುತ್ತದೆ.

ಪ್ರಶ್ನೆ ಎರಡು: ವೀರಶೈವ/ಲಿಂಗಾಯತ ಧರ್ಮ ಸ್ಥಾಪಕರು ಯಾರು?

೧. ವೀರಶೈವ ಲಿಂಗಾಯತ ಧರ್ಮಸ್ಥಾಪಕರು ಯಾರು ಎಂಬ ಪ್ರಶ್ನೆಗೆ ಸಂಬಂಧಿಸಿದ ಉತ್ತರಗಳು ವಿವಾದಗ್ರಸ್ತವಾಗಿವೆ. ಆ ವಿವಾದವು ಕಳೆದ ನೂರೈವತ್ತು ವರ್ಷಗಳಿಂದಲೂ ನಡೆಯುತ್ತಿದೆ. ಐತಿಹಾಸಿಕವಾಗಿ ಪಂಚಾಚಾರ್ಯರು ವೀರಶೈವ ಧರ್ಮದ ಸ್ಥಾಪಕರೆಂದೂ, ವಿಶೇಷವಾಗಿ ರೇಣುಕರೆಂಬ ಆಚಾರ್ಯರು ವೀರಶೈವ ಧರ್ಮದ ಸ್ಥಾಪಕರೆಂದು ಹೇಳುವ ಅಂಶವನ್ನು ನಂಬಲು ಅರ್ಹವಾದ ಐತಿಹಾಸಿಕ ಆಧಾರಗಳು ಕಂಡುಬರುವುದಿಲ್ಲ. ಅವರ ಎಲ್ಲ ವಾದಗಳಿಗೆ ಪುರಾಣಗಳನ್ನು ಸಾಕ್ಷಿ ಎಂದು ಹೇಳುತ್ತಾರೆ. ಆ ಪುರಾಣಗಳ ಕಾಲವನ್ನಾದರೂ ಹೇಳಲು ಅವರು ಸಮರ್ಥರಾಗಿಲ್ಲ. ಅವರು ಹೇಳುವ ಅನೇಕ ಪುರಾಣಗಳು, ಕಾವ್ಯಗಳು, ಚರಿತ್ರೆಗಳು ೧೫-೧೬ನೇ ಶತಮಾನಗಳಲ್ಲಿ ಅಥವಾ ನಂತರ ಹುಟ್ಟಿವೆ ಎಂಬ ಬಗ್ಗೆ ಬಲವಾದ ಆಧಾರಗಳನ್ನು ನಮ್ಮ ಮುಂದೆ ಮಂಡಿಸಲಾಗಿದೆ (ವಾಯುಪುರಾಣ, ಸ್ಕಂದಪುರಾಣ, ಶಿವಪುರಾಣ, ಲಿಂಗಪುರಾಣಗಳು ಹಿಂದೂ ಶೈವರ ಪುರಾಣಗಳು ಅವು ಶೈವರಿಗೆ ಸಂಬಂಧಿಸಿವೆ. ಲಿಂಗಾಯತರು ಶೈವರಲ್ಲ, ವೀರಶೈವರೂ ಅಲ್ಲ ಮತ್ತು ಅಂತಹ

In Public domain. Digitization Muthulakshmi Research Academy

ಪುರಾಣಗಳನ್ನು ಅವರು ನಂಬುವುದಿಲ್ಲ). ಹಾಗೆಯೇ ವೀರಶೈವರು ಇತ್ತೀಚೆಗೆ ಬರೆಸಲ್ಪಟ್ಟ ಖೊಟ್ಟಿ ಗ್ರಂಥಗಳನ್ನು ಆಧರಿಸಿದೆ ಎಂದು ಅನೇಕ ಅಂಶಗಳನ್ನು ನಮ್ಮ ಮುಂದೆ ಸಾದರಪಡಿಸಲಾಗಿದೆ. ಆದ್ದರಿಂದ ಈ ಸಮಿತಿ ವೀರಶೈವ ಗುಂಪುಗಳು ನೀಡಿದ ತಮ್ಮ ಸಂಸ್ಥಾಪಕರ ಬಗೆಗಿನ ಅಂಶಗಳ ಬಗ್ಗೆ ಅನೇಕ ಸಂಶಯಗಳನ್ನು ವ್ಯಕ್ತಪಡಿಸುತ್ತದೆ ಮತ್ತು ಆ ಸಂಗತಿಗಳಿಗೆ ೧೨ನೇ ಶತಮಾನಕ್ಕಿಂತ ಪೂರ್ವದ ನಂಬಲರ್ಹವಾದ ಐತಿಹಾಸಿಕ ಆಧಾರಗಳು ಸಿಗುತ್ತಿಲ್ಲವೆಂದು ಅಭಿಪ್ರಾಯಪಟ್ಟಿದೆ.

ಇದಕ್ಕೆ ವಿರುದ್ಧವಾಗಿ ಬಸವಣ್ಣನವರ ಬಗ್ಗೆ ಸಲ್ಲಿಸಿದ ಧಾರ್ಮಿಕ ಸಾಮಾಜಿಕ ಮತ್ತು ಐತಿಹಾಸಿಕ ಆಧಾರಗಳು ಅವರ ವಿಚಾರ, ಆಚಾರ ಮತ್ತು ಜೀವನವನ್ನು ಕುರಿತ ಅಂಶಗಳು ಐತಿಹಾಸಿಕ ಆಧಾರಗಳಿಂದ ಕೂಡಿವೆ ಎನ್ನುವುದಕ್ಕೆ ಹೆಚ್ಚು ವಿವಾದಗಳು ಕಂಡುಬಂದಿಲ್ಲ. ವೀರಶೈವರು ಕೆಲವು ಧಾರ್ಮಿಕ ಅಂಶಗಳನ್ನು ಮೊದಲು ತಮ್ಮ ಧರ್ಮವು ಸಾರಿತು (ಇಷ್ಟಲಿಂಗ, ಜಾತಿ ನಿರಾಕರಣೆ, ಅಷ್ಟಾವರಣ, ಷಟಸ್ಥಲ) ಎನ್ನುವುದು ಪ್ರಶ್ನಾರ್ಹವಾಗಿದೆ. ೧೨ನೇ ಶತಮಾನದ ಪೂರ್ವದಲ್ಲಿ ಅಲ್ಲಲ್ಲಿ ಚೆದುರಿದಂತೆ ರುದ್ರಾಕ್ಷಿ ಮಂತ್ರ, ವಿಭೂತಿಯಂತಹ ಅಂಶಗಳನ್ನು ಸೇರಿಸಿ ಒಂದೇ ಒಂದು ಸಿದ್ಧಾಂತವನ್ನು ಮೊದಲು ರಚಿಸಿದವರು ಬಸವಣ್ಣ ಎಂಬ ಅನೇಕ ಪುರಾವೆಗಳಿವೆ. ಜಂಗಮ ಎಂಬ ಪರಿಕಲ್ಪನೆ ೧೨ನೇ ಶತಮಾನಕ್ಕಿಂತ ಮೊದಲು ಇರಲಿಲ್ಲ ಎಂದು ಕಂಡುಬಂದಿದೆ. ಲಿಂಗವೆಂಬುದು ಮೂಲತಃ ಆಗಮಿಕ ಕಲ್ಪನೆ. ಗುರು ಮತ್ತು ಪ್ರಸಾದವೆಂಬುದು ಹಳೆಯದು. ಆದರೆ ಗುರು, ಲಿಂಗ, ಜಂಗಮ, ಪ್ರಸಾದ, ವಿಭೂತಿ, ರುದ್ರಾಕ್ಷಿ ಮಂತ್ರಗಳನ್ನು ಪಾದೋದಕದೊಂದಿಗೆ ಸಮೀಕರಿಸಿ ಒಂದು ಏಕೀಕೃತ 'ಅಷ್ಟಾವರಣ' ಸಿದ್ಧಾಂತವನ್ನು ಸ್ಥಾಪಿಸಿದವರು ಮೊತ್ತಮೊದಲು ಬಸವಣ್ಣನವರೇ ಎಂದು ಲಿಂಗಾಯತದ ಗುಂಪು ಸಾಬೀತುಪಡಿಸಿದೆ. ಅಲ್ಲದೆ ಮೂಲ ಕಲ್ಪನೆಗಳಿಗಿಂತ ಭಿನ್ನವಾದ ವಿಸ್ತೃತವಾದ ಅರ್ಥಗಳನ್ನು ಇವುಗಳಿಗೆ ಬಸವಾದಿ ಶರಣರು ಕಂಡುಕೊಂಡರು ಎಂದು ತಿಳಿದುಬಂದಿದೆ. ಅದಕ್ಕೆ ವಿರುದ್ಧವಾದ ಅಂಶಗಳನ್ನು ವೀರಶೈವರ ಗುಂಪುಗಳು ನೀಡಿಲ್ಲ. ಅದೇ ರೀತಿ ಷಟ್ಸ್ಥಲ ಸಿದ್ಧಾಂತವನ್ನು ಹೊಸ ಬಗೆಯಲ್ಲಿ ಕ್ರೋಡೀಕರಿಸಿ ಏಕೀಕೃತಗೊಳಿಸಿದವರೂ ಬಸವಣ್ಣನವರೆಂದು ಸಿದ್ಧ ಮಾಡಲಾಗಿದೆ. ಜಾತಿ ನಿರಾಕರಣೆಗೆ ವೀರಶೈವರಲ್ಲಿ ವಿರುದ್ಧವಾದ ಆಚರಣೆಗಳಿರುವುದನ್ನು ಮತ್ತು ಅದಕ್ಕೆ ಅವರ ಗ್ರಾಂಥಿಕ ಆಧಾರಗಳನ್ನು ಲಿಂಗಾಯತ ಗುಂಪು ನೀಡಿದೆ.

ಕೊನೆಯದಾಗಿ ಲಿಂಗವೆಂಬ ಕಲ್ಪನೆ ಮೂಲತಃ ಆಗಮಿಕವಾಗಿದ್ದರೂ ಲಿಂಗಾಯತರ 'ಇಷ್ಟಲಿಂಗ' ಹಳೆಯ ಎಲ್ಲ ಪರಿಕಲ್ಪನೆಗೆ ಮೀರಿದ್ದು. ಅದು ಸ್ಥಾವರ ಲಿಂಗದ ಪ್ರತಿರೂಪವೂ ಅಲ್ಲ, ಕಣ್ಣಿಗೆ ಕಾಣುವ ಬಾಹ್ಯಬಿಂಬವೂ ಅಲ್ಲ, ಹೃದಯದಲ್ಲಿರುವ ದೇವಾಂಶದ ಪ್ರತೀಕ ಮಾತ್ರ, ಕಾರಣವೆಂದರೆ ಲಿಂಗಾಯತರ

In Public domain. Digitization Muthulakshmi Research Academy

'ಶಿವ' ಸಾಕಾರ ದೇವರಲ್ಲ. ಅವನು ನಿರಾಕಾರಿ. ಅವನ ರೂಹುಗಳನ್ನು ಬಸವಣ್ಣನ ವಚನ ಹೀಗೆ ಹೇಳಿದೆ. ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ ಪಾತಾಳದಿಂದಣಿತ್ತ ನಿಮ್ಮ ಶ್ರೀಚರಣ ಬ್ರಹ್ಮಾಂಡದಿಂದನೆ ಅತ್ತತ್ತ ನಿಮ್ಮ ಶ್ರೀಮಕುಟ ಆಗಮ್ಯ ಅಗೋಚರ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ' ಪುರಾಣಗಳು ಶಿವನಂತೆ ಲಿಂಗಾಯತ ಶಿವನಿಗೆ ಪಾರ್ವತಿ, ಗಂಗೆ, ದಾಕ್ಷಾಯಿಣಿಯಂತಹ ಹೆಂಡತಿಯರು, ಗಣೇಶ ಮತ್ತು ಕಾರ್ತಿಕೇಯರಂತಹ ಮಕ್ಕಳು, ನಂದಿಯಂತಹ ವಾಹನ ಕೈಯಲ್ಲಿ ಡಮರು-ತ್ರಿಶೂಲ ಕೊರಳಲ್ಲಿ ಹಾವು, ತಲೆಯಲ್ಲಿ ಚಂದ್ರನಿಲ್ಲ, ಇವೆಲ್ಲವುಗಳನ್ನುಳ್ಳ ಶಿವನು ಹಿಂದೂ ಶಿವ, ವೀರಶೈವರ ಶಿವ, ಆದರೆ ಲಿಂಗಾಯತರ ಶಿವನಲ್ಲ! ಲಿಂಗಾಯತರು 'ಶಿವ'ನ ಪರಿಕಲ್ಪನೆ ಹಿಂದುಗಳು ಮತ್ತು ವೀರಶೈವರ ಸಾಕಾರ ಶಿವನ ಕಲ್ಪನೆಗಿಂತ ತೀರ ಭಿನ್ನವಾಗಿದೆ. ಹೀಗಾಗಿ ವೀರಶೈವರ ವಾದವನ್ನು ಈ ಸಮಿತಿಯು ಒಪ್ಪುವುದು ಅಸಾಧ್ಯ. ಎರಡನೆಯದಾಗಿ ಪಂಚಾಚಾರ್ಯರಿಗೆ ಐತಿಹಾಸಿಕ ದಾಖಲೆಗಳು ಸಿಗುವುದು ಹದಿನೇಳನೇ ಶತಮಾನದ ನಂತರ ಮಾತ್ರ ಆದ್ದರಿಂದ ಪಂಚಾಚಾರ್ಯರು ೧೨ನೇ ಶತಮಾನಕ್ಕಿಂತ ಮೊದಲಿನವರೆಂಬ ಕಲ್ಪನೆ ಕೇವಲ ಪೌರಾಣಿಕ ಮತ್ತು ಅಂತಹ ಕೆಲವು ಪುರಾಣಗಳನ್ನು ೧೪ನೇ ಶತಮಾನದ ನಂತರ ಬರೆಯಲಾಗಿದೆ. ಮೇಲೆ ವಿವರಿಸಿರುವ ಮತ್ತು ಎರಡು ಗುಂಪುಗಳು ನೀಡಿರುವ ಮಾಹಿತಿಯನ್ನು ಪರಿಶೀಲಿಸಿ ಕೆಳಗಿನ ನಿರ್ಣಯಗಳನ್ನು ಸಮಿತಿಯು ತೆಗೆದುಕೊಂಡಿದೆ.

ಅ. ವೀರಶೈವ/ ಲಿಂಗಾಯತ ಧರ್ಮವನ್ನು ಯಾರು ಸ್ಥಾಪಿಸಿದರು ಮತ್ತು ಯಾವಾಗ ಸ್ಥಾಪಿಸಿದರು ಎನ್ನುವ ಅಂಶಗಳ ಮೇಲೆ ಏಕರೂಪದ ಉತ್ತರಗಳು ನಮ್ಮ ಮುಂದೆ ಮಂಡಿಸಿರುವ ಪುರಾವೆಗಳಲ್ಲಿ ಕಂಡುಬಂದಿಲ್ಲ. ಧರ್ಮ ಸ್ಥಾಪಕರ ಮತ್ತು ಸ್ಥಾಪನೆಯ ಕಾಲದ ವಿಷಯದಲ್ಲಿ ಭಿನ್ನಮತಗಳಿವೆ. ವೀರಶೈವ ಗುಂಪಿನ ತಜ್ಞರು ರೇವಣಸಿದ್ಧರು ಮತ್ತು ಇತರ ನಾಲ್ವರು ತಮ್ಮ ಧರ್ಮವನ್ನು ಸ್ಥಾಪಿಸಿದರೆಂದು ಹೇಳಿದರೆ, ಬಸವಣ್ಣನವರು ತಮ್ಮ ಧರ್ಮ ಸ್ಥಾಪಿಸಿದರೆಂದು ಲಿಂಗಾಯತರ ಗುಂಪು ಮತ್ತು ವಿರಕ್ತಮಠಗಳು ಪುರಾವೆಗಳನ್ನು ಸಲ್ಲಿಸಿವೆ. ಯಾವಾಗ ತಮ್ಮ ಧರ್ಮ ಸ್ಥಾಪಿಸಲ್ಪಟ್ಟಿತು ಎನ್ನುವುದನ್ನು ವೀರಶೈವ ಗುಂಪು ನಿಖರವಾಗಿ ಸಿದ್ಧ ಮಾಡಲು ಸಾಧ್ಯವಾಗಿಲ್ಲ ಮತ್ತು ಆಗುವ ಸಾಧ್ಯತೆ ಕಡಿಮೆ. ಕಾರಣವೆಂದರೆ ಅವರ ಧರ್ಮಕ್ಕೆ ಸಂಬಂಧಿಸಿದ ಆಧಾರಗಳು ಪೌರಾಣಿಕ ಕಥೆಗಳಾಗಿವೆ. ಇವುಗಳನ್ನು ನಂಬುವುದಿಕ್ಕಾಗುವುದಿಲ್ಲ. ಲಿಂಗಾಯತರು ಬಹಳಷ್ಟು ನಿಖರವಾದ ಐತಿಹಾಸಿಕ ಪುರಾವೆಗಳನ್ನು ನೀಡಿದ್ದಾರೆ.

ಆ. ವೀರಶೈವ/ಲಿಂಗಾಯತ ಸಮುದಾಯದ ಮಠಗಳಲ್ಲಿ ವಿರಕ್ತ ಮತ್ತು ಗುರುವರ್ಗ ಎಂಬ ಎರಡು ಪ್ರಕಾರಗಳಿವೆಯೆಂದು ಕಂಡುಬರುತ್ತದೆ. ವಿರಕ್ತ

In Public domain. Digitization Muthulakshmi Research Academy

ಮಠಗಳು ಬಸವತತ್ವವನ್ನು ಪಾಲಿಸುತ್ತವೆ. ಅವು ದೊಡ್ಡ ಸಂಖ್ಯೆಯಲ್ಲಿದ್ದು ದೊಡ್ಡಗಾತ್ರದ ಸಂಸ್ಥೆಗಳಾಗಿವೆ ಹಾಗೂ ಬಹುದೊಡ್ಡ ಪ್ರಮಾಣದಲ್ಲಿ ಸಮಾಜಸೇವೆಯಲ್ಲಿ ತೊಡಗಿವೆ. ತುಮಕೂರು ಚಿತ್ರದುರ್ಗ, ಗದಗ, ಮೈಸೂರು, ಭಾಲ್ಕಿ, ಇಳಕಲ್, ಧಾರವಾಡ, ಅಥಣಿ ಇತ್ಯಾದಿ ಸ್ಥಳಗಳಲ್ಲಿನ ಮಠಗಳು ಅದರ ಉದಾಹರಣೆಗಳಾಗಿವೆ. ಈ ಮಠಗಳು ಶಿಕ್ಷಣ, ಸಾಹಿತ್ಯ, ಧರ್ಮ ಪ್ರಸಾರದಂತಹ ಸಾಮಾಜಿಕ ಕಾಳಜಿಯ ಕಾರ್ಯಗಳಲ್ಲಿ ನಿರತವಾಗಿವೆ. ಗುರುವರ್ಗದ ಮಠಗಳು ಸಾಂಪ್ರದಾಯಿಕ, ಧಾರ್ಮಿಕ ಮತ್ತು ಪುರೋಹಿತರ ಕಾರ್ಯಗಳಲ್ಲಿ ತೊಡಗಿವೆ. ಗುರುವರ್ಗದವರು ಬಸವಣ್ಣನವರನ್ನು ಗೌರವಿಸುವುದು ಮತ್ತು ಅವರ ತತ್ವಗಳಿಗೆ ಮನ್ನಣೆ ನೀಡುವುದು ಕಡಿಮೆ. ಅವರು ಹೆಚ್ಚಾಗಿ ಅಡ್ಡಪಲ್ಲಕ್ಕಿ, ದಸರಾ ದರ್ಬಾರ್ ಇತ್ಯಾದಿಗಳಲ್ಲಿ ಸಕ್ರಿಯರಾಗಿರುವುದು ಮಾಧ್ಯಮಗಳಿಂದ ತಿಳಿದುಬರುತ್ತದೆ. ಅವರ ಕಾರ್ಯವೈಖರಿ ಮತ್ತು ಜೀವನಶೈಲಿ ಲಿಂಗಾಯತ ವಕ್ರಗಣ್ಣಿಗೆ ಗುರಿಯಾಗಿವೆ. ಗುರುವರ್ಗದ ರೇಣುಕಾಚಾರ್ಯ ಮತ್ತು ಇತರ ನಾಲ್ವರು ಆಚಾರ್ಯರು ವೀರಶೈವ/ ಲಿಂಗಾಯತ ಧರ್ಮವನ್ನು ಸ್ಥಾಪಿಸಿ ಪ್ರಸಾರ ಮಾಡಿದರೆಂದು ವಾದಿಸುವುದು ವಿರಕ್ತಮಠಗಳು ಮತ್ತು ಲಿಂಗಾಯತರ ಪರ ಗುಂಪು ಒಪ್ಪುವುದಿಲ್ಲ.

ಇ. ನಮ್ಮ ಮುಂದೆ ಮಂಡಿಸಿರುವ ಪುರಾವೆಗಳಿಂದ ವೀರಶೈವ/ ಲಿಂಗಾಯತ ಧರ್ಮವನ್ನು ಪಂಚಾಚಾರ್ಯರೇ ಸ್ಥಾಪಿಸಿದರು ಎಂದು ನಿರ್ಣಯಿಸುವುದು ಸಾಧ್ಯವಿಲ್ಲ. ಪುರಾವೆಗಳು ಒಂದಕ್ಕೊಂದು ತಾಳೆಯಾಗುವುದಿಲ್ಲ. ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆ ಕಾಲಮಾನವನ್ನು ಸೂಚಿಸಿದ್ದಾರೆ. ಅವರಲ್ಲಿ ಒಮ್ಮತ ಕಂಡುಬರುವುದಿಲ್ಲ. ತಾವು ಶೈವಪಂಥದಲ್ಲಿ ಬಹಳ ವಿಶಿಷ್ಟವಾದ ಪಂಗಡವೆಂದು ವಾದಿಸಿ ಅನೇಕ ಸಲ ಮೂಲಶೈವರನ್ನು ಖಂಡಿಸುವ ವೀರಶೈವರು ಮೂಲಶೈವದ ಕಾಲವೆ ತಮ್ಮ ಧರ್ಮದ ಕಾಲವೆಂದು ಅವರು ತಿಳಿದಿದ್ದರೆ ಅದನ್ನು ತಾರ್ಕಿಕವಾಗಿ ಮತ್ತು ವಸ್ತುನಿಷ್ಠವಾಗಿ ಒಪ್ಪಲು ಸಾಧ್ಯವಾಗುವುದಿಲ್ಲ.

ಈ. ಅದೇ ರೀತಿ ಸಿದ್ಧಾಂತ ಶಿಖಾಮಣಿ ಗ್ರಂಥವು ಪ್ರಶ್ನಾತೀತವಾಗಿಲ್ಲ. ಲಿಂಗಾಯತ ಗುಂಪು ನೀಡಿದ ಪುರಾವೆಗಳಲ್ಲಿ ಅದರ ಸಾಚಾತನದ ಬಗ್ಗೆ ಗಂಭೀರವಾದ ಅಂಶಗಳನ್ನು ಮತ್ತು ಅಧಾರಗ್ರಂಥಗಳಲ್ಲಿನ ಮಾಹಿತಿಯನ್ನು ಪರಿಗಣಿಸಿದರೆ ಸಿದ್ಧಾಂತ ಶಿಖಾಮಣಿಯು ಪ್ರಶ್ನಾತೀತ ಗ್ರಂಥವಲ್ಲವೆಂದು ಸಾಬೀತಾಗುತ್ತದೆ. ಅದನ್ನು ವಾದಗ್ರಸ್ತ ಗ್ರಂಥವೆಂದು ತಿಳಿಯಬೇಕಾಗುತ್ತದೆ. ಅದರಲ್ಲಿನ ಪೌರಾಣಿಕ ದಂತಕಥೆಗಳನ್ನು ಮತ್ತು ಪ್ರಶ್ನಾರ್ಹ ಐತಿಹಾಸಿಕ ಸಂಗತಿಗಳನ್ನು ನಂಬುವುದು ಕಷ್ಟ. ಸಿದ್ಧಾಂತ ಶಿಖಾಮಣಿಯ ಮೂಲ ಆಕರಗ್ರಂಥವೆಂದು ತಿಳಿಯಲು ಸಾಧ್ಯವಿಲ್ಲ. ಅದೇ ರೀತಿ ಪಂಚಾಚಾರ್ಯರು ವೀರಶೈವ/ ಲಿಂಗಾಯತ ಧರ್ಮದ ಸ್ಥಾಪಕರೆಂದು ಸಿದ್ಧವಾಗುವುದಿಲ್ಲ.

In Public domain. Digitization Muthulakshmi Research Academy

ಉ. ಬಸವಣ್ಣನವರಿಗಿಂತ ಪೂರ್ವದಲ್ಲಿ ವೀರಶೈವ ಧರ್ಮವೆಂಬುದು ಇತ್ತೆಂದು ತೃಪ್ತಿಕರವಾಗಿ ಸಾಬೀತುಪಡಿಸಲು ವೀರಶೈವರಿಗೆ ಸಾಧ್ಯವಾಗಿಲ್ಲ. ಅತಾರ್ಕಿಕ, ಅಲೌಕಿಕ, ಅಸಂಬದ್ಧ ಅಂಶಗಳುಳ್ಳ ಸಿದ್ಧಾಂತ ಶಿಖಾಮಣಿಯನ್ನು ನಂಬಲು ಸಾಧ್ಯವಿಲ್ಲ. ಅದೇ ರೀತಿ ತಮ್ಮ ಧರ್ಮದ ಐತಿಹ್ಯವನ್ನು ತೃಪ್ತಿಕರವಾಗಿ ಸಿದ್ಧ ಮಾಡಲು ಅಗತ್ಯವಿರುವ ದಾಖಲೆಗಳನ್ನು ನೀಡಿದೆ ಇರುವ ವೀರಶೈವ ಗುಂಪಿನ ವಾದವನ್ನು ಒಪ್ಪಲು ಸಾಧ್ಯವಿಲ್ಲ. ಆದ್ದರಿಂದ ರೇಣುಕರು ಮತ್ತು ಪಂಚಾಚಾರವನ್ನು ವೀರಶೈವ ಧರ್ಮದ ಸ್ಥಾಪಕರೆಂದು ನಂಬಲಾಗಿಲ್ಲ. ವೀರಶೈವ ಧರ್ಮವನ್ನು ಬಸವಣ್ಣವರು ಒಪ್ಪಿ ಅನುಸರಿಸಿದ್ದರೋ ಅಥವಾ ಬಸವಣ್ಣನವರು ತತ್ವಗಳನ್ನು ವೀರಶೈವರು ಅನುಸರಿಸಿ ನಂತರ ಅವನ್ನು ತಿದ್ದಿದರೋ ಎಂಬುದು ಬಿಡಿಸಲಾಗದ ಕಗ್ಗಂಟಾಗಿದೆ. ಅರೇಳು ನೂರು ವರ್ಷಗಳ ಅಂತರದಲ್ಲಿ ಇದು ಪರಿಹರಿಸಲಾಗದ ಪ್ರಶ್ನೆಯಾಗಿದೆ. ಸಾಮಾಜಿಕ ಪರಿಸರದ ಒತ್ತಡದಿಂದ ಲಿಂಗಾಯತರು ಕುಲುಷಿತಗೊಂಡರೋ ಅಥವಾ ವೀರಶೈವರಿಂದ ಕುಲಷಿತರಾದರೋ ಎಂಬುದು ಇನ್ನೊಂದು ಪ್ರಶ್ನೆಯಾದರೂ ಎರಡು ಕಾರಣಗಳಿಂದ ಮೂಲ ಲಿಂಗಾಯತದಲ್ಲಿ ಈಗ ಅನೇಕ ಕಲುಷಿತಾಂಶಗಳು ಸೇರಿದ್ದಂತೂ ಸತ್ಯ.

ಊ. ಎರಡೂ ಗುಂಪುಗಳು ನೀಡಿದ ಪುರಾವೆಗಳನ್ನು ಅವಲೋಕಿಸಿದರೆ ಬಸವಣ್ಣನವರೇ ಲಿಂಗಾಯತ ಧರ್ಮವನ್ನು ಸ್ಥಾಪಿಸಿದರು ಎಂದು ಹೇಳಲು ನಂಬಿಕೆಗೆ ಅರ್ಹವಾದ ಪುರಾವೆಗಳು ಸಿಕ್ಕಿವೆ. ಅದರ ವಿರುದ್ಧ ವೀರಶೈವರ ಗುಂಪು ಎತ್ತಿರುವ ಅಪಸ್ವರಗಳನ್ನು ಲಿಂಗಾಯತ ಗುಂಪು ಸಮರ್ಥವಾಗಿ ನಂಬಿಕೆಗೆ ಅರ್ಹವಾಗುವಂತೆ ನಿಷಿದ್ಧಗೊಳಿಸಿದೆ. ಆದ್ದರಿಂದ ಬಸವಣ್ಣನವರೇ ಲಿಂಗಾಯತ ಧರ್ಮದ ಸ್ಥಾಪಕರೆಂದು ನಿರ್ಣಯಿಸಲಾಗಿದೆ.

ಪ್ರಶ್ನೆ ಮೂರು: ಲಿಂಗಾಯತ ಮತ್ತು ವೀರಶೈವ ಒಂದೆಯೇ ಅಥವಾ ಬೇರೆ ಬೇರೆಯೆ?

ಲಿಂಗಾಯತ ಮತ್ತು ವೀರಶೈವ ಒಂದೆಯೇ ಅಥವಾ ಬೇರೆ ಬೇರೆಯೆ ಎಂಬುದರ ಬಗ್ಗೆ ಮೇಲ್ನೋಟಕ್ಕೆ ವೀರಶೈವ ಮತ್ತು ಲಿಂಗಾಯತರ ನಡುವೆ ಕೆಲವು ಸಾಮ್ಯಗಳಿದ್ದರೂ(ಇಷ್ಟಲಿಂಗ ಕಟ್ಟಿಕೊಳ್ಳುವುದು, ಅಷ್ಟಾವರಣ ಮತ್ತು ಷಟ್ಸ್ಥಲ ಸಿದ್ಧಾಂತಗಳಲ್ಲಿ ನಂಬಿಕೆ) ಮತ್ತು ಆಚಾರಗಳ ಆಚರಣೆಗಳಲ್ಲಿ ಅನೇಕ ಭಿನ್ನತೆಗಳಿವೆ. ಒಂದೆರಡು ಸಂಸ್ಕಾರಗಳನ್ನು ಹೊರತುಪಡಿಸಿ(ಜನನ, ಮರಣ ಮತ್ತು ಲಿಂಗದೀಕ್ಷೆ) ಉಳಿದ ಸಂಸ್ಕಾರಗಳು ಭಿನ್ನವಾಗಿವೆ ಎಂದು ಕಂಡುಬರುತ್ತದೆ. ಉಳಿದ ಬಹುತೇಕ ಸಂಗತಿಗಳಲ್ಲಿ ಸಾಮ್ಯತೆಗಳಿಂದ ಭಿನ್ನತೆಗಳು ಹೆಚ್ಚಾಗಿವೆ. ಈ ಭಿನ್ನತೆಗಳು ಒಂದಕ್ಕೊಂದು ವಿರುದ್ಧವಾಗಿವೆ. ಲಿಂಗಾಯತರು ಬಸವತತ್ವಗಳಿಗೆ ಹೆಚ್ಚು ವಿಧೇಯರಾಗಿದ್ದರೆ, ವೀರಶೈವರು ಹಿಂದೂಧರ್ಮದ

In Public domain. Digitization Muthulakshmi Research Academy

ಆಚಾರಗಳನ್ನು ಹೊಂದಿದ್ದಾರೆಂದು ಕಂಡುಬರುತ್ತದೆ. ಅಯ್ಯಾಚಾರ(ಉಪನಯನ) ಮಡಿವಂತಿಕೆ, ಕಾಯಕವನ್ನು ಕರ್ಮವೆಂದು ಪರಿಗಣಿಸುವುದು, ಮಹಿಳೆಗೆ ಹೆಚ್ಚು ಪ್ರಾಧಾನ್ಯತೆ ನೀಡದಿರುವುದು, ಮದುವೆಯಲ್ಲಿನ ವಿಧಿವಿಧಾನಗಳಲ್ಲಿ ವ್ಯತ್ಯಾಸಗಳು, ಚಾತುರ್ವರ್ಣದ ಆಚರಣೆ, ಸ್ಥಾವರಲಿಂಗ ಪೂಜೆ, ದೇವಾಲಯ ಸಂಸ್ಕೃತಿ, ಪೌರೋಹಿತ್ಯ ನಡೆಸುವುದು, ವಚನಗಳಿಗೆ ತಿರಸ್ಕಾರ, ಸಂಸ್ಕೃತ ಭಾಷೆಯ ಬಳಕೆ, ಬೇರೆ ಬೇರೆ ಗ್ರಂಥಗಳನ್ನು ತಮ್ಮ ಗ್ರಂಥಗಳೆಂದು ತಿಳಿಯುವುದು, ಪೌರಾಣಿಕ ಸಾಹಿತ್ಯದಲ್ಲಿ ಒಲವು ಇವೆಲ್ಲವುಗಳನ್ನು ಪರಿಗಣಿಸಿದರೆ ವೀರಶೈವ ಮತ್ತು ಲಿಂಗಾಯತ ಎನ್ನುವ ಗುಂಪುಗಳು ಕೇವಲ ಎರಡು ಪಂಗಡಗಳಷ್ಟೇ ಅಲ್ಲ ಬೇರೆ ಬೇರೆ ಆಗಿವೆ ಎಂಬುದು ಸ್ಪಷ್ಟವಾಗುತ್ತದೆ. ಮುಸ್ಲಿಮರಲ್ಲಿ ಶಿಯಾ ಮತ್ತು ಸುನ್ನಿ ಪಂಗಡಗಳಿದ್ದರೂ ಅವರಿಬ್ಬರ ಧರ್ಮಗ್ರಂಥ ಕುರಾನನ್ನು ಗೌರವಿಸುತ್ತಾರೆ. ರಮಜಾನ್ ತಿಂಗಳಲ್ಲಿ ಉಪವಾಸ ಮಾಡುತ್ತಾರೆ, ಮೂಲ ತತ್ವಗಳನ್ನು ಅನುಸರಿಸುತ್ತಾರೆ. ಅದೇ ರೀತಿ ಕ್ರಿಶ್ಚಿಯನ್ನರಲ್ಲಿ ಕ್ಯಾಥೊಲಿಕ್ ಮತ್ತು ಪ್ರೊಟೆಸ್ಟೆಂಟ್ ಪಂಗಡಗಳಿದ್ದರೂ ಒಂದೇ ಬೈಬಲ್ ಬಳಸುತ್ತಾರೆ, ಒಂದೇ ರೀತಿಯ ಧಾರ್ಮಿಕ ನಂಬಿಕೆ ಹೊಂದಿದ್ದಾರೆ. ಆದರೆ ವೀರಶೈವರ ಮತ್ತು ಲಿಂಗಾಯತರ ಧಾರ್ಮಿಕ ಗ್ರಂಥಗಳು ಭಿನ್ನ ಭಿನ್ನವಾಗಿವೆ. ಬಹುತೇಕ ಇತರ ಅಂಶಗಳು ಭಿನ್ನವಷ್ಟೇ ಅಲ್ಲ ತದ್ವಿರುದ್ಧವಾಗಿವೆ. ಹಳೆ ಒಡಂಬಡಿಕೆ (Old testament) ಯನ್ನು ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ಯಹೂದಿಗಳು ನಂಬಿದರು. ಅವು ಬೇರೆ ಬೇರೆ ಧರ್ಮಗಳಾಗಿರುವಂತೆ ವೀರಶೈವ ಮತ್ತು ಲಿಂಗಾಯತವು ಕೆಲವೇ ಕೆಲವು ನಂಬಿಕೆ ಮತ್ತು ಆಚರಣೆಗಳಲ್ಲಿ ಒಂದಾಗಿದ್ದರೆ ಬಹುತೇಕ ನಂಬಿಕೆ ಮತ್ತು ಆಚರಣೆಗಳು ತೀರ ಭಿನ್ನವಾಗಿವೆ ಮತ್ತು ಒಂದಕ್ಕೊಂದು ವಿರುದ್ಧವೂ ಆಗಿವೆ. ಆದ್ದರಿಂದ ಅವೆರಡೂ ಒಂದೇ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ಈ ಸಮಿತಿಯು ಲಿಂಗಾಯತ ಮತ್ತು ವೀರಶೈವ ಎರಡು ಒಂದೇ ಅಲ್ಲ ಅವು ಬೇರೆ ಬೇರೆಯಾಗಿವೆ ಎಂದು ನಿರ್ಣಯಿಸುತ್ತದೆ.

ಪ್ರಶ್ನೆ ನಾಲ್ಕು: ಲಿಂಗಾಯತವು ಹಿಂದೂಧರ್ಮದ ಒಂದು ಭಾಗವೇ?

ಲಿಂಗಾಯತವು ಹಿಂದೂಧರ್ಮದ ಒಂದು ಭಾಗವೇ ಎಂಬುದರ ಬಗ್ಗೆ ಸಮಿತಿಯ ನಿರ್ಣಯಗಳು:

ಅ. ಹಿಂದೂಧರ್ಮದ ವ್ಯಾಖ್ಯಾನ ಮಾಡುವುದು ಸುಲಭವಲ್ಲ. ಅದು ಧರ್ಮವಲ್ಲ ಬದುಕುವ ದಾರಿ ಎಂದು, ಅದು ಎಲ್ಲ ಧರ್ಮ, ಭಾಷೆ, ಸಂಸ್ಕೃತಿಗಳನ್ನು ಅರಗಿಸಿಕೊಂಡು ಮುಂದುವರಿಯುತ್ತಿರುವ ಧರ್ಮ ಎಂದೆಲ್ಲಾ ಎಸ್. ರಾಧಾಕೃಷ್ಣನ್ ಮತ್ತು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆದರೆ ಅಷ್ಟೊಂದು ವಿಶಾಲವಾದ ಪರಿಧಿಯಲ್ಲಿ ಪರದೇಶಗಳಿಂದ ಬಂದ ಇಸ್ಲಾಂ, ಕ್ರಿಶ್ಚಿಯನ್, ಪಾರ್ಸಿ,

In Public domain. Digitization Muthulakshmi Research Academy
ಯಹೂದಿ ಧರ್ಮಗಳ ಪ್ರಭಾವ ಹಿಂದೂಧರ್ಮದ ಮೇಲೆ ಆಗಿದ್ದರೂ ಹಾಗೂ ಹಿಂದೂಧರ್ಮದ ಪ್ರಭಾವ ಹೊರಗಿನ ಧರ್ಮಗಳ ಮೇಲೆ ಆಗಿದ್ದರೂ ಪರಕೀಯ ಧರ್ಮಗಳು ಹಿಂದೂ ಎಂಬ ಶಬ್ದದೊಳಗೆ ಬರುವುದಿಲ್ಲ. ಹಾಗಾಗಿ ಅವುಗಳನ್ನು ಭಾರತದಲ್ಲಿ ಇಂದಿಗೂ ಪ್ರತ್ಯೇಕ ಧರ್ಮಗಳೆಂದು ಪರಿಗಣಿಸಲಾಗುತ್ತದೆ.

ಆ. ಆದರೆ ಭಾರತದಲ್ಲಿ ಹುಟ್ಟಿದ ಜೈನ, ಬೌದ್ಧ, ಸಿಖ್ ಇತ್ಯಾದಿ ಧರ್ಮಗಳಿಗೆ ಪ್ರತ್ಯೇಕ ಧರ್ಮವೆಂದು ಪರಿಗಣಿಸುವಾಗ ಏನೆಲ್ಲಾ ಮೀನ ಮೇಷ ಎಣಿಸಲಾಗುತ್ತದೆ. ಅವು ಹಿಂದೂಧರ್ಮದ ಭಾಗವೆಂದೂ, ಅವುಗಳಲ್ಲಿ ಹಿಂದೂಧರ್ಮದ ಅನೇಕ ಅಂಶಗಳಿವೆಯೆಂದೂ ವಾದಿಸಲಾಗುತ್ತದೆ. ಮೋನಿಯರ್ ವಿಲಿಯಮ್ಸ್ ಹೇಳುವಂತೆ ಹಿಂದೂಧರ್ಮದಲ್ಲಿ ಜಗತ್ತಿನ ಎಲ್ಲ ಧರ್ಮಗಳ ಸಾರವಾಗಲಿ ಒಂದಿಲ್ಲೊಂದು ಅಂಶವಾಗಲಿ ಸೇರಿದ್ದರೆ ಹಿಂದೂ ಎನ್ನುವುದು ಜಗತ್ತಿನ ಎಲ್ಲ ರಾಷ್ಟ್ರಗಳ ಧರ್ಮವಾಗಬೇಕಿತ್ತು.

ಇ. ಜೈನ, ಬೌದ್ಧ, ಸಿಖ್ ಧರ್ಮಗಳು ಹಿಂದೂಧರ್ಮವನ್ನು ಎದುರಿಸುತ್ತ ಅದಕ್ಕೆ ಪರ್ಯಾಯವಾದ ಮತ್ತು ಅದಕ್ಕಿಂತ ಭಿನ್ನವಾದ ಧರ್ಮಗಳೆಂದು ಒಪ್ಪಿದರೂ ವಾಸ್ತವಿಕವಾಗಿ ಅವುಗಳನ್ನು ಪ್ರತ್ಯೇಕ ಧರ್ಮಗಳೆಂದು ಪರಿಗಣಿಸಲು ಗಂಭೀರ ವಿರೋಧ ವ್ಯಕ್ತವಾಗುತ್ತದೆ. ಆ ವಿರೋಧವನ್ನು ಜೈನರು, ಬೌದ್ಧರು, ಮತ್ತು ಸಿಖ್ಖರು ಅನುಭವಿಸಿದ್ದಾರೆ. ಅದು ಸೂಕ್ಷ್ಮ ಸಂಗತಿಯೆಂದು ಕೆಲವರು ಪ್ರಶ್ನೆಯನ್ನು ಚರ್ಚಿಸುವ ಪ್ರಯತ್ನವನ್ನೇ ಮಾಡುವುದಿಲ್ಲ. ಅದೇ ಪ್ರಶ್ನೆಯನ್ನು ಲಿಂಗಾಯತದ ವಿಚಾರದಲ್ಲಿ ಈಗ ನಮ್ಮ ಮುಂದಿದೆ.

ಈ. ಅದನ್ನು ವಸ್ತುನಿಷ್ಠವಾಗಿ ನಿರ್ಧರಿಸಲು ಅಗತ್ಯವಾದ ಬಹುತೇಕ ಮಾಹಿತಿಯನ್ನು ನಮ್ಮ ಮುಂದೆ ಮಂಡಿಸಲಾಗಿದೆ. ಹಿಂದೂಪರ ವೀರಶೈವರು ಮತ್ತು ಕೆಲವು ಹಿಂದೂ ಸಂಘಟನೆಗಳು ಎತ್ತಿದ ಪ್ರಶ್ನೆಗಳನ್ನು ಲಿಂಗಾಯತರು ತಾರ್ಕಿಕವಾಗಿ ಮತ್ತು ವಾಸ್ತವಿಕವಾಗಿ ನಂಬಲರ್ಹವಾದ ಪುರಾವೆಗಳೊಂದಿಗೆ ಉತ್ತರಿಸಿದ್ದಾರೆ.

ಉ. ಬಹುಸಂಖ್ಯಾತ ಧರ್ಮದ ನಡುವೆ ಬದುಕುವ ಅಲ್ಪಸಂಖ್ಯಾತ ಮತ್ತು ಭಿನ್ನ ಪರಂಪರೆಗಳಲ್ಲಿ ತಮ್ಮನ್ನು ಸುತ್ತುವರಿದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದ ಪ್ರಭಾವದಿಂದ ಕೆಲವು ತೋರಿಕೆಯ ಬದಲಾವಣೆಗಳು ಉಂಟಾಗುವುದು ಸಹಜ. ಭಾರತದಲ್ಲಿ ಅನೇಕ ಮುಸ್ಲಿಂ ಮಹಿಳೆಯರು ಮಂಗಳಸೂತ್ರ ಕಟ್ಟಿಕೊಳ್ಳುತ್ತಾರೆ. ಭಾರತದ ಕ್ರಿಶ್ಚಿಯನ್ನರಲ್ಲಿ ಅಶೋಕ, ಅಮರ, ರವಿ ಇತ್ಯಾದಿ ಹೆಸರುಗಳಿರುತ್ತವೆ. ಭಾರತದ ಹಳೆಯ ಕ್ರಿಶ್ಚಿಯನ್ನರು ದಲಿತ ಕ್ರಿಶ್ಚಯನ್ನರನ್ನು ಮದುವೆಯಾಗುವುದು ಕಡಿಮೆ. ಆ ಪರಿಯಲ್ಲಿ ಕೆಲವು ಲಿಂಗಾಯತರ ಆಚರಣೆಗಳಲ್ಲಿ ವೀರಶೈವ

In Public domain. Digitization Muthulakshmi Research Academy

ಪುರೋಹಿತರ ಮತ್ತು ಹಿಂದುಗಳ ಪ್ರಭಾವದಿಂದ ಮನೆ ದೇವರನ್ನು ಇಟ್ಟುಕೊಂಡು ಪೂಜಿಸುವುದು, ತೀರ್ಥಯಾತ್ರೆಗೆ ಹೋಗುವುದು ಇತ್ಯಾದಿಗಳನ್ನು ಮಾಡುತ್ತಿದ್ದರೂ ಅವರ ಮೂಲ ಆಚರಣೆಗಳಲ್ಲಿ ಅಷ್ಟೊಂದು ಬದಲಾವಣೆ ಕಾಣುವುದಿಲ್ಲ. ಆದರೆ ಬಹುತೇಕ ಹಿಂದೂ ಮೂಲ ತತ್ವಗಳು ಲಿಂಗಾಯತರ ಸಂಪ್ರದಾಯ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ನಂಬಿಕೆಗಳಲ್ಲಿ ಇಲ್ಲವೆಂದು ಇಲ್ಲಿ ವಿವರಿಸಿದ ಪುರಾವೆಗಳಿಂದ ಕಂಡುಬರುತ್ತದೆ. ಆದ್ದರಿಂದ ಅವರನ್ನು ಮತ್ತು ಅವರ ಧರ್ಮವನ್ನು ಹಿಂದೂಧರ್ಮದ ಭಾಗವಲ್ಲವೆಂದು ಪರಿಗಣಿಸಬಹುದಾಗಿದೆ.

ಊ. ಕೆಲವೇ ಕೆಲವು ಮೂಲಭೂತವಲ್ಲದ ತತ್ವಗಳಲ್ಲಿ ಭೇದವಿದ್ದರೆ ಅಂಥ ಹೊಸ ಧಾರ್ಮಿಕ ಸಮುದಾಯವನ್ನು ಮೂಲ ಧರ್ಮದ ಒಂದು ಪಂಥವೆಂದು ಪರಿಗಣಿಸಬಹುದು. ಉದಾಹರಣೆಗೆ, ಮುಸ್ಲಿಮರಲ್ಲಿನ ಶಿಯಾ ಮತ್ತು ಸುನ್ನಿ ಪಂಥಗಳು ಮತ್ತು ಕ್ರಿಶ್ಚಿಯನ್ನರಲ್ಲಿನ ಕ್ಯಾಥೊಲಿಕ್ ಮತ್ತು ಪ್ರೊಟೆಸ್ಟೆಂಟ್ ಪಂಥಗಳು. ಆದರೆ ಮೈಕಲ್ ಬ್ಲ್ಯಾಕ್ ಅವರು ವಿವರಿಸಿದಂತೆ ಎರಡು ಸಮುದಾಯಗಳ ನಡುವೆ ಸಮಗ್ರ ಧಾರ್ಮಿಕ ನಂಬಿಕೆ, ಆಚಾರ ಮತ್ತು ಪರಂಪರೆಗಳ ಮೂಲತತ್ವಗಳಲ್ಲಿ ಭಿನ್ನತೆಗಳು ಒಂದೆರಡು ಅಂಶಗಳಲ್ಲಿ ಮಾತ್ರ ಸಾಮ್ಯತೆಯಿದ್ದರೆ ಅವುಗಳನ್ನು ಪ್ರತ್ಯೇಕ ಸ್ವತಂತ್ರ ಧರ್ಮವೆಂದು ಪರಿಗಣಿಸಬೇಕಾಗುತ್ತದೆ. ಈ ಹಿಂದೆ ತಮಿಳುನಾಡಿನಲ್ಲಿ ಶಿರೂರುಮಠ ವಿರುದ್ಧ ಕಮಿಷನರ್ ಹಿಂದೂ ಧಾರ್ಮಿಕ ದತ್ತಿ ಪ್ರಕರಣದಲ್ಲಿನ ನಿರ್ಣಯದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಅದೇ ರೀತಿ ಧರ್ಮ ಮತ್ತು ಪಂಗಡಗಳನ್ನು ವ್ಯಾಖ್ಯಾನಿಸಿತ್ತು. ಅದನ್ನು ಅನ್ವಯಿಸಿದರೂ ಲಿಂಗಾಯತ ಹಿಂದೂಧರ್ಮದ ಒಂದು ಪಂಗಡವೆಂದು ಸಿದ್ಧವಾಗುವುದಿಲ್ಲ. ಲಿಂಗಾಯತರ ಬಹುತೇಕ ಮೂಲಭೂತ ನಂಬಿಕೆ, ಆಚರಣೆ, ಸಂಪ್ರದಾಯಗಳು ಹಿಂದುಗಳಿಗಿಂತ ಭಿನ್ನವಾಗಿವೆ ಮತ್ತು ಅನೇಕ ಅಂಶಗಳು ಅದಕ್ಕೆ ವಿರುದ್ಧವಾಗಿವೆ ಎಂದು ಕಂಡುಬರುತ್ತದೆ. ಆದ್ದರಿಂದ ಲಿಂಗಾಯತವು ಹಿಂದೂಧರ್ಮದ ಒಂದು ಭಾಗವಲ್ಲ, ಒಂದು ಪಂಗಡವೂ ಅಲ್ಲ. ಜೈನ ಬೌದ್ಧ, ಸಿಖ್ಖರಂತೆ ಲಿಂಗಾಯತವು ಒಂದು ಪ್ರತ್ಯೇಕ ಧರ್ಮವಾಗಿದೆ. ಎಂಬುದು ಈ ಸಮಿತಿಯ ಸ್ಪಷ್ಟ ಅಭಿಪ್ರಾಯವಾಗಿದೆ.

ಋ. ಮೇಲೆ ವಿವರಿಸಿರುವ ಮತ್ತು ವಿಶ್ಲೇಷಿಸಿರುವ ಕಾರಣಗಳನ್ವಯ ಈ ಸಮಿತಿಯು ಈ ಕೆಳಕಂಡ ಅಭಿಪ್ರಾಯಕ್ಕೆ ಬಂದಿದೆ:

೧. ಕರ್ನಾಟಕದಲ್ಲಿರುವ ಲಿಂಗಾಯತರನ್ನು ಧಾರ್ಮಿಕ ಅಲ್ಪಸಂಖ್ಯಾತರೆಂದು ಪರಿಗಣಿಸಬಹುದು.

೨. ಬಸವಣ್ಣನವರು ಧರ್ಮಗುರುಗಳೆಂದು ವಚನಗಳು ಪವಿತ್ರ ಗ್ರಂಥಗಳೆಂದು, ಇಷ್ಟಲಿಂಗವನ್ನು ಧರಿಸಿ, ವಚನತತ್ವಗಳನ್ನು ನಂಬಿ, ಆಚರಿಸಿ,

In Public domain. Digitization Muthulakshmi Research Academy
ಪ್ರಚುರಪಡಿಸುತ್ತಿರುವ ವೀರಶೈವರು ಲಿಂಗಾಯತರ ಒಂದು ಭಾಗ ಎಂತಲೂ ಪರಿಗಣಿಸಬಹುದು.

೩. ಕರ್ನಾಟಕ ಅಲ್ಪಸಂಖ್ಯಾತರ ಆಯೋಗ ಲಿಂಗಾಯಿತರನ್ನು ಧಾರ್ಮಿಕ ಅಲ್ಪಸಂಖ್ಯಾತರೆಂದು ಪರಿಗಣಿಸಲು ಸರಕಾರಕ್ಕೆ ಶಿಫಾರಸು ಮಾಡಬಹುದು.

೪. ಕರ್ನಾಟಕ ಸರ್ಕಾರ ಅಲ್ಪಸಂಖ್ಯಾತರ ಆಯೋಗದ ಶಿಫಾರಸ್ಸನ್ನು ಒಪ್ಪುವ ಅಥವಾ ಒಪ್ಪದಿರುವ ಅಧಿಕಾರ ಹೊಂದಿದೆ.

೫. ಕರ್ನಾಟಕ ಸರ್ಕಾರಕ್ಕೆ ಅಲ್ಪಸಂಖ್ಯಾತರ ಆಯೋಗದ ಶಿಫಾರಸ್ಸನ್ನು ಕೇಂದ್ರ

In Public domain. Digitization Muthulakshmi Research Academy

ಅಧ್ಯಾಯ ಹದಿಮೂರು

ತಲ್ಲಣದ ಕ್ಷಣಗಳು

ತಜ್ಞರ ವರದಿ ಸರಕಾರಕ್ಕೆ ಸಲ್ಲಿಕೆಯಾದ ನಂತರ ಅನೇಕ ಮಹತ್ವದ ಬದಲಾವಣೆಗಳಾದವು. ಧರ್ಮಮಾನ್ಯತೆಯನ್ನು ವಿರೋಧಿಸುವ ಗುಂಪುಗಳಾದ ವೀರಶೈವ, ಆರ್.ಎಸ್.ಎಸ್ ಬೆಂಬಲಿತ ಭಾರತೀಯ ಜನತಾ ಪಕ್ಷ ಮತ್ತು ವೀರಶೈವ ಮಹಾಸಭೆಯೊಂದಿಗೆ ಕರ್ನಾಟಕದ ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯದವರು ಸೇರಿಕೊಂಡರು. ಲಿಂಗಾಯತ ಅಲ್ಪಸಂಖ್ಯಾತ ಧರ್ಮದ ಮಾನ್ಯತೆ ನೀಡಿದರೆ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯದವರಿಗೆ ಈಗ ಸಿಗುತ್ತಿರುವ ಮೀಸಲಾತಿಯಲ್ಲಿ ಕಡಿತವಾಗುವುದೆಂಬ ಆತಂಕ ಮುಸ್ಲಿಂ ಮತ್ತು ಕ್ರೈಸ್ತ ಧರ್ಮದವರಿಗಿತ್ತು. ಅದನ್ನು ಅವರು ಮುಖ್ಯಮಂತ್ರಿಗಳಿಗೆ ತಿಳಿಸುತ್ತ ತಮ್ಮ ಅಸಮಾಧಾನವನ್ನು ಹೊರಹಾಕಿದ್ದರು. ಮುಖ್ಯಮಂತ್ರಿಗಳಿಗೆ ಈ ಹೊಸ ಸಮಸ್ಯೆ ಕಂಟಕವಾಗುವ ಸೂಚನೆ ಸಿಗುತ್ತಿದ್ದಂತೆ ತಜ್ಞರ ಸಮಿತಿಯ ವರದಿಯನ್ನು ಒಪ್ಪದೆ ಇರುವಂತೆ ಅವರ ಹಿತಚಿಂತಕರು ಸಲಹೆ ನೀಡಿದರು. ಮುಖ್ಯಮಂತ್ರಿಗಳು ಮೈಸೂರಿನ ಸುತ್ತೂರುಮಠಕ್ಕೆ ಭೇಟಿ ನೀಡಿ ಸ್ವಾಮಿಗಳೊಂದಿಗೆ ಸಮಾಲೋಚಿಸಿದರು ಎಂದು ಎಲೆಕ್ಟ್ರಾನಿಕ್ ಮೀಡಿಯಾಗಳು ವರದಿ ಮಾಡಲಾರಂಭಿಸಿದ್ದವು. ಇವೆಲ್ಲವುಗಳನ್ನು ಗಮನಿಸುತ್ತಿದ್ದ ನಾವುಗಳು ತಲ್ಲಣಗೊಳ್ಳಲಾರಂಭಿಸಿದ್ದೆವು. ತಜ್ಞರ ವರದಿ ಸರಕಾರದ ಕೈ ಸೇರಿದ ನಂತರ ಒಂದೊಂದು ಗಂಟೆಗಳು ಒಂದೊಂದು ದಿನಗಳಾಗಿ ಪರಿವರ್ತಿತವಾಗಿದ್ದವು.

ವೀರಶೈವ ಮಹಾಸಭೆಯು ಲಿಂಗಾಯತರ ಪ್ರಥಮ ವೈರಿಯಾಗಿ ಬದಲಾಗಿತ್ತು. ಲಿಂಗಾಯತ ಧರ್ಮಕ್ಕೆ ಮಾನ್ಯತೆ ನೀಡಿದರೆ ಜಗತ್ತೇ ಮುಳುಗಿಹೋಗುತ್ತದೆ ಎಂಬಂತೆ ಪಂಚಪೀಠಾಧೀಶ್ವರರು ವರ್ತಿಸಲಾರಂಭಿಸಿದ್ದರು. ಸರಕಾರದ

In Public domain. Digitization Muthulakshmi Research Academy

ಭಾಗವಾಗಿದ್ದ ಸಚಿವ ಈಶ್ವರ ಖಂಡ್ರೆ ಮತ್ತು ಮಹಾಸಭೆಯ ಅಧ್ಯಕ್ಷರ ಸುಪುತ್ರ ಶಾಮನೂರ ಮಲ್ಲಿಕಾರ್ಜುನರು ಸಂಪುಟಸಭೆಯಲ್ಲಿ ಹೇಗೆ ವರ್ತಿಸುತ್ತಾರೆ ಎಂದು ನಮಗೆ ಪೇಚಾಟಕ್ಕಿಟ್ಟುಕೊಂಡಿತ್ತು. ಮಾರ್ಚ್ ೮, ೨೦೧೮, ಗುರುವಾರ ಸಂಪುಟ ಸಭೆಯಲ್ಲಿ ನಾಗಮೋಹನದಾಸ್ ವರದಿಯನ್ನು ಸಂಪುಟಸಭೆಯು ಚರ್ಚಿಸಲಿದೆ ಎಂಬ ಉಹಾಪೋಹಗಳು ಹರಿದಾಡುತ್ತಿದ್ದವು. ಗುರುವಾರ ಸಚಿವ ಸಂಪುಟದ ಅಜೆಂಡಾಕ್ಕಾಗಿ ಕಾಯುತ್ತಿದ್ದೆವು. ಸಚಿವರಾದ ಎಂ.ಬಿ.ಪಾಟೀಲರ ಆಪ್ತಕಾರ್ಯದರ್ಶಿ ಐ.ಎ.ಎಸ್. ಅಧಿಕಾರಿ ವಾ.ಎಸ್.ಪಾಟೀಲರು ಸಂಪುಟ ಸಭೆಯ ಅಜೆಂಡಾದೊಂದಿಗೆ ಸಚಿವರನ್ನು ಕಾಣಲು ಒಳಬಂದರು. ನಮ್ಮತ್ತ ನೋಡುತ್ತಿದ್ದಂತೆ ಮುಗುಳು ನಗೆಬೀರಿ ವಿಜಯದ ಸಂಕೇತ ನೀಡಿದರು. ಆಗ ನಾವು ನಿಟ್ಟುಸಿರು ಬಿಟ್ಟೆವು. ಅಂದಿನ ಸಭೆಯಲ್ಲಿ ಲಿಂಗಾಯತ ಅಲ್ಪಸಂಖ್ಯಾತ ಧರ್ಮ ಮಾನ್ಯತೆ ಚರ್ಚೆಗೆ ಬರುವುದು ಖಾತ್ರಿಯಾಗಿತ್ತು.

ಸಭೆಗೆ ಹೊರಡುತ್ತಲಿದ್ದ ಸಚಿವರಿಗೆ ಶುಭ ಹಾರೈಸಿ ನಾವು ಬಿ.ಎಲ್.ಡಿ. ಆಫೀಸಿನಲ್ಲಿ ಕುಳಿತೆವು. ಸಭೆಯ ತೀರ್ಮಾನದ ನಂತರವೆ ಅಲ್ಲಿಂದ ಕದಲುವುದೆಂದು ಕೊಂಡಿದ್ದೆವು. 'ಸಂಪುಟಸಭೆ ಕೊನೆಗೊಂಡಿತು' ಎಂದು ದೃಶ್ಯಮಾಧ್ಯಮಗಳು ಬಿತ್ತರಿಸುತ್ತಿದ್ದಂತೆ ನಾವು ಸಚಿವರಿಗೆ ಕರೆ ಮಾಡಿದ್ದೆವು. 'Subject defered' ಎಂಬ ಒಂದು ವಾಕ್ಯದ ಉತ್ತರ ಅವರಿಂದ. ಗೌಪ್ಯತೆಯ ಪ್ರಮಾಣವಚನ ಸ್ವೀಕರಿಸಿದ್ದ ಅವರಿಂದ ಹೆಚ್ಚಿನದೇನು ನಿರೀಕ್ಷೆ ಮಾಡುವಂತಿರಲಿಲ್ಲ. ಸೋದರರನಂತಿದ್ದ ವಿನಯ ಕುಲಕರ್ಣಿಯವರಿಗೆ ಕರೆ ಮಾಡಿದೆ. 'ಅಣ್ಣಾ ಮುಂದಿನ ಕ್ಯಾಬಿನೆಟ್‌ಗೆ ಹಾಕಿದ್ದಾರೆ' ಎಂದುತ್ತರ ಅವರಿಂದ. ಸಚಿವ ಸಂಪುಟದ ಸಭೆಗೆ ಕಿವಿಯಾಗುತ್ತಾರೆ ಮಾಧ್ಯಮದ ವರದಿಗಾರರು. ಎಂತಹ ಗೌಪ್ಯ ವಿಷಯವೂ ಅವರಿಗೆ ತಲುಪುತ್ತದೆ ಅಂತಹವರೊಬ್ಬರಿಗೆ ಕರೆ ಮಾಡಿದೆ. "Subject ಬಂತಂತೆ, ಅಲ್ಪಸಂಖ್ಯಾತ ಸಚಿವರಿಗೆ ಹೆಚ್ಚಿನ ಮಾಹಿತಿ ಬೇಕಾಗಿತ್ತು. ಕಾರಣ subject defer ಮಾಡಿದ್ದಾರೆ" ಎಂಬ ಒಂದು ಸಣ್ಣ ಸೂಚನೆ ನೀಡಿದನವನು. ಅದು ನನಗೆ ನಿರೀಕ್ಷಿತವಾಗಿತ್ತು. ಕಾರಣ ಈ ವಿಷಯ ವಿಧಾನಸೌಧದ ಮೂಲೆ ಮೂಲೆಯಲ್ಲಿ ಸಣ್ಣಗೆ ಹರಿದಾಡುತ್ತಿತ್ತು. 'Defer' ಆಗಿದ್ದಕ್ಕೆ ಸಂತೋಷಗೊಂಡೆ. 'Reject' ಆಗಿಲ್ಲವಲ್ಲ ಎಂದು ಸಮಾಧಾನ ಪಟ್ಟೆವು.

ಲಿಂಗಾಯತ ಧರ್ಮ ಮಾನ್ಯತೆಯ ವಿಷಯ ಸಂಪುಟಸಭೆಯಲ್ಲಿ ಚರ್ಚೆಯಾದ ನಂತರ ವೀರಶೈವರು ಜಾಗೃತರಾದರು. ಮುಂದಿನ ವಾರ ನಡೆಯಲಿರುವ ಕ್ಯಾಬಿನೆಟ್ನಲ್ಲಿ ವಿಷಯ ತಿರಸ್ಕರಿಸುವಂತೆ ಒತ್ತಾಯಿಸಲು, ಮಂಗಳವಾರ (ಮಾರ್ಚ್ ೧೩)ರಂದು ಬಾಗಲಕೋಟೆ ಜಿಲ್ಲೆಯ ಶಿವಯೋಗಮಂದಿರದಲ್ಲಿ ಪಂಚಪೀಠಾಧೀಶ್ವರರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಆ ಸಭೆಯಲ್ಲಿ ವೀರಶೈವ

In Public domain. Digitization Muthulakshmi Research Academy

ಪಂಗಡದ ಪ್ರಮುಖ ಮಠಾಧೀಶರಲ್ಲದೆ ಕಾಶಿ ಮತ್ತು ರಂಭಾಪುರಿ ಮಠದ ಗುರುಗಳು ಭಾಗವಹಿಸಿದ್ದರು. ಸಭೆಯ ವಿವರಣೆಯನ್ನು ಪ್ರಜಾವಾಣಿ ಪತ್ರಿಕೆ ಮಾರ್ಚ್ ೧೪ ರಂದು ಪ್ರಕಟಿಸಿತ್ತು. ಲಿಂಗಾಯತ ಪ್ರತ್ಯೇಕ ಧರ್ಮ ಸ್ಥಾಪನೆ; ಗುರು ವಿರಕ್ತ ಮಠಾಧೀಶರ ಸಭೆ ಎಚ್ಚರಿಕೆ; ಸಿಎಂಗೆ ಮನವಿ ಸಲ್ಲಿಸಲು ನಿರ್ಧಾರ; ವರದಿ ತಿರಸ್ಕರಿಸಿ ಇಲ್ಲವೆ ಪ್ರತಿಭಟನೆ ಎದುರಿಸಿ ತಲೆಬರಹದೊಂದಿಗೆ ವಿಸ್ತಾರವಾದ ವರದಿ ಪ್ರಕಟಿಸಿತ್ತು. "ಬಾದಾಮಿ ತಾಲ್ಲೂಕಿನ ಶಿವಯೋಗ ಮಂದಿರದಲ್ಲಿ ಮಂಗಳವಾರ ಲಿಂಗಾಯತ ಸ್ವತಂತ್ರ ಧರ್ಮ ಮಂಡನೆ ವಿಚಾರವಾಗಿ ನ್ಯಾಯಮೂರ್ತಿ ನಾಗಮೋಹನದಾಸ್ ನೇತೃತ್ವದ ಸಮಿತಿಯ ವರದಿಯನ್ನು ತಿರಸ್ಕರಿಸುವಂತೆ ಕಾಶಿಪೀಠದ ಡಾ.ಚಂದ್ರಶೇಖರ ಶಿವಾಚಾರ್ಯ ಶ್ರೀಗಳ ನೇತೃತ್ವದಲ್ಲಿ ನಡೆದ ಗುರು-ವಿರಕ್ತ ಮಠಾಧೀಶರ ಸಭೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿತು. ವರದಿಯನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡಿದಲ್ಲಿ ರಾಜ್ಯದಾದ್ಯಂತ ಕಾಂಗ್ರೆಸ್ ಪಕ್ಷದ ವಿರುದ್ಧ ಹೋರಾಟ ಕೈಗೊತ್ತಿಕೊಳ್ಳಲು ಸಭೆ ತೀರ್ಮಾನಿಸಿತು. ಈ ಬಗ್ಗೆ ಮುಖ್ಯಮಂತ್ರಿಗೆ ಬುಧವಾರ ಮನವಿ ಸಲ್ಲಿಸಲು ಇದೇ ವೇಳೆ ನಿರ್ಧರಿಸಲಾಯಿತು. ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಾಳೆಹೊಸೂರು ಮಠದ ದಿಂಗಾಲೇಶ್ವರ ಸ್ವಾಮೀಜಿ ಸಮಾಜದ ಹಿತದೃಷ್ಟಿಯಿಂದ ಸಿದ್ದರಾಮಯ್ಯ ಅವರಿಗೆ ಕೈಮುಗಿದು ಕೇಳಿಕೊಳ್ಳುತ್ತೇವೆ, ಬೇಡಿಕೊಳ್ಳುತ್ತೇವೆ, ಅದಕ್ಕೆ ಅವರು ಮನ್ನಣೆ ನೀಡದೇ ಹಠಮಾರಿ ಧೋರಣೆ ಮುಂದುವರಿಸಿದರೆ ನಾವೇನು ಎಂಬುದನ್ನು ತೋರಿಸಲಿದ್ದೇವೆ ಎಂದರು. ಸಿದ್ದರಾಮಯ್ಯ ಅವರಿಗೆ ಸಮಾಜದ ಬಗ್ಗೆ ಕಾಳಜಿ ಇದ್ದರೆ, ವೀರಶೈವ ಲಿಂಗಾಯತ ಬೇರೆ ಬೇರೆ ಅಲ್ಲ ಈ ಎರಡು ಒಂದೇ ಎಂದು ಘೋಷಿಸಲಿ ಈ ವಿಚಾರದಲ್ಲಿ ಕಾಂಗ್ರೆಸ್‌ನಲ್ಲಿರುವ ಸಮುದಾಯದ ಮುಖಂಡರು ಅವರ ಮನವೊಲಿಸಲಿ, ಇಲ್ಲದಿದ್ದರೆ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಹೋರಾಟ ಕೈಗೆತ್ತಿಕೊಳ್ಳಲಾಗುವುದು ಎಂದು ಎಚ್ಚರಿಸಿದರು. ಕಾಶಿಪೀಠದ ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ 'ಸಂವಿಧಾನದ ಪ್ರಕಾರ ದೇಶದಲ್ಲಿ ಹೊಸ ಧರ್ಮ ಘೋಷಣೆಗೆ ಅವಕಾಶವಿಲ್ಲ. ಯಾವುದೇ ಸಮುದಾಯಕ್ಕೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಲು ರಾಜ್ಯ ಸರಕಾರಕ್ಕೆ ಸಾಧ್ಯವಿಲ್ಲ. ಆದರೆ ಕೇವಲ ಚುನಾವಣೆಯ ಕಾರಣಕ್ಕೆ ಜನರನ್ನು ಮರುಳು ಮಾಡುವ ಕೆಲಸ ನಡೆದಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಮಿತಿ ಆರು ತಿಂಗಳ ಕಾಲಾವಕಾಶ ಕೇಳಿದರೂ ಸರ್ಕಾರ ಒತ್ತಾಯದಿಂದ ತರಾತುರಿಯಲ್ಲಿ ವರದಿ ಪಡೆದಿದೆ. ಸಚಿವರಾದ ಎಂ.ಬಿ.ಪಾಟೀಲ ಹಾಗೂ ವಿನಯ ಕುಲಕರ್ಣಿ ಧರ್ಮ ಒಡೆಯುವ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದಾರೆ. ಸಮಾಜದ ದೃಷ್ಟಿಯಿಂದ ಇದು ಒಳ್ಳೆಯದಲ್ಲ. ತಜ್ಞರ ಸಮಿತಿಯದು ಅಜ್ಞಾನದ ನಿರ್ಣಯ ಎಂದು ಟೀಕಿಸಿದರು. ಈ ಹಿಂದೆ ವೀರಶೈವ

In Public domain. Digitization Muthulakshmi Research Academy

ಮಹಾಸಭಾ ವತಿಯಿಂದ ನಡೆದ ಸನ್ಮಾನ ಸಮಾರಂಭದಲ್ಲಿ ಎಲ್ಲರೂ ಒಂದಾಗಿ ಬಂದರೆ ವೀರಶೈವ ಸ್ವತಂತ್ರ ಧರ್ಮದ ಪ್ರಸ್ತಾಪವನ್ನು ಕೇಂದ್ರಕ್ಕೆ ಕಳುಹಿವುದಾಗಿ ಮುಖ್ಯಮಂತ್ರಿ ಹೇಳಿದ್ದರು. ಈಗ ಒಂದು ಗುಂಪಿನ ಅಭಿಪ್ರಾಯಕ್ಕೆ ಮಾತ್ರ ಮನ್ನಣೆ ನೀಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಶಿವಯೋಗ ಮಂದಿರದ ಅಧ್ಯಕ್ಷ ಡಾ.ಸಂಗನಬಸವ ಸ್ವಾಮೀಜಿ ಸೇರಿದಂತೆ ೩೦ಕ್ಕೂ ಹೆಚ್ಚು ಗುರು-ವಿರಕ್ತ ಮಠಾಧೀಶರು ಸಭೆಯಲ್ಲಿ ಪಾಲ್ಗೊಂಡಿದ್ದರು."[೧]

ಇದರ ವಿರುದ್ಧವಾಗಿ ಗದುಗಿನ ತೋಂಟದಾರ್ಯ ಮಠದ ಜಗದ್ಗುರು ಶ್ರೀ ತೋಂಟದ ಸಿದ್ದಲಿಂಗಸ್ವಾಮಿಜಿಯವರು 'ಬಸವದ್ರೋಹಿ ಸ್ವಾಮಿಗಳ ಸುಳ್ಳು ಹೇಳಿಕೆಗೆ ಸರ್ಕಾರ ಮಣಿಯಬಾರದು. ಈ ವಿಷಯದಲ್ಲಿ ವಿಳಂಬಕ್ಕೆ ಅವಕಾಶ ನೀಡದೆ ಶೀಘ್ರ ತೀರ್ಮಾನ ಕೈಗೊಳ್ಳಬೇಕು' ಎಂದು ಲಿಂಗಾಯತ ಪ್ರತ್ಯೇಕ ಧರ್ಮದ ಪರವಾಗಿ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದರು.[೨]

ಇನ್ನೊಂದು ಪ್ರಮುಖ ಬೆಳವಣಿಗೆಯಲ್ಲಿ ದ್ವಿಮುಖ ನೀತಿಯ ರಾಷ್ಟ್ರೀಯ ಸ್ವಯಂ ಸೇವಕ ಸಂಘವು 'ಲಿಂಗಾಯತಕ್ಕೆ ಪ್ರತ್ಯೇಕ ಧರ್ಮದ ಮಾನ್ಯತೆ ವಿಚಾರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ತಟಸ್ಥವಾಗಿದೆ' ಎಂದು ಸಂಘಟನೆಯ ದಕ್ಷಿಣ ಮಧ್ಯ ಕ್ಷೇತ್ರೀಯ ಸಂಚಾಲಕ ವಿ.ನಾಗರಾಜ್ ಸ್ಪಷ್ಟಪಡಿಸಿದರು. ಬೆಂಗಳೂರಿನಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು'ಮಠಾಧೀಶರು ಹಾಗೂ ಸಾಮಾಜಿಕ ಮುಖಂಡರು ಒಮ್ಮತದಿಂದ ತೆಗೆದುಕೊಂಡ ನಿರ್ಣಯವನ್ನು ನಾವು ಒಪ್ಪುತ್ತೇವೆ. ಇದರ ಹೊರತಾಗಿ ಈ ವಿಚಾರದಲ್ಲಿ ಸಂಘ ಪ್ರತ್ಯೇಕ ನಿಲುವು ಹೊಂದಿಲ್ಲ' ಎಂದು ಹೇಳಿದರು. ವೀರಶೈವ ಲಿಂಗಾಯತ ಒಂದಾಗಿದ್ದರೂ ಅಥವಾ ಪ್ರತ್ಯೇಕಗೊಂಡರೂ ಯಾವುದೇ ವ್ಯತ್ಯಾಸವಾಗುವುದಿಲ್ಲ. ಅವರು ಆಚರಿಸುವುದು ಹಿಂದೂ ಜೀವನಪದ್ಧತಿಯನ್ನೇ, ದೇಶದ ಬಗ್ಗೆ ನಿಷ್ಠೆ ಇರುವವರು, ಪರಂಪರೆಯನ್ನು ಗೌರವಿಸುವವರನ್ನು ಹಿಂದೂಗಳು ಎನ್ನುತ್ತೇವೆ. ಅವರು ಯಾವ ಧರ್ಮವನ್ನಾದರೂ ಆಚರಿಸಲಿ ಅದು ನಮಗೆ ಮುಖ್ಯವಲ್ಲ. ಸಂಘದಲ್ಲಿ ನಾಸ್ತಿಕರು ಇದ್ದಾರೆ. ರಾಮ, ಬುದ್ಧ, ಬಸವಣ್ಣ, ಮಹಾವೀರ ಇವರೆಲ್ಲರೂ ಈ ದೇಶದ ಪರಂಪರೆ. ಅವರ ಗೌರವಕ್ಕೆ ಚ್ಯುತಿ ಬಾರದಂತೆ ಆರ್. ಎಸ್.ಎಸ್. ನೋಡಿಕೊಳ್ಳುತ್ತದೆ" ಎಂದು ತಿಪ್ಪೆ ಸಾರಿಸಿದ್ದರು.[೩]

ಸಂಪುಟದ ಒಪ್ಪಿಗೆ ಸಿಗುವ ವಿಶ್ವಾಸ ನಮಗೆಲ್ಲರಿಗೂ ಇತ್ತು. ಆದರೆ ಅಂದಿನ ಪರಿಸ್ಥಿತಿಯು ಬದಲಾಗಿತ್ತು. 'ಲಿಂಗಾಯತರನ್ನು ಧಾರ್ಮಿಕ ಅಲ್ಪಸಂಖ್ಯಾತರೆಂದು ಘೋಷಿಸುವ ರಾಜ್ಯ ಸರ್ಕಾರದ ಕ್ರಮಕ್ಕೆ ಕಾಂಗ್ರೆಸ್ಸಿನ ಮುಸ್ಲಿಂ ಮುಖಂಡರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಇದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಇಕ್ಕಟ್ಟಿಗೆ ಸಿಲುಕಿದ್ದಾರೆ. ರಾಜ್ಯದಲ್ಲಿ ಲಿಂಗಾಯತರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅವರಿಗೆ

In Public domain. Digitization Muthulakshmi Research Academy
ಧಾರ್ಮಿಕ ಅಲ್ಪಸಂಖ್ಯಾತರ ಸ್ಥಾನಮಾನ ನೀಡಿದರೆ, ಮುಸ್ಲಿಮರಿಗೆ ಸಿಗುತ್ತಿರುವ ಮೀಸಲಾತಿ ಮತ್ತು ಇತರ ಸೌಲಭ್ಯಗಳು ಕಡಿತವಾಗುತ್ತವೆ ಎಂಬುದಾಗಿ ಸಚಿವ ಸಂಪುಟದಲ್ಲಿರುವ ಮುಸ್ಲಿಂ ಸಮುದಾಯದ ಸಚಿವರು ಮುಖ್ಯಮಂತ್ರಿ ಅವರಿಗೆ ಹೇಳಿದ್ದಾರೆ. ನಗರಾಭಿವೃದ್ಧಿ ಸಚಿವ ರೋಷನ್ ಬೇಗ್ ಮತ್ತು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೆ.ಜೆ.ಜಾರ್ಜ್ ಈ ಸಂಬಂಧ ಮುಖ್ಯಮಂತ್ರಿ ಅವರ ಜೊತೆ ಮಾತುಕತೆ ನಡೆಸಿ ಆತಂಕ ತೋಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿದ್ದವು. 'ಸರ್ಕಾರ ಈ ಬಗ್ಗೆ ಎಚ್ಚರಿಕೆ ವಹಿಸಬೇಕು ಇಲ್ಲವಾದರೆ ಮುಸ್ಲಿಂ ಮತ್ತು ಲಿಂಗಾಯತ ಸಮುದಾಯದ ಬೆಂಬಲ ಕಳೆದುಕೊಳ್ಳಬಹುದು' ಎಂದು ಕಾಂಗ್ರೆಸ್ಸಿನ ಹಿರಿಯ ನಾಯಕ ಸಿ.ಕೆ.ಜಾಫರ್ ಷರೀಫ್ ಎಚ್ಚರಿಕೆ ನೀಡಿದ್ದಾರೆ ಎಂದು ಗೋದಿ ಮೀಡಿಯಾಯಾಗಳು ಸಣ್ಣ ಸುದ್ದಿಯನ್ನು ಪ್ರಮುಖವಾಗಿ ಪ್ರಕಟಿಸಿದ್ದವು. ಹಣ್ಣು ನೀರು ಕೊಟ್ಟು ನಮ್ಮ ರ‍್ಯಾಲಿಗಳನ್ನು ಬೆಂಬಲಿಸಿದ್ದ ಮುಸ್ಲಿಂ ಸಮಾಜದ ನಾಯಕರು, ತಮ್ಮ ಸಮುದಾಯದ ಹಿತ ಕಾಪಾಡುವುದು ತಮಗೆ ಮುಖ್ಯವೆಂದು ಗೊಣಗಲಾರಂಭಿಸಿದ್ದರು. ಈ ಸಮಸ್ಯೆಯನ್ನು ಮುಖ್ಯಮಂತ್ರಿಗಳು ಜಾಣತನದಿಂದ ಪರಿಹರಿಸಿದ್ದರು. ಅಲ್ಪಸಂಖ್ಯಾತರ ಸೌಲಭ್ಯ ಮತ್ತು ಹಕ್ಕುಗಳಿಗೆ ಭಂಗ ಬಾರದಂತೆ ನೋಡಿಕೊಳ್ಳುವ ಲಿಖಿತ ಭರವಸೆಯನ್ನು ಕರ್ನಾಟಕ ಸರ್ಕಾರ ಇವರಿಗೆ ಎಂಟನೆಯ ತಾರೀಖಿನ ಸಂಪುಟ ಸಭೆಯ ನಂತರ ನೀಡಿತ್ತು.[೪]

ಲಿಂಗಾಯತ ಧರ್ಮದ ಚರ್ಚೆಯನ್ನು ಮುಂದಿನ ಸಚಿವಸಂಪುಟದ ಸಭೆಗೆ ಮುಂದೂಡಲಾಗಿದೆ (defered) ಎಂಬ ಅಂಶ ನಮಗೆ ಆಶಾಭಾವ ಮೂಡಿಸಿತ್ತು. ದಿನಾಂಕ ೧೪ರಂದು ಬುಧವಾರ ಸಚಿವ ಸಂಪುಟ ಸಭೆ ನಡೆಯಲಿತ್ತು. ನಾನು impatient ಆಗಿದ್ದೆ. ಬುಧವಾರ ಬಂತು. ಈ ಬಾರಿ ಅವಕಾಶ ತಪ್ಪಿಸಿಕೊಳ್ಳಬಾರದೆಂದು ನಾನು ವಿಧಾನಸೌಧಕ್ಕೆ ಹೋದೆ. ಮೂರನೆಯ ಮಹಡಿಯಲ್ಲಿ ಸಚಿವಸಂಪುಟ ನಡೆಯುವ ಕೋಣೆಯ ಎದುರಿನಲ್ಲಿ ನಿಂತೆ. ಸಭೆಯಿಂದ ಏನಾದರೂ ಸಂದೇಶ ಬರಬಹುದೆಂದು ಕಾಯುತ್ತ ಮೈಯಲ್ಲ ಕಣ್ಣಾದೆ. ಸಭೆ ನಡೆಯುತ್ತಿತ್ತು. ಕೊಠಡಿಯ ಬಾಗಿಲ ಮೇಲೆ ಕೆಂಪು ಬತ್ತಿ ಉರಿಯುತ್ತಿತ್ತು. ಬಾಗಿಲು ತೆರೆದುಕೊಂಡಿತು. ಎಲ್ಲರ ಲಕ್ಷ್ಯ ಬಾಗಿಲಿನತ್ತ. ಸಚಿವ ವಿನಯ ಕುಲಕರ್ಣಿ ಬಾಗಿಲು ತಳ್ಳಿಕೊಂಡು ಹೊರಬಂದರು. 'ಬ್ರದರ್' ಎಂದೆ. ಕೇಳಿಸಿಕೊಳ್ಳದೆ ಹೋದರು. ಹದಿನೈದು ನಿಮಿಷದ ನಂತರ ಮತ್ತೆ ಒಳಹೋದರು. ನಾವು ಸಭೆ ಮುಗಿಯುವ ದಾರಿ ಕಾಯುತ್ತ ನಿಂತೆವು. ಸಭೆ ಮುಗಿಯುವ ಲಕ್ಷಣಗಳು ಕಾಣುತ್ತಿರಲಿಲ್ಲ. ವಿಧಾನಸೌಧದ ಹೊರ ಆವರಣದ ಲೈಟುಗಳು ಹತ್ತಿಕೊಂಡವು. ಕೆಂಗಲ್ ಹನುಮಂತಯ್ಯನವರ ಆಳೆತ್ತರದ ಮೂರ್ತಿಯ ಮೇಲೆ ಹಳದಿ ಮಿಶ್ರಿತ ಬೆಳ್ಳನೆಯ ದೀಪ ಬೆಳಗಿತು. ಅಂತಹದೇ ದೀಪ ಸಚಿವಸಂಪುಟದ ಸದಸ್ಯರ

In Public domain. Digitization Muthulakshmi Research Academy
ಮನದಲ್ಲಿ ಬೆಳಗಲಿ ಎಂದು ಸೃಷ್ಟಿಕರ್ತನನ್ನು ಕೇಳಿಕೊಳ್ಳತೊಡಗಿದ್ದೆ. ಆದರೆ ಸಭೆ ಮುಗಿಯಲೇ ಇಲ್ಲ.

ಅಂತೂ ಎಂಟು ಗಂಟೆಯ ಸುಮಾರಿಗೆ ಸಭಾಭವನದ ಬಾಗಿಲು ತೆರೆದುಕೊಂಡಿತು. ಬಾಗಿಲ ಮೇಲಿನ ಕೆಂಪು ಬತ್ತಿ ಆರಿತ್ತು. ಮೊದಲು ಮುಖ್ಯಮಂತ್ರಿಗಳು ಆಚೆ ಬಂದರು. ಮಾಧ್ಯಮದವರು ಮತ್ತು favour seekers ಅವರನ್ನು ಮುತ್ತಿಕೊಂಡರು. ಸ್ಥಿತಪ್ರಜ್ಞೆಯ ಜನನಾಯಕ ಜನರ ಮಧ್ಯ ಕರಗಿ ಹೋದರು. ನಾನು ಅಲ್ಲಿಯೇ ನಿಂತಿದ್ದೆ. ಸಚಿವ ಪಾಟೀಲರು ಮತ್ತು ಸಚಿವ ವಿನಯ ಕುಲಕರ್ಣಿ ಹೊರಬಂದರು. ಇಬ್ಬರ ಕಣ್ಣುಗಳು ಕೆಂಪಗಾಗಿದ್ದವು. ಕುಲಕರ್ಣಿಯವರನ್ನು ಸಮಾಧಾನಪಡಿಸುವಂತೆ ಪಾಟೀಲರು ಅವರ ಹೆಗಲ ಮೇಲೆ ಕೈ ಹಾಕಿಕೊಂಡು ದಡದಡನೆ ಲಿಫ್ಟ್ ಇಳಿದು ಹೊರಟೇ ಹೋದರು. ಯಾರೋ ಹೇಳಿದರು. 'ಲಿಂಗಾಯತ ವಿಷಯ ಮತ್ತೆ defer ಆಗಿದೆ' ಎಂದು ಸಮಾಧಾನವಾಯ್ತು. ಮಧ್ಯಾಹ್ನದಿಂದ ಏನೂ ತಿಂದಿರಲಿಲ್ಲ. ಹೊಟ್ಟೆ ಚುರುಗುಟ್ಟುತ್ತಿತ್ತು. ಚಾಲುಕ್ಯ ಹೋಟೆಲ್‌ಗೆ ಹೋಗಿ ದೋಸೆ ಆರ್ಡರ್ ಮಾಡಿ 'ಕ್ಯಾಬಿನೆಟ್ ಕಿವಿಗೆ' ಕರೆ ಮಾಡಿದೆ. ಈ ಬಾರಿ ಸವಿಸ್ತಾರವಾದ ವರದಿಯನ್ನು ನೀಡಲಾರಂಭಿಸಿದ್ದ ನಂಬಿದ ಗೆಳೆಯ. ನಿಮ್ಮದು ಭಾರಿ ಗಲಾಟೆಯಂತೆ. ವಿನಯ ಮತ್ತು ಮಲ್ಲಿಕಾರ್ಜುನ ಹೊಡೆದಾಡಿಕೊಂಡರಂತೆ. ಬೈಗುಳಗಳು ಹಾರಾಡಿದುವಂತೆ. ವಿನಯನನ್ನು ಹಾಲ್ ನಿಂದ ಹೊರಹೋಗಲು ಮುಖ್ಯಮಂತ್ರಿಗಳು ಸೂಚಿಸಿದರಂತೆ. ಲಿಂಗಾಯತದ ಪರವಾಗಿ ಎಂ.ಬಿ.ಪಾಟೀಲ ಮತ್ತು ವಿನಯ ಕುಲಕರ್ಣಿ ಬಹಳ ಗಲಾಟೆ ಮಾಡಿದರಂತೆ. ಮಧ್ಯೆ ಮಧ್ಯೆ ಸಚಿವ ರಾಯರೆಡ್ಡಿ ಮತ್ತು ಶರಣ ಪ್ರಕಾಶ ಧ್ವನಿಗೂಡಿಸುತ್ತಿದ್ದರಂತೆ. ಹಿರಿಯ ಸಚಿವರು ತಮಾಷೆ ನೋಡುತ್ತ ಕುಳಿತಿದ್ದರಂತೆ. ಮಲ್ಲಿಕಾರ್ಜುನಗೆ ಈಶ್ವರ ಖಂಡ್ರೆ ಸಾಥ್ ನೀಡುತ್ತಿದ್ದರಂತೆ. ಭಾರೀ ಗಲಾಟೆ ಆಯಿತಂತೆ ಎಂದು ಅವನು ವಿವರಿಸುತ್ತಲಿದ್ದ. ದೋಸೆ ಬಂತು 'ನಂತರ ಮಾತಾಡ್ತೀನಿ' ಎಂದು ಫೋನಿಟ್ಟೆ.

ಮಾರ್ಚ್ ಎಂಟರ ಸಭೆಯಲ್ಲಿ ಮೂರೂವರೆ ತಾಸು ಚರ್ಚೆ ಮಾಡಿ ಅಲ್ಪಸಂಖ್ಯಾತರ ಸಮಸ್ಯೆಯನ್ನು ಬಗೆಹರಿಸಿತ್ತು. ಇಂದು(ಮಾರ್ಚ್ ೧೪, ೨೦೧೮) ನಡೆದ ಸಭೆಯಲ್ಲಿ ನಮ್ಮವರಿಂದಲೇ ನಮಗೆ ಸಂಕಟ ಬಂದಿತ್ತು. 'ಸ್ವತಂತ್ರ ಧರ್ಮದ ಹೋರಾಟದಿಂದ ಹಿಂದೆ ಸರಿಯಲ್ಲ' (ಜುಲೈ ೨೭, ೨೦೧೭) ಎಂದಿದ್ದ, ವೀರಶೈವ ಮಹಾಸಭೆಯ ಅಧ್ಯಕ್ಷರ ಮಗ ಹಾಗೂ ಮಹಾಸಭೆಯ ಪ್ರಧಾನ ಕಾರ್ಯದರ್ಶಿಯಿಂದ ಲಿಂಗಾಯತ ಪ್ರತ್ಯೇಕ ಧರ್ಮದ ಬಗ್ಗೆ ಭಯಂಕರ ವಿರೋಧ ವ್ಯಕ್ತವಾಗಿತ್ತು. ಎಂಟು ನೂರು ವರ್ಷಗಳಿಂದ ಕುಂಟುತ್ತ ಬಂದ ಇತಿಹಾಸ ಮರುಕಳಿಸಿತ್ತು. ಪಂಚಪೀಠದ ಮೂಲಪುರುಷರು ಹನ್ನೆರಡನೆಯ

In Public domain. Digitization Muthulakshmi Research Academy

ಶತಮಾನದ ಶರಣರೇ ಆಗಿದ್ದರು ಎಂಬುದನ್ನು ಇವರೇಕೆ ಮರೆತರು? ಪುರಾತನದ ಹುಚ್ಚಿನಿಂದ ವೀರಶೈವ ಧರ್ಮ ಕೃತಯುಗದ್ದು ಎಂದು ಹೇಳುತ್ತ ಶರಣರು ಹುಡುಕಿದ ಜಂಗಮ ಪದವನ್ನು ಹೈಜಾಕ್ ಮಾಡಿಕೊಂಡು ಇಂದು ಲಿಂಗಾಯತಕ್ಕೆ ಸಿಗುತ್ತಲಿರುವ ಮಾನ್ಯತೆಗೆ ಕಲ್ಲು ಹಾಕಲು ಇವರ್‍ಯಾರು? ತಮ್ಮ ಸಮಾಜಕ್ಕೆ ಒಳ್ಳೆಯದಾಗುತ್ತಿರುವುದನ್ನು ತಡೆಯುವುದು, ಸರ್ವರ ಏಳಿಗೆ ಬಯಸುವ ಜಂಗಮ ತತ್ವಕ್ಕೆ ಯೋಗ್ಯವೆ?

ಮಾರ್ಚ್ ೧೪ ಮತ್ತು ೧೯ರ ಮಧ್ಯೆ ಮತ್ತಷ್ಟು ಜಟಾಪಟಿಗಳಿಗೆ ಬೆಂಗಳೂರು ನಗರ ಸಾಕ್ಷಿಯಾಗಿತ್ತು. ಅಡ್ಡಪಲ್ಲಕ್ಕಿಯಿಲ್ಲದೆ ಪಂಚಪೀಠಾಧೀಶ್ವರರು ಕಾಲ್ನಡಿಗೆಯಿಂದ ಒಬ್ಬ ಪ್ರಜಾಪ್ರಭುತ್ವದ ಪ್ರತಿನಿಧಿಯ (ಮುಖ್ಯಮಂತ್ರಿಗಳ ಗೃಹಕಚೇರಿ ಕೃಷ್ಣಾ) ಕಚೇರಿಗೆ ಬಂದಿದ್ದರು. ಅವರಿಗೆ ಅಲ್ಲಿಗೆ ಬರಲು ಯಾರೂ ಆಮಂತ್ರಣ ನೀಡಿರಲಿಲ್ಲ. ಸ್ವಾಗತಿಸಲು ಅಲ್ಲಿ ಅಷ್ಟದಿಕ್ಪಾಲರು ಇರಲಿಲ್ಲ, ಬಾಗಿಲುಗಳಿಗೆ ತಳಿರು ತೋರಣ ಕಟ್ಟಿರಲಿಲ್ಲ, ಬಾಜಾ ಬಜಂತ್ರಿಗಳಿರಲಿಲ್ಲ. ಆರತಿ ಅರತಕ್ಷತೆ ಇರಲಿಲ್ಲ. ಧರ್ಮಾಧಿಕಾರಿಗಳು ಆಸೀನರಾಗಲು ಎತ್ತರದ ಆಸನಗಳಿರಲಿಲ್ಲ. ಅಲ್ಲಿತ್ತು ಕೇವಲ ಜನಸಾಮಾನ್ಯನ ಪ್ರಭುತ್ವ, ಬಸವಣ್ಣನವರು ಬಯಸಿದ್ದ ಸಮಸಮಾಜದ ಪ್ರಭುತ್ವ ಏಣಿಶ್ರೇಣಿ ಆಚರಣೆಯ ಧರ್ಮ ಪ್ರಭುತ್ವಕ್ಕೆ ತಲೆ ಬಾಗಿತ್ತು. ಅಂದೇ ಗೆದ್ದಿತ್ತು ಬಸವಣ್ಣನವರ ಧರ್ಮ. ಇದನ್ನೇ ಅಲ್ಲವೆ ಬಸವಣ್ಣನವರು ಬಯಸಿದ್ದು? ಸೌಜನ್ಯದಿಂದ ಮುಖ್ಯಮಂತ್ರಿಗಳು ಪಂಚಪೀಠಾಧೀಶ್ವರರ ಮನವಿಯನ್ನು ಆಲಿಸಿದರು. 'ಎಲ್ಲರೊಂದಿಗೆ ಸಮಾಲೋಚಿಸಿ ಎಲ್ಲರೂ ಒಪ್ಪುವಂತಹ ನಿರ್ಣಯ ಮಾಡುವೆ ಸ್ವಾಮೀಜಿ' ಎಂದು ಅವರನ್ನು ಬೀಳ್ಕೊಟ್ಟಿದ್ದರು. ದಿನಾಂಕ ೮ ಮತ್ತು ದಿನಾಂಕ ೧೪ರಂದು ನಡೆದ ಸಚಿವ ಸಂಪುಟಸಭೆಗಳಲ್ಲಿ ಲಿಂಗಾಯತ ಸಮಸ್ಯೆ ಇತ್ಯರ್ಥವಾಗುವ ಬದಲು ಉಲ್ಬಣಗೊಂಡಿತ್ತು. ಪಂಚಪೀಠಗಳ ಒತ್ತಡ, ಸಂಪುಟಸಭೆಯಲ್ಲಿ ಸಚಿವರ ಭಿನ್ನ ನಿಲುವು, ಅಲ್ಪಸಂಖ್ಯಾತ ಧರ್ಮಗಳ ಸಚಿವರ ಆತಂಕ, ಹಿರಿಯ ಸಚಿವರ ಮೌನ, ಮಾಧ್ಯಮಗಳಲ್ಲಿ ಪರವಿರೋಧಗಳ ಚರ್ಚೆ ಇವೆಲ್ಲವೂ ಮುಖ್ಯಮಂತ್ರಿಗಳನ್ನು ಇಕ್ಕಟ್ಟಿಗೆ ಸಿಲುಕಿಸಿವೆ. ಸಿಎಂ ಅವರ ಆತ್ಮೀಯರೇ ಪಂಚಪೀಠಾಧೀಶ್ವರಿಗೆ ಆಮಂತ್ರಣ ನೀಡಿದ್ದರು ಎಂಬ ಊಹಾಪೋಹ ಸಿಎಂ ಗೃಹಕಚೇರಿಯಿಂದ ಬರಲಾರಂಭಿಸಿದ್ದವು. ನಾವು ಒಂದು ಸಲ ಊಹಾಪೋಹ ಸರಿ ಇದ್ದರೂ ಇರಬಹುದು ಎಂದು ನಮ್ಮ ಕೊನೆಯ ಪ್ರಯತ್ನವನ್ನು ಮಾಡಲು ನಿರ್ಧರಿಸಿದೆವು.

ಕೊನೆಯ ಪ್ರಯತ್ನ: ಈ ಸುಳ್ಳುಸುದ್ದಿಯನ್ನು ನಾವು ನಂಬಿ ಇದನ್ನು counter ಮಾಡಲು ವಿರಕ್ತಮಠಾಧೀಶರಿಂದ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲು ನಿರ್ಧರಿಸಿದ್ದೆವು. ಮುಂದಿನ ಸಚಿವಸಂಪುಟದ ಸಭೆ ಮಾರ್ಚ್ ೧೯ರಂದು

In Public domain. Digitization Muthulakshmi Research Academy
ನಡೆಯಲಿತ್ತು. ಅದರ ಹಿಂದಿನ ದಿನ ಮಾರ್ಚ್ ೧೮ರಂದು (ಸೋಮವಾರ) ಮುಖ್ಯಮಂತ್ರಿಗಳನ್ನು ಕಾಣಲು ಅವರ ಕಚೇರಿಯಿಂದ ಒಪ್ಪಿಗೆ ಪಡೆದೆವು. ಬೆಳಗಾವಿ ಭಾಗದಿಂದ ನಲ್ವತ್ತು ಮಠಾಧೀಶರು ಬರಲಿದ್ದರು. ಅವರನ್ನು ವಿ.ಆರ್.ಎಲ್. ಬಸ್ಸಿನಲ್ಲಿ ಕರೆತರಲಿದ್ದರು ನಾಗನೂರು ಮಠದ ಶ್ರೀಗಳು. ಗದಗ, ಬಾಗಲಕೋಟೆ, ಹಾವೇರಿ ಭಾಗಗಳಿಂದ ಬರಲಿರುವ ೧೫೦ ಪೂಜ್ಯರನ್ನು ಕರೆತರುವ ಜವಾಬ್ದಾರಿ ಗದುಗಿನ ತೋಂಟದಾರ್ಯ ಪೀಠ ವಹಿಸಿಕೊಂಡಿತ್ತು. 'ಕಲ್ಯಾಣ ಕರ್ನಾಟಕ ಭಾಗದಿಂದ ಬರಲಿರುವ ಪೂಜ್ಯರ ಜವಾಬ್ದಾರಿ ನನಗಿರಲಿ' ಎಂದರು ಕಲಬುರ್ಗಿಯ ಸುಲಫಲ ಮಠದ ಪೂಜ್ಯರು. ಗಡಿನಾಡು ಬೀದರ್ ಜಿಲ್ಲೆಯ ವಿರಕ್ತಮಠಗಳಿಂದ ನೂರಾರು ಪೂಜ್ಯರು ಬರಲಿದ್ದರು. ಅವರನ್ನು ರೈಲಿನ ಮುಖಾಂತರ ಕರೆತರುವ ಜವಾಬ್ದಾರಿ ವಹಿಸಿಕೊಂಡಿತ್ತು ಭಾಲ್ಕಿಯ ಹಿರೇಮಠ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ವಿರಕ್ತಮಠಗಳ ಸ್ವಾಮೀಜಿಯವರು ತಮ್ಮ ತಮ್ಮ ವಾಹನಗಳಲ್ಲಿ ಬರುತ್ತಾರೆಂದಿದ್ದರು, ಮೈಸೂರಿನ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿಯವರು. ಇನ್ನು ಮಾತೆ ಮಹಾದೇವಿಯರ ಬಸವಮಂಟಪದ ಪೂಜ್ಯರು ಬೆಂಗಳೂರಿನಲ್ಲಿ ಜೊತೆಯಾಗಲಿದ್ದರು. ವಿಜಾಪುರದಿಂದ ಐದು ಜನ ಪೂಜ್ಯರು ಕಾರಿನಲ್ಲಿ ಬರಲಿದ್ದರು. (ಅದೇ ಐದು ಜನ ಸ್ವಾಮೀಜಿಗಳು ಮುಂದೆ ವಿಜಾಪುರದಲ್ಲಿ ನಡೆದ ಪಂಚಪೀಠದ ಸ್ವಾಮಿಗಳ ಸಭೆಯಲ್ಲಿ ಲಿಂಗಾಯತದ ವಿರುದ್ಧ ಮಾತಾಡಿದ್ದರು). ಒಟ್ಟು ಐದುನೂರು ಮಠಾಧೀಶರು ಬರಲಿದ್ದಾರೆ ಎಂಬ ಮಾಹಿತಿಯು ನಮ್ಮ ಆತ್ಮಸ್ಥೈರ್ಯ ಹೆಚ್ಚಿಸಿತ್ತು.

ಬಂದ ಪೂಜ್ಯರಿಗೆ ಪೂಜೆ, ಪ್ರಸಾದದ ವ್ಯವಸ್ಥೆಯನ್ನು ಶೇಷಾದ್ರಿಪುರಂನಲ್ಲಿರುವ ಬಂಟ್ಸ್ ಕಲ್ಯಾಣಮಂಟಪದಲ್ಲಿ ಮಾಡಿದ್ದೆವು. ಮುಖ್ಯಮಂತ್ರಿಗಳ ಗೃಹಕಚೇರಿಯ ಹತ್ತಿರವಿದ್ಧ ಗಾಂಧಿಭವನದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಿದ್ದೆವು. ಐದುನೂರು ವಿರಕ್ತರು ಗಾಂಧಿಭವನದಿಂದ ಮುಖ್ಯಮಂತ್ರಿಗಳ ಗೃಹಕಚೇರಿ ಕೃಷ್ಣಾಕ್ಕೆ ನಡೆದುಕೊಂಡು ಹೋಗಲು ಆಲೋಚಿಸಿದ್ದೆವು. ಅದರ ಸಂಪೂರ್ಣ ಜವಾಬ್ದಾರಿಯನ್ನು ನನ್ನ ಮೇಲೆ ಹೊರಿಸಲಾಗಿತ್ತು. ಇಷ್ಟೊಂದು ಜನರು ಮೆರವಣಿಗೆಯಲ್ಲಿ ಹೋಗಲು ಪೊಲೀಸ್ ಅನುಮತಿ ಬೇಕೆಂದಿತು ಸ್ಥಳೀಯ ಆಡಳಿತ. ಸರಿ ಎಂದು ತರಾತುರಿಯಲ್ಲಿ ಹೈಗ್ರೌಂಡ್ ಪೊಲೀಸ್ ಸ್ಟೇಷನ್ನಿಗೆ ಹೋಗಿ ಅನುಮತಿಯನ್ನು ದೊರಕಿಸಿಕೊಂಡೆವು.

ಕಾವಿಬಣ್ಣ ಬಹಳ ಆಕರ್ಷಕ ಬಣ್ಣ. ಇಂತಹ ಬಣ್ಣದ ಪೋಷಾಕು ಧರಿಸಿದ ಒಬ್ಬ ಕಾವಿಧಾರಿ ನೂರಾರು ಜನರ ಗಮನ ಸೆಳೆಯುತ್ತಾನೆ. ಇಲ್ಲಿ ಐದುನೂರಕ್ಕೂ ಹೆಚ್ಚು ಪ್ರಭಾವಿ ಮಠಾಧೀಶರು ಒಂದೇ ಸಮಯದಲ್ಲಿ ರಸ್ತೆಗಿಳಿದರೆ ಆ ದೃಶ್ಯ ಹೇಗಿರಬಹುದು? ಗಾಂಧಿಭವನ ಮತ್ತು ಮುಖ್ಯಮಂತ್ರಿಯವರ ಗೃಹಕಚೇರಿ 'ಕೃಷ್ಣಾ' ಮಧ್ಯದಲ್ಲಿರುವ

In Public domain. Digitization Muthulakshmi Research Academy

ದೂರ ೪೦೦-೫೦೦ ಮೀಟರ್ ಮಾತ್ರ, ಎಲ್ಲ ಮಠಾಧೀಶರು ರಸ್ತೆಗಿಳಿದ ದೃಶ್ಯ ಅದ್ಭುತವಾಗಿತ್ತು. ಅಂದು ಆ ಇಡೀ ರಸ್ತೆ ಕಾವಿಮಯವಾಗಿತ್ತು. ರಸ್ತೆಯಲ್ಲಿ ಚಲಿಸುವ ವಾಹನಗಳು 'ನೀವು ಮೊದಲು' ಎಂದು ಮಠಾಧೀಶರಿಗೆ ದಾರಿ ಬಿಟ್ಟಿದ್ದವು.

ಸದ್ಭಾವದಿಂದ ಮುಖ್ಯಮಂತ್ರಿಗಳು ವಿರಕ್ತಮಠಾಧೀಶರನ್ನು ಸ್ವಾಗತಿಸಿದರು. ಮುಖ್ಯಮಂತ್ರಿಗಳ ಬಲಬದಿಯಲ್ಲಿ ಗದುಗಿನ ಜಗದ್ಗುರುಗಳು, ಅವರ ಪಕ್ಕದಲ್ಲಿ ಭಾಲ್ಕಿ ಹಿರೇಮಠದ ಪಟ್ಟಾಧ್ಯಕ್ಷರು ಕುಳಿತಿದ್ದರೆ, ಎಡಬದಿಯಲ್ಲಿ ಮುರುಘಾಶರಣರು ಆಸೀನರಾಗಿದ್ದರು. ಗೃಹಕಚೇರಿಯ ಕುರ್ಚಿಗಳು ಸ್ವಾಮೀಜಿಗಳಿಂದ ತುಂಬಿದ್ದವು. ಗದುಗಿನ ಮಠದ ಪೂಜ್ಯರು ಸಂಕ್ಷಿಪ್ತವಾಗಿ ನಾಲ್ಕು ಮಾತುಗಳನ್ನಾಡಿ ಮನವಿ ಪತ್ರ ಸಲ್ಲಿಸಿದರು. ಬೆಳಗಾವಿಯ ನಾಗನೂರು ಮಠದ ಡಾ.ಸಿದ್ಧರಾಮ ಸ್ವಾಮೀಜಿಯವರೂ ಮನವಿ ಸಲ್ಲಿಸಿದರು. ಮುಖ್ಯಮಂತ್ರಿಗಳ ಹಾವಭಾವ ನಮ್ಮೆಗೆಲ್ಲ ತೃಪ್ತಿ ತಂದಿತ್ತು. ಕೃಷ್ಣಾದಿಂದ ಹೊರಬಂದ ಸ್ವಾಮೀಜಿಯವರು ಕಾಲ್ನಡಿಗೆಯಿಂದ ಗಾಂಧಿಭವನ ಸೇರಿ ಮತ್ತೊಮ್ಮೆ ಸಮಾಲೋಚನೆ ಮಾಡೋಣ ಎಂದರು. ಅವರ ಆಸೆಯಂತೆ ಮತ್ತೊಮ್ಮೆ ಸಭೆ ಸೇರಿ ಮುಂದಿನ ದಾರಿಯ ಬಗ್ಗೆ ಚರ್ಚಿಸಿದೆವು. ಮಾಧ್ಯಮಗಳು ದಿನವಿಡಿ ಈ ದೃಶ್ಯಗಳನ್ನು ಬಿತ್ತರಿಸಿದ್ದವು.

ಐತಿಹಾಸಿಕ ದಿನ: ಲಿಂಗಾಯತ ಧರ್ಮದ ಅಲ್ಪಸಂಖ್ಯಾತ ಮಾನ್ಯತೆಯ ವಿಷಯ ಸಚಿವಸಂಪುಟದ ಎರಡು ಸಭೆಗಳಲ್ಲಿ ಇತ್ಯರ್ಥವಾಗಿರಲಿಲ್ಲ. ನಾಡಿನ ಲಿಂಗಾಯತ ಹೋರಾಟಗಾರರು, ಬೆಂಬಲಿಗರು ಕಾತರದಿಂದ ಮೂರನೆಯ ಸಚಿವಸಂಪುಟ ಸಭೆಯ ನಿರ್ಧಾರಕ್ಕಾಗಿ ಕಾತರದಿಂದ ಕಾಯುತ್ತಿದ್ದರು. ವೈಯಕ್ತಿಕವಾಗಿ ನಾನು ಬಹಳ ಘಾಸಿಗೊಂಡಿದ್ದೆ. ಎರಡು ಬಾರಿ ವಿಧಾನಸೌಧದಲ್ಲಿ ಕಾಯ್ದು ಭ್ರಮನಿರಸನಗೊಂಡಿದ್ದೆ. ಹತ್ತೊಂಬತ್ತರಂದು ನಡೆಯಲಿರುವ ಸಂಪುಟಸಭೆಯ ನಿರ್ಣಯವನ್ನು ಮಾಧ್ಯಮಗಳ ಮುಖಾಂತರ ತಿಳಿಯಲು ಮನೆಯಲ್ಲಿರಲು ನಿಶ್ಚಯಿಸಿದ್ದೆ. ಏಷಿಯಾ ನೆಟ್ ಸುವರ್ಣ ನ್ಯೂಸ್‌ನವರು ಕರೆ ಮಾಡಿ ಈ ಸಮಯದಲ್ಲಿ ನೀವು ನಮ್ಮೊಂದಿಗೆ ಇರಲೇಬೇಕು ಎಂದಿದ್ದರು. ಅವರ ಮಾತಿಗೆ ಮನ್ನಣೆ ನೀಡುತ್ತ ನಾನು ಸುವರ್ಣ ನ್ಯೂಸ್ ಡಿಬೆಟ್‌ನಲ್ಲಿ ಭಾಗವಹಿಸಿ ಮಾತನಾಡಲು ಅವರ ಕಚೇರಿಗೆ ತೆರಳಿದ್ದೆ. ಅದು ಮೂರೂವರೆ ಗಂಟೆಯ ದೀರ್ಘಾವಧಿಯ ಡಿಬೆಟ್ ಆಗಿತ್ತು. ಗಂಟೆಗೊಬ್ಬರು ಆ್ಯಂಕರ್‌ಗಳು ಬದಲಾಗುತ್ತಿದ್ದರು. 'Breaking News ಬರುತ್ತಿದೆ' ನೋಡೋಣ ಎಂದು ಆ್ಯಂಕರ್ ರಮಾಕಾಂತ ನಮಗೆಲ್ಲ ಒಂದು ನಿಮಿಷ ಬಿಡುವು ನೀಡಿದ್ದರು. ಲಿಂಗಾಯತರು ಒಂಭತ್ತು ಶತಮಾನಗಳಿಂದ ಕಾಯುತ್ತಿದ್ದ ಮಹತ್ವದ ಸುದ್ದಿ ದೃಶ್ಯ ಮಾಧ್ಯಮಗಳಲ್ಲಿ breaking news ಎಂದು ಬಿತ್ತರವಾಗುತ್ತಿತ್ತು. 'ಲಿಂಗಾಯತ ಧರ್ಮಕ್ಕೆ ಅಲ್ಪಸಂಖ್ಯಾತರ ಮಾನ್ಯತೆಗೆ ಸಂಪುಟ ಸಭೆಯ ಒಪ್ಪಿಗೆ' ಎಂಟು ಶಬ್ದಗಳ

In Public domain. Digitization Muthulakshmi Research Academy

ವಾಕ್ಯವನ್ನು ಆ್ಯಂಕರ್ ರಮಾಕಾಂತ ಹೇಳುತ್ತಿದ್ದಂತೆ ನಾನು ರೋಮಾಂಚನಗೊಂಡು ನನ್ನ ಸ್ಥಾನಮಾನವನ್ನು ಗಮನಿಸದೆ, ಭಾವಾವೇಷದಿಂದ ಅವರನ್ನು ತಬ್ಬಿಕೊಂಡು ಅತ್ತುಬಿಟ್ಟೆ. ಆ ಎಂಟು ಶಬ್ದಗಳ ವಾಕ್ಯ ನನ್ನ ಜೀವನದ ಅತಿ ಮುಖ್ಯ ವಾಕ್ಯವಾಗಿದೆ.

ಮಾರ್ಚ್ ೧೯, ೨೦೧೮ ಲಿಂಗಾಯತ ಇತಿಹಾಸದ ಒಂದು ಐತಿಹಾಸಿಕ ದಿನ. ಸುಮಾರು ಒಂಬತ್ತು ನೂರು ವರ್ಷಗಳ ನಂತರ ಲಿಂಗಾಯತರ ಕನಸು ನನಸಾದ ದಿನ. ಮೊತ್ತಮೊದಲ ಬಾರಿಗೆ ಆರೂವರೆ ಕೋಟಿ ಜನರ ಪ್ರತಿನಿಧಿಯೊಬ್ಬರು ಸಂವಿಧಾನ ನೀಡಿದ ಅಧಿಕಾರವನ್ನು ಬಳಸಿ, ದಕ್ಷಿಣ ಭಾರತದಲ್ಲಿ ಹುಟ್ಟಿದ ದ್ರಾವಿಡ ಮೂಲದ ಕನ್ನಡದ ಮೊಟ್ಟಮೊದಲ ಧರ್ಮ 'ಲಿಂಗಾಯತ ಸ್ವತಂತ್ರ ಅಲ್ಪಸಂಖ್ಯಾತ ಧರ್ಮ' ಎಂದು ಹೇಳಿದ್ದರು. ಇವರ ಹೇಳಿಕೆಗೆ ಭಾರತದ ಸಂವಿಧಾನದ ಬದ್ಧತೆಯು ಇತ್ತು. ಆರೂವರೆ ಕೋಟಿ ಕನ್ನಡಿಗರ ಅಧಿಕೃತ ಮುದ್ರೆ ಇತ್ತು. ಎಂಟು ಜನ ಲಿಂಗಾಯತ ಮುಖ್ಯಮಂತ್ರಿಗಳಾಗಿದ್ದ ಸರ್ವಶ್ರೀ ಎಸ್.ನಿಜಲಿಂಗಪ್ಪ, ಬಿ.ಡಿ.ಜತ್ತಿ, ಎಸ್.ಆರ್.ಕಂಠಿ, ವಿರೇಂದ್ರ ಪಾಟೀಲ, ಎಸ್.ಆರ್.ಬೊಮ್ಮಾಯಿ, ಜೆ.ಎಚ್.ಪಟೇಲ್, ಯಡಿಯೂರಪ್ಪ, ಜಗದೀಶ ಶೆಟ್ಟರ್, ಇವರೆಲ್ಲರೂ ತೆಗೆದುಕೊಳ್ಳದ ನಿರ್ಣಯವನ್ನು ಶ್ರೀ ಸಿದ್ದರಾಮಯ್ಯನೆಂಬ ನಿಜಲಿಂಗಾಯತ ತೆಗೆದುಕೊಂಡಿದ್ದರು.

ಸಚಿವರನ್ನು ಅಭಿನಂದಿಸಲು ಅವರ ಮನೆಗೆ ಹೋದೆ. ನಗುಮುಖದಿಂದ ಸ್ವಾಗತಿಸಿ ಅಂದಿನ ಸಭೆಯಲ್ಲಿ ನಡೆದ ವಿಷಯವನ್ನು ಸಂಕ್ಷಿಪ್ತವಾಗಿ ಹೇಳಿದರು. ಅದು ಮರುದಿನದ ಪ್ರಜಾವಾಣಿ ಪತ್ರಿಕೆಯಲ್ಲಿ ಈ ರೀತಿಯಾಗಿ ಪ್ರಕಟವಾಗಿತ್ತು. ಸಂಪುಟದ ಟಿಪ್ಪಣಿಯಲ್ಲಿ ಮೊದಲು 'ಲಿಂಗಾಯತರಿಗೆ ಅಲ್ಪಸಂಖ್ಯಾತರ ಸ್ಥಾನಮಾನಕ್ಕೆ ಶಿಫಾರಸು' ಮಾಡುವುದು ಎಂದಷ್ಟೇ ಇತ್ತು. ವೀರಶೈವ ಪದವನ್ನು ಸೇರಿಸುವಂತೆ ಪಟ್ಟು ಹಿಡಿದ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ ಮತ್ತು ಈಶ್ವರ್ ಖಂಡ್ರೆ 'ಈ ಬದಲಾವಣೆ ಮಾಡದಿದ್ದರೆ ಪರಿಣಾಮ ನೆಟ್ಟಗೆ ಇರುವುದಿಲ್ಲ. ನಮ್ಮ ದಾರಿ ನೋಡಿಕೊಳ್ಳುತ್ತೇವೆ' ಎಂದು ನೇರವಾಗಿ ಎಚ್ಚರಿಕೆ ನೀಡಿದರು. ವೀರಶೈವ ಧರ್ಮ ಸ್ಥಾಪನೆಗೆ ಸೋಲಾಗಿರುವ ಬಗ್ಗೆ ಪ್ರಸ್ತಾಪಿಸಿದಾಗ ಇಂತಹ ಶಿಫಾರಸ್ಸನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದ್ದಕ್ಕೆ ದಾಖಲೆ ನೀಡುವಂತೆ ಸಚಿವರಾದ ಎಂ.ಬಿ.ಪಾಟೀಲ ಮತ್ತು ವಿನಯ ಕುಲಕರ್ಣಿ ಅವರಿಗೆ ಮಲ್ಲಿಕಾರ್ಜುನ ಸವಾಲೆಸೆದರು. ಈ ದಾಖಲೆ ಹಾಜರುಪಡಿಸಲು ಲಿಂಗಾಯತ ಧರ್ಮ ಪರ ಸಚಿವರು ವಿಫಲವಾದದ್ದರಿಂದ 'ವೀರಶೈವ ಲಿಂಗಾಯತ' ಪದ ಸೇರ್ಪಡೆಗೆ ಸಿಎಂ ಸಮ್ಮತಿಸಿದರು. ಕೊನೆಯ ಕ್ಷಣದಲ್ಲಿ ಈ ಸಂಬಂಧ ತಿದ್ದುಪಡಿ ಮಾಡಲಾಯಿತು. ವೀರಶೈವ ಧರ್ಮಕ್ಕೆ ಕೇಂದ್ರ ಅಸಮ್ಮತಿ ಸೂಚಿಸಿರಲಿಲ್ಲ. ಪ್ರತ್ಯೇಕ ಕೋಡ್ ನೀಡಲು ಸಾಧ್ಯವಿಲ್ಲವೆಂದು ಹೇಳಿತ್ತು ಎಂದು ಮಲ್ಲಿಕಾರ್ಜುನ ಅವರ ಗಮನಕ್ಕೆ ತಂದರು ಎನ್ನಲಾಗಿದೆ'.[೫]

In Public domain. Digitization Muthulakshmi Research Academy

೨೦೧೮ ಚುನಾವಣಾ ವರ್ಷ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಮರಳಿ ಅಧಿಕಾರಕ್ಕೆ ಬರಲು ತನ್ನೆಲ್ಲ ಶಕ್ತಿಯನ್ನು ಪಣಕ್ಕಿಟ್ಟಿತ್ತು. ಇತ್ತ ಕೇಂದ್ರ ಸರಕಾರವನ್ನು ಮುನ್ನಡೆಸುತ್ತಿದ್ದ ಬಾಜಪ ಕರ್ನಾಟಕ ರಾಜ್ಯವನ್ನು ಮರಳಿ ತನ್ನ ತೆಕ್ಕೆಗೆ ತಗೆದುಕೊಳ್ಳಬೇಕಾಗಿತ್ತು. ಲಿಂಗಾಯತ ಧರ್ಮದ ಮಾನ್ಯತೆಯು ನಾಡಿನ ಚರ್ಚಾವಿಷಯವಾಗಿ ಪರಿಗಣಿಸಲ್ಪಟ್ಟಿತ್ತು. ಸರಕಾರದ ಕ್ರಮವನ್ನು ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರು, ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಿಸುತ್ತ 'ಜನಸಾಮಾನ್ಯರನ್ನು ವಿಭಜಿಸುವುದನ್ನು ಯಾವಾಗ ನಿಲ್ಲಿಸುತ್ತೀರಿ? ನಿಮ್ಮ ಹೆಸರನ್ನು ಸಿದ್ಧ-ರಾಮಯ್ಯ ಅಂತ ವಿಭಜಿಸುತ್ತೀರಾ? ಮುಂದಿನ ಚುನಾವಣೆಯಲ್ಲಿ ಯಾರು ಗೆಲ್ಲುತ್ತಾರೆಂಬ ಆಸಕ್ತಿ ನನಗಿಲ್ಲ. ನಾನು ರಾಜಕಾರಣಿ ಅಲ್ಲ.'[೬] ಎಂದಿದ್ದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್ ಹೆಗ್ಡೆಯವರು, 'ತಾವು ವೈಯುಕ್ತಿಕವಾಗಿ ಯಾವುದೇ ಧರ್ಮವನ್ನು ಆಚರಿಸುವುದಿಲ್ಲ. ತಾವು ಧರ್ಮಾತೀತ ಮತ್ತು ಜಾತ್ಯತೀತ' ಎಂದು ಹೇಳಿಕೊಂಡಿದ್ದಾರೆಯೆ? ಹೇಳಿಕೊಂಡದ್ದು ನನ್ನ ಗಮನದಲ್ಲಿ ಇಲ್ಲ. ಅವರು ಹಿಂದೂಧರ್ಮವನ್ನು ಆಚರಿಸುತ್ತಿದ್ದರೆ ಅವರು ಆಚರಿಸುತ್ತಿರುವ ಧರ್ಮವು ಒಡೆಯುವ ಧರ್ಮ. 'ಲಿಂಗಾಯತವು ಕೂಡಿಸುವ ಧರ್ಮ', ಸಿದ್ದರಾಮಯ್ಯನವರು ಕೂಡಿಸುವ ಧರ್ಮಕ್ಕೆ ಮನ್ನಣೆಯನ್ನು ಕೊಟ್ಟಿದ್ದನ್ನು ನ್ಯಾಯಮೂರ್ತಿಗಳು ಯಾಕೆ ಗಮನಿಸಲಿಲ್ಲ?

ಬಿ.ಜೆ.ಪಿ.ಯ ರಾಜ್ಯಾಧ್ಯಕ್ಷ, ಮಾಜಿ ಮುಖ್ಯಮಂತ್ರಿ ಹಾಗೂ ಲಿಂಗಾಯತ ನಾಯಕರೆನಿಸಿಕೊಂಡ ಯಡಿಯೂರಪ್ಪನವರು 'ಹಾವೂ ಸಾಯಬಾರದು ಕೋಲೂ ಮುರಿಯಬಾರದು' ಎಂಬಂತೆ 'ಅಖಿಲಭಾರತ ವೀರಶೈವ ಮಹಾಸಭಾ ತಗೆದುಕೊಳ್ಳುವ ತೀರ್ಮಾನಕ್ಕೆ ಬಿ.ಜೆ.ಪಿ. ಬದ್ಧ. ಮಹಾಸಭಾ ತುರ್ತಾಗಿ ಸಭೆ ಸೇರಿ ಸರಕಾರದ ಶಿಫಾರಸ್ಸಿನ ಸಾಧಕ ಬಾಧಕಗಳನ್ನು ಚರ್ಚಿಸಿ ಮಾರ್ಗದರ್ಶನ ನೀಡಬೇಕೆಂದು ವಿನಂತಿ"[೭] ಎಂದಿದ್ದರು. ಜನರ ಒಲವು ಯಾವ ಕಡೆಗಿದೆ ಎಂದು ತಿಳಿಯದ, ಬೇಲಿ ಮೇಲೆ ಕುಳಿತವರ ರೀತಿ ಹೇಳಿಕೆ ನೀಡಿದ್ದರು. ಮಹಾಸಭೆಯ ಅಧ್ಯಕ್ಷರ ಮತ್ತು ಇವರಲ್ಲಿದ್ದ ರಾಜಕೀಯ ಒಳ ಒಪ್ಪಂದ ಬಲ್ಲ ಲಿಂಗಾಯತರು ಈ ಹೇಳಿಕೆಯನ್ನು ಕೇಳಿ ನಕ್ಕುಬಿಟ್ಟಿದ್ದರು. ಯಾವಾಗಲೂ ಪರರ ನಿರ್ಧಾರಗಳಿಂದ ತಮಗಾಗುವ ರಾಜಕೀಯ ಲಾಭ ನಷ್ಟಗಳ ಕುರಿತು ಚಿಂತಿಸುವ, ಸ್ವಹಿತಾಸಕ್ತಿಯೇ ಮುಖ್ಯಗುರಿ ಎಂಬಂತಿರುವ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿಯವರು "ಸಿಎಂ ಒಡಕಿನ ರಾಜಕಾರಣ ಮಾಡುತ್ತಿದ್ದಾರೆ, ಸಮಾಜದ ಹಿರಿಯರು, ಸ್ವಾಮೀಜಿಗಳ ಜೊತೆ ಚರ್ಚಿಸಬೇಕಾಗಿತ್ತು. ಸರಕಾರಕ್ಕೆ ಮುಂದಿನ ದಿನಗಳಲ್ಲಿ ಇದರ ಬಗ್ಗೆ ಪಶ್ಚಾತಾಪ ಆಗಲಿದೆ"[೮] ಎಂದು ಪ್ರತಿಕ್ರಿಯೆ ನೀಡಿದ್ದರು. 'ಲಿಂಗಾಯತ ಎಂಬ ಹಸನಾದ ಹೊಲದಲ್ಲಿ ವೀರಶೈವ ಎಂಬ ಕಸದ ಬೀಜ ಬಿದ್ದು,

In Public domain. Digitization Muthulakshmi Research Academy

ಬೆಳೆಯೇ ಕಾಣದಂತಾಗಿದೆ. ಕಾಲದ ಅಪೇಕ್ಷೆ, ಪ್ರಜ್ಞಾವಂತ ಮಠಾಧೀಶರು, ಸಚಿವರ ಶ್ರಮದಿಂದ ಲಿಂಗಾಯತ ಧರ್ಮಕ್ಕೆ ಅಲ್ಪಸಂಖ್ಯಾತರ ಸ್ಥಾನಮಾನ ದೊರೆತಿದೆ'[೯] ಎಂದು ತೋಂಟದ ಸಿದ್ಧಲಿಂಗ ಸ್ವಾಮೀಜಿ ಪ್ರತಿಕ್ರಿಯಿಸಿದ್ದರು. ವೀರಶೈವರ ಮುಖವಾಣಿಯಾದ ರಂಭಾಪುರಿ ಪೀಠದ ಜಗದ್ಗುರು ಶ್ರೀ ವೀರಸೋಮೇಶ್ವರ ಸ್ವಾಮೀಜಿ ಮಾತನಾಡುತ್ತಾ 'ಕೇಂದ್ರಕ್ಕೆ ಶಿಫಾರಸು ಮಾಡುವ ಸಚಿವ ಸಂಪುಟ ಕೈಗೊಂಡಿರುವ ತೀರ್ಮಾನ ವ್ಯವಸ್ಥಿತ ಪಿತೂರಿ ಮತ್ತು ಆತುರದ ತೀರ್ಮಾನ'[೧೦] ಎಂದು ಹೇಳಿಕೆ ನೀಡಿದ್ದರು. 'ಧಾರ್ಮಿಕ ಅಲ್ಪಸಂಖ್ಯಾತ ಸ್ಥಾನಮಾನ ನೀಡುವಂತೆ ರಾಜ್ಯ ಸರ್ಕಾರವು ಕೇಂದ್ರಕ್ಕೆ ಶಿಫಾರಸು ಮಾಡಲು ಕೈಗೊಂಡಿರುವ ತೀರ್ಮಾನ ಸ್ವಾಗತಾರ್ಹ'[೧೧] ಎಂದು ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಸಂತಸ ವ್ಯಕ್ತಪಡಿಸಿದ್ದರು. ಇನ್ನೊಬ್ಬ ವೀರಶೈವ ಮಹಾಸಭೆಯ ಪದಾಧಿಕಾರಿಯಾದ ಪೌರಾಡಳಿತ ಸಚಿವ ಈಶ್ವರ ಖಂಡ್ರೆಯವರು 'ವೀರಶೈವ- ಲಿಂಗಾಯತ ಎರಡೂ ಒಂದೇ ಎಂಬುದು ಮಹಾಸಭಾ ನಿಲುವಾಗಿತ್ತು. ಸಂಪುಟದಲ್ಲಿ ಮಾತುಕತೆ ನಡೆದು ತೀರ್ಮಾನ ಕೈಗೊಂಡಿದ್ದೇವೆ'[೧೨] ಎಂದು ಪ್ರತಿಕ್ರಿಯೆ ನೀಡಿದ್ದರು.

ಲಿಂಗಾಯತ ಹೋರಾಟದ ಇಂಚಿಂಚು ಮಾಹಿತಿಯನ್ನು ಸತತ ಒಂದು ವರ್ಷಗಳ ಕಾಲ ವರದಿಗಳನ್ನು ಪ್ರಕಟಿಸುತ್ತ ಬಂದ ಪ್ರಜಾವಾಣಿ ಪತ್ರಿಕೆಯು ಮುಖಪುಟದಲ್ಲಿ ಬಣ್ಣದ ಚಿತ್ರ ಹಾಕಿ ವಿಸ್ತಾರವಾದ ವರದಿಯನ್ನು ಮಾರ್ಚ್ ೨೦, ೨೦೧೮ರಂದು ಪ್ರಕಟಿಸಿತ್ತು. 'ಲಿಂಗಾಯತ ವೀರಶೈವ ಲಿಂಗಾಯತ ಧರ್ಮಕ್ಕೆ ಅಲ್ಪಸಂಖ್ಯಾತ ಸ್ಥಾನಮಾನ ಶಿಫಾರಸ್ಸು; ಕೇಂದ್ರದ ಅಂಗಳಕ್ಕೆ ಧರ್ಮಸೂಕ್ಷ್ಮ; ಅಖಿಲ ಭಾರತ ವೀರಶೈವ ಮಹಾಸಭಾ ಸಹಮತ; ಬಹುತೇಕ ಕಡೆ ವಿಜಯೋತ್ಸವ; ಕೆಲವು ಸ್ವಾಮೀಜಿಗಳ ಮುನಿಸು; ಕೊನೆಗೂ ಲಿಂಗಾಯತ ಪ್ರತ್ಯೇಕ ಧರ್ಮಕ್ಕೆ ಅಸ್ತು' 'ಧಾರ್ಮಿಕ ಮತ್ತು ರಾಜಕೀಯ ವಲಯದಲ್ಲಿ ಬಿರುಗಾಳಿ ಎಬ್ಬಿಸಿರುವ ಪ್ರತ್ಯೇಕ ಲಿಂಗಾಯತ ಧರ್ಮದ ಬೇಡಿಕೆಗೆ ರಾಜ್ಯ ಸಚಿವ ಸಂಪುಟ ಕೊನೆಗೂ ಒಪ್ಪಿಗೆಯ ಮುದ್ರೆ ಒತ್ತಿದೆ. ತಜ್ಞರ ಸಮಿತಿಯ ಶಿಫಾರಸ್ಸಿನಂತೆ ಲಿಂಗಾಯತ ಮತ್ತು ವೀರಶೈವ ಲಿಂಗಾಯತ(ಬಸವತತ್ವದಲ್ಲಿ ನಂಬಿಕೆ ಉಳ್ಳವರು) ಎಂಬ ಹೆಸರಿನಡಿ ಲಿಂಗಾಯತರಿಗೆ ಧಾರ್ಮಿಕ ಅಲ್ಪಸಂಖ್ಯಾತರ ಸ್ಥಾನಮಾನ ನೀಡುವ ತೀರ್ಮಾನಕ್ಕೆ ಬರಲಾಗಿದೆ. ಪ್ರತ್ಯೇಕ ಲಿಂಗಾಯತ ಧರ್ಮ ಸಂಬಂಧ ಕಳೆದೊಂದು ವರ್ಷದಿಂದ ನಡೆಯುತ್ತಿದ್ದ ಹೋರಾಟ ಒಂದು ಹಂತಕ್ಕೆ ಬಂದಂತಾಗಿದೆ. ಧರ್ಮಸ್ಥಾಪನೆಗೆ ವ್ಯೂಹ ರಚಿಸಿದ ರಾಜ್ಯ ಸರ್ಕಾರ ಈ ಶಿಫಾರಸ್ಸಿನೊಂದಿಗೆ ತನ್ನ ಮೇಲಿರುವ ಜವಾಬ್ದಾರಿ ಕಳೆದುಕೊಂಡಿದೆ. ಇನ್ನು ಕೇಂದ್ರ ಸರ್ಕಾರ ಮುಂದಿನ ತೀರ್ಮಾನ ಕೈಗೊಳ್ಳಬೇಕಾಗಿದೆ. ಸಂಪುಟ ತೀರ್ಮಾನಕ್ಕೆ ಹಲವು ವಲಯಗಳಲ್ಲಿ

In Public domain. Digitization Muthulakshmi Research Academy

ಬೆಂಬಲ ವ್ಯಕ್ತ ವಾಗಿದ್ದರೆ, ಕೆಲವು ಕಡೆ ಧರ್ಮ ರಾಜಕಾರಣ ವಿರುದ್ಧ ಪ್ರತಿಭಟನೆ ನಡೆದಿದೆ. ಲಿಂಗಾಯತ ಧರ್ಮಕ್ಕೆ ವಿರೋಧಿಸಿದ್ದ ಮಾಜಿ ಸಚಿವ ಶ್ಯಾಮನೂರು ಶಿವಶಂಕರಪ್ಪ ಮತ್ತು ಈಶ್ವರ ಖಂಡ್ರೆ ಮೊದಲಾದವರು ಸ್ವಾಗತಿಸಿದ್ದಾರೆ. ಪ್ರತ್ಯೇಕ ಧರ್ಮ ವಿವಾದವು ರಾಜ್ಯ ರಾಜಕೀಯದಲ್ಲಿ ಮತ್ತಷ್ಟು ಬಿರುಗಾಳಿ ಎಬ್ಬಿಸುವ ಸೂಚನೆಗಳಿವೆ.

ಭಾರಿ ಹೋರಾಟ: ಪ್ರತ್ಯೇಕ ಧರ್ಮ ಸ್ಥಾಪನೆಗಾಗಿ ವ್ಯಾಪಕ ಹೋರಾಟ ನಡೆದಿತ್ತು. ಸಿದ್ದರಾಮಯ್ಯ ಸಂಪುಟದ ಹಿರಿಯ ಸದಸ್ಯರೇ ಇದರ ಮುಂಚೂಣಿಯಲ್ಲಿದ್ದರು. ಇದು ಲಿಂಗಾಯತರ ಮತ್ತು ವೀರಶೈವ ಸಮುದಾಯದ ನಡುವೆ ಸಂಘರ್ಷಕ್ಕೂ ಕಾರಣವಾಗಿತ್ತು. ಪ್ರತ್ಯೇಕ ಧರ್ಮದ ಬೇಡಿಕೆಗೆ ಒಪ್ಪಿಗೆ ಕೊಟ್ಟರೆ ಹೋರಾಟದ ದಾರಿ ತುಳಿಯುವ ಎಚ್ಚರಿಕೆಯನ್ನು ವೀರಶೈವ ಮಠಾಧೀಶರು ನೀಡಿದ್ದರು. ಮತ್ತೊಂದೆಡೆ ಲಿಂಗಾಯತ ಸ್ವಾಮೀಜಿಗಳು ಹೊಸ ಧರ್ಮ ಸ್ಥಾಪನೆ ಆಗಲೇಬೇಕೆಂದು ಪಟ್ಟು ಹಿಡಿದಿದ್ದರು. ಇದರಿಂದಾಗಿ ಅಡಕತ್ತರಿಯಲ್ಲಿ ಸಿಲುಕಿದಂತಾದ ಸರ್ಕಾರ ಒಂದು ಹಂತದಲ್ಲಿ ಕಾಯ್ದು ನೋಡುವ ತಂತ್ರಕ್ಕೂ ಶರಣಾಗಿತ್ತು. 'ಧರ್ಮರಾಜಕಾರಣ'ದಿಂದ ಕಾಂಗ್ರೆಸ್ಸಿಗೆ ಏನೆಲ್ಲ ಲಾಭವಾಗಬಹುದು ಎಂಬ ಲೆಕ್ಕಾಚಾರವು ಇದರ ಹಿಂದಿತ್ತು. ಇದೇ ಕಾರಣಕ್ಕೆ ಸಂಪುಟಸಭೆಯನ್ನು ಹಠಾತ್ತಾಗಿ ಮುಂದೂಡಲಾಗಿತ್ತು. ಧರ್ಮ ಒಡೆಯುವ ಕಾರ್ಯಕ್ಕೆ ಕೈ ಹಾಕಿದರೆ ಜೇನುಗೂಡಿಗೆ ಕಲ್ಲೆಸೆದಂತಾಗುತ್ತದೆ, ಹೀಗಾಗಿ ತನ್ನ ನಿಲುವಿನಿಂದ ಸರ್ಕಾರ ಹಿಂದೆ ಸರಿಯಬಹುದು ಎಂದೂ ಹೇಳಲಾಗಿತ್ತು. ಆದರೆ ಲಿಂಗಾಯತ ಧರ್ಮಸ್ಥಾಪನೆಗೆ ತಾನೆ ವ್ಯೂಹ ರಚಿಸಿದ್ದರಿಂದ ಈ ಸಂಬಂಧ ನಿರ್ಧಾರ ಕೈಗೊಂಡ ಸರಕಾರ ಕೈತೊಳೆದುಕೊಂಡಿದೆ. ಇಷ್ಟೆಲ್ಲ ಕಸರತ್ತಿನ ನಡುವೆಯೂ ಲಿಂಗಾಯತರಿಗೆ ಅಲ್ಪಸಂಖ್ಯಾತ ಸ್ಥಾನಮಾನ ದೊರಕಿತು. ಸ್ವತಂತ್ರ ಧರ್ಮ ಸ್ಥಾಪನೆಯೂ ಆಯಿತು ಎನ್ನುವಂತಿಲ್ಲ. ಯಾಕೆಂದರೆ ಈ ಹಿಂದೆ ಇಂತಹ ಪ್ರಯತ್ನ ನಡೆದಾಗ ಸೋಲಾಗಿದೆ. ಕಾನೂನು ಹೋರಾಟವು ವೈಫಲ್ಯ ಕಂಡಿದೆ. ಈ ಬಾರಿಯ ಯತ್ನವು ಅದೇ ದಾರಿ ತುಳಿಯುವ ಸಾಧ್ಯತೆ ದಟ್ಟವಾಗಿದೆ. ಹೆಚ್ಚೆಂದರೆ ಚುನಾವಣೆಯ ಸಂದರ್ಭದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವಿನ ಸಂಘರ್ಷಕ್ಕೆ ಈ ವಿವಾದ ಅಸ್ತ್ರವಾಗಿ ಬಳಕೆಯಾಗಬಹುದು ಎಂದು ವಿಶ್ಲೇಷಿಸಲಾಗುತ್ತದೆ. ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಸೋಮವಾರ ನಡೆದ ಸಚಿವಸಂಪುಟದಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಸಂಪುಟ ನಿರ್ಣಯ ಆಧರಿಸಿ ಈ ಸಂಬಂಧ ಕೇಂದ್ರಕ್ಕೆ ಪ್ರಸ್ತಾವನೆ ಕಳುಹಿಸಿಕೊಡಲಾಗುತ್ತದೆ. ಸ್ವತಂತ್ರ ಲಿಂಗಾಯತ ಧರ್ಮ ಸಂಬಂಧ ನ್ಯಾಯಮೂರ್ತಿ ನಾಗಮೋಹನ ದಾಸ್ ಅಧ್ಯಕ್ಷತೆಯ ತಜ್ಞರ ಸಮಿತಿ ನೀಡಿದ ವರದಿ ಆಧಾರ ಅನುಸಾರ ನಿಲುವು ಕೈಗೊಳ್ಳಲಾಗಿದೆ. ರಾಜ್ಯ ಅಲ್ಪಸಂಖ್ಯಾತ ಕಾಯ್ದೆ ಸೆಕ್ಷನ್ ೨(ಡಿ) ಅನ್ವಯ

In Public domain. Digitization Muthulakshmi Research Academy
ಲಿಂಗಾಯತರಿಗೆ ಅಲ್ಪಸಂಖ್ಯಾತರ ಸ್ಥಾನಮಾನ ನೀಡಲು ಅಧಿಸೂಚನೆ ಹೊರಡಿಸಿ ಈ ಕುರಿತು ಪ್ರಸ್ತಾವನೆಯನ್ನು ಕೇಂದ್ರಕ್ಕೆ ಸಲ್ಲಿಸಲಾಗುತ್ತದೆ. ಆದರೆ ಇತರ ಧಾರ್ಮಿಕ ಅಲ್ಪಸಂಖ್ಯಾತರ ಸೌಲಭ್ಯ ಮತ್ತು ಹಕ್ಕುಗಳಿಗೆ ಭಂಗ ಬಾರದಂತೆ ನೋಡಿಕೊಳ್ಳಲಾಗುತ್ತದೆ ಎಂಬ ಲಿಖಿತ ಭರವಸೆಯನ್ನು ನೀಡಲಾಗಿದೆ. 'ಗುರು ಬಸವಣ್ಣ ಪ್ರಧಾನ ಸಮಿತಿಯ ವರದಿಯಂತೆ ಲಿಂಗಾಯತ ಧರ್ಮದ ಗುರು ಬಸವಣ್ಣ. ವಚನಗಳು ಧರ್ಮಗ್ರಂಥವೆಂದು ಪರಿಗಣಿಸಲಾಗಿದೆ. ಬಸವ ತತ್ವದಂತೆ ನಡೆದುಕೊಳ್ಳುವ ಇಷ್ಟಲಿಂಗ ಧರಿಸುವ ಲಿಂಗಾಯತರು ಮತ್ತು ವೀರಶೈವ ಲಿಂಗಾಯತರು ಇದರ ಭಾಗವಾಗಿರುತ್ತಾರೆ. ಸುದೀರ್ಘಚರ್ಚೆ ನಡೆಸಿ ಈ ವಿಚಾರದಲ್ಲಿ ಸರ್ವಸಮ್ಮತ ತೀರ್ಮಾನ ಕೈಗೊಳ್ಳಲಾಗಿದೆ. ಇಡೀ ಸಂಪುಟ ಈ ಪ್ರಸ್ತಾವಕ್ಕೆ ಒಕ್ಕೊರಲಿನಿಂದ ಅನುಮೋದನೆ ನೀಡಿದೆ. ಯಾವುದೇ ಭಿನ್ನಾಭಿಪ್ರಾಯ ಉಂಟಾಗಿಲ್ಲ. ಅಂತಹ ಪ್ರಶ್ನೆಯೂ ಉದ್ಭವಿಸುವುದಿಲ್ಲವೆಂದು ಕಾನೂನು ಸಚಿವ ಟಿ.ಬಿ.ಜಯಚಂದ್ರ ಸಮರ್ಥಿಸಿಕೊಂಡರು."

ಮಳೆ ನಿಂತ ಮೇಲೆ ಮರದ ಎಲೆಯ ಮೇಲಿನ ನೀರು ಜಾರಿತು

ನ್ಯಾಯಮೂರ್ತಿ ನಾಗಮೋಹನದಾಸ್ ತಜ್ಞರ ವರದಿಯಲ್ಲಿ ಎರಡನೆಯ ಅಂಶದಲ್ಲಿ (second point) "ಬಸವಣ್ಣನವರು ಧರ್ಮಗುರುಗಳೆಂದು, ವಚನಗಳು ಪವಿತ್ರ ಗ್ರಂಥಗಳೆಂದು, ಇಷ್ಟಲಿಂಗವನ್ನು ಧರಿಸಿ, ವಚನತತ್ವಗಳನ್ನು ನಂಬಿ, ಆಚರಿಸಿ, ಪ್ರಚುರಪಡಿಸುತ್ತಿರುವ ವೀರಶೈವರು ಲಿಂಗಾಯತರ ಒಂದು ಭಾಗ ಎಂತಲೂ ಪರಿಗಣಿಸಬಹುದು" ಎಂಬ ಮಹತ್ವದ ಅಂಶವನ್ನು ಸೇರಿಸಲಾಗಿತ್ತು. ಇದು ಪಂಚಪೀಠಾಧಿಪತಿಗಳಿಗೆ ನುಂಗಲಾರದ ತುತ್ತಾಗಿತ್ತು. ಬಸವಣ್ಣನವರ ಪಟದ ಅಡಿಯಲ್ಲಿ ಸಾಗಲು ನಿರಾಕರಿಸಿದ್ದ ಇವರಿಗೆ ಬಸವಣ್ಣನವರೇ ಧರ್ಮಗುರುಗಳು ಎಂದಿದ್ದು ಅರಗಿಸಿಕೊಳ್ಳಲಾಗಲಿಲ್ಲ. ಇವರೆಲ್ಲರೂ ವೀರಶೈವ ಮಹಾಸಭಾದ ಅಧ್ಯಕ್ಷರ ಮನೆಗೆ ದೌಡಾಯಿಸಿ ಅವರ ಮೇಲೆ ಭಾರಿ ಒತ್ತಾಯ ತಂದರು.

ಈಗಾಗಲೇ ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿದ್ದ ಮಹಾಸಭೆಯ ಅಧ್ಯಕ್ಷರಿಂದಲೇ ತಪ್ಪೊಪ್ಪಿಗೆ ಎಂಬಂತಹ ಇನ್ನೊಂದು ಹೇಳಿಕೆ ಕೊಡಿಸಿ, ವಯೋವೃದ್ಧರನ್ನು ನಗೆಪಾಟಲಿಗೆ ಗುರಿಯಾಗಿಸಿದ್ದರು. ಇವರ ಒತ್ತಾಯಕ್ಕೆ ಮಣಿದ ಅ.ಭಾ.ವೀ.ಮ. ಸಭೆಯ ಅಧ್ಯಕ್ಷರು ತಮ್ಮ ಮನೆಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡುತ್ತ 'ಲಿಂಗಾಯತ ಹಾಗೂ ವೀರಶೈವ ಲಿಂಗಾಯತರಿಗೆ ಪ್ರತ್ಯೇಕ ಅಲ್ಪಸಂಖ್ಯಾತ ಧರ್ಮದ ಮಾನ್ಯತೆ ನೀಡುವಂತೆ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದ್ದರೆ ಇಬ್ಬರಿಗೂ ಸಂತಸವಾಗುತ್ತಿತ್ತು. ಆದರೆ ಬಸವತತ್ವ ಒಪ್ಪಿತ ಎಂಬ ಅಂಶ ಸೇರಿಸಿರುವುದು ಸರಿಯಲ್ಲ. ಬಸವಣ್ಣನ ತತ್ವಗಳನ್ನು ಒಪ್ಪುವುದು ಬಿಡುವುದು ಅವರವರಿಗೆ ಬಿಟ್ಟ ವಿಚಾರ ಎಂದು ವಾಗ್ದಾಳಿ ನಡೆಸಿದರು'.

In Public domain. Digitization Muthulakshmi Research Academy
'ಸರ್ಕಾರದ ನಿರ್ಧಾರವನ್ನು ಮಹಾಸಭಾ ಸ್ವಾಗತಿಸುತ್ತದೆ ಎಂಬ ಆತುರದ ಹೇಳಿಕೆ ನೀಡಿದ್ದೆ. ಬಳಿಕ ಕೂಲಂಕಷವಾಗಿ ಪರಿಶೀಲಿಸಿದಾಗ ನಿರ್ಧಾರವು ಏಕಪಕ್ಷೀಯವಾಗಿದೆ ಎಂದು ತಿಳಿಯಿತು. ಇದು ಅನ್ಯಾಯದ ಪರಮಾವಧಿ ಎಂದು ಶಾಮನೂರು ಆಕ್ರೋಶ ವ್ಯಕ್ತಪಡಿಸಿದರು. 'ವೀರಶೈವ ಧರ್ಮ ಹನ್ನೆರಡನೆಯ ಶತಮಾನಕ್ಕಿಂತ ಮುಂಚಿತವಾಗಿ ಇರಲೇ ಇಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ. ಪಂಚಾಚಾರ್ಯರು ಹುಟ್ಟು ಹಾಕಿದ ವೀರಶೈವ ಧರ್ಮ ಪ್ರಾಚೀನವಾದದ್ದು ಎಂದ ಅವರು ವೀರಶೈವ ಹಾಗೂ ಲಿಂಗಾಯತ ಎರಡೂ ಒಂದೇ ಎಂಬ ನಿರ್ಧಾರಕ್ಕೆ ಈಗಲೂ ಬದ್ಧವಾಗಿದ್ದು, ಸರ್ಕಾರದ ನಿರ್ಧಾರವನ್ನು ಒಪ್ಪುವ ಪ್ರಶ್ನೆಯೇ ಇಲ್ಲ ಎಂದರು. ಈ ಎಲ್ಲ ಗೊಂದಲಗಳ ಕುರಿತು ಚರ್ಚಿಸಲು ಇದೇ ೨೩ರಂದು ಬೆಂಗಳೂರಿನಲ್ಲಿ ಸಭೆ ಆಯೋಜಿಸಲಾಗಿದೆ. ಸರ್ಕಾರದ ನಿರ್ಧಾರಕ್ಕೆ ಪ್ರತಿಯಾಗಿ ಮಹಾಸಭಾ ಮುಂದಿನ ನಡೆಗಳ ಕುರಿತು ಚರ್ಚೆ ನಡೆಯಲಿದೆ'[೪೩] ಎಂದು ಹೇಳಿದರು. ಸಭೆಯಲ್ಲಿ ಬಾಳೆಹೊನ್ನೂರಿನ ರಂಭಾಪುರಿ ಪೀಠದ ಪ್ರಸನ್ನ ರೇಣುಕಾಚಾರ್ಯ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಉಜ್ಜಯನಿ ಪೀಠದ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಸೇರಿ ಹಲವು ವೀರಶೈವ ಮಠಾಧೀಶರು ಇದ್ದರು. ತಜ್ಞರ ವರದಿಯಲ್ಲಿ ಅ.ಭಾ.ವೀ.ಮ. ಸಭೆಯ ಅಧ್ಯಕ್ಷರ ಎಲ್ಲ ಸಂಶಯಗಳಿಗೆ ಉತ್ತರವಿತ್ತು. ವ್ಯಾಪಾರಿಗಳಾದ ಇವರಿಗೆ ವರದಿಯನ್ನು ಓದಿ, ಒರೆಗೆ ಹಚ್ಚುವ ವ್ಯವಧಾನವಾಗಲಿ, ಧರ್ಮಸಿದ್ಧಾಂತಗಳನ್ನು ಅರಿಯುವ ಜರೂರತ್ತಾಗಲಿ ಇರಲೇ ಇಲ್ಲ. ಆವುಗಳನ್ನು ತಿಳಿದುಕೊಳ್ಳಲು ಸಮಯವೂ ಇಲ್ಲ. ಕೇವಲ ರಾಜಕೀಯ ಕಾರಣಕ್ಕಾಗಿ ಲಿಂಗಾಯತ ಮತ್ತು ವೀರಶೈವ ಒಂದೇ ಎಂದು ತಿಪ್ಪೇ ಸಾರಿಸುತ್ತ ಚುನಾವಣೆಯಲ್ಲಿ ಮತ ಪಡೆಯುವ ರಾಜಕೀಯ ನಾಯಕರಿವರು.

ಈ ಎಲ್ಲ ಬೆಳವಣಿಗೆಯ ಬೆನ್ನಲ್ಲೇ ವೀರಶೈವ-ಲಿಂಗಾಯತ ಎರಡು ಒಂದೇ ಎಂದು ಸಾರುತ್ತ ಕೇವಲ ಜಾತಿಜಂಗಮರ ಹಿತ ಕಾಪಾಡುವ ಪಂಚಪೀಠಾಧೀಶ್ವರರು ತಮ್ಮ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದರು. ಅವರಿಗೆ ಮುಖ್ಯವಾಗಿ ಪ್ರತ್ಯೇಕಧರ್ಮ ಹೋರಾಟದ ನೇತೃತ್ವ ವಹಿಸಿಕೊಂಡು ಅದನ್ನು ಯಶಸ್ವಿಯಾಗಿ ದಡ ಸೇರಿಸಿದ ಸಚಿವ ಎಂ.ಬಿ.ಪಾಟೀಲರ ವಿರುದ್ಧ ಧರ್ಮಯುದ್ಧ ಸಾರಬೇಕಾಗಿತ್ತು. ಸರ್ಕಾರದ ನಿರ್ಣಯದ ಐದು ದಿನಗಳ ತರುವಾಯ ಮಾರ್ಚ್ ೨೮ರಂದು ಒಂದು ಬೃಹತ್ ಸಮಾವೇಶವನ್ನು ವಿಜಾಪುರದಲ್ಲಿ ಹಮ್ಮಿಕೊಳುವ ಸಿದ್ಧತೆ ಮಾಡಲಾರಂಭಿಸಿದ್ದರು. ಈ ಸಮಾವೇಶದ ರೂವಾರಿಗಳು ಪಂಚ ಪಂಚಪೀಠಾಧೀಶ್ವರರೇ ಆಗಿದ್ದರೂ ಸ್ಥಳಿಯ ಮಠಾಧೀಶರನ್ನು ಮುಂಚೂಣಿಯಲ್ಲಿಟ್ಟಿದ್ದರು. ಈ ಸಮಾರಂಭಕ್ಕೆ ಪಂಚಾಚಾರ್ಯ ಯುಗಮಾನೋತ್ಸವ ಎಂದು ಹೇಳುತ್ತ ಬಸವಣ್ಣ ಮತ್ತು

In Public domain. Digitization Muthulakshmi Research Academy

ಹಾನಗಲ್ ಕುಮಾರಸ್ವಾಮಿಗಳನ್ನು ಸೆಳೆದುಕೊಳ್ಳುವ ನಾಟಕ ಮಾಡಲಿದ್ದರು. ಶ್ರೀಶೈಲ, ಕಾಶಿ ಹಾಗೂ ರಂಭಾಪುರಿ ಪೀಠದ ಪೀಠಾಧಿಪತಿಗಳು ಸಭೆಯಲ್ಲಿ ಭಾಗವಹಿಸಲಿದ್ದರು. ಶಿವಯೋಗ ಮಂದಿರದ ಅಧ್ಯಕ್ಷರಾದ ಹಾಲ್ಕೆರೆಯ ಸಂಗನಬಸವ ಸ್ವಾಮೀಜಿಯವರೊಂದಿಗೆ ನೂರಕ್ಕೂ ಹೆಚ್ಚು ಮಠಾಧೀಶರು ಪಾಲ್ಗೊಳ್ಳಲಿದ್ದಾರೆಂದು ಮಾಧ್ಯಮಗಳಿಗೆ ತಿಳಿಸಿದ್ದರು. ಅದಲ್ಲದೆ ವಿಜಾಪುರದಲ್ಲಿಯೇ ತಮ್ಮ ಶಕ್ತಿ ಪ್ರದರ್ಶನಕ್ಕೆ ಮುಂದಾಗಿ ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಜನ ಸೇರಲಿದ್ದಾರೆ ಎಂದು ಪ್ರಚಾರ ಮಾಡಿದ್ದರು. ರಾಜ್ಯ ಸರ್ಕಾರದ ನಿರ್ಧಾರ ವೀರಶೈವರಿಗೆ ಬಲವಾದ ಪೆಟ್ಟೆಂದು ಅವರು ಭಾವಿಸಿದ್ದರು. ಅವರಿಗೆ ಜನಬೆಂಬಲ ಮತ್ತು ಆರ್ಥಿಕ ಬೆಂಬಲ ನೀಡಲು ಭಾರತೀಯ ಜನತಾಪಕ್ಷ ಸಿದ್ಧವಾಗಿತ್ತು. ಲಿಂಗಾಯತವನ್ನು ಅಖಂಡವಾಗಿ ಉಳಿಸಿಕೊಳ್ಳುವ ಪ್ರಯತ್ನವೆಂದು ಮುಗ್ಧ ಲಿಂಗಾಯತರ ಮೂಗಿಗೆ ತುಪ್ಪ ಸವರುವ ನಾಟಕ ರಚಿಸಿದ್ದರು.

ಈ ನಿಟ್ಟಿನಲ್ಲಿ ಹೊಸಪೇಟೆಯ ಹತ್ತಿರದ ಕೊಟ್ಟೂರು ಸಂಸ್ಥಾನ ಮಠದಲ್ಲಿ ನಾಲ್ವತ್ತಕ್ಕೂ ಹೆಚ್ಚು ಮಠಾಧೀಶರು ಸಭೆ ಸೇರಿ ಸರ್ಕಾರದ ಕ್ರಮವನ್ನು ಖಂಡಿಸಿದರು. 'ಬಸವತತ್ವದಲ್ಲಿ ನಂಬಿಕೆ ಇರುವವರು' ಎಂಬ ಷರತ್ತು ಅವರನ್ನು ಅವಮಾನಿಸಿತ್ತು. ಲಿಂಗಾಯತ ವೀರಶೈವ ಧರ್ಮಕ್ಕೆ ಅಲ್ಪಸಂಖ್ಯಾತರ ಮಾನ್ಯತೆ ನೀಡಲು ಮುಂದಾಗಿರುವ ರಾಜ್ಯ ಸರ್ಕಾರದ ವಿರುದ್ಧ ರಾಷ್ಟ್ರೀಯ ವೀರಶೈವ ಮಠಾಧೀಶರ ಒಕ್ಕೂಟ ಎಂಬ ಸಂಸ್ಥೆಯನ್ನು ಕಟ್ಟಿಕೊಂಡು ರಾಜ್ಯದ ವೀರಶೈವ ಪ್ರಮುಖ ಮಠಾಧೀಶರನ್ನು ಸೇರಿಸಿ ಸರ್ಕಾರದ ಕ್ರಮವನ್ನು ಖಂಡಿಸಲು ಪಂಚಪೀಠಗಳ ಸಹಾಯದೊಂದಿಗೆ ಕೊಟ್ಟೂರು ಸಂಸ್ಥಾನ ಮಠದ ಆವರಣದಲ್ಲಿ ಶನಿವಾರ ನಡೆದ ಸಭೆಯಲ್ಲಿ ಲಿಂಗಾಯತ ಪ್ರತ್ಯೇಕ ಧರ್ಮಕ್ಕೆ ತೀವ್ರ ವಿರೋಧ ವ್ಯಕ್ತವಾಗಿತ್ತು. ಲಿಂಗಾಯತ ಮತ್ತು ವೀರಶೈವರನ್ನು ಪ್ರತ್ಯೇಕಗೊಳಿಸುವ ಸಂಬಂಧ ಲಿಂಗಾಯತವನ್ನು ಸ್ವತಂತ್ರ ಧರ್ಮ ಎಂದು ಪರಿಗಣಿಸುವಂತೆ ನ್ಯಾಯಮೂರ್ತಿ ನಾಗಮೋಹನ ದಾಸ್ ಸಮಿತಿ ನೀಡಿದ ವರದಿಯನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡುವ ಮೂಲಕ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಚುನಾವಣೆ ಸಂದರ್ಭದಲ್ಲಿ ರಾಜಕೀಯ ಲಾಭ ಪಡೆಯಲು ಯತ್ನಿಸುತ್ತದೆ ಎಂದು ಆಕ್ರೋಶ ವ್ಯಕ್ತವಾಯಿತು. ಮಠಾಧೀಶರ ಪರಿಷತ್ ಈ ಕೆಳಗಿನ ನಿರ್ಣಯಗಳನ್ನು ಕೈಗೊಂಡಿತ್ತು:[೧೪]

ಅ. ವರದಿಯಲ್ಲಿ ವೀರಶೈವ ಪದವನ್ನು ಸರಿಯಾಗಿ ಅರ್ಥೈಸಿಲ್ಲ ಹಾಗೂ ವ್ಯಾಖ್ಯಾನಿಸಿಲ್ಲ

ಆ. ಮುಖ್ಯಮಂತ್ರಿ ಸಿದ್ದರಾಮಯ್ಯ ವೋಟ್‌ಬ್ಯಾಂಕ್ ಸಲುವಾಗಿ ಈ ಶಿಫಾರಸ್ಸು

In Public domain. Digitization Muthulakshmi Research Academy
ಮಾಡಿದ್ದಾರೆ.

ಇ. ಈ ಹಿಂದೆ ಕೇಂದ್ರದಲ್ಲಿ ಯು.ಪಿ.ಎ. ಸರ್ಕಾರವಿದ್ದಾಗ ತಿರಸ್ಕಾರವಾದ ವರದಿಯನ್ನು ಮತ್ತೆ ಕೇಂದ್ರಕ್ಕೆ ಕಳಿಸುವುದು ಅಕ್ಷಮ್ಯ

ಈ. ಅಖಂಡ ವೀರಶೈವ–ಲಿಂಗಾಯತ ಧರ್ಮವನ್ನು ಬೇರ್ಪಡಿಸಲು ಕೈಗೊಂಡ ನಿರ್ಣಯ ಮಾತೃದ್ರೋಹದ ಕೆಲಸ.

ಉ. ವೀರಶೈವ ಮತ್ತು ಲಿಂಗಾಯತ ಒಂದು ನಾಣ್ಯದ ಎರಡು ಮುಖಗಳಿದ್ದಂತೆ.

ಊ. ನಮ್ಮ ಸಹನೆಯನ್ನು ದೌರ್ಭಾಗ್ಯವೆಂದು ತಿಳಿದು ಧರ್ಮ ಒಡೆಯುತ್ತಿರುವುದು ಒಳ್ಳೆಯ ನಡೆಯಲ್ಲ.

ಋ. ಕೇಂದ್ರಕ್ಕೆ ಶಿಫಾರಸ್ಸು ಮಾಡಿದ ನಿರ್ಣಯವನ್ನು ನಾವು ಒಪ್ಪುವುದಿಲ್ಲ.

ಎ. ವರದಿಯನ್ನು ಕೂಡಲೇ ಸಿಎಂ ಹಿಂಪಡೆಯಬೇಕು ಹಾಗೂ ಕೇಂದ್ರ ಸರ್ಕಾರ ಈ ವರದಿಯನ್ನು ತಿರಸ್ಕರಿಸಬೇಕು.

ಏ. ಒಡೆದಾಳುವ ಈ ನೀತಿ ಖಂಡಿತ ಒಳ್ಳೆಯದಲ್ಲ. ಅದಕ್ಕೆ ಕಾಂಗ್ರೆಸ್ ತಕ್ಕ ಪ್ರಾಯಶ್ಚಿತ್ತ ಅನುಭವಿಸಲಿದೆ.

ಮೇಲಿನದು ವೀರಶೈವವಾದಿಗಳ ನಿರಂತರ ಗೋಳಾದರೆ ಇನ್ನೊಂದು ಬದಿಯಲ್ಲಿ ಲಿಂಗಾಯತರಲ್ಲಿ ಹಬ್ಬದ ಉತ್ಸವ ಮನೆ ಮಾಡಿತ್ತು. ಲಿಂಗಾಯತವು ಸಹ ಬೌದ್ಧ, ಸಿಖ್ ಮತ್ತು ಜೈನಧರ್ಮಗಳಂತೆ ಅಲ್ಪಸಂಖ್ಯಾತ ಧರ್ಮವಾಗುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯನ್ನಿರಿಸಿತ್ತು. ಮೊದಲ ಬಾರಿಗೆ ಕರ್ನಾಟಕ ಸರಕಾರದಿಂದ ಮಾನ್ಯತೆ ಪಡೆದ ಗಳಿಗೆಯು ಒಂದು ಅತ್ಯಂತ ಮಹತ್ವದ ಗಳಿಗೆ. ಇದು ಲಿಂಗಾಯತ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲು. ಇಡೀ ಕರ್ನಾಟಕದ ಜನತೆ ಅಂದು ಉತ್ಸಾಹದಿಂದ ಕುಣಿದಾಡಿತ್ತು. ಬಸವಣ್ಣನವರ, ಶರಣರ ದೇವಸ್ಥಾನಗಳಲ್ಲಿ ವಿಶೇಷ ಆರಾಧನೆ, ಅನ್ನದಾಸೋಹ ರಾಜ್ಯದಾದ್ಯಂತ ಜರುಗಿದ್ದವು.

ಕೊನೆ ಟಿಪ್ಪಣಿಗಳು

೧. ಪ್ರಜಾವಾಣಿ ಮಾರ್ಚ್ ೧೪, ೨೦೧೮.
೨. ಪ್ರಜಾವಾಣಿ ಮಾರ್ಚ್ ೧೪, ೨೦೧೮.
೩. ಪ್ರಜಾವಾಣಿ ಮಾರ್ಚ್ ೧೬, ೨೦೧೮.
೪. ವಿಜಯವಾಣಿ ಮಾರ್ಚ್ ೧೪, ೨೦೧೮.
೫. ಪ್ರಜಾವಾಣಿ ಮಾರ್ಚ್ ೨೦, ೨೦೧೮.
೬. ಪ್ರಜಾವಾಣಿ ಮಾರ್ಚ್ ೨೦, ೨೦೧೮.
೭. ಪ್ರಜಾವಾಣಿ ಮಾರ್ಚ್೨೦, ೨೦೧೮.
೮. ಪ್ರಜಾವಾಣಿ ಮಾರ್ಚ್ ೨೦, ೨೦೧೮.

In Public domain. Digitization Muthulakshmi Research Academy

೯. ಪ್ರಜಾವಾಣಿ ಮಾರ್ಚ್ ೨೦, ೨೦೧೮.

೧೦. ಪ್ರಜಾವಾಣಿ ಮಾರ್ಚ್ ೨೦, ೨೦೧೮.

೧೧. ಪ್ರಜಾವಾಣಿ ಮಾರ್ಚ್ ೨೦, ೨೦೧೮.

೧೨. ಪ್ರಜಾವಾಣಿ ಮಾರ್ಚ್ ೨೦, ೨೦೧೮.

೧೩. ಪ್ರಜಾವಾಣಿ ಮಾರ್ಚ್ ೨೧, ೨೦೧೮.

೧೪. ಹೊಸ ದಿಗಂತ ಮಾರ್ಚ್ ೨೫, ೨೦೧೮.

In Public domain. Digitization Muthulakshmi Research Academy

ಅಧ್ಯಾಯ ಹದಿನಾಲ್ಕು

ಚುನಾವಣೆಯ ಕಾವಲಿಯಲ್ಲಿ ಲಿಂಗಾಯತ ಧರ್ಮ

ಧರ್ಮ ವಿಭಜನೆ ಇಲ್ಲ ಎಂಬ ಅಮಿತ್ ಶಾ ಎಂಬ ಭಾರತೀಯ ಜನತಾಪಕ್ಷದ ಅಧ್ಯಕ್ಷರ ಹೇಳಿಕೆಯು ನಮಗೇನೂ ಅಚ್ಚರಿ ತರಿಸಿರಲಿಲ್ಲ. ಅದರೆ ಅವರ ಹೇಳಿಕೆಯಲ್ಲಿರುವ ಸುಳ್ಳನ್ನು ನಾವು ನಗಾಡಿಕೊಂಡಿದ್ದೆವು. ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ಏನಾದರೂ ಮಾಡುತ್ತಾರಲ್ಲ? ಎಂಬ ಪ್ರಶ್ನೆಗಳನ್ನು ನಮ್ಮಲ್ಲಿಯೇ ಕೇಳಿಕೊಂಡಿದ್ದೆವು. ಆದರೆ ಇವರ ಹೇಳಿಕೆಯು ನಮ್ಮ ಹೋರಾಟದ ಮುಂಚೂಣಿಯಲ್ಲಿದ್ದ ಎಂ.ಬಿ.ಪಾಟೀಲರು ಗಂಭೀರವಾಗಿ ಪರಿಗಣಿಸಿದ್ದರು. ಶಾ ಅವರು ಲಿಂಗಾಯತ ಮಠಗಳಿಗೆ ಹೋಗಿ ಮಠಾಧೀಶರ ಮನವೊಲಿಸುತ್ತಿರುವುದು ತಮ್ಮ ಪಕ್ಷದ ಹಿತದೃಷ್ಟಿಯಿಂದ ಹಿನ್ನಡೆಯಂದು ಭಾವಿಸಿರಬಹುದು. ಸಚಿವರು ನನಗೆ ಕರೆ ಮಾಡಿ "ದಿನಾಂಕ ೫ರಂದು ಮಠಾಧೀಶರ ಸಭೆ ಕರೆಯಿರಿ ಮತ್ತು ಕೇಂದ್ರ ಮಂತ್ರಿ ಶಾ ವಿರುದ್ಧ ಪ್ರತಿಭಟಿಸಿ" ಎಂದರು. 'ಸರಿ' ಎಂದು ನಾನು ಡಾ ಜಯಣ್ಣ ಅವರಿಗೆ ಕರೆ ಮಾಡಿ ಸಭೆಯ ಸಾಧ್ಯಾಸಾಧ್ಯತೆಗಳ ಬಗ್ಗೆ ಚರ್ಚಿಸಲಾರಂಭಿಸಿದೆನು.

ಬೆಳಗಾವಿಯ ಶ್ರೀ ಸಿದ್ಧರಾಮ ಸ್ವಾಮಿಗಳಲ್ಲಿ ಸಭೆಯ ಬಗ್ಗೆ ಚರ್ಚಿಸಲು ಕರೆ ಮಾಡಿ ಸಚಿವರ ಬಯಕೆಯನ್ನು ಅವರಿಗೆ ತಿಳಿಸಿದೆ. ಆಗ ಸ್ವಾಮೀಜಿಯವರು "ಗೌಡ್ರ ತಕ್ಷಣ ಬರಬೇಕು ಎಂದರ ಹ್ಯಾಂಗ ಆಗತದರೀ. ನಾವು ಮಠಾಧೀಶರು... ಭಕ್ತರ ಅನೇಕ ಕಾರ್ಯಕ್ರಮಗಳನ್ನು ಒಪಗೊಂಡಿರತೀವಿ. ಸಭೆ ಮಾಡುವ ಮುಂಚೆ ನಮಗ ತಿಳಿಸಿ ಮಾಡ್ರೀ, ಆದ್ರ ಐದನೆಯ ತಾರಿಕು ನನಗೆ ಬರುದಿಕ್ಕೆ ಆಗುದಿಲ್ಲ, ಆರರಂದು ಬೇಕಾದರೆ ಪ್ರಯತ್ನಿಸುವೆ' ಎಂದರು. ಇನ್ನೊಬ್ಬ ಪ್ರಮುಖ

In Public domain. Digitization Muthulakshmi Research Academy
ಮಠಾಧೀಶರ ಉತ್ತರವು ಇದೇ ರೀತಿಯದ್ದಾಗಿತ್ತು. ನಾನು ಡಾ.ಜಯಣ್ಣನವರೊಂದಿಗೆ ಸ್ವಾಮಿಗಳ ಭಾಗವಹಿಸುವಿಕೆಯ ಬಗ್ಗೆ ತಿಳಿಸಿದೆ. ಆಗ ಡಾ.ಜಯಣ್ಣ 'ಆಯಿತು ಆರನೆಯ ತಾರೀಕಿಗೆ ಇಟ್ಟುಕೊಳ್ಳೋಣ ಬಿಡ್ರಿ' ಎಂದರು.

ಸಭೆಯನ್ನು ಆರನೆಯ ತಾರೀಕಿಗೆ ನಿಗದಿಗೊಳಿಸಿ, ಬಸವ ಸಮಿತಿಯಲ್ಲಿ ಸಭೆ ಮಾಡಲು ನಿರ್ಧರಿಸಿದೆವು. ಅದರಂತೆ ಬಸವ ಸಮಿತಿಯ ಸಭಾಭವನವನ್ನು ಗೊತ್ತು ಮಾಡಲು ನಮ್ಮ ಆಫೀಸ್ ಸಿಬ್ಬಂದಿಯನ್ನು ಕಳಿಸಿದೆ. 'ಬಸವ ಸಮಿತಿಯವರು ಸಭಾ ಭವನದ ಬಾಡಿಗೆ ಹಣವನ್ನು ಮುಂಗಡವಾಗಿ ಸಲ್ಲಿಸುವಂತೆ ಕೇಳುತ್ತಿದ್ದಾರೆ' ಎಂದು ಮರಳಿ ಬಂದ. ಒಂಬತ್ತು ಸಾವಿರ ಬಾಡಿಗೆಯ ಹಣವನ್ನು ಬಸವಸಮಿತಿಗೆ ಕೊಟ್ಟು ಸಭಾಭವನ ರಿಜರ್ವಮಾಡಿದೆ. ಭಾಗವಹಿಸಲಿರುವ ಮಠಾಧೀಶರ ಪಟ್ಟಿಯನ್ನು ತಯಾರಿಸಲು ಮತ್ತಿತರ ಕಾರ್ಯಕ್ರಮಗಳ ತಯಾರಿಯಲ್ಲಿ ತೊಡಗಿಸಿಕೊಂಡೆ.

ಮರುದಿನ ಸಂಜೆ ಆರು ಗಂಟೆಯ ಸುಮಾರಿಗೆ ವಿಜಯಪುರದಲ್ಲಿದ್ದ ಸಚಿವ ಎಂ.ಬಿ.ಪಾಟೀಲರಿಂದ ಕರೆ ಬಂತು. ಅವರ ಮಾತಿನ ಧಾಟಿಯಿಂದ ಅವರು ಕೆಂಡಾಮಂಡಲವಾದಂತಿತ್ತು. 'ಏನು ಸಭೆಯನ್ನು ಐದರಂದು ಮಾಡದೆ ಆರನೆಯ ತಾರೀಕಿಗೆ ಮಾಡುತ್ತಿದ್ದೀರಂತೆ' ಎಂದರು. ಆಗ ನಾನು ನನ್ನ ಹಾಗೂ ಸ್ವಾಮೀಜಿಗಳ ಮಧ್ಯದಲ್ಲಿ ನಡೆದ ಮಾತುಕತೆಗಳ ವಿವರ ನೀಡಲಾರಂಭಿಸಿದೆ. ಸಚಿವರಿಗೆ ವಿವರಣೆ ಬೇಕಾಗಿರಲಿಲ್ಲ. 'ನಿಮಗೆ ಸಮಸ್ಯೆಯ ಗಂಭೀರತೆಯ ಅರಿವಿಲ್ಲ. ನನ್ನ ಮಾತನ್ನು ನೀವು ಗಂಭೀರವಾಗಿ ಪರಿಗಣಿಸುತ್ತಿಲ್ಲ, ಹೀಗಾದರೆ ನಾನು ಹೋರಾಟದಲ್ಲಿರಲು ಬಯಸುವುದಿಲ್ಲ, ನೀವು ಏನು ಬೇಕಾದರೂ ಮಾಡಿಕೊಳ್ಳಿ" ಎಂದು ಕಾರವಾಗಿ ನುಡಿದು ಕರೆ ಕಟ್ ಮಾಡಿದರು,

ಕಣ್ಣಲ್ಲಿ ನೀರು ಬಂತು. ನಾನು ಮಾಡುವ ಎಲ್ಲ ಪ್ರಯತ್ನ ಮಾಡಿದ್ದೆ. ಭಾಗವಹಿಸಬೇಕಾದ ಪ್ರಮುಖ ಸ್ವಾಮೀಜಿಗಳು ದೂರದಿಂದ ಬರಬೇಕಾಗಿತ್ತು. ಅವರಿಗೂ ಅವರದೇ ಆದ ಸಮಸ್ಯೆಗಳು ಇರುತ್ತವೆ. Short noticeನಲ್ಲಿ ಬಂದು ಭಾಗವಹಿಸುವುದು ಕಷ್ಟದ ಕೆಲಸ. ಇತ್ತ ಸಚಿವರಿಗೆ ತಮ್ಮದೇ ಆದ ಕಾರಣಗಳು ಇರಬಹುದು. ಪರಸ್ಥಿತಿಯ ಆಳವಾದ ವಿಷಯ ಮತ್ತೇನಾದರು ಇರಬಹುದು. ಮಧ್ಯದಲ್ಲಿರುವ ಕಾರ್ಯಕರ್ತರಾದ ನಾವು ಎರಡೂ ಕಡೆ ಸಂಭಾಳಿಸಬೇಕು. ಪರಸ್ಥಿತಿ ಒತ್ತಡದ ಅರಿವಾಗಲಾರಂಭಿಸಿತ್ತು. ಸಭೆಗೆ ಕೇವಲ ನಾಲ್ಕು ದಿವಸಗಳ ಅವಧಿ ಇತ್ತು. ಉತ್ತರ ಕರ್ನಾಟಕದ ಸ್ವಾಮಿಗಳೊಂದಿಗೆ ಬೆಂಗಳೂರಿನ ಸುತ್ತ ಮುತ್ತಲಿರುವ ವಿರಕ್ತಮಠದ ಮಠಾಧೀಶರು ಭಾಗವಹಿಸಿದರೆ ಇನ್ನೂ ಅನುಕೂಲ ಎಂದು ಯೋಚಿಸಿದೆ.

ಇದೆಲ್ಲ ಮುಗಿಯುವುದರಲ್ಲಿ ಸಮಯ ಜಾರುತ್ತಿತ್ತು. ಸಮಯ ರಾತ್ರಿ ಒಂಬತ್ತು ಗಂಟೆಯಾಗಿತ್ತು. ಮಂಡ್ಯದ ಒಬ್ಬ ಕಾರ್ಯಕರ್ತರನ್ನು ಸಂಪರ್ಕಮಾಡಿದೆ. 'ಮಂಡ್ಯ,

In Public domain. Digitization Muthulakshmi Research Academy

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಮಠಾಧೀಶರರನ್ನು ಸಂಪರ್ಕ ಮಾಡೋಣ, ನಾನು ಈಗಲೇ ಬೆಂಗಳೂರನ್ನು ಬಿಟ್ಟು ರಾತ್ರಿ ಹನ್ನೊಂದು–ಹನ್ನೆರಡು ಗಂಟೆಯ ಸುಮಾರಿಗೆ ಮಂಡ್ಯ ತಲುಪುವೆ. ನೀವು ಮಂಡ್ಯದ ಬಸ್ ಸ್ಟಾಂಡಿನಲ್ಲಿ ಕಾಯಿರಿ" ಎಂದು ಅವರನ್ನು ವಿನಂತಿಸಿಕೊಂಡೆ. ಅವರೂ ಸಹ ಬಸವಾಭಿಮಾನಿ. 'ಆಯಿತು ನೀವು ಬನ್ನಿ, ನಾನು ಮಂಡ್ಯ ಬಸ್ ನಿಲ್ದಾಣದಲ್ಲಿ ಕಾಯುತ್ತೇನೆ' ಎಂದರು. ಅಭಿಮಾನ ತುಂಬಿ ಬಂತು. ಡ್ರೈವರ್ ಇರಲಿಲ್ಲ. ಸಮಯ ಮೀರುತ್ತಿತ್ತು. ನಾನೇ ಕಾರು ಚಲಾಯಿಸಿಕೊಂಡು ಮೈಸೂರು ಭಾಗದ ವಿರಕ್ತಮಠಾಧೀಶರನ್ನು ಕಾಣಲು ಹೊರಟು ಕಾರಿನಲ್ಲಿ ಕುಳಿತು ಕಾರ್ ಕೀ ಒತ್ತಿದೆ. ಮೈಸೂರು ರೋಡ್ ತಲುಪಿ ಕೆಂಗೇರಿಯನ್ನು ದಾಟಿ ಮುಂದೆ ಚಲಿಸುತ್ತಿದ್ದೆ. ಗೆಳೆಯ ಸಂಗಮೇಶ ಕೊಳ್ಳಿಯವರ ಫೋನ್ ಬಂತು. ಮೈಸೂರಿಗೆ ಹೊರಟಿದ್ದೇನೆ ಎಂದು ಹೇಳಿದೆ. ತಡರಾತ್ರಿ ಪ್ರವಾಸ ಯಾಕೆ ಎಂದು ಆತಂಕ ವ್ಯಕ್ತಪಡಿಸಿದರು. ಕಾರಣ ಹೇಳಿದೆ. 'ಕಾಕಾರ ನೀವು ಅಲ್ಲೇ ಗಾಡಿ ನಿಲ್ಲಸ್ರೀ, ನಾನು ಡ್ರೈವರ್‌ನೊಂದಿಗೆ ನನ್ನ ಗಾಡಿ ಕಳಿಸುತ್ತಿದ್ದೇನೆ. ಈ ವಯಸ್ಸಿನಲ್ಲಿ ಹುಚ್ಚಾಟ ಸರಿಯಲ್ಲ" ಎಂದು ತಮ್ಮ ಆತಂಕ ತೋಡಿಕೊಂಡರು.

ಅವರ ಮಾತು ಸರಿ ಎನಿಸಿತು. ರಾತ್ರಿ ಸಮಯದಲ್ಲಿ ಒಬ್ಬನೇ ಪ್ರವಾಸ ಮಾಡುವುದು ಸರಿಯಲ್ಲ ಎಂದು ರಸ್ತೆಯ ಪಕ್ಕದಲ್ಲಿ ಗಾಡಿ ನಿಲ್ಲಿಸಿ ಕಾಯಲಾರಂಭಿಸಿದೆ. ಅರ್ಧ ಮುಕ್ಕಾಲು ಘಂಟೆಯಲ್ಲಿ ಡಾ.ಕೊಳ್ಳಿಯವರ ಕಾರು ರಸ್ತೆಯಲ್ಲಿ ಬರುವುದು ಕಂಡಿತು. ಕಾರಿನಲ್ಲಿ ಡ್ರೈವರ್ ಪಕ್ಕದಲ್ಲಿ ಇನ್ನೊಬ್ಬರಿದ್ದರು. ಡಾ.ಸಂಗಮೇಶ ಸ್ವತಃ ಬಂದಿದ್ದರು. ಅವರು ನನ್ನ ಕಾರನ್ನು ಹಿಂದಕ್ಕೆ ಒಯ್ಯಲಿದ್ದರು. ಸ್ನೇಹಿತನ ಕಾರಿನಲ್ಲಿ ನಿರಾಳವಾಗಿ ಕುಳಿತು ಯಾರ ಯಾರ ಸಂಪರ್ಕ ಮಾಡಬೇಕು ಎಂದು ಯೋಚಿಸಲಾರಂಭಿಸಿದೆ. ಮಂಡ್ಯದ ನಿವಾಸಿ ನಂದೀಶರಿಗೆ ಈ ಭಾಗದ ಮಠಾಧೀಶರ ಸಂಪರ್ಕ ಇತ್ತು. ಅವರು ನನ್ನೊಂದಿಗೆ ಸೇರಿಕೊಳ್ಳಲಿದ್ದರು. ಸಮಸ್ಯೆಗೆ ಅವರಿಂದಲೂ ಪರಿಹಾರ ಸಿಗಲಿತ್ತು.

ಮಂಡ್ಯ ಸೇರಿದಾಗ ಸರಿ ರಾತ್ರಿಯಾಗಿತ್ತು. ನಂದೀಶ ಬಸ್ ನಿಲ್ದಾಣದಲ್ಲಿ ಕಾಯುತ್ತಲಿದ್ದರು. ಅವರು ಕಾರು ಏರಿದರು. ಸಮಯ ಮೀರುತ್ತಿತ್ತು. ಪ್ರಯತ್ನ ಜಾರಿಯಲ್ಲಿತ್ತು. ಸರಿ ರಾತ್ರಿ ಮೈಸೂರಿನ ಹೊಸಮಠಕ್ಕೆ ನಡೆದೆವು. ಬಂದ ವಿಷಯದ ಗಂಭೀರತೆಯನ್ನು ಮಠದಲ್ಲಿದ್ದ ಸಹಾಯಕರಿಗೆ ವಿವರಿಸಿ ಶ್ರೀ ನಿ.ಪ್ರ.ಸ್ವ ಶ್ರೀ ಚಿದಾನಂದ ಗುರುಗಳನ್ನು ಕಾಣಲು ಅವಕಾಶ ನೀಡಬೇಕೆಂದು ಕೇಳಿಕೊಂಡೆವು. ಅರೆಮನಸ್ಸಿನಿಂದ ಮಠದ ಸಹಾಯಕರು ಸ್ವಾಮೀಜಿಗಳನ್ನು ಎಬ್ಬಿಸಲು ಹೋದರು.

ಐದು ನಿಮಿಷದ ನಂತರ ಗುರುಗಳು ನಮ್ಮನ್ನು ಹಾಲಿನಲ್ಲಿ ಕಂಡು 'ಏನು ಸಮಾಚಾರ' ಎಂದು ಶಾಂತರಾಗಿ ಕೇಳಿದರು. ಆಗ ನಾನು 'ಕೇವಲ ಮೂರು

In Public domain. Digitization Muthulakshmi Research Academy

ದಿನಗಳಲ್ಲಿ ನಾಡಿನ ಪ್ರಮುಖ ವಿರಕ್ತಮಠಾಧೀಶರನ್ನು ಸಭೆಗೆ ಕರೆತರಬೇಕಾಗಿದೆ. ಎಲ್ಲರೂ ಕೈ ಜೋಡಿಸಿದಾಗ ಮಾತ್ರ ನಾವು ಸರಕಾರಗಳಿಗೆ ಸ್ಪಷ್ಟ ಮತ್ತು ಗಂಭೀರ ಸಂದೇಶ ನೀಡಬಹುದು. ಅಲ್ಲದೆ ನಮ್ಮ ವಿರುದ್ಧವಾಗಿ ಬಾ.ಜ.ಪ. ಅಧ್ಯಕ್ಷರಾದ ಅಮಿತ್ ಶಾ ಅವರು ಲಿಂಗಾಯತ ಮಠಾಧೀಶರುಗಳನ್ನು ಕಂಡು, ಅನೇಕ ಆಮಿಷಗಳನ್ನು ಒಡ್ಡಿ ನಮ್ಮ ಸಂಘಟನೆಯನ್ನು ಬಲಹೀನಗೊಳಿಸುತ್ತಿದ್ದಾರೆ' ಎಂದು ಪ್ರತಿಪಾದಿಸಿದೆ. ಸ್ವಾಮೀಜಿಯವರಿಗೆ ಗಂಭೀರತೆಯ ಅರಿವಾಯಿತು. 'ಏನು ಮಾಡಬೇಕು ಹೇಳಿ' ಎಂದರು. 'ಏನಿಲ್ಲ ಬುದ್ಧಿ, ತಾವು ತಮ್ಮ ಮಠಾಧೀಶರೊಂದಿಗೆ ಆರನೆಯ ತಾರೀಕಿನಂದು ನಡೆಯುವ ಸಭೆಯಲ್ಲಿ ಭಾಗವಹಿಸಿ ಮತ್ತು ಈ ಭಾಗದಲ್ಲಿ ಯಾರನ್ನು ಸಂಪರ್ಕ ಮಾಡಬೇಕೆಂದು ಸಲಹೆ ನೀಡಿ' ಎಂದೆ.

ಸ್ವಾಮೀಜಿಯವರು ಮಠಗಳ ಹೆಸರುಗಳನ್ನು ಹೇಳುತ್ತ ಹೋದರು, ನಾನು ಅವುಗಳನ್ನು ಟಿಪ್ಪಣಿ ಮಾಡಿಕೊಳ್ಳುತ್ತ ಹೋದೆ. ಲಿಸ್ಟ್ ದೊಡ್ಡದಾಗಿತ್ತು. ಕೊನೆಯಲ್ಲಿ ಅವರೊಂದು ಮಾತನ್ನು ಹೇಳಿದರು. 'ನಾನು ವಿರಕ್ತಮಠಗಳ ಹೆಸರುಗಳನ್ನು ಹೇಳಿದ್ದೇನೆ ಆದರೆ ಅದರಲ್ಲಿ ಬಹುತೇಕರು ಶಿವರಾತ್ರೀಶ್ವರರ ಅಧೀನದಲ್ಲಿದ್ದಾರೆ. ಅವರ ಮನ ಹೇಗೆ ಒಲಿಸುತ್ತೀರೆಂದು ನಿಮಗೆ ಬಿಟ್ಟಿದ್ದು. ನಾನು ನನ್ನ ಶಾಖಾ ಮಠದ ಸ್ವಾಮಿಗಳೊಂದಿಗೆ ಬರುವೆ. ನೀವು ಈಗ, ಇಲ್ಲೇ ಮಲಗಿ, ಮಲಗಲು ವ್ಯವಸ್ಥೆಯನ್ನು ಮಾಡುವರು. ವಿಶ್ರಾಂತಿ ಪಡೆದು ಬೆಳಗ್ಗೆ ಉಪಾಹಾರ ಸೇವಿಸಿ ಹೊರಡಿ' ಎಂದು ಎದ್ದುನಿಂತರು ಶ್ರೀಗಳು.

'ಬುದ್ಧಿ ಕ್ಷಮೆ ಇರಲಿ. ತಮ್ಮ ಆತಿಥ್ಯ ಸ್ವೀಕರಿಸಲು ಸಮಯವಿಲ್ಲ. ಇದೇ ಅವಧಿಯಲ್ಲಿ ನಾನು ಚಾಮರಾಜನಗರ ಜಿಲ್ಲೆಯ ಮಠಗಳನ್ನು ಮುಟ್ಟಬಹುದು. ಆಶೀರ್ವಾದ ಮಾಡಿ' ಎಂದು ಎದ್ದುನಿಂತು ಹೊರಡಲು ಅಪ್ಪಣೆ ಕೇಳಿದೆ. ಒಲ್ಲದ ಮನಸ್ಸಿನಿಂದ ಸ್ವಾಮೀಜಿ ನಮ್ಮನ್ನು ಬೀಳ್ಕೊಟ್ಟರು. ಅಲ್ಲಿಂದ ನೇರವಾಗಿ ಗುರು ಮಲ್ಲೇಶ ಮಠಕ್ಕೆ ಹೊರಡಲು ನಿರ್ಧರಿಸಿದ್ದೆವು. ದಾರಿಯಲ್ಲಿ ಸಿಗುವ ಚಿಕ್ಕ ಪುಟ್ಟ ಮಠಗಳ ವಿವರ ಹಾಗೂ ಸ್ವಾಮೀಜಿಗಳ ಹೆಸರನ್ನು ಹೇಳುತ್ತಿದ್ದರು ನಂದೀಶ. ನಮ್ಮ ಪ್ರಯತ್ನ ಜಾರಿಗೆ ಬಂತು. ದಾರಿಯಲ್ಲಿರುವ ಮಠಾಧೀಶರ ಸಂಪರ್ಕ ಮಾಡುತ್ತ ಗುರುಮಲ್ಲೇಶ ಮಠವನ್ನು ಬೆಳಗಿನ ಜಾವ ಸೇರಿಕೊಂಡೆವು.

ಗುರುಮಲ್ಲೇಶ ಮಠವು ಚಾಮರಾಜನಗರ ಜಿಲ್ಲೆಯಲ್ಲಿ ಅತ್ಯಂತ ಪ್ರಮುಖ ವಿರಕ್ತಮಠ. ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಒಂದು ಪುಟ್ಟಹಳ್ಳಿ. "ಹೆಗಲ ಮೇಲೆ ಕಂಬಳಿ, ಕೈಯಲ್ಲಿ ಭಿಕ್ಷಾಪಾತ್ರೆ, ಹಣೆ ಕಣ್ಣು ಕಿವಿ ಮುಖದ ತುಂಬೆಲ್ಲ ವಿಭೂತಿ ಧಾರಣೆ, ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡು 'ಬಸವ ಭಿಕ್ಷಾಂದೇಹಿ' ಎನ್ನುವುದೇ ದಿವ್ಯಮಂತ್ರ, ಇದು ದೇವನೂರು ಮಠದ ದಾಸೋಹ ತಂತ್ರ, ಹೀಗಾಗಿ ಹಳ್ಳಿಗರು ದೇವನೂರು ಮಠವನ್ನು ಇಂದಿಗೂ ಭಿಕ್ಷಾಮಠವೆಂದು ಕರೆಯುತ್ತಾರೆ"

In Public domain. Digitization Muthulakshmi Research Academy

ಎಂದು ಮಠದ ಬಗ್ಗೆ ಬರೆಯುತ್ತಾರೆ ಅಥಣಿಯ ಪ್ರಭು ಚನ್ನಬಸವ ಸ್ವಾಮೀಜಿ। ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಪೂಜ್ಯ ಗುರುಮಲ್ಲೇಶ್ವರರು ಚಾಮುಂಡಿ ಬೆಟ್ಟದಲ್ಲಿ ತಪಸ್ಸು ಮಾಡಿದ್ದರಂತೆ. ಬೆಟ್ಟದ ಗಿಡಗಳ ತಪ್ಪಲಿನಲ್ಲಿರುವ ಔಷಧ ಗುಣಗಳನ್ನು ಸಂಶೋಧಿಸಿ, ಜನರ ಕಾಯಿಲೆ ಕಸಾಲೆಗಳನ್ನು ಹೋಗಲಾಡಿಸುತ್ತ ಈ ಪ್ರದೇಶದ ಜನರ ಮನ ಗೆದ್ದಿದ್ದರು. ಇವರು ಬಸವಣ್ಣನವರ ಸಿದ್ಧಾಂತಗಳನ್ನು ಶಿರಸಾವಹಿಸಿ ಪಾಲಿಸಿದವರು. ಮೇಲಾಗಿ ವಾಕ್‌ಸಿದ್ಧಿಯನ್ನು ಸಾಧಿಸಿದ್ದರಂತೆ. ಈ ಭಾಗದಲ್ಲಿದ್ದ ಜನರ ಮೌಢ್ಯಗಳನ್ನು ಬಿಡಿಸಿ, ಜನರಿಗೆ ಇಷ್ಟಲಿಂಗ ಧಾರಣ ಮಾಡಿಸಿ, ಬಹುಜನರನ್ನು ಲಿಂಗಾಯತ ಧರ್ಮದತ್ತ ಸೆಳೆದವರು. ಇವರ ಪ್ರಭಾವ ಮೈಸೂರಿನ ಮಹಾರಾಜರ ವರೆಗೂ ಹಬ್ಬಿತ್ತು. ಮೈಸೂರು ಮಹಾರಾಜರು ಕೊಟ್ಟ ಬಂಗಾರ ಬೆಳ್ಳಿಯ ದಾನಗಳು ಇಂದಿಗೂ ಮಠದಲ್ಲಿವೆಯಂತೆ. ಮೈಸೂರಿನ ಒಡೆಯರಾದ ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರ್ ಇವರ ಪಾದಪೂಜೆ ಮಾಡಿದ್ದಾಗಿ ಮಠದ ಭಕ್ತರು ಅಭಿಮಾನದಿಂದ ಹೇಳುತ್ತಾರೆ. ನಾವು ನೇರವಾಗಿ ಸ್ವಾಮೀಜಿಗಳ ದರ್ಶನ ಪಡೆದೆವು. ಸಾವಿರಾರು ರೂಪಾಯಿ ಕಾಣಿಕೆಯನ್ನು ಅರ್ಪಿಸಿ ಅವರೆದುರು ಕುಳಿತು ಬಂದ ಕಾರಣ ಹೇಳಿದೆ. ಮಠಾಧೀಶರ ಮುಖದಲ್ಲಿ ಬದಲಾವಣೆ ಕಾಣಲಿಲ್ಲ. ಯಾಂತ್ರಿಕವಾಗಿ ನಾನು ಹೇಳುವ ಮಾತುಗಳನ್ನು ಕೇಳುತ್ತ ಯಾವುದೋ ಆಲೋಚನೆಯಲ್ಲಿ ತಲ್ಲೀನರಾಗಿದ್ದರು ಬಸವಣ್ಣನವರು ಬಯಸಿದ ಜಂಗಮ ಕಾಯಕದವರು. ಇವರಿಗೆ ಬಸವಣ್ಣನವರ ಪ್ರಚಾರವಾಗಲಿ ಸಿದ್ಧಾಂತವಾಗಲಿ ಬೇಕಾಗಿಲ್ಲವೆಂಬ ಭಾವನೆ ನನ್ನನ್ನು ಕಾಡಲಾರಂಭಿಸಿತು. ಬುದ್ಧಿ ನಮಗೆ ಅಪ್ಪಣೆ ಕೊಡಿ ಎಂದೆ.

'ಪ್ರಸಾದ ಮಾಡಿಕೊಂಡು ಹೋಗಿರಿ' ಎಂದು ಅಪ್ಪಣೆ ಕೊಟ್ಟರು ಸ್ವಾಮಿಗಳು. 'ಆಗಲಿ ಬುದ್ಧಿ' ಎನ್ನುತ್ತ ವಿಷಾದದ ಭಾವದಿಂದ ಹೊರಡಲಣಿಯಾದೆವು. ಈ ಮಠದಲ್ಲಿ ಒಲೆ ಆರದಂತೆ, ಪ್ರಸಾದ ಮಾಡಿಸುವುದರಲ್ಲಿ ಸ್ವಾಮಿಗಳು ಸ್ವರ್ಗಸುಖ ಪಡುವರಂತೆ. ಒರ್ಷಕ್ಕೊಮ್ಮೆ ಜಾತ್ರೆಯಲ್ಲಿ ಭರ್ಜರಿ ಹೋಳಿಗೆ ಪ್ರಸಾದವಂತೆ. ಹೋಳಿಗೆಯನ್ನು ಮುರಿದ ಭಕ್ತ ಸಂತೃಪ್ತ, ಯಾರಿಗೆ ಬೇಕಾಗಿದೆ ಬಸವತತ್ವ!

'ಪ್ರತ್ಯೇಕ ಧರ್ಮ ಅಗತ್ಯ' ಎಂದು ಹೇಳಿಕೆ ಕೊಟ್ಟ ಮರಿಯಾಲ ಮುರುಘರಾಜೇಂದ್ರ ಮಠದ ಇಮ್ಮಡಿ ಮುರುಘರಾಜೇಂದ್ರ ಸ್ವಾಮಿಗಳನ್ನು ಕಾಣಲು ಚಾಮರಾಜನಗರ ಜಿಲ್ಲೆಯ ಮರಿಯಾಲದತ್ತ ನಮ್ಮ ಕಾರು ತಿರುಗಿತು. ಒಂದು ಹಳ್ಳಿಯಲ್ಲಿರುವ ಮಠ. ಕಾಂಗ್ರೆಸ್ ನಾಯಕರಾಗಿದ್ದ ರಾಜಶೇಖರ ಮೂರ್ತಿಯವರ ಪಾರ್ಥೀವ ಶರೀರವನ್ನು ಈ ಮಠದ ಆವರಣದಲ್ಲಿ ಅಂತ್ಯಕ್ರಿಯೆ ಮಾಡಿದ್ದಾಗಿ ಸ್ವಾಮೀಜಿ ಹೆಮ್ಮೆಯಿಂದ ಹೇಳಿದರು. ಅವರು ಈ ಮಠಕ್ಕೆ ಹಣಕಾಸಿನ ಸಹಾಯ ಮಾಡಿರಬಹುದು. ಸ್ವಾಮೀಜಿಗಳಿಗೆ ಕಾಣಿಕೆ

In Public domain. Digitization Muthulakshmi Research Academy

ಸಲ್ಲಿಸಿ ಬಂದ ವಿಷಯವನ್ನು ಬಹಿರಂಗಪಡಿಸಿದೆ. ನಾನು ಹೇಳಿದ ಮಾತುಗಳನ್ನು ಕೇಳಿಸಿಕೊಂಡ ಸ್ವಾಮೀಜಿ ತಟ್ಟನೆ ಎದ್ದು ತಮ್ಮ ಒಳಕೋಣೆಗೆ ನಡೆದರು. ಒಂದೆರಡು ನಿಮಿಷದ ನಂತರ ಹಿಂದಿರುಗಿ ನನಗೆ ಪ್ರಜಾವಾಣಿ ಪೇಪರ್ ತುಣುಕೊಂದನ್ನು ನೀಡಿ, 'ಇದನ್ನು ಓದಿರಿ' ಎಂದರು. ಕುತೂಹಲದಿಂದ ಓದಿದೆ. ಅದರಲ್ಲಿತ್ತು "ಲಿಂಗಾಯತ ಪ್ರತ್ಯೇಕ ಧರ್ಮವಾಗಬೇಕು ಎನ್ನುವುದು ನಮ್ಮ ಬಯಕೆ. ಈ ಸಂಬಂಧ ನೂರಾರು ವರ್ಷಗಳಿಂದ ಹೋರಾಟ ನಡೆಯುತ್ತಿದೆ. ಪ್ರತ್ಯೇಕ ಧರ್ಮದ ಮಾನ್ಯತೆ ದೊರಕುವುದರಿಂದ ಸಾಕಷ್ಟು ಅನಕೂಲಗಳಿವೆ. ಲಿಂಗಾಯತರು ಹಿಂದೂಧರ್ಮದ ಭಾಗವಲ್ಲ. ನಾವು ಬಸವಣ್ಣನ ಚಿಂತನೆಯಂತೆ ಇಷ್ಟಲಿಂಗವನ್ನು ಗುಡಿಗೋಪುರಗಳಿಲ್ಲದೆ ಪೂಜಿಸುತ್ತಿರುವವರು. ದೇವರನ್ನು ಅಂತರಂಗದಲ್ಲಿ ಆರಾಧಿಸುವವರು. ಶೈವ ಬ್ರಾಹ್ಮಣ ಸಮುದಾಯದಲ್ಲಿ ಜನಿಸಿದ ಬಸವಣ್ಣ ಜಾತಿಯಲ್ಲಿನ ಅನಿಷ್ಟಗಳನ್ನು ವಿರೋಧಿಸಿಯೇ ಪ್ರತ್ಯೇಕ ಧರ್ಮ ಸ್ಥಾಪಿಸಿದರು. ಬಸವಣ್ಣನವರನ್ನು ಎಲ್ಲ ಶರಣರು ಧರ್ಮಗುರು ಎಂದು ಒಪ್ಪಿಕೊಂಡಿದ್ದಾರೆ. ಬಸವಣ್ಣ ವಿಚಾರಧಾರೆಯನ್ನು ಒಪ್ಪಿಕೊಂಡವರು ಪ್ರತ್ಯೇಕ ಧರ್ಮದ ಅಗತ್ಯವನ್ನು ಒಪ್ಪಿಕೊಳ್ಳುತ್ತಾರೆ. ಅದರಲ್ಲಿ ನಂಬಿಕೆ ಇಲ್ಲದವರು ಸಹಮತ ಸೂಚಿಸುತ್ತಿಲ್ಲ " ಎಂದು ಬರೆದಿತ್ತು.[2] ನನ್ನ ಕಣ್ಣುಗಳು ಅರಳಿದವು. ರಾತ್ರಿ ಎಲ್ಲ ನಿದ್ದೆಗೆಟ್ಟಿದ್ದು ಸಾರ್ಥಕವಾಯಿತೆಂದು ಸಮಾಧಾನವಾಯಿತು. "ಬಹಳ ಸಂತೋಷವಾಯಿತು ಬುದ್ಧಿ, ತಾವು ದಿನಾಂಕ ಏಳರಂದು ನಡೆಯುವ ಮಠಾಧೀಶರ ಕಾರ್ಯಕ್ರಮಕ್ಕೆ ಬನ್ನಿ" ಎನ್ನುತ್ತ ನಮ್ಮ ಎದುರಾಳಿಗಳ ಕಾರ್ಯವನ್ನು ವಿವರಿಸಿದೆ. ಸ್ವಾಮೀಜಿಗಳು ಗಂಭೀರಭಾವ ತಾಳಿದ್ದರು. 'ಪಾಟೀಲ್ರೇ ನಮ್ಮ ಸಮಸ್ಯೆ ನಿಮಗೆ ಅರ್ಥವಾಗುವುದಿಲ್ಲ. ಈ ಮಠಕ್ಕೆ ವೀರಶೈವ ಭಕ್ತರಿದ್ದಾರೆ. ನಾನು ನಿಮ್ಮ ಸಭೆಗಳಲ್ಲಿ ಭಾಗವಹಿಸಿದರೆ ನನಗೆ ತೊಂದರೆಯಾಗುವುದು. ನಾನು ಈಗಾಗಲೇ ನನ್ನ ನಿಲುವು ಸ್ಪಷ್ಟಪಡಿಸಿ ಹೇಳಿಕೆ ಕೊಟ್ಟಿದ್ದೇನೆ. ಸಾಕಲ್ಲವೆ?' ಎಂದು ಮರುಪ್ರಶ್ನೆ ಮಾಡಿದರು. ದಂಗಾಗುವ ಸಮಯ ನನ್ನದಾಗಿತ್ತು. ಸ್ವಾಮೀಜಿ ಮಹತ್ಕಾರ್ಯ ಮಾಡಿದ್ದರು. ಲಿಂಗಾಯತರ ಪರವಾಗಿ ಹೇಳಿಕೆ ಕೊಟ್ಟಿದ್ದರು. 'ಇದು ಸಾಕಲ್ಲವೆ ಮೂರ್ಖ' ಎಂಬತ್ತಿತ್ತು ಅವರ ಮುಖಭಾವ. "ಸ್ವಾಮೀಜಿ ನಾವು ಬರುತ್ತೇವೆ" ಎಂದು ಹೊರಡಲಣಿಯಾದೆ. "ಪ್ರಸಾದ ಮಾಡಿಕೊಂಡು ಹೋಗುವಿರಂತೆ ಇರಿ" ಎನ್ನುತ್ತಲಿದ್ದರು ವಿರಕ್ತಮಠದ ಬಸವಣ್ಣನವರ ಜಂಗಮರು. ನಾನು ಕೇಳಿಸಿಕೊಳ್ಳುತ್ತ ಚಪ್ಪಲಿ ಧರಿಸಲಾರಂಭಿಸಿದ್ದೆ.

'ಬಂದ ದಾರಿಗೆ ಸುಂಕವಿಲ್ಲ' ಎನ್ನುತ್ತದೆ ಗಾದೆ. ಈಗ ಕಾಲ ಬದಲಾಗಿದೆ. ಗಾದೆ ಗಾದೆಯಾಗುಳಿದಿಲ್ಲ. ಸರಕಾರಿ ದಾರಿಯಲ್ಲಿ ಗಾಡಿ ಚಲಿಸಿದಾಗ ಮತ್ತೊಮ್ಮೆ ಸುಂಕ ಕೊಡಲೇಬೇಕೀಗ. ಸುಂಕ ಕೊಟ್ಟ ನಾವು ನಡೆದೆವು ಅದೇ ಪ್ರದೇಶದಲ್ಲಿರುವ ಮಡಗುಂಡಾ ಮಠಕ್ಕೆ. ದಾರಿ ಮಧ್ಯದಲ್ಲಿ ಹೊಸಮಠದ ಶ್ರೀಗಳ ಮಾತು

In Public domain. Digitization Muthulakshmi Research Academy

ಪದೇಪದೇ ನೆನಪಾಗಲಾರಂಭಿಸಿತ್ತು. ಮೈಸೂರು ಭಾಗದಲ್ಲಿರುವ ಪ್ರಮುಖ ಮಠದ ಅನುಮತಿ ಇಲ್ಲದೆ ಈ ಭಾಗದಲ್ಲಿ ಹುಲ್ಲುಕಡ್ಡಿ ಕದಲದೆಂಬ ಹೇಳಿಕೆ ಅನುಭವಕ್ಕೆ ಬರಲಾರಂಭಿಸಿತ್ತು. ಬಸವಣ್ಣನವರಿಂದ ಜಂಗಮ ಸ್ಥಾನ ದೊರಕಿಸಿಕೊಂಡ ಈ ವಿರಕ್ತರು ಯಾಕೆ ಹೀಗಾಡುತ್ತಾರೆ? ಧರ್ಮಾಧಿಕಾರಿಗಳು ಧರ್ಮಕಾರ್ಯ ಮಾಡದೆ, ಶಿಕ್ಷಣ ಸಂಸ್ಥೆಗಳೆಂಬ ವ್ಯಾಪಾರಿ ಸಂಸ್ಥೆಗಳನ್ನು ಪ್ರಾರಂಭಿಸಿ ದೇಶ-ವಿದೇಶಗಳಲ್ಲಿ ಅವುಗಳನ್ನು ಪಸರಿಸಿ ಮೌಲಿಕ ಶಿಕ್ಷಣ ನೀಡದೆ ಲೌಕಿಕ ಶಿಕ್ಷಣ ನೀಡಿದರೆ ಲಿಂಗಾಯತರು ಉದ್ಧಾರ ಆಗಬಲ್ಲರೆ? ಧರ್ಮಾಧಿಕಾರಿಗಳ ಕಾರ್ಯ ಧರ್ಮಪ್ರಚಾರ ಅಲ್ಲವೆ? ಇವರಿಗೆ ಧರ್ಮಕಟ್ಟಳೆಗಳು ಅನ್ವಯ ಆಗಲಾರವೆ? ಕೇವಲ ಭಕ್ತರು ಮಾತ್ರ ಧರ್ಮಭ್ರಷ್ಟರಾಗುವರೆ? ಅನೇಕ ಯೋಚನೆಗಳು ತಲೆಯಲ್ಲಿ. ಗಾಡಿ ದಾರಿಯ ದಿಕ್ಕನ್ನು ಬದಲಿಸಿತು. ನಾನು ವಿಚಾರಸರಣಿಯನ್ನು ತುಂಡರಸಿ "ಈ ಮಠದ ಮಧ್ಯದ ದಾರಿಯಲ್ಲಿ ಮತ್ಯಾವ ವಿರಕ್ತ ಮಠಗಳಿವೆ" ಕೇಳಿದೆ ನಂದಿಶನಲ್ಲಿ. "ನಡೀರಿ ಹೋಗೋಣ" ಎಂದ ನಂದೀಶ. ಮತ್ತೆ, ಮೂರು ಮಠಗಳ ಹೊಸ್ತಿಲು ತುಳಿದೆವು. "ಬರುತ್ತೇವೆ ನೀವೇನು ಚಿಂತಿಸಬೇಡಿ" ಎಂದಿದ್ದರು ಲೌಕಿಕ ಜಗತ್ತಿನ ಧರ್ಮಗುರುಗಳು.

ಮಡಗುಂಡಾ ಮಠದ ಶ್ರೀ ಶ್ರೀಕಂಠ ಸ್ವಾಮೀಜಿಯವರು ನಿಜಜಂಗಮರು. ನಿಜವಿರಕ್ತಮಠದ ಅಧಿಪತಿಗಳು. ಪ್ರೀತಿಯಿಂದ ನಮ್ಮನ್ನು ಸ್ವಾಗತಿಸಿ ಮೊದಲು ಪ್ರಸಾದ ಮಾಡಿಯೇ ಆಮೇಲೆ ಮುಂದಿನ ಮಾತುಕತೆ ಎಂದು ತಾಯಿಹೃದಯವನ್ನು ತೋರಿದರು. ಪ್ರಸಾದದ ನಂತರ ಬಂದ ವಿಷಯವನ್ನು ಅರುಹಲಾಗಿ ವಿರಕ್ತಮಠದ ಸ್ವಾಮಿಗಳನ್ನು ಸೇರಿಸಿಕೊಂಡು ಸಭೆಯಲ್ಲಿ ಭಾಗವಹಿಸುವುದಾಗಿ ಬೆನ್ನು ಚಪ್ಪರಿಸಿದರು. ನಂತರ ನಮ್ಮ ಪ್ರವಾಸ ಬಸವಯೋಗಿ ಪ್ರಭುಗಳತ್ತ ಸಾಗಿತ್ತು. ಇವರು ಕೂಡ ಬಸವಸಿದ್ಧಾಂತದಲ್ಲಿ ನಿಷ್ಠೆ ಉಳ್ಳವರು. ನಮ್ಮ ಕಾರ್ಯವನ್ನು ಶ್ಲಾಘಿಸುತ್ತ ನಮಗೆ ಎಲ್ಲ ತರಹದ ಸಹಕಾರ ನೀಡುವುದಾಗಿ ನಮ್ಮನ್ನು ಹುರುದುಂಬಿಸಿ ಬಿಳ್ಕೊಟ್ಟರು. ನಂತರ ನಮ್ಮ ಪಯಣ ಸಿದ್ಧಮಲ್ಲೇಶ ವಿರಕ್ತಮಠದತ್ತ ಸಾಗಿ ಶ್ರೀ ಚನ್ನಬಸವ ಸ್ವಾಮೀಜಿಗಳನ್ನು ಕಾಣುವುದಾಗಿತ್ತು. ದಾರಿ ಮಧ್ಯದಲ್ಲಿ ಇಪ್ಪತ್ತು ಮಠಗಳನ್ನು ಸಂಪರ್ಕಿಸಿದೆವು. ಕಾಲಿಗೆ ಬಿದ್ದೆವು. ದಕ್ಷಿಣೆ ಸಲ್ಲಿಸಿದೆವು. ಕೆಲವರು ಮುಖ ಸಿಂಡರಿಸದರೆ, ಕೆಲವರು ಹೃದಯ ತುಂಬಿ ಹಾರೈಸಿದರು. ಕೊನೆಯದಾಗಿ ಸಿದ್ಧಮಲ್ಲೇಶ ವಿರಕ್ತಮಠಕ್ಕೆ ದರ್ಶನ ಇತ್ತಾಗ ಜೇಬು ಕಾಲಿಯಾಗಿರುವ ಸಂಗತಿ ಬಯಲಾಯಿತು. ಕೈ ತುಂಬ ಎತ್ತಿಕೊಂಡು ತಂದಿದ್ದ ಎರಡು ಕಟ್ಟುಗಳು ಖಾಲಿಯಾಗಿದ್ದವು. ಎರಡು ರಾತ್ರಿ ಒಂದು ಹಗಲನ್ನು ಕಾರಿನಲ್ಲಿ ಕಳೆದು ಬೆಂಗಳೂರಿಗೆ ಮರಳಿದೆ.

In Public domain. Digitization Muthulakshmi Research Academy

ಕಾರ್ಯಕ್ರಮಕ್ಕೆ ಕೇವಲ ಎರಡು ಹಗಲು ಒಂದು ರಾತ್ರಿ ಮಾತ್ರ ಸಮಯ ಇತ್ತು. ಕಾರ್ಯಕ್ರಮದ ಸಭಾಭವನ ನೋಡಲು ಬಸವ ಸಮಿತಿಗೆ ಹೋದೆ. 'ಸಭಾಭವನ ತೆರೆದು ತೋರಿಸಿ' ಎಂದು ವಿನಂತಿಸಿಕೊಂಡಾಗ ಹೃದಯಾಘಾತವಾಗುವುದು ಒಂದೇ ಬಾಕಿ. ಸಭಾಭವನ ನವೀಕರಣ ಮಾಡುವ ಉದ್ದೇಶದಿಂದ ಅದನ್ನು ಯಾರಿಗೂ ಬಾಡಿಗೆ ಕೊಡುತ್ತಿರಲಿಲ್ಲವಂತೆ. ಒಂದು ವರ್ಷದ ದೂಳು ಸಭಾಮಂಟಪದಲ್ಲಿ! ಸ್ವಚ್ಛ ಮಾಡಿಸಲು ನಾಲ್ಕಾಳು ತರಿಸಿದೆ. ನಾನು ಇರದೇ ಹೋದರೆ ಕೆಲಸವಾಗದೆಂದು ಅಲ್ಲಿಯೇ ಕುಳಿತೆ. ದಿನವೆಲ್ಲ ದೂಳು ಜಾಡಿಸಿ ಸಭಾಭವನ ಸ್ವಚ್ಛ ಮಾಡಿದರು. ಬಣ್ಣವಿಲ್ಲದ ಗೋಡೆಗಳ ವಿಕಾರ ರೂಪ ತಳೆದಿದ್ದವು. ಗೋಡೆಗೆ ಶಾಮಿಯಾನದ ಬಟ್ಟೆಗಳನ್ನು ಹೊದಿಸಲು ಯೋಚಿಸಿ ಶಾಮಿಯಾನದವರನ್ನು ಕರೆಸಿದೆ. ಒಪ್ಪಿಕೊಂಡರು. ನಾನು ಸ್ನಾನ ಮಾಡಿ ಊಟ ಮಾಡಿ ಬರುತ್ತೇನೆಂದು ಮನೆಗೆ ಬಂದು ಮರಳಿ ಹೋದಾಗ ಜಾತ್ರೆಯಲ್ಲಿ ಹಾಕಿದಂತ ಚಪ್ಪರದ ಅರಿವೆಯನ್ನು ಹಾಕಿದ್ದರು. ಮರುದಿನ ಸಭೆಗೆ ದೇಶದ ಎಲ್ಲ ಮಾಧ್ಯಮಗಳು ಬರಲಿದ್ದವು. ನಮ್ಮ ಕಾರ್ಯಕ್ರಮಗಳು ದೇಶದ ಮಾಧ್ಯಮದ ಗಮನ ಸೆಳೆದಿದ್ದವು. ಅವರೆದುರು ಅವಮಾನ ಆಗುವುದೆಂದು ಬಟ್ಟೇ ಬದಲಿಸಿ ಹೊಸ ಬಿಳಿ ಬಟ್ಟೆಯನ್ನೇ ಹಾಕಬೇಕೆಂದು ಹಟ ಹಿಡಿದೆ. ಕಾಂಟ್ರಾಕ್ಟರ್ ಒಪ್ಪಿಕೊಂಡು ಹೊಸ ಬಿಳಿ ಬಟ್ಟೆಗಳು ಬಸವ ಸಮಿತಿಯ ಗೋಡೆಗಳ ಕುರೂಪವನ್ನು ಮುಚ್ಚಿದವು. ಒಳ್ಳೆಯ ಸೋಪಾಗಳನ್ನು ತರಿಸಿ ಸ್ವಾಮಿಗಳ ಘನತೆಗೆ ಚ್ಯುತಿ ಬರದಂತೆ ಆಸನದ ವ್ಯವಸ್ಥೆಯನ್ನು ಮಾಡಿದಾಗ ರಾತ್ರಿ ೧೨ ಘಂಟೆಯಾಗಿತ್ತು. ಮರುದಿನ ೧೦ ಘಂಟೆಗೆ ಸಭೆ ಪ್ರಾರಂಭವಾಗಲಿತ್ತು. ಸಭಾಭವನದ ಚಿತ್ರಗಳನ್ನು ತಗೆದು ಎಂ.ಬಿ.ಪಾಟೀಲರಿಗೆ ಕಳಿಸಿದೆ. ಅವರು ಅದನ್ನು ಮೆಚ್ಚಿಕೊಂಡದ್ದಾಗಿ ತಿಳಿಸಿದರು.

ದಿನಾಂಕ ಆರರಂದು ಮುನ್ನೂರೈವತ್ತು ಧಾರ್ಮಿಕ ನಾಯಕರು ಬಂದರು. ಸಭೆ ಸರಿಯಾಗಿ ಹತ್ತು ಗಂಟೆಗೆ ಪ್ರಾರಂಭವಾಯಿತು. ಸಭಾಭವನ ಅತ್ಯಂತ ಶೋಭಾನವಾಯವಾಗಿ ಪರಿವರ್ತಿತವಾಗಿತ್ತು. ಕಾಂಟ್ರಾಕ್ಟರ್ ಇನ್ನಷ್ಟು ಸುಂದರವಾಗಿರಸಲು ಸ್ವಂತ ಖರ್ಚಿನಿಂದ ಹೂಮಾಲೆಗಳಿಂದ ತಂದು ಅಲಂಕರಿಸಿದ್ದ. ಕೆಂಪು ವೆಲ್ವೆಟ್ ಹೊದಿಕೆಯ ಸೋಪಾಗಳನ್ನು ವೇದಿಕೆಯಲ್ಲದೆ ವೇದಿಕೆ ಕೆಳಭಾಗದಲ್ಲಿಯೂ ಹೊಂದಿಸಿದ್ದರು. ಹಿರಿಯರು ಮತ್ತು ಜಗದ್ಗುರುಗಳು ವೇದಿಕೆ ಮೇಲೆ ಆಸೀನರಾದರೆ ಕೆಳಗಡೆ ಕಿರಿಯ ಸ್ವಾಮಿಗಳು ಮತ್ತು ಹಳ್ಳಿಗಳಿಂದ ಬಂದ ಮಠಾಧೀಶರು ಆಸೀನರಾಗಿದ್ದರು. ಸಭಾಭವನದ ಅರ್ಧಭಾಗವನ್ನು ಜನರಿಗಾಗಿ ಬಿಡಲಾಗಿತ್ತು. ಡಾ.ಜಾಮದಾರ, ನಾನು, ಜಯಣ್ಣ ಸಭಾಭವನದ ಕೊನೆಯ ಸಾಲಿನಲ್ಲಿ ಕುಳಿತು ಸ್ವಾಮೀಜಿಗಳ ಮಾತುಗಳನ್ನು ಕೇಳುತ್ತಲಿದ್ದೆವು. ಬಿ.ಬಿ.ಸಿ. ಎಂಬ ದೈತ್ಯ ಮೀಡಿಯಾದವರು ನನ್ನನ್ನು ಹುಡುಕಿಕೊಂಡು ಬಂದಿದ್ದಾರೆಂದು

In Public domain. Digitization Muthulakshmi Research Academy

ಕಾರ್ಯಕರ್ತರು ಬಂದು ನನಗೆ ವರದಿ ನೀಡಿದರು. ಅವರನ್ನು ಸಂಪರ್ಕಿಸಿ ನನ್ನ ಬದಲಾಗಿ ಡಾ. ಜಾಮದಾರ ಮಾತಾಡುತ್ತಾರೆ ಎಂದು ಅವರಲ್ಲಿ ವಿನಂತಿಸಿಕೊಂಡೆ. ಅದರಂತೆ ಇವರು, ನಮ್ಮ ಹಿರಿಯರೆಂದು ಡಾ. ಜಾಮದಾರರನ್ನು ಪರಿಚಯಿಸಿ ನಾನು ಸಭಾಭವನಕ್ಕೆ ಹಿಂದುರುಗಿದೆ. ಕಾರ್ಯಕ್ರಮ ಸಾಂಗವಾಗಿ ನೆರವೇರಿತು. ಸ್ವಾಮೀಜಿಗಳು ತಮ್ಮ ಇತಿಮಿತಿಗಳನ್ನು ಅರಿತು ಮಾತನಾಡಿದ್ದರು. ಆದರೆ ಸಭೆ ಮುಕ್ತಾಯವಾಗುವ ಪೂರ್ವದಲ್ಲಿ ಮಾತೆ ಮಹಾದೇವಿಯವರು ಹೊರನಡೆದರು. ಅವರು ಹೊರಡುತ್ತಿದ್ದಂತೆ ಮಾಧ್ಯಮಗಳು ಅವರನ್ನು ಸುತ್ತುವರಿದುಬಿಟ್ಟವು. ಮಾತೆ ಮಹಾದೇವಿಯವರು ಸ್ಪಷ್ಟವಾಗಿ ರಾಜಕೀಯ ಭಾಷಣ ಮಾಡಿಬಿಟ್ಟರು. ಮರುದಿನ ಮಾಧ್ಯಮದ ವರದಿಗಳು ಲಿಂಗಾಯತ ಹೋರಾಟ ಕೇವಲ ರಾಜಕೀಯ ಹೋರಾಟ ವೆಂಬಂತೆ ಬಿಂಬಿಸಿಬಿಟ್ಟವು. 'ಕಾಂಗ್ರೆಸ್ ಬೆಂಬಲಕ್ಕೆ ನಿಂತ ಸ್ವಾಮೀಜಿಗಳು' ಎಂದು ಮುಖಪುಟದಲ್ಲಿ ಪ್ರಜಾವಾಣಿ ಪ್ರಕಟಿಸಿದ್ದರೆ 'ಧರ್ಮದ ಪ್ರಸ್ತಾವನೆ ತಿರಸ್ಕರಿಸಲು ಶಾ ಯಾರು?' ಎಂದು ಉದಯವಾಣಿ ಪ್ರಕಟಿಸಿತ್ತು.

ಲಿಂಗಾಯತ ಮಠಾಧಿಪತಿಗಳ ವೇದಿಕೆಯು ಬಸವಸದನದಲ್ಲಿ ಶನಿವಾರ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ "ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ತಮ್ಮ ಬೆಂಬಲ ನೀಡಲು ಲಿಂಗಾಯತ ಮಠಾಧೀಶರು ನಿರ್ಧರಿಸಿದ್ದಾರೆ' ಎಂದು ಪ್ರಜಾವಾಣಿ ವರದಿ ಮಾಡಿತ್ತು[೩] "ಜೇನುತುಪ್ಪದ ಬಾಟಲಿಗೆ ಹರಳೆಣ್ಣೆ ಎಂಬ ಚೀಟಿಯನ್ನು ಅಂಟಿಸಲಾಗಿತ್ತು. ಚೀಟಿ ಕಿತ್ತು ಜೇನು ತುಪ್ಪ ಸವಿಯುವ ಕಾಲ ಬಂದಿದೆ. ವೀರಶೈವ ಲೇಬಲ್ ಕಿತ್ತೆಸೆದು ಲಿಂಗಾಯತ ಧರ್ಮ ಎನ್ನಬೇಕಿದೆ, ಎನ್ನುತ್ತ ಎಲ್ಲ ಲಿಂಗಾಯತರೂ ಕಾಂಗ್ರೆಸ್ಗೆ ಮತ ಚಲಾಯಿಸಬೇಕು"[೪] ಎಂದು ಬಹಿರಂಗವಾಗಿ ಕರೆ ನೀಡಿದ್ದರು.

"ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವ ವಿರೋಧವನ್ನು ಲೆಕ್ಕಿಸದೆ ಪ್ರತ್ಯೇಕ ಲಿಂಗಾಯತ ಧರ್ಮಕ್ಕೆ ಮಾನ್ಯತೆ ನೀಡಿ ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಹಾಗಾಗಿ ಪ್ರಸ್ತುತ ವಿಧಾನಸಭಾ ಚುನಾವಣೆಯಲ್ಲಿ ಎಲ್ಲಾ ಲಿಂಗಾಯತರು ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಮತನೀಡಬೇಕು. ಇದರಲ್ಲಿ ಮುಚ್ಚು ಮರೆ ಬೇಡ. ಪಂಚಪೀಠದ ಎಲ್ಲಾ ಮಠಾಧೀಶರು ಸೇರಿ ಕಾಂಗ್ರೆಸ್ ವಿರುದ್ಧ ಹೋರಾಟ ಮಾಡುತ್ತೇವೆ ಎಂದಿದ್ದಾರೆ. ಹಾಗಾಗಿ ನಾವು ಸಹ ನಮ್ಮ ವಿಚಾರಗಳಿಗೆ ಸಹಕರಿಸಿದವರ ಪರ ನಿಲ್ಲುವುದು ಧರ್ಮದ ಕೆಲಸವಾಗಿದೆ" ಎಂದು ಘೋಷಿಸಿದ್ದರು. "ಮೇ ೧೮ಕ್ಕೆ ಬಸವ ಜಯಂತಿ ಕಾರ್ಯಕ್ರಮವಿದೆ. ಪ್ರಧಾನಿ ನರೇಂದ್ರ ಮೋದಿಯವರು ಲಿಂಗಾಯತಕ್ಕೆ ಅಲ್ಪಸಂಖ್ಯಾತ ಸ್ಥಾನಮಾನ ನೀಡುವ ಮೂಲಕ ಕರ್ನಾಟಕದ ಜನತೆಗೆ ಬಸವ ಜಯಂತಿಯ ಉಡುಗೊರೆ ನೀಡಲಿ"[೫] ಎಂದು ಕೇಂದ್ರ ಸರಕಾರವನ್ನು ಕೇಳಿಕೊಂಡಿದ್ದರು. ಇನ್ನೊಬ್ಬ

In Public domain. Digitization Muthulakshmi Research Academy
ಮಠಾಧೀಶರಾದ ಚಿತ್ರದುರ್ಗದ ಮುರುಘಾಮಠದ ಶ್ರೀಗಳು ಮಾತನಾಡುತ್ತ "ನಮ್ಮದು ಸಹಕಾರಕ್ಕೆ ಸಹಕಾರ ತತ್ವ ಎನ್ನುತ್ತ ನಮಗೆ ಯಾರು ಸಹಾಯ ಮಾಡುತ್ತಾರೋ ಅವರಿಗೆ ನಾವು ಸಹಕಾರ ನೀಡುತ್ತೇವೆ"[೬] ಎಂದಿದ್ದರು.

ಮಠಾಧೀಶರಿಗೆ ಅಮಿತ್ ಶಾ ಮೇಲೆ ಕೋಪ ಬಂದಿತ್ತು. ಅಮಿತ್ ಶಾ ಯಾರು? ಎಂದು ಪ್ರಶ್ನಿಸುತ್ತ "ಲಿಂಗಾಯತಕ್ಕೆ ಅಲ್ಪಸಂಖ್ಯಾತ ಧರ್ಮದ ಮಾನ್ಯತೆ ನೀಡುವ ಪ್ರಸ್ತಾಪವನ್ನು ತಿರಸ್ಕರಿಸಲು ಅಮಿತ್ ಶಾ ಯಾರು? ಅವರೇನು ರಾಷ್ಟ್ರಪತಿಗಳೆ? ಸಚಿವಸಂಪುಟದ ಸದಸ್ಯರೆ? ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರೆ? ಅಥವಾ ಇವರೆಲ್ಲರನ್ನು ಮೀರಿದ ಸರ್ವಾಧಿಕಾರಿಯೆ? ಇವರಾರೂ ಅಲ್ಲವೆಂದಾದರೆ ಬೇಜವಾಬ್ದಾರಿ ಹೇಳಿಕೆ ನೀಡುತ್ತ ಧರ್ಮ ಒಡೆಯುವ ಕೆಲಸವನ್ನೇಕೆ ಮಾಡುತ್ತೀರಾ ಎಂದು ಕಾರವಾಗಿ ತಮ್ಮ ಅಸಮಾಧಾನ ಹೊರಹಾಕಿದ್ದರು. ಗದುಗಿನ ತೋಂಟದಾರ್ಯಮಠದ ಜಗದ್ಗುರು ಶ್ರೀ ಸಿದ್ಧಲಿಂಗಸ್ವಾಮೀಜಿಯವರು ಮಾತನಾಡುತ್ತ "ನಮ್ಮ ಹೋರಾಟ ಈಗ ತಾರ್ಕಿಕ ಅಂತ್ಯಕ್ಕೆ ಬಂದಿದೆ. ರಾಜ್ಯದಲ್ಲಿ ಬಿ.ಜೆ.ಪಿ. ಅಧಿಕಾರ ಬರಬೇಕೆಂದು ಅಮಿತ್ ಶಾ ಸುಳ್ಳು ಹೇಳಿಕೊಂಡು ತಿರುಗುತ್ತಿದ್ದಾರೆ" ಎಂದು ಯು.ಪಿ.ಎ ಸರಕಾರ ಲಿಂಗಾಯತ ಪ್ರಸ್ತಾಪವನ್ನು ಹಿಂತುರುಗಿಸಿತ್ತು ಎನ್ನುವುದನ್ನು ಅಲ್ಲಗಳೆದಿದ್ದರು.

ಉತ್ತರಪ್ರದೇಶದಲ್ಲಿ ಯಾದವರು ಗುಜರಾತಿನಲ್ಲಿ ಪ್ರಬಲ ಪಟೇಲ ಸಮುದಾಯವನ್ನು ಕೈಬಿಟ್ಟು ಚುನಾವಣೆ ಗೆದ್ದಿದ್ದಾರೆ. ಇದೇ ಮಾದರಿಯಲ್ಲಿ ಕರ್ನಾಟಕದಲ್ಲೂ ಲಿಂಗಾಯತ ಸಮುದಾಯವನ್ನು ಕೈ ಬಿಟ್ಟು ಅಧಿಕಾರಕ್ಕೆ ಬರಲು ಯೋಚಿಸಿದ್ದಾರೆ. ಪ್ರತ್ಯೇಕ ಧರ್ಮವಿಚಾರವು ನಿರ್ಣಾಯಕ ಹಂತ ತಲುಪಿದ್ದು ಮಾನ್ಯತೆ ನೀಡುವಂತೆ ಪ್ರದಾನಿ ನರೇಂದ್ರ ಮೋದಿ ಅವರನ್ನು ಕಂಡು ಮನವಿ ಮಾಡುತ್ತೇವೆ. ನಮ್ಮ ಮನವಿಗೆ ಅವರು ಸ್ಪಂದಿಸದಿದ್ದರೆ ನ್ಯಾಯ ಸಿಗುವವರೆಗೂ ಹೋರಾಟ ಮುಂದುವರಿಸುತ್ತೇವೆ ಎಂದು ಸಭೆಯಲ್ಲಿ ನಿರ್ಣಯಿಸಿದ್ದಾಗಿ ಶ್ರೀಗಳು ತಿಳಿಸಿದರೆಂದು ಮಾಧ್ಯಮಗಳು ವರದಿ ಮಾಡಿದ್ದವು.

ಲಿಂಗಾಯತ ಹೋರಾಟದಲ್ಲಿದ್ದ ಸ್ವಾಮೀಜಿಗಳು ಸಿದ್ದರಾಮಯ್ಯನವರ ಬೆನ್ನಿಗೆ ನಿಲ್ಲುತ್ತಿದ್ದಂತೆ ವಿರೋಧಪಕ್ಷದಲ್ಲಿದ್ದ ಲಿಂಗಾಯತ ನಾಯಕರು ಪತ್ರಿಕಾ ಹೇಳಿಕೆಗಳನ್ನು ಬಿಡುಗಡೆ ಮಾಡಲಾರಂಭಿಸಿದ್ದರು. ಮಾಜಿ ಮುಖ್ಯಮಂತ್ರಿ ಹಾಗೂ ವಿರೋಧ ಪಕ್ಷದ ನಾಯಕನ ಸ್ಥಾನದಲ್ಲಿ ಲಿಂಗಾಯತ ನಾಯಕರೆಂದು ಬಿಂಬಿಸಿಕೊಂಡ ಜಗದೀಶ ಶೆಟ್ಟರ್ ಅವರು 'ಲಿಂಗಾಯತ ಪ್ರತ್ಯೇಕ ಧರ್ಮ ಸ್ಥಾನಮಾನ ವಿಷಯದ ಹಿಂದಿರುವ ರಾಜಕೀಯ ಮುಖವಾಡ ಇಂದು ಕಳಚಿ ಬಿದ್ದಿದೆ'[೭] ಎಂದು ಹುಬ್ಬಳ್ಳಿಯಲ್ಲಿ ಟೀಕಿಸಿದ್ದರು. ರಾಜಕಾರಣದ ಸಲುವಾಗಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಧರ್ಮದ ಚರ್ಚೆಯನ್ನು ಹುಟ್ಟುಹಾಕಿದ್ದಾರೆ. ಮತ್ತೆ

In Public domain. Digitization Muthulakshmi Research Academy
ಮುಖ್ಯಮಂತ್ರಿಯಾಗುವ ಕನಸು ಕಂಡಿರುವ ಅವರು ಚುನಾವಣೆ ಸಂದರ್ಭದಲ್ಲಿ ಈ ವಿಷಯವನ್ನು ಭಾವನಾತ್ಮಕವಾಗಿ ಬಳಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಆ ಮೂಲಕ ಧರ್ಮ ಒಡೆಯುವ ಕೆಲಸ ಮಾಡುತ್ತಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಧರ್ಮದಂತಹ ಭಾವನಾತ್ಮಕ ವಿಷಯದ ಬಗ್ಗೆ ಬಿ.ಜೆ.ಪಿ. ಪ್ರತಿಕ್ರಿಯಿಸುವುದಿಲ್ಲ. ಚುನಾವಣೆ ಮುಗಿದ ಬಳಿಕ ಈ ವಿಷಯದ ಬಗ್ಗೆ ಮಾತನಾಡುತ್ತೇನೆ' ಎಂದು ಹೇಳಿದರು. ಬೀದರ್‌ನಲ್ಲಿ ಲಿಂಗಾಯತ ಸ್ವತಂತ್ರ ಧರ್ಮಕ್ಕಾಗಿ ಹೋರಾಟ ಎಂದು ಪಕ್ಷಾತೀತವಾದ ಹೋರಾಟವೆಂದು ಪ್ರಾರಂಭವಾದ ಲಿಂಗಾಯತ ಹೋರಾಟವು ಕೇವಲ ಒಂದು ವರ್ಷದ ಅವಧಿಯಲ್ಲಿ ರಾಜಕೀಯ ಪಕ್ಷಗಳ ದಾಳಗಳಿಗೆ ಬಲಿಯಾಗಿ ರಾಜಕೀಯ ಪಕ್ಷಗಳ ಬಲಾಬಲಕ್ಕೆ ವೇದಿಕೆ ಕಲ್ಪಿಸುವ ಮಟ್ಟಕ್ಕೆ ಕುಸಿದಿದ್ದುದು ಲಿಂಗಾಯತದ ಮತ್ತೊಂದು ದೊಡ್ಡ ದುರಂತ.

ಕೊನೆ ಟಿಪ್ಪಣಿಗಳು

೧. ಮಹಾತ್ಮರ ಚರಿತಾಮೃತ, ಪ್ರಭುಚನ್ನಬಸವ ಸ್ವಾಮೀಜಿ, ಪು.ಸಂ. ೩೨೦
೨. ಪ್ರಜಾವಾಣಿ, ಜುಲೈ ೨೭, ೨೦೧೭
೩. ಪ್ರಜಾವಾಣಿ, ಮೇ ೭, ೨೦೧೮
೪. ಉದಯವಾಣಿ, ಮೇ ೭, ೨೦೧೮, ವಿಜಯ ಕರ್ನಾಟಕ ಮೇ ೭, ೨೦೧೮
೫. ಪ್ರಜಾವಾಣಿ, ಏಪ್ರಿಲ್ ೯, ೨೦೧೮
೬. ಪ್ರಜಾವಾಣಿ, ಮೇ ೭, ೨೦೧೮
೭. ಪ್ರಜಾವಾಣಿ, ಏಪ್ರಿಲ್ ೯, ೨೦೧೮

In Public domain. Digitization Muthulakshmi Research Academy

ಅಧ್ಯಾಯ ಹದಿನೈದು

ಲಿಂಗಾಯತ ಚಳುವಳಿಯು ರಾಜಕೀಯ ಚಳುವಳಿಯಾಗಿ ಕೊನೆಗೊಂಡಿತೆ?

ಧರ್ಮ ಹಾಗೂ ರಾಜಕೀಯ ಇವರೆಡು ಜಗತ್ತಿನ ಅನೇಕ ದೇಶಗಳ ಕ್ರಾಂತಿಗೆ ಕಾರಣವಾಗಿದೆ. ಲಿಂಗಾಯತ ಧರ್ಮದ ಸ್ಥಾಪಕರಾದ ಬಸವಣ್ಣನವರು ರಾಜಕೀಯ ಕಾರಣದಿಂದ ಕಲ್ಯಾಣ ತೊರೆದು ಕೂಡಲ ಸಂಗಮಕ್ಕೆ ಬಂದು ಅಲ್ಲಿ ಐಕ್ಯವಾಗುತ್ತಾರೆ. ಅಸಂಖ್ಯಾತ ಶರಣರು ಕಲ್ಯಾಣ ತೊರೆದು ಭಾರತದ ಎಲ್ಲ ಭಾಗಗಳಲ್ಲಿ ಹಂಚಿ ಹೋಗಿದ್ದರು. ಲಿಂಗಾಯತ ಧರ್ಮದ ಧರ್ಮ ಗ್ರಂಥಗಳಾದ ವಚನದ ಕಟ್ಟುಗಳು ಕ್ರಾಂತಿಯ ಕಿಡಿಗೆ ಆಹುತಿಯಾಗಿದ್ದವು. ಅನೇಕರು ಕ್ರಾಂತಿಯ ದಳ್ಳುರಿಗೆ ಆಹಾರವಾಗಿದ್ದರು. ಕೊನೆಯಲ್ಲಿ ಕಲ್ಯಾಣದ ಅರಸ ಬಿಜ್ಜಳನೂ ಕ್ರಾಂತಿಕಾರಿಯ ಖಡ್ಗಕ್ಕೆ ಕೊರಳೊಡ್ಡಿದ್ದ. ಕಲ್ಯಾಣದಲ್ಲಿಯೂ ರಾಜಕೀಯ ಕಾರಣದಿಂದಲೇ ಅಲ್ಲವೆ ಧರ್ಮಸ್ಥಾಪಕರನ್ನು ಗಡಿಯಾಚೆ ಹಾಕಲಾಗಿದ್ದು?

ಕಲ್ಯಾಣಕ್ರಾಂತಿಯ ನಂತರ ಬಸವಯುಗ ಅಂತ್ಯ ಕಾಣಲಿಲ್ಲ. ಚೆದುರಿಹೋದ ಶರಣರು ಈ ಧರ್ಮವನ್ನು ಕಾಪಾಡಿ ಅದನ್ನು ಜನಮಾನಸದಲ್ಲಿ ಬಿತ್ತಿದರು. ಲಿಂಗಾಯತ ಧರ್ಮ ಎಂದೂ ರಾಜಧರ್ಮವಾಗಲಿಲ್ಲ. ಕಾರಣ ಇದು ಕಾಯಕಯೋಗಿಗಳು ಆಚರಿಸಿದ ಧರ್ಮ. ಸುಮಾರು ಒಂಬತ್ತು ನೂರು ವರ್ಷಗಳಿಂದ ಇದು ಪ್ರಚಲಿತದಲ್ಲಿದ್ದರೂ ರಾಜಧರ್ಮದ ಮನ್ನಣೆಯನ್ನು ಪಡೆಯಲೇ ಇಲ್ಲ. ಪುಂಗನೂರು, ಕೆಳದಿ, ಕೊಡಗು, ಕಿತ್ತೂರು, ಮೈಸೂರು ಮತ್ತಿತರ ಸಾಮಂತ ರಾಜರು ಧರ್ಮವನ್ನು ಆಚರಿಸಿದರೂ ತಮ್ಮ ಪ್ರಜೆಗಳ ಮೇಲೆ ಈ ಧರ್ಮವನ್ನು ಹೇರಲೇ ಇಲ್ಲ. ಸರಳ ಸಿದ್ಧಾಂತದ ಕಾರಣ ಈ ಧರ್ಮ ಇಂದಿಗೂ ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ, ಆಂಧ್ರ, ತಮಿಳನಾಡಿನಲ್ಲಿ ಆಚರಿಸಲ್ಪಡುತ್ತಿದೆ.

In Public domain. Digitization Muthulakshmi Research Academy

ವಚನಗಳು ಬೆಳಕನ್ನು ಕಂಡುಕೊಂಡ ನಂತರ ಶಿಕ್ಷಣದ ಪ್ರಗತಿಯಾಗುತ್ತಿದ್ದಂತೆ ಯುವಕರು, ಪ್ರಜ್ಞಾವಂತರು ಈ ಧರ್ಮದ ಸರಳತೆಯನ್ನು ಮೆಚ್ಚಿಕೊಂಡು ಇದನ್ನು ಜಗತ್ತಿಗೆ ಪರಿಚಯಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ಈ ಧರ್ಮಕ್ಕೆ ಭಾರತದ ಸಾಂವಿಧಾನಿಕ ಮಾನ್ಯತೆಯನ್ನು ಪಡೆಯುಲು ಚಿಂತಿಸಲಾರಂಭಿಸಿದರು. ಅದರ ಅಂಗವಾಗಿ ಬೀದರಿನಲ್ಲಿ ಸಮಾವೇಶ ಹಮ್ಮಿಕೊಂಡಿದ್ದರು.

ಬೀದರ್ ಸಮಾವೇಶವು ಜನಸಾಮಾನ್ಯರಿಂದ ಕೂಡಿತ್ತು ಎನಿಸಿದರೂ ಅದರಲ್ಲಿಯೂ ರಾಜಕೀಯದ ವಾಸನೆಯಿತ್ತು. ಈ ಸಭೆ ನಡೆಯುವ ಬಹು ಪೂರ್ವದಲ್ಲಿ ಘಟಿಸಿದ ಘಟನಾವಳಿಗಳನ್ನು ಗಮನಿಸಿದರೆ ಇದರಲ್ಲಿ ರಾಜಕೀಯ ವಾಸನೆ ಇತ್ತು ಎಂಬ ಭಾವನೆ ಬರದಿರಲಾರದು. ೨೦೧೩ರ ಅಸೆಂಬ್ಲಿ ಚುನಾವಣೆಯಲ್ಲಿ ಬಿ.ಜೆ.ಪಿ. ಅಧಿಕಾರ ಕಳೆದುಕೊಂಡಿತ್ತು. ಅದಕ್ಕೆ ಬಿ.ಜೆ.ಪಿಯ ಒಡಕು ಕಾರಣವಾಗಿತ್ತು. ಆ ಪಕ್ಷದಲ್ಲಿದ್ದ ಲಿಂಗಾಯತ ನಾಯಕ ಯಡಿಯೂರಪ್ಪನವರು ಕೆ.ಜೆ.ಪಿ. ಪಕ್ಷ ಕಟ್ಟಿದರು. ಶೇ. ೫%ರಷ್ಟು ಮತದಾರರನ್ನು ಸೆಳೆಯುವಲ್ಲಿ ಯಶಸ್ವಿಯೂ ಆಗಿದ್ದರು. ಬಿ.ಜೆ.ಪಿ. ಸೋತಿತ್ತು. ಬಿ.ಜೆ.ಪಿ.ಯ ಒಡಕಿನಿಂದ ತಮಗೆ ಲಾಭವಾಗಿದ್ದು ಕಾಂಗ್ರೆಸ್ ನಾಯಕರ ಮನದಲ್ಲಿತ್ತು. ೨೦೧೩ರಲ್ಲಿ ಕಾಂಗ್ರೆಸ್ ಪಕ್ಷ ಸರಕಾರ ರಚಿಸುತ್ತಿದ್ದಂತೆಯೇ ಲಿಂಗಾಯತ ಧರ್ಮದ ಪ್ರಸ್ತಾಪವನ್ನು ಮಾತೆ ಮಾಹಾದೇವಿಯವರು ಸಿದ್ದರಾಮಯ್ಯನವರಲ್ಲಿ ಸಲ್ಲಿಸಿದ್ದರಂತೆ. ಆದರೆ ಅವರು ಸಮಯ ಬಂದಾಗ ಚರ್ಚಿಸೋಣ ಎಂದು ತಳ್ಳಿಹಾಕಿದ್ದರಂತೆ. ೨೦೧೮ರ ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಬೀದರ್‌ನಲ್ಲಿ ಸಮಾವೇಶವಾಗುತ್ತದೆ. ಅದು ಯಶಸ್ಸು ಗಳಿಸುತ್ತದೆ. ಭಾವನಾತ್ಮಕವಾಗಿರುವ ಕೆಲವು ಬೇಡಿಕೆಗಳಿಗೆ ಸರಕಾರ ಅಸ್ತು ಎನ್ನುತ್ತದೆ. ಕಾಂಗ್ರೆಸ್ ಪಕ್ಷದವರೇ ಪದಾಧಿಕಾರಿಗಳಿರುವ ವೀರಶೈವ ಮಹಾಸಭೆ ಮುಖ್ಯಮಂತ್ರಿಗಳನ್ನು ಸನ್ಮಾನಿಸುತ್ತಾ ಸ್ವತಂತ್ರ ಧರ್ಮಕ್ಕೆ ಬೇಡಿಕೆ ಸಲ್ಲಿಸುತ್ತದೆ. ಮುಖ್ಯಮಂತ್ರಿಗಳು ಇವರ ಮನವಿಗೆ ಸ್ಪಂದಿಸುತ್ತಾರೆ. ಸರಕಾರದ ಆರು ಜನ ಹಿರಿಯ ಸಚಿವರು ಜನರ ಮನಸ್ಥಿತಿ ಅರಿಯಲು ರಾಜ್ಯಪ್ರವಾಸ ಮಾಡುತ್ತಾರೆ. ಲಿಂಗಾಯತದ ಹಸಿವಿದೆ ಎಂದು ಅವರು ಮನಗಾಣುತ್ತಾರೆ. ನಂತರ ನಡೆದದ್ದನ್ನು ಈ ಪುಸ್ತಕದಲ್ಲಿ ಓದುಗರು ಗಮನಿಸಿದ್ದೀರಿ. ಲಿಂಗಾಯತಕ್ಕೆ ಸ್ವತಂತ್ರ ಧರ್ಮ ಮಾನ್ಯತೆಯೂ ವೀರಶೈವ ಮಹಾಸಭಾ ಮತ್ತು ಕಾಂಗ್ರೆಸ್ ಪಕ್ಷದ ನಾಯಕರೆಲ್ಲರೂ ಸೇರಿಕೊಂಡು ರಾಜಕೀಯ ಹಿತಾಸಕ್ತಿಗೋಸ್ಕರ ರಚಿಸಿದ ಒಂದು ಷಡ್ಯಂತ್ರವಾಗಿತ್ತೆ?

'ಹೌದು' ಎನ್ನುತ್ತಾರೆ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್. ಇವರ ಭಾವನೆಗಳಿಗೆ ತುಪ್ಪ ಸುರಿದಂತೆ. 'ಎಲ್ಲಾ ಲಿಂಗಾಯಿತರು ಕಾಂಗ್ರೆಸ್ಸಿಗೆ ಮತ ಚಲಾಯಿಸಬೇಕು'[೧] ಎಂದು ಕೂಡಲಸಂಗಮದ ಬಸವಧರ್ಮ ಪೀಠಾಧ್ಯಕ್ಷೆ ಮಾತೆ

In Public domain. Digitization Muthulakshmi Research Academy

ಮಹಾದೇವಿಯವರು ಬಹಿರಂಗವಾಗಿ ಕರೆ ನೀಡುತ್ತಾರೆ. ಅವರ ಈ ಹೇಳಿಕೆಯ ಬೆನ್ನಲ್ಲಿ ವಿರೋಧಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್ 'ಲಿಂಗಾಯತ ಪ್ರತ್ಯೇಕ ಧರ್ಮ ಸ್ಥಾನಮಾನದ ವಿಷಯದ ಹಿಂದಿರುವ ರಾಜಕೀಯ ಮುಖವಾಡ ಇಂದು ಕಳಚಿದೆ'[೨] ಎಂದಿದ್ದರು. "ರಾಜಕಾರಣದ ಸಲುವಾಗಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಧರ್ಮದ ಚರ್ಚೆಯನ್ನು ಹುಟ್ಟು ಹಾಕಿದ್ದಾರೆ ಮತ್ತೆ ಮುಖ್ಯಮಂತ್ರಿ ಆಗುವ ಕನಸು ಕಂಡಿರುವವರು ಚುನಾವಣೆಯ ಸಂದರ್ಭದಲ್ಲಿ ಈ ವಿಷಯವನ್ನು ಭಾವನಾತ್ಮಕವಾಗಿ ಬಳಸಿಕೊಳ್ಳಲು ಯತ್ನಿಸುತ್ತಿದ್ದಾರೆ"[೩] ಎಂದು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ನುಡಿದಿದ್ದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಅಮಿತ್ ಶಾ ಅವರು 'ಧರ್ಮ ವಿಭಜನೆಯಲ್ಲಿ ಯಾರೂ ಸಫಲರಾಗುವುದಿಲ್ಲ;[೪] ಅದಕ್ಕೆ ನಾವು ಅವಕಾಶವನ್ನು ಮಾಡಿಕೊಡುವುದಿಲ್ಲ' ಎಂದಿದ್ದರು.

ಇನ್ನೊಂದು ಬದಿಯಲ್ಲಿ ಧರ್ಮ ಕಾಯಬೇಕಾದ ಜಂಗಮರು ಮುಖ್ಯವಾಗಿ ಬಸವಣ್ಣನವರ ವಾರಸುದಾರರಾದ ವಿರಕ್ತಮಠಾಧೀಶರು ಪ್ರಭುತ್ವದ ಲಾಭಕ್ಕಾಗಿ ಬಸವಣ್ಣನವರ 'ಜಂಗಮ' ತತ್ವಗಳನ್ನು ಮರೆತು ಶತಮಾನಗಳೇ ಗತಿಸಿವೆ. ಧಾರ್ಮಿಕ ಶಿಕ್ಷಣಕ್ಕಿಂತ ಲೌಕಿಕ ಶಿಕ್ಷಣವೇ ಮೇಲೆಂದು ಇವರು ಆಧುನಿಕತೆಯತ್ತ ಮುಖಮಾಡಿದ್ದಾರೆ. ಬಣ್ಣರಹಿತವಾದ ಗಟ್ಟಿ ಸಿದ್ಧಾಂತದ ಲಿಂಗಾಯತದ ಆಚರಣೆ ಬೌದ್ಧಿಕ ಅಥವಾ ವಿದ್ವಾಂಸರ ಆಚರಣೆ ಎನ್ನುವಂತೆ ಲಿಂಗಾಯತ ಯುವಕ ಯುವತಿಯರು ಧರ್ಮದ ಆಕರ್ಷಣೆ ಕಳೆದುಕೊಂಡು ಮೌಢ್ಯಕ್ಕೆ ಬಲಿಯಾಗುತ್ತಿದ್ದಾರೆ. ಧರ್ಮವೆಂದರೆ ಕೇವಲ ಆಚರಣೆ ಅದರಲ್ಲೂ ಮೌಢ್ಯಾಚರಣೆ ಎಂಬಂತಾಗಿದೆ!

ಕಾರಣಗಳು ರಾಜಕೀಯವಾಗಿರಲಿ ಅಥವಾ ಸ್ವಾರ್ಥಕ್ಕಾಗಿರಲಿ, ಇಂತಹ ಸನ್ನಿವೇಶದಲ್ಲಿ ಹೋರಾಟಕ್ಕೆ ಕಿಚ್ಚನ್ನು ಹಚ್ಚಿ ವಿರಕ್ತಮಠಾಧೀಶರಿಗೆ ಅವರ ಕರ್ತವ್ಯವನ್ನು ನೆನಪಿಸಿ, ತನು, ಮನ, ಧನ ಅರ್ಪಿಸಿದವರು ರಾಜಕಾರಣಿಗಳು. ರಾಜಕಾರಣವೆಂದರೆ Man management ಅಲ್ಲವೆ? ರಾಜಕಾರಣದ ಮೊದಲ ಪಾಠವೇ ಜನಾಕರ್ಷಣೆ. ಜನಾಕರ್ಷಣೆಗಾಗಿ ಸತ್ಯವನ್ನು ಸುಳ್ಳುಮಾಡುವುದು, ಸುಳ್ಳನ್ನು ಸತ್ಯ ಮಾಡುವುದು. ಇಂದು ಜಗತ್ತಿನ ಎಲ್ಲ ರಾಜಕಾರಣಿಗಳು ಕಾರ್ಯರೂಪಕ್ಕೆ ತಂದಿದ್ದಾರೆ.

ಈ ಹೋರಾಟವನ್ನು ರಾಜಕೀಯ ಲಾಭಕ್ಕಾಗಿ ಕಾಂಗ್ರೆಸ್ ಬಳಸಿಕೊಳ್ಳುತ್ತದೆ ಎಂದು ಮನುವಾದಿ ಸಿದ್ಧಾಂತದ ಭಾ.ಜ.ಪ. ಆಪಾದಿಸಿತ್ತು. ಧರ್ಮದ ಹೋರಾಟ ರಾಜಕೀಯ ರೂಪ ಪಡೆದುಕೊಳ್ಳುತ್ತಿದ್ದುದನ್ನು ಜನರೂ ಅರಿತಿದ್ದರು. ಆಳುವ ಹಾಗೂ ವಿರೋಧಪಕ್ಷಗಳಿಗೆ ಆಗುವ ಲಾಭ ನಷ್ಟಗಳ ಅರಿವು ಅವರಿಗಿತ್ತು. ಅಂತಹವರೊಬ್ಬರು ಹಿರಿಯ ಪತ್ರಕರ್ತ ಡಿ. ಉಮಾಪತಿಯವರೊಂದಿಗೆ ತಮ್ಮ

In Public domain. Digitization Muthulakshmi Research Academy

ಭಾವನೆ ಹಂಚಿಕೊಂಡಿದ್ದರು. "ಲಿಂಗಾಯತ ಪ್ರತ್ಯೇಕ ಧರ್ಮ ಚಳುವಳಿಗೆ ಮುನ್ನ ಶೇ.೨೦ರಷ್ಟು ಲಿಂಗಾಯತರು ಕಾಂಗ್ರೆಸ್ ಮತ್ತು ಇತರ ರಾಜಕೀಯ ಪಕ್ಷಗಳ ಜತೆಗಿದ್ದರು.. ಬಿಜೆಪಿಯಡೆ ನಿಷ್ಠೆ ಹೊಂದಿದ್ದವರ ಸಂಖ್ಯೆ ಶೇ.೮೦ರಷ್ಟಿತ್ತು. ೨೦:೮೦ ರ ಅನುಪಾತ ಇದೀಗ ೪೦:೬೦ ಆಗಿದೆ"[೫] ಎಂದಿದ್ದರು ಪ್ರಭುದೇವ ಹಗರಟಗಿ.

ರಾಜಕೀಯ ಬಲವಿಲ್ಲದೆ ಧರ್ಮಗಳು ಬೆಳೆಯಬಹುದೆ? ಈ ಪ್ರಶ್ನೆಗೆ 'ಇಲ್ಲ' ಎಂಬ ಉತ್ತರ ಸಿಗುತ್ತದೆ ಇತಿಹಾಸದಲ್ಲಿ. ಜಗತ್ತಿನಲ್ಲಿ ಅತ್ಯಂತ ಹೆಚ್ಚಿನ ಜನಮನ್ನಣೆ ಗಳಿಸಿರುವ ಕ್ರಿಶ್ಚಿಯನ್ ಧರ್ಮ ತನ್ನ ಮೂಲದ ಗಡಿ ದಾಟಲು ಮುನ್ನೂರು ವರ್ಷ ತೆಗೆದುಕೊಂಡಿತ್ತು. ಆದರೆ ಇಸ್ಲಾಂ ಇದಕ್ಕೆ ವ್ಯತಿರಿಕ್ತವಾಗಿ ಕೇವಲ ಮೂವತ್ತು ವರ್ಷಗಳಲ್ಲಿ ಪಸರಿಸಿತ್ತು. ಇದಕ್ಕೆ ಮೂಲಕಾರಣ ಅದರ ತೋಳ್ಬಲವಾಗಿತ್ತು ಎನ್ನುತ್ತವೆ ದಾಖಲೆಗಳು. ಇಸ್ಲಾಂಧರ್ಮದ ಸೇನೆಗಳು ಸಸ್ಸಾನಿಸ್ ಮತ್ತು ಬಿಜಂಟಿನಿಸ್ (Sassanids and Byzantines) ಎಂಬ ಎರಡು ಪ್ರಬಲ ರಾಷ್ಟ್ರಗಳನ್ನು ಸೋಲಿಸಿ ಇಸ್ಲಾಂಧರ್ಮವನ್ನು ಗಡಿಯಾಚೆಗೆ ಪಸರಿಸಿದ್ದವು ಎಂದು ದಾಖಲಿಸುತ್ತದೆ ಇಸ್ಲಾಂ ಇತಿಹಾಸ. ಆದರೆ ಶಾಂತಿಪ್ರಿಯವಾದ 'ಇವನಾರವ ಇವನಾರವ ಎನ್ನದೆ ಇವ ನಮ್ಮವ ಇವ ನಮ್ಮವ' ಎನ್ನುವ ಲಿಂಗಾಯತ ತೋಳ್ಬಲ ಹೇಗೆ ಬಳಸೀತು? ರಾಜಕೀಯ ಮೇಲಾಟಗಳನ್ನು ಗಮನಿಸಿದಾಗ ಇದು ರಾಜಕೀಯ ಬೆಂಬಲಿತ ಹೋರಾಟವೆಂದು ಬರಿಗಣ್ಣಿಗೆ ಕಂಡರೂ ರಾಜಕಾರಣ ಇಲ್ಲದೆ ಹೋಗಿದ್ದರೆ ಈ ಚಳುವಳಿ ಇಷ್ಟು ವೇಗದಿಂದ ವ್ಯಾಪಕವಾಗುತ್ತಿರಲಿಲ್ಲ. 'ಧರ್ಮ ಮತ್ತು ರಾಜಕಾರಣ ಪರಸ್ಪರ ಕೂಡಿದ್ದು ಈ ಚಳವಳಿಗೆ ಪೂರಕವೇ ವಿನಾ ಮಾರಕ ಅಲ್ಲ'[೬] ಎಂದಿದ್ದರು ಬಾಗಲಕೊಟೆಯ ಯುವಕ ಹಿರಿಯ ಪತ್ರಕರ್ತ ಡಿ. ಉಮಾಪತಿಯವರೊಂದಿಗೆ ಮಾತನಾಡುತ್ತ.

ಮನುವಾದಿಗಳು ಮತ್ತು ಮನುಸಿದ್ಧಾಂತದಿಂದ ಹೊರಬರದ ವೀರಶೈವ ಮಹಾಸಭಾದ ಪದಾಧಿಕಾರಿಗಳು, ಅವರೊಂದಿಗೆ ಕೈ ಜೋಡಿಸಿದ ಅನೇಕರು, ಲಿಂಗಾಯತ ಹೋರಾಟವು ರಾಜಕೀಯ ಪ್ರೇರಿತ ಎಂದರೂ ಅವರ ಹಿಂದಿನ ನಡೆಗಳನ್ನು ಗಮನಿಸಿದಾಗ ಅವರ ನಡೆಗಳೂ ರಾಜಕೀಯ ರಹಿತವಾಗಿರಲಿಲ್ಲ ಎಂದು ದೃಢಪಡಿಸುತ್ತವೆ. ಕೇಂದ್ರದಲ್ಲಿ ಯು.ಪಿ.ಎ. ಸರಕಾರದ ಆಡಳಿತವಿದ್ದಾಗ ಪ್ರತ್ಯೇಕ ಧರ್ಮದ ಬೇಡಿಕೆಗೆ ಅಸ್ತು ಎಂದಿದ್ದ ಬಿ.ಎಸ್.ಯಡಿಯೂರಪ್ಪನವರು ಈ ಚಳುವಳಿಯಲ್ಲಿ ಹಿಂದೆ ಸರಿದು ಲಿಂಗಾಯತಕ್ಕೆ ಬೆಂಬಲಿಸದೆ ಇರುವುದು ಮತ್ತು ಬೇಡಿಕೆಯನ್ನು ವಿರೋಧಿಸುತ್ತಿರುವುದು ಕೇವಲ ರಾಜಕೀಯ ಕಾರಣಕ್ಕಾಗಿ ಮಾತ್ರ. "ಸ್ವತಂತ್ರ ಧರ್ಮದ ಹೋರಾಟದಿಂದ ಹಿಂದೆ ಸರಿಯಲ್ಲ"[೭] ಎಂದು ಲಿಂಗಾಯತ ಸ್ವತಂತ್ರ ಧರ್ಮದ ಬೇಡಿಕೆಗೆ ಕೈ ಜೋಡಿಸಿ ಅದರ ಮುಂದಾಳತ್ವ ಬೇರೆಯವರು(ಎಂ.ಬಿ.ಪಾಟೀಲ) ವಹಿಸಿಕೊಂಡಾಗ "ಲಿಂಗಾಯತರನ್ನು ಬಸವಣ್ಣ

In Public domain. Digitization Muthulakshmi Research Academy

ಮಾಡಿದ್ನಾ"[೮] ಎಂದು ಧರ್ಮಸ್ಥಾಪಕರನ್ನೇ ಅವಹೇಳನ ಮಾಡುವ ಮಟ್ಟಕ್ಕೆ ಇಳಿದ ಶಾಮನೂರು ಶಿವಶಂಕರಪ್ಪನವರ ನಡೆ ಕೇವಲ ರಾಜಕೀಯ ಕಾರಣಕ್ಕಾಗಿ ಮಾತ್ರ. ರಾಜಕೀಯ ಕಾರಣಕ್ಕಾಗಿ ಮುಖ್ಯಮಂತ್ರಿಯವರನ್ನು ಸನ್ಮಾನಿಸಿ ಅವರಿಗೆ ಸ್ವತಂತ್ರ ಧರ್ಮದ ಬೇಡಿಕೆಯನ್ನಿಟ್ಟಿದ್ದು ವೀರಶೈವ ಮಹಾಸಭೆಯ ಪ್ರಧಾನ ಕಾರ್ಯದರ್ಶಿ ಮತ್ತು ಸಿದ್ದರಾಮಯ್ಯ ಸರಕಾರದ ಪೌರಾಡಳಿತ ಸಚಿವ ಈಶ್ವರ ಖಂಡ್ರೆಯವರು. ಆದರೆ ಆ ಬೇಡಿಕೆ ಜನಮನ ಗೆದ್ದು ಅದರ ಶ್ರೇಯಸ್ಸು ಬೇರೆಯವರಿಗೆ ಸಲ್ಲುತ್ತದೆ ಎಂದಾಗ "ಲಿಂಗಾಯತ ಪ್ರತ್ಯೇಕವಾದಿಗಳು ತಮ್ಮ ವೈಯಕ್ತಿಕ ಸಾಧನೆಗೆ ಹಾತೊರೆಯುತ್ತಿದ್ದು ಸ್ವಪ್ರತಿಷ್ಠೆಯ ಬೆನ್ನು ಬಿದ್ದಿದ್ದಾರೆ, ಅವರಿಗೆಲ್ಲ ನಾಚಿಕೆಯಾಗಬೇಕು"[೯] ಎಂದು ಖಂಡ್ರೆಯವರು ಲಿಂಗಾಯತ ಬೇಡಿಕೆಗೆ ತಮ್ಮ ಸಮಯ ಮತ್ತು ಸಂಪತ್ತನ್ನು ದಾಸೋಹ ಮಾಡಿದವರ ಮೇಲೆ ಹರಿಹಾಯ್ದಿದ್ದು ಕೇವಲ ರಾಜಕೀಯ ಕಾರಣಕ್ಕಾಗಿ ಮಾತ್ರ ಅಲ್ಲವೆ? ಮಹಾಸಭಾದಿಂದ ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆಗೆ ಆಗ್ರಹಿಸಿ ಮನವಿ ಸಲ್ಲಿಸುವಾಗ ತಮ್ಮ ಸಂಪುಟದ ಸಹೋದ್ಯೋಗಿಗಳ ಜತೆಯಲ್ಲಿದ್ದು ಮುಖ್ಯ ಮಂತ್ರಿಯವರಿಗೆ ಮನವಿ ಸಲ್ಲಿಸಿ, ನಂತರ ತಮ್ಮ ಸಂಪುಟದ ಸಹದ್ಯೋಗಿಗಳನ್ನೆಲ್ಲ "ಮನೆ ಹಾಳು ಮಾಡುವವರು ಇರ್ತಾರೆ"[೧೦] ಎಂದಿದ್ದ ಶಾಮನೂರ ಮಲ್ಲಿಕಾರ್ಜುನರ ಹೇಳಿಕೆ ಕೇವಲ ರಾಜಕೀಯ ಮಾತ್ರ.

ಸ್ವಚ್ಛ ಧರ್ಮ, ಸ್ವಚ್ಛ ರಾಜಕೀಯ, ಸ್ವಚ್ಛ ಸಮಾಜ, ಸ್ವಚ್ಛ ಶಿಕ್ಷಣ, ಸ್ವಚ್ಛ ಪರಿಸರ, ಸ್ವಚ್ಛ ಆಹಾರ, ಸ್ವಚ್ಛ ಆರೋಗ್ಯ, ಸ್ವಚ್ಛ ಜೀವನ ಈಗಿನ ಸಮಾಜದಲ್ಲಿ ಕಾಣದಾಗಿದೆ. ತಂದೆ ಮಕ್ಕಳಲ್ಲಿ ರಾಜಕೀಯ, ಗಂಡ ಹೆಂಡರಲ್ಲಿ ರಾಜಕೀಯ, ಅಣ್ಣ ತಮ್ಮಂದಿರಲ್ಲಿ ರಾಜಕೀಯ, ಶಿಕ್ಷಣದಲ್ಲಿ ರಾಜಕೀಯ, ಕಾಯಕದಲ್ಲಿ ರಾಜಕೀಯ, ಸಮ –ಸಮಾಜಗಳಲ್ಲಿ ರಾಜಕೀಯ, ರಾಜಕೀಯವಿರದ ಕ್ಷೇತ್ರವನ್ನು ಸೂರ್ಯನ ಬೆಳಕಿನಲ್ಲಿ ಟಾರ್ಚ್ ಹಿಡಿದು ಹುಡುಕಬೇಕಾಗಿದೆ.

ಶ್ರೀ ಮದ್ವೀರಶೈವ ಮಹಾಸಭೆಯನ್ನು ಸ್ಥಾಪಿಸುವಾಗ ಉತ್ತರ ಕರ್ನಾಟಕದ ಲಿಂಗಾಯತ ನಾಯಕರಿಗೆ ಧಾರ್ಮಿಕವಾಗಿ ತಪ್ಪು ಉಪದೇಶ ಮಾಡಿ, ಲಿಂಗಾಯತ ವಿರೋಧಿ ಸಿದ್ಧಾಂತಗಳಾದ ವೇದ, ಉಪನಿಷತ್ತು, ಶಾಸ್ತ್ರ ಪುರಾಣ, ಆಗಮಗಳನ್ನು ಲಿಂಗಾಯತರು ಒಪ್ಪುತ್ತಾರೆ ಎಂದಿದ್ದ ಪೂಜ್ಯ ಹಾನಗಲ್ ಕುಮಾರಸ್ವಾಮಿಗಳ ನಡೆ ಧರ್ಮರಾಜಕೀಯವಲ್ಲವೆ? ಶಿವಯೋಗ ಮಂದಿರ ಪ್ರವೇಶ ಪಡೆಯುವ ವಟುಗಳು ಕೇವಲ ಜಂಗಮ ಸಮಾಜದವರಾಗಿರಬೇಕು' ಎಂಬ ಷರತ್ತು ಸಮಸಮಾಜದ ಲಿಂಗಾಯತ ಧರ್ಮದ ವಿರೋಧಿಯಲ್ಲವೆ? ಇದು ಧರ್ಮರಾಜಕಾರಣವಲ್ಲವೆ?

ಹಿರಿಯ ಪತ್ರಕರ್ತ ಡಿ. ಉಮಾಪತಿಯವರ 'ಲಿಂಗಾಯತ ಚಳವಳಿ ಮತ್ತು ರಾಜಕೀಯ' ಈ ವಿಷಯದಲ್ಲಿ ಬರೆದಿರುವ ಲೇಖನಗಳು ಮಹತ್ವಪೂರ್ಣವಾಗಿದ್ದವು. 'ವೀರಶೈವ ಪಂಚಾಚಾರ್ಯರನ್ನು ಗುರುಗಳೆಂದು ತಲೆಯ ಮೇಲೆ ಹೊತ್ತು ಮೆರೆದ

In Public domain. Digitization Muthulakshmi Research Academy

ಲಿಂಗಾಯತ ಸಮುದಾಯ ಹೊಸ ಎಚ್ಚರದ ಹೊರಳುದಾರಿಗೆ ಮುಖ ಮಾಡಿದೆ. ಹಲವಾರು ಉಪಜಾತಿಗಳ ಪ್ರಜ್ಞಾವಂತ ಯುವಪೀಳಿಗೆ ವಿಶೇಷವಾಗಿ ವೀರಶೈವ ಆಧಿಪತ್ಯವನ್ನು ಪ್ರಶ್ನಿಸತೊಡಗಿದೆ. ಲಿಂಗಾಯತದ ಮರುಹುಟ್ಟಿನ ಅಸ್ಮಿತೆಗೆ ಮುಖ ಮಾಡಿದೆ. ಹಿಂದುತ್ವದ ಜೊತೆಗೆ ಹೆಜ್ಜೆ ಹಾಕಿದ್ದ ಲಿಂಗಾಯತ ಕಿರಿಯ ತಲೆಮಾರು, ಕ್ಷಣ ಕಾಲ ನಿಂತು ತನ್ನ ಬಸವ ಪರಂಪರೆಯುತ್ತ ಹೊರಳಿ ನೋಡತೊಡಗಿದೆ. ತಾನು ಯಾರ ತೋಳ್ಬಲ ಆಗಿದ್ದೇನೆ ಎಂಬ ಪ್ರಶ್ನೆ ಕೇಳಿಕೊಳ್ಳತೊಡಗಿದೆ. ಬಸವತತ್ವಕ್ಕೆ ತದ್ವಿರುದ್ಧವಾಗಿ ಮೌಲ್ಯಗಳನ್ನು ಪ್ರತಿಪಾದಿಸುವ ಲಿಂಗಾಯತ ಅಸ್ಮಿತೆಯ ಹಿಂದುತ್ವದ ಗೆಳೆತನ ಬೆಳೆಸುವುದು ಅಸಾಧ್ಯ. ಒಂದು ವೇಳೆ ಪುನಃ ಹಿಂದೂ ಪ್ರತಿಶರಣಾದರೆ ದುರಂತವಾದೀತು. ಇಲ್ಲವಾದರೆ ಹಿಂದುತ್ವದ ವಿರುದ್ಧ ದೊಡ್ಡ ಅಸ್ತ್ರ ಆದೀತು. ಈ ಅಂದೋಲನವನ್ನು ಯಾವ ಶಕ್ತಿಯೂ ತಡೆದು ನಿಲ್ಲಿಸುವುದು ಅಸಾಧ್ಯ. ಮುಂಬರುವ ದಿನಗಳಲ್ಲಿ ಲಿಂಗಾಯತದ ಅರಿವನ್ನು ಬೇರುಮಟ್ಟಕ್ಕೆ ಒಯ್ಯಲಾಗುವುದು. ರ್‍ಯಾಲಿಗಳ ಹೆದ್ದಾರಿಯನ್ನು ತೊರೆದು, ತಾಲ್ಲೂಕು, ಹೋಬಳಿ, ಹಳ್ಳಿಗಳ ಮಟ್ಟದಲ್ಲಿ ಸಣ್ಣ ಸಣ್ಣ ಸಭೆಗಳು, ವಿಚಾರ ಸಂಕಿರಣಗಳನ್ನು ಮಾಡಿ ನೂರಾರು ಕಾಲುದಾರಿಗಳನ್ನು ತುಳಿಯುವುದು ಈ ಚಳುವಳಿಯ ಮುಂದಿನ ದಾರಿ. ಇದೊಂದು ದೀರ್ಘಹೋರಾಟ ಎಂಬ ಸ್ಪಷ್ಟ ಅರಿವು ನಮಗಿದೆ. ಬಸವಣ್ಣನವರನ್ನು ನಂಬುವ ವೀರಶೈವರನ್ನು ಲಿಂಗಾಯತರೆಂದು ಪರಿಗಣಿಸತಕ್ಕದ್ದು ಎಂಬ ಸರ್ಕಾರಿ ಆದೇಶದಲ್ಲೊಂದು 'ಬೆಳ್ಳಿಗೆರೆ' ಇದೆ. ವೀರಶೈವರು ಮತ್ತು ಲಿಂಗಾಯತರನ್ನು ಕೂಡಿಸುವ ಬೆಳ್ಳಿಗೆರೆಯಿದೆಂದು ಮಹಾಸಭೆಯ ನಂಬಿಕೆ. ಈ ಬೆಳ್ಳಿಗೆರೆಯನ್ನು ಆಂದೋಲನವು ಮುಂದಿನ ದಿನಗಳಲ್ಲಿ ಲಿಂಗಾಯತ-ವೀರಶೈವ ಸಮುದಾಯದ ಬಳಿ ತೆಗೆದುಕೊಂಡು ಹೋಗಲಿದೆ. ಪಂಚಪೀಠಾಧೀಶರು ಗುರುಗಳು, ಅವರನ್ನು ನಾವು ಆರಾಧಿಸಲ್ಲ ಅಥವಾ ಹೊರಟುಹೋಗಿ ಎಂದು ನಾವು ಅವರಿಗೆ ಹೇಳಿಲ್ಲ. ಆದರೆ ಬಸವಣ್ಣನವರ ಕುರಿತು ಅವರು ಹಗುರವಾಗಿ ಮಾತಾಡಕೂಡದು ಅಷ್ಟೇ ಎಂದು ನಮ್ಮ ಅಪೇಕ್ಷೆ.

ಕೊನೆ ಟಿಪ್ಪಣಿಗಳು

೧. ಪ್ರಜಾವಾಣಿ, ಏಪ್ರಿಲ್ ೮, ೨೦೧೮.
೨. ಪ್ರಜಾವಾಣಿ, ಜುಲೈ ೨೭, ೨೦೧೭.
೩. ಪ್ರಜಾವಾಣಿ, ಮಾರ್ಚ್ ೨೫, ೨೦೧೮.
೪. ಪ್ರಜಾವಾಣಿ, ಏಪ್ರಿಲ್ ೨೯, ೨೦೧೮.
೫. ಪ್ರಜಾವಾಣಿ, ಮಾರ್ಚ್ ೨೯, ೨೦೧೮..
೬. ಪ್ರಜಾವಾಣಿ, ಜುಲೈ ೨೭, ೨೦೧೭.
೭. ಪ್ರಜಾವಾಣಿ, ಸೆಪ್ಟೆಂಬರ್ ೧೭, ೨೦೧೭.
೮. ಪ್ರಜಾವಾಣಿ. ಸೆಪ್ಟೆಂಬರ್ ೧೧, ೨೦೧೭.
೯. ಪ್ರಜಾವಾಣಿ. ಮಾರ್ಚ್ ೨೫, ೨೦೧೮.

In Public domain. Digitization Muthulakshmi Research Academy

In Public domain. Digitization Muthulakshmi Research Academy

ಅನುಬಂಧಗಳು

In Public domain. Digitization Muthulakshmi Research Academy

In Public domain. Digitization Muthulakshmi Research Academy

ಒಂದು

ವೀರಶೈವರು

ಲಿಂಗಾಯತದ ಚಳುವಳಿಯನ್ನು ಖಂಡಿಸುವ ಇನ್ನೊಂದು ವರ್ಗ ಪಂಚಾಚಾರ್ಯರದು. ಮೂಲದಲ್ಲಿ ಪಂಚಾಚಾರ್ಯರು ಶೈವವಾದಿಗಳು. ವೈದಿಕ ಹಾಗೂ ಶೈವಪಂಥಗಳು ಎಂದು ಹಿಂದೂಧರ್ಮವೆಂದು ಕರೆಸಿಕೊಳ್ಳುತ್ತಿವೆ. ಪಂಚಾಚಾರ್ಯರು ತಾವು ಹಿಂದೂಗಳೆಂದು ಪ್ರತಿಪಾದಿಸುತ್ತಾರೆ. ಬಸವಣ್ಣನವರು ಪುರಾತನವಾದ ವೀರಶೈವ ಪಂಥವನ್ನು ಅಪ್ಪಿಕೊಂಡವರು ಮತ್ತು ಅದರ ಸುಧಾರಕರು ಎಂದು ವಾದಿಸುತ್ತಾರೆ. ಸನಾತನ ಧರ್ಮದಲ್ಲಿ ಶೈವದ ಎರಡನೆಯ ಶಾಖೆಯು ವೀರಶೈವರದು. ವೈದಿಕ ಮತ್ತು ಶೈವ ಪರಂಪರೆಯ ಹಗ್ಗ ಜಗ್ಗಾಟದಲ್ಲಿ ವೈದಿಕವು ತನ್ನ ಶಕ್ತಿಯನ್ನು ಪ್ರದರ್ಶಿಸಿ ಇಡೀ ಭಾರತವನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಹಿಂದೂಧರ್ಮ ಎಂಬ ಹೆಸರಿನಲ್ಲಿ ಭಾರತದಾದ್ಯಂತ ಪಸರಿಸಿದೆ. ದ್ರಾವಿಡರ ಧರ್ಮವೆಂದು ನಂಬಿದ ಶೈವದಲ್ಲಿ ಅನೇಕ ಪ್ರಭೇದಗಳಲ್ಲಿ ವೀರಶೈವವೂ ಒಂದು. ಶೈವಪರಂಪರೆಯ ಪಳೆಯುಳಿಕೆಯಂತಿರುವ ವೀರಶೈವ ಪಂಥ ಗೊಂದಲದ ಗೂಡು. ಸ್ಪಷ್ಟ ಸಿದ್ಧಾಂತವಿಲ್ಲದ ಈ ಪಂತ ಹಿಂದೂಧರ್ಮದ ಭಾಗ ಎನ್ನುತ್ತದೆ. ಲಿಂಗಾಯತದ ಕುರುಹಾದ ಇಷ್ಟಲಿಂಗವನ್ನು ಧರಿಸಿದ ಲಿಂಗಾಯತ ಧರ್ಮಿಯರನ್ನು ವೀರಶೈವರೆಂದು ಪ್ರತಿಪಾದಿಸುತ್ತದೆ. ವೀರಶೈವದ ಗುರುಗಳು ಐವರು – ಪಂಚ ಆಚಾರ್ಯರು ಅರ್ಥಾತ್ ಪಂಚಾಚಾರ್ಯರು.

ಇವರ ಪಂಚ(ಐದು) ಮಠಗಳಲ್ಲಿ ಕೇವಲ ಎರಡು ಮಠಗಳು ಕರ್ನಾಟಕದಲ್ಲಿದ್ದು ಉಳಿದ ಮೂರು ಮಠಗಳು(ಪೀಠಗಳು) ಬೇರೆ ಬೇರೆ ರಾಜ್ಯಗಳಲ್ಲಿವೆ. ಉತ್ತರ ಭಾರತದ ಕಾಶಿಯಲ್ಲಿ ಒಂದು ಜಂಗಮವಾಡಿ ಮಠವಿದ್ದು, ಇನ್ನೊಂದು ಪೀಠ

In Public domain. Digitization Muthulakshmi Research Academy
ಕೇದಾರದಲ್ಲಿದೆ. ಕೇದಾರ ಶಿವದೇವಾಲಯದ ಅರ್ಚಕ ವೃತ್ತಿಯನ್ನು ಈ ಪೀಠ ಮಾಡುತ್ತಿದೆ. ಇದಲ್ಲದೆ ನೆರೆಯ ರಾಜ್ಯದ ಶ್ರೀಶೈಲದಲ್ಲಿ ಇನ್ನೊಂದು ಪೀಠವಿದೆ. ಆದರೆ ಐದೂ ಜನ ಪೀಠಾಧಿಪತಿಗಳು ಕರ್ನಾಟಕದವರು ಮತ್ತು ಇವರ ಭಕ್ತ ವರ್ಗವು ಸಹ ಕರ್ನಾಟಕದವರೆ. ಹಿಂದೂಧರ್ಮದಲ್ಲಿ ಪವಿತ್ರವೆಂದು ಮನ್ನಿಸುವ ಹನ್ನೆರಡು ಜ್ಯೋತಿರ್ಲಿಂಗಗಳ ಪೈಕಿ ನಾಲ್ಕು ಜ್ಯೋತಿರ್ಲಿಂಗಗಳ ಯಾತ್ರಾಸ್ಥಳಗಳಲ್ಲಿ ಮಠಗಳಿವೆ.

ಯಾರೀ ವೀರಶೈವರು?

ವೇದಾಂತ್ಯಜನ್ಯಂ ಯಜ್ ಜ್ಞಾನಂ ವೀದ್ಯೇತಿ ಪತಿಕೀರ್ತ್ಯತೇ।
ವಿದ್ಯಾಂ ರಮತೆ ಯಃ ವಿರ ಇತ್ಯಭ ದೀಯತೇ॥
ವಿದ್ಯಾಯಾಂ ಶಿವರೂಪಾಯಾಂ ರಮಂತೇ ಯೇ ವಿಶೇಷತಃ।
ತಸ್ಮದೇತೇ ಮಹಾಭಾಗಾ ವೀರಶೈವ ಇತಿಸ್ಮೃತಾಃ॥[7]

ವೇದಾಂತ ಜನ್ಯವಾದ ಜ್ಞಾನವು ವಿದ್ಯೆಯೆಂದು ಹೇಳಿದೆ. ಅಂತಹ ವಿದ್ಯೆಯಲ್ಲಿ ಸಂತೋಷಪಡುವನು ವೀರಶೈವನೆಂದು ಕರೆಯಲ್ಪಡುತ್ತಾನೆ. ಪರಬ್ರಹ್ಮ ರೂಪವಾದ ವಿದ್ಯೆಯಲ್ಲಿ ವಿಶೇಷವಾಗಿ ಯಾರು ಆನಂದಿಸುತ್ತಾರೋ ಅವರೇ ವೀರಶೈವರೆಂದು ತಿಳಿಯುವುದು.

ವಿಶಬ್ದೇನೋಚ್ಯತೆ ವಿದ್ಯಾ ಶಿವಜೀವೈಕಬೋದಿಕಾ।
ತಸ್ಯಾಂ ರಮಯಂತೇ ಯೇ ಶೈವಾಃ ವೀರಶೈವಾಸ್ತು ತೆ ಮಾತಾಃ॥[8]

'ವಿ' ಎಂದರೆ ವಿದ್ಯೆ; ಜ್ಞಾನ ಶಿವ-ಜೀವರ ಐಕ್ಯವನ್ನು ಬೋಧಿಸುವ ಜ್ಞಾನ. ಇದರಲ್ಲಿ ಯಾವ ಶೈವರು ಆನಂದವನ್ನು ಅನುಭವಿಸುತ್ತಾರೋ ಅವರು ವೀರಶೈವ ಎನ್ನುತ್ತದೆ ಸಿದ್ಧಾಂತ ಶಿಖಾಮಣಿ. ಕ್ರಿಯಾಸಾಗರದಲ್ಲಿ 'ವಿ' ಎಂದರೆ ವಿಕಲ್ಪ, 'ರ' ಎಂದರೆ ರಹಿತ-'ವಿಕಲ್ಪರಹಿತ' ವಾದ ಶೈವವೇ ವೀರಶೈವರು ಎಂದು ಹೇಳುತ್ತಾನೆ. ವೀರಶೈವವು 'ಶೈವಧರ್ಮ' ಅಥವಾ ಇಂದು 'ಹಿಂದೂ ಧರ್ಮ' ವೆಂದು ಕರೆಸಿಕೊಳ್ಳುವ ಧರ್ಮದ ಒಂದು ಭಾಗವೆಂದು.

ವೀರಶೈವ ಧರ್ಮವು ಶೈವಧರ್ಮದ ವಿಕಸಿತರೂಪವೆಂದು ಬೇರೆ ಹೇಳಬೇಕಾಗಿಲ್ಲ. 'ವೀರ' ಎಂಬುದೇ ಈ ಶಾಖೆಯ ವೈಶಿಷ್ಟ್ಯ. ಶಿವನಲ್ಲಿ ಅಚಲವಾದ ಭಕ್ತಿ-ನಿಷ್ಠೆಗಳಿರುವುದನ್ನು ಇದು ಸೂಚಿಸುತ್ತದೆ ಎಂಬುದಾಗಿ 'ಪಾರಮೇಶ್ವರಾಗಮ' ಹಾಗೂ 'ವೀರಶೈವ ಶಿರೋಮಣಿ'ಗಳು ಹೇಳುತ್ತವೆ[9] 'ಬಸವರತ್ನಾಕರ'ದಲ್ಲಿ ಹೇಳುವಂತೆ 'ಯಾರು ತನ್ನ ಕರಸ್ಥಲದಲ್ಲಿ ಇಷ್ಟಲಿಂಗವನ್ನಿಟ್ಟು ಅದರಲ್ಲೇ ತನ್ನ ಸರ್ವಸ್ವವನ್ನು ಲೀನಗೊಳಿಸಿ, ಬಾಹ್ಯ ಪ್ರಪಂಚದಿಂದ ನಿರ್ಲಿಪ್ತನಾಗಿ ಲಿಂಗಪೂಜೆಯನ್ನು ಮಾಡುವವನೋ ಅವನೇ ವೀರಶೈವ ನೆನಿಸಿಕೊಳ್ಳುತ್ತಾನೆ"[10]

In Public domain. Digitization Muthulakshmi Research Academy

ದಕ್ಷಿಣ ಭಾರತದಲ್ಲಿ ಶೈವಧರ್ಮ ಬಹು ವಿಸ್ತಾರಗೊಂಡಿತೆಂಬುದನ್ನು ಕಾಳಾಮುಖ. ಕಾಪಾಲಿಕಾ ಮುಂತಾದ ಶೈವಮತಗಳು ಇದರ ಶಾಖೆಗಳಾಗಿರುವ ಸಾಧ್ಯತೆ ಇದೆ. ೬-೭ನೇ ಶತಮಾನದ ಶಾಸನದ ದಾಖಲೆಗಳು ಇದನ್ನು ಪುಷ್ಟೀಕರಿಸುತ್ತವೆ. ಪಾಶುಪತದ ಕೆಲವು ಆಚಾರಗಳು ಶೈವರಲ್ಲಿ ಕಂಡುಬರುತ್ತವೆ. ನಿಟ್ಟೂರ ನಂಜಣಾಚಾರ್ಯ(ಕ್ರಿ.ಶ. ೧೭೫೫) ವೀರಶೈವವನ್ನು ಪಾಶುಪತ ಎಂದು ಕರೆದಿದ್ದಾರೆ. ಈ ಗ್ರಂಥದಲ್ಲಿ ವೀರಶೈವರಿಗೂ ಕಾಳಾಮುಖರಿಗೂ ಭೇದವಿಲ್ಲವೆಂದು ಕಲ್ಪಿಸಿದ್ದಾರೆ. ಶೈವಧರ್ಮದ ಇತಿಹಾಸದಲ್ಲಿ ಶಿವಾಗಮಗಳು ಒಂದು ಪ್ರಮುಖವಾದ ಘಟ್ಟ, ಶಿವಾಗಮನಗಳನ್ನೇ ಆಧಾರ ಗ್ರಂಥವಾಗಿಟ್ಟುಕೊಂಡು ಅನೇಕ ಶೈವಶಾಖೆಗಳು ರೂಪುಗೊಂಡವು. ಕಾಶ್ಮೀರಶೈವ, ತಮಿಳುಶೈವ ಮತ್ತು ವೀರಶೈವ ಮೊದಲಾದುವುಗಳೆಲ್ಲಾ ಶಿವಾಗಮಗಳಲ್ಲಿ ಉಕ್ತವಾದ ಮೂಲತತ್ವವೇ ತಳಹದಿಯಾಗಿದ್ದರೂ ಅವರು ತಮ್ಮ ತಮ್ಮ ಅನುಭವಗಳಿಗೆ ಅವಶ್ಯಕತೆಗಳಿಗೆ ಅನುಗುಣವಾಗಿ ನಿರ್ಮಿಸಿಕೊಂಡಿರುವುದು ಕಂಡುಬರುತ್ತದೆ ಎಸ್.ಎನ್. ದಾಸಗುಪ್ತಾ ಅವರು ಮಹಾಕವಿ ಕಾಳಿದಾಸನ ಕಾವ್ಯಗಳಲ್ಲಿ ವೀರಶೈವ ತತ್ವ ಪ್ರತಿಪಾದಿತವಾಗಿರುವುದನ್ನು ಕಾಣಬಹುದು ಎನ್ನುತ್ತಾರೆ.

ತಾವು ಆಚರಿಸುವ ಧರ್ಮ ಅತ್ಯಂತ ಪ್ರಾಚೀನ ಹಾಗೂ ಶ್ರೇಷ್ಠ ಎಂದು ಹೇಳುವುದರಲ್ಲಿ ಬ್ರಾಹ್ಮಣರಂತೆ ವೀರಶೈವರು ಹಿಂಜರಿಯಲಿಲ್ಲ. ವೀರಶೈವರು ವೈದಿಕ ಧರ್ಮಕ್ಕಿಂತ ತಮ್ಮ ಧರ್ಮ ಶ್ರೇಷ್ಠ ಮತ್ತು ಪ್ರಾಚೀನ ಎಂದು ಸಾಬೀತುಪಡಿಸಲು ಶ್ರುತಿ ಹಾಗೂ ವೇದಗಳಂತೆ ತಮ್ಮ ಧರ್ಮಕ್ಕೂ 'ಶಿವನಉವಾಚ'ಗಳೆಂದು ಸಾಹಿತ್ಯರಚನೆ ಮಾಡಿದರು. ಡಾ.ಜ.ಚ.ನಿ.ಯವರು "ಜಗದ್ಗುರು ಶ್ರೀ ರೇಣುಕಾ ಮಹಾತ್ಮರು ಶಿವಸ್ಕಂದ ಸಂಪ್ರದಾಯದವರು. ಸಿದ್ಧರು, ಗಣೇಶ್ವರರು, ಅವರು ಅಗಸ್ತ್ಯಮುನಿಗೆ ಅನುಗ್ರಹಿಸಿದ ವೀರಶೈವ ಮಹಾಮಂತ್ರವಾದ ಏಕೋತ್ತರ ಶತಸ್ಥಲವು ನಿನ್ನೆ ಮೊನ್ನೆಯದಲ್ಲ, ವಚನ ವಾಙ್ಮಯದ್ದಲ್ಲ, ಸರ್ವ ಶೈವಾಗಮಗಳಲ್ಲಿ ಸಕಲ ಪುರಾಣಗಳಲ್ಲಿ ಶಿವನಿಂದ ಶಿವೆಗೆ(ಶಿವನ ಪತ್ನಿ ಅಥವಾ ಪಾರ್ವತಿ) ಶಿಶು ಸ್ಕಂದನಿಗೆ ಹೇಳಿದುದು" ಎನ್ನುತ್ತ ವೀರಶೈವ ಧರ್ಮವನ್ನು ತ್ರೇತಾಯುಗಕ್ಕೆ ಕೊಂಡೊಯ್ಯುವರು. ಶೈವದಲ್ಲಿ ಏಳು ಪ್ರಭೇದಗಳಿವೆ. ಅನಾದಿಶೈವ, ಆದಿಶೈವ, ಮಹಾಶೈವ, ಅನುಶೈವ, ಅನಂತರ ಶೈವ, ಪ್ರವರಶೈವ, ಅಂತ್ಯಶೈವ ಎಂತಿವೆ. ಇವರ ಆಚಾರಗಳಲ್ಲಿ ಅಲ್ಪಸ್ವಲ್ಪ ಭಿನ್ನತೆ ಇರುವುದು ಗೋಚರಿಸುವುದು. ಪಂಚಾಕ್ಷರಿ ಮಂತ್ರದ ದೀಕ್ಷೆ ಪಡೆದವ ಆದಿಶೈವ, ಶಿವನ ಪಂಚಮುಖಗಳನ್ನು ಪೂಜಿಸುವನು ಮಹಾಶೈವ, ಪರಮಾತ್ಮನ ಸ್ವರೂಪವಾದ ಲಿಂಗವನ್ನು ಪೂಜಿಸುವವ ಅನುಶೈವ, ಶಿವನ ರೂಪದಲ್ಲಿ ಭೇದಭಾವ ಎಣಿಸದೆ ಪೂಜಿಸುವನು ಅನಂತರದ ಶೈವ, ಪರಶಿವನ ಮೂರ್ತಿಯನ್ನು ಆವಾಹನದಿಂದ ವಿಸರ್ಜನದವರೆಗೆ

In Public domain. Digitization Muthulakshmi Research Academy
ಪೂಜಿಸುವನು ಪ್ರವರಶೈವ, ಪರಮಾತ್ಮನ ಚಿಹ್ನವನ್ನು ಕಂಡು ಪೂಜಿಸಿ ಯಾರು ನಿಶ್ಚಿಂತನಾಗಿರುವನೋ ಅವನು ಅಂತ್ಯಶೈವ. 'ವೀರಶೈವ ಪ್ರಕಾಶಿಕೆ' ಶೈವರ ಬಗ್ಗೆ ವಿವರವಾಗಿ ತಿಳಿಸುತ್ತದೆ ಶೈವದಲ್ಲಿ ವಾಮ, ದಕ್ಷಿಣ, ಮಿಶ್ರ, ಸಿದ್ಧಾಂತ ಎಂದು ಮತ್ತೆ ನಾಲ್ಕು ಭೇದಗಳಿವೆ. ಯಾವ ಶೈವದಲ್ಲಿ ಶಕ್ತಿ ಸರ್ವಶ್ರೇಷ್ಠವಾದುದಾಗಿ ಮಾನಿಸಲ್ಪಡುವುದೋ ಅದು ವಾಮಶೈವವು. ಯಾವಶೈವದಲ್ಲಿ ಭೈರವನೇ ಮುಖ್ಯವಾಗಿ ಮಾನಿಸಲ್ಪಡುವನೋ ಅದು ದಕ್ಷಿಣಶೈವವು. ಯಾವ ಶೈವದಲ್ಲಿ ಸಪ್ತಮಾತೃಕೆಯರು ಮುಖ್ಯವಾಗಿ ಮಾನಿಸಲ್ಪಡುವರೋ ಅದು ಮಿಶ್ರಶೈವವು. ಯಾವಶೈವದಲ್ಲಿ ಶಿವನೇ ಸರ್ವೋತ್ತಮನೆಂದು ಮಾನಿಸಲ್ಪಡುತ್ತಾನೆಯೋ ಅದು ಸಿದ್ಧಾಂತಶೈವವು ಮತ್ತು ಅದೇ ವೀರಶೈವವು.

ಪ್ರಾಚೀನ ಕಾಲದಲ್ಲಿ ಉತ್ತರ ಭಾರತದಿಂದ ಬೌದ್ಧ, ಜೈನ, ವೇದನಿಷ್ಠ, ಶೈವಗಳೆಂಬ ನಾಲ್ಕು ಧರ್ಮಗಳು ಕರ್ನಾಟಕಕ್ಕೆ ವಲಸೆ ಬಂದವು. ಆಗ ಕರ್ನಾಟಕದಲ್ಲಿ ಧರ್ಮಗಳಿಗೆ ಬದಲು ಕೇವಲ ಬೇಡ, ಕುರುಬ, ಅಂಬಿಗ ಮೊದಲಾದ ಜಾತಿಗಳಿದ್ದವು. ಉತ್ತರ ಭಾರತದಿಂದ ಬಂದ ವಲಸೆ ಧರ್ಮಗಳು ತಮ್ಮ ಅಸ್ತಿತ್ವಕ್ಕಾಗಿ ಕರ್ನಾಟಕದಲ್ಲಿ ಘರ್ಷಣೆಗೆ ಇಳಿದವು. ಈ ಘರ್ಷಣೆಯಲ್ಲಿ ಅನಾತ್ಮವಾದಿ ಬೌದ್ಧಧರ್ಮವನ್ನು ಮಿಕ್ಕ ಮೂರು ಆತ್ಮವಾದಿ ಧರ್ಮಗಳು ಸೇರಿ ನಾಶ ಮಾಡಿದವು. ತರುವಾಯ ದೇವತಾವಾದವನ್ನು ನಂಬಿದ ವೈದಿಕ ಮತ್ತು ಆಗಮಿಕ ಶೈವಗಳು ಸೇರಿ ದೇವತಾವಾದವನ್ನು ನಂಬದ ಜೈನಧರ್ಮವನ್ನು ದುರ್ಬಲಗೊಳಿಸಿದವು. ಬಳಿಕ ವೈದಿಕ ಮತ್ತು ಆಗಮಿಕ ಶೈವಗಳು ಘರ್ಷಣೆಗೆ ಇಳಿದವೇನೋ ನಿಜ, ಅಂತಿಮದಲ್ಲಿ ಆಗಮಿಕ ಶೈವವು ವೈದಿಕ ಸಂಸ್ಕೃತಿಯ ಶ್ರೇಷ್ಠತೆಯನ್ನು ಮನ್ನಿಸಿ ತಾನೂ ಬ್ರಾಹ್ಮಣ ವಿಶೇಷಣಗಳನ್ನು ಬಳಸಿಕೊಂಡಿತು. ಈ ಎರಡರಲ್ಲಿ ಬಸವಣ್ಣ ವೈದಿಕ ಶೈವ ಬ್ರಾಹ್ಮಣ(ಶಂಕರನ ಅದ್ವೈತ) ಕುಟುಂಬದವನಲ್ಲ. ಆಗಮಿಕ ಶೈವಬ್ರಾಹ್ಮಣ ಕುಟುಂಬದವನಾಗಿದ್ದಾನೆ. ಈ ಆಗಮಿಕ ಶೈವಬ್ರಾಹ್ಮಣರೇ (ಲಿಂಗೀ ಬ್ರಾಹ್ಮಣರು). ಜನಿವಾರ ಇತ್ಯಾದಿಗಳನ್ನು ಧರಿಸಿ ಇಂದು ವೀರಶೈವ ಪಂಚಾಚಾರ್ಯ ಪರಂಪರೆಯಾಗಿ ಪರಿವರ್ತನೆಗೊಂಡಿದ್ದಾರೆ[೫]

ಲಿಂಗಾಯತರು ಶಿವನನ್ನು ಪೂಜಿಸುವರು. ವೀರಶೈವರು ಶಿವನನ್ನು ಪೂಜಿಸುವರು. ಹಾಗಿದ್ದರೆ ಲಿಂಗಾಯತ-ವೀರಶೈವ ಒಂದೇ ಅಲ್ಲವೆ? ಈ ಪ್ರಶ್ನೆ ಸರಳವಾಗಿದೆ. ಸ್ಕಂದಪುರಾಣದ ಒಂದು ಶ್ಲೋಕ ಗಮನಿಸಬೇಕು.

ನಮಾಮಿ ವೀರಭದ್ರಂ ತಂ ಅಸಮಾನ ಪರಾಕ್ರಮಂ!

ವೀರಶೈವ ಮತ ಸ್ಥಾಪ್ಯ ವರ್ಧಯನ್ ಯೋ ಪುರಾ ಭವಿ!!

ಅನಾದಿ ಪಶುಪತಿ ಮತಸ್ಥಾಪಕನು ರುದ್ರನಾದರೆ ಇತನ ಮಗನಾದ ವೀರಭದ್ರನು ಆದಿ ವೀರಶೈವವನ್ನು ಸ್ಥಾಪಿಸಿ ವರ್ಧಿಸಿದನು. ವೀರಭದ್ರನು

In Public domain. Digitization Muthulakshmi Research Academy

ರುದ್ರನ ಮಗ. ರುದ್ರ ಬೇರೆ, ಶಿವ ಬೇರೆ. ಋಗ್ವೇದಪೂರ್ವದವನು ರುದ್ರನು; ಇವನು ಕಾಳಿಕಾದೇವಿಯ ಪತಿಯು, ಭದ್ರ ಪಿತನು. ಶಿವ ದಾಕ್ಷಾಯಿಣಿ ಮತ್ತು ಪಾರ್ವತಿಯ ಪತಿ. ಶಿವನು ಷಡಾನನ–ಗಜಾನನರ ಪಿತನು. ರುದ್ರ ಪಶುಪತಿ, ಶಿವ ವೃಷಭಾರೂಢ, ರುದ್ರ ತ್ರಿಪುರಾಂತಕ; ಶಿವ ಕಾಮಾರಿ. ವೀರಭದ್ರನು ರುದ್ರನ ಮಗನೆಂದು ಲಿಂಗಪುರಾಣವು ನಿಸ್ಸಂದೇಹವಾಗಿ ಹೇಳಿದೆ. ಇಲ್ಲಿ ಒಂದಂಶವಂತೂ ಸ್ಪಷ್ಟವಾಯಿತು. ವೀರಾಗಮಗಳ ಪ್ರಕಾರ ಶಿವ ಬೇರೆ, ರುದ್ರ ಬೇರೆ. ರುದ್ರನ ಪತ್ನಿ ಕಾಳಿಕಾದೇವಿ. ಶಿವನ ಪತ್ನಿ ಪಾರ್ವತಿ ಅಥವಾ ದಾಕ್ಷಾಯಿಣಿ. ರುದ್ರನ ಮಗ ವೀರಭದ್ರ, ಶಿವನ ಮಕ್ಕಳು ಷಣ್ಮುಖ ಮತ್ತು ಗಣಪತಿ. ವೀರಶೈವರು ಭದ್ರಕಾಳಿಯ ಪತಿಯಾದ ವೀರಭದ್ರನ ವೀರಶೈವ ಪರಂಪರೆಗೆ ಸೇರಿದವರು. ಶಿವನ ಶೈವ ಮತ್ತಿತರ ಪರಂಪರೆಗೆ ಸೇರಿದವರಲ್ಲ.[೬] ಕನ್ನಡದ ಖ್ಯಾತ ವಿದ್ವಾಂಸರಾದ ಶಂಬಾ ಜೋಶಿಯವರು ಇದಕ್ಕೆ ಸರಿಯಾದ ವಿವರಣೆಯನ್ನು ತಮ್ಮ 'ಶಿವರಹಸ್ಯ' ಗ್ರಂಥದಲ್ಲಿ ನೀಡಿದ್ದಾರೆ. ಲಿಂಗಾಯತರ ಶಿವ ಹಾಗೂ ಶೈವರು ಪೂಜಿಸುವ ಶಿವನಲ್ಲಿರುವ ಮೂರು ಅಂಶಗಳ ವಿಮರ್ಶೆ ಮಾಡಿದ್ದಾರೆ.

೧. ಋಗ್ವೇದದಲ್ಲಿ ರುದ್ರನನ್ನು ವರ್ಣಿಸುವಲ್ಲಿ ಶಿವ ಎಂಬ ಪದವನ್ನು ಬಳಸಲಾಗಿದೆಯಾದರೂ ಅದರ ಅರ್ಥ 'ಶುಭ' ಎಂದೇ ಹೊರತು ದೇವನಾದ ಶಿವನಿಗೆ ಅನ್ವಯಿಸುವುದಿಲ್ಲ.

೨. ಶಿವನು ಒಬ್ಬ ದ್ರಾವಿಡ ದೈವ, ಆರ್ಯರ ರುದ್ರನಲ್ಲ; ಋಗ್ವೇದದ ಹಲವಾರು ದೇವತೆಗಳಲ್ಲಿ ಒಬ್ಬನಲ್ಲ.

೩. ಋಗ್ವೇದದ ರುದ್ರನ ವರ್ಣನೆಯಲ್ಲಿ 'ಲಿಂಗ' ಪದ ಬರುವುದಿಲ್ಲ. ಅವನನ್ನು ಲಿಂಗಾಯತರ ಶಿವ ಅಥವಾ ರುದ್ರನೊಂದಿಗೆ ಸಮೀಕರಿಸುವುದು ತಪ್ಪು ಎನ್ನುತ್ತಾರೆ.

ಇದೇ ವಿಷಯವನ್ನು ವಿದ್ವಾಂಸರಾದ ಶಿ.ಶಿ.ಬಸವನಾಳರು ಇನ್ನಷ್ಟು ಸ್ಪಷ್ಟವಾಗಿ ಹೀಗೆ ಹೇಳಿದ್ದಾರೆ. "ವೇದಗಳಲ್ಲಿ ಲಿಂಗಾಯತ ಧರ್ಮವನ್ನು ಹುಡುಕಲು ಪ್ರಯತ್ನಿಸುವುದು ಮೂರ್ಖತನ"[೭] ವೇದವನ್ನು ಖಂಡಿಸಿದ ಶರಣಸ್ಥಾಪಿತ ಲಿಂಗಾಯತ ಧರ್ಮದ ಮೂಲವನ್ನು ವೇದದಲ್ಲಿ ಹುಡುಕುವುದು ಮೂರ್ಖತನವಲ್ಲದೆ ಮತ್ತೇನು? ಲಿಂಗಾಯತರ ಲಿಂಗರೂಪಿ ಶಿವನಿಗೆ ರುದ್ರ ಹಾಗೂ ಶೈವ ಶಿವನಿಗಿರುವಂತೆ ಯಾವ ಪತ್ನಿಯರು, ಪುತ್ರರು ಇಲ್ಲ. ಲಿಂಗಾಯತರ ಶಿವ ಪರಿವಾರರಹಿತ ದೇವತೆ. 'ಲಿಂಗ' ಲಿಂಗಾಯತರ ಆತ್ಮದ ಪ್ರತೀಕ. ಹೀಗಿರುವಾಗ ಲಿಂಗಾಯತ ಮತ್ತು ವೀರಶೈವ ಒಂದೇ ಎಂದು ಹೇಳುವ ಪ್ರಮೇಯವೇ ಬರುವುದಿಲ್ಲ. ಇವೆರಡೂ ಬೇರೆ ಬೇರೆ ಎನ್ನುವ ಸಂಗತಿ ವೀರಾಗಮಗಳಿಂದಲೇ ತಿಳಿದು ಬರುತ್ತದೆ.[೮]

In Public domain. Digitization Muthulakshmi Research Academy

ಅಂದರೇ ವೀರಶೈವರು ಲಿಂಗಾಯತರಲ್ಲವೆ?

ಇದಕ್ಕೆ ಉತ್ತರ "ಹೌದು" ಮತ್ತು "ಅಲ್ಲ" ಎರಡೂ ಇವೆ. ಬಸವಣ್ಣನವರ ಸಿದ್ಧಾಂತ ನಂಬುವ ವೀರಶೈವರದು ಒಂದು ಗುಂಪಿದ್ದರೆ ಈ ಗುಂಪಿಗೆ ಬಸವ ಕಾಲದ ಇತಿಹಾಸವಿದೆ. ಚತುರಾಚಾರ್ಯರೆಂದು ಕರೆಸಿಕೊಂಡಿದ್ದ ಶರಣ ಸಂಪ್ರದಾಯದ ಒಂದು ಗುಂಪಿದ್ದರೆ, ಇನ್ನೊಂದು ಗುಂಪು ಬಸವಣ್ಣನವರು ವೀರಶೈವ ಧರ್ಮ ಸ್ಥಾಪಕರಲ್ಲ. ಆದರೆ ಅವರು ವೀರಶೈವ ಧರ್ಮ ಸುಧಾರಕರು ಎನ್ನುವ ಇನ್ನೊಂದು ಗುರುವರ್ಗದ ಗುಂಪಿದೆ. ಎರಡನೆಯ ಗುಂಪಿನಲ್ಲಿರುವ ಜಾತಿ ಜಂಗಮರು ಹೀಗೆ ಹೇಳುತ್ತಾರೆ. 'ಬಸವಪೂರ್ವದಲ್ಲಿ ವೀರಶೈವ ಧರ್ಮ ಇತ್ತು, ಬಸವಣ್ಣನೇ 'ಶೈವದಿಂದ ವೀರಶೈವನಾದೆ' ಎಂದು ತನ್ನ ವಚನದಲ್ಲಿ ಹೇಳಿ ವೀರಶೈವ ದೀಕ್ಷೆ ಪಡೆದು ಇಷ್ಟಲಿಂಗಧಾರಿಯಾದ' ಎಂದು ಹೇಳುವ ವರ್ಗವು 'ವೀರಶೈವ ಧರ್ಮವು ಯುಗಯುಗಗಳ ಹಳೆಯ ಧರ್ಮ'ವೆಂದು ಸಾಧಿಸುತ್ತದೆ.

ಪರಮೇಶ್ವರನ ಪಂಚಮುಖಗಳಾದ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಇವುಗಳು ಬಸವಪೂರ್ವದಲ್ಲಿ ಕಾಳಾಮುಖ ಗುರುಗಳ ಹೆಸರುಗಳಾಗಿದ್ದವು. ಇವೇ ವೀರಶೈವ ಪಂಚಾಚಾರ್ಯರ ಪಂಚಮುಖಗಳು ಆಗಿರುವುದರಿಂದ ಕಾಳಾಮುಖರು ಮತ್ತು ಪಂಚಾಚಾರ್ಯರ ಪರಂಪರೆ ಒಂದೇ ಮೂಲದ್ದು ಎಂದು ಅಭಿಪ್ರಾಯ ಪಡುತ್ತಾರೆ ಡಾ.ಬಸವರಾಜ ಸೊಪ್ಪಿಮಠ[೮] ವೀರಶೈವ ಗುರುಗಳಾದ ಪಂಚಾಚಾರ್ಯರು ಪರಶಿವನ ಐದು ಮುಖಗಳಿಂದ ಉದ್ಭವಿಸಿದ್ದಾರೆ ಎನ್ನುತ್ತ ಅವರು ಯುಗಯುಗಗಳಲ್ಲಿ ಯಾವ ಯಾವ ಹೆಸರಿನಿಂದ ಕರೆಯಲ್ಪಡುತ್ತಿದ್ದರು ಎಂದು ವಿವರಿಸುತ್ತಾರೆ. ಅದರಗುಂಜಿ ಹಿರೇಮಠದ ಶಿವಲಿಂಗಯ್ಯನವರು.[೯]

ಭಾರತದ ಧರ್ಮಸಾಹಿತ್ಯಕ್ಕೆ ಪುರಾತನದ ನಂಟು ಬಹಳ. ವೈದಿಕರು ಮತ್ತು ಶೈವರು ಪುರಾತನವಾದದ್ದೆಲ್ಲ ಶ್ರೇಷ್ಠವೆಂದು ಭಾವಿಸುತ್ತಾರೆ. ಇವರ ಸಾಹಿತ್ಯವೂ ಸಹ ಕಾಲಾತೀತ ಸಾಹಿತ್ಯ. ದೇವರಿಂದ ಉವಾಚಿಸಲ್ಪಟ್ಟ ಸ್ಮೃತಿಗಳು, ಯುಗಯುಗಾಂತರದ ಹಿಂದೆ ಬರೆಯಲ್ಪಟ್ಟ ವೇದಗಳು, ದ್ವಾಪರಯುಗದಲ್ಲಿ ಬರೆಯಲ್ಪಟ್ಟ ಮಹಾಕಾವ್ಯಗಳು, ಕೃತಯುಗ, ತ್ರೇತಾಯುಗ ಹಾಗೂ ದ್ವಾಪರಯುಗಗಳಲ್ಲಿ ಬರೆಯಲ್ಪಟ್ಟ ಪುರಾಣಗಳೆಲ್ಲವೂ ಕಾಲಾತೀತವೆ ಇವರನ್ನು ಆದರ್ಶವಾಗಿಟ್ಟುಕೊಂಡಿರುವ ವೀರಶೈವ ಸಾಹಿತ್ಯ ಮತ್ತು ವೀರಶೈವ ಗುರುಪರಂಪರೆಯೂ ಕಾಲಾತೀತವೆ. ವೀರಶೈವವು ಆಗಮಗಳಲ್ಲಿ ಕಾಣಿಸಿಕೊಂಡಿದೆ. ಆಗಮವು ವೇದಗಳಿಗಿಂತ ಪ್ರಾಚೀನ ಎಂದು ಅಭಿಪ್ರಾಯಪಡುವರು ವೀರಶೈವ ಪಂಡಿತರು(ಆದರೆ ಮೂಲ ಆಗಮಗಳು ಪ್ರತಿಗಳು ವಿದೇಶಗಳಲ್ಲಿ ಅಂದರೆ ನೇಪಾಳ ಹಾಗು ಕೇಂಬ್ರಿಡ್ಜ್ ಲೈಬ್ರರಿಯಲ್ಲಿವೆ ಎಂದು ವಾದ ಮಾಡುತ್ತಾರೆ). ಆದರೆ ಆಗಮಗಳು ಇನ್ನೂವರೆಗೂ ಸಿಕ್ಕಿಲ್ಲ.

In Public domain. Digitization Muthulakshmi Research Academy

ಪುರಾಣಗಳ ರಚನೆಯನ್ನು ವ್ಯಾಸ ಮಾಡಿದ್ದನೆಂದು ಹೇಳಿದಂತೆ ಆಗಮನ ಜನಕ ಶಿವನೆಂದು, ಅವು ಶಿವನಿಂದ ಪಾರ್ವತಿಗೆ ಬೋಧಿಸಲ್ಪಟ್ಟವು ಎಂದು ಪೌರಾಣಿಕತೆಯತ್ತ ತಿರುಗಿಕೊಳ್ಳುತ್ತಾರೆ. ವೀರಶೈವರ ಐವರು ಆಚಾರ್ಯರ ಬಗ್ಗೆ ತಿಳಿದುಕೊಂಡರೆ ವೀರಶೈವ ಧರ್ಮವನ್ನು ಸುಲಭವಾಗಿ ಗ್ರಹಿಸಬಹುದು. ವೀರಶೈವ ಆಚಾರ್ಯರ ಕುರಿತು ಶಿವಾಗಮಗಳಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದವು ಸುಪ್ರಭೇದಾಗಮ, ಸ್ವಯಂಭುವಾಗಮ, ವೀರಾಗಮಗಳು. "ವೀರಶೈವ ಪ್ರಕಾಶಿಕೆ"ಯಲ್ಲಿ ಶಿವಪಾರ್ವತಿಯವರ ಸಂಭಾಷಣೆಯ ರೂಪದಲ್ಲಿ ವೀರಶೈವ ಪಂಚಾಚಾರ್ಯರ ವಿವರಗಳನ್ನು ನೀಡಿರುವುದು. ಅದನ್ನು ಡಾ. ಲಕ್ಷ್ಮಣ ಕೌಂಟೆಯವರು ತಮ್ಮ ಗ್ರಂಥದಲ್ಲಿ ಈ ರೀತಿಯಾಗಿ ಪ್ರಕಟಿಸಿದ್ದಾರೆ. "ನನ್ನ ಮುಖದಿಂದ ಹೊರಬಿದ್ದ ಇಪ್ಪತ್ತೆಂಟು ಅಗಮಗಳಲ್ಲಿ ಅಸುರ ಮೋಹಕಗಳೂ, ವೇದ ವಿರುದ್ಧದ ಆದ ಹತ್ತು ಉಪಾಗಮಗಳನ್ನು ಬಿಟ್ಟು ಉಳಿದ ಹದಿನೆಂಟು ಆಗಮಗಳ ಸಕಲ ವೇದಾರ್ಥ ನಿರ್ಣಾಯಕಗಳಾಗಿರುವವು. ಈ ಶಿವಾಗಮಗಳಲ್ಲಿ ಹೇಳಿರುವ ಪ್ರಕಾರವಾಗಿ ನನ್ನ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಎಂಬ ಪಂಚ ಮುಖೋದ್ಭೂತರಾದ; ಕೃತಯುಗದಲ್ಲಿ ಏಕಾಕ್ಷರ, ದ್ವಕ್ಷರ, ತ್ರ್ಯಕ್ಷರ, ಚತುರಕ್ಷರ, ಮತ್ತು ಪಂಚಾಕ್ಷರ ಎಂಬ ನಾಮವುಳ್ಳ ಪಂಚಾಚಾರ್ಯರಿಂದ ಬ್ರಹ್ಮನೇ ಮೊದಲಾದ ಸಕಲ ದೇವತೆಗಳಿಗೆ ನೀಲಮಯ ಲಿಂಗವನ್ನು ಧಾರಣ ಮಾಡಿಸಿ ಪಂಚಾಕ್ಷರ ಮಂತ್ರವನ್ನು ಉಪದೇಶ ಮಾಡಿ ಮೋಕ್ಷ ಮಾರ್ಗವನ್ನು ತೋರಿಸು. ತ್ರೇತಾಯುಗದಲ್ಲಿ ಏಕವಕ್ತ್ರ, ದ್ವಿವಕ್ತ್ರ, ತ್ರಿವಕ್ತ್ರ, ಚತುರ್ವಕ್ತ್ರ, ಪಂಚವಕ್ತ್ರ ಎಂಬ ಹೆಸರುಳ್ಳ ಅದೇ ಪಂಚಾಚಾರ್ಯರಿಂದ ಕೌಶಿಕ, ಕಶ್ಯಪ, ವಶಿಷ್ಠಾದಿ ಮುನಿಗಳ ಗುಂಪಿಗೂ; ಸರ್ವ ಮನುಷ್ಯರಿಗೂ ಯಕ್ಷ, ಗಂಧರ್ವ, ಕಿನ್ನರ ಮೊದಲಾದ ಎಲ್ಲರಿಗೂ ರತ್ನಮಯವಾದ ಲಿಂಗಧಾರಣ ಮಾಡಿಸಿ ಪಂಚಾಕ್ಷರ ಮಂತ್ರವನ್ನು ಉಪದೇಶ ಮಾಡಿ ಮೋಕ್ಷವನ್ನು ತೋರಿಸು. ದ್ವಾಪರಯುಗದಲ್ಲಿ ರೇಣುಕ, ದಾರುಕ, ಶಂಖುಕರ್ಣ, ಧೇನುಖರ್ಣ, ವಿಶ್ವಕರ್ಣ ಎಂಬ ಹೆಸರುಳ್ಳ ಅದೇ ಪಂಚಾಚಾರ್ಯರಿಂದ ಹದಿನಾರು ಜನ ಮಹಾರಾಜರಾದ ಹರಿಶ್ಚಂದ್ರ, ನಳ, ಪರೂ, ಕುಕುತ್ಸ, ಪುರೂರವ ಮೊದಲಾದವರಿಗೂ ಮತ್ತು ಎಲ್ಲ ರಾಕ್ಷಸ ಗುಂಪಿಗೂ ವಜ್ರಮಯವಾದ ಲಿಂಗವನ್ನು ಧಾರಣ ಮಾಡಿಸಿ ಪಂಚಾಕ್ಷರ ಮಂತ್ರವನ್ನು ಉಪದೇಶ ಮಾಡಿ ಮೋಕ್ಷ ಮಾರ್ಗವನ್ನು ತೋರಿಸು. ಕಲಿಯುಗದಲ್ಲಿ ರೇವಣಾರಾಧ್ಯ, ಮರುಳಾರಾಧ್ಯ, . ಏಕೋರಾಮಾರಾಧ್ಯ, ಪಂಡಿತಾರಾಧ್ಯ, ವಿಶ್ವಾರಾಧ್ಯ ಎಂಬ ಹೆಸರುಗಳಿಂದ ಪ್ರಸಿದ್ಧರಾದ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ ಮೊದಲಾದ ಹದಿನೆಂಟು ಜಾತಿಯ ಕುಲದ ಮಾನವರಿಗೆ ಶಿಲಾಮಯವಾದ ಲಿಂಗವನ್ನು ಧಾರಣ ಮಾಡಿಸಿ ಪಂಚಾಕ್ಷರ ಮಂತ್ರವನ್ನು ಉಪದೇಶ ಮಾಡಿ

In Public domain. Digitization Muthulakshmi Research Academy

ಮೋಕ್ಷ ಮಾರ್ಗವನ್ನು ತೋರಿಸು ಎಂದು ಸಾಕ್ಷಾತ್ ಪರಂಜ್ಯೋತಿ ಸ್ವರೂಪನಾದ ಪರಶಿವನು ಕಾರ್ಯರುದ್ರನನ್ನು ಕುರಿತು ಉಪದೇಶ ಮಾಡಿದನು "ಎಲೇ ಪಾರ್ವತಿಯೇ, ನನಗೆ ಐದು ಮುಖಗಳಿರುತ್ತವೆಯೆಂದು ತಿಳಿದುಕೋ. ಇವುಗಳಲ್ಲಿ ಮೊದಲನೆಯದು ಸದ್ಯೋಜಾತ, ಎರಡನೆಯದು ವಾಮದೇವ, ಮೂರನೆಯದು ಅಘೋರ, ನಾಲ್ಕನೆಯದು ತತ್ಪುರುಷ, ಐದನೆಯದು ಈಶಾನ. ಹೀಗೆ ನನ್ನ ಎಲ್ಲಾ ಮುಖಗಳು ಎಲ್ಲಾ ಕಡೆಗಳಲ್ಲೂ ಪ್ರಸಿದ್ಧವಾಗಿವೆ. ಈ ಮುಖಗಳಿಗೆ ವೇದಗಳಲ್ಲಿ ಹೇಳಲ್ಪಟ್ಟ ಗೋತ್ರಗಳಿವೆ. ಇದರಲ್ಲಿ ಸಂದೇಹವಿಲ್ಲ. ವೀರ, ನಂದಿ, ಭೃಂಗ, ವೃಷಭ, ಮತ್ತು ಸ್ಕಂದ ಎಂಬ ಐವರು ನನ್ನ ಸ್ವರೂಪರಾದ ಗೋತ್ರಾಧಿಕಾರಿಗಳು ಹುಟ್ಟಿದರು. ರೇಣುಕ, ದಾರುಕ, ಶಂಖುಕರ್ಣ, ಧೇನುಕರ್ಣ, ವಿಶ್ವಕರ್ಣ ಎಂಬ ಐವರು ಕ್ರಮವಾಗಿ ಐದು ಗೋತ್ರಗಳಲ್ಲಿ (ಮುಖಗಳಲ್ಲಿ) ಹುಟ್ಟಿದರು. ಈ ಪಂಚಮುಖಗಳಿಂದ ಕೃತ, ತ್ರೇತಾ, ದ್ವಾಪರ, ಕಲಿಯುಗದಲ್ಲಿ ಯಾವ ಯಾವ ಹೆಸರಿನ ಪಂಚಾಚಾರ್ಯರು ಜನ್ಮ ತಳೆದರು ಎನ್ನುವ ವಿವರಗಳನ್ನು ಮಹಾದೇವ ಸತಿ ಪಾರ್ವತಿಗೆ ಕೊಡುತ್ತಾನೆ. ಆ ಐವರಿಗೆ ನಾಮ, ಗೋತ್ರ, ಸೂತ್ರ, ದಂಡ, ಕಮಂಡಲು, ಮಂತ್ರಬೀಜ, ಪ್ರವರ, ಶಾಖಾ, ಕಂಥಾ ಮತ್ತು ವರ್ಣ ಇವುಗಳನ್ನು ಒಬ್ಬೊಬ್ಬರಿಗೆ ಬೇರೆಬೇರೆಯಾಗಿಯೇ ಹೇಳುತ್ತಾನೆ.[೧೦]

ಶ್ರೀ ರಂಭಾಪುರಿ ವೀರಸಿಂಹಾಸನ ಜಗದ್ಗುರು ಪೀಠ: ಪಂಚಾಚಾರ್ಯರಲ್ಲಿ ಅಗ್ರಪೂಜೆ ಸಲ್ಲುವುದು ರೇಣುಕಾಚಾರ್ಯರಿಗೆ. ಮೂಲ ರೇಣುಕರ ಜನನ ಇಂದಿನ ತೆಲಂಗಾಣ ರಾಜ್ಯದ ನಲಗೊಂಡ ಜಿಲ್ಲೆಯ ಕೊಲ್ಲಿಪಾಕಿಯಲ್ಲಿ "ಸೋಮೇಶ್ವರ ಲಿಂಗದಿಂದ ಉದ್ಭವವಾದ 'ಶಿಲಾಜನಕ'ರೆಂದು" ವೀರಶೈವರು ಹೇಳುತ್ತಾರೆ. ರಂಭಾಪುರಿ ಪೀಠವು ೧೨೧ ಪೀಠಾಧಿಪತಿಗಳನ್ನು ಹೊಂದಿ ಕೃತಯುಗದಿಂದಲೂ ಪೀಠದ ಅಸ್ತಿತ್ವವನ್ನು ಇಂದಿನ ಪೀಠಾಧಿಪತಿಗಳು ಹೊಂದಿದೆ ಎಂದು ಹೇಳಿಕೊಳ್ಳುತ್ತಾರೆ. ಮೇಲಾಗಿ ಇವರು ವೀರಶೈವ ಧರ್ಮವನ್ನು ಭೂಲೋಕದಲ್ಲಿ ಪ್ರಸಾರ ಮಾಡಲು ಸ್ವಯಂ ಕೈಲಾಸವಾಸಿ ಶಿವನ ಆದೇಶ ಪಡೆದು ಬಂದವರು. ಇವರ ಪೀಠವು ೪೩ ಲಕ್ಷ ಅರವತ್ತು ಸಾವಿರ ವರ್ಷಗಳಿಂದಲೂ ಇದೆ. ರೇಣುಕರು ಪದೇ ಪದೇ ಜನ್ಮ ತಾಳಿ ನಾಲ್ಕೂ ಯುಗಗಳಲ್ಲಿಯೂ ಶಿಲೋದ್ಭವರಾಗಿ ಬೇರೆ ಬೇರೆ ಹೆಸರಿನಿಂದ ಜನ್ಮ ತಾಳುತ್ತಾರೆ. ರೇಣುಕರು ಸದ್ಯೋಜಾತ ಮುಖದಿಂದ ಹುಟ್ಟಿದವರು. ಇವರನ್ನು ಕೃತಯುಗದಲ್ಲಿ ಏಕಾಕ್ಷರರೆಂದೂ, ತ್ರೇತಾಯುಗದಲ್ಲಿ ಏಕವಕ್ತ್ರರೆಂದೂ, ದ್ವಾಪರಯುಗದಲ್ಲಿ ರೇಣುಕರೆಂದೂ, ಕಲಿಯುಗದಲ್ಲಿ ರೇವಣಸಿದ್ಧರೆಂದು ಕರೆಯಲ್ಪಟ್ಟಿದ್ದಾರೆ. ರೇಣುಕರಿಗೂ ವೈದಿಕ ಬ್ರಾಹ್ಮಣರಂತೆ ಗೋತ್ರವಿದೆ. ಇವರು ವೀರಗೋತ್ರದವರು. ಸೂತ್ರ ಪಡಿವಿಡಿ, ವರ್ಣ ಅತಿವರ್ಣ, ಪ್ರವರ ಏಕಾಕ್ಷರ ಮಂತ್ರಬೀಜ 'ನ' ರೇಣುಕಾ ಶಾಖಾ, ಹರಿದ್ವರ್ಣ ಕಂಥಾ

In Public domain. Digitization Muthulakshmi Research Academy

ಇದೆಲ್ಲವೂ ವೀರಗೋತ್ರದ ಲಕ್ಷಣಗಳು. ಅಂದರೆ ಋಗ್ವೇದದ ರುದ್ರನ ಮಗನಾದ ವೀರಭದ್ರನ ಗೋತ್ರದವರು. ಇವರು ಬ್ರಾಹ್ಮಣರಿಗಿಂತ ಕಡಿಮೆಯಿಲ್ಲ ಎಂಬುದನ್ನು ಸಿದ್ಧಪಡಿಸಲು ಇನ್ನೊಂದು ವಾದವನ್ನು ಮುಂದಿಡುತ್ತ ಇವರ ಕುಲಗೋತ್ರಗಳನ್ನು ಇನ್ನಷ್ಟು ಆಳಕ್ಕೆ ವೀರಶೈವ ಗ್ರಂಥಗಳು ಇಳಿಸಿವೆ. ರೇಣುಕಾರಾಧ್ಯರದು(ರೇಣುಕ) ಕಶ್ಯಪ ಗೋತ್ರ, ಅಶ್ವಲಾಯನ ಸೂತ್ರ; ಅತ್ರೇಯ ಶತಾತ ಪತ್ರ ಆಶ್ರೇಯ ಪ್ರವರ; ಋಗ್ವೇದ ಶಾಖಾ.

ಹನ್ನೆರಡನೆಯ ಶತಮಾನದಲ್ಲಿ ರೇವಣಸಿದ್ಧರಿಗೆ ರಾಜಪರಿವಾರದೊಂದಿಗೆ ವಿವಾಹಯೋಗ ಲಭಿಸಿ, ರಾಜಮರ್ಯಾದೆಯ ಸಂಕೇತವಾದ ಚಿನ್ನದ ಕಿರೀಟ, ಸಿಂಹಾಸನ, ಛತ್ರ ಚಾಮರ, ಧ್ವಜ ಮುಂತಾದವು ಲಭಿಸಿದ್ದವು ಎನ್ನುತ್ತದೆ ರಂಭಾಪುರಿ ಪೀಠದ ಇತಿಹಾಸ. ಇದನ್ನು ದೃಢೀಕರಿಸುತ್ತ "ಹನ್ನೆರಡನೆಯ ಶತಮಾನದ ರೇವಣಸಿದ್ಧನ ಕಾಲದಿಂದ ಈ ಪೀಠಕ್ಕೆ ರಾಜವೈಭವ ದೊರೆಯಿತು. ಜತೆಗೆ ಅವರಿಗೆ ಸೈನಿಕರಕ್ಷಣೆ ದೊರೆತದ ಬಗ್ಗೆ ಅನೇಕ ಕಾವ್ಯಗಳು ಹೇಳುತ್ತವೆ.[೧೧] ವೀರಶೈವ ಪಂಚಪೀಠ ಪರಂಪರೆಯನ್ನು ಬರೆಯುತ್ತ ಡಾ.ಚಂದ್ರಶೇಖರ ಶಿವಾಚಾರ್ಯರು ಸ್ವಾಮಿಗಳು ಮುಕ್ತಿಮುನಿಗಳಿಗೆ ೩೦೦ ವರ್ಷ, ಸಿದ್ಧಮುನಿಗಳು ೨೦೦ ವರ್ಷ, ಶಿವಮುನಿಂದ್ರರು ೧೨೦ ವರ್ಷ, ಶಾಂತಮುನಿಗಳು ೭೦ ವರ್ಷ, ಭವಭೂತಿ ಮುನಿಗಳು ೧೦೦ ವರ್ಷ ಪೀಠದಲ್ಲಿದ್ದರೆಂದು ಬರೆಯುತ್ತ ಕಾಳಿದಾಸನಿಂದ ಮನ್ನಣೆ ಪಡೆದವರು ಎಂದು ಬರೆಯುತ್ತಾರೆ. ಇವರ ನಂತರ ಪೀಠಾಧಿಪತಿಗಳಾದವರು ಶಕ್ತಿಮುನಿಗಳು ೨೦೦ ವರ್ಷ, ಸಾಂಭವಮುನಿ ೧೦೦ ವರ್ಷ ಪೀಠದಲ್ಲಿದ್ದರು ಎಂದು ಹೇಳುತ್ತಾರೆ.[೧೨]

ಇವರೊಬ್ಬ ಅತಿಮಾನುಷ ಶಕ್ತಿಯುಳ್ಳ ಮಾನವರು. ಮೊದಲನೆಯದಾಗಿ ಇವರು ಮಾನವರಾದರೂ ಶಿಲೆಯಲ್ಲಿ ಜನ್ಮ ತಾಳುತ್ತಾರೆ. ಇವರು ಒಂದೇ ಜನ್ಮದಲ್ಲಿ ಹದಿನಾಲ್ಕು ನೂರು ವರ್ಷ ಬದುಕುತ್ತಾರೆ. ಇವರು ದೇವಾನುದೇವತೆ ವಿಷ್ಣುವಿನ ಚಲಿಸುತ್ತಿದ್ದ ತಲೆಯನ್ನು ನಿಲ್ಲಿಸಿದವರು. ಯಕ್ಷ ದಂಪತಿಗಳನ್ನು ಸುಡುತ್ತಾರೆ. ಚಕ್ರವರ್ತಿಗಳಿಗೆ ಮೋಕ್ಷವನ್ನು ಕರುಣಿಸುತ್ತಾರೆ. ತ್ರೇತಾಯುಗದಲ್ಲಿ ಅಗಸ್ತ್ಯ ಮುನಿಗೆ ವೀರಶೈವ ಧರ್ಮದ ಷಟ್ಸ್ಥಲ ಸಿದ್ಧಾಂತವನ್ನು ಬೋಧಿಸುತ್ತಾರೆ, ಶಂಕರಾಚಾರ್ಯರಿಗೆ ಚಂದ್ರಮೌಳೇಶ್ವರ ಲಿಂಗವನ್ನು ಕೊಡುತ್ತಾರೆ. ಇವರು ವಶೀಕರಣದ ಸಹಾಯದಿಂದ ಸ್ತ್ರೀಯರನ್ನು ಸಂಮೋಹಗೊಳಿಸುತ್ತಾರೆ, ಮುನ್ನೂರು ಹೆಣ್ಣುಮಕ್ಕಳನ್ನು ಮದುವೆಯಾಗುತ್ತಾರೆ. ಏಕಕಾಲದಲ್ಲಿ ೧೨ನೆಯ ಶತಮಾನದ ಬಿಜ್ಜಳನ ಮಗಳಾದ ಸುಲಕ್ಷಣೆಯನ್ನೂ ಮತ್ತು ಚೋಳ ರಾಜನ ಮಗಳಾದ ಸುಂದರಿಯನ್ನು ವಿವಾಹವಾಗುತ್ತಾರೆ.

In Public domain. Digitization Muthulakshmi Research Academy

ಶ್ರೀ ಉಜ್ಜಯಿನಿ ಸದ್ಧರ್ಮ ಜಗದ್ಗುರು ಪೀಠ: ವೀರಶೈವರ ಪಂಚಾರ್ಯರರಲ್ಲಿ ಒಂದು ಪೀಠದ ಕತೆಯಾದರೆ ಇನ್ನು ನಾಲ್ಕು ಪೀಠದ ಕತೆ ಇದಕ್ಕಿಂತ ಬಿನ್ನವಾಗಿಲ್ಲ. ಇತಿಹಾಸ ಪ್ರಸಿದ್ಧವಾದ 'ಆವಂತಿಕಾ' ನಗರವೀಗ 'ಉಜ್ಜಯಿನಿ'ಯಾಗಿ ಪುನರ್ ನಾಮಕರಣಗೊಂಡಿರುವ ಪ್ರಸಿದ್ಧ ಯಾತ್ರಾ ಸ್ಥಳ. ಅದೀಗ ಮಧ್ಯಪ್ರದೇಶದಲ್ಲಿದೆ. ಇದು ಮಧ್ಯಪ್ರದೇಶದ ಪ್ರಮುಖ ಪಟ್ಟಣಗಳಲ್ಲೊಂದು. ಪ್ರತಿ ಹನ್ನೆರಡು ವರ್ಷಕ್ಕೊಮ್ಮೆ ಶಿಪ್ರಾ ನದಿಯ ದಂಡೆಯ ಮೇಲೆ ನಡೆಯುವ 'ಕುಂಭಮೇಳ' ಆಯೋಜನೆಗೊಳ್ಳುವುದು ಇದೇ ಸ್ಥಳದಲ್ಲಿ. ಇದು ಹಿಂದೂಗಳ ಪವಿತ್ರವಾದ ದೊಡ್ಡ ಉತ್ಸವ. ಅಗಸ್ತ್ಯ ಮುನಿಗೆ ಲಿಂಗಧಾರಣೆ ಮಾಡಿದ ವೀರಶೈವರ ಗುರುಗಳಾದ 'ಮರುಳುಸಿದ್ಧದೇವರು' ಇದೇ ಆವಂತಿಕಾ ನಗರದಲ್ಲಿ ಇರಬೇಕಾಗಿದ್ದು ಸಹಜ. ಅದರೆ ಅವರ ಪೀಠ ಇರುವುದು ಕರ್ನಾಟಕದ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಉಜ್ಜಯಿನಿ ಎಂಬ ಸಣ್ಣ ಹಳ್ಳಿಯಲ್ಲಿ. ಈ ಪೀಠದ ಮೂಲಗುರುಗಳು ಸಹ ಶಿಲೋದ್ಭವರೆ. ಪ್ರಾಚೀನ ಕವಿ ಪಂಡಿತರು ಈ ಪಂಚಾಚಾರ್ಯರನ್ನು ಅಯೋನಿಜರು ಎಂದು ಗುರುತಿಸಿ ಸ್ಥಾವರ ಲಿಂಗಗಳಲ್ಲಿ ಉದ್ಭವಗೊಂಡಂತೆ ಕಥೆ ರೂಪಿಸಿದರು. ಇದು ಮೌಢ್ಯಿಕ ಭಕ್ತರನ್ನು ಹಿಡಿದಿಡುವ ಪುರಾಣ ಶೈಲಿ.[೧೩] ಇವರಿಗೆ ಜನ್ಮ ನೀಡಿದ್ದು ವಾಟು ಕ್ಷೇತ್ರದ ಶಿಲಾಲಿಂಗ. ವಾಮದೇವ ಮುಖದಿಂದ ಹುಟ್ಟಿದವರು. ಇವರು ಕೃತಯುಗದಲ್ಲಿ ದ್ವ್ಯಯಾಕ್ಷರ, ತ್ರೇತಾಯುಗದಲ್ಲಿ ದ್ವೈವಕ್ತ್ರ, ದ್ವಾಪರಯುಗದಲ್ಲಿ ದಾರುಕ ಮತ್ತು ಕಲಿಯುಗದಲ್ಲಿ ಇವರನ್ನು ಮರುಳಾರಾಧ್ಯ ಎಂದು ಗುರುತಿಸುತ್ತಾರೆ. ಇವರು ಶಿವನ ವಾಹನವಾದ 'ನಂದಿ' ಗೋತ್ರದವರು. ಸೂತ್ರ ವೃಷ್ಟಿ, ವರ್ಣ ಅತಿವರ್ಣ, ಪ್ರವರ ದ್ವ್ಯಕ್ಷರ, ದಂಡ ಪಾಲಾಶ, (ಮುತ್ತಲ) ಕಮಂಡಲ ತಾಮ್ರದ್ದು, ಮಂತ್ರದ ಬೀಜಾಕ್ಷರವು 'ಮ', ದಾರುಕಶಾಖಾ, ತಾಮ್ರದ ಕಲಶ, ಕಂಥಾ ಮಂಜಿಷ್ಟ ಬಣ್ಣದ್ದು. ಇವೆಲ್ಲವೂ ನಂದಿ ಗೋತ್ರದ ಲಕ್ಷಣವು. ಪೌರಾಣಿಕ ಇತಿಹಾಸದಲ್ಲಿ ಇವರ ಬಗ್ಗೆ ಹೆಚ್ಚಿನ ವಿವರಣೆಗಳಿಲ್ಲ.

ಶ್ರೀ ಕೇದಾರ ಜಗದ್ಗುರು ಪೀಠ: ಅಘೋರ ಮುಖದಿಂದ ಹುಟ್ಟಿದವರು. ಶಂಖುಕರ್ಣ ಎಂದು ಪ್ರಸಿದ್ಧರಾಗಿರುವರು. ಇವರು ಕಲಿಯುಗದಲ್ಲಿ ಏಕೋರಾಮಾರಾಧ್ಯರು. ಪಂಚಾಚಾರ್ಯ ಪೀಠದ ಪರಂಪರೆಯ ಮೂರನೆಯ ಪ್ರಮುಖ ಪೀಠಾಧಿಪತಿಗಳು. ಇವರದು ಭೃಂಗಿ ಗೋತ್ರ, ಸೂತ್ರ ಲಂಬನ, ಪ್ರವರ ತ್ರ್ಯಯಕ್ಷರ, ವರ್ಣ ಅತಿವರ್ಣ, ದಂಡ ಆಲದ್ದು, ಕಮಂಡಲ ಲೋಹದ್ದು. 'ಶಿ' ಕಾರ ಬೀಜಾಕ್ಷರ, ಶಂಖುಕರ್ಣ ಶಾಖಾ, ಲೋಹದ ಕಲಶ, ಅಘೋರ ಮುಖ, ಕಂಥಾ ಬೂದು ಬಣ್ಣದ್ದು. ಇವೆಲ್ಲವೂ ಭೃಂಗಿ ಗೋತ್ರದ ಲಕ್ಷಣವು. ಇನ್ನೂ ಸ್ವಲ್ಪ ಆಳಕ್ಕೆ ಇಳಿದರೆ ಅದರಲ್ಲಿ ಸಾಂಖ್ಯಾಯನ ಗೋತ್ರ, ಬೋಧಾಯನ ಸೂತ್ರ, ಸಾಂಖ್ಯಾಯನ ವಾಷಿಷ್ಠ ಮೈತ್ರಾವರಣ ಆರ್ಷೇಯ ಪ್ರವರ ಸಾಮವೇದ ಶಾಖೆ.

In Public domain. Digitization Muthulakshmi Research Academy

ಇವರೂ ಸಹ ಇತರ ಪಂಚಾಚಾರ್ಯ ಪೀಠದ ಗುರುಗಳಂತೆ ದ್ರಾಕ್ಷಾರಾಮ ಕ್ಷೇತ್ರದ ಭೀಮಾನಾಥ ಶಿವಲಿಂಗದಿಂದ ಉದ್ಭವಿಸಿದರು. ಈ ಸ್ಥಾವರಲಿಂಗವು ಆಂಧ್ರಪ್ರದೇಶದ ಗೋದಾವರಿ ಜಿಲ್ಲೆಯಲ್ಲಿದೆ. ಇವರ ಯುಗಯುಗಾಂತರದ ನಾಮಾವಳಿ ಈ ರೀತಿಯಾಗಿವೆ. ಇವರ ಅವತಾರ ಕೃತಯುಗದಿಂದ ಪ್ರಾರಂಭವಾಗುವುದು. ಇವರನ್ನು ಕೃತಯುಗದಲ್ಲಿ ಶ್ರೀ ಜಗದ್ಗುರು ತ್ರ್ಯಕ್ಷರ ಶಿವಾಚಾರ್ಯ ಭಗವತ್ಪಾದರು ಎಂದು, ತ್ರೇತಾಯುಗದಲ್ಲಿ ಶ್ರೀ ಜಗದ್ಗುರು ಶ್ರಿವಕ್ತ್ರ ಶಿವಾಚಾರ ಭಗವತ್ಪಾದರೆಂದು, ದ್ವಾಪರಯುಗದಲ್ಲಿ ಶ್ರೀ ಜಗದ್ಗುರು ಘಂಟಾಕರ್ಣ ಶಿವಾಚಾರ್ಯ ಭಗವತ್ಪಾದರಾಗಿ, ಕಲಿಯುಗದಲ್ಲಿ ಜಗದ್ಗುರು ಏಕೋರಾಮಾರಾಧ್ಯ ಶಿವಾಚಾರ್ಯ ಭಗವತ್ಪಾದರೆಂದು ಯುಗಯುಗಗಳಲ್ಲಿ ಅವತರಿಸಿ ಭೂಮಿಯ ಮೇಲಿನ ಕಲ್ಮಶ ಕಳೆದು ಧರ್ಮಸ್ಥಾಪನೆ ಮಾಡಿದ್ದಾರೆ. ಹಿಮವತ್ತಾದ ಪ್ರದೇಶದಲ್ಲಿರುವ ಕೇದಾರನಾಥದ ಸ್ಥಾವರಲಿಂಗದ ಅರ್ಚಕರು ಈ ಪೀಠಾಧಿಕಾರಿಗಳು. ಕೇದಾರನಾಥ ದೇವಾಲಯದ ಮಠದಿಂದ ಸುಮಾರು ಮೂವತ್ತು ಕಿ.ಮೀ. ದೂರದಲ್ಲಿ ಊಖಿ ಮಠವಿದೆ. ಊಖಿ ಮಠವನ್ನು ಓಂಕಾರೇಶ್ವರ ಮಠವೆಂದೂ ಕರೆಯಲಾಗುತ್ತದೆ. ಈ ಮಠವು ಇವರ ಸುಪರ್ದಿಯಲ್ಲಿದೆ.[೧೪]

ಶ್ರೀಶೈಲ ಜಗದ್ಗುರು ಪೀಠ: ಕರ್ನಾಟಕದ ಪಕ್ಕದ ರಾಜ್ಯ ಆಂಧ್ರಪ್ರದೇಶ ನಂದ್ಯಾಲ ಜಿಲ್ಲೆಯ ಶ್ರೀಶೈಲ ಶೈವಪರಂಪರೆಯ ಪುರಾತನ ಧಾರ್ಮಿಕ ಕ್ಷೇತ್ರ ಐತಿಹಾಸಿಕ ಶ್ರೀಶೈಲ ಕ್ಷೇತ್ರವನ್ನು ಶ್ರೀಗಿರಿ ಎಂದೂ ಕರೆಯಲಾಗುತ್ತಿತ್ತು. ಶೈವ ಸಂಪ್ರದಾಯದ ಹನ್ನೆರಡು 'ಜ್ಯೋತಿರ್ಲಿಂಗ'ಗಳಲ್ಲಿ 'ಮಲ್ಲಿಕಾರ್ಜುನ' ಸ್ಥಾವರ ಲಿಂಗವು ಒಂದು. ಶ್ರೀಶೈಲವು ಒಂದು ಕಾಲದಲ್ಲಿ ಕಾಳಾಮುಖ, ಪಾಶುಪತದ ಪ್ರಮುಖ ಕೇಂದ್ರವಾಗಿದ್ದು ನಂತರ ನಾಥಸಂಪ್ರದಾಯದ ಕ್ಷೇತ್ರವಾಗಿ ಪರಿಣಮಿಸಿತ್ತು ಎಂದು ಭಾವಿಸುತ್ತಾರೆ. ಐದಾಚಾರ್ಯರಲ್ಲಿ ಮೂರನೆಯ ಪ್ರಮುಖ ಆಚಾರ್ಯರನ್ನಾಗಿ ಶ್ರೀಶೈಲ ಪೀಠವೆಂದು ವೀರಶೈವರು ಪರಿಗಣಿಸುತ್ತಾರೆ. ಇವರು ಐತಿಹಾಸಿಕ ಮಲ್ಲಿಕಾರ್ಜುನ ಸ್ಥಾವರ ಲಿಂಗದಲ್ಲಿ ಉದ್ಭವವಾದವರೆಂದು ಹೇಳುತ್ತಾರೆ. ಉಳಿದ ಪಂಚಾಚಾರ್ಯರಂತೆ ಇವರೂ ಸಹ ಸುಮಾರು ನಲ್ವತ್ತು ಲಕ್ಷ ವರ್ಷಗಳ ಪೂರ್ವದಲ್ಲಿ ಶಿಲೋದ್ಭವರಾದವರು. ಇವರು ತತ್ಪುರುಷ ಮುಖದಿಂದ ಹುಟ್ಟಿದವರು. ಕೃತಯುಗದಲ್ಲಿ ಚತುರ ರಕ್ಷಕರೆಂದು, ತ್ರೇತಾಯುಗದಲ್ಲಿ ಚತುರ್ವಕ್ತ್ರರೆಂದು, ದ್ವಾಪರಯುಗದಲ್ಲಿ ಧೇನುಕರ್ಣರೆಂದು ಜನ್ಮ ತಳೆಯುತ್ತ, ಕಲಿಯುಗದಲ್ಲಿ ಪಂಡಿತಾರಾಧ್ಯರೆಂದು ಕರೆಯಲ್ಪಟ್ಟಿದ್ದಾರೆ. ಇವರ ಗೋತ್ರ ವೃಷಭ, ಸೂತ್ರ ಮುಕ್ತಾಗುಚ್ಛ, ವರ್ಣ ಅತಿವರ್ಣ, ಪ್ರವರ ಚತುರಕ್ಷರ, ದಂಡ ಬಿದರಿನದು, ಕಮಂಡಲ ಕಂಚಿನದು, ಬೀಜಾಕ್ಷರ 'ವಾ', ಧೇನು ಕರ್ಣ ಶಾಖಾ, ಕಂಚಿನ ಕಲಶ, ತತ್ಪುರುಷ ಮುಖ, ಕಂಥಾ ಬಿಳಿ ಬಣ್ಣದ್ದು. ಇವು ವೃಷಭ ಗೋತ್ರದ ಲಕ್ಷಣವು.

In Public domain. Digitization Muthulakshmi Research Academy

ಪಂಡಿತಾರಾಧ್ಯರದ್ದು(ಧೇನುಕರ್ಣ) ಗೌತಮ ಗೋತ್ರ, ಆಪಸ್ತಂಭ ಸೂತ್ರ, ಗೌತಮ ವಾಶಿಷ್ಠ ಬಾರ್ಹಸ್ಪತ್ಯ ಅತ್ರಿ ಅಷ್ಮೇಯ ಪ್ರವರ, ಅಥರ್ವಣ ಶಾಕಾ.[೧೫]

ಶ್ರೀ ಕಾಶಿ ಜಗದ್ಗುರು ಪೀಠ: ಹಿಂದೂಗಳ ಪವಿತ್ರಭೂಮಿ ಎಂದು ಕರೆಯಲ್ಪಡುವ ಕಾಶಿಯಲ್ಲಿ 'ವಿಶ್ವನಾಥ' ನೆಂಬ ಪುರಾತನ ಸ್ಥಾವರಲಿಂಗವಿದೆ. ಈ ಐತಿಹಾಸಿಕ ದೇವಸ್ಥಾನದ ಅಕ್ಕಪಕ್ಕದಲ್ಲಿ ಸುಮಾರು ೧೫೦೦ ಇತರೇ ದೇವರುಗಳ ಆಲಯಗಳಿವೆ. ಸ್ವರ್ಗದಲ್ಲಿ ಸ್ಥಾನ ಪಡೆಯಲು ಹಿಂದೂಗಳು ಕಾಶಿಯಲ್ಲಿ ಮರಣ ಹೊಂದಲು ಬಯಸುತ್ತಾರೆ ಅಥವಾ ಮೃತ ದೇಹವನ್ನು ಗಂಗಾ ತಟದಲ್ಲಿ ಅಗ್ನಿಗೆ ಅರ್ಪಿಸಿ, ದೇಹದ ಅಸ್ಥಿಯನ್ನು ಗಂಗೆಯಲ್ಲಿ ವಿಸರ್ಜಿಸಿದರೆ ಹಿಂದೂಗಳು ಸ್ವರ್ಗವಾಸಿಯಾಗುತ್ತಾರೆ ಎನ್ನುತ್ತಿವೆ ಹಿಂದೂ ಧರ್ಮಗ್ರಂಥಗಳು. ಈ ಕಾರಣವಲ್ಲದೆ ಕಾಶಿ ವಿಶ್ವನಾಥನ ದರ್ಶನ ಪಡೆಯುವುದು ಹಿಂದೂಗಳಿಗೆ ಶ್ರೇಷ್ಠವಾದ ಧಾರ್ಮಿಕ ಆಚರಣೆ. ಈ ಕಾರಣಕ್ಕಾಗಿ ಭಾರತದಾದ್ಯಂತ ಭಕ್ತರು ಕಾಶಿಗೆ ಬರುತ್ತಾರೆ. ಕಾಶಿಯಲ್ಲಿ ಭಕ್ತರ ಸೌಕರ್ಯಕ್ಕೋಸ್ಕರ ಮುನ್ನೂರಕ್ಕೂ ಹೆಚ್ಚು ಮಠಗಳೆಂಬ ತಂಗುದಾಣಗಳಿವೆ. ಇವುಗಳಂತೆ "ಜಂಗಮವಾಡಿ" ಮಠವು ಅತ್ಯಂತ ಪುರಾತನ ಮಠ. ಈ ಮಠದ ಪೀಠಾಧಿಪತಿಗಳು ಕಾಶಿ ಜಗದ್ಗುರುಗಳು. ಚತುರಾಚಾರ್ಯರು ಲಿಂಗೋದ್ಭವರಾದರೆ ಕಾಶಿ ಪೀಠದ ಜಗದ್ಗುರುಗಳು ಸಾಕ್ಷಾತ್ ಶಿವನ ರೂಪವೇ. ಒಮ್ಮೆ ಕೈಲಾಸವಾಸಿ ಶಿವನ ಒಡ್ಡೋಲಗದಲ್ಲಿ ನಾರದ ಪ್ರವೇಶ ಮಾಡಿ ಭೂಮಿಯ ಮೇಲೆ ಶೈವಧರ್ಮ ದುಸ್ಥಿತಿಯಲ್ಲಿದೆ ಎಂದು ವರದಿ ನೀಡುತ್ತಾನೆ. ಚಿಂತಾಕ್ರಾಂತನಾದ ಶಿವನು ಶೈವಧರ್ಮವನ್ನು ಪ್ರಚಾರ ಮಾಡಲು ನಿರ್ಧರಿಸಿ ವಿಶ್ವಾರಾಧ್ಯರಾಗಿ ಭೂಮಿಯ ಮೇಲೆ ಅವತರಿಸಿ ಬರುತ್ತಾರೆ. ವಿಶ್ವರಾಧ್ಯರೆಂದರೆ ಸಾಕ್ಷಾತ್ ಶಿವನೆ. ಇವರು ಶಿವನ ಈಶಾನ್ಯ ಮುಖದಿಂದ ಹುಟ್ಟಿದವರು. ಸೂತ್ರ ಪಂಚವರ್ಣ, ಕಮಂಡಲ ಪಂಚವಟ್ಟಿಗೆ, ಪ್ರವರ ಪಂಚಾಕ್ಷರ, ವರ್ಣ ಅತಿವರ್ಣ, ದಂಡ ಬಿಲ್ವದ್ದು, ಕಮಂಡಲ ಬಂಗಾರದ್ದು, ಬೀಜಾಕ್ಷರ **'ಯ'** ವಿಶ್ವಕರ್ಣ ಶಾಖಾ, ಕಂಥಾ ಬಂಗಾರ ಬಣ್ಣದ್ದು. ಇವೆಲ್ಲವೂ ಕಂದ ಗೋತ್ರದ ಲಕ್ಷಣವು. ಕೃತಯುಗದಲ್ಲಿ ಪಂಚಾಕ್ಷರರೆಂದು, ತ್ರೇತಾಯುಗದಲ್ಲಿ ಪಂಚವಕ್ತ್ರರೆಂದು, ದ್ವಾಪರಯುಗದಲ್ಲಿ ವಿಶ್ವಕರ್ಣ ಮತ್ತು ಇಂದಿನ ಕಲಿಯುಗದಲ್ಲಿ ವಿಶ್ವಾರಾಧ್ಯ ಎಂದು ಕರೆಯಲ್ಪಡುತ್ತಾರೆ. ಮಹಾಶಿವರಾತ್ರಿಯಂದು ಕಾಶಿ ಜಗದ್ಗುರುಗಳಾದ ವಿಶ್ವರಾಧ್ಯರು ವಿಶ್ವೇಶ್ವರ ಲಿಂಗದಲ್ಲಿ ಸದೇಹವಾಗಿ ಉದ್ಭವಿಸುವರು ಎಂದು ಆಗಮಗಳು ಹೇಳುತ್ತಿವೆ ಎಂದು ವೀರಶೈವರ ವಾದ. ಈ ಪೀಠದ ಇನ್ನೊಂದು ಶಾಖಾಮಠ ನೇಪಾಳದ ಕಠ್ಮಂಡುವಿನ ಭಕ್ತಪುರದಲ್ಲಿದೆ ಎಂದೂ ಈ ಮಠದ ವಾದವಾಗಿದೆ.[೧೬]

ಈ ಪಂಚಾಚಾರ್ಯರ ಗೋತ್ರ ಸೂತ್ರಾದಿಗಳು ಭಿನ್ನ ಭಿನ್ನವಾಗಿರುತ್ತವೆ.

In Public domain. Digitization Muthulakshmi Research Academy

ಒಂದೊಂದು ಗೋತ್ರಕ್ಕೆ ಶಾಖಾ ಸೂತ್ರ ಪ್ರವರಾಧಿಗಳು ಬೇರೆ ಬೇರೆ ಇರುತ್ತವೆ. ಯಾವ ಗೋತ್ರಕ್ಕೆ ಯಾವ ಶಾಖಾ, ಯಾವ ಸೂತ್ರ, ಯಾವ ಕಮಂಡಲ, ಯಾವ ಕಂಥಾ, ಯಾವ ದಂಡ ಇರುತ್ತದೆಯೋ ಅವೆಲ್ಲವುಗಳಿಂದ ಕೂಡಿಕೊಂಡಾತನೇ ಗುರುವು. ಇದರಂತೆ ಐದು ಗೋತ್ರಗಳವರಿಗೆ ಅಂಥವರೇ ಗುರುಗಳಾಗುತ್ತಾರೆ. ಇಂಥ ಮುಖ್ಯ ಸೂತ್ರದವರೇ ಗುರು ಪೀಠಾಧಿಕಾರಿಗಳು, ಆರಾಧ್ಯರು, ಮಹಾಚಾರ್ಯರು, ಸಿಂಹಾಸನಾಧಿಪತಿಗಳು ಆಗಿರುತ್ತಾರೆ.[೧೭]

ವೀರಶೈವ ಪಂಚಾಚಾರ್ಯರ ಗುರುಗಳ ಸತ್ಯ ಮಿತ್ಯಗಳು

ಯೋನಿಜ-ಅಯೋನಿಜ: ಪಂಚಾಚಾರ್ಯರು ಶಿಲಾಲಿಂಗದಲ್ಲಿ ಉದ್ಭವವಾಗಲು ವೈದಿಕ ಧರ್ಮ ಶಾಸ್ತ್ರಗಳು, ಪುರಾಣಗಳು ಪರ್ಯಾಯ ಕಾರಣಗಳೆನ್ನಬಹುದು. ಕಾರಣ ಅವರ ಧರ್ಮಸ್ಥಾಪಕ ದೇವಾಂಶಸಂಭೂತನೆಂದು ಅವನನ್ನು ಪರಿಚಯಿಸಬೇಕಾಗಿತ್ತು. 'ಯೋನಿಜ'-'ಅಯೋನಿಜ' ಎಂಬ ಎರಡು ಶಬ್ದಗಳು ವೀರಶೈವ ಸಾಹಿತ್ಯವನ್ನು ಅಪಹಾಸ್ಯಕ್ಕೀಡುಮಾಡಿವೆ. 'ಯೋನಿಜ' ಎಂದರೆ ತಾಯಿಯ ಯೋನಿಯಲ್ಲಿ ಜನಿಸಿದವನು. 'ಅಯೋನಿಜ' ಎಂದರೆ ಸ್ತ್ರೀಯೋನಿಯಲ್ಲಿ ಜನಿಸದೆ ಇರುವವನು. ಹಿಂದೂ ಪುರಾಣಗಳಲ್ಲಿ 'ಯೋನಿಜ'ನೊಬ್ಬ ಸಾಮಾನ್ಯ ಹುಲುಮಾನವ. 'ಅವನು ಅತಿಮಾನುಷನಾಗಲಾರ' ಎಂಬ ನಂಬುಗೆ ಅವರಲ್ಲಿ. ಸಸ್ತನಿಗಳ ಜನನ ತಾಯಿ ಗರ್ಭದಿಂದ ಮಾತ್ರ ಸಾಧ್ಯ ಎನ್ನುತ್ತದೆ ಜೀವಶಾಸ್ತ್ರ. ಪಂಚಾಚಾರ್ಯರ ಮೂಲ ಪುರುಷ ರೇಣುಕರು ಮಾನವರಾಗಿದ್ದರೆ ಅವರು ತಾಯಿಯ ಗರ್ಭದಿಂದ ಜನಿಸಲು ಸಾಧ್ಯ. ಆದರೆ ಅವರನ್ನು ದೇವಾಂಶಸಂಭೂತರು ಎಂದು ಪರಿಗಣಿಸಲು ಅವರ ಹುಟ್ಟನ್ನು ಸಾಮಾನ್ಯ ಜನರ ಹುಟ್ಟನ್ನಾಗಿ ಪರಿಗಣಿಸದೆ ಲಿಂಗದಲ್ಲಿ ಉದ್ಭವವಾದವರು ಎಂದು ವೀರಶೈವ ಸಾಹಿತ್ಯ ಹೇಳುವುದು. ಆದರೆ ಪುರಾಣಗಳಲ್ಲಿ ಒಬ್ಬ ಚರಿತ್ರಕಾರನ ತಂದೆ, ತಾಯಿ, ಊರು, ಜಾತಿ ಮುಂತಾದವುಗಳ ಹಿನ್ನೆಲೆ ನಿಗೂಢವಾದ ಸಮಯದಲ್ಲಿ ಇಲ್ಲವೇ ಅವನ ಜನ್ಮದ ಹಿಂದಿನ ರಹಸ್ಯವನ್ನು ಗುಪ್ತವಾಗಿಡುವ ಪ್ರಸಂಗ ಬಂದಾಗ ಅಂತಹ ವ್ಯಕ್ತಿಯನ್ನು ಕೈಲಾಸದಿಂದ ಬಂದಂತೆ, ಶಿವನ ಆಶೀರ್ವಾದದಿಂದ ಹುಟ್ಟಿದಂತೆ, ಅವತಾರಪುರುಷ ಎಂಬಂತೆ ಚಿತ್ರಿಸುವುದು ರೂಢಿಗತವಾಗಿ ಬಂದಿದೆ. ಅದರಂತೆ ಸಂಸ್ಕೃತ ಭಾಷೆಯ ಸಾಹಿತ್ಯಶೈಲಿಯಲ್ಲಿ ಹೇಳುವಾಗ ಅವನನ್ನು ಅಯೋನಿಜ ಎಂಬ ಪದದಡಿಯಲ್ಲಿ ಬಂಧಿಸಲಾಗುತ್ತದೆ.[೧೮] ವೇದಕಾಲ ಮತ್ತು ನಂತರದ ಕೆಲ ಕಾಲದಲ್ಲಿ ತಮ್ಮ ಸಮಾಜಕ್ಕಿಂತ ಉನ್ನತ ಸಮಾಜದ ಪುರುಷರೊಂದಿಗೆ ಸ್ತ್ರೀ ಸಂಪರ್ಕ ಶ್ರೇಷ್ಠವೆಂದು ನಂಬಲಾಗಿತ್ತು. ಅಂತಹ ಜನನಕ್ಕೆ 'ಅಯೋನಿಜರು' ಎಂಬ ಬಿರುದನ್ನು ನೀಡಿದ್ದರು. ರಾಮಾಯಣ

In Public domain. Digitization Muthulakshmi Research Academy

ಮಹಾಭಾರತದಲ್ಲೂ ಇಂತಹ ಅನೇಕ ದೃಷ್ಟಾಂತಗಳನ್ನು ಉದಾರಿಸಬಹುದು. ಆದರೆ ಅಯೋನಿಜ ಎಂಬುದು ನಾಗರಿಕ ಸಮಾಜದ ಪದವಲ್ಲ. ಐತಿಹಾಸಿಕ ಪುರುಷನಾದ ರೇವಣಸಿದ್ಧ, ಮರುಳಾರಾಧ್ಯ, ಏಕೋರಾಮಾರಾಧ್ಯ, ಪಂಡಿತಾರಾಧ್ಯ, ವಿಶ್ವಾರಾಧ್ಯರಿಗೆ ಈ ಪದ ಶೋಭೆ ತರದು. "ಹುಲುಮಾನವರು ಮನುಷ್ಯರ ಯೋನಿಯಲ್ಲಿ ಜನಿಸಿದರೆಂದು ಹೇಳುವುದು ಕೇಳುವುದು ಕೀಳರಿಮೆ ಎಂಬ ಭಾವನೆ ಬೆಳೆದುಬಂದ ಕಾಲದಲ್ಲಿ ಪವಾಡಪುರುಷರನ್ನು, ಪೀಠಾಧಿಪತಿಗಳನ್ನು, ಗುರುಸ್ಥಾನದಲ್ಲಿರುವವರನ್ನೂ ಸಾಮಾನ್ಯ ಯೋನಿಯಲ್ಲಿ ಪ್ರಕಟ ಪಡಿಸದೆ ಪರಶಿವನ ಲಿಂಗ ಪಾರ್ವತಿಯ ಯೋನಿಯಲ್ಲಿ(ಸ್ಥಾವರಲಿಂಗ) ಪ್ರಕಟಪಡಿಸಲು ಅಂದಿನ ಪುರಾಣಿಕರು ಉತ್ಸುಕರಾಗಿದ್ದರಿಂದ ಗುರು ರೇವಣಸಿದ್ಧನ ಜೀವಿತಕಾಲದಲ್ಲಿ ಈ ಹೊಸ ರೂಢಿಯನ್ನು ಜಾರಿಗೆ ತರಲಾಯಿತು ಎಂದು ಕಂಡುಬಂದರೂ, ಅದು ಮೂಲತಃ ಲಕುಲೀಶರ ಕಾಲದಿಂದಲೇ ರೂಢಿಗೆ ಬಂದಿದೆ ಎಂದು ಹೇಳುವುದು ಉಚಿತ"[೧೯] ಶಿಲೋದ್ಭವರು ಎಂದು ಹೇಳಲು ಕಾರಣ ತಾಯಿಗರ್ಭದಿಂದ ಜನಿಸಿದವನಿಗೆ ದ್ವಿಜ ಸ್ಥಾನ ದೊರೆಯದು ಎನ್ನುತ್ತದೆ ವೈದಿಕ ಶಾಸ್ತ್ರ. ವೇದಗಳ ಯುಗದ ಕೊನೆಯ ಕಾಲದಿಂದಲೇ(ಕ್ರಿ.ಪೂ. ೧೦೦೦ ವರ್ಷ ಹಿಂದೆ) ಪವಿತ್ರ ಮತ್ತು ಅಪವಿತ್ರ ಜನರ ನಡುವಿನ ವ್ಯತ್ಯಾಸಗಳ ಬಗ್ಗೆ ವಿವರಗಳನ್ನು ಪಠ್ಯಗಳಲ್ಲಿ ಕಾಣಿಸುತ್ತಾ ಬಂದಿವೆ. ಹೋಮ ಹವನ ಆಚರಿಸುವ ಹಕ್ಕನ್ನು ಪಡೆದುಕೊಂಡ ಪವಿತ್ರರಿಗೂ ಮತ್ತು ಅಂತಹ ಹಕ್ಕಿನಿಂದ ನಿಷೇಧಿಸಲ್ಪಟ್ಟ ಕೀಳುಜಾತಿ ಶೂದ್ರರಿಗೂ ಇರುವ ವ್ಯತ್ಯಾಸವನ್ನು ಬ್ರಾಹ್ಮಣ್ಯಗಳಲ್ಲಿ ಕಾಣಬಹುದಾಗಿದೆ. ಪವಿತ್ರರಾದ ಜನರನ್ನು 'ದ್ವಿಜ'ರೆಂದು ಪರಿಗಣಿಸಲಾಗಿದೆ. ಏಕೆಂದರೆ ಅವರೆಲ್ಲ ಉಪನಯನದ ಕಾಲದಲ್ಲಿ ಮರುಹುಟ್ಟು ಪಡೆಯುತ್ತಾರೆ. ಶೂದ್ರರಿಗೆ ಮತ್ತು ಮಹಿಳೆಯರಿಗೆ ಇಂತಹ ದೀಕ್ಷೆ ಇರುವುದಿಲ್ಲ. ಇವರೆಲ್ಲಾ ದ್ವಿಜರ ಸೇವೆ ಮಾಡಲು ಇರುವವರು[೨೦]. ವೀರಶೈವರಿಗೆ ದೀಕ್ಷೆ ಅಥವಾ ಪ್ರಥಮೋಪದೇಶ ಕಡ್ಡಾಯವಾಗಿದೆ ಎನ್ನುತ್ತಾರೆ ಡಾ.ಎಸ್.ಸಿ. ನಂದಿಮಠರು. "ದೀಕ್ಷೆಗೆ ಎಲ್ಲ ಶೈವಪಂಥಗಳಲ್ಲಿಯೂ ಮಹತ್ವವಿದೆ. ಆಯಾ ಪಂಥಗಳು ಇಟ್ಟುಕೊಂಡಿರುವ ಕೊನೆಯ ಗುರಿಯನ್ನು ಮುಟ್ಟಲು ದೀಕ್ಷೆ ಅವಶ್ಯವಾಗಿ ಬೇಕು. ಶೈವಸಿದ್ಧಾಂತ ದೀಕ್ಷಾಸಂಸ್ಕಾರಕ್ಕೆ ಹೆಚ್ಚು ಒತ್ತುಕೊಟ್ಟಿದೆ. ವೀರಶೈವ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪ್ರತಿಯೊಬ್ಬನಿಗೂ ದೀಕ್ಷೆಯನ್ನು ಕಡ್ಡಾಯಗೊಳಿಸಲಾಗಿದೆ; ಯಜ್ಞಾರಂಭದ ಮೊದಲು ಯಜಮಾನ ಮತ್ತು ಅವನ ಧರ್ಮಪತ್ನಿ ಇಬ್ಬರೂ ಅವಶ್ಯವಾಗಿ ಪಡೆಯಲೇಬೇಕೆಂಬ ಬ್ರಾಹ್ಮಣ ಗ್ರಂಥಗಳು ಹೇಳುವ ದೀಕ್ಷೆಯಷ್ಟೇ ವೀರಶೈವ ದೀಕ್ಷೆಯೂ ಮಹತ್ವದ್ದಾಗಿದೆ; ವೀರಶೈವ ಸಂಸ್ಕಾರಗಳಲ್ಲಿ ಅಗ್ನಿಯ ಸ್ಥಾನ ಲಿಂಗಕ್ಕಿದೆ. ಪ್ರಾಯಶಃ 'ಲಿಂಗ' ಎಂದರೆ 'ಅಗ್ನಿ' ಎಂದು ಅರ್ಥೈಸಲು ಇದೇ ಕಾರಣವಿರಬೇಕೆನಿಸುತ್ತದೆ. ಇದರಿಂದಾಗಿ ಲಿಂಗ

In Public domain. Digitization Muthulakshmi Research Academy

ಮತ್ತು ಅಗ್ನಿ ಎರಡೂ ಒಂದೇ ಎಂಬ ಭಾವನೆಯಿದೆ. ಇದಕ್ಕಾಗಿಯೇ ಇರಬೇಕು ಕೆಲವು ಜನ ವೀರಶೈವ ಸಂಸ್ಕೃತ ವಿದ್ವಾಂಸರು "ಋಗ್ವೇದದಲ್ಲಿ ಬರುವ ಅಗ್ನಿಪರ ಸ್ತೋತ್ರಗಳನ್ನು ಲಿಂಗಪರವಾಗಿ ಅರ್ಥೈಸುತ್ತ ಲಿಂಗದ ಮೂಲವನ್ನು ಋಗ್ವೇದದ ಮಂತ್ರಗಳಲ್ಲಿ ಗುರುತಿಸಲು ಪ್ರಯತ್ನಿಸುತ್ತಿರುವುದು"[೨೦] ಎನ್ನುತ್ತಾರೆ ವೀರಶೈವರ ಶ್ರೇಷ್ಠ ವಿದ್ವಾಂಸರು.

'ವೇದಕ್ಕೆ ಒರೆ ಕಟ್ಟಿ' ಎಂದು ಹೇಳುವ ಬಸವಣ್ಣನವರ ಅನುಯಾಯಿಗಳು ಆಡುವ ಮಾತುಗಳಿವು. ಅಗ್ನಿ ಆರ್ಯರ ಮೂಲ. ನೀರು ದ್ರಾವಿಡರ ಮೂಲ. ಅಗ್ನಿ ನಾಶದ ಸಂಕೇತ. ನೀರು ಜೀವದ ಸಂಕೇತ. ಅಗ್ನಿ ಸುಡುತ್ತದೆ. ನೀರು ಬೆಳೆಸುತ್ತದೆ. ಲಿಂಗಾಯತವು ಬೆಳೆಸುವ ಧರ್ಮ. ಸುಡುವ ಧರ್ಮವಲ್ಲ. ಇಲ್ಲಿ ಎಲ್ಲರೂ ಸಮಾನರು. ಹೆಣ್ಣೂ ದ್ವಿಜಳೆ, ಶೂದ್ರನೂ ದ್ವಿಜನೆ.

ಪಂಚಾಚಾರ್ಯರ ಏಣಿಶ್ರೇಣಿ ಜಾತಿ: ಏಣಿಶ್ರೇಣಿ ಜಾತಿವ್ಯವಸ್ಥೆಯನ್ನು ಮುರಿದು ಹಾಕಿದ್ದು ಲಿಂಗಾಯತ ಧರ್ಮ. ಲಿಂಗಾಯತ ಧರ್ಮ ಸ್ಥಾಪಕನಾದ ಬಸವಣ್ಣನವರು ಜನ್ಮ ತಾಳಿದ್ದು ಬ್ರಾಹ್ಮಣ ಕುಲದಲ್ಲಿ. ನಾನು ಬ್ರಾಹ್ಮಣನಲ್ಲ ಮಾದಾರ ಚೆನ್ನಯ್ಯನ ಮಗನೆಂದು ಏಣಿಶ್ರೇಣಿ ಜಾತಿಯ ಮೂಲಕ್ಕೆ ತಮ್ಮ ಹುಟ್ಟನ್ನು ಸಹ ದಾಸೋಹ ಮಾಡಿದ್ದರು. ಆದರೇ ಅವರೇ ಸ್ಥಾಪಿಸಿದ ಲಿಂಗಾಯತ ಧರ್ಮವನ್ನು ಹಿಂಬಾಗಿಲಿನಿಂದ ಪ್ರವೇಶಿಸಿದ ವೀರಶೈವರು ಲಿಂಗಾಯತ ಮತ್ತು ವೀರಶೈವ ಪರ್ಯಾಯ ಪದಗಳೆನ್ನುತ್ತ ವೈದಿಕ ಹಾಗೂ ಶೈವಧರ್ಮದ ಸಿದ್ಧಾಂತಗಳನ್ನು ಲಿಂಗಾಯತರ ಮೇಲೆ ಹೇರಿ, ಲಿಂಗಾಯತವನ್ನು ಜಾತಿಯಾಗಿಸಿ ಅದನ್ನು ಹಿಂದೂ ಧರ್ಮದಲ್ಲಿ ದೂಡಿ, ಲಿಂಗಾಯತ ಸಿದ್ಧಾಂತದ ಧರ್ಮಬಾಹಿರ ಕೆಲಸ ಮಾಡುತ್ತಿರುವವರು ಈ ಪಂಚಾಚಾರ್ಯರು. ಪರಶಿವನ ಮುಖಗಳಾದ ಸದ್ಯೋಜಾತ, ಅಘೋರ, ತತ್ಪುರುಷ ಮತ್ತು ಈಶಾನ್ಯ ಮುಖಗಳಿಂದ ಪಂಚಾಚಾರ್ಯರು ಉದ್ಭವವಾದವರು ಎಂದು ಮನುಪ್ರಣೀತ ಸಾಹಿತ್ಯವನ್ನು ಸೃಷ್ಟಿಸುತ್ತಾರೆ. ಮನುವಿನ ಬ್ರಾಹ್ಮಣ ಹೇಗೆ ಶ್ರೇಷ್ಠನೋ ಹಾಗೆಯೆ ಪಂಚಾಚಾರ್ಯರೂ ಶ್ರೇಷ್ಠರೆಂದು ಬಿಂಬಿಸಲು, ೧೫ನೆಯ ಶತಮಾನದಲ್ಲಿ ಅನೇಕ ಸಾಹಿತ್ಯಿಕ, ಧಾರ್ಮಿಕ ಗ್ರಂಥಗಳನ್ನು ರಚಿಸುತ್ತಾರೆ. ಇವರ ಹುಟ್ಟಿನ ಕಥೆ ವೈದಿಕ ಧರ್ಮದ ಮನುಸಿದ್ಧಾಂತದಿಂದ ಪ್ರೇರೇಪಿತವಾದ ಕಥೆ. ಮನುವಿನ ಸಿದ್ಧಾಂತದಲ್ಲಿ ಬ್ರಾಹ್ಮಣನು ಬ್ರಹ್ಮನ ಮುಖದಿಂದ ಹುಟ್ಟಿದವನಾಗಿದ್ದರೆ, ವೀರಶೈವ ಸಿದ್ಧಾಂತದಲ್ಲಿ ಜಂಗಮರು ಶಿವನ ಮುಖದಿಂದ ಉದ್ಭವವಾದವರು.

ಗೋತ್ರ-ಸೂತ್ರ ಲಿಂಗಾಯತ ಧರ್ಮಾವಲಂಬಿಗಳಲ್ಲಿ ಗೋತ್ರ ಸೂತ್ರಗಳಿಲ್ಲ. ವ್ಯತಿರಿಕ್ತವಾಗಿ ಲಿಂಗಾಯತರು-ವೀರಶೈವರು ಒಂದೇ ಎಂದು ಪ್ರತಿಪಾದಿಸುವ ವೀರಶೈವ ಪಂಥದ ಜಂಗಮ ಗುರುಗಳಾದ ಪಂಚಪೀಠಾಧೀಶ್ವರರು ಗೋತ್ರ

In Public domain. Digitization Muthulakshmi Research Academy

ಸೂತ್ರಗಳನ್ನು ಅವಲಂಬಿಸಿದ್ದು, ಇದರಿಂದ ಇವರು ಲಿಂಗಾಯತರಲ್ಲ ಎಂಬುದನ್ನು ಸಿದ್ಧಪಡಿಸುತ್ತದೆ.

ಜಂಗಮಕ್ಕೆ ಮಾತಾಪಿತರಿಲ್ಲ
ಜಂಗಮಕ್ಕೆ ಜಾತಿಬಂಧುಗಳಿಲ್ಲ
ಜಂಗಮಕ್ಕೆ ನಾಮರೂಪಗಳಿಲ್ಲ
ಜಂಗಮಕ್ಕೆ ಸೀಮೆಸಂಗಗಳಿಲ್ಲ
ಜಂಗಮಕ್ಕೆ ಕುಲಗೋತ್ರಗಳಿಲ್ಲ
ಜಂಗಮಕ್ಕೆ ಮಲಮಾಯೆಗಳಿಲ್ಲ
ನೋಡಾ ಅಖಂಡೇಶ್ವರಾ॥

ಎಂದು ಲಿಂಗಾಯತ ಧರ್ಮ ಸ್ಥಾಪಕರಾದ ಶರಣರು ಸಾರಿ ಸಾರಿ ಅನೇಕ ವಚನಗಳಲ್ಲಿ ಹೇಳಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಪಂಚಪೀಠಾಧೀಶ್ವರರು ತಮ್ಮ ಗೋತ್ರ-ಸೂತ್ರಗಳನ್ನು ಬಹಿರಂಗ ಪಡಿಸುತ್ತ, ತಮ್ಮ ಹಿಂಬಾಲಕರಿಗೂ ಗೋತ್ರದ ಲಕ್ಷಣಗಳನ್ನು ಹೇಳುತ್ತ ಸಮಾಜವನ್ನು ಇಬ್ಭಾಗಿಸುವ, ಜಾತಿಯನ್ನು ಬಲಪಡಿಸಿ, ಸಮಾಜವನ್ನು ಇಬ್ಭಾಗಿಸುವ ಕಾಯಕದಲ್ಲಿ ತೊಡಗಿದ್ದಾರೆ.

ಕಾಲ ಮತ್ತು ವಿಸ್ತಾರ : ಯದಾಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ । ಸಂಭವಾಮಿ ಯುಗೇ ಯುಗೇ॥ (ಯಾವ ಯಾವ ಕಾಲದಲ್ಲಿ ಧರ್ಮಕ್ಕೆ ಚ್ಯುತಿ ಬರುವುದೋ ಆಗ ನಾನು ಮತ್ತೆ ಮತ್ತೆ ಅವತರಿಸಿ ಬರುತ್ತೇನೆ) ಎಂದು ಭಗವದ್ಗೀತೆಯಲ್ಲಿ ಕೃಷ್ಣ ಹೇಳುತ್ತಾನೆ. ಅದನ್ನೇ ನಕಲು ಮಾಡಿದ ಪಂಚಾಚಾರ್ಯರು ಕೃತಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗದಲ್ಲಿ ಜನಿಸುತ್ತಾರೆ. ಅವರ ಪುರಾಣಗಳಲ್ಲಿ ಬರೆದಂತೆ ಕೃತಯುಗದ ಕಾಲ ೧೭,೨೮,೦೦೦ ವರ್ಷಗಳು. ತ್ರೇತಾಯುಗದ ಕಾಲ ೧೨,೯೬,೦೦೦ ವರ್ಷಗಳು. ದ್ವಾಪರಯುಗದ ಕಾಲವು ೮,೬೪,೦೦೦ ವರ್ಷಗಳು ಮತ್ತು ಇಂದಿನ ಕಲಿಯುಗದ ಕಾಲವು ೪,೩೨,೦೦೦ ವರ್ಷಗಳು. ಪಾಂಡವರ ಧರ್ಮರಾಜನು ಸ್ವರ್ಗವಾಸದಿಂದ ಹೊರಬಂದ ನಂತರ ಕಲಿಯುಗ ಪ್ರಾರಂಭವಾಗಿದೆ ಎಂದು ನಂಬುತ್ತಾರೆ ಹಿಂದೂ ಧರ್ಮಶಾಸ್ತ್ರಜ್ಞರು. ಅದರಂತೆ ಈಗಾಗಲೇ ಕಲಿಯುಗದ ೫,೧೩೨ ವರ್ಷಗಳು ಗತಿಸಿಹೋಗಿವೆ. ಅಂದರೆ ಈ ನಾಲ್ಕೂ ಯುಗಗಳನ್ನು ಸೇರಿಸಿ ಪಂಚಾಚಾರ್ಯರು ವೀರಶೈವ ಧರ್ಮವನ್ನು ಸ್ಥಾಪಿಸಿ, ಉದ್ಧಾರ ಮಾಡಿದ್ದನ್ನು ಈ ರೀತಿಯಾಗಿ ಹೇಳಬಹುದು: ಕೃತಯುಗದ ೧೭,೨೮,೦೦೦+ ತ್ರೇತಾಯುಗದ ೧೨,೯೬,೦೦೦+ ದ್ವಾಪರಯುಗದ ೮,೬೪,೦೦೦+ ಮತ್ತು ಕಲಿಯುಗದ ವರ್ಷಗಳಲ್ಲಿ ಇಂದಿನವರೆಗೆ ಅಂದರೆ ೫,೧೩೨ ವರ್ಷಗಳು = ೩೮, ೯೩, ೧೩೨ ವರ್ಷಗಳಿಂದ ವೀರಶೈವ ಧರ್ಮವನ್ನು ಸ್ಥಾಪಿಸಿ,

In Public domain. Digitization Muthulakshmi Research Academy

ಆ ಧರ್ಮವನ್ನು ಪ್ರಸಾರ, ಪ್ರಚಾರ ಮಾಡುತ್ತಲೇ ಬಂದಿದ್ದಾರೆ. ವೈಜ್ಞಾನಿಕ ಜಗತ್ತಿನಲ್ಲಿ ಮಾನವನ ಜೀವನ ಪ್ರಾರಂಭವಾಗಿದ್ದು ೪೫,೦೦೦ ವರ್ಷಗಳ ಪೂರ್ವದಲ್ಲಿ ಎನ್ನುತ್ತಾರೆ ಮಾನವಶಾಸ್ತ್ರಜ್ಞರು. ಆದರೂ ಈ ಧರ್ಮ ಕರ್ನಾಟಕದ ಕೆಲ ಜಿಲ್ಲೆಗಳಲ್ಲಿ ಮತ್ತು ನೆರೆಯ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಆಂಧ್ರದಲ್ಲಿ ಒಂದೆರಡು ಜಿಲ್ಲೆಗಳಲ್ಲಿ ಕಾಣಬಹುದು. ಅದಲ್ಲದೆ ಇವರ ಒಟ್ಟು ಶಾಖಾಮಠಗಳ ಸಂಖ್ಯೆಯನ್ನು ಗಮನಿಸಿದರೆ ಈ ಧರ್ಮದ ವ್ಯಾಪ್ತಿಯನ್ನು ನಿರ್ಧರಿಸಬಹುದು. ಈ ಧರ್ಮ ಕರ್ನಾಟಕದ ಉತ್ತರ ಭಾಗದ ಕೆಲ ಜಿಲ್ಲೆಗಳಲ್ಲಿ ಮತ್ತು ನೆರೆಯ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ಒಂದೆರಡು ಜಿಲ್ಲೆಗಳಲ್ಲಿ ಮಾತ್ರ ಕಾಣಬಹುದು. ವೀರಶೈವ ಧರ್ಮದ ಒಟ್ಟು ಶಾಖಾಮಠಗಳ ಸಂಖ್ಯೆ ೫೦೧. ಸಂಖ್ಯೆಯನ್ನು ಕ್ರಿಶ್ಚಿಯನ್ ಧರ್ಮದ ಚರ್ಚ್ ಮತ್ತು ಇಸ್ಲಾಂಧರ್ಮದ ಮಸೀದಿಗಳೊಂದಿಗೆ ತುಲನೆ ಮಾಡಿ ಈ ವೀರಶೈವ ಧರ್ಮದ ಪ್ರಗತಿಯನ್ನು ಗ್ರಹಿಸಬಹುದು ಹಾಗೂ ವ್ಯಾಪ್ತಿಯನ್ನು ನಿರ್ಧರಿಸಬಹುದು. ಎರಡು ಸಾವಿರ ವರ್ಷಗಳ ಇತಿಹಾಸದ ಕ್ರಿಶ್ಚಿಯನ್ ಧರ್ಮದ ಚರ್ಚುಗಳ ಒಟ್ಟು ಸಂಖ್ಯೆ ೩ ಕೋಟಿ ೭೦ ಲಕ್ಷಗಳು, ಒಟ್ಟು ಭಾರತದ ಜನಸಂಖ್ಯೆಯ ಶೇ.೨ ಕ್ರಿಶ್ಚಿಯನ್ನರಿರುವ ಭಾರತದಲ್ಲಿ ಚರ್ಚುಗಳ ಸಂಖ್ಯೆ ೩೪,೪೦೩. ಕೇವಲ ಹದಿಮೂರು ಶತಮಾನಗಳ ಇತಿಹಾಸ ಹೊಂದಿರುವ ಇಸ್ಲಾಂಧರ್ಮದ ಒಟ್ಟು ಮಸೀದಿಗಳ ಸಂಖ್ಯೆ ೩೬ ಲಕ್ಷ. ಆದರೆ ಸುಮಾರು ೩೯ ಲಕ್ಷ ವರ್ಷಗಳ ಇತಿಹಾಸ ಹೊಂದಿದ್ದೇವೆಂದು ಹೇಳುವ, ಯುಗಯುಗಗಳಲ್ಲಿ ಧರ್ಮ ಕಾಪಾಡಲು ಅವತಾರಪುರುಷರಾಗಿ ಜನ್ಮ ತಳೆದು ಬಂದಿದ್ದಾಗಿ ಹೇಳುವ ಪಂಚಾಚಾರ್ಯರ ಧರ್ಮಪ್ರಸಾರದ ಸುಳ್ಳಿನ ಮುಖವಾಡ ಇದರಿಂದ ಬಯಲಾಗುವುದು.

ಅ. ವೀರಶೈವ ಸಾಹಿತ್ಯ: 'ವೀರಶೈವ'–'ಲಿಂಗಾಯತ' ಎರಡು ಭಿನ್ನಪದಗಳಲ್ಲ ಇವು ಪರ್ಯಾಯ ಪದಗಳು' ಎನ್ನುತ್ತಾರೆ ವೀರಶೈವ ವಿದ್ವಾಂಸರು ಮತ್ತು ಕೆಲವು ಜನಪೂಜ್ಯರು. ಇವು ತಾತ್ವಿಕವಾಗಿ ಭಿನ್ನಪದಗಳು ಎನ್ನುತ್ತಾರೆ ಅನೇಕ ವಿದ್ವಾಂಸರು. ಇವೆರಡರ ಸತ್ಯಾಸತ್ಯತೆಯನ್ನು ತಿಳಿಯಲು ಆಕರ ಸಾಮಗ್ರಿಗಳು ಮೂಲವಾಗುತ್ತವೆ. ಲಿಂಗಾಯತ ಸಾಹಿತ್ಯವೆಂದರೆ ವಚನ ಸಾಹಿತ್ಯ. ಈ ಸಾಹಿತ್ಯದ ರಚನೆ ಪ್ರಾರಂಭಗೊಂಡಿದ್ದು ೧೨ನೆಯ ಶತಮಾನದಿಂದ. ಅದರೊಂದಿಗೆ ಇಂದು ಜೋಡಿಸಲ್ಪಟ್ಟಿರುವ ವೀರಶೈವ ಸಾಹಿತ್ಯಕ್ಕೆ ವೇದಕಾಲದ ಐತಿಹಾಸಿಕ ಸತ್ಯವಿದೆಯೆಂದು ವೀರಶೈವರ ನಂಬುಗೆ. ವೀರಶೈವ ಪಂಥದ ಸಿದ್ಧಾಂತಕ್ಕೆ ಆಗಮಗಳೇ ಮೂಲ ಎನ್ನುತ್ತಾರೆ. ಇವು ವೇದಕಾಲದಷ್ಟೇ ಪ್ರಾಚೀನ. ವೈದಿಕ ಧರ್ಮದ ಸ್ಮೃತಿಗಳಂತೆ ವೀರಶೈವರ ಆಗಮಗಳನ್ನು ಚಾಲನೆಗೆ ತಂದರು. ವೈದಿಕರ ಅಥವಾ ಆರ್ಯರ ಋಷಿಗಳು ದೇವವಾಣಿಯನ್ನು ಕೇಳಿಸಿಕೊಂಡು

In Public domain. Digitization Muthulakshmi Research Academy

ಶ್ರುತಿಗಳನ್ನು ಕಿವಿಯಿಂದ ಕಿವಿಗೆ ಪ್ರಚಾರ ಮಾಡುತ್ತ, ಅವುಗಳನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುತ್ತ ತಲೆತಲಾಂತರದಿಂದ ವರ್ಗಾಯಿಸಿಕೊಳ್ಳುತ್ತ ಬಂದಂತೆ ಆಗಮಗಳೂ ವೇದಕಾಲದ ಪೂರ್ವದಲ್ಲಿ ಶಿವನಿಂದ ಶಿವೆಗೆ ಉಪದೇಶಿಸಲ್ಪಟ್ಟದ್ದೆಂದು ವೀರಶೈವರ ಸಾಹಿತ್ಯ ಹೇಳುತ್ತದೆ. ವೇದಗಳಲ್ಲಿ ಯಜ್ಞಯಾಗಾದಿಗಳನ್ನು ಮಾಡುವ ವಿಧಿವಿಧಾನ ಚರ್ಚಿಸಿದಂತೆ ಆಗಮಗಳಲ್ಲಿ ದೇವರ ಗುಣ ರೂಪ, ವಿಗ್ರಹಾರಾಧನೆ, ದೇವಾಲಯಗಳ ನಿರ್ಮಾಣ, ಪ್ರತಿಷ್ಠಾಪನೆ, ದೇವತಾ ಅರ್ಚನೆ, ಅವುಗಳೊಂದಿಗೆ ಸಾಮಾಜಿಕ ನ್ಯಾಯ ನೀತಿಗಳನ್ನು ಚರ್ಚಿಸಿವೆ. ಭಕ್ತನ ದೇಹವೇ ದೇವಾಲಯ, ಅಗಮ್ಯ ಆಗೋಚರ ದೇವರನ್ನು ಕಂಡ ಬಸವಣ್ಣನವರ ಲಿಂಗಾಯತ ಸಿದ್ಧಾಂತ ಒಂದು ಕಡೆಗಿದ್ದರೆ, ದೇವರು, ಅವನ ಗುಡಿ ನಿರ್ಮಾಣ, ದೇವನ ಪೂಜೆ, ಅವನ ಪ್ರತಿಷ್ಠಾಪನೆ, ಉತ್ಸವ, ಅರ್ಚನೆ ಆರಾಧನೆ ಮಾಡುವ ಬಗ್ಗೆ ಆಗಮಗಳು ಹೇಳುತ್ತವೆ. ಪುರೋಹಿತರು ಮಾಡುವ ಧಾರ್ಮಿಕ ಆಚರಣೆಗಳನ್ನು ಶಿವಭಕ್ತರು ತಾವೇ ಮಾಡಿದ ಉಲ್ಲೇಖ ಹರಿಹರನ ರಗಳೆಗಳಲ್ಲಿವೆ.[೨೧] ಹೀಗಿರುವಾಗ ಲಿಂಗಾಯತ ಮತ್ತು ವೀರಶೈವಕ್ಕೆ ಒಂದಕ್ಕೊಂದು ಪೂರಕವಾಗಲು ಹೇಗೆ ಸಾಧ್ಯ? ಲಿಂಗಾಯತವು ವೀರಶೈವ ಪರ್ಯಾಯ ಶಬ್ದವಾಗಲು ಹೇಗೆ ಸಾಧ್ಯ? ಅನೇಕ ವಿದ್ವಾಂಸರು ಆಗಮಗಳೇ ಕೃತ್ರಿಮ ಸೃಷ್ಟಿ ಎಂದು ಅಭಿಪ್ರಾಯಪಡುತ್ತಾರೆ. ಮೇಲಾಗಿ ವೀರಶೈವವಾದಿಗಳು ಅವುಗಳ ಲಭ್ಯತೆಯ ದಾಖಲೆ ಒದಗಿಸಲು ವಿಫಲವಾಗಿದ್ದಾರೆ.

ಆ. ಇನ್ನು ವೀರಶೈವರ ಸಂವಿಧಾನವೆಂದು ಪರಿಗಣಿತವಾಗಿರುವ 'ಸಿದ್ಧಾಂತ ಶಿಖಾಮಣಿ'ಯೇ ಒಂದು ಕಲ್ಪಿತ ಮತ್ತು ವಿರೋದಾಭಾಸಗಳಿಂದ ಕೂಡಿದ ಗ್ರಂಥವೆಂದು ವಿದ್ವಾಂಸರು ಸಾಬೀತುಪಡಿಸಿದ್ದಾರೆ. ಅದೊಂದು ೧೪–೧೫ನೆಯ ಶತಮಾನದಲ್ಲಿ ರಚಿತವಾದ ಗ್ರಂಥವೆಂದು ಬಹುತೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಸಿದ್ಧಾಂತ ಶಿಖಾಮಣಿಯ ೧೨೦೦ ಶ್ಲೋಕಗಳಲ್ಲಿ, ಕೆಲವು ಶ್ಲೋಕಗಳನ್ನು ವಿಶ್ಲೇಷಕರು ಅನ್ಯ ಗ್ರಂಥಗಳಲ್ಲಿ ಕಂಡಿದ್ದಾರೆ. ಯಾವ ಯಾವ ಗ್ರಂಥದಿಂದ ಯಾವ ಯಾವ ಶ್ಲೋಕಗಳನ್ನು ಕದಿಯಲಾಗಿದೆಯೆಂದು ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು ದೊಡ್ಡ ಪಟ್ಟಿಯನ್ನು ನೀಡುತ್ತಾರೆ.[೨೨] 'ಸಿದ್ಧಾಂತಕ್ಕೆ ಸಂಬಂಧಪಟ್ಟ ಎಲ್ಲ ಶ್ಲೋಕಗಳು ಕಡ ತಂದ (barrow) ಸಾಮಗ್ರಿಯೇನೋ ಎಂಬ ಭಾವನೆ ಹುಟ್ಟುತ್ತದೆ' ಎನ್ನುತ್ತಾರೆ ವಿದ್ವಾಂಸರಾದ ಡಾ.ಎಂ.ಎಂ. ಕಲಬುರ್ಗಿಯುವರು.[೨೩] ಸಿದ್ಧಾಂತ ಶಿಖಾಮಣಿಯುನ್ನು ಕೂಲಂಕಷವಾಗಿ ಅಭ್ಯಾಸ ಮಾಡಿದ ಚಾರ್ಲ್ಸ್ ಫಿಲಿಪ್ ಬ್ರೌನರು "ಸಂಸ್ಕೃತ ಶ್ಲೋಕಗಳಲ್ಲಿ ಬರೆಯಲ್ಪಟ್ಟ ಸಿದ್ಧಾಂತ ಶಿಖಾಮಣಿ ಗ್ರಂಥವು ಪೌರಾಣಿಕ ಗ್ರಂಥವಾಗಿದ್ದು ನಂಬಲರ್ಹವಾಗಿಲ್ಲ"[೨೪]ಎನ್ನುತ್ತಾರೆ. ಕಲ್ಯಾಣಕ್ರಾಂತಿಯಾದ ಮೇಲೆ ವೀರಶೈವವು ತನ್ನ ಜಡತ್ವವನ್ನು ಕೊಡವಿಕೊಂಡು ಲವಲವಿಕೆಯಿಂದ

In Public domain. Digitization Muthulakshmi Research Academy

ಮೇಲೆದ್ದುದು ವಿಜಯನಗರದ ಅಮಾತ್ಯರಾದ ಲಕ್ಕಣ ದಂಡೇಶನ ಕಾಲದಲ್ಲಿಯೇ. ಪ್ರೌಢದೇವರಾಯನ ಕಾಲದಲ್ಲಿ(ಕ್ರಿ.ಶ.೧೪೨೪-೧೪೪೬) ವೀರಶೈವ ಧರ್ಮ ಪುನರುಜ್ಜೀವನಗೊಂಡಿತು. ಲಕ್ಕಣ್ಣದಂಡೇಶ ತನ್ನ ಕೃತಿಯಲ್ಲಿ ಶಿವಶರಣರ ಚರಿತ್ರೆಯ ಜೊತೆಗೆ ವೀರಶೈವನಾದವನಿಗೆ ತಿಳಿಯಬೇಕಾದ ಸರ್ವವಿಷಯಗಳನ್ನು ತಿಳಿಸಿದನು; ಇವನ ಕಾವ್ಯಗಳನ್ನು ಗಮನಿಸಿದಾಗ ಅವು ತನ್ನ ಪಾಂಡಿತ್ಯ ಪ್ರದರ್ಶನ ಮಾಡಲು ಬಯಸದೆ ಧರ್ಮಪ್ರಸಾರ ಹಾಗೂ ಧರ್ಮ ಪ್ರಚಾರಕ್ಕಾಗಿ ಬರೆದ ಎಂಬುದು ವೇದ್ಯವಾಗುತ್ತದೆ.[೨೫]

ಇ. ವೀರಶೈವ-ಲಿಂಗಾಯತ ಕಲಬೆರಕೆ: ಲಿಂಗಾಯತ ಹಾಗೂ ವೀರಶೈವ ಪದಗಳು ವಚನ ಸಾಹಿತ್ಯದಲ್ಲಿ ಬಳಕೆಯಾದ ಬಗ್ಗೆ ಅಂಕಿ ಅಂಶಗಳನ್ನು ನೀಡುತ್ತ, ಲಿಂಗಾಯತವನ್ನು ವೀರಶೈವಕ್ಕೆ ಸೇರಿಸಿಕೊಂಡು ಹಿಂದೂ ಸಾಮ್ರಾಜ್ಯದ ಅಂಗವೆಂದು ಪ್ರತಿಪಾದಿಸುತ್ತಿದೆ ವೈದಿಕ ಧರ್ಮ. ವಾಸ್ತವವಾಗಿ ವಚನಗಳಲ್ಲಿ 'ವೀರಶೈವ ಶಬ್ದ'ವೇ ಇರಲಿಲ್ಲ. ಅವುಗಳನ್ನು ಬಸವೋತ್ತರ ಕಾಲದಲ್ಲಿ ಸೇರಿಸಲಾಗಿದೆ ಎನ್ನುತ್ತ ವೈಜ್ಞಾನಿಕವಾದ ಮಂಡಿಸುತ್ತಾರೆ. ಡಾ. ವೀರಣ್ಣ ರಾಜೂರ ಮತ್ತು ಅವರ ತಂಡ. ಬಸವಣ್ಣನವರ ನಂತರ ಬಂದ ಮೊದಲ ಸಾಹಿತ್ಯವೇ ಹರಿಹರನ ರಗಳೆಗಳು. ಅಲ್ಲಿ ವೀರಶೈವ ಪದಬಳಕೆ ಇಲ್ಲ. ಆದರೆ ಅಲ್ಲಿ ಲಿಂಗಾಯತ ಪದ ಬಳಕೆಯಾಗಿದೆ. ಬಸವಣ್ಣನ ಮಗನಾದ ಶಿಸು ಸಿದ್ದರಸನು 'ಹೊಂಗಡದ ಲಿಂಗವಂತ'ನಾಗಿದ್ದ. ಮಹಾದೇವಿಯು 'ಹೊಂಗಡದ ಲಿಂಗವಂತೆ'ಯಾಗಿದ್ದಳು ಎಂದು 'ಲಿಂಗವಂತ' ಶಬ್ದ ಪ್ರಯೋಗ ಮಾಡಿದ್ದನು ಹರಿಹರ.[೨೬] ಇದರ ಬಗ್ಗೆ ವಿಸ್ತಾರವಾಗಿ ಸಂಶೋಧನೆ ಮಾಡಿದ್ದ ಡಾ.ಎಂ.ಎಂ.ಕಲಬುರ್ಗಿಯವರು ಇದಕ್ಕೆ ಉತ್ತರವಾಗಿ ವೀರಶೈವವಾದಿಗಳಿಗೆ ಕೆಲ ಪ್ರಶ್ನೆ ಕೇಳಿದ್ದಾರೆ ಅವುಗಳಿಂತಿವೆ.

೧. 'ವೀರಶೈವ' ಶಬ್ದ ಹೆಚ್ಚಿನ ವಚನಗಳಲ್ಲಿದೆ. ಷಟ್ಸ್ಥಲ ವಚನ ಕಟ್ಟುಗಳಲ್ಲಿ ಇಲ್ಲವೇಕೆ?

೨. ಹೆಚ್ಚಿನ ವಚನಗಳಲ್ಲಿ ಕಂಡುಬರುವ ವೀರಶೈವ ಶಬ್ದಕ್ಕೆ ಕೆಲವೊಮ್ಮೆ ಕಂಡುಬರುವ ಭಿನ್ನಪಾಠಗಳು ವೀರಶೈವ ಶಬ್ದಕ್ಕೆ ಪ್ರಾಚೀನತೆ ಕಲ್ಪಿಸಲು ಧೂರ್ತರು ಮಾಡಿದ ಹುನ್ನಾರವೆನಿಸುವುದಿಲ್ಲವೆ?

೩. ಒಂದು ವೇಳೆ ೧೨ನೆಯ ಶತಮಾನದ ವಚನಗಳಲ್ಲಿ ವೀರಶೈವ ಪದ ಬಳಕೆಯಾಗಿದೆ ಎಂದು ಇಟ್ಟುಕೊಂಡರೂ, ೧೩ನೆಯ ಶತಮಾನದ ಪ್ರಸಿದ್ಧ ಕವಿಗಳಾದ ಹರಿಹರಾದಿ ಸಾಹಿತ್ಯದಲ್ಲಿ ಲಿಂಗವಂತ ಶಬ್ದವಿದೆಯೇ ಹೊರತು ವೀರಶೈವ ಶಬ್ದ ಏಕೆ ಇಲ್ಲ?

೪. ಇದೇ ಕಾಲದ ಕೆರೆಯ ಪದ್ಮರಸನ 'ದೀಕ್ಷಾಭೋಧೆ' ಎಂಬ ಮಹತ್ವದ

In Public domain. Digitization Muthulakshmi Research Academy

ಶಾಸ್ತ್ರ ಕೃತಿಯಲ್ಲಿ 'ಲಿಂಗಾಯತ' ಶಬ್ದವಿದೆಯೇ ಹೊರತು ವೀರಶೈವ ಶಬ್ದವೇಕಿಲ್ಲ?

೫. ಇವರ ತರುವಾಯ ತೆಲುಗು ಬಸವಪುರಾಣದಲ್ಲಿ ಮಾಹೇಶ್ವರ, ವೀರಮಾಹೇಶ್ವರ, ಲಿಂಗವಂತ ಶಬ್ದಗಳಿವೆ ಹೊರತು ವೀರಶೈವ ಶಬ್ದವೇಕಿಲ್ಲ?[೨೭]

ಇವೆಲ್ಲ ಪ್ರಶ್ನೆಗಳಿಗೆ ಸಮರ್ಪಕವಾದ, ಸಾಕ್ಷ್ಯಾಧಾರಗಳ ಸಮೇತ ಉತ್ತರ ನೀಡಲು ವೀರಶೈವವಾದಿ ವಿದ್ವಾಂಸರು ವಿಫಲವಾಗಿದ್ದಾರೆ. ವೀರಶೈವ-ಲಿಂಗಾಯತ ಒಂದೇ ಅಲ್ಲ ಎಂಬ ವಾದವನ್ನು ಹಾಲಭಾವಿ ವೀರಭದ್ರಪ್ಪ, ಎಸ್.ಎಸ್.ಬಸವನಾಳ, ಎಂ.ಆರ್.ಸಾಖರೆ, ಡಾ.ಎನ್.ಜಿ.ಮಹದೇವಪ್ಪ ಖಡಾಖಂಡಿತವಾಗಿ ಅಲ್ಲಗಳೆದಿದ್ದಾರೆ. ವೀರಶೈವರು ಹಾಗೂ ಲಿಂಗಾಯತರು ಬೇರೆ ಬೇರೆ ಎಂದು ವಾದಿಸಿ ಸಾಕ್ಷಿ ಸಮೇತ ನಿರೂಪಿಸಿ ಸಿದ್ಧಪಡಿಸಿದ್ದಾರೆ. ಬಸವೋತ್ತರ ಕಾಲದಲ್ಲಿ ವೀರಶೈವ ಶಬ್ದವನ್ನು ತುರುಕಿ ವೀರಶೈವ ಪಂಥವು ಬಸವಣ್ಣನವರಿಗಿಂತ ಪೂರ್ವದಲ್ಲಿತ್ತು. ಲಿಂಗವಂತರು ಸಹ ವೀರಶೈವರು ಎಂದು ಸಾಧಿಸಲು ಮಾಡಿದ ಕಲಬೆರಕೆ ಸಾಹಿತ್ಯ ಎನ್ನಬಹುದು. ವೀರಶೈವ ಪದದ ಪ್ರಾಚಿನತೆಯ ಬಗ್ಗೆ ಬೆಳಕು ಚೆಲ್ಲುತ್ತಾರೆ K. Lalitamba ಎಂಬ ಆಂಧ್ರಪ್ರದೇಶದ ಸಂಶೋಧಕಿ. Palakuriki Somanath was the earliest, to use the word 'Veershaiv' in Andhra. In his 'CHATURVEDA SARAM' Somanatha describes Lord HARI as VEERSHAIVA, because the latter performed certain heroic deeds, such as offering his own eyes to Shiva, as a token of deep devotion. In Basava Puranam however, he appears to have given deeper meaning to Veershaiva, though the word was not actually used. ಬಸವಣ್ಣನವರು ಲಿಂಗದಲ್ಲಿ ಲೀನವಾದ ನಂತರ (೧೧೬೮) ಸುಮಾರು ಎರಡುನೂರು ವರ್ಷಗಳ ಕಾಲದ (೧೩೬೮)ರವರೆಗೆ ವೀರಶೈವ ಪದವಿದ್ದರೆ ಅದೇಕೇ ಬಳಕೆಯಾಗಲಿಲ್ಲ? ಎಂಬ ವಿದ್ವಾಂಸರ ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡಲು ಅಸಮರ್ಥರಾಗಿದ್ದರು ಖ್ಯಾತನಾಮ ಸಂಶೋಧಕರಾದ ಡಾ. ಆರ್.ಸಿ. ಹಿರೇಮಠ, ಡಾ.ಚಿದಾನಂದ ಮೂರ್ತಿ. ಡಾ.ಎಸ್.ಸಿ.ನಂದಿಮಠ, ಡಾ.ಎಸ್.ವಿದ್ಯಾಶಂಕರ, ಡಾ.ಸವದತ್ತಿಮಠ, ಮತ್ತಿತರರು.

ಈ. ಪಂಚಾಚಾರ್ಯರ ಮೂಲದವರು ಬಸವಣ್ಣನವರ ಸಮಕಾಲೀನ ಶರಣರು. ವೀರಶೈವರ ಗುರುಪೀಠದ ಪಂಚಪೀಠಾಧೀಶ್ವರರು ತಮ್ಮ ಮೂಲಿಗರ ಇತಿಹಾಸವನ್ನು ಕೃತಯುಗಕ್ಕೆ ತಳ್ಳಿದರೂ ಅದು ಸಂಶೋಧನೆಗೆ ಒಳಪಟ್ಟಾಗ ಅದೊಂದು ಸತ್ಯವಾದ ಸಾಹಿತ್ಯವಲ್ಲವೆಂದು ಸ್ಪಷ್ಟವಾಗಿ ಬೆಳಕಿಗೆ ಬರುತ್ತದೆ.

In Public domain. Digitization Muthulakshmi Research Academy

ಹನ್ನೆರಡನೆಯ ಶತಮಾನದ ಶರಣರಲ್ಲಿ ಒಬ್ಬರಾದ ಹಾವಿನಾಳ ಕಲ್ಲಯ್ಯನವರ ಒಂದು ವಚನದಲ್ಲಿ ಅಂದಿನ ಶರಣರನ್ನು ನೆನೆಯುತ್ತ ನುಡಿದಿರುವ ಒಂದು ವಚನದಲ್ಲಿ ಶಂಕರ ದಾಸಿಮಯ್ಯನನ್ನು, ಉರಿಲಿಂಗ ಪೆದ್ದಿಯನ್ನು, ಘಟ್ಟಿವಾಳ ಮುದ್ದಯ್ಯನನ್ನು ಅಜಗಣ್ಣನನ್ನು, ನಿಜಗುಣದೇವರನ್ನು, ಅನಿಮಿಷದೇವರನ್ನು, ಸಿದ್ಧರಾಮೇಶ್ವರರನ್ನು, ಪ್ರಭುದೇವರನ್ನು, ಚನ್ನಬಸವಣ್ಣನನ್ನು, ಸಂಗನಬಸವಣ್ಣನನ್ನು, ಮಡಿವಾಳಯ್ಯನನ್ನು, ಸೊಡ್ಡಳ ಬಾಚರಸರನ್ನು, ಹಡಪದ ಅಪ್ಪಣ್ಣನನ್ನು, ಕಿನ್ನರ ಬೊಮ್ಮಯ್ಯನನ್ನು ಗಣಂಗಳೆಂದು ಕರೆಯುತ್ತ ಇವರೊಂದಿಗೆ ನಾಲ್ವರು ಶರಣರಾದ (ಇಂದು ಪಂಚಾಚಾರ್ಯರ ಮೂಲಪುರುಷರರೆಂದು ಹೇಳಿಕೊಳ್ಳುತ್ತಲಿರುವ ಏಕೋರಾಮಿತಂದೆಯನ್ನು, ಪಂಡಿತಾರಾಧ್ಯರನ್ನು, ರೇವಣಸಿದ್ಧದೇವರನ್ನು, ಮರುಳಸಿದ್ಧೇಶ್ವರರನ್ನು ನೆನೆಯುತ್ತಾನೆ.

ಎನ್ನ ಪ್ರಾಣದಲ್ಲಿ ಸ್ವಾಯತವಾದನಯ್ಯಾ ಏಕೋರಾಮಿತಂದೆಗಳು।
ಎನ್ನ ಜಿಹ್ವೆಯಲ್ಲಿ ಸ್ವಾಯತವಾದನಯ್ಯಾ ಪಂಡಿತಾರಾಧ್ಯರು।
ಎನ್ನ ನೇತ್ರದಲ್ಲಿ ಸ್ವಾಯತನಾದನಯ್ಯಾ ರೇವಣಸಿದ್ಧದೇವರು।
ಎನ್ನ ಶ್ರೋತ್ರದಲ್ಲಿ ಸ್ವಾಯತನಾದನಯ್ಯಾ ಮರುಳ ಸಿದ್ದದೇವರು।[೨೮]

ಎಂದು ಚತುರಾಚಾರ್ಯರನ್ನು ಕೊಂಡಾಡುತ್ತಾನೆ. ವಾಸ್ತವದಲ್ಲಿ ಹನ್ನೆರಡನೆಯ ಶತಮಾನಕ್ಕಿಂತ ಪೂರ್ವದಲ್ಲಿ ಚತುರಾಚಾರ್ಯರು ಅಥವಾ ಪಂಚಾಚಾರ್ಯರು ಇರಲಿಲ್ಲ. ಅವರು ಕೂಡ ಏಳನೂರಾ ಎಪ್ಪತ್ತು ಶರಣರಲ್ಲಿದ್ದವರು. ಅವರು ಕೂಡ ಲಿಂಗವಂತ ಧರ್ಮಸ್ಥಾಪಕರು. ರೇವಣಸಿದ್ಧರು ಬಸವಣ್ಣನವರ ಹಿರಿಯ ಸಮಕಾಲೀನರು ಎಂದು ಹೇಳಲ್ಪಟ್ಟಿದೆ. ಪಂಡಿತಾರಾಧ್ಯರು ಬಸವಣ್ಣನವರ ಆರಾಧಕರು. ಅವರ ಭೇಟಿಗಾಗಿಯೇ ಶ್ರೀಶೈಲದಿಂದ ಬಂದವರು. ಕಲ್ಯಾಣದಲ್ಲಿ ಅಣ್ಣನಿಲ್ಲವೆಂದಾಗ ಪರಿತಪಿಸಿ ಮರಳಿದವರು. ಮರುಳಸಿದ್ಧರು ಉಜ್ಜಯಿನಿ ಗುರುಪೀಠವನ್ನು ಸ್ಥಾಪಿಸಿದವರು. ಏಕೋರಾಮಾರಾಧ್ಯರು ರೇವಣಸಿದ್ಧರ ಸಮಕಾಲೀನರು ಮತ್ತು ಅವರ ಅನುಯಾಯಿಗಳು. ಲಿಂಗವಂತ ಸಿದ್ಧಾಂತವನ್ನು ಕರ್ನಾಟಕದ ಆಚೆ ಪ್ರಚಾರ, ಪ್ರಸಾರ ಮಾಡಿದವರು.

ದ್ವಾಪರಯುಗದ ರೇಣುಕರು ಶ್ರೀಲಂಕೆಯಲ್ಲಿ ಮೂರು ಕೋಟಿ ಲಿಂಗ ಸ್ಥಾಪಿಸಿದ್ದು; ಲಂಕಾಧಿಪತಿ ರಾವಣ ಶಿವಭಕ್ತ. ಅವನು ತನ್ನ ಆರಾಧ್ಯದೈವ ಶಿವನ ಆರು ಕೋಟಿ ಲಿಂಗ ಸ್ಥಾಪಿಸುವ ಸಂಕಲ್ಪ ಕೈಗೊಳ್ಳುತ್ತಾನೆ. ಸಂಕಲ್ಪದಂತೆ ಮೂರು ಕೋಟಿ ಲಿಂಗಗಳನ್ನು ಸ್ಥಾಪಿಸಿದ್ದ. ಅದೇ ಸಮಯದಲ್ಲಿ ರಾಮನೊಂದಿಗೆ ನಡೆದ ಯುದ್ಧದ ಪರಿಣಾಮದಿಂದ ಲಿಂಗ ಸ್ಥಾಪಿಸುವ ಗುರಿ ಮುಟ್ಟಲಾಗಲಿಲ್ಲ. ರಾಮ-ರಾವಣರ ಯುದ್ಧದಲ್ಲಿ ಗಾಯಗೊಂಡ ರಾವಣ ಮರಣಶಯ್ಯೆಯಲ್ಲಿದ್ದಾಗ

In Public domain. Digitization Muthulakshmi Research Academy

ತನ್ನಿಚ್ಛೆಯಾದ ಇನ್ನುಳಿದ ಮೂರು ಕೋಟಿ ಲಿಂಗಗಳನ್ನು ಸ್ಥಾಪಿಸಲು ತಮ್ಮನಾದ ವಿಭೀಷಣನಿಗೆ ಕೇಳಿಕೊಳ್ಳುತ್ತಾನೆ. ವಿಭೀಷಣ ಅಣ್ಣನ ಆಸೆ ಈಡೇರಿಸುವುದಾಗಿ ಮಾತು ಕೊಡುತ್ತಾನೆ. ಆದರೆ ಮೂರು ಕೋಟಿ ಲಿಂಗಗಳನ್ನು ಸ್ಥಾಪಿಸುವಲ್ಲಿ ಅವನು ಅಸಹಾಯಕನಾಗುತ್ತಾನೆ. ಅಗ ಅವನ ಸಹಾಯಕ್ಕೆ ವೀರಶೈವ ಪಂಥ ಸ್ಥಾಪಕರಾದ ರೇಣುಕರು ಬರುತ್ತಾರೆ. ಅವರು ಶ್ರೀಲಂಕೆಗೆ ತೆರಳಿ ಏಕಕಾಲದಲ್ಲಿ ಮೂರು ಕೋಟಿ ಲಿಂಗಗಳನ್ನು ಸ್ಥಾಪಿಸುತ್ತಾರೆ ಎನ್ನುತ್ತದೆ ಸಿದ್ಧಾಂತ ಶಿಖಾಮಣಿ. ಇದರ ಸತ್ಯಾಸತ್ಯತೆಯನ್ನು ಸಂಶೋಧನೆ ಮಾಡುವುದು ಸಂಶೋಧಕರ ಕರ್ತವ್ಯ. ವಿದ್ವಾಂಸ ಡಾ.ಟಿ.ಜಿ.ಸಿದ್ಧಪ್ಪರಾಧ್ಯ ಎಂಬುವವರು ತಮ್ಮ ಗ್ರಂಥ 'ಶೂನ್ಯಪೀಠ ಪ್ರಭಾವ'ದಲ್ಲಿ ಪ್ರಸ್ತಾಪಿಸುತ್ತ ರಾಮಾಯಣದಲ್ಲಿ ಇದರ ಉಲ್ಲೇಖವಿಲ್ಲ ಎಂಬುವವರನ್ನೇ ಟೀಕಿಸುತ್ತಾರೆ. ಅವರು ಬರೆಯುತ್ತಾರೆ; "ರಾವಣನ ವಧೆಯಾಗುವಾಗ ಅವನು ತನ್ನ ತಮ್ಮನಿಗೆ ಹೇಳಿದ ಮಾತು ರಾಮಾಯಣದಲ್ಲಿಯೇ ವಾಸ್ತವವಾಗಿ ಬರಬೇಕಾಗಿತ್ತು. ಅದರೆ ಅಲ್ಲಿ ಬರುವುದೇ ಇಲ್ಲ. ಹೀಗೆ ಕೆಲವು ಘಟನೆಗಳು ವಾಸ್ತವವಾಗಿ ನಡೆದಿದ್ದರೂ ಸಹ ಅವು ಪ್ರಮಾಣ ಗ್ರಂಥಗಳಲ್ಲಿ ಸೇರಿಯೇ ಇಲ್ಲ. ಆಗ ರೇಣುಕರು ಲಂಕೆಯಲ್ಲಿ ಸ್ಥಾಪಿಸಿದ ಲಿಂಗಗಳು ಇಂದು ಸಿಲೋನ್‌ನಲ್ಲಿ ಭೂಗರ್ಭ ಶೋಧನೆಯಿಂದ ಕಂಡುಬರುತ್ತವೆ"[೨೮] ಎನ್ನುತ್ತಾರೆ. ಒಂದು ಬದಿಯಲ್ಲಿ ರಾಮಾಯಣ ಗ್ರಂಥವು ಐತಿಹಾಸಿಕ ಗ್ರಂಥವೆಂದು ಪ್ರಮಾಣೀಕರಿಸುವ, ಮೇಲಾಗಿ ವೀರಶೈವ ಧರ್ಮವು ಹಿಂದೂಧರ್ಮದ ಒಂದು ಭಾಗ ಎನ್ನುವ ಜಂಗಮ ಸಮಾಜದ ಡಾಕ್ಟರೇಟ್ ಪಡೆದ ಒಬ್ಬ ವಿದ್ವಾಂಸರು ಇಂತಹ ಅನೇಕ ಸುಳ್ಳುಗಳಿಂದ ತುಂಬಿರುವ ವೀರಶೈವ ಸಾಹಿತ್ಯವನ್ನು ಸಂಶೋಧಿಸಿ, ದೃಢೀಕರಿಸಬೇಕಾದ ವಿದ್ವಾಂಸರು ಸ್ವಜಾತಿ ಪ್ರಭಾವಕ್ಕೆ ಒಳಗಾಗಿ ಇತಿಹಾಸಕ್ಕೆ, ಧರ್ಮಕ್ಕೆ ಅಪಚಾರ ಮಾಡುತ್ತಿದ್ದಾರೆ.

ಬೀಜಮಂತ್ರದ ರಹಸ್ಯ: ರಂಭಾಪುರಿ ಪೀಠದ ಬೀಜಮಂತ್ರ 'ನ'. ಉಜ್ಜಯನಿ ಪೀಠದ **'ಮ'**. ಕೇದಾರ ಪೀಠದ **'ಶಿ'**. ಶ್ರೀಶೈಲ ಪೀಠದ **'ವಾ'** ಮತ್ತು ಕಾಶಿ ಪೀಠದ **'ಯ'**. ಇವೆಲ್ಲ ಬೀಜಮಂತ್ರವು ಒಟ್ಟಾದಾಗ **"ನಮಶಿವಾಯ"**ವಾಗುವುದು. ಪಂಚಾಕ್ಷರಿ ಮಂತ್ರ 'ನಮ ಶಿವಾಯ' ಶಿವನಿಗೆ ನಮಸ್ಕರಿಸುವ ಶಬ್ದಕ್ಕೆ "ಬೀಜಮಂತ್ರ"ವೆಂದು ಸಾಮಾನ್ಯರಿಗೆ ತಿಳಿಯದಂತೆ ಗೌಪ್ಯವಾಗಿರುವ ಮಂತ್ರವನ್ನು ಲಿಂಗಧಾರಣೆ ಮಾಡುವ ಸಮಯದಲ್ಲಿ ಗುರುವಾದವನು ಲಿಂಗ ಧರಿಸಿದ ಶಿಷ್ಯನ ಕರ್ಣದಲ್ಲಿ ನಿಧಾನವಾಗಿ ಹೇಳಿ ಈ ಮಂತ್ರವನ್ನು ಇನ್ನಾರಿಗೂ ಹೇಳದೆ ಗುಟ್ಟಾಗಿರಲಿ ಎಂದು ಗುರುಸ್ಥಾನದಲ್ಲಿರುವ ಜಂಗಮರು ಆದೇಶ ಮಾಡುವರು. ವೀರಶೈವರು ಹೇಳುವಂತೆ ಅಗಸ್ತ್ಯನಿಗಾಗಲಿ, ವಿಕ್ರಮನಿಗಾಗಲಿ, ಚೋಳರಾಜನಿಗಾಗಲಿ ಅಥವಾ ಇನ್ನಾರಿಗಾಗಲಿ ಇಷ್ಟಲಿಂಗವನ್ನು ಕೊಟ್ಟು ಅವರಿಗೆ ವೀರಶೈವ ಧರ್ಮಾಚರಣೆ

In Public domain. Digitization Muthulakshmi Research Academy

ಮಾಡಿದರು ಎಂಬುದು ಸತ್ಯಕ್ಕೆ ದೂರವಾದ ಮಾಹಿತಿ ಎಂಬ ಸ್ಪಷ್ಟವಾದ ಅಭಿಪ್ರಾಯ ಪಡುತ್ತಾರೆ ಬಹುತೇಕ ವಿದ್ವಾಂಸರು

ಮೌಢ್ಯ, ಸುಳ್ಳು, ವೈಪರಿತ್ಯ, ಹಾಸ್ಯಾಸ್ಪದ, ಅವೈಜ್ಞಾನಿಕ ಸಾಹಿತ್ಯವನ್ನು ಹೊಂದಿರುವ ವೀರಶೈವರು ತಮ್ಮ ಮೊಂಡುವಾದವನ್ನು ಮುಂದಿಡುತ್ತ, ಲಿಂಗಾಯತ ವೀರಶೈವ ಒಂದೇ ಎಂದು ಹೇಳುತ್ತ, ಸಾಹಿತ್ಯಕ್ಕೆ, ಇತಿಹಾಸಕ್ಕೆ, ಧರ್ಮಕ್ಕೆ ಅಪಚಾರ ಮಾಡುತ್ತ, ಮುಗ್ದ ಭಕ್ತರ ಹೆಗಲ ಮೇಲೆ ಮೆರೆಯುತ್ತ, ಏಣಿ ಶ್ರೇಣಿ ಜಾತಿವ್ಯವಸ್ಥೆಯನ್ನು ಬಲಪಡಿಸುತ್ತ, ವೀರಶೈವರು ಲಿಂಗಾಯತರು ಹಿಂದೂಗಳೆಂದು ವಾದಿಸುತ್ತ, ಜನಸಾಮಾನ್ಯರಿಗೆ ಸಿಗುವ ಸವಲತ್ತುಗಳಿಗೆ ಕಲ್ಲು ಹಾಕುತ್ತ, ಸ್ವಜಾತಿ ಪ್ರೇಮ ಮೆರೆಯುತ್ತ, ಅಲೆಮಾರಿ ಬೇಡ ಜಂಗಮರಿಗಿರುವ ಮೀಸಲಾತಿ ಕಿತ್ತುಕೊಳ್ಳುತ್ತ, ಲಿಂಗಾಯತ ಧರ್ಮಗುರುಗಳಲ್ಲಿಯೇ ಏಣಿಶ್ರೇಣಿ ಬಯಸುತ್ತ. ಅಂದಿನ ಹೋರಾಟಕ್ಕೆ ಕಲ್ಲು ಹಾಕುತ್ತಿದ್ದರು. ಸ್ವತಂತ್ರ ಧರ್ಮ ನೀಡಿದರೆ ರಕ್ತ ಕ್ರಾಂತಿ ಆಗುತ್ತದೆ ಎಂದರು.

ಕೊನೆ ಟಿಪ್ಪಣಿಗಳು

೧. ಸಿದ್ಧಾಂತ ಶಿಖಾಮಣಿ ೫, ೧೬-೧೭
೨. ಸಿದ್ಧಾಂತ ಶಿಖಾಮಣಿ ೫, ೧೫
೩. ಬೆಂಗಳೂರು ನಗರದ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ; ಬಿ.ಸಿ.ವೀರಪ್ಪ. ಪು.ಸಂ. ೪೫
೪. ಅದೇ ಪು.ಸಂ. ೪೫.
೫. ವಚನಸಾಹಿತ್ಯ ಸಂವಾದ; ಪ್ರಜಾವಾಣಿ ಪ್ರಕಾಶನ; ವಚನ ಸಾಹಿತ್ಯ: ವೈದಿಕ ವಿರೋಧ ಮತ್ತು ಜಾತಿ ನಿರಸ; ಡಾ.ಎಂ.ಎಂ.ಕಲಬುರ್ಗಿ; ಪು.ಸಂ ೧೧-೧೩
೬. ಎಸ್.ಎಸ್.ಬಸವನಾಳ; ಪೂರ್ವೋಕ್ತ. ಪು.ಸಂ. ೧೫
೭. ಲಿಂಗಾಯತ ಸ್ವತಂತ್ರ ಧರ್ಮ, ಡಾ.ಲಕ್ಷ್ಮಣ ಕೌಂಟೆ. ಪು.ಸಂ. ೧೧೫
೮. ಕಾಳಾಮುಖ ಪಂಚಾಚಾರ್ಯರು ಸಾಧನೆ, ಸಂ. ೨೪, ಸಂಚಿಕೆ ೩-೪ ಜುಲೈ-ಡಿಸೆಂಬರ್, ೧೯೯೫, ಪು.ಸಂ. ೭೪-೭೫
೯. ಕಾಳಾಮುಖ ಪಂಚಾಚಾರ್ಯರು ಸಾಧನೆ, ಸಂ. ೨೪, ಸಂಚಿಕೆ ೩-೪, ಜುಲೈ-ಡಿಸೆಂಬರ್, ೧೯೯೫, ಪು.ಸಂ. ೭೪-೭೫
೧೦. ವೀರಶೈವ ಧರ್ಮಸಿಂಧು; ಅದರಗುಂಜಿ ಹಿರೇಮಠದ ಶಿವಲಿಂಗಯ್ಯ, ಪು.ಸಂ. ೬
೧೧. ಲಿಂಗಾಯತ ಸ್ವತಂತ್ರ ಧರ್ಮ, ಡಾ.ಲಕ್ಷ್ಮಣ ಕೌಂಟೆ, ಪು.ಸಂ. ೬೬, ೭೯, ೮೦
೧೨. ಕುರುಬರ ಗುರು ರೇವಣಸಿದ್ಧ, ಚಂದ್ರಕಾಂತ ಬಿಜ್ಜರಗಿ, ಪು.ಸಮ. ೩೧೮.
೧೩. ಕುರುಬರ ಗುರು ರೇವಣಸಿದ್ಧ; ಲೇಖಕರು; ಚಂದ್ರಕಾಂತ ಬಿಜ್ಜರಗಿ ಪು.ಸಂ. ೩೧೪) ಮೂಲ ಚಂದ್ರಶೇಖರ ಶಿವಾಚಾರ್ಯ; ಪ್ರಕಟನೆ. ೧೯೮೮. ಪು.ಸಂ. ೩೨.
೧೪. ಕುರುಬರ ಗುರು ರೇವಣಸಿದ್ಧ, ಚಂದ್ರಕಾಂತ ಬಿಜ್ಜರಗಿ, ಪು.ಸಂ. ೬೦

In Public domain. Digitization Muthulakshmi Research Academy

೧೫. ಅದೇ.

೧೬. ಅದೇ.

೧೭. ಅದೇ.

೧೮. ಲಿಂಗಾಯತ ಸ್ವತಂತ್ರ ಧರ್ಮ, ಲಕ್ಷ್ಮಣ ಕೌಂಟೇ, ಪು.ಸಂ. ೬೦, ೬೧

೧೯. ಕುರುಬರ ಕುಲಗುರು ರೇವಣಸಿದ್ಧ, ಚಂದ್ರಕಾಂತ ಬಿಜ್ಜರಗಿ, ಪು.ಸಂ. ೬೬

೨೦. ಕುಲಗುರು ರೇವಣಸಿದ್ಧ, ಚಂದ್ರಕಾಂತ ಬಿಜ್ಜರಗಿ, ಪು.ಸಂ. ೬೪

೨೧. ಅನುಭಾವಿಗಳ ಕ್ರಾಂತಿ, ಇಂಗ್ಲಿಷ್‌ನಲ್ಲಿ ಜೆ.ಪಿ.ಶೌತನ್, ಕನ್ನಡಕ್ಕೆ ಡಾ. ಟಿ.ಆರ್. ಚಂದ್ರಶೇಖರ. ಪು.ಸಂ. ೨೮

೨೨. ಹರಿಹರನ ರಗಳೆಗಳು ಒಂದು ಸಾಂಸ್ಕೃತಿಕ ಅಧ್ಯಯನ, ಡಾ. ಸದಾನಂದ ಪಾಟೀಲ, ಪ್ರಕಾಶಕರು ಶ್ರೀ ಮುರುಘಾಮಠ ಚಿತ್ರದುರ್ಗ, ಪು.ಸಂ: ೩೬

೨೩. ಲಿಂಗಾಯತ ಸ್ವತಂತ್ರ ಧರ್ಮ, ಡಾ. ಎಂ. ಎಂ. ಕಲಬುರ್ಗಿ, ಲಡಾಯಿ ಪ್ರಕಾಶನ, ಕಲಬುರ್ಗಿ, ಪು.ಸಂ. ೧೦೮

೨೪. ಅದೇ ಪುಸ್ತಕ ಪು.ಸಂ. ೧೧೨

೨೫. ವೀರಶೈವ ಪುರಾಣಗಳು–ಒಂದು ಅಧ್ಯಯನ, ಡಾ.ಎಸ್. ವಿದ್ಯಾಶಂಕರ, ಶ್ರೀ ಮುರುಘಾಮಠ ಚಿತ್ರದುರ್ಗ.

೨೬. ಹರಿಹರನ ರಗಳೆಗಳು ಒಂದು ಸಾಂಸ್ಕೃತಿಕ ಅಧ್ಯಯನ, ಡಾ. ಸದಾನಂದ ಪಾಟೀಲ, ಪು.ಸಂ.೧೨೯, ಮೂಲ: ಬಸವೇಶ್ವರ ದೇವರ ರಗಳೆ ಪು.ಸಂ. ೫೧–೭೮, ಕೇಶಿರಾಜ ದಣ್ಣನಾಯಕರ ರಗಳೆ, ಪು.ಸಂ. ೧೮೯ ಮಹಾದೇವಿ ರಗಳೆ, ಪು. ಸಂ. ೧೦೯

೨೭. ಡಾ.ಎಂ.ಎಂ.ಕಲಬುರ್ಗಿ, ಸ್ವತಂತ್ರ ಧರ್ಮ, ಪು.ಸಂ. ೧೦೩

೨೮. ವಚನತತ್ವನಿಧಿ, ವಿಷಯಾಧಾರಿತ ವಚನಗಳ ಸಂಪಾದನೆ, ಪ್ರಕಾಶ ಗು. ಕಶೆಟ್ಟಿ, ವಚನ ಅಧ್ಯಯನ ಕೇಂದ್ರ, ಅನುಭವ ಮಂಟಪ ಟ್ರಸ್ಟ್, ತಾಳೀಕೋಟೆ, ಪು.ಸಂ. ೪೬೫

೨೯. ಡಾ.ಟಿ.ಜಿ. ಸಿದ್ಧಪ್ಪಾರಾಧ್ಯ, 'ಶೂನ್ಯಪೀಠ ಪ್ರಭಾವ'.

In Public domain. Digitization Muthulakshmi Research Academy

ಎರಡು

ಲಿಂಗಾಯತವು ಜಾತಿರಹಿತವೆ?

ವರ್ಣಾಶ್ರಮ, ಏಣಿಶ್ರೇಣಿ ಜಾತಿವ್ಯವಸ್ಥೆಯನ್ನು ಖಂಡಿಸಿ ವೈದಿಕ ಧರ್ಮದಿಂದ ಹೊರಬಂದ ಬಸವ ಸ್ಥಾಪಿತ ಲಿಂಗಾಯತ ಧರ್ಮದಲ್ಲಿ ಮತ್ತದೇ ಜಾತಿ ಕಂಡದ್ದು, ಕಾಯಕಜೀವಿಗಳಲ್ಲಿ ಏಣಿಶ್ರೇಣಿ ರೂಪುಗೊಂಡಿದ್ದು, ಲಿಂಗಾಯತ ಇತಿಹಾಸದ ವೈಪರೀತ್ಯ ಮತ್ತು ದುರಂತ. ಲಿಂಗಾಯತ ಧರ್ಮವು ಜಾತಿರಹಿತ ಮೇಲು ಕೀಳು ಇಲ್ಲದ ಧರ್ಮ ಎಂದು ಹೇಳಿದರೆ ಅಪಹಾಸ್ಯ ಮಾಡಿಯಾರು ಓದುಗರು.

ಹನ್ನೆರಡನೆಯ ಶತಮಾನದಲ್ಲಿ ಜಾತಿವಿನಾಶದ ಚಳುವಳಿ ಪ್ರಾರಂಭಿಸಿದ ಬಸವಣ್ಣನವರ ತವರಿನಲ್ಲಿಯೇ ೭೬೪ ಜಾತಿಗಳನ್ನು ಕರ್ನಾಟಕ ಸರ್ಕಾರ ಓ.ಬಿ.ಸಿ.ಯಲ್ಲೇ ಗುರುತಿಸಿದೆ. ಭಾರತದಲ್ಲಿ ಮೂರುಸಾವಿರ ಪ್ರಮುಖ ಜಾತಿಗಳಿದ್ದು ಅವುಗಳಲ್ಲಿ ವಿಭಜನೆಯಾಗಿ ಒಟ್ಟು ೨೫ ಸಾವಿರಕ್ಕಿಂತ ಹೆಚ್ಚು ಉಪಜಾತಿಗಳಿವೆ ಎನ್ನುತ್ತದೆ ಬಿ.ಬಿ.ಸಿ.ಯ ಒಂದು ಸಮೀಕ್ಷೆ. "ಆಧುನಿಕ ಹಿಂದೂಧರ್ಮ ಜಾತಿ ಪದ್ಧತಿಯ ಮೇಲೆ ನಿಂತಿದೆ; ಹೆಬ್ಬಂಡೆಯಂತಿರುವ ಅದನ್ನು ಯಾವ ವಾದಗಳಿಂದಲೂ ಅಲುಗಾಡಿಸಲು ಸಾಧ್ಯವಿಲ್ಲ" ಎನ್ನುತ್ತಾರೆ ಡಾ. ಬಾಬಾಸಾಹೇಬ ಅಂಬೇಡ್ಕರ್.[೧] ಭಾರತೀಯ ಜಾತಿಪದ್ಧತಿಯನ್ನು ಇನ್ನೂ ಕಠೋರವಾಗಿ ವಿವರಿಸಿದ್ದಾನೆ ಜರ್ಮನಿಯ ಮ್ಯಾಕ್ಸ್ ಮುಲ್ಲರ್. "ಒಬ್ಬ ವ್ಯಕ್ತಿ ಒಂದು ಜಾತಿಯಲ್ಲಿ ಹುಟ್ಟಿರದ ಹೊರತು ಅವನು ಹಿಂದೂಧರ್ಮದಲ್ಲಿ ಹುಟ್ಟಿರಲು ಸಾಧ್ಯವಿಲ್ಲ. ಜಾತಿ ಮತ್ತು ಹಿಂದೂ ಧರ್ಮವನ್ನು ಪ್ರತ್ಯೇಕಿಸಲಾಗುವುದಿಲ್ಲ".[೨]

ಇಂತಹ ಜಾತಿ ಆಧಾರಿತ ಭಾರತದಲ್ಲಿ ಜನ್ಮ ತಳೆದು, ಜಾತಿವಿನಾಶದ ಕನಸು ಕಂಡಿದ್ದರು ಬಸವಣ್ಣನವರು. ದುರದೃಷ್ಟವಶಾತ್ ಅವರು ಸ್ಥಾಪಿಸಿದ ಧರ್ಮದ ಅನುಯಾಯಿಗಳು ಇಂದು ನೂರು ಜಾತಿಗಳಲ್ಲಿ ಹರಿದು ಹಂಚಿ

In Public domain. Digitization Muthulakshmi Research Academy

ಹೋಗಿದ್ದಾರೆ. ಲಿಂಗಾಯತರಲ್ಲಿ ಜಾತಿಯ ಮೂಲ ಕಾಣಲು ಪ್ರಯತ್ನಿಸಿದ್ದರು. ಕರ್ನಾಟಕದ ಹಿಂದಿ ಪ್ರಾಧ್ಯಾಪಕರಾದ ಪ್ರೊಫೆಸರ್ ವಿ.ವಿ.ಸಂಗಮದ. "೧೨ನೆಯ ಶತಮಾನದಿಂದ ೧೮ನೆಯ ಶತಮಾನದವರೆಗಿನ ಲಿಂಗಾಯತ ಸಮಾಜದಲ್ಲಿ ಹಾಗೂ ಸಾಹಿತ್ಯದಲ್ಲಿ ಈ ಸಮಸ್ಯೆಯ ಕಾದಾಟವಿಲ್ಲ! ೧೯ನೆಯ ಶತಮಾನದಲ್ಲಿ ಈ ಸಮಸ್ಯೆ ಉದ್ಭವವಾಯಿತು.ಇದಕ್ಕೆ ಹಿಂದೂ ಧರ್ಮದ ಬ್ರಾಹ್ಮಣ ಪುರೋಹಿತಶಾಹಿ ಹಾಗೂ ಲಿಂಗಾಯತ ಧರ್ಮದ ಜಂಗಮ ಪುರೋಹಿತಶಾಹಿಗಳ ಘರ್ಷಣೆಯೇ ಮೂಲ ಕಾರಣ" ಎನ್ನುತ್ತಾರೆ.[೩] ಇದನ್ನು ಪುಷ್ಟೀಕರಿಸುವಂತೆ ಮಾನಶಾಸ್ತ್ರಜ್ಞ ಜೆ.ಎಚ್. ಹಟ್ಟನ್ ಮತ್ತು ಸಮಾಜಶಾಸ್ತ್ರಜ್ಞ ಮ್ಯಾಕ್ಸ್ ವೇಬರ್ "ಲಿಂಗಾಯತ ಉತ್ಕೃಷ್ಟ ಧಾರ್ಮಿಕ ಗುಂಪಾಗಿದೆ. ಹೀಗಾಗಿ ಜಾತಿಯಾಧಾರಿತ ಭಾರತೀಯ ಸಮಾಜವನ್ನು ಲಿಂಗಾಯತ ತತ್ವ ಪ್ರಧಾನವಾಗಿ ತಿರಸ್ಕರಿಸುತ್ತದೆ. ಆದರೂ ಜಾತಿ ಪಂಗಡವಾಗಿ ಕಂಡುಬರುತ್ತದೆ" ಎಂಬ ವಾಸ್ತವ ಸತ್ಯವನ್ನು ಹೇಳುತ್ತಾರೆ.[೪] ಈ ಮೇಲಿನ ಹೇಳಿಕೆಗಳಿಗೆ ಪುಷ್ಟೀಕರಿಸುವಂತೆ ಲಿಂಗಾಯತರು ೧೯ನೆಯ ಶತಮಾನದಲ್ಲಿ ಹೇಗೆ ಒಡೆದುಹೋಗಿದ್ದರು ಎಂದು ವಿವರಿಸುತ್ತಾರೆ. ಭಾರತೀಯರ ಸಂಸ್ಕೃತಿ, ಆಚಾರ ವಿಚಾರಗಳನ್ನು ಅಭ್ಯಸಿಸಿದ ಇಂಗ್ಲಿಷ್ ಅಧಿಕಾರಿ ಜೇಮ್ಸ್ ಕ್ಯಾಂಬೆಲ್ ಇವರಲ್ಲಿರುವ ಮೂರು ವರ್ಗಗಳನ್ನು ಗುರುತಿಸುತ್ತಾರೆ.

ಅ. ನಿಜಲಿಂಗಾಯತರು

ಬ. ಸಂಲಗ್ನ ಲಿಂಗಾಯತರು

ಕ. ಅರೆಲಿಂಗಾಯತ ಹಿಂದೂಗಳು

ನಿಜಲಿಂಗಾಯತರು: ಇವರಲ್ಲಿ ಮತ್ತೆ ವಿಭಾಗಗಳಿರುವುದನ್ನು ತಿಳಿಸುತ್ತಾ, ಜಂಗಮ, ಪಂಚಮಸಾಲಿ, ಶೀಲವಂತ, ಬಣಜಿಗ, ಎಂದು ನಾಲ್ಕು ಪ್ರಭೇದಗಳಲ್ಲಿ ಇದ್ದುದನ್ನು ಕಾಣುತ್ತಾರೆ. ಇವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಜೀವನಪದ್ಧತಿ, ಇವರ ವೃತ್ತಿ ಮತ್ತು ಇವರಲ್ಲಿರುವ ವಿಭಿನ್ನ ಆಚಾರಗಳನ್ನು ಪಟ್ಟಿ ಮಾಡುತ್ತಾರೆ ಜೆಮ್ಸ್ ಕ್ಯಾಂಬೆಲ್. ಜಂಗಮರೆಂದರೆ ಚಲಿಸುವ ಲಿಂಗ. ಮನುಷ್ಯರೂಪ ಲಿಂಗ, ಜಂಗಮರಲ್ಲಿ ವಿರಕ್ತಜಂಗಮರು, ಸಾಮಾನ್ಯ ಜಂಗಮರು, ಗಣಾಚಾರಿಗಳು ಮತ್ತು ಮಠಪತಿಗಳೆಂದು ವಿವರ ನೀಡುತ್ತಾರೆ. ವಿರಕ್ತರದು ಜಂಗಮರಲ್ಲಿಯೇ ಉನ್ನತ ಶ್ರೇಣಿ ಎಂದು ದಾಖಲಿಸುತ್ತಾರೆ. ಉಳುಮೆ ಮಾಡುವ ವರ್ಗ ಪಂಚಮಸಾಲಿಗಳೆಂದು ಗುರುತಿಸುತ್ತ ಇದೊಂದು ಬಹುದೊಡ್ಡ ಗುಂಪು ಎನ್ನುತ್ತಾರೆ. ಇವರು ಲಿಂಗಾಯತ ಸಮುದಾಯದ ಮೂಲನಿವಾಸಿಗಳೆಂದು ಆ ಮೂಲದಿಂದಲೇ ಉಳಿದ ಪಂಗಡಗಳು ಟಿಸಿಲೊಡೆದಿವೆ ಎಂದು ವಿಶ್ಲೇಷಣೆ ಮಾಡುತ್ತಾರೆ. ಶೀಲವಂತರಲ್ಲಿ ಚಿಲುಮೆಯಾಗ್ನಿ ಪಂಗಡವಿದೆ ಎನ್ನುತ್ತಾರೆ.

In Public domain. Digitization Muthulakshmi Research Academy

ಇನ್ನು ಬಣಜಿಗರಲ್ಲಿ ಧೂಳಪಾವಡ, ಹೊಳೆಯಾಚೆ ಎಂದು ವಿಂಗಡಿಸಿ ಅವರ ಆಚಾರಗಳನ್ನು ವಿವರಿಸುತ್ತಾರೆ.

ಸಂಲಗ್ನ ಲಿಂಗಾಯತರು: ಸಂಲಗ್ನ ಲಿಂಗಾಯತರ ವಿವರ ನೀಡುತ್ತ, ಅರೆಬಣಜಿಗರು/ ಆದಿಬಣಜಿಗರು, ಚಲವಾದಿಗಳು, ಚಟ್ಟೇರ, ಗಾಣಿಗರು, ಗವಳಿಗಳು, ಹಂಡೇವಜೀರ, ಹಂಡೆಯವರು, ಕಲಾವಂತರು, ಕೋಷ್ಠಿಗಳು/ನೀಲಕಂಠರು, ಕೂಡುವಕ್ಕಲಿಗರು, ಕುಂಬಾರರು, ಕುರಸಾಲಿಗಳು, ಕುರುವಿನ ಶೆಟ್ಟರು, ಮಾಲಗಾರರು, ನಾಗಲಿಕರು, ನಾಡಿಗರು, ನೀಲಗಾರರು, ಪಡಸಾಲಿಗಳು, ಶಿವಾಚಾರಿಗಳು ಎಂದು ವಿಂಗಡಿಸಿ ಅವರ ಆಚಾರಗಳನ್ನು ವಿವರಿಸುತ್ತಾರೆ.[೫]

ಅರೆಲಿಂಗಾಯತ ಹಿಂದೂಗಳು: ಇವರಲ್ಲಿ ಒಂಬತ್ತು ಪಂಗಡಗಳನ್ನು ಗುರುತಿಸುತ್ತಾರೆ. ಚಿಕ್ಕ ಕುರುವಿನವರು, ಡೋಹರರು, ಗುರವರು, ಹಟಗಾರರು, ಹೆಳವರು, ಕಬ್ಬೇರರು, ಪರೀಟರು, ಸಾಲಿಗಳು, ಸಮಗಾರರೆಂದು ವಿಂಗಡಿಸುತ್ತ, ಇವರು ಲಿಂಗವನ್ನು ಧರಿಸಿದರೂ ಇವರ ಮತ್ತು ಮೇಲಿನ ಎರಡು ವರ್ಗಗಳಲ್ಲಿರುವ ಆಚಾರಗಳನ್ನು ವಿವರವಾಗಿ ಚರ್ಚಿಸುತ್ತಾರೆ.[೬]

ಲಿಂಗಾಯತ ಧರ್ಮದಲ್ಲಿ, ಜಾತಿ-ಏಣಿ-ಶ್ರೇಣಿ ವ್ಯವಸ್ಥೆ ಹೇಗೆ ಬೇರೂರಿತು?

ಪ್ರೊಫೆಸರ್ ವಿ.ವಿ.ಸಂಗಮದ ಅವರು ಲಿಂಗಾಯತ ಧರ್ಮದಲ್ಲಿ ಜಾತಿಯ ಏಣಿಶ್ರೇಣಿಗೆ ಪಂಚಪೀಠಾಧೀಶ್ವರರನ್ನು ಹೊಣೆಗಾರರನ್ನಾಗಿ ಮಾಡುತ್ತಾರೆ. ಈ ಕರಾಳ ಪದ್ಧತಿ ಹದಿನೆಂಟನೆಯ ಶತಮಾನದ ಒಂದು ಘಟನೆಯಿಂದ ಪ್ರಾರಂಭವಾಯಿತು ಎನ್ನುತ್ತ ಅಂದು ಧಾರವಾಡ ಜಿಲ್ಲೆಯಲ್ಲಿ ನಡೆದ ಘಟನೆಯನ್ನು ಬರೆಯುತ್ತಾರೆ. "ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಧಾರವಾಡ ಜಿಲ್ಲೆಯ ಈಗಿನ ಹಾನಗಲ್ ತಾಲ್ಲೂಕಿನ ಅಣಿಜಿ, ಸೂಡಂಬಿ, ಅತ್ತಿಕಟ್ಟಿ ಪ್ರಮುಖರ ಮಧ್ಯೆ ಒಳಪಂಗಡಗಳ ಮೇಲು ಕೀಳು ಕುರಿತು ಘರ್ಷಣೆ ಪ್ರಾರಂಭವಾಯಿತು. ಈ ಘರ್ಷಣೆಯಲ್ಲಿ ರಂಭಾಪುರಿ ಮಠ ಮತ್ತು ಗೋಡೇಕೆರೆ ಮಠಗಳು ಎದುರು ಬದರು ಎರಡು ಪಕ್ಷಗಳಾಗಿ ಭಾಗವಹಿಸಿದ್ದವು. ಇಂದು ಕೃತಕವಾಗಿ ಪ್ರಚಲಿತವಿರುವ 'ಮಹೇಶ್ವರ ದೀಕ್ಷೆ'ಯನ್ನು ಅಂದು 'ವಿಶೇಷ ದೀಕ್ಷೆ' ಎಂದು ಕೊಡಲಾಗುತ್ತಿತ್ತು. ಈ ವಿಶೇಷ ದೀಕ್ಷೆಯು ನೊಳಂಬ(ನೊಣಬ) ಹಾಗೂ ಸಾದರಿಗೆ ಸಲ್ಲದೆಂದು ಮೇಲ್ವರ್ಗದವರೆಂದು ಭಾವಿಸಿದ ಲಿಂಗಾಯತ ಪುರೋಹಿತಶಾಹಿಯು ವಾದಿಸಹತ್ತಿತು. ೧೨ನೇ ಶತಮಾನದಲ್ಲಿ ಬಸವಣ್ಣನವರು ಕಿತ್ತೆಸೆದ ಹಿಂದೂಧರ್ಮದ ಭೇದಭಾವದಿಂದ ಕೂಡಿದ ಪುರೋಹಿತಶಾಹಿಯ ಈ ಘರ್ಷಣೆಯು ಗವಾಕ್ಷಿಯಿಂದ ಲಿಂಗಾಯತ ಧರ್ಮದಲ್ಲಿ ಒಳನುಗ್ಗಿತು. ಮುಂಬಾಗಿಲಿನಿಂದ ಹೋದ ರಾಕ್ಷಸವು ಹಿಂಬಾಗಿಲಿನಿಂದ ಬಂದು ಒಳಹೊಕ್ಕಂತಾಯಿತು". ಈ ಹಾನಗಲ್ ತಾಲ್ಲೂಕಿನ ಘರ್ಷಣೆಯು ಮತ್ತೆ

In Public domain. Digitization Muthulakshmi Research Academy

ಲಿಂಗಾಯತರಲ್ಲಿ ಚಾತುರ್ವರ್ಣಾಶ್ರಮಗಳ ಸೃಷ್ಟಿಗೆ ಕಾರಣವಾಯಿತು ಹಾಗೂ ನೂರಾರು ಜಾತಿಮೂಲ ಒಳಪಂಗಡಗಳು ಹುಟ್ಟಿಕೊಂಡವು; ಇದೇ ಕಾಲಕ್ಕೆ ಲಿಂಗವಂತರಲ್ಲಿ ಬ್ರಾಹ್ಮಣರಲ್ಲಿರುವಂತೆ ಚತುರಾಚಾರ್ಯರು ಹುಟ್ಟಿಕೊಂಡರು" ಎಂದು ಬರೆಯುತ್ತಾರೆ.[೭]

ಈ ಹೇಳಿಕೆಯ ಸತ್ಯಾಸತ್ಯತೆಯನ್ನು ಪರೀಕ್ಷಿಸುತ್ತ ಹೋದಲ್ಲಿ ಇದು ಭಾಗಶಃ ಸತ್ಯವೆಂದೇ ತೋರುವುದು. ಕಾರಣಗಳನ್ನು ಹುಡುಕುತ್ತ ಹೋದಂತೆ ವೀರಶೈವ ಲಿಂಗಿಬ್ರಾಹ್ಮಣರ ಕುತಂತ್ರ ಮತ್ತು ವೈದಿಕ ಶಾಹಿಗಳ ಷಡ್ಯಂತ್ರವೂ ಇದಕ್ಕೆ ಮೂಲಕಾರಣ ಎನ್ನಬಹುದು. ಕಲ್ಯಾಣಕ್ರಾಂತಿಯ ನಂತರ ವಚನಗಳ ಸುರಕ್ಷತೆ ಗಂಭೀರ ವಿಷಯವಾಗಿ ಪರಿಣಮಿಸಿತ್ತು ಶರಣರಿಗೆ. ಕಲ್ಯಾಣದಿಂದ ಸಾಗಿಸಿದ ವಚನದ ಕಟ್ಟುಗಳನ್ನು ಸುರಕ್ಷಿತವಾಗಿರಿಸುವ ಜವಾಬ್ದಾರಿಯನ್ನು ತಮ್ಮ ಅನುಯಾಯಿಗಳಿಗೆ ವಹಿಸಿ, ವಚನದ ಕಟ್ಟುಗಳನ್ನು ಬಟ್ಟೆಯಲ್ಲಿ ಮುಚ್ಚಿಟ್ಟು, "ಇದೊಂದು ಪವಿತ್ರವಾದ ವಸ್ತು. ಇದನ್ನು ಯಾವುದೇ ಕಾಲಕ್ಕೂ, ಯಾರಿಗೂ ತೋರಿಸದೆ ನಿಮ್ಮ ಅಮೂಲ್ಯ ಆಸ್ತಿಯನ್ನಾಗಿ ತಲೆ ತಲಾಂತರದಲ್ಲಿ ಕಾಪಾಡಬೇಕು" ಎಂದು ಆದೇಶಿಸಿರಬಹುದು ಶರಣರು. ತಮ್ಮ ಹಿರಿಯರ ಆದೇಶಗಳನ್ನು ಪಾಲಿಸುತ್ತ ಬಂದ ಲಿಂಗಾಯತರಿಗೆ ವಚನಗಳೆಂಬ ಅದ್ಭುತ ವೈಚಾರಿಕ ಆಸ್ತಿ ತಮ್ಮ ಬಳಿಯಿದೆ ಎಂಬ ಅರಿವು ಅವರಿಗಿರಲಿಲ್ಲ. ಹಿರಿಯರಾದ ಫ.ಗು.ಹಳಕಟ್ಟಿಯವರ ಪರಿಶ್ರಮದಿಂದ ಜಗುಲಿಯ ಮೇಲಿರುವ ವಚನಗಳು ಬಾಹ್ಯ ಜಗತ್ತಿಗೆ ಪರಿಚಯವಾದವು. ಸತ್ಯದ ಮೇಲೆ ಹೊದಿಕೆ ದೂರಸರಿದಾಗ ಲಿಂಗಾಯತದ ಅಮೂಲ್ಯ ಸಿದ್ಧಾಂತ ಬೆಳಕಿಗೆ ಬಂತು.

ಹನ್ನೆರಡನೆಯ ಶತಮಾನದ ಕ್ರಾಂತಿಯ ನಂತರ, ಶರಣರು ಬಯಲಲ್ಲಿ ಬಯಲಾದ ನಂತರ ಲಿಂಗಾಯತವು ೧೩ ಹಾಗೂ ೧೪ನೆಯ ಶತಮಾನದಲ್ಲಿ ಭೂಗರ್ಭವಾಗಿತ್ತು. ಇದಕ್ಕೆ ಮುಸ್ಲಿಮರ ಆಳ್ವಿಕೆಯ ಕಾರಣವೂ ಇರಬಹುದು ಎನ್ನುತ್ತಾರೆ ಕೆಲವು ವಿದ್ವಾಂಸರು. ಲಿಂಗಾಯತ ಧರ್ಮಕ್ಕೆ ಮುಸ್ಲಿಂ ಆಡಳಿತಗಾರರಿಂದ ಯಾವುದೇ ತರಹದ ತೊಂದರೆಯಾಗಿಲ್ಲವೆಂದು 'ನಿರಂಜನ ವಂಶ ರತ್ನಾಕರ'ದಿಂದ ತಿಳಿದುಬರುವುದು.[೮] ಈ ಸಮಯದಲ್ಲಿ ವಿಜಾಪುರದ ಆದಿಲ್‌ಶಾಹಿ ದೊರೆಗಳು, ಕಲಬುರ್ಗಿಯ ಕುತುಬ್‌ಶಾಹಿ ದೊರೆಗಳು, ಬಿದರಿನ ಬಹಮನಿ ಆಡಳಿತಗಾರರು ಲಿಂಗಾಯತರನ್ನು ವಿಶ್ವಾಸಕ್ಕೆ ತಗೆದುಕೊಂಡು ಅವರನ್ನು ಆಡಳಿತದಲ್ಲಿ ಭಾಗಿಯಾಗಿಸಿ ಸರ್ ದೇಶಮುಖ, ದೇಶಮುಖ, ದೇಸಾಯಿ, ಸರ್ ನಾಡಗೌಡ, ನಾಡಗೌಡ, ಪಾಟೀಲ ಎಂದು ನಾಮಕರಣ ಮಾಡಿ ಅವರಿಗೆ ಜಮೀನುಗಳನ್ನು ಉಂಬಳಿ ಕೊಟ್ಟ ವಿಷಯ ಇತಿಹಾಸದಲ್ಲಿ ದಾಖಲಾಗಿದೆ. ಮುಸ್ಲಿಮರು ಲಿಂಗಾಯತರ ಮೇಲೆ ದಾಳಿ ಮಾಡಿದ್ದರೆ ಅದು ಹೇಗೆ ಲಿಂಗಾಯತರಿಗೆ ಆಡಳಿತದಲ್ಲಿ ಭಾಗ ಕೊಡುತ್ತಿದ್ದರು?

In Public domain. Digitization Muthulakshmi Research Academy

ಮೇಲಾಗಿ ಸೂಫಿ ಸಂತರ ಸಾಹಿತ್ಯ ಲಿಂಗಾಯತ ಸಿದ್ಧಾಂತಗಳೊಂದಿಗೆ ಸಾಮ್ಯತೆ ಹೊಂದಿದೆ. ಇದು ಲಿಂಗಾಯತ ಮತ್ತು ಮುಸ್ಲಿಮರ ಸಹಬಾಳ್ವೆಗೆ ಸಾಕ್ಷಿ ನೀಡುತ್ತದೆ.

ಅದರೆ ಲಿಂಗಾಯತವು ಗುಡಿ ಗುಂಡಾರಗಳನ್ನು ತಿರಸ್ಕರಿಸಿದ್ದು ಒಂದು ವರ್ಗಕ್ಕೆ ಅತೀವ ಸಂಕಟವನ್ನು ಉಂಟುಮಾಡಿತ್ತು. ಕಾಲಾನಂತರ ವೈದಿಕರು ಆಡಳಿತಗಾರರ ಮನವೊಲಿಸಿ ದೇವರನ್ನು ಗುಡಿಗಳಲ್ಲಿ ಮರುಸ್ಥಾಪಿಸಿದರು. ದೇವರ ಸ್ತುತಿಗಳನ್ನು ಬರೆಯುತ್ತ ದೇವರ ಅವತಾರಗಳನ್ನು, ಪವಾಡಗಳನ್ನು ಹೊರತರಲಾರಂಭಿಸಿದರು. ಬಸವಣ್ಣನವರ ಅನುಯಾಯಿಗಳಾದ ಶರಣರನ್ನು ದೇವರನ್ನಾಗಿ ಪರಿವರ್ತಿಸಿ ಅವರಿಗೂ ದೇವಸ್ಥಾನಗಳನ್ನು ನಿರ್ಮಿಸಿ ಪುರೋಹಿತಶಾಹಿಯನ್ನು ಮರುಸ್ಥಾಪಿಸಿದರು. ಹೊಸ ಹೊಸ ಗ್ರಂಥಗಳನ್ನು ಹೊರತಂದರು. ಲಿಂಗಾಯತ ವಿರಕ್ತಪೀಠಗಳಲ್ಲಿದ್ದ ಜಂಗಮ ಸ್ಥಾನವು ಜಾತಿ ಜಂಗಮ ಸಮಾಜದ ವಿದ್ಯಾರ್ಥಿಗಳ ಪಾಲಾಗಲಾರಂಭಿಸಿತು. ಲಿಂಗಾಯತ ಧರ್ಮದ ಸಿದ್ಧಾಂತಗಳನ್ನು ತಿರುಚಿ ವೈದಿಕ ಸಿದ್ಧಾಂತಗಳಾದ ಆಗಮಪ್ರಣೀತವೆಂದು ಬಿಂಬಿಸಲಾಯಿತು. ಸಿದ್ಧಾಂತ ಶಿಖಾಮಣಿ, ಶ್ರೀಕರಭಾಷ್ಯ ಪ್ರಚಾರ ಹೆಚ್ಚಾಯಿತು. ವೀರಶೈವ ಆಚಾರ ಕೌಸ್ತುಭ, ವೀರಶೈವೋತ್ಕರ್ಷ ಗ್ರಂಥ, ಶಂಕರ ಸಂಹಿತೆ ಮೊದಲಾದ ಗ್ರಂಥಗಳು ರಚಿಸಲ್ಪಟ್ಟವು. ಲಭ್ಯವಿದ್ದ ವಚನಗಳಲ್ಲಿ ಲಿಂಗಾಯತ ಪದಗಳ ಸ್ಥಾನದಲ್ಲಿ ವೀರಶೈವ ಪದ ಜೋಡಿಸುವ ಕಾರ್ಯ ಪ್ರಾರಂಭವಾಗಿತ್ತು. ಮೈಸೂರು ಸರಕಾರದ ಜನಗಣತಿಯಲ್ಲಿ ಲಿಂಗಾಯತರನ್ನು ಶೂದ್ರರನ್ನಾಗಿ ಗುರುತಿಸಲಾಯಿತು. ಅವಮಾನಿತ ಲಿಂಗಾಯತರು ತಾವು ಬ್ರಾಹ್ಮಣರಂತೆ ಶ್ರೇಷ್ಠ ಕುಲದವರೆಂದು ವಾದಿಸಲಾರಂಭಿಸಿದರು. ತಮ್ಮನ್ನು ಲಿಂಗೀ ಬ್ರಾಹ್ಮಣರೆಂದು ಕರೆಯಲು ವಿನಂತಿಸಿಕೊಳ್ಳುತ್ತ, ಲಿಂಗಾಯತವು ಸಹ ಚಾತುರ್ವರ್ಣ ಸಮಾಜ ಎಂದರು. ತಮ್ಮ ವಾದಕ್ಕೆ ಆಧಾರ ನೀಡಲು ಗ್ರಂಥರಚನೆ ಮಾಡಿಸಿದರು. ಪಾರಮೇಶ್ವರ, ಪಾಶುಪತ, ಸೂಕ್ಷ್ಮ, ವೀರ, ವಾತುಲ ಮೊದಲಾದ ಆಗಮದ ಉತ್ತರ ಭಾಗಗಳು, ವೀರಶೈವ ಆಚಾರ ಕೌಸ್ತುಭ, ವೀರಶೈವೋತ್ಕರ್ಷ ಗ್ರಂಥ, ಶಂಕರ ಸಂಹಿತೆ ಮೊದಲಾದ ವೀರಶೈವ ಗ್ರಂಥಗಳ ರಚನೆಯಾಯಿತು.

ಮೈಸೂರು, ಮುಂಬೈ ಹಾಗೂ ಮದ್ರಾಸ್ ಪ್ರಾಂತಗಳಲ್ಲಿ ಜನಗಣತಿಯ ಅವಮಾನ ಲಿಂಗಾಯತರಿಗೆ ಆಗಲಾರಂಭಿಸಿತ್ತು. ಅದಕ್ಕಾಗಿ ಬ್ರಿಟಿಷ್ ಸರಕಾರದ ಮೇಲೆ ಒತ್ತಾಯ ಬರಲಾರಂಭಿಸಿತ್ತು. ಜನಗಣತಿಯು ಭಾರತೀಯರ ಭಾವನೆಗಳಿಗೆ ಧಕ್ಕೆ ತಂದಿದೆ ಎಂಬ ಸತ್ಯ ಬ್ರಿಟಿಷ್ ಅಧಿಕಾರಿಗಳಿಗೆ ತಿಳಿಯಿತು. ವೀರಶೈವ ಸಾಹಿತ್ಯದ ಸತ್ಯಾಸತ್ಯತೆಯನ್ನು ತಿಳಿಯಲು ಸ್ಟೀಲ್ ಎಂಬ ಅಧಿಕಾರಿಯನ್ನು ನಿಯಮಿಸಿತು. ಧರ್ಮದ ವಿಷಯದಲ್ಲಿ ಎಚ್ಚರಿಕೆಯ ಹೆಜ್ಜೆಯನ್ನು ಇಡಬೇಕು ಎಂದು ಈಸ್ಟ್ ಇಂಡಿಯಾ ಕಂಪನಿಗೆ ಇಂಗ್ಲಿಷ್ ಸರಕಾರ ವಿಶೇಷ ಎಚ್ಚರಿಕೆ

In Public domain. Digitization Muthulakshmi Research Academy

ನೀಡಿತ್ತು. ಈ ಮಧ್ಯೆ ಭಾರತದಲ್ಲಿ ಕಾರ್ಯ ಮಾಡುತ್ತಿದ್ದ ಕೆಲವು ಸಿವಿಲ್ ಸರ್ವಿಸ್ ಅಧಿಕಾರಿಗಳು ಭಾರತೀಯ ಭಾಷೆಗಳನ್ನು ಕಲಿತು, ಸ್ಥಳೀಯ ಇತಿಹಾಸವನ್ನು ತಕ್ಕಮಟ್ಟಿಗೆ ತಿಳಿದುಕೊಂಡಿದ್ದರು. ಬ್ರಾಹ್ಮಣರು ಭಾರತದ ಇತಿಹಾಸವನ್ನು ತಿರುಚಿ ಸುಳ್ಳುಗಳನ್ನು ಸೃಷ್ಟಿಸುತ್ತಿದ್ದುದು ಅವರ ಗಮನಕ್ಕೆ ಬಂದಿತ್ತು. ಅಂತಹ ಸತ್ಯಶೋಧಕ ಅಧಿಕಾರಿಗಳಲ್ಲಿ ಚಾರ್ಲ್ಸ್ ಫಿಲಿಪ್ ಬ್ರೌನನು ಒಬ್ಬ. ಇದೇ ಸಮಯದಲ್ಲಿ ಕಲ್ಕತ್ತಾದಲ್ಲಿ ಜನ್ಮ ತಳೆದ(೧೭೯೮) ಬ್ರಿಟಿಷ್ ಮೂಲದ ಚಾರ್ಲ್ಸ್ ಫಿಲಿಪ್ ಬ್ರೌನ್ ಎಂಬ ಆಂಗ್ಲನು, ಬ್ರಿಟಿಷ್ ಸಿವಿಲ್ ಸರ್ವೆಂಟ್ ಅಧಿಕಾರಿಯ ಪರೀಕ್ಷೆಯಲ್ಲಿ ಯಶಸ್ವಿಯಾಗಿ(೧೮೧೭) ಭಾರತಕ್ಕೆ ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಯಾಗಿ ಭಾರತಕ್ಕೆ ಬಂದರು.

ಭಾರತದ ಸಂಸ್ಕೃತಿ, ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ಇವರನ್ನು ಭಾರತಿಯ ವಿದ್ವಾಂಸರು ಅಭಿಮಾನದಿಂದ ಬ್ರೌನ್ ಸಾಹೇಬರೆಂದೇ ಸಂಬೋಧಿಸುತ್ತಾರೆ. ಇವರು ಬಹುಭಾಷಾ ಪಂಡಿತರಾಗಿದ್ದರು. ವಿದೇಶಿ ಭಾಷೆಗಳಾದ ಪರ್ಷಿಯನ್, ಲ್ಯಾಟಿನ್, ಗ್ರೀಕ್, ತೆಲುಗು, ಸಂಸ್ಕೃತ ಭಾಷೆಗಳ ಮೇಲೆ ಪ್ರಭುತ್ವ ಹೊಂದಿದ್ದರು. ಇವರು ಭಾರತದ ಇತಿಹಾಸ ಹಾಗೂ ಶಾಸನಗಳಲ್ಲಿ ಅಗಾಧ ಆಸಕ್ತಿಯನ್ನು ಹೊಂದಿದ್ದರು. ಭಾರತದ ಬಗ್ಗೆ ಕುತೂಹಲವಿದ್ದ ಇವರಿಗೆ ಪ್ರಾರಂಭದಲ್ಲಿ ಬ್ರಾಹ್ಮಣರು ಭಾರತದ ಸಂಸ್ಕೃತಿ, ಆಚರಣೆ ಇತಿಹಾಸವನ್ನು ತಿಳಿಸುತ್ತಿದ್ದರು. ಸ್ಥಳೀಯ ಭಾಷೆಯನ್ನು ಕಲಿತನಂತರ ಬ್ರಾಹ್ಮಣರ ಸುಳ್ಳುಗಳನ್ನು ಇವರು ಅರಗಿಸಿಕೊಳ್ಳದಾದರು. ಆಂಧ್ರದ ಧಾರ್ಮಿಕ ಗುರು ವೇಮನರ ಸಾಹಿತ್ಯದಲ್ಲಿ ಅನುರಕ್ತನಾದರು. ವೇಮನರ ಸಿದ್ಧಾಂತದ ಮೂಲ ಶರಣಸಾಹಿತ್ಯವೆಂದರಿತರು. ತೆಲುಗು ಬಸವಪುರಾಣವನ್ನು ಓದಲಾರಂಭಿಸಿದರು. ಇಂಗ್ಲಿಷ್ ಅಧಿಕಾರಿಗಳಿಗೆ ಬ್ರಾಹ್ಮಣ- ಆರಾಧ್ಯಬ್ರಾಹ್ಮಣ-ಜಂಗಮರ ಮಧ್ಯ ಇರುವ ಅಸಮಾಧಾನದ ಬಗ್ಗೆ ತಿಳಿದಿದ್ದರು. "ಆರಾಧ್ಯರಿಗೂ ಜಂಗಮರಿಗೂ ಅಜಗಜಾಂತರವಿದೆ; ಆರಾಧ್ಯರು ಬಸವಣ್ಣನ ತತ್ವಗಳನ್ನು ಒಲ್ಲದ ಮನಸ್ಸಿನಿಂದ ಹಾಗೂ ಅರ್ಥರ್ಂಬರ್ದ ಅನುಸರಿಸುತ್ತಾರೆ" ಎನ್ನುತ್ತಾರೆ ಸಿ.ಪಿ. ಬ್ರೌನ್.

ವೀರಶೈವ ಮತ್ತು ಬ್ರಾಹ್ಮಣ ವಿದ್ವಾಂಸರ ಮಧ್ಯೆ ಶ್ರೇಷ್ಠತೆಯ ವ್ಯಸನ ತಾರಕಕ್ಕೆ ಏರುತ್ತಿದ್ದಂತೆ ಬ್ರಿಟಿಷ್ ಸರಕಾರ ವಸ್ತುಸ್ಥಿತಿಯನ್ನು ಮನಗಂಡು ಈಗಾಗಲೇ ಹೇಳಿದಂತೆ ಸ್ಟೀಲ್ ಎಂಬ ಅಧಿಕಾರಿಯನ್ನು ನೇಮಿಸಿ ವರದಿ ನೀಡುವಂತೆ ಕೇಳಿಕೊಂಡಿತು. ವೀರಶೈವರು ಮತ್ತೊಮ್ಮೆ ಸುಳ್ಳನ್ನು ಸತ್ಯವೆಂದು ಬಿಂಬಿಸಲು ಲಕ್ಷಾಂತರ ಶ್ಲೋಕಗಳೇ ವೀರಶೈವ ಗ್ರಂಥಗಳೆಂದು ಪ್ರತಿಪಾದಿಸಿದರು. ಅದನ್ನೇ ಸತ್ಯವೆಂದು ನಂಬಿದ ಬ್ರಿಟಿಷ್ ಅಧಿಕಾರಿ ಯಥಾವತ್ ವರದಿ ನೀಡಿದ. ವರದಿಯಲ್ಲಿರುವ ಲೋಪದೋಷಗಳನ್ನು ಅರಿತ ಬ್ರಿಟಿಷ್ ಆಡಳಿತ ಅದನ್ನು ಮಾನ್ಯ

In Public domain. Digitization Muthulakshmi Research Academy
ಮಾಡದೆ, ಸತ್ಯ ತಿಳಿಯಲು ಮತ್ತೊಮ್ಮೆ ತಮ್ಮ ಸೇವೆಯಲ್ಲಿದ್ದ ಲಿಂಗಾಯತರಾದ ನಾಲ್ಕು ಸದಸ್ಯರ ಸಮಿತಿಯನ್ನು ರಚಿಸಿ, ಅವರಿಗೆ ಐದು ಅಂಶಗಳ ಮೇಲೆ ವರದಿ ನೀಡಲು ಕೇಳಿಕೊಂಡಿತ್ತು. ಮತ ಸ್ಥಾಪನೆಯ ಕಾಲ, ಮತ ಸ್ಥಾಪಿಸಿದವರು, ಧಾರ್ಮಿಕ ಆಚರಣೆ, ಗುರು, ವಿರಕ್ತ, ಮಠಪತಿ, ಗಣಾಚಾರಿ ಮುಂತಾದವರ ಕರ್ತವ್ಯ, ಅವರ ಹಕ್ಕು ಬಾಧ್ಯತೆ ಕುರಿತು ಮಾಹಿತಿಸಲ್ಲಿಸಲು ಕೇಳಿಕೊಂಡಿತ್ತು. ರಾ.ಬ.ಗುರುಸಿದ್ದಪ್ಪ ಗಿಲಗಂಚಿ, ರಾ.ಬ. ಅರಟಾಳ ರುದ್ರಗೌಡರು, ಗುರುಲಿಂಗಯ್ಯ ಮತ್ತು ಪ್ರಬಪ್ಪ ಮಮದಾಪುರ ಎಂಬ ನಾಲ್ಕು ಸದಸ್ಯರ ಸಮಿತಿಯನ್ನು ರಚಿಸಿತ್ತು. ಈ ಸಮಿತಿಯ ಸದಸ್ಯರು ಅಂದಿನ ದಿನಗಳಲ್ಲಿ ಶಿಕ್ಷಣವಂತರಾದ ಹುಬ್ಬಳ್ಳಿಯ ಚನ್ನವೀರ ಸ್ವಾಮಿಗಳು, ಬಾರ್ಶಿಯ ಪ್ರಭುಲಿಂಗಯ್ಯನವರು, ಸೀತಾರಾಂ ಶಾಸ್ತ್ರಿ ರೇತ್ರೇಕರ(ಬಾರ್ಶಿ), ರಘಪ್ಪ ರಗಶೆಟ್ಟಿ (ದಡ್ಡಿ) ಮತ್ತು ಮೈಸೂರಿನ ಯಜಮಾನ ವೀರಸಂಗಪ್ಪನವರನ್ನು ಮೇಲಿನ ಪ್ರಶ್ನೆಗಳಿಗೆ ಸತ್ಯವಾದ ವಿವರಗಳನ್ನು ನೀಡುವಂತೆ ಕೇಳಿಕೊಂಡರು. ನಾಲ್ಕು ವರ್ಷಗಳ ಕಾಲ ಈ ಪಂಡಿತರು ವೀರಶೈವರ(ಪಂಚಾಚಾರ್ಯರ) ಸಾಹಿತ್ಯವನ್ನು ಸೃಷ್ಟಿ ಮಾಡಿದರು. ಅದರಲ್ಲಿ ಇನ್ನೂ ಐದು ಜನ ಪಂಡಿತರಾದ ಚಿಕ್ಕಬಳ್ಳಾಪುರದ ವಿರೂಪಾಕ್ಷ ಶಾಸ್ತ್ರಿಗಳು, ರಾಯಚೂರಿನ ಕೃಷ್ಣಮಾಚಾರ್ಯರು, ಫಕೀರ ಪರ್ವತ ಬಸವಲಿಂಗಶಿವಬಸವ ಶಾಸ್ತ್ರಿಗಳು ಮತ್ತು ಕೃಷ್ಣಾವಧೂತರು ಸೇರಿದ್ದರು. ಕಟ್ಟಿ ವೆಂಕಟರಂಗೋ ಅವರು ಇವರಿಗೆಲ್ಲ ಟ್ರಾನ್ಸ್‌ಲೇಟರ್ ಆಗಿ ಕಾರ್ಯ ನಿರ್ವಹಿಸಿದ್ದರು. ಪಂಚಾಚಾರ್ಯ ಸಾಹಿತ್ಯವನ್ನು ಮತ್ತೊಮ್ಮೆ ಹದಿನಾಲ್ಕು ದಿನಗಳಲ್ಲಿ ಪರಿಷ್ಕರಿಸಿ ೧೮೮೬ ಸೆಪ್ಟೆಂಬರ್ ೨೬ ರಂದು ಬೆಳಗಾವಿ ಥಿಯೇಟರಿನಲ್ಲಿ ಪ್ರಕಟಿಸಿದರು.[5]

ಲಿಂಗಾಯತರ ಸಾಹಿತ್ಯ(ವಚನ ಸಾಹಿತ್ಯ ಬೆಳಕಿಗೆ ತರದ ಹಿನ್ನೆಲೆಯಲ್ಲಿ) ಕಣ್ಮರೆಯಾದ ಸಂದರ್ಭವು, ಮೇಲಾಗಿ ಬ್ರಾಹ್ಮಣರಂತೆ ಲಿಂಗಾಯತರೂ ಶ್ರೇಷ್ಠರಾಗುವ ಬಯಕೆ, ಜಾತಿಯ ಏಣಿಶ್ರೇಣಿಯ ತೂಗಾಟದಲ್ಲಿ ಲಿಂಗಾಯತ ಧರ್ಮಕ್ಕೆ ಲಿಂಗಾಯತ ಅಧಿಕಾರಿಗಳಿಂದಲೇ ಅನ್ಯಾಯವಾಗಿತ್ತು. ಇದು ಪ್ರಜ್ಞಾಪೂರ್ವಕವಾಗಿ ಮಾಡಿದ ಪ್ರಮಾದವಲ್ಲ. ದಾಖಲೆಗಳಿಲ್ಲದ, ಇರುವ ದಾಖಲೆಗಳು ಸಹ ಲಭ್ಯವಿಲ್ಲದ ಸಮಯದಲ್ಲಿ ಕೈಗೊಂಡ ನಿರ್ಣಯವಾಗಿತ್ತು. ಇದನ್ನು ನ್ಯಾಯಾಧೀಶ ಹಾಲಭಾವಿಯವರು ಅಂದಿನ ಅಸಹಾಯಕ ಪರಿಸ್ಥಿತಿಯನ್ನು ತಮ್ಮ ಆತ್ಮಚರಿತ್ರೆಯಲ್ಲಿ ವಿವರಿಸಿದ್ದಾರೆ. "ಲಿಂಗಾಯತರು ಹಿಂದೂ ಸಮಾಜದ ಒಂದು ಉಚ್ಚವರ್ಗದವರಿರುತ್ತಾರೆ ಎಂಬುದನ್ನು ಸಿದ್ಧಪಡಿಸುವುದಾಗಿತ್ತು. ಮುಂಬೈ ಹೈಕೋರ್ಟಿನವರು ಗೋಪಾಲ v/s ಸಪ್ರೇ ವ್ಯಾಜ್ಯದಲ್ಲಿ ಲಿಂಗಾಯತರು ವೈದಿಕ ಮತದ ನಾಲ್ಕು ವರ್ಣಗಳಲ್ಲಿ ಶೂದ್ರರೆಂದು ನಿರ್ಣಯಿಸಿದ್ದರು. ಆ ನಿರ್ಣಯ ತಪ್ಪು. ಲಿಂಗಾಯತರು ಈ ನಾಲ್ಕೂ ವರ್ಣಗಳನ್ನು ಮೀರಿದವರಾಗಿ, ಶ್ರೇಷ್ಠ

In Public domain. Digitization Muthulakshmi Research Academy
ಅತಿವರ್ಣಿಯರಾಗಿದ್ದಾರೆಂದು ಈ ಸಮಾಜದ ಮುಖಂಡರಿಗೆ ತೋರಿಸಬೇಕಾಗಿತ್ತು; ಹಳೆಯ ಶಾಸ್ತ್ರ ಪುರಾಣಗಳಲ್ಲಿ ಲಿಂಗಾಯತ ಎಂಬ ಶಬ್ದವು ದೊರಕುವುದಿಲ್ಲ. ಅವುಗಳಲ್ಲಿ ವೀರಶೈವ, ಲಿಂಗಾಂಗಿ, ಲಿಂಗೀ ಬ್ರಾಹ್ಮಣ ಶಬ್ದಗಳೇ ದೊರಕುತ್ತವೆ" ಎಂಬ ಸಾಹಿತ್ಯಿಕ ಅಸಹಾಯಕತೆ ತೋಡಿಕೊಂಡಿದ್ದಾರೆ.

ಮಾದಾರ ಚೆನ್ನಯ್ಯನ ಮಗ ನಾನಯ್ಯ ಎಂದು ತನ್ನ ಹುಟ್ಟನ್ನೇ ದಾಸೋಹ ಮಾಡಿದ ಬಸವಣ್ಣ ಸ್ಥಾಪಿಸಿದ ಧರ್ಮದಲ್ಲಿ ನೊಳಂಬ ಹಾಗೂ ಸಾದರ ಸಮಾಜಗಳಿಗೆ 'ವಿಶೇಷ ಶಾಸ್ತ್ರ' ಮಾಡಲಾಗುವುದಿಲ್ಲ ಎಂದು ಹೇಳಿದ ಪಂಚಪೀಠಗಳ ನಿಜನಿಲುವು ಏನಾಗಿತ್ತು ಎಂದು ತಿಳಿಯಲು ಕ್ಷೇತ್ರಕಾರ್ಯ ಮಾಡಿದೆ. ಹಾಲುಗೊಣಹಳ್ಳಿ, ಶೆಟ್ಟಿಕೇರಿ ಹೋಬಳಿಯ ನೊಣಬ ಸಮಾಜದ ಪ್ರತಿಷ್ಠಿತ ಕುಟುಂಬದ ಕಬ್ಬಿಣದ ಲಿಂಗಪ್ಪನವರ ಮಗನಾದ ಬಸವರಾಜು ಅವರು ಗೋಡೇಕೆರೆ ಮಠದ ಕಾರ್ಯದರ್ಶಿಯಾಗಿದ್ದರು. ಇವರ ೭೦ ವರ್ಷದ ಮಗನಾದ ಶರಣ ಮಹಾದೇವಪ್ಪನವರನ್ನು ಸಂದರ್ಶನ ಮಾಡಿದೆ. ಮಹಾದೇವಪ್ಪನವರು ಪರಮ ಬಸವ ಭಕ್ತರು. ನಲ್ವತ್ತು ವರ್ಷಗಳ ಹಿಂದೆಯೇ ವಚನ ಮಾಂಗಲ್ಯ ಮಾಡಿಕೊಂಡವರು. ಬಂದ ವಿಷಯ ತಿಳಿಸಿದೆ. ಪ್ರೊ. ವಿ.ವಿ.ಸಂಗಮದ ಹೇಳಿದ ಸಂಗತಿ ಸತ್ಯವೆಂದರು. ಮುಂದುವರೆದು "ಶೂನ್ಯಪೀಠದ ಮೂರನೆಯ ಪೀಠಾಧಿಪತಿ ಸಿದ್ಧರಾಮೇಶ್ವರರು ನೊಣಬರ ಗುರುಗಳೆಂದು ನೊಣಬ ಸಮಾಜ ನಂಬುತ್ತದೆ. ಬಸವಣ್ಣನವರ ಸಂಪರ್ಕಕ್ಕೆ ಬರುವ ಪೂರ್ವದಲ್ಲಿ ಸಿದ್ಧರಾಮೇಶ್ವರರು ಸೊನ್ನಲಾಪುರದಲ್ಲಿ ಕೆರೆ ಕಟ್ಟೆಗಳನ್ನು ನಿರ್ಮಿಸುತ್ತಿದ್ದರು. ಕಾರಣ ಸಿದ್ಧರಾಮೇಶ್ವರರು ಭೋವಿ ಸಮಾಜಕ್ಕೆ ಸೇರಿದವರು ಎಂಬ ಪ್ರತೀತಿ ಭೋವಿ ಸಮಾಜದಲ್ಲಿಯೂ ಇದೆ. ಭೋವಿಗಳು ಸಿದ್ಧರಾಮೇಶ್ವರರ ವಂಶದವರು ಎಂದು ಹೇಳುತ್ತಾರೆ. ಕಾರಣ ನಮ್ಮ ಸಮಾಜವು ಒಂದು ಕಾಲದಲ್ಲಿ ಭೋವಿಗಳಿರಬಹುದೆಂಬ ಭಾವನೆ ಲಿಂಗಾಯತ ಬಣಜಿಗರಲ್ಲಿರಬಹುದು" ಎಂದರು. "ಭೋವಿಗಳು ಜಾತಿ ಏಣಿಶ್ರೇಣಿಯಲ್ಲಿ ತಳಸಮುದಾಯವೆಂದು ಪಂಚಪೀಠಗಳ ನಂಬುಗೆ. ಲಿಂಗಾಯತರಲ್ಲಿ ಮೇಲ್ವರ್ಗದ ಸಮಾಜಗಳೆಂದು ಭಾವಿಸಿರುವ ಜಂಗಮರು, ಬಣಜಿಗರು, ಪಂಚಮಸಾಲಿಗಳು ೪೦-೫೦ ವರ್ಷಗಳ ಪೂರ್ವದಲ್ಲಿ ನಮ್ಮೊಂದಿಗೆ ವಿವಾಹ ಸಂಬಂಧ ಬೆಳಸುತ್ತಿರಲಿಲ್ಲ" ಎನ್ನುತ್ತಾರೆ.

ಪ್ರೊ. ವಿ.ವಿ.ಸಂಗಮದ ಅವರು ಲಿಂಗಾಯತ ಧರ್ಮದ ಇನ್ನೊಂದು ಪ್ರಬಲ ಸಮಾಜವಾದ ಸಾದರ ಸಮಾಜ ಹಾಗೂ ಪಂಚಮಸಾಲಿ, ಬಣಜಿಗ ಸಮಾಜಗಳಲ್ಲಿರುವ ತಾರತಮ್ಯದ ವಿಷಯದಲ್ಲೂ ಬರೆದಿದ್ದರು. ಸತ್ಯಾಸತ್ಯತೆಯನ್ನು ತಿಳಿಯಲು ನಾನು ಪ್ರಾಜ್ಞರಾದ ಸಾಣೆಹಳ್ಳಿ ಶ್ರೀ ಪಂಡಿತಾರಾಧ್ಯ ಸ್ವಾಮೀಜಿಯವರನ್ನು ಸಂಪರ್ಕಿಸಿದೆ. ವಿಷಯ ತಿಳಿಸಿ, ಅದು ಸತ್ಯವೇ? ಎಂದು ಕೇಳಿದೆ. ಸ್ವಾಮೀಜಿ

In Public domain. Digitization Muthulakshmi Research Academy
ನೇರವಾಗಿ ಉತ್ತರಿಸದೆ "ಪ್ರೊ. ಸಂಗಮದ ಒಬ್ಬ ಒಳ್ಳೆಯ ಬಸವನಿಷ್ಠ ವ್ಯಕ್ತಿಯಾಗಿದ್ದರು, ಅಲ್ಲದೆ ಒಳ್ಳೆಯ ವಾಗ್ಮಿಯೂ ಆಗಿದ್ದರು, ಎನ್ನುತ್ತ, ಹೌದು ನಾವು ಚಿಕ್ಕವರಿದ್ದಾಗ ನಮ್ಮ ಗುರುಗಳು ಈ ವಿಷಯಗಳನ್ನು ನಮಗೆ ತಿಳಿಸುತ್ತಿದ್ದರು. ಅಂದಿನ ದಿನಗಳಲ್ಲಿ ಲಿಂಗಾಯತ ಸಮಾಜದಲ್ಲಿ ಏಣಿಶ್ರೇಣಿಯ ವ್ಯವಸ್ಥೆಯಿತ್ತು. ಸಾದರ ಸಮಾಜದ ಲಿಂಗಾಯತರಿಗೆ ಕೆಲವು ಲಿಂಗಾಯತ ಸಮಾಜಗಳು ಪಂಕ್ತಿಯಲ್ಲಿ ಪರಪಂಕ್ತಿ ಮಾಡುತ್ತಿದ್ದರು. ಆದರೆ ನಾವು ಮಠದ ಜವಾಬ್ದಾರಿ ವಹಿಸಿಕೊಂಡ ಮೇಲೆ ಅಂತಹ ಘಟನೆಗಳು ನನ್ನ ಗಮನಕ್ಕೆ ಬಂದಿಲ್ಲ. ಈ ವಿಷಯ ನೂರಾರು ವರ್ಷಗಳ ಹಿಂದಿನದು. ಈಗ ಕಾಲ ಬದಲಾಗಿದೆ. ಪಟ್ಟಣಗಳಲ್ಲಿ ನಿಜವಾದ ಬಸವಸಿದ್ಧಾಂತ ಕಾಣುತ್ತಿದ್ದೇವೆ" ಎಂದರು.

ಸೂಕ್ಷ್ಮಮತಿಗಳಾದ ಸಾಣೇಹಳ್ಳಿ ಪೂಜ್ಯರು ಲಿಂಗಾಯತ ವಿರಕ್ತಮಠಗಳಿಂದ ಸಿರಿಗೆರೆ ಮಠವನ್ನು ಅವಮಾನಿಸಲಾಗುತ್ತಿತ್ತು ಎಂಬ ನಿಜ ಸಂಗತಿಯನ್ನು ಬಹಿರಂಗಪಡಿಸದೆ ಹೋದರೂ ಚಿತ್ರದುರ್ಗದ ಮುರುಘಾಮಠವು ಸಾದರ ಸಮಾಜದ ಗುರುಪೀಠವನ್ನು ಹೇಗೆ ಕಟುವಾಗಿ ಹೀಯಾಳಿಸುತ್ತಿತ್ತು ಎಂಬುದನ್ನು ಮುರುಘಾ ಮಠವೆ ಹೊರತಂದಿರುವ "ಶೂನ್ಯಪೀಠ ಪ್ರಭಾವ" ಎಂಬ ಗ್ರಂಥದ ಈ ಕೆಳಗಿನ ಸಾಲುಗಳು ಸಾಕ್ಷಿಯಾಗುತ್ತವೆ. "ಉಜ್ಜಯಿನಿಯಲ್ಲಿ ಸದ್ಧರ್ಮ ಸಿಂಹಾಸನವಿದ್ದು ಅದರ ಅಧ್ಯಕ್ಷ ಸ್ಥಾನದಲ್ಲಿ ಒಬ್ಬ ವ್ಯಕ್ತಿ ಇರುವಾಗ ಅದು ಸಿರಿಗೆರೆಯಲ್ಲಿ ಹೇಗೆ ಇರಲಿಕ್ಕೆ ಸಾಧ್ಯವಾದೀತು? ಉಜ್ಜಯಿನಿಯ ಜಗದ್ಗುರುಗಳ ಕೃಪಾ ಪ್ರಸಾದದಿಂದಲೇ ಕೆಲವು ವರ್ಷಗಳ ಹಿಂದೆ ಹೊಲೆಯ ಮರುಳುಸಿದ್ಧನೆಂಬ ಸದ್ಭಕ್ತನು ತರಳ ಬಾಳು ಎಂದು ಆಶೀರ್ವಾದವನ್ನು ಪಡೆದು ಅವರು ಅನುಗ್ರಹಿಸಿದ ಸಿದ್ಧೇಶ್ವರನನ್ನು ಭಕ್ತಿಯಿಂದ ಪೂಜಿಸುತ್ತ ಬಂದಮೇಲೆ ಆಗಿರುವ ಸಿರಿಗೆರೆ ಮಠದಲ್ಲಿ ಹೇಗೆ ಸದ್ಧರ್ಮ ಸಿಂಹಾಸನವಿದ್ದೀತೂ?"[10] ಎಂದು ಜಾತಿ ಆಧಾರದಲ್ಲಿ ಸಿರಿಗೆರೆ ಮಠವನ್ನು ಜರಿಯುತ್ತಾರೆ. ಇದರಿಂದ ಲಿಂಗಾಯತದಲ್ಲಿ ಜಾತಿ ಯಾವ ಮಟ್ಟದಲ್ಲಿ ಬೇರೂರಿದೆ ಎಂದು ಕಲ್ಪಿಸಬಹುದು. ಲಿಂಗಾಯತ ತತ್ವವನ್ನು ಪಾಲಿಸುವ ಚನ್ನಬಸವಣ್ಣನವರು ಏರಿದ ಶೂನ್ಯ ಸಿಂಹಾಸನ ಪೀಠವು ತಮ್ಮದೆಂದು ಸಾಧಿಸುವ ಈ ಪೀಠವು ಅಲ್ಲಮ ಪ್ರಭುಗಳ ಸಿದ್ಧಾಂತಗಳನ್ನು ಮರೆತಿರುವುದು ದೊಡ್ಡ ದುರಂತ. 'ಜಂಗಮ ಜಾತಿ ಶ್ರೇಷ್ಠ' ಎಂದು ಅನೇಕ ಬಾರಿ ಅನೇಕ ಸಂದರ್ಭಗಳಲ್ಲಿ ಸಾರುವ "ಶೂನ್ಯಪೀಠದ ಪ್ರಭಾವ" ಎಂಬ ಗ್ರಂಥದಲ್ಲಿ ಲಿಂಗಾಯತರಲ್ಲಿ ಜಾತಿ ಎಷ್ಟು ಬೇರೂರಿದೆ ಎಂಬ ಕಟು ಸತ್ಯವನ್ನು ಬಯಲಿಗಿಡುತ್ತದೆ. ಇದೆ ಪುಸ್ತಕದಲ್ಲಿ ಭಕ್ತವರ್ಗದ ಮಠಗಳಾದ ತುಮಕೂರಿನ ಸಿದ್ಧಗಂಗಾ ಹಾಗೂ ಮೈಸೂರಿನ ಸುತ್ತೂರು ಮಠಗಳನ್ನು ಜಾತಿ ಆಧಾರದಲ್ಲಿ ಕಟುವಾಗಿ ವಿಮರ್ಶಿಸುತ್ತಾರೆ. ಜಂಗಮ ಸಮಾಜದವರನ್ನೆ ಮಠಾಧಿಕಾರಿಗಳನ್ನಾಗಿ ನೇಮಿಸಬೇಕು ಎಂದು ಹೇಳುತ್ತ

In Public domain. Digitization Muthulakshmi Research Academy

"ಜಂಗಮರ ರಕ್ತಕ್ಕೆ ಹುಟ್ಟಿದ ವ್ಯಕ್ತಿಗಳಿಂದಲೇ ಲೋಕಕಲ್ಯಾಣವು ಶಾಶ್ವತವಾಗಿ ನಡೆದೀತೇ ಹೊರತು ಭಕ್ತ ಮನೆತನದವರಿಂದ ಹಾಗೆ ನಡೆಯಲಾರವೆಂಬುದಕ್ಕೆ ಇಂದಿನ ಪ್ರಚಲಿತವಾದ ಸಿರಿಗೆರೆ, ಸುತ್ತೂರು, ಸಿದ್ಧಗಂಗೆ ಮಠಗಳ ಸ್ವಾಮಿಗಳ ಚಲನವಲನಗಳೇ ಪ್ರತ್ಯಕ್ಷ ನಿದರ್ಶನವಾಗಿವೆ. ಅದಕ್ಕಾಗಿಯೇ ಲೋಕ ಕಲ್ಯಾಣದ ದಿವ್ಯದೃಷ್ಟಿಮಯದ ಭಾರತ ಸರ್ಕಾರದವರು ಕೇದಾರ ಪೀಠಕ್ಕೆ ಸ್ವಾಮಿಗಳನ್ನು ಆರಿಸುವಾಗ ಮೈಸೂರು ದೇಶದ ಜಂಗಮ ಮನೆತನದವರೇ ಆಗಬೇಕೆಂಬ ನಿಯಮವನ್ನು ಮಾಡಿದರು. ಹೀಗೆಯೇ ಎಲ್ಲಾ ಮಠಗಳಿಗೂ ನಿಬಂಧನೆ ಇದೆ. ಅದರಿಂದಲೇ ಅದ್ಭುತವಾದ ರೀತಿಯಲ್ಲಿ ಮಾನವ ಸಮಾಜದ ಕಲ್ಯಾಣವು ಸಾಗಲಿದೆ... "ಮುಂದುವರಿಯುತ್ತಾ ಇವರು ಪು. ಸಂ. ೯೫ರಲ್ಲಿ ಬರೆಯುತ್ತಾರೆ. "ನೊಣಬರಿಗೆ ಒಬ್ಬ ಜಗದ್ಗುರು, ಸಾದರಿಗೊಬ್ಬ ಜಗದ್ಗುರು ಹೀಗೆ ಎಲ್ಲಿಯಾದರೂ ಉಂಟೆ? ಬ್ರಾಹ್ಮಣರಲ್ಲಿ ಮೂಲಪೀಠಕ್ಕೆ ಮಾತ್ರವೇ ಜಗದ್ಗುರು ಪದವಿಯು ಅಂಟಿರುವಂತೆ ವೀರಶೈವರಲ್ಲೂ ಮೂಲ ಪೀಠಕ್ಕೆ ಮಾತ್ರವೇ ಅದು ಸಲ್ಲಬೇಕಾಗಿದ್ದು ಧರ್ಮ".[೧೧] "ಚಿತ್ರದುರ್ಗ ಮಠಕ್ಕೆ ಬಂದಿರುವವರೆಲ್ಲರೂ ಮಾಹೇಶ್ವರ ವರ್ಗಕ್ಕೆ ಸೇರಿದ ಜಂಗಮರೇ ಆಗಿರುವರು. ಅದರಂತೆಯೇ ಪಂಚಮಹಾಪೀಠಗಳಿಗೂ ಮಾಹೇಶ್ವರ ಮನೆತನದವರೇ ಸ್ವಾಮಿಗಳಾಗಬೇಕೆಂಬ ನಿಯಮವಿದೆ. ಈ ಆರೂ (ಪಂಚಪೀಠಗಳು+ ಚಿತ್ರದುರ್ಗದಮಠ) ಮಹಾಪೀಠಗಳಿಗೆ ಭಕ್ತವರ್ಗದ ಜನರು ಯಾರೂ ಅಧಿಕಾರಕ್ಕೆ ಬರುವಂತಿಲ್ಲ"[೧೨] ಪಂಚಪೀಠದ ಜಗದ್ಗುರುಗಳನ್ನು ಪರೋಕ್ಷವಾಗಿ ಬೆಂಬಲಿಸುತ್ತ "ಜಗದ್ಗುರುಗಳನ್ನು ಕೆಳಮಟ್ಟಕ್ಕೆ ಇಳಿಸಿ ಎಲ್ಲಾ ಸ್ವಾಮಿಗಳು ಸಮಾನರೆಂಬ ವಾದವನ್ನು ಮುಂದೆ ಇಡುವುದು ಉತ್ತಮ ಸಂಸ್ಕೃತಿಯಲ್ಲ" ಎಂದು ಉಲ್ಲೇಖಿಸುತ್ತಾರೆ.[೧೩] ಜಾತಿ ಆಧಾರಿತ ವಾದವವನ್ನು ಮಂಡಿಸುತ್ತ ಲಿಂಗಾಯತ ಧರ್ಮವನ್ನು ಕಟ್ಟಿದ ಶರಣರನ್ನೂ ಜಾತಿ ಆಧಾರದಲ್ಲಿ ವಿಭಜಿಸಲು ಪ್ರಯತ್ನಿಸುತ್ತಾರೆ "ಒಂದೊಂದು ಕಾಲದಲ್ಲಿ ಅವತರಿಸಿರುವ ಮಹಾಪುರುಷರೆಲ್ಲರೂ ತತ್ವವನ್ನು ಜನರಿಗೆ ಪರಿಚಯ ಮಾಡಿಸಲಿಕ್ಕಾಗಿಯೇ ಬಂದಿದ್ದರೂ ಸಹ ಒಂದೊಂದು ಜಾತಿಗೆ ಅಂಟಿಕೊಂಡೇ ಇರುವರು. ಆಯಾ ಜಾತಿಗೆ ಸಂಬಂಧಿಸಿದ ಧರ್ಮವನ್ನು ತಿಳಿದು ಆಚರಿಸುವುದರಿಂದಲೇ ಅವರಿಗೆ ತತ್ವದ ಅನುಭವ ಉಂಟಾಗುವುದು. ಜಾತಿಗೆ ಸಿಲುಕದೆ ಬಯಲಿನಲ್ಲಿ ನಿಂತು ಬಯಲಿನಲ್ಲೇ ಹೋರಾಡುವುದರಿಂದ ಯಾವನೂ ಸಾಮಾನ್ಯ ಜನರನ್ನು ಉದ್ಧರಿಸಲಾರನು. ಸಿದ್ದರಾಮಣ್ಣನಿಗೆ ಜಾತಿಯ ಮುದ್ರೆ ಇಲ್ಲದಿದ್ದರಿಂದಲೇ ಅವನು ಕಲ್ಯಾಣದಲ್ಲಿ ಅನುಭವ ಮಂಟಪಕ್ಕೆ ಸೇರಿಸಲು ಶರಣರು ಯಾರು ಒಪ್ಪಲಿಲ್ಲ. ಅವನು ಅಂತರಂಗದ ತತ್ವವನ್ನು ಬಲ್ಲವನೇ ಆಗಿದ್ದರೂ ಹೊರಗೆ ಅದರ ನಿತ್ಯ ಸಂಪರ್ಕವನ್ನು ಹೊಂದಿರಲಿಲ್ಲ. ಅವನಿಗೆ ಜಾತಿ ಧರ್ಮದ ಸಂಬಂಧವಿಲ್ಲದೇ ಇದ್ದುದರಿಂದ

In Public domain. Digitization Muthulakshmi Research Academy

ಆ ಕಾಲದ ಶಿವಾನುಭವಿಗಳೆಲ್ಲರೂ ಅವನನ್ನು ಅನುಭವಗೋಷ್ಠಿಯಿಂದಲೇ ಹೊರಗೆ ಹಾಕಿದರು. ಅವನು ತನ್ನ ವಾದವನ್ನೆಲ್ಲ ವಿಶೇಷವಾಗಿ ಮಂಡಿಸಿ ನಿರುತ್ತರನಾಗಬೇಕಾಯಿತು. ಕೊನೆಗೆ ಜಾತಿ ಧರ್ಮವನ್ನು ಆಶ್ರಿಯಿಸಬೇಕೆಂಬ ನಿಯಮವನ್ನು ಅವನೂ ಒಪ್ಪಬೇಕಾಯಿತು.೧೪ ಆಹಾ ಎಂತಹ ಸಂಶೋಧನೆ? ಇಂತಹ ಅನಾಮದೇಯ ಸಂಶೋಧಕರನ್ನು ನಿರ್ಲಕ್ಷಿಸಬಹುದಾಗಿತ್ತು. ಆದರೆ ಈ ಸಾಹಿತ್ಯವು ಚಿತ್ರದುರ್ಗದ ಮುರುಘಾಮಠದಿಂದ ಪ್ರಕಟಗೊಂಡಿದೆ. ಅಲ್ಲದೆ ಎರಡು ಬಾರಿಮುದ್ರಣಗೊಂಡಿದೆ. ಈ ಕೃತಿಯು ಮೊದಲನೆಯ ಮುದ್ರಣವನ್ನು ೧೯೬೭ರಲ್ಲಿ ಕಂಡರೆ, ಎರಡನೆಯ ಮುದ್ರಣವು ಲಿಂಗಾಯತ ಚಳುವಳಿ ಪ್ರಾರಂಭವಾಗುವ ಒಂದು ವರ್ಷ ಪೂರ್ವದಲ್ಲಿ ಅಂದರೆ ೨೦೧೬ರಲ್ಲಿ ಮರುಮುದ್ರಣಗೊಂಡಿದೆ. ಮೇಲಾಗಿ ಈ ಕೃತಿಯ ಬೆನ್ನುಡಿಯನ್ನು ಲಿಂಗಾಯತ ಚಳುವಳಿಯ ರ‍್ಯಾಲಿಗಳ ವೇದಿಕೆಗಳಲ್ಲಿ ಪ್ರಮುಖವಾಗಿ ಕಾಣಿಸಿಕೊಂಡ ಚಿತ್ರದುರ್ಗ ಮುರುಘಾಶರಣರೆಂದು ಪ್ರಖ್ಯಾತಿ ಪಡೆದ, ಜಾತಿಗೊಂದು ಪೀಠ ಮಾಡಿ ತಮ್ಮ ಮಠದಲ್ಲಿರುವ ಬೇರೆ ಬೇರೆ ಜಾತಿಯ ಶಿಷ್ಯರಿಗೆ ಬೇರೆ ಬೇರೆ ಪೀಠಾಧಿಪತಿಗಳ ಪಟ್ಟ ಕಟ್ಟಿದ್ದ ಡಾ. ಶಿವಮೂರ್ತಿ ಮುರುಘಾಶರಣರು ಬರೆದಿದ್ದಾರೆ. ಹೇಗಿದೆ ಮಠಾಧೀಶರ ಸಿದ್ಧಾಂತ?

ಹಾಗಿದ್ದರೆ ಲಿಂಗಾಯತರು ಏಣಿ ಶ್ರೇಣಿ ಜಾತಿಯ ಹಿಂದೂಗಳೆ? ಇದಕ್ಕೆ ಉತ್ತರ ಬಹಳ ಕಠಿಣವೂ ಹೌದು ಸುಲಭವೂ ಹೌದು. ಈ ಜಾತಿವ್ಯವಸ್ಥೆ ಬಸವಣ್ಣನ ಕಾಲದಲ್ಲಿಯೂ ಇತ್ತು. ಅವರ ನಂತರವೂ ಇದೆ. "ಜಾತಿವ್ಯವಸ್ಥೆಯ ಬಂಧನಕ್ಕೀಡಾದ ಸಮಾಜವನ್ನು ಆ ಬಂಧನದಿಂದ ವಿಮೋಚನೆಗೊಳಿಸಿ ಜಾತ್ಯತೀತವಾದ ಜನಪದ ಸಮಷ್ಟಿ ಸಮುದಾಯ ಸ್ಥಿತಿಗೆ ಮುಟ್ಟಿಸುವುದೇ ಆಗಿದ್ದಿತು. ಆ ಉದ್ದಿಶ್ಯದ ಸಂಪಾದನೆಯೇ ಅವನ ಪಾಲಿಗೆ ಮೋಕ್ಷವಾಗಿದ್ದಿತು. ಅಂತಹ ಸಮುದಾಯವನ್ನು ಅವನು ಜಂಗಮವೆಂದು ಕರೆದನು. ದೇವರೆಂದು ಕರೆದನು, ದೇವಲೋಕವೆಂದು ಸಂಬೋಧಿಸಿದನು. ಜಾತಿಭೇದವಿಲ್ಲದ, ಲಿಂಗಭೇದವಿಲ್ಲದ, ವೃತ್ತಿಭೇದವಿಲ್ಲದ ಆ ಸಮಾಜವನ್ನು ಪ್ರಶಂಸಿಸುತ್ತ "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು; ಅಲ್ಲಿ ಸಲ್ಲದವರು ಇಲ್ಲಿಯೂ ಸಲ್ಲರು" ಎಂದು ಬಸವಣ್ಣನವರ ವಿಚಾರಗಳನ್ನು ಪ್ರಸ್ತುತ ಪಡಿಸುತ್ತಾರೆ ಡಾ. ಹಿರೇಮಲ್ಲೂರ ಈಶ್ವರನ್.೧೫ ಜಗತ್ತಿನ ಯಾವುದೇ ಧರ್ಮವು ತನ್ನ ಮೂಲಸಿದ್ಧಾಂತವಾಗಲಿ ಅಥವಾ ಮೂಲ ಆಚರಣೆಗಳನ್ನಾಗಲಿ ಉಳಿಸಿಕೊಂಡಿಲ್ಲ, ಎಂದು ಸ್ಪಷ್ಟವಾಗಿ ಹೇಳಬಹುದು. ಇದರೊಂದಿಗೆ ಇನ್ನೊಂದು ಹೇಳಿಕೆಯನ್ನು ಗಮನಿಸಬೇಕು. "ಪ್ರತಿ ಸಾವಿರ ವರ್ಷಕ್ಕೊಮ್ಮೆ ಪ್ರಚಲಿತ ಧರ್ಮಗಳನ್ನು ವಿಸರ್ಜಿಸಿ ಹೊಸ ಧರ್ಮಗಳನ್ನು ಹುಟ್ಟುಹಾಕಬೇಕು" ಎಂಬ ಮಾತು ಪ್ರಸ್ತುತ ಎನಿಸುವುದು. ಕ್ರಿಶ್ಚಿಯನ್ ಧರ್ಮದ

In Public domain. Digitization Muthulakshmi Research Academy

ಸಿದ್ಧಾಂತ ಸಡಿಲಾಗಿಲ್ಲವೆ? ಇಸ್ಲಾಂಧರ್ಮವು ತನ್ನ ಮೂಲಸಿದ್ಧಾಂತ ಬಿಟ್ಟು ಹೊರ ಬಂದಿಲ್ಲವೆ? ಸಾಗರದಾಚೆ ಸಾಗಿದ ಬೌದ್ಧಧರ್ಮ ತನ್ನ ಮೂಲ ಸಿದ್ಧಾಂತದಿಂದ ಬೇರ್ಪಟ್ಟು ಅನೇಕ ಪಂಗಡವಾಗಿ ವಿಭಜನೆ ಹೊಂದಿಲ್ಲವೆ? ಭಾರತದಲ್ಲಿ ಜನ್ಮತಳೆದ ಜೈನಧರ್ಮ ವೈದಿಕರ ಅಡಿಯಾಳಾಗಿದ್ದರು. "ಪ್ರಾಚೀನ ಕಾಲದಿಂದಲೂ ಜೈನರು ಬ್ರಾಹ್ಮಣ ವೇದಗಳನ್ನು ನಿರಾಕರಿಸುತ್ತ ಬಂದಿರುವರು. ಯಜ್ಞಯಾಗಾದಿಗಳಲ್ಲಿ ಪಶುಬಲಿಯನ್ನು ಕೊಟ್ಟು ಹಿಂಸಾಚಾರಕ್ಕೆ ಅನುವು ಮಾಡಿಕೊಟ್ಟ ಬ್ರಾಹ್ಮಣರ ಶಾಸ್ತ್ರಗಳನ್ನು ಅವರು ಒಪ್ಪುವುದಿಲ್ಲ. ಆದರೂ ಕಾಲದ ಒತ್ತಡಕ್ಕೆ ಸಿಕ್ಕು ಬ್ರಾಹ್ಮಣ ಜೈನ ಧರ್ಮಗಳು ಪರಸ್ಪರ ಹೊಂದಾಣಿಕೆ ಮಾಡಿಕೊಂಡಿರುವವು; ಅದರಂತೆ ಬ್ರಾಹ್ಮಣರು ಪ್ರಥಮ ತೀರ್ಥಂಕರನಾದ ವೃಷಭದೇವನನ್ನು ವಿಷ್ಣುವಿನ ಅವತಾರವೆಂದು ಹೇಳುತ್ತ ಅದರ ಮೂಲಕ ಜೈನ ಧರ್ಮದ ಪವಿತ್ರ ಶ್ರೇಷ್ಠರನ್ನು ಮನ್ನಿಸಿಕೊಂಡು ಬಂದದ್ದೂ ಅವರ ಮೇಲುಂಟಾದ ಜೈನಿಕರಣದ ಪ್ರಭಾವವನ್ನು ಸೂಚಿಸುತ್ತದೆ" ಎನ್ನುತ್ತಾರೆ ಡಾ. ಹಿರೇಮಲ್ಲೂರ ಈಶ್ವರನ್. ಹಿಂದೂ (ವೈದಿಕ, ಶೈವ) ಧರ್ಮವನ್ನು ಕಟುವಾಗಿ ಟೀಕಿಸಿ ಅದರಿಂದ ಹೊರಬಂದ ಬೌದ್ಧಧರ್ಮ ಸ್ಥಾಪಕ ಬುದ್ಧನನ್ನು ವಿಷ್ಣುವಿನ ಇನ್ನೊಂದು ಅವತಾರವೆಂದು ಬ್ರಾಹ್ಮಣರು ಸಾಧಿಸಿ ಅವರನ್ನು ವೈದಿಕರನ್ನಾಗಿಸುವ ಪ್ರಯತ್ನ ನಡೆದಿಲ್ಲವೆ?

ಕೊನೆ ಟಿಪ್ಪಣಿಗಳು

೧. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಸಂಪುಟ ೩. ಪು.ಸಂ. ೩೫೪

೨. ಪ್ರೊ. ಮ್ಯಾಕ್ಸ್ ಮುಲ್ಲರ್ ಸೈನ್ಸ್ ಆಫ್ ರಿಲಿಜನ್, ಪು. ಸಂ. ೨೮

೩. ಲಿಂಗಾಯತ ಸಂಸ್ಕೃತಿ, ಡಾ ತೋಂಟದ ಸಿದ್ಧಲಿಂಗ ಶ್ರೀಗಳ ಅಭಿನಂದನ ಗ್ರಂಥ, ಪ್ರಧಾನ ಸಂಪಾದಕರು; ಡಾ.ಸರಜೂ ಕಾಟ್ಕರ್, ಪು.ಸಂ. ೧೧೭

೪. ಉಧೃತ: ಶರಣಶ್ರೀ, ಪು.ಸಂ. ೨೧

೫. ರೆಡ್ಡಿ ಸಮಾಜವನ್ನು ಉಲ್ಲೇಖಿಸಿಲ್ಲ. ವಿಜಾಪುರ ಜಲ್ಲೆಯಲ್ಲಿ ಅವರ ಸಂಖ್ಯೇ ಬಹಳ ದೊಡ್ಡದು.

೬. ಜೇಮ್ಸ್ ಕ್ಯಾಂಬೆಲ್, ಅದ್ಭುತ ಬರಹಗಾರ. ಸ್ಥಳೀಯ ಭಾರತೀಯರು ಮಾಡದ ಕಾರ್ಯವನ್ನು ಇವರು ಮಾಡಿದ್ದಾರೆ. ಅಂದಿನ ಜನಜೀವನದ ಸ್ಪಷ್ಟ ಚಿತ್ರಣ ಕೊಡುತ್ತಾರೆ. ನಾಗರಿಕರ ಚಹರೆ, ತೊಡುತ್ತಿದ್ದ ಬಟ್ಟೆ, ವಾಸಿಸುತ್ತಿರುವ ಮನೆ, ಕಸಬು, ಆಹಾರಪದ್ಧತಿ, ಹೆಣ್ಣುಮಕ್ಕಳ ಸ್ಥಿತಿಗತಿ, ಮಕ್ಕಳ ಶಿಕ್ಷಣ, ಧಾರ್ಮಿಕ ಆಚರಣೆ, ಪ್ರತಿಯೊಂದು ಸಮಾಜದ ಸ್ಥಾನಮಾನ, ಅವರ ಜನಸಂಖ್ಯೆ, ಆಚರಣೆಗಳಾದ ಮದುವೆ, ದೀಕ್ಷೆ, ಮರಣ ಸಂಸ್ಕಾರಗಳನ್ನು ಸುದೀರ್ಘವಾಗಿ ಸುಂದರವಾಗಿ ಚಿತ್ರಿಸಿದ್ದಾರೆ. ಇವರ ಬರಹಗಳ ಬಗ್ಗೆ ಬರೆಯುತ್ತ "ಇವರು ಸಿದ್ಧಪಡಿಸಿದ ಗೆಜೆಟಿಯರುಗಳು, ಸಂಶೋಧನಾ ಪ್ರಬಂಧಗಳು ಮತ್ತು ವರದಿ ಮುಂತಾದವು ಗ್ರಂಥಸ್ಥ ಮೂಲದಿಂದ ಸಂಗ್ರಹಿಸಿದ ಮಾಹಿತಿಯನ್ನು ಆಧರಿಸಿ ಸಿದ್ಧಪಡಿಸಿದವುಗಳಲ್ಲ. ಕ್ಷೇತ್ರಕಾರ್ಯವನ್ನು ಮೂಲವನ್ನಾಗಿ ಮಾಡಿಕೊಂಡು ರಚಿಸಿದ ಕೃತಿಗಳಾಗಿವೆ; ಇವರು ಯಾವುದನ್ನು ಕಲ್ಪಿಸಿ,

In Public domain. Digitization Muthulakshmi Research Academy

ಊಹಿಸಿ, ಉತ್ಪ್ರೇಕ್ಷಿಸಿ ಬರೆಯಲಿಲ್ಲ. ತಾವು ಸಂಗ್ರಹಿಸದ ಮಾಹಿತಿಯನ್ನು ತಜ್ಞರೊಂದಿಗೆ ನಡೆಸಿದ ಸಂವಾದದ ಆಧಾರದಲ್ಲಿ ವರದಿಗಳನ್ನು ಸಿದ್ಧಪಡಿಸಿದ್ದಾರೆ" ಎನ್ನುತ್ತಾರೆ ಡಾ. ಟಿ.ಆರ್.ಚಂದ್ರಶೇಖರ.

೭. ಲಿಂಗಾಯತ ಸಂಸ್ಕೃತಿ, ಪ್ರೊ.ವಿ.ವಿ.ಸಂಗಮದ, ಪು.ಸಂ. ೧೧೯.

೮. ಬಸವಣ್ಣ ಹಾಗೂ ಲಿಂಗಾಯತ ಧರ್ಮ, ಹಿರೇಮಲ್ಲೂರ್ ಈಶ್ವರನ್, ಪು.ಸಂ.೧೪೬

೯. ಲಿಂಗಾಯತ, ಜೈನ ಮತ್ತು ಬ್ರಾಹ್ಮಣ ಧರ್ಮಗಳು, ಹಿರೇಮಲ್ಲೂರ್ ಈಶ್ವರನ್, ಪು.ಸಂ. ೩೪೮–೩೪೯.

೧೦. ಶೂನ್ಯಪೀಠದ ಪ್ರಭಾವ, ಲೇ: ಡಾ. ಟಿ.ಜಿ. ಸಿದ್ಧಪ್ಪಾರಾಧ್ಯ, ಪ್ರ: ಅಲ್ಲಮಪ್ರಭು ಸಂಶೋಧನಾ ಕೇಂದ್ರ, ಜಗದ್ಗುರು ಮುರುಘರಾಜೇಂದ್ರ ಗ್ರಂಥಮಾಲೆ, ಚಿತ್ರದುರ್ಗ, ಪು.ಸಂ. ೭೩

೧೧. ಅದೇ ಪುಸ್ತಕ, ಪು.ಸಂ. ೯೪–೯೫

೧೨. ಅದೇ ಪುಸ್ತಕ, ಪು.ಸಂ. ೮೫

೧೩. ಅದೇ ಪುಸ್ತಕ, ಪು.ಸಂ. ४೫

೧೪. ಅದೇ ಪುಸ್ತಕ, ಪು.ಸಂ. ೧೦೦–೧೦೧

In Public domain. Digitization Muthulakshmi Research Academy

ಗ್ರಂಥಋಣ

೧. ವಿಜಯಕುಮಾರ ಎಂ. ಬೋರಟ್ಟಿ, ಹಿರಿಯರ ಹಿರಿತನ ಹಿಂದೇನಾಯಿತು: ಕನ್ನಡ ಸಾಹಿತ್ಯ, ವಸಾಹತುಶಾಹಿ ಮತ್ತು ಸಮುದಾಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಹಿರೇಮಲ್ಲೂರು ಈಶ್ವರನ್, ಲಿಂಗಾಯತ, ಜೈನ ಮತ್ತು ಬ್ರಾಹ್ಮಣ ಧರ್ಮಗಳು: ಮಠಗಳ ಒಂದು ತೌಲನಿಕ ಅಧ್ಯಯನ, ಭಾಗ ೩, ಭಾಗ ೨, ಭಾಗ ೧.

೩. ಬಸವನಾಳ ಶಿ.ಶಿ., ವೀರಶೈವ ತತ್ತ್ವಪ್ರಕಾಶ: ಸಾಹಿತ್ಯ ಸಮಿತಿ; ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ, ೧೯೪೧.

೪. ಸದಾನಂದ ಪಾಟೀಲ, ಹರಿಹರನ ರಗಳೆಗಳು ಒಂದು ಸಾಂಸ್ಕೃತಿಕ ಅಧ್ಯಯನ.

೫. ಪ್ರಕಾಶ ಗು. ಕಶೆಟ್ಟಿ(ಸಂ), ವಚನ ತವನಿಧಿ ವಿಷಯಾಧಾರಿತ ವಚನಗಳ ಸಂಪಾದನೆ, ವಚನ ಅಧ್ಯಯನ ಕೇಂದ್ರ, ಅನುಭವ ಮಂಟಪ ಟ್ರಸ್ಟ್, ತಾಳೀಕೋಟೆ.

೬ ಲಕ್ಷ್ಮಣ ಕೌಂಟೆ, ಲಿಂಗಾಯತ ಸ್ವತಂತ್ರ ಧರ್ಮ.

೭ ಬಸ್ರೂರ್ ಸುಬ್ಬರಾವ್, ಲಿಂಗಾಯತ ದರ್ಶನ, ಮಂಗೇಶ್ ಪಬ್ಲಿಷರ್ಸ್.

೮. ವೀರಪ್ಪ ಬಿ.ಸಿ., ಬೆಂಗಳೂರು ನಗರದ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ.

೯. ಕಲಬುರ್ಗಿ ಎಂ.ಎಂ., ಲಿಂಗಾಯತ ಸ್ವತಂತ್ರ ಧರ್ಮ.

೧೦. ಕಾಳಾಮುಖ ಪಂಚಾಚಾರ್ಯರು, ಸಾಧನೆ ಸಂ.೨೪, ಸಂ, ೭೪-೭೫. ಸಂಚಿಕೆ ೩-೪, ಜುಲೈ-ಡಿಸೆಂಬರ್ ೧೯೯೫

೧೧. ಅದರಗುಂಜಿ ಹಿರೇಮಠದ ಶಿವಲಿಂಗಯ್ಯ, ವೀರಶೈವ ಧರ್ಮಸಿಂಧು.

೧೨. ಬಸವಯ್ಯ ಹಿರೇಮಠ (ಕಂಬಿ), ಅರಟಾಳ ರುದ್ರಗೌಡರ ಚರಿತ್ರೆ, ಪ್ರಸಾರಾಂಗ, ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ, ಬೆಳಗಾವಿ.

೧೩. ಮಲ್ಲೇಪುರಂ ಜಿ. ವೆಂಕಟೇಶ (ಸಂ), ಶಂಬಾ ಕೃತಿ ಸಂಪುಟ-೨, ಕಂನಡ-ಕಂನುಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೧೮.

೧೪. ಸರಜೂ ಕಾಟ್ಕರ್ (ಸಂ), ಲಿಂಗಾಯತ ಸಂಸ್ಕೃತಿ ಡಾ. ತೋಂಟದ ಸಿದ್ಧಲಿಂಗಶ್ರೀಗಳ ಅಭಿನಂದನ, ಬೆಳದಿಂಗಳ ಪ್ರಕಾಶನ ಬೆಳಗಾವಿ.

೧೫. ಜೆ.ಪಿ.ಶೌತನ್ (ಮೂಲ) ಡಾ. ಟಿ.ಆರ್.ಚಂದ್ರಶೇಖರ (ಕನ್ನಡಕ್ಕೆ), ಅನುಭಾವಿಗಳ ಕ್ರಾಂತಿ.

೧೬ ವಚನ ಸಾಹಿತ್ಯ ಸಂವಾದ, ಪ್ರಜಾವಾಣಿ ಪ್ರಕಾಶನ.

In Public domain. Digitization Muthulakshmi Research Academy

೧೭. ಶೇಷ ನವರತ್ನ (ಅನು), ಮನುಸ್ಮೃತಿ, ಸಮಾಜ ಪುಸ್ತಕಾಲಯ, ಧಾರವಾಡ–೧.

೧೮. ಹುಣಶ್ಯಾಳ ಎಸ್.ಎಂ., ಲಿಂಗಾಯತ ಚಳುವಳಿ ಕರ್ನಾಟಕದಲ್ಲಿ ಒಂದು ಸಾಮಾಜಿಕ ಕ್ರಾಂತಿ.

೧೯. ಜಾಮದಾರ ಎಸ್.ಎಂ., ವೀರಶೈವ ಪಂಚಾಚಾರ್ಯರು.

೨೦. ಡೆವಿಡ್ ಎನ್. ಲಾರೆಂಜೆನ್ (ಮೂಲ), ವಿರೂಪಾಕ್ಷ ಕುಲಕರ್ಣಿ (ಕನ್ನಡಕ್ಕೆ), ಕಾಪಾಲಿಕರು ಮತ್ತು ಕಾಳಾಮುಖರು ಕಣ್ಮರೆಯಾದ ಎರಡು ಶೈವ ಸಂಪ್ರದಾಯಗಳು.

೨೧. ಪಾಟೀಲ ಜೆ.ಎಸ್. (ಸಂ), ಕನ್ನಡ ಮಣ್ಣಿನ ಅಸ್ಮಿತೆ ಗೌರಿ ಲಂಕೇಶ್, ಯಗಚಿ ಪ್ರಕಾಶನ.

೨೨. ಕಲಬುರ್ಗಿ ಎಂ.ಎಂ., ವೀರಣ್ಣ ರಾಜೂರ (ಸಂ), ಶೂನ್ಯ ಸಂಪಾದನೆ.

೨೩. ಚಿದಾನಂದಮೂರ್ತಿ ಎಂ., ಭಾರತೀಯತೆ ಲಿಂಗಾಯತ ಹಿಂದೂ.

೨೪. ಜಾಮದಾರ ಎಸ್.ಎಂ., ಲಿಂಗಾಯತರು ಹಿಂದೂಗಳೆ?

೨೫. ಮಹಾದೇವಪ್ಪ ಎನ್.ಜಿ., ಬಸವಣ್ಣ ಲಿಂಗಾಯತ ಧರ್ಮ ಸ್ಥಾಪಕರು ನಿರ್ಣಾಯಕ ಆಧಾರಗಳು.

೨೬. ಶ್ರೀ ಸಿದ್ಧೇಶ್ವರ ಸ್ವಾಮಿಗಳು (ಸಂ), ಸಿದ್ಧಾಂತ ಶಿಖಾಮಣಿ.

೨೭. ಕಲಬುರ್ಗಿ ಎಂ.ಎಂ. (ಸಂ), ಡಾ. ಫ.ಗು. ಹಳಕಟ್ಟಿ ಸಮಗ್ರ ಸಂಪುಟಗಳು, ಸಂಪುಟ ೧೨, ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ ವಿಜಾಪುರ.

೨೮. ಕಲಬುರ್ಗಿ ಎಂ.ಎಂ. (ಸಂ), ವಚನ, ಬಸವ ಸಮಿತಿ, ಬೆಂಗಳೂರು–೧

೨೯. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು, ಸಿದ್ಧಾಂತ ಶಿಖಾಮಣಿ ಹಾಗೂ ಶ್ರೀಕರಭಾಷ್ಯ, ನಿಜದ ನಿಲುವು.

೩೦. ರಂಜಾನ್ ದರ್ಗಾ, ಲಿಂಗವಂತ ಧರ್ಮದಲ್ಲಿ ಏನುಂಟು ಏನಿಲ್ಲ?

೩೧. ಕಲಬುರ್ಗಿ ಎಂ.ಎಂ.(ಸಂ), ಶರಣಶ್ರೀ, ಶ್ರೀ ಮುರುಘಾಮಠ, ಚಿತ್ರದುರ್ಗ.

೩೨. ಹಿರೇಮಲ್ಲೂರು ಈಶ್ವರನ್, ಬಸವಣ್ಣ ಹಾಗೂ ಲಿಂಗಾಯತ ಧರ್ಮ, ಭಾಗ ೨.

೩೩. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು.

೩೪. ನೆನೆವ ಮನ, ಶ್ರೀ ಗುರುಸ್ಮೃತಿ ಸಂಪುಟ, ಸಿದ್ಧಗಂಗಾ ಪ್ರಕಾಶನ, ಸಿದ್ಧಗಂಗಾ ಮಠ ತುಮಕೂರು–೪.

೩೫. ಪ್ರಜಾವಾಣಿ, ವಿಜಯ ಕರ್ನಾಟಕ Deccan chronicle, Hindu, Indian Express, Times of India, Deccan Herald ಮತ್ತಿತರ ದೈನಿಕಗಳು ಮತ್ತು ದೃಶ್ಯ ಮಾಧ್ಯಮದ ವರದಿಗಳು.

೩೬. ಶಿರೂರ ಬಿ.ವಿ. (ಸಂ), ಡಾ. ಎಸ್.ಸಿ. ನಂದೀಮಠ ಲೇಖನಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–೧.

೩೭. ಚಂದ್ರಕಾಂತ ಬಿಜ್ಜರಗಿ, ಕುರುಬರ ಕುಲಗುರು, ಬಿಜಾಪುರ.

೩೮. ಸಿದ್ಧಪ್ಪಾರಾಧ್ಯ ಟಿ.ಜಿ., ಶೂನ್ಯಪೀಠ ಪ್ರಭಾವ, ಮುರುಘಾಮಠ, ಚಿತ್ರದುರ್ಗ.

In Public domain. Digitization Muthulakshmi Research Academy

In Public domain. Digitization Muthulakshmi Research Academy

In Public domain. Digitization Muthulakshmi Research Academy

In Public domain. Digitization Muthulakshmi Research Academy

In Public domain. Digitization Muthulakshmi Research Academy

In Public domain. Digitization Muthulakshmi Research Academy

ತತ್ವಾನ್ವೇಷಣೆಯೇ
ಸತ್ಯಾನ್ವೇಷಣೆಯಾಗಿರುವುದರಿಂದ,
ವಿಭಿನ್ನ ಆಲೋಚನಾ ಕ್ರಮದ,
ವಿಭಿನ್ನ ದೃಷ್ಟಿಕೋನಗಳನ್ನು
ಅರಗಿಸಿಕೊಂಡ, ವಸ್ತುನಿಷ್ಠ
ಬರವಣಿಗೆಯ ಸರಳ ಶೈಲಿಯ
ಈ ರಾಜಕೀಯ ಇತಿಹಾಸದ ಕೃತಿ
ಓದುಗನನ್ನು ಜಾಗ್ರತಗೊಳಿಸುತ್ತಾ,
ಅವನ(ಳ)ಲ್ಲಿ ಅರಿವನ್ನುಂಟುಮಾಡಬಲ್ಲದು.
ಕಲ್ಯಾಣ ಕ್ರಾಂತಿಯ ಬಸವಾದಿ
ಶಿವಶರಣರ ವಚನ ಚಳುವಳಿ ಮತ್ತು
ಲಿಂಗಾಯತ ಧಾರ್ಮಿಕ ಅಲ್ಪಸಂಖ್ಯಾತ
ಮಾನ್ಯತೆಯ ಜನಾಂದೋಲನದ
ಯಶೋಗಾಥೆಯನ್ನು ಬಿಚ್ಚಿಡುವ
ಈ ಪುಸ್ತಕದ ಪ್ರತಿ ಶಬ್ದ, ವಾಕ್ಯ, ಘಟನೆ,
ಸಮಯ, ಸಂದರ್ಭ, ಸನ್ನಿವೇಶ
ಮತ್ತು ಸಂಗತಿಗಳು ಸಹಜ ಸಾಹಿತ್ಯ
ಸಾಂಗತ್ಯದೊಡನೆ ಬೆರೆಯುತ್ತ
ಬೆರಗುಗೊಳಿಸುತ್ತ ನೈಜತೆಯನ್ನು
ಅರಹುತ್ತದೆ. ಇದು ಇತಿಹಾಸಕಾರನ
ಪ್ರಬುದ್ಧತೆಗೆ ಸಾಕ್ಷಿ. ಈ ವೈಶಿಷ್ಟಪೂರ್ಣ
ಲೇಖನಗಳ ಗುಚ್ಛ
ಕೃತಿಯಾಗುವುದರೊಂದಿಗೆ ಶರಣರನ್ನು
ಅಮರಗೊಳಿಸುತ್ತಿದೆ.

- ಡಾ. ಸಾವಿತ್ರಿದೇವಿ. ಜಿ.ಜಿ
ರಾಜ್ಯಶಾಸ್ತ್ರಜ್ಞರು



ಲಿಂಗಾಯತ ಚಳುವಳಿ

ಇತಿಹಾಸವನ್ನು ಯಥಾವತ್ತಾಗಿ ದಾಖಲಿಸುವುದು ಪ್ರಜ್ಞಾವಂತ ನಾಗರಿಕನ ಲಕ್ಷಣ. ಸಮಾಜೋಧಾರ್ಮಿಕ ಚಳುವಳಿಯೊಂದರ ರಾಜಕೀಯ ಮಾನ್ಯತೆಗಾಗಿ ಶತಶತಮಾನಗಳಿಂದ ನಡೆದ ಚಳುವಳಿಯ ಮುಂದುವರಿದ ಭಾಗವಾಗಿ ೨೦೧೭-೧೮ರ ಲಿಂಗಾಯತ ಚಳುವಳಿ ವಿಪ್ಲವವಾಗಿ ಮಾರ್ಪಟ್ಟು, ಮನುಕುಲದಲ್ಲಿ ವೈಚಾರಿಕತೆಯನ್ನು ಬಡಿದೆಬ್ಬಿಸಿ, ಯಶಸ್ಸು ಕಾಣುತ್ತಿರುವ ಹೋರಾಟದ ಏಳುಬೀಳುಗಳ ವಿವಿಧ ಮಜಲುಗಳನ್ನು ಓದುಗನ ಕಣ್ಣಿಗೆ ಕಟ್ಟಿದಂತೆ ಅಕ್ಷರಗಳ ಚಿತ್ರ ಚಿತ್ರಿಸುವ ಮಾಂತ್ರಿಕತೆಯ ಕಲೆ ಜಿ.ಬಿ. ಪಾಟೀಲರಿಗೆ ಸಿದ್ಧಿಸಿದೆ. ಮುಂಬರುವ ದಿನಗಳಲ್ಲಿ ಕೇಂದ್ರ ಸರ್ಕಾರದಿಂದ ಅಲ್ಪಸಂಖ್ಯಾತ ಧರ್ಮ ಮಾನ್ಯತೆ ಪಡೆಯುವ ಹೊಸ್ತಿಲಲ್ಲಿರುವ ಈ ಜನಾಂದೋಲನದ ಇತಿಹಾಸ ದಾಖಲಿಸುವ ಈ ಕೃತಿಗೆ ಅಭಿನಂದನೆ ಸಲ್ಲಿಸುವುದು ಜಾಗತಿಕ ಲಿಂಗಾಯತ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷನಾದ ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ. ಕರ್ನಾಟಕ ಸರ್ಕಾರವು ಲಿಂಗಾಯತ ಧರ್ಮಕ್ಕೆ ಅಲ್ಪಸಂಖ್ಯಾತ ಧರ್ಮದ ಮಾನ್ಯತೆ ನೀಡಿ, ಅದನ್ನು ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಕೇಂದ್ರಕ್ಕೆ ರವಾನಿಸಿದೆ. ಸುಮಾರು ಆರು ವರ್ಷಗಳ ನಂತರ 'ಹಿಸ್ಟಾರಿಕಲ್ ಡಾಕ್ಯುಮೆಂಟರಿ' ರೂಪದಲ್ಲಿ ಈ ಗ್ರಂಥವನ್ನು ಪ್ರಕಟಿಸುತ್ತಿರುವುದು ಜಿ. ಬಿ. ಪಾಟೀಲರ ಸಾಧನೆಯ ಸಿಂಹಾವಲೋಕನದ ಬಗೆ ಹಾಗೂ ಮುಂದಿನ ಸಾಧನೆಯ ದಿಕ್ಸೂಚಿ. ಲೇಖನದ ಈ ಕೈಂಕರ್ಯ ಲಿಂಗಾಯತರಿಗೆ ಮಾತ್ರವಲ್ಲದೆ ಸರ್ವರಿಗೂ ಮಾರ್ಗದರ್ಶಿ ದೀವಿಗೆ. ಅವರನ್ನು ಬಲ್ಲ ನನಗೆ ಈ ಕಾರ್ಯ ಸಾಧನೆ ಸಂತೋಷವನ್ನುಂಟು ಮಾಡಿದೆ ಎನ್ನುತ್ತ ಶುಭ ಹಾರೈಸುವೆ.

ಬಸವರಾಜ ಹೊರಟ್ಟಿ

ಸಭಾಪತಿ, ಕರ್ನಾಟಕ ವಿಧಾನ ಪರಿಷತ್ತು

ಆಕೃತಿ ಪುಸ್ತಕ

ರಾಜಕೀಯ ಇತಿಹಾಸ

ಬೆಲೆ: 450/-